ಜಯಂತಿ

ನಾಡಿನ ಅರುಣೋದಯ

ಕನ್ನಡನಾಡಿನ ಮುಂಬಾನೊಳು ಚೆಂ-
ಬಣ್ಣದ ಬೆಳಕು ಇದೇತರದು?
ಹೊನ್ನುಗದಿರ ಬರಲಿಹನೆಂದೂರೆಯಲು
ಮುನ್ನನೆ ಬಂದರುಣನದೆ ಇದು....
ನನ್ನಿಯು, ನಿಜ, ಅರುಣನದೆ ಇದು!

ಭಲೆ ಭಲೆ ನಮ್ಮಯ ಬಳಿಯಿಹ ಬಾನೊಳಿ
ತೊಳಗುವ ನೇಸರು ಮೂಡುವನು,
ಹೊಳಿವಾ ಕೈಗಳನೆಳೆದೆಲ್ಲೆಡೆಯಲಿ
ಬೆಳಕು-ಬೆಳಕನೇ ಮಾಡುವನು—
ಹೊಳಪನು ಎಲ್ಲಕೆ ನೀಡುವನು.

ಕನ್ನಡನಾಡಿನ ಗುಡಿಗಳಸಕೆ ಹೊಸ-
ಬಣ್ಣವನೀತನು ಹಾಕುವನು;
ಹೊನ್ನಿನ ಕಿರಣದ ಹಂದರ ಬಿಗಿಯುತೆ
ಕನ್ನಡಿಗರನಲ್ಲಿರಿಸುವನು—
ಎಲ್ಲರ ಎದೆಗಳ ಬಿರಿಸುವನು.

ಭಯವೇತರದಾವಾಗ ನನುಗೆ? ನಿರ್-
ಭಯರು ನೆರೆದು ಕುಣಿ-ಕುಣಿದಾಡಿ....
ಜಯ ಜಯ ಜಯ ಕರ್ನಾಟಕ—ಎನ್ನುತೆ
ಹಾಡುವ ನಾವೆಲ್ಲರು ಕೂಡಿ....
ಕೂಗುವ ನಾವೆಲ್ಲರು ಕೂಡಿ!

— ಆನಂದಳಿಂದ

೧೯೫೬ ಜುಲೈ

ಸಂಪುಟ ೧೯ ಸಂಚಿಕೆ ೨

JAYANTI

ಈ ಸಂಚಿಕೆಯಲ್ಲಿ

ಉದಯಿಸಲಿರುವ ಕನ್ನಡ ರಾಜ್ಯ (ಸಂಪಾದಕೀಯ)
ಸಂಪಾದಕರು ೪೧

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೪೩

ರಮ್-ರವಿ (ಒಂದು ಜೀವನಕಥೆ)
ಶ್ರೀ. ವೆಂ. ವಿ. ಜೋಶಿ, ಧಾರವಾಡ ೪೫

ನಿಜಗುಣ ಶಿವಯೋಗಿ (ವ್ಯಕ್ತಿ ಮತ್ತು ಕೃತಿಪರಿಚಯ)
ಶ್ರೀ. ತಟ್ಟಿ ಶ್ಯಾಮರಾಯರು ಬಿ. ಎ., ಟಿ. ಟಿ. ಧಾರವಾಡ ೪೮

ಜಾಗರಗೀತ (ಕವನ)
ಶ್ರೀ. ರಾಮಚಂದ್ರ ಕೊಟ್ಟಲಗಿ, ಬಿಜಾಪುರ ೫೧

ಸಂಶಯಪಿಶಾಚಿ (ವಿನೋದದೃಶ್ಯ)
ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ ೫೨

ಚಿಕ್ಕಮಕ್ಕಳ ಶಿಕ್ಷಣ (ಶಿಕ್ಷಣಿಕ ಪರಿಚಯ)
ಶ್ರೀ. ನಾರಾಯಣ ಮಹಿಷಿ ಬಿ. ಎಸ್‌ಸಿ. ಧಾರವಾಡ ೫೬

ರಾಸಲೀಲೆ (ಕವನ)
ಶ್ರೀ. ಪಂಢರೀನಾಥಾಚಾರ್ಯ ಗಲಗಲಿ, ಗದುಗು ೫೯

ಖತೀಜಾಬೀಬಿ (ಐತಿಹಾಸಿಕ ಸಣ್ಣಕಥೆ)
ಶ್ರೀ. ಶಂ. ಗು. ಬಿರಾದಾರ, ಬಬಲೇಶ್ವರ ೬೦

ಪಂಚ ಪುರಾತನ ಪಟ್ಟಣಗಳು (ಬಾದಾಮಿ)
ಪ್ರೊ. ಎಸ್. ಆರ್. ಮಳಗಿ ಎಂ. ಎ., ಬಿ. ಟಿ. ಧಾರವಾಡ ೬೫

ಬಿರುಗಾಳಿ (ಒಂದು ವೈಚಾರಿಕ ಚಿತ್ರ)
ಶ್ರೀ. ಕುಲಕರ್ಣಿ ಶಂಕರರಾಯರು, ಆಳ್ವರೆಕೋಟಿ ೬೯

ಪಾಪದ ಫಲ (ಒಂದು ಸಣ್ಣಕಥೆ)
ಶ್ರೀ. ರಾಮಚಂದ್ರ ಶೇಡಬಾಳ, ಮಿತ್ರಮಂಡಲ, ಮಲಾಡ ೭೧

ಸಾಹಿತ್ಯವನವಿಹಾರ (ಹೊಸವಿಭಾಗ)
ಬೆಟಗೇರಿ ಕೃಷ್ಣಶರ್ಮ, ಧಾರವಾಡ ೭೩

ಸಾಹಿತ್ಯನಿಮರ್ಶೆಯ ಶಿಕ್ಷಣರಂಗ
ಶ್ರೀ. ಎಮ್. ಎಸ್. ಕುರಂದವಾಡ ಮತ್ತು ಶ್ರೀ. ಕೆ. ಎಸ್. ಶರ್ಮಾ ೭೫

ಆದರ ಸ್ವೀಕಾರ ಹೊದಿಕೆಯ ೩ನೆಯ ಪುಟ

ಜಯಂತಿ

ಸಂಪುಟ ೧೯ ಸಂಚಿಕೆ ೨

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

卐

ಉದಯಿಸಲಿರುವ ಕನ್ನಡರಾಜ್ಯ

ಹೆಸರು ಯಾವುದೇ ಆಗಲೊಲ್ಲದೇಕೆ, ಕನ್ನಡರಾಜ್ಯವೊಂದು ಉದಯಿಸಲಿದೆ. ಆದರೆ ಕನ್ನಡಿಗರೆಲ್ಲರೂ ಕೂಡಿಕೊಂಡಿರದಂತಹ ರಾಜ್ಯ ಉದಯಿಸುವುದು, ಆಜ್ಞೊಂದು ಸಂತೋಷದ ಸಂಗತಿಯೆಂದು ಎನಿಸದಾಗಿದೆ. ನಮ್ಮ ರಾಷ್ಟ್ರವು ಅನುಭವಿಸಿದ ಬಹುದಿನದ ಪಾರತಂತ್ರ್ಯದ ದುಷ್ಪರಿಣಾಮವಾಗಿ, ಇಂದಿನ ಸ್ವತಂತ್ರ ಪ್ರಜಾಪ್ರಭುತ್ವದ ಕಾಲವೂ ಕನ್ನಡಿಗರನ್ನೆಲ್ಲ ಒಂದುಗೂಡಿಸದಂತಹ ಸಂದರ್ಭವನ್ನು ಒದಗಿಸಿಬಿಟ್ಟಿರುವುದು. ಇಂದಿನ ಭಾಷಾನುಗುಣ ರಾಜ್ಯಪುನರ್ಘಟನೆಯ ಕಾರ್ಯವು, ಕಾಯಾದ ಮಾತ್ಸರ್ಯವನ್ನೂ ಕಲಹೆಗಳನ್ನೂ ರಾಷ್ಟ್ರದಲ್ಲಿ ಹರಡುತ್ತಿರುವುದು, ನಮ್ಮ ಸ್ವಾತಂತ್ರ್ಯ ಜೀವನಕ್ಕೆ ಶುಭಶಕುನವೇನೂ ಅಲ್ಲ. ಭಾರತದ ಏಕರಾಷ್ಟ್ರತನವನ್ನು ಕಾಯುವುದು ಇಂದಿನ ಭಾರತೀಯರ ಕರ್ತವ್ಯ; ಆದರೆ ಒಬ್ಬರ ರಾಜ್ಯವನ್ನೊಬ್ಬರು ಹರಿದು ತಿನ್ನಬೇಕೆಂಬ ಆಕ್ರಮಣಬುದ್ಧಿ ಅನೇಕ ಕಡೆಗೆ ತಲೆಯೆತ್ತಿ ನಿಂತು, ಬಂಧುಭಾವದ ಸ್ಥಳದಲ್ಲಿ ಶಾಶ್ವತವೈರವನ್ನು ಸ್ವಾಗತಿಸತೊಡಗಿದೆ. ಭಾರತೀಯ ಸ್ವಾತಂತ್ರ್ಯಕ್ಕಾಗಿ ಸ್ವಾರ್ಥವನ್ನು ಮರೆತು ಹೋರಾಡಿದ ಅನೇಕ ಜನ ದೇಶನಾಯಕರೂ ಈ ಆಕ್ರಮಣಬುದ್ಧಿಯ ದಾಸರಾಗಿ ಹೋರಾಟ್ಟಿದ್ದಾರೆ; ರಾಷ್ಟ್ರದಲ್ಲಿ ಐಕ್ಯವನ್ನು ಸ್ಥಾಪಾಪಡಬೇಕಾದ ತಮ್ಮ ಕರ್ತವ್ಯದಿಂದ ಚ್ಯುತಿಯನ್ನು ಹೊಂದುತ್ತಿದ್ದಾರೆ.

ಕನ್ನಡರಾಜ್ಯಕ್ಕಂತೂ ಈ ಆಕ್ರಮಣಬುದ್ಧಿಯ ಬಿಸಿಯು ತುಂಬ ತಗುಲಿದೆ. ತಮ್ಮಗೊಂದು ನೆಲೆಯೆ ಇರದ ಕನ್ನಡಿಗರು, ತಮ್ಮ ಪ್ರದೇಶವನ್ನು ತಮಗೆ ದೊರೆತರೆ ಸಾಕೆಂಬ ಸಮಂಜಸ ವೃತ್ತಿಯನ್ನು ಮೊದಲಿನಿಂದಲೂ ತೋರಿಸುತ್ತ ಬಂದಿರುವರು. ಇನ್ನೊಬ್ಬರ ಪ್ರದೇಶವನ್ನು ಆಕ್ರಮಿಸುವ ಮಾತುಗಳನ್ನು ಇವರು ಎಂದೂ ಆಡಿಲ್ಲ; ಅದಕ್ಕಾಗಿ ಎಂದೂ ಪ್ರಯತ್ನವನ್ನು ಮಾಡಿಲ್ಲ. ಆದರೆ ಕನ್ನಡಿಗರ ಪ್ರದೇಶದಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿ, ಅನ್ಯರ ಸಂಪತ್ತನ್ನು ಆಪಹರಿಸಿ ತಮ್ಮ ಡೊಳ್ಳು ಬೆಳೆಯಿಸಿಕೊಳ್ಳುತ್ತಿದ್ದ ನೆರೆಯ ನಾಡಿಗರು, ಇಂದು ಆ ಪ್ರದೇಶ ಕೈಬಿಟ್ಟು ಹೋಗುವುದೆಂದು ಆಕ್ರೋಶವನ್ನೇ ನಪೆಯಿಸಿದ್ದಾರೆ. ಅದನ್ನು ತಮ್ಮ ಕಡೆಗೇ ಉಳಿಸಿಕೊಳ್ಳಲೆಂದು, ಅನ್ಯಾಯದ—ಅರಾಷ್ಟ್ರೀಯವಾದ ಚಟುವಟಿಕೆಗಳನ್ನು ನಡೆಸಿದ್ದಾರೆ. ಅವರ ಚಟುವಟಿಕೆಗಳ ಪರಿಣಾಮವಾಗಿಯೇ ಉದಯಿಸಲಿರುವ ಕನ್ನಡನಾಡು, ಪೂರ್ವೋತ್ತರ-ದಕ್ಷಿಣ ದಿಶೆಗಳಲ್ಲಿಯ ಕನ್ನಡ ಪ್ರದೇಶ ಕೆಲವನ್ನು ಕಳೆದುಕೊಂಡೇ ಉದಯಿಸಲಿದೆ.

ಜಗಳಾಟ ಬೇಡವೆಂದು ಕನ್ನಡಿಗರು ತಮ್ಮ ಪ್ರದೇಶವನ್ನು ನೆರೆನಾಡಿನವರಿಗೆ ಸುಮ್ಮಗೆ ಒಪ್ಪಿಸಿದುದೇನೋ ಸರಿಯೆ! ಆದರೆ ಒಂದುಗೂಡಲಿರುವ ಒಳರಾಜ್ಯದ ಕನ್ನಡಿಗರಲ್ಲಿ ಜಗಳಗಳು ಇಲ್ಲದೆ ಇಲ್ಲ ಭಾಷೆ-ಸಂಸ್ಕೃತಿಗಳ ಬಾಂಧವ್ಯ ಕನ್ನಡಿಗರಲ್ಲಿ ಒಂದುಗೂಡಬೇಕೆಂಬ ಸದ್ಬುದ್ಧಿಯನ್ನು ಹುಟ್ಟಿಸಿತು; ಆದರೆ ಇಂದಿನ ರಾಜಕೀಯ ಅಧಿಕಾರದ ವ್ಯಾಮೋಹ, ಬಂಧುಭಾವವನ್ನು ಮರೆಮಾಡಿ ದಾಯಾದಭಾವವನ್ನು ಹೆಚ್ಚಿಸುತ್ತಲಿದೆ. ಎಂತಲೇ ಕನ್ನಡರಾಜ್ಯ ಉದಯಿಸುವುದು ನಿರ್ಣಯವಾಗಿರುವಾಗಲೂ, ಆದು ಬೇಡವೆಂದು ಕೂಗುವ ಜನರು ಅಲ್ಲಲ್ಲಿ ಕಣ್ಣಿಗೆ ಬೀಳುತ್ತಿದ್ದಾರೆ. ಕರ್ನಾಟಕವೆಂಬ ಅರ್ಥಪೂರ್ಣವಾದ ಹೆಸರು ರಾಜ್ಯಕ್ಕೆ ಇರಬೇಕಾದರೂ 'ಮೈಸೂರು' ಎನ್ನುವ ವ್ಯರ್ಥ ಹೆಸರನ್ನಿಡಬೇಕೆನ್ನುವ ಅನರ್ಥವಾದಿಗಳು ನಮ್ಮಲ್ಲಿ ಹೊರಟಿದ್ದಾರೆ. ಐದು ಕಡೆಗಳಲ್ಲಿ ಚೆಲ್ಲಿಹೋಗಿದ್ದ ಕನ್ನಡಿಗರು, ಎಲ್ಲ ಕಡೆಗೂ ಅಲ್ಪಸಂಖ್ಯಾಕರಾಗಿ ಯಾವ ಅಧಿಕಾರಸ್ಥಾನವನ್ನೂ ಪಡೆಯದೆ ಇದ್ದರಾದರೂ, ಬರಲಿರುವ ರಾಜ್ಯದ ರಾಜಕೀಯ ಅಧಿಕಾರದ ಸೂತ್ರಕ್ಕಾಗಿ

ಒಬ್ಬರನ್ನೊಬ್ಬರು ಸಂದೇಹದೃಷ್ಟಿಗಳಿಂದ ಕಾಣುತ್ತಲಿದ್ದಾರೆ. ಈ ಬಗೆಯ ರೀತಿ-ನೀತಿಗಳು, ಅಂಕುರಿಸುತ್ತಿರುವ ಅಖಂಡ ಕರ್ನಾಟಕಕ್ಕೆ ಪಥ್ಯಕಾರಿಯಲ್ಲವೆಂದು ಬೇರೆಯಾಗಿ ಹೇಳಬೇಕಾಗಿಲ್ಲ; ಆದರೂ ಹೇಳಲೇಬೇಕಾಗಿದೆ. ಏಕೆಂದರೆ ಲೋಕಹಿತದ ಆದರ್ಶ ನೀತಿವಚನಗಳನ್ನು ನಮ್ಮ ಧುರೀಣರಿಲ್ಲದೂ ಅರಿತಿರಬಹುದಾದರೂ, ಸ್ವಾರ್ಥ-ಸಾಧನೆಯ ವ್ಯಕ್ತಿತ್ವವನ್ನು ತುಳಿದು ನಡೆಯುವವರು ಇರುವರೇ ಇಲ್ಲವೋ ಎಂಬುದು ಇಂದು ಯಾರಿಗೂ ತಿಳಿಯದಂತಾಗಿದೆ.

ಉದಯಿಸಲಿರುವ ಕನ್ನಡರಾಜ್ಯ ರೂಪುಗೊಂಡು ಪರಿಪುಷ್ಟವಾಗಿ ನಿಲ್ಲಬೇಕಾದರೆ, ಅದಕ್ಕೆ ಮೊದಲನೆಯ ಸಾಧನ ಪ್ರಾಮಾಣಿಕ ಕಾರ್ಯಕರ್ತರ ಸಮುದಾಯ. ಈ ಕಾರ್ಯಕರ್ತರು ಯಾವುದೇ ಬಗೆಯ ಭೇದಭಾವಗಳ ಬಲೆಯಲ್ಲಿ ಸಿಕ್ಕಿಕೊಳ್ಳದೆ, ಜನತಾಕಲ್ಯಾಣವೊಂದನ್ನೇ ಗುರಿಯನ್ನಾಗಿ ಇರಿಸಿಕೊಂಡವರಾಗಿರಬೇಕು. ವ್ಯಕ್ತಿ-ವ್ಯಕ್ತಿಗಳಲ್ಲಿ ಅಭಿಪ್ರಾಯಭಿನ್ನತೆಯು ತಲೆದೋರಿದರೂ, ಅದು ಜನತಾಕಲ್ಯಾಣದ ಗುರಿಯಿಂದಲೇ ಕೂಡಿರಬೇಕು. ಕ್ಷುದ್ರಸ್ವಾರ್ಥಗಳು ಪಕ್ಷ ಪಂಗಡಗಳನ್ನು ಹುಟ್ಟಿಸಿ ಕದನ-ಕಲಹಗಳನ್ನು ಎಬ್ಬಿಸುವುದಲ್ಲದೆ, ಜನಸೇವಾ ಬುದ್ಧಿಯು ಮಹಾಸ್ವಾರ್ಥವು ಎಂದೂ ಪಕ್ಷ-ಪಂಗಡಗಳನ್ನು ಹುಟ್ಟಿಸಲಾರದು; ಲೋಕಕಲ್ಯಾಣವಿಘಾತಕವಾದ ಜಗಳ-ಕದನಗಳನ್ನು ಎಬ್ಬಿಸಲಾರದು. ತಮ್ಮ ಭಿನ್ನಾಭಿಪ್ರಾಯದ ಮೂಲಕ ಮಹಾತ್ಮಾಜಿಯವರು, ಅನೇಕಸಲ ಕಾರ್ಯರಂಗದಿಂದ ಹಿಂದೆ ಸರಿದರಾದರೂ, ಯಾರೊಡನೆಯೂ ಎಂದೂ ಜಗಳಕ್ಕೆ ನಿಲ್ಲಲಿಲ್ಲ. ಅವರ ಈ ನಡೆವಳಿಕೆ ಅವರಿಗೆ ಗೆಲವನ್ನೇ ತಂದುಕೊಟ್ಟಿತಲ್ಲದೆ ಸೋಲನ್ನಲ್ಲ.

ಭಾರತದ ಪರಾಧೀನಜೀವನವೂ ಸ್ವಜನಕಲಹವೂ ನಮಗೆ ಹಲವುಬಗೆಯ ಅನುಭವಗಳನ್ನು ತಂದುಕೊಟ್ಟು ಚೆನ್ನಾಗಿ ಬುದ್ಧಿಯನ್ನು ಕಲಿಸಿವೆ. ನಮ್ಮ-ನಮ್ಮಲ್ಲಿಯ ಜಗಳಾಟ ಅಖಂಡಭಾರತವನ್ನು ಖಂಡ-ಖಂಡವನ್ನಾಗಿ ಮಾಡಿತು; ಇಷ್ಟೇ ಅಲ್ಲ, ನಿಷ್ಕಾರಣ ವೈರವನು ಮಾಡುವ ಮತ್ಸರಗ್ರಸ್ತ ರಾಷ್ಟ್ರವೊಂದನ್ನು ನಿರ್ಮಿಸಿ ನೆರೆಯಲ್ಲಿಯೇ ಇಟ್ಟುಕೊಂಡಿತು. ಇಂದಿನ ಸ್ವಾತಂತ್ರ್ಯೋತ್ತರದ ಅಲ್ಪಕಾಲವೂ ನಮಗೆ ಅನೇಕ ಸಂಗತಿಗಳನ್ನು ಕಲಿಸಿದೆ. ಪ್ರಜಾಸ್ವಭುತ್ವವನ್ನು ಸಮರ್ಥರೀತಿಯಿಂದ ನಡೆಯಿಸಿಕೊಂಡು ಹೋಗುವುದು, ಇಲ್ಲಿಯ ವೈಷಮ್ಯಪೂರ್ಣ ವಾತಾವರಣದಮೂಲಕ ಯಾರಿಗೂ ಕಠಿಣವೆನಿಸುವ ಮಾತಾಗಿದೆ. ಸರಕಾರದ ನಿಯಮಗಳನ್ನು ಶ್ರದ್ಧೆಯಿಂದ ಪಾಲಿಸಬೇಕೆನ್ನುವ ಬುದ್ಧಿ ಜನತೆಯಲ್ಲಿ ಇಲ್ಲ; ಜನಹಿತಕ್ಕೆಂದೇ ನಿಃಸ್ವಾರ್ಥಿಗಳಾಗಿ ದುಡಿಯುವ ಧುರೀಣರು ಸರಕಾರದಲ್ಲಿಲ್ಲ. ಎಂತಲೇ ಜನತೆ ಸರಕಾರವನ್ನು ಸಂಶಯದಿಂದ ನೋಡುತ್ತಲಿದೆ; ಸರಕಾರ ಜನತೆಯನ್ನು ಅಧಿಕಾರದರ್ಪದಿಂದ ಬೆದರಿಸಬೇಕೆನ್ನುತ್ತಲಿದೆ. ಇದೆಲ್ಲವೂ ರಾಷ್ಟ್ರದ ಅಭ್ಯುದಯಕ್ಕೆ ಬೇಡವಾದುದಾದರೂ, ಇದರ ತುಂಟಾಟವೇ ಅವಿಚ್ಛಿನ್ನವಾಗಿ ನಡೆದಿದೆ. ಕನ್ನಡರಾಜ್ಯವನ್ನು ಹೊಸತಾಗಿ ಕಟ್ಟಬೇಕಾಗಿರುವ ನಮ್ಮ ಧುರೀಣರು, ಈ ಪರಿಸ್ಥಿತಿಯಿಂದ ಸರಿಯಾದ ಪಾಠವನ್ನು ಕಲಿತುಕೊಳ್ಳಬೇಕಾದುದು ಅನಿವಾರ್ಯವಾಗಿದೆ.

ಜನತೆಯ ಸಮಜೀವನವೇ ಸಮಾಜಶಾಂತಿಯ ತಳಪಾಯವೆಂಬುದನ್ನು ಇಂದು ನಾವೆಲ್ಲರೂ ಅರಿತುಕೊಂಡಿದ್ದೇವೆ. ಈ ಮನವರಿಕೆಯಂತೆ ನಮ್ಮ ಜನತೆಯ ಮತ್ತು ಧುರೀಣರ ಆಚಾರಗಳು ರೂಪುಗೊಳ್ಳುತ್ತ ಹೋದರೆ, ನಾಡಿಗೆ ತುಂಬ ಒಳ್ಳೆಯದಾದೀತು. 'ಆಡಿ ಮಾಡದ ಅಧಮರ' ಸಂಖ್ಯೆ ಹೆಚ್ಚಿಗಿರುವುದು, ದೇಶದಲ್ಲಿ ಸುಖ-ಶಾಂತಿಗಳನ್ನು ಎಂದೂ ನೆಲೆಗೊಳಿಸಲಾರದು. 'ಕನ್ನಡನಾಡನ್ನು ಸುಖ-ಶಾಂತಿಗಳ ಬೀಡನ್ನಾಗಿ ಮಾಡುವುದು ಇಂದಿನ-ನಮ್ಮ ನಾಯಕರ ಕೈಯಲ್ಲಿದೆ. ಅಧಿಕಾರಸ್ಥಾನಗಳಿಗಾಗಿ ಅವರೇ ತಮ್ಮ-ತಮ್ಮೊಳಗೆ ಹೊಡೆದಾಡಲು ತೊಡಗಿದರೆ, ಸಾಮಾನ್ಯಜನರು ಕರ್ತವ್ಯಮೂಢರಾಗುವುದು ಅಸ್ವಾಭಾವಿಕವೇನೂ ಅಲ್ಲ. ಅಧಿಕಾರಸ್ಥಾನಗಳು ಸುಖ-ಭೋಗದ ಸಾಧನಗಳಲ್ಲ—ಎಂಬುದನ್ನು ನಮ್ಮ ನಾಯಕರು ತಮ್ಮ ಕರ್ತವ್ಯಭಾರ, ಕರ್ತೃತ್ವಶಕ್ತಿ, ಪ್ರಾಮಾಣಿಕಸೇವೆಗಳಿಂದ, ಸಾಮಾನ್ಯ ಜನರಿಗೆ ತಿಳಿವಳಿಕೆ ಮಾಡಿಕೊಡಬೇಕು. ಮುಖ್ಯಮಂತ್ರಿಗಳಿಗಿಂತ ತಮ್ಮ ಜೀವನವೇ ನಿಶ್ಚಿಂತವಾದುದೆಂಬ ಭಾವನೆ ಅವರಲ್ಲಿ ಮೂಡಿದರೆ, ಮಂತ್ರಿಸ್ಥಾನಗಳಿಗಾಗಿ ಹೋರಾಟವೇ ನಡೆಯಲಿಕ್ಕಿಲ್ಲ. ಅದು ಹೋಗಿ ಮಂತ್ರಿಗಳಾಗಿರುವವರು ತಮ್ಮ ಕಾರ್ಯಗೌರವವನ್ನು ಮರೆತು, ತಮ್ಮ ಪದವಿ-ವೈಭವಗಳನ್ನೇ ಮೆರೆಯಿಸತೊಡಗಿದರೆ, ಸಾಮಾನ್ಯ ಜನರೂ ವೈಭವನೋಹಕ್ಕೆ ಬಾಯ್ದೆರೆದು, ನಾಡಿನಲ್ಲೆಲ್ಲ ಹೋರಾಟ-ಹಾರಾಟಗಳೇ ತುಂಬಿಹೋಗಬಹುದು.

ಇವೆಲ್ಲ ಮುನ್ನೆಚ್ಚರಿಕೆಯ ಮಾತುಗಳನ್ನು ಈಗ ಒಡನುಡಿಯಲೇಬೇಕಾಗಿದೆ. ಏಕೆಂದರೆ, ಬರಲಿರುವ ಕನ್ನಡರಾಜ್ಯದ ಅಧಿಕಾರಸ್ಥಾನಗಳಿಗಾಗಿ, ಅನೇಕ ಜನರು ಅಲ್ಲಲ್ಲಿ, ತಮ್ಮ ಮನಸ್ಸು-ಬುದ್ಧಿಗಳ ಅಲಗುಗಳನ್ನು ಮಸೆಯುವ ಕೆಲಸವನ್ನು ಈಗಾಗಲೇ ಪ್ರಾರಂಭಿಸಿಬಿಟ್ಟಿದ್ದಾರೆ. ಅಧಿಕಾರಲೋಭದ ಅವಿವೇಕವು ವಿವೇಕವನು ಮೆಟ್ಟಿ ನಿಲ್ಲುವ ಹವಣಿಕೆಯನ್ನು ನಡೆಸಿದುದು ಸುತ್ತೆಲ್ಲವೂ ಕಾಣುತ್ತಲಿದೆ. ಎಲ್ಲರೂ ಕೂಡಿ ಪ್ರಯತ್ನಮಾಡಿ ಕನ್ನಡರಾಜ್ಯವನ್ನು ಗಳಿಸಿರುವರಾದರೂ, ಈಗ ಎಲ್ಲರೂ ಅಧಿಕಾರಲುಬ್ಧರಾಗಿ ಒಬ್ಬರನ್ನೊಬ್ಬರು ಸ್ಪರ್ಧೆ-ಮತ್ಸರಗಳಿಂದ ಕಾಣುತ್ತಲಿದ್ದಾರೆ. ದುರಭಿರುಚಿಯನ್ನೇ ಹರಡಿ ಬದುಕಬೇಕೆಂದು ಬಯಸುವ ನಮ್ಮ ನಾಡಿನ ಪತ್ರಿಕೆಗಳು ಕೆಲವು, ಇಂತಹ ಸ್ಪರ್ಧೆ-ಮತ್ಸರಗಳನ್ನು ಹೆಚ್ಚಿಸುವ 'ಪತ್ರಕಾರ್ಯ'ವನ್ನು ಮಾಡುತ್ತಿವೆ. ರಾಜಕೀಯ ಒಂದು ಸುಸಂಸ್ಕೃತಿಯ ಅಂಗವಾಗಿ ಲೋಕದಲ್ಲಿ ಅವತರಿಸಿದೆಯೆಂಬ ಅರಿವೇ ಅವುಗಳಿಗೆ ಇದ್ದಂತಿಲ್ಲ. ಜನತೆಯ ಸುಖ-ಶಾಂತಿಗಳ ಸಾಧನವೇ ರಾಜಕಾರ್ಯವೆನಿಸುವುದಲ್ಲದೆ, ಧುರೀಣರಲ್ಲಿ ಬುದ್ಧಿಭೇದವನ್ನು ಬೆಳೆಸುವುದು ರಾಜಕಾರ್ಯವೆನಿಸದು.

ನಮ್ಮ ಪ್ರಾಚೀನ ಕನ್ನಡನಾಡು ಲೋಕಕ್ಕೆಲ್ಲ ತನ್ನ ಸಂಸ್ಕೃತಿ-ಸುಜ್ಞಾನಗಳ ಕಾಣಿಕೆಯನ್ನು ಕೊಟ್ಟಿದೆ. ಬರಲಿರುವ ನೂತನ ಕರ್ನಾಟಕವೂ ತನ್ನ ಆ ಉತ್ತಮ ಪರಂಪರೆಯನ್ನು ಮರೆಯದಿರಲಿ. ತನ್ನ ಆಧ್ಯಾತ್ಮಿಕ-ವ್ಯಾವಹಾರಿಕ ಅಭ್ಯುದಯವನ್ನು ಸಾಧಿಸಿಕೊಂಡು, ಸರ್ವಾಂಗ ಪರಿಪುಷ್ಟವಾಗಿ, ಭಾರತದ ಅಭ್ಯುದಯಕ್ಕೆ ಸಹಕಾರಿಯಾಗಿ ನಿಲ್ಲಲಿ! ಕನ್ನಡನಾಡು ಚೆಲುವು-ಒಲವುಗಳೊಂದಿಗೇ ಉದಯವಾಗಲಿ!

—ಸಂಪಾದಕ

ನಾಡನಡೆ

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಆಯ್ಕೆ

ಕನ್ನಡ ಸಾಹಿತ್ಯಪರಿಷತ್ತಿನ ಅಧ್ಯಕ್ಷರ ಆಯ್ಕೆಗಾಗಿ ಮೊನ್ನೆ ನೊನ್ನೆ ಕ. ಸಾ. ಪರಿಷತ್ತಿನ ಕಾರ್ಯಾಲಯದಲ್ಲಿ ಸಭೆಯೊಂದು ನಡೆಯಿತು. ಎಂದೂ ಇಲ್ಲದಂತಹ ಆಯ್ಕೆಯ ಮೇಲಾಟ ಈ ಸಲ ನಡೆಯಿತು. ಇದೇನು ಶುಭಲಕ್ಷಣವೋ ಅವಲಕ್ಷಣವೋ ಎಂಬುದು ತಿಳಿಯದಾಗಿದೆ. ಏಕೆಂದರೆ ಯಾವುದೇ ಅಧಿಕಾರಸ್ಥಾನಕ್ಕಾಗಿ ಬೇರೆ ಬೇರೆ ಹುರಿಯಾಳುಗಳಲ್ಲಿ ಸ್ಪರ್ಧೆ ನಡೆದರೆ, ಅದು ದ್ವೇಷ-ಮತ್ಸರಗಳ ವಾತಾವರಣವನ್ನು ನಿರ್ಮಿಸುವುದು, ನಮ್ಮ ಸಾಮಾನ್ಯಜೀವನದಲ್ಲಿ ಸ್ವಾಭಾವಿಕ ಸಂಗತಿಯಾಗಿದೆ. ರಾಜಕೀಯವು ಇಂತಹ ಸ್ಪರ್ಧೆಗಳನ್ನು ಆಗಾಗ ಹೂಡಿ, ಈಗಾಗಲೇ ನಮ್ಮ ಸಾಮಾಜಿಕ ಜೀವನದಲ್ಲಿ ಸಾಕಷ್ಟು ಅಶಾಂತಿಯನ್ನು ಎಳೆದು ತಂದಿದೆ. ಸಾಂಸ್ಕೃತಿಕ ಕ್ಷೇತ್ರವಾದರೂ ಅಂತಹ ರಜೋವೃತ್ತಿಯಿಂದ ದೂರ ಉಳಿಯಬೇಕೆಂದರೆ ಅಲ್ಲಿಯೂ ಈ ಸ್ಪರ್ಧೆ ತನ್ನ ಕರಿಗಾಲನ್ನು ಇರಿಸಿದುದು ವಿಷಾದದ ಸಂಗತಿಯೇ ಆಗಿದೆ. ಸಾ. ಪರಿಷತ್ತಿನ ಈ ಸಲದ ಅಧ್ಯಕ್ಷರ ಆಯ್ಕೆ, ಅಶಾಂತಿ-ಅತೃಪ್ತಿಗಳನ್ನು ನಿರ್ಮಿಸಿಬಿಟ್ಟಿದೆಯೆಂಬುದು, ಅಲ್ಲಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾದ ಕೋಪ-ಶಾಪದ ಮಾತುಗಳಿಂದ ಸ್ಪಷ್ಟವಾಗುತ್ತದೆ.

ಸಾಹಿತ್ಯಪರಿಷತ್ತಿನಂತಹ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಕಾರ್ಯವು ಮುಖ್ಯವಾಗಿರುವುದಲ್ಲದೆ, ಇದರಿಂದ ಯಾವ ರಾಜಕಾರ್ಯವನ್ನೂ ಸಾಧಿಸಬೇಕಾಗಿಲ್ಲ. ಇಂತಹ ಸಂಸ್ಥೆಗಳಿಗೆ ಅಧ್ಯಕ್ಷರಾಗಿ ಆಯ್ಕೆಹೊಂದಬೇಕಾದವರು, ಸಮಾಜದ ಶ್ರದ್ಧೆಯನ್ನು ಪಡೆದ ಹಿರಿಯರೂ ಆ ಸಂಸ್ಥೆಯ ಗುರಿಯನ್ನು ಅರಿತವರೂ ಲೋಕಾನುಭವವುಳ್ಳವರೂ ಆಗಿರಬೇಕಾಗುವುದು. ಅಂತಹರೊಬ್ಬರನ್ನು ಸರ್ವಾನುಮತದಿಂದ ಆರಿಸುವುದೇ ಸುಸಂಸ್ಕೃತ ಸದಸ್ಯರ ಕರ್ತವ್ಯವಾಗಿದೆ. ಆಯ್ಕೆಯ ಸ್ಪರ್ಧೆಗೆ ಇಲ್ಲಿ ಅವಕಾಶವಿದ್ದರೆ, ನಾಳೆ ಜನಬಲವುಳ್ಳ ಒಬ್ಬ ಅನಭಿಜ್ಞನೂ ಪರಿಷತ್ತಿನ ಅಧ್ಯಕ್ಷನಾಗಿ, ಆಯ್ಕೆ ಪಡೆಯಬಹುದು. ಸುಸಂಸ್ಕೃತರಾದ ಮಾನ್ಯ ಸದಸ್ಯವರ್ಗ, ಅಂತಹ ಅಧ್ಯಕ್ಷನ ನೇತೃತ್ವವನ್ನು ಒಪ್ಪಿಕೊಳ್ಳಬೇಕೆ?

ಸಾ. ಪರಿಷತ್ತಿನಂತಹ ಸಂಸ್ಥೆಗೆ ಅಧ್ಯಕ್ಷರಾಗಲು ತಕ್ಕ ಹಿರಿಯರು, ಒಮ್ಮೊಮ್ಮೆ ಚುನಾವಣೆಯ ಕುಸ್ತಿಗೆ ನಿಲ್ಲಲು ಸಿದ್ಧರಾಗದೆ ಹಿಂದೆಯೆ ಉಳಿಯುವರು; ಇದರಿಂದ ಪರಿಷತ್ತಿಗೆ ಅಂತಹರ ಲಾಭ ದೊರೆಯದೆ, ಅದರ ಕಾರ್ಯಹಾನಿಯಾಗುವ ಸಂಭವವೂ ಇರುವುದು. ಆದುದರಿಂದ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಆಯ್ಕೆಯು ತಂತ್ರದಲ್ಲಿಯುಕ್ತ್ಯೆಯುಕ್ತವಾದ ಬದಲಾವಣೆಯಾಗಬೇಕಾದುದು ಅನಿವಾರ್ಯವಾಗಿದೆ.

ಈ ಸಲ ಆಯ್ಕೆಪಡೆದ ಅಧ್ಯಕ್ಷರು

ಅಧ್ಯಕ್ಷತೆಯ ಆಯ್ಕೆಗಾಗಿ ಈ ಸಲ ಮೂವರು ಹುರಿಯಾಳುಗಳಾಗಿ ನಿಂತಿದ್ದರು. ಅವರಲ್ಲಿ ಶ್ರೀಮಾನ್ ಅ. ನ. ಕೃಷ್ಣರಾಯರೂ ಶ್ರೀಮಾನ್ ಬಿ. ಶಿವಮೂರ್ತಿಶಾಸ್ತ್ರಿಗಳೂ ಕನ್ನಡಿಗರಿಗೆಲ್ಲ ಸಾಕಷ್ಟು ಪರಿಚಿತರು. ಮೂರನೆಯವರಾದ ಶ್ರೀ. ಎಚ್. ಶ್ರೀಕಂಠಯ್ಯನವರ ವಿಜಯ ನಾಡಿಗೆ ಹೊಸದು. ಮೊದಲಿನವರಿಬ್ಬರೂ ಸಾಹಿತ್ಯಕ್ಷೇತ್ರದಲ್ಲಿ ಸಾಕಷ್ಟು ದುಡಿದವರು. ನಾಡು-ನುಡಿಗಳ ಪ್ರೀತಿ-ಶ್ರದ್ಧೆಗಳು ಇಬ್ಬರಲ್ಲಿಯೂ ತುಂಬಿನಿಂತಿವೆ. ಪರಿಷತ್ತಿನ ಅಭ್ಯುದಯಕ್ಕಾಗಿ ತಂತಮ್ಮ ದೃಷ್ಟಿಯಂತೆ ಕಾರ್ಯ ನಡೆಯಿಸಬೇಕೆಂಬ ಉತ್ಸಾಹ ಇಬ್ಬರಲ್ಲಿಯೂ ಇರಬಹುದು. ಆದರೆ ಇವರು ಚುನಾವಣೆಯ ರಣಕ್ಕಿಳಿಯದೆ, ಇಬ್ಬರೂ ಪರಸ್ಪರರಲ್ಲಿ ಮಾತನಾಡಿಕೊಂಡು, ಸಂಯಮಬುದ್ಧಿಯನ್ನು ತೋರಿ, ತಮ್ಮಲ್ಲಿಯ ಯಾರೊಬ್ಬರಿಗಾದರೂ ಅಧ್ಯಕ್ಷತೆಯ ಅವಕಾಶವನ್ನು ಒದಗಿಸಿಕೊಡಬಹುದಾಗಿತ್ತು. ಹೀಗೆ ಮಾಡಿದ್ದರೆ ಯಾವ ಬಗೆಯ ವಿಷಸ್ಪೋಟಕ್ಕೂ ಎಡೆಯಿರುತ್ತಿರಲಿಲ್ಲ. ಸೋಲೊದಗಿದವರು, ಮತ ಕೊಟ್ಟ ಸದಸ್ಯರನ್ನೆಲ್ಲ ಸಂದೇಹದಿಂದ ಕಾಣುವಂತಹ ಪ್ರಸಂಗ ಬರುತ್ತಿರಲಿಲ್ಲ.

ಚುನಾವಣೆಯ ಕಾರಣವು, ಕೇವಲ ತಾಂತ್ರಿಕದೃಷ್ಟಿಯಿಂದ ಮಾತ್ರ ಶ್ರೀಮಾನ್ ಬಿ ಶಿವಮೂರ್ತಿಶಾಸ್ತ್ರಿಗಳಿಗೆ ಗೆಲವನ್ನು ತಂದು ಕೊಟ್ಟಂತಾಗಿದೆಯೆಂಬುದು ಎಲ್ಲರೂ ಒಪ್ಪಿಕೊಳ್ಳಬೇಕಾದ ಮಾತು. ಶ್ರೀಮಾನ್ ಶಿವಮೂರ್ತಿಶಾಸ್ತ್ರಿಗಳು ಅಧ್ಯಕ್ಷರಾಗಿ ಆಯ್ಕೆಹೊಂದಿದುದು ಸಂತೋಷದ ಸಂಗತಿಯೆ! ಆದರಂತೆ ಶ್ರೀ. ಅ. ನ. ಕೃಷ್ಣರಾಯರು ಆಯ್ಕೆಹೊಂದಿದ್ದರೂ ನಮಗೆ ಸಂತೋಷವೇ ಆಗುತ್ತಿತ್ತು. ಏಕೆಂದರೆ ಇಬ್ಬರ ಕರ್ತೃತ್ವಶಕ್ತಿಯ ಕಲ್ಪನೆಯೂ ನಮಗೆ ಸಾಕಷ್ಟು ಇದೆ. ಇಬ್ಬರೂ ಸಮರ್ಥರಾದ—ನಾಡುನುಡಿಯ—ಸೇವಕರು. ಆದರೆ ಈ ಆಯ್ಕೆಯ ಪರಿಣಾಮವಾಗಿ ಪರಿಷತ್ತಿನ ಸದಸ್ಯವರ್ಗದಲ್ಲಿ ಒಡಕು ತಲೆದೋರದಂತೆ ನೋಡಿಕೊಳ್ಳುವುದು ಇಬ್ಬರೂ ಸಾಹಿತ್ಯಧುರೀಣರ ಕರ್ತವ್ಯವಾಗಿದೆ. ಅಂತರಿಕ ವಿರೋಧಾಭಿಪ್ರಾಯಗಳು ಬೆಳೆಯುತ್ತ ಹೋದರೆ, ಪರಿಷತ್ತಿನ ಸಾಹಿತ್ಯಿಕಕಾರ್ಯವು ಕುಂಠಿತವಾಗಬಹುದಿಷ್ಟೆ! ಆಯ್ಕೆಹೊಂದಿದ ಅಧ್ಯಕ್ಷ ಶ್ರೀಮಾನ್ ಬಿ. ಶಿವಮೂರ್ತಿಶಾಸ್ತ್ರಿಗಳನ್ನು ನಾವು ಮನವಾರೆ ಸ್ವಾಗತಿಸುತ್ತೇವೆ.

ಭಲೆ, ಭಲೆ! ಬೆಳಗಾಂವಿಯ ಮರಾಟಿಗರೆ!

ಬೆಳಗಾಂವಿಯಲ್ಲಿರುವ ಮಹಾರಾಷ್ಟ್ರ ಏಕೀಕರಣವಾದಿಗಳಾದ ಮರಾಟಿಗರನ್ನು, ಅವರ ಅವಿವೇಕದ ಅತಿರೇಕಕ್ಕಾಗಿ 'ಭಲೆ' ಎಂದು ಬೆನ್ನುತಟ್ಟಬೇಕಾಗಿದೆ. ದೇಶ-ಕಾಲ-ಪರಿಸ್ಥಿತಿಗಳ ವಿಷಯದಲ್ಲಿ ತಾವು ಸಂಪೂರ್ಣ ಕುರುಡರಾಗಿದ್ದರೂ, ಹಿಡಿದಿರುವ ಹಟದ ದಾರಿಯನ್ನೇನೂ ಅವರು ಬಿಡಲೊಲ್ಲರು. ದಾರಿಯಲ್ಲಿರುವ ಮುಳ್ಳು-ಕಲ್ಲುಗಳ ಸರವೆ ಅವರಿಗಿಲ್ಲ; ಹಳ್ಳ-ತಿಟ್ಟುಗಳವೆಯೆಂಬ ತಿಳಿವಳಿಕೆಯಿಲ್ಲ. ಗುರಿಯನ್ನು ಅರಿಯದೆ ಹೊರಟು ಹಾರುಗಾಲು ಹಾಕುತ್ತಲಿದ್ದಾರೆ. ಮುಂದಾಳುಗಳು ಮರಗುರುಡುರು; ಹಿಂದಾಳುಗಳು ಹಿರಿಗುರುಡರು. ತಮ್ಮ

ಹುವನ್ನು ಸಾಧಿಸುವ ಹುಮ್ಮಸಿನಲ್ಲಿ, ಮುಂದೆ ಹಳ್ಳದಲ್ಲಿ ಬಿದ್ದು ಹಾಳಾಗುವೆವೆಂಬ ಅರಿವಿಲ್ಲದೆ ದುಡುಕಿನಿಂದ ನಡೆದಿದ್ದಾರೆ. ಇವರ ಈ ದುಡುಕು ಮಹಾರಾಷ್ಟ್ರದ ಏಕೀಕರಣಕ್ಕೆ ಯಾವ ನೆರವನ್ನೂ ಕೊಡ ಲಾರದಿಷ್ಟೇ ಅಲ್ಲ; ಕನ್ನಡಿಗರೊಂದಿಗೆ ಶಾಶ್ವತವೈರವನ್ನು ಬಲಿಸಿ ಬೆಳೆ. ಸುತ್ತಲಿದೆ.

ಬೆಳಗಾಂವಿಯ ಮುಷ್ಟಿತುಂಬ ಮರಾಟಿಗರು ಇನ್ನೂ ತಮ್ಮ ಹುಸಿ. ಗನಸಿನ ಪ್ರಪಂಚದಲ್ಲಿಯೇ ವ್ಯವಹರಿಸುತ್ತಿದ್ದಾರೆ. ತಮ್ಮದೇ ಆದ ಭೂಮಿಯನ್ನು ಕನ್ನಡಿಗರು, ಮಹಾರಾಷ್ಟ್ರಕ್ಕೆ ಒಂದು ಇಂಚಿನುದ್ದವೂ ಕೊಡಲು ಸಿದ್ಧರಿಲ್ಲ. ಕನ್ನಡಿಗರೆಲ್ಲಿಯೂ ಇಂದು ಸಂಪೂರ್ಣ ಜಾಗೃತಿ. ಯುಂಟಾಗಿದೆಯೆಂಬುದರ ಕಲ್ಪನೆ ಈ ಮಹಾರಾಷ್ಟ್ರ ಮೋಹಾಂಧ. ರಿಗೆ ಇದ್ದಂತಿಲ್ಲ. ಹಾಗೆ ಆದು ಇದ್ದುದಾಗಿದ್ದರೆ ವಾಚ್ಛಾಪುರ, ಅಥಣಿ, ಹುಕ್ಕೇರಿ, ಸಂಕೇಶ್ವರಗಳನ್ನು ಇವರು ಅಪೇಕ್ಷಿಸುತ್ತಿದ್ದರೆ? ಬೆಳಗಾಂವಿಯ ವೃದ್ಧಪಿತಾಮಹರಾದ ಮಾನ್ಯ ದೇಶಪಾಂಡೆ ಗಂಗಾ ಧರರಾಯರ ಹಿತೋಕ್ತಿಯೂ ಇವರಿಗೆ ನಿಷ್ಪಸಮಾನವಾಗಿದೆ. ಬೆಳ. ಗಾಂವಿ ಯುಗಾಂತರದಲ್ಲಿಯೂ ಕನ್ನಡಿಗರಿಂ ಕೈಬಿಡಲಾರದೆಂಬುದು ನಿರ್ಣಯವಾಗಿದ್ದರೂ, ಬೆಳಗಾಂವಿ ಮಹಾರಾಷ್ಟ್ರದ್ದೆಂಬ ಬೊಬ್ಬೆ. ಯನ್ನಿವರು ನಿಲ್ಲಿಸಲೊಲ್ಲರು.

ಮಹಾರಾಷ್ಟ್ರೀಯರ ದುರಾಗ್ರಹವೆಂತಹದೆಂಬುದನ್ನು ಈ ಜನರು ಲೋಕದೆದುರು ಪ್ರದರ್ಶಿಸುತ್ತಲಿದ್ದಾರೆ. ಕನ್ನಡಿಗರ ಮಧ್ಯದಲ್ಲೆಯೇ ಇದ್ದುಕೊಂಡು, ಕನ್ನಡನಾಡಿನ ಅನ್ನ-ನೀರುಗಳನ್ನೇ ತಿಂದು ಬದುಕಿ, ಹಗಲಿರುಳೂ ಕನ್ನಡಿಗರನ್ನು ಬೈಯುತ್ತಿರುವ ಈ ಬೆಳಗಾಂವಿಯ ಮರಾಠಿಗರ ಕೃತಘ್ನತೆಗೆ ಎಂತಹ ಪ್ರಶಸ್ತಿಪತ್ರವನ್ನು ಕೊಡಬೇಕು? ಅವರ ಈ ಹುಚ್ಚು ಹಟಕ್ಕಾಗಿ 'ಭಲೆ' ಎಂದು ಬೆನ್ನು ತಟ್ಟಿ ಅವ. ರನ್ನು ಇನ್ನಿಷ್ಟು ಹುರುಪಿಗೆಬ್ಬಿಸಬೇಕು. ಅವರ ಕುರುಡುಬುದ್ಧಿ ಅವರನ್ನು ಹಳ್ಳದಲ್ಲಿ ಕೆಡಹುವುದನ್ನು ಕಣ್ಣಾರೆ ಕಾಣಬೇಕು!

ಸಂಜೀವರೆಡ್ಡಿಯವರ ಸೊಲ್ಲು ನಿಂತಿತು!

ಪಾಪ, ಬಳ್ಳಾರಿಯ ಬಗೆಗೆ ಆಂಧ್ರದ ಮುಖ್ಯ ಮಂತ್ರಿ ಸಂಜೀವರೆಡ್ಡಿಯವರು ಎಷ್ಟೊಂದು ಘನವಾದ ಆಶೆಯನ್ನು ಇಟ್ಟು ಕೊಂಡಿದ್ದರು! ಬಳ್ಳಾರಿಯಲ್ಲಿ ನಡೆದ ಉಪಚುನಾವಣೆಯಲ್ಲಿ ಶ್ರೀ. ಮುಂಡ್ಲೂರು ಗಂಗಪ್ಪನವರು ಗೆದ್ದೇಗೆಲ್ಲುವರೆಂಬ ನಂಬುಗೆಯಿಂದ ಅವರು, ಈ ಉಪಚುನಾವಣೆಯನ್ನೇ ಒಂದು ಪಣದ ಕಣವೆಂದು ಉಗ್ಗಡಿಸುತ್ತ ಹೊರಟಿದ್ದರು. ಮುಂಡ್ಲೂರರ ಗೆಲವಿಗಾಗಿ, ತಮ್ಮ ಸರಕಾರದಿಂದಲೂ ಪರಿಪರಿಯ ಸಹಾಯ-ಸಹಕಾರಗಳನ್ನು ಒದಗಿಸಿ. ದರು. ಕನ್ನಡಿಗರ ಹುರಿಯಾಳಾದ ಶ್ರೀಮಾನ್ ದೊಡ್ಡಬಸಪ್ಪನವ ರಿಗೆ ಯಾವ ಸರಕಾರದ ಸಹಾಯವೂ ಇರಲಿಲ್ಲ; ಸಂಸ್ಥೆ-ಸಂಘಗಳ ಸಹಾಯವೂ ಇರಲಿಲ್ಲ. ಕನ್ನಡಿಗರ ಆತ್ಮಜಾಗೃತಿಯ ಮೇಲೆ ವಿಶ್ವಾಸವಿಟ್ಟು ಅವರು ಚುನಾವಣೆಗೆ ಹುರಿಯಾಳುಗಳಾಗಿ ನಿಂತರು. ಆಂಧ್ರರ ಹುಂಬತನದ ದೊಂಬಿಗಳು ಕನ್ನಡಿಗರನ್ನು ನೂರುಮುಖ. ದಿಂದ ಹೆದರಿಸಿದುವಾದರೂ, ಕನ್ನಡಿಗರು ಹೆದರಿ ಕರ್ತವ್ಯಚ್ಯುತರಾಗ ಲಿಲ್ಲ. ಅವರು ತಮ್ಮ ಕನ್ನಡ ಹುರಿಯಾಳಿಗೆ ಗೆಲವು ತಂದುಕೊಟ್ಟ ರಿಷ್ಟೇ ಅಲ್ಲ; ಬಳ್ಳಾರಿ ಜಿಲ್ಲೆಯು ಕನ್ನಡತನವನ್ನು ಸಶ್ರಮಾಣವಾಗಿ ಸಿದ್ಧಗೊಳಿಸಿ ತೋರಿಸಿದರು. ಮೊಂಡುಮತಿಯ ಮುಂಡ್ಲೂರ ಗಂಗಪ್ಪನವರು, ತಮ್ಮನ್ನು ತಾವೇ ಮೋಸಗೊಳಿಸಿಕೊಂಡಿರಲ್ಲದೆ, ತಮ್ಮನ್ನು ನಂಬಿದ್ದ ಸಂಜೀವರೆಡ್ಡಿಯವರನ್ನೂ ಆಂಧ್ರಸರಕಾರ. ವನ್ನೂ ಮೋಸಗೊಳಿಸಿದರು. ಚುನಾವಣೆಯ ಪರಿಣಾಮದ ದಿನದ ವರೆಗೂ, ಬಳ್ಳಾರಿಯ ಸ್ವಾಮಿತ್ವದ ಬಗೆಗೆ ಬಾಯಿ ಹರಿಯುವಂತೆ ಮಾತನಾಡುತ್ತಲಿದ್ದ ಮಾನ್ಯ ಸಂಜೀವರೆಡ್ಡಿಯವರ ಸೊಲ್ಲೇ ಈಗ ಕೇಳದಾಗಿದೆ.

ಬಳ್ಳಾರಿಯಲ್ಲಿ ವಾಸಿಸಲೇ ಬೇಕಾಗಿರುವ ಆಂಧ್ರಜನರು ಕಣ್ಣುತೆರೆದು, ಇನ್ನು ತನ್ನು ಭವಿಷ್ಯಜೀವನದ ಕಡೆಗೆ ನೋಡಿಕೊಳ್ಳ. ಬೇಕು. ಇದುವರೆಗೂ ಕನ್ನಡಿಗರೊಂದಿಗೆ ನಡೆದುಕೊಂಡ ಮತ್ಸರ. ಬುದ್ಧಿಯನ್ನು ಹೊಡೆದುಹಾಕಿ, ಸ್ನೇಹ-ಸಹಕಾರಬುದ್ಧಿಯನ್ನಲ್ಲಿ ಆಹ್ವಾನಿಸಬೇಕು. ಸಂಜೀವರೆಡ್ಡಿಯವರೇ ತಮ್ಮವರೆಂಬ ಭಾವನೆ. ಯಿಂದ ನಡೆದುಕೊಳ್ಳತೊಡಗಿದರೆ, ಅಂತಹ ಜನರಿಗಿನ್ನು ಬಳ್ಳಾರಿ. ಯಲ್ಲಿ ನೆಲೆಯೇ ದೊರೆಯದೆಂಬುದನ್ನು ಜ್ಞಾಪಕದಲ್ಲಿರಿಸಿಕೊಳ್ಳ. ಬೇಕು.

ಬಳ್ಳಾರಿಯ ಕನ್ನಡಿಗರ ಕರ್ತವ್ಯಬುದ್ಧಿ ಎಂದಿನಿಂದಲೂ ಕರ್ನಾಟಕಕ್ಕೆ ಸಹಕಾರಿಯಾಗಿ ನಿಂತೇಯಿದೆ. ಈ ಉಪಚುನಾವ. ಣಿಯ ಪರೀಕ್ಷಾಪ್ರಸಂಗದಲ್ಲಿ ಅದು ಹೆಚ್ಚಿನ ಸತ್ತ್ವವನ್ನು ತೋರಿಸಿ ಕೊಟ್ಟುದಕ್ಕಾಗಿ, ಪ್ರತಿಯೊಬ್ಬ ಕರ್ನಾಟಕಸ್ಥನೂ ಬಳ್ಳಾರಿಯ ಕನ್ನಡಿ. ಗರನ್ನು ಅಭಿನಂದಿಸಬೇಕಾಗಿದೆ

ಅಮೇರಿಕೆಯ ಅಂಜುಗುಳಿತನ.

ಅಮೇರಿಕೆಯ ರಾಜಕೀಯ ಧುರೀಣರು ಭಾರತದ ವಿಷಯದಲ್ಲಿ ನ್ಯಾಯಬುದ್ಧಿಯಿಂದ ನಡೆದುಕೊಂಡಿಲ್ಲ ಭಾರತಕ್ಕೆ ವಿರೋಧಿಯಾಗಿ ನಿಲ್ಲಬಲ್ಲ ಶಕ್ತಿ ಎಲ್ಲೆಲ್ಲಿ ಇರುವುದೋ ಅಲ್ಲಲ್ಲಿ, ಆದಕ್ಕೆ ಸಹಕಾರವನ್ನು ಕೊಟ್ಟು ಬಲಿಸುತ್ತ ಬಂದಿದ್ದಾರೆ. ಈ ಅಪರಾಧಿ ಮನೋವೃತ್ತಿಯವ ರಾಗಿ ಇರುವುದರಿಂದಲೇ, ಮಾನ್ಯ ನೆಹರು ಅವರನ್ನು ಪ್ರತ್ಯಕ್ಷವಾಗಿ ಕಂಡು ಮಾತನಾಡಲು ಹಿಂಜರಿಯುತ್ತಲಿದ್ದಾರೆ. ಅಮೇರಿಕೆಯ ವಿದೇಶಮಂತ್ರಿಡಲ್ಲೇಸರೊಡನೆ ಒಂದು ಮಾತನ್ನೂ ಅಡಕೂಡದೆಂದು ಅಲ್ಲಿಯ ವಿವೇಕಿಗಳಾದ ವಿದ್ವಾಂಸರು ಮಾನ್ಯ ನೆಹರು ಅವರಿಗೆ ಬಿನ್ನವಿಸಿಕೊಂಡಿದ್ದಾರೆ. ಏಕೆಂದರೆ ಅವರ ಅವಿವೇಕದ ನಂಜನ್ನು ಇವರೆ, ಸಾಕಷ್ಟು ಅನುಭವಿಸಿರಬೇಕು. ಇನ್ನು ಅಧ್ಯಕ್ಷರಾದ ಐಸೆನ್ ಹಾವರರು ಅನಾರೋಗ್ಯದ ತೆರೆಯಲ್ಲಿ ಇದ್ದುಕೊಂಡು, ಮಾನ್ಯ ನೆಹರೂರವರ ಸಂದರ್ಶನ ಸಂದರ್ಭವನ್ನು ಮುಂದೆ ಮುಂದೆ ದೂಡುವ ದೀರ್ಘಸೂತ್ರವೃತ್ತಿಯನ್ನು ಅವಲಂಬಿಸಿದ್ದಾರೆ, ಸರಳ ಬುದ್ಧಿಯ ರಾಜಕಾರ್ಯದೆದುರು ಕುಟಿಲರಾಜಕಾರ್ಯವು ಎದೆಗೊಟ್ಟು ನಿಲ್ಲಲಾರದೆಂಬುದಕ್ಕೆ ಅಮೇರಿಕೆಯ ರಾಜಕೀಯ ಧುರೀಣರು ಇಂದು ಪ್ರತ್ಯಕ್ಷ ನಿದರ್ಶನವಾಗಿ ನಿಂತಿದ್ದಾರೆ. ಆದರೆ ಅವರ ಪರೀಕ್ಷಾ ದಿನವು ಇಂದಿಲ್ಲ ನಾಳೆ ಬಂದೇ ಬರುವುದು. ಪ್ರಾಮಾಣಿಕನು ಎಂತಹ ಸಂದರ್ಭದಲ್ಲಿಯೂ ಅಂಜಲಾರನು. ಅಪ್ರಾಮಾಣಿಕನು ಏಕಾಂತ. ದಲ್ಲಿರುವಾಗಲೂ ಅಂಜಿ ಅಂಜಿ ಬೀಳುವನು. ಈ ಬಗೆಯ ಅಂಜು. ಗುಳಿತನವನ್ನು ತ್ಯಜಿಸಿದಾಗಲೇ ಅಮೇರಿಕೆ ತನ್ನ ಬೆಲೆಯನ್ನು ಹೆಚ್ಚಿಸಿಕೊಳ್ಳಬಲ್ಲದು.

ರಮ್-ರಮಿ

(ಒಂದು ಜೀವನಕಥೆ)

ಶ್ರೀ. ವೆಂ. ಮು. ಜೋಶಿ, ಧಾರವಾಡ

卐

ಮನುಷ್ಯನ ಸತ್ಯಜೀವನವು ಕತೆ-ಕಾದಂಬರಿಗಳಿಗಿಂತ ಅದ್ಭುತವಾಗಿರುವುದು. ವ್ಯಕ್ತಿ-ವ್ಯಕ್ತಿಗಳ ಸ್ವಭಾವ-ವೈಷಮ್ಯವೇ ಈ ಅದ್ಭುತಗಳಿಗೆ ಮೂಲಕಾರಣ! ಸ್ವಭಾವಸಮತೆಯ ವಾತಾವರಣವು ದೊರೆತಿದ್ದರೆ ದ. ಚಿ. ಮೋಡಕನ ಪ್ರೇಮದಾಂಪತ್ಯದ ಜೀವನ ಹಾಳಾಗಿಹೋಗುತ್ತಿತ್ತೆ?

卐

"ರಮ್-ರಮಿ, ಎರಡೇ ನನ್ನ ಕೆಲಸ!"

ಮಡಗಾಂವದಲ್ಲಿಳಿದಾಗ, ನನ್ನ ಭಾಷೆಯನ್ನು ಬಲ್ಲ ಒಬ್ಬ ಅಪರಿಚಿತರನ್ನು ಪರಿಚಯ ಮಾಡಿಕೊಳ್ಳುವಾಗ— ಅವರು ತಮ್ಮ ಪರಿಚಯವನ್ನು ಈ ರೀತಿಯಲ್ಲಿ ಮಾಡಿಕೊಟ್ಟುದು, ನನಗೆ ತೀರ ಆಶ್ಚರ್ಯಕರವಾಗಿ ಕಂಡಿತು ಆ ಶಬ್ದದ ಅರ್ಥ ಸರಿಯಾಗಿ ಆಗದ್ದರಿಂದ, ನಾನು ಪುನಃ ಸ್ಪಷ್ಟೀಕರಣಕ್ಕಾಗಿ ಕೇಳಿಕೊಂಡೆ:

"ಕ್ಷಮಿಸಿ. 'ರಮ್-ರಮಿ' ಎಂಬುದರ ಅರ್ಥವಾಗಲಿಲ್ಲ."

"ನೀವು ಬಂದದ್ದು ಯಾವ ಊರಿಂದ?"

"ಧಾರವಾಡದಿಂದ."

"ಓಹೋ! ಹಾಗಾದರೆ ನಿಮಗೆ ಈ ಶಬ್ದಗಳ ಅರ್ಥವಾಗದೆ ಇದ್ದುದು ಆಶ್ಚರ್ಯವಲ್ಲ!"

"ನಾನು ಕೇಳಿದ ಪ್ರಶ್ನೆಗೆ ಉತ್ತರ ಸಿಗಲೇ ಇಲ್ಲವಲ್ಲ?"

"ಓಹೋ, ಸರಿ! 'ರಮ್' ಎಂದರೆ ಪಾಶ್ಚಾತ್ಯ ಸೋಮರಸ; 'ರಮಿ' ಎಂದರೆ— ದ್ವಾಪರಯುಗದಲ್ಲಿ ಅಣ್ಣ-ತಮ್ಮಂದಿರು ಆಡಿದ ಜೂಜಿನಾಟದ— ಸುಧಾರಿಸಿದ— ಕಲಿಯುಗದ ಆವೃತ್ತಿ."

"ಹೀಗೋ?"

"ನೀವೂ ಬನ್ನಿ, ಎರಡನ್ನೂ ನೋಡುವಿರಂತೆ"

"ನಾನು ಆಟವಾಡಲಾರೆ, ಕುಡಿಯಲೂ ಅಸಮರ್ಥ!"

"ಆದು ಮುಂದಿನ ಮಾತು. ಈಗ ನಡೆಯಿರಿ, ನಾನಿಳಿದುಕೊಂಡ ಊಟದ ಮನೆಗೆ!"

ಇಬ್ಬರೂ ಊಟದ ಮನೆಗೆ ಹೋದೆವು. ನೆರೆಗುಡುಳ, ಜೂಜುಗಾರ— ಇಂತಹ ಮನುಷ್ಯನ ಜತೆಯಲ್ಲಿ ಹೋಗಲು, ಸಂಕೋಚಕ್ಕಿಂತಲೂ ಹೆದರಿಕೆಯೇ ಹೆಚ್ಚೆಚ್ಚು ಆಗತೊಡಗಿತ್ತು; ಆದರೆ ಅವರೂ ಅಚ್ಚಕನ್ನಡ ಮಾತನಾಡುತ್ತಿದ್ದುದರಿಂದ, ಹೆದರಿಕೆ ಹೆಚ್ಚುಹೊತ್ತು ಉಳಿಯಲಿಲ್ಲ.

ಊಟ ಉಪಚಾರ ಮುಗಿಸಿಕೊಂಡು ಆ ವ್ಯಕ್ತಿ ನನ್ನನ್ನೂ ಕ್ಲಬ್ಬಿಗೆ ಕರೆದುಕೊಂಡು ನಡೆದ.

ದಾರಿಯಲ್ಲೇ ನಾನು ಕೇಳಿದೆ:

"ತಮ್ಮ ಪೂರ್ವಪರಿಚಯ, ಹೆಸರು-ದೆಸೆ ಕೇಳುವುದನ್ನೇ ಮರೆತಿದ್ದೆ."

"ನನ್ನ ಹೆಸರು, ದ. ಚಿ. ಮೋಡಕ— ಎಂದು. ನಮ್ಮೂರು ಮೈಸೂರು. ಇರುವುದು ಬೆಂಗಳೂರು. ಹಾಲೀವಸ್ತಿ ಗೋವಾ. ಜಾತಿ ಚಿತ್ಪಾವನ. ಧಂಡೆ ರಮ್-ರಮಿ!"

ನಾನು ಆವಾಕ್ಕಾದೆ. ಇದೇನಿದು ಒಂದೇ ಉಸಿರಿನಲ್ಲಿಯ ಪರಿಚಯ! ಅವರ ಮಾತಿನಲ್ಲಿ ಒಂದು ತೆರನಾದ ನಿರ್ಲಕ್ಷ್ಯಭಾವ ಒಡೆದು ಕಾಣುತ್ತಿತ್ತು. ದುಃಖ ಹೆಚ್ಚಾದಾಗ ಬರುವ ನಗುವಿನಂತಿತ್ತು ಆ ಮಾತು. ನಾನೂ ಧೈರ್ಯತಂದುಕೊಂಡೇ ಕೇಳಿದೆ:

"ಓಹೋ ಹೀಗೋ? ನನಗೂ ನಿಮಗೂ ಒಂದರಲ್ಲಿ ಸಾಮ್ಯವಿದೆ. ಅದೆಂದರೆ— ನಾನೂ ಚಿತ್ಪಾವನ.....ಆಷ್ಟೆ! ನನ್ನ ಊರು ಮಾತ್ರ ಧಾರವಾಡ!"

"ತಾವು ಧಾರವಾಡಸೀಮೆಯ ಚಿತ್ಪಾವನರೇ?— ಹಾಗಾದರೆ ನೀವು ಬಲ್ಲಿರಾ? ಆ ವಕೀಲ.....ಛೇ....ಬೇಡ ಬಿಡಿ ಹೋಗಲಿ....! ಆಯ್ಯೋ, ಆವಳು ನನ್ನನ್ನು ಕರೆಯುತ್ತಿದ್ದಾಳೆ. ಆಗೊ, ಅಲ್ಲಿ ನೋಡಿ; ಕೈಚಾಚಿ ಕರೆಯುತ್ತಿದ್ದಾಳೆ -- ಆಯ್ಯೋ, ಆ ಭಯಂಕರ ಕಣ್ಣು, ಆ ಕೆದರಿದ ಕೂದಲು, ಆ ಕಟಕಟನೇ ಕಡಿಯುವ ಹಲ್ಲು....ಆಯ್ಯೋ ಬೇಡ, ಬೇಡ!— ನಾನು ಮೋಸಗಾರ! ಮಾತುಕೊಟ್ಟು ಮುರಿದೆ. ಸಾಯುವುದಕ್ಕೆ ಅಂಜಿದ ಹೇಡಿ— ಆಯ್ಯೋ....."

ದಾರಿಯಲ್ಲಿಯೇ ಮೋಡಕ ಮೈಮರೆದವನಾಗಿ ಉರುಳಿಬಿದ್ದ. ನಾನು ಗಾಬರಿಯಾದೆ. ಮಾಡುವುದೇನು! ಪರಿಚಯವಾದ ಪಾಪಕ್ಕಾಗಿ ಶುಶ್ರೂಷೆಗೆ ನಿಲ್ಲಲೇ ಬೇಕಾಯಿತು. ಸೈನಿಕಶಿಕ್ಷಣ ಕೇಂದ್ರದಲ್ಲಿ ದೊರೆತ ಪ್ರಥಮೋಪಚಾರದ ಜ್ಞಾನವನ್ನು ಬಳಸಿಕೊಂಡು ಶುಶ್ರೂಷೆ ನಡೆಸಿದೆ. ಸ್ವಲ್ಪ ಸಮಯದಲ್ಲಿಯೆ ಅವನೆದ್ದ. ಕಡಲ ತೀರದ ಗಾಳಿ ಮೈಸುತ್ತಲೂ ಸುಳಿಯುತ್ತಿತ್ತು. ಅವನೆದ್ದು ನನ್ನ ಹೆಗಲ ಮೇಲೆ ಕೈಯಿರಿಸಿ, ಕಡಲುತೀರದತ್ತ ನಡೆದ. ನಾನು ಮುಂದೇನು ಮಾಡಬೇಕೆಂಬುದು ತಿಳಿಯದವನಾಗಿ, ಅವನನ್ನು ಹಿಂಬಾಲಿಸಿದೆ. ಸ್ವಲ್ಪ ಸಮಯದಲ್ಲಿಯೇ ಕಡಲತಡಿಗೆ ಬಂದೆವು. ಮೋಡಕ ಮಳಲಲ್ಲಿ ಕುಳಿತುಕೊಂಡ. ನಾನೂ ಅವನನ್ನು ಅನುಸರಿಸಿದೆ. ಮೋಡಕ ಕೈಯನ್ನು ಮಳಲಲ್ಲೆ ಆಡಿಸುತ್ತ, ತದೇಕದೃಷ್ಟಿಯಿಂದ ಫ್ಲೆತಿಜದತ್ತ ನೋಡುತ್ತ ಮಾತನಾಡಿದ:

"ತಾವು ತಮ್ಮ ಪರಿಚಯ ಮಾಡಿಕೊಡುವಾಗ, ತಾವೊಬ್ಬ ಲೇಖಕರೆಂದು ಹೇಳಿದಿರಲ್ಲವೇ?"

" ಹೌದು, ಕೇವಲ ಯುದ್ಧದ ಕತೆಗಳನ್ನು ಬರೆದಿದ್ದೇನೆ. ಸಾಧ್ಯವಾದರೆ ಸಾಮಾಜಿಕ ಕತೆಗಳನ್ನೂ ಬರೆಯಬೇಕೆನ್ನುತ್ತಿದ್ದೇನೆ. "

" ಒಂದು ಕತೆಯನ್ನು ಬರೆಯುವಿರಾ ? "

ಒಂದೇಕೆ— ಹತ್ತು ಬರೆಯುವೆ. "

" ನನ್ನದೇ ಒಂದು ಕತೆ. "

" ನಿಮ್ಮ ಕತೆ ? "

" ಹೂಂ. ನನ್ನ ಜೀವನವೇ ಒಂದು ಕತೆ. ಕತೆಯಲ್ಲ; ಅದ್ಭುತ ಕಾದಂಬರಿ! ನಾನು ಸೆರೆಗುಡುಕ—ಜೂಜುಗಾರ—ಎಂದು ತಿಳಿದಾಗ, ನಿಮಗೆ ತಿರಸ್ಕಾರವೆನಿಸಿರಬೇಕಲ್ಲವೇ ? "

" .. .. "

" ಈ ಚಟಗಳನ್ನು ನಾನು ಬೇಕೆಂತಲೇ ಅಮಂತ್ರಿಸಿದ್ದೇನೆ.... ಒಂದು ದೊಡ್ಡ ಗಾಯವನ್ನು ಮರೆಯುವುದಕ್ಕಾಗಿ.....ಮಾಯಿಸುವು-ದಕ್ಕಾಗಿ ! "

" ಗಾಯ ಮಾಯಿತೆ ? "

" ಇಲ್ಲ. ದೊಡ್ಡದಾಗುತ್ತ ನಡೆದಿದೆ. ಮಾಯಿಸುವುದಕ್ಕೆ ಈಗ ಒಂದೇ ಉಪಾಯ ಉಳಿದಿದೆ...ಅದೆಂದರೆ ನನ್ನ ಮರಣ ! "

" ಎಂದರೆ ? ಆತ್ಮಹತ್ಯೆಯ ವಿಚಾರವಿದೆಯೇನು ? "

" ಹೂಂ. "

" ಛೀ, ಅದು ಮಹಾಪಾಪ ! ನರಕದ ದಾರಿ ! "

" ಬದುಕಿ ಉಳಿವುದು ಮಹಾನರಕವಾಗಿದೆ. ಎದುರಿಗೆ ಅವಳು ನಿಂತು ಛೀ ಹಾಕುತ್ತಾಳೆ ! "

" ಯಾರು ಅವಳು ? "

ನನ್ನ ಸತ್ಯಕತೆಯನ್ನೇ ಹೇಳುತ್ತೇನೆ ಕೇಳಿ. ನಾನು ಸತ್ತ-ಮೇಲೆ, ಅದು ನಿಮಗೆ ಉಪಯೋಗ ಬಿದ್ದರೂ ಬೀಳಬಹುದು. ಮೈಸೂರಿನ ಪ್ಯಾಲೇಸ್ ಡಾಕ್ಟರ್ ಮೋಡಕರಿಗೆ ನಾನು ಎರಡನೆಯ ಮಗ. ನನಗೊಬ್ಬ ಅಣ್ಣ, ಒಬ್ಬ ತಮ್ಮ, ಇಬ್ಬರು ತಂಗಿಯರು ಇದ್ದಾರೆ....."

× × × ×

ಧಾರವಾಡ ಊರು ಸಣ್ಣದಿದ್ದುದರ ಮೂಲಕ, ಯಾವ ಘಟನೆಯೇ ಆಗಲಿ—ಆ ಘಟನೆ ಘಟಿಸಿದ ಕೆಲದಿನಗಳ ವರೆಗೆ— ನಾಲ್ಕು ಜನರ ಬಾಯಲ್ಲಿಯ ಮಾತಾಗಿ ಉಳಿಯುವುದು ಸ್ವಾಭಾವಿಕವಾಗಿತ್ತು. ಗೋವೆಯ ಹಾಯ್‌ಸ್ಕೂಲಿನ ಒಬ್ಬ ಶಿಕ್ಷಕ—ದ. ಚಿ. ಮೋಡಕ, ಧಾರವಾಡದ ವಕೀಲರೊಬ್ಬರ ಮಗಳ ಜಾತಿಯಲ್ಲಿ ಪ್ರೇಮವಿವಾಹ ಮಾಡಿಕೊಂಡ ಸುದ್ದಿ ಹರಡಿತು. ಸುದ್ದಿ ಸತ್ಯವಾಗಿತ್ತು. ಆ ಹುಡುಗಿ ಒಂದು ಸರಕಾರೀ ಕಚೇರಿಯಲ್ಲಿ ಕಾರಕೂನಳಾಗಿ ದುಡಿಯುತ್ತಿದ್ದಳು. ಪ್ರೇಮವಿವಾಹವಾದಾಕ್ಷಣ, 'ಇನ್ನೇಕೆ ಆ ನೌಕರಿ ? ' ಎಂದು ಅದಕ್ಕೆ ರಾಜೀನಾಮೆ ಕೊಟ್ಟಳು. ತಮ್ಮನ ಪದವಿಯ ಪ್ರಮಾಣಪತ್ರವನ್ನು ತನ್ನದೆಂದು ತೋರಿಸಿ, ಮೋಸದಿಂದ ನೌಕರಿ ಸಂಪಾದಿಸಿದ್ದ ಮೋಡಕ, ತಾನು ಮಾಡಿದ ಕಪಟ ಮುಂದೆ ಎಂದಾದರೂ ಹೊರಗೆ ಬಂದು—ಆಗ ಪಡಬೇಕಾದ ಕಷ್ಟವನ್ನು ಈಗಲೇ ತಪ್ಪಿಸಿಕೊಳ್ಳುವ ಉದ್ದೇಶದಿಂದ, ತನ್ನ ಕೆಲಸಕ್ಕೆ ರಾಜೀನಾಮೆಯನ್ನಿತ್ತೇ ಲಗ್ನಕ್ಕೆ ಬಂದಿದ್ದ. ಮುಂದೆ ಆಗಲಿರುವ ಹೆಂಡತಿ ಸರಕಾರೀ ನೌಕರಿಯಲ್ಲಿದ್ದುದರಿಂದ, ಜೀವನ-ನಿರ್ವಹಣಕ್ಕೆ ಯಾವ ತೊಂದರೆಯೂ ಉಂಟಾಗಲಾರದೆಂಬ ಅವನ ಭ್ರಮೆ ಮಾಯವಾಯಿತು. ತಾನು ರಾಜೀನಾಮೆ ಕೊಡುವ ಸುದ್ದಿ-ಯನ್ನು ಅವಳಿಗೆ ಮೊದಲೇ ತಿಳಿಸಿದ್ದರೆ, ಅವಳು ತನ್ನ ರಾಜೀನಾಮೆ-ಯನ್ನು ಸಲ್ಲಿಸುತ್ತಿರಲಿಲ್ಲ. ಅದರಿ ಅನಪೇಕ್ಷಿತವಾಗಿ ಇಬ್ಬರೂ ಒಬ್ಬ-ರೊಬ್ಬರ ನೌಕರಿಯನ್ನು ಅವಲಂಬಿಸಿ, ಸ್ವಂತದ ಕೆಲಸಕ್ಕೆ ರಾಜೀ-ನಾಮೆಯನ್ನು ಸಲ್ಲಿಸಿ, ನಿರುದ್ಯೋಗೀ ದಂಪತಿಗಳಾಗಿ ಮದುವೆಯ ಬಾಸಿಂಗವನ್ನು ಕಟ್ಟಿಕೊಂಡರು. ಪ್ರಸ್ಥದ ದಿನದ ಮರುದಿನ, ಇಬ್ಬ-ರಿಗೂ ಕೆಲಸವಿಲ್ಲವೆಂಬ ಸತ್ಯ ತಿಳಿದಾಗ, ಇಬ್ಬರೂ ದುಃಖಿಸಿದರು. ಆದರೂ ಹೆಂಡತಿಯು ಧೈರ್ಯ ತಾಳಿಕೊಂಡೇ ಹೇಳಿದಳು :

" ನಿಮ್ಮ ತಂದೆ ಮೈಸೂರಲ್ಲಿದ್ದಾರೆ— ತುಂಬಾ ಹಣವಂತ-ರಲ್ಲವೇ ಅವರು ? ಅಲ್ಲಿಗೇ ಹೋಗಿ ಇದ್ದುಬಿಡೋಣ ! "

" ನಿನಗೆ ಗೊತ್ತಿಲ್ಲ ಅಲ್ಲಿಯ ಸುಖ ! ತಂದೆ ಪೆನ್ಶನರ್; ಹಣದ ದಿವ್ವ ಆತ ! ಮನೆಯಲ್ಲಿ ಸರ್ವಾಧಿಕಾರ ನನ್ನ ತಾಯಿಯದು; ಅವಳೆಂದರೆ ಪ್ರತ್ಯಕ್ಷ ಅನಂದೀಬಾಯಿ ! "

" ನಾನು ನನ್ನ ಸ್ವಭಾವದಿಂದ ಎಲ್ಲರನ್ನೂ ಒಲಿಸಿಕೊಳ್ಳುವೆನು. ಆನಂದದ ವಾತಾವರಣವನ್ನು ಹುಟ್ಟಿಸುವೆನು. "

" ಸುಸ್ವಾಭಾವದ ಆದರ್ಶದ ಪುತ್ಥಳಿಯನ್ನು ತಂದಿಟ್ಟರೂ, ನನ್ನ ತಾಯಿಯ ಕ್ರೂರನೋಟಕ್ಕೆ ಸುಟ್ಟು ಬೂದಿಯಾಗುವುದು. ಅವಳಿಗೆ ಸಹಾಯಕರಾಗಿರುವವರೆಂದರೆ, ನನ್ನ ಇಬ್ಬರು ತಂಗಿಯರು ಮಂಥರೆ ನಂ. ೧..... ಮಂಥರೆ ನಂ. ೨ ! "

ಆದರೂ ಹೆಂಡತಿ ಗೆದ್ದಳು.

ಇಬ್ಬರೂ ಹೋಗಿ ತಂದೆಯ ಮನೆಯನ್ನು ಸೇರಿಕೊಂಡರು. ಹೆಂಡತಿಯ ಆಶೆ ದಿನದಿನಕ್ಕೂ ಆಳಿಯತೊಡಗಿತು. ಮನೆ ಪ್ರತ್ಯಕ್ಷ ನರಕವೆನಿಸಿತು. ದುಡ್ಡಿಗೆ ತಾಪತ್ರಯವಿರಲಿಲ್ಲ; ಆಹಾರಕ್ಕೆ ಕೊರತೆ ಇರಲಿಲ್ಲ; ಆದರೆ ವಾತಾವರಣ ವಿಷಮಯವಾಗಿತ್ತು. ಅತ್ತೆ ಮಹಾಂ-ಕಾಳಿಯಾಗಿದ್ದಳು. ಮೇಲಾಗಿ ಈ ಸೊಸೆ ನಿರುದ್ಯೋಗಿಯಾದ ಮಗನ ಹೆಂಡತಿಯಾಗಿದ್ದಳು. ಇವಳನ್ನು ಲಗ್ನವಾದ ದಿನದಿಂದಲೇ ಆತ ನಿರುದ್ಯೋಗಿಯಾಗಿದ್ದ. ಇವಳ ಕಾಲಗುಣ ಇಂತಹದೆಂದು, ಅತ್ತೆ ಆಗಾಗ ಅವತಾರ ತಾಳಿ ಅವಾಂತರ ಎಬ್ಬಿಸುತ್ತಿದ್ದಳು. ದಿನದ ೨೪ ತಾಸುಗಳೂ, ಅತ್ತೆಗೆ ಬೈಗುಳಿಗಾಗಿ ಕಡಮೆ ಬೀಳತೊಡಗಿದುವು. ಹಾಗೂ ಹೀಗೂ ಒಂದು ವರುಷ ಸಂದಿತು—೩೬೫ ದಿವಸ—ಅಬ್ಬಾ—ಎಂತಹ ದೀರ್ಘಾವಧಿಯ ಜೈಲುವಾಸ !

ಇಂತಹ ಜೈಲುವಾಸದಲ್ಲಿಯೇ ಹೆಂಡತಿ, ಕೂಸಿನ ತಾಯಿ-ಯಾದಳು. ಅತ್ತೆಯ ದೃಷ್ಟಿಯಲ್ಲಿ ಇದೊಂದು ಮಹಾಪರಾಧ-ವಾಯಿತು. 'ನಿರುದ್ಯೋಗಿ ದಂಪತಿಗಳಿಗೆ ಇದೊಂದೇ ಕೆಲಸ ಮತ್ತೊಂದು ಮೂರನೆಯ ಜೀವ. ಕೂಳಿಗೆ ಕಾಳರಾದವರ ಕಾಮ. ಕೂಟದಿಂದ ಹೊರಟ ಹಾಲಾಹಲ ವಿಷ!'—ಇವೇ ಅತ್ತೆಯ ಬೈಗುಳ.

ಹೆಂಡತಿ ಕವಿಯ ಮೇಲೆ ಕೈಯನಿಕ್ಕುವಳು. ಕಣ್ಣುಗಳಿಂದ

ನೀರು ಧಾರಾಳವಾಗಿ ಹರಿಯುವುದು. ಎದೆಯಲ್ಲಿ ನೂರಾರು ಜೇಳುಗಳು ಏಕಕಾಲಕ್ಕೆ ಕಡಿದಂತೆ ಭಾಸ. ಗಂಡ ಎಲ್ಲವನ್ನೂ ನೋಡುತ್ತಾನೆ; ಆದರೆ ಮಾತನಾಡಲಾರ. ಅವನೊಂದು ಕಲ್ಲಿನ ಮೂರ್ತಿಯಂತಾದ. ಭಕ್ತರ ದುಃಖಗಳನ್ನು ನೋಡಿದರೂ, ಕಣ್ಣಲ್ಲಿ ನೀರು ಬಾರದ ಕಲ್ಲಿನ ದೇವರಂತಾಗಿದ್ದ.

ಒಂದು ದಿನ ಮನೆಯಲ್ಲಿ ಮೂವರೇ ಇರುವ ಸುವರ್ಣ-ಸಂದರ್ಭ ಒದಗಿತ್ತು. ಹೆಂಡತಿ ಮಾತು ತೆಗೆದಳು :

" ಈ ದುಃಖ ಸಹನವಾಗುತ್ತಿಲ್ಲ. ಇದರೊಳಗಿಂದ ಪಾರಾಗೋಣವೇ ? "

" ಹೇಗೆ ? " ನಿರಾಶಾಧ್ವನಿಯಲ್ಲಿ ಗಂಡ ಪ್ರಶ್ನಿಸಿದ.

" ಕನ್ನಂಬಾಡಿಯ ಕಾವೇರಮ್ಮನೇ ಗತಿ ! "

" ಎಂದರೆ "

" ನಾವು ಮೂವರೂ ಒಮ್ಮೆಲೇ ಧುಮುಕಿಬಿಡೋಣ ! "

" ಛೇ, ನುಗು ಬೇಡ.....ನಾವಿಬ್ಬರೇ ಧುಮುಕೋಣ. "

" ನಾನು ನನ್ನ ಮಗುವನ್ನು ಬಿಟ್ಟು ಬರಲಾರೆ ! "

" ನಮ್ಮದೊಂದು ಗುರುತು ಈ ಜಗತ್ತಿನಲ್ಲಿ...."

" ಸಾಕು ಈ ಜಗತ್ತು. ಮತ್ತೆ ಬೇಡ ! "

" ಸರಿ, ನಡೆ ! "

ಇಬ್ಬರೂ ಗಾಳಿಯ ವೇಗದಲ್ಲಿ ಮನೆಯನ್ನು ಬಿಟ್ಟು, ಬಸ್ಸಿನಲ್ಲಿ ವೃಂದಾವನಕ್ಕೆ ಬಂದರು. ಹೆಂಡತಿಯ ಕೈಯಲ್ಲಿ ಕೂಸಿತ್ತು. ಗಂಡ ಹಿಂದಿನಿಂದ ನಡೆದಿದ್ದ. ಸೇತುವೆಯ ಮಧ್ಯದ ವರೆಗೆ ಬಂದಾಗ, ಹೆಂಡತಿ ಗಂಡನತ್ತ ಮುಖ ತಿರುವಿ ಹೇಳಿದಳು:

" ಮಗುವನ್ನು ಕರೆದುಕೊಂಡು ಬೀಳಲು ನನಗೆ ಧೈರ್ಯ ಸಾಲುತ್ತಿಲ್ಲ ! "

" ನನಗೇಕೋ ನಡುಕ್ಕಹುಟ್ಟುತ್ತಿದೆ. "

" ಧೈರ್ಯ ತಂದುಕೊಳ್ಳಿ. ಈ ಮಗುವನ್ನು ನೀವೇ ತೆಗೆದುಕೊಳ್ಳಿರಿ. ಕಣ್ಣು ಮುಚ್ಚಿಕೊಳ್ಳಿರಿ— ಎರಡೇ ನಿಮಿಷದಲ್ಲಿ ಎಲ್ಲವೂ ಮುಗಿಯುತ್ತದೆ. "

ಗಂಡ ಮಗುವನ್ನು ಕರೆದುಕೊಂಡು, ಗಟ್ಟಿಯಾಗಿ ಎದೆಗೆ ಅವಚಿಕೊಂಡ. ಹೆಂಡತಿ ಒಂದು ಸಲ ನಮಸ್ಕರಿಸಿ—ಗಂಡನೆತ್ತ ಹೊರಳಿ " ಹೂಂ— ನಿಜವಾದ ಪ್ರೇಮ ನಮ್ಮಲ್ಲಿದ್ದರೆ— ಕೂಡಿ ಸಾಯೋಣ—"

" ಧುಡುಂ " ಹೆಂಡತಿ ಹೊಳೆಯಲ್ಲಿ ಬಿದ್ದಳು.

ಮಗು ಚೀರಿತು. ಸಾಯುವ ಮೊದಲು ಮಗುವಿನ ಮುಖವನ್ನೊಮ್ಮೆ ನೋಡಿ ಸಾಯೋಣವೆಂದು, ಗಂಡ ಮಗುವಿನ ಮುಖವನ್ನು ನೋಡಿದ.

ನಿಷ್ಕಪಟಭಾವದ ಮಗು !—

ತಂದೆಯ ಕರುಳು ಕಿತ್ತುಬಂದಿತು.— ಕಳಗೊಮ್ಮೆ ಇಣುಕಿ ನೋಡಿದ— ಹೆಂಡತಿ ಮಾಯವಾಗಿದ್ದಾಳೆ. ಕಾವೇರಮ್ಮ ಅವಳನ್ನು ನುಂಗಿಬಿಟ್ಟಿದ್ದಳು. ಏನೂ ಅರಿಯದವರಂತೆ ಕಾವೇರಿ ನಿಶ್ಚಲಳಾಗಿದ್ದಳು.

ವೇಳೆ ಸರಿದಿತ್ತು.— ಆತ್ಮಹತ್ಯೆಯ ಧೈರ್ಯ— ಮೊದಲಿನ ಧೈರ್ಯ—ಅಳಿದಿತ್ತು. ಮುಂದೆ ಬಂದ ಹೆಜ್ಜೆ ಹಿಂದೆ ಸರಿಯಿತು. ಕೂಸು ಎರಡೂ ಕೈಗಳಿಂದ ತಂದೆಯನ್ನು ಅನಚಿಕೊಂಡಿತು. ಆತ ಎಲ್ಕೈದು ಹೆಜ್ಜೆ ಹಿಂದೆ ಸರಿದ.

ಕೂಡಲೇ ಸುತ್ತಲಿನ ಜನ ಕೂಡಿದರು. ಅಳಿದುಳಿದ ಧೈರ್ಯವೂ ಮಾಯವಾಯಿತು. ಮನೆಗೆ ಬಂದ.

× × × ×

" ಮನೆಗೇನೋ ಬಂದೆ. ಆದರೆ ನನ್ನ ಒಳದನಿ ಚೀರಿ ಚೀರಿ ಹೇಳುತ್ತಿತ್ತು : ' ಕೊಲೆಗಡುಕ. ನೀನು ಮಹಾಪಾಪಿ ! ' ಎಂದು. ನಾನು ಹುಚ್ಚನಂತಾದೆ. ದಿವಸವನ್ನೇನೋ ದೂಡುತ್ತಿದ್ದೆ. ಆದರೆ ರಾತ್ರಿಯಾಯಿತೆಂದರೆ ಕತ್ತಲಲ್ಲಿ ಅವಳು ಎದುರು ಬರುವಳು; ಕೈ ನೂಡಿ ಕರೆಯುವಳು. ಎಂತಹ ಅವಸ್ಥೆಯಲ್ಲಿ ಕಾಣಿಸಿಕೊಳ್ಳುವಳು : .....ಮಹಾ ಭಯಾನಕ ! ಮೈಮೇಲಿನ ಬಟ್ಟೆಗಳು ಒದ್ದೆಯಾಗಿರುವುವು; ಕೂದಲು ಹರಡಿರುವುವು. ಕುಂಕುಮ ಅಳಿಸಿರುವುದು. ದೈನ್ಯಮೂರ್ತಿಯಾಗಿ ಕೇಳುವಳು: " ನೀವು ನನ್ನನ್ನು ಹೀಗೆ ಮೋಸಗೊಳಿಸಬೇಕೇ ? "

ನನಗೆ ಸಾಯಲು ಧೈರ್ಯವಿಲ್ಲ; ಬದುಕಲು ಮನಸ್ಸಿಲ್ಲ. ಇಂತಹ ವಿಚಿತ್ರ ಸ್ಥಿತಿಯಲ್ಲಿ—ದಿನಗಳನ್ನು ಮುಂದೂಡುವುದು ಹೇಗೆ? ಎಂಬ ವಿಚಾರದ ಸೆಳೆತದಲ್ಲಿ, ಈ ಎರಡು ವಸ್ತುಗಳು ಕಾಣಿಸಿದುವು:— ಅದೇ ರಮ್-ರಮಿ ! ಮನೆಯಲ್ಲಿಯ ದುಡ್ಡನ್ನು ಕಳವು ಮಾಡಿಕೊಂಡು ಈಗ ಇಲ್ಲಿ ಬಂದಿದ್ದೇನೆ. ಅದರೆ ಇದೆಲ್ಲ ನಾನು ಮಾಡುತ್ತಿರುವುದು ಒಂದು ಸಂಪಾದನೆಗಾಗಿ ! "

" ಯಾವುದರ ಸಂಪಾದನೆ ? "

" ಧೈರ್ಯದ ಸಂಪಾದನೆ ! "

" ಎಂತಹ ಧೈರ್ಯ ? "

" ಆತ್ಮಹತ್ಯೆಗೆ ಬೇಕಾಗುವ ಧೈರ್ಯ. "

× × × ×

ಇಂದಿನ ಬೆಳಗು ದಿನಪತ್ರಿಕೆಯನ್ನು ಓದುವಾಗ, ಒಂದು ಅಕಸ್ಮಿಕ ಆತ್ಮಹತ್ಯೆಯ ಸುದ್ದಿಯಿಂದ, ೬ ತಿಂಗಳ ಹಿಂದೆ ನಾನು ಗೋವೆಯ ಪ್ರವಾಸಕ್ಕೆ ಹೋದಾಗಿನ ಒಂದು ಘಟನೆ ನೆನಪಾಯಿತು. ಅದೇ ತರುಣ, ಮೈಸೂರಿನ ಕನ್ನಂಬಾಡಿಯಲ್ಲಿ ಜಿಗಿದು ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಆಚ್ಚಾಗಿತ್ತು. ಆ ಸುದ್ದಿಯನ್ನು ಓದುತ್ತಿರುವಂತೆ, ಅಲ್ಲಿ ಅವನ ಮುಖ ಕಂಡಂತೆ ಭಾಸವಾಗತೊಡಗಿತು.

.....ಮೈಮೇಲಿನ ಬಟ್ಟೆ ತೊಯ್ದಿದೆ, ತಲೆಗೂದಲು ಹರಡಿವೆ ತುಟಿ ಅಲುಗಾಡಿದಂತೆ ಭಾಸವಾಯಿತು.

" ರಮ್-ರಮಿ..... ನಮಸ್ಕಾರ ! "

ಹೆದರಿ ಪತ್ರಿಕೆಯನ್ನು ಮುಚ್ಚಿದೆ.

ನಿಜಗುಣ ಶಿವಯೋಗಿ

(ವ್ಯಕ್ತಿ ಮತ್ತು ಕೃತಿಪರಿಚಯ)

ಶ್ರೀ. ತಟ್ಟಿ ಶ್ಯಾಮರಾಯರು, ಬಿ. ಎ., ಬಿ. ಟಿ. ಧಾರವಾಡ

ಕನ್ನಡ ಸಾಹಿತ್ಯಪ್ರಪಂಚದಲ್ಲಿ ನಿಜಗುಣ ಶಿವಯೋಗಿಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ಅವರ ವಾಙ್ಮಯವ್ಯಕ್ತಿಮತ್ತ್ವದಲ್ಲಿ, ಕಲಾನಿರ್ಮಾಪಕನಿಗಿಂತ ಕಲಿಸುವ ಗುರುವಿನ ಸ್ವರೂಪವು ಹೆಚ್ಚಾಗಿ ಕಾಣುವುದು. ನಿಜಗುಣಾರ್ಯರ ಜ್ಞಾನೋಪಾಸನೆ ಸರ್ವತೋಮುಖವಾದುದು.

ನಿಜಗುಣಾರ್ಯರು ಕೇವಲ ವಾಗ್ಗೇಯಕಾರರು—ಎಂದರೆ ಸಂಗೀತಸಾಹಿತ್ಯ ಪ್ರವೀಣರು—ಇದ್ದರೆಯಷ್ಟೇ ಅಲ್ಲ; ಅವರು ಪರಮಜ್ಞಾನಿಗಳು, ವಿರಕ್ತರು, ಅನುಭಾವಿಗಳು, ಅಧ್ಯಾತ್ಮೋಪದೇಶಕರೂ ಆಗಿದ್ದರು. ಹೀಗೆ ವಾಗ್ಗೇಯಕಾರರೂ, ವಿವೇಕಚಿಂತಾಮಣಿ ಮೊದಲಾದ ವೇದಾಂತಗ್ರಂಥಕರ್ತರೂ, ಮಹಾಮಹಿಮರೂ, ಕರ್ನಾಟಕ ಸಂಸ್ಕೃತಿಯ ಸ್ವರೂಪವನ್ನು ತಮ್ಮ ದಿವ್ಯಜೀವನದಿಂದ ಜಗತ್ತಿಗೆ ತಿಳಿಯಪಡಿಸಿದ ಐತಿಹಾಸಿಕ ಪುರುಷರೂ ಆದ ನಿಜಗುಣಾರ್ಯರಿಗೆ, ಕನ್ನಡಿಗರಾದ, ನಾವು ಸಲ್ಲಿಸಬೇಕಾದ ಅಲ್ಪಸೇವೆಯನ್ನು ನನ್ನ ನಾನು ಕೆಲವು ಮಾತಿನಲ್ಲಿ ಇಲ್ಲಿ ಸಲ್ಲಿಸಬೇಕೆಂದಿರುವೆನು.

ಪ್ರಥಮತಃ ಅವರ ವೈಯಕ್ತಿಕ ಜೀವನದ ಒಂದೆರಡು ಸಂಗತಿಗಳನ್ನು ತಿಳಿದ ನುಟ್ಟಿಗೆ ಇಲ್ಲಿ ಹೇಳುವೆನು. ಈಗ ಮೈಸೂರಿನ ಎಲ್ಲೆಯಲ್ಲಿರುವ ಕೊಳೈಗಾಲ ತಾಲೂಕಿನ ಬೆಲಕವಾಡಿ ಎಂಬ ಗ್ರಾಮ ಅಥವಾ ಶಂಭುಲಿಂಗಬೆಟ್ಟವೆಂದು ಹೆಸರುಪಡೆದಿರುವ ಬೆಟ್ಟದ ಸುತ್ತಲಿನ ಗಣ್ಯರಾಜ್ಯವೊಂದಕ್ಕೆ ನಿಜಗುಣರು ಅರಸರಾಗಿದ್ದರು. ಅವರು ಇದ್ದದ್ದು ಕ್ರಿ. ಶ. ೧೫೦೦ರ ಎಡಬಲ—ಎಂದರೆ ವಿಜಯನಗರ ಸಾಮ್ರಾಜ್ಯವು ಇಳಿಮುಖವಾಗಹತ್ತಿದ ಕಾಲ. ಅವರ ಹಾಡುಗಳಲ್ಲಿ ಮುದ್ರಿಕೆಯಾಗಿ ಶಂಭುಲಿಂಗನಿಗೆ ಸಮರ್ಪಣೆಯು ಕಂಡುಬರುವುದರಿಂದ, ಶಂಭುಲಿಂಗರು ಅವರ ಗುರುಗಳಾಗಿದ್ದರೆಂದು ತಿಳಿಯುವುದು. ಅವರ ಉಪದೇಶದ ಪ್ರಭಾವದಿಂದ, ಬುದ್ಧದೇವನಂತೆ ಇವರು ನಿರಕ್ತಿಯನ್ನು ಹೊಂದಿ ಅರಸೊತ್ತಿಗೆಯನ್ನೂ ತುಚ್ಛಮಾಡಿ ಶಿವಯೋಗನಿರತರಾದರು. ಈ ಯೋಗಾಭ್ಯಾಸದ ಫಲವಾಗಿ ಅವರಿಗೆ ಸಕಲಶಾಸ್ತ್ರಗಳೂ ಕರತಲಾಮಲಕವಾದುವು. ಇವರು ರಚಿಸಿದ ಆರು ಗ್ರಂಥಗಳ ಹೆಸರುಗಳು ಹೀಗಿವೆ :

೧. ಕೈವಲ್ಯಪದ್ಧತಿ, ೨. ಅನುಭವಸಾರ, ೩. ವಿವೇಕಚಿಂತಾಮಣಿ, ೪. ಪರಮಾನುಭವಬೋಧೆ (ಇದು ಉಪನಿಷತ್ತಿನಲ್ಲಿಯ ಯಾಜ್ಞವಲ್ಕ್ಯ-ಮೈತ್ರೇಯಿಯವರ ತತ್ತ್ವಚರ್ಚೆಯನ್ನೊಳಗೊಂಡಿದೆ) ೫. ಪರಮಾರ್ಥಗೀತೆ—(ಇದು "ಯೋಗವಾಸಿಷ್ಠದ" ಸಾರ) ೬. ಪರಮಾರ್ಥಪ್ರಕಾಶಿಕೆ—(ಇದು ಸಂಸ್ಕೃತ ಶಿವಯೋಗಪ್ರದೀಪಿಕೆಯಿಂದ ಕನ್ನಡಿಸಿದ್ದು) ಈ ಆರೂ ಗ್ರಂಥಗಳೂ ಪ್ರಸಿದ್ಧವಾಗಿವೆ; ಮತ್ತು ಪಂಡಿತರಿಂದ ಪರಿಶೋಧಿಸಲ್ಪಟ್ಟಿವೆ. ಇದಲ್ಲದೆ "ನಿಜಗುಣಶಿವಯೋಗಿಗಳ ಸ್ವರೂಪದರ್ಶನ" ಎಂಬ ಪುಸ್ತಕವೂ ಪ್ರಕಟವಾಗಿದೆ. ಇದು ಅವರ ಸ್ಮಾರಕಗ್ರಂಥದ ರೀತಿಯಲ್ಲಿ, ಅನೇಕ ನಾಮಾಂಕಿತ ವಿದ್ವಜ್ಜನರಿಂದ ಕವಿ, ಜ್ಞಾನಿ, ವಿರಾಗಿ, ಅನುಭಾವಿ ಇತ್ಯಾದಿ ಬಹುಮುಖವಾಗಿ ಹರಿದುಬಂದ ಅವರ ಅದ್ವಿತೀಯ ಅನನ್ಯ ಸಾದೃಶ ಪ್ರತಿಭೆಯನ್ನು ಕುರಿತು ಬರೆಯಲ್ಪಟ್ಟಿದೆ. ನಿಜಗುಣರು ಮೇಲೆ ವಿವರಿಸಿದ ಆರು ಗ್ರಂಥಗಳನ್ನೆಲ್ಲದೆ ಮುರುಘ, ಕಣ್ಣಪ್ಪ ಮುಂತಾದ ೬೩ ಪುರಾತನ ಆದರ್ಶ ಶಿವಭಕ್ತರ ಸ್ತೋತ್ರವನ್ನು ರಚಿಸಿದ್ದಾರೆ. ಈ ಭಕ್ತರಲ್ಲಿ ಹೆಚ್ಚಾದವರು ತಮಿಳುನಾಡಿನಲ್ಲಿ ಜನ್ಮತಾಳಿ, ಶಿವಭಕ್ತಿಯ ಅಮೃತವಾಹಿನಿಯನ್ನು ನಿರಂತರವಾಗಿ ಹರಿಯಿಸಿದ್ದಾರೆ.

ಇವರು ರಚಿಸಿದ ಕೈವಲ್ಯಪದ್ಧತಿಯು, ನಾದೋಪಾಸನೆಯಿಂದ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಳ್ಳಲು ಮುಮುಕ್ಷುಗಳಿಗೆ ಪ್ರಾಚೀನ ಪರಂಪರೆಯ ಸಾಮವೇದದಂತಿದೆ. ಈ ಸುವಿಜ್ಞಾತ ಪದ್ಯಸಂಗ್ರಹವು, ನಿಜಗುಣರಿಗೆ ರಾಗ-ರಸಗಳ ಶಾಸ್ತ್ರೀಯ ಪರಿಚಯವಿದ್ದಿತೆಂಬುದನ್ನು, ಸಂಗೀತವು ಶಿವಯೋಗಕ್ಕೆ ಶ್ರೇಷ್ಠಸಾಧನವಾಗಿರುವುದನ್ನು ಅವರು ಸಂಪೂರ್ಣವಾಗಿ ಅನುಭವಿಸಿದ್ದರೆಂಬುದನ್ನು ಸ್ಪಷ್ಟಪಡಿಸುತ್ತದೆ. ಇದು ಸುಮಾರು ೪೦೦ ವರ್ಷಗಳಿಂದ ಕನ್ನಡಿಗರಿಗೆ ಸುಪರಿಚಿತವಾಗಿದೆ. ವಿವೇಕಚಿಂತಾಮಣಿಯಾದರೋ ಪ್ರೌಢಗದ್ಯಶೈಲಿಯಲ್ಲಿದ್ದುದರಿಂದಲೂ, ಶಾಸ್ತ್ರೀಯ ಪರಿಭಾಷೆಯಿಂದ ಜಟಿಲವಾದುದರಿಂದಲೂ ಅಲ್ಪಜ್ಞಾತಕೃತಿಯಾಗಿ ಉಳಿದದ್ದು ಸಹಜವಾಗಿದೆ. ತತ್ತ್ವಜ್ಞಾನ, ಸಂಗೀತಕಲಾಭಿಜ್ಞತೆ, ಕಾವ್ಯರಚನಾಚಾತುರ್ಯ, ಯೋಗಾಭ್ಯಾಸ, ಜ್ಞಾನ-ಭಕ್ತಿ-ವೈರಾಗ್ಯಗಳಿಂದ ಪ್ರಾಪ್ತವಾದ ಸಿದ್ಧಪುರುಷನ ಸ್ಥಿತಿ ಇವೆಲ್ಲವೂ ಈ ಮಹಾಮಹಿಮನಲ್ಲಿ ಕಾಣುವುವು.

ಮೊದಲು ಅವರ ಕವಿವಾಣಿಯನ್ನು ಕೇಳಿ: ಇದು ಕೈವಲ್ಯಪದ್ಧತಿಯ ಶಿವಕಾರುಣ್ಯದಲ್ಲಿರುವ ಸುವ್ಯಾಲಿವರ್ಣವೆಂಬ ಒಂದು ಪ್ರಬಂಧ: "ಸೋಲದಾತನೆ ವಿರತನು; ಮನದೊಳಗೆ ಬಾಲೆಯರ ಸಿಂಗರವ ಕಂಡು॥ತಳಿರಡಿಯ ನುಣ್ದೊಡೆಗಳ ಜೆಲುವಿನೊಬ್ಬಳಿಯಹ ನಿತಂಬಭರದ ನಡೆಗೆ ಬಳಕುವತಿ ಬಡನಡುವಿನ ತೆಳುವಸುರೆ ನಳಿದೋಳ ನಲ್ಲಳನು ಕಂಡು ॥ ೧ ॥

ಈ ಪ್ರಬಂಧದಲ್ಲಿ ೫ ನುಡಿಗಳಿವೆ. ಇದರ ಪಲ್ಲವಿಯನ್ನು ಬಿಟ್ಟು ಉಳಿದ ಸಾಲುಗಳಲ್ಲಿ, ಶೃಂಗಾರರಸದ ಸಮುದ್ರವೇ ಭೋರ್ಗರೆದು ಹೆಡೆಯೆತ್ತಿ ಎದ್ದುಬರುತ್ತಿದ್ದರೆ, ಪಲ್ಲವಿಯ ಎರಡೇ ಸಾಲುಗಳು ಆ ಅರ್ಭಟಿಯನ್ನು ನಿಮಿಷದಲ್ಲಿಯೇ ಕರಗಿಸಿ ತಲೆತಗ್ಗಿಸಹಚ್ಚುತ್ತವೆ; ಅಥವಾ ಇಪ್ಪತ್ತು ಸಾಲುಗಳು ಎಬ್ಬಿಸುವ ಕಾದಲತೆಯನ್ನು ಎರಡೇ ಸಾಲುಗಳು ಅಂತರ್ಮುಖಿಯನ್ನಾಗಿ ಮಾಡುತ್ತವೆ.

ನಿಜಗುಣರ ಕಾವ್ಯಶ್ರೀಯ ಝಳುಕನ್ನು ನೋಡಿದನಂತರ ಅವರ ಸಂಗೀತ ಸಿದ್ಧಾಂತದ ಕಡೆಗೆ ಒಂದಿಷ್ಟು ಹೊರಳುವ; ನಿಜಗುಣರು ರಾಗ-ತಾಳಬದ್ಧವಾದ (ಈಗ ಪ್ರಸಿದ್ಧವಾದ ಪುಸ್ತಕಗಳಲ್ಲಿ ತಾಳವನ್ನು ಕಾಣಿಸಿಲ್ಲ), ಭಕ್ತಿರಸ ಸೂಸುವ ಅನೇಕ ಕೃತಿಗಳನ್ನು ಕನ್ನಡ ಸಂಗೀತಕ್ಕೆ ಕಾಣಿಕೆಯಾಗಿ ಕೊಟ್ಟಿದ್ದಾರೆ. ಕೈವಲ್ಯಪದ್ಧತಿಯಲ್ಲಿ 'ಶಿವಕಾರುಣ್ಯಸ್ಥಿತಿ' ಎಂಬ ಭಾಗದಲ್ಲಿ ೨೮, 'ಜೀವಸಂಬೋಧನ ಸ್ಥಲ' ಎಂಬಲ್ಲಿ ೨೨, 'ನೀತಿಕ್ರಿಯಾಚರ್ಯಸ್ಥಲ'ದಲ್ಲಿ ೩೬, 'ಯೋಗಪ್ರತಿಪಾದನಸ್ಥಲ' ಎಂಬಲ್ಲಿ ೩೯, 'ಜ್ಞಾನಪ್ರತಿಪಾದನ ಸ್ಥಲ'ದಲ್ಲಿ ೫೯—ಹೀಗೆ ಅಂತೂ ೧೭೪ ಕೃತಿಗಳಿವೆ. ಇನ್ನು ನಾದೋತ್ಪತ್ತಿ, ಸ್ವರಗಳ ಉತ್ಪತ್ತಿ, ಇಪ್ಪತ್ತೆರಡು ಶ್ರುತಿ ಅಥವಾ ಶ್ರುತ್ಯಂತರ-ಸಂಖ್ಯೆ, ವಿಕೃತ-ಮಧ್ಯಮ ರಾಗಗಳನ್ನು ಬಿಟ್ಟು, ಮೂವತ್ತಾರು ಶುದ್ಧ ರಾಗಗಳ ಸಂಖ್ಯೆ, ಮಿಶ್ರರಾಗಗಳು, ಗಾನವೈಖರಿ ಅಥವಾ ಹಾಡತಕ್ಕ ರೀತಿ ಇತ್ಯಾದಿ ವಿಷಯಗಳಲ್ಲಿ ಸಂಗೀತದ ಸೂಕ್ಷ್ಮ ಅನುಭವವನ್ನು ಸಾಂಕೇತಿಕ ಪರಿಭಾಷೆಯಿಂದ 'ಪುರಾತನ ಗೀತಾನುಗುಣವಾಗಿ' ಹೇಳಿದ್ದಾರೆ. ಎಷ್ಟೋ ಗೂಢವಿಷಯಗಳ ಬಗೆಗೆ ಇನ್ನೂ ಸಾಕಷ್ಟು ಸಂಶೋಧನೆಯು ನಡೆದಿಲ್ಲವಾದ್ದರಿಂದ, ಅದರ ಪ್ರಯೋಜನವು ಈಗ ಗಾನಕಲೆಗೆ ಅತ್ಯಲ್ಪವಾಗಿಯೇ ಉಳಿದಿದೆ.

ನಿಜಗುಣ ಶಿವಯೋಗಿಗಳ 'ವಿವೇಕಚಿಂತಾವಣಿ' ಎಂಬ ಗ್ರಂಥವು ಅವರ ರಚಿಸಿದ ಆರು ಶಾಸ್ತ್ರಗ್ರಂಥಗಳಲ್ಲಿ ಒಂದಾಗಿದೆ. ಇದನ್ನು 'ವಸ್ತುಕೋಶ' ಅಥವಾ 'ವಿಶ್ವಕೋಶ' ಎಂಬ ಹೆಸರು ಒಪ್ಪುವುದು. ಇದರಲ್ಲಿ ವೈದಿಕವಿಷಯಗಳಿಂದಿಗೆ ಜ್ಯೋತಿಷ್ಯ, ವೈದ್ಯಕ, ಭೂಗೋಲ, ಖಗೋಲ, ಶಂಗೀತಾದಿ ಲೌಕಿಕವಿಷಯಗಳ ಸಂಗ್ರಹವಿದ್ದುದೇ 'ವಿಶ್ವಕೋಶ' ಎಂಬ ಹೆಸರಿಗೆ ಕಾರಣ. ಇದರ ಆಕಾರ, ಗಾತ್ರ—ವಿಶ್ವಕೋಶ ಅಥವಾ ಬೃಹದ್ಜ್ಞಾನ ಕೋಶದಷ್ಟು ದೊಡ್ಡದಿಂಲಿಕ್ಕಿಲ್ಲ. ಇದಕ್ಕೆ ಕಾರಣವೇನೆಂದರೆ ವಿಷಯಗಳೆಲ್ಲ, 'ಕಿರಿದರೊಳ್ ಪಿರಿದರ್ಥವ ಪೇಳುವ' ಗದ್ಯಕಾವ್ಯ ಶೈಲಿಯಲ್ಲಿ—ಕೆಲಮಟ್ಟಿಗೆ ಸೂತ್ರಗಳನ್ನು ಜೋಲುವ ಶೈಲಿಯಲ್ಲಿ—ಗ್ರಥಿತವಾಗಿವೆ. ಗಾತ್ರದಲ್ಲಿ ಸಣ್ಣದಾಗಿದ್ದು, ವಿಸ್ತೃತವಾದ ಶಾಸ್ತ್ರವನ್ನು ಒಳಗೊಂಡ ಬೇರೊಂದು ಉದಾಹರಣೆಯನ್ನೂ ಹೇಳಬೇಕಾದರೆ 'ಸಿದ್ಧಾಂತ ಕೌಮುದಿ' ಮತ್ತು ಪಾಣಿನಿಯ 'ಅಷ್ಟಾಧ್ಯಾಯಿ'. ಕೌಮುದಿಯು ಅಷ್ಟಾಧ್ಯಾಯಿಯ ಸೂತ್ರಗಳ ವಿವರಣೆಯೇ ಆಗಿದ್ದರೂ ಇದರ ಗಾತ್ರವು ಅಷ್ಟಾಧ್ಯಾಯಿಯ ಹತ್ತಿಪ್ಪತ್ತು ಪಟ್ಟಾಗುವುದು. ವಿವೇಕಚಿಂತಾಮಣಿಯಲ್ಲಿಯ ವಿಷಯಗಳ ಸಂಗ್ರಹವಾದರೂ ೧೫ನೆಯ ಶತಮಾನದ ಅಂತ್ಯಭಾಗದಲ್ಲಿ ಭರತಖಂಡದಲ್ಲಿ ಉಪಲಬ್ಧವಿದ್ದ ಪ್ರಾಚೀನ ಪರಂಪರೆಯಿಂದ ಬಂದ, ವೇದಾಗಮೋಪನಿಷತ್ತುಗಳ ವಿಜ್ಞಾನ-ತತ್ತ್ವಜ್ಞಾನಗಳ ಸಂಗ್ರಹದ ಸೀಮೆಗೆ ಮರ್ಯಾದಿತವಾಗಿದೆ. ವಿಶ್ವಕೋಶದ ಗಾತ್ರವು ಚಿಕ್ಕದಾಗಿರುವುದಕ್ಕೆ ಇದೂ ಒಂದು ಕಾರಣವಿರಬಹುದು. ಈಗ ನಾನೂರ ಐವತ್ತು ವರ್ಷಗಳ ಹಿಂದಿನ ತತ್ತ್ವಜ್ಞಾನ-ವಿಜ್ಞಾನದ ಸ್ಥಿತಿಯಿದು. ಭಿನ್ನ ಭಿನ್ನ ವೈದಿಕ ಮತಗಳನ್ನು ಸಮನ್ವಯ ದೃಷ್ಟಿಯಿಂದ ನೋಡಿ ಅಳವಡಿಸಿದ ಶಿವಾದ್ವೈತ ಸಿದ್ಧಾಂತವು ವಿವೇಕಚಿಂತಾಮಣಿಯಲ್ಲಿದೆ.

ಈ ಗ್ರಂಥದ ಹತ್ತು ಪ್ರಕರಣಗಳಲ್ಲಿ ಅತ್ಯಂತ ಮಹತ್ತ್ವದ ೧೧ನೆಯ ಪ್ರಕರಣದಲ್ಲಿಯ ತತ್ತ್ವಶಾಸ್ತ್ರದ ವಿಷಯಗಳ ಪಟ್ಟಿಯು ಹೀಗಿದೆ:

(೧) ಪ್ರಮಾಣ ಶಾಸ್ತ್ರಗಳು (೨) ವೇದವಾಕ್ಯಸ್ವರೂಪ (೩) ವೇದಾಂಗಗಳು (೪) ಉಪವೇದಗಳು (೫) ಉಪನಿಷತ್ತು (೬) ಸ್ಮೃತಿಗಳು (೭) ಬ್ರಾಹ್ಮಣನ ಕರ್ಮ (೮) ಕ್ಷತ್ರಿಯನ ಕರ್ಮ (೯) ವೈಶ್ಯಧರ್ಮ (೧೦) ಶೂದ್ರಧರ್ಮ (೧೧) ಹದಿನೆಂಟು ಪುರಾಣ (೧೨) ಉಪಪುರಾಣಗಳು (೧೩) ಇತಿಹಾಸ (೧೪) ಚಾರ್ವಾಕ ಶಾಸ್ತ್ರ (೧೫) ಬೌದ್ಧ (೧೬) ನಿನಾಥರಿಂ ಸಿದ್ಧರಿಂ ಕಲ್ಪಿತವಾದ ಶಾಸ್ತ್ರಾಂತರಗಳು (೧೭) ಶಾಕ್ತೇಯ ಪಾಂಚರಾತ್ರಗಳು (೧೮) ಪೂರ್ವಮೀಮಾಂಸೆ (೧೯) ವೈದಿಕ ನ್ಯಾಯಶಾಸ್ತ್ರ (೨೦) ವೈಶೇಷಿಕ ಶಾಸ್ತ್ರ (೨೧) ಸಾಂಖ್ಯಶಾಸ್ತ್ರ (೨೨) ಪಾತಂಜಲ ಯೋಗಶಾಸ್ತ್ರ (೨೩) ಉತ್ತರ ಮೀಮಾಂಸೆ (೨೪) ಅನುಬಂಧ ಚತುಷ್ಟಯ (೨೫) ಅಧಿಕಾರಿ ಲಕ್ಷಣ.—ಹೀಗೆ ಸರಾಸರಿ ನೂರು ಮಹತ್ತ್ವದ ವಿಷಯಗಳಿರುವುವು. ರೇಣುಕಾದ್ಯಾಚಾರ್ಯರ ಕಾಲದಿಂದ, ಮತ್ತು ಸೃಷ್ಟಿ ಪ್ರಾರಂಭದ ಕಾಲದಿಂದ ಅನೂಚಾನವಾಗಿ ಬಂದ ಸರ್ವಧರ್ಮಸಮನ್ವಯರೂಪವಾದ ವೀರಶೈವಧರ್ಮದ ಸಿದ್ಧಾಂತದ ಬಗೆಗೂ ಕೊನೆಯ ನಿರ್ಣಯವಿನ್ನೂ ಆಗಬೇಕಾಗಿದೆ. ಈ ಅನುಭಾವ ಧರ್ಮಕ್ಕೆ ಶಿವಯೋಗ ಶಿವಾಚಾರಗಳಿಗೆ—ಶುದ್ಧಾದ್ವೈತ, ವಿಶಿಷ್ಟಾದ್ವೈತ ಇವೆರಡರಲ್ಲಿ ಯಾವುದು ಹೆಚ್ಚು ಸಂಗತವಾಗಿದೆ ಎಂಬ ಸಿದ್ಧಾಂತವನ್ನು ಯೋಗ್ಯ ಅಧಿಕಾರಿಗಳೇ ಮಾಡಬೇಕು.

ಸಂಸ್ಕೃತಿಯ ಅಂಗಗಳಾದ ಜ್ಞಾನ-ವಿಜ್ಞಾನ-ತತ್ತ್ವಜ್ಞಾನಗಳಿಗೂ ಒಂದು ಇತಿಹಾಸವಿದೆ. ಅವು ಪ್ರಗತಿಪರವಾದುವೇ ಎಂದು ಇತಿಹಾಸತತ್ತ್ವವೇತ್ತರ ಅಭಿಪ್ರಾಯ. ಈ ಅಭಿಪ್ರಾಯವನ್ನು ಒಪ್ಪುವುದಾದರೆ ಸನಾತನಸತ್ಯವನ್ನು ಪ್ರತಿಪಾದಿಸುವ ಧರ್ಮ-ತತ್ತ್ವಜ್ಞಾನಗಳು ಕೂಡ ಕಾಲಕಾಲಕ್ಕನುಸರಿಸಿ ಮೂಲ ಸಿದ್ಧಾಂತಕ್ಕೆ ವಿರೋಧ ಬಾರದಂತೆ ಅನೇಕ ಹೊಸ ಹೊಸ ವ್ಯಾಖ್ಯಾನಗಳನ್ನು

ಒಳಗೊಳ್ಳುವುವು. ಎಲ್ಲ ಧರ್ಮಗಳ ಸಾರಭೂತವಾದ ತತ್ತ್ವಗಳು ಒಂದೇ ಎಂಬುದು, ನಮ್ಮ ಈ ಯುಗದ ಧ್ವನಿಯು. ವಿವೇಕ ಚಿಂತಾಮಣಿಯಿಂದ ನಾವು ಕಲಿಯಬೇಕಾದ ಪಾಠದಲ್ಲಿ ಮೂರು ಮುಖ್ಯ ಸಂಗತಿಗಳಿವೆ: ಒಂದನೆಯದಾಗಿ ಧರ್ಮಾಚರಣೆಗೆ ತತ್ತ್ವಶಾಸ್ತ್ರದ ಹಿನ್ನೆಲೆಯಿರಬೇಕು. ಎರಡನೆಯದಾಗಿ ವಿವಿಧತತ್ತ್ವಜ್ಞಾನಗಳ ತುಲನಾತ್ಮಕ ಅಭ್ಯಾಸವು ವಿಶ್ವವಿದ್ಯಾಲಯಗಳಲ್ಲಿ ನಡೆಯಬೇಕು. ಮೂರನೆಯದಾಗಿ ಧರ್ಮಾಚರಣೆಯಲ್ಲಿ ಪ್ರಾಚೀನ ಪರಂಪರೆಯಲ್ಲಿ ಕಂಡುಬರುವ ಗುಣಾಂಶಗಳನ್ನು ಸ್ವೀಕರಿಸಿ ಆತ್ಮಸಾತ್ ಮಾಡಿಕೊಳ್ಳುವ ಪ್ರಗತಿಪರತೆಯು ಕಂಡುಬರಬೇಕು.

ತತ್ತ್ವಬೋಧವು ಭಾರತದ ಜನಜೀವನದಲ್ಲಿ ಹಾಸುಹೊಕ್ಕಾಗಿ ಸಮಾಜವು ಉನ್ನತಮಟ್ಟಕ್ಕೆ ಮುಟ್ಟಬೇಕಾದರೆ, ಈ ಮೂರು ಮಾತುಗಳು ಅವಶ್ಯವಾಗಿವೆ ೧) ವಿಜ್ಞಾನದಂತೆ ಅದರ ವಿಮರ್ಶೆಯು ಕಾಲ ಕಾಲಕ್ಕೆ ನಡೆಯುತ್ತಿರಬೇಕು. ವಿಜ್ಞಾನವಿಷಯವು ಪ್ರಪಂಚದ ವಿಶ್ವವಿದ್ಯಾಲಯಗಳಲ್ಲಿ ಒಂದು ಮಹತ್ತ್ವದ ವಿಷಯವಾಗಿರುವಂತೆ ತತ್ತ್ವಜ್ಞಾನವೂ ಅಭ್ಯಾಸದ ಒಂದು ಮಹತ್ತ್ವದವಿಷಯವಾಗಿರುವುದು ಸೂಕ್ತವೇ ೨) ಪ್ರಪಂಚದ ಸೃಷ್ಟಿಕರ್ತನೂ ಸ್ವಾಮಿಯೂ ನಿಯಾಮಕನೂ ಒಬ್ಬನಿರುವನೆಂದೂ ಪ್ರಪಂಚದ ಎಲ್ಲ ಮಾನವರು ಅತನ ಶಾಸನಕ್ಕೆ ಒಳಗಾದ ಪ್ರಜರಾದುದರಿಂದ ಅವರೆಲ್ಲರೂ ಪರಸ್ಪರ ಪ್ರೀತಿವಿಶ್ವಾಸದಿಂದ ನಡೆದು ಬಾಳುವುದರಲ್ಲಿಯೆ ಬಾಳಿನ ಸಾರ್ಥಕವಿದೆ; ಹೀಗೆಂದು ತಿಳಿಸಿಹೇಳಿ ಸಮಾಜವನ್ನು ಎತ್ತಿಹಿಡಿದು ಅದನ್ನು ಮೇಲ್ಮಟ್ಟಕ್ಕೆ ಮುಟ್ಟಿಸುವುದೇ ಧರ್ಮವು. ತತ್ತ್ವಜ್ಞಾನಕ್ಕೂ ಇದೇ ಪ್ರಯೋಜನ, ಯಾಕೆಂದರೆ ಭರತಖಂಡದಲ್ಲಿ ಧರ್ಮ ಮತ್ತು ತತ್ತ್ವಜ್ಞಾನಗಳು ಶಿವ-ಶಕ್ತಿಯರಂತೆ ಅವಿನಾಭಾವಬದ್ಧವಾಗಿವೆ. ೩) ಮೂರನೆಯದಾಗಿ ಯಾವುದೊಂದು ಧರ್ಮವು ತನ್ನ ದಿವ್ಯ ಉಪದೇಶದಿಂದ ಬಹುಜನರ ಮನಸ್ಸನ್ನು ತನ್ನೆಡೆಗೆ ಸೆಳೆಯುವಂತಾಗಬೇಕಾದರೆ, ಅದು ತನ್ನಲ್ಲಿಲ್ಲದ, ಅನ್ಯದೇಶ-ಕಾಲಗಳಲ್ಲಿ ಅನ್ಯಸಮಾಜದಲ್ಲಿ ಕಂಡುಬರುವ, ಒಳ್ಳೆಯ ಗುಣಾಂಶಗಳನ್ನು, ತನ್ನಲ್ಲಿ ಸೇರಿಸಿಕೊಂಡು ತಿರಗಿಸಿಬಿಡಬೇಕು. ಇದು ವೇದಾಗಮೋಪನಿಷತ್ ಪರಂಪರೆಯುಳ್ಳ ಭರತಖಂಡದ ಧರ್ಮಗಳ ಹಾಗೂ ಸಂಸ್ಕೃತಿಯ ವೈಶಿಷ್ಟ್ಯವಾಗಿದೆ. ಕೊನೆಯದಾಗಿ ಕೈವಲ್ಯ ಪದ್ಧತಿಯ ಶಿವಕಾರುಣ್ಯಸ್ಥಲದಲ್ಲಿಯ ಒಂದು ಹಾಡಿನಲ್ಲಿ ಶಿವನ ನೂರೆಂಟು ನಾಮಗಳು, ಇನ್ನೊಂದರಲ್ಲಿ ಪಾರ್ವತಿಯ ೧೦೮ ನಾಮಗಳು ಸುಂದರವಾಗಿ ಗ್ರಥಿತವಾಗಿವೆ. ಧನ್ಯಾಸಿಂಗದಲ್ಲಿದ್ದ ಈ ಗೀತಗಳು ಹೀಗಿವೆ:—

" ಹರನಾಮವನ್ನು ಬಿಡದೆ ಜಪಿಸಬಲ್ಲವರ್ಗೆ ಭವ । ಮರಣ ಮಾಯಾ । ಕರ್ಮಮಲ-ಪಾಶ-ಬಂಧ ಬಹು ದುರಿತ ಸಂಸಾರ ಸಂತಾಪ ಸಂಶಯವಳಿದು ವರಭೋಗ ಮೋಕ್ಷವಹುದು ॥ ಶಿವ ಮಹಾದೇವ ಶಂಕರ ಶರ್ವ ಪಾರ್ವತೀಧರ ನಂದಿವಾಹನ ....."

ಪರಮೇಶ್ವರಿಯ ಪುಣ್ಯನಾಮವನು ಪಗಲಿರುಳು ಸರಸಾನುರಾಗದಿಂದೋದಿ ಕೇಳಿದವರ್ಗೆ । ದುರಿತಕಂಟಕವಳಿದು ಕೆಲ ಸಾರುತಿಹವಮಳ । ತರಭೋಗ ಮೋಕ್ಷಂಗಳು ॥ ಪಲ್ಲ ॥ ಹ್ರೀಂಕಾರಿ ವಾಣಿ ಕಲ್ಯಾಣಿ ರುದ್ರಾಣಿ ರಮೆ । ಓಂಕಾರ ರೂಪಿಣಿ ಗಣಾನಿ ಗಾನ ಪ್ರೀತೆ—

ನಿನ್ನ ಮೂರು ದಿವ್ಯದೃಷ್ಟಿಯಿಂದ ನನ್ನನ್ನು ನೋಡಿ ಉದ್ಧರಿಸಲಾಗದೇ ದೇವ—ನಿನ್ನ ವಹ್ನಿನೇತ್ರದಿಂದ ನನ್ನ ಮೋಹಜಾಲದ ಅಡವಿಯನ್ನು ಸುಟ್ಟು ಬೂದಿಮಾಡಿ, ನಿನ್ನ ಭಾನುನೆಯನದಿಂದ ನನ್ನ ಹೃದಯವರಳುವಂತೆ ಮಾಡಿ, ನಿನ್ನ ಸುಧಾಕರಾಕ್ಷಿಯಿಂದ ನನ್ನ ಅಂತಃಕರಣದಲ್ಲಿ ಆನಂದದ ಅಮೃತವನ್ನು ಸೂಸಿ ನೋಡಲಾಗದೆ ಮಹಾದೇವ ?—ಎಂದು ಭಕ್ತನು ಅಂಗಲಾಚಿ ಬೇಡಿಕೊಳ್ಳುವ ಭಂಗಿಯು ಹೀಗಿದೆ:—

ಮಿಸುಕಲೀಯದೆನ್ನ ಮೋಹವಿಸರನೆಂಬ ವನವನುರುಹಿ, ಭಸಿತವೆನಿಸಿ ರುದ್ರ ನಿನ್ನ । ನೊಸಲವಹ್ನಿನೇತ್ರದಿಂದ । ನೋಡಲಾಗದೇ ?

ಕಲುಷತಿಮಿರ ಮುಸುಕಿ ಮುಗಿದು । ನಲಿಯದೆನ್ನ ಹೃದಯನಳಿನ । ವಲರೆ ದಿವ್ಯರೂಪ ನಿನ್ನ । ಬಲದ ಭಾನುನಯನದಿಂದ ನೋಡಲಾಗದೇ ?

ಕರಣಕುಲ ಚಕೋರ ಶಶಿಯೆ । ಹರುಷಶರಧಿ ಮಿಂರಲೆನ್ನ । ವರದ ಶಂಭುಲಿಂಗ ನಿನ್ನ । ವರಸುಧಾಕರಾಕ್ಷಿಯಿಂದ । ನೋಡಲಾಗದೇ ?

ವಿದ್ವನ್ಮಣಿಗಳಾದ ಶ್ರೀ. ನಂದೀವರರು ಹೇಳುವಂತೆ ಒಟ್ಟಾರೆ ಶಿವಯೋಗಿ ನಿಜಗುಣರ ವ್ಯಕ್ತಿತ್ವವು ಒಂದು ಪ್ರಭಾವಪೂರ್ಣವುಳ್ಳದ್ದಾಗಿದೆ. ಅವರ ಷಟ್‌ಶಾಸ್ತ್ರವು ಕನ್ನಡನಾಡಿನ ಐಶ್ವರ್ಯಗಳಲ್ಲಿ ಒಂದಾಗಿದೆ. ಸಾಹಿತ್ಯ, ನೀತಿ, ಧರ್ಮ, ಯೋಗ, ಭಕ್ತಿ, ಜ್ಞಾನ, ವೈರಾಗ್ಯ, ಪಾಂಡಿತ್ಯ—ಯಾವುದೇ ದೃಷ್ಟಿಯಿಂದ ಷಟ್‌ಶಾಸ್ತ್ರವನ್ನು ನೋಡಿದರೂ, ಉಚ್ಚಮಟ್ಟದ್ದೆಂದು ಎಲ್ಲರಿಗೂ ಮನವರಿಕೆಯಾಗುತ್ತದೆ. ಅವರ ಲೋಕಾನುಭವವಂತೂ ಪರಮ ವಿಸ್ಮಯಕರವಾಗಿದೆ. ಕನ್ನಡ ವೇದಾಂತದ ಖಜಾನೆಯನ್ನು ನಿಜಗುಣರ ಷಟ್‌ಶಾಸ್ತ್ರವು ಪೂರ್ಣಪೂರ್ತಿಗೊಳಿಸಿದೆ. ಶ್ರೀ ನಿಜಗುಣ ಶಿವಯೋಗಿಗಳಿಗೆ ಜನ್ಮಕೊಟ್ಟ ಕನ್ನಡ ತಾಯಿ ಧನ್ಯಳು.

ಜಾಗರಗೀತ

ಲೇ. ರಾಮಚಂದ್ರ ಕೊಟ್ಟಲಗಿ, ವಿಜಾಪುರ

ಏಳು ತಾಯ್ ಕನ್ನಡಿತಿ
ಏಳು ಕನ್ನಡರೊಡತಿ
ಏಳವ್ವ ಏಳೀಗ ಬೆಳಗಾಯಿತು;
ಹೊರಪಾಗಿ ಹೊಂಬೆಳಕು
ಉಷೆ ತಂದ ತಂಬೆಳಕು
ಬಾನ್‌ಚಿಮ್ಮಿ ಹೊರಗೆಲ್ಲ ಹೊಳಪಾಯಿತು. ೧

ಪುಲಕೇಶಿ ನೃಪತುಂಗ
ರಟ್ಟ–ಹೊಯ್ಸಳ–ಗಂಗ
ರಾಜಾಧಿರಾಜರಿದೊ ಸೇವೆಗೆಂದು—
ಹೊಂಗಲಶ ತಂದಿಹರು
ಕಾಲ್ತೊಳೆಯಲೆಂದಿಹರು
ಕಾವೇರಿ–ಕೃಷ್ಣೆಯರ ನೀರ ತಂದು. ೨

ನಿನ್ನ ಜಾಗರ ಕಂಡು
ಹಂಪೆಯರಸರು ಬಂದು
ಚವರಿ–ಚಾಮರ ಹಿಡಿದು ಬೀಸಲೆಂದು—
ಕೈಲಾಸ ತೊರೆದಿಹರು
ಅಕ್ಕ ಮಹದೇವಿಯರು
ನಿನ್ನ ದಾರಿಗೆ ಹಡದಿ ಹಾಸಲೆಂದು. ೩

ತ್ರೈಕೂಟೇಶದಾಚಾರ್ಯ
ಬಸವ ಅಲ್ಲಮ ಆರ್ಯ
ಪುಣ್ಯಾಜಲ ತಂದರಭಿಷೇಕಕೆಂದು —
ಕಂತಿ ಹೊನ್ನಿಯರಿಂದು
ಆರದಾರತಿ ತಂದು
ಬೆಳಗುವರು ಅಭಿಷಿಕ್ತೆಯಾಗೆಯೆಂದು. ೪

ಪಂಪ–ಕುವರವ್ಯಾಸ–
ಹರಿಹರನು ಲಕ್ಷ್ಮೀಶ
ಜಯನಾದ ಮಾಡುವರು ಗೆದ್ದೆಯೆಂದು
ಸಂತ ಪುರಂದರ ಕನಕ
ಉಡುಪಿಯೊಡೆಯನ ತನಕ
ಸಾರುವರು ಕನ್ನಡಿತಿ ಎದ್ದಳೆಂದು. ೫

ಹತ್ತು ಜನರಿಗೆ ಬಾಯಿ.
ತೆರೆದು ತಿರುಗಿದೆ ತಾಯಿ
ನಿನಗಿಲ್ಲದಾಗಿತ್ತು ಯಾರ ನೆರೆಯು;
ನಿನ್ನ ಭೂಪಟ ರಾಗ
ಬಣ್ಣ ಬದಲಿಸಿತೀಗ
ಅಳಿಸಿ ಮುಖಮಂಡಲದ ಗೀಚುಗೆರೆಯು. ೬

ಧಾರ್ವಾಡ ಕಾರ್ವಾರ
ಮೈಸೂರು ವಿಜಯಪುರ
ಕನ್ನಡದ ಕುಲ ಕಲಿತ ನಿಲುವ ನೋಡು !
ಒಂದೆ ಮನೆಯವರಾಗಿ
ಒಂದೆ ಮನದವರಾಗಿ
ಬೆರೆತ ಸೋದರಭಾವ ಸಿರಿಯ ನೋಡು. ೭

ಪಂಚನದಿಗಳ ನೀರು
ಭಟ್ಟಕಳದ ಮುನ್ನೀರು
ಪಾದ ತೊಳೆಯಲು ತಂದ ನಿನ್ನಡಿಗರು.
ಒಂದಾಗಿ ಬಂದಿಹರು
ತಲೆವಾಗಿ ನಿಂದಿಹರು
ಬೆಳುವಲದ, ಮಲೆನಾಡ ಕನ್ನಡಿಗರು. ೮

ವಂಗ–ಗುರ್ಜರ ಬಂಧು
ಕೇರಳಾಂಧ್ರರು ಬಂದು
ಉಡುಗೊರೆಯ ತಂದಿಹರು ಚಂದ್ರಮುಖಿಗೆ
ವೈದರ್ಭ, ಮಹಾರಾಷ್ಟ್ರ,
ಪಂಜಾಬ, ಸೌರಾಷ್ಟ್ರ
ಶುಭ ಕೋರಬಂದಿಹರು ಭಾಗ್ಯಸಖಿಗೆ. ೯

ತಾಯಿ ಭಾರತಿ ಬಂದು
ನಿನ್ನ ಮಂಗಲಕೆಂದು
ಜಯಮಾಲೆ ಮುಡಿಸುವಳು ನಿನ್ನ ಮುಡಿಗೆ.
ಏಳು ತಾಯ್ ಕನ್ನಡಿತಿ
ನೋಡು ಕನ್ನಡರೊಡತಿ
ಹೊಂಗಳಸವೇರುತಿದೆ ನಿನ್ನ ಗುಡಿಗೆ. ೧೦

ಸಂಶಯ ಪಿಶಾಚಿ

(ಏನೋದ ದೃಶ್ಯ)

ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

卐

[ರಾಯರು ಜಿಪುಣತನದಿಂದ ಹೇರಳವಾಗಿ ಹಣ ಸಂಪಾದಿಸಿದ್ದಾರೆ. ಮನೆಯಲ್ಲಿ ರಾಯರು, ಆಶ್ರಿತನಾದ ಶೀನಪ್ಪ, ಅವನ ಹೆಂಡತಿ ಪುಟ್ಟಸ್ವ- ಇವರ ಹೊರತು ಯಾರೂ ಇಲ್ಲ. ರಾಯರ ಸಂಶಯದ ಸ್ವಭಾವಕ್ಕೆ ಇಬ್ಬರೂ ಬೇಸತ್ತಿದ್ದಾರೆ. ರಾತ್ರಿ ೯ ಗಂಟೆಯ ಸುಮಾರು, ರಾಯರು ಸಂಧ್ಯಾವಂದನೆಗೆ ಕುಳಿತಿದ್ದಾರೆ. ಪುಟ್ಟಸ್ವ ಅಡಿಗೆ ಮಾಡುತ್ತಿದ್ದಾಳೆ. ಶೀನಪ್ಪ ಎಲೆ ಹಚ್ಚುತ್ತಿದ್ದಾನೆ.]

ರಾಯರು :— ಕೇಶವಾಯನಮಃ. ನಾರಾಯಣಾಯನಮಃ. ಶೀನಪ್ಪಾ, ನಾ ಸಂಧ್ಯಾವಂದನಿಗೆ ಬರೋಮುಂದ, ಮುಂಚೇಬಾಗಿಲಾ ಹಾಕಿ ಬಂದ್ನೇನು ?

ಶೀನಪ್ಪ :— ಹಾಕಿ ಬಂದ್ರೆಲ್ಲ ರಾಯರ, ನಾನು ಜೋಡಿಗೇ ಇದ್ದೆ. ಎರಡೆರಡು ಸಾರಿ ಚಲಕಾ ಬೋ[illegible] ಹಾಕಿದ್ದು, ನೋಡಿಬಂದೆ.

ರಾಯರು :— ಈಗಿನ ಜೊಲ್ಲು,....ಈಗಿನ ಚಲಕಾ !... ಹೊರಗಿಂದ ಎರಡುಸಾರಿ ಬಾಗಿಲಾ ನೂಕಿಸಿದರ ಸಾಕು; ಜರಿದು ಬೀಳ್ತಾವ !

ಶೀನಪ್ಪ :— ನಮ್ಮ ಮನ್ಯಾದು ಹಾಂಗಿಲ್ಲೇರ್ರಿ. ಒಳಗಿನವರಿಗೇ ಲಗೂ ತಗೀಲಿಕ್ಕೆ ಬರೋದಿಲ್ಲ....ಒಮ್ಮೊಮ್ಮೆ !

ರಾಯರು :— ಆದೇನೇ ಇರಲಿ, ಇನ್ನೊಮ್ಮೆ ನೋಡೇ ಬಾ.

ಶೀನಪ್ಪ :— ಹೂಸ್ರಿ.

ರಾಯರು:— ಇಲ್ಲದಿದ್ದರ ಹೀಂಗ ಮಾಡು—ಆ ಮಾಡಿನೊಳಗ ಕೀಲಿ ಅದ; ಒಯ್ದು ಹಾಕೇ ಬಾ. ಆ ಏಳು ಲಿವ್ವರಿನ ಕೀಲೀ ತೊಗೊ ! ಒಜ್ಜಾ ಅದ ನೋಡು.... ಬುಳದವು ಒತ್ತುಕೀಲಿ, ಬತ್ತಾಕೀಲಿ ಅವ; ...ಅವು—ಬ್ಯಾಡ !

ಶೀನಪ್ಪ :— ಯಾವದು ? ಮೊನ್ನೆ ತಂದದ್ದೇನ್ರಿ ಆ ಲಿವ್ವರಿಂದು ?

ರಾಯರು :— ಹಾಂ, ಹಾಂ ! ಹೌದು, ೩೮ ರೂಪಾಯಿ ಬಡದೀನಿ ಅದಕ್ಕ. ಆ ಕೀಲಿಗೆ ಎರಡು ಕೈ ಅವ : ಹಾಕೋದೊಂದು ಬ್ಯಾರಿ, ತೆಗಿಯೋದೊಂದು ಬ್ಯಾರಿ. ಹಾಕೋದನ್ನ ಮೂರು ಸಾರಿ ಎಡಗಡೆಗೆ ತಿರುವಿದರ ಕೀಲೀ ಬೀಳ್ತಕದ.

ಶೀನಪ್ಪ :— ಮತ್ತ ತಗೀಬೇಕಾದರರಿ ?

ರಾಯರು :— ಅದೊಂದು ಕೈ ಬ್ಯಾರಿ ಅದ. ಅದನ್ನ ಏಳು ಸಾರಿ ಬಲಗಡೆಗೆ ತಿರುವಬೇಕು..... ಈಗ ಹಾಕೋ ಕೀಲೀ ಕೈ ಜನಿವಾರದಾಗ ಅದ; ಅದನ್ನೊಂದ ಕೊಡ್ತೀನಿ.

ಶೀನಪ್ಪ :— ಆಗಲಿ ಕೊಡ್ರಿ ಹಂಗಾರ

(ಜನಿವಾರದಲ್ಲಿಯ ಪತ್ತಿಪ್ಪತ್ತು ಕೀ ಕೈಗಳ ಸಪ್ಪಳ.)

ರಾಯರು :— ಇದು ಹಾಕೋ ಕೈ....ಇದು ಇನ್ನೊಂದು ತಗಿಯೋ ಕೈ, ಹಾಕೋ ಕೈ ಮ್ಯಾಲ "L" ಅಂತ ಅಕ್ಷರ ಅದ.... ನೋಡಿದೇನು ?

ಶೀನಪ್ಪ :— ಹುಂ ಹು !....ಹೌದಲಾ ! "L" ಅಂದರೇನ್ರಿ ರಾಯರ ?

ರಾಯರು :— "L" ಅಂದರ 'ಲಾಕ್ ಮಾಡು' ಅಂತ; ಇನ್ನೊಂದು ಕೈಮ್ಯಾಲ "O" ಅಂತ ಅಕ್ಷರ ಅದ. "O" ಅಂದರ ಓಪನ್ ಮಾಡು—ಅಂತ. ಈ "L" ಕೀಲಿಕೈ ಒಯ್ಯಿ ಈಗ.

ಶೀನಪ್ಪ :— ಹಾಕಿ, ಮೂರೂ ಸಾರಿ ತಿರುವಬೇಕರೀ ಎಡಗಡೆಗೆ?

ರಾಯರು :— ಹುಂ, ಮೂರು ಸಾರಿ, ಒಂದು—ಎರಡು—ಮೂರು. ನೆನಪಿನೊಳಗಿಟ್ಟುಗೊ,....ಮರಗೂಳಿ ನೀನು ! ಮತ್ತ ಕೀಲೀ ಹಾಕೋಮುಂದ ಒದರಿ ಅನ್ನು ನನಗ ಕೇಳಿಸೋ ಹಾಂಗ—ಒಂದು—ಎರಡು—ಮೂರು—ಅಂತ.

ಶೀನಪ್ಪ :— ಒದರ್ತೀನಿ ಬಿಡ್ರಿ. ನಿಮಗ ಕೇಳಿಸೋ ಹಾಂಗ ಒದರ್ತೀನಿ.

ರಾಯರು :— ಇನ್ನೊಂದು—ಹೇಳ್ಲಿಕ್ಕೆ ಮರೀತೆ: ಕೀಲೀ ಹಾಕಿದ ಮ್ಯಾಲೆ, ಅದಕ್ಕ ಒಂದೆರಡು ಸಾರಿ ಜೋತುಬೀಳು. ಹೊಸಾ ಕೀಲಿ ಏನಪಾ. ಲಿವ್ವರ್ ಭಡಕ್ಕನ ಮುಂದೆ ಸರಿಯೋದಿಲ್ಲ.

ಶೀನಪ್ಪ :— ಕೀಲಿ ಹಳೇದಾದರ ಲಿವರ್ ವರ್ಕ್ ಮಾಡೊದಿಲ್ಲ ಅಂತಾರ. ಮನುಷ್ಯನ ಲಿವರಿನದೂ ಹಾಂಗs ಅಲ್ಲೇನ್ರಿ ಮತ್ತ ?

ರಾಯರು :— ನೀನು ನನಗ ಶಹಣೀತನಾ ಕಲಿಸಬ್ಯಾಡ; ಹೇಳಿದಷ್ಟು ಮಾಡು.... ...

ಶೀನಪ್ಪ :— ಹೂಸ್ರಿ.

ರಾಯರು :— ಊರೊಳಗ ಕಳ್ಳರ ಹಾವಳಿ ಬಹಳಾಗೇದೇನಪಾ ! ನಮ್ಮ ಸಂರಕ್ಷಣೀ ನಾವೆ ಮಾಡಿಕೋ ಬೇಕು !

ಶೀನಪ್ಪ :— ಮತ್ತ ಯಾರು ಬರಬೇಕರಿ ನಮ್ಮ ಸಹಾಯಕ್ಕ?

ರಾಯರು :— ಸಹಾಯಕ್ಕ ಬರದಿದ್ದರ ಬಿಡಲಿ. ನಮ್ಮ ಗೊಡವಿಗೆ ಬರದಿದ್ದರ ಸಾಕು. ಈ ಕಾಲದೊಳಗ ನಮ್ಮ—ನಮ್ಮವರು

ಅಂಬೋವರು ಕಳವು ಮಾಡ್ತಾರ. ಮೊನ್ನೆ ಆ ಮಹಾಜನರ ಮನ್ಯಾಗ ಕಳವಾಯ್ತಲ್ಲ....ಯಾರಂದಿ ಕಳವು ಮಾಡಿದವರು ?

ಶೀನಪ್ಪ :—ಹೌದರಿ, ಕೇಳಿದೆ. ಮನಿಯೊಳಗಿನವರು ಅಂತರಿ ಮಾಡಿದ್ದು.

ರಾಯರು :— ಯಾರ್ನೂ ನಂಬೋ ಹಾಂಗಿಲ್ಲ; ಹೋಗು ಮೊದಲ ಕೇಲೀ ಹಾಕ ಬಾ! ಒಂದು, ಎರಡು, ಮೂರು ಅಂದು, ಎರಡುಸಾರೆ ಜಗ್ಗಿ ಜೋತು ಬೀಳೋದು; ತಿಳೀತೇನು ?

ಶೀನಪ್ಪ :— ಜೋತು ಬೀಳ್ಕಕ್ಕೆ ಬಿಲಕ ಎತ್ತರಿಲ್ರಿ, ಅದು ತ್ರಾಸ!

ರಾಯರು:— ಇದ್ದದ್ದರಾಗ ಬೀಳು ಹೋಗೋ! ಏನಾರೇ ಅಡಚಣಿ ತಗೀಬ್ಯಾಡ!

ಶೀನಪ್ಪ :— ಹೂನ್ರಿ— (ಹೋಗುವನು.)

ರಾಯರು:— ಪುಟ್ಟವ್ವಾ, ನನ್ನ ಸಂಧ್ಯಾವಂದನಿ ಎಲ್ಲಿಗೆ ಬಂದಿತ್ತು ?

ಪುಟ್ಟವ್ವ :— ಎಲ್ಲಿಗೆ ಬಂದಿತ್ತು ಅನ್ನಲಿಕ್ಕೆ ನಡದಿತ್ತೆಲ್ಲ ? ಎರಡುಸಾರೆ ದೇವರ ಹೆಸರು ತೊಗೊಂಡಿರಿ.....ಅಲ್ಲಿಗೇ ನಿಂತದ್ದು ನಿಂತು ಹೋಗೇದ!

ರಾಯರು :— ಅಂದರ 'ನಾರಾಯಣಾಯನಮಃ' ಅಂದ್ನೇನು ಹಂಗಾರ ?

ಪುಟ್ಟವ್ವ :....ಅಂದ್ರೆಲ್ಲ! ಮುಂದಿನದು ನಾ ಅಂತೂ ಕೇಳ್ಲಿಲ್ಲ.

ರಾಯರು:— ಅಂದ್ಹಾಂಗಿಲ್ಲಾ; ಮೊದಲಿನಿಂದನೂ ಸುರು ಮಾಡ್ತೀನಿ! ಎರಡು ಆಚಮನ ಹೆಚ್ಚು ತೊಗೊಂಡರ ತಪ್ಪೇನು ? ಕೇಶವಾಯನಮಃ, ನಾರಾಯಣಾಯನಮಃ, ಮಾಧವಾಯನಮಃ, ಗೋವಿಂದಾ ...

(ಒಗ್ಗರಣೆಯ ಚೊರ್ರೆಂಬ ಸಪ್ಪಳ ಎರಡು ಸಲ ಕೇಳಿಸುವುದು.)

ರಾಯರು:— ಪುಟ್ಟವ್ವಾ, ಸಾರಿಗೆ ಎರಡು ಸಾರಿ ಒಗ್ಗರಣೀ ಹಾಟ್ರೇನು ? ಎಣ್ಣಿ ತುಟ್ಟಿ ಆಗೇದ....ಗೊತ್ತದಽನೋ ಇಲ್ಲೋ ?

ಪುಟ್ಟವ್ವ: — ಗೊತ್ತಿರದೇ ಏನು ? ಒಗ್ಗರಣೀ ಎರಡು ಸಾರಿ ಕೊಡಲಿಲ್ಲ. ಕಾಯ್ದು ಸೌಟನ್ನ ಎರಡನೇ ಸಾರಿ ಕಲಗಚ್ಚಿನೊಳಗ ಎದ್ದಿದೆ. ಅದಕ್ಕ ಹಾಂಗ 'ಜೋರ' ಅಂತ ಸಪ್ಪಳಾತ್ಯು. ಎರಡು ಸಾರಿ ಒಗ್ಗರಣೀ ಕೊಡಲಿಕ್ಕೆ ನಾಯೇನು ಇವತ್ತಽ ಅಡಿಗ್ಗೆ ಕೂತೀನೆ ?

ರಾಯರು :— ಇಲ್ಲ, ಮರತಿರೇನೋ ಅಂದೆ.....

(ದೂರದಲ್ಲಿ ಶೀನಪ್ಪ ' ಒಂದು-ಎರಡು-ಮೂರು' ಎಂದು ಕೂಗಿದ ಮತ್ತು, ಕೇಲಿಯ ಖಡಖಡ ಸಪ್ಪಳ, ' ಊಂಽಽ ' ಎಂದು ಜೋತು ಬೀಳುವಾಗ ಹೊಮ್ಮಿದ ಶಬ್ದ. ಮತ್ತೆ ಖಡಖಡ, ಮತ್ತೆ ತಿಣುಕುವ ದನಿ.)

ರಾಯರು:—(ಗಟ್ಟಿಯಾಗಿ) ಶೀನಪ್ಪಾ, ಹಾಂಗ ಬಿಲಕಕ್ಕೆ ಖಡಖಡ ಅಂತ ಕೇಲೀ ಬಡೀ ಬ್ಯಾಡ....ಕಚ್ಚು ಬಿದ್ದಾವು.

ಶೀನಪ್ಪ :—(ಅಲ್ಲಿಂದಲೆ) ಇಲ್ಲ ರಾಯರ, (ಹತ್ತಿರ ಬಂದು) ಘಟ್ಟಿ ಕೂತಽದೋ ಇಲ್ಲೋ ನೋಡಿದೆ. ರಾಯರ, (ಗಾಬರಿಗೊಂಡವನಂತೆ) ನಾನು ಕೇಲೀ ಹಾಕೋಮುಂದ, ನಾಲ್ಕಾರು ಮಂದಿ ಓಡಿ ಹೋದ್ರಾಂಗ ಆತ್ಯು; ನಮ್ಮ ಮನ್ಯೀ ಕಟ್ಟಿಮ್ಯಾಲಽ ಕೂತಿದ್ದರೂ ಅಂತ ಕಾಣಸ್ತ್ಯದ.

ರಾಯರು :— (ಆಂಜಿದವರಂತೆ) ಏನು ?.....ಗೋವಿಂದಾ ಯನ್ನಮಃ.....ನಮ್ಮ ಮನ್ಯೀ ಕಟ್ಟೀಮ್ಯಾಲಽ? ... ...ಪದ್ಮನಾಭಾಯನಮಃ—ಎಲ್ಲಾ ಖಿಡಕೀ ಮುಚ್ಚೀದೀ ಇಲ್ಲೋ—

ಶೀನಪ್ಪ:— ಅವನ್ನ ಸಂಜೀ ಮುಂದಽ ಮುಚ್ಚೀನಿ, ರಾಯರ!

ರಾಯರು :— ಇನ್ನೊಮ್ಮೆ ನೋಡಿ ಬಾ, ನೋಡೇ ಬಂದು ಬಿಡು. ಮುಂಚೇ ಬಾಗಲಿಗೆ ಹೊರಗಿನಿಂದನೂ ಒಂದು ಕೇಲಿ ಹಾಕಿ ಬಿಡು ಅಂತೀನಿ.

ಶೀನಪ್ಪ :— ಹಾಂಗ ಹಾಕಿದರ. ಮನಿಯೊಳಗ ಯಾರೂ ಇಲ್ಲಾ ಅಂತ ತಿಳದು, ಕೇಲೀ ಮುರೀಲಿಕ್ಕೆ ಕಳ್ಳರಿಗೆ ಉತ್ತೇಜನ ಸಿಕ್ಕಾಂಗ ಆದೀತು, ನೋಡ್ರಿ ಮತ್ತ !

ರಾಯರು :—ಕೇಲೀ ಮುರಿದರ ಒಳಗ ನಾವಿದ್ದೇ ಇರ್ತೀನಲ್ಲ. ಒಳಗಂತೂ ಕೇಲಿ ಹಾಕಿದ್ದೇ ಇಽದ!

ಶೀನಪ್ಪ– ಅಲ್ಲ ರಾಯರ, ಹೊರಗ ಕೇಲಿ ಹಾಕೋದ್ಹ್ಯಾಂಗ? ಯಾರು ಹಾಕೋವರು ?

ರಾಯರು :— ನೀನಽ ಹಾಕಬೇಕು. ಇನ್ಯಾರಿದ್ದಾರ ?

ಶೀನಪ್ಪ :— ನಾ ಹೊರಗ ಹೋಗಿ ಕೇಲೀ ಹಾಕಿದ ಮ್ಯಾಲ, ತಿರಿಗಿ ಒಳಗ ನಾ ಬರೋದ್ಹ್ಯಾಂಗ !

ರಾಯರು :— ಹೌದಲ್ಲ ? ಈ ಮನ್ಯೀಗೆ ಹಿಂಬೀಬಾಗಿಲು ಬ್ಯಾರೆ ಇಲ್ಲ. ಅದನ್ನ ಮೊನ್ನೇ ಮುಚ್ಚಿಸಿ ಬಿಟ್ಟೆ; ಈಗಿದ್ದರ, ಛಲೋ ಇತ್ತು—ಅಂತ ಅನಸ್ತ್ಯದ. ಅಲ್ಲಾ, ಒಂಬತ್ತು ಹೊಡಿದಿಲ್ಲಾ, ಈಗಽ ಕಳ್ಳರು ಓಡ್ಯಾಡ್ತಾರ ಅಂದರ .. ಊರಾಗ ಮನ್ಯೀ ಮಾಡಿಕೊಂಡು ಇರಬೇಕೋ, ಏನು ದೇಶಾಂತರ ಹೋಗಬೇಕೋ.....ತಿಳೀದ್ಹಾಂಗ ಆಗೇದ,

ಶೀನಪ್ಪ:— ರಾಯರ, ಅದೇನು ಕಳ್ಳರ ಸುಳದಾಟ ಅಲ್ಲ ಬಿಡ್ರಿ.

ರಾಯರು:— ಮತ್ತ ? .... ದಾಮೋದರಾಯನಮಃ..... ಮತ್ತೇನಂದಿ ?

ಶೀನಪ್ಪ: — (ಹೆದರಿಕೆಯ ಸಣ್ಣ ಧ್ವನಿಯಲ್ಲಿ) ಇತ್ತೀಚೆಗೆ ನಾಲ್ಕು ದಿವಸದಿಂದ ನನಗ ಬ್ಯಾರೇನಽ ಅನುಭವ ಬರಲಿಕ್ಕೆ ಹತ್ತ್ಯಾವ!

ರಾಯರು:— ಮತ್ತೇನವಾ ಅದು! ನನ್ನ ಸಂಧ್ಯಾವಂದನಿ ಎಲ್ಲಿಗೆ ಬಂತೋ ಏನೊ ! ಇಪ್ಪತ್ನಾಲ್ಕು ಹೆಸರೂರೆ ತೊಗೊಂಡ್ನೋ ?

ಪುಟ್ಟವ್ವ:— ಎಲ್ಲೀದು, ದಾಮೋದರಕ್ಕ ಬಂದಿದ್ದಿರಿ; ಅದೂ ಸಾಲು ಹಿಡಿದು ಹೆಸರು ಬರಲಿಲ್ಲ.

ರಾಯರು:— ಸಂಧ್ಯಾವಂದನೀ ಆ ಮ್ಯಾಲ ಮಾಡ್ತೀನಂತ.

ಸಂಶಯ ಪಿಶಾಚಿ

(ವಿನೋದ ದೃಶ್ಯ)

ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

卐

[ರಾಯರು ಚಿಮ್ಮನಕಟ್ಟಿಯಿಂದ ನೇರವಾಗಿ ಸಣ್ಣ ಸಂಸಾರಿಸಿದ್ದಾರೆ ಮನೆಯಲ್ಲಿ ರಾಯರು, ಅವರ ಆಶ್ರಿತನಾದ ಶೀನಪ್ಪ, ಅವನ ಹೆಂಡತಿ ಪುಟ್ಟವ್ವ-ಇವರ ಹೊರತು ಯಾರೂ ಇಲ್ಲ. ರಾಯರ ಸಂಶಯದ ಸ್ವಭಾವಕ್ಕೆ ಇಬ್ಬರೂ ಬೇಸತ್ತಿದ್ದಾರೆ. ರಾತ್ರಿ ೯ ಗಂಟೆಯ ಸುಮಾರು, ರಾಯರು ಸಂಧ್ಯಾವಂದನೆಗೆ ಕುಳಿತಿದ್ದಾರೆ. ಪುಟ್ಟವ್ವ ಅವರಿಗೆ ನೀರುತ್ತಿದ್ದಾಳೆ. ಶೀನಪ್ಪ ಎಲೆ ಹಚ್ಚುತ್ತಿದ್ದಾನೆ.]

ರಾಯರು :— ಕೇಶವಾಯನಮಃ. ನಾರಾಯಣಾಯನಮಃ. ಶೀನಪ್ಪಾ, ನಾ ಸಂಧ್ಯಾವಂದನಿಗೆ ಬರೋಮುಂದ, ಮುಂಚೀಬಾಗಿಲಾ ಹಾಕಿ ಬಂದ್ನೇನು?

ಶೀನಪ್ಪ :— ಹಾಕಿ ಬಂದ್ರೆಲ್ಲ ನ್ಯಾಯರ, ನಾನು ಜೋಡಿಗೇ ಇದ್ದೆ. ಎರಡೆವನು ಸಾರೆ ಚಲಕಾ ಮೋಸ್ಲಿ ಹಾಕಿದ್ದು. ನೋಡಿಬಂದೆ.

ರಾಯರು :— ಈಗಿನ ಹೊಲ್ಯು.....ಈಗಿನ ಚಲಕಾ!... ಹೊರಗಿಂದ ಎರಡುಸಾರೆ ಬಾಗಿಲಾ ನೂಕಿನೆರ ಸಾಕು; ಜಲಿಮು ಬೀಳ್ತಾವ!

ಶೀನಪ್ಪ :— ನನ್ಮ ನನ್ನಿಮು ಹಾಂಗಿಲ್ಲೇಳ್ರಿ, ಒಳಗಿನವಂಗೇ ಲಗೂ ತಗೀಲಿಕ್ಕೆ ಬರೋದಿಲ್ಲ.....ಒನ್ಮೊನ್ಮೆ!

ರಾಯರು :— ಆನೇನೇ ತಂದಿ, ಇನ್ನೊನ್ಮೆ ನೋಡೇ ಬಾ.

ಶೀನಪ್ಪ :— ಸೂನ್ರಿ.

ರಾಯರು:— ಇಲ್ಲಿನಿನ್ನರೆ ಸೀಂಗ ಮಾಡು — ಆ ಮಾಡಿನೊಳಗ ಕೀಲಿ ಅದ; ಒಯಿದು ಹಾಕೇ ಬಿಡು. ಆ ಏಳು ಲಿನ್ನಿನ ಕೀಲಿ ತೊಗೊ! ಒಯ್ದಾ ಅದ ನೋಡು.... ಉಳದನ್ನ ಒತ್ತುಕೀಲಿ, ಬತ್ತಾ ಕೀಲಿ ಅವು ...ಆವು — ಬ್ಯಾಡ!

ಶೀನಪ್ಪ :— ಯಾವದು? ನೊನ್ನೆ ತಂದಿದ್ದೇಳ್ರಿ ಆ ಲಿನ್ನ. ಏಂದು?

ರಾಯರು :— ಹಾಂ, ಹಾಂ! ಹೌದು, ಏಳ ನೀಷಾಯಿ ಬಣದಿನ್ನ ಇದಲ್ಲ. ಆ ಕೀಲಿಗೆ ಎರಡು ಕೈ ಅವ: ಹಾಕೋಮೊದು ಬ್ಯಾನೆ, ತೆಗಿಯೋಮೊದು ಬ್ಯಾರೆ. ಹಾಕೋದನ್ನ ನೂರು ಸಾರೆ ಎಣಗಸೆ ತಿರುವಿನರ ಕೀಲಿ ಬೀಳ್ತದ.

ಶೀನಪ್ಪ :— ಅಂತ್ರಿ ತೆಗಿಬೇಕಾದುವರಿ?

ರಾಯರು :— ಅದೊಂದು ಕೈ ಬ್ಯಾರೆ ಅದ. ಅದನ್ನ ನೀವು ನಾವೆ ಬರಂಗಡೆಗೆ ತಿರುವಬೇಕು.....ಈಗ ಹಾಕೋ ಕೀಲಿ ಕೈ ಜನವಾಲದಾಗ ಅದ; ಅದನ್ನೊಳಗಿಂದ ಕೊತ್ರಿಸ್ತಿ.

ಶೀನಪ್ಪ :— ಅಗಲಿ ಕೊಡ್ರಿ ಹಂಗಾರ

(ಜನವಾರದಲ್ಲಿಯ ಪತ್ತಿಪ್ಪಕ್ಕು ಕೀ ಕೈಗಳ ಸಪ್ಪಳ.)

ರಾಯರು :— ಇದು ಹಾಕೋ ಕೈ.....ಇದು ಇನ್ನೊಂದು ತಗಿಯೋ ಕೈ, ಹಾಕೋ ಕೈ ಮ್ಯಾಲ "L" ಅಂತ ಅಕ್ಷರ ಅದ..... ನೋಡಿದೇನು?

ಶೀನಪ್ಪ :— ಹುಂ ಹು!....ಹೌದಲಾ! "L" ಅಂದರೇನ್ರಿ ರಾಯರ?

ರಾಯರು :— "L" ಅಂದರ 'ಲಾಳ್‌ಮಾತು' ಅಂತ; ಇನ್ನೊಂದು ಕೈಮ್ಯಾಲ "O" ಅಂತ ಅಕ್ಷರ ಅದ. "O" ಅಂದರ ಓಪನ್ ಮಾಡು—ಅಂತ. ಈ "L" ಕೀಲಿಕ್ಕೆ ಒಯ್ಯಿ ಈಗ.

ಶೀನಪ್ಪ :— ಹಾಕ್ರಿ ಮುರೂ ಸಾರೆ ತಿರುವಬೇಕರೇ ಎಣಗಡೆಗೆ?

ರಾಯರು :— ಹುಂ, ಮೂರು ಸಾರೆ, ಒಂದು—ಎರಡು—ಮೂರು. ನೆನಪಿನೊಳಗಿಟ್ಟುಗ್ಯೊ,....ಮರಗೂಳಿ ನೀನು! ಮತ್ತ ಕೀಲಿ ಹಾಕೋಮುಂದ ಒದು ಆನ್ನ ನಡಗ ಕೀಲಿಸೋ ಹಾಂಗ—ಒಂದು—ಎರಡು—ಮೂರು—ಅಂತ.

ಶೀನಪ್ಪ :— ಒದರ್ತೀನಿ ಬಿಡ್ರಿ, ನಿಮಗ ಕೀಲಿಸೋ ಹಾಂಗೆ ಒದರ್ತೀನಿ.

ರಾಯರು :— ಇನ್ನೊಂದು—ಕೀಲ್ಕಿಕ್ಕೆ ಮರೆತೆ. ಕೀಲಿ ಹಾಕಿದ ಮ್ಯಾಲೆ, ಅದಕ್ಕ ಒಂದೆರಡು ಸಾರೆ ಜೋಕುಬೀಳು. ಜೋಸಾ ಕೀಲಿ ಇರವಾ. ಲಿಫ್ಟಿಗೆ ಭಡಕ್ಕೀನ ಮುಂದೆ ಸರಿದೋಬಿಟ್ಟು.

ಶೀನಪ್ಪ :— ಕೀಲಿ ಹಳೇದಾದರ ಲಿವರ ವರ್ಕ್ ಮಾಡೂದಿಲ್ಲ ಅಂತಾರು. ಮಾರುಸ್ಯರ ಲಿವರನೂ ಜಾಂಗ ಆಲ್ಲೇಳ್ರಿ ಮತ್ತ?

ರಾಯರು :— ನೀರು ಪರಗ ಕಮೆಸೇಕರಾ ಕಲಿಸಬ್ಯಾಡ್ಲ ಹೇಳದ್ನೂ ಮರತು.....

ಶೀನಪ್ಪ :— ಹೌದ್ರಿ.

ರಾಯರು :— ಅಂದೊಗ ಕಳ್ಳರ ಹಾವಳಿ ಬಹಳಾಗೇದೀ ನದಾ! ಧಮ್ಮು ಸಂರಕ್ಷಣೆ ನಾವೆ ಮಾಡಿಕೋ ಬೇಕು!

ಶೀನಪ್ಪ :— ಮತ್ತ ಯಾರು ಬರಬೇಕಲ್ರಿ ಧಮ್ಮು ಸಡಾಮುಳ್ಳ?

ರಾಯರು :— ಸಡಾಮುಳ್ಳ ಬಾದಿದ್ದರ ಬಿಡಲಿ. ಧಮ್ಮು ಕೊಡವಿಗೆ ಬರದಿದ್ದರ ಸಾಕು. ಈ ಕಾಲದೊಳಗ ಧಮ್ಮು-ಧಮ್ಮು ದರು

ಅಂಬೋವರು ಕಳವು ಮಾಡ್ತಾರೆ. ಮೊನ್ನೆ ಆ ಮಹಾಜನರ ಮನ್ಯಾಗ ಕಳವಾಯ್ತಲ್ಲ....ಯಾರಂದಿ ಕಳವು ಮಾಡಿದವರು ?

ಶೀನಪ್ಪ :—ಹೌದರಿ, ಕೇಳಿದೆ. ಮನಿಯೊಳಗಿನವರೆ ಅಂತರಿ ಮಾಡಿದ್ದು.

ರಾಯರು :— ಯಾರ್ನೂ ನಂಬೋ ಹಾಂಗಿಲ್ಲ; ಹೋಗು ಮೊದಲ ಕೀಲೀ ಹಾಕಿ ಬಾ! ಒಂದು, ಎರಡು, ಮೂರು ಅಂದು, ಎರಡುಸಾರೆ ಜಗ್ಗಿ ಜೋತು ಬೀಳ್ತೋದು; ತಿಳೀತೇನು ?

ಶೀನಪ್ಪ :— ಜೋತು ಬೀಳ್ಳಿಕ್ಕೆ ಚಲಕ ಎತ್ತರಿಲ್ರಿ, ಆದರ ತ್ರಾಸ!

ರಾಯರು :— ಇದ್ದದ್ದರಾಗ ಬೀಳು ಹೋಗೋ! ಏನಾರೇ ಅಡಚಣಿ ತಗೀಬ್ಯಾಡ!

ಶೀನಪ್ಪ :— ಹೂನ್ರಿ— (ಹೋಗುವನು.)

ರಾಯರು:— ಪುಟ್ಟವ್ವಾ, ನನ್ನ ಸಂಧ್ಯಾವಂದನಿ ಎಲ್ಲಿಗೆ ಬಂದಿತ್ತು ?

ಪುಟ್ಟವ್ವ :— ಎಲ್ಲಿಗೆ ಬಂದಿತ್ತು ಅನ್ನಲಿಕ್ಕೆ ನಡದಿತ್ತೆಲ್ಲಿ ? ಎರಡುಸಾರೆ ದೇವರ ಹೆಸರು ತೊಗೊಂಡಿರಿ.....ಅಲ್ಲಿಗೇ ನಿಂತದ್ದು ನಿಂತಽ ಹೋಗೇದ!

ರಾಯರು :— ಅಂದರ 'ನಾರಾಯಣಾಯನಮಃ' ಅಂದ್ನೇನು ಹೆಂಗಾರ ?

ಪುಟ್ಟವ್ವ :....ಅಂದ್ರಿಲ್ಲ! ಮುಂದಿನದು ನಾ ಅಂತೂ ಕೇಳ್ಲಿಲ್ಲ.

ರಾಯರು :— ಅಂದ್ಹಾಂಗಿಲ್ಲಾ; ಮೊದಲಿನಿಂದನೆ ಸುರು ಮಾಡ್ತೀನಿ! ಎರಡು ಆಚಮನ ಹೆಚ್ಚು ತೊಗೊಂಡರ ತಪ್ಪೇನು ? ಕೇಶವಾಯನಮಃ, ನಾರಾಯಣಾಯನಮಃ, ಮಾಧವಾಯನಮಃ, ಗೋವಿಂದಾ ..

(ಒಗ್ಗರಣಿಯ ಚೊರ್ರಿಂಬ ಸಪ್ಪಳ ಎರಡು ಸಲ ಕೇಳಿಸುವುದು.)

ರಾಯರು:— ಪುಟ್ಟವ್ವಾ, ಸಾರಿಗೆ ಎರಡು ಸಾರಿ ಒಗ್ಗರಣೀ ಕೊಟ್ರೇನು ? ಎಣ್ಣೆ ತುಟ್ಟಿ ಆಗೇದ....ಗೊತ್ತದಽನೋ ಇಲ್ಲೋ ?

ಪುಟ್ಟವ್ವ: — ಗೊತ್ತಿರದೇ ಏನು ? ಒಗ್ಗರಣೀ ಎರಡು ಸಾರಿ ಕೊಡಲಿಲ್ಲ ಕಾಯ್ದ ಸೌಟನ್ನ ಎರಡನೇ ಸಾರೆ ಕಲಗಚ್ಚಿನೊಳಗ ಎದ್ದಿದೆ. ಅದಕ್ಕ ಹಾಂಗ 'ಜೋರ್' ಅಂತ ಸಪ್ಪಳಾತ್ಯು. ಎರಡು ಸಾರೆ ಒಗ್ಗರಣೀ ಕೊಡಲಿಕ್ಕೆ ನಾಯೇನು ಇವತ್ತಽ ಅಡಿಗ್ಗೆ ಕೂತೀನೆ ?

ರಾಯರು :— ಇಲ್ಲ, ಮರತಬಿಟ್ಟೇನೋ ಅಂದೆ.....

(ದೂರದಲ್ಲಿ ಶೀನಪ್ಪ ' ಒಂದು-ಎರಡು-ಮೂರು ' ಎಂದು ಕೂಗಿದ ದನ, ಕೀಲಿಯ ಬಡಿಬಡಿ ಸಪ್ಪಳ, ' ಊಂಽಽ ' ಎಂದು ಜೋತು ಬೀಳುವಾಗ ಹಗ್ಗದಿಂದ ಕಬ್ಬಿ. ಮತ್ತೆ ಬಡಬಡಿ, ಮತ್ತೆ ತಿಣುಕುವ ದನಿ.)

ರಾಯರು :—(ಗಟ್ಟಿಯಾಗಿ) ಶೀನಪ್ಪಾ, ಹಾಂಗ ಚಲಕಕ್ಕ ಬಡಬಡ ಅಂತ ಕೀಲೀ ಬಡೀ ಬ್ಯಾಡ....ಕಬ್ಬು ಬಿದ್ದಾವು.

ಶೀನಪ್ಪ :—(ಅಲ್ಲಿಂದಲೆ) ಇಲ್ಲ ರಾಯರ, (ಹತ್ತಿರ ಬಂದು) ಫುಟ್ಟಿ ಕೂತುದೋ ಇಲ್ಲೋ ನೋಡಿದೆ. ರಾಯರ, (ಗಾಬರಿಗೊಂಡವನಂತೆ) ನಾನು ಕೀಲೀ ಹಾಕೋಮುಂದ, ನಾಲ್ಕಾರು ಮಂದಿ ಓಡಿ ಹೋದ್ರಾಂಗ ಆತ್ಯು; ನಮ್ಮ ಮನೀ ಕಬ್ಬಿಮ್ಯಾಲಽ ಕೂತಿದ್ದರೂ ಅಂತ ಕಾಣಸ್ತ್ಯದ.

ರಾಯರು :— (ಆಂಜಿದವರಂತೆ) ಏನು ?.....ಗೋವಿಂದಾಯನಮಃ.....ನಮ್ಮ ಮನೀ ಕಬ್ಬೀಮ್ಯಾಲಽ? ... ...ಪದ್ಮನಾಭಾಯನಮಃ—ಎಲ್ಲಾ ಬಿಡಕೀ ಮುಚ್ಚೀದೀ ಇಲ್ಲೋ!—

ಶೀನಪ್ಪ:— ಅವನ್ನ ಸಂಜೀ ಮುಂದ ಮುಚ್ಚೀನಿ, ರಾಯರ!

ರಾಯರು :— ಇನ್ನೊಮ್ಮೆ ನೋಡಿ ಬಾ, ನೋಜೇ ಬಂದು ಬಿಡು. ಮುಂಜೇ ಬಾಗಲಿಗೆ ಹೊರಗಿನಿಂದನೂ ಒಂದು ಕೀಲಿ ಹಾಕಿ ಬಿಡು ಅಂತೀನಿ.

ಶೀನಪ್ಪ :— ಹಾಂಗ ಹಾಕಿದರ. ಮನಿಯೊಳಗ ಯಾರೂ ಇಲ್ಲಾ ಅಂತ ತಿಳದು, ಕೀಲೀ ಮುರೀಲಿಕ್ಕೆ ಕಳ್ಳರಿಗೆ ಉತ್ತೇಜನ ಸಿಕ್ಕಾಂಗ ಆದೀತು, ನೋಡ್ರಿ ಮತ್ತ!

ರಾಯರು :—ಕೀಲೀ ಮುರಿದರ ಒಳಗ ನಾವಿದ್ದೇ ಇರ್ತೀನಲ್ಲ. ಒಳಗಂತೂ ಕೀಲಿ ಹಾಕಿದ್ದೇ ಇರ್ತೀದ!

ಶೀನಪ್ಪ— ಅಲ್ಲ ರಾಯರ, ಹೊರಗ ಕೀಲಿ ಹಾಕೋದ್ಯಾಕಂಗ? ಯಾರು ಹಾಕೋನರು ?

ರಾಯರು :— ನೀನ್ನ ಹಾಕಜೀಕು. ಇನ್ಯಾರಿದ್ದಾರ ?

ಶೀನಪ್ಪ :— ನಾ ಹೊರಗ ಹೋಗಿ ಕೀಲೀ ಹಾಕಿದ ಮ್ಯಾಲ, ತಿರಿಗಿ ಒಳಗ ನಾ ಬರೋದ್ಯಾಕಂಗ!

ರಾಯರು :— ಹೌದಲ್ಲ ? ಈ ಮನೀಗೆ ಹಿಂಬೀಬಾಗಿಲು ಬ್ಯಾರೆ ಇಲ್ಲ. ಅದನ್ನ ಮೊನ್ನೇ ಮುಚ್ಚಿಸಿ ಬಿಟ್ಟಿ; ಈಗಿದ್ದರ, ಛಲೋ ಇತ್ತು—ಅಂತ ಅನಸ್ತದ. ಅಲ್ಲಾ, ಒಂಬತ್ತು ಹೊಡಿದಿಲ್ಲಾ, ಈಗ ಕಳ್ಳರು ಓಡ್ಯಾಡ್ತಾರ ಅಂದರ . ಊರಾಗ ಮನೀ ಮಾಡಿಕೊಂಡು ಇರಬೇಕೋ, ಏನು ದೇಶಾಂತರ ಹೋಗಬೇಕೋ.....ತಿಳೀದ್ಹಾಂಗ ಆಗೇದ,

ಶೀನಪ್ಪ:— ರಾಯರ, ಅದೇನು ಕಳ್ಳರ ಸುಳದಾಟ ಅಲ್ಲ ಬಿಡ್ರಿ.

ರಾಯರು:— ಮತ್ತ ?.... ದಾಮೋದರಾಯನಮಃ..... ಮತ್ತೇನಂದಿ ?

ಶೀನಪ್ಪ: — (ಹೆದರಿಕೆಯ ಸಣ್ಣ ಧ್ವನಿಯಲ್ಲಿ) ಇತ್ತೀಚೆಗೆ ನಾಲ್ಕು ದಿನಸದಿಂದ ನನಗ ಬ್ಯಾರೇನಽ ಅನುಭವ ಬರಲಿಕ್ಕೆ ಹತ್ತ್ಯಾವ!

ರಾಯರು:— ಮತ್ತೇನಪಾ ಅದು! ನನ್ನ ಸಂಧ್ಯಾವಂದನಿ ಎಲ್ಲಿಗೆ ಬಂತೋ ಏನೋ! ಇಪ್ಪತ್ನಾಲ್ಕು ಹೆಸರಾರೆ ತೊಗೊಂಡ್ನೋ ?

ಪುಟ್ಟವ್ವ:— ಎಲ್ಲೇದು, ದಾಮೋದರಕ್ಕ ಬಂದಿದ್ದಿರಿ; ಅದೂ ಸಾಲು ಹಿಡಿದು ಹೆಸರು ಬರಲಿಲ್ಲ.

ರಾಯರು:— ಸಂಧ್ಯಾವಂದನೀ ಆ ಮ್ಯಾಲ ಮಾಡ್ತೀನಂತ.

ಪುಟ್ಟಣ್ಣ :— ಏನದು ?

ಶೀನಪ್ಪ :— ಅಂವ ಬಾಗಿಲಾ ಮುಂದುವಾಡಿಕೊಂಡು ಒಳಗ ಕೂತಾನಲ್ಲ ... ..

ಪುಟ್ಟಣ್ಣ :— ಹೌದು !

ಶೀನಪ್ಪ :— ಹೊರಗಿನಿಂದ ಕಳ್ಳ ಹೆಜ್ಜೆಯಿಂದ ಹೋಗಿ, ಚಿಲಕಾ ಹಾಕಿಬಿಡ್ತೀನಿ ಅಂವಗೇನು ಗೊತ್ತಾಗ್ತದ ?

ಪುಟ್ಟಣ್ಣ :— ಅಂವ ಓದರ್ತಾನ, ಸಿಟ್ಟಿಗೇಳ್ತಾನ್ಸ.... ದೈತಾನ....

ಶೀನಪ್ಪ :— ಯಾರನ್ನ ? ನಾ ಚಿಲಕಾ ಹಾಕೇ ಇಲ್ಲ, ತಾನ ಬಿದ್ದಿದ ಅಂತ, ಫಾಬರಿ ಅದವರ್ಣಂಗ ಬತಾವಣೇ ಮಾಡಿದರಾತ್ಯು ನಾ ಆ ಸೋಗು ತರ್ತೀನಿ. ನೀ ಸುಮ್ಮನ ಮೋಜುನೋಡು !

× × × ×

(ಕೋಣೆಯ ಬಾಗಿಲಿಗೆ ಚಿಲಕಹಾಕಿದ ಶಬ್ದ)

ರಾಯರು :— (ಒಳಗಿನಿಂದ) ಯಾರವರು ?

(ಮೌನ)

ರಾಯರು :— ಅಂ..... ಯಾರ..... ಚಿಲಕಾ ಹಾಕಿದವರು ? ಶೀನಪ್ಪಾ, ಏ ಶೀನಪ್ಪಾ.....

ಶೀನಪ್ಪ :— (ಅಡಿಗೆಯ ಮನೆಯೊಳಗಿಂದಲೇ) ಏನ್ರಿ ರಾಯರ ?.... ಬಂದೆನ್ರಿ .....

ರಾಯರು :— ಎಲ್ಲಿದ್ದೀಯೋ ನೀನು ? (ಬಾಗಿಲನ್ನು ಧಬ್ ಧಬ್ ಬಡಿಯುತ್ತ) ಏಕ, ಶೀನ್ಯಾ.....

ಶೀನಪ್ಪ :— ಹೊರಗ ಇದ್ದೀನ್ರಿ.... ಯಾಕರಿ ?

ರಾಯರು :— ಯಾಕರಿ ಅಂತೇನು ಕೇಳ್ತೀ ? ಚಿಲಕಾಹಾಕಿ ಮ್ಯಾಲ ನನ್ನ ಕೇಳ್ತಿಯೇನು ಲುಚ್ಚಾ ?

ಶೀನಪ್ಪ :— ನಾ ಎಲ್ಲೆ ಚಿಲಕಾ ಹಾಕೇನಿ ? ಒಳಗ..... ಅಡಿಗೀಮನಿಯೊಳಗ ಎಲೀ ಹಚಿಗೋತಕ ಕೂತೀನಿ.....

ರಾಯರು :— ನೀ ಹಾಕಿಲ್ಲಾ ? ಸುಳ್ಳಾಡಬ್ಯಾಡ, ನಿನ್ನ ಜೀವಾ ತೊಗೊಂಡೇನು.

ಶೀನಪ್ಪ :— ಛೆ, ಎಲ್ಲಿದರೀ ? ನಾ ಅಡಿಗೀಮನಿ ಬಟ್ಟು ಹೊರಗ ಬಂದಿಲ್ಲಾ !

ರಾಯರು :— ಮೊದಲ ಚಿಲಕಾ ತೆಗಿ..... ತೆಗಿ ಮೊದಲು ಅದನ್ನ..... ನೀ ಹಾಕಿಲ್ಲ ?

ಶೀನಪ್ಪ :— ಛೆ, ಇಲ್ಲಾ ಅಂತ ಹೇಳಿದೆನಲ್ಲಾ !.....

ರಾಯರು :— ಉಗ್ರನರಸಿಂಹಾ, ನೀನೇ ರಕ್ಷಿಸು.....

(ಚಿಲಕ ಮತ್ತು ಬಾಗಿಲನ್ನು ತೆರೆದಾಗ, ಮೊದಲಿನಂತೆ ಕಿರ್ರೆಂಬ ಸಪ್ಪಳ.)

ಶೀನಪ್ಪ :— ಛೇ ಛೇ ಛೇ ಛಿ ! ರಾಯರ, ಚಿಲಕ ಎಲ್ಲೆಲ್ಲೂ ಬರವೊಲ್ಲದು; ಮೈ ಕಸುವೆಲ್ಲಾ ಹಾಕಿ ತೆಗೆದೆ ನೋಡ್ರಿ.

ರಾಯರು :— ಚಿಲಕ ಬಿದ್ದದ್ದು ನಿನಗ ಗೊತ್ತಿಲ್ಲ ?

ಶೀನಪ್ಪ — ಸುದ್ದೀ ಅದರದು ? ಸಿಬರಿನ ಕಡೆಗೇ ಲಕ್ಷ ನನ್ನದು, ಎಲ್ಲೆ ಕೈಯಾಗ ಚುಚಿಗೋತೀನೊ ಅಂತ ! ಅದು ..... ರಾಯರೆ.... ತಾನ ಬಿದ್ದದ ಬಿದ್ರಿ ! ಇಲ್ಲೆ..... ನಿಮಗ ಹೀಂಗಾತ್ಯು ..... ಅಲ್ಲೆ.... ನನ್ನ ಹೆಣ್ತಿ.... ಬಚ್ಚಲಕ್ಕ ಹೋಗಿದ್ಲಂತ.... ಒಂದು ಬಿಳಿಯ ಬೆಕ್ಕು ಬಂದು.... ಅರ್ಧಕ್ಕ ಮಾಯ ಅತ್ಯಂತ ! ಆಕೀನೂ.... ಫಾಬರ್ಯಾಗ ಕೂತಾಳ. ರಾಯರ,.... ಇದು ಬ್ಯಾರೇ .. ಏನೂ ಅಲ್ಲ ನಿಮ್ಮ ಬಾಯೇರು .. .... ಅವರ ಆಟಾನ ಇದು ! ಇದರೊಳಗ ಎಳ್ಳಷ್ಟೂ ಸಂಶಯ ಇಲ್ಲ.

ರಾಯರು— (ದೈನ್ಯಸ್ವರದಲ್ಲಿ) ಶೀನಪ್ಪಾ, ನಾ ಆಕೀಗೆ ಏನು ಕಡಿಮಿ ಮಾಡಿದ್ದೆ ?

ಶೀನಪ್ಪ— ನನಗೇನು ಗೊತ್ತರೀ ರಾಯರ? ನಾ ಅವರ್ನ ಕಣ್ಣೆಲೆ ಸಹಿತ ನೋಡಿಲ್ಲ. ಅವರ ವಾಸನಾ ಏನಿತ್ತೋ ಯಾರಿಗ್ಗೊತ್ತು ?

ರಾಯರು— (ನಿಡಿದಾದ ಉಸಿಗರೆದು) ಏನೂ ವಾಸನಾ ಇರಲಿಲ್ಲ. ಸಾಯೋಮುಂದ ಒಂದಕ ಮಾತು ಹೇಳಿ ಸತ್ತಳು.... ನೀವು ಒಬ್ಬರ ಆಶ್ರಯಿಬೊಳಗಿದ್ದು.... ಈ ಸ್ಥಿತಿಗೆ ಬಂದಿರಿ.... ಹಾಂಗಷ್ಟ ಒಂದು ಬಡಕುಟುಂಬಕ್ಕ ಆಶ್ರಯ ಕೊಡ್ರಿ.... ಅಂದ್ಲು. ಅಕೀ ಇಚ್ಛಾದಂತೆ ನಾ ಈಗ ಮಾಡೇಮಾಡೀನಿ. ನಿಮ್ಮನ್ನ ತಂದು ಇಟ್ಟುಕೊಂಡದ್ದು ಯಾತಕ್ಕ ಮತ್ತ ?

ಶೀನಪ್ಪ— ರಾಯರ, ನಮಗಂತೂ ಇನ್ನ ಇಲ್ಲೆ ಇರೋದು ಸರ್ವಥಾ ಸಾಧ್ಯ ಇಲ್ಲ. ಅನರ್ಥ ಸತ್ತುಹೋದೇವು ! ನಾವು ಈಗ ನಿಂತ ಕಾಲಮ್ಯಾಲ ಹೋಗಿಬಿಡ್ತೀವಿ. ನಮ್ಮನ್ನ ಕಳಿಸಿಬಿಡ್ರಿ.....

ರಾಯರು— (ಅತಿ ದೈನ್ಯದಿಂದ) ಬ್ಯಾಡ ಶೀನಪ್ಪಾ ! ನಿಮಗ ಹೊರಗ ಹೋಗೊನ ಧೈರ್ಯರಿ ಅದ ! ನೀವು ಹೊರಗ ಕಾಲಿಟ್ಟರಿ ಅಂದರ, ಇಲ್ಲೆ ನಿಂತನಿಂತಲ್ಲೇ ನನ್ನ ಪ್ರಾಣ ಹೋಗ್ತದ ! ಅಕೀ ವರ್ಷಶ್ರಾದ್ಧ.... ಅದರ ಜೋಡಿಗೆ ನನ್ನದೂ ಶ್ರಾದ್ಧ ! ಅಷ್ಟು ಮಾತ್ರ ಮಾಡಬ್ಯಾಡಿರಿ. ನನ್ನ ಜೀವಮಾನ ಇರೋತನಕ ಇರ್ರಿ.... ಹೋ.... ಹೋಗಬ್ಯಾ... ಬ್ಯಾಡ್ರಿ.... (ಚಳಿ ಬಂದವರ ಹಾಗೆ ನಡುಗುತ್ತ)... ಶೀನಪ್ಪಾ, ನ.... ನ.... ನ.... ನಗ.... ಮೈಯೊಳಗ ನಡುಗು.... ಹು.... ಹುಟ್ಟೀದ.... ನನ್ನ ಎತ್ತಿ... ಒಯಿದು.... ಮ.... ಮ... ಮಂಚದ ಮ್ಯಾಲ ಮಲಗಿಸು.... ಉಗ್ರನರಸಿಂಹಾ.....

ಶೀನಪ್ಪ— ಅಗಲಿ ನಡೀರಿ.... ನಿಮ್ಮ ಜೋಡಿಗೇ.... ಇರೋದಾದರೂ ಇರ್ತೀವಿ ... ಸಾಯೋದಾದರೂ ಸಾಯ್ತೀವಿ. ನಿಮಗಾದದ್ದು ನಮಗ !

ಚಿಕ್ಕ ಮಕ್ಕಳ ಶಿಕ್ಷಣ

ಅಪೇಕ್ಷೆ ಮತ್ತು ಆಕ್ಷೇಪಗಳು

(ಶೈಕ್ಷಣಿಕ ವಿಷಯ ಪರಿಚಯ)

ಶ್ರೀ. ನಾರಾಯಣ ಮಹಿಷಿ, ಬಿ. ಎಸ್‌ಸಿ. ಧಾರವಾಡ

卐

'ಬಾಲಕಮಂದಿರ' 'ಶಿಶುವಿಹಾರ' ಇವು, ಭಾರತದ ಹಳ್ಳಿಗರಿಗೆ ಇನ್ನೂ ಅಪರಿಚಿತ ವಸ್ತುಗಳಾಗಿದ್ದರೂ ನಗರವಾಸಿಗಳಲ್ಲಿಯ ಬಹು ಜನರಿಗೆ ಪರಿಚಯದುವು. ಗಳಾಗಿರುವುವು. ಮಕ್ಕಳಲ್ಲಿ ಮಾನವತೆಯ ವಿಕಾಸ. ವಾಗುವುದಕ್ಕೆಂದೇ ಈ ಸಂಸ್ಥೆಗಳು ಕಾರ್ಯಮುಖ. ವಾಗಿವೆ. ಆದರೂ ಈ ಸಂಸ್ಥೆಗಳ ಕಾರ್ಯರೀತಿ ಇದುವರೆಗೂ ನಿರ್ವಿವಾದದ ವಿಷಯವೆನಿಸಿಲ್ಲ.

卐

ಈಗಿನ ಸ್ವತಂತ್ರ ಭಾರತದ ಎಷ್ಟೋ ನಗರಗಳಲ್ಲಿ, ಬಾಲಕ-ಮಂದಿರಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಪಾಲಕರು ತಮ್ಮ ಎರಡುವರೆ ವರುಷ ವಯಸ್ಸಿನ ಬಾಲಕ-ಬಾಲಿಕೆಯರನ್ನು ಅಲ್ಲಿ ಸೇರಿಸಿ, ಮಂದಿರದ ಸದುಪಯೋಗವನ್ನು ಮಾಡಿಕೊಳ್ಳುತ್ತಲಿದ್ದಾರೆ. ಬಾಲಕಮಂದಿರದ ಉದ್ದೇಶವು ಬಾಲಕರಿಗೆ ಹಿತಕರವಾಗಿದೆ—ಎಂಬುದನ್ನು, ಪಾಲಕರು ಪ್ರತ್ಯಕ್ಷವಾಗಿ ಮನಗಂಡಿದ್ದಾರೆ. ಬಾಲಕಮಂದಿರಗಳು ಬಾಲಕ-ಬಾಲಿಕೆಯರಿಗಷ್ಟೇ ಸೀಮಿತವಾಗಿಲ್ಲ; ಅದರ ಸಂಬಂಧ ಪಾಲಕರ ವರೆಗೂ ಬೆಳೆದಿದೆ. ಮಂದಿರದ ಅಧಿಕಾರಿಗಳು, ಕೆಲವೊಂದು ಗೊತ್ತು ಪಡಿಸಿದ ಅವಧಿಯಲ್ಲಿ ಪಾಲಕರ ಸಭೆಯೊಂದನ್ನು ಕೂಡಿಸುತ್ತಾರೆ. ಮಂದಿರದ ವಿಷಯವಾಗಿ ಅವರ ಅಭಿಪ್ರಾಯವನ್ನು ತಿಳಿದುಕೊಳ್ಳುತ್ತಾರೆ. ಪಾಲಕರು ತಮ್ಮ ಚಿಕ್ಕಮಕ್ಕಳನ್ನು ಬಾಲಕಮಂದಿರಕ್ಕೆ ಕಳಿಸುತ್ತಾರೆಂದ ಮೇಲೆ, ಮಂದಿರದ ವಿಷಯಕ್ಕೆ ಅವರ ಅಭಿಪ್ರಾಯ ದೋಷರಹಿತವಾಗಿರುವುದು. ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಎಷ್ಟೋ ಜನ ಪಾಲಕರಿದ್ದಂತೆ ಎಷ್ಟೋ ಬೇರೆ ಬೇರೆ ತರದ ಅಭಿಪ್ರಾಯಗಳಿರಬಹುದು. ಒಂದೇ ತೆರನಾದ ಅಭಿಪ್ರಾಯಗಳಿರಬೇಕೆಂಬುದು ಅಷ್ಟೊಂದು ಯೋಗ್ಯವಾಗಲಾರದು. ಒಬ್ಬ ಪಾಲಕನು ಕೊಟ್ಟ ಅಭಿಪ್ರಾಯ ಅವನಷ್ಟಕ್ಕೇ ಸೀಮಿತವಾಗಿರುತ್ತದೆ. ಮತ್ತೊಬ್ಬ ಪಾಲಕ ಸ್ವತಂತ್ರರೀತಿಯಲ್ಲಿ ಬೇರೆ ಅಭಿಪ್ರಾಯವನ್ನೇ ವ್ಯಕ್ತಪಡಿಸುವುದುಂಟು. 'ಮಂದಿರದ ವಿಷಯವಾಗಿ ನಿಮ್ಮ ಅಭಿಪ್ರಾಯವೇನು ?' ಎಂದು ಕೇಳಿದ ಪ್ರಶ್ನೆಗೆ ಉತ್ತರಗಳಿಲ್ಲಿವೆ :

(೧) ಮಗು ಕನಿಷ್ಠ ಪಕ್ಷಕ್ಕೆ ೩-೪ ಗಂಟೆಯ ಕಾಲ ತಾಯಿಯನ್ನು ಬಿಟ್ಟು ದೂರವಿರುತ್ತದೆ. ಇದರಿಂದ ಇಬ್ಬರಿಗೂ ಹಿತವಾಗಿದೆ.

೨) ಮಗುವು ಸಾಮಾಜಿಕ ಪ್ರವೃತ್ತಿಯುಳ್ಳದ್ದಾಗುತ್ತದೆ. ಬೇರೆ ಬೇರೆ ಚಿಕ್ಕಮಕ್ಕಳ ಜೊತೆಯಲ್ಲಿ ಕೂಡಿ ಇರುವುದನ್ನು ಕಲಿಯುತ್ತದೆ.

೩) ಚಿಕ್ಕಮಕ್ಕಳ ಅಭ್ಯಾಸ ಸುರುವಾಗುತ್ತದೆ. ಐದು ವರುಷ ತುಂಬುತ್ತಲೇ ಎರಡನೆಯವರ್ಗಕ್ಕೆ ಹೋಗಲು ಅನುಮತಿ ದೊರೆಯುತ್ತದೆ.

ಎಷ್ಟೋ ಪಾಲಕರು ಕಲ್ಪನಾತೀತವೆನಿಸುವಂತೆ ತಮ್ಮ ಅಭಿಪ್ರಾಯಗಳನ್ನೂ ಕೊಟ್ಟಿದ್ದಾರೆ. ಈಗಿನ ಪೀಳಿಗೆಯಲ್ಲಿ ಚಿಕ್ಕಮಕ್ಕನ್ನು ಬಾಲಕಮಂದಿರಕ್ಕೆ ಕಳಿಸುವುದೇ ಒಂದು ಗೌರವವೆಂದು ಎಷ್ಟೋ ಪಾಲಕರ ವಿಚಾರವಾಗಿದೆ. ಇನ್ನೆಷ್ಟೋ ಜನಪಾಲಕರು 'ಮಕ್ಕಳು ಮನೆಯಲ್ಲಿ ಹಟಪೂಡುತ್ತಾರೆ' ಎಂದು ಅಲ್ಲಿ ಕಳುಹಿದರೆ, ಬೇರೆ ಕೆಲವರು ನೆರೆಮನೆಯವರನ್ನು ಅನುಕರಣೆ ಮಾಡಿ ತಮ್ಮ ಚಿಕ್ಕ ಮಕ್ಕಳನ್ನು ಬಾಲಕಮಂದಿರಕ್ಕೆ ಕಳಿಸುತ್ತಾರೆ.

ತಾಯಿ ಮತ್ತು ತಂದೆ ಇವರಿಬ್ಬರೂ ಮಗುವಿನ ಶಿಕ್ಷಣಕ್ಕೆ ಅತ್ಯವಶ್ಯವಾದ ಸಾಧನವಾಗಿರುವರು. ಜಗತ್ತಿನಲ್ಲಿ ಯಾವ ವ್ಯಕ್ತಿಯೂ ಮತ್ತು ಸ್ಥಳವು ತಾಯಿ ಮತ್ತು ಮನೆಗಳ ಯೋಗ್ಯತೆಯನ್ನು ಯಾವ ಕಾಲದಲ್ಲಿಯೂ ಆಕ್ರಮಿಸಲು ಶಕ್ಯವಿಲ್ಲವೆಂಬುದು ನಿರ್ವಿವಾದ ಸಂಗತಿಯಾಗಿದೆ. ಮಗುವಿನ ತಾಯಿಗೆ ಈ ಹೊಸ ಕಾಲದ ಚಿಕ್ಕಮಕ್ಕಳ ಶಿಕ್ಷಣದ ವಿಷಯವಾಗಿ ಅಲ್ಪಸ್ವಲ್ಪ ಪರಿಚಯವಿದ್ದರಂತೂ ಸರಿ; ಬಾಲಕಮಂದಿರದ ಅವಶ್ಯಕತೆಯೇ ಇಲ್ಲ.

ಬಾಲಕಮಂದಿರದಲ್ಲಿ ಚಿಕ್ಕಮಕ್ಕಳನ್ನು ಕಳಿಸುವ ಉದ್ದೇಶವಿಷ್ಟೇ. ಮನೆಯಲ್ಲಿ ಇರುವ ಎರಡು ಕೋಣೆಗಳಿಗಿಂತ ಬೇರೆ ಮತ್ತು ಆಲ್ಹಾದಕರವಾದ ವಾತಾವರಣ ಬಾಲಕಮಂದಿರದಲ್ಲಿ ನೋಡಲು ಸಿಗುವುದು. ಮಕ್ಕಳ ಅಭ್ಯಾಸ ಅದಷ್ಟು ಬೇಗನೆ ಮುಗಿಯುವುದೆಂಬ ವಿಚಾರದಲ್ಲಿ ಯಾವ ಸತ್ಯಾಂಶವೂ ಇಲ್ಲ. ಅಲ್ಲಿ ಚಿಕ್ಕಮಕ್ಕಳಿಗೆ ಬೇರೆ ಬೇರೆ ತರದ ಆಟಗೆಯ ಸಾಮಾನುಗಳು ಕೊಡಲ್ಪಡುತ್ತವೆ. ಇದರಿಂದಾಗಿ ಬಾಲಕರಲ್ಲಿ ಇಂದ್ರಿಯಗಳ ಜ್ಞಾನ ಬೆಳೆಯುತ್ತದೆ. ಇಷ್ಟೇ ಅಲ್ಲ. ವ್ಯವಹಾರಕೌಶಲವೂ ಹೆಚ್ಚಿದಂತೆ ತೋರುತ್ತದೆ. ಇವೆಲ್ಲವುಗಳಿಂದ ಚಿಕ್ಕಮಕ್ಕಳ ಮನಸ್ಸಿನಲ್ಲಿ ಮೇಲೆ ಯಾವ ದುಷ್ಪರಿಣಾಮವೂ ಆಗಲಾರದು; ಮತ್ತು ಮಾನಸಿಕ ಒತ್ತಡ ಬೀಳುವುದು ತೀರ ಕಡಿಮೆ. ಪಾಠಾಂತರ, ಗೃಹಪಾಠ ಇತ್ಯಾದಿಗಳಿಂದ ಚಿಕ್ಕಮಕ್ಕಳು ದೂರವಿರುತ್ತಾರೆ.

ಈ ಪದ್ಧತಿಯ ಎಂದರೆ ಮಾಂಟೇಸರಿ ಪದ್ಧತಿಯ ಶಿಕ್ಷಣದಲ್ಲಿ ಚಿಕ್ಕಮಕ್ಕಳಿಗೆ ತಮ್ಮ ಮನಸ್ಸಿಗೆ ಬಂದಂತೆ ವರ್ತಿಸಲು ಅಧಿಕಾರವಿರುತ್ತದೆ. ಕೆಲಸದ ವಿಷಯವಾಗಿ ಯಾರ ಅಧಿಕಾರವೂ ಅವರ ಮೇಲೆ ನಡೆಯುವಂತಿಲ್ಲ. ದೊಡ್ಡವರ ಕೈಗೊಂಬೆಗಳಾಗಿ ನಡೆಯುವುದು ತೀರ ಅಪರಿಚಿತ ವಿಷಯ. ಅಲ್ಲಿ ಚಿಕ್ಕಮಕ್ಕಳಲ್ಲಿ ತಮ್ಮದೇ ಆದ ಒಂದು ವ್ಯಕ್ತಿತ್ವವನ್ನು ಬೇರೂರಿಸಿ ಪೋಷಿಸಲು ಈ ಬಾಲಕ-ಮಂದಿರದಲ್ಲಿ ಅವಕಾಶವಿದೆ.

ಮಾಂಟೇಸರಿ ಪದ್ಧತಿಯ ಶಿಕ್ಷಣದಲ್ಲಿ ಶಿಕ್ಷಕಿಯ ಸ್ಥಾನವು ಸ್ಫೂರ್ತಿದಾಯಕವಾಗಿದೆ. ಶಿಕ್ಷಕಿಯು ತಾನು ಬಾಲಕರ ಒಡತಿ ಎಂದು ತಿಳಿದು, ತನ್ನ ಬುದ್ಧಿಯಿಂದ ಹೊರಬಂದ ಅಧಿಕಾರವನ್ನೇ ಆಗಲಿ, ಅಥವಾ ಯಾವುದೇ ತರದ ದುರುಪದೇಶವನ್ನೇ ಆಗಲಿ ಚಿಕ್ಕ ಮಕ್ಕಳ ಮೇಲೆ ಎಂದೂ ಹೇರಲಾರಳು. ಶಿಕ್ಷಕಿಯು ತಾನು ಒಡತಿ ಎಂದು ತಿಳಿಯುವುದು ಎಷ್ಟು ಮೂರ್ಖತನದ್ದಾಗಿದೆಯೋ, ಅಂತಹದೇ ತಪ್ಪು ಶಿಕ್ಷಕಿಯು ತಾನು ಚಿಕ್ಕಮಕ್ಕಳ ದಾಸಿ—ಎಂದು ತಿಳಿಯುವುದರಲ್ಲಿಯೂ ಆಗುತ್ತದೆ. ಶಿಕ್ಷಕಿಯ ಸ್ವಂತದ ಯಾವ ವಿಚಾರಗಳಿದ್ದರೂ, ಅವು ಅವಳ ಮಟ್ಟಿಗೆ ಸೀಮಿತವಾಗಿರುವುವು—ಎಂದು ಬೇರೆ ಹೇಳಬೇಕಿಲ್ಲ. ಶಿಕ್ಷಕಿಗೆ ತನ್ನ ವೈಯಕ್ತಿಕ ಅಥವಾ ಪ್ರಾಪಂಚಿಕ ವಿಚಾರಗಳಿರುವುದು ಸ್ವಾಭಾವಿಕವೇ ಆಗಿದೆ; ಆದರೆ ಆ ವಿಚಾರಗಳ ಪ್ರಭಾವವು ಚಿಕ್ಕಮಕ್ಕಳ ಮೇಲೆ ಬೀಳದಂತೆ ಎಚ್ಚರ ವಹಿಸುವುದು ಅವಳ ಕರ್ತವ್ಯವಾಗಿದೆ. ಶಿಕ್ಷಕಿಯೂ ಕೆಲಸಲ ಒಬ್ಬ ನಿರೀಕ್ಷಕಳೂ ಸಂರಕ್ಷಕಳೂ ಇದ್ದಂತೆ! ತಾಯಿ-ತಂದೆಗಳು ಚಿಕ್ಕ ಮಕ್ಕಳ ಹತ್ತಿರ ವಿರುವಾಗ ಯಾವ ಒಂದು ವಾತಾವರಣ ನಿರ್ಮಾಣವಾಗುತ್ತದೆಯೋ, ಅಂತಹದೇ ಒಂದು ವಾತಾವರಣವನ್ನು ಶಿಕ್ಷಕಿಯು ನಿರ್ಮಾಣ ಮಾಡಲು ಶಕ್ತಳಾದರೆ, ಅವಳು ನಿಜವಾಗಿಯೂ ಧನ್ಯಳು!

ಮಾಂಟೇಸರಿ ಶಾಲೆಯಲ್ಲಿ ಕೆಲವು ಅಪೂರ್ವಗುಣಗಳನ್ನು ಕಾಣಬಹುದು. ಅಲ್ಲಿ ಶಾಂತತೆ ಮತ್ತು ಶಿಸ್ತು ಶಾಲೆಯ ರಾಮನಾಮವಿದ್ದಂತೆ—ಕಾರ್ಯತತ್ಪರತೆ, ಕುಶಲತೆ ಮತ್ತು ಸಾಮಾಜಿಕ ಪ್ರವೃತ್ತಿಗಳು ಕ್ರಮವಾಗಿ ಬೆಳೆಯುತ್ತಿರುವುವು. ಈ ವಿಷಯವಾಗಿ ಚಿಕ್ಕಮಕ್ಕಳಿಂದ ಪ್ರತ್ಯಕ್ಷಸಿದ್ಧಿಕೆಗಳನ್ನು ಮಾಡಿಸಲಾಗುತ್ತದೆ.

ಈ ತರದ ಶಿಕ್ಷಣಕ್ರಮವು ಪಶ್ಚಿಮದೇಶದಿಂದ ಬಂದಂತಹದಾಗಿದೆ. ಈಗಿನ ಕಾಲದಲ್ಲಿ; ಮಾಂಟೇಸರಿ ಪದ್ಧತಿಯ ಶಿಕ್ಷಣಕ್ಷೇತ್ರದಲ್ಲಿ ಪಶ್ಚಿಮ ದೇಶಗಳಲ್ಲಿಯೂ ಭಿನ್ನಾಭಿಪ್ರಾಯವಿದ್ದದ್ದು ಕಂಡುಬರುತ್ತದೆ—ಎಂಬುದು ಈವಲ ಕಲ್ಪನಾತೀರೇಕವಾಗಿದೆ. ಯುನೆಸ್ಕೋದಲ್ಲಿ ಕೂಡ ಈ ಶಿಕ್ಷಣತಜ್ಞರೂ ಈ ಶಿಕ್ಷಣಪದ್ಧತಿಯ ಪುರಸ್ಕರ್ತರಿರುತ್ತಾರೆ.

ಮಾಂಟೇಸರಿ ಶಾಲೆ ಮತ್ತು ಗೃಹಶಿಕ್ಷಣ ಇವುಗಳಲ್ಲಿ ವಿನಾ ಕಾರಣವಾಗಿ ಅಂತರ ಹೆಚ್ಚುತ್ತಲಿದೆ 'ಬಾಲಕಮಂದಿರಗಳು ಗೃಹಶಿಕ್ಷಣಕ್ಕೆ ಮಾರಕವಾಗಿವೆ' ಎಂಬುದೊಂದು ಆಕ್ಷೇಪವಿದೆ. ಬಾಲಕಮಂದಿರದಲ್ಲಿ ಚಿಕ್ಕ-ಮಕ್ಕಳ ನಡತೆ ಒಳ್ಳೆಯದಾಗಿರುವುದಿಲ್ಲ; ಅದರ ಕಾರಣ ಅಚ್ಚೆಯ ವಾತಾವರಣ—ಎಂಬುದು ಕೂಡ ಸಮಂಜಸವಾಗಲಾರದು. ಮನೋವಿಕಾಸದ ಸಲುವಾಗಿ ಬಾಲಕರಿಗೆ ಬೇಕಾಗುವ ಸಾಧನೆಗಳು ಗೃಹದಲ್ಲಿ ಸಿಗುವುದಿಲ್ಲವೆಂದೇ ಬಾಲಕಮಂದಿರ ಅಸ್ತಿತ್ವದಲ್ಲಿ ಬಂದಿದೆ. ಬಾಲಕಮಂದಿರ ಗೃಹಶಿಕ್ಷಣದ ಒಂದು ಭಾವನೆಯ ಮೇಲೆಯೇ ಬೆಳೆದುಬಂದಿದೆಯೆಂಬುದನ್ನು ಬೇರೆ ಹೇಳಬೇಕಿಲ್ಲ.

ಬಾಲಕಮಂದಿರದಲ್ಲಿಯ ಶಿಕ್ಷಣ ಮತ್ತು ಸಾಧನ ಇವುಗಳಿಗೆ ಬೇಕಾಗುವ ಆರ್ಥಿಕಸಹಾಯ ಹೆಚ್ಚಿನದಾಗುವುದಿಲ್ಲವೆ?—ಎಂಬುದು ಕೂಡ ಮೇಲಿಂದ ಮೇಲೆ ಕೇಳಲ್ಪಡುವ ಪ್ರಶ್ನೆಯಾಗಿದೆ. ಮೂವತ್ತು ಬಾಲಕರುಳ್ಳ ಒಂದು ಶಾಲೆಗೆ ಹದಿನೈದು-ವರುಷಗಳ ವರೆಗೆ ಬೇಕಾಗುವ ಸಾಧನಗಳನ್ನು ಆರ್ಥಿಕದೃಷ್ಟಿಯಿಂದ ನೋಡಿದರೆ, ಪ್ರತಿಯೊಬ್ಬ ಬಾಲಕನಿಗೆ ಪ್ರತಿವರುಷ ಎರಡುವರೆ ರೂಪಾಯಿಗಳು ಖರ್ಚಾಗುತ್ತವೆ. ಭಾರತದಂತಹ ಬಡದೇಶದಲ್ಲಿ ಇಷ್ಟೇ ಖರ್ಚು ಹೆಚ್ಚೆಂದು ಕಂಡುಬರುತ್ತದೆ. ಪ್ರಾಥಮಿಕ ಶಾಲೆಯಲ್ಲಿಯ ಬಾಲಕರಿಗಾಗಿ ಸರಕಾರವು ಮಾಡುವ ಖರ್ಚನ್ನು ಗಮನಿಸಿದರೆ, ಬಾಲಕ ಮಂದಿರದ ಸಲುವಾಗಿ ಮಾಡಿದ ಖರ್ಚು—ಅದು ಎಷ್ಟು ಇದ್ದರೂ ಸರಿ-ಆಗುವುದು ಅನಿವಾರ್ಯ ಎಂಬುದು ಒಂದು ಮಹತ್ತ್ವದ ವಿಷಯವಾಗಿದೆ.

'ಎರಡುವರೆಯಿಂದ ಐದು ವರುಷಗಳ ಬಾಲಕರ ಮೇಲೆ ಅದೆಂತಹ ಸಂಸ್ಕಾರವಾಗಬಲ್ಲದು? ಈ ಮೂರು ವರುಷಗಳ ಅಲ್ಪ ಕಾಲದಲ್ಲಿ ದೊರೆತ ಶಿಕ್ಷಣವು ಮುಂದೆ ಬಾಲಕರು ದೊಡ್ಡವರಾದ ಮೇಲೆ ಇಲ್ಲದಂತಾಗಬಹುದು' ಎಂದು ಕೂಡ ಕೆಲವರು ಹೇಳುವುದುಂಟು. ಈ ವಿಷಯದಲ್ಲಿ ಮಾತ್ರ ತದ್ವಿರುದ್ಧವಾದ ಅನುಭವ ಬಂದಿದೆ. ಈ ವಯಸ್ಸಿನಲ್ಲಿ ಆದ ಸಂಸ್ಕಾರಗಳು, ದೈನಂದಿನ ರೂಢಿಗಳು ಮತ್ತು ಅಭಿರುಚಿಗಳು, ಜೀವನಕಾಲದಲ್ಲೆಲ್ಲಾ ಉಳಿಯುತ್ತವೆ—ಎಂಬುದು ಅನುಭವದಿಂದ ಕಂಡು ಬಂದ ಸಂಗತಿಯಾಗಿದೆ.

ಪೂರ್ವಪ್ರಾಥಮಿಕ ಶಾಲೆಯಲ್ಲಿ ಯಾವ ತರದ ಅಪೂರ್ಣತೆಗೂ, ಅವಕಾಶವಿಲ್ಲ. 'ಬಾಲ್ಯಜೀವನವೇ ಮುಂಬರುವ ಜೀವನದ ಅಡಿಗಲ್ಲು' ಎಂದ ಮೇಲೆ, ಬಾಲ್ಯಜೀವನವು ಪೂರ್ಣವಾಗಿ ವಿಕಾಸಹೊಂದಬೇಕೆಂಬುದು ಅನಿವಾರ್ಯ. ಸಾಕಷ್ಟು ಹವೆ, ಪ್ರಕಾಶ, ಕ್ರೀಡಾಸ್ಥಳ ಇತ್ಯಾದಿಗಳು ಬಾಲಕಮಂದಿರದಲ್ಲಿ ಬೇಕೆಂಬುದು ನಿರ್ವಿವಾದವಾಗಿದೆ. ಶಿಕ್ಷಕಿಯು ಕೂಡ ತಜ್ಞಳಿರುವುದು ಅಷ್ಟೇ ಅವಶ್ಯಕವಾಗಿದೆ. ತಾಯಿಗೆ ಮಕ್ಕಳ ವಿಷಯಕ್ಕೆ ಇರುವಷ್ಟು ಪ್ರೇಮವು ಶಿಕ್ಷಕಿಯಲ್ಲಿ ಬೇಕು. ಆಕೆಯಲ್ಲಿ ಯಾವ ನ್ಯೂನತೆಗೂ ಅಸ್ಪದವಿರಬಾರದು. ಯಾವ ನ್ಯೂನತೆಯಾದರೂ ಆಕೆಯಲ್ಲಿದ್ದರೆ, ಅದರ ಪ್ರಭಾವದಲ್ಲಿ ಚಿಕ್ಕ ಮಕ್ಕಳು ಬೆಳೆಯುವಂತೆ ದಕ್ಷತೆ ವಹಿಸುವುದು ಶಿಕ್ಷಕಿಯ ಮೊದಲ ಕರ್ತವ್ಯವಾಗಿದೆ. ಶಿಶುಮಂದಿರಗಳು ಸಂಸ್ಕಾರಕೇಂದ್ರಗಳಾಗಬೇಕೇ ವಿನಾ ವ್ಯಾಪಾರವಾಡುವ ಅಂಗಡಿಯಂತಿರಬಾರದು.

'ಎಷ್ಟೋ ಜನ ಪಾಲಕರು ತಮ್ಮ ಚಿಕ್ಕಮಕ್ಕಳನ್ನು ಶಿಶುಮಂದಿರಕ್ಕೆ ಕಳುಹಿಸುವ ವ್ರತ ತಿಂಗಳೂ ಅವಶ್ಯವಿದ್ದ ಹಣವನ್ನು ಕೊಟ್ಟರೆ ತಮ್ಮ ಕರ್ತವ್ಯವನ್ನು ನಿರ್ವಹಿಸಿದಂತಾಯಿತೆಂದು ತಿಳಿದಿದ್ದಾರೆ. ಇದೇ ತರದ ತಪ್ಪುಕಲ್ಪನೆಯ ಪಾತಳಿಯ ಮೇಲೆ ಶಿಕ್ಷಕಿಯೊಬ್ಬಳು ಅಜ್ಞಾನಿ ಇದ್ದರೆ, ಅತಿಯಾದ ಬಡತನದಿಂದ ಬಳಲಿ ಅಲ್ಪ ಸಂಬಳದ ಮೇಲೆ ಬಾಲಕಮಂದಿರದಲ್ಲಿ ಕಲಿಸಲು ಬಂದಿದ್ದರೆ, ಶಿಶುಮಂದಿರವು ಸಂಸ್ಕಾರಕೇಂದ್ರವಾಗುವುದು ತೀರ ವಿರಳ. ಈ ವಿಷಯದಲ್ಲಿ ಪಾಲಕರ ಸಹಕಾರ ಬೇಕು; ಸರಕಾರದ ಸಹಾಯ ಬೇಕು.

ಬಾಲಕಶಿಕ್ಷಣವು ದಿನದಿನಕ್ಕೆ ಬೆಳೆಯುವ ಈ ಕಾಲದಲ್ಲಿ ಶಿಶುಮಂದಿರದ ವಿಷಯಕ್ಕೆ ಯಾವ ತರದ ಆಕ್ಷೇಪವೂ ಬಾರದಂತೆ ಜಾಗರೂಕತೆ ವಹಿಸುವುದು ಪಾಲಕರ ಆದ್ಯ ಕರ್ತವ್ಯವಾಗಿದೆ!

ರಾಸಲೀಲೆ

ಶ್ರೀ. ಪಂಢರೀನಾಥಾಚಾರ್ಯ ಗಲಗಲಿ, ಗದುಗು

೧

ನಂದಭಾಗ್ಯ ನಂದನಕೆ ಯೋಗ್ಯ ವೃಂದಾವನಕ್ಕೆ ಬಂದ,
ಕಲ್ಪವೃಕ್ಷ-ಮಂದಾರಗಂಧ ತಂದಿಹುದು ಮರುತವ್ವಂದ;
ಅಮೃತಗಂಧಿ ಕಾಲಿಂದಿ ದಿವ್ಯದಿನವಿಂದು ಬಂದಿತೆಂದು—
ವೀಚಿಚೂಚು ದಡದಾಚೆ ಚಾಚಿ ಜಲವಾಚಿ ಸೂಚಿಸಂದು....

೨

ರಂಗನಂಗ ರಮಣೀಯ ರೂಪ ರಂಜಿಸಿರೆ ರಾಸರಂಗ—
ಗೋಪವಧೂಗೋಪುರದ ತಳದಿ ಹೊತ್ತಿದುದು ಸ್ಮರಸುರಂಗ;
ತಾಳಿಗರಿಯ ತಾಳದಲಿ ಗಾಳಿ ಬಾಜಿಸಿತು ವೃದುವೃದಂಗ—
ಮಂಗಮನೆ ನಿಸ್ಪಂದಯಮುನೆ ನುಡಿಸಿದಳು ಜಲತರಂಗ.

೩

ಹರಿಯು ಮಂಜುಮಧುಕುಂಜ ಕಂಡನಭಿಸಾರರಮಣಿ ವಿಧುರ,
ಅಧರ ಅದುರೆ ಒಣಬಿದಿರ ಪೊದರುಗಳು ಬಿದಿರೆ ನಾದಮಧುರ—
ಗಾನಗರುಡ ತನ-ತಾನಲಹರಿಗರಿಗೆದರೆ ಗಗನನದನಕ —
ಚಂದ್ರಚಿಗುರೆ ಕವಿ ನಿಮಿರಿಸಿಹುದು ಆಂದಿಂದ ಇಂದಿನನಕ.

೪

ಗಗನಗೋಡೆ ನಡು-ನಡುವೆ ತೊಗುಪಟ ತೇಲುವೋಡಗಳಿಗೆ,
ವಾತದೂತ ಕವಿಮಾತ ಹೇಳೆ ಸುಮ್ಮಿರಲು ಒಂದುಗಳಿಗೆ—
ಚರಣಚಪಳ ತಂಗಿರಣ ನಾದಸೊದೆ ಬಿಂಬಕುಂಭ ತುಂಬೆ
ಇರುಳುಹಾವು ಹೆಡೆಹರಳ ತೆರೆದು ಆಲಿಸಿತದೇನನೆಂಬೆ?

೫

ವೇಣುಗಾನರವಮುದ್ರೆಯೊತ್ತಿ ಗೋಕುಲದಿ ಗಾಳಿಗೊರಲು
ಗೋವು ಹಗ್ಗ—ಮುಗ್ಗಟ್ಟು ಮುರಿದುವಸ್ತ್ರಾಯು ಘಟಾ—ಪರಲು
ಕಂಡ ಗಂಡದಿರ ಕೆಂಡನೋಟದಲಿ ಸುಟ್ಟು ಬೊದಲ ನಲ್ಮೆ—
ರಾಸದೆಡೆಗೆ ಹಾರಿದರು ಗೋಪಗರತಿಯರು ಒಮ್ಮಿದೊಮ್ಮೆ.

೬

ನಂದಕಂದ ಗೊವಿಂದ ನಡುವೆ, ಸುತ್ತೆಲ್ಲ ಗೋಪಿವೃಂದ—
ಹಿಂದೆ ಮುಂದೆ ಮುಕ್ಕುಂದನಿಂದ ನೂರೆಂಟು ನಗುವನಂದ;
ಕೊಲುಸಖಿಯೆ ಪೂರ್ಣೇಂದುಮುಖಿಯೆ ಕೋಲಾ-ಕೋಲೆ
ಲೋಲೆ ಬಾಲೆ—
ಸುತ್ತ ಮುತ್ತು ಹರಿ ಗಾನಗತ್ತಿನಲಿ ಸುತ್ತೆ ರಾಸಲೀಲೆ!

೭

ಮಂದಪವನ ನಿಸ್ಪಂದ ಭುವನ ವೃಂದಾವನೋಪವನವು—
ಮರುಳು ಇರುಳು ನಿಸ್ತಂದ್ರ ಚಂದ್ರ ನಿಸ್ಪಂದ ನದಿಯು ಜಲವು;
ಮೂಕಬಳ್ಳಿ, ಮಲಗಿರುವ ಹಳ್ಳಿ ಟಂವ್‌ಗುಡದೆ ತೇನೆಪಕ್ಕಿ—
ಶ್ವಾಸಬಿಡದೆ ನೋಡುವುವು ರಾಸ ಅನಿಮೇಷಚಕ್ಷು ಚುಕ್ಕಿ!

೮

ಮಧುರವೇಣುರವಮುದಿರೆ ಕುಡಿಯೆ ಮದಕುದುರೆ ಒರ್ವಚದುರೆ.
ಹೆಣ್ಣುಹಾವ್ಗಳಾಡಿಸುವ ಪುಂಗಿ ರಸಗಂಗೆ ರಾಗಮಧುರೆ,
ಮತ್ತನವಿಲು ಮುತ್ತೈದೆ ಕುಣಿಸ ಮನೆಮುರುಕ
ಮುರಲಿಯೆಂದು
ಕಸಿದು ಹರಿಯ ತುಟಿತಟಕೆ ಮುತ್ತುಗಳ ಮಲರನೆಸೆದಳಂದು.

೯

ಮುರಲಿಯುಲಿಯೆ ತೆರೆ ತಾಲತೂಕ ಕೈಕಾಲು ಕೋಲು ಹಾಕಿ
ಬಾಲೆ ಲೋಲ ಅಲೆಮಾಲೆ ಲೀಲೆ ಹರಿದಾಡೆ ಹರಿಯು ಸೋಂಕಿ
ಹಾಡಿ ಪಾಡಿ ಕುಣಿದಾಡಿ ಕುಣಿಸಿ ಕೈಮಣಿಸಿ ಮೈಯತುಳುಕಿ
ತೂಗಿ ತಾಗಿ ತನುಬಾಗಿ ಬಳುಕಿ ಕೋಲಾಡುತಿಹರು ಪುಳುಕಿ.

೧೦

ಜಿಲುವುಚುಕ್ಕಿ-ಚಂದ್ರಮರುಕೂಡಿ ಬಾಂದೊರೆಯು ದಂಡೆಯಲ್ಲಿ
ಬಯಲು ಬಳ್ಳಿ-ಗಿಡ ಜೋಡಿ ಕೂಡಿ ನೋಡವನಿಖಂಡದಲ್ಲಿ—
ಶರಧಿತೆರೆಯು ತರುಣಿಯರು ಧೀರ ಸಂಧ್ಯಾಸಮಾರಂಭದು
ರಾಸಲೀಲೆಯನುಕರಿಸೆ ಯತ್ನಿಸುವರಾಡಿ ನೋಡಿ ಅಂದು.

ಖತೀಜಾ ಬೀಬಿ

(ಐತಿಹಾಸಿಕ ಸಣ್ಣಕತೆ)

ಶ್ರೀ. ತಂ. ಗು. ಬಬಲೇಶ್ವರ, ಬಿರಾದಾರ

ಇದೊಂದು ಇತಿಹಾಸದಲ್ಲಿ ಮೂಡಿರದ ಐತಿಹಾಸಿಕ ಘಟನೆಯ ಚಿತ್ರ. ಹಿಂಸಾಪ್ರಿಯ ವೀರನ ಪ್ರೀತಿಯೂ ಹಿಂಸೆಯಲ್ಲಿಯೇ ಹೇಗೆ ಕೊನೆಗಂಡಿತೆಂಬುದರ ದುರಂತಜೀವನವನ್ನು ಈ ಕಥೆಯಲ್ಲಿ ಕಂಡು ಕಳವಳಿಗೊಳ್ಳಬಹುದು !

ಖತೀಜಾಳಿಗೆ ಅಂದು ಹರ್ಷದ ಹಬ್ಬ. ತನ್ನ ದೊರೆಯು ಇಂದು ತನ್ನ ಅಂತಃಪುರಕ್ಕೆ ಬರುತ್ತಿದ್ದಾನೆ—ಬಹುದಿನಗಳ ನಂತರ! ಬಂದು ಹೋಗಿ ಈಗ ಎರಡು ತಿಂ[illegible] ಕಾಲ ಸಂದಿರಬೇಕು. ಎಷ್ಟೊಂದು ದೀರ್ಘ ಅವಧಿಯದು ಖತೀಜಾಳಿಗೆ! ಪಾಪ, ದೊರೆಯದೇನು ತಪ್ಪು! ಉಳಿದ ಅರುವತ್ತು ಜನ ಹೆಂಡಿರನ್ನೆಲ್ಲ ಸಂತಯಿಸಬೇಕು! ಅವರ ಯೋಗ-ಕ್ಷೇಮವನ್ನಾದರೂ ನೋಡಬೇಡವೆ? ಅದರಲ್ಲಿಯೂ ಮೇಲಿಂದಮೇಲೆ ಯುದ್ಧ! ಯುದ್ಧದಲ್ಲಿಯೆ ಬಹುಕಾಲ ಸವೆಯುತ್ತಿದೆ. ಇಂದು ಎಲ್ಲವನ್ನೂ ಬದಿಗಿರಿಸಿ ತನ್ನಲ್ಲಿಗೆ ಬರುತ್ತಿದ್ದಾನೆ. ಖತೀಜಾಳಿಗೆ ಎಂದಿಲ್ಲದ ಹೆಮ್ಮೆ! ಎಲ್ಲಿಲ್ಲದ ಉತ್ಸಾಹ! ಅಂದು ತಾನೇ ತನ್ನ ಶಯನಗೃಹವನ್ನಲಂಕರಿಸತೊಡಗಿದ್ದಾಳೆ. ಧೂಳಿನಿಂದ ಮ್ಲಾನವಾದ ನಿಲುವುಗನ್ನಡಿಗಳ ಮುಖ ತಿಕ್ಕಿ ನಗಿಸಿದಳು. ಭಾವಚಿತ್ರಗಳನ್ನೆಲ್ಲ ತನ್ನ ನಯವಾದ ಕರಗಳಿಂದ ಎತ್ತಿ ಹಿಡಿದು, ಮೃದುವಾದ ರೇಶ್ಮೆಯ ಕರವಸ್ತ್ರದಿಂದ ತೀಡಿ ಸಂತಯಿಸಿದಳು. ತೂಗುಮಂಚದ ಮೇಲೆ ಮೆತ್ತನೆಯ ಹಾಸಿಗೆಗಳನ್ನು ಅಂದವಾಗಿ ಇರಿಸಿದಳು. ಅವುಗಳ ಮೇಲೆ ಮಲ್ಲಿಗೆಯ ಹೂಗಳನ್ನು ಹರಹಿದಳು. ಮಧುರವಾದ ದ್ರಾಕ್ಷಾರಸವನ್ನು ಶುಭ್ರವಾದ ಗಾಜಿನ ಪಾತ್ರೆಯಲ್ಲಿ ಹಾಕಿ ಇರಿಸಿದಳು. ತಾಂಬೂಲದ ತಳಿಗೆಯಲ್ಲಿ ಸುವಾಸಿಕ ದ್ರವ್ಯಗಳನ್ನೆಲ್ಲ ಸಂಗ್ರಹಿಸಿದಳು. ಅತ್ತರಿನ ನೀರನ್ನು ಸುತ್ತಲೂ ಚಿಮುಕಿಸಿದಳು. ಏನು ಮಾಡಿದರೂ ಎಷ್ಟು ಮಾಡಿದರೂ ಅಕೆಗೆ ತೃಪ್ತಿಯಿಲ್ಲ—ಬೇಸರವಿಲ್ಲ. ನಿಲುವುಗನ್ನಡಿಯ ಎದುರು ನಿಂತು ತನ್ನ ಅಂಗಸೌಂದರ್ಯವನ್ನು ನೋಡಿಕೊಂಡಳು. ಕೂದಲನ್ನು ನೇವರಿಸಿಕೊಂಡಳು. ಕೊರಳಮಣಿಗಳನ್ನು ಸರಿಪಡಿಸಿಕೊಂಡಳು. ಹೊರಗೆ ಯಾರದೋ ಹೆಜ್ಜೆಯ ಸದ್ದಾದಂತೆ ಎನಿಸಿತು. ಧಾವಿಸಿ ಬಾಗಿಲೆಡೆ ಓಡಿಬಂದಳು. ಬಾಗಿಲಿಗೆ ಹಾಕಿದ ತೆಳ್ಳನೆಯ ಪರದೆಯಲ್ಲಿಯೆ ದಾಸಿ ಫಾತಿಮಾ ಬರುವುದು ಕಾಣಿಸಿತು. ತನ್ನ ಆತುರಕ್ಕೆ ತಾನೇ ನಾಚಿಕೊಂಡು ಒಳಗೆ ನಡೆದಳು. ಫಾತಿಮಾ ನಿಂತು ಸುತ್ತಲೂ ನೋಡಿದಳು. ತಾನೇ ಒಡತಿಯೇನೋ ಎನ್ನಿಸಿತವಳಿಗೆ. ಇದು ಅವಳಿಗೆ ಅಚ್ಚರಿ ಎನಿಸಲಿಲ್ಲ. 'ದೊರೆ ಬರುವಾಗಲೆಲ್ಲ ಈಕೆ ಹೀಗೆಯೇ' ಎಂದು ಒಳಗೇ ನಸುನಕ್ಕಳು. ತಾನು ಮಾಡಬೇಕೆಂದು ಬಂದ ಕಾರ್ಯವನ್ನೆಲ್ಲ ಒಡತಿಯೇ ಪೂರೈಸಿದುದನ್ನು ಕಂಡು ಫಾತಿಮಾ, ಮೆಲ್ಲನೆ ಹೊರಳಿ ನಡೆದಳು. ಅದುವರೆಗೆ ತಡೆದು ನಿಂತ ಖತೀಜಾ "ಯಾಕೆ, ನಿನ್ನ ಕಾರ್ಯದಲ್ಲಿ ನಾನು ಕೈಹಾಕಿದೆನೆಂದು ಸಿಟ್ಟಾದೆಯೆ?" ಎಂದಳು. "ನಿಮ್ಮ ಕಾರ್ಯಗಳನ್ನೆಲ್ಲ ನೀವೆ ಮಾಡುತ್ತಿರುವಾಗ, ನನ್ನ ದೇಹದ ಕೆಲಸವನ್ನಾ ಇಲ್ಲಿ? ನಾಳೆಯಿಂದ ನಾನು ಬರುವುದೇ ಇಲ್ಲ" ಫಾತಿಮಾ ಹುಸಿಮುನಿಸನ್ನು ತಂದುಕೊಂಡು ನುಡಿದಳು. "ಎಂದಾದರೊಂದು ದಿನ ನಿನ್ನ ಕೆಲಸವನ್ನು ನಾನು ಬಿಡಿಸಬೇಡವೆ? ನಾಳೆಯಿಂದ ನಿನಗೆ ಇದ್ದೇ ಇದೆಯಲ್ಲ!" ಸಂತಯಿಸುವ ದನಿಯಲ್ಲಿ ಖತೀಜಾ ನುಡಿದಳು. "ಅಹುದಮ್ಮಾ.... ಮರೆತಿದ್ದೆ ಇಂದು...." ಫಾತಿಮಾ ನಗುತ್ತ ಖತೀಜಾಳ ಮುಖ ನೋಡಿದಳು. ಖತೀಜಾ ಅವಳ ಕೈಹಿಡಿದು "ಇರಲಿ ಬಿಡೇ, ನಿನ್ನ ಹೆರಟಿಗೆ ಹಾದಿ ಸಿಕ್ಕಿತೆ?" ಎನ್ನುತ್ತಿರುವಾಗಲೇ ಹೊಂಗೆ ಸದ್ದಾಯಿತು. ಖತೀಜಾ ಹೊರಳಿ ನೋಡಿದಳು, ತನ್ನ ದೊರೆ! ಅಫಝುಲ್-ಖಾನ್! ಫಾತಿಮಾ ಮೆಲ್ಲನೆ ಅಲ್ಲಿಂದ ಸರಿದುಕೊಂಡಳು.

ದೊರೆ ಅಫಜುಲ್‌ಖಾನರು ಬಂದರು. ಖತೀಜಾ ಅವರನ್ನು ಆದರದಿಂದ ಬರಮಾಡಿಕೊಂಡಳು. ಆದರೆ ಅವರ ಮುಖದ ಮೇಲೆ ತೇಲುತ್ತಿದ್ದ ಅಶಾಂತಿಯನ್ನು ಗಮನಿಸಿದಾಗ, ಅವಳ ಮುಖದ ಬಣ್ಣ ಬದಲಿಸಿತು. ಮೆಲ್ಲನೆ ದ್ರಾಕ್ಷಾರಸದ ಗ್ಲಾಸನ್ನು ಅವರ ಕೈಗಿಟ್ಟು, ಮುಖ ನೋಡುತ್ತ ನಿಂತುಕೊಂಡಳು. ಖಾನರು ರಸವನ್ನು ಹೀರುತ್ತ "ಕುಳಿತುಕೋ ಖತೀಜಾ!" ಎಂದು ಅವಳನ್ನು ಕೈಹಿಡಿದು ಬದಿಯಲ್ಲಿ ಕುಳ್ಳಿರಿಸಿಕೊಂಡರು. "ಯಾಕೆ ದೊರೆ, ವೈಯಲ್ಲಿ ಸ್ವಸ್ಥವಿಲ್ಲವೆ?" ಖತೀಜಾ ಮೃದುವಾಗಿ ನುಡಿದಳು. "ಮೈಗಲ್ಲ, ಮೆದುಳಿಗೆ ಸ್ವಾಸ್ಥ್ಯವಿಲ್ಲ. ಸರದಾರರಾದವರ ಹಣೆಯಬರಹವೇ ಹೀಗೆ ಖತೀಜಾ! ಬಾದ್

ಶಹರು ಕೂಗಿದಾಗ ಕತ್ತಿ ಹಿರಿದೇ ನಿಂತಿರಬೇಕು. ಅವರ ರಕ್ಷಣೆಗಾಗಿ. ಅಭ್ಯುದಯಕ್ಕಾಗಿ ಹಗಲುರಾತ್ರಿ ವಿಚಾರಿಸಬೇಕು—ಹೋರಾಡಬೇಕು."

ಮತ್ತೇನೋ ವಿಶೇಷಶ್ರಮಂಗ ಒದಗಿದೆ ಎಂದು ಖತೀಜಾಳಿಗೆ ಹೊಳೆಯದಿರಲಿಲ್ಲ. ಆಂತೆಯೆ ಅವಳು ಇಲ್ಲದ ಮುನಿಸುತಂದುಕೊಂಡು ನುಡಿದಳು:

"ಬಾದಶಹರ ಹಿತಕಾರ್ಯದಲ್ಲಿ ನನ್ನ ಹೃದಯದ ವೇದನೆಯು ಪರವೆಯಾದರೂ ನಿಮಗೆಲ್ಲಿರುವುದು? ಯಾವಾಗಲೂ ಯುದ್ಧ—ಯುದ್ಧ! ನೀವಿಲ್ಲಿ ಇಲ್ಲದಾಗ ನನ್ನ ಹೃದಯದ ತುಮುಲಯುದ್ಧದ ಬೇಗೆ ನಿಮಗೆ ಹೇಗೆ ತಾಗೀತು!"

ಖಾನರು ವಿಷಾದದ ನಗೆಯೊಂದನ್ನು ನಕ್ಕು "ನೋಡು ಖತೀಜಾ, ನಿನ್ನನ್ನು ಸಮಾಧಾನಪಡಿಸಿ,ನಿನ್ನೊಡನೆ ವಿನೋದವಾಡುವ ಸ್ಥಿತಿಯಲ್ಲಿ ನನ್ನ ಮನಸ್ಸಿಲ್ಲ; ಯೋಚಿಸಬೇಕಾಗಿದೆ. ದಿಳಗಿನ ವರೆಗೂ ಯೋಚಿಸಬೇಕಾಗಿದೆ—ಮತ್ತೇನಿಲ್ಲ ನಾಳೆಯ ಯುದ್ಧದ ಯೋಚನೆ!" ಖತೀಜಾಳ ಮುಖ ಕಪ್ಪಿಟ್ಟಿತು. ಹಣೆ ಗಂಟಕ್ಕಿಕೊಂಡೇ ಕೇಳಿದಳು:

"ಮತ್ತಾವ ಯುದ್ಧ?"

"ಆ ಮರಾಠರ ಹಾವಳಿ ಹೆಚ್ಚಾಗಿದೆ. ಅವರನ್ನು ತಡೆಯುವವರೇ ಇಲ್ಲವಾಗಿದ್ದಾರೆ. ಇನ್ನೆರಡು ದಿನಗಳಲ್ಲಿ, ಅವರನ್ನು ದಂಡಿಸಲು ನಾನು ಹೋಗಲೇಬೇಕೆಂದು ಬಾದಶಹರ ಆಜ್ಞೆಯಾಗಿದೆ."

"ಏಕೆ? ಈ ರಾಜ್ಯದಲ್ಲಿ ಉಳಿದ ಸರದಾರರೆಲ್ಲ ಸತ್ತರೆ? ಇನ್ನಾರನ್ನಾದರೂ ಕಳಿಸಿರೆಂದು ನೀವು ಹೇಳಬೇಕಿತ್ತು; ನಿಮ್ಮ ಪ್ರೀತಿಯ ಬಾದಶಹರು ಇಷ್ಟು ಕೂಡ ನಡೆಸಿಕೊಡಲಾರರೆ?"

"ಮಾತಾಡಿ ಪ್ರಯೋಜನವಿಲ್ಲ ಖತೀಜಾ! ಎಲ್ಲ ಇತ್ಯರ್ಥವಾಗಿದೆ. ನಾನು ಹೋಗಲೇ ಬೇಕು."

ಖತೀಜಾ ಕೆಲಕಾಲ ಮಂಕಾಗಿ ಕುಳಿತುಕೊಂಡಳು....ನಿರುಪಾಯಳಾಗಿ.

"ಅದೇನೇ ಇರಲಿ, ಯುದ್ಧಕ್ಕೆ ಹೋಗಲು ಇನ್ನೂ ಎರಡು ದಿನ ಅವಕಾಶವಿದೆಯಲ್ಲ; ಅದಕ್ಕೇಕಿಷ್ಟು ಯೋಚಿಸಬೇಕು? ಇದ್ದೆರಡು ದಿನಗಳನ್ನಾದರೂ ಹಾಯಾಗಿ ಕಳೆಯಬಾರದೆ?"

"ಖತೀಜಾ, ನೀನು ಭಾವಿಸಿದಷ್ಟು ಸಾಮಾನ್ಯ ಯುದ್ಧವೆಲ್ಲ ಇದು! ಆ ಮರಾಠರ ಮುಖಂಡ ಶಿವಾಜಿಯು ಸಾಮಾನ್ಯನಲ್ಲ. ಅವನೆಂದರೆ ನಮ್ಮ ಸರದಾರರೆಲ್ಲ ನಡುಗುತ್ತಾರೆ. ಎದುರು ನಿಂತು ಯುದ್ಧಮಾಡುತ್ತಿದ್ದರೆ ಹೆದರಬೇಕಿರಲಿಲ್ಲ. ನಾನಾಬಗೆಯ ಕುತಂತ್ರಗಳಿಂದ ಅವನು ನಮ್ಮವರನ್ನೆಲ್ಲ ಮಣ್ಣುಮುಕ್ಕಿಸಿದ್ದಾನೆ. ಅದಕ್ಕಾಗಿ ಯೋಚಿಸಬೇಕಾಗಿದೆ."

"ಯೋಚಿಸಿ, ನಿಮ್ಮ ಯೋಚನೆಗೆ ನಾನೇಕೆ ಅಡ್ಡಬರಬೇಕು. ನಾನೂ ಯೋಚಿಸುತ್ತಲೇ ಬಿದ್ದುಕೊಳ್ಳುತ್ತೇನೆ." ಎಂದು ಸಿಡುಕಿನಿಂದ ನುಡಿಯುತ್ತ, ಎದ್ದುಹೋಗಿ ಎದುರಿನ ಮಂಚದ ಮೇಲೆ ಉರುಳಿ ಮುಸುಕೆಳೆದುಕೊಂಡಳು. ಖಾನರು ಕ್ಷಣಕಾಲ ಮೌನ.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ಶೇಡಿಯೊ, ಗ್ರಾಮೊಫೋನ್ ಮಾರಾಟಮಾಡುವವರು, ರಿಸೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಗಿ

ತಾಳಿದರು. ಅವರಿಗೆ ಏನು ಮಾಡಬೇಕೆಂಬುದೇ ತಿಳಿಯಲಿಲ್ಲ. ಸ್ವಲ್ಪ ಕಾಲ ಹಾಗೆಯೇ ಹೋಯಿತು; ಖತೀಜಾಳ ಬಿಕ್ಕು ಅವರನ್ನು ಎಚ್ಚರಿಸಿತು. ಎದ್ದುಹೋಗಿ ಅವಳ ಹೊದಿಕೆಯನ್ನೆಳೆದು, ನೀನೇನು ಯೋಚಿಸುತ್ತೀ ಖತೀಜಾ?" ಎಂದರು.

"ನನ್ನ ಯೋಚನೆ ನಿಮಗೇನು? ನಾಳೆಯ ಯುದ್ಧದ ಯೋಚನೆಯೆ ನಿಮಗೆ ಸಾಕಷ್ಟಿದೆ!" ಬಿಕ್ಕುತ್ತಲೇ ಖತೀಜಾ ನುಡಿದಳು. ಖಾನರು ಗಡುಸಾಗಿ ನಕ್ಕು, ತಮ್ಮ ಬಲವಾದ ಬಾಹುಗಳಿಂದ ಖತೀಜಾಳನ್ನಪ್ಪಿಕೊಂಡರು. ಅವಳ ನೊಂದ ಮುಖದಲ್ಲಿ ಮಂದಹಾಸ ಮಿನುಗಿತು.

× × × ×

"ಅರೆ.....ಹು....ಹು....ಹಾಯ್.... ಹಾಯ್.....ಖುದಾ" ಎಂಬ ನರಳಾಟದ ಸದ್ದಿಗೆ ಖತೀಜಾಳಿಗೆ ಎಚ್ಚರವಾಯಿತು. ಎದ್ದು ಕುಳಿತು ನೋಡಿದಳು. ಖಾನರು ಒಂದೇಸವನೆ ಕನವರಿಸುತ್ತಿದ್ದರು: 'ದೊರೆ, ದೊರೆ!' ಎಂದು, ಗಾಬರಿಗೊಂಡ ಖತೀಜಾ ಅವರ ಮೈ ತಿಳುಕಿದಳು. ಖಾನರು ಕ್ಷಣಕಾಲ ಸ್ತಬ್ಧರಾಗಿ ಬಿದ್ದುಕೊಂಡರು. ಖತೀಜಾ "ಫಾತಿಮಾ? ಫಾತಿಮಾ?" ಎಂದು ಕೂಗಿದಳು. ಫಾತಿಮಾ ಹೊರಕೋಣೆಯಿಂದ, ಕಣ್ಣುಜ್ಜುತ್ತ ಲಗುಬಗೆಯಿಂದ ಬಂದು "ಏನು ತಾಯಿ?" ಎಂದಳು. "ದೊರೆಗಳಿಗೆ ಏನಾಗಿದೆಯೋ ತಿಳಿಯದು. ಬೇಗನೇ ಹಕೀಮರನ್ನು ಕರೆತರಲು ಹೇಳು!" ಎನ್ನುತ್ತಿರುವಾಗಲೆ ಖಾನರು ಕಣ್ದೆರೆದು ಸುತ್ತಲೂ ನೋಡಿ ನಿಡಿದಾದ ಉಸಿರೆಳೆದರು. ಅವರ ಬಲಾಢ್ಯಕಾಯ ಒಂದು ಕ್ಷಣ ಕಂಪಿಸಿತು. ಮುಖದಲ್ಲಿಳಿದ ಬೆವರನ್ನೊರಸುತ್ತ ಎದ್ದು ಕುಳಿತರು.

"ಏನು ದೊರೆ, ಏನಾಯಿತು?" ಸಂತಯಿಸುವ ದನಿಯಲ್ಲಿ ಖತೀಜಾ ಕೇಳಿದಳು.

"ಹಾಳುಕನಸು!"

"ಕನಸಿನಲ್ಲಿ ಇಷ್ಟೊಂದು ಹೆದರಿದ್ದಿರಾ?"

ಮುಖ ಕಂಗೆಟ್ಟಿದೆ. ಮಾತನಾಡಲು ಕೂಡ ಜೀನ್ನಾಗಿ ಬಾರದಾಗಿದೆ.

"ಏನೇ ಫಾತಿಮಾ ಹೀಗೇಕೆ?" ಖತೀಜಾ ಅವಳ ಭುಜ ಅಲುಗಿಸಿ ಕೇಳಿದಳು.

"ಅಮ್ಮಾ ಏನು ಹೇಳಲಿ! ನೀವು ಈಗ ಇಲ್ಲಿಂದ ಹೊರಡಬೇಕು. ಕ್ಷಣಕಾಲ ಕೂಡ ನಿಲ್ಲಕೂಡದು!" ಫಾತಿಮಾ ಕಂಪಿಸುತ್ತಲೇ ನುಡಿದಳು.

"ಏನದು ಸಮಾಚಾರ? ಹೀಗೇಕೆ ಹುಚ್ಚಿಯ ಹಾಗೆ ಮಾಡುವೆ?" ಖತೀಜಾ ಸಿಡುಕಿನಿಂದ ಕೇಳಿದಳು.

"ತಂಗೀ, ಖತೀಜಾ ಕೊಲೆ!..ಕೊಲೆ! ಇಂದು ಅರುವತ್ತೊಂದು ಜನ ಹೆಂಡಿರೆಲ್ಲರ ಕೊಲೆ! ದೊರೆಯ ಆಜ್ಞೆ!! ಹೂಂ ನೀವಿಲ್ಲಿ ನಿಲ್ಲಕೂಡದು!...."

ಬೆಂಕಿಯಲ್ಲಿ ಬಿದ್ದ ಹೂವಿನಂತಾದಳು ಖತೀಜಾ. 'ಹಾ' ಎಂದು ನೆಲಕ್ಕುರುಳಿದಳು. ಫಾತಿಮಾ ಅವಳನ್ನು ತನ್ನ ತೊಡೆಯ ಮೇಲೆ ಹಾಕಿಕೊಂಡು ಗಾಳಿಬೀಸತೊಡಗಿದಳು. ಕೆಲವು ವೇಳೆಯ ನಂತರ ಖತೀಜಾಳಿಗೆ ಎಚ್ಚರಾಗಿ ಸುತ್ತಲೂ ನೋಡಿದಳು. ಫಾತಿಮಾಳನ್ನು ಕಂಡಾಗ, ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡಳು.

"ಖತೀಜಾ, ಅವಕಾಶವಿಲ್ಲ ತಾಯೀ! ನಾನೀಗಲೇ ನನ್ನ ಅಣ್ಣನಿಗೆ ಹೇಳಿ ಬಂದಿದ್ದೇನೆ. ಅವನು ಇಷ್ಟರಲ್ಲಿಯೆ ಕುದುರೆಯೊಡನೆ ಇಲ್ಲಿಗೆ ಬರುವನು. ನೀನು ಕುದುರೆಯ ವೇಲೆ ಕುಳಿತು ಪಾರಾಗಿಬಿಡು. ಕೋಟೆ ದಾಟಿಸಲು ನನ್ನಣ್ಣ ಸೈಯದ್‌ಖಾನ್ ನೆರವಾಗುತ್ತಾನೆ. ಅವನಿಗೆ ನಾನೆಲ್ಲ ಹೇಳಿದ್ದೇನೆ. ಏಳು ತಂಗೀ.. ಖತೀಜಾ!..." ಖತೀಜಾ ಗದಗದ ನಡಗುತ್ತಲೇ ಎದ್ದುನಿಂತಳು.

"ಏನು ಕಾರಣ ಫಾತೀಮಾ?" ಎಂದು ಪ್ರಯಾಸದಿಂದ ಕೇಳಿದಳು.

'ಕಾರಣವೇತರದಮ್ಮಾ, ಅವರಿಗೆ ನಾಳೆಯ ಯುದ್ಧದ ಯೋಚನೆ ತಲೆ ಕೆಡಿಸಿದೆಯಂತೆ. 'ತಾನು ಸತ್ತರೆ ನೀವೆಲ್ಲ ಎರಡನೆಯವರ ಪಾಲಾಗುವಿರಲ್ಲ!' ಎಂದು ಮೊದಲೇ ನಿಮ್ಮನ್ನು ತೀರಿಸಿ ಅನಂತರ ಯುದ್ಧಕ್ಕೆ ಹೋಗುವರಂತೆ! ಈಗಾಗಲೇ ಆಜ್ಞೆಯಾಗಿದೆ. ಇನ್ನು ಅರ್ಧಗಂಟೆಯೊಳಗಾಗಿ ಎಲ್ಲರ ತಲೆಗಳು ಹಾರುವುವು ಎನ್ನುತ್ತಿರುವಾಗಲೇ ಹೊರಗೆ ಹೆಜ್ಜೆಯ ಸದ್ದಾದಂತಾಯಿತು. ಫಾತಿಮಾ ಮೆಲ್ಲನೆ ಜೋಗಿ ನೋಡಿದಳು ಅಣ್ಣ ಸೈಯದ್‌ಖಾನ್ "ಹೂಂ ಬೇಗ ಬನ್ನಿರಿ, ಎಲ್ಲವೂ ಸಿದ್ಧವಾಗಿದೆ. ಇದೋ, ಈ ಸೈನಿಕರ ಉಡುಪು ತೊಡಿಸಿರಿ." ಎಂದು ಕೈಯೊಳಗಿನ ಬಟ್ಟೆಗಳನ್ನು ಫಾತಿಮಾಗೆ ಕೊಟ್ಟನು. ಫಾತಿಮಾ ಒಳಗೆ ಹೋಗಿ, ಆ ಬಟ್ಟೆಗಳನ್ನೆಲ್ಲ ಖತೀಜಾಳಿಗೆ ತೊಡಿಸತೊಡಗಿದಳು. ಖತೀಜಾ ಗೊಂಬೆಯಂತೆ ನಿಂತುಕೊಂಡಿದ್ದಳು. ಅವಳಿಗೆ ಏನೂ ತೋಚದಾಗಿತ್ತು. ಫಾತಿಮಾ ಅವಳನ್ನು ಎಳೆದುಕೊಂಡು ಹೊರಗೆ ಬಂದಳು. ಕಂಗೆಟ್ಟ ಖತೀಜಾ ಸೈಯದ ಖಾನನನ್ನು ಅನುಸರಿಸಿದಳು. ಒಂದು ಮೂಲೆಯಲ್ಲಿ ಎರಡು ಕುದುರೆಗಳು ಸಿದ್ಧವಾಗಿ ನಿಂತಿದ್ದುವು. ಸೈಯದ್‌ಖಾನನ ಹೇಳಿಕೆಯಂತೆ ಆಕೆ ಕುದುರೆ ಏರಿದಳು. ಸೈಯದ್‌ಖಾನನು ಬೇರೊಂದು ಕುದುರೆಯೇರಿ ಮುಂದಾಗಿ ನಡೆದನು.

* * * * *

ವಿಜಯಪುರದ ಪಶ್ಚಿಮ ದಿಕ್ಕಿನ ರುದ್ರಭೂಮಿಯಲ್ಲಿ ಕೋಲಾಹಲವೆದ್ದಿತು. ಹೆಂಗುಸರ ಆಕ್ರಂದನ-ಚೀತ್ಕಾರ ಬೆಳಗಿನ ಪ್ರಶಾಂತ ವಾತಾವರಣವನ್ನು ಕಲಕಿದ್ದಿತು. ಅರುವತ್ತು ಜನ ಹೆಂಡಿರನ್ನೆಲ್ಲ ಸಾಲಾಗಿ ನಿಲ್ಲಿಸಿದ್ದರು. ಕತ್ತಿಗಳು ಝಳಪಿಸಿದುವು. ತಲೆಗಳು ಒಂದೊಂದಾಗಿ ಕೆಳಗುರುಳ ತೊಡಗಿದುವು. ಅಫಝುಲ್‌ಖಾನರು ನಿಂತು ನೋಡುತ್ತಿದ್ದರು. ಕೆಲವು ಜನ ಸ್ತ್ರೀಯರು ಮೌನವಾಗಿದ್ದರು. ಅವರ ಕಣ್ಣೀರು ಏನನ್ನೋ ಹೇಳುವಂತಿತ್ತು. ಮತ್ತೆ ಕೆಲವರು ಯೋಚಿಸುತ್ತಿದ್ದರು— ಚೀರುತ್ತಿದ್ದರು— ಶಪಿಸುತ್ತಿದ್ದರು. ಈ ರುದ್ರ-ಭಯಂಕರ ನೋಟವನ್ನು ನೋಡಿ, ಖಾನರ ಕಲ್ಲೆದೆ ಕೂಡ ಕರಗಿತು. ಅವರ ತಲೆ ಗಿರ್ರನೆ ತಿರುಗಿದಂತಾಯಿತು. ಗಟ್ಟಿಯಾಗಿ ಕಣ್ಣು-ಮುಚ್ಚಿಕೊಂಡ.

"ಖತೀಜಾ ಬೇಗಮ್ ಎಲ್ಲಿಯೂ ಸಿಗಲಿಲ್ಲ ಸರಕಾರ!" ಎದುರು ನಿಂತ ಯೋಧರಿಬ್ಬರು ಅರಿಕೆ ಮಾಡಿಕೊಂಡರು. ಖಾನರು ಕಣ್ಬೆರೆದು ನೋಡಿದರು; ಉತ್ತರಿಸಲಿಲ್ಲ. ಕ್ಷಣಕಾಲದಲ್ಲಿಯೆ ರುದ್ರ-ಭೂಮಿಯಲ್ಲಿ ಎಲ್ಲರ ರುಂಡಗಳು ಉರುಳಿದುವು. ಶಾಂತಿ ನೆಲಸಿತು. ಖಾನರು ಕುದುರೆಯೇರಿ ಹೊರಡಬೇಕೆನ್ನುವಾಗಲೆ, "ಏನು ನಡೆಯಿಸಿದ್ದೀ ಖಾನ್?" ಎಂಬ ಗಡುಸು ದನಿ ಕೇಳಿ, ಅತ್ತ ಹೊರಳಿ ನೋಡಿದರು. ಎದುರಿಗೆ ಖಾಜಿಗಳು ನಿಂತುಕೊಂಡಿದ್ದರು. ಖಾನರು ಒಮ್ಮೆಲೆ ಕುದುರೆಯಿಂದ ಕೆಳಗಿಳಿದು ಮುಂದೆ ಹೋಗಿ, ಖಾಜಿಗಳ ಪಾದಗಳ ಮೇಲೆ ಹಣೆಯಿಟ್ಟರು. ಖಾಜಿಗಳು ಸರಿದು ನಿಂತು, ಹೇಳಿದರು:

"ಪಾಪಿ! ಸ್ತ್ರೀಹತ್ಯ! ಎಂತಹ ಅನ್ಯಾಯ! ನಿನ್ನ ಪಾಪದ ಪಾತ್ರೆ ಪೂರ್ತಿಯಾಯಿತು. ನಾಳೆ ಅಲ್ಲಾಸು ನಿನಗಾಗಿ ಯಾವ ಶಿಕ್ಷೆ ಕೊಡಲು ಕಾದುನಿಂತಿರುವನೋ!" ಎನ್ನುತ್ತಲೇ ಅವರು ಅಲ್ಲಿಂದ ಹೊರಟುಹೋಗಿ ಬಿಟ್ಟರು. ಅಫಝುಲ್‌ಖಾನರು ಅಪ್ರತಿಭರಾದರು. ಅವರಲ್ಲುಳಿದ ಅಲ್ಪ ಸ್ಥೈರ್ಯ ಕೂಡ ಅಲುಗಿತು. 'ನಾಳೆ ಅಲ್ಲಾಸು ನಿನಗಾಗಿ ಯಾವ ಶಿಕ್ಷೆ ಕೊಡಲು ಕಾದು ನಿಂತಿರುವನೋ!' ಖಾಜಿಯವರ ಮಾತು ಖಾನರ ಹೃನ್ಮಂದಿರದಲ್ಲಿ ಪ್ರತಿಧ್ವನಿಯನ್ನೆಬ್ಬಿಸಿತು. ಹುಚ್ಚು ಹಿಡಿಸಿತು.— ಕುದುರೆಯೇರಿದವನೆ ನೇರವಾಗಿ ಖತೀಜಾಳ ಮನೆಯತ್ತ ಸಾಗಿದರು. ಮನೆಯಲ್ಲಿ ಯಾರೂ ಕಾಣಲಿಲ್ಲ. "ಫಾತಿಮಾ?" ಎಂದು ಕೂಗಿದರು. ಫಾತಿಮಾ ಕಂಪಿಸುತ್ತ ಓಡಿ ಮುಂದೆ ನಿಂತಳು.

"ಖತೀಜಾ ಎಲ್ಲಿ?"

"ನಾನು ಮನೆಯಿಂದ ಬಂದಾಗ, ಅವಳಿಲ್ಲಿ ಇರಲೇ ಇಲ್ಲ ಖಾವಿಂದ."

"ನಿಜ ಹೇಳು ಫಾತಿಮಾ, ನಿನ್ನ ಸಲಹೆ ಇಲ್ಲದೆ ಈ ಕಾರ್ಯ ನಡೆದಿರಲಾರದು!"

ಫಾತಿಮಾ ತಣ್ಣಗಾದಳು. ಅವಳಿಗೆ ಮುಂದೇನು ಮಾತನಾಡಬೇಕೆಂಬುದೇ ತಿಳಿಯದಾಯಿತು.

"ಫಾತೀಮಾ, ಖತೀಜಾಳನ್ನು ಕೊಲ್ಲಲಾರೆ; ಅವಳನ್ನು ಕಳಿಸಬೇಕಾಗಿದೆ. ನಿಜ ಹೇಳು, ಎಲ್ಲಿದ್ದಾಳೆ?"

ಫಾತೀಮಾ ಚಕಿತಳಾಗಿ "ನಿಜವೇ ಪ್ರಭು?" ಎಂದಳು.

"ಅಲ್ಲಾನ ಆಣೆ ಮಾಡಿ ಹೇಳುತ್ತೇನೆ;ಅವಳನ್ನು ಕೊಲ್ಲಲಾರೆ!"

ಫಾತಿಮಾಗೆ ಆನಂದೋದ್ರೇಕದಿಂದ ಕಂಗಳು ತುಂಬಿ ಬಂದುವು.

"ನನ್ನ ಅಣ್ಣ ಸೈಯದ್ ಖಾನನೊಡನೆ ಸೈನಿಕನ ವೇಷ ಧರಿಸಿ ಕುದುರೆಯ ಸವಾರಳಾಗಿ ಹೋದಳು. ಊರ ನೈರುತ್ಯ ದಿಕ್ಕಿನ ದಾರಿ ಹಿಡಿದು ಸಾಗಿದರೆ, ಇಷ್ಟರಲ್ಲಿಯೇ ನಿಮಗೆ ಸಿಕ್ಕರೂ....." ಫಾತಿಮಾ ಮಾತು ಮುಗಿಸುವಷ್ಟರಲ್ಲಿಯೆ ಖಾನರ ಕುದುರೆ ಅತ್ತ ಹೊರಳಿತ್ತು. ಅಂಗರಕ್ಷಕರಿಬ್ಬರ ಕುದುರೆಗಳೂ ಖಾನರ ಕುದುರೆಯನ್ನನುಸರಿಸಿದುವು.

ಸೈಯದ್ ಖಾನನೊಡನೆ ಕೋಟೆ ದಾಟಿದ ಖತೀಜಾಳನ್ನು ನೂರಾರು ಯೋಚನೆಗಳು ಮುತ್ತಿಕೊಂಡುವು. 'ಜೊರೆಗಳ ಈ ಆಜ್ಞೆ ನಿಜವಿರಬಹುದೇ?' ಎಂಬ ವಿಚಾರ ಅವಳ ಭಗ್ನಹೃದಯದಲ್ಲಿ ಜ್ವಾಲೆಗಳನ್ನೆಬ್ಬಿಸುತ್ತಿತ್ತು. 'ಇದರಲ್ಲೇನಾದರೂ ಮೋಸವಿರಬಹುದೇ?' ಫಾತಿಮಾ ಆಂತವಳನ್ನು ನನ್ನ ಹೃದಯದ ಬೆಳಕು ಅಕೆ. ಅದರೆ ಅವರು ಒಮ್ಮೆಲೆ ಇಂತ[illegible]ಜ್ಞೆಯನ್ನೇಕೆ ಇತ್ತರು?.... ಏಕೆ?' ಅವಳ ವಿಚಾರಧಾರೆ ಸಾಗಿಯೇ ಇತ್ತು. ಕುದುರೆ ಬಹು ಮೆಲ್ಲನೇ ಸಾಗಿದ್ದಿತು. "ಅವಸರ ಮಾಡಿರಿ ಬಾಯೀಸಾಹೇಬ್?" ಎಂದು ಸೈಯದ್ ಖಾನನು ಮೆಲ್ಲನೇ ಹೇಳಿದನು. ಆದರೂ ಅವಳ ಭಾರವಾದ ಹೃದಯದಂತೆ ಕುದುರೆಯೂ ಭಾರವಾದ ಹೆಜ್ಜೆಗಳನ್ನಿಡುತ್ತ ಸಾಗಿತ್ತು. ಆಕ್ರೋಶ-ಚೀರಾಟಗಳ ಸದ್ದು ಮುಂಜಾವಿನ ಶಂಗಾಳಿಯೊಡನೆ ತೇಲಿಬರುತಿತ್ತು. ಸೈಯದ್ ಖಾನನು ಕುದುರೆಯ ಕಡಿವಾಣವನ್ನು ಜಗ್ಗಿ ಒಡಿಮ ಏನನ್ನೂ ಕೇಳಿದನು: "ಕೇಳಿದಿರಾ ಬೇಗಮ್ ಸಾಹೇಬ್?" ಖತೀಜಾ ಗಮಗಮ ನಡುಗಿದಳು. ಅವಳಿಗೆ ಮಾತನಾಡುವಷ್ಟು ಶಕ್ತಿ ಕೂಡ ಉಳಿದಿರಲಿಲ್ಲ. ಮೆಲ್ಲನೆ ಕುದುರೆಯ ಮೇಲೆಯೇ ಬಿದ್ದುಕೊಂಡಳು.

"ಬಾಯೀಸಾಹೇಬ್, ಕೊಲೆ ನಡೆದಿದೆ; ನಾವುತಡಮಾಡಿ ಕೂಡದು. ಸೈನಿಕರು ನಮ್ಮನ್ನನುಸರಿಸಬಹುದು. ಧೈರ್ಯ ತಂದುಕೊಂಡು ಕುದುರೆಯನ್ನೋಡಿಸಿ!"

ಖತೀಜಾಳಿಗೆ ಧೈರ್ಯವಿರಲಿಲ್ಲ. ಕುದುರೆಯೂ ಓಡಲಿಲ್ಲ. ಸೈಯದ್ ಖಾನನು ತನ್ನ ಕುದುರೆಯನ್ನು ಖತೀಜಾಳ ಕುದುರೆಯ ಹತ್ತಿರ ತಂದ. ತಾನೇ ಆ ಕುದುರೆಯನ್ನು ಓಡಿಸಲು ಯತ್ನಿಸಿದ. ಏನು ಮಾಡಿದರೂ ಅವರ ವೇಗ ಹೆಚ್ಚಲಿಲ್ಲ. ಆದರೂ ಸೈಯದ್ ಖಾನನು ನಿರುಪಾಯನಾಗದೆ, ಎಂದೂ ಕುದುರೆಗಳನ್ನು ಸಾಧ್ಯವಿದ್ದ ಮಟ್ಟಿಗೆ ಮುನ್ನೂಕುತ್ತ ನಡೆದಿದ್ದನು.

ಖತೀಜಾ ಚೇತರಿಸಿಕೊಂಡು ಕಣ್ಣೆರೆದು ನೋಡಿದಾಗ, ರವಿಯು ಇದೇ ತಾನೆ ಪೂರ್ವದಿಗಂತದಲ್ಲಿ ಹಣಿಮುಕ್ಕಿ ನೋಡತೊಡಗಿದ್ದ. ಖತೀಜಾ ಕೃತಜ್ಞತೆ ತುಂಬಿದ ಕಣ್ಣುಗಳಿಂದ ಸೈಯದ್ ಖಾನನ ಮುಖವನ್ನೊಮ್ಮೆ ನೋಡಿದಳು.

"ಬೇಗಮ್ ಸಾಹೇಬ್, ನಾವೀಗ ಇನ್ನೂ ನಾಲ್ಕೈದು ಮೈಲು ದೂರ ಬಂದಿದ್ದೇವೆ. ಇನ್ನು ಮೇಲಾದರೂ ತಾವು ಧೈರ್ಯತಂದುಕೊಂಡು ಕುದುರೆಯನ್ನೋಡಿಸಿದರೆ, ಸುಲಭವಾಗಿ ಪಾರಾಗಬಹುದು!" ಎಂದು ತನ್ನ ಮುಖದಲ್ಲಿಳಿದ ಬೆವರನ್ನೊರಸಿಕೊಳ್ಳುತ್ತ ಸೈಯದ್-ಖಾನನು ಪ್ರಯಾಸದಿಂದ ನುಡಿದನು. ಖತೀಜಾ ಕುದುರೆಯ ಕಡಿವಾಣವನ್ನು ಜಗ್ಗಿ,ಅದರ ಬೆನ್ನು ಜೆಪ್ಪರಿಸಿದಳು. ಆ ಕುದುರೆ ಎರಡೂ ಮುಂಗಾಲುಗಳನ್ನು ಮೇಲೆತ್ತಿ ಹೂಂಕರಿಸಿತು.

"ಬೇಗಮ್ ಸಾಹೇಬ್, ಹಿಂದೆ ಏನೋ ಸದ್ದಾಗುತ್ತದೆ." ಎಂದು ಸೈಯದ್ ಖಾನನು ಕುದುರೆಯನ್ನು ಹೊರಳಿಸಿ ನಿಲ್ಲಿಸಿದನು. ಕುದುರೆಗಳ ಖುರಪುಟದ ಸದ್ದು! "ಯಾರೋ ಬೆನ್ನಟ್ಟಿ ಬರುವಂತೆ ಕಾಣುತ್ತಿದೆ ಬೇಗಮ್ ಸಾಹೇಬ್!" ಎನ್ನುತ್ತಿರುವಾಗಲೇ ದೂರದಲ್ಲಿ ಮೂರು ಕುದುರೆಗಳು ಧಾವಿಸಿ ಬರುತ್ತಿರುವುದು ಕಾಣಿಸಿತು. ಸೈಯದ್ ಖಾನನ ಬಲವೆಲ್ಲ ಉಡುಗಿತು. ಖತೀಜಾ ತತ್ತರಿಸಿದಳು. ಕುದುರೆಯ ಸವಾರರು ಸಮೀಪಿಸಿದರು.

"ಘಾತವಾಯಿತು ಬೇಗಮ್ ಸಾಹೇಬ್, ಅಪಸ್ಖುಲ್-ಖಾನರು!" ಸೈಯದ್ ಖಾನನು ತತ್ತರಿಸುತ್ತ ನುಡಿದನು. ಖತೀಜಾಳಲ್ಲಿ ಅದಾವುದೋ ಸ್ಫೂರ್ತಿ ಮೂಡಿತು. ಕೈ ನಡುವಿನಲ್ಲಿದ್ದ ಕಿರುಗತ್ತಿಯನ್ನು ಹೊರದೆಗೆಯಿತು. ಕ್ಷಣಾರ್ಧದಲ್ಲಿಯೆ ಆ ಕಿರುಗತ್ತಿ ಅವಳ ಎಪೆಯನ್ನು ಸೇರಿತ್ತು! "ಖತೀಜಾ....!" ಎಂಬ ಆಘಾತಸ್ವರ ಅಪಸ್ಖುಲ್ ಖಾನರ ಕೂಗಿನೊಡನೆ ಖತೀಜಾ ನೆಲಕ್ಕುರುಳಿದಳು. ಅಪಸ್ಖುಲ್ ಖಾನರು ಧಾವಿಸಿ ಬಂದು "ಇದೇನು ಮಾಡಿಕೊಂಡೆ ಖತೀಜಾ?" ಎಂದು ಅವಳನ್ನೆತ್ತಿಕೊಂಡು ತಮ್ಮ ತೊಡೆಯ ಮೇಲೆ ಹಾಕಿಕೊಂಡರು. ರಕ್ತ! ಒಂದೇಸವನೆ ರಕ್ತ ಅವಳ ಎದೆಯಿಂದ ಸೋರುತ್ತಿತ್ತು! ಅಪಸ್ಖುಲ್ ಖಾನರು "ಖತೀಜಾ! ಖತೀಜಾ!?" ಎಂದು ಆರಚಿದರು. ಖತೀಜಾ ಕಣ್ಣೆರೆದು ಅಪಸ್ಖುಲ್ ಖಾನರನ್ನೊಮ್ಮೆ ನೋಡಿದಳು!....ಕಾರುಣ್ಯ ತುಂಬಿದ ಆ ಕಣ್ಣುಗಳು ಮತ್ತೆ ಅಲುಗಲೇ ಇಲ್ಲ!

ವಿಶೇಷ— ವಿಜಾಪುರದ ಶಕ್ತಿನ ದಿಕ್ಕಿಗೆ—ಕೋಟೆಯಾಚೆಗೆ ಅಪಸ್ಖುಲಖಾನರ ೬೦ ಜನ ಹೆಂಡಿರ ಗೋರಿಗಳು, ಈಗಲೂ ಒಳ್ಳೆಯ ಸ್ಥಿತಿಯಲ್ಲಿವೆ. ವಿಜಾಪುರದ ನೈಋತ್ಯ ದಿಕ್ಕಿಗೆ ಬಬಲೇಶ್ವರಕ್ಕೆ ಹೋಗುವ ದಾರಿಯಲ್ಲಿ ೫ ಮೈಲಿನ ಮೇಲೆ 'ಖತೀಜಾಪುರ'ವೆಂಬ ಸಣ್ಣ ಹಳ್ಳಿಯಿದೆ ಅಲ್ಲಿ ಖತೀಜಾಬೀಬಿಯ ಸಮಾಧಿ ಸುಂದರವಾಗಿ ಕಂಗೊಳಿಸುತ್ತಿದೆ.

ಪಂಚ ಪುರಾತನಪಟ್ಟಣಗಳು

ಬಾದಾಮಿ

ಪ್ರೊ. ಎಸ್. ಆರ್. ಮಳಗಿ ಎಮ್. ಎ., ಬಿ. ಟಿ. ಕರ್ನಾಟಕ ಕಾಲೇಜು, ಧಾರವಾಡ

ಬಾದಾಮಿಯು ಕನ್ನಡಿಗರ ಅಭಿಮಾನ-ಉತ್ಸಾಹಗಳನ್ನು ಉಕ್ಕೇರಿಸುವ ಊರು. ಕನ್ನಡಿಗರ ಪ್ರಾಚೀನ ಸಂಸ್ಕೃತಿ, ರಾಜ್ಯವೈಭವ, ಧೈರ್ಯ-ಶೌರ್ಯಗಳ ಕಥೆಯನ್ನು, ಅಲ್ಲಿರುವ ಕಲ್ಲುಗಳೂ ಅಲ್ಲಿ ಸುಳಿಯುವ ಗಾಳಿಯುಲೆಗಳೂ ಹೆಮ್ಮೆಯಿಂದ ಸಾರಿಹೇಳುತ್ತಿರುವುವು!

ವ್ಯಕ್ತಿಗಳ ಹಾಗೆಯೇ ಹಳ್ಳಿ-ಪಟ್ಟಣಗಳ ಬಾಳು. ಎರಡರಲ್ಲೂ ಏರು-ಇಳಿವುಗಳು ಉಂಟು. ವ್ಯಕ್ತಿಗಳ ಆಯುಷ್ಯಮಾನವು ೧೦೦ ವರುಷಕ್ಕೆ ಪರಿಮಿತವಾದರೆ, ಹಳ್ಳಿ-ಪಟ್ಟಣಗಳದು ಸಹಸ್ರಾರು ವರುಷಗಳನ್ನೂ ಮಿಕ್ಕಬಹುದು. ಈ ದೀರ್ಘಾವಧಿಯಲ್ಲಿ ಹೆಸರಿಗೆ ಮಾತ್ರ ಹಳ್ಳಿ-ಪಟ್ಟಣಗಳು ಉಳಿಯುವುದುಂಟು. ಹಾಗೆ ನೋಡಿದರೆ ಅವುಗಳಿಗೂ ಸಾವು-ನೋವುಗಳುಂಟು. ಹಲವಾರು ಸಲ ಸಾವು ಕಂಡು ಹೊಸ ಹೊಸ ಜನ್ಮಗಳನ್ನು ಹೊಸ ಹೊಸ ದೇಹಗಳನ್ನು ಈ ಹಳ್ಳಿ-ಪಟ್ಟಣಗಳು ಧರಿಸುತ್ತಿವೆ.

ಪಂಚಪುರಾತನ ಪಟ್ಟಣಗಳಲ್ಲಿ ಒಂದಾಗಿರುವ ಬಾದಾಮಿಗೂ ಈ ಮಾತು ಅನ್ವಯಿಸುವುದು. ಇಂದಿನ ಬಾದಾಮಿಯನ್ನು ನೋಡಿದಾಗ, ಅದು ಹಿಂದೊಮ್ಮೆ ಕರ್ನಾಟಕ ಸಾಮ್ರಾಜ್ಯವೊಂದರ ರಾಜಧಾನಿಯಾಗಿತ್ತೆಂಬುದು ಒಮ್ಮೆಲೆ ಹೊಳೆಯುವುದು. ಇಂದಿನ ಬಾದಾಮಿ ಕುಗ್ರಾಮವೇನಲ್ಲ; ಅದರೂ ದೊಡ್ಡ ಪಟ್ಟಣವೂ ಅಲ್ಲ. ೩, ೪ ಸಾವಿರದಷ್ಟು ಮಾತ್ರ ಜನವಸತಿಯುಳ್ಳ ಒಂದು ಚಿಕ್ಕ ತಾಲ್ಲೂಕಿನ ಸ್ಥಳ—ವಿಜಾಪುರ ಜಿಲ್ಲೆಯಲ್ಲಿ. ಇಂದಿನ ಬಾದಾಮಿ 'ವಾತಾಪಿಪುರ' ಇಲ್ಲವೆ 'ಬಾದಾಮಿ ಪಟ್ಟಣ' ಎಂದು ಕರೆಯಿಸಿ. ಕೊಳ್ಳುತ್ತಿದ್ದ ಹೆಮ್ಮೆಯ ಬಾಳನ್ನು ಅದೆಂದೋ ಕಳೆದುಕೊಂಡು ಅದರ ಸಂಪೂರ್ಣ ವಿಸ್ಮರಣೆಯಲ್ಲಿ ಇಂದಿನ ಕ್ಷುದ್ರ ಬಾಳನ್ನು ನೂಕುತ್ತಿರುವಂತೆ ಭಾಸವಾಗುತ್ತದೆ!

ಗದುಗು-ಸೊಲ್ಲಾಪುರ ರೈಲುಮಾರ್ಗದಲ್ಲಿ ಹೊಳೆಯಾಲೂರು ನಿಲ್ದಾಣದಾಚೆಯ ನಿಲ್ದಾಣವೇ ಬಾದಾಮಿಯದು. ಹೊಳೆಯಾಲೂರ ಮುಂದಿನ ಮಲಪ್ರಭಾ ನದಿಯನ್ನೂ ಅದರಾಚೆಯ ಗುಡ್ಡದ ಸಾಲನ್ನೂ ದಾಟಿ ಹೊರಟಾಗ, ಉಗಿಬಂಡಿಯ ಕಿಟಕಿಯಿಂದಲೇ ಮೂಡಲ ಕಡೆಗೆ ದೃಷ್ಟಿ ಹೊರಳಿಸಿದರೆ, ಬಯಲುಸೀಮೆಯ ಬಿತ್ತರದ ಚೆಲುವಿಗೆ ಅಂದ-ಚೆಂದದ ಕಟ್ಟು ಹಾಕಿಸಿದ ಹಾಗೆ, ಬಾದಾಮಿಯ ಮುಗಿಲೆತ್ತರದ ಬಂಜೆಗಲ್ಲುಗಳ ಗುಡ್ಡದ ಸಾಲು ಕಣ್ಮನಗಳನ್ನು ಮುತ್ತುವುದು! ಗುಡ್ಡದ ಸಾಲೇ ವಾತಾಪಿಪುರದ ಸಾವಿರ ವರುಷದ ಗತವೈಭವದ ಇತಿಹಾಸವನ್ನು ನಿರಂತರವೂ ಒರೆಯುತ್ತಲಿದೆ; ಅಲ್ಲಿಯ ಬಂಡೆಗಲ್ಲುಗಳು ಭಾಗವತ-ಭಾರತಾದಿ ಪುರಾಣಗಳನ್ನು ಪರಿಸುತ್ತಲಿವೆ; ದಂತಕತೆಗಳನ್ನು ಹೇಳುತ್ತಲಿವೆ! ತಿಳಿಬಲ್ಲ ಕವಿಗೆ ಇದೆಲ್ಲವೂ ಕೇಳುತ್ತಿದೆ; ಅರಿವ ಮನ, ಬೆರೆವ ಹೃದಯಗಳು ಇಲ್ಲಿ ಕರಗಿ ನೀರಾಗುವಲ್ಲಿ ಆಶ್ಚರ್ಯವೇನು?

ರೈಲುನಿಲ್ದಾಣದಿಂದ ೩ ಮೈಲು ಅಂತರದಲ್ಲಿರುವ ಬಾದಾಮಿಯನ್ನು ಒಳಹೊಕ್ಕು ನೋಡಿದಾಗ, ಅದರ ದಕ್ಷಿಣೋತ್ತರಗಳಲ್ಲಿ ಸುತ್ತುವರಿದು ನಿಂತ ಕೋಟೆ, ಕೊತ್ತಳ, ಬತೇರಿಗಳಿಂದ ಕೂಡಿದ—ಇದೀಗ ಉರುಳಿ ಬೀಳುವೆನೋ ಎಂಬಂತೆ ಅಡಕಲಿಟ್ಟಂತಿರುವ ಬಂಡೆಗಲ್ಲುಗಳನ್ನು ಹೊತ್ತು ನಿಂತ—ಎರಡು ಗುಡ್ಡಗಳ ಸಾಲುಗಳು, ವಾತಾಪಿಪುರದ ಕೀರ್ತಿಶ್ರೀಗಳಂತೆ ಮೆರೆಯುತ್ತ, ಈಗಲೂ ಬೆರಗುಗೊಳಿಸದೆ ಇರವು!

ಈ ಎರಡು ಗುಡ್ಡದ ಸಾಲುಗಳ ನಡುವಿನ ಕಂದಕದಲ್ಲಿಯೇ ಇಂದಿನ ಬಾದಾಮಿ ಅವಿತು ಕುಳಿತುಕೊಂಡಿದೆ. ಒಂದು ಗುಡ್ಡದ ಸಾಲಿನ ಅಡಿಯಿಂದ ಮತ್ತೊಂದರ ವರೆಗೆ ಒಡ್ಡುಹಾಕಿ ಮಾಡಿದ ದೊಡ್ಡ ಹೊಂಡವೇ 'ಅಗಸ್ತ್ಯತೀರ್ಥ' ಇಲ್ಲವೆ 'ಭೂತನಾಥನ ಕೆರೆ' ವಾತಾಪಿ-ಇಲ್ವಲರೆಂಬ ರಾಕ್ಷಸರನ್ನು ಕೊಂದು, ಅವರ ಕೊನೆಯ ಅಪೇಕ್ಷೆಯಂತೆ ಅವರ ಹೆಸರಿನಲ್ಲಿ ವಾತಾಪಿ, ಐಹೊಳೆ ಗ್ರಾಮಗಳನ್ನು ಅಗಸ್ತ್ಯ ಋಷಿಗಳು ಹುಟ್ಟಿಸಿದರಂತೆ, ಈ ದಂತಕಥೆಗೆ ತಲೆ ಬಾಲಗಳು ಇಲ್ಲವೆಂದು ಅಲ್ಲಗಳೆದರೂ "ವಾತಾಪಿ" ಎಂಬ ಹೆಸರು ಈ ಊರಿಗೆ ಇದ್ದುದು ಶಾಸನಗಳಿಂದ ಸಿದ್ಧವಾಗಿದೆ. 'ಇಲ್ವಲ'ದಿಂದ 'ಐಹೊಳೆ' ಹುಟ್ಟಿಕೋ ಇಲ್ಲವೊ, ವಾತಾಪಿ-ಬಾದಾಮಿಗಳ ಸಂಬಂಧವನ್ನು ಭಾಷಾಶಾಸ್ತ್ರವು ಒಪ್ಪುತ್ತದೆ. ಅಲ್ಲದೆ ವಾತಾಪಿ, ಬಾದಾಮಿ ಇವೆರಡೂ ರೂಪಗಳು ಶಾಸನಗಳಲ್ಲಿ ಉಕ್ತವಾಗಿದ್ದು, 'ಬಾದಾಮಿ' ಎಂಬುದೇ ಈ ಊರ ಪ್ರಾಚೀನ ಹೆಸರಾಗಿತ್ತೆಂಬುದನ್ನು ಕ್ರಿ. ಶ.

ರುವ ಹಣ್ಣುಗಳಲ್ಲಿ, ಬಾಳೆಕ್ಕೆ ಮುಂತಾದುಗಳು—ಇವು ರಾಜಧಾನಿಗೆ ಕೇರಳ ದೇಶದಲ್ಲಿವೆ. ಆದ ಅದರಲ್ಲಿ ಕಸೂರಿನ್ನು ಬಾಗಲಿಟ್ಟೇಕು. ಪಟ್ಟಣಕ್ಕೆಲ್ಲಿವಲ್ಲಿ ಜಾಲಾಕ್ಯವಾಗಿ. ಪಟ್ಟಾಭಿರಾಗ-ತ್ರಿಸ್ಥರು. ಮುಖಾಕೂಟೋದ್ಯಾರ ಲಿಂಗವು ಜಾಲಾಕ್ಯ ಮುನೇತನಗ ಳಲಾಗಿ ಕೂಲಿ-ದೇವರು. ರಾ ಗಾರುಗಳು, ಅಸ್ಥಾನ ಕವಿಗಳು ಇವರು ಆಗ್ರಹಾರ ಸ್ಥಳವೇ ಜನೊಳೆ.

ಬಾದಾಮಿಯು ವಿನಯ ಶ್ರೀಲಕೀರ್ತಿಯ ಅಳಿಕೆಯಲ್ಲಿ ಸೈಭವದ ತಪ್ಪಿಸುವುದಿಯನ್ನು ನುಚ್ಚಿದ್ದರೂ, ಅವನ ಅಳಿಕೆಯ ಕೊನೆಯಲ್ಲಿ ಸಲ್ಲಿವಾ ಜಾಳಿಗೆ ಸಿಲುಕಿ, ತನ್ನ ಮೊದಲ ಬಾದಾಮಿ ಮುರಣವನ್ನು ಕಾಣುವ ನೌಭಾಗ್ಯವನ್ನು ಅದರಿಸಿಯಿಲ್ಲ. ಮುಂದೆ ಗಿನಿಯ ಮುಕ್ಕು ನಿಯು ನಿಕ್ರಮಾಂಕಿಸಿದ ಕಾಲಕ್ಕೆ ಬಾದಾಮಿಯ ಸೈಭವನ್ನು ಮರು ಕಳಿಸಿದರೂ, ಕೊನೆಯಲ್ಲಿ ಮುಳ್ಳಕೆಯಿಂದ ಪಡಾಜಕರವಾದ ಜಾಲುಗ್ಯ ಮೊಂಸಿಗೆ ಬಾದಾಮಿಯು ತನ್ನ ಸೈಭವದ ಜನ್ಮನನ್ನು ನೀಗತೆಂದೇ ಹೇಳಬೇಕು. ತದನಂತರದ ಬಾದಾಮಿಯು ಬಾಳು ಹೇಳ ಹೆಸರಿಲ್ಲದ ಪಡದೇರಿ ಕೊನೆಯಾಯ್ತು. ಮೊಗಲು ದೇವಗಿರಿಯ ಯಾದವರು, ಅನಂತರ ವಿಜಾಪುರದ ಆದಿಲಶಾಯಿಯವರು, ಬಳಿಕ ವಿಜಯನಗರದ ಅರಸರು ಬಾದಾಮಿಯನ್ನು ಎತ್ತಿ ಕೊಂಡರು. ವಿಜಯನಗರದ ಸಳರಾದುಕರ ಮುಖ್ಯ ಪಟ್ಟ ನಿಜಾಸ್ಥಾನದ ರಾಜ್ಯಕ್ಕೆ ಕೇರಿ. ಆಲ್ಲಿಂದ ಪಡಾಜಿಂದ ನಡಾಯಿ ಇದಸ್ಥಿರಿಸೊಳಗೂ ಆ ಬಳಿಕ ಕೇರಳದಾಯಿ ರಾಜ್ಯದೊಳಗೂ ಸೇರಿ ಹೋಯಿತು. ಗಾಜಿಪುರಿಲ್ಲಿ ಸೇನಾಪತಿಯಿಗಳಿಂದ ರಾಜ್ಯ ಎಂಬ ಪದವನ್ನು ಬಾದಾಮಿ ಬಹುಪಾಸ್ಥವಾಗಿ ಕೊಡಲ್ಪಟ್ಟು. ಸ್ಟೈಪ್ಟ್ ಮುಂದೆ ಕೆಲಕಾಲ ಪೆಡದೂರ ಇದನ್ನು ಗೆದ್ದುಕೊಂಡಿದ್ದು, ಬಳಿಕ ಇದನ್ನು ಸ್ವಾಮಿ ರಾಜ್ಯದಿಂದ ಬಂದ ಸರಿಂಗರಾಯನೆಂಬ ಕಿರುಮನವನಾಯನು ಹಿಮಿಕೊಂಡಿದ್ದ. ಕೊನೆಯಲ್ಲಿ ಬ್ರಿಟಿಶರ ಸಂಕಾರಗಡಿಯ ಕಾರಸ್ಥ ಪೇಶ್ವೆಯು ಬಾದಾಮಿಯನ್ನು ತನ್ನ ಸುಳ್ಳಿ ತೆಗೆದುಕೊಂಡನು. ಬಳಿಕ್ಕ ಬಾದಾಮಿಯು ಪಟ್ಟಾಂಗ ಪಡಾಜಗಾ ರ್ಯಾಪಾರಿಯ ಪಟ್ಟಣವಾಯಿತು.

ಬಾದಾಮಿಯು ಬೀಳಾದ ಮೆಟ್ಟಿಲು ಮಳಿಗೆಗಳಿಂದ ಬಂದ ಅದು ಕಲ್ಲಿನ ಗುಹಾ ದೇವಾಲಯಗಳಿಂದ ಪ್ರಸಿದ್ಧವಾಗಿದೆ. ಇವು ಕ್ರಿ.ಶ. ೬ನೆಯ ಶತಮಾನದಿಂದ ೮ನೆಯ ಶತಮಾನದ ವರೆಗೆ ಚಾಲುಕ್ಯರ ಕಾಲದಲ್ಲಿ ನಿರ್ಮಿತವಾದವು. ಇವುಗಳಲ್ಲಿ ಮೊದಲನೆಯ ಗುಹಾ ದೇವಾಲಯವು ಕ್ರಿ.ಶ. ೫೭೮ರಲ್ಲಿ ಮಂಗಳೇಶನಿಂದ ನಿರ್ಮಿತವಾಯಿತು. ಇದರಲ್ಲಿ ಮಹಾವಿಷ್ಣುವಿನ ಅನೇಕ ಅವತಾರಗಳ ಚಿತ್ರಗಳಿವೆ. ಎರಡನೆಯ ಗುಹಾ ದೇವಾಲಯವು ಕ್ರಿ.ಶ. ೬೫೦ರಲ್ಲಿ ಪುಲಕೇಶಿಯಿಂದ ನಿರ್ಮಿತವಾಯಿತು. ಇದರಲ್ಲಿ ಶಿವನ ಅನೇಕ ಅವತಾರಗಳ ಚಿತ್ರಗಳಿವೆ. ಮೂರನೆಯ ಗುಹಾ ದೇವಾಲಯವು ಕ್ರಿ.ಶ. ೭೫೦ರಲ್ಲಿ ನಿರ್ಮಿತವಾಯಿತು. ಇದರಲ್ಲಿ ಶಿವನ ಅನೇಕ ಅವತಾರಗಳ ಚಿತ್ರಗಳಿವೆ. ನಾಲ್ಕನೆಯ ಗುಹಾ ದೇವಾಲಯವು ಕ್ರಿ.ಶ. ೭೫೦ರಲ್ಲಿ ನಿರ್ಮಿತವಾಯಿತು. ಇದರಲ್ಲಿ ಶಿವನ ಅನೇಕ ಅವತಾರಗಳ ಚಿತ್ರಗಳಿವೆ.



ಮಾಡಿದ್ದರು. ಮಾಂಸಾಹಾರಿಗಳಿಗೆ ಮಾತ್ರ ಸೀಮಿತವಾಗಿದ್ದ ಈ ಖಾದ್ಯವನ್ನು ಸಸ್ಯಾಹಾರಿಗಳಿಗೂ ಪರಿಚಯಿಸಿದ ಕೀರ್ತಿ ಅವರಿಗೆ ಸಲ್ಲಬೇಕು. ಅವರ ಕಾಲದಲ್ಲಿ ಮೈಸೂರಿನ ಅರಮನೆಯಲ್ಲಿ ಪ್ರತಿದಿನ ಸುಮಾರು ಇನ್ನೂರು ಜನರಿಗೆ ಊಟ ಬಡಿಸಲಾಗುತ್ತಿತ್ತು. ಅವರಲ್ಲಿ ಅರಮನೆಯ ಸಿಬ್ಬಂದಿ, ಅತಿಥಿಗಳು ಮತ್ತು ಬಡವರು ಸೇರಿದ್ದರು. ಅವರೆಲ್ಲರಿಗೂ ಒಂದೇ ಮೆನು ಇರುತ್ತಿತ್ತು. ಅದರಲ್ಲಿ ಪಲಾವ್ ಕಡ್ಡಾಯವಾಗಿ ಇರಲೇಬೇಕಿತ್ತು. ಅಡುಗೆಯವರಿಗೆ ಪಲಾವ್ ಮಾಡುವುದು ಹೇಗೆಂದು ಕಲಿಸಿದ್ದೂ ಅವರೇ ಎಂದು ಹೇಳಲಾಗುತ್ತದೆ.

ಮೈಸೂರಿನ ಪಲಾವ್ ಪ್ರಿಯರಲ್ಲಿ ಮುಖ್ಯವಾಗಿ ಇಬ್ಬರು ಪ್ರಸಿದ್ಧರು. ಒಬ್ಬರು ಕೃಷ್ಣರಾಜ ಒಡೆಯರ್ ಅವರ ಪತ್ನಿ ಕೆಂಪನಂಜಮ್ಮಣ್ಣಿ ಅವರು. ಅವರು ಪಲಾವ್ ಮಾಡುವುದರಲ್ಲಿ ಎತ್ತಿದ ಕೈ ಆಗಿದ್ದರು. ಅವರ ಪಲಾವ್ ಅನ್ನು ಸವಿದವರು ಅದರ ರುಚಿಯನ್ನು ಎಂದಿಗೂ ಮರೆಯುತ್ತಿರಲಿಲ್ಲವಂತೆ. ಇನ್ನೊಬ್ಬರು ಮಹಾರಾಜ

ಪಾಗಿವೆ. ಎಡ-ಬಲಗಳಲ್ಲಿ ಲಕ್ಷ್ಮಿ-ಪಾರ್ವತಿಯರ ವಿಗ್ರಹಗಳಿವೆ. ಬಲಗೋಡೆಯ ಮೇಲೆ ಅರ್ಧನಾರೀ ನಟೇಶ್ವರನ ಮೂರ್ತಿಯಲ್ಲಿ ಶಿವ-ಶಕ್ತಿಯರ ಸಾಮರಸ್ಯವೂ ಇಷ್ಟೇ ಸುಂದರವಾಗಿ ಚಿತ್ರಿತವಾಗಿದೆ. ಎಡದ ಶಿವಭಾಗದ ಹತ್ತಿರ ನಂದಿ, ಭೃಂಗಿಗಳಿದ್ದರೆ, ಶಕ್ತಿಯ ಭಾಗದ ಬಳಿಯಲ್ಲಿ ಪರಿಚಾರಿಕೆಯೊಬ್ಬಳು ತಬಕವನ್ನು ಹಿಡಿದುಕೊಂಡು ನಿಂತಿದ್ದಾಳೆ. ಶಿವಭಾಗದಲ್ಲಿ ಪರಶು-ನಾಗಗಳೂ ಪಾರ್ವತಿಯ ಭಾಗದಲ್ಲಿ ವೀಣಾಪಾಣಿಯೂ ಇವೆ. ಸಭಾಮಂಟಪದ ಸ್ಥೂಲವಾದ, ಕಂಬಗಳ ಮೇಲೂ ಛತ್ತುಗಳಲ್ಲೂ ನಾನಾ ತರದ ಪಶು-ಪಕ್ಷಿಗಳು ಕುಸುರು ಕುಸುರಿನ ಸುಳಿವು-ಹೊಳಪುಗಳಲ್ಲಿ ಕೊರೆಯಲ್ಪಟ್ಟಿವೆ. ಒಂದೆಡೆ ಕ್ಷೀರ-ಸಾಗರಶಾಯಿಯಾದ ಅನಂತಶಯನಮೂರ್ತಿಯೂ ಇನ್ನೊಂದೆಡೆ ಕೈಲಾಸದಲ್ಲಿಯ ನಂದಿವಾಹನಶಿವನ ಮೂರ್ತಿಯೂ ಕೆತ್ತಲ್ಪಟ್ಟಿವೆ. ಅಲ್ಲದೆ, ಶಿವ-ಪಾರ್ವತಿಯರ ವಿವಾಹಕಥೆಗಳಿಗೆ ಸಂಬಂಧಪಟ್ಟ ಅನೇಕ ಚಿತ್ರಪಟ್ಟಿಗಳೂ ಪ್ರಹ್ಲಾದಕಾರಿಯಾಗಿವೆ.

ಎರಡನೆಯದಾದ ವೈಷ್ಣವಗುಹೆಯಲ್ಲಿ ಮುಂಭಾಗದ ಅಂಗಳ, ಸಭಾಮಂಟಪ, ಗರ್ಭಾಗಾರ ಎಂದು ಮೂರು ಭಾಗಗಳಿವೆ. ಮೊದಲನೆಯ ಗುಹೆಯಂತೆಯೇ ಇಲ್ಲಿಯೂ ಸುಂದರ ಬಗೆಯ ಚಿತ್ರಪಟ್ಟಿಕೆಗಳಿರುವುವಲ್ಲದೆ ಕಂಭ, ಬೋದುಗೆ, ಚೌಕಟ್ಟು, ಛತ್ತುಗಳಲ್ಲಿ ನಾಗನಾಗಿಣಿಯರು, ಕಿನ್ನರ-ಕಿಂಪುರುಷರು, ಕಾಮ-ರತಿಯರು, ವಾತ್ಸ್ಯಾಯನನ ಕಾಮಸೂತ್ರದ ಪ್ರಣಯಭಂಗಿಗಳು, ಕೃಷ್ಣಲೀಲೆಯ ಅಸಂಖ್ಯ ಕಥಾನಕಚಿತ್ರಗಳು, ಕ್ಷೀರಸಾಗರ ಮಥನ, ಸುಭದ್ರಾಹರಣಕ್ಕೆ ಸಂಬಂಧಪಟ್ಟ ದೃಶ್ಯಗಳು, ಹಲವಿಧದ ವಾಹನಗಳಲ್ಲಿಯ ದಿಕ್ಪಾಲಕರ ಪ್ರಯಾಣಾದಿಗಳು, ಭಾಗವತ-ಭಾರತಾದಿ ಪುರಾಣಕಥೆಗಳನ್ನು ವಿವರ-ವಿವರವಾಗಿ ನೆನಪಿಗೆ ತರುವಂತೆ ಕೆತ್ತಿದ ಶಿಲ್ಪವು ಅಗಾಧವಾಗಿದೆ.

ನಾಲ್ಕನೆಯ ಗುಹೆ ಜೈನಮಂದಿರ. ಇಲ್ಲಿಯ ಭಿತ್ತಿಶಿಲ್ಪವು ಸಾಮಾನ್ಯ ರೀತಿಯದು. ದಿಗಂಬರಪಂಥದ ಎಲ್ಲ ತೀರ್ಥಂಕರರ ಮೂರ್ತಿಗಳೂ ಇಲ್ಲಿವೆ. ಗರ್ಭಾಗಾರದಲ್ಲಿ ಮಹಾವೀರನ ಮೂರ್ತಿ ಇದೆ. ಹೊರಗೆ ಗೋಡೆಯ ಮೇಲಿರುವ ಗೊಮ್ಮಟೇಶ್ವರ ಪಾರ್ಶ್ವ-ನಾಥರ ಮೂರ್ತಿಗಳು ಏಳುವರೆ ಅಡಿ ಎತ್ತರದುವಿರುವುವು. ಈ ಮೂರ್ತಿಗಳ ಅನಯವಸೌಷ್ಠವದಲ್ಲಿಯು ನಯ, ನುಣುಪು, ಹದ, ಪ್ರಮಾಣಬದ್ಧತೆ, ಮುಖದಲ್ಲಿಯ ಶಾಂತಿ ಗಾಂಭೀರ್ಯಗಳು ದಿವ್ಯವಾಗಿವೆ.

ಬಾದಾಮಿಯ ರಾಜಕೀಯಚರಿತ್ರೆ ಘನವಾದುದು; ಅದರ ಸಾಂಸ್ಕೃತಿಕ ಚರಿತ್ರೆ ಘನತರವಾದುದು. ಬಾದಾಮಿ ಹಲವು ಸಾವುಗಳನ್ನು ಕಂಡು ಇಂದು ಇನ್ನೂ ಬದುಕಿರುವುದು ತನ್ನ ಕಲೆ, ಸಂಸ್ಕೃತಿಗಳಿಂದಲ್ಲದೆ, ರಾಜಕೀಯದಿಂದಲ್ಲ. ಬಾದಾಮಿಯ ಗುಡಿ-ಗುಹೆಗಳಲ್ಲಿ ಚೆಚ್ಚಳಿಯದಿರುವ ವಾಸ್ತುಶಿಲ್ಪ ಸೌಂದರ್ಯದಲ್ಲಿ ನಡೆದ ಬಾದಾಮಿಯ ಅಮರ ಆತ್ಮದ ನಿರಂತರ ನಾಟ್ಯಲೀಲೆ, ನೋಟಕರನ್ನು ದಿಗ್ಭ್ರಾಂತ ಗೊಳಿಸುತ್ತಲೇ ಇದೆ! ದಿಗ್ದೇಶಗಳಿಂದ ಶಿಲ್ಪಕಲಾತಜ್ಞರನ್ನೂ ಸಂಶೋಧನಪಟುಗಳನ್ನೂ ಎಡೆಬಿಡದೆ ತನ್ನೆಡೆಗೆ ಸೆಳೆಯುತ್ತಲೇ ಇದೆ! 'ರಾಜಕೀಯವು ನಶ್ವರ, ಕಲೆ-ಸಂಸ್ಕೃತಿಗಳು ಅಮರ!' ಎಂಬ ಸಂದೇಶವನ್ನು ಬಾದಾಮಿಯ ಗುಡ್ಡ-ಬೆಟ್ಟಗಳು ಉಚ್ಚಕಂಠದಿಂದ ಸಾರಿ ಹೇಳುತ್ತಲೇ ಇವೆಯಲ್ಲವೆ?*

*ಧಾರವಾಡ ಬಾನುಲಿಯ ಕೃಪೆಯಿಂದ.

ಬಿರುಗಾಳಿ

(ಒಂದು ವೈಚಾರಿಕಚಿತ್ರ)

ಶ್ರೀ. ಕುಲಕರ್ಣಿ ಶಂಕರರಾಯರು, ಅಕ್ಕರೆಕೋಟೆ

卐

ನೈಸರ್ಗಿಕ ಕ್ರಾಂತಿ ವಿಪ್ಲವಗಳು ಬಡವ ಬಲ್ಲಿದರಿಬ್ಬರನ್ನೂ ಸಮದೃಷ್ಟಿಯಿಂದಲೇ ಕಾಣುವುವು. ಅವುಗಳ ಬಾಧೆ ಇಬ್ಬರಿಗೂ ಸಮಾನ. ಆದರೆ ಕಷ್ಟಪರಂಪರೆಯಲ್ಲಿ ಹಟಯೋಗಿಗಳಾಗಿ ಬಾಳಿ ಬಂದ ಬಡವರಿಗಿಂತ, ಯೋಗ-ವಿರಹಿತನಾದ ಬಲ್ಲಿದನು ಆಗ ಹೆಚ್ಚು ಬಾಯಿಬಾಯಿ ಬಿಡುವನು!

卐

ಏಳು ಮಜಲಿತ್ತರದ ಮಹಾಭಾಗ್ಯವಂತನೊಬ್ಬನ—ತುಂಬಾ ಭದ್ರವಾಗಿ, ಕೌಶಲ್ಯಪೂರ್ಣವಾಗಿ ರಚಿಸಿದ—ಶ್ರೀಸೌಧವದು; ಮುಗಿಲ ಮುಟ್ಟುವ ಮರುಳು ಹವ್ಯಾಸದಲಿ ನೆಲವನಣಕಿಪುದೇನೋ....! ಆದರ ಸೈತುಂಬ ಬಣ್ಣಬಣ್ಣದ ಮಬ್ಬಿನಲ್ಲಿ—ಬೆಳಕಿನಾಲಿಂಗನಕೆ—ಕಳೆಯ ಹೊಳೆ ತುಳುಕಿಸುವ ಕಣ್ಣಿನಂತಹ ಕಾಜಿನ ಕಿಟಕಿಗಳು. ಅಬ್ಬಾ! ನೆಲದ ಮೇಲಲೆಯುತ್ತಿರುವ ನೂರಾರು ನರಹುಳುಗಳೆಲ್ಲ ನೋಡಿ ಪರೆ, ಅದ್ಭುತತೆಯ ಅಸೀಮ ಅನುಭವವಾಗಬೇಕು ಸಹಜವಾಗಿ. ಇಂತಹ ಬೃಹತ್-ಬಾಹ್ಯ ವೈಭವವನ್ನೇ ಪಡೆದ ಈ ಇಂದ್ರಭವನಕ್ಕೆ ಅಂತರಂಗವೆಂತಹದಿರಬೇಕು?

ತುಂಬಾ ಅಚ್ಚರಿ! ಕಲ್ಪನೆಗೆ ಎಟುಕದ ವಿಸ್ಮಯ!!

ಒಂದು ದಿನ—ಹೊತ್ತಿಳಯುವ ಸಮಯ. ಅದಾವ ಮುನಿಸಿಂದೇನೋ ಬಾನ ಮೊಗ ಕಪ್ಪೊತ್ತಿ 'ಬರಲಿರುವುದಿನಿತರೊಳೆ ಮಹಾಕ್ರಾಂತಿ—ದಿಗ್ಭ್ರಾಂತಿಗೊಳಿಸುತಲಿ, ಎಚ್ಚರ! ಎಚ್ಚರ!!' ಎನ್ನುವ ಭಾವ ಸೂಚಿಸುತಿತ್ತು. ಅತಿಶಾಂತಿ ಆಶಾಂತಿಗೆ ಮೂಲವಂತೆ....!

ಭಾಗ್ಯವಂತ ಅದೇ ಕಂದಿರೆದು, ವೈದುಂಬಿದಾಲಸ್ಯದೊಳೆ ಆಕಳಿಸಿ, ಎದ್ದು ಮುಂಬಂದು ಕಿಟಕಿಯೊಂದನು ತೆರೆದು, ಮಹಾ ಪ್ರಪಾತದಲ್ಲಿ ತೇಲುವಂತೆ ಕಾಣುವ ನೆಲವ ನೋಡಿದ.

ದೀನ-ದಲಿತರ—ನೆಲದ ಪುಡಿಮಣ್ಣಿನೊಳೆ ಉರುಳಾಡಿ ಇರುಳ್ಪಗಲ ಜಳೆವವರ—ಉಸುರುಸುರಿಗೂ ಅಳಲ ಕಹಿಸೊಗವ ಕಾಂಬವರ—ನಿಲಾಸಗೃಹಗಳೆನಿಸುತ್ತ, ಸಾಲುಸಾಲಾಗಿ ನಿಂತಿವೆ ಅರೆಬಿದ್ದ ಜೆಪ್ಪರದ ಕೆರುಮನೆಗಳು! ಅಲ್ಲಿ, ಆ ಮನೆಗಳಲ್ಲಿ ಚಳಿ—ಮಳೆ—ಬಿಸಿಲುಗಳನು 'ಉಸ್ಸೆ'ನ್ನದೆ ಸಹಿಸುತ್ತ, ಇದ್ದ ಸ್ಥಿತಿಯಲ್ಲೆ ನಗುತ್ತ ಕೆಲೆದಾಡಿ ಬದುಕುವ ಗಂಡುಗಳು, ಹೆಣ್ಣುಗಳು, ಕಿರುಗಂದರೂ ಕೂಡ

ಮೈತುಂಬ ಬಟ್ಟೆಯಿಲ್ಲ. ತಿರಿತಂದ ತಂಗುಳದ ಹಳಸಿಕೆಯ ನೆಣಿಸದಲಿ, ತುಂಬುತಿಹರೊಡಲಲ್ಲಿ. ಹೇಗೂ ಬದುಕಬೇಕೆಂಬಾಸೆ ಆ ಕುಲಕೆ, ನೂರು ಕಾಲ! ಬೆಳಗಿನಲ್ಲಿ ಅವರೆಂದೂ ರವಿಯ ಕಂಡಿಲ್ಲ. ಎದ್ದೊಡನೆ ಮೊದಲು ಜೋಳಿಗೆಯ ದರ್ಶನ! ದಿವ್ಯ ದರ್ಶನ! ಪವಿತ್ರ ದರ್ಶನ!!!

ಜೋಳಿಗೆಯೆ ಜೋಡೊಂದು ಅವರ ಬಾಳಿಗೆ.

ಹಿಡಿದು ನಡೆವರು ಬೀದಿಗುಂಟ—'ಬಿಕ್ಕೆಯ ಬೇಡುವುದು ಭಿಕ್ಷುಕ ಧರ್ಮ-' ಎಂಬ ತತ್ತ್ವಕ್ಕೆ ಹೊಂದಿಕೊಂಡು ಮನೆ-ಮನೆಗೆ, ಬಾಗಿಲು-ಬಾಗಿಲಿಗೆ! ಯಾರೋ ಬಯ್ಯುವುದುಂಟು. ಯಾರೋ ಹೊಯ್ಯುವುದುಂಟು. ಆದರೂ 'ಬಡತನವೆಂಬುದು ಬಡವರ ಮುಕ್ತಿ' ಎನ್ನುವ ಮಾತಿನಲ್ಲಿ ಅತಿ ವಿಶ್ವಾಸ ಆ ಕುಲಕ್ಕೆ.

ಭಾಗ್ಯವಂತನ ಕಣ್ಣು ಪರದೆಯ ಮುಂದೆ ಇಂತಹರ ಚಿತ್ರ ಸ್ಪಷ್ಟವಾಗಿ ಮೂಡಿ, ತಿರಸ್ಕಾರಭಾವದ ಬೀಜ ಬಿತ್ತಿತು. ಅವನ ಕಣ್ಣುಗಳಲ್ಲಿ ಕೆಂಪು ಏರತೊಡಗಿತು. "ಇಂತಹರೇಕೆ ಬದುಕುತ್ತಾರೆಯೊ, ಸುಮ್ಮನೆ ಈ ಲೋಕದಲ್ಲಿ! ಇದ್ದವರ ಮುದ್ದೆಗೂ ಕಾಗಿ, ಬೆಳಗಿನಿಂದ ಬೈಗಿನ ವರೆಗೆ ಕೂಗಿ ಕೂಗಿಕೊಂಡು, ಇನ್ನೊಬ್ಬರ ವಿರಾಮಕ್ಕೂ ಭಂಗತರುವುದೆಂದರೇನು? ಪಾಪಿಗಳು, ಒಮ್ಮೆ ಪ್ರಲಯಕ್ಕೆ ಸಿಲುಕಿ ಉಡಾ ಎನ್ನೋದರಿ ಜಗತ್ತಿಗೆ ಎಷ್ಟು ಸುಖ! ಎಂತಹ ಶಾಂತಿ!! ಬದುಕಿನ ಹೋರಾಟದಲ್ಲಿ—ಎಳ್ಳನಿತೂ ಶಕ್ತಿಯಿಲ್ಲದೆಯೂ—ಪ್ರತಿಸ್ಪರ್ಧಿಸಿ ವ್ಯರ್ಥ ಸಾಯುತ್ತಿದ್ದಾರೆ ಹುಳುಗಳಂತೆ. ಇಲ್ಲ, ಖಂಡಿತ ಬರಬೇಕು ನಾವು ಇವರಿಗೆ. ಇಂದೇ, ಈಗಲೇ...."

ಭಾಗ್ಯವಂತನ ವಿಚಾರತರಂಗ ಮೇಲೆಯುಕ್ಕಿ ಬಂದು, ಬಾಯಿಯಿಂದ ಈ ತೆರನಾಗಿ ವಾಕ್-ಧಾರೆ ಹರಿದು ಹೋಯ್ತು. ನಿಮಿಷ! ಒಂದೇ ಒಂದು ನಿಮಿಷ!! ಶಾಂತಿಯ ಕಡಲು ಕದಡಿ ಹೋಗಿ ಅಶಾಂತಿಯ ಆಕ್ರೋಶ ಧುಮ್ಮಿಕ್ಕತೊಡಗಿತು.

'ಭರ್-ಭರ-ರರ-ಭರ್-ಭರ-ರರ-ಭರ್-ಭರ್'

ಸೊಕ್ಕಿದ ಗಾಳಿಗೂಳಿ, ರಾವಣಾವತಾರವನೆ ತಾಳಿ, ಎಬ್ಬಿಸುತ, ಹಬ್ಬಿಸು, ಮುಗಿಲುಮುಟ್ಟಿದ ಧೂಳಿ ಬಂದೇ ಬಂದಿತು. ತಿರುಗಿಯೆ ತಿರುಗಿತು. ಅಬ್ಬಾ! ಎಂತಹ ಭಯಂಕರ ನಾಟ್ಯ!!!!

'ಅತಿಶಾಂತಿ ಆಶಾಂತಿಯ ಮೂಲವಂತೆ' ಈ ಮಾತು ನಿಜವಾಯ್ತು.

ಬಾನಿಗೊತ್ತಿದ ಧೂಳಿಯಲ್ಲಿ—ಗಾಳಿಪಟವಾಗಿ ಹಾರಾಡಿದುವು ಆ ಭಿಕ್ಷುಕಕುಲದ ಅರೆಬಿದ್ದ ಜೆಪ್ಪರ, ಮನೆಯ ಮೇಲುಹೊದಿಕೆ. ತಡೆವರಾರದನು—?

'ಅಯ್ಯೋ! ....ಅಮ್ಮಾ!! ....ಅಂ! ....ಅಂ!! ಅಂ!!'

ಹೆಣ್ಣು, ಗಂಡು, ಕಿರುಗಂದರೆಲ್ಲ ಚೀರಿದರು ಭಯಭ್ರಾಂತರಾಗಿ; ಜೀವದಾಸೆಗಾಗಿ! ಮನೆಯಲ್ಲಿಯ ಒಂದೊಂದೇ ವಸ್ತುಗಳು ವ್ಯಸ್ತವಾಗತೊಡಗಿದುವು.

ಪಾಪ! ಬಡಪಾಯಿ ಜನಜಂಗುಳಿ ಅಂತಹ ಅಸಹಾಯ ಸ್ಥಿತಿಯಲ್ಲೂ ಯತ್ನಿಸಿಯೇ ಯತ್ನಿಸಿದುವು, ಶಮಗೆ ಆಧಾರವಾಗಿದ್ದ ಆಸೆಯನ್ನುಳಿಸಲು; ಆದರೆ....?

ರಕ್ಷಣೆಗೆ ಅತ್ತಿತ್ತ ಓಡಾಡಿ ಕೂಗಿದರು....ಕೊರಗುತ್ತ ಮರುಗುತ್ತ ಕೇಳುವವರಾರು? ಮನದಲ್ಲಿ ಹರ್ಷಿತನಾದ ಆ ಭಾಗ್ಯವಂತ, ಏಳು ಮಜಲಿನ ಮೇಲೆ ನಿಂತು ದುಷ್ಯಾಮನೆಗಳ ಹೆಣೆದ ನಿಷ್ಕರುಣಿ, ನಲ್ಮಗೆ ನಕ್ಕ.

'ಸೃಷ್ಟಿಯ ಶಾಸನಶಕ್ತಿ ನನ್ನ ಕೈಯಲ್ಲಿರಲು ಇವರ ಪಾಡೇನು?' ಹೀಗೆ ಯೋಚಿಸಿ ಹಿಗ್ಗಿ, ಹೊರಚಿತ್ರ ವೀಕ್ಷಿಸಿದ ಸುರಮರಳಿ.

ತಿರುಗುತಿದೆ ಬಹು ಎತ್ತರಕೆ ಹಾರಿ ಹೋದ ಚಿಪ್ಪರದ ಚಕ್ರ! ವಕ್ರ!! ವಕ್ರ !!! ಬಲು ಚೆಂದ---ಆ--ನ--ಂ ದ!!

'ಕೊಡಬಲ್ಲೆ ಬಯಸಿದರೆ ಲೋಕಕ್ಕೇ ದುಶ್ಯಾಪ' ಎಂದುಸುರಿ ಎದೆಯುಬ್ಬಿ ಕಣ್ಣರಳಿಸಿ ನಿಂತ ಭಾಗ್ಯವಂತ. ಎಷ್ಟು ಹೊತ್ತೋ--ಏನೋ!

'ಭರ್-ಭರ-ರರ-ಭರ್-ಭರ-ರರ-ಭರ್-ಭರ್!'

ಅದೇ ಗಾಳಿ, ತರು-ಮರಾದಿಗಳ ತುದಿ-ಮೊದಲನೇ ಹಿಡಿದು ನಡುಗಿಸಿ ಬೀಸುತ್ತಿತ್ತು ರೋಷಿ.

'ಖಟ್-ಖಣ-ಖಣ-ಖಣಲ್ [illegible]ಟ್'

ಇದೇನಚ್ಚರಿ! ಭಾಗ್ಯವಂತ ಹಿಂದಿರುಗಿ ನೋಡಿದ. ಮುಚ್ಚಿದ ಕಿಟಕಿಗಳೆಲ್ಲ ತೆರೆ-ತೆರೆದು ಬಡಿದಾಡುತಿವೆ. ಗಾಳಿಗೂಳಿ ಅಲ್ಲಿಯೂ ಹೊಕ್ಕು ಎಲ್ಲವನ್ನೂ ಹದಗೆಡಿಸತೊಡಗಿತು. ಚಿನ್ನದ ಜೊಂಪು, ಮುತ್ತಿನ ಜಾರಿ, ಕಾಜಿನ ಕವಾಟಗಳೆಲ್ಲ--ಒಂದೊಂದೆ ನಡುಗಿದುವು.

ಭಾಗ್ಯವಂತ ಯತ್ನಿಸಿಯೇ ಯತ್ನಿಸಿದ — ಕಾಪಾಡಿಕೊಳ್ಳಲು; ಬಗೆಹರಿಯಲಿಲ್ಲ.

'ಏಯ್-ಏಯ್ ಬಿರುಗಾಳಿಯೇ, ಇಲ್ಲೀಕೆ ಬಂದೆ ನನ್ನ ಸಿಂಗಾರವನ್ನೆಲ್ಲ ಹಾಳುಗೆಡಿಸಲು? ಹೋಗು. ಹೋಗು. ಐಶ್ವರ್ಯವೆಲ್ಲ ಹಾರಿ ಹೋಗುತ್ತದೆ. ಇನ್ನೇನು ಮಾಡಲಿ? ಅಯ್ಯೋ! ಏಯ್, ಬಿರುಗಾಳಿ....ಅದೋ! ಆ ಕಂಗಾಲಜೀವಿಗಳ ಮನೆಗಳನ್ನೆತ್ತಿ ಜೀವವನ್ನೇ ತುತ್ತು. ಯಾರೂ ಕೇಳರು. ಹೋಗು. ನಿಲ್ಲಬೇಡ.... ಹೋ....ಗು!'

'ಖಣಲ್-ಖಟ್-ಖಟ್-ಖಣಲ್!'

ಏಳನೆಯ ಮಜಲಿನ ಹೊದಿಕೆಯಲ್ಲಿಯ ಹಂಚೊಂದು ಮಿಂಚಿನಂತೆ ಹಾರಿ ಹೋಯಿತು.

ಭಾಗ್ಯವಂತ ಕೆರಿಚಿದ. ಅತ್ತಿತ್ತ ಓಡಾಡಿದ— ಎಲ್ಲಿ ಮಜಲೇ ತತ್ತರಿಸಿ ಬೀಳುವುದೆಂಬ ಭಯದಿಂದ. ಆತನಿಗೆ ಜೀವಕ್ಕಿಂತಲೂ ತನ ಅವಾಧವ್ಯ ಸಂಪತ್ತೊಂದು ಉಳಿದರೆ ಸಾಕಿತ್ತು.

'ಖಣಲ್-ಖಣ-ಖಣ-ಖಟ್-ಖಣಲ್'

ಹಂಚೊಂದು ಕೆಳಗಿಳಿದು ಬಂದು ಭಾಗ್ಯವಂತನ ತಲೆಯ ಮೇಲೆ ಬಿತ್ತು.

'ಅಯ್ಯೋ! ಸತ್ತೆ. ಸತ್ತೆ' ಎನ್ನುತ್ತ ನೆಲಕ್ಕೆ ಬಿದ್ದ. ತಲೆಗೊಂದು ಬೊಟ್ಟು-ದಪ್ಪ ತೂತು ಬಿದ್ದು, ರಕ್ತ ಕಾಲುವೆಯಂತೆ ಹರಿಯ ತೊಡಗಿತು. ರಾಮಣೀಯಕತೆ ರುದ್ರವಾಯ್ತು. ಆತನ ಕಣ್ಣಿನಲ್ಲಿ. ವೇದನೆಯ ವಿಸ್ಫುಟ ಚಿಹ್ನೆ ಎದ್ದು ಬೀಳುತ್ತಿತ್ತು.

ಗಾಳಿಯ ಭರ-ಭರಾಟಕ್ಕೆ ಒಳಗಣ ವಸ್ತುಗಳೆಲ್ಲ ಅಸ್ತವ್ಯಸ್ತವಾಗಿ ಬಿದ್ದು ನಗುತ್ತಿದ್ದುವು—ಭಾಗ್ಯವಂತನ ವಿಪರೀತಪ್ರಸಂಗವನ್ನು ನೆನೆದು.

'ಭರ್-ಭರ-ರರ-ಭರ್-ರರ-ಭರ್-ಭರ್-ಸುಂಯ್ ..'

ಗಾಳಿಯುಸುರಿತು : 'ಮರುಳೆ, ಸೃಷ್ಟಿಯ ಶಾಸನ ನಿನ್ನ ಕೈಯಲ್ಲುಂಟೆ? ಆ ಬಡಜೀವಿಗಳನ್ನು 'ಹೇಡಿ' ಎಂದೆಯಲ್ಲ; ಹುಳುಗಳೆಂದು ತಿರಸ್ಕರಿಸಿದೆಯಲ್ಲ! ಪಾಪಿ, ಸದ್ಯ ನೀನು ನೆಲದ ಮೇಲೆ ಹೊರಳಾಡಿ ನೋಯುತ್ತಿದ್ದೀಯಲ್ಲ! ನೀನೆಂತಹ ಮಹಾ ಹೇಡಿ, ಕ್ಷುದ್ರ ಜಂತು...'

'ಅಯ್ಯೋ! ನಾನು ಪಾಪಿಯೆ?' ಭಾಗ್ಯವಂತ ತಲೆಯೊತ್ತಿ ಕಿರಿಚಿದ. 'ಹೌದು, ಹೌದು, ನಿಶ್ಚಯವಾಗಿಯೂ ಮಹಾಪಾಪಿ! ಕಂಗಾಲರಿಗಿಂತ ಮೊದಲು ನೀನೇ ಸಾಯಬೇಕು. ನಿನ್ನಿಂದ ಏನು ಉಪಯೋಗವಿದೆ ಜಗತ್ತಿಗೆ? ಏಳುಮಜಲಿನ ಮನೆಯ ಕಟ್ಟಿಸಿ ನೀನೊಬ್ಬ ಸುಖವಾಗಿ ಬಾಳಿದರಾಯಿತೆ?.....

'ನಾನು ಬಿರುಗಾಳಿ, ಬಡವರ ಮನೆ-ಮಾರು ಹಾರಿಸಿದೆ. ಅವರು ಇಂತಹ ಎಷ್ಟೋ ನನ್ನ ಆಟೋಪಗಳಿಗೆ ಗುರಿಯಾದದ್ದುಂಟು. ಮತ್ತೂ ಮತ್ತೂ ಧೈರ್ಯದಿಂದ ಎದುರಿಸುತ್ತಾರೆ. ಆದರೆ ನೀನು ಮಾತ್ರ ಅಂಜಿ, ಭದ್ರವಾದ ಮನೆ ಕಟ್ಟಿಸಿ ಬದುಕುತ್ತಿರುವೆ. ಏನಾದರೇನು? ನಿನ್ನ ಬೆನ್ನು ಬಿಡಲು ನಾನು ಹೆದರಬಹುದೆ? ನೀನು ಯಾವ ವ್ಯೂಹವನ್ನೂ ರಚಿಸು ಬೇಕಿದ್ದರೆ! ನನ್ನಿಂದ ಪಾರಾಗಲಾರೆ ಮಾತ್ರ.....

'....ಇಂದು ನನಗೆ ಸಮಾಧಾನವೆನಿಸುತ್ತಿದೆ. ನಿಜಕ್ಕೂ--ಅಜ್ಞಾನಿ, ಪಾಪಿ.' ಬಿರುಗಾಳಿ ಗಂಭೀರವಾದ ಪ್ರತ್ಯುತ್ತರವಿತ್ತಿತು. 'ಹಾಂ' ಭಾಗ್ಯವಂತ ಕಣ್ದೆರೆದ. ಆ ಕಣ್ಣುಗಳಲ್ಲೊಂದು ಹೊಸ ಬೆಳಕು ಮೂಡಿತ್ತು.

'ಭರ್-ಭರ-ಭರ-ಭರ್' ಹೊರಗಡೆ ಗಾಳಿಯ ದೊಂಬೆ ನಿಲ್ಲತೊಡಗಿತ್ತು. ಮುಗಿಲೂ ಹಸನ್ಮುಖಿಯಾಗಿ ನಿಂತಿತ್ತು. ಕಂಗಾಲರು ಕೂಗನ್ನು ನಿಲ್ಲಿಸಿ ಮರಳಿ ತಮ್ಮ-ತಮ್ಮ ಮನೆಗಳನ್ನು ಕಟ್ಟತೊಡಗಿದ್ದರು. ಭಾಗ್ಯವಂತ ಮಾತ್ರ ಸರಿದುಬಿದ್ದ ಶ್ರೀಸೌಧವನ್ನೇ ನೋಡುತ್ತ ಬಿದ್ದುಕೊಂಡಿದ್ದ.

ಪಾಪದ ಫಲ

(ಸಣ್ಣಕತೆ)

ಶ್ರೀ. ರಾಮಚಂದ್ರ ಶೇಡಬಾಳ, ಮಿತ್ರಮಂಡಲ, ಮುಲಾಡ

卐

ಪಿತ್ರಾರ್ಜಿತ ಆಸ್ತಿ-ನೃತ್ತಿಗಳಿಗೆ ಮಗನು ಹೇಗೆ ವಾರಸುದಾರನೋ, ಹಾಗೆಯೆ ಪಿತ್ರಾರ್ಜಿತ ಪಾಪ-ಅನೀತಿಗಳಿಗೂ ಅವನು ವಾರಸುದಾರನಾಗುವನು. ಚಂದ್ರನ ಕಣ್ಣುಗಳು ಕುರುಡಾಗುವುದಕ್ಕೆ ಅವನ ತಂದೆ ಹೊಣೆಗಾರನಾದುದು, ವಿಜ್ಞಾನವನ್ನರಿಯದವರಿಗೆ ಆಶ್ಚರ್ಯಕರವಾಗಿಯೇ ಕಾಣಬಹುದು.

卐

"ಇದು ಹೇಗಾಯಿತು ? ಕಣ್ಣುಬೇನೆ ಬಂದಿತ್ತೇ" ಡಾಕ್ಟರರು ಕೇಳಿದರು. ಮುಕುಂದರಾಯರು—"ಇಲ್ಲ. ಮೊನ್ನೆ ಒಮ್ಮೆಲೇ ಇವನಿಗೆ ಒಂದು ಕಣ್ಣಿಗೆ ಸೂರ್ಯ ಕೂಡ ಕಾಣದಾದನಂತೆ. ನನಗೆ ಹೇಳಿದ ಕೂಡಲೆ ತಮ್ಮ ಕಡೆಗೆ ಹೊರಟೆ. ಇಲ್ಲಿಗೆ ಬಂದು ತಲುಪುವಷ್ಟರಲ್ಲಿ, ಇನ್ನೊಂದು ಕಣ್ಣೂ ದೃಷ್ಟಿವಿಹೀನವಾಗಿದೆ. ನಿಮಗೆ ಬೇಡಿದಷ್ಟು ಹಣ ಸಲ್ಲಿಸುತ್ತೇನೆ ಡಾಕ್ಟರ್! ನನ್ನ ಮಗನ ಕಣ್ಣನ್ನು ಸುಧಾರಿಸಿಕೊಡಿರಿ." ಎಂದು ಅಂಗಲಾಚಿದರು.

ಕತ್ತಲೆಯ ಕೋಣೆಯಲ್ಲಿ ಪರೀಕ್ಷೆ ಮಾಡಿದರು. "ಅನೀತಿಪರ ಕೆಲಸ ಆಗಿಹೋಗಿದೆ." ಡಾಕ್ಟರರು ನಿರ್ಧಾರದ ಧ್ವನಿಯಲ್ಲಿ ನುಡಿದರು. ಮುಕುಂದರಾಯರು ಕಕ್ಕಾವಿಕ್ಕಿಯಾಗಿ ಮಗ ಚಂದ್ರನ ಮುಖ ನೋಡಿದರು. ತಂದೆಯು ಗಾಬರಿಯನ್ನು ಕಣ್ಣು ಕಾಣದಿದ್ದರೂ, ಅವನ ದನಿಯನ್ನು ಕೇಳಿದ ಕವಿ, ಮೆದುಳಿಗೆ ಸಂದೇಶವನ್ನು ತಲುಪಿಸಿತ್ತು. ಚಂದ್ರನಿಗೆ ಚೇಳು ಕುಟುಕಿದಂತಾಯಿತು. ತಾನು ಜನ್ಮವೆತ್ತಿ ಹದಿನೆಂಟು ವರುಷಗಳು ಮಾತ್ರ ಕಳೆದಿದ್ದುವು. ತನ್ನ ಬಾಳು ಒಳ್ಳೆಯ ಸಹವಾಸದಲ್ಲಿಯೆ ಬೆಳೆದು ಬಂದಿತ್ತು. ಕಾಲೇಜಿನ ಹುಡುಗಿಯರ ಪರಿಚಯ ತನಗೆ ಸಾಕಷ್ಟು ಇದ್ದರೂ, ದೈಹಿಕಲಾಲಸೆ ತನ್ನಲ್ಲಿ ಮೂಡಿ ಬಂದಿರಲಿಲ್ಲ. ಸಾತ್ವಿಕತೆಗಾಗಿ. ಹೆಮ್ಮೆಪಟ್ಟುಕೊಳ್ಳುತ್ತಿದ್ದ ತಾನು, ಕಣ್ಣು ಕಳೆದುಕೊಂಡದ್ದು ಸಾಲದೆ ಇದೆಂತಹ ಅಪವಾದಕ್ಕೆ ಬಲಿಯಾಗಬೇಕಾಯಿತು! ಇದೆಂತಹ ದೈವದುರ್ವಿಲಾಸ—ಎಂದು ತನ್ನನ್ನು ತಾನೇ ವಿಮರ್ಶಿಸಿಕೊಂಡನು. ಇನ್ನು ತಂದೆ ತನ್ನ ಬಗ್ಗೆ ತಿರಸ್ಕಾರವನ್ನು ತಾಳಬಹುದೇನೋ ಎಂಬ ಹೆದರಿಕೆಯೂ ಉಂಟಾಯಿತು. ಮೆಲ್ಲಗೆ ಉಸುರಿದ:—"ಡಾಕ್ಟರ್, ನನಗೆ ಪುಸ್ತಕ ಓದುವ ಹುಚ್ಚು ಬಹಳವಿತ್ತು. ಒಂದೊಂದು ಸಲ ಓದಿನ ಭರದಲ್ಲಿ ರಾತ್ರಿ ಕಳೆದು ಹಗಲಾದುದೂ ಉಂಟು. ಆದರೆ ಅನೀತಿಯನ್ನು ನಾನೆಂದಿಗೂ ಕೈಕೊಳ್ಳಲಿಲ್ಲ. ಇಂದು ಒತ್ತಾಯಕ್ಕೆ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಹಾಗೆ ಒಪ್ಪಿಕೊಂಡರೆ, ಅದಕ್ಕೆ ಸರಿಯಾಗಿ ನೀವು ಔಷಧೋಪಚಾರ ಮಾಡುವವರು! ಡಾಕ್ಟರರಿಂದ ಯಾವುದನ್ನೂ ಬಚ್ಚಿಡಬಾರದು ಎಂಬುದು ಸುಶಿಕ್ಷಿತನಾದ ನನಗೆ ತಿಳಿಯದೆ? ಆದ್ದರಿಂದ ವಸ್ತುಸ್ಥಿತಿಯನ್ನು ಹೇಳಿದ್ದೇನೆ."

ಡಾಕ್ಟರರಿಗೆ ಸೇಚನ ಪ್ರಸಂಗ ಬಂತು. ಸುಶಿಕ್ಷಿತ ಮನುಷ್ಯ, ಮನಸ್ಸನ್ನು ಬಿಚ್ಚಿ ಇದ್ದಮಾತು ಹೇಳುತ್ತಿದ್ದಾನೆ. ಅದನ್ನು ನಂಬಬೇಕೆ? ಅಥವಾ ತನ್ನ ಪರೀಕ್ಷೆಯಂತೆ ಖಂಡಿತವೆನಿಸಿದ ಅನೀತಿಯನ್ನು ನಂಬಬೇಕೇ?

"ಚಂದ್ರಾ, ಡಾಕ್ಟರರ ಪರೀಕ್ಷೆ ಸುಳ್ಳಾಗುತ್ತದೆಯೇ? ಯೌವನದ ಹೊಸ್ತಿಲಲ್ಲಿ ಕಾಲಿಡುತ್ತಿರುವ ನಿನ್ನನ್ನು ಕಾಲೇಜಿಗೆ ಕಳಿಸಿದರೂ, ಒಬ್ಬನನ್ನೇ ಹಾಗೆ ಇಡದಾದರೂ ಆಗಿತ್ತು. ತಿಳಿಯದೆ ಯಾವುದಾದರೂ ಹುಡುಗಿಯ ಸಹವಾಸ ಮಾಡಿದ್ದರೆ ಹೇಳಿ ಬಿಡಬಾರದೆ?" ಎಂದು ಮುಕುಂದರಾಯರು ವಸಿಗೊಡಿಸಿದರು.

ಕಾಣದ ಕಣ್ಣುಗಳಿಂದಲೂ ಕಿಡಿ ಕಾರುವಂತೆ ಆಯಿತು ಚಂದ್ರನ ಮುಖ. ಹಾಗೆ ಹೇಳಿ ಎಂದೆ ತಂದೆಯಾಗದೆ ಬೇರೆ ಯಾರಾದರೂ ಇದ್ದರೆ, ಅವರನ್ನು ಸೀಳಿ ಹಾಕುವಷ್ಟು ಸಿಟ್ಟು ಬಂದಿತ್ತು. ನೈಯೊಳಗಿನ ರಕ್ತ ಕತಕತನೆ ಕುದಿಯುತ್ತಿತ್ತು:

"ಅಪ್ಪಾ, ನಾನು ಮೊದಲಿಗೇ ಇದ್ದುದನ್ನು ಹೇಳಿದ್ದೇನೆ, ಮತ್ತೂ ಹೇಳಿಬಿಡು ಎಂದರೆ ಏನು ನನ್ನ ತಲೆ ಹೇಳಲಿ? ನೀವೇ ಹೇಳಿರಿ ಏನಾದರೂ ಮಾಡಿದ್ದರೆ....." ಸ್ತಬ್ಧವಾದ ಡಾಕ್ಟರರ ವಿಚಾರ ಸರಣಿಗೆ ಒಮ್ಮೆಲೆ ಚಾಲನೆ ಕೊಟ್ಟಂತಾಯಿತು ಆ ಕೊನೆಯ ವಾಕ್ಯ—

"ನೀವೇ ಹೇಳಿ ಏನಾದರೂ ಮಾಡಿದ್ದರೆ....."

ಸಿಟ್ಟಿನ ಭರದಲ್ಲಿ ನುಡಿದ ಚಂದ್ರನಿಗೆ ತನ್ನ ಈ ವಾಕ್ಯ ಅಷ್ಟೊಂದು ಉಪಯುಕ್ತವಾದೀತೆಂಬ ಕಲ್ಪನೆಯೇ ಇರಲಿಲ್ಲ.

ಡಾಕ್ಟರರು "ಮುಕುಂದರಾಯರೆ, ಹೀಗೆ ಬನ್ನಿ!" ಎಂದು, ಕವಿಮಾತನ್ನಾಡಿದರು. ಕೊನೆಗೆ ಗಟ್ಟಿಯಾಗಿ—"ನೀವು ಇದಕ್ಕೆ ಉತ್ತರ ಈಗಲೇ ಹೇಳಬೇಕಾದುದಿಲ್ಲ. ವಿಚಾರಮಾಡಿ ನಾಳೆಗೆ ಹೇಳಿ. ವಸ್ತುಸ್ಥಿತಿಯನ್ನು ಹೇಳುವುದರಿಂದ ಪ್ರಯೋಜನವಿದೆ. ಔಷಧೋಪಚಾರ ಸರಿಯಾಗಬೇಕೆಂಬ ಅಭಿಲಾಷೆ ಇವ್ವರೆ, ನೀವು ನಿಜ ಸಂಗತಿಯನ್ನು ಹೇಳುವುದು ತೀರ ಅವಶ್ಯವಾಗಿದೆ." ಎಂದರು.

ಮುಕುಂದರಾಯರು, ಮಗನನ್ನು ತಾವು ಇಳಿದುಕೊಂಡ ಧರ್ಮಶಾಲೆಗೆ ಕರೆತಂದರು. ಅಲ್ಲಿ ದಿನವೊಂದಕ್ಕೆ ಕೋಣೆಗೆ ಮೂರು ರೂಪಾಯಿ ಬಾಡಿಗೆ ತೆರಬೇಕಾಗುತ್ತಿತ್ತು. ಬಿಲ್ಲದೆ, ಒಬ್ಬ ಪ್ರವಾಸಿಯನ್ನು ಅಲ್ಲಿ ಒಂದು ವಾರಕ್ಕೆ ಮೇಲ್ಪಟ್ಟು ಇರಗೊಡುತ್ತಿರಲಿಲ್ಲ. ವಾರವಂತೂ ಮುಗಿಯಲಿ—ಎಂದು ಆ ಬಗ್ಗೆ ಅಲಕ್ಷ್ಯ ಮಾಡಲಾಗಿತ್ತು. ಆದರೆ ಹೊಸ ಚಿಂತೆಯೊಂದು ಮನವನ್ನಾವರಿಸಿತ್ತು: "ವಸ್ತುಸ್ಥಿತಿಯನ್ನು ಹೇಳಬೇಕೇ? ಅಥವಾ ಬಚ್ಚಿಡಬೇಕೇ!" ಮನಸ್ಸು ಹುಚ್ಚೆದ್ದು ಹಿಂದಿನ ಚಿತ್ರಗಳನ್ನು ಒಂದೊಂದಾಗಿ ಕಲ್ಪಿಸತೊಡಗಿತು:—

" ಸಾಲದ ಶೂಲಕ್ಕೆ ಸಿಲು ' ಹತ್ತಂಗಡಿ ಹನುಮಂತ ಒದ್ದಾಡುತ್ತಿದ್ದನು. ಬೇಲೀಫರು ಊರಲ್ಲಿ ಬಂದ ಸುದ್ದಿ ತಿಳಿಯುತ್ತಲೇ ಹಿತ್ತಲ ಬಾಗಿಲಿಂದ ಓಡಿಹೋಗಿದ್ದ. ಆವನ ಹೇಳಿಕೆಯಂತೆ ಅವನು ತಿರುಗಿ ಬರುವವರೆಗೆ, ಜೋಡಿಗೆಂದು ಮಲಗಲು ಅವನ ಮನೆಗೆ ಹೋಗ ತೊಡಗಿದ. ರಾತ್ರಿಯಲ್ಲಿ ಅನಳ ಕೈ ಎದೆಯ ಮೇಲೆ ಬಿತ್ತು. ನಿದ್ದೆಯಲ್ಲಿ ಹಾಗೆ ಆಗಿರಬೇಕೆಂದು ಮೆಲ್ಲಗೆ ಎತ್ತಿ ಇಟ್ಟ. ಆದರೆ ಅದು ಮುದ್ದಾಂ ಹೊಡಿದ ನಿದ್ದೆಯ ನಟನೆ ಎಂದು ತಿಳಿಯಲು ಬಹಳ ವೇಳೆ ಹಿಡಿಯಲಿಲ್ಲ. ಅವಳು ತನ್ನನ್ನು ಪ್ರೋತ್ಸಾಹಿಸಿದಳು. ಏನೂ ಅರಿಯದ ಮುಗ್ಧ ಯುವಕ, ಅಂದು ಕಾಮದ ಕೈಗೊಂಬೆಯಾದೆ "

" ಆಗ ತನ್ನ ತಂದೆ ಜೀವಂತ ಇದ್ದರು. ಮಗನು ಕಲಿತು ವಿದ್ಯಾವಂತನಾಗಲಿ ಎಂದು ಎಷ್ಟೊಂದು ಯತ್ನಿಸಿದರು. ಮುಲ್ಕೀ ಪರೀಕ್ಷೆಗೆ ಶರಣಾರ್ಥಿ ಹೊಡೆದದ್ದು ಅವರಿಗೆ ತುಂಬ ನಿರಾಸೆಯನ್ನುಂಟು ಮಾಡಿತು. ಬಡವರ ಮಕ್ಕಳು ಕಲಿತೇನೆಂದು ಹಲುಬುತ್ತವೆ. ವೆಚ್ಚ ಹಿಡಿಯುವ ತ್ರಾಣವಿರುವುದಿಲ್ಲ. ನಾನು ಕಲಿಸೇನೆಂದರೆ ಮಗನಿಗೆ ಮನಸ್ಸಿಲ್ಲ. ಈ ಜಗತ್ತು ಹೀಗೇ ಎಂದು ಕಾಣುತ್ತದೆ— ' ಕಡೆಲೆ ಇದ್ದರೆ ಹಲ್ಲು ಇಲ್ಲ; ಹಲ್ಲಿದ್ದರೆ ಕಡಲೆಯಿಲ್ಲ ' ಎಂದು ಸಮಾಧಾನ ಹಚ್ಚಿಕೊಳ್ಳುತ್ತಿದ್ದರು. "

" ಅವರು ತೀರಿಕೊಳ್ಳುವ ಮುನ್ನವೇ ಆದುನೆಯನ್ನು ಮಾಡಿದರು. ಆದರೆ ಮೊಮ್ಮಗನನ್ನು ಕಾಣುವ ಯೋಗವಿರಲಿಲ್ಲ. ಮನೆಯ ಒಡಲಿತ ತನ್ನ ಕೈಯಲ್ಲಿ ಬರುತ್ತಲೇ ಮನೆಯವರ ಮೇಲೆ ತನ್ನ ದರ್ಪ ತೋರಿಸಹತ್ತಿದ; ಯಾವುದಕ್ಕೂ ಸಹನೆ ಇಲ್ಲ. ' ನಿಂತರೆ ನಿಂತೆ ಏಕೆ? ಕುಳಿತರೆ ಕುಳಿತೆ ಏಕೆ? ಎಂದು ಥಳಿಸುತ್ತಲೇ ಇರಬೇಕು ನಿಮ್ಮನ್ನು ' ಎಂದು ಹೆಂಡತಿಯನ್ನು ಹೆದರಿಸುತ್ತಿದ್ದ. ಹೆಂಡತಿ ತವರಿನಿಂದ ಬರುತ್ತಲೇ ಸಂಗಡ ತನ್ನ ವಿಧವೆಯಾದ ಕಕ್ಕೆಯನ್ನು ಕರೆತಂದಳು. ಎಷ್ಟೋ ಸಲ ಅವಳನ್ನು ಹೆಂಡತಿಯೊಡನೆ ಹೋಲಿಸಿ ನೋಡಿದ. ಆಕೆ ಹೆಂಡತಿಗಿಂತ ಚೆಲುವೆ ಎಂಬುದು ಖಂಡಿತವಾಯಿತು. ದೋಷವೆಂದರೆ ವಯಸ್ಸಿನಲ್ಲಿ ತನಗಿಂತ ಸಾಕಷ್ಟು ದೊಡ್ಡವಳೆಂಬುದೊಂದೇ. ಸಕೇತಿಯಾಗಿದ್ದುದರಿಂದ, ಮುಖದ ನೇರಿನ ಕುಂಕುಮವೊಂದೇ ವಿಲುಪ್ತ ವಸ್ತುವಾಗಿ ಕಾಣುತ್ತಿತ್ತು. ಅಂದು ತನ್ನಾಕೆಗೆ ತುಂಬ ಕಾಹಿಲೆ ಆಸ್ಪತ್ರೆಗೆ ಕಳಿಸಿ ಬರಬೇಕಾಯಿತು, ' ನಾವೆಲ್ಲ ನೋಡಿಕೊಳ್ಳುತ್ತೇನೆ. ಇಲ್ಲಿ ಯಾರೂ ಇರಕೂಡದು ' ಎಂದು ನರ್ಸ್ ಹೇಳಿದ ಮೇಲೆ ಅನಿವಾರ್ಯ ಆಕೆಯೂ ತನ್ನ ಸಂಗಡ ಮನೆಗೆ ಬಂದಳು. ರಾತ್ರಿಯು ಸಮೀಪಿಸಿದಂತೆ ಅವನ ಮನಸ್ಸು ಚಿಂತಾಕ್ರಾಂತವಾಗತೊಡಗಿತು. ತನಗೆ ಅವಳು ಆ ಭಾವ-ಭಂಗಿಯಲ್ಲಿ ಇನ್ನಷ್ಟು ರೂಪವತಿಯಾಗಿ ಕಂಡಳು. ರಾತ್ರಿಯಾಯಿತು. ಹತ್ತಂಗಡಿಯ ಹೆಂಡತಿ ತನಗೆ ತೋರಿದ ದಾರಿಯನ್ನೇ ತಾನೂ ಅನುಸರಿಸಿದ. ಆ ಹೆಂಗಸು ಕೂಗಲಿಲ್ಲ. ಹಿರಿಯ ಮನುಷ್ಯಳಂತೆ ತಾಳ್ಮೆಯಿಂದ ಬುದ್ಧೀ ಹೇಳಿದಳು. ಕಾಮದ ಕಣ್ಣಿಗೆ ಅವಳ ರೂಪ ಕಟ್ಟಿಹೋಗಿತ್ತು. ಒತ್ತಾಯದಿಂದ ಅವಳನ್ನು ಬರಸೆಳೆದ. ಅವಳು ಸುಮ್ಮನಿದ್ದಳು. ಒಪ್ಪಿಗೆಯಾಯಿತೆಂದು ತಿಳಿದು ಸಂಭ್ರಮ ಪಟ್ಟ. ಬೆಳಗಾಗುತ್ತಲೇ ಊರ ಬದಿಯ ಕೆರೆಯಲ್ಲಿ ಅನಳ ಹೆಣ ತೇಲುತ್ತಿತ್ತು. ಅವಳು ಬಡವೆ. ನಿರ್ಗತಿಕಳಾಗಿ ಆಲ್ಲಿಗೆ ಬಂದಿದ್ದಳು. ಆದರೆ ಮಾನವಂತೆ! ಮಾನಹೀನಳಾಗಿ ಬದಕುವುದಸಾಧ್ಯವಾಗಿ ಹಾಗೆ ಕೊನೆ ತಂದುಕೊಂಡಿದ್ದಳು. ಕಾಲುಜಾರಿ ಬಿದ್ದಳೆಂದು ಸಿದ್ಧಪಡಿಸಬೇಕಾದರೆ, ಕೈಯಿಂದ ಸಾವಿರ ರೂಪಾಯಿ ಜಾರಿ ಹೋಗಿದ್ದುವು.

" ಮನಸ್ಸಿಗೆ ಪಶ್ಚಾತ್ತಾಪವಾದುದು ಆ ಕ್ಷಣ ಮಾತ್ರ. ಮತ್ತೆ ಮನಸ್ಸು ಅದೇ ಕಾಮದ ಸುತ್ತ ಸುಳಿದಾಡಹತ್ತಿತು. ತಾನೊಂದು ವ್ಯವಹಾರ ಮಾಡುವುದಾಗಿ ' ಲೇಡಿ ಟೈಪಿಸ್ಟ್ ಬೇಕು ' ಎಂದು ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟ. ಕ್ರಿಶ್ಚನ್ ಹುಡುಗಿಯೊಬ್ಬಳು ದೊರೆತಳು. ಅವಳ ಹಿಂದಿನಿಂದ ಬಂದು, ಭುಜದ ಮೇಲಿಂದ ತನ್ನ ಕೈ ಟೈಪರೈಟರ್ ಕಡೆಗೆ ಒಯ್ದು—' ಇಲ್ಲಿ ಇನ್ನಿಷ್ಟು ಜಾಗೆ ಬಿಟ್ಟಿದ್ದರೆ ಒಳಿತಾಗುತ್ತಿರಲಿಲ್ಲವೆ? ' ಎಂದು ಕೇಳುತ್ತಿದ್ದ. ಇವನ ಅಜ್ಞಾನ ಹಾಗೂ ಇಂಗಿತವನ್ನರಿತ ಆಕೆ ಮುಗುಳ್ನಗೆಯಿಂದ ಉತ್ತರಿಸುತ್ತಿದ್ದಳು. ಅವಳನ್ನು ತನ್ನ ಜಾಲದಲ್ಲಿ ಹಾಕಿಕೊಂಡ. ಊರಲ್ಲಿ ' ಗುಜುಗುಜು ' ಪ್ರಾರಂಭವಾಗಲು, ವ್ಯವಹಾರದಲ್ಲಿ ನಷ್ಟವಾಯಿತೆಂದು ಅವಳನ್ನು ಹೊರಗೆ ಅಟ್ಟಿಬಿಟ್ಟ. "

" ತಾನು ಊರಲ್ಲಿಲ್ಲದಾಗ ಪತ್ರ ಬಂದು, ತಂದೆಗೆ ತುಂಬ ಕಾಹಿಲೆ ಎಂದರಿತುಕೊಂಡು, ಹೆಂಡತಿಯು ತವರಿಗೆ ಹೊರಟುಹೋಗಿದ್ದಳು. ತನ್ನ ಅಪ್ಪಣೆಯಿಲ್ಲದೆ ಹೋದುದಕ್ಕೆ ಶಿಕ್ಷೆಯಾಗಿ, ' ಮರಳಿ ಬರುವ ಆಗತ್ಯವಿಲ್ಲ ' ಎಂದು ಸಿಕ್ಕಾಬಟ್ಟೆಯಾಗಿ ಪತ್ರ ಬರೆದ. ಅವಳು ಉತ್ತರ ಬರೆಯಲೂ ಇಲ್ಲ. ಆಗ ಮರಳಿ ಬರಲೂ ಇಲ್ಲ. ಕೆಲ ದಿನ ಕಾಯ್ದ. ಅಭಿಮಾನ ಕೆಣಕಿದಂತಾಯಿತು. ' ಹೇಳೀ ಕೇಳೀ ಗಂಡುಸು. ನನಗಾರ ಭಯ? ' ಎಂದು ಸ್ವಚ್ಛಂದವಾಗಿ ಸೂಳೆಯ ಸಹವಾಸ ಮಾಡಿದ. ಹೆಂಡತಿ ಮರಳಿ ಬಂದು ಒಂದು ಗಂಡು ಹಡೆದ ಮೇಲೆ ಹೃದಯವಿಕಾರದಿಂದ ತೀರಿಕೊಂಡಳು. ಆಮೇಲೆ ಮಗನನ್ನು ತನ್ನ ದೂರದ ಆಪ್ತರಲ್ಲಿ ಖರ್ಚುಕೊಟ್ಟು ಇಟ್ಟಿದ್ದಾಯಿತು. ಹೈಸ್ಕೂಲು ತುಗಿದು ಕಾಲೇಜಿಗೆ ಹೋಗುವಾಗ, ಶಹರಿನಲ್ಲಿ ಸ್ವತಂತ್ರವಾಗಿ ಅವನಿಗೆ ವ್ಯವಸ್ಥೆ ಮಾಡಿಕೊಟ್ಟಿದ್ದ. ಆದರೆ ಮಗ ವಿವೇಕಿ. ತನ್ನಂತೆ ಆಡ್ಡ ದಾರಿ ಹಿಡಿಯಲಿಲ್ಲ. ತಾನು ಮೊದಲು ಯೋಚಿಸಿದ್ದು ಸರ್ವಥಾ ತಪ್ಪು. ತನ್ನ ಪಾಪದ ಫಲ ಇದು. ಮಗನ ಕಣ್ಣುಗಳನ್ನು ಕಳೆದಿದೆ. ಡಾಕ್ಟರರಿಗೆ ಈ ಮಾತು ಹೇಳದೆ ವಿಧಿಯಿಲ್ಲ! " ಎಂದು ನಿರ್ಧರಿಸಿದ. ಮನಸ್ಸಿನ ಯೋಚನೆಯ ಭಾರ ತುಸು ಇಳಿದಂತಾಯಿತು.

ಡಾಕ್ಟರರ ಔಷಧೋಪಚಾರದ ಫಲವಾಗಿ ಕಣ್ಣುಗಳಿಗೆ ದೃಷ್ಟಿ ಬಂತು. ತಂದೆಗೆ ಆಡಿದುದನ್ನು ಮಗ ಮರೆತ; ಆದರೆ ಮಗನಿಗೆ ಆದದ್ದನ್ನು ತಂದೆ ಆಜೀವ ಮರೆಯಲಿಲ್ಲ. ಕಾರಣ ತನ್ನ ಪಾಪದ ಫಲ ತನಗೊಂದು ಪಾಠ ಕಲಿಸಿತ್ತು.

ಸಾಹಿತ್ಯವನವಿಹಾರ

ಇದೊಂದು ಹೊಸವಿಭಾಗ. ಹಳೆಯ ಹೊಸ ಸಾಹಿತ್ಯಾಭ್ಯಾಸದ ಚರ್ಚೆ-ವಿಚರ್ಚೆಗಳನ್ನು ಈ ವಿಭಾಗದಲ್ಲಿ ಕೊಡಲಾಗುವುದು. ಕಾವ್ಯ-ಲಕ್ಷಣ, ಛಂದಸ್ಸು, ಅಲಂಕಾರ, ರಸ, ವ್ಯಾಕರಣ ವಿಚಾರಗಳಿಗೂ ಕವಿಚರಿತ್ರೆಗಳಿಗೆ ಸಂಬಂಧಿಸಿದ ವಿಷಯಗಳಿಗೂ ಇದರಲ್ಲಿ ಅವಕಾಶ ದೊರೆಯುವುದು. ಸಾಹಿತ್ಯಾಭ್ಯಾಸಿಗಳು ತಮ್ಮ ಅಭ್ಯಾಸದಲ್ಲಿ ಕಂಡುಹಿಡಿದ ಹೊಸಸಂಗತಿಗಳನ್ನೂ ಬಂದ ಸಂದೇಹಗಳನ್ನೂ ಕುರಿತು ಬರೆದು ಕಳುಹಿ ಈ ವಿಭಾಗವನ್ನು ಯಶಸ್ವಿಯಾಗಿಸಬೇಕೆಂದು ಹಾರೈಕೆ.

ಸಂ. ಜ. ಧಾ.

'ಏಹೊಳೆಯ ವೆಂಕಟೇಶ' ಇದು ಯಾವ ಕವಿಯ ಅಂಕಿತ?

೧೯೨೬-ನೆಯ ವರ್ಷವಿರಬಹುದು. ನನಗಾಗ ಏಳೆಂಟು ವರ್ಷದ ವಯಸ್ಸು. ಎಳೆಯತನದಲ್ಲಿ ಧ್ವನಿಯು ಇಂಪಾಗಿ ಇದ್ದುದರಿಂದ, ನಮ್ಮ ಮನೆಯಲ್ಲಿಯ ಹಿರಿಯರು ಹಾಡುತ್ತಿದ್ದ ಎಲ್ಲ ಹಾಡುಗಳನ್ನೂ ನಾನು ಕಲಿತು ಹಾಡುತ್ತಲಿದ್ದೆ. ನಮ್ಮ ಊರು ಹಳ್ಳಿಯಾದುದರಿಂದ ಅಲ್ಲಿ ನನಗೆ ಹೊಸ ಹೊಸ ಹಾಡುಗಳು ಎಲ್ಲಿಂದ ದೊರೆಯಬೇಕು? ಆದರೂ ಒಬ್ಬ ಹೊಸ ಹಾಡುಗಳನ್ನು ಕಲಿಸುವ ಹಾಡುಗಾರ ನನಗೆ ಸಿಕ್ಕಿದರು. ನಮ್ಮ ದಾಯಾದಿಗಳ ಆಪ್ತವರ್ಗಕ್ಕೆ ಸೇರಿದ ಹುಬ್ಬಳ್ಳಿಯ ಗೃಹಸ್ಥರೊಬ್ಬರು, ನಮ್ಮ ಹಳ್ಳಿಗೆ ಬಂದು ಅಲ್ಲಿಯೇ ಇರತೊಡಗಿದರು. ಎಲ್ಲರಂತೆ ಅವರೂ ನನ್ನ ಹಾಡುಗಳನ್ನು ಕೇಳಿದರು; 'ಭಲೆ' ಎಂದು ಬೆನ್ನು ತಟ್ಟಿ, ತಮಗೆ ಬರುತ್ತಿದ್ದ ಅನೇಕ ಹೊಸ ಹೊಸ ಹಾಡುಗಳನ್ನು ನನಗೆ ಕಲಿಸಿದರು. ಆ ಹಾಡುಗಳಲ್ಲಿ 'ಏಹೊಳೆಯ ವೆಂಕಟೇಶ' ಎಂಬ ಅಂಕಿತದಿಂದ ಕೂಡಿದ್ದ ೩-೪ ಹಾಡುಗಳು ನನಗೆ ತುಂಬ ರುಚಿಸಿದುವು. ಅವುಗಳನ್ನು ನನ್ನಿಂದ ಹಾಡಿಸಿ ಕೇಳಿ ಕೇಳಿ, ತಮ್ಮ ಮೆಚ್ಚಿಕೆಯನ್ನು ಸೂಚಿಸಿದ ಹಿರಿಯರು ಎಷ್ಟೋ ಜನರು.

ನನಗಾಗ ಆ ಹಾಡುಗಳಲ್ಲಿಯ ಸಾಹಿತ್ಯ-ಸಂಗೀತ ಗುಣಗಳೆಂತಹವೆಂಬುದು ಸ್ವಲ್ಪವೂ ತಿಳಿದಿರಲಿಲ್ಲ. ಏನೋ ಒಂದು ಬಗೆಯ ಪ್ರೀತಿಯಿಂದ ಅವುಗಳನ್ನು ಹಾಡುತ್ತಿದ್ದುದೆಷ್ಟೊ ಅಷ್ಟೆ! ಆದರೆ ನನ್ನ ವಯಸ್ಸಾಗಿ, ಸಾಹಿತ್ಯ-ಸಂಗೀತಗಳ ಪರಿಚಯವು ಹೆಚ್ಚಾದಂತೆಲ್ಲ, ಆ ಹಾಡುಗಳ ರಚನಾವೈಶಿಷ್ಟ್ಯವು ನನಗೆ ತಿಳಿಯತೊಡಗಿತು. ಎಂತಲೇ ಆ ಕೃತಿಗಳ ಕವಿಯು ಯಾರೆಂಬುದನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವು ತಲೆದೋರಿತು. ಹಿರಿಯರಾದ ಸಾಹಿತ್ಯಾಭ್ಯಾಸಿಗಳನ್ನು ಕೇಳಿ ತಿಳಿದುಕೊಳ್ಳಬೇಕೆಂದು ಅನೇಕ ಸಲ ಹವಣಿಸಿದೆ; ಆದರೆ ಯಾರಿಂದಲೂ ನನಗೆ ನಿಜಸಂಗತಿ ದೊರೆಯದೆ ನಿರಾಶನಾದೆ.

ನಾನು ಬೆಳೆದು ದೊಡ್ಡವನಾಗುವುದರಲ್ಲಿಯೆ, ನನಗೆ ಅಂದು ಹಾಡುಗಳನ್ನು ಕಲಿಸಿದ ಗೃಹಸ್ಥರು ದಿವಂಗತರಾಗಿ ಹೋದುದರಿಂದ, ಅವರಿಂದಲೂ ಕೃತಿಕಾರನ ಬಗೆಗೆ ಯಾವ ಸಂಗತಿಯೂ ತಿಳಿಯು-ವಂತಿರಲಿಲ್ಲ. ಆದರೆ ಆ ಗೃಹಸ್ಥರು ನನಗೆ ಹಾಡುಗಳನ್ನು ಕಲಿಸು-ತ್ತಿರುವಾಗ, ಏಹೊಳೆಯ ಈ ವೆಂಕಟೇಶಕವಿ ಅನೇಕ ಹಾಡುಗಳನ್ನು ರಚಿಸಿರುವರಲ್ಲದೆ, ಅರ್ಜುನನಿಗೆ ಊರ್ವಸಿಯು ಶಾಪಕೊಟ್ಟ ಕಥೆ ಮೊದಲು ಮಾಡಿ, ಕೀಚಕನ ವಧೆಯ ವರೆಗೂ ಒಂದು ನಾಟಕವನ್ನೂ ಬರೆದಿದ್ದಾರೆಂದು ಹೇಳುತ್ತಿದ್ದರು. ಇಷ್ಟು ದಿನಗಳಾದರೂ ಆ ನಾಟಕವು ನನಗೆಲ್ಲಿಯೂ ನೋಡಲಿಕ್ಕೆ ದೊರೆತಿಲ್ಲ; ಇಷ್ಟೇ ಅಲ್ಲ ನನಗೆ ಗೊತ್ತಿರುವ ಹಾಡುಗಳಲ್ಲದೆ, ಅವರ ಅಂಕಿತದ ಬೇರೆಯ ಹಾಡುಗಳನ್ನೂ ನಾನು ಎಲ್ಲಿಯೂ ಕೇಳಿಲ್ಲ.

೧೯೪೧-ನೆಯ ಇಸ್ವಿಯಲ್ಲಿ ನಾನು ನನ್ನ ಗೆಳೆಯರೊಂದಿಗೆ ಹ್ಯುವಾಸ ಹೊರಟುನ್ನು ನಾಮಿ ಪಟ್ಟದಕಲ್ಲುಗಳನ್ನು ನೋಡಿಕೊಂಡು, ಏಹೊಳೆಗೂ ಹೋಗಿದ್ದೆನು. 'ಏಹೊಳೆಯ ವೆಂಕಟೇಶ' ಕವಿಯ ವಿಚಾರವನ್ನು ತಿಳಿದುಕೊಳ್ಳುವ ಕುತೂಹಲದಿಂದ ನಾನು, ಅಲ್ಲಿ ಅನೇಕ ಜನರನ್ನು ಕೇಳಿದೆನು. ಆಶ್ಚರ್ಯದ ಸಂಗತಿಯೆಂದರೆ, ಆ ಕವಿಯ ಅಸ್ತಿತ್ವದ ವಿಷಯವೂ ಅಲ್ಲಿಯ ಜನರಿಗೆ ಗೊತ್ತಿದ್ದಂತೆ ಕಾಣಲಿಲ್ಲ. ಯಾರಿಂದಲೂ ನನಗೆ ಕವಿಯ ವಿಷಯ ಗೊತ್ತಾಗಲಿಲ್ಲ. ಆದರೆ ಆ ಊರಲ್ಲಿ ಒಂದು ವೆಂಕಟೇಶನ ದೇವಾಲಯವಿದ್ದುದು ನಮಗೆ ತಿಳಿಯಿತು. ನಾವೆಲ್ಲರೂ ಅಲ್ಲಿಗೆ ಹೋಗಿ, ಆ ದೇವರ ದರ್ಶನವನ್ನು ಮಾತ್ರ ಪಡೆದು ಬಂದೆವು.

ಕವಿಯ ಕೃತಿಯ ಮಾದರಿಯೆಂತಹದಿದೆಯೆಂಬುದನ್ನು ತಿಳಿ-ಹಲು ನನಗೆ ಗೊತ್ತಿರುವ ಆ ಹಾಡುಗಳನ್ನು ಇಲ್ಲಿ ಕೊಡಬೇಕೆಂದಿರು-ವೆನು. ಇವು ಸಂಪೂರ್ಣಕೃತಿಗಳೋ ಕೃತಿಭಾಗಗಳೋ ಎಂಬುದನ್ನು ನಾನು ಹೇಳಲಾರೆ. ಆದರೆ ಇವು ಆ ಕವಿಯ ಸಾಹಿತ್ಯ-ಸಂಗೀತಜ್ಞ-ತೆಯ ಪ್ರೌಢತೆಯನ್ನು ತಿಳುಹಲು ಸಮರ್ಥವಾಗಿರುವುವೆಂದು ನನ್ನ ನಂಬುಗೆ:

೧ನೆಯ ಹಾಡು

ಸಾರಸಾಕ್ಷನೇ ಮಹಾ-
ಪಾರಾ-ವಾರಾ-ಗಾರನೇ ವಿಹಾರನೇ ಪಾಹಿ! ॥ ಪಲ್ಲ ॥
ದಾನವ-ವಾಂತಕ-ಕಾನೇ ಸಲಹೋ!
ದೀನಮಂದಾರಾ-ಶ್ರೀ-ಮಾನಿನೀಧರಾ!
ಮೀನಾಂಕನಯ್ಯನೇ-
ಧೇನುಕವೈರಿಯೆಮ್ಮನೀಗ-
ವಾರಾವೀರಾಗಾರನೇ ವಿಹಾರನೇ ಪಾಹಿ! ॥ ೧ ॥

ಬಲಿಭಂ-ಜನರಂ-ಜನನೇ-ಸಲಹೋ
ಎಲರುಣಿಯ ತಲ್ಪನೇ
ಐಹೊಳೆಯ ನಿಲಯನೇ
ಶ್ರೀವೆಂಕಟೇಶನೇ ಮಹಾ-
ವಾರಾವಾರಾಗಾರನೇ ವಿಹಾರನೇ ಪಾಹಿ! ॥ ೨ ॥

೩ನೆಯ ಹಾಡು

ನೀರೆಜದಳನಯನ ಪೊರೆಯೊ
ನಿಗಮವೇದ್ಯನೇ—ನಿರವಧಿಕನೆ! ॥ ಪಲ್ಲ ॥

ದ್ವಾರಕಾಪುರಾಧಿವಾಸ.....
ಧೀರಾ ಸುವಿಚಾರಾ ಗುಣಸಾರಾ ಗಂಭೀರನೆ ವರ-
ಮಾರಜನಕ ಮಂದಹಾಸ-ನೀರೆಜದಳನಯನ ॥ ಅ.ಪಲ್ಲ ॥

ಸುಂದರವರ ಐಯಹೊಳೆಯ
ವೆಂಕಟೇಶನೇ ಸುರಪೋಷನೆ,
ಸ್ಯಂದನಾಂಗಧೃತಕರಾಬ್ಜ..... ...
ನಂದಾವರಕಂದಾ ದಯದಿಂದಾ[illegible]ಸೋವಿಂದನೆ ನೀ
ಇಂದು ಕಾಯೊ ಬಂದು ಬೇಗ[illegible]ನೀರೆಜದಳನಯನ ॥ ೧ ॥

(ಈ ಹಾಡಿಗೆ ೩ನುಡಿಗಳಿಗಬಹುದು. ನಿನ್ನ ನೆನಪಿನಲ್ಲಿ ಇದಿಷ್ಟೇ ಉಳಿದಿದೆ.)

೪ನೆಯ ಹಾಡು

ಮಂಗಲಂ ಸುಮಂಗಲಂ ಶ್ರೀರಂಗದಯಾಪಾಂಗಗೆ
ತುಂಗವರ ಮತಂಗವೈರಿ ಭಂಗ ಮಂಗಲ.....
ಭಂಗಮಾಡಿದಾತಗೆ—ಮಂಗಲಂ ಸುಮಂಗಲಂ ॥ ಪಲ್ಲವಿ ॥

ಶಪರ ಕಮಠ ನಿಪುಣವರಹ
ನಿಪುಲ ನಾರಸಿಂಹಗೆ....।
ತ್ರಿಪಥಗಾಮಿನಿಯನು ಪಿಡಿದ
ನೃಪರನಳಿದಾ.....।
ನೃಪರನಳಿದಾತಗೆ— ಮಂಗಲಂ ಸುಮಂಗಲಂ ॥ ೧ ॥

ವಿಪಿನವಾಸ ವಿಜಯಸೂತ
ಕಪಟ ಬೌದ್ಧರೂಪಗೆ ।
ಚಪಲ ಹಯವನೇರಿ ಕರದಿ
ಸುರಗಿ ಪಿಡಿದಾ.....
ಸುರಗಿ ಪಿಡಿದಾತಗೆ— ಮಂಗಲಂ ಸುಮಂಗಲಂ ॥ ೨ ॥

ಕಪಿಲ-ದತ್ತರೂಪನಾದ
ತಪನಕೋಟಿ ಭಾಸಗೆ ।
ಸುಫಲವೀವ ಸುಜನಜೀವ
ಐಯಹೊಳೆಯಾ—
ಹೊಳೆಯ ವೆಂಕಟೇಶಗೆ— ಮಂಗಲಂ ಸುಮಂಗಲಂ ॥ ೩ ॥

ಬಣ್ಣ ಬಣ್ಣಗಳಲ್ಲಿ ಮುದ್ರಣ!
ಇದೀಗ ಪ್ರಕಟವಾಗಿದೆ.

ಅಭಿನವ ಗಣಿತ

ಲೇಖಕ: ಹರಿಹರ

ಪ್ರಾಥಮಿಕ ೩ನೆಯ ವರ್ಗಕ್ಕಾಗಿ ೧೯೩೫ರ ಅಭ್ಯಾಸಪತ್ರಿಕೆಯಂತೆ ಬರೆಯಲ್ಪಟ್ಟು ಪ್ರಕಟಿಸಲ್ಪಟ್ಟಿದೆ. ಪುಟಪುಟಕ್ಕೂ ಚಿತ್ರಗಳ ಸೂಚಿ! ವರ್ಣರಂಜಿತ ಮುದ್ರಣ!!

ಬೆಲೆ ಕೇವಲ ೧೦ ಆಣೆ. ವ್ಯಾಪಾರಿಗಳಿಗೆ ಧಾರಾಳ ಕಮೀಶನ್.

ಇಂದೇ ನಿಮ್ಮ ಪ್ರತಿ ಪಡೆಯಿರಿ!

ಶ್ರೀಸಾಯಿ ಪಬ್ಲಿಶಿಂಗ್ ಹೌಸ್, ಧಾರವಾಡ

ಇವುಗಳಲ್ಲದೆ ವಿರಾಟಪರ್ವ ನಾಟಕಕ್ಕೆ ಸಂಬಂಧಿಸಿದ ಕೆಲವು ತುಂಡುಪದ್ಯಗಳೂ ನನಗೆ ಬರುತ್ತಿದ್ದುವು. ಆದರೆ ಈಗ ಅವು ಹೆಚ್ಚಾಗಿ ನನ್ನ ನೆನಪಿನಲ್ಲಿ ಉಳಿದಿಲ್ಲ. ಮೇಲೆ ಕೊಟ್ಟಿರುವ ಹಾಡುಗಳನ್ನು ನೋಡಿದರೆ, ಈ ಐಯಹೊಳೆಯ ವೆಂಕಟೇಶಾಂಕಿತ ಕವಿಯು ಒಳ್ಳೆಯ ವಾಗ್ಗೇಯಕಾರನಾಗಿದ್ದನೆಂಬುದು ಚೆನ್ನಾಗಿ ಕಂಡುಬರುವಂತಿದೆ. ಹಾಡುಗಳಿಗೆ ಬಳಸಿದ ರಾಗಗಳೂ ಹಾಡುಗಳ ತಾಳ-ಗತಿಗಳೂ ಕವಿಗೆ ಕರ್ನಾಟಕ ಸಂಗೀತದಲ್ಲಿ ಇರುವ ಅಭಿಜ್ಞತೆಯನ್ನು ವ್ಯಕ್ತಪಡಿಸುವಂತಿವೆ. ಹಾಡುಗಳ ಪರಿಶುದ್ಧವಾದ ಭಾಷೆ, ಕವಿಯ ಸಂಸ್ಕೃತ-ಕನ್ನಡ ಭಾಷಾಪರಿಣತಿಗೆ ನಿದರ್ಶಕವೆನಿಸುವಂತಿದೆ. ಆದರೆ ಈ ಕವಿಯು ಯಾರೆಂಬುದು ನಮ್ಮಲ್ಲಿ ಬಹುಜನರಿಗೆ ಗೊತ್ತಿರುವಂತೆ ಕಾಣುವುದಿಲ್ಲ.

ಕನ್ನಡಿಗರೆಲ್ಲರಲ್ಲಿ ನನ್ನದೊಂದು ವಿನ್ನಹ: ಈ ಕವಿ ಯಾರೆಂಬುದು ಯಾರಿಗಾದರೂ ಗೊತ್ತಿದ್ದರೆ, ಅವರು ಕವಿಯ ಪರಿಚಯವನ್ನು ಬರೆದು ಕಳುಹಬೇಕು; ಅಲ್ಲದೆ ಈ ಕವಿಯ ಅಂಕಿತದ ಕೃತಿಗಳು ಎಲ್ಲಿಯಾದರೂ ದೊರೆಯುತ್ತಿದ್ದರೆ, ಅವುಗಳನ್ನು ಸಂಗ್ರಹಿಸಿ, ದಯೆಯಿಟ್ಟು ನನ್ನ ಕಡೆಗೆ ಕಳುಹಬೇಕು. ಈ ಕವಿ ಕಳೆದ ಶತಮಾನದ ಕೊನೆಯ ಪಾದದಲ್ಲಿ ಬದುಕಿರಬೇಕೆಂದು ನನ್ನ ಊಹೆ. ವಿಜಾಪುರ ಜಿಲ್ಲೆಯಲ್ಲಿ ಈ ಕವಿಯ ವಿಚಾರವನ್ನು ತಿಳಿದ ಹಿರಿಯರು, ಒಬ್ಬಿಬ್ಬರಾದರೂ ಇದುವರೆಗೆ ಬದುಕಿ ಇರಬಹುದು. ಅವರಿಂದ ಈ ಅಜ್ಞಾತ ಕವಿಯ ಚರಿತ್ರೆಯೂ ಹೆಚ್ಚಿನ ಕೃತಿಗಳೂ ಬೆಳಕಿಗೆ ಬಂದರೆ, ಒಂದು ದೊಡ್ಡ ಸಾಹಿತ್ಯಸೇವೆ ಅವರಿಂದ ಘಟಿಸಿದಂತಾಗಬಹುದು.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿಯ ನಮ್ಮ ಕೋರಿಕೆಯಂತೆ, 'ಗುಲಾಬಿ' ಕತೆಯ ವಿಮರ್ಶೆಗಳು ೫ ಜನರಿಂದಲೂ, 'ನಂಜಿ' ಸ್ವಭಾವಚಿತ್ರದ ವಿಮರ್ಶೆಗಳು ೩ ಜನರಿಂದಲೂ ಬಂದಿವೆ. ಪ್ರತಿತಿಂಗಳ ಮೇಲಾಟದಲ್ಲಿಯೂ ಕೆಲವರು ತಪ್ಪದೆ ಭಾಗ ವಹಿಸುತ್ತಿರುವುದು ಪ್ರಶಂಸನೀಯವಾದ ಸಂಗತಿಯಾಗಿದೆ. ಅವರಂತೆಯೆ ಹೊಸ ಹೊಸ ಜನರು ಮುಂದೆ ಬಂದು ಈ ವಿಭಾಗದ ಪ್ರಯೋಜನ ಪಡೆಯಬೇಕೆಂದು ನಮ್ಮ ಅಪೇಕ್ಷೆ.

'ಗುಲಾಬಿ'ಯ ವಿಮರ್ಶಕರು:

೧. ಶ್ರೀ. ಪುಂಡೂರು ವೆಂಕಟರಾಜ ಪುಣಿಂಚತ್ತಾಯ, ಕಾಸರಗೋಡು. ೨. ಶ್ರೀ. ಎಚ್. ಎ ಶೇಗಜಿ, ಹಿರೇಲೋಣಿ. ೩ ಶ್ರೀ. ಎಂ. ಎನ್. ಕುರುಂದವಾಡಕರ, ಕೆನರಾಕಾಲೇಜ್, ಕುಮಟಾ. ೪. ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು. ೫ ಶ್ರೀ. ಮಹೇಶ ಸುಲ್ತಾನ್‌ಪೂರ, ಗೋಗಿ.

'ನಂಜಿ'ಯ ವಿಮರ್ಶಕರು:

೧. ಶ್ರೀ. ಜಿ. ಆರ್. ಕರಗುದರಿ, ಹುಬ್ಬಳ್ಳಿ. ೨. ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು. ೩. ಶ್ರೀ. ಕೆ. ನಾಗರಾಜ, ಮದ್ರಾಸ್.

ಎಲ್ಲ ವಿಮರ್ಶೆಗಳನ್ನೂ ನಮ್ಮ ಸಂಪಾದಕಸಮಿತಿಯವರು ಓದಿನೋಡಿ, ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ:

'ಗುಲಾಬಿ' ಕತೆಯ ವಿಮರ್ಶಕರಲ್ಲಿ ಶ್ರೀ ಎಂ. ಎನ್. ಕುರಂದವಾಡಕರರ ಮತ್ತು ಶ್ರೀ. ಕೆ. ಎಸ್. ಶರ್ಮಾ ಅವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ. ಮಹೇಶ ಸುಲ್ತಾನ್‌ಪುರ—ಗೋಗಿ ಮತ್ತು ಶ್ರೀ. ಪುಂಡೂರು ವೆಂಕಟರಾಜ ಅವರ ವಿಮರ್ಶೆಗಳು ಉತ್ತಮವಾಗಿವೆ. ಮಿಕ್ಕುದೊಂದು ಸಾಮಾನ್ಯವಾಗಿದೆ.

'ನಂಜಿ'ಯ ವಿಮರ್ಶೆಗಳಲ್ಲಿ ಶ್ರೀ. ಕೆ. ಎಸ್. ಶರ್ಮರದು ಅತ್ಯುತ್ತಮವಾಗಿದೆ. ಶ್ರೀ. ಆರ್. ಜಿ. ಕರಗುದರಿಯವರನು ಚೆನ್ನಾಗಿದೆ. ಮಿಕ್ಕುದೊಂದು ತೀರ ಸಾಮಾನ್ಯ.

ಮುಂದಿನ ಸಂಚಿಕೆಯ ಮೇಲಾಟಕ್ಕಾಗಿ 'ರವಿ.ರವಿ' ಎಂಬ ಸಣ್ಣಕಥೆಯನ್ನಾಗಲಿ, 'ಸಂಶಯಪಿಶಾಚಿ' ಎಂಬ ವಿನೋದದೃಶ್ಯವನ್ನಾಗಲಿ ವಿಮರ್ಶಿಸಿ ಕಳುಹಿಸಬೇಕು.

—ಸಂಪಾದಕ

ಗು ಲಾ ಬಿ

(ಕಥಾವಿಮರ್ಶೆ)

ಶ್ರೀ. "ಎಮ್ಮೆಸ್ಕೆ" ಹುಬ್ಬಳ್ಳಿ

ಗುಲಾಬಿ! ಗುಲಾಬಿಹೂವನ್ನು ಯಾರು ತಾನೆ ನೋಡಿಲ್ಲ? —ಬ್ರಹ್ಮನಿರ್ಮಿತ ಅತ್ಯಂತ ಸುಂದರ ವಸ್ತುಗಳಲ್ಲೊಂದಾದ ಗುಲಾಬಿಯನ್ನು—

—ವಿಧಾತೃ ಕೃಷಿಮಾಡಿದ ತೋಟದಲ್ಲಿದ್ದ ನಾನಾಬಗೆಯ ಪುಷ್ಪಗಳಲ್ಲಿ ತನ್ನದೇ ಆದ ಒಂದು ಅನುಪಮ ಸೌಂದರ್ಯದಿಂದಲೂ, ಮಾದಕ ಸೌರಭದಿಂದಲೂ ಮತ್ತು ಮೃದು-ಮಧುರವಾದ ಅಂಗಕಾಂತಿಯಿಂದಲೂ ಕೂಡಿದ ಗುಲಾಬಿಯನ್ನು—

—ಭುವಿಯ ನಾನಾಜಾತಿಯ ಪುಷ್ಪಗಳಲ್ಲಿ ತನ್ನ ಅಂಗಸೌಂದರ್ಯದಿಂದ ಅಗ್ರಸ್ಥಾನ ಪಡೆದ ಗುಲಾಬಿಯನ್ನು—

—ಕವಿಸಾರ್ವಭೌಮರ ಹೋಲಿಕೆಯ ವಸ್ತುವಾಗಿ ಸಾಹಿತ್ಯರಂಗದಲ್ಲೂ ತನ್ನದೇ ಛಾಪು ಸೌರಭ ಬೀರುವ ಗುಲಾಬಿಯನ್ನು—

—ಸ್ತ್ರೀಯರ ಮುಡಿಯೇರಿದಾಗ, ಅವರ ಸೌಂದರ್ಯವನ್ನು ಮುಮ್ಮಡಿ ಹೆಚ್ಚಿಸಿ, ಪುರುಷರನ್ನು ಅವರತ್ತ ಆಕರ್ಷಿಸುವ ಗುಲಾಬಿಯನ್ನು—

—ತಾನಿದ್ದ ಸ್ಥಳದಲ್ಲೇ ಸುಂದರಸ್ವರ್ಗವನ್ನು ತಂದಿಳಿಸುವ, ನಿರ್ಮಿಸುವ ಅಗಾಧ ಲಾವಣ್ಯಮಯ ಗುಲಾಬಿಯನ್ನು—

—ಸರ್ವಾಂಗಸುಂದರಳಾಗಿ, ತನ್ನ ಮೃದುವಾದ ಕಾಂತಿಯುತವಾದ ಅಂಗಕಾಂತಿಯಿಂದ, ಮಾದಕವಾದ ಮೋಹಕವಾದ ಸೌರಭದಿಂದ ಎಲ್ಲರ ಮನಸ್ಸನ್ನೂ ಸೂರೆಗೊಂಡು, ಎಲ್ಲರಿಂದಲೂ ಆದರಿಸಲ್ಪಡುವ ಗುಲಾಬಿಯನ್ನು—

—ಚೆಲುವಿಕೆಯು ಅಗರವೇ ಆದ ಇಂಥ ಗುಲಾಬಿಯನ್ನು ಯಾರು ತಾನೇ ಪ್ರೀತಿಸಲಿಕ್ಕಿಲ್ಲ? ಆದರಿಸಲಿಕ್ಕಿಲ್ಲ? ಸೌಂದರ್ಯಸಾಧಕರೂ ಸಿದ್ಧರೂ ಆದ ಮಾನವರು, ಯುಗಾಂತ್ಯದಲ್ಲಿ ಕೂಡ ಅದನ್ನು ಪ್ರೀತಿಸುವವರೇ!

ಪುಷ್ಪಸಾಮ್ರಾಜ್ಯಕ್ಕೆ ಅನಭಿಷಿಕ್ತ ಪಟ್ಟದ ರಾಣಿಯಂತಿರುವ ಗುಲಾಬಿಯನ್ನು ಯಾರು ತಾನೆ ಮೋಹಿಸಲಿಕ್ಕಿಲ್ಲ? ನೋಡಿ ಕಂಡು ಯಾರು ತಾನೇ ಸಂತಸಪಡಲಿಕ್ಕಿಲ್ಲ? ಗುಲಾಬಿಯಂಥ ಪುಷ್ಪದ ಸೌಂದರ್ಯವನ್ನು ಅನುಭವಿಸಲರಿತವರು ನಿಜವಾಗಿಯೂ ಹುಟ್ಟು ಗುರುಡರೇ ಸರಿ.

ಇಂಥ ಪ್ರಕೃತಿಸುಂದರವಾದ 'ಗುಲಾಬಿ' ಯನ್ನು ಕೋಪ ಅಸೂಯೆ, ತಿರಸ್ಕಾರಗಳಿಂದ ಕಾಣಲು ರಘುವೇನು ಹುಡ್ಡನೇ ಅಥವಾ ಹುಟ್ಟುಗುರುಡನೇ?

.....ಅಲ್ಲ, ರಘುವು ಸುಸಂಸ್ಕೃತನು, ವಿದ್ಯಾವಂತನು. ಸ್ವಲ್ಪ ಮಟ್ಟಿಗೆ ರಸಿಕನೂ ಹೌದು. 'ಗುಲಾಬಿ'ಯಂಥ ಪುಷ್ಪವನ್ನು ಅಸಡ್ಡೆಯಿಂದ ಕಾಣುವಷ್ಟು ಮೂರ್ಖತೆ ಅವನಲ್ಲಿ ಇರಲಿಲ್ಲವೆಂಬುದು ಅವನ ನಡತೆಯಿಂದಲೇ ಕಂಡುಬರುತ್ತಿತ್ತು.

ಹಾಗಾದರೆ ಏನೂ ಕಾರಣವಿಲ್ಲದೆ ರಘುವು ಗುಲಾಬಿಯನ್ನು ಏಕೆ ಅಷ್ಟು ಅಸಡ್ಡೆಯಿಂದ ಕಾಣಲಾರಂಭಿಸಿದ?

ತಾನಾಗಿಯೇ ಅವನು ಆ ಹೂವನ್ನು ತಿರಸ್ಕರಿಸಲು ಆರಂಭಿಸಲಿಲ್ಲ; ಆ ಹೂವಿನ ಮೂಲಕವಾಗಿ ನಡೆದ ಘಟನೆಯೊಂದು ಅವನ ಜೀವನವನ್ನು ನೈರಾಶ್ಯದ ದಳ್ಳುರಿಗೆ ತಳ್ಳಿ, ಸ್ವಾಭಾವಿಕವಾಗಿಯೇ ಅವನ ಮನಸ್ಸು ಅದು ಹೇಗೆ 'ಗುಲಾಬಿ'ಯಿಂದ ಪರಿವರ್ತಿತವಾಗುವಂತೆ ಮಾಡಿತು—ಎಂಬುದೇ 'ಗುಲಾಬಿ'ಯ ಕಥಾವಸ್ತು.

"ರಘು–ಸೀತೆಯರು ಸತಿ–ಪತಿಗಳು. ಅವರದು ಅನುರೂಪ ದಾಂಪತ್ಯ. ಜಾಣೆ ಜಾಣನ ಕೂಡಿದಂತಿತ್ತು. ಹಾಲಿನ ಹೊಳೆಗೆ ಸಕ್ಕರೆಯ ಮಳಲು ಕೂಡಿಸಿದಂತಿತ್ತು. ಜೀವನರಥದ ಎರಡು ಚಕ್ರಗಳಾಗಿ ತಮ್ಮ ಬಾಳನ್ನು ಸುಖರೂಪವಾಗಿಯೇ ಸಾಗಿಸಿದರವರು. ತಮ್ಮ ದಾಂಪತ್ಯಜೀವನದಲ್ಲಿ ಯಾವುದೇ ಮನಸ್ತಾಪಕ್ಕೆಡೆಗೊಟ್ಟು, ಹಾಲಿನಂತಹ ತಮ್ಮ ಸಂಸಾರದಲ್ಲಿ ಯಾವುದೇ ಹುಳಿಹಿಂಡಲು ಆಸ್ಪದವೀಯದೆ 'ಸಮರಸ'ವೇ ತಮ್ಮ ಜೀವನದ ದಿವ್ಯಮಂತ್ರವೆಂದೆಣಿಸಿ ಕಷ್ಟ-ಸುಖಗಳಲ್ಲಿ ಸಮಭಾಗಿಗಳಾಗಿ ಜೀವನ ನಡೆಯಿಸಿದ್ದರವರು.



ಇಂಥ ಜಕ್ಕವಕ್ಕಿಯ ಸಂಸಾರದಲ್ಲೂ ಕೂಡ, ರಘುವಿನ ಅನಿರೀಕ್ಷಿತ, ಅಸ್ವಭಾವಿಕ—ವರ್ತನೆ ಮಳೆಗಾಲದ ಮಿಂಚಿನಂತೆ ಒಮ್ಮಿಂದೊಮ್ಮೆ ಯಾರಾಗಲಾದರೂ ಕಾಣಿಸಿಕೊಂಡು, ಸೀತೆಯ ಮಾನಸ ಸರೋವರವನ್ನು ಕಲಕಿ, ಕದಡಿ, ಅಸಮಾಧಾನವನ್ನುಂಟು ಮಾಡಿ, ಅವನ ಸ್ವಭಾವದ ಬಗ್ಗೆಯೇ ವಿಚಿತ್ರಾಶ್ಚರ್ಯವನ್ನು ಅವಳಲ್ಲಿ ಹುಟ್ಟಿಸಿತ್ತು.

ದೀಪಾವಳಿಯ ಹಬ್ಬಕ್ಕೆ ಸೀರೆ ಖರೀದಿ ಮಾಡಲು ಹೋಗಿದ್ದ ಸೀತೆ, ಹದಿಮೂರು ರೂಪಾಯಿಗಳಿಗೆ 'ಗುಲಾಬಿ' ಬಣ್ಣದ ಮೋಹಕ ಸೀರೆಯೊಂದನ್ನು ಚುನಾಯಿಸಿ, ಒಪ್ಪಿಗೆಗಾಗಿ ರಘುವಿನತ್ತ ನೋಡಿದಳು. ಆದರೆ ರಘು ಆ ಸೀರೆಯನ್ನು ಕಂಡ ತಕ್ಷಣ, ಹಾವನ್ನು ಕಂಡು ಬೆದರಿದ ಬಾಲಕನಂತೆ, 'ಆ ಬಣ್ಣ ಬೇಡ. ಹೆಚ್ಚಿಗೆ ಹಣ ಬಿದ್ದರೂ ಅಡ್ಡಿಯಿಲ್ಲ, ಬೇರೆ ಯಾವುದಾದರೂ ಆರಿಸು' ಎಂದು ಆಫೀಸಿಗೆ ಹೊರಟುಹೋದ. ಸೀತೆಗೆ ಅಪಾರವ್ಯಥೆಯೂ, ಅಸಮಾಧಾನವೂ ಆಯಿತು.

ಮರುದಿನದ ಹಬ್ಬಕ್ಕೆಂದು ಗುಲಾಬಿಹೂಗಳನ್ನು ಕೊಂಡು ಬಸ್ಸಿನಲ್ಲಿ ಮರಳುವಾಗ, ಸೀತೆಗೆ ಯುಗಾದಿಯ ಹಿಂದಿನ ದಿನ ನಡೆದ ಗುಲಾಬಿಹೂವಿನ ಹಗರಣ ನೆನಪಾಯಿತು. ಅಂದು ಗುಲಾಬಿಯ ಗಿಡವನ್ನು ಬೇರುಸಹಿತ ಕಿತ್ತೆಸೆದಿದ್ದ ರಘು, ಇಂದು ಗುಲಾಬಿ ಬಣ್ಣವನ್ನೇ ತಿರಸ್ಕರಿಸಿದ್ದ. ಸ್ವಲ್ಪ ಸ್ವಲ್ಪವಾಗಿ ಮರೆಯಲು ಯತ್ನಿಸಿದ ಘಟನೆಯ ಪುನರಾವೃತ್ತಿ ಇಂದು ಪುನಃ ಘಟಿಸಿ, ಅಂದು ಸೀತೆಗೆ ಅವನ ವರ್ತನೆಯ ಬಗ್ಗೆ ಉಂಟಾದ ಸಂಶಯವನ್ನು ದೃಢಪಡಿಸಿತ್ತು.

ರಘು ಮರಳಿ ಮನೆಗೆ ಬಂದಾಗ ರಾತ್ರಿ ಹತ್ತು ಗಂಟೆ. ಮಗಳು ಸೀತೆ ತಲೆನೋವೆಂದು ಮಲಗಿದ್ದಾಳೆಂದು ತಿಳಿಸಿದಳು. ರಘು ತಾನು ತಂದಿದ್ದ ಜಾರ್ಜೆಟ್ ಸೀರೆಯನ್ನು ಕೊಟ್ಟರೆ, ಮುಂಜಾವಿನ ಅಸಮಾಧಾನ ಅಳಿಯಬಹುದೆಂದೆಣಿಸಿದ. ಸೀತೆ ಅದನ್ನುಟ್ಟು ಮನೆಗೆ ವ್ಯಗ್ರತೆಯನ್ನು ಹೆಚ್ಚು ತೋರ್ಪಡಿಸದೆ, ಅಂದಿನ ಹಬ್ಬವನ್ನಾಚರಿಸಿದಳು. ಬೆಳಗ್ಗೆ ತಂದಿದ್ದ ಗುಲಾಬಿಹೂಗಳನ್ನು ಮುಡಿದು, ಊಟವಾದ ನಂತರ, ವೀಳ್ಯದ ತಟ್ಟೆಯೊಡನೆ ರಘುವಿನ ರೂಮನ್ನು

ಸೇರಿದಳು. ಅವಳ ಅಲಂಕಾರದಲ್ಲಿ ತಾನೇ ತಾನಾಗಿ ಮೆರೆಯುತ್ತಿದ್ದ ಗುಲಾಬಿಯನ್ನು ಕಂಡ ತರ್ಕ್ಷಣ, ಲಗ್ನವಾದ ನಂತರ ಇತ್ತೀಚೆಗೆ ಸುರುವಾದ ಉಬ್ಬಸ ಉಕ್ಕಿಬರುವಂತೆ, ಕೂಗಾಡಲಾರಂಭಿಸಿದ. ವೀಳ್ಯದ ತಟ್ಟೆ ಚೆಲ್ಲಿ, ಡಾ. ಜಯರಾಜರನ್ನು ಕರೆತಂದು ಸೀತಾ, ಇಂಜೆಕ್ಷನ್ ಮಾಡಿಸಿದಳು. ಮತ್ತು ಬಿಸಿಬಿಸಿಯಾದ ಕಾಫಿ ತಯಾರಿಸಿ ತೆಗೆದು ಕೊಂಡು ಬಂದಳು. ಅದರೆ ಗುಲಾಬಿಹೂಗಳನ್ನು ತೆಗೆದಿದ್ದಿಲ್ಲ. ಅದನ್ನು ಕಂಡವನೇ ರಘು ಮತ್ತೆ ಕೂಗಾಡಲಾರಂಭಿಸಿದ. 'ಅಟ್ಯಾಕ್' ಜೋರಾಯಿತು, ಡಾಕ್ಟರು ಇನ್ನೊಂದು, ಪ್ರಿಕ್ ಕೊಟ್ಟರು. ಸೀತೆಯ ದೀಪಾವಳಿ ರೋದನದಲ್ಲಿ ಮುಕ್ತಾಯವಾಯಿತು.

ಸೀತೆಗೆ ಅಸಮಾಧಾನವನ್ನುಂಟುಮಾಡಿದ ತನ್ನ ವರ್ತನೆ, ಅದಕ್ಕಾ ಹೆಚ್ಚಾಗಿ ಚಿಂತೆಯನ್ನುಂಟುಮಾಡಿದ ತನ್ನ ಉಬ್ಬಸದ ಕಾರಣವನ್ನು ರಘು ನೆಲುಕು ಹಾಕಿದ. ಗುಲಾಬಿ ಹೂವಿನ ಮೂಲಕ ನಡೆದ ತನ್ನ–ರಮೆಯ–ಪ್ರಣಯ, ತನ್ನ ಹೇಡಿತನದಿಂದಾಗಿ ಮುರಿದು ಬಿದ್ದಾಗ ರಮೆ ತಿರಸ್ಕರಿಸಿದ ಗುಲಾಬಿಯ ಹೂವನ್ನು ತಾನು ಹೊಸೆದುಹಾಕಿದಂದಿನಿಂದ ಇನ್ನುವರೆಗೆ ತನ್ನಲ್ಲಿ ಹುದುಗಿದ ಅದರ ತಿರಸ್ಕಾರವನ್ನು ನೆನಪಿಸಿಕೊಂಡು ಡಾಕ್ಟರರಿಗೆ ಅದು 'ರೋಜ್ ಅಲರ್ಜಿ ಎಂದು ಹೇಳಿದ.

ಅದರೆ ಮರುದಿನ ಕಾಗದದ ಗುಲಾಬಿ ಹೂವಿನಿಂದ ಟೆಸ್ಟ್ ಮಾಡಿ ಡಾಕ್ಟರರು 'ಇದು ರೋಜ್ ಅಲರ್ಜಿಯಲ್ಲ' ಎಂದು ಹೇಳಿ, ಅವನ ಬಾಯಿಂದಲೇ, ಅವನ ಭಗ್ನಪ್ರಣಯದ ವೃತ್ತಾಂತವನ್ನು ಸಾದ್ಯಂತವಾಗಿ ಕೇಳಿ, ತಕ್ಕ ಪರಿಹಾರವನ್ನು ಸೂಚಿಸಿದರು.

ಅಂದು ಸಂಜೆ ರಘು ತಂದಿತ್ತ ದೀಪಾವಳಿ ಉಡುಗೊರೆ, ಸೀತೆ ಬೆಳಗ್ಗೆ ಅರಿಸಿದ 'ಗುಲಾಬಿ' ಬಣ್ಣದ ಸೀರೆ!

ಮಸುಕು-ಮಸುಕಾಗಿದ್ದ ವರ್ತನೆಯ ಸಂಶಯ, ಮಿಂಚಿನಂತೆ ಕರಗಿ, ಸೀತೆಯ ಸಂಸಾರದಲ್ಲಿ ಯಥಾಪ್ರಕಾರ ಸುಖ–ಶಾಂತಿ ಸ್ಥಾಪಿಸಿತ್ತು. "

'ಸೈಕೋಲೋಜಿಕಲ್ ಟಚ್' ಕೊಟ್ಟು, ಚಾಣಕ್ಯಿಯಿಂದ ಹೆಣೆದಿರುವ 'ಗುಲಾಬಿ' ಕಥೆಯ ಕಥಾಸಾರಾಂಶವಿದು.

ಈ ಕಥೆಯಲ್ಲಿ ಮೊಟ್ಟಮೊದಲನೆಯದಾಗಿ, ಓದುಗನನ್ನು ಕೆರಳಿಸುವುದು—ಕಥೆಯ ನವೀನ ವಸ್ತುವಿಷಯ. ಮಾನಸಿಕ ಶಾಸ್ತ್ರದ ತತ್ತ್ವದ ಮೇಲೆ ರಚಿತವಾಗಿರುವ ಈ ಕಥೆಯ ಕಥಾವಸ್ತು ನಾವೀನ್ಯಪೂರ್ಣವೂ, ಆರ್ಥಪೂರ್ಣವಾಗಿಯೂ ಇರುವುದೆಂಬುದರಲ್ಲಿ ಯಾವ ಸಂಶಯವೂ ಇಲ್ಲ ಗುಲಾಬಿಯಂಥ ಸುಂದರವುಷ್ಪವು ಸಹ, ರಘುವಿನ ಭಗ್ನಪ್ರಣಯಕ್ಕೆ ಕಾರಣವಾಗಿ, ಅವನ ಮನಸ್ಸಿನ ಮೇಲೆ ಗಂಭೀರವಾದ ಪರಿಣಾಮದ ಮುದ್ರೆಯನ್ನೊತ್ತಿ, ಅವನ ಸಂಸಾರದ ಶಾಂತಿಯನ್ನು ಹೇಗೆ ಕದಡಿತ್ತೆಂಬುದನ್ನೇ ಕಥೆಯ ಕೇಂದ್ರ ವಿಷಯವನ್ನಾಗಿರಿಸಿ, ಮಾರ್ಮಿಕವಾಗಿ, ಸೂಕ್ಷ್ಮವಾಗಿ ನಿರೂಪಿಸಿರುವುದೇ ವಸ್ತುವಿನ ವೈಶಿಷ್ಟ್ಯ. ಅದಕ್ಕನುಗುಣವಾದ ತೀಕ್ಷ್ಣವಾದ 'ಗುಲಾಬಿ' ಕಥೆಯಲ್ಲಿ ಆಸಕ್ತಿಯನ್ನು ಹುಟ್ಟಿಸಿ, ಓದಹಚ್ಚಿ, ವಸ್ತುವಿನ ಕಡೆಗೆ ಲಕ್ಷ್ಯವನ್ನು ಸೆಳೆದು, ಮೊದಲು ಕೆರಳಿದ ಕುತೂಹಲವನ್ನು ಕೊನೆಯಲ್ಲಿ ಶಾಂತಗೊಳಿಸಿ, ಓದುಗನಿಗೆ ಆತ್ಮತೃಪ್ತಿಯನ್ನೊದಗಿಸುತ್ತದೆ.

ನವೀನರೀತಿಯ ಕಥಾವಸ್ತುವನ್ನಾಯ್ದು ಅದನ್ನು ಯೋಗ್ಯ ರೀತಿಯಲ್ಲಿ, ತಕ್ಕ ಶೈಲಿಯಲ್ಲಿ ಹೇಳಿದ್ದಾರೆ, ನಿರೂಪಿಸಿದ್ದಾರೆ. ಕುಶಲ ಕಥೆಗಾರನ ಲಕ್ಷಣ ಸಾಕಷ್ಟು ಇವರಲ್ಲಿದೆ. ಇದಕ್ಕೆ ಈ ಕಥೆಯ ನಿರೂಪಣೆಯೆ ಸಾಕ್ಷಿ. ಜಂಗಡಿಯಲ್ಲಿ ನಡೆದ ಸೀರೆಯ ಗೊಂದಲದಿಂದ ಆರಂಭವಾದ ಕಥೆಯನ್ನು ಸರಸವಾಗಿ, ಸರಳವಾಗಿ, ಸುಂದರವಾಗಿ ಹೆಣೆದು, ಕಥೆಯನ್ನು ಸುಖಾಂತ್ಯದಲ್ಲಿ ಮುಕ್ತಾಯಗೊಳಿಸುತ್ತಾರೆ. ಕಥಾರಂಭ ತುಂಬ ಕುತೂಹಲಕಾರಿಯಾಗಿದೆ. ಇಲ್ಲಿ ಕೆರಳಿದ ಕುತೂಹಲ, ಕೊನೆಯಲ್ಲೇ ಶಾಂತವಾಗುತ್ತದೆ.

ಸರಳವಾದ ಮತ್ತು ನವೀನವಾದ ಕಥಾವಿಷಯಗಳ ಆಯ್ಕೆ ಇವರ ದೃಷ್ಟಿಕೋನ ಅದೆಷ್ಟು ನಾವಿನ್ಯಪೂರ್ಣವಾಗಿದೆಯೆಂದು ತೋರಿಸುತ್ತಿದೆ. ಜಂಗಡಿಯಲ್ಲಿ ಸೀತೆಯ ಅನಿರೀಕ್ಷಿತ ವರ್ತನೆಯ, ಬಸ್ಸಿನಲ್ಲಿ ಸೀತೆಯ ಮನಸ್ಸಿನಲ್ಲಿ [illegible] ಅವನ ವರ್ತನೆಯ ಪುನರಾವೃತ್ತಿಯ ವಿವರಣೆ—ರಘು-ಸೀತೆಯ ಆದರ್ಶದಾಂಪತ್ಯ, ಗುಲಾಬಿ ಹೂಗಳನ್ನು ಕಂಡಾಗ ರಘುವಿನ ನಡತೆಯ ಪುನರಾವೃತ್ತಿ,— ಸೀತೆಯ ಕಳಕಳಿಯ ಸ್ವಭಾವ, ರಘುವಿನ ಭಗ್ನಪ್ರಣಯದ ವೃತ್ತಾಂತ — ಡಾ. ಜಯರಾಜರ ಕುಶಲ ಪರಿಹಾರ—ರಘು–ಸೀತೆಯರ ಪ್ರೇಮಮಯ ದಾಂಪತ್ಯ ದೃಶ್ಯ—ಇವೇ ಮೊದಲಾದ ಈ ಕಥೆಯ ಮುಖ್ಯ ದೃಶ್ಯಗಳಂತೂ ತುಂಬ ಸಹಜಸುಂದರವಾಗಿಯೂ ಪ್ರಕೃತಿರಮ್ಯವಾಗಿಯೂ ಬಂದಿವೆ; ಮತ್ತು ಲೇಖಕಿಯರ ಕಲಾಪ್ರೌಢಿಮೆಯನ್ನೂ, ಅವರ ಕುಶಲ ಕಲೆಗಾರಿಕೆಯನ್ನೂ, ಸರಳ ಸುಂದರ ಸುಭಗ ಶೈಲಿಯನ್ನೂ ವಾಚಕರಿಗೆ ಪರಿಚಯ ಮಾಡಿಕೊಡುತ್ತವೆ.

ಕಥೆಯಲ್ಲಿ ಬರುವ ಸೀತೆ ಮತ್ತು ರಘುವಿನ ಪಾತ್ರಪೋಷಣೆ ತುಂಬಾ ಚೆನ್ನಾಗಿ ಬಂದಿದೆ. ಅವರ ಆದರ್ಶದಾಂಪತ್ಯ, ಮನಪ್ಪೊಪ್ಪಿದ್ದನ್ನು ಇನಿಯ ತಿರಸ್ಕರಿಸಿದಾಗ ಸೀತೆಗಾದ ಸಹಜ ಅಸಮಾಧಾನ, ರಘು ಉಬ್ಬಸಪಟ್ಟಾಗ ಸೀತೆ ತೋರುವ ಸಹಜ ಮೃದು ಸ್ವಭಾವ—ಇವೇ ಮೊದಲಾದ ಆಕರ್ಷಕ ಗುಣಗಳಿಂದ, ಸೀತೆಯ ವ್ಯಕ್ತಿತ್ವ ರಘುವಿಗಿಂತ ಚೆನ್ನಾಗಿ ಬಂದಿದೆ; ಮತ್ತು ಸ್ತ್ರೀ ಸ್ತ್ರೀಯನ್ನು ಹೇಗೆ ಚಿತ್ರಿಸಬಹುದೆಂಬುದಕ್ಕೆ ತಕ್ಕ ಉದಾಹರಣೆಯಾಗಿದೆ. ಈ ಭಗ್ನಪ್ರಣಯಿ ರಘು, ತನ್ನ ಮನೋವೈಕಲ್ಯದಿಂದ ಓದುಗರನ್ನು ಆಕರ್ಷಿಸುವುದಕ್ಕಿಂತ ಹೆಚ್ಚಾಗಿ ಕರುಣೆಯನ್ನು ಅವರಲ್ಲಿ ಕೆರಳಿಸುತ್ತಾನೆ. ಸೀತೆ ತನ್ನ ಸೌಮ್ಯ–ಮೃದುಸ್ವಭಾವಗಳಿಂದಲೂ, ರಘು ತನ್ನ ದುರಂತವ್ಯಕ್ತಿತ್ವದಿಂದಲೂ, ತಕ್ಕ ಪರಿಹಾರವನ್ನು ಸೂಚಿಸಿದ ಡಾ. ಜಯರಾಜರು ತಮ್ಮ ಕೌಶಲ್ಯದಿಂದಲೂ ಕಥೆಗೆ ಶಕ್ತ ಮೆರುಗನ್ನಿತ್ತಿದ್ದಾರೆ. ರಘುವಿನಂಥ ದುರ್ಬಲರು ಈ ಜಗತ್ತಿನಲ್ಲಿ ಬಹಳ; ಆದರೆ ಸೀತೆಯಂತಹ ರತ್ನಮಣಿಗಳು ವಿರಳ.

ನವೀನ ಕಥಾವಸ್ತು, ಕುಶಲನಿರೂಪಣೆ, ಯೋಗ್ಯ ಪೋಷಣೆ ಇವುಗಳಿಂದ ಕೂಡಿದ ಈ ಕಥೆಯು ದೋಷರಹಿತವಾಗಿದೆ—ಎಂದು ಹೇಳುವಂತಿಲ್ಲ. ಗೋಲ್ಡ್‌ಸ್ಮಿಥ್ ಹೇಳಿದಂತೆ ದೋಷವಿದ್ದರೇನೆ ಕಥೆಗೆ ಹೆಚ್ಚು ಮೆರುಗು ಬರುವುದು

'ಮನೋವಿಶ್ಲೇಷಣಾತ್ಮಕ' ಎನ್ನುವುದು ಸ್ವಲ್ಪ ಧಾಷ್ಟ್ರ್ಯದ ಮಾತು. ಮಾನಸಶಾಸ್ತ್ರದ ಸ್ಪರ್ಶ ಕೊಟ್ಟು ಬರೆದಾಕ್ಷಣ, ಅದು ಮನಸ್ಸನ್ನ ವಿಶ್ಲೇಷಣಗೊಳಿಸಬೇಕೆಂದೇನೂ ಇಲ್ಲ. ಅದರಂತೆ ಇಲ್ಲಿ ರಘುವಿನ ವರ್ತನೆಯೂ ಅಷ್ಟೇನೂ ಮನಸ್ಸನ್ನು ವಿಶ್ಲೇಷಣಗೊಳಿಸುವುದಿಲ್ಲ. ನಿರಾಶೆಗೀಡಾದ ರಘು, ತನ್ನ ಭಗ್ನಪ್ರಣಯದ ಪ್ರತಿನಿಧಿಯಾದ ಗುಲಾಬಿಯ ಮೇಲೆ ದ್ವೇಷ ತಾಳುವುದು ಸಹಜವೇ! ಜಾಗೃತಾವಸ್ಥೆಯಲ್ಲಿಯ ಅವನ ಸಹಜದ್ವೇಷ, ಸುಪ್ತಾವಸ್ಥೆಯಲ್ಲಿಯೂ ಸೇರಿದು ಅವನ ಮನಸ್ಸನ್ನು ಪೂರ್ಣ ದ್ವೇಷಮಯವಾಗುವಂತೆ ಮಾಡಿ, ಗುಲಾಬಿಯಿಂದ, ಗುಲಾಬಿಬಣ್ಣದಿಂದ ವಿಮುಖನಾಗುವಂತೆ ಮಾಡಿತೆನ್ನಬಹುದು. ಅದರ ಬಗ್ಗೆ ಎರಡೂ ಅವಸ್ಥೆಗಳಲ್ಲಿ ಅವನಿಗೆ ದ್ವೇಷವಿದ್ದುದರ ಪರಿಣಾಮವಾಗಿ, ಅವನ ವರ್ತನೆ [illegible]ಗಾಯಿತೆಂದೇ ಹೇಳಬೇಕು. ಕಾರಣ, ಅವನ ವರ್ತನೆ ಸಹಜವಾಗಿದ್ದು; ಸ್ವಾಭಾವಿಕವಾದುದು. ಅವನ ಮತ್ತು ರಮೆಯ ಪ್ರಣಯವೃತ್ತಾಂತ ತಿಳಿದ ನಂತರ, ಅವನ ದ್ವೇಷ ಸ್ವಾಭಾವಿಕವೆಂದು ತಿಳಿದ ನಂತರ, ಅದು ಅವನ ದೌರ್ಬಲ್ಯದಿಂದಾದುದೆಂದು ಕರುಣಿಸುವುದೇ ಹೊರತು, ಮನಸ್ಸನ್ನು ವಿಶ್ಲೇಷಣಗೊಳಿಸುವುದಿಲ್ಲ. ಕಾರಣ ಅದು 'ಮನೋವಿಶ್ಲೇಷಣಾತ್ಮಕ' ಹೇಗೆ ಎಂಬುದಕ್ಕೆ ತಕ್ಕ ವಿವರಣೆ ಇಲ್ಲ.

ಇನ್ನೊಂದು ಸಮಸ್ಯೆ ಏನೆಂದರೆ, ಡಾಕ್ಟರರು ಕೊನೆಗೆ, 'ನೀವು ಗುಲಾಬಿ ಪ್ರಸಂಗವನ್ನು ಮರೆತರೂ, ನಿಮ್ಮ ಪುಪ್ಪುಸ ಅದನ್ನು ಮರೆಯಲಿಲ್ಲ. ಕಾರಣ ನಿಮ್ಮ ಅಟ್ಯಾಕ್ ಪ್ರಾರಂಭವಾಗಿದೆ—ಎನ್ನುವುದು. ಲೇಖಕರ ಪ್ರಕಾರ ಅನುರಾಗ ಆಳವಾಗಿ ಹರಿಯುವುದೇನೋ ನಿಜ. ಆದರೆ ರಘು ಸೀತೆಯನ್ನು ಮದುವೆಯಾದ ನಂತರವೂ ರಮೆಯ ಪ್ರಣಯವನ್ನು ಮರೆಯದಿರುವುದು ಅಸ್ವಾಭಾವಿಕ. ಕಾಲನ ಅಗಾಧ ಮಹಿಮೆಯ ಪರಿಣಾಮವಾಗಿ ಸಾವು–ನೋವುಗಳಂತಹ ಗಾಯಗಳೂ ಮರೆಯಾಗುತ್ತವೆ. ಅಂತಹದರಲ್ಲಿ ರಘುವಿನ ಪ್ರಣಯದ ನೋವು ಮರೆಯಾಗಲಿಲ್ಲ–ಎನ್ನುವುದು ಅಷ್ಟೊಂದು ಸರಿ ಕಾಣಲಾರದು. ರಘು ಒಂಟಿಹುಟ್ಟಿನವನಾದ್ದರಿಂದ, ಅಶಕ್ತತೆಯಿಂದ 'ಅಟ್ಯಾಕ್' ಪ್ರಾರಂಭವಾಗಿರಬಹುದು. ಆದರೆ ಪ್ರಣಯದಿಂದಾದ ನೋವಿನಿಂದಲ್ಲ ಎಂಬುದು ಸ್ವತಃಸಿದ್ಧ. ಇಲ್ಲಿ 'ಅಟ್ಯಾಕ್' ಪ್ರಣಯಭಂಗದಿಂದಲೇ ಎಂಬುದಕ್ಕೆ ವಿವರಣೆ ಬೇಕಿತ್ತು.

ಇದಕ್ಕೆ ಇನ್ನೊಂದು ಕಾರಣವೇನೆಂದರೆ—ದೇಹಕ್ಕೆ ಮುಖ್ಯವಾದುದು ಮನಸ್ಸು. ಮನಸ್ಸಿನಿಂದಲೇ ದೇಹದ ಅಂತಃಕಾರ್ಯಗಳೂ ಬಹಿಃಕಾರ್ಯಗಳೂ ನಡೆಯುತ್ತಿರುವುದು. ಹಾಗೆ ಇದ್ದಾಗ, ಕಾಲನ ಮಹಿಮೆಯಿಂದ ಮನಸ್ಸು ಮರೆಯಬಹುದಾದ ಭಗ್ನಪ್ರಣಯವನ್ನು ಪುಪ್ಪುಸ ಹೇಗೆ ನೆನಪಿಟ್ಟಿತು?–ಎಂಬುದೇ ಬಿಡಿಸಲಾರದ ಒಗಟವಾಗಿದೆ. ಮನಸ್ಸು ಮುಖ್ಯವಾದ ದೇಹಕ್ಕೆ ಪುಪ್ಪುಸ ಉಸಿರಾಡಿಸುವ ಸಾಧನ ಮಾತ್ರ ಅಷ್ಟೇ. ಇಲ್ಲಿ ಸ್ವಲ್ಪ ತೊಂದರೆ; ತೊಡಕು. ಹೀಗೆ ಕೆಲವೊಂದು ವಿಚಾರಗಳು ತುಂಬ ಸಮಸ್ಯಾತ್ಮಕವಾಗಿವೆ; ಬಿಡಿಸಲಾರದ ಒಗಟುಗಳಾಗಿವೆ. ಇವುಗಳನ್ನು ಸ್ವಲ್ಪ ಸರಳವಾಗಿ ಹೇಳಬಹುದಿತ್ತು. ಹೀಗಾಗಿ ಕೆಲವೊಂದು ಕಡೆಗೆ ವಿವರಣೆ ಬೇಕೇಬೇಕು.

ಇವೇ ಮೊದಲಾದ ಕೆಲವೊಂದು ಮುಖ್ಯ ದೋಷಗಳನ್ನು ನೋಡಬಹುದಾದರೂ ಸಾಮಾನ್ಯ ವಾಚಕರಿಗೆ, ಕಥೆಯ ಓಟದಲ್ಲಿ ಯಾವುದೇ ಅಡೆ-ತಡೆಗಳು ಇವೆ ಎನಿಸಲಾರವು ಆದರೆ ಸೂಕ್ಷ್ಮವಾಗಿ ನೋಡಿದರೆ, ಇವುಗಳಿಂದ ಕಥೆಗೆ ಒಂದು ತರದ ಆತಂಕವುಂಟಾಗಿದೆಯೆಂದೇ ಹೇಳಬೇಕು. ಇವುಗಳಿಂದಾಗಿ ರಘುವಿನ ವರ್ತನೆ 'ಮನೋವಿಶ್ಲೇಷಣಾತ್ಮಕ'ವಾಗಿ ಮಾಡಲ್ಪಟ್ಟಿದೆಯೆಂದು ಹೇಳಬಹುದು.

ಒಟ್ಟಿನಲ್ಲಿ ಸರಳ ಮತ್ತು ನವೀನ ಕಥಾವಸ್ತು, ಆಕರ್ಷಕ ಶೈಲಿ ಇವೇ ಮೊದಲಾದುವುಗಳಿಂದ ಶೋಭಿತವಾದ ಇನ್ನೂ ಅನೇಕ ಕಥೆಗಳನ್ನು, ನಾವು ಈ ಲೇಖಕಿಯರಿಂದ ನಿರೀಕ್ಷಿಸಬಹುದು.

ನಂಜಿ

(ವ್ಯಕ್ತಿಚಿತ್ರದ ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು

ವಾಸ್ತವಾತಿರಿಕ್ತವಲ್ಲದ ಒಂದು ಜೀವನವೃತ್ತವಿದು. ಜೀವನವೃತ್ತವನ್ನು ನಿರೂಪಿಸುವುದು ಸುಲಭದ ಕೆಲಸವಲ್ಲ; ನಿರೂಪಣೆಗೆ ಗುರಿಯಾಗುವ ವ್ಯಕ್ತಿಯ ಜೀವನದ ವಿವಿಧ ಘಟನೆಗಳ ಅನುಭವವಿಲ್ಲದೆ ನಿರೂಪಿಸಲು ಸಾಧ್ಯವಿಲ್ಲ. ಎಂದರೆ ಲೇಖಕನು ಜೀವನವಾಹಿನಿಯಲ್ಲಿ ಕಲ್ಪನೆಯನ್ನು ತರುವುದು ಸಾಧ್ಯವಿಲ್ಲವೆಂಬ ಮಾತು. ಜೀವನಘಟನೆಗಳನ್ನು ನಿರೂಪಿಸುವಾಗ, ಸಂದರ್ಭಕ್ಕನ್ನಲ್ಲಿ, ನಿರೂಪಕನು ತದನುಕೂಲವಾದ ವಾತಾವರಣವನ್ನು ಕಲ್ಪಿಸಿಕೊಳ್ಳಬಹುದು. ಕಲ್ಪನೆಯು ಪ್ರಸ್ತುತಚಿತ್ರವನ್ನು ಸ್ಫುಟಪಡಿಸಲು ಶಕ್ತವಾಗಬಹುದೇ ವಿನಾ ಕಥಾಚಿತ್ರದೊತನೆ ಎರಕವಾಗಲು ಸಾಧ್ಯವಿಲ್ಲ. ಯಾಕೆಂದರೆ ಈ ಬಗೆಯ ಚಿತ್ರಗಳಲ್ಲಿ ವಾಸ್ತವತೆಯು ಹಿನ್ನೆಲೆಗಿವೆ ಪ್ರಾಶಸ್ತ್ಯ—

ಅಂತರಂಗದಲ್ಲಿ ಜೀವನದ ರುದ್ರಸ್ಫುಲಿಂಗಗಳಿಂದ ಕಾವೇರುತ್ತಿರುವ ನಂಜಿ, ಹೊರಬಾಳಿನಲ್ಲಿ ಜನರ ಜುಗುಪ್ಸೆಗೆ ಗುರಿಯಾದವಳು. ತನ್ನ ಮದುವೆಯ ದಿನದಿಂದಲೆ ಬಾಳಿನಿಂದ ಬೇಸರವನ್ನು ತಾಳಿದಾಕೆ, ತಾಳಿ ಕಟ್ಟಿದವನ ಜತೆಯಲ್ಲಿ ಬಾಳನ್ನು ಹೊಂದಿಸಲಸಮರ್ಥಳಾದಳು. ಆಕೆಯ ಪತಿ ಅನ್ಯಳನ್ನು ಪ್ರೇಮಿಸಿ ಸಂಸಾರವನ್ನು ಆಕೆಯ ಬಾಳಿನಲ್ಲಿ ಬೇರೂರಿಸಿದ. ನಂಜಿ ಇದೇ ವೇಳೆಯಲ್ಲಿ ಇದ್ದೊಂದು ಸಂತತಿಯನ್ನು ದೇವನ ಸೋಗಿಲಲ್ಲಿ ಮಡಗಿದ್ದಳು. ಅಂದ ಬಳಿಕ ಆಕೆಗೆ ಜೀವನದಲ್ಲಿ

ಶಾಂತಿಯಿಲ್ಲಿಂದ ಬರಬೇಕು? ಪತಿಯನ್ನಗಲಿದಾಕೆ ಆ ಊರನ್ನೆ ಬಿಟ್ಟು ಮೈಸೂರಿಗೆ ಸಾರಿ, ಅಲ್ಲಿ ಮೂರ್ತಿರಾಯರ ಮನೆಯಲ್ಲಿ ಕೆಲಸದಾಕೆಯಾಗಿ ನಿಂತಳು. ಕುಳಿತಲ್ಲಿ-ನಿಂತಲ್ಲಿ ಸ್ವೈರವಿಲ್ಲದಾಕೆ ಆ ಮನೆಯ ಊಳಿಗವನ್ನೆಂತು ಕ್ರಮವಾಗಿ ಮಾಡಬಲ್ಲಳು? ಸಾಧ್ಯವಿಲ್ಲಾಕೆಯಿಂದದು. ಬೇಕೆಂದೇ ಒಂದೊಂದು ದಿನ ಆಕೆ ಕೆಲಸಕ್ಕೆ ಬಾರಳು. ಕೆಲಸಕ್ಕೆ ಸೇರಿದ ಮೊದಲಬಾರಿ ಆಕೆ ತಪ್ಪಿಸಿದಾಗ, 'ತಾನೊಂದು ಹಾವಿನ ಪೀಡೆಗೆ ಒಳಗಾಗಿದ್ದೆನೆಂದೂ ಅದರಿಂದ ಪಾರಾಗುವುದು ಕಷ್ಟವಾಯಿತೆಂದೂ" ನೆವನವನ್ನು ಹೂಡಿದರೆ, ಪೂಡಿದಾ ನೆವನ ಸುಳ್ಳಾದರೆ, ಮತ್ತೊಂದು ದಿನ ಆಕೆ ಇಡೀ ಗಲ್ಲಿಯಲ್ಲೇ ಗಲಭೆಯನ್ನೆಬ್ಬಿಸಿ ತನ್ನ ಗಂಡ ಮೃತನಾದನೆಂದು ಬೊಬ್ಬಿಡುತ್ತ, ಸೌಮಾಂಗಲ್ಯ ಚಿಹ್ನೆಗಳನ್ನುಳಿಯುತ್ತ,—ಕೂಗಾಡಿ ನೆವನವನ್ನೆತ್ತಿ ದಿನವನ್ನು ತಳ್ಳಿದರೆ, ಕೆಲಸಕ್ಕೆ ಬಾರದ ಕಾರಣವನ್ನು ಮನೆಯವರ ಮುಂದಿರಿಸಿ ಅವರ ಸಹಾನುಭೂತಿಯನ್ನು ಪಡೆದರೆ, ಮತ್ತೊಂದು ದಿನ ಅದೇ ನಂಜಿ ತನ್ನ 'ಪತಿ' ಯ ಇರುನಿಕೆಯನ್ನು ಸಾರಿ ನಗುವಳು. ಕೊನೆಗೊಂದು ದಿನ ಆಕೆಯ ಪತಿಯ ಮಗನೇ ಬಂದು ಆಕೆಯನ್ನು ತಂದೆಯಲ್ಲಿಗೆ ಕರೆದೊಯ್ಯುವನು. ನಂಜಿ ಅಂದು ತನ್ನ ಕುಂಕುಮವನ್ನು ನಿಜವಾಗಿ ಕಳೆದುಕೊಂಡಿರಬೇಕು. ಹಾಗೆ ತನ್ನ ಗಂಡನಲ್ಲಿಗೆ ತೆರಳಿ ಬಂದ ನಂಜಿ. ಬಣ್ಣ ಬದಲಾಯಿಸಿದ್ದಳು. ಅಲ್ಲಿಂದ ಮುಂದೆ ಹೊರಬಾಳಿನಲ್ಲಿ ಹುಚ್ಚಿಯಂತಾಗಿದ್ದ ನಂಜಿ, ಅಂತರಂಗದ ವೇದನೆಗೂ ಗುರಿಯಾಗಿ— ಮೂರ್ತಿರಾಯರ ಮನೆಯಿಂದ ಪಾರಾದಳು..—ಆ ಮುಂದೆ ನಂಜಿ ಮತ್ತೆ ಕಾಣಲಿಲ್ಲ!

ಇದಿಷ್ಟು ನಂಜಿಯ ಕುದಿಬಾಳಿನ ಚಿತ್ರ. ಆಕೆ ಹೊರಬಾಳಿನಲ್ಲಿ ಜನರ ಜುಗುಪ್ಸೆಗೆ ಪಾತ್ರಳಾಗಿದ್ದರೂ, ಹೆಣ್ಣಿದೆಯು ಆಕೆಯಲ್ಲಿ ತುಂಬಿ ನಿಂತಿದೆ. ಜೀವನದ ಮೊದಲ ಶತಮಾನಲ್ಲೇ, ಅಲ್ಲೂ ಹೆಣ್ಣಿನ ಬಾಳಿನ ಸೌಂದರ್ಯವನ್ನು ಅರ್ಥಮಾಡಿಕೊಳ್ಳುವ ಮೊದಲೇ, ದಾಂಪತ್ಯದ ಬೆಳಕನ್ನು ತನ್ನೆದೆಯಲ್ಲಿ ಬಿಂಬಿಸುವ ಮೊದಲೇ ಆಕೆ ತನ್ನ ಜೀವನಕ್ಕೆ ಬಿದ್ದ ಕೊಡಲಿಯೇಟನ್ನು ಕಂಡು ಬೆದರಿದ್ದಳು. ತಂದೆಯ ಒತ್ತಾಯಕ್ಕೆ ಆ ಜೆಲುವೆ- ಕರಿಯ ಧಾಂಡಿಗನೊಬ್ಬನನ್ನು ಮದುವೆಯಾಗಿದ್ದರೆ, ಆ ಮದುವೆಯು ಆಕೆಯ ಮನೋಧರ್ಮಕ್ಕೆ ವಿರುದ್ಧವಾಗಿ ಪರಿಣಮಿಸಿದ್ದರೆ, ಆಕೆ ಕಗ್ಗತ್ತಲೆಯ ದಾರಿಯಲ್ಲಿದ್ದಳೆಂದು ಮತ್ತೊಮ್ಮೆ ಹೇಳುವ ಅಗತ್ಯವಿಲ್ಲ. ಈ ಅನಿಚ್ಛಾ ವಿವಾಹದಲ್ಲೂ ಆಕೆ ಕಾಲಿರಿಸಿ ನಿಲ್ಲುವ ಗಲಿಗೆಯಲ್ಲೇ ಆಕೆಯ ಸಂತತಿಯು ನಾಶವಾಗುವುದೂ, ಪತಿಯು ಅನ್ಯಾಸಕ್ತನಾಗುವುದೂ ಆಕೆಯ ಎದೆಯನ್ನೆಷ್ಟು ಇರಿದುಬಿರಬೇಕು. ಒಂದೆಡೆ ಮನೆ ಶೂನ್ಯ, ಮತ್ತೊಂದೆಡೆ ಮನ ಶೂನ್ಯ—ಎಂದಾದರೆ, ಆಕೆ ಆಮೇಲೆ ಬಾಳಿನಲ್ಲಿ ಯಾವ ಸಿಹಿಯನ್ನು ನೆನೆದು ಸುಖಿಯಾಗಬೇಕು. ಈ ಕುದಿಯೇ ಆಕೆಯೆದೆಯಲ್ಲಿ ಒಮ್ಮೆ ರುದ್ರತಾಂಡವವನ್ನು ಎಬ್ಬಿಸಿರಬೇಕು. ಆದುದರಿಂದಲೆ ಆಕೆ ಚಿತ್ತಭ್ರಮೆಗೆ ಗುರಿವಾಗಿ ಸ್ಥಿರತೆಯಿಂದ ದೂರ ಸರಿದಳು. ತಾನು ಮಾಡುವ ಯಾವ ಕೆಲಸದಲ್ಲೂ ಆಕೆಗೆ 'ಶ್ರದ್ಧೆ' ಯಿಲ್ಲದಾಗಲು ಕಾರಣವೆಂದರೆ ಆಕೆಯ ಮುಂದೆ ನೂರಾರು ಮುಖದಿಂದ ಬಂದು

ಒಡತನದ ಬಾಳು

(ಕಥಾಸಂಕಲನ)

ಬರೆದವರು : 'ಆನಂದಕಂದ'

ಇದರಲ್ಲಿಯ ಒಂದೊಂದು ಕಥೆಯೂ ನಮ್ಮ ಜನಜೀವನದ ವಾಸ್ತವಚಿತ್ರ. ವಾಸ್ತವದಲ್ಲಿಯೆ ಸಾಹಿತ್ಯಿಕಸೌಂದರ್ಯವನ್ನು ಸಹಜವಾಗಿ ಹೇಗೆ ತುಂಬಬಹುದೆಂಬುದಕ್ಕೆ ಇದರಲ್ಲಿಯ ಕಥೆಗಳು ಒಳ್ಳೆಯ ಮಾದರಿಗಳಾಗಿವೆ.

ಕ್ರಾ. ಆ. ೧೨೦ ಪುಟಗಳು. ಬೆಲೆ ೧-೪-೦

'ಜಯಂತಿ' ಕಾರ್ಯಾಲಯ, ಧಾರವಾಡ

ನಿಂತ ಬದುಕಿನ ಭೀಕರ ಪರಿಸ್ಥಿತಿ ಗಂಡನ ಹೇಯ ವರ್ತನೆಯನ್ನು ಕಂಡಾಕೆಗೆ ಮಡಿಯಲು ಮನ ಎಸ್ಸಿ. ಕಾರಣ ಆಕೆಗದು ಎದೆಯ ನಿರಿಯ ನೋವಾಗಲಿಲ್ಲ. ಹೆಣ್ತನವನ್ನು ಮುರಿವ ಸಾಧನವಾಗಿತ್ತು. ಆದುದರಿಂದಲೆ ಆಕೆ ಆ ಬಾಳಿನಲ್ಲೇ ಮುಂದೆ ಬಂದಳು. ಲೋಕದ ಮುಂದೆ ನಗೆಗೀಡಾದರೂ ನಂಜಿ ತನ್ನತನವನ್ನಳಿದು ಬೇರೆ ದಾರಿಯನ್ನು ಕಾಣಲಿಲ್ಲ; ಸ್ತ್ರೀತ್ವಕ್ಕೆ ಚ್ಯುತಿ ತರುವ ಹೇಯಮಾರ್ಗದ ನಿಲುವನ್ನು ನಿಟ್ಟಿಸಲಿಲ್ಲ. ಬದುಕಿಗಾಗಿ ಬಾಳಿದಳು. ಅದಕ್ಕಾಗಿ ಸಿಕ್ಕಿದ ಮನೆಯಲ್ಲಿ ಜೀತದಾಳಾಗಿ ನಿಂತಳು. ನಿಂತಲ್ಲೂ ಆ ಅಂತರಂಗದ ಕಳವಳ, ಆಂದೋಲನ ಆಕೆಯ ಸ್ಥಿರತೆಯನ್ನು ಮಣ್ಣುಗೂಡಿಸಿತು. ಒಂದೊಂದು ದಿನ ಆಕೆ ಕೆಲಸವನ್ನು ತಪ್ಪಿಸಿಕೊಳ್ಳಲು ಕಾರಣ—ಮನಸ್ಸನ್ನು ಕವಿದ ಆ ನೂರಾರು ಚಿಂತೆಗಳ ಚಲನ. ಆದರೆ ಹುಚ್ಚಿಯಲ್ಲದ ಕಾರಣ—ಮರುದಿನ ಅದಕ್ಕನುಗುಣವಾದ ಕಾರಣವನ್ನು ಕಲ್ಪಿಸಿ ತನ್ನ ಅಂತರಂಗವನ್ನು ಮತ್ತೊಂದು ವಿಧದಿಂದ ಶಾಂತಗೊಳಿಸಿ, ಸಾಗಿದಳು. ಮನೆಯವರ ನಿಂದೆಗಳು ಆಕೆಯನ್ನು ಕೆಣಕಲಿಲ್ಲ. ಅದಕ್ಕಿಂತಲೂ ಹಿರಿದಾದ ಸಂಕಟ ಆಕೆಯ ಹೃದಯ-ಗರ್ತದಲ್ಲಿ ಅಡಗಿತ್ತು. "ಆಕೆಗೆ ತನ್ನ ದಾಂಪತ್ಯದ ಬಾಳಿನಲ್ಲಿ ಬಂದ ಬೇಸರ ಹಿರಿದಾಗಿತ್ತು. ಆ ಜೀವನದಲ್ಲೊಂದು ಜುಗುಪ್ಸೆಯಿತ್ತು" ಎಂಬುದಕ್ಕೆ ಸಾಕ್ಷಿ—ಆಕೆ ಮೂರ್ತಿರಾಯರ ಮನೆಯಲ್ಲಿತ್ತಿದ ತನ್ನ ತಂಗಿಯವಾರ್ತೆ. ತಂಗಿಯ ಪತಿ ತೀರಿದಾಗ, ಸಹಗಮನಕ್ಕೆ ಸಿದ್ಧಳಾದ ತಂಗಿಯನ್ನು ಕಂಡು ನಂಜಿ ಹಾಸ್ಯಮಾಡಿದಳು. ಆ ಹಾಸ್ಯದಲ್ಲಿ ತೇಲಿದ್ದ ಆಕೆಯ ನಗುವುದು ತಂಗಿಯನ್ನು ಕೆಣಕುವ, ತಂಗಿಯ ದುಃಖವನ್ನು ಕಂಡುನಗುವ ನಗುವಲ್ಲ! ಅದು ಆಕೆಯ ಪಾಲಿಗೆ ಬಂದು, ಆಕೆಯನ್ನು ವಂಚಿಸಿದ ನಂಜಕಪುರುಷನ ನೆಲೆಯಲ್ಲಿ ಆಕೆ ಕಂಡ ಪುರುಷಜಾತಿಯ ನೋಟ. ಆ ಜಾತಿಯ ನೆಲೆಯಲ್ಲಿ ಆಕೆ ಕಂಡ ಸ್ವಭಾವ. ಆ—ನೆಲೆನಿಂತ ತಿರಸ್ಕಾರದ ನಗೆ ನೋಟ ಆಕೆಗೆ ಅದೇಕೋ

ಪುರುಷರ-ವಿವಾಹಿತಪುರುಷರ ಕಡೆಗೆ ತಿರಸ್ಕಾರವಿದ್ದಿರಬೇಕು. ಜೀವಂತವಿರುವ ಪುರುಷನೆ, ವಂಚನೆಯ ಹರಮಾವಧಿಗೆ ಕಾಲಿರಿಸಿದ್ದಾಗ, ಸತ್ತವನ ಬಾಳಿನಲ್ಲಿ ಆಕೆಗೇಕೆ ಬೇಸರ ಬರಬೇಕು?

ಆದರೆ.....ನಂಜ! ಬಾಳಿನ ಬಲಿಯನ್ನು ತನ್ನ ನೆಲೆಯಲ್ಲಿ ನಿಲ್ಲಿಸಿರಲಿಲ್ಲ. ಜೀವಂತನಿದ್ದ ಪತಿಯ ವಿಷಯದಲ್ಲಿ ಆಕೆಯೆಬ್ಬಿಸಿದ "ಮರಣ ವಿಚಾರ" ಆಕೆಯ ಅಂತರಂಗವನ್ನು ಕೆದರಿರಲಿಲ್ಲ. ಆದರಿಂದಲೆ ಒಂದು ದಿನ ಆಕೆ ಬೇಕೆಂದೇ "ತನ್ನ ಗಂಡ ಸತ್ತನೆಂದು ಸೌಮಾಂಗಲ್ಯ ಚಿಹ್ನೆಯನ್ನು ಕಿತ್ತೊಗೆದು-ಬೀದಿಯಲ್ಲೇ ಗಲಭೆಯನ್ನೆಬ್ಬಿಸಿದಳು" ಆದಕ್ಕೆ ಕಾರಣ— ಆಕೆಯ ನೋವು. ಆವುದೋ ನೆಲೆತಪ್ಪೊಂದು ಆಕೆಯನ್ನು ಆಗಾಗ ಕೆಣಕುತ್ತಿದೆ. ತನ್ನ ಬಾಳ ಕೆರಣ ಅನ್ಯಜೀವನವನ್ನು ಬೆಳಗುವಾಗ ಆಕೆಯೆಂತು ತೃಪ್ತಳಾಗಬೇಕು? ಆ ಸುಪ್ತಭಾವ ಒಮ್ಮೊಮ್ಮೆ ಹೊರಬಿದ್ದು ಆಕೆಯನ್ನು ಗೊಂದಲಕ್ಕೆ ಈಡಾಗಿಸುತ್ತಿರಬೇಕು. ಆದುದರಿಂದಲೆ ಆಕೆ ಆ ನೆವನವನ್ನು ತಂದಳು. ಪತಿಯ ಮರಣವನ್ನು ಪ್ರತ್ಯಕ್ಷ ಕಾಣದಾಕೆ, ತಂತ್ರಿಯ ಹೃದಯವನ್ನರಿಯದಾದಳು. ಆದರೆ ಎಂದು ಆಕೆಯ ಪಾಲಿಗೂ ಪತಿಯ ಮರಣವು ಬಂತೋ, ಆಕೆ[illegible]ನ್ನು ಪ್ರತ್ಯಕ್ಷ ಕಾಣುವಂತಾದಳೋ, ಅಂದೇ ಆಕೆಯ 'ಹುಚ್ಚು' [illegible]ಲಗಿರಬೇಕು. ಜೀವನದ ಪೂರ್ಣ ಪರಿಚಯವನ್ನಾಕೆ ಪಡೆದಿರಬೇಕು. ಆದುದರಿಂದಲೆ ಬಡಕಲು ದೇಹದಿಂದ ಕೂಡಿದ ನಂಜಿ, ಮೊದಲಿನ ಜೀವನದ ಒಳನೋಟವನ್ನು ಹೊರತಂದ ನಂಜಿ-ಎತ್ತಲೋ ಸಾಗಿದಳು. ಆ ಸಾಗು ಆಕೆಯ ಮುಂದೆ ನಿರ್ದಿಷ್ಟನಾಗಿತ್ತೋ—ಏನೋ?

ಲೇಖಕರು-ನಂಜಿಯ ಜೀವನವನ್ನು ವಿವಿಧ ಘಟನೆಗಳ ಎರಕದಿಂದ ಸ್ಫುಟಪಡಿಸಿದ್ದಾರೆ. ಆಕೆಯ ಜೀವನಕ್ಕೊಪ್ಪಿದ, ವ್ಯಕ್ತಿತ್ವಕ್ಕೆ ಅನುಗುಣವಾದ ಸಂಭಾಷಣೆಗಳನ್ನು ಹೊಂದಿಸಿದ್ದಾರೆ. ಪ್ರತಿಯೊಂದು ಘಟನೆಯಲ್ಲೂ ನಂಜಿಯ ಹೃದಯವು, ನೋವು ಹೊರಕಾಣುವಂತೆ ಉಚಿತವಾದ ಸನ್ನಿವೇಶವನ್ನು ರಚಿಸಿದ್ದಾರೆ. ಆಕೆ ಮನೆಗೆ ಬಂದ ಮೊದಲದಿನವನ್ನೂ—ಕೆಲಸಕ್ಕೆ ತೊಡಗಿದ ದಿನದ ರೀತಿಯನ್ನೂ, ಆಕೆ ಅರ್ಧ-ಅರ್ಧವಾಗಿ ಕೆಲಸವನ್ನು ಮುಗಿಸಿ-ಉಳಿದುವನ್ನು ಮಾತಿನಿಂದಲೇ ಹಾರಿಸುವ ವಿಧಾನವನ್ನೂ ಬಹು ಚೆಲುವಾಗಿ ಮಾರ್ಮಿಕವಾಗಿ ನೆಲೆದಿದ್ದಾರೆನ್ನಬೇಕು. ಮಾನಸಿಕ ವಿಶ್ಲೇಷಣೆಯುಕ್ತವಾಗಿ ಕಳೆಯೇರಿನಿಂತ ಕತೆಯಿದು ಒಂದು ವ್ಯಕ್ತಿಯ ಪೂರ್ಣ ಚಿತ್ರ!

ನಂಜಿಯು ಮಾನವಿ! ದಾನವಿಯಲ್ಲ! ಎಚ್ಚತ್ತ ಹೃದಯವುಳ್ಳವಳು. ಆದರೆ ಆಕೆಯು ಬಾಳಿನಲ್ಲಿ ಸಂತೋಷವಿಲ್ಲ. ಆಕೆ ಸಂತುಷ್ಟಳಾಗಿದ್ದರೆ, ದಾಂಪತ್ಯದಲ್ಲಿ ಸುಖವಾಗಿ ನೆಲೆಸಿದ್ದರೆ, ಆಕೆಯು ಹೊರಬಾಳು ಹೀಗಾಗುತ್ತಿರಲಿಲ್ಲ. ಮಾನವಿಯಂತೆ ಬಾಳುವ ಆಶೆಯಿದ್ದ ಆ ಹೆಣ್ಣೆಡೆ ನಾಲ್ಕು ಜನರ ಮುಂದೆ 'ಮಾನವಿ' ಯಾಗಿ ಬಾಳುತ್ತಿದ್ದಳು. ಆದರೆ ವಿಧಿಯದನ್ನು ಮಣ್ಣುಗೂಡಿಸಿತ್ತು. ಮುಂದಿಯಾಕೆಯನ್ನು ಹಾಸ್ಯಮಾಡುತ್ತಿತ್ತು.

ಜಾನಪದ ಗೀತಗಳು

ಸಂಗ್ರಾಹಕ:— **ಡಿ. ಮಹಾಲಿಂಗಭಟ್ಟ, ವಿದ್ವಾನ್,** ಎಡನಾಡು, (ದ. ಕ.)

ಹಿಂಡೆಮ್ಮೆ ಕರೆಯಲಿ, ತೊಂಡೆಕಾಯಾಗಲಿ
ದಿಂಡಿನ ಬಾಳೆ ಗೊನೆಬಿಡಲಿ, ದೇವರೆ
ಕೊಂಡೊಪ್ಪಿಸುವೆ ಕದಳಿಯ! ॥೧॥

ಆಡಿ ಉಂಡವ ಕೆಟ್ಟ, ಕೇಡ ನೆನೆದವ ಕೆಟ್ಟ,
ನೋಡದ್ದೇ ಕೆಟ್ಟೊ ಬೆಳಿಭೂಮಿ, ಸೋದರರ
ಹೆಣ್ಣು ತಂದು ಕೆಟ್ಟ ಅತಿಪೆಡ್ಡ ॥೨॥

ನೆಗೆ ನೆಗೆ ಮುಖದೋರ ನೆಗೆಯ ನಂಬಲುಬೇಡ,
ನೆಗೆ ಬೇರೆ, ಅವರ ದಗೆ ಬೇರೆ; ಬಾಳೆಯ
ಕುಂಡಿಗೆ ಬೇರೆ—ಗೊನೆ ಬೇರೆ ॥೩॥

ಒಂದ ಕೊಟ್ಟರೆ ದೇವ ಒಂದ ಕೊಡೇನೆಂಬ
ಕೆಂದೆಯ ಹಾಲು, ಸೆರೆ ಹೊನ್ನು ಕೊಟ್ಟರೆ
ಗಂಡುಸಂತಾನ ಕೊಡೆನೆಂಬ ॥೪

ನಿದ್ದೆ ಬಾರದ ಕಣ್ಗೆ ಮದ್ದಾರು ಬಲ್ಲರೊ?
ಗದ್ದೆಯ ತಡಿಯ ಗರುಗನ ಎಸರಿಂಡಿ ಸೌ-
ಭದ್ರೆ ಕಾಡಿಗೆಯ ಇಡಿ ಪಜ್ಜೊ! ॥೫

ದೇವರ ದೇವಂಗೆ ಹೂವಾರೊ ಕೈತಕ್ಕು?
ಹೂವೆಂಜಲಾದೊ ಹುಳುಮುಟ್ಟಿ, ಹಸುವಿನ
ಹಾಲೆಂಜಲಾದೊ ಕರು ಮುಟ್ಟಿ ॥೬

ಸಾದರ ಸ್ವೀಕಾರ

೧೧ **ಅರುಣೋದಯ** (ಹೈಸ್ಕೂಲಿನ ವಾರ್ಷಿಕ ಸಂಪುಟ—ಸಚಿತ್ರ) ಸಂಪಾದಕರು, ಶ್ರೀ ಎಲ್. ಬಿ. ಪಾಟೀಲ ಬಿ. ಎ. (ಆನರ್ಸ್), ಶ್ರೀ. ಎ.ಆರ್. ಬುರ್ಲಿ ಬಿ.ಎ. (ಆನರ್ಸ್) ಮತ್ತು ಕುಮಾರಿ ಎಸ್. ಕೆ. ಕುಲಕರ್ಣಿ ಎಸ್. ಟಿ. ಸಿ. ಅವರುಗಳು. ಪ್ರಕಾಶಕರು ಶ್ರೀಮಾನ್ ಕೆ. ಎನ್. ಎಸ್ ಐಯಂಗಾರ್ ಹೆ. ಮಾಸ್ಟರ್ ವಿದ್ಯಾದಾನ ಸಮಿತಿ ಹೈಸ್ಕೂಲ್ ಗದಗ ಅವರು. ಕ್ರೌ. ೧೮೦ ಪುಟಗಳು.

ಹೊಸ ಹೊಸ ವಿದ್ಯಾರ್ಥಿಗಳ ಲೇಖನಗಳಿಂದಲೆ ಇದ್ದು ತುಂಬಿನಿಂತಿದ್ದರೂ, ಸಂಪಾದಕರು ತಮ್ಮ ಕಾರ್ಯವನ್ನು ಶ್ರದ್ಧಾಪೂರ್ವಕವಾಗಿ ನೆರವೇರಿಸಿದ್ದಾರೆಂದು ಹೇಳಬಹುದು. ಅಚ್ಚು ಕಟ್ಟುಗಳೂ ಮುದ್ದು-ಮುದ್ದಾಗಿವೆ.

೧೨ **ತಾವರೆ** (ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ) ಸಂಪಾದಕರು, ಶ್ರೀ. ವಸಂತ ಕುಷ್ಟಗಿ ಬಿ. ಎ. (ದ್ವಿತೀಯ ವರ್ಷ) ಮತ್ತು ಶ್ರೀ. ಅನಂತಾಚಾರ್ಯ ಬಿ. ಎ. (ಪ್ರಥಮ ವರ್ಷ). ಪ್ರಕಾಶಕರು, ಉಸ್ಮಾನಿಯಾ ವಿಶ್ವವಿದ್ಯಾನಿಲಯ ಹೈದರಾಬಾದು. ರೊಯಲ್ ೪ರ ೭೪ ಪುಟಗಳು.

ಸಾಹಿತ್ಯವಿಷಯಕ ವಿವಿಧಲೇಖನಗಳೂ, ಕವಿತೆ—ದೃಶ್ಯಗಳೂ, ವೈಜ್ಞಾನಿಕ ಲೇಖನಗಳೂ ಇದರಲ್ಲಿ ಬಂದಿವೆ. ಆಭ್ಯಾಸ ಪೂರ್ಣ ಲೇಖನಗಳಿಂದ ತುಂಬಿದ ಈ ಸಂಚಿಕೆ ವಾಚನೀಯವಾಗಿದೆ. ಸಂಪಾದಕರಿಗೆ ಅಭಿನಂದನೆಗಳು.

೧೩ **ಗೆಳೆಯ ನಿನಗೆ ಶುಭೋದಯ** (ಅನುವಾದಿತ ಕಾದಂಬರಿ). ಮೂಲ ಬಂಗಾಲಿ ಲೇಖಕ, ದಿವಂಗತ ಶ್ರೀ. ರವೀಂದ್ರನಾಥ ಠಾಕೂರರ 'ಶೇಷೇರ ಕವಿತಾ' ಎಂಬ ಕಾದಂಬರಿಯ ಅನುವಾದ. ಅನುವಾದಕರು 'ಧನ್ವಂತ' ಪ್ರಕಾಶಕರು, ಎಚ್. ಎನ್ ರಾವ್ ಬ್ರದರ್ಸ, ಚಿಕ್ಕಪೇಟೆ, ಬೆಂಗಳೂರು ನಗರ. ಕ್ರೌ. ಆ. ೧೩೬ ಪುಟಗಳು. ಬೆಲೆ ೧—೪—೦.

೧೪ **ವಿದಾಯ** (ಕವನಸಂಕಲನ) ಕವಿಗಳು ದಿವಂಗತ ಯಮ್ಮುಂಜ ರಾಮಚಂದ್ರ ಆವರು. ಪ್ರಕಾಶಕರು, ಶ್ರೀ. ಕೆ. ಗೋವಿಂದ ಜೊಯಿಸ, ಕಬಕ (ದ. ಕ.). ಕ್ರೌ. ೫೮+೧೬ ಪುಟಗಳು. ಬೆಲೆ ೧—೦—೦.

೧೫ **ರಾಜಕೀಯ ಪಕ್ಷಗಳು** (ಪರಿಚಯಾತ್ಮಕ ಕಿರು ಹೊತ್ತಗೆ). ಲೇಖಕರು, ಶ್ರೀ. ಎನ್. ರಾಜಗೋಪಾಲ್ ಎಂ. ಎ. ಅವರು. ಪ್ರಕಾಶಕರು, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥಮಾಲೆ. ೭ನೆಯ ಕುಸುಮ ಫೂ. ಕ್ಯಾ. ಆ. ೮೦ ಪುಟಗಳು. ಬೆಲೆ ೦—೪—೦.

೧೬ **ಸ್ವಾದಿ ಅರಸುಮನೆತನ** (ಕಿರುಹೊತ್ತಗೆ) ಲೇಖಕರು, ಪ್ರೊ. ಸ. ಸ. ಮಾಳವಾಡ ಎಂ. ಎ. ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸಗ್ರಂಥಮಾಲೆಯ ೮ನೆಯ ಕುಸುಮ. ಫೂ. ಕ್ಯಾ. ಆ. ೫೦ ಪುಟಗಳು. ಬೆಲೆ ೪ ಆಣೆ.

ಸೈರಂಧ್ರಿ ಹಾಗು ಮಗನ ಗೆಲವು (ಸರಳ ರಗಳೆಯಲ್ಲಿ ಬರೆದ ಎರಡು ನಾಟಕಗಳು.) ಲೇಖಕರು, ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ. ಎ., ಬಿ. ಟಿ. ಅವರು. ಪ್ರಕಾಶಕರು, ಸಾಹಿತ್ಯಸೇವಾ ಮಂದಿರ, ಗೋಕಾಕ, ಜಿಲ್ಲಾ ಬೆಳಗಾಂವಿ. ಕ್ರೌ. ಆ. ೮೦ ಪುಟಗಳು. ಬೆಲೆ ೧ ರೂ.

೧೮ **ದೇಶಭ್ರಷ್ಟ** (ಸಾಮಾಜಿಕ ನಾಟಕ) ಶ್ರೀ. ಎಸ್. ಕೆ ಶಾಮಭಟ್ಟ, ಶೇಡಿಗುಮ್ಮೆ, ಪೆರಡಾಲ (ದ. ಕ.) ಅವರು ಬರೆದು ಪ್ರಕಟಿಸಿದವು. ಕ್ರೌ. ಆ. ೮೧೦೮ ಪುಟಗಳು. ಬೆಲೆ ೧—೦—೦.

೧೯ **ಸರ್ವಾಣಿ ಸರ್ವಾಣಿ ಪರಮಾತ್ಮ** (ಅನುವಾದಿತ ಕಿರುಹೊತ್ತಗೆ)ಮೂಲ ಹಿಂದಿ ಲೇಖಕರು ದಿವಂಗತ ಮದನ ಮೋಹನ ಮಾಲವೀಯ ಅವರು. ಪ್ರಕಾಶಕರು, ಗೀತಾ ಪ್ರೆಸ್, ಗೋರಖಪುರ. ಕ್ರೌ. ಆ. ೩೪ ಪುಟಗಳು. ಬೆಲೆ ೦—೧—೦.

೨೦ **ಆನಂದಲಹರಿಗಳು** (ಕನ್ನಡಾನುವಾದಿತ ಮಾನವ ನೀತಿ ವಿಷಯಕ ಕಿರುಹೊತ್ತಗೆ) ಮೂಲ ಹಿಂದೀ ಲೇಖಕರು ಶ್ರೀ ಹನುಮಾನ್ ಪ್ರಸಾದ ಪೋದ್ದಾರರು. ಪ್ರಕಾಶಕರು, ಶ್ರೀ. ಘನಶ್ಯಾಮದಾಸ ಜಾಲಾನ, ಗೀತಾಪ್ರೆಸ್, ಗೋರಖಪುರ. ಕ್ರೌ. ಆ. ೩೨ ಪುಟಗಳು. ಬೆಲೆ ೧ ಆಣೆ.

೨೧ **ಹಿಂದೂ ಸಂಸ್ಕೃತಿಯ ಸ್ವರೂಪ** (ಪರಿಚಯಾತ್ಮಕ ಕಿರುಹೊತ್ತಗೆ) ಲೇಖಕರು, ಪ್ರಕಾಶಕರು ಮೇಲೆ ಹೇಳಿದವರೆ. ಕ್ರೌ. ಆ. ೩೬ ಪುಟಗಳು. ಬೆಲೆ ೧ ಆಣೆ.

೨೨ **ದೀನ ದುಃಖಿತರ ಪ್ರತಿ ನನ್ನ ಕರ್ತವ್ಯ** (ಸಮಾಜ ಧರ್ಮಬೋಧಕ ಕನ್ನಡಾನುವಾದಿತ ಕಿರುಹೊತ್ತಗೆ). ಇದರ ಲೇಖಕ ಪ್ರಕಾಶಕರು ಮೇಲೆ ಹೇಳಿರುವವರೆ! ಕ್ರೌ. ಆ. ೩೬ ಪುಟಗಳು. ಬೆಲೆ ೦—೧—೦.

ಚಂದಾದಾರರಲ್ಲಿ ವಿನ್ನಹ

ಹಳೆಯ ವರ್ಷ ಮುಗಿದೊಡನೆಯೆ, ಹೊಸ ವರ್ಷದ ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ಕಳುಹಬೇಕು. ವ್ಹಿ. ಪಿ. ಗಾಗಿ ದಾಖಲಾಯ್ದರೆ ೦-೧೧-೦ ಆಣೆ ಅಂಚೆಯ ವೆಚ್ಚವನ್ನು ವ್ಯರ್ಥ ವಹಿಸಬೇಕಾಗುವುದು.

ವ್ಯವಸ್ಥಾಪಕ 'ಜಯಂತಿ' ಧಾರವಾಡ

ಜಯಂತಿಗೆ ಚಂದಾದಾರರಾಗಿರಿ!

ಕರ್ನಾಟಕದಲ್ಲಿಯ ಎಲ್ಲ ಮಾಸಪತ್ರಿಕೆಗಳಲ್ಲಿಯೂ ಗಾತ್ರದಲ್ಲಿ ದೊಡ್ಡದು!

ಪ್ರತಿಯೊಂದು ಕ[illegible]ಂಬದಲ್ಲಿಯೂ ಇರಬೇಕಾದ ಪತ್ರಿಕೆ 'ಜಯಂತಿ'

ತನ್ನ ಹದಿನೆಂಟು [illegible]ಳ ಜೀವನದಲ್ಲಿ, ಒಂದು ಸಲವೂ ಸಂಯುಕ್ತಾಂಕವನ್ನು ಹೊರಡಿಸಿಲ್ಲ;
ತ[illegible]ನುಯಾನಿಷ್ಕೆಯ ಗುರಿಗೆ ಚ್ಯುತಿ ತಂದುಕೊಂಡಿಲ್ಲ!

ಸದಭಿರುಚಿಗೆ ಒಗ್ಗುವಂತಹ ಸಾಹಿತ್ಯವನ್ನು ಪ್ರಕಟಿಸುವುದೇ ಜಯಂತಿಯ ಆದರ್ಶ!

ಕನ್ನಡನಾಡಿನ ಪ್ರಮುಖಸಾಹಿತ್ಯಿಕರ ಕೃತಿಗಳ ದರ್ಶನವನ್ನು ಜಯಂತಿಯು ಮಾಡಿಸುವುದಲ್ಲದೆ, ಹೊಸ ಸಾಹಿತ್ಯಿಕರನ್ನು ಬೆಳಕಿಗೆ ತರುವ ಕಾರ್ಯವನ್ನೂ ಮಾಡುವುದು. ಜಯಂತಿಯಲ್ಲಿ ಪ್ರಕಟವಾಗುವ ಪ್ರತಿಯೊಂದು ಲೇಖನವೂ ನಾಡಿಗರ ದೃಷ್ಟಿಯನ್ನು ಜೀವನಸೌಂದರ್ಯದ ಕಡೆಗೆ ತಿರುಗಿಸುವಂತಹದಿರುವುದು. ವಿವಿಧ ವಿಷಯಗಳ ಪಂಚಯಾತ್ಮಕ ಲೇಖನಗಳು ನಾಡಿಗರನ್ನು ಬಹುಶ್ರುತರನ್ನಾಗಿ ಮಾಡಬಲ್ಲುವು. ಕುಟುಂಬದಲ್ಲಿಯ ಹಿರಿಯರಿಗೂ ಕಿರಿಯರಿಗೂ ಜಯಂತಿ ಪ್ರಯೋಜನಕಾರಿ!

ಕನ್ನಡನಾಡಿನ ಎಲ್ಲ ಶಾಲೆ-ಕಾಲೇಜುಗಳೂ ಜಯಂತಿಯನ್ನು ತರಿಸಿಕೊಳ್ಳಬೇಕು.

ಮುಂಬಯಿ, ಮದರಾಸು, ಮೈಸೂರು, ಹೈದರಾಬಾದ್ ಇವೆಲ್ಲ ರಾಜ್ಯಗಳ
ಸರಕಾರಗಳಿಂದಲೂ ಜಯಂತಿ ಮನ್ನಣೆಯನ್ನು ಪಡೆದಿದೆ.

ವಾರ್ಷಿಕ ಚಂದಾ ೫—೦—೦. ಆರು ತಿಂಗಳ ಚಂದಾ ೩—೦—೦.

'ಜಯಂತಿ' ಕಾರ್ಯಾಲಯ, ಧಾರವಾಡ

Printed by N. A. Hoskeri at the Vijaya Press, Dharwar and published for the Proprietors Jayanti publications, by K. S. Betgeri at the Jayanti Office, Dhrawar



ಲೋಕಮಾನ್ಯನ ಶರಣ!

ಕಾವು ಕೊಟ್ಟಿಹ ಗಿಡಕೆ ಕೊಡಲಿ ಮುಳುವಾದಂತೆ,
ಕಾಯಲಿಟ್ಟಿಹ ಬೇಲಿ ಬೆಳೆದ ಹೊಲ ತಿಂದಂತೆ,
ಆಳ್ ಎಂದು ಬಂದವನು ಮನೆಯೊಡೆಯನಾದಂತೆ,
ತಿರಿದುಣ್ಣ ಬಂದವನು ದೊರೆಯಾಗಿ ನಿಂತಂತೆ,
ಅತಿಥ್ಯಕೆಂದೈದಿ ಆಜ್ಞೆಯನು ಕೊಡುವಂತೆ,
ಕೂಳಿಗೆನುತಲಿ ಬಂದು ಕಾಳಾಗಿ ನಿಂತಂತೆ
ಕುರಿಯಂತೆ ಬಂದವರು ಕರಿಯಾಗಿ ನಿಂತಿಹರು
ಭಾರತದ ವನವೆಲ್ಲ ವಿಧ್ವಂಸಗೊಳಿಸಿಹರು.
ಭಾರತದ ಕೇಸರಿಯೆ, ವನರಾಜ ನೀನಿರಲು,
ಮದಕರಿಗೆ ಅಂಜುವರೆ! ವ್ಯಾಘ್ರಕಂಠದಲಿಂದು
'ನಮ್ಮದೀ ಭಾರತವು, ಬಂಧಮುಕ್ತರು ಇಂದು!'
ಎಂದು ಗರ್ಜಿಸಿ ನೋಡು, ಕರಿಯ ಕತೆ ಮುಗಿಯುವುದು—
ಎಂದೊರೆದ ರಿಪುದರ್ಪಕಂದರ್ಪದರ್ಪಹರ
ಬಾಲಗಂಗಾಧರನೆ ಲೋಕಮಾನ್ಯನೆ ಶರಣು!

ಆ. ವಂ. ಗಲಗಲಿ, ಧಾರವಾಡ

ಸಂಪುಟ ೧೯ JAYANTI ಸಂಚಿಕೆ ೨

ಈ ಸಂಚಿಕೆಯಲ್ಲಿ

ಶಾಂತಿಮಂತ್ರದ ಹಿನ್ನೆಲೆಯಲ್ಲಿ ರಣಭೇರಿಯ ಗುಡುಗು (ಸಂಪಾದಕೀಯ)
ಸಂಪಾದಕರು ೮೧

ಜಯ, ಜನಗಣಮನದ ಅಭಿಮಾನ ಮ[illegible]ಚನಗಳು)
'ಸಾಮಾಜಿಕ' ೮೩

ನರವೀರ
ಶ್ರೀ ದ. ೮. ಪದರಜೋಶಿ, ಬಿ. [illegible]ಪತ್ರಿಕೆಗಳಬಯಿ ೮೩

ಸಾಹಿತ್ಯ ನನವಿಹಾರ [illegible]ತ್ರವ್ಯವಹಾ
ಸಂಪಾದಕರು [illegible] ೮೪

ಅಶಾಂತಿಪರ್ವ (ಐತಿಹಾಸಿಕ ರಂಗರೂಪಕದ ಪೂರ್ವಭಾಗ)
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ ೮೫

ಹಿಂದೂ ಮಹಿಳೆಯ [illegible]ಬಾಳನೋಟ (ವಿಧವಾ ಜೀವನ)
ಶ್ರೀ. ದ. ರಾ. ಬೆ[illegible]ರುವರು, ಧಾರವಾಡ ೯೩

ಅಂದು-ಇಂದಿನ ನಡ[illegible]ವನ)
ಶ್ರೀ. ಜಿ. ವಿ. ಜೆತ್ತಾಳ ಐ. ಎ. ಎ ಎಸ್. ವಾಶಿಂಗ್ಟನ್ (ಅಮೇರಿಕಾ) ೯೬

ಒಲುಮೆ (ಸಣ್ಣಕಥೆ)
ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ ೯೭

ಗುಂಡೂಮೂನೂನ ಗುರುತು (ಭಾರತದ ಪ್ರ. ಸ್ವಾತಂತ್ರ್ಯ ಸಂಗ್ರಾಮ)
ಶ್ರೀ. ಪಿ ವಿ. ಗುಡಿ, ಹೊಸದಿಲ್ಲಿ ೧೦೩

ಈ ನಿರ್ವಿದ್ಯನು ವಾಗೀಶ (ಕವನ)
ಶ್ರೀ. ಮುದೇನೂರ ಸಂಗಣ್ಣ, ಚಿಗಟೇರಿ ೧೦೬

ಮಕ್ಕಳಲ್ಲಿಯ ಸ್ವಹೀನತಾಭಾವನೆ (ಮನೋವಿಜ್ಞಾನ)
ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ., ಎಲ್.ಟಿ. ಬಿ. ಧಾರವಾಡ ೧೦೭

ಜಾನಪದ ಗೀತಗಳು (ಹಳ್ಳಿಯ ಹಾಡು)
ಶ್ರೀ. ಸಂಗಪ್ಪ ಚಂದಪ್ಪ ದೇಸಾಯಿ, ಸಾಸನೂರ ೧೧೯

ರಿಕ್ಷಾವಾಲಾ (ಸಣ್ಣಕತೆ)
ಶ್ರೀ. ನಿ. ನಾರಾಯಣ ಬಲ್ಲಾಳ, ಉಡುಪಿ (ದ. ಕ.) ೧೧೦

ಭಾರತದ ದಿವ್ಯಜ್ಯೋತಿ (ಲೋಕಮಾನ್ಯ ತಿಲಕರು)
ಶ್ರೀ ವೆ. ಮು. ಜೋಶಿ, ಧಾರವಾಡ ೧೧೩

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಶ್ರೀ. ಶಂ. ಗು. ಬಿರಾದಾರ ಮತ್ತು ಶ್ರೀ. ಕೆ. ಎಸ್. ಶರ್ಮಾ ೧೧೬

ಸಾದರ ಸ್ವೀಕಾರ ಹೊದಿಕೆಯ ಒಳಪುಟದಲ್ಲಿ

ಜಯಂತಿ

ಸಂಪುಟ ೧೯ ಸಂಚಿಕೆ ೩

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

**
*

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಶಾಂತಿಮಂತ್ರದ ಹಿನ್ನೆಲೆಯಲ್ಲಿ

ರಣಭೇರಿಯ ಗುಡುಗು!

ದುಡಿಮೆಂ[illegible] ಕಳೆದು, ಪಡೆದುದರಲ್ಲಿಯೆ ಸುಖ-ಸಮಾಧಾನಗಳಿಂದ ಬದುಕೋಣ—ಎಂಬ [illegible]ಗೆ ಇಂದು ಯುದ್ಧ–ಮಹಾಯುದ್ಧಗಳು ಬೇಕಾಗಿಲ್ಲ-ವೆಂಬುದು ಖಂಡಿತವಾ[illegible] ಪ್ರಪಂಚದಲ್ಲಿಯ ಇಂದಿನ ಪ್ರತಿಯೊಂದು ರಾಷ್ಟ್ರವೂ, ಒಂದಿಲ್ಲೊಂದು ಬ[illegible]ತಾಪ್ರಭುತ್ವವನ್ನು ಒಪ್ಪಿಕೊಂಡು ಹೊರಟುದರಿಂದ ಪ್ರತಿಯೊಂದು ರಾಷ್ಟ್ರದ [illegible]ಕಾರವೂ, ಧುರೀಣರೂ [illegible]ಸಾಮಾನ್ಯರ ಆಂತರಿಕ ಆಶೆಯಾಗಿರುವ ವಿಶ್ವಶಾಂತಿಯ ಮಾತುಗಳನ್ನೇ ಆಡುತ್ತಲಿದ್ದಾರೆ. ಆದರೆ ಒಂದು ಮೋಜಿನ ವಿಷಯ: ಜನ-ಸಾಮಾನ್ಯರಿಗೆ ಇಂದು ಯು[illegible]–ಹಿಂಸೆಗಳು ಬೇಡವಾಗಿದ್ದರೂ, ಅವರ ಪ್ರತಿನಿಧ್ಯವಹಿಸಿ ಶಾಸನ ನಡೆಸುವ ಕೆಲವು ರಾಷ್ಟ್ರಗಳ ಸರಕಾರಗಳಿಗೂ ಧುರೀಣರಿಗೂ ಯುದ್ಧ–ಹಿಂಸೆಗಳು ಶುಂಬ ಬೇಕಾಗಿವೆ. ಅವರು ಜನತೆಯ ಪ್ರತಿನಿಧಿಗಳಾದ [illegible]ದ, ಜನತೆಯ ಅಪೇಕ್ಷೆಯಂತೆಯೂ ವರ್ತಿಸಬೇಕಾಗಿದೆ; ಅನಿವಾರ್ಯವಾದ ತಮ್ಮ [illegible]ಗಳನ್ನೂ ಪೂರಯಿಸಿಕೊಳ್ಳಬೇಕಾಗಿದೆ. ಎಂತಲೇ ಅವರು, ಒಂದು ಕೈಯ್ಯಲ್ಲಿ ಶಾಂತಿಯ [illegible]ಯನ್ನು ಹಿಡಿದು, ಇನ್ನೊಂದು ಕೈಯಿಂದ ರಣಭೇರಿಯನ್ನು ಬಾರಿಸುತ್ತಿರುವರು.

ಸರಕಾರ ಮತ್ತು ಧುರೀಣರ ಮೇಲೆ ನಂಬುಗೆಯಿಟ್ಟು ತಮ್ಮ ತಮ್ಮ ಹಿತಸಂಬಂಧಗಳ ಹೊಣೆಯನ್ನು ಅವರ ಮೇಲೆ ಒಪ್ಪಿಸಿಕೊಟ್ಟು, ತಮ್ಮ ನಿತ್ಯದ ಕರ್ತವ್ಯಗಳಲ್ಲಿ ತೊಡಗಿದ ರಾಷ್ಟ್ರ–ರಾಷ್ಟ್ರಗಳ ಸಾಮಾನ್ಯ ಜನತೆಗೆ, ರಾಜಕೀಯ ಸೂತ್ರಚಾಲಕರ ಮತ್ತು ತಮ್ಮ ನಾಯಕರ ವೈಯಕ್ತಿಕ ಮಹತ್ತ್ವಾಕಾಂಕ್ಷೆಗಳ ಅರ್ಥವಾಗುತ್ತಿಲ್ಲ. ಏಕೆಂದರೆ, ತಮ್ಮ ಮಹತ್ತ್ವಾಕಾಂಕ್ಷೆಗಳಿಗೆ ರಾಷ್ಟ್ರೀಯ ಹಿತದ ಬಣ್ಣವನ್ನು ಕೊಟ್ಟು, ಅವರು ಜನಸಾಮಾನ್ಯರನ್ನು ಮುಗ್ಧರನ್ನಾಗಿ ಮಾಡಿ ಕುಳ್ಳಿರಿಸುತ್ತಿದ್ದಾರೆ.

ಇಂದಿನ ಯುದ್ಧಪ್ರವೃತ್ತಿಯ ಗಾಳಿ, ಅಮೇರಿಕೆಯ ಧುರೀಣರ ಆಂತರಿಕ ವಿಚಾರ-ಗಳನ್ನು ಒಂದು ರೀತಿಯಲ್ಲಿ ಹರಡುತ್ತಿದ್ದರೆ, ಯುರೋಪಿನ ಪಶ್ಚಿಮದ 'ಪ್ರಸಿದ್ಧ' ರಾಷ್ಟ್ರಗಳ ಧುರೀಣರ ಒಳತೋಟಿಗಳನ್ನು ಇನ್ನೊಂದು ರೀತಿಯಲ್ಲಿ ಹರಡುತ್ತಲಿದೆ. ಕಳೆದ ಎರಡೂ ಮಹಾ-ಯುದ್ಧಗಳಲ್ಲಿ ಅಮೇರಿಕೆಗೆ ಯಾವ ಬಗೆಯ ಬಿಸಿಯೂ ತಗುಲಿಲ್ಲ. ವ್ಯಾಪಾರವೃತ್ತಿಯ ಆ ರಾಷ್ಟ್ರವು, ಆ ಯುದ್ಧಗಳ ಮೂಲಕ ಸಾಕಷ್ಟು ಆರ್ಥಿಕಲಾಭವನ್ನು ಹೊಂದಿ, ಇಂದು ಜಗತ್ತಿ-ನಲ್ಲಿಯೆ ಬಲಿಷ್ಠವಾದ ರಾಷ್ಟ್ರವಾಗಿ ಕುಳಿತಿದೆ. ಬೇರೆಯ ಖಂಡದಲ್ಲಿ ಇರುವ ಆ ರಾಷ್ಟ್ರಕ್ಕೆ, ಯುದ್ಧ-ಭೀತಿ ಕಡಮೆಯಿರುವುದರಿಂದ, ಮಿಕ್ಕ ಖಂಡಗಳಲ್ಲಿ ಯುದ್ಧ ನಡೆಯುವುದು ಅದಕ್ಕೆ ಬೇಕಾದ; ಮಾತಾಗಿದೆ. ಯುದ್ಧದಲ್ಲಿ ತೊಡಗುವ ರಾಷ್ಟ್ರಗಳೆಲ್ಲ ಅಮೇರಿಕೆಗೆ ವ್ಯಾಪಾರ ಕ್ಷೇತ್ರಗಳಾಗುವುವು ಅಲ್ಲದೆ ಅದಕ್ಕೆ ಸಾಲಗಾರರಾಷ್ಟ್ರವಾಗಿ, ಒಂದು ರೀತಿಯಿಂದ ಅದರ ಶ್ರೇಷ್ಠತೆಯನ್ನೊಪ್ಪಿ ಅಧೀನ-ವಾಗಿ ನಿಲ್ಲುವುವು. ಈ ರೀತಿಯಿಂದ ತನ್ನ ಆಧಿಪತ್ಯವನ್ನು ಆರ್ಥಿಕರೀತಿಯಿಂದಲೇ ಪ್ರಪಂಚದ ಮೇಲೆಲ್ಲ ಹೇರಬೇಕೆಂಬುದು ಅಮೇರಿಕೆಯ ಆಂತರಿಕ ಆಶೆಯಾಗಿದೆ. ಆದುದರಿಂದಲೇ ಅದು ರಾಷ್ಟ್ರ–ರಾಷ್ಟ್ರಗಳ ಮೈತ್ರಿಯನ್ನು ಒಪ್ಪದೆ, ವಿದ್ವೇಷದ ಕಿಚ್ಚು ಹೊತ್ತುವಂತೆ ಪ್ರಯತ್ನಿಸುತ್ತಲಿದೆ. ಇಂದಿನ ಅಮೇರಿಕೆಯ ರಾಜಕಾರ್ಯವೆಂದರೆ, ಕೇವಲ ಕಕಟಕನ ಕುಟಿಲನೀತಿಯದಾಗಿದೆ.

ಇನ್ನು ಯುರೋಪಿನ ಪಶ್ಚಿಮ ರಾಷ್ಟ್ರಗಳಲ್ಲಿ ಇಂಗ್ಲಂಡು ಹೆಚ್ಚು ಪ್ರಭಾವಶಾಲಿಯಾದುದು. ಪ್ರಸ್ತುತ ತನ್ನ ಸಾಮ್ರಾಜ್ಯ ವೈಭವವನ್ನು ಕಳೆದುಕೊಂಡಿದೆಯಾದರೂ, ಅಲ್ಲಿಯ ಧುರೀಣರಲ್ಲಿ ಸಾಮ್ರಾಜ್ಯದ ದರ್ಪ-ಮೋಹಗಳು ಹಾಗೆಯೆ ಉಳಿದುಕೊಂಡಿವೆ. ಹೇಗಾದರೂ ಮಾಡಿ ಅಂದಿನಂತಹ ಸೂರ್ಯ ಮುಳುಗದಂತಹ ಸಾಮ್ರಾಜ್ಯವನ್ನು ಕಟ್ಟಬೇಕೆಂಬ ಕನಸನ್ನು ಅಲ್ಲಿಯ ರಾಜಕೀಯ ಧುರೀಣರು [illegible] ನಲ್ಲಿಯೂ ಇರುಳಲ್ಲಿಯೂ ಕಾಣುತ್ತಲಿದ್ದಾರೆ. ಆದರೆ [illegible] ಇರುವ ಕಸುವು ಮೈಯಲ್ಲಿ ಇಲ್ಲದಂತಾಗಿದೆ. ಕಳೆದ ವ[illegible] ಮೂಲಕ, ಆರ್ಥಿಕ ದೃಷ್ಟಿಯಿಂದ ಹಣ್ಣಾಗಿರುವ ಇಂಗ್[illegible] ಪೂರ್ವಕವಾಗಿ, ಶಾಂತಿಯ ಮಾತನಾಡುತ್ತಿದೆಯಾದ[illegible] ಕೆಯ ಆರ್ಥಿಕ ಋಣದ ಮೂಲಕ ಅದು, ಅಗಾಗ ಉ[illegible] ಆಡುತ್ತಲಿದೆ ಇಂಗ್ಲಂಡಿನ ಸ್ವತಂತ್ರ [illegible]ಕೀಯ ಬುದ್ಧಿ ಒಂ[illegible] ಬಗೆಯ ವಿಚಾರಕ್ಕೆ ತಕ್ಕಬೀಳುತ್ತಿದ್ದರೆ. [illegible]ವರ ಆರ್ಥಿಕ ಪರಾಧೀನತೆ ಅದನ್ನು ಇನ್ನೊಂದು ದಾರಿಯಲ್ಲಿ ನಡೆಸುತ್ತಿದೆ. ಅದಕ್ಕೆ ಚೀನದ ಸ್ನೇಹ ಬೇಕಾಗಿದೆ; ರಶಿಯದ ಸ್ನೇಹ ಬೇಕಾಗಿದೆ; ಭಾರತದ ಸ್ನೇಹ ಬೇಕಾಗಿದೆ. ಆದರೆ ಅದರ ಆರ್ಥಿಕಾ[illegible]ಭವೂ ಆರ್ಥಿಕ ಪರಾಧೀನತೆಯೂ ಅಮೇರಿಕೆಯ ಶವಣೆಗೊ[illegible]ನುಸಾರವಾಗಿ ಕುಣಿಯಲು ಹೆಚ್ಚುತ್ತಲಿವೆ. ಸುಸಂಸ್ಕೃತಿಯಿಂದ [illegible]ಗ ಇಂಗ್ಲಂಡಿಗೆ ನಿಜವಾಗಿಯೂ ಯುದ್ಧ ಬೇಕಾಗಿಲ್ಲ; ಆರ್ಥಿಕ ಕೊರತೆಯನ್ನು ತುಂಬಿಕೊಳ್ಳಲು ಬೇರೆ ಬೇರೆ ರಾಷ್ಟ್ರಗಳ ಸಂಬಂಧ ಬೇಕಾಗಿದೆ. ಆದರೆ ಅಂತಹ ಸಂಬಂಧವನ್ನು ಇರಿಸಿಕೊಳ್ಳಲಿಕ್ಕೆ ಅಮೇರಿಕೆಯು ಅವಕ್ಕೆ ಅಡ್ಡಗಾಲನ್ನು ಹಾಕುತ್ತಲಿದೆ. ಅಮೇರಿಕೆಯ ಋಣಸಂಬಂಧವನ್ನು ಕಡಿದುಕೊಳ್ಳಬೇಕೆಂದರೆ ಇಂಗ್ಲಂಡಿಗೆ ಒಂದು ಬಗೆಯ ಭೀತಿ. ಅದುದರಿಂದಲೇ ಇಂಗ್ಲಂಡು ಮನಸ್ಸೊಪ್ಪದಿದ್ದರೂ ಅಮೇರಿಕೆಯು ಬಾರಿಸುತ್ತಿದ್ದ ರಣಭೇರಿಯೊಂದಿಗೆ ತನ್ನ ಕೆರುಡೊಳ್ಳನ್ನು ಬಾರಿಸಬೇಕಾಗಿದೆ. ಜೊತೆಯೊಂದಿಗೆ ಅದರ ನೆರೆಯ ಕೆಲವು ರಾಷ್ಟ್ರಗಳೂ ತಮ್ಮ ಧ್ವನಿಗೂಡಿಸುತ್ತಲಿವೆ.

ಪೂರ್ವಯುರೋಪದಲ್ಲಿಯ ಪ್ರಭಾವಶಾಲಿಯಾದ ರಾಷ್ಟ್ರವೆಂದರೆ ರಶಿಯ. ಅದು ನಿಜವಾಗಿಯೂ ಜನತಾ ಪ್ರಭುತ್ವದರಾಷ್ಟ್ರ. ಅಲ್ಲದೆ ಆ ರಾಷ್ಟ್ರದ ವೈಶಾಲ್ಯ-ಸಮೃದ್ಧಿಗಳ ಮೂಲಕ ಅವರಿಗೆ ಯಾವುದರದ್ದೂ ಕೊರತೆಯೆಂಬುದಿಲ್ಲ. ಪ್ರತಿಯೊಬ್ಬನೂ ದುಡಿದೇ ಉಣ್ಣಬೇಕೆಂಬ ತತ್ತ್ವವನ್ನು ಒಪ್ಪಿದ ಅಲ್ಲಿಯ ಜನತೆಗೆ, ಇನ್ನೊಬ್ಬರ ಸೊತ್ತನ್ನು ಅಪಹರಿಸಿ ಸಿರಿವಂತರಾಗಬೇಕೆಂಬ ಅಪೇಕ್ಷೆಯಿದೆ. ಎಂತಲೇ ಅದು ಶಾಂತಿಮಯವಾದ ಜೀವನವನ್ನು ಮನವಾರೆ ಬಯಸುತ್ತಲಿದೆ. ಅದರಂತೆ ತನ್ನ ವಿಚಾರಗಳನ್ನು ಎಲ್ಲ ಕಡೆಗೂ ಪ್ರಕಟಿಸುತ್ತಲಿದೆ. ತನ್ನಂತೆಯೆ ಶಾಂತಜೀವನವನ್ನು ಬಯಸುವ ರಾಷ್ಟ್ರಗಳೊಂದಿಗೆ ಸ್ನೇಹ ದಿಂದರಲು ಬಯಸುತ್ತಲಿದೆ. ಅಂತಹ ರಾಷ್ಟ್ರಗಳ ಕೊರತೆಗಳನ್ನು ಕಳೆಯುವುದರಲ್ಲಿ ಸಹಕರಿಸುವುದಕ್ಕೂ ಇಚ್ಛಿಸುತ್ತಿದೆ. ಇದು ವಿಶ್ವ-ಶಾಂತಿಗೆ ಆವಶ್ಯಕವಾದ ಸಂಗತಿಯಾಗಿದ್ದರೂ, ಜಗತ್ತಿನ ಮೇಲೆಲ್ಲ ತನ್ನ ಆರ್ಥಿಕ ಪ್ರಭಾವದಿಂದ ಅಧಿಕಾರ ನಡೆಯಿಸಬೇಕೆಂಬ ಲೋಭಕ್ಕೊಳಗಾದ ಅಮೇರಿಕೆಗೆ ಬೇಡವಾಗಿದೆ. ಆದುದರಿಂದಲೇ ಅದು ಆರ್ಥಿಕ ದೃಷ್ಟಿಯಿಂದ ದುರ್ಬಲವಾಗಿರುವ ರಾಷ್ಟ್ರಗಳಲ್ಲಿ ಕೈಚಳಕ ನಡೆಯಿಸಿ, ಅವುಗಳನ್ನು ತನ್ನ ಕೈಗೂಸುಗಳೆನ್ನಾಗಿ ಮಾಡಿಕೊಳ್ಳುತ್ತಲಿದೆಯಲ್ಲದೆ, ರಶಿಯದ ವಿಷಯದಲ್ಲಿ ಸಂಶಯ-ದ್ವೇಷಾಗ್ನಿಗಳನ್ನು ಹೆರಡುತ್ತಲಿದೆ.

ಭಾರತವೂ ರಶಿಯದಂತೆಯೆ ಶಾಂತಿಮಯ ಜೀವನವನ್ನು ಬಯಸಿ ಯುದ್ಧದ ವಿರೋಧಪ್ರಚಾರವನ್ನು ಮಾಡುತ್ತಿರುವ ರಾಷ್ಟ್ರ. ಎಂತಲೇ ಇದು ಅಮೇರಿಕೆಯ ಅತೃಪ್ತಿಗೆ ಕಾರಣವಾಗಿದೆ. ಭಾರತವನ್ನು ಯುದ್ಧದಲ್ಲಿ ನೂಕಿಯೇ ಬಿಡಬೇಕೆಂದು, ಪರೋಕ್ಷವಾಗಿ ಅಮೇರಿಕೆಯು ಹಲವು ವಿಧದಿಂದ ಪ್ರಯತ್ನಿಸುತ್ತಲಿದೆ. ಅಮೇರಿಕೆಯ ಪ್ರಚೋದನೆ ಇಲ್ಲದೆ ಹೋಗಿದ್ದರೆ, ಪಾಕಿಸ್ತಾನದ ನಾಯಕರು ಈಗಿನಂತೆ ಯುದ್ಧಕ್ಕೆ ಕಾಲನ್ನು ಕೆದರುವ ಹುಂಬತನದ ಮಾತುಗಳನ್ನು ಆಡುತ್ತಿರಲಿಲ್ಲ. ಪೋರ್ತುಗೀಜರು ಹೀಗೆ ಹಟಕ್ಕೆ ಕಟ್ಟುಬಿದ್ದು ಭಾರತದ ಭಾಗದಲ್ಲಿ ನಿಲ್ಲುತ್ತಿರಲಿಲ್ಲ. ಇಂದು ಇಜಿಪ್ತ ರಾಷ್ಟ್ರವನ್ನು ರೇಗಿಸಿ ನಿಲ್ಲಿಸಿದುದು ಅಮೇರಿಕೆಯ ಕೈವಾಡವೆ! ಸುಯೇಜ್ ಕಾಲುವೆಯ ರಾಷ್ಟ್ರೀಕರಣದಿಂದ, ನಿಜವಾದ ತೊಂದರೆಗೆ ಒಳಗಾಗುವ ರಾಷ್ಟ್ರಗಳೆಂದರೆ, ಯುರೋಪ್, ಏಶಿಯಾದಲ್ಲಿರುವುವು. ಈಜಿಪ್ತದ ಈ ಕ್ರೋಧವನ್ನು ಪ್ರಾರಂಭಿಸುವುದು ಅಮೇರಿಕೆಗೆ ಬೇಕಾದ ಮಾತಾಗಿದೆ. ಊರು ಸುಟ್ಟರೂ ಹನುಮಪ್ಪ ಹೊರಗೆ. ಈಜಿಪ್ತ ಮತ್ತು ಅದರ ಮಿತ್ರರಾಷ್ಟ್ರಗಳೊಂದಿಗೆ ಯುರೋಪ್—ಏಶಿಯದ ರಾಷ್ಟ್ರಗಳು ಯುದ್ಧ ಹೂಡಿದರೆ, ಅಮೇರಿಕೆಯು ರೊಟ್ಟಿ ಶುಪ್ಪದಲ್ಲಿ ಬಿದ್ದಂತೆಯೆ!

ಸಂಯುಕ್ತ ರಾಷ್ಟ್ರಸಂಘದಲ್ಲಿ ಕುಳಿತು ಶಾಂತಿಯ ಹಾಡನ್ನು ಹೇಳುವ ರಾಷ್ಟ್ರಗಳೇ, ಆದರ ಹಿನ್ನೆಲೆಯಲ್ಲಿ ರಣಭೇರಿಯನ್ನು ಗುಡುಗುಡಿಸುತ್ತಲಿವೆ. ಇದರ ಪರಿಣಾಮ ಎಲ್ಲಿಗೆ ತಲ್ಪುವುದೋ ನೋಡಬೇಕು.

—ಸಂಪಾದಕ

ಜಯ, ಜನಗಣಮನದ ಅಭಿಮಾನ ಮೂರ್ತಿ!

'ಸಾಮಾಜಿಕ'

ತಿಲಕರ ಜನುಮದೊಡನೆಯೆ ಜಾಗೃತವಾಯಿತ್ತು ಪರಾಧೀನತೆಯ ಪ್ರಜ್ಞಾದೀಪ! ಪರರಾಳಿಕೆಯ ಪಾಶಬಂಧನವು ಅದೆನಿತು ಅವಮಾನಕರವೆಂಬ ತಿಳಿವು, ತಿಳಿಯದಂತೆಯೆ ಮೂಡಿತ್ತು ಭಾರತೀಯರ ಮನ ಮನಂಗಳಲಿ! ಅಂದು ಕುರಿಯ ಮರಿಗಳಿ ಕೇಸರಿಗಳಾಡುವು; ನರಿತನವುರಿದು ಕೇಸುರಿಗಳೊಗೆದುವು. ಭಾರತೀಯರನ ಬಳಸಿದ ಬೇಲಿಗಳು ಮುರಿಯತೊಡಗಿದುವು....ಉರಿಯತೊಡಗಿದುವು

× × × ×

ಪರರ ಗೆಲವಿಂಗಾಗಿ ದುಡಿದ ಭಾರತೀಯರ ಬುದ್ಧಿ ಅರಿತು ಕೊಂಡಿತು ತನ್ನವರ ತಾನೆ. ಪರರ ಗೆಲವಿಂಗಾಗಿ ಕಡಿದುಡಿದ ಶಸ್ತ್ರಾಸ್ತ್ರಗಳು, ಭಾರತದ ಗೆಲವಿಗಾಗಿ ಮಿಡಿಯತೊಡಗಿದುವು. ಪರರ ಪೋಷಣೆಗಾಗಿ ದುಡಿದು ತೆರುವ ಭಾರತದ ಸಿರಿ, ನಾಡಿಗರ ಬಾಳ್ಗೆ ಬೇಕೆನಿಸಿತ್ತು. ಧಗ-ಧಗಿಲೆಂದು ಎದ್ದಿತು ಭಾರತದಲಿ ಹಗೆಯ ದಳ್ಳುರಿ! ಖಣ-ಖಣಿಲೆಂದು ಕುಣಿದಾಡಿದುವು ಕತ್ತಿ-ಕತ್ತಾರಿ! ಧಡ್-ಧಡಿಲೆಂದು ಹಾರಿದುವು ಸಿಡಿಗುಂಡುಗಳು. ಭುಗ್-ಭುಗಿಲೆಂದು ಅದುರಿತು ಹಗೆಗಳ ಗುಂಡಿಗೆಯಂದು!

× × × ×

ತಿಲಕರ ಬಾಳೊಂದಿಗೆ ಬೆಳೆಯತೊಡಗಿತ್ತು ಜನದ ದೇಶಪ್ರೀತಿ! ತಿಲಕರ ಜೀವದೊಂದಿಗೆ ಬೆಳಗತೊಡಗಿತು ಭಾರತೀಯರ ಸುಪ್ತ-ಜ್ಯೋತಿ! ತಿಲಕರ ಉಸಿರಾಟದ ಗಾಳಿಯೂದಿತು ನಾಡಿನಲಿ ಸ್ವಸ್ವರೂಪ ಜ್ಞಾನವನು! ತಿಲಕರ ತೊದಲ್ನುತು ತಿದ್ದಿತು ನಾಡಿಗರ ಬುದ್ಧಿ ಭಾವನೆಗಳನು! ತಿಲಕರ ಸ್ವಾತಂತ್ರ್ಯಸಂಕಲ್ಪ ತುಂಬಿತೆಲ್ಲೆಡೆಗಳಲಿ ಸ್ಥೈರ್ಯ-ಸ್ಥೈರ್ಯಂಗಳನ್ನು!

× × × ×

[illegible]ರಿತುಹೋಗಿದ್ದ — ಭಾರತದ ಮುನ್ನಿನ ಮೇಲ್ಮೆ ಮರಳಿ [illegible] ತಿಲಕರಿಂದ! ಅಡಗಿಹೋದ ಅಣ್ಣ-ತಮ್ಮಂದಿರ [illegible] ಕುಡಿವಿಟ್ಟಿತ್ತು ತಿಲಕರಿಂದ! ಒಡೆದುಹೋದ ಭಾರತದ [illegible]ವಿರ, ಒಂದುಗೂಡಿತ್ತು ತಿಲಕರಿಂದ! ತಡೆದುನಿಂತ [illegible]ತಿಯ ಭಾ[illegible]ಥ, ದಡದಡನೆ ಹೊನಲಿಟ್ಟತ್ತು ತಿಲಕರಿಂದ! ಗುರಿಯನರಿ[illegible]ಜನ ಗುರಿಯನರಿತುದು ತಿಲಕರಿಂದ! ಆರಿರಾಯರ ಅಂತರಂಗದಲಿ ಚಿಂತೆಯು ಸಂತೆ ನೆರೆದುದು ತಿಲಕರಿಂದ!

× × × ×

ತಿಲಕರ ತನುವು ಸನೆಯಿತ್ತು ದೇಶಮಾತೆಯ ಪೂಜೆಗೆ ಗಂಧದ ಕೊರಡಾಗಿ! ತಿಲಕರ ಮ[illegible]ನವೆಯಿತ್ತು ಭಾರತದ ಸ್ವಾತಂತ್ರ್ಯ ಮಂತ್ರವೇ ಜಪವಾಗಿ! [illegible]ರ ಧನವು ಕರಗಿತ್ತು ವೀರ-ಧೀರರ ನಿರ್ಮಿತಿಯ ಸಾಧನವಾಗಿ! ತಿಲಕರ ಜನವು ಮಿರುಗಿತ್ತು ಅವರ ತಪಸ್ಸ್ಫೂರ್ಯನ ಸ್ವಭಾವಕ್ಕಾಗಿ! ಧನ್ಯ ಧನ್ಯ, ನವಭಾರತದ ಸ್ವರಾಜ್ಯಮಂದಿರದ ಶಿಲ್ಪಿ! ಧನ್ಯ ಧನ್ಯ ಭಾರತೀಯರ ಸ್ವಾತಂತ್ರ್ಯ ಸಂಜೀವನ ಕಲ್ಪಿ!

ಭಾರತದ ಭವ್ಯಚರಿತೆ ಕೊಂಡಾಡಲಿದೆ ನಿನ್ನ ದಿವ್ಯಕೀರ್ತಿ!
ಜಯ ಜಯ, ಜನಗಣಮನದ ಅಭಿಮಾನಮೂರ್ತಿ!!

ನರಕೇಸರಿ ತಿಲಕರು

ಶ್ರೀ. ದ. ಅ. ಸದರಜೋಶಿ, ಬಿ. ಎ., ಬಿ. ಟಿ., ಮುಂಬಯಿ

ನೈರಾಶ್ಯದಾ ತಿಮಿರ ತಿರೆಮುಗಿಲನಮರ್ದಿಸಲು
ನೈರ ಸಾಧಿಸಿದ ವಿಧಿ ಭಾರತದಿ ನೆಲಸಿರಲು
ಧೈರ್ಯವಿಲ್ಲದ ಧ್ಯೇಯರಹಿತ ಜನಜಂಗುಳಿಯು
ಸ್ಥೈರ್ಯವಿಲ್ಲದೆ ಹಲುಬಿಹಂಬಲಿಪ ಕಳುಬಳಿಯು.
ಭಾರವಾಗಿಹ ಬಾಳ ಕೊಳೆಯನೀಗಲು ಹವಣ
ಕೋರುತಲಿ ಬಂದುಸುರಿ ಆರ್ತನಾದದಿ ಭವಣೆ
ತೋರಮಿಂಚಿನ ಮಾಲೆಯಂತೆ ನೆಗಿದೇರಿದನು
ಭೈರವನ ತೆರನಾಗಿ ಕಾರಣಿಕ ಸಾರಿದನು.
" ಬೆದರದಿರು ಭಾರತನೆ, ಬೆದರದಿರಿ ನಾಡಿಗರೆ,
ಹದಗೆಡಿಸಿದವಿರತದ ಶೃಂಖಲೆಯು ಬಲದೋರೆ
ಮುದುಡಿಸಿದೆ ಮನವನ್ನು, ಕದಡಿಸಿದೆ ಬುದ್ಧಿಯನು
ಸದಭಿಮಾನವು ಸಡಿಲಿ ಮಡಗಿಸಿದೆ ಶ್ರದ್ಧೆಯನು?
ಕದನಮಾಡಲು ಹದವ ಕಲಿತು ಕಣ್ದೆರದ ಚಣ
ಸದಮಲದ ಸ್ವಾತಂತ್ರ್ಯ ಸಾರುವುದು ದಿಟ ಕಣಾ "

ಕಳೆದ ಶತಕದ ಕೊನೆಯ ಕಾಲಖಂಡದ ನುಡಿಯು
ತಿಲಕಕೇಸರಿ ಗುಡುಗಿನಾರ್ಭಟೆಯ ಸಿಡಿಕಿಡಿಯು
ಮಲೆತ ಮಾನವಮತಿಗೆ ಕರ್ಮಯೋಗದ ಸಾರ
ತಿಳಿಹೇಳಿ ತೀಡಿದರು ಶಕ್ತಿಸಾಕ್ಷಾತ್ಕಾರ!

ಹಲವಾರು ವರ್ಷಗಳ ಪರರ ಉಪಟಳವನ್ನು
ಹೊಲೆಗೆಡಿಸಿ ಬಲವಿಳಿಸಿ ಅವರ ಕಪಟಗಳನ್ನು
ಶಲಭಾರಿ ಶಂಕರನು ಗರಲವರಗಿಸಿದಂತೆ
ತಿಲಕಮುನಿ ಜೀವನದ ದುಃಖ-ಕಟುತೆಗಳೀಂಟಿ
ಓಂ ನಮಃಶಿವಶಕ್ತಿ ಧನ್ಯಕರ್ಮಾಸಕ್ತಿ
ಓಂ ನಮಃಸ್ಥಿರಭಕ್ತಿ ದೇಶಕಾರ್ಯಾಸಕ್ತಿ!

ಸಾಹಿತ್ಯ ವನವಿಹಾರ

ನಮ್ಮ ಕನ್ನಡ ಸಾಹಿತ್ಯದಲ್ಲಿ ವಿಹರಿಸಿ, ಕಣ್ಣಿಟ್ಟು ನೋಡಿ, ಕಂಡುಹಿಡಿದು ಹೇಳಬೇಕಾದಂತಹ ಹೊಸಮಾತುಗಳು ಇ[illegible] ಎಷ್ಟೆಷ್ಟೋ ಇರುವುವು. ಅಂತಹ ಸಂಶೋಧಕರಿಗಾಗಿಯೆ ಈ [illegible]ವನ್ನು ಪ್ರಾರಂಭಿಸಲಾಗಿದೆಯೆಂದು ಕಳೆದ ಸಂಚಿಕೆಯಲ್ಲಿ ಪಡಿಸಲಾಗಿದೆ.

ಕಳೆದ ಸಂಚಿಕೆಯಲ್ಲಿ ಕೇಳಿದ 'ಐಹೊಳೆಂ[illegible] ಕವಿಯ ಪರಿಚಯವಿಷಯಕ ಪ್ರಶ್ನೆ, ನಮ್ಮ ಹಲವು [illegible] ಹೃದಯಕ್ಕೆ ಮುಟ್ಟಿದುದು ಸಂತೋಷ[illegible]ಗತಿಯಾಗಿದೆ. ಐದು ಜನರಿಂದ ಕವಿಯ ವಿಷಯವನ್ನು ಕಂ[illegible]ಯಲು ದಾರಿ ತೋರಿಸುವಂತಹ ಕಾಗದಗಳು ಬಂದಿವೆ.

ಮೊದಲನೆಯದಾಗಿ ನಮಗೆ ಬಂದ ಕಾಗದವೆಂದರೆ, ಪುಣೆಯ ಎಂಜಿನಿಯರಿಂಗ್ ಕಾಲೇಜಿನಲ್ಲಿ [illegible]ನ ಶ್ರೀಮಾನ್ ಎ. ಎಸ್. ನರಸಾಪುರ ಅವರಿಂದ. ಇವರು ತ[illegible] ಪತ್ರದ ಮೂಲಕ, ಕವಿಯ ಹತ್ತಿರದ ಆಪ್ತರಾದ ಶ್ರೀ. ಎಲ್. ಬಿ. [illegible]ಗಾನಿ, ನಿವೃತ್ತ ವಕೀಲ, ಹಾವೇರಿ ಆವರ ವಿಳಾಸವನ್ನು ನಮಗೆ ಪರಿಚಯ ಮಾಡಿಕೊಟ್ಟರು. ಅವರಲ್ಲಿ ಐಹೊಳೆ ವೆಂಕಟೇಶಾಂಕಿತ ಕವಿಯ ಕೃತಿಗಳ ಸಂಗ್ರಹವಿದೆಯೆಂದೂ ಪತ್ರವ್ಯವಹಾರ ಮಾಡಿ ತಿಳಿದುಕೊಳ್ಳಬೇಕೆಂದೂ ಸೂಚಿಸಿದರು.

ಎರಡನೆಯ ಪತ್ರ ಶ್ರೀ. ಬಿ. ಪಿ. ಕಟ್ಟಿ, ಶಹಾಬಾದ್ ಅವರಿಂದ ಬಂದಿದೆ. ಇವರು ಕವಿಯ ಕೃತಿಸಂಗ್ರಹವು ಹುನಗುಂದದಲ್ಲಿ ಶ್ರೀ. ರಾಮಾಚಾರ್ಯ ಗುಡ್ಡದ ಎಂಬವರಲ್ಲಿ ಇರುವುದೆಂದೂ, ಅವರಿಂದ ಕವಿಯ ಪರಿಚಯವು ತಮಗೆ ಸರಿಯಾಗಿ ಆಗಬಹುದೆಂದೂ ಬರೆದಿರುವರು.

ಮೂರನೆಯ ಪತ್ರವೆಂದರೆ, ನಾವು ಬರೆದ ಪತ್ರಕ್ಕೆ, ಶ್ರೀಮಾನ್ ಕಲಮದಾನಿ ನಾರಾಯಣರಾಯರಿಂದ ಬಂದ ಉತ್ತರ. ಇವರು ಕವಿಯ ತಂಗಿಯ ಮಕ್ಕಳಲ್ಲಿ ಒಬ್ಬರು. ಇವರಲ್ಲಿ ಕವಿಯ ಕೆಲವೊಂದು ಕೃತಿಗಳ ಸಂಗ್ರವಿದೆಯಂತೆ. ಪತ್ರ ಬರೆದುದಲ್ಲದೆ. ಇವರು ಸಮಕ್ಷವಮ ಬೆಟ್ಟಿಯಾಗಿ, ಕವಿಯ ಕೂಲಂಕಷ ಪರಿಚಯವನ್ನು ಜಯಂತಿಗಾಗಿ ಬರೆದುಕೊಡಲು ಒಪ್ಪಿಕೊಂಡಿರುವರು. ಕವಿಯನ್ನು ಕಣ್ಣಾರೆ ಕಂಡವರಿವರು; ಆವರ ಪ್ರಚೋದನೆಯಿಂದಲೇ ಇವರು ದಾಸಸಾಹಿತ್ಯದ ಅಭ್ಯಾಸಕ್ಕೆ ತೊಡಗಿದವರು. ಇವರಿಂದ ಕವಿಯ ಜೀವನಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳು ತಿಳಿಯುವಂತಿರುವುದು ಸಂತೋಷದ ಸಂಗತಿಯಾಗಿದೆ.

ನಾಲ್ಕನೆಯ ಪತ್ರ ಶ್ರೀ. ಶಂ. ಗು. ಬಿರಾದಾರ, ಬಬಲೇಶ್ವರ ಎಂಬವರಿಂದ ಬಂದಿದೆ. ಇವರ ಪತ್ರದಿಂದ ಕವಿಯ ಹೆಸರು ಭೀಮರಾಯರು ಎಂದೂ, ಐಹೊಳೆಯ ಗುಮಾಸ್ತೆ ಎಂಬ ಮನೆತನದಲ್ಲಿ ಅವರು ಹುಟ್ಟಿದವರೆಂಬುದೂ ಗೊತ್ತಾಯಿತು. ಕವಿಯ ಮೊಮ್ಮಕ್ಕಳು ವಿಜಾಪುರದಲ್ಲಿ ಇರುವರಂತೆ.

ಐದನೆಯ ಪತ್ರವು ಶ್ರೀ. ಬಿ. ಟಿ. ಮೊಖಾಶಿ, ಹುಬ್ಬಳ್ಳಿ ಅವರಿಂದ ಬಂದಿದೆ. ಇವರೂ ಕವಿಯ ಹೆಸರನ್ನು ಸೂಚಿಸಿರುವರಲ್ಲದೆ, ಹುಬ್ಬಳ್ಳಿಯಲ್ಲಿಯೆ ಕವಿಯ ಒಬ್ಬ ಮೊಮ್ಮಗ ಶ್ರೀ. ಜಿ. ಎಚ್. ಕುಲಕರ್ಣಿ ಎಂಬವರು ಇರುವರೆಂದೂ, ಅವರಿಗೆ ಕವಿಯ ಕೆಲವು ಕೃತಿಗಳು ಪಾಠ ಬರುತ್ತಿವೆಯೆಂದೂ, ಬೇಕಾದರೆ ಅವರನ್ನು ಕರೆದುಕೊಂಡು ಅವರಿಂದ ಕವಿಯ ಕೃತಿಗಳನ್ನು ಕೇಳಿಸುತ್ತೇನೆ—ಎಂದೂ ಬರೆದಿರುವರು.

ಜಯಂತಿಯಲ್ಲಿ ಐಹೊಳೆ ವೆಂಕಟೇಶಾಂಕಿತ ಕವಿಯ ವಿಚಾರ ಬಂದುದನ್ನು ಓದಿ, ಧಾರವಾಡದಲ್ಲಿಯೆ ಇರುವ ಶ್ರೀಮಾನ್ ಶ್ರೀನಿವಾಸ ಪಂಚಭಾಯಿ ಅವರು, ತಮ್ಮ ಸಂಗ್ರಹದಲ್ಲಿದ್ದ ಒಂದು ಕೃತಿಯನ್ನು ನಮಗೆ ಒದಗಿಸಿಕೊಟ್ಟಿರುವರು. ಕೃತಿಯು ಬಹಳ ರಸವತ್ತಾಗಿದೆಯಾದರೂ, ಜನರ ಬಾಯಲ್ಲಿ ಸಿಕ್ಕಿಕೊಂಡು ಅದು ಅನೇಕ ದೋಷಗಳಿಂದ ಕೂಡಿದುದಾಗಿ ಇತ್ತು. ಆದುದರಿಂದ ಡಾ. ಕಮಲಾಪುರ ಕಾಂತರಾಯರ ನೆರವಿನಿಂದ, ಆ ಕೃತಿಯ ಬೇರೆ ಬೇರೆ ಎರಡು ಮೂರು ಪ್ರತಿಗಳನ್ನು ಸಂಪಾದಿಸಿಯೂ, ಅದನ್ನು ಹಾಡುವ ಹೆಣ್ಣು ಮಕ್ಕಳ ಬಾಯಿಂದ ಕೇಳಿಯೂ, ಆ ಕೃತಿಯನ್ನು ಶುದ್ಧಗೊಳಿಸಲಾಗಿದೆ. ಕವಿಯ ಯೋಗ್ಯತೆಯನ್ನು ಉತ್ತಮ ರೀತಿಯಿಂದ ಸ್ಪಷ್ಟಗೊಳಿಸಬಲ್ಲ ಆ ಸುಂದರಕೃತಿಯನ್ನು, ಮುಂದಿನ ಸಂಚಿಕೆಯಲ್ಲಿ ಸ್ಫುಟಿಸಬೇಕೆಂದಿದ್ದೇವೆ.

ಯಾವುದೇ ಒಂದು ಕಾರ್ಯಮಾಡಬೇಕೆನ್ನುವವರಿಗೆ ಕೈಯಿಂದಾದಷ್ಟು ನೆರವನ್ನು ಕೊಡಬೇಕೆಂಬ ಭಾವನೆ ನಮ್ಮ ನಾಡಿಗರಲ್ಲಿ ಜಾಗೃತವಾಗಿ ಇದೆ—ಎಂಬುದಕ್ಕೆ, ನಮಗೆ ಬೇರೆ ಬೇರೆಯವರಿಂದ ಬಂದ ಪತ್ರಗಳು ಪ್ರತ್ಯಕ್ಷಸಾಕ್ಷಿಯಾಗಿವೆ. ಯಾವುದೇ ಹುದುಗಿಹೋದ ಸತ್ಯದ ಸಂಶೋಧನೆಯು ಹಲವು ಜನರ ಸಹಕಾರದಿಂದಲೇ ನಡೆಯಬೇಕಾಗುವುದು. ಈ ಕಾರ್ಯದಲ್ಲಿ ನಮಗೆ ಸಹಕಾರವನ್ನು ಕೊಟ್ಟ ಎಲ್ಲ ಮಹನೀಯರಿಗೂ ನಮ್ಮ ಆದರದ ವಂದನೆಗಳು.

—ಸಂಪಾದಕರು

ಅಶಾಂತಿಪರ್ವ

(ವಿಜಯನಗರದ ಐತಿಹಾಸಿಕ ತರಂಗರೂಪಕ)

ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

ಪಾತ್ರ

ರಾಜಶೇಖರ (ವಿಜಯನಗರದ ದೊರೆ—ಮಲ್ಲಿಕಾರ್ಜುನನ ಹಿರಿಯ ಮಗ)

ಪೆದ್ದರಾಯ (ರಾಜಶೇಖರನ ಸಹೋದರ)

ಈಶ್ವರನಾಯಕ (ಪೆದ್ದರಾಯನ ಆಪ್ತಸ್ನೇಹಿತ, ಒಬ್ಬ ದಳಪತಿ)

(ದಂಡನಾಯಕ ನರಸಿಂಹನಾಯಕರ ಮಗಳು)

(ಮಂತ್ರಿ ದಳಪತಿ ದೇವಣ್ಣನಾಯಕರ ಮಗಳು)

ಹಾನ್ನಮ್ಮ (ರತ್ನಾಂಬಿಕೆಯ ಸೇವಕಿ)

ಅಲ್ಲದೆ ಸೇವಕ, ನಿರೂಪಕ ಮೊದಲಾದವರು.

ಗಿನೆಯ ಸನ್ನಿವೇಶ

(ಕಲ್ಯಾಣಿ ರಾಗದಲ್ಲಿ ವೀಣಾವಾದನ ಧ್ವನಿಯು ಮಿಡಿಯುತ್ತಿರುವುದು. ಅದನ್ನು ಕೇಳಿ)

ನಿರೂಪಕ :

ಎಂತಹ ಮಧುರವಾದ ವೀಣಾನಾದ! ಸಾಳುವ ನರಸಿಂಹನಾಯಕರ ಪುತ್ರಿ ಕಮಲಾಂಬಿಕೆಯ ಕಲಾವಂತಿಕೆಯಿದು! ಕಮಲಾಂಬಿಕೆಯೆಂದರೆ ಪ್ರತ್ಯಕ್ಷ ಸಂಗೀತ ಶಾರದೆಯ ಅವತಾರವೆ!

(ವೀಣೆಯಧ್ವನಿ ಮಲ್ಲಮೆಲ್ಲಗೆ ಮರೆಯಾಗಬೇಕು)

ಶಾಲಿವಾಹನ ಶಕದ ಗಾರ್ಹಣೆಯ ವರ್ಷದ ಪೌಷ್ಯಮಾಸವು, ತನ್ನಲ್ಲಿಯ ಹನ್ನೆರಡು ದಿನಗಳನ್ನು ಇಷ್ಟರಲ್ಲಿಯೆ ಹೋಗಲಾಡಿಸಿಕೊಂಡಿದೆ. ಲೋಕಕ್ಕೆ ಕಣ್ಣಾಗಿರುವ ಸೂರ್ಯನು ಸಂಕ್ರಮಣಾವಸ್ಥೆಯಲ್ಲಿ ಇರುವಂತೆ, ಕನ್ನಡಿಗರ ಕಣ್ಣಾಗಿದ್ದ ವಿಜಯನಗರದ ಸಾಮ್ರಾಜ್ಯಸಿಂಹಾಸನವೂ ಒಂದು ಬಗೆಯ ಸಂಕ್ರಮಣಾವಸ್ಥೆಯಲ್ಲಿದೆ. ಕನ್ನಡ ಪ್ರಜಾಕೋಟಿಗೆ ಬೇಡಬೇಡವೆನಿಸಿದ್ದ—ಕರ್ನಾಟಕ ರಾಜ್ಯಲಕ್ಷ್ಮಿಗೆ ಅಯೋಗ್ಯವರನಾಗಿದ್ದ— ಇಮ್ಮಡಿ ವಿರೂಪಾಕ್ಷನ ಕೊಲೆಯು ಆದುದರಿಂದ, ಸಾಮ್ರಾಜ್ಯ ಸಿಂಹಾಸನವು ಇದುವರೆಗೂ ಶೂನ್ಯಸಿಂಹಾಸನವಾಗಿಯೆ ಉಳಿದುಕೊಂಡಿದೆ. ಕೊಲೆಗೊಂಡ ವಿರೂಪಾಕ್ಷರಾಯನ ಉತ್ತರಕರ್ಮದ ವಿಧಿ-ವಿಧಾನಗಳು—ವಿಜಯನಗರದ ಸಮ್ರಾಟನ ಸ್ಥಾನ-ಮಾನಕ್ಕೆ—ತಕ್ಕಂತೆ ವಿಜೃಂಭಣೆಯಿಂದ ಮುಗಿದು, ಎರಡು ದಿನಗಳು ಮಾತ್ರ ಕಳೆದುಹೋಗಿವೆ.

ಸಾಮ್ರಾಜ್ಯಸಿಂಹಾಸನಕ್ಕೆ ಅಧಿಕಾರಿಗಳಾಗಿದ್ದವರಲ್ಲಿ ತೀರ ಬಳಿಯವರೆಂದರೆ, ಮಲ್ಲಿಕಾರ್ಜುನರಾಯನ ಮಕ್ಕಳಾದ ರಾಜಶೇಖರ, ಪೆದ್ದರಾಯ—ಇಬ್ಬರೇ ಇಬ್ಬರು. ಅವರಲ್ಲಿಯೂ ರಾಜಶೇಖರ ಹಿರಿಯ; ಆದುದರಿಂದ ಸಿಂಹಾಸನಾಧಿಕಾರ ಅವನ ಕಡೆಗೆ ಸಹಜವಾಗಿಯೆ ಬಂದು ಬಿಡುತ್ತಿತ್ತು. ಆದರೆ ರಾಜಶೇಖರನು ಆ ಅಧಿಕಾರವನ್ನು ಖಂಡಿತವಾಗಿ ನಿರಾಕರಿಸುತ್ತಿದ್ದ; ಎಂತಲೇ ಸಿಂಹಾಸನ ಪೆದ್ದರಾಯನ ಕಡೆಗೆ ತನ್ನ ಆಶೆಯ ನೋಟ್ಟಗಳನ್ನು ಹೊರಳಿಸಿ ನಿಂತಿದೆ.

(ತರುಣಸ್ತ್ರೀಯ ಬಿರುಸಿನ ನಗೆಯ ತೆರೆಯೊಂದು ತೇಲುವುದು.)

ಓ! ಇದಾರ ನಗೆಯಿದು? ದಳವಾಯಿ ದೇವಣ್ಣನಾಯಕರ ಮಗಳು ರತ್ನಾಂಬಿಕೆಯದು! ಅವಳೀಗ ಕಮಲಾಂಬಿಕೆಯ ಅಂತಃಪುರಕ್ಕೆ ಬಂದಿದ್ದಾಳೆ. ಇಬ್ಬರೂ ವಿನೋದಗೋಷ್ಠಿಯಲ್ಲಿ ತೊಡಗಿದ್ದಾರೆ.

ರತ್ನಾಂಬಿಕೆ :— (ತೃಪ್ತಿಯ ನಗೆಯೊಂದಿಗೆ) ನಾನು ಮರಳಿ ಬರುವುದರಲ್ಲಿಯೇ ಎಂಥ ವಿಪ್ಲವ ನಡೆದುಹೋಗಿದೆ ಕಮಲಾ?

ಕಮಲಾಂಬಿಕೆ :— (ಸಹಜಧ್ವನಿಯಲ್ಲಿ) ಇಲ್ಲಿಯೇ ಇದ್ದು ನೀನು, ಎಲ್ಲವನ್ನೂ ಕಣ್ಣಾರೆ ನೋಡಬೇಕಾಗಿತ್ತು. ನೋಡು ರತ್ನಾ! ಒಳ್ಳೆಯ ಕಾಲ ಬರುವುದಿದ್ದರೆ, ಎಲ್ಲ ಮಾತೂ ಎನ್ನೊಂದು ಅನುಕೂಲವಾಗಿ ಬರುತ್ತವೆ ನೋಡು!

ರತ್ನಾಂಬಿಕೆ :— ಕಮಲಾ, ನಿಜವಾಗಿಯೂ ನಾನು ದೈವಗೇಡಿಯೆಂದೇ ಹೇಳಬೇಕು!

ಕಮಲಾ :— (ಬೆರಗಿನ ಧ್ವನಿಯಲ್ಲಿ) ಇದೇನೇ ನಿನ್ನ ಮಾತು – ರತ್ನಾ?

ರತ್ನಾ :— ಇದೇನೇ ಎಂದರೆ? ನೋಡು ಕಮಲಾ! ಎಂತಹದೇ ಇರಲಿ, ಸಾಹಸದ ಸಂದರ್ಭವನ್ನು ಪ್ರತ್ಯಕ್ಷವಾಗಿ ನೋಡಿ, ಅದರ ಸುಖ ದುಃಖದ ಪರಿಣಾಮವನ್ನು ಅನುಭವಿಸಬೇಕು–ಎಂಬುದು ನನ್ನ ಹುಟ್ಟುಬಯಕೆ. ಎಂಥ ಸಂಧಿಯನ್ನು ಕಳೆದುಕೊಂಡು ಬಿಟ್ಟೆನಲ್ಲ ನಾನು! ಕಾರಣವಿಲ್ಲದೆ ಪೆನಂಗೊಂಡೆಗೆ ಹೊರಟುಹೋದೆ.

ಕಮಲಾ :— (ಪೆಲುನಗೆಯೊಂದಿಗೆ) ಕಾರಣವಿಲ್ಲದೆ ಎಂದು

ಏಕೆ ಹೇಳುತ್ತೀ? ಕಾರಣವು ಇತ್ತೆಂತಲೇ ನಿನಗೆ ವಿಜಯನಗರ ಬೇಡವಾಯಿತು; ಅದಕ್ಕಾಗಿಯೆ ಹೊರಟುಹೋದೆ!

ರತ್ನಾ:— ಅದೇನೇ ಕಮಲಾ, ನನಗೆ ಗೊತ್ತಿಲ್ಲದ ಕಾರಣವನ್ನು ನೀನು ಕಂಡುಹಿಡಿದಿದ್ದೀಯೇನು?

ಕಮಲಾ:— ಅಹುದು ಮತ್ತೆ! ಬೇರೆ ಕಾರಣ ಇನ್ನೇ ಇರಬೇಕು? ನಮ್ಮ ಸಿಂಗಮ್ಮ ನನಗೆಲ್ಲ ಹೇಳಿದ್ದಾಳೆ. ಪೆದ್ದರಾ ನಗರವನ್ನು ಬಿಟ್ಟುಹೋದರು; (ನಗುತ್ತ) ಎಂತಲೇ ಇರುವುದಕ್ಕೆ ಬೇಡವಾಯಿತು. ಅಹುದೋ ಇಲ್ಲವೊ?

ರತ್ನಾ:— (ನಗೆಯಾಟದ ಧ್ವನಿಯಲ್ಲಿ) ಸರಿ ಅನುಭವವನ್ನು ಇನ್ನೊಬ್ಬರ ಮೇಲೆ ಆರೋಪಿಸಿ ಮಾತಾಡ್ತಾ ಯೇನು?

ಕಮಲಾ:— (ಲಜ್ಜಾಭಾವದವಳಾಗಿ) ನನ್ನ ಅನುಭವ ಯಾವುದೇ ರತ್ನಾ! ಇದ್ದ ಮಾತನ್ನು ಇದ್ದಂತೆ ಹೇಳಿದೆ.

ರತ್ನಾ:— (ನಗೆಯಾಟದ ಧ್ವನಿಯಲ್ಲಿ) ಅಹುದು, ಅಹುದು! ನಿನ್ನ ಮನಸ್ಸಿನಲ್ಲಿ ಇದ್ದ ಮಾತನ್ನು ನನ್ನ ಮನಸ್ಸಿನಲ್ಲಿ ಇದ್ದಂತೆ ಹೇಳಿದೆ. ಆಗಲಿ ಕಮಲಾ, ನೀನೇನು ಚಿಂತಿಸಬೇಡ! ಕರ್ನಾಟಕ ಸಾಮ್ರಾಜ್ಯದಂತೆಯೇ ಕಮಲಾಂಬಿಕೆಯನ್ನೂ ಒಳ್ಳೆಯ ಕಾಲ ಸಮಾಪಿಸುತ್ತಿದೆ.

ಕಮಲಾ:— ರತ್ನಾಂಬಿಕೆಯಿಂದಲೂ ಅದು ದೂರದಲ್ಲಿ ನಿಂತು ಕೊಳ್ಳಲಿ; ಅಲ್ಲವೆ?

ರತ್ನಾ:— (ದೇಸರದ ಧ್ವನಿಯಲ್ಲಿ) ಹಾಗೆಯೂ ತಿಳಿದುಕೊಳ್ಳಬಹುದು ಬೇಕಾದರೆ!

ಕಮಲಾ:— (ಮುಗ್ಧಭಾವದಲ್ಲಿ) ಮಳರ ಸಂಕ್ರಮಣದ ಹಬ್ಬ ಇನ್ನು ಆರೇ ಆರು ದಿನ ಉಳಿಯಿತು ರತ್ನಾ!

ರತ್ನಾ:— (ವ್ಯಂಗ್ಯವಾಣಿಯಲ್ಲಿ) ಮಳರ ಸಂಕ್ರಮಣದ ಅವಶ್ಯಕತೆ, ಅತುರ ನಿನಗೆ ಇರಬಹುದು! ನನಗೇನು ಆಗಬೇಕಾಗಿದೆ ಅದರಿಂದ?

ಕಮಲಾ:— ಇದೇನಮ್ಮಾ ನಿನ್ನ ಮಾತು?

ರತ್ನಾ:— (ಅಣಕದ ನಗೆಯೊಂದಿಗೆ) ಅಹುದು, ಮತ್ತೆ! ಆಕಾಶದಲ್ಲಿಯ ಸೂರ್ಯ ಮಳರರಾಶಿಗೆ ಬರುವಂತೆ, ಭೂಮಿಯ ಮೇಲಿನ ಯಾವನಾದರೂ ಸೂರ್ಯ ಈ ಕನ್ಯಾರಾಶಿಗೆ ಬರಬಹುದು!

ಕಮಲಾ:— (ನಾಚಿಕೆಯವಳಾಗಿ) ಹೋಗಮ್ಮಾ ಹೋಗು! ಯಾವಾಗಲೂ ನಿನಗೆ ನಗೆಯಾಟವೆ!

ರತ್ನಾ:— ನಗೆಯಾಟ ಬೇಡವಾದರೆ ಹೋಗಲಿ ಬಿಡು! ಹಾ ನೀಗ ಒಂದು ಮಾತಿನ ಸತ್ಯತೆಯನ್ನು ತಿಳಿದುಕೊಳ್ಳಲಿಕ್ಕೆಂದು ನಿನ್ನ ಕಡೆಗೆ ಬಂದಿದ್ದೇನೆ.

ಕಮಲಾ:— (ಗಾಬರಿಯ ಧ್ವನಿಯಲ್ಲಿ) ಅದಾವ ಮಾತಿನ ಸತ್ಯತೆಯೇ ರತ್ನಾ?

ರತ್ನಾ:— ವಿರೂಪಾಕ್ಷರಾಯನ ಕೊಲೆ ಹೇಗಾಯಿತು? ಇದನ್ನು ಪೂರ್ತಿಯಾಗಿ ನಿನ್ನ ಬಾಯಿಂದ ಕೇಳಬೇಕೆಂದು ನನ್ನ ಆಶೆ. ಒಂದು ಸಲ ಹೇಳುತ್ತೀಯಾ ಅದನ್ನು?

ಕಮಲಾ:— ಇಷ್ಟೊಂದು ವಿನಂತಿಯ ಧ್ವನಿಯೇಕೆ ಬೇಕು ಅದಕ್ಕೆ? ನಾನಾಗಿಯೆ ಅದನ್ನೆಲ್ಲ ನಿನಗೆ ಹೇಳಬೇಕೆಂದಿದ್ದೆ. ವಿರೂಪಾಕ್ಷರಾಯನ ವಿಚಿತ್ರವಾದ ಅಡಳಿತಕ್ಕಾಗಿ, ಜನರೆಲ್ಲರೂ ಬೇಸತ್ತು ಬೆಜ್ಜರುಗಂಡು ಹೋಗಿದ್ದಾರೆಂಬುದು, ನಿನಗೇನು ಅರಿಯದ ವಿಷಯವಲ್ಲ!

ರತ್ನಾ:— (ಸಂತಾಪದ ನುಡಿಗಳಲ್ಲಿ) ಎಲ್ಲ ಗೊತ್ತಿದೆ ಕಮಲಾ; ಇತನಿಂದ ಎಷ್ಟು ಜನರಿಗೆ ತೊಂದರೆಯಾಯಿತು! ಎಷ್ಟು ಜನ ಗರತಿಯರು ಆತನ ದುರಾಶೆಯ ಬಾಯಿಗೆ ಬಲಿಯಾಗಬೇಕಾಯಿತು? ಎಷ್ಟೊಂದು ಜನ ದೀನಪ್ರಜೆಗಳು ಆತನ ಅನ್ಯಾಯದ ಆಘಾತಕ್ಕೆ ಈಡಾಗಿ ದುಃಖದಿಂದ ಕೂಗಿಡಬೇಕಾಯಿತು! ಎಷ್ಟು ಜನ ಸಾಮ್ರಾಜ್ಯಾಭಿಮಾನಿಗಳು ಅಪಮಾನದ ಕಿಚ್ಚನ್ನು ಸಹಿಸಿಕೊಂಡಿರಬೇಕಾಗಿ ಬಂತು! ಎಲ್ಲವೂ ಗೊತ್ತಿದೆ ಕಮಲಾ ಪೆದ್ದರಾಯ ಕೊನೆಗೂ ತನ್ನ ಪ್ರತಿಜ್ಞೆಯನ್ನು ಪೂರ್ಣಮಾಡಿದ! ಸಾಮ್ರಾಜ್ಯದ ಮೇಲೆ ಬಂದ ಗಂಡಾಂತರವನ್ನು ಹೊಡೆದುಹಾಕಿದ!

ಕಮಲಾ:— ಇದರಲ್ಲಿ ಪೆದ್ದರಾಯ ಏನು ಮಾಡಿರುವನೆಂದು ತಿಳಿದಿದ್ದೀಯೆ ನೀನು?

ರತ್ನಾ:— ಹಾಗಾದರೆ.....ವಿರೂಪಾಕ್ಷನ ಕೊಲೆ ಮಾಡಿದವರು ಯಾರು! ಪೆದ್ದರಾಯನೇ ಅಲ್ಲವೆ?

ಕಮಲಾ:— ಛೇ! ಅಲ್ಲ ಅಲ್ಲ! ಪೆದ್ದರಾಯನೆಂದು ಯಾರು ಹೇಳಿದರು ನಿನಗೆ? ದೊರೆಯ ಕೊಲೆ ಮಾಡಿದವರು ಅಣ್ಣಾಜಿ.... ರಾಜಶೇಖರ!

ರತ್ನಾ:— (ಉಪಹಾಸದ ಧ್ವನಿಯಲ್ಲಿ) ಏನು? ಏನು? ಆ ಹರಯದ ಮುದುಕ ಕೊಲೆ ಮಾಡಿದನೆ? ನಾನೆಂದೂ ಒಪ್ಪಿಕೊಳ್ಳಲಾರೆ! ಕಮಲಾ, ಎಲ್ಲರಂತೆಯೇ ನೀನೂ, ರಾಜಶೇಖರನೆಂದು ತಪ್ಪು ಪೆದ್ದರನ್ನೇ ಹೇಳುತ್ತಿರುವೆಯಲ್ಲಾ!

ಕಮಲಾ:— ಅತನದಲ್ಲದೆ ಇನ್ನಾರ ಹೆಸರನ್ನು ಹೇಳಲಿ? ಕೊಲೆಮಾಡಿದವನು ರಾಜಶೇಖರನೇ! ನಿಜ!

ರತ್ನಾ:— (ನಗುತ್ತ) ರಾಜಶೇಖರನ ಹೆಸರನ್ನು ಕೇಳಿದರೆಯೇ ನಗೆಬರುತ್ತದೆ ನನಗೆ! (ರೊಚ್ಚಿನಿಂದ) ನಂಬಿ ನಚ್ಚಿದ್ದ ಹೆಣ್ಣೊಂದನ್ನು ತನ್ನವಳನ್ನಾಗಿ ಮಾಡಿಕೊಳ್ಳಲಿಕ್ಕೆ ಆ ಗಂಡುಸಿನಿಂದ ಸಾಧ್ಯವಾಗಲಿಲ್ಲ. ಆಕೆ ಆ ಕಾಮುಕ—ವಿರೂಪಾಕ್ಷನ ಬಲುಮೆಗೆ ಒಳಗಾಗಿ, ಅತನ ಕೈಹಿಡಿದು ಹೋದುದನ್ನು ನೋಡಿಯೂ, ಹುಮ್ಮಸ್ಸಿಗೆ ಕೈ ಮುಚ್ಚಿಕೊಂಡು ಕುಳಿತ ಈ ಕ್ಷತ್ರಿಯ ಕುಮಾರ! ಅಂತಹ ಹೇಡಿಯಂಕ, ವಿರೂಪಾಕ್ಷನ ಕೊಲೆಗೆ ಸಿದ್ಧನಾಗುವನೆ? ಲೋಕಕ್ಕೆ ಹೊರತಾದ ಮಾತು ನಿನ್ನದು!

ಕಮಲಾ:— ಅದೇನೋ ಅಮ್ಮಾ! ನಡೆದ ವಿಷಯವಂತೂ ಹೀಗೆ ನಡೆದಿದೆ.

ರತ್ನಾ :— (ಸ್ವಲ್ಪ ತಡೆದು, ಬಳಿಕ ಉಪರೋಧಿಕ ಧ್ವನಿಯಲ್ಲಿ) ಸ್ವರಿ! ಸಾಮ್ರಾಜ್ಯದ ಆತೆ, ನರಿಗೂ ಸಿಂಹದ ಶಕ್ತಿಯನ್ನು ಕೊಡಬಲ್ಲದೇನೊ ಯಾರಿಗೆ ಗೊತ್ತು ?

ಕಮಲಾ :— ಸಾಮ್ರಾಜ್ಯದ ಆಶೆ ಯಾರಿಗಿದೆ ರತ್ನಾ ?

ರತ್ನಾ :— (ಸಿಡಿನುಡಿಯಲ್ಲಿ) ರಾಜಶೇಖರನಿಗೆ! ಇನ್ನಾರಿಗಿರಬೇಕು ?

ಕಮಲಾ :—(ಆಶ್ಚರ್ಯಗೊಂಡವಳಾಗಿ) ರಾಜಶೇಖರ ನಿನಗೆ ನರಿಯಾಗಿ ತೋರಿದನೆ ?

ರತ್ನಾ :— (ಸಂತಾಪದ ಧ್ವನಿಯಲ್ಲಿ) ನರಿಯು ಕುರಿ-ಕೋಳಿಗಳನ್ನಾದರೂ ಮುರಿಯಬಲ್ಲದು! ರಾಜಶೇಖರನಲ್ಲಿ ಅಂತಹ ಯೋಗ್ಯತೆ ಕೂಡ ಇಲ್ಲ. ಏನೇ ಇರಲಿ; ಅದೃಷ್ಟ ಅವನನ್ನು ಸಮ್ರಾಟನ ಪದವಿಗೆ ಏರಿಸಿತೇನೋ ಸರಿಯೆ!

ಕಮಲಾ :— ಸಮ್ರಾಟನ ಪದವಿ ಅವನಿಗೆಲ್ಲಿ ಬೇಕಾಗಿದೆ ರತ್ನಾ ? ಅಪ್ಪಾಜಿಯವರು ನನಗೆ ಹೇಳುತ್ತಿದ್ದರು.....ಸಾಮ್ರಾಜ್ಯದ ಪ್ರಜೆಗಳೆಲ್ಲರಿಗೂ ರಾಜಶೇಖರನೇ ದೊರೆಯಾಗಬೇಕೆಂದು ಅಪೇಕ್ಷೆಯಂತೆ; ಆದರೆ ರಾಜಶೇಖರ ಅದನ್ನು ಖಂಡಿತವಾಗಿ ನಿರಾಕರಿಸುತ್ತಿದ್ದಾನಂತೆ !

ರತ್ನಾ :— ನಿರಾಕರಿಸದೆ ಇನ್ನೇನು ಮಾಡಬೇಕು ಅತ ? ಬೊರೆತನ ಸ್ವೀಕರಿಸಿದರೆ, ಅಳುವ ಸಾಮರ್ಥ್ಯವೊಂದು ಬೇಕಲ್ಲವೆ ? ಹೋಗಲಿ ಕಮಲಾ, ಹಾಗೆ ನಿರಾಕರಿಸುವುದಕ್ಕೆ ರಾಜಶೇಖರ ನೆಪವನ್ನಾದರೂ ಏನು ಹೇಳುತ್ತಾನಂತೆ ?

ಕಮಲಾ :— ನೋಡು ರತ್ನಾ ! ಕೊಲೆಗೊಂಡ ವಿರೂಪಾಕ್ಷರಾಯ ರಾಜಶೇಖರನಿಗೆ ಚಿಕ್ಕಪ್ಪನಲ್ಲವೆ ? ಚಿಕ್ಕಪ್ಪನ ಕೊಲೆಮಾಡಿದುದರಿಂದ ಪಿತೃವಧೆಯ ಪಾತಕ ತನಗೆ ತಗುಲಿಕೊಂಡಿತಂತೆ. ಅದಕ್ಕಾಗಿ, ತಾನು ದೊರೆಯಾಗಿ ಕರ್ನಾಟಕ ಸಮ್ರಾಜ್ಯದ ಪವಿತ್ರ ಸಿಂಹಾಸನಕ್ಕೆ ಆ ಪಾತಕದ ಮೈಲಿಗೆಯನ್ನು ಸೋಂಕಿಸಲಾರೆನೆಂದು ಅತ ಹೇಳಿದನಂತೆ.

ರತ್ನಾ :— (ತನ್ನಲ್ಲಿ ತಾನು) ಏನು ? ನನಗೆ ಮನುಷ್ಯರ ಪರೀಕ್ಷೆಯೇ ಇಲ್ಲವೇನು ಮತ್ತೆ ? ಇನ್ನೊಬ್ಬರ ಮಾತನ್ನು ಕೇಳಿಕೇಳಿ, ಒಂದು ವ್ಯಕ್ತಿಯ ಯೋಗ್ಯತೆಯನ್ನು ನಿರ್ಣಯಿಸುವುದು ಯೋಗ್ಯವಲ್ಲ ವೇನೋ ನಿಜ! ಕಮಲಾ, ಹಾಗಾದರೆ.....ಸಮ್ರಾಜ್ಯ ಸಿಂಹಾಸನ ವೆದ್ದರಾಯನದೇನು ಇನ್ನು ?

ಕಮಲಾ :— ಅವನೊಬ್ಬನದೇ ಏಕೆ ? ನಿನ್ನದೂ ಆಗುವುದು ?

ರತ್ನಾಂಬಿಕೆ :— (ಗಟ್ಟಿಯಾಗಿ ನಕ್ಕು) ಸರಿ! ಹಾಗಾದರೆ ನಾನಿನ್ನು ವಿಜಯನಗರದ ಮಹಾರಾಣಿ! ಕರ್ನಾಟಕದ ಸಮ್ರಾಜ್ಞಿ!! ಕಮಲಾ ! ನಾನಿನ್ನು ಸಮ್ರಾಜ್ಞಿ!....ಬರುತ್ತೇನೆ ಕಮಲಾ, (ಹಾಹಾಹಾ—ನಕ್ಕು) ನಾನು ವಿಜಯನಗರದ ಮಹಾರಾಣಿ! (ಎನ್ನುತ್ತಲೇ ಎದ್ದು ಹೊರಡುವಳು.)

೨ನೆಯ ಸನ್ನಿವೇಶ

(ಗಿಳಿ, ಕೋಗಿಲೆ, ನವಿಲು, ಗುಬ್ಬಿಗಳು ಆಗಾಗ ಧ್ವನಿಗೈಯುತ್ತಿರಬೇಕು.)

ನಿರೂಪಕ

ಳಿಗಿನ ಎರಡುಗಳಿಗೆಗಳು ಕಳೆದಿವೆ. ರಾಜಶೇಖರ, " ಶಾಂತಿ ಂಬ ವನಮಂದಿರದ ಓಲಗಶಾಲೆಯಲ್ಲಿ, ಒಂದು ಹುಲಿಯ ತದ ಮೇಲೆ ಕುಳಿತಿದ್ದಾನೆ. ಎದುರಿಗೆ ಪುಸ್ತಕಪೀಠ ೇಲೆ ಇದ್ದ ಓಲೆಗರಿಯ ಪುಸ್ತಕದಲ್ಲಿಯ ಕೆಲವು ಓಲೆ ಚಿಹಾಕ್ಕೆ ಒಂದು ಓಲೆಯನ್ನು ಕೈಯಲ್ಲಿ ತೆಗೆದು ಂ, ಧೀರವಾದ ಗ ಯಲ್ಲಿ ಓದಲು ತೊಡಗಿದ.

ರಾಜಶೇಖರ :—

ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತಃ
ತೌ ಸಂಪರೀತ್ಯ ವಿವಿನಕ್ತಿ ಧೀರಃ
ಶ್ರೇಯೋಹಿ ಧೀರೋಭಿ ಪ್ರೇಯಸೋವೃಣೀತೆ !
ಪ್ರೇಯೋ ಮಂದೋ ಯೋಗ-ಕ್ಷೇಮಾವೃಣೀತೆ !

ಇದು ಪವಿತ್ರವಾದ ಉಪನಿಷದ್ವಾಣಿ! ಭಾರತದ ಪೂಜ್ಯ ಋಷಿಗಳು ಕಂಡ ಸತ್ಯಾನುಭವದ ವಾಣಿ! ಮಾನವನಿಗೆ ಪ್ರೇಯಸ್ಸು—ಎಂಬುದು ಸಿಹಿಯಾದ ಅಮೃತಾಸವ! ಶ್ರೇಯಸ್ಸು— ಎಂಬುದು ಕಹಿಯಾದ ಅಮೃತಾಸವ! ಮೊದಲನೆಯದು ಬಾಯಿಗೆ ಬೆಲ್ಲದೂಟ; ಬಸಿರಿಗೆ ಕಾಲಕೂಟ! ಎರಡನೆಯದು ಬಾಯಿಗೆ ಬೇವು; ಬಸಿರಿಗೆ ಇಮ್ಮಾವು! ಮೊದಲನೆಯದು ಇಹಲೋಕದ ಆನಂದಕ್ಕೆ ಅವಶ್ಯಕ; ಎರಡನೆಯದು ಪರಲೋಕಕ್ಕೆ ಆನಂದಾನುಭವಕಾರಕ! ಎಂತಲೇ ಈ ಉಪನಿಷನ್ಮಂತ್ರ ಹೀಗೆ ಹೇಳುವುದಲ್ಲವೆ ?

" ಶ್ರೇಯೋಹಿ ಧೀರೋಭಿ ಪ್ರೇಯಸೋವೃಣೀತೇ
ಪ್ರೇಯೋಮಂದೋ ಯೋಗ-ಕ್ಷೇಮಾವೃಣೀತೇ ! "

ಇದೆಲ್ಲವೂ ಸರಿಯೆ! ಆದರೆ ಈಗ ಎರಡು ಲೋಕಗಳ ಜೀವನವನ್ನೂ ಸುಖಮಯವೆನಿಸುವ ಮೂರನೆಯದೊಂದು ಮಧ್ಯಮಾರ್ಗವು ಬೇಕಾಗಿದೆ. ಅಂತಹ ಮಾರ್ಗವನ್ನು ಹುಡುಕಲು ಸತ್ಯಸಂಶೋಧಕರ ಬಳಗ ಹಗಲಿರಳೂ ದುಡಿಯಬೇಕಾಗಿದೆ. ನಮ್ಮ ಕರ್ನಾಟಕ ಸಮ್ರಾಜ್ಯ, ಅಂತಹ ಸತ್ಯಸಂಶೋಧಕ ಋಷಿಗಳನ್ನು ಒಟ್ಟುಗೂಡಿಸಬೇಕು.....

ಪೆದ್ದ :— ಅಣ್ಣಾಜಿ (ಒಮ್ಮೆಲೆ ಪೆದ್ದರಾಯನು ಅಲ್ಲಿಗೆ ಬರುವನು)

ರಾಜಶೇಖರ :— ಬಾ, ಪೆದ್ದಣ್ಣಾ, ಇಲ್ಲಿ ಬಾ! ಕುಳಿತುಕೊ! ವಿರೂಪಾಕ್ಷರಾಯನ ಉತ್ತರಕ್ರಿಯೆಯ ಕಾರ್ಯಗಳೆಲ್ಲ ಉಚಿತ ರೀತಿಯಿಂದ ಕೊನೆಗೊಂಡಂತೆ ಆಯಿತಲ್ಲವೆ ?

ಪೆದ್ದರಾಯ :— (ವಿನಯವಾಣಿಯಲ್ಲಿ) ಎಲ್ಲವೂ ಯಥಾಸಾಂಗವಾಗಿ ಕೊನೆಗಂಡಿತು. ವಿಜಯನಗರದ ದೊರೆಗಳ ಅಂತಸ್ತಿಗೆ, ಎಳ್ಳಷ್ಟೊನೆಯಷ್ಟೂ ಕೊರತೆಯುಂಟಾಗದಂತೆ ಎಲ್ಲ ವಿಧಿಗಳನ್ನೂ ನೆರವೇರಿಸಿ ಆಯಿತು!

ರಾ. ಶೇ. :— ಮತ್ತೇನು? ದೊರೆಯು ಕೊಲೆಯು ಮೂಲಕವಾಗಿ, ಸಮ್ರಾಜ್ಯಕ್ಕೆ ವಿಘಾತಕವೆನಿಸುವಂಥ ಅಪಶ್ರುತಿಗಳು ಎಲ್ಲಿಯೂ ಕೇಳುತ್ತಿಲ್ಲ ತಾನೆ?

ಪೆದ್ದ :— ಕೇಳುತ್ತಿಲ್ಲವೆಂದೇ ಹೇಳಬಹುದು. ರಾಜ್ಯಕ್ಕೆ ರಾಜ್ಯವೇ ಉತ್ಸಾಹಗೊಂಡು ಸಾಮ್ರಾಜ್ಯದ ಮಂಗಲಗೀತೆ ಹಾಡುತ್ತಿರುವಾಗ, ಅಲ್ಲೊಂದು ಇಲ್ಲೊಂದು ಅಪಶ್ರುತಿಯ ದನಿಯು ಎದ್ದರೂ, ಅದರಿಂದ ಏನಾಗಬೇಕಾಗಿದೆ? ಎದ್ದು ಬಿದ್ದು ಹೋಗಬಹುದಿಷ್ಟೆ!

ರಾ. ಶೇ. :— ಹಾಗೆಂದು ದುರ್ಲಕ್ಷಿಸಿ ನ[illegible] ಪೆದ್ದಣ್ಣಾ! ಕಡಲಿಗೆ ಕಡಲು ಹಾಲನ[illegible] ಒಂದೆ ಒ[illegible] ಯೆಳೆಯು ಕೆಡಿಸಿಬಿಡಬಲ್ಲದು! ಮರದ[illegible]ರೆಯ ಒಂದು ಕಿರುಗಿಡ್ಡಿ ಕಾಡು-ಬೀಡುಗಳನ್ನು ಬೇಯಿಸಿಬಿಡಬಹುದು! ದೊರೆಯಾಗಬೇಕಾಗಿರುವವನು, ಬ್ರಹ್ಮನಂತೆ ಚತುರ್ಮುಖನಾಗಬೇಕು; ಮಹೇಂದ್ರನಂತೆ ಮೈತುಂಬ ಕಣ್ಣುಳ್ಳವನಾಗಬೇಕು!

ಪೆದ್ದ :— (ಮೆಲುನಗೆಯೊಂದಿಗೆ) ದೊರೆಯು ಆಗಬೇಕಾದವನು ಹಾಗೆಲ್ಲ ಆಗಬೇಕಲ್ಲವೇ ಅಣ್ಣಾಜಿ?

ರಾ. ಶೇ. :— ಅಹುದು, ನೀನು ಆದರ್ಶನಾದ ದೊರೆಯಾಗಬೇಕೆಂದು ನನ್ನ ಅಂತರ್ಯದ ಆಶೆ!

ಪೆದ್ದ :— ನಾನು ದೊರೆಯಾದರಲ್ಲವೇ ಅಪಶ್ರುತಿಯೆಲ್ಲ ಮಾತು?

ರಾ. ಶೇ. :— ಎಂದರೆ?

ಪೆದ್ದ :— ಎಂದರೆ .... ವಲ್ಲಿಕಾರ್ಜುನನ ಸಂತಾನಕ್ಕೆ ಸಾಮ್ರಾಜ್ಯಪದ ದೊರೆಯಬೇಕು—ಎಂಬುದಷ್ಟೇ ನನ್ನ ಆಕೆಯಿದ್ದಿತಲ್ಲದೆ, ನಾನೇ ದೊರೆಯಾಗಬೇಕೆಂದು ಎಂದೂ ನಾನು ಅಪೇಕ್ಷಿಸಿದವನಲ್ಲ ಅಣ್ಣಾಜಿ!

ರಾ. ಶೇ. :— ನೀನು ಅಪೇಕ್ಷಿಸದಿದ್ದರೆ ಏನಾಯಿತು ಪೆದ್ದಣ್ಣಾ! ಸದ್ಯ ನಿನಗಾಗಿ ಬಡಿಸಿದ್ದ ಎಡೆಯದು! ಅದನ್ನು ನೀನು ಉಣ್ಣಬೇಕು!

ಪೆದ್ದ :— ಅಣ್ಣಾಜಿ! ನಿಮ್ಮ ಮಾತುಗಳನ್ನೇ ನಾನು ನಿಮಗೆ ಹೇಳಿದರೆ?

ರಾ. ಶೇ. :— ಅದೆಂದಿಗೂ ಸಾಧ್ಯವಿಲ್ಲ. ನನ್ನ ಸಾಮರ್ಥ್ಯ—ಅಸಾಮರ್ಥ್ಯಗಳನ್ನು ನಾನು ಚೆನ್ನಾಗಿ ಕಂಡುಕೊಂಡಿದ್ದೇನೆ. ನೋಡು, ಪೆದ್ದಣ್ಣಾ! ಕಾಲಕೂಟವನ್ನು ನಿಗ್ರಹಿಸುವ ಶಕ್ತಿ ಇನ್ನಾವ ದೇವತೆಗಳಲ್ಲಿಯೂ ಇರಲಿಲ್ಲ; ಪ್ರಲಯಭೈರವನಾದ ಶಂಕರನೇ ಆದನ್ನು ಹಿಡಿದಿಡಲು ಶಕ್ತನಾದ. ಸಾಮ್ರಾಜ್ಯವೆಂದರೆ, ಇದೊಂದು ಕಾಲಕೂಟಕ್ಕಿಂತಲೂ ಹೆಚ್ಚಿನ ಕಾಲಕೂಟ! ಇದನ್ನು ಹಿಡಿದು ಆಡಿಸಬೇಕಾಗಿದ್ದವನಿಗೆ ಅಹಂಕಾರ—ಅಭಿಮಾನಗಳು ಅವಶ್ಯವಾಗಿ ಬೇಕು.

ಪೆದ್ದ :— ಯಾವುದಕ್ಕೆ ಯಾವ ಗುಣ ಬೇಕೆಂದು ಹೇಳಬಲ್ಲವರು, ಅದನ್ನು ಸಂಪಾದಿಸಿ ಸಂಗ್ರಹದಲ್ಲಿ ಇಟ್ಟುಕೊಳ್ಳುವುದಕ್ಕೆ ಆಗದೇನು?

ರಾ. ಶೇ. :— ಗುಣಗಳನ್ನು ಸಂಪಾದಿಸುವುದೇ ಪೆದ್ದಣ್ಣಾ? ಮಾನವನು ತನ್ನ ಜನ್ಮದೊಂದಿಗೇ ತಂದ ಸೃಷ್ಟಿದೇವಿಯ ಬಳುವಳಿಗಳು ಅವು! ನೋಡು, ನಾಲಿಗೆಯು ಮನಸ್ಸಿನ ಬೇಕು-ಬೇಡಗಳ ಸಂದೇಶವನ್ನು ತಿಳುಹಲು ಸಮರ್ಥವಾಗಿದ್ದರೂ, ಆ ಸಂದೇಶವನ್ನು ಆಚರಣೆಯಲ್ಲಿ ತರುವ ಅಂಗಾಂಗಗಳೇ ಬೇರೆಯಾಗಿ ಇವೆಯಲ್ಲವೆ?

ಪೆದ್ದ :— ಅಣ್ಣಾಜಿ, ಈ ತೆರನಾದ ಮಾತುಗಳಲ್ಲಿ ನನ್ನ ಮನಸ್ಸು ಅಷ್ಟೊಂದು ಪ್ರವೇಶಿಸಲಾರದು! ಇಷ್ಟೊಂದು ಮಾತ್ರ ನನಗೆ ಎನಿಸುತ್ತದೆ; ಮಲ್ಲಿಕಾರ್ಜುನ ದೊರೆಯ ಮಕ್ಕಳಲ್ಲಿ ಹಿರಿಯರು ನೀವು! ಸಿಂಹಾಸನವನ್ನು ಏರಬೇಕಾದ ಅಧಿಕಾರ ನಿಮಗೆ ಮೊದಲು ಸಲ್ಲುತ್ತದೆ. ನೀವು ದೊರೆಗಳಾಗಿರಿ; ನಾನು ಸೇನಾನಾಯಕನಾಗಿ ಮಿಕ್ಕುದೆಲ್ಲವನ್ನೂ ನೋಡಿಕೊಳ್ಳುತ್ತೇನೆ. ಅಣ್ಣಾಜಿ, ಆಗ ನೋಡುವಿರಂತೆ ನೀವು....ರಾಜ್ಯಲಕ್ಷ್ಮಿಯ ವೈಭವನವನ್ನು! ಹಿಮಾಚಲದಿಂದ ಸೇತುಬಂಧದ ವರೆಗಿನ ಸಮಗ್ರ ಭಾರತದಲ್ಲಿ ವಿಧರ್ಮೀಯರ ಸದ್ದು-ಸುಳಿದಾಟಗಳು ಎಲ್ಲಿಯೂ ಕಿವಿಗೆ ಕೇಳದಂತೆ—ಕಣ್ಣಿಗೆ ಬೀಳದಂತೆ ಮಾಡಿಬಿಡುತ್ತೇನೆ. ಇದುವರೆಗಿನ ನನ್ನ ಕನಸುಗಳನ್ನೆಲ್ಲ ಕಾರ್ಯರೂಪದಲ್ಲಿ ತಂದು ತೋರಿಸುತ್ತೇನೆ, ಅಣ್ಣಾಜಿ!

ರಾ. ಶೇ. :— ಬೇಡ, ನನಗದು ಸರ್ವಥಾ ಬೇಡ ಪೆದ್ದಣ್ಣಾ! ಪಿತೃವಧೆಯ ಪಾತಕವು, ನನಗಿದ್ದ ಸಿಂಹಾಸನಾಧಿಕಾರವನ್ನು ಹೊಡೆದು ಹಾಕಿದೆ. ನಿನ್ನ ಮಾತನ್ನು ಕೇಳಿ, ದೊರೆಯಾಗಲು ನಾನು ಒಪ್ಪಿಕೊಂಡೆನೆಂದು ತಿಳಿ! ಬರಲಿರುವ ಕಾಲವು ನನ್ನ ಇತಿಹಾಸವನ್ನು ಹೇಗೆಬೇಕಾದರೆ, ಎಂತಹ ಬಣ್ಣವನ್ನು ಬರೆಯಬಹುದೆಂಬುದು ನಿನಗೆ ಗೊತ್ತೆ? 'ರಾಜ್ಯಲೋಭದಿಂದ ಜಿಕ್ಕಪ್ಪನನ್ನು ಕೊಂದು, ಸಿಂಹಾಸನವನ್ನು ಏರಿದವನೀತ' ಎಂದು ಅಂದಿನ ಜನರ ಬಾಯಲ್ಲಿ ನನ್ನ ಹೆಸರು ಮೆರೆದೀತು. ಹಾಗೆ ಮೆರೆಯಿಸಿಕೊಳ್ಳಲಿಕ್ಕೆ ನನಗೆ ಇಷ್ಟವಿಲ್ಲ. ವರ್ತಮಾನಕ್ಕಿಂತಲೂ ಬರಲಿರುವ ಕಾಲಕ್ಕೆ ಹೆದರಬೇಕಾದುದು ಮಾನವತೆಯ ಲಕ್ಷಣ! ಆದುದರಿಂದಲೇ ನಾನು ಹೇಳುತ್ತಿರುವುದು: ಪಿತೃವಧೆಯಿಂದ ನನ್ನ ಸಿಂಹಾಸನಾಧಿಕಾರವನ್ನು ಕಳೆದುಕೊಂಡಿದ್ದೇನೆ ಆದೀಗ ಪೂರ್ತಿಯಾಗಿ ನಿನ್ನದು! ನಾನು ಅದನ್ನು ಎಂದೂ ಅಪೇಕ್ಷಿಸಲಾರೆ.

ಪೆದ್ದ :— ನನಗೆ ಇದೆಯೆಂದು ತಿಳಿದಿದ್ದೀರಾ ಅದರ ಅಪೇಕ್ಷೆ?

ರಾ. ಶೇ. :— ಇಲ್ಲವಾದರೆ ನೀನೂ ಒಲ್ಲೆನೆಂದು ಹೇಳು. ಪ್ರಜೆಗಳು ಇನ್ನಾರನ್ನಾದರೂ ಯೋಗ್ಯರಾದವರನ್ನು ಆಯ್ದು, ತಮಗೆ ನಾಯಕನನ್ನಾಗಿ ಮಾಡಿಕೊಳ್ಳಬಹುದು.

ಪೆದ್ದ :— ಅದೆಂದಿಗೂ ಆಗದು! ವಿಜಯನಗರದ ಸಿಂಹಾಸನದ ಮೇಲೆ, ಮಲ್ಲಿಕಾರ್ಜುನನ ಮಕ್ಕಳಲ್ಲದೆ, ಬೇರೆಯವರು ಕುಳಿತುದನ್ನು ನಾನೆಂದಿಗೂ ಸಹಿಸಿಕೊಂಡಿರಲಾರೆ!

ರಾ. ಶೇ. :— (ಮೆಲುನಗೆಯೊಂದಿಗೆ) ಇದೇನಿದು ನಿನ್ನ ಮಾತು? ನಿನ್ನ ಮಾತು ನಿನಗೇ ಸರಿಯೆಂದು ತೋಗುವುದೇ ಪೆದ್ದಣ್ಣಾ? ಸಿಂಹಾಸನ ನನಗೆ ಬೇಡವೇಬೇಡ; ನೀನೂ ಒಲ್ಲೆನೆಂದು ಹೇಳುತ್ತಿರುವೆ.

ಈಗ ಮತ್ತೆ ನೀನೇ ಹೇಳುನಿ : ಇನ್ನೊಬ್ಬರು ಸಿಂಹಾಸನ ಏರಿದುದನ್ನು ಕಂಡು ಸಹಿಸಲಾರಿ—ಎಂದು ನನ್ನ ನಿನ್ನ ಜೊರತು, ಮಲ್ಲಿಕಾರ್ಜುನ ದೊರೆಯ ಮಕ್ಕಳು ಬೇರೆ ಯಾರೂ ಇಲ್ಲ ತಾನೇ? ಈಗ ಏನು ಮಾಡಬೇಕು? ನೀನೇ ಹೇಳು!

ಪೆದ್ದ :— ಅಣ್ಣಾಜಿ ನೀವೇ .....

ರಾ. ಶೇ. :— (ನಿಶ್ಚಯದ ಧ್ವನಿಯಲ್ಲಿ) ಆ ಮಾತು ಆಗುವಂತಿಲ್ಲ ಪೆದ್ದಣ್ಣಾ !

ಪೆದ್ದ :— (ನಿರುಪಾಯಭಾವದವನಾಗಿ) ಹಾಗಾದರೆ....

ರಾ ಶೇ. :— ನೀನೇ ದೊರೆಯಾಗು! ನನ್ನ ಹಿರಿಯತನ ಅಧಿಕಾರ ನಡೆಸಬೇಕೆಂಬ ಬಯಕೆ ನಿನಗೆ ಇದ್ದರೆ, ನನ್ನನ್ನು ನಿ ಸಲಹೆಗಾರನನ್ನಾಗಿ ಮಾಡಿಕೋ! ಸಾಮ್ರಾಜ್ಯದೇವಿಯ ಸಂದೇ ಗಳನ್ನು ನುಡಿಯುವ ನಾಲಗೆಯಾಗಿ ನಾನು ಇರುತ್ತೇನೆ ಬೇಕಾಗಿದ್ದರೆ

ಪೆದ್ದ :— ಧನ್ಯ ಧನ್ಯ ಅಣ್ಣಾಜಿ! ನಿಮ್ಮ ಆದರ್ಶಜೀವನಕ್ಕೆ ನನ್ನ ಸಾವಿರ ಸಾವಿರ ಶರಣುಗಳು. ಅಣ್ಣಾಜಿ, ನಾನೀಗ ಸಾಳುವ ನರಸಿಂಹನಾಯಕರ ಮನೆಗೆ ಹೋಗಬೇಕು.

ರಾ. ಶೇ. : ಅಗತ್ಯವಾಗಿ ಹೋಗಿ ಬಾ! ಸಾಳುವ ನರಸಿಂಹನಾಯಕರು ಸಾಮ್ರಾಜ್ಯದ ನಿಜವಾದ ಹಿತಚಿಂತಕರು! ಅವರ ಮಂತ್ರಾಲೋಚನೆಯನ್ನು ಆಗಾಗ ಪಡೆಯುತ್ತಿರು.

(ಪೆದ್ದರಾಯನು ಹೋಗುವನು.)

ರಾ. ಶೇ. :— ರಾಜಕಾರ್ಯನೆಂಬುದು ರಜೋವೃತ್ತಿಯವರಿಗೇ ಪ್ರಿಯವಾದುದು.

ಶ್ರೇಯೋಹಿ ಧೀರೋಭಿಸ್ರೇಯಸೋವೃಣೀತೇ!
ಪ್ರೇಯೋ ಮಂದೋ ಯೋಗಕ್ಷೇನೌ ವೃಣೀತೇ!

೩ನೆಯ ಸನ್ನಿವೇಶ

ನಿರೂಪಕ

ದಳವಾಯಿ ದೇವಣ್ಣನಾಯಕರ ಮನೆ. ನಾಯಕರ ಮಗಳು ರತ್ನಾಂಬಿಕೆ, ಪೆದ್ದರಾಯ ಇಬ್ಬರೂ ಎಳೆಯತನದಿಂದಲೂ ಕೂಡಿ ಬೆಳೆದವರು. ಇಬ್ಬರಲ್ಲಿಯೂ ಅವಿಚ್ಛಿನ್ನವಾದ ಪ್ರೀತಿ–ಸಲುಗೆಗಳು ಬೆಳೆದುಬಂದಿವೆ. ಪೆದ್ದರಾಯನ ಧೈರ್ಯ-ಶೌರ್ಯಗಳನ್ನು ರತ್ನಾಂಬಿಕೆ ನೆಚ್ಚಿರುವಳು. ರತ್ನಾಂಬಿಕೆಯ ಸೌಂದರ್ಯ–ಸಾಹಸಪ್ರೀತಿಗಳನ್ನು ಪೆದ್ದರಾಯ ಮೆಚ್ಚಿರುವ. ಇಂದು ಪೆದ್ದರಾಯ ದೇವಣ್ಣನಾಯಕರ ಮನೆಗೆ ಊಟಕ್ಕೆಂದು ಬಂದಿದ್ದಾನೆ. ಊಟವನ್ನು ಮುಗಿಸಿ ಅವನು ರತ್ನಾಂಬಿಕೆಯಿದ್ದ ಉಪ್ಪರಿಗೆಯ ಮೆಟ್ಟಿಲುಗಳನ್ನು ಏರಲುತೊಡಗಿದ.

ರತ್ನಾಂಬಿಕೆ :— (ವಿಮನಸ್ಕಳಾಗಿ ನುಡಿಯುವಳು) ಅಪ್ಪಾಜಿ ರಗಳೆ ಪುರಾಣ ಬಿಚ್ಚಿದರೆ ಆಯಿತು; ಬೇಗನೆ ತಮ್ಮ ಮಾತುಗಳನ್ನೇ ಮುಗಿಸುವುದಿಲ್ಲ. ಅವರಿಗೆ ಬಿಲ್ಲು–ಬಾಣಗಳದೊಂದು ಹುಚ್ಚೇ ಹಿಡಿದಿದೆ. ವಿಜಯನಗರದ ಸೈನ್ಯವು, ಮಹಾಭಾರತ ಕಾಲದ ಪೈನ್ಯದಂತೆ ಬಿಲ್ಲಾಳುಗಳಿಂದಲೇ ಕೂಡಿರಬೇಕೆಂದು ಅವರ ಬಡಬಡಿಕೆ. ಅದನ್ನಿವರು ಕೇಳುತ್ತ ಕುಳಿತಿದ್ದಾರೆ....ಭಾವೀ ಸಮ್ರಾಟರು! ಬೇಗನೆ ಇಲ್ಲಿಗೆ ಹೊರಟು ಬರಬಾರದೇ?

(ಮೆಲುದನಿಯಲ್ಲಿ ಯಾವುದೋ ತಿಲ್ಲಾಣವನ್ನು ಗುಣಗುಣಿಸುತ್ತಿರುವಾಗಲೇ ಪೆದ್ದರಾಯ ಆಲ್ಲಿಗೆ ಬರುವನು.)

ಜೆ. ರಾ. :— ಎಲ್ಲ ಕ್ಷೇಮವೇ ರತ್ನಾ?

ರತ್ನಾಂಬಿಕೆ :— ಬರಬೇಕು, ಮಹಾಪ್ರಭುಗಳು! ನೀವು ಬಹಳ ಹೊತ್ತಿನ ನಂತರ ಅಪ್ಪಾಜಿಯವರ ಬಳಿಯಲ್ಲಿ ಕುಳಿತಿರುವೇ ಎಂದು ನಾಡಿದ್ದೆ; ಎಂತಲೇ ನಿಮ್ಮ ಸ್ವಾಗತದ ಸಿದ್ಧತೆ ಆಗಿಲ್ಲ. ಊಟದ ಕಾಲದ ನನ್ನ ಬಟ್ಟೆಗಳನ್ನು ಕೂಡ ಸರಿಯಾಯಿತು. ಹೊನ್ನಮ್ಮಾ! ಹೊನ್ನಮ್ಮಾ!

ಹೊನ್ನಮ್ಮ :— ಬಂಡೆ ಅಮ್ಮಾಜಿ! ಏನು ಬೇಕಾಗಿತ್ತು?

ರತ್ನಾಂಬಿಕೆ :— ನಿನ್ನೇನೂ ಇಲ್ಲ; ಇಳಿಜೊತ್ತಿನ ಉಪಾಹಾರಕ್ಕೆ ಬೇಕಾಗುವ ಸಿದ್ಧತೆಗಳನ್ನೂ ಮಾಡಲಿಕ್ಕೆ ಮುಲ್ಲಬ್ಬೆಗೆ ತಿಳಿಸು!

ಹೊನ್ನಮ್ಮ :— ಆಗಲಿ ಅಮ್ಮಾಜಿ! (ಹೊನ್ನಮ್ಮ ಹೋಗುವಳು.)

ಪೆದ್ದ :— ಇನ್ನು ಉಪಾಹಾರ ಯಾರಿಗೆ ಬೇಕು ರತ್ನಾ? ಇದೀಗ ಹೊಟ್ಟೆತುಂಬ ಶಬ್ಬದೂಟವಾಗಿದೆಯಲ್ಲವೆ?

ರತ್ನಾ :— ನನಗೆ ಗೊತ್ತು! ಇಳಿಜೊತ್ತಿಗೆ ಇನ್ನೂ ಒಂದು ಪ್ರಹರದ ಅವಕಾಶವಿದೆ. ಬನ್ನಿರಿ! ಕುಳಿತುಕೊಳ್ಳಿರಿ. (ಪೆದ್ದರಾಯ ಆಸನದಲ್ಲಿ ಕುಳಿತುಕೊಳ್ಳುವನು) ಒಂದು ವಿಷಯ ರಾಯಾಜಿ! ನೀವು ನನ್ನೆದುರು ಪ್ರತಿಜ್ಞೆ ಮಾಡಿ, ಇಂದು ರಾಜಧಾನಿಯನ್ನು ಬಿಟ್ಟು ಹೋದಿರಿ. ನನಗೇನೋ ಈ ತುಂಬಿದ ವಿಜಯನಗರ ಬರಿದು ಬರಿದಾಗಿ ಕಾಣಲು ತೊಡಗಿತು. ಅದುದರಿಂದಲೇ ನಾನೂ ಪೆನುಗೊಂಡೆನೆ ಹೊರಟುಹೋದೆ.

ಜೆ. ರಾ. :— ಊಂ! ಸರಿ!

ರತ್ನಾಂಬಿಕೆ :— ಅಲ್ಲಿ ನಮ್ಮ ಸಂಕಣ್ಣ ಮಾವಾಜಿಯನರಿಗೆ ನಿಮ್ಮ ವಿಷಯವನ್ನೆಲ್ಲ ಹೇಳಿದೆ. ವಿರೂಪಾಕ್ಷರಾಯನ ಆಡಳಿತ ಕ್ಕಾಗಿ ಅವರೂ ಬೇಸತ್ತು ಹೋದವರೆ! ನಿಮಗೆ ನೆರವನ್ನು ಕೊಡುವು ದಕ್ಕಾಗಿ ಅವರಿಂದ ಭಾಷೆಯನ್ನು ತೆಗೆದುಕೊಂಡಿದ್ದೆ.

ಜೆ. ರಾ. :— ಅಣ್ಣಾಜಿಯವರು ಎಲ್ಲ ತೊಡಕನ್ನೂ ಸುಲಭವಾಗಿ ಬಿಡಿಸಿಬಿಟ್ಟರು. ನಿಜವಾಗಿಯೂ ನೋಡು ರತ್ನಾ! ಅಣ್ಣಾಜಿಯೆಂದರೆ, ಭೂಮಿಗೆ ಇಳಿದು ಬಂದ ಒಬ್ಬ ದೇವತೆಯೆಂದು ನನ್ನ ಭಾವನೆಯಾಗಿ ಬಿಟ್ಟಿದೆ ನೋಡು!

ರತ್ನಾ :— (ಬಿಗುಹಿನ ಧ್ವನಿಯಲ್ಲಿ) ಹುಂ ಹುಂ! ಸರಿ!

ಪೆದ್ದ :— ಅರಮನೆಯಲ್ಲಿ ಒಬ್ಬರೇ ಒಬ್ಬರು ನುಗ್ಗಿ, ವಿರೂಪಾಕ್ಷನಂತಹ ಕ್ರೂರನಾದ ವೀರನನ್ನು ಕೊಲ್ಲಬಹುದಾದ ಕೆಚ್ಚು; ನಾಡಿನ ಜನರ ಸಂಕಟವನ್ನು ಕಂಡು ಕರಗಿ ಕಣ್ಣೀರಿಡುವ ಮೆಲ್ಪು, ಎರಡೂ ಜೊತೆಜೊತೆಯಾಗಿ ಅಣ್ಣಾಜಿಯಲ್ಲಿವೆ. ತಾನಾಗಿಯೆ ಕೊರಳಿಗೆ ಮಾಲೆ ಹಾಕಲು ಬಂದ ರಾಜ್ಯಲಕ್ಷ್ಮಿಯನ್ನು ಒಲ್ಲೆನೆಂದು

ಹಿಂದಿರುಗಿಸುವ ತ್ಯಾಗಿ, ಈ ಕಾಲದಲ್ಲಿ ಇನ್ನೆಲ್ಲಿಯಾದರೂ ಸಿಕ್ಕುವರೇ! ರತ್ನಾ, ಯಾವನೋ ಒಬ್ಬ ರಾಜರ್ಷಿ ಕನ್ನಡನಾಡಿನ ಉದ್ಧಾರಕ್ಕಾಗಿ, ಅಣ್ಣಾಜಿಯಾಗಿ ಹುಟ್ಟಬಂದಿದ್ದಾನೆ.... ಇದು ಖಂಡಿತ!

ರತ್ನಾ :— (ಅಣಕದ ಧ್ವನಿಯಲ್ಲಿ) ನೀವೇನು ಇನ್ನು ಮೇಲೆ.... ದೊರೆಗಳಾಗುವವರಿದ್ದೀರೋ, ಹೊಗಳುಭಟರಾಗುವವರು ಇದ್ದೀರೋ?

ಹೆದ್ದ : ಇದೇನು ನಿನ್ನ ಕೊಂಕುಮಾತಿನ ರೀತಿ?

ರತ್ನಾ :— ಎಂದರೆ ಹೀಗೆ: ನಿಮ್ಮ ಪ್ರತಿಜ್ಞಾ ದೊರೆಯನ್ನು ಅಣ್ಣಾಜಿಯವರು ಇಳುಹಿ, ನಿಮಗೆ ಎಲ್ಲವ ಮಾಡಿಕೊಟ್ಟರು. ಸ್ವಂತದ ಶ್ರಮವೇನೂ ಇಲ್ಲದೆ, ಮುಕುಟ ನಿಮ್ಮ ತಲೆಯ ಮೇಲೆ ಬಂದು ಕುಳಿತಿತು! ಅವೃಷ್ಟ ಬಹಳ ಒಳ್ಳೆಯದು! ತುಂಬ ಯದು!

ಹೆದ್ದ :— ಇಂತಹ ಕೊಂಕುನು ಗೆ ಏನು ಕಾರಣವೋ, ನಾನಂತೂ ಕಾಣೆ!

ರತ್ನಾ :— ರಾಜಕಾರ್ಯದ ಪರಂಪರೆಯೇ ಹೀಗಿದೆಯಲ್ಲವೆ? ಸೈನ್ಯ-ಸೇನಾಪತಿಗಳು ಯುದ್ಧಮಾಡಬೇಕು; ದೊರೆಯು ದೊರೆಯಾಗಿ, ಸಿಂಹಾಸನದ ಮೇಲೆ ಕುಳಿತುಕೊಂಡಲ್ಲಿಯೆ ಜಯಾಪಜಯಗಳಿಗೆ ಗುರಿಯಾಗಬೇಕು. ಈ ರೀತಿ ಇಷ್ಟಿನದಲ್ಲ, ನಿನ್ನೆಯದಲ್ಲ! ಅದೆಲ್ಲ ಹೋಗಲಿ ರಾಯಾಜಿ: ಇನ್ನು ಮೇಲೆ ದಂಡನಾಯಕರು ನರಸಿಂಹನಾಯಕರೇ ಆಗುವರಲ್ಲವೆ!

ಹೆದ್ದ :— ನರಸಿಂಹ ನಾಯಕರು.... ದಂಡನಾಯಕ.... ಆಂ! ಏನಾಗುವುದೋ ನೋಡಬೇಕು

ರತ್ನಾ :— ಏನು? ಏನಾಗುವದೋ ನೋಡಬೇಕೆ? ಆ ಅಧಿಕಾರಕ್ಕೆ ಬೇರೆಯಾರಾದರೂ ಬರಲಿರುವರೇನು?

ಹೆದ್ದ. : — (ಅನುಮಾನದ ಸ್ವರದಲ್ಲಿ) ಇನ್ನು ಯಾರು? ಹೂಂ! ಇನ್ನು ಯಾರೂ ಇಲ್ಲ! ಅವರಲ್ಲದೆ ಇನ್ನೊಬ್ಬರು ಯಾರಿದ್ದಾರೆ?

ರತ್ನಾ :— ರಾಯಾಜಿ; ಪಟ್ಟಾಭಿಷೇಕ....

ಹೆದ್ದ :— (ರತ್ನಾಂಬಿಕೆಯ ಮಾತನ್ನು ಮಧ್ಯದಲ್ಲಿಯೆ ತಡೆದು) ನರಸಿಂಹನಾಯಕರ ಮಗಳು.... ಹುಂ! ಅಕೆಯ ಹೆಸರು ಏನು ರತ್ನಾ?

ರತ್ನಾ :— (ಬೆರಗಿನ ಧ್ವನಿಯಲ್ಲಿ) ಅದೇನು? ಅಕೆಯ ಹೆಸರು ಈಗ ಏತಕ್ಕೆ ಬೇಕಾಯಿತು?

ಹೆದ್ದ :— (ಉಗುಳುನುಂಗುತ್ತ) ಸುಮ್ಮನೆ ಕೇಳಿದೆ. ಯಾಕೆ? ಅಕೆಯ ಹೆಸರು ಕೇಳಿದರೆ ಏನಾದರೂ ತಪ್ಪಾಯಿತೇನು?

ರತ್ನಾ :— ತಪ್ಪೇನೂ ಇಲ್ಲ, ಸಮಯ ಸಂದರ್ಭಗಳಿಲ್ಲದೆ, ಇನ್ನೊಬ್ಬರ ಹೆಸರನ್ನು ತೆಗೆದುಕೊಂಡು ಮಾಡುವುದೇನು?—ಎಂದೆ.

ಹೆದ್ದ :— ಏನೋ! ಇದುವರೆಗೂ ನಾನು ಅವಳನ್ನು ನೋಡಿರಲಿಲ್ಲ. ಮೊನ್ನೆಯ ದಿನ ತಾನೇ ನೋಡಿದೆ, ಎಂತಲೇ ಕೇಳಿದೆ: ಅವಳ ಹೆಸರು ಏನು—ಎಂದು.

ರತ್ನಾ :— (ವಿಸ್ಮಯದಿಂದ) ಮೊನ್ನೆಯ ದಿನವೇ ನೋಡಿದಿರಾ?

ಹೆದ್ದ :—ಅಹುದು; ಕಾರ್ಯಾಂತರದಿಂದ ನರಸಿಂಹನಾಯಕರ ಮನೆಗೆ ಹೋಗಿದ್ದೆ. ಆದೇನೋ ಅಂದು ಆಕೆ, ನಾಯಕರ ವಿಶ್ರಾಂತಿಭವನದಲ್ಲಿಯೆ ಅವರಿದುರು ಹಾಡುತ್ತ ಕುಳಿತಿದ್ದಳು.

ರತ್ನಾ :— ಹಾಡುತ್ತ ಕುಳಿತಿದ್ದಳೆ?

ಹೆದ್ದ :— ಅಹುದು, ಅಹುದು! ಹಾಡುತ್ತ ಕುಳಿತ್ತಿದ್ದಳು. ಬಹಳ ಚೆನ್ನಾಗಿ ಹಾಡುವಳಲ್ಲವೇ ಆಕೆ?

ರತ್ನಾ :— ಹೂಂ.... ಹಾಡುತ್ತಿರಬೇಕು.... ಚೆನ್ನಾಗಿ!

(ಹೊನ್ನಮ್ಮ ಬಂದು ಹೇಳಿದಳು.)

ಹೊ :— ಮಲ್ಲಬ್ಬೆಗೆ ಹೇಳಿದೆ ಅಮ್ಮಾಜಿ. ಆಕೆ ಉಪಾಹಾರದ ಸಿದ್ಧತೆಯನ್ನು ನಡೆಸಿದ್ದಾಳೆ. ದೊರೆಗಳಿಗೆ ಬಹಳ ಪ್ರೀತಿಯದೆಂದು ಹಾಲುಗಾರಿಗೆಯನ್ನು ಮಾಡುತ್ತಿದ್ದಾಳೆ!

ರತ್ನಾ :— ಸರಿ! ಒಳ್ಳೆಯದಾಯಿತು! ನೀನೀಗ ಸ್ವಲ್ಪ ಕೆಳಗೆ ಹೋಗು. ಇಲ್ಲಿ ಬೇಡ!

ಹೊ :— (ಬೆದರಿದವಳಾಗಿ ನುಡಿದಳು) ಆಗಲಿ ಅಮ್ಮಾಜಿ! ಇನ್ನೇನಾದರೂ ಬೇಕಿದ್ದರೆ ಕೂಗಿ ಹೇಳಿ! (ಹೋಗುವಳು.)

(ಔದಾಸೀನ್ಯವನ್ನು ಹರಡುತಂತಹ ವೀಣೆಯ ಮಿಡಿತ)

ರತ್ನಾ :— ರಾಯಾಜಿ! ಕಮಲಾಂಬಿಕೆ ಹಾಡುತ್ತಿರುವುದನ್ನು ನೀವು ಕೇಳಿದಿರೇನು?

ಹೆದ್ದ :— ಏನು ಆಕೆಯ ಹೆಸರು? ಕಮಲಾಂಬಿಕೆಯೆಂದೇ?

ರತ್ನಾ :— (ಬಿಗುಹಿನ ಸ್ವರದಲ್ಲಿ) ಹುಂ! ಅಹುದು, ಕಮಲಾಂಬಿಕೆ!

ಹೆದ್ದ : — (ವಿಷಾದನಿಯಲ್ಲಿ) ಕಮಲಾಂಬಿಕೆ!..... ಕಮಲಾಂಬಿಕೆ!....

ರತ್ನಾ :— ರಾಯಾಜಿ! ಇಂದು ನನಗೇಕೋ ತುಂಬ ತಲೆನೋವು! ಒಂದೂ ಮಾತು ಕತೆ ಸೊಗಸದಾಗಿದೆ. ಸುಮ್ಮಗೆ ಬಿದ್ದುಕೊಂಡಿರಬೇಕು—ಎನಿಸುತ್ತದೆ.

ಹೆದ್ದ :— ಅದೇನು? ತಲೆನೋವಿಗೇನು ಕಾರಣ? ಸರಿ! ಹಾಗಾದರೆ ನೀನೀಗ ಮಲಗಿಕೊಂಡು ಬಿಡು. ನಾನೂ ಇಂದು ಶಾಂತಿಕುಟೀರಕ್ಕೆ—ಅಣ್ಣಾಜಿಯವರನ್ನ ಕಾಣಲು ಹೋಗಬೇಕಾಗಿದೆ.

ರತ್ನಾ :— (ಆತುರದ ಸ್ವರದಲ್ಲಿ ನಿದಾನವಾಗಿ) ಅಣ್ಣಾಜಿಯವರು ಇರುವುದೆಲ್ಲಿ? ಶಾಂತಿಕುಟೀರದಲ್ಲಿ ಅಲ್ಲವೆ?

ಹೆದ್ದ :— ಅಹುದು....! ನಿನಗೆ ತಲೆನೋವೇನೋ! ಹೋಗಿ ಮಲಗಿಕೊಂಡು ಬಿಡು! ನಾನು ಹೊರಡುತ್ತೇನೆ.

(ಹೆದ್ದರಾಯ ಹೊರಟು ಹೋಗುವನು.)

ಹೊ :—(ಮೇಲೆ ಬಂದು) ಅಮ್ಮಾಜಿ, ರಾಯಾಜಿ ದೊರೆಗಳು ಹಾಗೆಯೇ ಹೋಗಿಬಿಟ್ಟರಲ್ಲ! ಉಪಾಹಾರವೆಲ್ಲಾ ಸಿದ್ಧವಾಗಿದೆ ಅಮ್ಮಾಜಿ!

ರತ್ನಾ:—ಅದರೆ ಆಗಲಿ ಹೋಗೇ! ನೀನೊಂದು ಹೆಚ್ಚಿನ ತಲೆ. ನೋವು! ಮೊದಲು ಹೋಗು ಇಲ್ಲಿಂದ!

ಹೊನ್ನಮ್ಮ :— (ದೂರ ನಡೆದು ಹೋದಮೇಲೆ) ಬರು-ಬರುತ್ತಾ ಈ ಹುಡುಗಿಯ ರೀತಿಯೇ ಬದಲಾಗ್ತಾ ಇದೆ. ಯಾವ ಹೋರಿನಲ್ಲಿ ಯಾವ ಹಾವೋ ಶಿವನೇ ಬಲ್ಲ. ಈಗ ಮಾಡಿದ ಅಡಿಗೆಯೆಲ್ಲಾ ಹಾಳು! ಈ ದೊರೆಗಳ ಮಕ್ಕಳನೆಲ್ಲಾ ದೇವರೇ ಕಾಪಾಡಬೇಕು. ಅಯ್ಯೋ! ನನ್ನ ಹಾಲುಗಾರಿಗೆಯೇ, ನೀ ಇನ್ನು ಯಾರ ಬಾಯೊಳಗೆ ಬಿದ್ದು, ಯಾರ ಹೊಟ್ಟೆಯಲ್ಲಿ ಕೂಡಬೇಕಾಗಿದೆಯೋ ಏನೋ!

ಳನೆಯ ಸನ್ನಿವೇಶ

ನಿರೂಪಕ

ರತ್ನಾಂಬಿಕೆಯು ರಾಜಶೇಖರನನ್ನು ಕಾಣುವ ಅಪೇಕ್ಷೆಯನ್ನು ತಿಳುಹಿದಾಗ, ಕಮಲಾಂಬಿಕೆಗೆ ಆಶ್ಚರ್ಯವಾಯಿತು. ಏಕೆಂದರೆ ರತ್ನಾಂಬಿಕೆಯು ರಾಜಶೇಖರನನ್ನು ಯಾವಾಗಲೂ ಬೀಳುಗಳೆದು ನುಡಿಯುವವಳು. ಕಮಲಾಂಬಿಕೆಯು ರತ್ನಾಂಬಿಕೆಯನ್ನು ರಾಜಶೇಖರನ ಬಳಿ ಕರೆದುಕೊಂಡು ಹೋಗುವೆನೆಂದು ಒಪ್ಪಿದಳು. ಅದರಂತೆಯೇ ಅವಳನ್ನು ಶಾಂತಿಕುಟೀರದತ್ತ ಕರೆದುಕೊಂಡು ಬಂದಿರುವಳು. ರಾಜಶೇಖರನು ತನ್ನ ನಿತ್ಯದ ಆಸನದ ಮೇಲೆ ಕುಳಿತಿರುವನು.

ಸೇವಕ :— (ವಿನಯದ ಧ್ವನಿಯಲ್ಲಿ) ಕಮಲಮ್ಮಣ್ಣಿಯೋರು ಬಂದಾರೆ ಬುದ್ಧಿ!

ರಾಜ :— ಕಮಲಮ್ಮಣ್ಣಿ ಬಂದರೆ, ನೇರವಾಗಿ ಇಲ್ಲಿಗೆ ಬರುತ್ತಾರೆ. ನೀನೇಕೆ ಹೇಳಲಿಕ್ಕೆ ಬಂದೆ?

ಸೇವಕ :— ಅವರ ಜೊತೇಲಿ ಇನ್ನೂ ಯಾರೋ ಒಬ್ಬರು ಅಮ್ಮಣ್ಣಿಯೋರು ಇದ್ದಾರೆ ಬುದ್ಧಿ!

ರಾಜ :— (ಬೆರಗಿನ ಧ್ವನಿಯಲ್ಲಿ) ಇನ್ನೂ ಯಾರೋ ಒಬ್ಬರು ಅಮ್ಮಣ್ಣಿಯೋರೇ? ಸರಿ! ಇಬ್ಬರಿಗೂ ಇಲ್ಲಿಗೆ ಬರುವಂತೆ ಹೇಳು!

ಸೇವಕ :— ಬುದ್ಧಿಯವರ ಅಪ್ಪಣೆ. (ಹೋಗುವನು.)

ರಾಜ :— (ತನ್ನಲ್ಲಿ ತಾನೆ) ಯಾವಾಗಲೂ ಒಬ್ಬಳೇ ಬರುವ ಕಮಲಾ, ಇಂದು ಯಾರನ್ನು ಜೊತೆಗೆ ಕರೆತಂದಿರುವಳೋ! ಚಂದ್ರಗಿರಿಯಿಂದ ಯಾರಾದರೂ ಬಂದಿರಬಹುದೇನು....(ಕಮಲಾಂಬಿಕೆ ಮತ್ತು ರತ್ನಾಂಬಿಕೆ ಬರುವರು.)

ಬಾ ಕಮಲಾ! ಬನ್ನಿ ತಾಯಿ! ನಿಂತಿರೇಕೆ? ಸಂಕೋಚ ಬೇಡ. ಕುಳಿತುಕೊಳ್ಳಿ! ಏನು ಕಮಲಾ, ಈಗ ಬಂದಿದ್ದೀರಿ? ಈ ತಾಯಿ ಯಾರೋ, ಇದುವರೆಗೆ ನಾನು ನೋಡಿಯೇ ಇಲ್ಲ!

ಕಮಲಾ :— ಅಹುದು, ನೀವು ನೋಡಿಲ್ಲ. ನಾನು ಆಗಾಗ ನಿಮ್ಮೆದುರು ರತ್ನಾಂಬಿಕೆಯ ವಿಚಾರ ಹೇಳುತ್ತಿದ್ದೆನಲ್ಲ; ಆ ರತ್ನಾಂಬಿಕೆ ಇವಳು! ದಳವಾಯಿ ದೇವಣ್ಣನಾಯಕರ ಮಗಳು! ನಿಮ್ಮನ್ನು ಅವಶ್ಯವಾಗಿ ಕಾಣಬೇಕಾಗಿದೆಯೆಂದು ಹೇಳಿದಳು; ಆದುದರಿಂದ ನಾನು ಕರೆದುಕೊಂಡು ಬಂದೆ.

ರಾ. ಶೇ :— (ರತ್ನಾಂಬಿಕೆಯ ಕಡೆಗೆ ತಿರುಗಿ ವಿಸ್ಮಯ-ಸ್ವರದಲ್ಲಿ) ನನ್ನನ್ನು ಕಾಣಬೇಕಾದ ಅವಶ್ಯಕತೆಯೇ ನಿಮಗೆ?

ರತ್ನಾ :— (ಗಂಭೀರಭಾವದವಳಾಗಿ) ಅಹುದು; ಅದಕ್ಕೆಂತಲೇ ಬಂದಿದ್ದೇನೆ.

ರಾ. ಶೇ :— ಕಾರಣವು ನನಗೆ ಗೊತ್ತಾಗಬಹುದಲ್ಲವೆ?

ಕಮಲಾ :— ಅಣ್ಣಾಜಿ, ರತ್ನಾಂಬಿಕೆಗೆ ನಿಮ್ಮ ಬಳಿ ಕ್ಷಮಾ-ನೆ ಮಾಡಬೇಕಾಗಿದೆಯಂತೆ!

ಶೇ :— ಕ್ಷಮಾಯಾಚನೆ.....! ಏತಕ್ಕಾಗಿ ಕ್ಷಮಾ-

:— ಬರೀ ಕ್ಷಮಾಯಾಚನೆಯಷ್ಟೇ ಅಲ್ಲ; ಈಕೆ ತಜ್ಞತೆಗಳನ್ನೂ ಸಲ್ಲಿಸುವವಳಿದ್ದಾಳೆ.

ಶೇ :— ಕೃ[illegible]ತೆ ಸಲ್ಲಿಸುವಂತಹ ಉಪಕಾರ ನನ್ನಿಂದ ಇವರಿಗೆ ಏನಾಗಿದೆ ಕಮಲ[illegible]

ರತ್ನಾ :— (ನೆಲದನಿಯಲ್ಲಿ) ನನ್ನ ಪ್ರತಿಜ್ಞೆಯೊಂದನ್ನು ನೀವು ಪೂರಯಿಸಿದ್ದೀರಿ!

ರಾ. ಶೇ :— ಅದಾವುದು ನಿಮ್ಮ ಪ್ರತಿಜ್ಞೆ? ಅದನ್ನು ನಾನು ಪೂರಯಿಸಿದುದು ಹೇಗೆ?

ರತ್ನಾ :— ವಿರೂಪಾಕ್ಷರಾಯನನ್ನು ನೀವು....ಈ ಲೋಕದಿಂದ ಇಲ್ಲದಂತಾಗಿಸಿದ್ದೀರಿ!

ರಾ. ಶೇ :—ಆತನ ದುರಾಚಾರದ ಉರಿಯ ಸೆಕೆಯನ್ನು ನೀವೂ ಕಮಲಿಸಿಕೊಂಡವರೇನು?

ರತ್ನಾ :— (ದುಃಖ ಉಕ್ಕೇರುವ ಧ್ವನಿಯಲ್ಲಿ) ಬರೀ ಸೆಕೆಯನ್ನು ತಗುಲಿಸಿಕೊಂಡವಳಷ್ಟೇ ಅಲ್ಲ; ಆತನ ದುರಾಚಾರದ ಬೆಂಕಿಯ ಬಲುಮೆಯಿಂದ, ಇದುವರೆಗೂ ಕರುಳುಗಳನ್ನು ಸುಟ್ಟುಕೊಳ್ಳುತ್ತಿರುವವಳು!

ಕಮಲಾ :— (ನಡುವೆಯೆ ಬಾಯಿಹಾಕಿ) ಅಂದು ನಿಮ್ಮ ಅನಾಥನಿಲಯಕ್ಕೆ ಬಂದಿದ್ದಳಲ್ಲ ಅಣ್ಣಾಜಿ; ಆ ಬಸಿರೆಯಾದ ಭಿಕ್ಷುಕಿ? ಅವಳೇ ಈಗ ಹೆತ್ತಿರಬಹುದಲ್ಲವೆ?

ರಾ. ಶೇ. :— ಮೊನ್ನೆಯ ದಿನವೇ ಹೆರಿಗೆಯಾಯಿತು. ಗಂಡು ಮಗು! ತುಂಬ ಮುದ್ದುಮುದ್ದಾಗಿ ಇದೆಯಂತೆ ನೋಡು.... ಕಮಲಾಜೀ!

ಕಮಲಾ :— ನಾನು ನಿಲಯಕ್ಕೆ ಹೋಗಿ ಆ ತಾಯಿ-ಮಕ್ಕಳನ್ನು ನೋಡಿ ಬರುತ್ತೇನಮ್ಮಾ ರತ್ನಾ! ನಿಮ್ಮ ಮಾತು-ಕಥೆ ನಡೆಯಲಿ (ಕಮಲಾಂಬಿಕೆ ಹೋಗುವಳು.)

(ಸ್ವಲ್ಪವೆ ತಡೆದು.)

ರಾ. ಶೇ. :— ಅಮ್ಮಾಜಿ, ನೀವು ಕರುಳು ಸುಟ್ಟುಕೊಳ್ಳುವುದರ ಕಾರಣವನ್ನು ನಾನು ಕೇಳಬಹುದೆ?

ರತ್ನಾ :— (ಶೋಕಧ್ವನಿಯಲ್ಲಿಯೆ) ನೀವು ಕೇಳುವುದಕ್ಕೆ ಮೊದಲೇ ಅವನ್ನು ಹೇಳಬೇಕೆಂದಿದ್ದೆ. ಅದಕ್ಕಾಗಿಯೆ ನಿಮ್ಮ ಪರಿಚಯವನು ಅರಿಸಿ, ಇಲ್ಲಿಯ ವರೆಗೆ ಬಂದಿದ್ದೇನೆ.



ರಾಜ :— ವಿರೂಪಾಕ್ಷರಾಯ [illegible] ಗಳನ್ನು ಕೊಟ್ಟು, ರೋಷ-ಶೋ [illegible] ಜ್ವಾಲಾಮುಖಿಗಳನ್ನು ನಿರ್ಮಾಣಮಾಡಿಬಿಟ್ಟಿದ್ದಾನೋ!

ರತ್ನಾ :— (ಕರುಣಾಧ್ವನಿಯಲ್ಲಿ) ನನ್ನ ಅಕ್ಕಮ್ಮ, ಒಬ್ಬಳೆ ಇದ್ದುದು ಗೊತ್ತಿದೆಯಲ್ಲವೇ ನಿಮಗೆ?

ರಾಜ :—ಅಹುದು! ದೇವಣ್ಣನಾಯಕರ ಹಿರಿಯಮಗಳೊಬ್ಬಳನು, ದುರ್ಗದ ಚಿಕ್ಕಣ್ಣನಾಯಕರಿಗೆ ಕೊಟ್ಟಿದ್ದಿತೆಂದು ಕೇಳಿ ಅರಿತಿದ್ದೇನೆ

ರತ್ನಾ :— (ಕಾತರಧ್ವನಿಯಲ್ಲಿ) ಸರಿ! ಚಿಕ್ಕಣ್ಣನಾಯಕರು ತೀರಿಹೋದರು. ಅಕ್ಕಮ್ಮ ಅವರ ಇಚ್ಛೆಯನ್ನು ಸಲಿಸುವುದಕ್ಕೆಂದು ಸತಿಹೋಗಲಿಲ್ಲ ಇಲ್ಲಿಯೇ ಬಂದು, ಕಣ್ಣೀರಿನಿಂದಲೇ ತನ್ನ ಬಾಳನ್ನು ತೊಳೆದುಕೊಳುತ್ತ—ನಮ್ಮ ಮನೆಯಲ್ಲಿಯೇ ಇದ್ದು ಬಿಟ್ಟಳು. ಆಕೆಯ ಜೆಲುವಿಕೆ, ಬೇಕಾಗಿ ಹೇಳಿ ಮಾಡಿಸಿದಂತಹದು! ಜೆಲುವಿಕೆಗೆ ನೂರು ಮಡಿಯಾಗಿ, ಶುಚಿಜೀವನದಲ್ಲಿ ಆಕೆ ಅವಳಿಗೆ ವಿರೂಪಾಕ್ಷರಾಯನ ಕಿವಿಗೆ, ನನ್ನ ಅಕ್ಕನ ಜೆಲುವಿಕೆಯ ಸುದ್ದಿಯನ್ನು ಯಾರೋ ಹತ್ತಿಸಿದರು. ಮೂರನೆಯ ನಾಲ್ಕನೆಯ ಸ್ಥಾನದಲ್ಲಿರುವ ನಮ್ಮ ಅಪ್ಪಾಜಿಯವರಿಗೆ ಮುಖ್ಯ ದಳಪತಿಯ ಸ್ಥಾನ ದೊರೆಯಿತು. ವಿರೂಪಾಕ್ಷರಾಯನ ಘೋರತರಪಾಪಕ್ಕೆ, ನಮ್ಮ ಅಪ್ಪಾಜಿಯ ಕುರುಡುಬುದ್ಧಿ ನೆರವು ಕೊಟ್ಟಿತು. (ಅಳುತ್ತ) ನೈವೇದ್ಯಪಾತ್ರದಂತಹ ಅಕ್ಕಮ್ಮನ ಪರಿಶುದ್ಧ ಶರೀರಕ್ಕೆ, ಒಂದೇ ಒಂದು ಸಲ ಆ ನಾಯಿಯ ಮೈಲಿಗೆಯಾಯಿತು

ರಾ. ಶೇ. : — ಶಿವ ಶಿವಾ! ಅಕ್ಕಟಕ್ಕಟಾ!

ರತ್ನಾ :— (ಅಳುತ್ತಲೇ) ಇನ್ನೂ ಕೇಳಿರಿ! ಅಕ್ಕಮ್ಮನಿಗೆ ಆಗ ತನ್ನ ಜೀವನದ ಒಂದು ಕ್ಷಣವೂ ಬೇಸರದ್ದಾಯಿತು. ಮುಂದೆ ಎರಡನೆಯ ದಿನವೇ—ಮನೆಯಲ್ಲಿ ಯಾರಿಗೂ ತಿಳಿಯದಂತೆ— ವಿಷದ ಮದ್ದನ್ನು ಅರೆದು ಕುಡಿದುಬಿಟ್ಟಳು. ತನ್ನ ಕರುಳ ಕುದಿಸುವ ಕಥೆಯನ್ನು ನನಗೊಬ್ಬಳಿಗೆ ಮಾತ್ರ ಹೇಳಿದಳು. ಸಾಯುವುದಕ್ಕೆ ಮೊದಲು 'ರತ್ನಾ! ನೀನಾದರೂ ಜಾಗ್ರತೆಯಾಗಿದ್ದು ಪವಿತ್ರಳಾಗಿ ಉಳಿಯಬೇಕು!' ಎಂದು ಎಚ್ಚರುಕೊಟ್ಟಳು.

ರಾ. ಶೇ. :— ಮಹಾದೇವಿಯವರು!..... ಕನ್ನಡ ಸತಿ. ಶಿರೋಮಣಿ.

ರತ್ನಾ:— ಅಕ್ಕಾಜಿ ಕೊನೆಗಾಲದಲ್ಲಿ ನನ್ನನ್ನು ಕರೆದು, ಹೇಳಿದಳು; 'ರತ್ನಾ, ನೀನು ಹೇಗಾದರೂ ಮಾಡಿ ಆ ನೀಚನ ಮುಖ್ಯನ್ನು ತೀರಿಸಬೇಕು!' ಎಂದು ಭಾಷೆ ತೆಗೆದುಕೊಂಡಳು. ನೋಡಿ— ಅವನು ಒಂದು ಸಾಮ್ರಾಜ್ಯದ ಅಧಿಪತಿ; ನಾನು ಒಂದು ಅಸಹಾಯಿನಿಯಾದ ಹೆಣ್ಣು! ಏನು ಮಾಡಬೇಕು ನಾನು? ಈಗ ಎರಡು ವರ್ಷಗಳಿಂದಲೂ ನಾನು ನನ್ನ ಪ್ರತಿಜ್ಞೆಯನ್ನು ಪೂರೈಸುವುದಕ್ಕಾಗಿ ಹೊಂಚುಹಾಕುವುದರಲ್ಲಿದ್ದೆ. ಈ ಅವಧಿಯಲ್ಲಿಯೇ ತಂದೆ. ತಾಯಿಗಳು ನನ್ನ ಮದುವೆ ಮಾಡಿಬಿಡಬೇಕೆಂದು ಹವಣಿಸಿದರು. ಅದೆಂದಿಗೂ ಆಗದೆಂದು ನಾನು ಹಟ ಹಿಡಿದೆ.

ರಾ. ಶೇ:— ಅಯ್ಯೋ, ಪಾಪ! ನಿಜವಾಗಿಯೂ ಶೋಚನೀಯವಾದ ಕಥೆ!

ರತ್ನಾ:—ರಾಜಶೇಖರ, ನನಗೆ ಗೊತ್ತಿಲ್ಲದಂತೆಯೇ ನೀವು ನನ ಪ್ರತಿಜ್ಞಾಭಾರವನ್ನು ಇಳುಹಿಬಿಟ್ಟಿದ್ದೀರಿ. ಅದಕ್ಕಾಗಿ ನನ್ನ ಕೃತಜ್ಞತೆಗಳನ್ನು ಸಲ್ಲಿಸಬೇಕೆಂದು ಬಂದೆ!

ರಾ. ಶೇ. :— ತಾಯೀ! ನಾನು ಅದನ್ನು ನಿಮ್ಮೊಬ್ಬರ ಕಾರ್ಯವೆಂದೇನೂ ಮಾಡಿಲ್ಲ. ಇದುವರೆಗೆ ನಿಮ್ಮ ಕಳವಳದ ಕಥೆಯ ಕಲ್ಪನೆ ಕೂಡ ನನಗೆ ಇರಲಿಲ್ಲ. ಸಾಮ್ರಾಜ್ಯದ ಜನತೆಯ ಮನಸ್ಸನ್ನು ತುಳಿದು ನಡೆಯುತ್ತಿದ್ದ ಆ ಅತತಾಯಿಯು ಪತನಕಾಲ, ತನ್ನಿಂದ ತಾನೇ ಒದಗಿಬಂದು ನಿಂತಿದ್ದಿತು. ನಿಮಿತ್ತ ಮಾತ್ರ ನನ್ನದಾಯಿತು. ಅದಕ್ಕಾಗಿ ಕೃತಜ್ಞತೆ ಸಲ್ಲಿಸುವ ಕಾರಣವೇನೂ ಇಲ್ಲ. ನಿಜವಾಗಿಯೂ ನಿಮ್ಮ ಅಕ್ಕಮ್ಮನ ಕಥೆಯು ಕರುಳನ್ನು ಉರಿದುಬಿಡುವಂತಹದೇ ಸರಿ! (ರತ್ನಾಂಬಿಕೆ ಮಾತನಾಡದೆ, ನಿಡಿದಾಗಿ ಬಿಸಿಯುಸಿರಿಕ್ಕುವಳು. ಆಗಲೇ ಕಮಲಾಂಬಿಕೆ ಅಲ್ಲಿಗೆ ಬರುವಳು.)

ಕಮಲಾ :— (ತನ್ನ ಮುಗ್ಧಭಾವದಲ್ಲಿಯೆ) ನೋಡು ರತ್ನಾ! ಆ ಕೂಸು ಎಷ್ಟು ಜೆಲುವಾಗಿದೆ ಎನ್ನುತ್ತಿ; ನೀನೂ ನೋಡಬೇಕು ಅದನ್ನು. ಪಾಪ, ಆ ಕೂಸಿನ ತಾಯಿ ವಿಧವೆಯಂತೆ ನೋಡು!

ರತ್ನಾ : — (ತನ್ನಲ್ಲಿ ತಾನೇ) ವಿಧವೆ....ವಿಧವೆ....ನರಾಧಮ ....ನೀಚ!

ಕಮಲಾ :— ಹಗಲು ಎರಡು ಪ್ರಹರಕ್ಕೆ ಬಂದಿತು. ಇನ್ನು ಮನೆಗೆ ಹೊರಡುತ್ತೇವೆ. ನಡೆ ರತ್ನಾ ಹೊತ್ತಾಯಿತು. ಹೊರಗೆ ರಥವು ಹೂಡಿ ಸಿದ್ಧವಾಗಿಯೇ ನಿಂತಿದೆ! (ರಾಜಶೇಖರನ ನಿಟ್ಟುಸಿರು ಕೇಳಿಸುವುದು. ಕಮಲಾಂಬಿಕೆ, ರತ್ನಾಂಬಿಕೆ ಹೊರಡುವರು.)

(ಇದರ ಮುಂದಿನ ಭಾಗವು ಮುಂದಿನ ಸಂಚಿಕೆಯಲ್ಲಿ ಬರುವುದು.)

ಹಿಂದೂ ಮುಂಳೆಯ ಬಾಳನೋಟ

ವಿಧವಾ ಜೀವನ

(ಒಂದು ಭಾಷಣ) *

ಶ್ರೀ. ದ. ರಾ. ಬೇಂದ್ರೆ, ಬಿ.ಎ. ಧಾರವಾಡ

ಇಂದಿನ ಸಾಮಾಜಿಕ ಜೀವನದಲ್ಲಿ 'ನಿ ಯಾಗಿದೆ. ಕರ್ತವ್ಯದ ಪ್ರಜ್ಞೆ, ಸಮಾಜದ ನಡೆದುದರಿಂದ, ಇಂದು ವಿಧವೆ ಒಂದು ದೊಡ್ಡ ಸಮಸ್ಯೆ ಲ್ಲಿಯೂ ಇಲ್ಲದಂತಾಗುತ್ತ ತೀಕವಾಗಿದ್ದಾಳೆ.

ಈ ಮೊದಲು, ಇದೇ ವಿಚಾರಮಾಲೆಯಲ್ಲಿ, 'ಕನ್ಯೆ'ಯ ವಿಚಾರ ಒಬ್ಬರೂ, ಸುಮಂಗಲೆಯ ವಿಚಾರ ಇನ್ನೊಬ್ಬರೂ ಮಾತನಾಡಿದ್ದಾರೆ. ನನ್ನ ಪಾಲಿಗೆ 'ವಿಧವೆ'ಯ ವಿಚಾರ ಬಂದಿದೆ. ನಾನು ಅದನ್ನು ಒಪ್ಪಿಕೊಂಡಿದ್ದೇನೆ. ಸಾಮಾಜಿಕರಾದ ತಾವಾದರೂ ಈ ವಿಷಯವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುವಿರಿ ಎಂದು ನಂಬುವೆ

ಕನ್ಯೆ-ಸುಮಂಗಲೆಯರಂತೆ. ವಿಧವೆ ಕೂಡ ಹೆಂಗೂಸು. ಇದ್ದ ಗಂಡನನ್ನು ಕಳೆದುಕೊಂಡವರು ವಿಧವೆಯರು. ಧವ ಎಂದರೆ ಗಂಡ; ಅವನು ಸತ್ತರೆ, ಅವನ ಹೆಂಡತಿ 'ವಿಧವೆ' ಎನಿಸಿಕೊಳ್ಳುತ್ತಾಳೆ. ಬಳಕೆಯು ಮಾತಿನಲ್ಲಿ ಗಂಡ ಸತ್ತ ಮೇಲೆ ಕಲೆಗೂದಲು ತೆಗೆಸಿ, ಶುದ್ಧರಾದವರು ಮಾತ್ರ, ವಿಧವೆಯರು; ಹಾಗೆಯೆ ಇದ್ದವರು ಸಕೇಶಿಗಳು-ಅಂತೆ. ಸಕೇಶಿ-ವಿಧವೆಯರಲ್ಲಿ ವಿಧವೆ ಮಡಿಯಾದವಳು, ಸಕೇಶಿ ಅಮಂಗಲೆ; ಮಡಿಗೆ ಬರುವುದಿಲ್ಲ. ಯಾವುದೋ ಕೆಲಸಕ್ಕೆ ಹೊರಟೊಡನೆ, ವಿಧವೆ ಇದಿರುಬಂದರೆ ಹಿಂದೆ ಮುಂದೆ ನೋಡುವವರುಂಟು. ಅದು ಲೋಕಾರೂಢಿಯಲ್ಲಿ ಅಪಶಕುನವಂತೆ; ಇದು ಮಡಿಯ ಹಣೆಬರೆಹ. ಸಕೇಶಿ ಇದಿರು ಬಂದರೆ ಅಂಥಿಂಥ ಕಣ್ಣುಗಳೂ ಮಿಕ ಮಿಕ ನೋಡುವುವು. ಶಕುನಾಪಶಕುನದ ವಿಚಾರವೇಕೆ? ವಿಚಾರವೇ ಕೆಲ ಹೊತ್ತು ಲುಪ್ತವಾಗುವುದು. ಸಕೇಶಿಯನ್ನು ಕುಂಕುಮವಿಲ್ಲದ್ದರಿಂದ ಗುರುತಿಸುವರಾಗಿ, ಇತ್ತೀಚೆ ಅಂಥ ಕೆಲವರು ಸಕುಂಕುಮರಾಗಿ, ಸರಾಗವಾಗಿ, ಪಾರಾಗುವರು. ಕೆಲ ಸುಮಂಗಲೆಯರು, ಕುಂಕುಮ ಧರಿಸುವುದು ಅಷ್ಟು ಮುಖ್ಯವಲ್ಲ-ಎಂಬ ಪ್ರಗತಿಪಥದಲ್ಲಿ ಇದ್ದಾರೆ; ಕೆಲ ಸಮಾಜಗಳಲ್ಲಿ ಕುಂಕುಮಧಾರಣಪದ್ಧತಿಯೂ ಇಲ್ಲ. ಇತ್ತೀಚೆ ವಿಧವೆಯರು ಕೂದಲ ತೆಗೆಸಬೇಕೆಂಬ ನಿಯಮವೂ ಇಲ್ಲ. ಪುನರ್ವಿವಾಹ ಬೇರೆ ರೂಢಿಗೆ ಬರುತ್ತಿದೆ; ಅಂತೂ ಹಳೆಯ ವಿಧವೆ ಇತಿಹಾಸ, ಪುರಾಣ, ನಾಟಕಗಳಲ್ಲಿಯೆ ಮಾತ್ರ ಸಿಕ್ಕಬಹುದಾದ ಅಪರೂಪ ವಸ್ತುವಾಗಬಹುದು.

ಮನೆಯ ಮಾಂಗಲ್ಯವೆಲ್ಲ ಗಂಡು-ಹೆಣ್ಣಿನ ಸುಖದಾಂಪತ್ಯದಲ್ಲಿ ಇರುವಾಗ, ವಿಧವೆಯು ಚಿಂತೆಯ ವಿಷಯವಾಗುವುದು. ಆಶ್ಚರ್ಯವಲ್ಲ. ಯೋಗ-ಕ್ಷೇಮಕ್ಕೇ ಸಂಚಕಾರ ಬರುವ ಸಮಾಜದಲ್ಲಿ ವೈಧವ್ಯದಂಥ ಆಪತ್ತಿ ಬೇರೊಂದಿಲ್ಲ. ಗಂಡ ಸತ್ತು ಹೋದನೆಲೆ, ಆ ಹೆಂಡಿರು ಹೇಗೆ ಬಾಳಬೇಕು?-ಎಂಬ ವಿಷಯ ಎಲ್ಲ ಕಾಲಕ್ಕೂ ಒಂದೇ ಬಗೆಯಾಗಿಲ್ಲ. ಸತಿ-ಸ್ವೀಕಾರವು ಪದ್ಧತಿಯಿದ್ದ ಸಮಾಜದಲ್ಲಿ ವಿಧವೆಯು ಅಸ್ತಿತ್ವವೇ ಇರಲಾರದು ಎಂದು ತೋರಬಹುದು; ಆದರೆ 'ಮಾಸತಿ'ಗಳ ಉದಾಹರಣೆಗಳು ಅಷ್ಟು ವಿಪುಲವಾಗಿಲ್ಲ! ಬಹಳ ಜನರು ಸುಮಂಗಲೆಯರಾಗಿಯೆ ಸಾಯುತ್ತಿದ್ದರೆಂದು ತಿಳಿದರೂ; ಎಷ್ಟೋ ಜನ ಹೆಂಗಳೆಯರ ಹಣೆಯಬರೆಹದಲ್ಲಿ ವೈಧವ್ಯ ತಪ್ಪುತ್ತಿರಲಾರದು-ಎಂದು ತಿಳಿದರೆ ತಪ್ಪಾಗಲಾರದು. ಹಳೆಯ ಕಾವ್ಯ, ನಾಟಕ, ಪುರಾಣಗಳಲ್ಲಿ ಪ್ರಖ್ಯಾತ ವ್ಯಕ್ತಿಗಳ ವೈಧವ್ಯದ ವಿಷಯವೇ ಎತ್ತಿ ತೋರಿಸಲಾಗುತ್ತಿತ್ತಲ್ಲದೆ, ಸಾಮಾನ್ಯವಿಧವೆ ಸಾಮಾನ್ಯವಾಗಿ ದುರ್ಲಕ್ಷ್ಯಕ್ಕೀಡಾಗುತ್ತಿದ್ದಳು. ವೈಧವ್ಯ-ಸಾಮಾನ್ಯವನ್ನೇ ಕುರಿತು ಭಾವ ಉದ್ಬೋಧನ ಮಾಡುವುದು ಇಂದಿನ ಸಾಹಿತ್ಯಕ್ಕೆ ಮೀಸಲಾಗಿದೆ.

'ಪುಟ್ಟ ವಿಧವೆ?' 'ಹೆಣದ ಹಿಂದೆ' ಎಂಬ ಪದ್ಯಗಳಲ್ಲಿ ಅಂಬಿಕಾತನಯದತ್ತರು ಆ ಹೆಣ್ಣಿನ ಗೋಳನ್ನು ವರ್ಣಿಸಿದ್ದಾರೆ. ಚಿಕ್ಕ ವಯಸ್ಸಿನಲ್ಲಿಯೇ ಗಂಡನಳಿದು ಮುಂಡೆಯಾದವಳ ಬಾಳನ್ನು, ತಾಳುವುದಿರಲಿ - ನೋಡುವುದೂ ಅಸಹ್ಯ. ಕಲ್ಲುಮೂರ್ತಿ ಕೂಡ ಆಕೆಯ ಅವತಾರ-ವೇಷ ನೋಡಿ ಬೆಮೆಯಬಹುದು. ದೊಡ್ಡ ವಯಸ್ಸಿನಲ್ಲಿ ವೈಧವ್ಯ ಬಂದು, ಗತಿಹೀನಳಾದವಳ ನಾಯಿಪಾಡಿನ-ದೈನ್ಯದ ಹೃದಯದ್ರಾವಕ ಚಿತ್ರ 'ಹೆಣದ ಹಿಂದೆ' ಎಳುವ ಆಕ್ರೋಶದಲ್ಲಿ ಧ್ವನಿತವಾಗುತ್ತದೆ.

ಹೆಣ್ಣುಮಕ್ಕಳ ಹಾಡಿನಲ್ಲಿ ಒಂದು ಉಕ್ತಿ ಹೀಗಿದೆ :—

ಕಂದನೆತ್ತಲಿಲ್ಲ ಕೈಬೀಸಿ ನಡಿಲಿಲ್ಲ
ಗಂಡನ ಪುಣ್ಯ ಉಣಲಿಲ್ಲ। ಶಿವರಾಯ
ರಂಡಿತನಕ್ಕೇಂಗ ಗುರಿಯಾಗಿ ॥

* ಧಾರವಾಡ ಆಕಾಶವಾಣಿಯವರ ಕೃಪೆಯಿಂದ ಸಂ. ಚ.

ಇಂದಿನ ಸಂಸಾರದ ಚೌಕಟ್ಟಿನಲ್ಲಿ ಹೆಣ್ಣಿನ ಬಾಳು ಇನ್ನೂ ಪುರಂತಚಿತ್ರವೇ ಸರಿ. ನಗರದ ನಾಗರಿಕತೆಯಲ್ಲಿ ಆಕೆಯು ಸುತ್ತು ಶೈಲಿಕ ಪ್ರದರ್ಶನದ ದುರ್ವಾಸನೆಯ ಗಾಳಿ ಬೀಸುವುದು. ಹಳ್ಳಿಯ ಬಾಳಿನಲ್ಲಿ, ಮಾನರಕ್ಷಣೆಗೆ ಬದುಕಿನಲ್ಲಿಯೂ ಸತ್ತು ಬಾಳಬೇಕಾದ ಅನಾಥೆ ಆಕೆ; ಎಂದಮೇಲೆ ಆಕೆಯ ಅಡವಿಯ ಬಾಳಿನ ವನವಾಸದ ಕತೆ ಯಾರು ಹೇಳಬೇಕು? ಯಾರು ಕೇಳಬೇಕು? ಎಲ್ಲವ[illegible] ಪೂಜನೀಯಳಾದ ಈ ಜೀವಿ, ರಂಡೆಹುಣ್ಣಿಮೆ—ಮುತ್ತೈ[illegible] ಗಳನ್ನು ಜರುಗಿಸಿಕೊಳ್ಳುತ್ತಾ, ತನ್ನ ರೌದ್ರಕಾರುಣ್ಯದ ಚಕ್ರವನ್ನು ನಡೆಸಬೇಕಾಗಿದೆ ಇನ್ನೂ ಕೂಡ. ಪೃಥ್ವಿಯ ಆಕೆಯ ಬಾಳಿನ ಮಣ್ಣು ಬೆರೆತಿದೆ. ಆ ರೇಣುಗಳಿ[illegible] ಯಾದ ಈ ಭೂಮಿಯ ವೈಭವ-ವೈಧವ್ಯಗಳು ಇತಿಹಾ[illegible] ಬಣ್ಣನೆಯ ವಿಷಯಗಳಾಗಿವೆ. ತನ್[illegible]ನ್ಯವನ್ನೆ ವೈಭವವನ್ನಾ[illegible] ಮಾರ್ಪಡಿಸಿಕೊಂಡ ಒಬ್ಬ ಮಾಸತಿ [illegible]ಬ್ಬೆ ಯ ಚರಿತೆ ಶಾಸನ-ಕಾವ್ಯವಾಗಿ ಬಂದಿದೆ.

ಆ ಭಾಗ ಹೀಗಿದೆ ಕೇಳಿ:

ತಂದೆಯುಮಬ್ಬೆಯುಮೊಡನೆಯ
ಬಂಧುಗಳುಂ ಬಂದು ಮಗಳೆ ಸ್ಥಾಯದೆ ಮಾಣ್ ನೀ
ನೆಂದೆಲ್ಲಂ ಕಾಲ್ವಿಡಿದಡ-
ನಿಂದಿತೆ ದೇಕಬ್ಬೆ ಮುನಿದು ಬಗ್ಗಿಸಿ ನುಡಿದಳ್ ||

ನುಗುನಾಡಧಿಪತಿ ರವಿಗನ
ಮಗಳಾಗಿಯುಮಂತೆ ನವಿಲೆನಾಡಧಿಪತಿಗಾಂ
ನೆಗಳೆ ಸತಿಯಾಗಿ ಬಾಳ್ವುದು
ಬಗೆದೇರ್ವನೆ ಕೊಟ್ಟಕೊಂಡ ಮನೆಯುಸಮರಿಯಲ್ ||

ನೆರೆದಿಲ್ಲಂಬೇಡ ಮಾಣೆಂದಡೆ ನುಡಿಯದಿರಿಂ ಪೋಗಿ
ಮಾಂ ಮಾಣೆನೆಂದಾ
ದರದಿಂದಂ ಭೂಮಿ ಪೊಂಪುಟ್ಟಗೆ ಪಸುಧನಮಂ
ನೀಡುತಂ—ದೇ
ವರ ದೇವಂಗಳ್ಕಿಯಿಂ ಕಯ್ಯುಗಿದುರಿವುರಿಯಿಂ
ಪ್ಪೊಕ್ಕು ದೇಕಬ್ಬೆ ತನ್ನಂ
ಧರೆಯೆಲ್ಲಂ ಮೆಚ್ಚಿನಿಚ್ಚಂ ಪೊಗಳೆ ನೆಗಳುತುಂ
ದೇವಲೋಕಕ್ಕೆ ಪೋದಳ್

ಶ್ರೀರಮಣೆ ಗೌರಿ ಶಚಿ ಧಾರಿಣಿಯ ಪುತ್ರಿ ರತಿ
ಭೂರಮಣಿಯಂದದ ಸ್ವರೂಪವರಿವೊಳ್ತಾ
ದಾಂ ಜಯಧಾರೆ ಜಸಧಾರೆ ನಯಧಾರೆ ಭಯಹಾರೆ ಪತಿ-
ಭಕ್ತೆ ಧೃತಶಕ್ತೆಯೆನೆಸಂದೀ

ವೀರನಿಧಿಯಂ ಚಲದ ವಾರಿನಿಧಿಯಂ ಗುಣದ
ಚಾರುನಿಧಿಯಂ ನೆಗಳ್ದದೇ ಕಲೆಯನಿಂತೀ
ನಾರಿಜನರನ್ನ ಮನದಾರೊ ಮರೆವರ್ ಸಕಳ
ಧಾರಿಣಿಯೊಳಿಂತು—ವರಕಾಂತೆ ದೊರೆಯಾವಳ್ ?

ಶಾಂತಿಸೇವಾಸದನದ ಹೊಸ ಪ್ರಕಟಣೆಗಳು

ಜೈನಧರ್ಮ ೧೫-೦-೦
ಶ್ರೀ. ಮಿರ್ಜಿ ಅಣ್ಣಾರಾಯರು

ಹಾಲು-ಹಣ್ಣು (ಕವನ ಸಂಗ್ರಹ) ೧-೪-೦
ಶ್ರೀ. ಭುಜೇಂದ್ರ ಮಹಿಷವಾಡಿ

ಮೂಲಶಿಕ್ಷಣದ ಮೌಲ್ಯಮಾಪಣ ೦-೧೫-೦
ಶ್ರೀ. ಮಿರ್ಜಿ ಅಣ್ಣಾರಾಯರು

ಬಾಳ-ಬಂಡಿ (ಕವನ ಸಂಗ್ರಹ) ೦-೪-೦
ಶ್ರೀ. ಬಾಳ ಬಿ. ಉಪಾಧ್ಯೆ

ಭರತೇಶನ ನಾಲ್ಕು ಚಿತ್ರಗಳು ೧-೪-೦
ಶ್ರೀ. ಮಿರ್ಜಿ ಅಣ್ಣಾರಾಯರು

ಅಚ್ಚಿನಲ್ಲಿ:
ಸಂಸ್ಕೃತಿಯ ಹೃದಯ
ಭಾರತದ ಬಿಳಿಕು

ಪ್ರತಿಗಳಿಗಾಗಿ ಬರೆಯಿರಿ:
ಶಾಂತಿ ಸೇವಾಸದನ, ಸೇಡಬಾಳ
ಪೊ. : ಸೇಡಬಾಳ (ಜಿಲ್ಲಾ ಬೆಳಗಾಂವಿ)

ನೈಧವ್ಯದ ಝಳವು ಮನುಜರಿಗೆ ಮಾತ್ರವಲ್ಲ; ದೇವತೆಗಳಿಗೂ ತಾಗುವುದು. ಆದಿಕವಿ ಪಂಪನು ಹೆಣ್ಣಿಗೆ ವೈಧವ್ಯದಿಂದ ಬರುವ ಶೂನ್ಯಾಕಾರ ಸ್ಥಿತಿಯನ್ನು ಹೃದಯಂಗಮವಾಗಿ ಹೀಗೆ ವರ್ಣಿಸಿದ್ದಾನೆ:

ಲಲಿತಾಂಗದೇವನು ತೀರಿದಾಗ, ಸ್ವಯಂಪ್ರಭಾದೇವಿಗೆ ಬಂದ ಸ್ಥಿತಿಯಿದು :

ಅಲಕಂ ಮಂದಾರಶೂನ್ಯಂ, ಕದಪು ಮಕರಿಕಾ-
ಪತ್ರಶೂನ್ಯಂ, ಲಲಾಟಂ
ತಿಲಕಾಲಂಕಾರಶೂನ್ಯಂ, ಘನಕುಚಯುಗಳಂ
ಹಾರಶೂನ್ಯಂ ನಿತಂಬಂ
ಕಲಕಾಂಚೀದಾಮ ಶೂನ್ಯಂ, ಚರಣಯುಗಳಮುಂ
ನೂಪುರಾಳಾಪ ಶೂನ್ಯಂ, !
ಲಲಿತಾಂಗಂ ಪೋದೊಡೆ, ಆಯ್ತು ಆಕೆಗೆ
ದಿವಮನಿತುಂ ನಿರ್ಜರಾರಣ್ಯ ಶೂನ್ಯಂ.

ಹೆರಳಲ್ಲಿ ಹೂವಿಲ್ಲ, ಗಲ್ಲದಲ್ಲಿ ಅರಿಷಿಣವಿಲ್ಲ, ಹಣೆಯಲ್ಲಿ ಕುಂಕುಮವಿಲ್ಲ, ಕೊರಳಲ್ಲಿ ಹಾರವಿಲ್ಲ, ಎದೆಯಲ್ಲಿ ಅಧಾರವಿಲ್ಲ, ನಡುವಿನಲ್ಲಿ ಗೆಜ್ಜೆಯಿಲ್ಲ, ಹೆಜ್ಜೆಯಲ್ಲಿ ಸುಖವಿಲ್ಲ, ಇಲ್ಲ ಇಲ್ಲ ಇಲ್ಲ! ಆಪಾದ ಮಸ್ತಕ ಶೂನ್ಯ, ಒಳಗೆ ಶೂನ್ಯ, ಹೊರಗೆ ಶೂನ್ಯ ! ದೇವತೆಗಳ ಸ್ವರ್ಗ, ಪ್ರಾಣಪತಿ ಇರದಿದ್ದರೆ, ಹಾಳು ಬೆಂಗಾಡಿಗಿಂತ ಕಡೆ.

ಗಂಡನು ಅಗಲಿದಾಗಲೆ, ಭೋಗವಿಮುಖಳಾಗಿ ಅವನ ಚಿಂತೆಯಲ್ಲಿ ಕಾಲಕಳೆಯುವ ಹೆಣ್ಣು, ತನ್ನ ಸ್ವತ್ತಿನ ಗಂಡನ್ನು ವಿಧಿವಶವಾಗಿ ಕಳೆದು ಕೊಂಡರೆ, ಅಕೆಗೆ ಅಲಂಕಾರವೆಲ್ಲ, ಕೆಂಡ! ಅಂಗಾರ! ವಿಧವೆ ಬಯಲುಗಾಳಿಗೆ ಸುಳಿಯಬಾರದು, ಗಾಡಿಯಲ್ಲಿ ಮೆರೆಯಬಾರದು. ಅಕೆಯ ಡೌಲು ನಗೆಗೀಡು. ಪುಣೇಕರ ಕಾವ್ಯಾನಂದರು ಅಂಥ ನಗೆನೋಟವನ್ನು ಚಿತ್ರಿಸಿದ ಒಂದೆರಡು ಸಾಲು ನೆನಪಾಗುತ್ತಿವೆ.

ತಂಗಾಳಿ ಪಾರ್ಕಿನೊಳು ಅಂಗಾರವಿಲ್ಲದಲೆ ಮಾಂಗಲ್ಯ
ಶೂನ್ಯರಮಣಿ,
ಬೆಂಗಾವಿ ಪತ್ತಲದಿ ಬೆಂಗಾವಲಿಲ್ಲದಲೆ ಟಾಂಗಾದ
ಮೇಲೆ ನಡೆದಳ್.

'ಪ್ರತಿಭಾಂಕುರ' ಎಂಬ ಜಾನಪದ ಕವಿಗಳು, ವಿಧವೆಯ ದೈನ್ಯ ಹೆಜ್ಜಾಮನ ಎದೆಯನ್ನು ಕರಗಿಸುವುದು; ಆದರೆ ಲೋಕಾಪವಾದಕ್ಕೆ ಹೆದರಿ, ಭೂತಶಾಸ್ತ್ರಗಳಿಗೆ ಬಾಗುವವರನ್ನು ಕದಲಿಸಲರಿಯದು—ಎಂಬುದಾಗಿ ಒಂದು ಚಿಕ್ಕ ದೃಶ್ಯದಲ್ಲಿ ವರ್ಣಿಸಿದುದು ನೆನಪಾಗುತ್ತದೆ. ಹೆಣ್ಣಿಲ್ಲ ಶಿವನ ರಾಣೀವಾಸ' ಎಂಬ ಭಾವ ಧಾರ್ಮಿಕವೆನಿಸಿಕೊಂಡರೂ, ವಿಧವೆ ಸುಮಂಗಲ ಕಾರ್ಯಗಳಲ್ಲಿ ಅಡ್ಡ ಸುಳಿಯಬಾರದು, ಕಣ್ಣಿಗೆ ಎದ್ದು ಕಾಣಬಾರದು. ಹೆಣ್ಣಿಗೆ ಗಂಡೇ ಗತಿ, ಅವನಿಲ್ಲವಾದರೆ ಅಕೆ ಸತಿ ಹೋಗಬೇಕು. ಸತಿ ಹೋಗುವ ಅಪ್ಪಣೆ ಇಲ್ಲ! ಹಾಗಾದರೆ, ಜಡೆಬಿಟ್ಟುಕೊಂಡಿರಬೇಕು. ಅದನ್ನೂ ತೆಗೆಸಿ, ಸಂನ್ಯಾಸಿಯಂತಿರಬೇಕು. ಅದು ಹೆಚ್ಚು ಸಲಕ್ಷಣ! ಹೀಗಿದೆ ವಿಧವೆಯ ಜೀವನದ ಹಂತ—ವೈಧಹಾರೀತನ ಸ್ಮೃತಿಯು—ವಿಧವೆಯ ಜೀವಿತಪ್ರಕಾರ ಹೀಗಿರಬೇಕೆಂಬ ಹೇಳುವುದು:

ವಿಧವೆಯು ಜೀವವಿರುವವರೆಗೆ ಬ್ರಹ್ಮಚರ್ಯವ್ರತವನ್ನು ನಿರತಾಲಸ್ಯದಿಂದ ಪಾಲಿಸಬೇಕು. ಕೂದಲಿಗೆ ಅಲಂಕಾರವನ್ನು ಹಾಕಬಾರದು; ತಾಂಬೂಲ ತಿನ್ನಬಾರದು. ಸುಗಂಧದ್ರವ್ಯಗಳನ್ನೂ ಪುಷ್ಪಗಳನ್ನೂ ಸೇವಿಸಬಾರದು; ಅಲಂಕಾರಗಳನ್ನು ಧರಿಸಬಾರದು; ಬಣ್ಣದ ವಸ್ತ್ರವನ್ನು ಉಡಬಾರದು; ಕಂಚಿನ ಪಾತ್ರೆಯಲ್ಲಿ ಉಣ್ಣಬಾರದು; ಎರಡು ಸಾರಿ ಉಣ್ಣಬಾರದು; ಕಣ್ಣಿಗೆ ಕಾಡಿಗೆ ಹಚ್ಚಬಾರದು; ಸ್ನಾನಮಾಡಿ ಶುಭ್ರವಸ್ತ್ರವನ್ನು ಧರಿಸಬೇಕು; ಸಿಟ್ಟು ಬಿಡಬೇಕು; ಇಂದ್ರಿಯಗಳನ್ನು ಜಯಿಸಬೇಕು; ಆಲಸ್ಯ ಬಿಡಬೇಕು. ನಿರ್ಮಲಳೂ ಶುಭಾಚಾರ ಸಂಪನ್ನಳೂ ಆಗಿ, ನಿತ್ಯದಲ್ಲಿ ಹರಿಯನ್ನು ಪೂಜಿಸುತ್ತಿರಬೇಕು; ರಾತ್ರಿಯಲ್ಲಿ ನೆಲದ ಮೇಲೆ ದರ್ಭೆ ಹಾಸಿಕೊಂಡು ಮಲಗಬೇಕು; ಸಜ್ಜನರ ಸಹವಾಸ ಮಾಡಿ, ನಿರಂತರದಲ್ಲಿ ದೇವರ ಧ್ಯಾನ ಮಾಡಬೇಕು.

ಸಮಾಜದ ಎಲ್ಲ ತರಗತಿಗಳಲ್ಲಿಯೂ ವಿಧವೆಗೆ ತೊಂದರೆಗಳು ಇದ್ದೇ ಇವೆ. ಅನಾಥತ್ವವು ಪ್ರಳಯಕಾರಿ! ಭೂಮಿಗೆ ಭೂಮಿಯೆ ಈ ಅನಾಥತ್ವಕ್ಕೆ ಇನ್ನೂ ಉತ್ತರ ಹುಡುಕುತ್ತಿದೆ. ಹೆಣ್ಣಿಗೆ ಬರೆ ಕೊಟ್ಟಂತೆ ವಿಧವೆಯ ಕುಚೇಷ್ಟೆ ಮಾಡಿ, ನೋಡಿ, ನಕ್ಕು ಸುಖ ಪಡುವವರೂ ಉಂಟು. ಅಕೆ ಕೇವಲ ಕುಚೇಷ್ಟೆಗೆ ವಿಷಯವಲ್ಲ—ಎಂದು ಅಗಾಧ ಕಾರುಣ್ಯದಿಂದ, ಕನ್ನಡ ರಂಗಭೂಮಿಗೆ ವಿಧವೆಯನ್ನು ತಂದು ಅವಳಿಗೆ ಸನ್ಮಾನತಂದವರು ಕೈಲಾಸವಾಸಿಗಳಾದ ನಾಟಕಕಾರ ಕೈಲಾಸಂ ಅವರು.

'ಟೊಳ್ಳು-ಗಟ್ಟಿ'ಯಲ್ಲಿ ನಗೇಗೀಡಾಗಿ ಬರುವ ನಾಗತ್ತೆ, ಸಾತು—ತವರುಮನೆ ಸಾತು ತವರುಮನೆಯಲ್ಲಿ ಗೌರವಗರಿಷ್ಟೆಯಾಗಿ ಪ್ರಕಾಶನಳಾಗುವಳು. ನಮಗೆ ಕೌಸಲ್ಯೆ—ಕುಂತಿಯರ ವೈಧವ್ಯದ ಬಗೆಗಿಂತ, ಗಂಡನಿಲ್ಲದ ಹೆಣ್ಣಿನ ಬಾಳು ನಾಳಿನ—ನಾಡಿದಿನ, ಲದಲ್ಲಿ, ಕಂಟಕಪ್ರಾಯವಾಗದಂತೆ ಹೇಗಾದೀತು—ಎಂಬ ಯೋಜನಕಾರಿ ಎಂದು ತೋರುವುದು. ಹೆಣ್ಣು ಕೂಡ ವ್ಯಕ್ತಿ ಎಂಬ ಗೌರವದೃಷ್ಟಿ ಜನಸಾಮಾನ್ಯದಲ್ಲಿ ಗಂಡನು ಬೇಡವೆಂಬ ಹೆಣ್ಣೂ ಇರಬಹುದು, ಗಂಡಿನ ಹವಂ ಸಾಕಾದ ಹೆ ಂ ಇರಬಹುದು, ಗಂಡನು ಬೇಕಾಗಿಯೂ ಸಿಗದ ಅನಿರ್ವಾಹ ವೈ ್ಯ ಹೆಂಗುಸರೂ ಇರಬಹುದು. ಮಕ್ಕಳಿಲ್ಲದ ವಿಧವೆಯ ಪೇಚಾಟ ಒಂದು ಬಗೆ, ಮಕ್ಕಳು ಬೇಕಾದ ವಿಧವೆಯ ಪೇಚಾಟ ಇನ್ನೊಂದು ಬಗೆ. ಅಂತೂ ಏನು! ವಿಧವೆ—ಸಂಸಾರಕ್ಕೆ ಹಾಕಿದ ಸವಾಲು! ಅದರ ಜವಾಬು ಇನ್ನೂ ಸರಿಯಾಗಿ ಬಂದಿಲ್ಲ. ಆ ಜವಾಬುದಾರಿ,—ಸಂಸಾರವು ಸುಖಮಯವಾಗಬೇಕೆನುವ ಎಲ್ಲ ಮಾ ರ ಮೇಲೂ ಇದೆ. ವಿಧವೆ ಹಾಕಿದ ಒಗಟು ಒಡೆಯಲು ಬರದು, ಬಾರದು! ವಿಧವೆಯಲ್ಲಿ ತಾಯಿಯನ್ನು ಕಾಣುವ ದೃಷ್ಟಿ ಹೃದಯದಾಳದಿಂದ ಬರುವವರೆಗೂ ಎಲ್ಲ—ಉಪಚಾರ—ಅಪಚಾರ, ಎಲ್ಲ ಆಚಾರ, ಅನಾಚಾರದೊಳಗಿಂದ ಹಾದಿ ತೆಗೆಯುವ ಗತ್ತು. ಈ ಕೂಟಪ್ರಶ್ನೆಯ ಮೂಲಕ್ಕೆದೆ—ಒಂದು ಅಜ್ಞಾನ.

'ಕಿಂಕ್ಯಾರಂ—ಸ್ತ್ರೀ ಹೃದಯಂ' ಎಂದು ಒಂದು ಸಂಸ್ಕೃತ ವಚನವಿದ್ದರೆ—

ಅನೃತಂ, ಸಾಹಸ, ಮಾಯಾ, ಮೂರ್ಖತ್ವಂ ಅತಿ
ಲೋಭಿತಾ |
ಅಶೌಚಂ ನಿರ್ದಯತ್ವಂಚ ಸ್ತ್ರೀಣಾಂ ದೋಷಾಃ ಸ್ವಭಾವಜಾಃ ||

ಎಂಬ ಸುಭಾಷಿತವೆನಿಸಿಕೊಂಡ ದುರ್ಭಾಷಿತ ಒಂದುಂಟು. ಆದರೂ, ಮಹಾಭಾರತ ಶಾಂತಿಪರ್ವದ ಒಂದು ವಚನ:

'ಸ್ತ್ರೀ ನಾಪರಾಧ್ನೋತಿ, ನರ ಏವಾಪರಾಧ್ಯತೆ
ಹೆಣ್ಣು ತಪ್ಪಾಗಸಲ್ಲ, ಗಂಡು ತಪ್ಪುತ್ತದೆ—

ಹೀಗೆ ಹೇಳುವುದು. ನರಲೋಕ, ನರಕಲೋಕವಾಗುವ ಕಾರಣಗಳಲ್ಲಿ ಒಂದು ಮುಖ್ಯ ಕಾರಣ—ವಿಧವೆಯ ಅನಾಥಸ್ಥಿತಿ, ಅಸಾಹಾಯ್ಯ ಸ್ಥಿತಿ?

ಸಂತುಷ್ಟೋ ಭಾರ್ಯಯೋಭರ್ತಾ
ಭರ್ತ್ರಾ ಭಾರ್ಯಾ ತಥೈವಚ |
ಯಸ್ಮಿನ್ನೇವ ಕುಲೇ ನಿತ್ಯಂ
ಕಲ್ಯಾಣಂ ತತ್ರ ವೈ ಧ್ರುವಂ ||

ಈ ಸಭ್ಯತೆಗೆ ಅಡ್ಡ ಬರುತ್ತಿದೆ ವಿಧವೆಯ ವಿಧಿಕಾಟ.

ಅಂದು ಇಂದಿನ ನಡುವೆ

ಶ್ರೀ. ಗಂಗಾಧರ ಚಿತ್ತಾಲ, ವಾಶಿಂಗ್ಟನ್ * (ಅಮೇರಿಕಾ)

ಹನ್ನೆರಡು ವರುಷಗಳ ಮೇಲೆ ಹಳ್ಳಿಗೆ ನಡೆದೆ
ಏನೇನೊ ಸವಿನೆನಹುಗಳ ಗೊಂಚಲನೆ ಹೊತ್ತು.
ಊರ ಘಾಟಿಯನೇರಿ ಇಳಿವಾಗ ಎನಿಸಿತ್ತು—
ಬೆಳಗಿನೀ ಬಿಸಿಲು, ಅದೊ ಓ ಅಲ್ಲಿ ಮಳಲಲ್ಲಿ
ಬೆಳ್ನೊರೆಯ ಹಾಸುತಿಹ ಕಡಲು, ಅದರಂಚಿನಲೆ
ಕಣ್ಣು ಹರಿಯುವವರೆಗು ಸೋ ಎನುವ ಗಾಳಿಮರಗಳ
ಈ ಜೋಳುಗುಡ್ಡ, ಇಳಿಜಾರಿನಲಿ
ಮೇವ ಕುರಿಹಿಂಡಿನೊಲು
ಅಲ್ಲಲ್ಲಿ ಪೊದೆಯಾಗಿ ಬೆಳೆದ ಈ ಗಿಡಗಂಟಿ,
ಈ ಕಣಿವೆ, ಈ ಕಲ್ಲು,
ಹನ್ನೆರಡು ವರುಷಗಳ ಹಿಂದೆ ಹೇಗೋ ಹಾಗೆ
ಇಂದಿಗೂ ಎಲ್ಲೆಲ್ಲೂ.
ಬೆಳೆದ ಕಣ್ಣಿಗೆ—ಅಂದು ಹರಹಿ ನಿಂತ ಜಗತ್ತು—
ಇಂದಿನಿಸು ಸಣ್ಣದಾಗಿಯೇ ಕಾಣುತಿದೆ, ನಿಜ.
ಪರಿಚಯದ ಮರುಛಾಯೆ ಹೊದೆಯುತಿರೆ ಎಲ್ಲೆಲ್ಲೂ
ಇಲ್ಲುಂಡ ಸುಖವೆಲ್ಲ ಮನದಿ ಮರುಕಳಿಸಿತ್ತು.
ಹಾಗೆಯೇ ಮುನ್ನಡೆದು ನಮ್ಮ ಬಾಲ್ಯದ ಬನವ
ತವಕದಲಿ ಹೊಕ್ಕಾಗ—ಎಲ್ಲೆಡೆಗೂ
ಹನ್ನೆರಡು ವರುಷಗಳ ಮುದಿಛಾಯೆ ಕವಿದಿತ್ತು.
ಕಲ್ಲುಕಟ್ಟೆಯ ಮೇಲಿನಶ್ವತ್ಥ
ಅಡಿಯ ಅಂಗಡಿ ಗದ್ದಿ, ರಸ್ತೆ,
ನೆರಳು-ನೆರಳಾದ ಮುಂದಣ ಕೇರಿ,
ಮನೆಯತ್ತ ಹೊರಳಿ ಸಾಗುವ ಓಣಿ,
ಎಲ್ಲವೂ
ಗತಜೀವನದ ಕತೆಯ ವ್ಯಥೆಯನೇ ಹಂಬಲಿಸುವಂತಿತ್ತು.
ಹಿಂದೆ ಎಂದೋ ನಡೆದು ಹ ಡಿಗೂಡಿ ಹೋದುದನು
ಇಂದು ಬರಿದೇ ಹುಡುಕಿಕೊಂಡು ಬಂದಂತಿತ್ತು.
ನಮ್ಮ ಮನೆ ಹತ್ತಲನು ಸೇರುವಾಗಂತೂ
ಎದೆಯು ಧಸ್ಸೆಂದಿತ್ತು.
ಬೆಚ್ಚಗಿನ ಮನೆ ನೆಲಕೆ ಕುಸಿದ ಮಣ್ಣಿನ ಗುಪ್ಪೆ
ಹಳೆ ನೆನಹುಗಳನೆಲ್ಲ, ಹುಗಿದಿಟ್ಟುಕೊಂಡು
ಬಿದ್ದಿತ್ತು ತಬ್ಬಲಿಯಾಗಿ.

ಮೇಲೆ ಬೆಳೆದಿದೆ ಹುಲ್ಲು.
ನೀರು ತುಂಬಿದ ಬಾವಿ ಬತ್ತಿ ಭಣಭಣ,
ಬಣ್ಣ ಬಣ್ಣದ ಚಟ್ಟಿಯಾಟ ಹೂಡಿದ ತೋಟ
ಕೊವಿಲ್ಲ ಹಸುರಿಲ್ಲ ಬರಿಯ ಬಟ್ಟಂಬಯಲು.
ದ್ದ ನಾಲ್ಕಾರ್ ತೆಂಗು ನಿರ್ಗತಿಕರಂತೆ
ತೋಣೆತ್ತಿ ಬಿಸುಸುಯ್ಯುತಿವೆ.
ಏನಿತೊ ತಲೆಮಾರು ಅಂಗಳಕೆ ನೆಳಲನು ಚೆಲ್ಲಿ
ಹಗಲಲ್ಲು ಕತ್ತಲನು ಹೊತ್ತ ಕಸಿಮಾವುಮರ
ಬೋಳಾಗಿ ಬಾನ್ಗೊಂದು ದೊಡ್ಡ ತೂತು.
ನೆಲದಿಂದಲೆದ್ದು ಮುಡಿವರೆಗು ಮರವನು ಸುತ್ತಿ
ಗಂಟಲನೆ ಹಿಚುಕುತಿದೆ ಒಂದು ವಿಚಿತ್ರ ಬೇರು.
ಅಂಗಳದಿ ಬೆಳೆಸಿದ್ದ ಬಂಗಾರ ಗೊಂಡೆ ಹೂ,
ಸಜ್ಜೆ, ದಾಸಾಳ, ಕರಿತುಳಸಿ, ಬಿಳಿ ನಿತ್ಯಪುಷ್ಪ
ಎಲ್ಲ ದಿಕ್ಕಾಪಾಲು.
ಅಂದು ಸಸಿಯಾಗಿ ನೀರುಂಡ ಒಂದೇ ಒಂದು ದಾಳಿಂಬೆ
ಗಿಡವಾಗಿ ಏಕಾಕಿಯಾಗಿ,
ತಲೆಯೆತ್ತರಕು ಬೆಳೆದು ನಿಂತಿದೆ. ಗೊತ್ತು ಗುರಿಯಿಲ್ಲದಲೆ,
ನಿದ್ದೆಯೊಳು ನಡೆದು ಬಂದವನಂತೆ ನಿಂತೆ—
ಅಂದು ಕಿಲಕಿಲಿಯಾಗಿ ನಿಂತ ಜಗತ್ತು
ನಿರ್ಜೀವ ದೇಹದೊಲು
ಇನ್ನೂರೊ ಮುನ್ನೂರೊ ಮೊಳದುದ್ದ ಪಾಳಿನಲಿ
ಚಳಿ-ಗಾಳಿ-ಮಳೆ-ಬಿಸಿಲುಗಳ ತಿನುತ
ಮುದುಡಿಕೊಂಡುದ ಬರಿದೆ ನಿರುಕಿಸುತ.
ಇಲ್ಲುಂಡ ತಾಯೊಲವು, ತಂದೆಯಕ್ಕರೆ, ಅಣ್ಣ-ತಮ್ಮಂದಿರ
ನಿತಾಂತ ಮಮತೆಯೇ
ಕಣ್ಣು ಕಟ್ಟಿರೆ, ಜೀವ ಮಮ್ಮಲನೆ ಮರುಗಿತ್ತು.
ಅಮ್ಮ ಹೋದಳು, ಅಣ್ಣ ಹೋದ, ಅಪ್ಪನೂ ಹೋದ
ಅವರೊಡನೆ ಈ ಲೋಕವೂ ಹೋಯ್ತು ಎಲ್ಲೊ ಮಣ್ಣಲ್ಲಡಗಿ,
ಈ ಜಗದ ರೀತಿಯಿದು,
ಹಸಿಯ ಗಾಯದೊಳಗಿಂದ ಬಸಿವ ನೆತ್ತರ ತೆರದಿ
ಬರಿಯ ವ್ಯಥೆಯೇ ಜೀವ ತುಂಬಿರಲು
ನಡುಹಗಲ ಬಿಸಿಲಲ್ಲೂ ಮುಚ್ಚಂಜೆ ಕವಿದಿತ್ತು—
ಮನಕೆಲ್ಲ ಮಂದು ಹಬ್ಬಿತ್ತು.
ಅಂದು ಇಂದಿನ ನಡುವೆ ಹನ್ನೆರಡು ವರುಷಗಳ
ಕಠೋರ ನಿಷ್ಕರುಣ ಕಾಲನದಿ ಹರದಿತ್ತು.

* ಹನ್ನೆರಡು ವರುಷಗಳ ನಂತರ ಕವಿ ತನ್ನ ಹುಟ್ಟಿದ ಹಳ್ಳಿಗೆ ಹೋದಾಗ ಕಂಡ ಅನುಭವಚಿತ್ರ ಸಂ. ಜ. ಛಾ.

ಒಲುಮೆ

(ಕಣ್ಣಕತೆ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ

●

ಹೆಣ್ಣು-ಗಂಡುಗಳಿರಡರ ಜೀವನದಲ್ಲಿ ಪ್ರಥಮಪ್ರೇಮ ವೆಂಬುದು ಮಹತ್ತ್ವದ ವಿಷಯವೇ ಸರಿ! ಕಾರಣಾಂತರ ದಿಂದ ಆ ಪ್ರೇಮಕ್ಕೆ ಭಂಗವೊದಗಿದರೆ, ಮತ್ತೊಂದು ಜೀವದೊಂದಿಗೆ ಪ್ರೇಮ ಬೆಳೆಸುವುದು ಸ್ವಾಭಾವಿಕ ವಾದುದು. ಭಾವನಾವಶಳಾಗಿದ್ದ ವಿಮಲಾ, ತನ್ನ ತಪ್ಪನ್ನು ತಾನೇ ಕಂಡುದು ಒಳ್ಳೆಯದಾಯಿತು!

●

ಸಂಗೀತವಿದುಷಿ ಪದ್ಮಾವತಮ್ಮ ಹಾಡುತ್ತಿದ್ದರು. ಸುಶ್ರಾವ್ಯವಾಗಿ ಹಾಡುತ್ತಿದ್ದರು; ಆದರೆ ಮದುವೆಮನೆಯ ಗದ್ದಲ! ಆರತಕ್ಷತೆಗಾಗಿ ಬಂದವರು ವಧೂವರರನ್ನು ನೋಡುವುದರಲ್ಲಿ, ಗುರುತು ಕಂಡವರನ್ನು ಮಾತನಾಡಿಸುವುದರಲ್ಲಿ ಅಸಕ್ತರಾಗಿದ್ದರೇ ಹೊರತು ಸಂಗೀತದತ್ತ ಗಮನಕೊಡುತ್ತಿರಲಿಲ್ಲ.

"ವರಸಾಮ್ಯ ತುಂಬಾ ಚೆನ್ನಾಗಿದೆ!"

"ಒಳ್ಳೇ ರತಿ-ಮನ್ಮಥರ ಜೋಡಿಯಮ್ಮಾ!"

"ವಿಮಲಳ ಪುಣ್ಯವೇ ಪುಣ್ಯ. ಯೋಗ್ಯ ಗಂಡ ಸಿಕ್ಕಿದ್ದಾನೆ."

'ವರನ ಪುಣ್ಯವೂ ದೊಡ್ಡದಮ್ಮ. ವಿಮಲ ಯಾವ ವಿಷಯದಲ್ಲಿ ತೆಗೆದುಹಾಕುವಂತಿದ್ದಾಳೆ?".

ಹೀಗೆ ಸಾಗಿತ್ತು ಬಂದವರ ಮಾತು-ಕತೆ.

ವಿಮಲಾ ಚೆಲುವೆ. ಅವಳ ನಸುನಗೆ ಮುಖಕ್ಕೆ ಮುತ್ತೂ ಕಾಂತಿ ಕೊಟ್ಟಿತ್ತು. ಆರತಕ್ಷತೆಗೆ ಬಂದು ಕುಳಿತಿದ್ದ ಗೆಳತಿಯರ ಮುಖ ನೋಡಿ ನಸುನಕ್ಕು, ಕಣ್ಣುಗಳಿಂದಲೇ ಸಂಭಾಷಿಸುತ್ತಿದ್ದಳು.

ಅವಳ ಆಪ್ತಗೆಳತಿ ರಮಾ ಹತ್ತಿರ ಬಂದು, ಕೈಗೆ ಟಾಯ್ಲೆಟ್ ಸೆಟ್ ಕೊಟ್ಟು "ಕಂಗ್ರಾಚ್ಯುಲೇಷನ್ಸ್ ವಿಮಲ್ ವಿಷ್ ಯು ಎ ಹ್ಯಾಪಿ ಮ್ಯಾರೀಡ್ ಲೈಫ್ (Wish you a happy married life)" ಎಂದು ಕೈ ಕುಲುಕಿದಳು.

"ನಮಸ್ತೇ. ಮಿಸ್ಟರ್ ವಿಮಲ್—ಓ, ಸಾರಿ (Sorry) ವಿಮಲ್ಸ್ ಪಾರ್ಟನರ್ (Vimala's partner)" ಎಂದು ಕೈ ಮುಗಿದಳು.

ಅವಳ ಹಾಸ್ಯ ಕಂಡು, ಆನಂದನೂ ನಕ್ಕ.

ವಿಮಲಾ ರಮಾಳ ಕಣ್ಣುಗಳನ್ನು ನೇರವಾಗಿ ನೋಡಿದಳು; ರಮಾಳ ಕಣ್ಣುಗಳಲ್ಲಿ ಯಾವುದೋ ವ್ಯಸನ ಕಂಡಿತು.

ರಮಾ ಹೋದಳು—ಅವಳ ಆ ನೋಟ ವಿಮಲಳ ನೆನಪನ್ನು ಕಲಕಿತು. ರಮಾಗೆ ನಿಜವಾಗಿಯೂ ವ್ಯಸನವೇ....ಅವಳ ಮಾತನ್ನು ತಾನು ಕೇಳಲಿಲ್ಲವಲ್ಲಾ—ಎಂದು?

ರಮಾಳ ಆ ಕೋರಿಕೆ—ಸಾಧುವಾಗಿದ್ದ ಪಕ್ಷದಲ್ಲಿ ಖಂಡಿತ ನೇರವೇರಿಸಬಹುದಾಗಿತ್ತು. ಆದರೆ ತನ್ನ ಆದರ್ಶವನ್ನೇ ತುಳಿಯು... ದ್ದ ಕೋರಿಕೆ ಅದು!

ರಮಾಳಿಗೆ ಒಬ್ಬನೇ ಅಣ್ಣ. ವಿದ್ಯಾವಂತ, ರೂಪವಂತ, ಗುಣ... ಆತ್ಮೀಯಗೆಳತಿ ವಿಮಲೆಯನ್ನು ಅತ್ತಿಗೆಯನ್ನಾಗಿ ಮಾಡಿ... ಂಬ ಆಸೆ ಅವಳಿಗೆ.

...ಳ ಆಸೆ ಸಹಜವಾದುದು. ಸ್ನೇಹವು ಸಂಬಂಧವಾಗಲೆಂದು ... ತಪ್ಪಲ್ಲ.

...ಗೂ ರಮಾಳ ಅಣ್ಣನನ್ನು ಲಗ್ನವಾಗಲು ಯಾವ ...ಕ್ಷೇಪಣೆಯೂ ಇರಲಿಲ್ಲ. ಸಲ್ಲದರೆ....

ರಮಾ ಹೇಳಿದ ಮೂರು ಮಾತು, ಒಂದೇ ಮಾತು, ಅವಳ ಕೋರಿಕೆಯನ್ನು ಭಗ್ನಗೊಳಿಸಿತು.

ರಮಾಳ ಅಣ್ಣನಿಗೆ ಇದು ಎರಡನೆಯ ಸಂಬಂಧ.

ಎರಡನೆಯ ಸಂಬಂಧ!—

ಖಂಡಿತ ಇದು ತನಗೆ ಸಾಧ್ಯವಿಲ್ಲವೆಂದಳು ವಿಮಲ—ಕಬ್ಬು ತುಂಡಿಕ್ಕಿದಂತೆ. ರಮಾ ಅವಳ ಮನವೊಲಿಸಲು ಎಷ್ಟೋ ಹೇಳಿದಳು: "ವಿಮಲ್, ನಮ್ಮಣ್ಣ ತುಂಬಾ ಗುಣವಂತರು. ನೀನೂ ಅವರನ್ನು ನೋಡಿದ್ದೀಯಾ! ಲಗ್ನವಾದ ಮೂರುತಿಂಗಳಿಗೇ ನಮ್ಮತ್ತಿಗೆ ಹೋದರು. ನಮ್ಮಣ್ಣ ಲಗ್ನವಾಗುವುದೇ ಇಲ್ಲ—ಅನ್ನುತ್ತಿದ್ದರು. ನಿನ್ನ ನೋಡಿ ನನ್ನ ಮಾತಿಗೆ ಒಪ್ಪಿದ್ದಾರೆ...."

ಅರ್ಧಕ್ಕೆ ವಿಮಲ ಮಾತನ್ನು ತಡೆದಳು: "ರಮಾ, ದಯವಿಟ್ಟು ಕ್ಷಮಿಸು. ನಿನಗಾಗಿ ಬೇರೆ ಏನು ಬೇಕಾದರೂ ಮಾಡ್ತೇನೆ. ಇದೊಂದು ಮಾತ್ರ ಸಾಧ್ಯವಿಲ್ಲ. ನಾನು ಲಗ್ನವಿಲ್ಲದೆ ಹಾಗೇ ಆದರೂ ಇದ್ದೇನು—ಎರಡನೆಯ ಸಂಬಂಧಕ್ಕೆ ಒಪ್ಪಲಾರೆ!"

ಅವಳ ಖಂಡಿತದ ಉತ್ತರ ಕೇಳಿ ರಮಾಗೆ ತುಂಬಾ ನೋವಾಯಿತು; ದುಃಖವಾಯಿತು. ಆದರೆ ವಿಮಲಳ ಮನಸ್ಸು ಸ್ಥಿರವಾಗಿತ್ತು; ಅಚಲವಾಗಿತ್ತು.

ಅವಳ ಹಟದಂತೆ ಮೊದಲನೆಯ ಸಂಬಂಧದ ವರ—ಆನಂದ—ದೊರಕಿದ್ದ. ರಮಾಳ ವ್ಯಸನಕ್ಕೆ ಇದೇ ಕಾರಣವೇ? ಅವಳಿಗೆ ಎಷ್ಟು ಹರ್ಷವಿರಬೇಕೋ ಅಷ್ಟು ಹರ್ಷವಿಲ್ಲದಿರಲು ಇದೇ ಕಾರಣವೇ?—

ಎಂದು ವಿಮಲಾ ಯೋಚಿಸಿದಳು.

ಬಿಡುಮನೆಗೆ ಗಂಡ-ಹೆಂಡಿರನ್ನು ಬಿಟ್ಟರು. ಮಂಚದ ಮೇಲೆ ಮೃದುವಾದ ಹಾಸಿಗೆ. ಮಲ್ಲಿಗೆ-ಸಂಪಿಗೆ ಹೂವುಗಳು ಹರಡಿಕೊಂಡು ಹಾಸಿಗೆಯನ್ನು ಮುಚ್ಚಿದ್ದುವು. ರೂಮಿನ ತುಂಬ ಆಕರ್ಷಕ ಪಟಗಳು. ಅವುಗಳಿಗೆಲ್ಲಾ ಹೂವಿನ ಹಾರಗಳು. ಹಸಿವಿಲ್ಲದವರ ಬಾಯಲ್ಲೂ ನೀರಿಳಿಸುವಂತಿದ್ದ ಅಂದೋಜಿ ಸಾಮಾನುಗಳು. ಹಣ್ಣು-

ತೊಂಬಲುಗಳು. ರಂಗು ರಂಗಿನ ಗಳನ್ನು ಬಿಚ್ಚಿ ಲೆಕ್ಕಾಚಾರದಲ್ಲಿ ಊದುಬತ್ತಿಯ ಪ್ಯಾಕುಗಳು!

ವಿಮಲಾ ಹೆಸರೇ, ಉಚ್ಚೆ, ಪಂಚೆಕಾಯಿಗಳಂಥ ತನ್ನ ಬಿಳಿಚಿದ ಮುಖವು ಬಿಡಿಗಣ್ಣಾಡಿಸಿ ಒಮ್ಮೆ ಚಿಪ್ಪಾಡಿಸಿದಳು—ಎಂದು ಅವಳ ಮೇಲೆ ನೋಡುತ್ತಿದ್ದ.

ವಿಮಲಾ ನಮಸ್ಕಾರಕ್ಕೆ ಪ್ರತಿಯಾಗಿ ಕೈಮುಗಿದಳು. ಅವಳ ಕಣ್ಣುಗಳನ್ನು ಅವನ ಮುಂಜಕ್ಕೆ ಹಿಡಿದಳು. ಅವಳಿಂದ ತಿಗೆದುಕೊಂಡು ಅವಳ ಕೈ ಹಿಡಿದುಕೊಂಡ.

ವಿಮಲಾ ಬೆವರಿದ ಮುಖ ಕೆನ್ನೆ ರಂಗಾಲಿಯ ವಾಡಿ ಕಣ್ಣುಗಳನ್ನು ಅವನಿಗೆ ತೆರೆದಳು.

ಅವರೆ..... ಅವನ ಮುಂದಿದ್ದ ಪ್ರಶ್ನೆ ನೋರೆ ಬೀಳಲಾಗಲಿಲ್ಲ. ಬಾಲ್ಯ ಜೀವನದಲ್ಲಿ ಎಷ್ಟೋ ಮೈಲುವಾಗಿ ಬೀಳಿದ: "ವಿಮಲಾ, ನಿನ್ನ ಬಾಳಿನಲ್ಲಿ ಇಷ್ಟೊಂದು ಮಹಾಪಾಪ. ಎಂದೆಂದೂ ಮುಗಿಯಬಾರದು ನಿನ! ವಿಮಲಾ, ಕೊನೆಯ ವರೆಗೆ ನಾವಿಬ್ಬರೂ ಜತೆಜತೆಯಲ್ಲಿ ಇದ್ದೆವು ಇಂದಿಂದು ನೋವು ಅಕ್ಷೀಯಲಿ. ನಾವು ಒಂದು!"

ವಿಮಲಾ ಗಾಳಿಕರಿಂದ ಅವನ ಮುಂಗುರುಳನ್ನೇ ಸೋಗಾಡಿದ್ದು ಚನಿಂದ ಉತ್ಪ್ರೇಜಿತನಾಗಿ ಬೀಳಿದ.

"ನನ್ನನ್ನು ಕ್ಷಮಾ ನಂಬಿದ್ದೀಯ? ವಿಮಲಾ! ಗಂಡ ಹೆಂಡತಿಲ್ಲಿ ಯಾವ ಗುಟ್ಟೂ ಇರಬಾರದು. ನನ್ನ ತಪ್ಪೆಯು ನಿನಗೆ ತಿಳಿಸಿಲಿಕ್ಕಾಗಿ ನಿನ್ನ ಹೃದಯ ನನಗೆ ತಿಳಿದಿರಬೇಕು. ಹೌದಲ್ಲವೇ ಜೀವ?"

"ಸರಿ!"

"ವಿಮಲಾ, ನಿನ್ನ ನೋಡಿದೊಡನೆ ನಲ್ಲ ಮಾನುಷಿಗೆ ಬಂದಿದು ನಿನ್ನ ಬಾಂಧವ ಗುಣ, ನಿನ್ನ ಸಜ್ಜನ. ಎಲ್ಲ ನೀಚವನ್ನೂ ತಿರುವಿ ಪ್ರೇಮಮೂರ್ತಿ ನೀನು' ಎಂದುಕೊಂಡೆ. ತಕ್ಷಣ ನಿನ್ನನ್ನೆ ಪ್ರೀತಿಸಿಕೊಂಡೆ."

ವಿಮಲಾ ಮುಗುಳ್ನಕ್ಕಳು. ಅವಳ ಕೆನ್ನೆ ಮತ್ತೂ ಕೆಂಪಾಗಿದ್ದು.

"ನಿನ್ನ ಜೀವನದ ಎಲ್ಲ ವಿಷಯಗಳನ್ನೂ ನಿನಗೆ ತಿಳಿಸುವುದು ನನ್ನ ಎಂದುಕೊಂಡೆ. ಆದರೆ ನಿನ್ನ ಎಸಿಜೀವನದ ಪಟ್ಟಿಯಿಂದಾಗಿ ಹೊರಡಿಯುತ್ತಿರುವ ಈ ವಿಷಯವಾದ ನಿನಗೆ ಹೇಳುವದರಿಂದ ನನಗೆ ಶಾಂತಿಯಿಲ್ಲ ನಮಾಧಾನವಿಲ್ಲ. ಇದನ್ನು ಕೇಳಿ ನಿನಗೆ ಅಘಾತವಾಗಿ ಪಾಗಬಹುದೋ ಏನೋ! ಹೇಳಿದೊ ಬೇಡವೋ ಎಂದು ನನ್ನೆಯಿಂದ ಯೋಚಿಸಿದೆ. ವಿಮಲಾ, ನಿನ್ನಿಂದ ಯಾವುದನ್ನೂ ಮರೆಮಾಚುವ ದಕ್ಕೂ ನನಗೆ ಸಾಧ್ಯವಿಲ್ಲ. ನಿನ್ನ ಹೇಳಿಬಿಡುತ್ತೇನೆ. ನೆನ್ನ ಒಡಗೂಡಿ ಪಡಿಮೆಯಾಗುವ್ಯದೆ ವಿಮಲಾ ವಿಶಾಲಹೃದಯಿ. ನನ್ನ ಜಘನ ಮಾಫಿಮಿಕೊಳ್ಳುವ್ಯಾಳೆ ಎಂದುಕೊಂಡಿದ್ದೀನಿ."

"ನಿಮಗೆ ಶಾಂತಿ-ಸಮಾಧಾನವಾಗುವಂಥದ್ದೆ ಹೇಳಿ ನಾನು ಸಂತೋಷದಿಂದಲೇ ಕೇಳಲು ನಾನು ಸಿದ್ಧಳಾಗಿದ್ದೇನೆ. ಹೇಳಿ!" ಎಂದಳು ಸಾನುಭೂತಿಯಿಂದ, ಪರ್ಯದಿಂದ.

"ಹಾಗಾದರೆ ಕೇಳು, ವಿಮಲಾ! 'ಈ ವಿಷಯ ನಿನಗೆ ತಿಳಿದಿಲ್ಲವೆ?' ಎಂದು ಕೇಳುವಾದರೂ ನಿನ್ನ ಕೆಲವು ಮೊದಲೇ ಹೊರಡಿಯುವಂತೆ ಇದು. ನಿನಗೆ ತಿಳಿಯುವವರೆಗೆ ನನಗೆ ಶಾಂತಿಯಿಲ್ಲ... ವಿಮಲಾ, ಒಮ್ಮೆ ಕಾಲು ಒಬ್ಬನನ್ನು ಪ್ರೀತಿಸಿದ್ದೆ, ಮದುವೆಯಾಗಿದ್ದೆ. ಪ್ರೀತಿಸಿದ್ದೆ..."

ಅವಳ ಬಿಳಿಚಿದ ಮುಖದ ಮೇಲೆ ಗೆರೆಗಳನ್ನು ನೋಡುತ್ತಿ ಕ್ಷಣ ಮಾತ್ರ ಅಲ್ಲಿಂದ ಅಳಿಸಲು ಸಿಟ್ಟಾದ ವಿಮಲಾ ಬಿಡಿಸಿ ಬಿಡಿಸಿ ಬಿಳಿಚಿಕೊಂಡ—ನೆಲವನ್ನು ಚಿಲ್ಲಿ ಗಂಭೀರವಾದ ಕಿಟ್ಟಿಗಣ್ಣನ್ನು ಅಗಾಧವಾದ ಪ್ರೀತಿಯಿಂದ ಅವನ ಅನ್ನುತ್ತಿದ್ದಳು.

ಅವಳ ಬಿಡಿದ ಕೈಯ್ಯಿ ಬೆಚ್ಚಗೆ ಬೆವರಿದ್ದನ್ನು ಮುಂದುವರಿಸಿದ, ಅವಳು ಅಸಹಾಯಕಳಾಗಿ ಬೆರಳಿದ.—

"ಆಗ ನಾನು ಬೆಳೆಯುತ್ತಿದ್ದ ಪ್ರಾಯದವಳು. ನಮ್ಮ ಮನೆಯ ಒಂದು ಭಾಗವನ್ನು ಆಗಾಗ ಒಂದು ಕಿರಿಯಾಪೆಯವರು ಆಕ್ರಮಿಸಿಕೊಳ್ಳುತ್ತಿದ್ದರು. ಅವರಲ್ಲಿ ಆಕಾಶ ಆಕೆಯೊಂದಿಗೆ ಆ ಯುವಕನ್ನು ನೋಡಿದೆ. ಅವನು ಮುಗ್ಧ ಸಹಜವಾಗಿ ನನ್ನ ಪರಿಚಯ ಬೆಳೆಸಿದ. ನಮ್ಮ ಮನೆಗೆ ಆಗಾಗ ಬರುತ್ತಿದ್ದ. ಆಗ ನಾನು ಕಾಲೇಜಿನಲ್ಲಿ ಪ್ರೀ-ಡಿಗ್ರಿ ಓದುತ್ತಿದ್ದೆ. ನಾನು ಮುಂದೆ ಬಾಯಿಲ್ಲಿ ಬೇಕಾಗಿದ್ದ ಆಗಾಗ ಆಡಿಕೊಳ್ಳುತ್ತಿದ್ದ. ಪರಿಚಯವಾಗಿ ಬಹಳ ದಿನಗಳಾದ ಮೇಲೆ ಅವನು ನನ್ನ ಪ್ರೀತಿಸುತ್ತಿದ್ದಾನೆಂದು ಅರಿವಾಯಿತು. ಅವನ ಕಾಯಿಗಳು ನಮ್ಮ ಕಾರಿಯಗಳು ಬಾಯಾ ಪ್ರೀತಿ. ಅವರಿಬ್ಬರೂ ನಾವಿಬ್ಬರೂ ಅಪೇಕ್ಷಿಸಿದ್ದರು. ನಾನು ಸಂತೋಷದಿಂದ ಒಪ್ಪಿಕೊಂಡೆ. ಅವರು ಮನೆಯವರೊಂದಿಗೆ ಮಾತನಾಡಿ ಮದುವೆಯ ಏರ್ಪಾಡುಗಳನ್ನು ಮಾಡಿದರು. ಮದುವೆಯ ದಿನ ಹತ್ತಿರವಾಗುತ್ತಿದ್ದಂತೆ ನನ್ನ ಮನಸ್ಸಿನಲ್ಲಿ ಏನೋ ಒಂದು ಬಗೆಯ ಅಸಮಾಧಾನ ಮನೆಮಾಡಿತ್ತು. ಅವನ ಕಾಯಿಗಳು ಸರಿಯಾಗಿ ಅರ್ಥವಾಗಿರಲಿಲ್ಲವೆಂದು ಅನಿಸಿ

ಬಂದಿಗಲಬಹುದು ' ಎಂದುಕೊಂಡೆ. ನಾನು ಅಂಥದಿಂದ, ಅವಳು ಗಮನ ಮಾತನಾಡಿಸಿಕೊಂಡು ಬರುವವರೆಗೂ ಕಾಫಿಕಾಗಿ ಮಾಡಿಸಿ ಸೊಳ್ಳಾಲ್ಲ—ಎಂದು ನಿರ್ಧರಿಸಿಕೊಂಡೆ. ಬಾಲ್ಕನಿಯಿಂದಲೆ ನನ್ನ ಸುತ್ತಿಗೆ ಮಾಡಿ ಅವಳ ಕಾರಿನ, ಅವಳ ಪಕ್ಕ ನಿಂದರು. ಕಾಫಿನ ಬಂದರೂ ಕಾರಣದಿಂದ ಸುಮ್ಮಾಗೆ ಇವ್ವೆ. ಬೆಳಿಗಿದಲ್ಲಿ ಅಮಾಯಕ. ನಾನು ಮಾತನಾಡಿಸಿಲ್ಲ. ನನ್ನ ಭುಜವಿಲ್ಲಿ ಕೊಂಗಿ ಬಾಲ್ಕನಿಯ ಕಡೆಗೆ ಮುಖ ಮಾಡಿದ್ದಳು. " ಇವಾಗ ನಾನೆ ಹೀಗೆ ಪ್ರಶ್ನೆ ಕಾಗಿದ್ದಾರೆ ನಾವಿಬ್ಬರು ಮಾತನಾಡಿಸಿಲ್ಲ ಅಂತ ಅನ್ನಿಸಲ್ಲ. ನನ್ನ ಭುಜವನ್ನ ಹಾಗೆ ಇಟ್ಟುಕೊಂಡೆ ಇರು " ಅಂತ ಹೇಳಿದ್ದಳು. ಅವಳ ಮಾತಿನಂತೆಯೇ ಬಹಳ ಹೊತ್ತು ನಾವು ಹಾಗೆ ನಿಂತಿದ್ದೆವು. ಮೊದಲು ಅವಳು ಮಾತಾಡಿದ್ದು " ಅಂದು ನಮ್ಮಿಬ್ಬರ ಫೈನಲ್ ಮೀಟಿಂಗ್ ಆಗಿತ್ತು. ನಾನು ಕೇಳಿದೆ " ಯಾಕೆ ಹೀಗೆ ಮಾಡಿದೆ ? " ಅಂತ. ಅವಳು ಹೇಳಿದಳು " ನಿನ್ನ ಕಣ್ಣಲ್ಲಿ ಪ್ರೀತಿ ಕಂಡಿದ್ದೆ. ಅದು ನಿಜವಾಗಿಯೂ ಪ್ರೀತಿನೆ ಆಗಿತ್ತು. ಆದರೆ ನಾನು ಅದನ್ನ ಸ್ವೀಕರಿಸಲಿಲ್ಲ. ಯಾಕೆಂದರೆ ನಿನ್ನ ಪ್ರೀತಿಯಲ್ಲಿ ಇರುವಷ್ಟು ಪ್ರೀತಿ ನನ್ನಲ್ಲಿ ಇರಲಿಲ್ಲ. ಅದಕ್ಕೆ ನಿನ್ನ ಬಿಟ್ಟು ಹೊರಟು ಹೋದೆ. ಆದರೆ ಈಗ ನಿನ್ನ ಪ್ರೀತಿ ಇನ್ನೂ ಜಾಸ್ತಿ ಆಗಿದೆ. ನಾನು ಕೂಡ ನಿನ್ನನ್ನ ಪ್ರೀತಿಸ್ತಾ ಇದ್ದೀನಿ. ಆದರೆ ಈಗ ನಾನು ನಿನ್ನ ಬಿಟ್ಟು ಹೋಗಲ್ಲ. ಯಾಕೆಂದರೆ ನಿನ್ನ ಪ್ರೀತಿ ಈಗ ನನ್ನ ಜೀವನದ ಅವಶ್ಯಕತೆ. ನಿನ್ನ ಪ್ರೀತಿ ಇಲ್ಲದೆ ನಾನು ಬದುಕಲಾರೆ. ಅದಕ್ಕೆ ನಿನ್ನ ಬಿಟ್ಟು ಹೋಗಲ್ಲ. ಇನ್ನೂ ಜೀವನ ಪೂರ್ತಿ ನಿನ್ನ ಜೊತೆನೆ ಇರ್ತೀನಿ. ಇದು ನನ್ನ ಪ್ರಾಮಿಸ್ " ಅಂತ ಹೇಳಿದಳು. ನಾನು ಅವಳ ಕಣ್ಣಲ್ಲಿ ನೋಡಿದೆ. ಅವಳ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು. ನಾನು ಅವಳ ಕೆನ್ನೆ ಮೇಲೆ ಕೈ ಇಟ್ಟು ಅವಳ ಕಣ್ಣೀರನ್ನ ಒರೆಸಿದೆ. ಅವಳು ಕಣ್ಣು ಮುಚ್ಚಿಕೊಂಡಳು. ನಾನು ಅವಳ ಹಣೆಗೆ ಮುತ್ತಿಟ್ಟೆ. ಅವಳು ಕಣ್ಣು ತೆರೆದು ನನ್ನ ನೋಡಿ " ಸಾರಿ ಕಣೋ. ನಿನ್ನ ಹರ್ಟ್ ಮಾಡಿದ್ದಕ್ಕೆ. ಇನ್ಮೇಲೆ ಹಾಗೆ ಮಾಡಲ್ಲ. ಪ್ರಾಮಿಸ್ " ಅಂತ ಹೇಳಿದಳು. ನಾನು ಅವಳ ಕೆನ್ನೆ ಸವರಿ " ಇಟ್ಸ್ ಓಕೆ. ಅದೆಲ್ಲ ಬಿಡು. ಈಗ ನಾವು ಒಂದಾಗಿದ್ದೀವಲ್ಲ ಅಷ್ಟು ಸಾಕು. ಇನ್ಮೇಲೆ ಯಾವತ್ತೂ ನಾವು ಬೇರೆ ಆಗಲ್ಲ. ಓಕೆನಾ ? " ಅಂತ ಕೇಳಿದೆ. ಅವಳು ಕಣ್ಣಲ್ಲೆ ಹೌದು ಅಂದಳು. ನಾನು ಅವಳ ಕೆನ್ನೆಗೆ ಮುತ್ತಿಟ್ಟೆ. ಅವಳು ನಾಚಿಕೊಂಡು ನಕ್ಕಳು.

" ಏನು ಯೋಚನೆಯಲ್ಲಿ ಮುಳುಗಿದ್ದೀಯ ? ನಿನ್ನ ಮಂಡೆ ಬೇಡಗೆ ಕೊಟ್ಟಿದೆ ! " ಎಂದಳು. ನಾನು ಮುಖ ಪ್ರಶ್ನೆಯಂತೆ ಮಾಡಿದ್ದಕ್ಕೆ ಗುಟ್ಟು ಬಿಡಿಸಿದಳು.

" ಅಲ್ಲಾ ಬಾಲ್ಕನಿಲಿ ನಿನ್ನ ಒಂದು ಹತ್ತು ನಿಮಿಷ ಮಾತಾಡ್ಸೋಕೆ ಅಂತಲೆ ಬಂದ್ರೆ ನೀನೇನೋ ಯಾವ್ದೋ ಲೋಕದಲ್ಲಿ ಕಳೆದೋಗಿದ್ದೆ ! " ಎಂದವಳೇ ಹಗುರಕ್ಕೆಂತೆ ಬಿಡಿಸಿಕೊಂಡಳು.

ನಾನು ಪ್ರಶ್ನಾರ್ಥಕವಾಗಿ ನೋಡಿದೆ.

ನನಗೆ ಹಸಿವಾಗುತ್ತಿದೆ. ಕಿಚನ್‌ಗೆ ಹೋಗೋಣ.

ನನ್ನ ಮಾತಿಗೆ ಅವಳು ಮುಖ ಕಿವುಚಿ ಹಿಂದೆ ಸರಿದಳು. ನಾನು ಅವಳ ಕೈಯನ್ನು ಗಟ್ಟಿಯಾಗಿ ಹಿಡಿದು ಅವಳನ್ನ ಹತ್ತಿರಕ್ಕೆ ಎಳೆದುಕೊಂಡೆ. ಅವಳ ಕಣ್ಣಲ್ಲಿ ಕಣ್ಣಿಟ್ಟು ನೋಡಿದೆ. ಅವಳು ಕಣ್ಣಲ್ಲೆ ಏನು ಎಂದು ಕೇಳಿದಳು. ನಾನು ಅವಳ ಕಿವಿಯ ಹತ್ತಿರ ಬಾಯಿ ತಂದು " ಐ ಲವ್ ಯು ಸೋ ಮಚ್ " ಅಂತ ಪಿಸುಗುಟ್ಟಿದೆ. ಅವಳು ನಾಚಿಕೊಂಡು ನಕ್ಕಳು. ನಾನು ಅವಳ ಕೆನ್ನೆಗೆ ಮುತ್ತಿಟ್ಟೆ. ಅವಳು ಕಣ್ಣು ಮುಚ್ಚಿಕೊಂಡಳು. ನಾನು ಅವಳ ಕೆನ್ನೆಯಿಂದ ತುಟಿಗೆ ಮುತ್ತಿಟ್ಟೆ. ಅವಳು ಕಣ್ಣು ತೆರೆದು ನನ್ನ ನೋಡಿ

ನಾನೂ ಒಬ್ಬ ಮನುಷ್ಯನಾಗಬೇಕು. ವಿಮಲಾ, ವಿಮಲಾ, ನೀನು ನನ್ನ ಪಾಲಿಗೆ ಶಾಂತಿ-ಸುಖಕೊಡುವ ದೇವತೆಯಾಗಬೇಕು." ಆನಂದ ಆರ್ತನಾಗಿ ಅವಳತ್ತ ನೋಡಿದ. ನೋಡಿ ಬೆದರಿದ—

ತನ್ನ ಕಥನದಲ್ಲಿ ಮಗ್ನನಾಗಿದ್ದ ಆನಂದ, ತನ್ನ ಕತೆ ಅವಳಮೇಲೆ ಯಾವ ಪರಿಣಾಮ ಮಾಡುತ್ತಲಿದೆ ಎಂಬುದನ್ನು ಗಮನಿಸಿರಲಿಲ್ಲ—

ವಿಮಲಾಳ ಮುಖ ಬಿಳಿಚಿತ್ತು. ಕಲ್ಲುಗೊಂಬೆಯಂತೆ ನಿಶ್ಚಲವಾಗಿ ಕುಳಿತಿದ್ದಳು. ಕೈ ಮೈ ಎಲ್ಲಾ ಸೆಟೆದುಕೊಂಡಿತ್ತು.

"ಏಕೆ, ವಿಮಲಾ? ಏಕೆ ಹಾಗೆ ನೋಡುತ್ತೀಯಾ? ಏನಾದರೂ ಹೇಳು! ನನ್ನ ಬೇಗೆ ಶಾಂತವಾಗುವಂತೆ ಏ ಹೇಳು!" ಎಂದು ಅವಳ ಕೈ ಹಿಡಿದ....ತುಂಬಿದ ಉದ್ವೇಗಗಳಿಂದ.

ವಿಮಲಾ ಕೈ ಕೊಸರಿಕೊಂಡು ಹಾಸಿಗೆಯ ಮೇಲೆ ಬಿದ್ದಳು ಮಲಗಿ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು—ದುಃಖ ಕಟ್ಟೆಯೊಡೆದ ಕೆರೆಯಂತೆ ನುಗ್ಗಿಕೊಂಡು ಬಂದಿತು.

ಆನಂದ ಭ್ರಾಂತನಾದ. ಚಕಿತನಾದ. ಏನು ಮಾಡಬೇಕೆಂದು ತಿಳಿಯದಾದ. ಅವನ ಸಾಂತ್ವನವಚನ ಬೆಂಕಿಗೆರೆದ ತುಪ್ಪದಂತೆ ಅವಳ ಅಳಲನ್ನು ಮತ್ತೂ ಪ್ರಜ್ವಲಿಸಿತು.

ಹೇಳಬಾರದಾಗಿತ್ತೇ? ತಾನು ಈ ವಿಷಯವನ್ನು ತನ್ನ ಎದೆಯಲ್ಲೇ ಅಡಗಿಸಿಕೊಳ್ಳಬೇಕಾಗಿತ್ತೇ?

ವಿಮಲ ಅಷ್ಟು ಒಳ್ಳೆಯವಳು, ಅಷ್ಟು ಮೃದು ಹೃದಯಿ, ತನ್ನ ದುಃಖ ಕಂಡು ಅನುಕಂಪ ಬೀರಿ ಶಮನಮಾಡುವಳೆಂದು ಭಾವಿಸಿದ್ದೆ—ಅದು ತಪ್ಪೇ?

"ವಿಮಲಾ, ಏಳು! ದಯವಿಟ್ಟು ಕ್ಷಮಿಸು! ನಾನು ಹೇಳಿದ್ದು ತಪ್ಪಾಯಿತೇ? ನಿನಗಿಷ್ಟು ವ್ಯಾಕುಲವಾಗುತ್ತೆ ಎಂದು ತಿಳಿದಿದ್ದರೆ ಹೇಳುತ್ತಿರಲಿಲ್ಲ. ನಿನ್ನ ಕೇಳಿಕೊಳ್ಳುತ್ತೇನೆ—ನನ್ನ ತಪ್ಪೇನು ಹೇಳು. ಹೇಳು ವಿಮಲಾ! ನೀನು ಅಳುವುದನ್ನ ನೋಡಿ ನನ್ನೆದೆ ಹೇಗೆ ಬೇಯುತ್ತಿದೆ ಗೊತ್ತೇ?" ಎಂದ ದೀನನಾಗಿ.

ವಿಮಲಳ ಅಳು ಕಡಮೆಯಾಯಿತ್ತು. ಮೇರೆಯರಿಯಿಸಿದ ಸಂತಾಪ, ತಿರಸ್ಕಾರ ಅವಳೆದೆಯಲ್ಲಿ ಉಕ್ಕಿ ಉಕ್ಕಿ ಬಂದಿತು. ಅವಳ ಕಣ್ಣುಗಳು ಜ್ವಲಿಸಿದುವು.

ತಟ್ಟನೆದ್ದು ಕುಳಿತಳು. ಅವಳ ಬಿಗಿದ ಮುಖದಿಂದ ಮಾತುಗಳು ಸಿಡಿದುವು:—

"ನಿಮ್ಮ ತಪ್ಪೆ? ಏಕೆ ನನ್ನ ಹೃದಯವಾನ ಭಗ್ನಮಾಡಿದಿರಿ? ಹೇಳಿ, ಏಕೆ ಭಗ್ನಮಾಡಿದಿರಿ? ಓ, ದೇವರೇ—ನನ್ನ ಯಾವ ಪಾಪಕ್ಕಾಗಿ ಈ ಭಯಂಕರ ಶಿಕ್ಷೆ ಕೊಟ್ಟೆ?"

ವಿಮಲಾ ಉದ್ರಿಕ್ತಳಾಗಿ, ಕೈಯಿಂದ ತಲೆ ಗಟ್ಟಿಸಿಕೊಂಡಳು. ಆನಂದ ಏನೋ ಹೇಳಲು ಬಾಯ್ದೆರೆದುದನ್ನು ಕಂಡು, ಅವನಿಗೆ ಅವಕಾಶ ಕೊಡದೆ ಮತ್ತೆ ಹೇಳಿದಳು:—

"ಇದು ಮೋಸ, ಶುದ್ಧ ಮೋಸ! ನಿಮ್ಮ ಪ್ರೇಮ ಬೆರೆಡೆಯಿದ್ದ ಮೇಲೆ, ಏಕೆ ಲಗ್ನಕ್ಕೆ ಒಪ್ಪಿದಿರಿ? ನನ್ನ ಜೀವನಾನೂ ಏಕೆ ಹಾಳು ಮಾಡಿದಿರಿ? ನೀವು ಹೇಡಿಗಳು. ಶುದ್ಧ ಹೇಡಿಗಳು! ನಿಮ್ಮ ಹೇಡಿತನದಿಂದ, ವನಮಾಲೆಯ ಜೀವನಾನ ನರಕ ಮಾಡಿದಿರಿ. ನನ್ನ ಜೀವನಾನ ಅಸಹನೀಯ ಮಾಡಿದಿರಿ. ವನಮಾಲೆಯ ನೆನಪಿನಿಂದ ನೀವು ಲಗ್ನವಾಗದೇ ಉಳಿಯಲು ಸಾಧ್ಯವಿರಲಿಲ್ಲವೇ? ಏಕೆ ನನ್ನ ಲಗ್ನವಾದಿರಿ?"

ವಿಮಲಾ ಎದೆಯುಮ್ಮಳಿಸಿ ತಡೆಯಲಾರದೆ, ಎರಡೂ ಕೈಯಿಂದಲೂ ಮುಖಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು—ಮಾತುಗಳು ಅಗೋಮ್ಮೆ ಈಗೊಮ್ಮೆ ಸಿಡಿಯುತ್ತಿದ್ದುವು.

"ದೇವರೇ....ನನ್ನ ಆದರ್ಶವೆಲ್ಲಾ ಮಣ್ಣುಮುಕ್ಕಿತು! ಎರಡನೆಯ ಸಂಬಂಧ ಬೇಡ ಅಂದೆ. 'ಆದು ಪ್ರೇಮವಲ್ಲ, ಬರಿಯ ಕಾಮ' ಎಂದು ಹೀಗಳೆದೆ! ನನಗೆಂತಹ ವಿಷದ ತುತ್ತು ಕಾದಿದೆ ದೇವರೇ... ಹೇಗೆ ನಾನು ಸೈರಿಸಲಿ? ನನ್ನೆದೆ ಒಡೆದು ಹೋಗುತ್ತಿದೆಯಲ್ಲಾ...."

"ವಿಮಲಾ!"

"ನಿಮ್ಮ ಪ್ರೇಮ ವನಮಾಲಿಗೆ....ನಿಮ್ಮ ಕಾಮ ನನಗೆ! ನನ ಆಶಾಗೋಪುರಗಳೆಲ್ಲಾ ಕುಸಿದುಬಿದ್ದುವು. ಅಯ್ಯೋ....ನನ್ನ ದುರವಸ್ಥೇನ ಯಾರಲ್ಲಿ ಹೇಳಿಕೊಳ್ಳಲಿ? ಹೇಗೆ ಸೈರಿಸಲಿ? ನನಗಾಗಿ ಮರುಗುವರು ಯಾರು?"

ವಿಮಲೆಯ ಮೈಯೆಲ್ಲಾ ದುಃಖದಿಂದ ಅದುರಿತು.

"ವಿಮಲಾ, ಕ್ಷಮಿಸು. ಸಾವಿರ ಸಲ ಬೇಡುತ್ತೇನೆ—ಕ್ಷಮಿಸು! ನಾನು ಮಹಾಪರಾಧಿ—ನಿಜ. ಆದರೂ ದಯೆ ತೋರಿಸು, ವಿಮಲಾ! ನಿನ್ನ ಮಾತುಗಳು ಹೇಗೆ ನನ್ನ ಘಾಸಿಮಾಡ್ತಾ ಇವೆ—ಸ್ವಲ್ಪ ಯೋಚಿಸು, ವಿಮಲಾ! ಸ್ವಲ್ಪ ನಿಧಾನಿಸು...."

ಪಶ್ಚಾತ್ತಾಪ, ಆಪಾರವೇದನೆ ತುಂಬಿತ್ತು ಅವನ ಮುಖದಲ್ಲಿ.

ವಿಮಲಳ ಕೋಪ ಮತ್ತೂ ಹೆಚ್ಚಿತು.

"ಈ ಬಣ್ಣದ ಮಾತುಗಳಿಗೇನು? ನಿಮಗೆ ಘಾಸಿಯಾಗುವುದೇ? ನನ್ನೆದೆ ಹೇಗೆ ಛಿದ್ರಛಿದ್ರವಾಗಿದೆ ಗೊತ್ತೇ? ಅಯ್ಯೋ, ಸಾವಾದರೂ ಬಂದು ನನ್ನನ್ನು ಈ ಸಂಕಟದಿಂದ ಬಿಡಿಸಬಾರದೇ? ಹೇಗೆ ನಾನು ಮುಖವೆತ್ತಿ ತಿರುಗಲಿ? ನಿಮ್ಮ ಮನಸ್ಸು ಅಲ್ಲಿದೆ. ಇದೆಂತಹ ಮದುವೆ? ಇದೂ ಎರಡನೆಯ ಸಂಬಂಧ! ಇದೂ ಎರಡನೆಯ ಸಂಬಂಧ!"

ಆನಂದ ಕೇಳಲಾರದೆ, ಅವಳವಸ್ಥೆ ನೋಡಲಾರದೆ, ತಲೆತಗ್ಗಿಸಿ ಕಿವಿಮುಚ್ಚಿಕೊಂಡ—

"ವಿಮಲಾ, ಈಗೇನು ಮಾಡಲಿ ಹೇಳು! ನಿನ್ನ ಹೇಗೆ ಸಮಾಧಾನಮಾಡಲಿ? ನನ್ನದು ಶತಾಪರಾಧವಾಯಿತು!"

"ಏಕೆ ಮದುವೆಗೆ ಮೊದಲೇ ನನಗೀ ಮಾತು ಹೇಳಲಿಲ್ಲ? ನಾನು ಲಗ್ನವಿಲ್ಲದೆ ಹಾಗೆಯೆ ಇರುತ್ತಿದ್ದೆ. ಏಕೆ ನೀವು ಹೇಳಲಿಲ್ಲ?"

ವಿಮಲಾ ಉಗ್ರಳಾಗಿ ಕೇಳಿದಳು.

"ಹೌದು. ತಿಳಿಸಬೇಕಾಗಿತ್ತು. ಆದರೆ ಎಲ್ಲಿ ನಮಗೆ ಅವಕಾಶವಿತ್ತು? ಅಲ್ಲದೇ ಮುಚ್ಚುಮರೆಯಿಲ್ಲದೆ ಎಲ್ಲ ಗುಟ್ಟನ್ನೂ ನಿನಗೆ ಹೇಳೋಣವೆನ್ನಿಸಿದ್ದು ಮೊನ್ನೆ ನಮ್ಮ ಮದುವೆಯಲ್ಲೇನೇ!"

ವಿಮಲಾ ಹಲ್ಲುಕಡಿದಳು.

" ಹೌದು, ಹೌದು, ವಿವಾಹಬಂಧನದಿಂದ ನನ್ನನ್ನು ಬಿಗಿದು, ಬೇರೆ ಮಾರ್ಗವಿಲ್ಲದಂತೆ ಮಾಡಿ, ನನ್ನೆದೆ ತುಳಿಯಲು ಯೋಚಿಸಿದಿರಾ? ಅಬ್ಬಾ, ಎಂತಹ ಸ್ವಾರ್ಥ, ಎಂತಹ ವಂಚನೆ! ನಿಮಗೆ ಪುಣ್ಯಬರುತ್ತೆ—ನನ್ನ ಜೀವನಾನೂ ಕೊನೆಗಾಣಿಸಿಬಿಡಿ; ಕೊನೆಗಾಣಿಸಿಬಿಡಿ! ನನಗೆ ಇಷ್ಟು ವಂಚನೆ ಸಹಿಸಲು ಸಾಧ್ಯನಿಲ್ಲ; ಸಾಧ್ಯವಿಲ್ಲ ..."

ಆನಂದ ನಿರಾಶೆಯಿಂದ, ದುಃಖದಿಂದ ತಲೆಯ ಮೇಲೆ ಎರಡು ಕೈಗಳನ್ನೂ ಹೊತ್ತು ಕುಳಿತುಬಿಟ್ಟ. ಅವನ ಕಣ್ಣಿಂದ ನೀರು ತುಳುಕಿತು.

ನಿಮಲಾಗೆ ಈ ಮೌನ ಮತ್ತೂ ಅಸಹನೀಯವಾಯಿತು. ಅವನ ಕಣ್ಣೀರನ್ನು ಕಂಡು ಅವಳ ಸಂತಾಪ ಮೇರೆಮೀರಿತು.

" ಹೆಂಗುಸಿನಂತೆ ಏಕೆ ಅಳ್ತೀರಾ? ಮಾಡೋದುಮಾಡಿ, ಅತ್ತರೆ ಪರಿಹಾರವಾಗುತ್ತೆದೆಯೇ? ನಿಮ್ಮ ಹೇಡಿತನಕ್ಕೆ ಎರಡು ಹೆಣ್ಣುಕ್ಕಳ ಬಾಳು ಬಲಿಯಾಗಿದೆ! ನಿಮಗಿನ್ನೂ ತೃಪ್ತಿಯಿಲ್ಲವೇ? ನಾನು ಈ ಸಂಕಟ ಸಹಿಸಲಾರೆ. ನಾನು ಆತ್ಮಹತ್ಯಮಾಡಿಕೊಂಡು ಬಿಡ್ತೀನೆ. ಆಗಲಾದರೂ ತೃಪ್ತಿಹೊಂದಿ ಸುಖವಾಗಿರಿ! "

ಆನಂದ ತನ್ನ ಕೈಗಳಿಂದ ತನ್ನೆದೆಯನ್ನು ಒತ್ತಿಕೊಂಡು ನಿಡುಸುಯ್ದ:

" ವಿಮಲಾ, ವಿಮಲಾ, ನೀನು ಇಷ್ಟು ನಿಷ್ಠುರಳಾಗಬೇಡ. ಅಯ್ಯೋ, ಆಯ್ಯೋ, ನನ್ನೆದೆ ಹೇಗೆ ಬಿರಿದು ಹೋಗ್ತಿದೆ, ನೋಡು-ಕೈಮುಗಿದು ಬೇಡುತ್ತೀನೆ. ಇಷ್ಟು ಕಠೋರಳಾಗಬೇಡ. ಪಶ್ಚಾತ್ತಾಪದಿಂದ ನನ್ನೆದೆ ದಗ್ಧವಾಗಿಹೋಗಿದೆ ವಿಮಲಾ! ನಾನು ಯಾವ ರೀತಿ ನಡೆದುಕೊಳ್ಳಬೇಕು ಹೇಳು, ನೀನು ತೋರಿಕೊಟ್ಟಂತೆ ನಡೆಯುತ್ತೀನೆ. " ಎಂದ, ತುಂಬಿ ಬಂದ ವೇದನೆಯಿಂದ ಆರ್ತತೆಯಿಂದ.

ವಿಮಲಾ ವಿಷಾದದಿಂದ ನಕ್ಕಳು.

" ನಿಮಗೆ ನಡತೆ ತೋರಿಕೊಡಲು ನಾನ್ಯಾರು? ನಾನು ಭಾಗ್ಯಹೀನೆ—ನತದೃಷ್ಟೆ. ನಿಮ್ಮನ್ನ ಎಷ್ಟು ಪ್ರೀತಿಸಿದ್ದೆ. ನಿಮ್ಮ ಸುತ್ತಲೂ ಎಷ್ಟು ಕನಸುಕಟ್ಟಿದ್ದೆ, ಗೊತ್ತೇ? ನಿಮ್ಮಿಂದ ಒಡವೆ ವಸ್ತು ಒಂದನ್ನೂ ನಾನು ಬಯಸಲಿಲ್ಲ—ನಾನು ಬಯಸಿದ್ದು ನಿಮ್ಮ ಒಲುಮೆನ; ನಿಮ್ಮ ಪ್ರೇಮಾನ. ನಾನು ನಿರ್ಭಾಗ್ಯೆ—ನನಗೆ ದೊರತದ್ದು ಕಾಮ? ವನಮಾಲೆ ನಿಂಕ್ಕೂ ಭಾಗ್ಯಶಾಲಿನಿ, ನಿಮ್ಮ ಪ್ರೇಮ ಪಡೆದಳಲ್ಲ! ಹಾಯ್. ಈ ಬೇಗುದಿನ ನಾನು ಹೇಗೆ ಅಡಗಿಸಿಕೊಳ್ಳಲಿ? ನಿಮ್ಮ ಸ್ವಾರ್ಥದ ಹೊರತು ಬೇರೆ ಏನನ್ನಾದರೂ ಯೋಚಿಸಿದ್ದೀರಾ? ನನ್ನ ಸುಖ-ಸಂತೋಷದ ಬಗ್ಗೆ ರವೆಯಷ್ಟಾದರೂ ಯೋಜಿಸಿದ್ದರೆ, ನೀವು ಹೀಗೆ ಮಾಡುತ್ತಿದ್ದಿರಾ? "

ಆನಂದನ ಹೃದಯ ಚೀರಿಟ್ಟಿತು—"ವಿಮಲಾ, ನಾನು ನಿನ್ನನ್ನು ಪ್ರೀತಿಸಿದ್ದೇನೆ ತುಂಬಾ ಪ್ರೀತಿಸಿದ್ದೇನೆ—ಅದ್ದರಿಂದಲೇ ಹೃದಯದ ಗುಟ್ಟು ಹೇಳಿದೆ. "

ಆದರೆ ಅವನ ಬಾಯಿಂದ ಮಾತು ಹೊರಡಲಿಲ್ಲ. ತಾನು ಯಾವ ಮಾತನಾಡಿದರೂ ಪರಿಣಾಮ ವಿಪರೀತವಾಗಿ ಅವಳ ಬಾಯಿಂದ ಹುರಿವ ಕಾಳಿನಂತೆ ಮಾತು ಫಟಫಟ ಸಿಡಿಯುವುದೆಂದು ತಿಳಿದ.

ತನ್ನ ದುಗುಡವನ್ನು ಹಾಗೇ ಅಡಗಿಸಿಕೊಂಡು, ನಿಡುಸುಯ್ಯುತ್ತಾ ಮೌನಿಯಾದ.

ವಿಮಲೆಗೆ ದುಃಖ, ರೋಷ, ಅಪಮಾನ, ಸಂತಾಪ. ಅವಳೆದೆಯನ್ನು ಎಲ್ಲ ಭಾವನೆಗಳೂ ಉಲ್ಲೋಲ-ಕಲ್ಲೋಲಗೊಳಿಸಿದ್ದುವು.

ಆ ನ್ಯುದುವಾದ ಶಯ್ಯೆ ಮುಳ್ಳಿನ ಹಾಸಿಗೆ; ಅವನ ಸ್ಪರ್ಶ ಯ ಸ್ಪರ್ಶದಷ್ಟು ಅಹಿತ—ಅವಳ ಪಾಲಿಗೆ.

ತನ್ನ ಬಾಳಿನ ಕಾಳರಾತ್ರಿ ಇದೆಂದು ದುಃಖಿಸುವ ಅವಳನ್ನು ನಂದನ ಎದೆಯೂ ಕುದಿಯಿತು. ಅವನ ಸಾಂತ್ವನ ವಚನ ವನ್ನು ಮತ್ತೂ ಹೆಚ್ಚಿಸುತ್ತಿತ್ತು. ಆನಂದ ಮಾತನಾಡದೆ ನೇ ನೋಯುತ್ತಿದ್ದ.

ಹರಿಯಿತು. ನಾಗಸ್ವರ ಮೊಳಗಿತು.

ಕದಿಂದ ಮಿಡಿಯುತ್ತಿದ್ದ ಅವರ ಮನಸ್ಸಿಗೆ, ಅಪಸ್ವರದಂತೆ ಭಾಸವಾಯಿತು.... ಮಂಗಳವಾದ್ಯಧ್ವನಿ.

ವಿಮಲಾ ಮೇಲೆದ್ದಳು.

" ಏಳಿ. ವಾದ್ಯ ಮೊಳಗುತ್ತಿದೆ. ತೋರಿಕೆಯ, ಪ್ರೇಮ-ನಾಟಕದ ಮದುವೆ! ಸ್ವಸುಖಕ್ಕಾಗಿ ನಾಲ್ಕುಮಂದಿಯ ಸುಖ ಹಾಳು ಮಾಡುವವಳು ನಾನಲ್ಲ; ಮದುವಣಿಗಿತ್ತಿಯ ಪಾತ್ರಾನ ಪೂರ್ಣ ನಟಿಸಿಬಿಡ್ತೇನೆ. ನಾನಿಬ್ಬರೂ ಜನರ ಕಣ್ಣಲ್ಲಿ ಗಂಡ-ಹೆಂಡಿರು, ತುಂಬಾ ಸುಖಿಗಳು! ಹಾಗೇ ನಟಿಸಬೇಕಾಗಿದೆ. ನನ್ನ ಪಾತ್ರ ಎಷ್ಟು ಕಷ್ಟ ನೋಡಿ! ಹೃದಯದಲ್ಲಿ ಅಸಹನೀಯ ದುಃಖ, ನಿರಾಶೆ ತುಂಬಿದೆ; ಆದರೆ ಅತಿ ಸುಖಿಯಂತೆ ನಟಿಸಬೇಕು. ನಿಜವಾಗಿ ನಾವಿಬ್ಬರೂ ಅಪರಿಚಿತರು—ನಮ್ಮಿಬ್ಬರ ಮಧ್ಯೆ ದಾಟಲಾರದ ದೊಡ್ಡ ಕಂದಕ ಇದೆ. ನಾವು ಕೇವಲ ಗೆಳೆಯರು ಎಂದುಕೊಳ್ಳೋಣ. ನಾಟಕದಲ್ಲಿ ಮಾಡುವಂತೆ ಪಾತ್ರ ನಟಿಸಿಬಿಡೋಣ! ಏಳಿ! " ಎಂದು ನಿಡುಸುಯ್ದಳು.

ಆನಂದ ಅವಳ ಕೆಂಗಣ್ಣು ನೋಡಿ ತಲೆ ತಗ್ಗಿಸಿದ—

" ನನ್ನ ಕ್ಷಮಿಸು ವಿಮಲಾ...." ಎಂದು ನಿಡುಸುಯ್ದ.

ವಿಮಲಾ ಉಗುಳುನುಂಗಿಕೊಂಡು, ದುಗುಡ ಅಡಗಿಸಿಕೊಂಡಳು " ಏಳಿ. ನಿಮ್ಮನ್ನು ಕ್ಷಮಿಸಲು ನಾನಾರು? ಪಾತ್ರಾಭಿನಯ ಚೆನ್ನಾಗಿರಲಿ! "

ವಿಮಲಾ—ಆನಂದರ ನಟನೆ ಚೆನ್ನಾಗಿತ್ತು. ವಿಮಲೆ ಅತಿ ಭಾಗ್ಯಶಾಲಿನಿ—ಎಂದು ಎಲ್ಲರೂ ಭಾವಿಸಿದರು. ಅವಳ ನಡೆ-ನುಡಿಗಳಲ್ಲಿ ಯಾವ ನ್ಯೂನತೆಯೂ ಕಂಡುಬರುತ್ತಿರಲಿಲ್ಲ. ಆನಂದನೊಡನೆಯೂ ಸರಸವಾಗಿ ಸಂಭಾಷಿಸುವಳು.

ಆದರೆ, ಆದರೆ....,

ಬೇರಾರೂ ಇಲ್ಲದೆ ಆನಂದ ಒಂಟಿಯಾಗಿ ಸಿಕ್ಕಿದಾಗ ಮಾತ್ರ, ತನ್ನ ವಾಗ್ಬಾಣಗಳಿಂದ ಅವನನ್ನು ಹಣ್ಣುಮಾಡುವಳು. ಅವನಿಗೆ ಘಾಸಿಯೆನಿಸುವುದೆಂದು ಅವಳಿಗೂ ಗೊತ್ತು. ಆದರೆ ಅವನಿಗೆ ನೋವಾದರೆ ಅವಳು ತನ್ನ ಸಹಜಸ್ವಭಾವದಂತೆ ಮರುಗುತ್ತಿರಲಿಲ್ಲ; ಅವನ ನೋವು ಅವಳಿಗೆ ಸೇಡುತೀರಿಸಿಕೊಂಡಾಗಿನ ಮಾದಕ ತೃಪ್ತಿಯನ್ನು ಕೊಡುತ್ತಿದ್ದಿತು.

ಆದರೂ ಒಮ್ಮೊಮ್ಮೆ ವಿಚಾರ ಶಕ್ತಿ ಈ ಭಾವನೆಗಳ ಮೇಲೆದ್ದು,

ಅವಳು ತನ್ನ ನಡತೆಯನ್ನು ವಿಮರ್ಶಿಸಿಕೊಳ್ಳುವಂತೆ ಮಾಡುವುದ ಒಂದು ನೇಳೆ ಅವನ ಸ್ಥಾನದಲ್ಲಿ ತಾನಿದ್ದರೆ? ತಾನು ಹೇಗೆ ನಡೆದು ಕೊಳ್ಳುತ್ತಿದ್ದೆ.... ? ಅವಳ ಸಾನುಭೂತಿ, ದಯಾಗುಣ ಆ ಕ್ಷಣ ಮೇಲೇಳುವುವು.

ಆನಂದನಿಗೆ ದಿಕ್ಕು ತೋಚದಂತಾಗಿತ್ತು. ವಿಮಲೆಯನ್ನ ಹೇಗೆ ಸಂತಯಿಸುವುದೆಂದು ತಿಳಿಯದಾದ. ಅವಳು ಏನೇ ಆ ಆಡಲಿ, ತಲೆ ತಗ್ಗಿಸಿ ಕೇಳುವನು; ಮೌನವಾಗಿ ಸಹಿಸುವನು.

ಕಡೆಗೆ ಒಂದು ಪರಿಹಾರ ಹೊಳೆಯಿತು. ಅದಷ್ಟು ಮ ಮಥಿಸಿದ. ಭಾಯಿ ಬಿಟ್ಟು ಸೂಚಿಸಲು ಅವನಿಗೆ ಅಂಜಿ

ನಿಮಲಳ ವಾಗ್ಬಾಣ ತಾಳಲಾರದೆ ಅಡಿಯೇ ಬಿಟ್ಟ

"ವಿಮಲಾ, ನಿಜ—ನಾನು ತಪ್ಪು ಮಾಡಿದ್ದೇನೆ. ಯಿಂದ ಈಗ ನೋಡಿದ್ದೇನೆ. ನಿನ್ನ ದುಃಖ, ನಿರಾಶೆ ನನಗರ್ಥವಾಗಿದೆ. ಈಗ ಏನು ಮಾಡಲಿ? ನಿನಗೆ ಸಮಾಧಾನವಾಗುವಂತೆ ಏನುಮಾಡಲಿ? ನನಗೊಂದು ಪರಿಹಾರ ಹೊಳೆಯುತ್ತಿದೆ—ನೀನು ವಿವಾಹಬಂಧನ ದಿಂದ ಮುಕ್ತಳಾಗಿ, ಬೇರೊಬ್ಬನನ್ನು ಲಗ್ನವಾಗು. ನನ್ನ ಹೃತ್ಪೂರ್ವಕ ಒಪ್ಪಿಗೆ ಕೊಡುತ್ತೇನೆ."

ವಿಮಲಾ ಶಾಂತಳಾಗುವುದಿರಲಿ—ಕೆರಳಿಬಿಟ್ಟಳು. ಕಠೋರ ವಾಗಿ ಉತ್ತರಿಸಿದಳು:—"ಆಹಾ! ಎಂತಪ ಹಾರ! ಹೃತ್ಪೂರ್ವಕ ಒಪ್ಪಿಗೆಯೇ? ಆ 'ಹೃತ್' ನಿಮಗಿದೆಯೇ? ಪ್ರೇಮ ಅಂದರೆ ನಿಮಗೆ ತಿಳಿದಿದೆಯೇ? ನಿಮ್ಮ ಅಳತೆಗೋಲಿನಿಂದ ನಮ್ಮ ಪ್ರೇಮಾನ ಅಳೆಯು ಬೇಡಿ. ನನ್ನ ದೇಹದ ಅಣುಅಣುವನ್ನು ದಹಿಸಿದರೂ ಜೇರೆಯವ ನನ್ನು ನೆನೆಯಲು ಸಾಧ್ಯವಿಲ್ಲ. ನಿಮಗೇನೋ ಪರಿಹಾರ ಸಿಕ್ಕುತ್ತದೆ—ಇನ್ನೊಬ್ಬಳನ್ನು ಮಾರನೆಯ ದಿನವೇ ಲಗ್ನವಾಗ್ತೀರಿ!"

ಆನಂದ ಪೆಚ್ಚಾಗಿ ತಲೆತಗ್ಗಿಸಿದ.

* * * *

ವಿಮಲಾ ಆನಂದನ ಮನೆಗೆ ಬಂದು ವಾರ ಕಳೆದಿದೆ. ಆದರೂ ಅವರಿಬ್ಬರ ನಡುವಿನ ವಿರಸ ಕುಗ್ಗಿಲ್ಲ. ಹೊರನೋಟಕ್ಕೆ ಅದರ್ಶ ಜೋಡಿ—ವಾಸ್ತವವಾಗಿ ಪರಕೀಯರಂತಿದ್ದಾರೆ.

ಸಂಜೆಯ ಸಮಯ. ಕಾಂಪೌಂಡಿನಲ್ಲಿ ಮಲ್ಲಿಗೆಯ ಕಮಾನಿನ ಕೆಳಗೆ ಆನಂದ ಕುಳಿತಿದ್ದಾನೆ. ತನ್ನ ಜೀವನ ಹೀಗೆಯೇ ಅಪರಿಹಾರ್ಯ ಚಿಂತೆಯಲ್ಲಿ ಸಾಗಬೇಕೇ?—ಎಂದು ಯೋಚಿಸುತ್ತಿದ್ದಾನೆ.

ಅವನಿಗೆ ಕಾರಣವಲಕ್ಕಿ ಕೊಡಲು ತಂದ ವಿಮಲಾ ಮರೆಯಲ್ಲಿ ನಿಂತು ಹಾಗೇ ನಿಟ್ಟಿಸಿದಳು:—

ನಿಜ, ವಾರದಲ್ಲಿ ಆನಂದ ಎಷ್ಟು ಕಳೆಗುಂದಿದ್ದಾನೆ. ಮುಖದಲ್ಲಿ ಚಿಂತೆ ಬರೆದಂತಿದೆ. ಎಷ್ಟು ಮನೋನೀದನೆಯಿಂದ ಬಳಲಿದ್ದಾನೋ!—

ಛೇ, ನನ್ನ ನಡತೆ ಸರಿಯೋ? ಆ ದಿನ ಅವರು ಗುಟ್ಟು ಹೇಳ. ದಿದ್ದರೆ.... ಈ ವಿಷಯವನ್ನು ಹಾಗೆಯೆ ಅಡಗಿಸಿದ್ದರೆ....?

ತನ್ನಲ್ಲಿ ನಂಬಿಕೆಯಿಟ್ಟು, ಹೇಳಿದ್ದೇ ತಪ್ಪಾಯಿತೇ?

ತಾನೇ ಆ ಸ್ಥಾನದಲ್ಲಿದ್ದರೆ....ಆಗ....?

ಅನುಕಂಪ ಎದೆ ತುಂಬಿ ಬಂದಿತು.

ತಾನು ಎಷ್ಟು ಹಂಗಿಸಿ ಭಂಗಿಸಿದರೂ ಮೌನವಾಗಿ ಸಹಿಸಿ ದ್ದಾರೆ! ಎಷ್ಟು ವೇದನೆಯಾಯಿತೋ, ಪಾಪ!

ಅವಳ ಕಣ್ಣುಗಳು ತೇವವಾದುವು.

ಮೆಲ್ಲನೆ ಅವನ ಬಳಿಗೆ ಬಂದಳು. ಆನಂದನಿಗೆ ಅವಳತ್ತ ನೋಡಲೂ ಅಂಜಿಕೆ. ಅವಳ ದೃಷ್ಟಿಯನ್ನು ಸಂಧಿಸುವುದಕ್ಕೇ ಸಂಕೋಚ. ಕಾರದನಲಕ್ಕಿ ಕೈಗೆ ತೆಗೆದುಕೊಂಡು:

"ವಿಮಲಾ, ನಿನ್ನದಾಯಿತೇ?" ಎಂದ—ಅವಳ ಮುಖ ನೋಡದೆ.

ಮರುಕ್ಷಣ ಖಿನ್ನನಾದ—ಅವಳು ನಿತ್ಯದಂತೆ:

"ನನ್ನದಾದರೆಷ್ಟು, ಹೋದರೆಷ್ಟು? ನಿಮ್ಮದು ಮುಗಿದರೆ ಎಲ್ಲ ಮುಗಿದಂತೆಯೇ ಇಲ್ಲವೇ?" ಎಂಬ ವಾಗ್ಬಾಣಬಿಡುವಳೆಂದು-ನೆನೆದು.

ವಿಮಲ ತತ್‌ಕ್ಷಣ ಅವನ ಮನೋಭಾವ ಗ್ರಹಿಸಿದಳು. ಉಕ್ಕಿ ಬಂದ ಮರುಕದಿಂದ ಅವನ ಪಕ್ಕದಲ್ಲಿ ಕುಳಿತು:

"ಇಲ್ಲ; ನಮ್ಮಿಬ್ಬರಿಗೂ ಇದೇ ಸಾಕಲ್ಲಾ!" ಎಂದಳು ಮೃದುವಾಗಿ.

ಆನಂದ ಈ ಹೊಸ ವರ್ತನೆ, ಈ ಹೊಸ ನಯ ಕಂಡು ಚಕಿತ ನಾಗಿ ನೋಡಿದ.

ಅವಳ ಕಣ್ಣುಗಳಲ್ಲಿ ನೀರು ತುಂಬಿತ್ತು. ನೋಟದಲ್ಲಿ ಪ್ರೇಮ ವಿತ್ತು, ಅನುಕಂಪವಿತ್ತು.

ಕ್ಷಣ ಇಬ್ಬರೂ ಮೌನವಾಗಿದ್ದರು.

ಅವನ ಪ್ರಶ್ನೆಯ ನೋಟ ಕಂಡು, ವಿಮಲಾ ನಿಡುಸುಯ್ದು ಹೇಳಿದಳು:

"ಎಲ್ಲಾ ಮರೆತುಬಿಡಿ. ನಿಮ್ಮನ್ನ ಏನೇನೋ ಅಂದು ತುಂಬಾ ನೋಯಿಸಿದೆ! ಕ್ಷಮಿಸಿ; ಈ ದಿನದಿಂದ ಹೊಸಬಾಳು ಪ್ರಾರಂಭಿಸೋಣ. ನಿಮ್ಮನ್ನು ಮೊದಲಿನಂತೆ ಪ್ರೀತಿಸಬಲ್ಲೆ ಎನ್ನಿಸುತ್ತಿದೆ. ನೀವೂ ಸಹ ನನ್ನನ್ನು ಬಾಳಗೆಳತಿಯಂತೆ ಪ್ರೀತಿಸಲು ಸಾಧ್ಯ ಎನ್ನಿಸುತ್ತಿದೆ. ಯತ್ನಿಸಿ ನೋಡೋಣವೇ?"

ಆನಂದನ ಮುಖ ಬೆಳಗಿತು. ಹಿಗ್ಗಿ, ಅವಳ ಕೈಗಳನ್ನು ತನ್ನ ಎದೆಯುಮೇಲಿಟ್ಟುಕೊಂಡು,

"ವಿಮಲಾ, ಈದಿನ ಧನ್ಯನಾದೆ. ನನ್ನ ವಿಮಲಾ ನನಗೆ ಸಿಕ್ಕಿದಳು! ನಿನ್ನ ಪ್ರೇಮ....ಅತ್ಮೀಯತೆಗಳನ್ನು ಬಯಸಿಯೇ ನಾನು ನನ್ನ ಎದೆಯ ಗುಟ್ಟನ್ನೆಲ್ಲಾ ನಿನ್ನ ಮುಂದೆ ಹೇಳಿದ್ದು. ಕಾಮ-ಪ್ರೇಮ ಗಳ ನಿರ್ಧಾರ ಬಹು ಕಷ್ಟ ವಿಮಲಾ! ತಪ್ಪನ್ನೆಲ್ಲಾ ಒಪ್ಪಿ ನಿನ್ನ ಮುಂದೆ, ಒಪ್ಪಿ ನಿಂತಿದ್ದೇನೆ ನನ್ನ ಪರಿಗ್ರಹಿಸಿ ರಕ್ಷಿಸುವ ಭಾರ ನಿನ್ನದು ದೇವಿ!" ಎಂದ, ಎದೆಯಿಂದ ಬಂದ ನೇರ ಧ್ವನಿಯಲ್ಲಿ.

ವಿಮಲಳ ಹಿತವಾದ ಸ್ಮಿತದಲ್ಲಿ ಅವನಿಗೆ ಉತ್ತರಸಿಕ್ಕಿತ್ತು.

ವಿಮಲಾ ತುಂಬುನೋಟದಿಂದ ಅವನನ್ನು ನೋಡಿ ನಿಡು ಸುಯ್ದಳು—'ಎಷ್ಟು ಯಾತನೆ ಕೊಟ್ಟೆ!' ಎಂದು ಊಹಿಸಿ.

ಆನಂದ ಅವಳ ಭಾವನೆಯನ್ನೋದಿದ.

"ರೇಡಿಯೋದಲ್ಲಿ ನಾಗಸ್ವರ ಬರುತ್ತಿದೆ. ವಿಮಲಾ, ಈ ದಿನ ನಮ್ಮ ಬಾಳಲ್ಲಿ ಮಂಗಳವಾದ್ಯ ನಿಜವಾಗಿ ಮೊಳಗಿತು" ಎಂದ.

ವಿಮಲಾ ನಸುನಕ್ಕಳು—ಪೂರ್ಣ ಅನುಮೋದಿಸುತ್ತಾ.

ಗುಂಡೂಮಾವನ ಗುರುತು

ಭಾರತದ ಪ್ರಥಮ ಸ್ವಾತಂತ್ರ್ಯಸಂಗ್ರಾಮ

ಶ್ರೀ. ಪಿ. ವಿ. ಗೌ ಹೊಸದಿಲ್ಲಿ

ಪ್ರಸಂಗಕ್ಕೆ ಅನುಗುಣವಾಗಿ ಐತಿಹಾಸಿ ತಮ್ಮ ಸತ್ಯಸ್ವರೂಪವನ್ನು
ಅಡಗಿಸಿಕೊಂಡು, ಎಂತೆಂತಹ ಬಣ್ಣಗಳ ಂಬುದು, ಆಶ್ಚರ್ಯಕಾರಕ
ಸಂಗತಿಯಾಗಿದೆ. ಇಲಹಿರ ಬಂಡಾ ತಂತ್ರ್ಯಯುದ್ಧ' ಎಂದು
ಬಣ್ಣಬದಲಿಸಿಕೊಂಡ ಂಗತಿ!

ಎಂದಿನಂತೆ ಸಂಜೆಯ ಮುಂದೆ ನಾವೆಲ್ಲ, ಗುಂಡೂಮಾಮಾನ ಮನೆಯ ಮುಂದಿನ ಕಟ್ಟೆಯ ಮೇಲೆ ಹರಟೆಕೊಚ್ಚುತ್ತ ಕುಳಿತಿದ್ದೆವು; ಆದರೆ ಪ್ರತಿದಿನದ ರಂಗು ಬಂದಿರಲಿಲ್ಲ ಹರಟೆಗೆ! ಕಾರಣವೆಂದರೆ ಗುಂಡೂಮಾಮಾ ಏನೋ ಯೋಚನೆಯಲ್ಲಿ ಕುಳಿತಂತೆ ಇತ್ತು. ಶೀನಪ್ಪ ಕಾರಣವನ್ನು ಕೇಳಿಯೇ ಬಿಟ್ಟರು. ಗುಂಡೂಮಾಮಾ ಅಹುದೆಂದು ತಲೆಯಲ್ಲಾಡಿಸಿ ಹೇಳಿದರು: "ಇದು ನೋಡು, ಶೀನಪ್ಪಾ, ನನಗೀಗ ೭೦ ವರ್ಷಗಳಾಗುತ್ತ ಬಂದಿದೆ ದೇವರ ಕರೆ ಎಂದು ಬರುತ್ತದೆಯೋ ಹೇಳಲಿಕ್ಕಾಗದು. 'ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್' ಎಂಬ ಹಿರಿಯರ ಮಾತು ಮೇಲಿಂದಮೇಲೆ ನೆನಪಾಗುತ್ತದೆ. ಆದ್ದರಿಂದ ಈ ಸಾರೆ ಬದರೀಯಾತ್ರೆ ಮಾಡಿಕೊಂಡು ಬರೋಣವೆ—ಎಂದು ಯೋಚಿಸುತ್ತಿದ್ದೇನೆ. ಮೊದಲಿನಷ್ಟು ಈಗ ಕಠಿಣವೇನಿಲ್ಲ; ಎಷ್ಟೋ ಜನ ಹೋಗಿಬರುತ್ತಿದ್ದಾರೆ."

ಯಾವಾಗಲೂ ಪೌರಾಣಿಕ, ಐತಿಹಾಸಿಕ, ರಾಜಕೀಯ ವಿಷಯಗಳನ್ನೆತ್ತಿಕೊಂಡು, ತನ್ನದೇ ಆದ ಒಂದು ವಿಶಿಷ್ಟರೀತಿಯಲ್ಲಿ ಹೇಳಿ ನಮ್ಮನ್ನೆಲ್ಲ ನಗಿಸುತ್ತಿದ್ದ ಗುಂಡೂಮಾಮಾ, ಈಗ ಈ ವೈರಾಗ್ಯಭರಿತ ಮಾತುಗಳನ್ನಾಡುವುದನ್ನು ಕೇಳಿ ನಮಗೆಲ್ಲ ಆಶ್ಚರ್ಯವಾಯಿತು. ಗುಂಡೂಮಾಮಾ ನಮಗೆಲ್ಲರಿಗೂ 'ಸರ್ವಜ್ಞ', ಯಾವುದೇ ವಿಷಯವಾಗಲಿ, ಗುಂಡೂಮಾಮಾನಿಗೆ ಗೊತ್ತಿಲ್ಲದಿಲ್ಲ. ಆದರೆ ಅವುಗಳಿಗೆ ಅತನು ಹೇಳುವ ಅರ್ಥವೇ ಬೇರೆ. ನಾವು ತಿಳಿದುಕೊಂಡಿರುವುದಕ್ಕಿಂತ ಸಂಪೂರ್ಣ ಬೇರೆಯಾದರೂ, ನಾವು ಅವುಗಳನ್ನು ಅಲ್ಲಗಳೆಯುವಂತೆಯೂ ಇರುತ್ತಿರಲ್ಲಿಲ್ಲ. ಯಾಕೆಂದರೆ ಗುಂಡೂಮಾಮಾ ಹೇಳುವುದನ್ನೆಲ್ಲ ಸಕಾರಣವಾಗಿ ಹೇಳುತ್ತಿದ್ದರು. ಭಗವದ್ಗೀತೆಯನ್ನೇ ಉದಾಹರಣವಾಗಿ ತೆಗೆದುಕೊಳ್ಳೋಣ: 'ಅರ್ಜುನನಿಗೆ ವೈರಾಗ್ಯ ಹುಟ್ಟಿ, ಯುದ್ಧ ಮಾಡುವುದನ್ನು ಬಿಟ್ಟು ಕುಳಿತುಕೊಂಡ; ಶ್ರೀಕೃಷ್ಣನು ಗೀತೆಯನ್ನು ಉಪದೇಶಿಸಿ ಅವನನ್ನು ಯುದ್ಧಕ್ಕೆ ಅಣಿಗೊಳಿಸಬೇಕಾಯಿತು! ಇದು ಎಲ್ಲರಿಗೂ ಗೊತ್ತಿದ್ದ ಮಾತು. ಆದರೆ ಗುಂಡೂಮಾಮಾ ಹೇಳುವುದೇ ಬೇರೆ: 'ನಿಜವಾಗಿಯೂ ಅರ್ಜುನನು ಹೆದರಿದ್ದ. ತನ್ನ ಗುರುಗಳು, ಅಣ್ಣತಮ್ಮಂದಿರು, ಮಿತ್ರರು — ಎಲ್ಲರೂ ತನ್ನ ಸಂಗಡ ಕಾದಲಿಕ್ಕೆ ನಿಂತದ್ದನ್ನು ನೋಡಿ ವೈರಾಗ್ಯಹುಟ್ಟಬೇಕಾಗಿದ್ದರೆ, ಉತ್ತರ ಗೋಗ್ರಹಣ ಾದಲ್ಲಿ ಯಾಕೆ ಹುಟ್ಟಲಿಲ್ಲ? 'ಮೈಬೆವರು ಹುಟ್ಟಿ, ದೇಹವೆಲ್ಲ ಕಂಪಿಸುತ್ತ, ಗಾಂಡೀವವನ್ನು ಹಿಡಿಯುವುದಕ್ಕಾಗದೆ.....' ಇವೆಲ್ಲ ವೈರಾಗ್ಯದ ಲಕ್ಷಣಗಳೇ? ಅವನಿಗೆ ನಿಜವಾಗಿಯೂ ಹೆದರಿಕೆ; ಕೃಷ್ಣನಿಗೆ ಇದು ಗೊತ್ತಾಯಿತು. ಅವನು ಕೂಡಲೇ ಉತ್ತರಕೊಟ್ಟ. "ಕ್ಲೈಬ್ಯಂ ಮಾಸ್ಮಗಮಃ ಪಾರ್ಥ' ಎಂದು! ಅರ್ಜುನನು ಹೆದರಿರದೆ, ನಿಜವಾಗಿಯೂ ಆತನಿಗೆ ವೈರಾಗ್ಯ ಹುಟ್ಟಿದ್ದರೆ, ಕೃಷ್ಣನೂ ಈ ತೆರನಾಗಿ ಉತ್ತರ ಕೊಡುತ್ತಿರಲಿಲ್ಲ.

'ನೀವು ಬದರೀಯಾತ್ರೆಗೆ ಹೊರಡುವುದೆಂದು? ತಿರುಗಿ ಬರಲಿಕ್ಕೆ ಎಷ್ಟು ದಿವಸ ಹಿಡಿಯಬಹುದು?' ಎಂದು ಶೀನಪ್ಪ ಕೇಳಿದರು.

'ಎರಡು-ಎರಡೂವರೆ ತಿಂಗಳುಗಳು ಬೇಕಾಗಬಹುದು. ಬದರೀನಾಥ ಒಂದೇ ಅಲ್ಲ; ದಾರಿಯಲ್ಲಿ ಅನೇಕ ಪೌರಾಣಿಕ, ಐತಿಹಾಸಿಕ ಪ್ರಸಿದ್ಧ ಸ್ಥಳಗಳೆಷ್ಟೋ ಇವೆ. ಇಲ್ಲಿಯ ವರೆಗೆ ಕೇಳಿದ್ದಷ್ಟೇ ಆಗಿದೆ. ನೋಡುವ ಸುಯೋಗ ಲಭಿಸಿದರೆ ಒಳ್ಳೆಯದಲ್ಲವೇ?' ಗುಂಡೂಮಾಮಾ ಹೇಳಿದರು.

'ಹಾಗಾದರೆ ನಾವೇ ಕೃತಾರ್ಥರೆಂದು ತಿಳಿಯಬೇಕು. ನೀವು ಎರಡು ತಿಂಗಳುಗಳಲ್ಲಿ ನೋಡಿ ಬಂದದ್ದನ್ನು, ನಾವು ಎರಡು ವರ್ಷಗಳಿಗಿಂತ ಹೆಚ್ಚು ದಿನ ನಿಮ್ಮಿಂದ ಕೇಳುತ್ತೇವೆ.' ಎಂದು ಒಬ್ಬರು ವಿನಿಗೂಡಿಸಿದರು.

'ಗುಂಡೂಮಾಮಾ, ನೀವು ಬರುವಾಗ ದಿಲ್ಲಿಯಲ್ಲಿ ೨-೩ ದಿವಸ ಇಳಿದು ಬರಬೇಕು. ಮುಂದಿನ ವರ್ಷ, ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಶತಾಬ್ದಿಯನ್ನು ಸರಕಾರದವರು ಆಚರಿಸುವವರಿದ್ದಾರೆ.

ಏನೇನು ತಯಾರಿ ನಡೆದಿದೆಯೋ ನೋಡಿ ಬಂದು ಹೇಳಬೇಕು ಎಂದು ರಂಗಪ್ಪನವರು ನುಡಿದರು.

ಗುಂಡೂಮಾಮಾ ಒಳ್ಳೇ ಆಶ್ಚರ್ಯದಿಂದ ಕೇಳಿದರು: 'ಏನು, ಭಾರತ ಸರಕಾರದವರು ಆ ಸಿಪಾಯಿಗಳ ಬಂಡಾಯದ ಶತಾಬ್ದಿಯನ್ನು ಆಚರಿಸುತ್ತಾರೆಯೇ? ಅದಕ್ಕೆ ಸ್ವಾತಂತ್ರ್ಯಸಂಗ್ರಾಮವೆ ಯಾರು ಕರೆಯುತ್ತಾರೆ? ಸ್ವದೇಶಾಭಿಮಾನದಿಂದ ಬ್ರಿಟಿಶರ ಯಾರೂ ಆದರಲ್ಲಿ ಹೋರಾಡಿಲ್ಲ. ಆದರಲ್ಲಿ ಮುಂದಾಳ ನಾವು ತಿಳಿದುಕೊಂಡವರು, ದೇಶಪ್ರೇಮದಿಂದ,—ಭಾರತದ ಕ್ಯಾಗಿ—ಆತ್ಮಸಮರ್ಪಣೆ ಮಾಡಲು ಬಂದವರಲ್ಲ. ಅವರು ಗಳಾದ ರೀತಿಯೇ ಬೇರೆ. ಆಗಿನ ಕಾಲ ಮತ್ತು ಪರಿಸ್ಥಿತಿ ಮಾಡಿದುವು. ಸಂಪೂರ್ಣವಾಗಿ ಅದರ ಇತಿಹಾಸ ಬರೆಯಲಿಕ್ಕೆ ಭಾರತ ಸರಕಾರ ಶತಾಬ್ದಿ ಮುಂತಾದ ಕೆಲಸಗಳಲ್ಲಿ ಕೈಹಾಕ ಬೇಕಾಗಿತ್ತು!'

ರಂಗಪ್ಪನವರಿಗೆ ಸ್ವಲ್ಪ ಅಪಮಾನವಾದಂತಾಯಿತು. ತಮ್ಮ ಇತಿಹಾಸ ತೆಗೆದುಕೊಂಡು B. A. ಆಗಿದ್ದರೂ, ಗುಂಡೂಮಾಮಾ ಹೀಗೆ ಹೇಳಿದ್ದನ್ನು ಕೇಳಿ 'ಅಲ್ಲರೀ' ಸಾವರಕರರವರು ಪುಸ್ತಕ ಬರೆದಿದ್ದಾರೆ 'First war of Independence' ಎಂದು. ಅದೆಲ್ಲವೂ ಹಾಗಾದರೆ ಅರ್ಥವಿಲ್ಲದ್ದೇ?' ಎಂದು ಕೇಳಿದರು.

ಗುಂಡೂಮಾಮಾ ಹೇಳಿದರು: 'ನನ್ನ ಅಭಿಪ್ರಾಯವನ್ನಷ್ಟೇ ಹೇಳುವುದಿಲ್ಲ. ನಿಮಗೆ ಡಾ. ಆರ್. ಸಿ ಮುಜುಮದಾರರು ಗೊತ್ತು ಇರಬಹುದಲ್ಲವೇ? ನೀವು ಹಿಸ್ಟರಿ ಸ್ಕಾಲರ್; ಮುಜುಮದಾರರಂತಹ ದೊಡ್ಡ ಹಿಸ್ಟೋರಿಯನರ ಗೊತ್ತು ನಿಮಗೆ ಇಲ್ಲದಿರಲಿಕ್ಕಿಲ್ಲ. ಅವರು ಹೇಳಿದ ಮಾತನ್ನೇ ಹೇಳುತ್ತಿದ್ದೇನೆ. ಕಾಂಗ್ರೆಸ್ ಚಳವಳಿಯಲ್ಲಿ ಜನರಿಗೆ ಸ್ಫೂರ್ತಿ, ಹುಮ್ಮಸ್ಸು, ಧೈರ್ಯ ಬೇಕಾಗಿತ್ತು. ಅವರಲ್ಲಿಯ ದೇಶಾಭಿಮಾನ, ದೇಶಪ್ರೇಮ ಉಜ್ವಲಗೊಳಿಸಬೇಕಾಗಿತ್ತು. ಅದಕ್ಕಾಗಿ ಸಿಪಾಯಿಬಂಡಾಯಕ್ಕೇನೇ ಸ್ವಾತಂತ್ರ್ಯಸಂಗ್ರಾಮದ ರೂಪ ಕೊಟ್ಟು, ಬ್ರಿಟಿಶರ ಗುಂಡಿಗೆ ಆಹುತಿಯಾದವರನ್ನೆಲ್ಲ ದೇಶಾಭಿಮಾನಿಗಳೆಂದು ಹೊಗಳಿದ್ದಾಯಿತು. 'ಯುದ್ಧದಲ್ಲಿ ಏನು ಮಾಡಿದರೂ ಸರಿಯೇ, ಜಯ ಸಿಕ್ಕರಾಯಿತು!' ಎಂಬ ತತ್ತ್ವವನ್ನು ಅವಲಂಬಿಸಬೇಕು. ಮುಜುಮದಾರರೇ ಕೇಳಿದ್ದಾರೆ:—ಬರೆದದ್ದನ್ನು ಸಿದ್ಧಮಾಡಿ ತೋರಿಸಲಿಕ್ಕೆ ಸಮರ್ಥರಿರುವರೇ—ಎಂದು, ಸಾವರಕರರಿಗೆ.

'ನಾನಾಸಾಹೇಬ, ಝಾಂಸೀ ಲಕ್ಷ್ಮೀಬಾಯಿ, ಬಹದ್ದೂರ್‌ಶಹ ಇವರೆಲ್ಲ ದೇಶಪ್ರೇಮಿಗಳಲ್ಲವೇ? ಸುಮ್ಮಸುಮ್ಮನೇ ಯುದ್ಧದಲ್ಲಿ ಮಡಿದರೇ?' ರಂಗಪ್ಪನವರು ಮತ್ತೆ ಪ್ರಶ್ನಿಸಿದರು.

'ಇವರೆಲ್ಲ ಬ್ರಿಟಿಶರೊಡನೆ ಯುದ್ಧಮಾಡುತ್ತ ಮಡಿದದ್ದು ನಿಜ; ಆದರೆ ದೇಶಪ್ರೇಮ, 'ದೇಶಾಭಿಮಾನ ಜಾಗೃತವಾಗಿ ಬ್ರಿಟಿಶರೊಡನೆ ಯುದ್ಧಕ್ಕೆ ಸಿದ್ಧರಾಗಲಿಲ್ಲವೆಂಬುದೂ ನಿಜ. ಪರಿಸ್ಥಿತಿ ಹಾಗೆ ಬಂದಿತು. ನಿಜವಾಗಿಯೂ ನೋಡಿದರೆ, ಇವರು ಬ್ರಿಟಿಶರ ಮಿತ್ರರೆಂದೇ ಹೇಳಬೇಕು. ಆದರೆ ಪರಿಸ್ಥಿತಿಯ ಮೂಲಕ ಇವರು ಯುದ್ಧಕ್ಕೆ ಸಿದ್ಧರಾಗಿ ಗತ್ಯಂತರವಿರಲಿಲ್ಲ. ಸ್ವಾತಂತ್ರ್ಯಸಂಗ್ರಾಮದ ಮುಖ್ಯ ಮುಂದಾಳೆಂದು ನಾವು ತಿಳಿದ ಬಾಹದ್ದೂರ್‌ಶಹನ ಉದಾಹರಣೆಯನ್ನೆ ತೆಗೆದುಕೊಳ್ಳೋಣ: ಬಂಡಿನವರು ಬಂದು ಬಹಾದ್ದೂರ್‌ಶಹನ ಬಾಗಿಲು ಬಡಿಯುವವರೆಗೆ ಬಂಡಿನ ಸುದ್ದಿಯೇ ಅವನಿಗಿರಲಿಲ್ಲ. ಬಂಡೆಬ್ಬಿಸಿದವರಿಗೆ ಹಣ ಬೇಕಾಗಿತ್ತು, ಮುಂದಾಳೆಂದು ಹೇಳಿಕೊಳ್ಳಲಿಕ್ಕೆ ಒಬ್ಬ ದೊಡ್ಡ ಮನುಷ್ಯನ ಹೆಸರು ಬೇಕಾಗಿತ್ತು. ಬಹದ್ದೂರ್‌ಶಹ ಆಕಜುಬುರುಕ, ಹೇಡಿ! ಹೆದರಿಸಿದ ಕೂಡಲೆ ಹಣ ಕೊಡಲಿಕ್ಕೊಪ್ಪಿದ; ವತ್ತು ಗ ಪ್ರಚಾರರ ಮುಖಾಂತರವಾಗಿ ಆಗ್ರಾದ ಗವ್ಹರ್ನರ್‌ನಿಗೆ ಪತ್ರ ಕಳುಹಿ, ಬಂಡಾಯವನ್ನೆದುರಿಸಲಿಕ್ಕೆ ಸಿದ್ಧರಾಗಿರಬೇಕೆಂದು ಎಚ್ಚರಿಸಿದ ಬಗ್ಗೆ ಸಾಕಷ್ಟು ಆಧಾರಗಳಿವೆ. ಬಂಡಿನ ಸಿಪಾಯರು ಹಣ ಬೇಕಾದಾಗ, ಬಹದ್ದೂರಶಹನನ್ನು ಹೆದರಿಸಿ ಹಣ ತೆಗೆದುಕೊಂಡು, ಅವನು ತಮ್ಮ ಮುಂದಾಳೆಂದು ಜನರಿದುರಿಗೆ ಹೇಳುತ್ತಿದ್ದರು. ಏನು ರಂಗಣ್ಣಾ, ಇಂತಹ ಹೇಡಿಯಲ್ಲಿ ಯಾವ ದೇಶಪ್ರೇಮವನ್ನು ಕಾಣುತ್ತೀ?

ಇನ್ನು ನಾನಾಸಾಹೇಬ! ಇವನಂತೂ ಬ್ರಿಟಿಶರ ಮಿತ್ರನೆಂಬುದು ಎಷ್ಟೋ ಜನರಿಗೆ ಗೊತ್ತಿದ್ದ ಮಾತೇ ಆಗಿದೆ. ಬ್ರಿಟಿಶರೇ ಇವನನ್ನು ಕಾನಪುರದ ರಕ್ಷಣೆಗಾಗಿ ಕರೆಯಿಸಿಕೊಂಡಿದ್ದರು. ಒಪ್ಪಿಕೊಂಡೇ ಅವನು ಬಂದಿದ್ದ. ಆದರೆ ಮುಂದೆ ಸ್ವಲ್ಪ ದಿವಸಗಳಾದ ನಂತರ ದಿಲ್ಲಿಯು ಬಂಡಿನವರ ವಶವಾದ ಬಳಿಕ, ಇವನಲ್ಲಿ ಮತ್ತೆ ಸ್ವಾರ್ಥ ಹುಟ್ಟಿ ಪೇಶವೆಯಾಗಬೇಕೆಂಬ ಆಲೋಚನೆ ತಲೆದೋರಿತು. ಮುಂದಾಳುಗಳಿಲ್ಲದೆ, ಕೊಲೆ-ಸುಲಿಗೆಗಳಲ್ಲಿಯೇ ಮಗ್ನರಾಗಿದ್ದ ಬಂಡುಗಾರರಿಗೆ ಸಹಾಯಕನಾಗಿ ನಿಂತುಕೊಂಡ. ಇಂತಹ ಸ್ವಾರ್ಥಿಯಲ್ಲಿ ಯಾವ ದೇಶಪ್ರೇಮ ಕಾಣುತ್ತೀ ರಂಗಣ್ಣ?

ಕ್ರೀಡಾಂಗಣ

(ಕವನ ಸಂಕಲನ)

ಬರೆಹಗಾರರು:

ಎನ್. ಎಸ್. ಗದಗೆಕರ

ಇದರಲ್ಲಿ ವಿವಿಧವಿಷಯಗಳನ್ನು ವಸ್ತುವನ್ನಾಗಿ ಇರಿಸಿಕೊಂಡು ಬರೆದ ೩೬ ಕವನಗಳಿರುವವು. ಶ್ರೀ. ಆನಂದಕಂದರ ಮುನ್ನುಡಿಯನ್ನೊಳಗೊಂಡಿದೆ.

ಕ್ರಾ. ಅ ೬೦ ಪುಟ

ಬೆಲೆ ೧ ರೂಪಾಯಿ

ಮುಖ್ಯ ಮಾರಾಟಗಾರರು:—

ಮನೋಹರ ಗ್ರಂಥಭಾಂಡಾರ, ಧಾರವಾಡ



ಇನ್ನು ಝಾಂಸಿಯ ರಾಣಿ ಲಕ್ಷ್ಮೀಬಾಯಿ! ಇವಳು ಶೂರಳೂ ಆಹುದು; ಧೀರಳೂ ಆಹುದು; ಆದರಂತೆ ಕೋಮಲಾಂತಃಕರಣಿಯೂ ಆಹುದು. ಆದರೆ ಇವಳೂ ಬ್ರಿಟಿಶರೊಡನೆ ಮಿತ್ರತ್ವದಿಂದಲೇ ಇದ್ದಳೆಂಬುದಕ್ಕೆ, ಕೆಲವೇ ದಿವಸಗಳ ಮೊದಲು ನಾಗಪುರದಲ್ಲಿ ಸಿಕ್ಕ ಎರಡು ಪತ್ರಗಳೇ ಸಾಕ್ಷಿಯಾಗಿವೆ. ಬಂಡಾಯವನ್ನು ಮುರಿಯಲಿಕ್ಕೆ ಹೊರಡುವಾಗ ಸಾಗರದ ಕಮಿಶನರನು ಬರೆದ ಪತ್ರಗಳಿವು. ತಾನು ತಿರುಗಿ ಬರುವವರೆಗೆ ರಾಜ್ಯಸೂತ್ರಗಳನ್ನು ಕೈಯಲ್ಲಿ ತೆಗೆದುಕೊಳ್ಳಲಿಕ್ಕೆ ಲಕ್ಷ್ಮೀಬಾಯಿಗೆ ಕೇಳಿಕೊಂಡಿದ್ದಾನೆ ಇವುಗಳಲ್ಲಿ. ಅದರಂತೆ ಕೆಲವು ದಿವಸ ಅವಳು ರಾಜ್ಯದಾಡಳಿತವನ್ನು ನಡೆಯಿಸಿದಳು. ಅದೇ ವೇಳೆಗೆ ಬಂಡಾಯದಲ್ಲಿ ನಡೆಯುತ್ತಿದ್ದ ಕೊಲೆಸುಲಿಗೆ ಅತ್ಯಾಚಾರಗಳಿಗೆ ಹೇಸಿಕೊಂಡು, ಕಂಡರಿ ಕೊಲ್ಲದೆ ಬಿಡರೆಂದು, ಝಾಂಸಿಯ ಕೋಟೆಯಲ್ಲಿಯ ಯುರೋಪಿಯನ್ ಹೆಣ್ಣುಮಕ್ಕಳ, ಹುಡುಗರ ಸಂರಕ್ಷಣೆಗಾಗಿ ಟೊಂಕಕಟ್ಟಿದಳು. ಪುಂಡರಿಗೆ ಸಹಾಯ ಮಾಡುವುದಕ್ಕಂತೂ ಎಷ್ಟುಮಟ್ಟಿಗೂ ಸಿದ್ಧಳಿರಲಿಲ್ಲ. ಝಾಂಸಿಯಲ್ಲಿ ಯುರೋಪಿಯನರಿರುವರೆಂದು ತಿಳಿದೊಡನೆ, ಪುಂಡರ ಕಣ್ಣು ಅತ್ತ ಹೊರಳಿತು. ಲಕ್ಷ್ಮೀಬಾಯಿ ಅವರಿಗೆ ಆಸ್ಪದ ಕೊಡಲಿಲ್ಲ. ಅವರೂ ಬಿಡಲಿಲ್ಲ. ಕಡೆಗೆ ಅವರು, ಇಂತಿಷ್ಟು ಹಣ ಕೊಟ್ಟರೆ ಅವರನ್ನು ಕೊಲ್ಲುವುದಿಲ್ಲವೆಂದು ವಚನ ಕೊಟ್ಟ ಬಳಿಕ, ಆ ಹೆಣ್ಣುಮಕ್ಕಳ ಮತ್ತು ಹುಡುಗರ ಜೀವನದ ಕಡೆಗೆ ಲಕ್ಷ್ಯವಿಟ್ಟು, ಅಕೆ ಹಣ ಕೊಟ್ಟಳು. ಪುಂಡರಿಗೆ ಹಣ ಸಿಕ್ಕ ಬಳಿಕ ಕೊಟ್ಟ ವಚನ ಮರೆಯಿತು. ಪಾಪ! ಆ ಹೆಣ್ಣುಮಕ್ಕಳ ಹುಡುಗರ ಜೀವನಾಂತವೂ ಆಯಿತು. ಯಥಾಪ್ರಕಾರ ಲಕ್ಷ್ಮೀಬಾಯಿಯು ತಮ್ಮ ಮುಂದಾಳೆಂದೂ ಬೇಕಾದಷ್ಟು ಹಣದ ಸಹಾಯ ಮಾಡಿದಳೆಂದೂ ಹೇಳಿಕೊಳ್ಳುತ್ತ ಮುಂದುವರೆದರು.

ಇವೆಲ್ಲ ಸಂಗತಿಗಳನ್ನು ನೋಡಿದರೆ, ಅದೇ ವೇಳೆಗೆ ನರಗುಂದ, ಮುಂಡರಗಿಗಳಲ್ಲಿ ಆದ ಸಣ್ಣ ಪುಟ್ಟ ಕಾಳಗಗಳಲ್ಲಿ ಮಾತ್ರ ಆ ಸಂಸ್ಥಾನಿಕರಲ್ಲಿಯ ಸ್ವಾತಂತ್ರ್ಯಪ್ರೇಮ ಕಂಡುಬರುತ್ತದೆ. ಭಾರತದ ಸ್ವಾತಂತ್ರ್ಯವೆನ್ನುವ ಮಟ್ಟಿಗೆ ಅವರಲ್ಲಿ ವಿಶಾಲದೃಷ್ಟಿ ಇರದಿದ್ದರೂ, ತಮ್ಮ ಸಂಸ್ಥಾನದ ಸ್ವಾತಂತ್ರ್ಯ ಕಾಯ್ದುಕೊಳ್ಳಬೇಕು, ಆಲ್ಲಿ ಪರದೇಶದವರ ಪ್ರಭುತ್ವ ಬರಬಾರದು—ಎಂಬ ಉದ್ದೇಶದಿಂದ ಕೊನೆಯ

ಗೂ ಯುದ್ಧಮಾಡಿದವರಲ್ಲಿ ನರಗುಂದ ಬಾಬಾಸಾಹೇಬ, ಂಡರಗಿ ಭೀಮರಾಯ ಮುಂತಾದವರ ಹೆಸರನ್ನು ನಾವು ಹೆಮ್ಮೆಯಿಂದ ಹೇಳಬಹುದು. ತಮ್ಮ ಚಿಕ್ಕ ಬಲದಿಂದ ಬ್ರಿಟಿಶರನ್ನು ಮದುರಿಸಲಾರೆವೆಂದು ಸಂಪೂರ್ಣವಾಗಿ ಅರಿತಿದ್ದರೂ, ಸ್ವಾತಂತ್ರ್ಯಾಭಿಮಾನದಿಂದ ಆತ್ಮಸಮರ್ಪಣೆ ಮಾಡಲು ಸಿದ್ಧರಾದರು. ಇವರು ಸಂಸ್ಥಾನಿಕರು ನಿಜ; ಆದರೆ ಇವರಲ್ಲಿದ್ದ ಉಜ್ವಲ ಸ್ವಾತಂತ್ರ್ಯ-ಇವರನ್ನು ಚಿರಸ್ಮರಣೀಯರನ್ನಾಗಿ ಮಾಡಿದೆ. ಇದು ನಮ ಅಭಿಮಾನದ ಮಾತಲ್ಲವೇ ರಂಗಣ್ಣ?"

ನ್ನು ಹೇಳುವಾಗ ಗುಂಡೂಮಾಮಾನ ಮೋರೆಯ ಮೇಲೆ ದ ತೇಜವಿತ್ತು.

ಲ್ಲ ನಿಜವೇ ಗುಂಡೂಮಾಮಾ?' ಎಂದು ಮತ್ತೆ ರಂಗಣ್ಣ ಕೇಳಿದರು. 'ನಾನು ಸುಳ್ಳು ಹೇಳುವೇನೇ? ನೋಡಿಕೊಳ್ಳಿರಿ ಬೇಕಾದರೆ' ಎಂದು 'ನಾಗಪುರ ಟಾಯಿಮ್ಸ್'ನಲ್ಲಿ ಅಚ್ಚಾದ ಶ್ರೀ. ಆರ್. ಸಿ. ಮುಜುಮುದಾರರ ಭಾಷಣದ ಪ್ರತಿಯನ್ನು ರಂಗಣ್ಣನವರಿಗೆ ಕೊಟ್ಟರು.

ಅಷ್ಟರಲ್ಲಿ ಕ್ಲಾಕ್‌ಟಾವರಿನ ಗಂಟೆ ಬಾರಿಸಿದ್ದು ಕೇಳಿಸಿತು. ರಾತ್ರಿ ಹತ್ತು ಗರಿಟೆಯಾಯಿತೆಂದು ಎಲ್ಲರೂ ಎದ್ದೆವು. ಗುಂಡೂಮಾಮಾ ಹೇಳಿದರು: "ಯಾಕೆ ಇವತ್ತು, ಶಾಸ್ತ್ರಿ ಬಂದಿಲ್ಲವಲ್ಲ? ನಾಳೆ ಕರೆದುಕೊಂಡು ಬರಬೇಕು.'

'ಗುಂಡುಮಾಮಾನಿಗೆ ಇವೆಲ್ಲ ವಿಷಯ ಹೇಗೆ ಗೊತ್ತಾಗುತ್ತವೊ? ನಾಳೆ ಯಾವ ವಿಷಯ ಬರುತ್ತದೋ' ಎಂಬುದನ್ನೆ ಯೋಚಿಸುತ್ತ ಮನೆಯ ಕಡೆಗೆ ತೆರಳಿದೆವು.

———

ಬಡತನದ ಬಾಳು

(ಕಥಾಸಂಕಲನ)

ಬರೆದವರು: 'ಆನಂದಕಂದ'

ಇದರಲ್ಲಿಯ ಒಂದೊಂದು ಕಥೆಯೂ ನಮ್ಮ ಜನಜೀವನದ ವಾಸ್ತವಚಿತ್ರ. ವಾಸ್ತವದಲ್ಲಿಯೆ ಸಾಹಿತ್ಯಿಕಸೌಂದರ್ಯವನ್ನು ಸಹಜವಾಗಿ ಹೇಗೆ ತುಂಬಬಹುದೆಂಬುದಕ್ಕೆ ಇದರಲ್ಲಿಯ ಕಥೆಗಳು ಒಳ್ಳೆಯ ಮಾದರಿಗಳಾಗಿವೆ.

ಕ್ರೌ. ಆ. ೧೫೦ ಪುಟಗಳು. ಬೆಲೆ ೧-೪-೦

'ಜಯಂತಿ' ಕಾರ್ಯಾಲಯ, ಧಾರವಾಡ

ಈ ನಿರ್ವಿದ್ಯನು ವಾಗೀಶಂ!

ಶ್ರೀ. ಮುದೇ[illegible] ಸಂಗಣ್ಣ, ಚಿಗಟೇರಿ

ಅಶ್ವಿಜದೀ ಸವಿ[illegible]ೊನ್ನೀರಿನೊ-
ಳೀಜಾಡುವ [illegible] ಈ ಹೊಲವು—
ಸೌಂದರ್ಯ[illegible]ನೆ ಮುಥಿಸುತ
ತೆಗೆದಿರಿಸಿದ [illegible] ಚಿಲುವು! ೧

ಮುಗಿಲೋಳಿಯ ಕೆಂಗದಪನೆ ಚುಂಬಿಸಲೆನ
ತಲೆಯೆತ್ತಿಹ ಸಿರಿಹಸುರಿನ ಈ ನಿಲುವು—
ಭೂದೇವಿಯ ತಾಯ್ತೊಲವಿನೆ ಬಾವುಟವಿದೊ?
ಇದ ಬಣ್ಣಿಸೆ ತಿಣುಕುತ್ತಿದೆ ಕವಿಬಲವು! ೨

ತೆಳುಗಾಳಿಯ ನಳಿದೋಳೊಳು ತಲೆದೂಗುತೆ
ನಲಿದಾಡುವ ಹೊಂದೆನೆಗಳ ದಂಟುಗಳು—
ಬಾನ್ದೇವಿಯ ನಗೆಲತೆಗಳ ತನಿವಿಂಚನ
ತಾರಾಳಿಯ ಹೂಗೊಂಚಲ ಗಂಟೆಗಳು! ೩

ಖಗ-ಮೃಗಗಳ, ಕರಿ-ಬಿಳಿಯರ ಉಸಿರಾಗಲು
ಜೇನ್ದುಂಬಿಹ ರಸ ಬೆಳಸಿಯ ಹಾಲ್ಗಾಳು—
ಹಠಯೋಗಿಯ ಯುಗ-ಯುಗಗಳ ತಪಸಿದ್ಧಿಯ
ಅಹಮಸ್ಮಿಯ ತುದ ಮುರಿಯುವ ಬಲ್ಗಾಳು! ೪

ಕಡುಸಿಸ್ತಿನ ಸೈನಿಕರೋಲು ಒಪ್ಪದೊಳಿಹ
(ತೆಳುಗರಿಗಳ ಕೈಬೀಸುವ) ಪಂಕ್ತಿಗಳು—
ಕವಿರಾಜನು ಭೂವುಟದೊಳು ತಾ ಬರೆದಿಹ
ಛಂದಸ್ಸಿನ ಸವಿಮೇಳದ ಸೂಕ್ತಿಗಳು! ೫

ಸೌಂದರ್ಯದ, ಸತ್ಯಸತ್ಯದ, ಶಿವರೂಪದ
ವರದರ್ಶನ ಮಾಡಿಸುತಿಹ ಈ ನೋಟ—
ನವ್ಯತೆಯನು, ಭವ್ಯತೆಯನು, ದಿವ್ಯತೆಯನು
ಕರುಣಿಸುತಿಹ ಸಿರಿಸಗ್ಗದ ಸವಿಯೂಟ! ೬

ನರನೆನ್ನದೆ, ಹರನೆನ್ನದೆ, ಮೃಗವೆನ್ನದೆ
ಜಗವೆಲ್ಲವು ತಾತನ್ಮಯವಿದೊ ನೋಡು—
ಅನುಭಾವಿಯ ಚಿಚ್ಛಕ್ತಿಯ ಜೀವಾತ್ಮವೊ
ಈ ಕಿರುಹೊಲ!— ರಸಬ್ರಹ್ಮನ ನೆಲೆವೀಡು! ೭

ಕಾಯಕದೊಳು ಕೈಲಾಸವ ತಾ ತೋರಿಪ
ಈ ಕಾವ್ಯವ ಬರೆದಾ ಕವಿ ಯಾರವನು?
ವಾಲ್ಮೀಕಿಯೆ? ಪರಬೊಮ್ಮನೆ? ಅಲ್ತಲ್ತಿದೊ
ಅವನಿಲ್ಲಿಹ— ರಸಋಷಿಯವ ಬರೆದವನು! ೮

ಅ....ಅ....ಗಳ ಸ್ವರಮಾಲೆಯ, ವ್ಯಾಕರಣದ
ಸುಳಿವರಿಯದ ವಿದ್ವನ್ಮಣಿ ಈ ರೈತ!
ಈ ಸಾಮಾನ್ಯನು ಆದನೊರೆದಿಹ ಹಿರಿಪಂಡಿತ!
ಏನದ್ಭುತ, ಇವನರಿಯನು ಕಾಗುಣಿತ! ೯

ಇವಗಿಲ್ಲವು ವೇದಾಗಮದುದ್ಗ್ರಂಥದ,
ಧರ್ಮಾರ್ಥದ, ವರಮೋಕ್ಷದ ಕಿಂಚಿತ್‌ಜ್ಞಾನ!
"ನಾ ದುಡಿವೆನು — ಜಗ ಬದುಕಲಿ" ಕೇಳೀನುಡಿ
ಇವನಾಡುವ ದಿನನಿತ್ಯದ ದೇವರ ಧ್ಯಾನ! ೧೦

ಸಾಮಾನ್ಯದ ಕಾಯಕದೊಳೆ ಗುರುವಾಗಿಹ
ವರನೇಗಿಲಿನೀ ಯೋಗಿಯು ಧೀಧೀಶಂ!
ಕವಿಭಾವಕೆ ರಸಸೃಷ್ಟಿಯ ನವದೃಷ್ಟಿಯ
ನೀಡುವ ಈ ನಿರ್ವಿದ್ಯನು ವಾಗೀಶಂ! ೧೧

ಮಕ್ಕಳಲ್ಲಿಯ ಸ್ವಹೀನತಾಭಾವನೆ

(ಇನ್‌ಫೀರಿಯೊರಿಟಿ ಕಾಂಪ್ಲೆಕ್ಸ್)

ಶ್ರೀ. ಸರೋಜಿನಿ ಮಹಿಷಿ ಎಂ.ಎ ಎಲ್‌ಎಲ್. ಬಿ. ಧಾರವಾಡ

ಸಮಾಜದಲ್ಲಿ ತಲೆದೋರುವ ಅಸಂ... ಗೆ, ವ್ಯಕ್ತಿವ್ಯಕ್ತಿಗಳ ಮನದಲ್ಲಿಯು ಸ್ವಹೀನತಾಭಾವನೆಯೇ ಪ್ರಮುಖ ಕಾರಣ. ಈ ಭಾವನಾರೋಗವು ಚಿಕ್ಕ-ಮಕ್ಕಳಿಗೆ ಅಂಟಿಕೂಳ್ಳುವ ಸಂಭವ ಬಹಳ. ಅದು ಮಕ್ಕಳಿಗೆ ಅಂಟಿಕೊಂಡರೆ, ಅವರ ಜೀವನ ದುಃಖಪೂರ್ಣ... ವುದು ಖಂಡಿತ !

ಚಿಕ್ಕವರಿದ್ದಾಗ, ಮಕ್ಕಳು ತೆಪ್ಪಗಿದ್ದರೆ ಅಥವಾ ಯಾವುದರಲ್ಲೂ ಚಟುವಟಿಕೆಯಿಂದ ಚುರುಕಾಗಿ ಕೈಕಾಲು ಓಡಾಡಿಸದಿದ್ದರೆ, 'ಮಕ್ಕಳು ಮುಗ್ಧವಾಗಿವೆ' ಎಂದು ಹೇಳಿ, ನಾವು ಸುಮ್ಮಗಿದ್ದುಬಿಡುವೆವು. ಅಥವಾ ಅವರ ಮುಗ್ಧತೆಯನ್ನು ಕುರಿತು ನಾನೇ ವಿನೋದದಿಂದ ಮಾತನಾಡಿ ನಕ್ಕುಬಿಡಬಹುದು. ಆದರೆ 'ಈ ಮುಗ್ಧತೆಗೆ ಹಿನ್ನೆಲೆಯಲ್ಲಿದ್ದ ಕಾರಣಗಳೇನು?'—ಎಂದು ಪರಿಶೀಲಿಸಲು ನಮ್ಮಲ್ಲಿ ಎಷ್ಟು ಜನ ಪಾಲಕರು ಉತ್ಸುಕರಾಗಿರುತ್ತಾರೆ? ಮಕ್ಕಳಿಗೆ ಊಟ-ಉಡಿಗೆಯಲ್ಲಿ ಯಾವ ಕೊರತೆಯನ್ನೂ ಮಾಡದಿದ್ದರೆ, ಅವರಿಗೆ ಬೇಕಾದುದೆಲ್ಲವನ್ನೂ ಪೂರಯಿಸಿದೆವೆಂದು ತಿಳಿಯುವ ಪಾಲಕರೇ ಹೆಚ್ಚು! ಮಧ್ಯಮವರ್ಗದಲ್ಲಿಯೇ ಪಾಲಕರ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಉತ್ತಮವಾಗಿದ್ದರೆ, ಶಾಲೆಯ ಪಾಠದ ಜೊತೆಗೆ, ಮನೆಯಲ್ಲಿ ಓದುಹೇಳಲು ಒಬ್ಬ ಗುರುಗಳನ್ನು ನೇಮಿಸಿಬಿಟ್ಟರಾಯಿತು,—ಮಾಡಬೇಕಾದುದಕ್ಕಿಂತ ಹೆಚ್ಚು ಮಾಡಿದಹಾಗಾಯಿತು! ಗುರುಗಳೂ ಅವರ ವಿದ್ಯಾರ್ಥಿಗಳೂ ಆ ಮೇಲೆ ಏನು ಮಾಡುತ್ತಾರೋ ಮಾಡುತ್ತಾರೆ! ಇಷ್ಟೆಲ್ಲ ಮಾಡಿದರೂ, ಮಗು ಪರೀಕ್ಷೆಯಲ್ಲಿ ಪಾಸಾಗದಿದ್ದರೆ ಅದರ ದೈವ!

ಮಕ್ಕಳಲ್ಲಿ ಮೂಡಿಬರುವ ಸ್ವಹೀನತಾಭಾವನೆಯು, ಮಕ್ಕಳು ಮನೆಯಲ್ಲಿಯೇ ಇದ್ದಾಗ ಅಷ್ಟೊಂದಾಗಿ ಕಂಡುಬಾರದು; ಆದರೆ ಹೊರಗೆ ಕಾಲಿರಿಸಿದಾಗ ಇಲ್ಲವೆ ಹೊರಗಿನ ಜನ ಒಳಗೆ ಕಾಲಿರಿಸಿದಾಗ, ಅದು ಹೆಚ್ಚಾಗಿ ಕಂಡುಬರುವುದು. ಇನ್ನಿತರ ಸ್ನೇಹಿತರೊಡನೆ, ಅಥವಾ ಯಾವುದೇ ಉತ್ಸವಪ್ರಸಂಗದಲ್ಲಿ ಕೂಡಿಕೊಳ್ಳುವ ಮನದ್ದೂ ಸಂಕೋಚದಿಂದ ದೂರದಲ್ಲಿಯೇ ನಿಂತುಕೊಂಡಿರುವುದು; ಯಾರೊಬ್ಬರು ಮಾತನಾಡಿಸಿದರೂ ತೀರ ಮೆಲ್ಲಗೆ ಸಂಕೋಚದಿಂದ ಉತ್ತರ ಕೊಡುವುದು; ಯಾರಿಗೂ ಕಾಣಿಸದಂತೆ ಆ ಸ್ಥಳದಿಂದ ಕಾಲು ಕೀಳುವುದು; ಯಾರು ಮಾತನಾಡಿ ನಕ್ಕರೂ ತಮ್ಮನ್ನೇ ಕುರಿತು ನಕ್ಕರೆಂದು ತಿಳಿಯುವುದು— ಇವೆಲ್ಲ ಸ್ವಹೀನತಾ ಭಾವನೆಯ ಕುರುಹು.

ಚಿಕ್ಕ ಮಕ್ಕಳಾಗಿದ್ದಾಗಲೂ, ಇನ್ನೊಂದು ಮಗು ಪೆಟ್ಟುಕೊಟ್ಟರೆ ಏನೂ ತಿರುಗಿ ಮಾತನಾಡದೆ, ಜೋರಿನಿಂದ ಅತ್ತು ಗದ್ದಲಮಾಡಲೂ ಸಂಕೋಚಪಡುವುದು. ಎಲ್ಲಿಯಾದರೂ ಬಿದ್ದು ಪೆಟ್ಟುಹತ್ತಿದರೆ, ತಾಯಿಯ ಗದರಿಕೆಗ... ಮನೆಯಲ್ಲಿ ಹೇಳದೇ ಇರುವುದು; ತನ್ನ ಯಾವುದೆ ಸಾಮಾನು ಕಳೆದರೂ ಅದನ್ನು ಮನೆಯಲ್ಲಿ ಹೇಳಲು ಧೈರ್ಯಸಾಲದೆ, ಹಾಗೇ ಮನಸ್ಸಿನಲ್ಲಿ ಸಂಕೋಚದಿಂದ ಕೊರೆಯುತ್ತಿರುವುದು; ಹಸಿವೆಯಾದಾಗಲೂ ಬಾಯಿಬಿಚ್ಚಿ ಹೇಳದೆ ಇರುವುದು ಇಲ್ಲವೆ ಅರೆಹೊಟ್ಟೆ ಉಂಡಿರುವುದು—ಸ್ವಹೀನತಾಭಾವನೆಯುಳ್ಳ ಮಕ್ಕಳ ಚಟುವಟಿಕೆಗಳಲ್ಲಿ ಇವುಗಳನ್ನೆಲ್ಲ ಕಾಣಬಹುದು. ಈ ಸ್ವಹೀನತಾಭಾವನೆ, ಪರಿಸ್ಥಿತಿಯನ್ನೂ ಜರುಗುವ ಘಟನೆಗಳನ್ನೂ ಅವಲಂಬಿಸಿಕೊಂಡೇ ಬೆಳೆದುಬರುತ್ತದೆ. ಭಾರತದಲ್ಲಿ ಬಹುಸಂಖ್ಯೆಯ ತಾಯಿ-ತಂದೆಗಳು ನಿರಕ್ಷರಿಗಳಾದ್ದರಿಂದ ಅಥವಾ ಮಕ್ಕಳ ಮಾನಸಿಕ ಹಾಗೂ ಸಾಮಾಜಿಕ ಬೆಳೆವಣಿಗೆಯ ಕಡೆಗೆ ಸಾಕಷ್ಟು ಲಕ್ಷ್ಯ ಪೂರಯಿಸಲೇಕೆನ್ನುವುದರ ಅರಿವೇ ಇಲ್ಲದಿರುವುದರಿಂದ, ಮಕ್ಕಳಲ್ಲಿ ಮೂಡಿಬಂದ ಸ್ವಹೀನತಾಭಾವನೆ ಯಾವ ರೀತಿಯ ಕ್ರಯೆ-ಪ್ರತಿಕ್ರಿಯೆಗಳಿಗೆ ಸಮಾಜದಲ್ಲಿ ಅವಕಾಶ ಕೊಟ್ಟಿದೆಯೆಂಬುದನ್ನು ತಿಳಿಯಲಾರದವರಾಗಿರುತ್ತಾರೆ.

ತಾಯಿ ಗುಮ್ಮನ ಅಂಜಿಕೆಯಿಂದ ಮಗುವನ್ನು ತನ್ನ ಆಧೀನದಲ್ಲಿಟ್ಟುಕೊಳ್ಳಲು ಇಷ್ಟಪಟ್ಟರೆ, ಇಲ್ಲವೆ 'ಅವರು ಮನೆಗೆ ಬರಲಿ, ನಿನ್ನ ಅವಸ್ಥೆ ನೋಡು!' ಎಂದು ಹೆದರಿಸಿ, ಹಾಗೆ ಒಂದೆರಡು ಬಾರಿ ವರ್ತಿಸಿದರೆ, ತಾಯಿಯಲ್ಲಿ ತನ್ನನ್ನು ದಂಡಿಸುವ ಸಾಮರ್ಥ್ಯವಿಲ್ಲ ಎಂದು ಮಗು ತಿಳಿಯಬಹುದಿಷ್ಟೇ ಅಲ್ಲ 'ತಂದೆ ಬರುವ ವೇಳೆಗೆ ತಾನು ಮನೆ ಬಿಟ್ಟು ಹೊರಗೆ ಹೋಗಿರುವಂತೆಯೂ ನೋಡಿಕೊಳ್ಳುವನು. ತಂದೆ ಮನೆಯಲ್ಲಿಲ್ಲದ ವೇಳೆಯಲ್ಲಿಯೇ ಅವನಿಗೆ ಏನು ಮಾಡಲೂ ಸ್ವಾತಂತ್ರ್ಯ; ತಂದೆಯ ಅಂಜಿಕೆಯಿಂದ ದೂರದೂರವೇ ಇದ್ದುಬಿಡುವ ಈ ರೂಢಿ, ಕ್ರಮೇಣ ದೊಡ್ಡವನಾದ ಮೇಲೆ ಪರಸ್ಪರರ

ನಿಕಟಸಂಪರ್ಕದ ಅಭಾವದ ಮೂಲಕ, ವಿರೋಧಭಾವನೆಯಾಗಿ ರೂಪುಗೊಳ್ಳಬಹುದು. ಅಂಜಿಕೆಯಲ್ಲಿ ತಾಯಿಯಿಂದ ದೂರ ಮಕ್ಕಳ ಗತಿಯಾದರೂ ಇದೇ ಆಗುವುದು.

ಮಕ್ಕಳಲ್ಲಿ, 'ನಾವು ತಾಯಿ-ತಂದೆಗಳಿಗೆ ಬೇಡವಾಗಿ ಹುಟ್ಟಿದವರು— ಬೇಡವಾದವರು—' ಎಂಬ ಭಾವನೆ ತಲೆಯಲ್ಲಿ ಮೂರಂತೂ—ಅದು ಕಿತ್ತು ಚೆಲ್ಲುವ ಪ್ರಯತ್ನವಿಲ್ಲದಿದ್ದರೆ,—ಬೇರೆ ಮಕ್ಕಳ ಸಾಮಾಜಿಕ ಜೀವನದಲ್ಲಿಯೂ ತನ್ನ ಛಾಯೆಯನ್ನು ವುದು. ಈ ಭಾವನೆ ಅನೇಕವಿಧಗಳಲ್ಲಿ ಮೂಡುವುದ ಚಲನವಲನೆಗಳಲ್ಲಿ ತಾಯಿ-ತಂದೆ,—ವಿಶೇಷವಾಗಿ ತಂ ಆಸ್ಥೆಯನ್ನು ವಹಿಸದೆ ಹೋದರೂ, ಮಕ್ಕಳಾಗಿ ಬಂದಾಗ ಅಸಡ್ಡೆ ತೋರದಿದ್ದರೆ, ಇಂತಹ ಕ್ಷುಲ್ಲಕ ವಿ ಗಮನಕೊಡಲು ಪೇಳೆ ತಮಗಿಲ್ಲ ಎಂಬ ಭಾವನೆಯನ್ನು ತೋರ ಸದಿದ್ದರೆ ಎಷ್ಟೋ ಗುಣವಾದೀತು. ಹಾಗೆ ತೋರ್ಪಡಿಸಿದ್ದೇ ಆದರೆ, 'ಇನ್ನೆಂದೂ ಇಂತಹ ವಿಷಯವನ್ನು— ಸಾಧಾರಣವಾಗಿ ಎಂತಹ ವಿಷಯವನ್ನೂ —ತನ್ನ ತಾಯಿ-ತಂದೆಗಳಿಗೆ ಹೇಳಕೂಡದು!' ಎಂಬ ನಿರ್ಧಾರವನ್ನೇ ಸ್ವಾಭಿಮಾನಿಯಾದ ಮಗ ಅಥವಾ ಮಗಳು ಮಾಡುತ್ತಾರೆ. ಮನೆಯಲ್ಲಿ ತಾನಿರುವುದೇ ಮನೆಯ ಯಜಮಾನರಿಗೆ ತಾಯಿ-ತಂದೆಗಳಿಗೆ - ಬೇಡವೇನೋ ಎಂಬ್ಭಾವನೆಯೂ ಅನೇಕ ಸಲ, ಅಸಡ್ಡೆಯಿಂದ ಕಾಣಲ್ಪಡುವ ಮಕ್ಕಳಲ್ಲಿ ಮೂಡಿಬರುವುದು. ತಾಯಿ-ತಂದೆಗಳಲ್ಲಿ ಮಕ್ಕಳ ಬಗ್ಗೆ ಅಕ್ಕರೆಯಿರದಿದ್ದರೂ, ಅದನ್ನು ಪ್ರಕಟಮಾಡುವ ರೀತಿ ತಪ್ಪಾಗಿರುವುದರಿಂದ, ಅದು ತಪ್ಪುಕಲ್ಪನೆಗೆ ಎಡೆಕೊಡುವುದು. 'ತಾಯಿ-ತಂದೆಗಳು ಮಕ್ಕಳಿಗೆ ಅನ್ನ ಲೇಕೂಡದು; ಸಿಟ್ಟು ಮಾಡುವುದೂ ದಂಡಿಸುವುದೂ ತಪ್ಪು' ಎಂದು ಹೇಳಲೂ ಬಾರದು. ಮಕ್ಕಳ ಸ್ವಭಾವ-ತಿಳಿವಳಿಕೆಗಳನ್ನು ಇದು ಅವಲಂಬಿಸಿರುತ್ತದೆ. ಎಷ್ಟೋ ಸಲ ಬೈಯುವುದನ್ನೇ ಮಕ್ಕಳು ಮೈಗೂಡಿಸಿಕೊಂಡು ಬಿಡುತ್ತಾರೆ. 'ತಿನ್ನುವುದು ಬೀಳುವುದು, ಕೆಲಸವಿಲ್ಲ ಬೊಗಸೆಯಿಲ್ಲ!' ಎಂದು ಎಷ್ಟೋ ಪಾಲಕರು ನಿಷ್ಠುರವಾಗಿಯೇ ಮಕ್ಕಳನ್ನು ಬೆಯ್ಯುವರು. 'ಎಷ್ಟು ತಂದು ದುಡಿದು ಹಾಕಿದರೂ ಇವರಿಗೆ ತಾನೇ ಏನು?' ಎಂದೆಂದುಕೊಳ್ಳುವರು! ಸ್ವಾಭಿಮಾನಿಯಾದ, ಸೂಕ್ಷ್ಮಗ್ರಾಹಿಯಾದ ಮಗುವಿನ ಮೇಲೆ ಇದರ ಮಾನಸಿಕ ಪರಿಣಾಮ ಎಷ್ಟಾಗುತ್ತದೆಯೆಂಬುದನ್ನು ಪಾಲಕರು ಅರಿಯದೆ ಹೋಗುವರು. ಮನೆಯಲ್ಲಿಯ ಜನರಿಗೇ ಬೇಕಾಗದವರು, ಹೊರಗಿನ ಜನಕ್ಕೆ ಬೇಕಾದವರಾಗಬಹುದೆ? ಈ ಸಂಶಯ, ಹೊರಗಡೆಗೆ ಸಮಾಜದಲ್ಲಿ ಈ ಮಕ್ಕಳು ಹಿಂದೆ ಉಳಿಯುವಂತೆಯೇ ಪ್ರೇರೇಪಿಸುತ್ತದೆ. ಇಂತಹ ಸಂದರ್ಭದಲ್ಲಿ ಹೊರಗಿನ ಜನ ಯಾರಾದರೂ ಅಲ್ಪ ಸಹಾನುಭೂತಿಯನ್ನು ತೋರಿಸಿದರೂ ಸಾಕು— ಈ ಸಹಾನುಭೂತಿ ಅವರ ಸ್ವಾರ್ಥಕ್ಕಾಗಿದ್ದರೂ ಸರಿ— ಅವರಿಡೆಗೆ, ಬೆಳೆದ ಮಕ್ಕಳ ಮನಸ್ಸು ಎಳೆಯಲ್ಪಡುತ್ತದೆ. ಜಗತ್ತಿನಲ್ಲಿ ಒಬ್ಬರಾದರೂ ತನ್ನನ್ನು ಆದರದಿಂದ, ಪ್ರೀತಿಯಿಂದ ಕಾಣುವರಲ್ಲಾ'— ಎಂಬ ಭಾವನೆ, ಬೆಳೆದ ಮಕ್ಕಳಲ್ಲಿಯೂ ಜೈತನ್ಯವನ್ನು ತಂದು, ಹಾಗೆ ಪ್ರೀತಿಯಿಂದ ಕಾಣುವವರಿಗಾಗಿ ಯಾವ ತ್ಯಾಗವನ್ನಾ ಬೇಕಾದರೂ ಅವರು ಮಾಡಲು ಸಿದ್ಧರಾಗುತ್ತಾರೆ. ಹೀಗಾಗುವುದು ಮನಸ್ಸಿನ ಸಹಜ ಗುಣ. ಆದರೆ ವಿಶೇಷತಃ ಹೆಣ್ಣುಮಕ್ಕಳ ಬಗ್ಗೆ ಪಾಲಕರು ಈ ವಿಷಯದಲ್ಲಿ ಸ್ವಲ್ಪ ಜಾಗರೂಕತೆಯಿಂದ ಇರಬೇಕಾದುದು ಅವಶ್ಯ. ಹೊರಗಿನಿಂದ ದೊರೆಯುವ ಸಹಾನುಭೂತಿಯ ಗುಣಾವಗುಣಗಳನ್ನು ಪರೀಕ್ಷಿಸುವ ಶಕ್ತಿ ಮಕ್ಕಳಲ್ಲಿಲ್ಲದಾಗ, ಅವರಿಗೆ ಲಾಭಕ್ಕಿಂತ ಹಾನಿಯಾಗುವ ಸಂಭವವೇ ಹೆಚ್ಚು!

ಸ್ವಹೀನತಾಭಾವನೆಯನ್ನು ಬೆಳೆಸಲು ವೇಷ-ಭೂಷಣಗಳೂ ಬಹುಮಟ್ಟಿಗೆ ಕಾರಣವಾಗಿವೆ. ಎಲ್ಲರೂ ಒಳ್ಳೆಯ ಬಟ್ಟೆ ಉಟ್ಟು ಬರುವಾಗ, ಅಂತಹ ಬಟ್ಟೆಗಳಿಲ್ಲದ ಮಗು ಆ ಸ್ಥಳಕ್ಕೆ ಹೋಗುವುದನ್ನೇ ಬಿಟ್ಟುಕೊಡುವುದು. ಶಾಲೆಯಲ್ಲಿ ಹರಿದ ಬಟ್ಟೆಗಳನ್ನೋ, ನಾಸಿಪ ಬಟ್ಟೆಗಳನ್ನೋ ತೊಟ್ಟುಕೊಂಡ ಮಗುವನ್ನು ಯಾರೂ ಮಾತನಾಡಿಸುವುದೇ ಇಲ್ಲ. ಶಿಕ್ಷಕನು ಇದನ್ನರಿತುಕೊಂಡು ತಿದ್ದಲು ಉಪಾಯ ಮಾಡಿದರೆ ಸರಿ; ಇಲ್ಲವಾದರೆ ಹೇವಕ್ಕೆ ಬಿದ್ದು ಅಂತಹ ಬಟ್ಟೆಗಳನ್ನು ಹಾಕಿಕೊಳ್ಳಲು ಮಗು ಹೇಗಾದರೂ ಪ್ರಯತ್ನಮಾಡುವುದು. ತಾಯಿ-ತಂದೆಗಳನ್ನು ಪೀಡಿಸುವುದು, ಇಲ್ಲವೆ ಕದ್ದು ಹಣ ಕೂಡಿಸಿ ಬಟ್ಟೆ ಕೊಳ್ಳಲಿಚ್ಛಿಸುವುದು—ಇವೆಲ್ಲ ಇದರಲ್ಲಿ ಸಮಾವೇಶವಾಗುವುವು. ಇಲ್ಲವೆ 'ಬಟ್ಟೆ ಹಾಕಿಕೊಳ್ಳುವುದೂ ಬೇಡ, ಯಾರ ಗೋಜಿಗೆ ಹೋಗುವುದೂ ಬೇಡ' ಎಂದು ಮಗು ಮೂಲೆಯಲ್ಲಿಯೇ ಉಳಿದುಬಿಡುವುದು. ಇದಕ್ಕೆ ಅನುಕೂಲವಾಗುವಂತೆ ಶಿಕ್ಷಕನೂ ಆ ಮಗುವನ್ನು ಅಸಡ್ಡೆ ಮಾಡಿದರೆ, ಅನಿಷ್ಟಪರಿಣಾಮ ಸಂಭವಿಸುವುದು ಅನಿವಾರ್ಯ! ಅದಕ್ಕೆಂತಲೇ ಶಿಕ್ಷಣಶಾಸ್ತ್ರ, ವೈದ್ಯಕದಲ್ಲಿಯ ಮಾನಸಶಾಸ್ತ್ರ-ಶಿಕ್ಷಕರು ಹಾಗು ದಾಯಿಗಳು ಕಣ್ಣುಕುಕ್ಕಿಸುವ, ಬೆಲೆಬಾಳುವ ಬಟ್ಟೆಗಳನ್ನು ಅವರ ದಿನದ ಕಾರ್ಯದ ಅವಧಿಯಲ್ಲಿ, ಸಾಧಾರಣವಾಗಿ ಉಪಯೋಗಿಸಕೂಡದೆಂಬ ನಿಯಮವನ್ನೇ ಮಾಡಿದೆ.

ತಾಯಿ-ತಂದೆಗಳು, ತಮ್ಮ ಮಕ್ಕಳಲ್ಲಿಯೇ ತೋರಿಸುವ ಪಕ್ಷಪಾತದಿಂದಲೂ, ಅಸಡ್ಡೆ ಮಾಡಲ್ಪಟ್ಟ ಮಕ್ಕಳಲ್ಲಿ ಸ್ವಹೀನತಾಭಾವನೆ ಬೆಳೆಯುತ್ತದೆ. ಪರೀಕ್ಷೆ ಪಾಸಾದ ಮಗನನ್ನು ಪ್ರೀತಿಯಿಂದ ಕಂಡು, ನಾಪಾಸಾದವನನ್ನು ಉಪೇಕ್ಷಿಸಿದರೆ, ಇಲ್ಲವೆ ದೊಡ್ಡ ನೌಕರಿಯಲ್ಲಿದ್ದವನನ್ನು ಆದರಿಸಿ, ಚಿಕ್ಕ ನೌಕರಿಯಲ್ಲಿದ್ದವನನ್ನು ಹೀಗಳೆದರೆ, ಜೆಲುವೆಯಾದ ಮಗಳನ್ನು ಹೊಗಳಿ, ಕಪ್ಪಾಗಿದ್ದು ಕುರೂಪಿಯಾದವಳನ್ನು ತೆಗಳಿದರೆ, ಕ್ರಮೇಣವಾಗಿ ಸ್ವಹೀನತಾಭಾವನೆ ಬೇರು ಹಿಡಿದುಕೊಳ್ಳುತ್ತದೆ.

ಯಾವುದೇ ಅಂಗವೈಕಲ್ಯ, ಅಥವಾ ಬುದ್ಧಿಯ ದೌರ್ಬಲ್ಯ ಇದ್ದ ಮಕ್ಕಳಲ್ಲಿ, ಉಳಿದವರಿಗಿಂತ ತಾವು ಕಡಿಮೆ—ಎಂಬ ಭಾವನೆಯಿದ್ದದ್ದೇ; ಆದರೆ ಅದು ಪರಿಸ್ಥಿತಿಯ ಮೂಲಕ ಮತ್ತೂ ಬೆಳೆಯುವ ಸಂಭವವಿರುತ್ತದೆ. ಹಾಗಾಗದಂತೆ ನೋಡಿಕೊಂಡರೆ ಮಾತ್ರ ಆ ವ್ಯಕ್ತಿಗಳ ಉಪಯುಕ್ತತೆ ಸಮಾಜಕ್ಕೆ ಆದೀತು! 'ಉಪಯುಕ್ತ-ಜೀವಿಗಳು ನಾವೂ' ಎಂಬ ಸಮಾಧಾನ ಅವರಿಗೂ ಆದೀತು!

ಈ ಸ್ವಹೀನತಾಭಾವನೆ ಅರಿವಾಗದಂತೆಯೇ ಬೆಳೆದು ಬರುವಂತೆ ಪರಿಸ್ಥಿತಿಯ ಮೂಲಕ ಹಾಗೂ ಅನೇಕ ಘಟನೆಗಳ ಮೂಲಕ ಹೆಚ್ಚಿನ

ಸ್ವ+ಆಧ್ಯತೆಯ (ಸುಪೀರಿಯಾರಿಟಿ ಕಾಂಪ್ಲೆಕ್ಸ್) ಭಾವನೆಯೂ ಬೆಳೆದು ಬರುತ್ತದೆ. ಮನೆಯಲ್ಲಿ ನಿತ್ಯ ಜಗಳ ಕಾಯುವ ತಾಯಿ–ತಂದೆಗಳನ್ನು ನೋಡಿ, 'ಎಲ್ಲ ತಾಯಿ–ತಂದೆಗಳೂ ಹೀಗೇ ಏನೋ!' ಎಂಬ ಭಾವನೆ ಮೂಡಿ, ಜಗಳ ಕಾಯದ ತಾಯಿ–ತಂದೆಗಳನ್ನು ನೋಡಿದರೇ ಆಶ್ಚರ್ಯವಾಗುವಂತೆ, ಸ್ವ+ಆಧ್ಯತೆಯಿಂದ ಮೆರೆಯುವ ಮಕ್ಕಳಿಗೂ ಒಂದು ರೀತಿಯಲ್ಲಿ ಆಶ್ಚರ್ಯವಾಗುತ್ತದೆ. ತಾಯಿ–ತಂದೆಗಳು ತಮ್ಮ ಮಕ್ಕಳಿಗೆ ಯಾವುದೇ ಬಗೆಯ ತೊಂದರೆ ಎಲ್ಲಿ ಸಂಭವಿಸುತ್ತದೋ ಎಂದು ಅತಿ ಜಾಗರೂಕತೆಯಿಂದ, ಮುದ್ದಿನಿಂದ ಇಂತಹ ಮಕ್ಕಳನ್ನು ಬೆಳೆಸುವರು; ಬಳಿಕ 'ಯಾರಿಗೆ ತಮ್ಮ ವರ್ತನೆಯಿಂದ ನೋವಾದೀತು!' ಎಂಬ ವಿಚಾರವನ್ನೂ ತಲೆಯಲ್ಲಿ ತಾರದೆ, ಈ ಮಕ್ಕಳು ಎಂತಹ ನಡೆವಳಿಕೆಯನ್ನೂ ಹೊರಗೆಯೂ ವ್ಯಕ್ತಪಡಿಸುವರು; ಹೊರಗೆಯೂ ಅಧಿಕಾರ ನಡೆಸಲು ಹೋಗಿ, ಕೈಸಾಗದಾದಾಗ ತಮ್ಮನ್ನು ತಾವು ಕಿದ್ದಿಕೊಳ್ಳುವ ಪ್ರಯತ್ನ ಮಾಡದೆ, ಹೊರಗಿನ ಜಗತ್ತನ್ನೇ ಮೂರ್ಖ ಜಗತ್ತೆಂದು ಕರೆದು ಸುಮ್ಮನಾಗಿಬಿಡುತ್ತಾರೆ— ಹುಚ್ಚರಾಸ್ಪತ್ರೆಯ ಹುಚ್ಚ 'ಲೋಕದ ಮೂರ್ಖ ಜನರಿಂದ ನನಗೆ ತೊಂದರೆಯಾಗಬಾರದೆಂದು ಸರಕಾರ ನನಗೆ ಪ್ರತ್ಯೇಕ ವ್ಯವಸ್ಥೆ ಮಾಡಿದೆ,' ಎಂದು ಹೇಳಿದಂತೆ!

ಸ್ವಹೀನತಾ ಭಾವನೆಯು ಮಕ್ಕಳಲ್ಲಿ, ಜೀವನದಲ್ಲಿ ಯಾವುದೇ ಸಮಸ್ಯೆಯನ್ನು ಎದುರಿಸುವ ಆತ್ಮವಿಶ್ವಾಸವುಳಿಯದು. ಸಿರಿವಂತರು ತಮ್ಮ ಮುದ್ದಿನ ಮಗುವನ್ನು ಆಪತ್ತಿಗೆ ತೊಂದರೆಯಾಗುವುದೆಂಬ ಭೀತಿಯಿಂದ ಯಾವುದೇ ಹೊಣೆ ಹೊರಿಸದೆ ದೂರವಿಟ್ಟರೆ, ಬಡಕುಟುಂಬದಲ್ಲಿಯೂ ಹಲವು ಪಾಲಕರು, ಮಕ್ಕಳನ್ನು ತೆಗಳಿ, 'ಇವರಿಗೇನು ಗೊತ್ತಿದೆ? ಎಲ್ಲ ನಾನೇ ಮಾಡಬೇಕು' ಎಂದು ಮಕ್ಕಳಿಗೆ ಹೊಣೆ ಹೊರುವ ಸಂದರ್ಭವನ್ನು ತಂದುಕೊಡದೆ, ಮಕ್ಕಳಲ್ಲಿ ಮೂಡುತ್ತಿರುವ ಆತ್ಮವಿಶ್ವಾಸದ ಕುಡಿಯನ್ನು ಚಿವುಟಿಬಿಡುವರು.

ಸ್ವಹೀನತಾಭಾವನೆ, ಅದನ್ನು ಹೊಡೆದೋಡಿಸಬೇಕೆಂಬ ಹೇವದ ಪ್ರಯತ್ನದಲ್ಲಿ ತೊಡಗಿದರೆ, ನಿಶ್ಚಿತವಾಗಿಯೂ ಅದೊಂದು ಔಷಧಿ! ಅದನ್ನು ಹೊಡೆದೋಡಿಸಲು ಯಾವುದೊಂದರ ಸಾಮರ್ಥ್ಯವಿದ್ದರೂ, ಬುದ್ಧಿ, ಧೈರ್ಯ ಸಾಹಸಗಳ ಬಲವಿದ್ದರೆ ಪ್ರಗತಿಯ ದಾರಿ ಸ್ಪಷ್ಟವಾದುದೇ! ಆದರೆ ಇವೆಲ್ಲವುಗಳ ವಿಲಕ್ಷಣ ಕ್ವಚಿತ್ತಾಗಿ! ಸ್ವಹೀನತಾಭಾವನೆಯನ್ನು ಧೈರ್ಯ ಸಾಹಸಗಳಿಂದ ತ್ರಿಗೆದು ಮುಂದುವರಿದು, ಪರಿಸ್ಥಿತಿಯನ್ನೇ ವ್ಯತ್ಯಾಸಗೊಳಿಸಿದವರು ಎಲ್ಲರೂ ದೊಡ್ಡವರಾಗಿದ್ದಾರೆ. ದೊಡ್ಡವರೆದುರು ಚಿಕ್ಕವರಾಗಿರುವುದು ಮಾತ್ರ ಸ್ವಹೀನತಾ ಭಾವನೆಯಲ್ಲ— ಅದು ವಿನಯ!

ಜಾನಪದ ಗೀತಗಳು

ಶ್ರೀ. ಸಂಗಪ್ಪ ಚಂದಪ್ಪ ದೇಸಾಯಿ, ಸಾಸನೂರ

ಹಾದಿಯ ಹೊಲನೋಡ । ಗೋದಿಯ ತೆನೆನೋಡ ।
ಭಾವ-ಮೈದುನರ ನಗಿನೋಡ । ಹಡದಪ್ಪ ।
ನೀ ಕೊಟ್ಟ ಮನಿಯ ಸಿರಿನೋಡ ॥ ೧ ॥

ತಾಯವ್ವ ಕೊಟ್ಟಾಳ ತಾಳಿಯ ಸಾಮಾನ ।
ನೀಯೇನ ಕೊಟ್ಟ ಹಡದಪ್ಪ । ವರ ನೋಡಿ ।
ವಗತನಕ ನನ್ನ ಕೊಡಲಿಲ್ಲ ॥ ೨ ॥

ಕೊಟ್ಟಂಥ ಮನಿವೊಳಗ । ನೆಟ್ಟಗ ನೀ ನಡೆದು ।
ಹುಟ್ಟಿದ ಮನಿಹೆಸರ ತಾರಪ್ಪ । ನನ ಮಗಳ ।
ಕೋಟಿ ಬಳಗಕ್ಕ ಕಲ್ಯಾಣ ॥ ೩ ॥

ಊರ ಮುಂದಿನ ಭಾವಿ । ಯಾರ ಕಟ್ಟಿಸ್ಯಾರ ತಾಯಿ ।
ಕಾಲುಜಾರಿದರ ಕೈಲಾಸ । ನನಮಗಳ ।
ಜಾರಿದ ಮನಕ ವನವಾಸ ॥ ೪ ॥

ಸಾವಕೊಡು ನೀ ನನಗ । ಸಾಯತೀನೋ ಶಿವನಿ ।
ಜಗದೊಳಗ ನಾನು ಇರಲಾರೆ । ಜನದೊಳಗ ।
ಹೊರಲಾರೆ ನಾನು ಒಣಹರಲೆ ॥ ೫ ॥

ಯಾರಿಗೆ ಯಾರಿಲ್ಲ । ಜೀವಕ್ಕ ಜೋಡಿಲ್ಲ ।
ತಾ ಮಾಡುತನಕ ತನಗಿಲ್ಲ । ಶಿವರಾಯ
ನೀ ಕೊಡುವತನಕ ನಮಗಿಲ್ಲ ॥ ೬ ॥

ಹೊರಗಾಡಿ ಬಾಕಂದ । ಬ್ಯಾಳಿ ಬೆಲ್ಲವ ಕೊಡುವೆ
ಮಾಡಿಸಿ ಕೊಡುವೆ ಅರಳೆಲಿಯ । ನನಕಂದ
ಕಾಡ ಬ್ಯಾಡೆನಗ ಹಗಲೆಲ್ಲ ॥ ೭ ॥

ಯೇಳೂತ ನೆನೆದೆನ । ಏಳಂಟು ದೇವರ
ಯೇಳು ಮಂಟಪದ ಒಡೆಯ । ಸಂಗಮನಾಥ
ಜೋಡಿಸಿ ಕೈಯ ಮುಗಿದೇನ ॥ ೮ ॥

ಕೆಲವು ಪ್ರಮುಖ ಪ್ರಯೋಗಗಳು

ಈ ಅಧ್ಯಾಯದಲ್ಲಿ ಕೆಲವು ಪ್ರಮುಖ ಪ್ರಯೋಗಗಳ ಬಗ್ಗೆ ಚರ್ಚಿಸಲಾಗಿದೆ.
ಈ ಪ್ರಯೋಗಗಳು ಕೆಲವು ಮೂಲಭೂತ ಪರಿಕಲ್ಪನೆಗಳಿಗೆ ಕಾರಣವಾಗಿವೆ.
ಈ ಪ್ರಯೋಗಗಳು ಕೆಲವು ಮೂಲಭೂತ ಪರಿಕಲ್ಪನೆಗಳಿಗೆ ಕಾರಣವಾಗಿವೆ.

ಈ ಅಧ್ಯಾಯದಲ್ಲಿ ಕೆಲವು ಪ್ರಮುಖ ಪ್ರಯೋಗಗಳ ಬಗ್ಗೆ ಚರ್ಚಿಸಲಾಗಿದೆ. ಈ ಪ್ರಯೋಗಗಳು ಕೆಲವು ಮೂಲಭೂತ ಪರಿಕಲ್ಪನೆಗಳಿಗೆ ಕಾರಣವಾಗಿವೆ. ಈ ಪ್ರಯೋಗಗಳು ಕೆಲವು ಮೂಲಭೂತ ಪರಿಕಲ್ಪನೆಗಳಿಗೆ ಕಾರಣವಾಗಿವೆ.

ಈ ಅಧ್ಯಾಯದಲ್ಲಿ ಕೆಲವು ಪ್ರಮುಖ ಪ್ರಯೋಗಗಳ ಬಗ್ಗೆ ಚರ್ಚಿಸಲಾಗಿದೆ. ಈ ಪ್ರಯೋಗಗಳು ಕೆಲವು ಮೂಲಭೂತ ಪರಿಕಲ್ಪನೆಗಳಿಗೆ ಕಾರಣವಾಗಿವೆ. ಈ ಪ್ರಯೋಗಗಳು ಕೆಲವು ಮೂಲಭೂತ ಪರಿಕಲ್ಪನೆಗಳಿಗೆ ಕಾರಣವಾಗಿವೆ.

ಅಲ್ಲೆ ?

ಶ್ರೀ. ಶ್ರೀನಿವಾಸ ಜೆಂ. ಗಲಗಲಿ
ಧಾರವಾಡ

೧

ಬಾಡಲು ಎಂದೇ
ನೊಗ್ಗೆಯು ಅರಳಿತೆ ?
ಹಿಡಿಸದ ಹಿಗ್ಗಿಗೆ ತಾನಲ್ಲೆ ?
ಈಳಿಗೆಗೆಂದೇ
ಮಿಡಿ ಪಣ್ಣಾಯಿತೆ ?
ರಸಸರಿಪಾಕದ ಗುರಿಗಲ್ಲೆ ?

೨

ನಂದಲು ಎಂದೇ
ಉರಿವುದೆ ದೀಪವು ?
ಬೆಳಕಿನ ಅನುಭವಕೆಂದಲ್ಲೆ ?
ಮಡಿಯಲು ಎಂದೇ
ಬಂತೇ ಜೀವನ ?
ಪ್ರಗತಿಯ ಸಾಧಿಸಲೆಂದಲ್ಲೆ ?

ದಿನಕ್ಕೆ ಭೋಸರಲ್ಲಿ ಮಾಡಿದ ಸಾಲವನ್ನ, ಬಡ್ಡಿ ಗಿಡ್ಡಿಯೆಂದು ಬೆಳಕಿನಂತೆ ಬೆಳೆಯುತ್ತಿತ್ತು. ಆ ಸಮಯದಲ್ಲಿ ಅಲೋಚನೆಯೊಂದೆ—'ಏನು ಮಾಡುವುದು ?—ಎಂದು.'

"ಸಾಲ, ಬಡ್ಡಿಯ ಮೊತ್ತವನ್ನು ತೀರಿಸದಿದ್ದರೆ ಒಂದು ವಾರದೊಳಗೆ ನನ್ನ ಮೇಲೆ ತೀವ್ರಕ್ರಮ ಕೈಕೊಳ್ಳುತ್ತೇನೆಂದು ಭೋಸರು ಹೇಳಿದರು. ಅಂದಿನಿಂದ ನನಗೆ ತಲೆಯಲ್ಲಿ ಹೊಳೆಯುತ್ತಿದ್ದುದು ಒಂದೇ: 'ಹಣ ಸಂಪಾದಿಸುವುದು ಹೇಗೆ ? ಈ ಕಷ್ಟದಿಂದ ಪಾರಾಗುವುದು ಹೇಗೆ ? ಬಡತನದಿಂದ ಪಾರಾಗುವುದು ಹೇಗೆ ?....' ಉತ್ತರವೇ ದೊರಕುತ್ತಿರಲಿಲ್ಲ. ಉಪಸಂಪಾದನೆ ಆಗುತ್ತಲೇ ಇದ್ದಿಲ್ಲ. ಉಪವ್ಯಾಪಾರ ಮಾಡುವಾ ಎಂದರೆ ಭಂಡವಾಳವಿಲ್ಲ. ಚೀರಿ ಎಲ್ಲಿಯಾದರೂ ಕೆಲಸ ಸಿಕ್ಕುವುದೋ ಎಂದು ಪ್ರಯತ್ನಿಸಿದೆ. 'ಬಗ್ಗಿದವನಿಗೆ ಒಂದು ಗುದ್ದು ಹೆಚ್ಚು' ಎಂಬಂತೆ ನನ್ನ ಭಾಗ್ಯಕ್ಕೆ ಎಲ್ಲಿಹೋದರೂ ವೈಫಲ್ಯವೇ ಗತಿ."

"ನನ್ನ ಸಹೋದ್ಯೋಗಿಗಳು ಸಂಪಾದಿಸುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಆದರೆ ಅವರಷ್ಟೇ ಕೆಲಸ ನಾನು ಮಾಡುತ್ತೇನೆ. ಅವರ ಕಾಲಂಶವನ್ನೂ ನನಗೆ ಸಂಪಾದನೆಯಿಲ್ಲ. ಸ್ವಾಮಿ! ನನಗೆ ಅವರು ಅಷ್ಟು ಹೆಚ್ಚಿಗೆ ಹೇಗೆ ಸಂಪಾದನೆ ಮಾಡುತ್ತಾರೆ ಎಂಬುದೇ ಆಶ್ಚರ್ಯ. ಇಂದಿನ ಕಾಲದಲ್ಲಿ ಹೆಣಕ್ಕೆ ಬೆಲೆ! ಮರ್ಯಾದೆ! ಮರ್ಯಾದೆಯಿಂದ ಹಣ ಸಂಪಾದಿಸಿ ಶ್ರೀಮಂತರಾದವರಿಲ್ಲ! ಮಾನ-ಮರ್ಯಾದೆ, ನ್ಯಾಯ-ಅನ್ಯಾಯವೆಂದು ಹೆದರಿಕುಳಿತರೆ, ನನ್ನ ಕಷ್ಟಗಳನ್ನು ಸಮಾಜ ಪರಿಹಾರ ಮಾಡುವುದಿಲ್ಲ. ನನಗೆ ಹಣ ಸಿಗುವುದಿಲ್ಲ. ಹಣದಲ್ಲಿ ಶ್ರೀಮಂತನಾಗಿರುವವನಿಗೆ ಇಂದಿನ 'ಜನತೆ' ಬೆಲೆ ಕೊಡುತ್ತದೆ!"

"ನಾನು ಕೂಡಾ ಇತರರಂತೆ ಉಪಉದ್ಯೋಗವನ್ನು ಮಾಡಿದರೆ ಹೆಚ್ಚು ಸಂಪಾದನೆ ಏಕಾಗಬಾರದು ? ನಮ್ಮ ಕಷ್ಟಗಳೆಲ್ಲಾ ಪರಿಹರಿಸುವಂತಾದರೆ ಹಣವನ್ನು ಆ ರೀತಿಯಿಂದ ಪಡೆಯುವುದರಲ್ಲಿ ತಪ್ಪೇನು ಸ್ವಾಮಿ ? ನ್ಯಾಯಮಾರ್ಗ ಮಾನ-ಮರ್ಯಾದೆ ನಮ್ಮಲ್ಲಿಲ್ಲ. ಎಂತೆಂದೆ ಈ ರೀತಿಯಾಗಿ ಕಷ್ಟದ ಕೆಲಸ ಮಾಡಿ ಹೊಟ್ಟೆ ಹೊರಿಸಬೇಕು. ಆದುದರಿಂದ ನಾನು ದಲಾಲಿವ್ಯಾಪಾರ ಮಾಡಿದರೆ ತಪ್ಪಿಲ್ಲವೆಂದು ನನ್ನ ಮನಸ್ಸಿಗೆ ಹೊಳೆಯಿತು."

"ನೋಡಿ, ಸ್ವಾಮಿ! ಬಡತನ, ಹಸಿವು—ಒಬ್ಬ ಮನುಷ್ಯನನ್ನು ಏನು ಬೇಕಾದರೂ ಮಾಡಲಿಕ್ಕೆ ಪ್ರಜೋದಿಸುತ್ತದೆ. ಆದುದರಿಂದ ನಾನು ದಲಾಲಿ ವ್ಯಾಪಾರದ ಮೂಲಕ ಹೊಟ್ಟೆ ಹೊರೆದುಕೊಳ್ಳುತ್ತೇನೆ. ಆದರೆ ಈ ವ್ಯಾಪಾರ—ಕಳವು, ಕೊಲೆಯಷ್ಟು ಪಾಪಕರವಲ್ಲ. ಯಾವ ಹಣದ ಅಭಾವದಿಂದ ನನ್ನ ಕಷ್ಟಗಳನ್ನು ಅನುಭವಿಸಿದೆನೋ, ಇಂದು ಅದೇ ಹಣದಿಂದ ನಾನು ಮುಂಚಿಗಿಂತ ಸುಖಿಯಾಗಿ ಇದ್ದೇನೆ. ದೊಡ್ಡ-ದೊಡ್ಡ ಕಷ್ಟಗಳು ಈಗ ಬಹುವಂಶ ಮಾಯವಾಗಿವೆ."

"ಕ್ಷಮಿಸಿ ಸಾರ್! ನಿಮ್ಮನ್ನು ಪಾಳುಮಾಡಬೇಕೆಂದು ನಾನು ಆ ರೀತಿ ಕೇಳಲಿಲ್ಲ. ನನ್ನ ಎಂದಿನ ನಿಯಮದಂತೆ ಕೇಳಿದೆ ಅಷ್ಟೆ" ಎಂದನು.

"ಅಯ್ಯೋ, ಪಾಪ! ಎಂಥಾ ಜೀವನ!" ತನ್ನ ಹೆಂಡತಿ-ಮಕ್ಕಳಿಗಾಗಿ, ಏಕ ಮಾತ್ರ ಆಶ್ರಿತಿಗಾಗಿ, ಸುಖಜೀವನದ ಸಲುವಾಗಿ ದಲಾಲಿ ಹೊರತು ಬೇರೆ ಹಣವನ್ನು ಪಡೆಯುವುದು ತಪ್ಪಾಗಲಿಕ್ಕಿಲ್ಲವೆಂದು ನನ್ನ ದೃಷ್ಟಿಯಲ್ಲಿಯೂ ಕಂಡಿತು.

× × × ×

ಹೋಟೆಲು ಸಮೀಪಿಸಿದುದರಿಂದ, ನಾನು ರಿಕ್ಷಾದಿಂದ ಕೆಳಗಿಳಿದು, ರಿಕ್ಷಾವಾಲನ ಕೈಯಲ್ಲಿ ಇದು ರೂಪಾಯಿಯ ನೋಟೊಂದನ್ನಿತ್ತೆನು. "ಇಷ್ಟು ಏಕೆ ಸ್ವಾಮಿ ?" ಎನ್ನುವಂತೆ ರಿಕ್ಷಾವಾಲ ನನ್ನನ್ನು ನೋಡಿದ.

"ಇರಲಿಯಪ್ಪ! ನಿಮ್ಮ ಜೀವನಕ್ಕೆ ನನ್ನದೊಂದು ಅಲ್ಪ ಸಹಾಯ. ದೇವರು ನಿನಗೆ ಒಳ್ಳೇದನ್ನು ಮಾಡಲಿ!" ಎಂದು ಹೇಳಿ ಹೊಟೆಲನ್ನು ಹೊಕ್ಕೆನು.

(ಆಧಾರದಿಂದ)

ಭಾರತದ ದಿವ್ಯಜ್ಯೋತಿ

ಲೋಕಮಾನ್ಯ ಟಿಳಕರು

ಶ್ರೀ. ಎಂ. ಎಸ್. ಜೋಶಿ, ಧಾರವಾಡ

ಲೋಕಮಾನ್ಯ ಟಿಳಕರು ಭಾರತಸ್ವಾತಂತ್ರ್ಯಯಜ್ಞದ ನೊಪ್ಪನೊದಲನೆಯ ದೀಕ್ಷಿತರು. ತಮ್ಮ ತನು, ಮನೋಧನಗಳನ್ನೆಲ್ಲ ಯಜ್ಞಕ್ಕೆ ಆಹುತಿಯನ್ನಾಗಿ ನೀಡಿದರು. ಇಂದಿನ ನಮ್ಮ ಸ್ವಾತಂತ್ರ್ಯ ಅವರ ಯಜ್ಞದ ಸತ್ಫಲವಾಗಿದೆ.

" There is only one Indian, whom we cannot win over by any sort of influence or inducement and that is Mr. Tilak; all others we can influence more or less "

ಬ್ರಿಟಿಷ್ ಮಂತ್ರಿಯೊಬ್ಬನು ಸಿಲೋನಿನ ವಿದ್ಯಾರ್ಥಿಯ ಎದುರು ತೆಗೆದ ಉದ್ಗಾರಗಳು ಇವೇ. ಈ ಮಾತಿನ ಮೇಲಿಂದ, ಸಾಮ್ರಾಜ್ಯಶಾಹಿಯ ವಿರುದ್ಧ ಲೋಕಮಾನ್ಯರ ಹೋರಾಟದ ಬೆಲೆಯನ್ನು ಅರಿತು ಕೊಳ್ಳಬಹುದಾಗಿದೆ. ಇಲ್ಲಿಗೆ ಬಲ್ಲಿಯೇ " ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು" ಎಂದು ನಿರ್ಭಯವಾಗಿ ಸಾರಿದ ಟಿಳಕರು, ಬ್ರಿಟಿಷ್ ಸರಕಾರಕ್ಕೊಂದು ಬಹು ದೊಡ್ಡ ಸಮಸ್ಯೆಯಾದುದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

ಜುಲೈ ೨೩–೧೯೫೬ ರಿಂದ ಭಾರತಸರಕಾರವು ಅವರ ಜನ್ಮಶತಾಬ್ದಿಯನ್ನು ಬಹು ವಿಜೃಂಭಣೆಯಿಂದ ಆಚರಿಸಿತು. ಇಂಥ ಪ್ರಸಂಗದಲ್ಲಿ ಹೆಚ್ಚಾಗಿ ನಮ್ಮ ತರುಣಜನ ಅವರ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಅರಿಯಬೇಕಾಗಿದೆ. ಟಿಳಕರು ಮಾಡಿದ ಕಾರ್ಯ ಬಹುಮುಖವಾಗಿದೆ. ಪ್ರತಿಯೊಬ್ಬ ದೇಶಭಕ್ತನ ಚರಿತ್ರೆಯನ್ನು ಚೆನ್ನಾಗಿ ಅಭ್ಯಾಸಿಸುತ್ತ ಹೋದರೆ, ಅವರಲ್ಲಿ ಕೆಲವರು ದೃಢನಿರ್ಧಾರದಿಂದ ದೇಶಸೇವೆಯ ಪ್ರತಿಜ್ಞೆಯನ್ನು ಮೊದಲಿನಿಂದಲೂ ಮಾಡಿಕೊಂಡೇ ಕಾರ್ಯಪ್ರವೃತ್ತರಾದುದು ಉಂಟು. ಇನ್ನು ಕೆಲವರು ಕೆಲವು ಅವಶ್ಯಕ ಪರಿಸ್ಥಿತಿಯ ಮೂಲಕ ದೇಶಭಕ್ತರಾದುದು ಉಂಟು. ಲೋಕಮಾನ್ಯರು, ಕಾಲೇಜಿನ ಕಟ್ಟೆಯನ್ನು ಹತ್ತಿದಾರಭ್ಯದಿಂದಲೇ ದೇಶಸೇವೆಯವ್ರತವನ್ನು ಕೈಕೊಳ್ಳುವುದಾಗಿ ಮನದಲ್ಲಿಯೇ ಪ್ರತಿಜ್ಞೆಯನ್ನು ಮಾಡಿಕೊಂಡರು. ಅದರಂತೆಯೇ, ತಮ್ಮ ದೇಹದಲ್ಲಿ ಜೀವ ವಿರುವ ವರೆಗೂ ದೇಶಕಾರ್ಯಕ್ಕಾಗಿಯೇ ದುಡಿದರು. ಮರಣಶಯ್ಯೆಯ ಮೇಲಿದ್ದಾಗ, ಮಹಾತ್ಮಾಜಿಯವರ ಅಸಹಕಾರ ಚಳವಳಿಯ ಬಗ್ಗೆ ತಮ್ಮ ಅಭಿಪ್ರಾಯವನ್ನು ಅರ್ಧನುರ್ಧ ಉಚ್ಚಾರ..ಲ್ಲಿಯೇ ಟಿಳಕರು ಮಂಡಿಸಿದ್ದನ್ನು ನೋಡಿದಲ್ಲಿ, ಈ ಮಾತಿನ ಸತ್ಯತೆಯು ಜೊತೆಯುವುದು.

ಸದೃಢವಾದ, ಸಶಕ್ತವಾದ ಶರೀರದಲ್ಲಿಯೇ ಸಬಲವಾದ ಮನಸ್ಸು ಇರಬಲ್ಲದು ಅಂಥ ಸಬಲ ಮನಸ್ಸಿನಿಂದಲೇ ಸತ್–ಇಚ್ಛೆಗಳು ಹೊರಡುವವು—ಎಂದು ಟಿಳಕರು ಬಲವಾಗಿ ನಂಬಿದ್ದರು. ಆದೇ ಕಾರಣದಿಂದ ಟಿಳಕರು ಸ್ಕಾಟ್ರಿಕ್ ಪರೀಕ್ಷೆಯನ್ನು ಮುಗಿಸಿ ಕಾಲೇಜನ್ನು ಸೇರಿದ ಬಳಿಕ—ಒಂದು ವರ್ಷದಲ್ಲಿ ನಿಯಮಿತ ವ್ಯಾಯಾಮದಿಂದ ತಮ್ಮ ಅಂಗಸೌಷ್ಠವವನ್ನು ಬೆಳೆಸಿಕೊಂಡರು. ಇದಕ್ಕಾಗಿ ಅವರು ಒಂದು ವರುಷದ ಕಾಲೇಜು ಶಿಕ್ಷಣವನ್ನು ಹಾಳುಮಾಡಿಕೊಳ್ಳಬೇಕಾಯಿತು. ಎಲ್.ಎಲ್. ಬಿ. ಪರೀಕ್ಷೆಯನ್ನು ಮುಗಿಸಿಕೊಂಡರು. ಆನಂತರ ಟಿಳಕರು ಶಿಕ್ಷಣಪ್ರಸಾರದ ಕಾರ್ಯಕ್ಕಾಗಿ ನಿಂತರು. ದೇಶದಲ್ಲಿ ಶಿಕ್ಷಣದ ಪ್ರಸಾರವಾಗದ ಹೊರತು, ಜನತೆಯಲ್ಲಿ ಯಾವುದೇ ಬಗೆಯ ಜಾಗೃತಿಯಾಗಲಾರದೆಂಬ ಮಾತನ್ನು ಮನಗಂಡು, ತಮ್ಮ ಸಹಾಧ್ಯಾಯಿಯಾದ ಶ್ರೀ. ಆಗರಕರರನ್ನು ಕೂಡಿಕೊಂಡು, ಪುಣೆಯಲ್ಲಿ ಡೆಕ್ಕನ್ ಎಜ್ಯುಕೇಶನ್ ಸೊಸಾಯಿಟಿಯನ್ನು ಸ್ಥಾಪಿಸಿ ಒಂದು ಇಂಗ್ಲಿಷ ಶಾಲೆಯನ್ನು ತೆಗೆದರು.

ಆಗರಕರರು ಸಮಾಜಸುಧಾರಣೆಗಾಗಿ ತಮ್ಮ ಜೀವನವನ್ನು ಮುಡುಪಿಟ್ಟ ವ್ಯಕ್ತಿ. ಸಮಾಜಸುಧಾರಣೆಗೆ ಸರಿಯಾದ ಸಮಯವಿದಲ್ಲವೆಂದು ಜೇಳುವ ವ್ಯಕ್ತಿ ಟಿಳಕರು. ಈ ಭಿನ್ನಾಭಿಪ್ರಾಯದ ಮೂಲಕ ಈ ಎರಡೂ ಶಕ್ತಿಗಳು ಒಂದರಿಂದೊಂದು ದೂರ ಸರಿದುಕೊಂಡವು. ಕೆಲವು ವ್ಯಕ್ತಿಗಳು ಟಿಳಕರನ್ನು ' ಸನಾತನಿ ' ಎಂದು ತೆಗಳಲಾರಂಭಿಸಿದರು. ವಸ್ತುಸ್ಥಿತಿ ಇದ್ದುದು. ಹೀಗೆ: ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ನಡೆಸುವುದಕ್ಕಾಗಿ ಬೇಕಾದ ಸಂಪೂರ್ಣ ಏಕಾಗ್ರತೆಗೆ ಭಂಗವೆಲ್ಲಿ ಬರಬಹುದೋ—ಎಂಬ ಶಂಕೆ ಟಿಳಕರಿಗೆ, " ಸಮಾಜ ಸುಧಾರಣೆ " ಎನ್ನುವುದು ೭೦ ವರುಷಗಳ ಹಿಂದೆ ಹೇರ

ವಾದಗ್ರಸ್ತ ವಿಷಯಬಾಗಿತ್ತೆಂಬುದು ಬಹಿಷ್ಕಾರದ ಪಿಡಿಯೆಯನ್ನು ಸೂಚಿಸುವ ಇಂದಿನ ಪದಪ್ರಯೋಗದ ಮೇಲಿಂದ ತಿಳಿದುಕೊಳ್ಳಬಹುದಾಗಿದೆ.

ಮನೆಯ ಒಡೆತನ ಮುಂದಿಯ ಸಡಿಲಿವ್ವಾಗ್ಗೆ ಮನೆಯ ಸುಧಾರಣೆ ಪ್ರಾರಂಭವಾಯಿತು. "ಮೊದಲು ಮನೆ ನಮ್ಮದಾಗಲಿ" ಅನಂತರ ಸುಧಾರಣೆ ಎಂಬುದೇ ತಿಲಕರ ವಾದಸರಣಿಯಾಗಿತ್ತು.

ತಿಲಕರನ್ನು ಜಾತೀಯವಾದಿಗಳೆಂದು ಟೀಕಿಸಿದ ಜನರೂ ಉಂಟು. ಇದಕ್ಕೆ ಕಾರಣವಿಂದರೆ, ಬೂಂಬಯಿಯಲ್ಲಿ ನಡೆದ ಹಿಂದೂ-ಮುಸ್ಲಿಮ ಐಕ್ಯತಾ ಸಮಾವೇಶದ ವಿಷಯಪ್ರವೇಶ ಭಾಷಣವನ್ನು ತಿಲಕರು ಮಾಡಿದ್ದರು. ಅಜರೆ ನಿಜವಾಗಿ ನೋಡಿದರೆ ತಿಲಕರು ರಾಷ್ಟ್ರೀಯತೆಗೆ ಮಾಡಿದ್ದಷ್ಟು ತೊಂದರೆಯನ್ನು ಬೇರೆ ಯಾವ ಜಾತೀಯತೆಗೆ ಆಲ್ಲವೆಂಬುದನ್ನು ಬ್ಯಾರಿಸ್ಟರ್ ಜಿನ್ನಾ ಅವರು ತಿಳಿದ ಉದ್ಗಾರದಿಂದ ಗಳಿಂದ ಮನಗಾಣಬಹುದಾಗಿದೆ:

"Mr. Tilak was a selfless patriot..... He won my respect and admiration for his great and intellectual qualities and particularly his national outlook."

(ಪುಟ ೩೦ Reminiscences of Lokamanya Tilak. Vol. III by Bapat ನೋಡಿ.) ಜನಾಪತ ಕ ಉದ್ಗಾರಗಳ ಮೇಲಿಂದ ತಿಲಕರು ಸರಧರ್ಮೀಯರಿಗೂ ಪ್ರಿಯವ್ಯಕ್ತಿಗಳಾಗಿದ್ದರೆಂಬುದು ಗೋತ್ತಾಗುತ್ತದೆ.

ಇನ್ನೂ ಅದ ಅಲ ಜನರು ತಿಲಕರು ಕೇವಲ ಪ್ರಾಂತಾಭಿಮಾನಿಯಾದ ವ್ಯಕ್ತಿಯಾಗಿದ್ದರೆಂದು ತಿಳಿಯುತ್ತಾರೆ. ತಿಲಕರ ವಿಷಯದಲ್ಲಿ ಹೆಚ್ಚು ಅಭ್ಯಾಸ ಮಾಡಿದ ಅಮೇರಿಕೆಯ ಲೇಖಕ ಪ್ರೋ. T. L. Shay, Ph. D. ಬರೆದಿದ್ದಾರೆಂದರೆ...

"He has been called provincialist, while actually he first taught the meaning of love of country. He has been accused of believing in violence, yet it was he who first urged non-violent political action. He has been called a revolutionary which is true, provided it is remembered he was a constructive revolutionary, far more interested in building than tearing down....."

(ಪುಟ ೧೧ --- ತಿಲಕ ಅಭ್ಯಾ ಏ ಕೋಸಮಾಸ್ಟ್ರೆ)

ಲೋಕಮಾನ್ಯರ ಜೀವನವು ಅಮೃತಮಯವಾಗಿದೆ. ಅವರ ಜೀವನದ ಜೀವಾಳ---ಜೀವಾಳವೇ ಆಗಿದೆ. ಸ್ವಚ್ಛತಾಪ್ರಿಯತೆ ಅವರ ನುಷ್ಯ ಗುಣ. ಯಾವ ಹೆದರಿಕೆಗೂ ಸೊಪ್ಪುಹಾಕದೇ ನಿಷ್ಕಾರ್ಷ ಸತ್ಯವನ್ನು ಸಾರುತ್ತಿದ್ದುದರಿಂದ ಮೂಲತಃ ಬ್ರಿಟಿಷ ಸರಕಾರಕ್ಕೆ ಅವರು ಶತ್ರುಪಕ್ಷಾಯರಾಗಿದ್ದರು. ಕೋರ್ಟುಗಳಲ್ಲಿ ಖಡಾಖಂಡಿತವಾಗಿ ತಮ್ಮ ಅಭಿಪ್ರಾಯವನ್ನು ಮಂಡಿಸುತ್ತಿದ್ದರು. ತಿಲಕರ ವಿಲಕ್ಷಣಾವಾದ ಸ್ವರಣಶಕ್ತಿ, ತೀಕ್ಷ್ಣಬುದ್ಧಿ ಪಾಂಡಿತ್ಯ, ಪೂರಮಗಾಂಭೀರ್ಯಗಳನ್ನು ಕಂಡು, ಪ್ರೋ. ಗಾರ್ಡ್ ಎಂಬ ಇಂಗ್ಲೆಂಡ್ ಬ್ಯಾರಿಸ್ಟರರೂ ದಿಗಿಲುಗೊಂಡಿದ್ದರು.

ಬ್ಲಿಸ್ಟಾರ್ಡ್ ಲೇಖನ ಬರೆದದ್ದಕ್ಕಾಗಿ ತಿಲಕರನ್ನು ಅವಾದಿತರನ್ನಾಗಿ ಮಾಡಿ, ಬ್ರಿಟಿಷ ಸರಕಾರವು ಅವರನ್ನು ವಿಚಾರಣೆಗೆ ಗುರಿಪಡಿಸಿತು. ಆಗ ಒಂಗಾಲಿನ ಜನರು ತಿಲಕರ ಸಂರಕ್ಷಣೆಗಾಗಿ ಬಂಗಾಲದಲ್ಲಿಯೇ ವರ್ಗಣಿಯನ್ನು ಕೂಡಿಸಿ ಕಲಕತ್ತೆಯಲ್ಲಿ ಏಸ್ಕ್ವೈರ್ ಬ್ಯಾರಿಸ್ಟರಾದ ಶ್ರೀ. ಗಾರ್ಡ್‌ನರ್‌ನ್ನು ತಿಲಕರ ಪರವಾಗಿ ಹೋರಾಡಲು ಬೂಂಬಯಿಗೆ ಕಳುಹಿಸಿದರು. ಗಾರ್ಡನರು ತಿಲಕರ ಕರ್ತೃತ್ವ ಪಾಂಡಿತ್ಯವನ್ನು ತಂದು ಬೆರಗಾ....." I may not agree with Tilak's politics. But there is no question that he is a remarkable man." ಎಂದು ಉದ್ಗಾರ ತೆಗೆದದ್ದುಂಟು.

ರಾಜಕೀಯ ಅಂಬೋಲನದಲ್ಲಿ ಪ್ರಾರಂಭದಿಂದಲೇ ತಿಲಕರು ಧುಮುಕಿದ್ದರೂ ಮೂಲತಃ, ಅವರು ಪಕ್ಕಾ ಸಂಸಾರ ಪುರುಷ ವಿದ್ವಾಂಸರಾಗಿದ್ದರು. ಇಂಡಿಯಾದಲ್ಲಿ ಬ್ರಿಟಿಷ ಸರಕಾರವು ತಿಲಕರನ್ನು ಸೆರೆಹಿಡಿದು ಬ್ರಹ್ಮದೇಶದಲ್ಲಿ ಮಂಡಾಲೆಯ ಸೆರೆಮನೆಯಲ್ಲಿ ಒಯ್ದು ಇಟ್ಟಿತು. ಆ ಸೆರೆಮನೆಯಲ್ಲಿ ತಿಲಕರು ೬ ವರುಷಗಳ ಕಾಲ ಬಾಸ ಮಾಡಿದ್ದರು. ಆ ಅವಧಿಯಲ್ಲಿಯೇ ಎಂದರೆ ೬ ವರುಷ ಗಾಣಾಚಕ್ಕು ತಿರುಗಿದ ಅವರ ಹೆಂಡತಿ ತೀರಿಕೊಂಡರು. ಆ ಸಮಯದಲ್ಲಿ ಅವರು ಸೆರೆಮನೆಯಲ್ಲಿ --- ಅದೂ ಖಾಯಿಲೆಯಿಂದ ಬಳಲಿ ದೂರದ ಸೆರೆಮನೆಯಲ್ಲಿ. ಆಗ ಅವರು ತಮ್ಮ ಆಪ್ತನಿಗೆ ಬರೆದ ಪತ್ರವನ್ನು ಓದಿದರೆ, ಅದನ್ನೇ ಕಿತ್ತು ಬರುವಂತಾಗುತ್ತದೆ. ಆ ಪತ್ರದ ಮೊದಲ ಎರಡು ಸಾಲುಗಳನ್ನೇ ಓದಿದರೆ ಆ ದುಃಖಿಷ್ಟಿಕೆಯ ಚಿತ್ರ ಕಣ್ಣಾಂದೆ ಕಟ್ಟುತ್ತದೆ.

Central Jail,
Mandalay
8th June, 1912

My dear Dhondu

Your wire was a very great and heavy blo I am used to take my misfortunes calmly, but confess that the present shook me considerab According to the beliefs ingrained in us it is n undesirable that the wife should die before h husband. What grieved me most is my enforce absence from her side at this critical time. this was to be, I always feared it, and it has last happened But I am not going to trouble y further with my sad thoughts. One chapter of life is closed and I am afraid it wont be lo before another will be....."

I am yours affectionatel
BAL GANGADHAR TIL

ಅಸ್ಪೃಶ್ಯರಲ್ಲಿಯು ಸ್ಪೃಶ್ಯ ಪಾಲ್ಕೆಯೂ ಹಿಂದೂಗಳ ಗುಣವನ್ನು ಇಂಚಿಚ್ಚಿದೆ ಹಂಚಿರುವಲ್ಲಿಯು ತಂದೆ ಜಕ್ಕಿದವ ಸ್ಪೃಶ್ಯರು ಸಾಮಿನ ಸಾಲಾದವನ್ನು ಪ್ರತಿಯು ಸಮಾಜದ ಅಮೂಲ್ಯವನ್ನು ಬಂಧಿಸುವುದೂ ಮಾಡಲಿಲ್ಲ. ಶಿಕ್ಷಣದ ಕೆಲ್ಲಿಸೆಯಾಬಾಗಿ ಮಾನವನ್ನು ಸಂಪಾದಿಸಿಕೊಂಡರೇ ವಿನಾ ಸಮಾಜವನ್ನು ಮಾಡಿಯಾರಿಲ್ಲ. ಅದಕ್ಕಾಗಿಯೇ ಸ್ಪೃಶ್ಯರ ಸಮಾಜವೆಲ್ಲ ಶಿಕ್ಷಣದಲ್ಲಿ ಶೆಲ್ಲಿ ಎಂದೂ ಮೇಲಿದ್ದ ಒಂದು ಭಾಗವಾದ ಕಲ್ಲು ಎಂದು ಬಗೆದಿದ್ದಿತು. ಗಾಂಧಿ-ಗಾಂಚನೆಯು ರಭಸ ಶಿಕ್ಷಣದ ಪ್ರಭಾವದ ಫಲವು ಅವರಾತ್ಮವಾಗಿ ಗಾಂಧೀಯುಗ ಸ್ವಾತಂತ್ರ್ಯಾಯುಗವೆಂದು ಕೆಲವರು ಭಾಗಿಸುವಾಗ್ಯೆಲ್ಲ ಅವರ ' ಶಿಸ್ತಿ ' ಯು ಹೊಲಿ ' ಸ್ವಾತಿ ' ಯಮಲಾಂಗಿಗಳ ನಾಟ ಪೆಸಾಪನ್ನು ತೆಳೆದಾಗ---- ಶಿಕ್ಷಣದ ಅಗಾಧ ಬೀಜವನ್ನು ಪಾಪಿಸ್ಟಾಂದು ರೀತಿಯಲ್ಲಿ ಸಾಮಾಜಿಕಾಭಿವೃದ್ಧಿಯನ್ನು ಶೆಕ್ಕಿಸಿದರು. ಶಿಕ್ಷಣ ಸುಸ್ಪಷ್ಟ ಗಾಂಧಿ ಜ ಎಂಬ ಸ್ಪೃಶ್ಯರಲ್ಲಿ ಸಾಮಾನ್ಯ ಶಿಕ್ಷಣಾಭಿವೃದ್ಧಿಯಲ್ಲಿ ವಿಲ್ಲ. ಇದೆಲ್ಲವೂ ಸ್ಪೃಶ್ಯರ ಚಾಮರದ ರೀತಿಯಲ್ಲಿ ಸ್ಪೃಶ್ಯಾಭಿವೃದ್ಧಿಯಾಗಿ ಅಸ್ಪೃಶ್ಯರ ಅಂತಿಮ ಗುರಿ ಒಂದೇ ಆಗಿದ್ದರೂ ಸಾಧನಗಳು ಬೇರೆ. ಸಾಧನವಾಗಿಯೂ ಸ್ಪೃಶ್ಯರ ದಾರಿ ಭಿನ್ನವಾದಾಕ್ಷಣ ಗುರಿ ಬೇರೆಯಾಗಿರುವುದು. ಬಾಬಾಸಾಹೆಬರು ಸ್ಪೃಶ್ಯರನ್ನು ಕುರಿತಾಡಿದ ಅನೇಕ ಸಂದರ್ಭಗಳಲ್ಲಿ ಸ್ಪೃಶ್ಯರು ಸಮಾಜವೆಂದರೆ ಅಸ್ಪೃಶ್ಯರಿಗೆ ಸಂಬಂಧವಿಲ್ಲದ ಅಲೆಯವರೆಂದು ಅವರು ಭಾವಿಸಿದ್ದಾರೆ. ಅಸ್ಪೃಶ್ಯರಿಗೆ ಸಂಬಂಧವಿಲ್ಲದ ಅಲೆಯವರಿಗೆ ಶಿಕ್ಷಣವೆಂಬ ಅಮೃತವನ್ನು ಸವಿಸಿಕೊಳ್ಳಲು ಹೇಳಿದರೆ ಅವರು ಕೇಳಿಯಾರೆಯೆ? ಅಸ್ಪೃಶ್ಯರ ಪ್ರಶ್ನೆಯನ್ನು ಅವರು ಸಮಾಜದ ಪ್ರಶ್ನೆಯೆಂದು ಭಾವಿಸಿಲ್ಲ. ಹೀಗಾಗಿ ಅವರು ಅಸ್ಪೃಶ್ಯರ ಪ್ರಶ್ನೆಯನ್ನು ಸಮಾಜದ ಪ್ರಶ್ನೆಯಾಗಿ ಪರಿಹರಿಸಲು ಪ್ರಯತ್ನಿಸಲಿಲ್ಲ. ಅಸ್ಪೃಶ್ಯರ ಪ್ರಶ್ನೆಯನ್ನು ಸಮಾಜದ ಪ್ರಶ್ನೆಯಾಗಿ ಪರಿಹರಿಸಲು ಪ್ರಯತ್ನಿಸಿದವರು ಬಾಬಾಸಾಹೆಬರು ಮಾತ್ರ. ಆದುದರಿಂದಲೇ ಅವರನ್ನು "Maker of Modern India" ಎಂದು ಕೆಲವರು ಹೊಗಳಿದ್ದಾರೆ.

ಸುಂದರ ಮಹಾರಾಷ್ಟ್ರದ ಕಾಲದಲ್ಲಿ ಬ್ರಿಟಿಷ ಪರಿಣಾಮದ ಪ್ರಭಾವವಾಗಿ ಮಹಾರಾಷ್ಟ್ರದ ಜನತೆಯು ತಮ್ಮ ಪರವಾಗಿ ಮಾತಾಡುವವನ್ನಿಲ್ಲವೆಂಬ ಕೊರಗು ಅವರಲ್ಲಿ ಬಲವಾಗಿತ್ತು. ಆಗ ಅವರಲ್ಲಿ ಬಾಲಗಂಗಾಧರ ತಿಲಕರು ಹುಟ್ಟಿ ಬಂದರು. ಅವರು ಮಹಾರಾಷ್ಟ್ರದ ಜನತೆಯ ಮನಸ್ಸನ್ನು ಸೂರೆಗೊಂಡರು. ಅವರು ಮಹಾರಾಷ್ಟ್ರದ ಜನತೆಯ ಮನಸ್ಸನ್ನು ಸೂರೆಗೊಂಡಂತೆ ಬಾಬಾಸಾಹೆಬರು ಅಸ್ಪೃಶ್ಯರ ಮನಸ್ಸನ್ನು ಸೂರೆಗೊಂಡರು. ಅಸ್ಪೃಶ್ಯರ ಮನಸ್ಸನ್ನು ಸೂರೆಗೊಂಡ ಬಾಬಾಸಾಹೆಬರು ಅಸ್ಪೃಶ್ಯರ ಮನಸ್ಸಿನಲ್ಲಿ ಸ್ವಾಭಿಮಾನದ ಕಿಚ್ಚನ್ನು ಹೊತ್ತಿಸಿದರು. ಈ ಸಿಟ್ಟಿನಲ್ಲಿ ಮಹಾರಾಷ್ಟ್ರದಲ್ಲಿ ಬಾಲಗಂಗಾಧರ ತಿಲಕರು 'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು' ಎಂದು ಸಾರಿದಂತೆ ಬಾಬಾಸಾಹೆಬರು 'ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು' ಎಂದು ಸಾರಿದರು. ಕೊಡಗಿನಲ್ಲಿ ಸ್ವಾತಂತ್ರ್ಯ ಚಳುವಳಿಗೆ ಬಲವಿಲ್ಲದಿರುವ ನಿಶ್ಚಿತ ಪರಿಸ್ಥಿತಿಯನ್ನು ಕೊಡಗಿನವರೊಬ್ಬರು ಪತ್ರಿಕೆಯಲ್ಲಿ ಪ್ರಕಟಿಸಿದಾಗ ಅದಕ್ಕೆ ಉತ್ತರವಾಗಿ ಸ್ವಾತಂತ್ರ್ಯ ಚಳುವಳಿಯನ್ನು ಜನ್ಮಸಿದ್ಧ ಹಕ್ಕಾಗಿ ಪರಿಗಣಿಸಿಕೊಳ್ಳಬೇಕೆಂಬ ಅರ್ಥದ ಲೇಖನವೊಂದನ್ನು ಬರೆದಿದ್ದೆ. ಈ ವಿಷಯದ ಬಗ್ಗೆ ನಿಜವಾಗಿಯೂ ಪೂರ್ಣಪ್ರಜ್ಞೆ ತಿಲಕರು ಸ್ವರಾಜ್ಯಾಭಿಮಾನವನ್ನು ಕಂಡು ಅವರ ಬೆನ್ನನ್ನು ತಟ್ಟಿದರು " My good

ರಸಿ--ಯಿಸ್ಸಾಗಳೆಲ್ಲಿ ಕಂಗಿ--ಯೀಮಿಗಳೆಲ್ಲಿ
ಪು ಸ್ಪೃಶಿವಾಲಯ ಪೂಂಪ್ರಿ ಪ ಮೂಲಾ
ಸಾಲಾಪ್ತಿಯು ಚಿಸ್ಸಾಗಳ ಮಾಲಾ
ಪೂರಾಯ್ಯಾಲಿ ಪ್ಯಾಪಿಲ್ಲಾ--ನ್ಸ್ಸಾ ಕಂಗಳ ಮಾಲಾ

ನಾಸ್ಪೃ ಶಿಸ್ಸಾ ಗುಮಾನಿಗಳ ಸಡಿಲ ಪ್ರಜಾಕಾಂ ಮಾಡುವಿಸ್ಸಿ.
ಆಂಪಿಸಿಂಡ ಸಿಲ್ಲಿಸಿಸಿ ಪ್ಪಿಲಾಲ್ ಪೀಂಪಿಲಿಂಗ್ ಪಲ್ಲಾ
ಗಾಂಪಿಗಳಿಲ್ಲಿ ಪ್ರಾಪಿಲಾಲ

I said, you have not burnt your fingures as yet while playing with this Government. During the last 10 years my fingures have burnt more than once. When you see your fingures burnt I am sure you will go ahead of us " ಎಂದು ನುಡಿದರು. ಇದರಿಂದಾಗಿ ಬಾಬಾಸಾಹೆಬರು ಮಹಾರಾಷ್ಟ್ರದ ಜನತೆಗೆ 'ಸ್ವರಾಜ್ಯ ಮಹಾಜನ್ಮಸಿದ್ಧ ಹಕ್ಕು' ಎಂಬ ಘೋಷಣೆಯನ್ನು ಕೊಟ್ಟರು. ತಿಲಕರು ಕೊಟ್ಟಿದ್ದ ಘೋಷಣೆಯನ್ನು ಸಾಕಾರಗೊಳಿಸಿದ ಗಾಂಧೀಜಿಯವರ ಚಾಲನೆಯಲ್ಲಿ ಸ್ವಾತಂತ್ರ್ಯ ಚಳುವಳಿ ಸಾಗಿ ಬಂದಿತು.

ಈ ವಿಷಯದ ಬಗ್ಗೆ ಬಾಬಾಸಾಹೆಬರು ಅಭಿಪ್ರಾಯ ಹಂಚಿಕೊಂಡಿದ್ದಾರೆ. ಭಾರತದ ಸ್ವಾತಂತ್ರ್ಯಹೋರಾಟದ ಕುರಿತು ಅವರು " We cannot measure giants by our normal yard stic. I remember that in my boyhood and youth, whenk I had not met Tilak, how powerfully I was influenced by him. He seemed to be the embodiment of Indian Nationalism struggling for freedom. Millions in India were influenced by him in this way and so he moulded the thinking of two generations of our people and undoubtedly, brought them up to that pitch of endeavour and sacrifice which later resulted in India's Freedom....." ಎಂದು ಬರೆದಿದ್ದಾರೆ.

ತಿಲಕರು ಒಳ ಮನಸ್ಸಿನ ಭಾವನೆಯ ಸ್ವಾತಂತ್ರ್ಯವು ರಾಜಕೀಯ ಸ್ವಾತಂತ್ರ್ಯವಾಗಿ ಗಾಂಧಿಯುಗದಲ್ಲಿ ಸಾಕಾರಗೊಂಡಿತು ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಬಿನ್ನವಿಸಿ ಬರೆದುಕೊಂಡ ಪ್ರಕಾರ, 'ರಮ್-ರಮಿ' ಕಥೆಯನ್ನು ಕುರಿತು ೧೧ ಜನರಿಂದಲೂ 'ಸಂಶಯ ಪಿಶಾಚಿ' ವಿನೋದ ದೃಶ್ಯ ಕುರಿತು ೩ ಜನರಿಂದಲೂ ವಿಮರ್ಶೆಗಳು ಬಂದಿವೆ.

'ರಮ್-ರಮಿ'ಯ ವಿಮರ್ಶಕರು:

೧ "ಗುಮ್ಮ, C/o ಸರಸ್ವತೀ ವಿದ್ಯಾರಣ್ಯ ಪ್ರಾಚನಾಲಯ, ಹುಬ್ಬಳ್ಳಿ. ೨ ಶ್ರೀ. ಬಿ. ಪಿ. ಕಟ್ಟಿ, ಶಹಾಬಾದ. ೩ "ಕಲಾ" ಮಲ್ಲೇಶ್ವರಂ—ಬೆಂಗಳೂರು. ೪ ಶ್ರೀ. ಶಿ. ಶಂ. ಕರಿಗುದರಿ, ಹಾನಗಲ್ಲು. ೫ ಶ್ರೀ. ಗೋಪಾಲಕೃಷ್ಣ ಸ. ಹೆಗಡೆ, ಕೇರಿಮನೆ (ಉ. ಕ.). ೬ ಶ್ರೀ. ಭೀ. ಗಂ. ತ. ಪುಣೆ. ೭ ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು. ೮ ಶ್ರೀ. ಶಂ. ಗು. ಬಿರಾದಾರ, ಬಬಲೇಶ್ವರ. ೯ 'ಎನ್ಮೆಸ್ಕೆ' ಕೆನರಾ ಕಾಲೇಜ್ ಕುಮಟಾ. ೧೦ ಶ್ರೀ. ಎಚ್. ಸೀತಾರಾಮರಾವ್, ಹೊಸಬಾಳೆ. ೧೧ ಶ್ರೀ. ಎಸ್. ಮಲ್ಲಣ್ಣ, ನಿಜಾಮ್‌ಕಾಲೇಜು, ಹೈದರಾಬಾದು.

'ಸಂಶಯಪಿಶಾಚಿ'ಯ ವಿಮರ್ಶಕರು:

೧ ಶ್ರೀ. ಬಿ. ಪಿ. ಕಟ್ಟಿ, ಶಹಾಬಾದ. ೨ ಶ್ರೀ. ಗೋಪಾಲಕೃಷ್ಣ ಹುನಗುಂದ, ಮುಳುಂದ (ಮುಂಬಯಿ) ೩ ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು.

ನಿರ್ಣಾಯಕರು ಈ ಬಗೆಯಾಗಿ ತಮ್ಮ ನಿರ್ಣಯ ಕೊಟ್ಟಿರುವರು:

'ರಮ್-ರಮಿ' ಕಥೆಯ ವಿಷಯವಾಗಿ ಬಂದ ವಿಮರ್ಶೆಗಳಲ್ಲಿ **ಶ್ರೀ. ಶಂ. ಗು. ಬಿರಾದಾರ** ಮತ್ತು **ಶ್ರೀ. ಕೆ. ಎಸ್. ಶರ್ಮಾ** ಅವರ ವಿಮರ್ಶೆಗಳು ಅತ್ಯುತ್ತಮವಾಗಿವೆ. **ಶ್ರೀ. ಎಸ್. ಮಲ್ಲಣ್ಣ, 'ಎನ್ಮೆಸ್ಕೆ'** ಮತ್ತು **'ಕಲಾ'** ಅವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕುವೆಲ್ಲ ಸಾಮಾನ್ಯವಾಗಿವೆ.

'ಸಂಶಯ ಪಿಶಾಚಿ' ದೃಶ್ಯದ ವಿಮರ್ಶೆಗಳಲ್ಲಿ **ಶ್ರೀ. ಕೆ. ಎಸ್. ಶರ್ಮಾ** ಅವರದು ಅತ್ಯುತ್ತಮವಾಗಿದೆ. ನಿಕ್ಕುವೆರಡೂ ಚೆನ್ನಾಗಿವೆ.

ಮುಂದಿನ ಸಂಚಿಕೆಯ ನೇಲಾಟಕ್ಕಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ 'ಒಲವು' ಎಂಬ ಸಣ್ಣಕತೆಯನ್ನು ಕುರಿತು ವಿಮರ್ಶೆ ಬರೆದು ಕಳುಹಬೇಕು. ಅಲ್ಲದೆ—'ಅದು ಇಂದಿನ ನಡುವೆ' ಎಂಬ ಕವನವನ್ನೂ ಈ ಸಲದ ವಿಮರ್ಶೆಗೆ ಇರಿಸಲಾಗಿದೆ.

—ಸಂಪಾದಕ

"ರಮ್-ರಮಿ"

(ಕಥಾವಿಮರ್ಶೆ)

ಶ್ರೀ. ಶಂ. ಗು. ಬಿರಾದಾರ, ಬಬಲೇಶ್ವರ

'ರಮ್-ರಮಿ' ಹೆಸರು ಆಶ್ಚರ್ಯದಾದರೂ ಕಾರ್ಯ ಆಶ್ಚರ್ಯದಲ್ಲ. 'ಕುಡುಕುತನ-ಜೂಜಿನಾಟ' ಎಂಬ ಹೆಸರು ಎಲ್ಲರಿಗೂ ಚಿರಪರಿಚಿತ, ಹಲವು ಜನರು ಈ ಕಾರ್ಯಗಳ ಸವಿಯನ್ನೂ ಬಲ್ಲರು! ಆದರಿಂದ ಸಾಕಷ್ಟು ಅನುಭವ ಪಡೆದರೂ ಮತ್ತೆ ಅದಕ್ಕೆ? ನೀತು ಬೀಳುತ್ತಾರೆ. ಅದು ಅಷ್ಟು ಆಕರ್ಷಕವಾದುದು—ಮೋಹಕವಾದುದು. 'ವಿನೋದಕ್ಕಾಗಿ—ಸೊಗಸಿಗಾಗಿ—ಸಂತೋಷಕ್ಕಾಗಿ—ಸಂಪಾದನೆಗಾಗಿ' ಎಂದು ಜನರು ಈ ಹವ್ಯಾಸಕ್ಕೆ ಬೀಳುತ್ತಾರೆ; ಆದರೆ ನೋಡಕ?....ವಿಲಾಸಿಯೆ? ಸೊಗಸುಗಾರನೆ? ಕೈಯಲ್ಲಿ ಸಾಕಷ್ಟು ಹಣ ಓಡಾಡುತ್ತದೆ ಎಂದು ಈ ಕಾರ್ಯ ಕೈಕೊಂಡನೆ? ಆನಂದಕ್ಕಾಗಿ ಕೆಲಕಾಲ ಇದಕ್ಕಾಗಿ ಮೀಸಲಿಡುತ್ತಿದ್ದನೆ? ಸಂಗತಿಯ ದೋಷದಿಂದ ಈ ವೃತ್ತಿಗಿಳಿದನೆ? ಏತಕ್ಕಾಗಿ?—

' ಮನಸ್ಸಿನ ಗಾಯವನ್ನು ಮರೆಯಿಸುವುದಕ್ಕಾಗಿ "
" ಗಾಯ ಮಾಯಿತೆ ? "
" ಇಲ್ಲ, ಬೆಳೆಯಿತು ! "
" ಈಗ....? "
" ಧೈರ್ಯ ತಂದುಕೊಳ್ಳುವುದಕ್ಕಾಗಿ ! "
" ಎಂತಹ ಧೈರ್ಯ ?."
" ಸಾವನ್ನು ಸುಲಭವಾಗಿ ಅಪ್ಪಿಕೊಳ್ಳುವ ಧೈರ್ಯ ! "

ಇದಕ್ಕಾಗಿಯೇ ಮೋಡಕ ಈ ಕಾರ್ಯಕ್ಕೆ ಅಂಟಿಕೊಂಡಿದ್ದಾನೆ. ಪ್ರತಿನಿತ್ಯ ಮನೆಯಲ್ಲಿ ಹೆಣ ಕದ್ದುಕೊಂಡು ಕ್ಲಬ್ಬಿಗೆ ಹಾಜರಿ ಹಾಕುತ್ತಾನೆ. ಕುಡುಕತನ – ಜೂಜಿನಾಟ – ಕಳವು ಇವು ಬಾಳಿನ ಅಧಃಪತನದ ನಿವಿಧ ಮುಖಗಳು ! ಮನದ ಗಾಯ ಮಾಯಿಸುವುದ ಕ್ಕಾಗಿ ಕುಡುಕತನ – ಜೂಜಿನಾಟ. ಇವುಗಳಿಗಾಗಿ ಕಳವು ! ಒಂದ ಕ್ಕೊಂದು ಹೀನವೃತ್ತಿಗಳು. ಇವುಗಳನ್ನು ಮೋಡಕ ತಾನಾಗಿಯೇ ಆಮಂತ್ರಿಸಿದ್ದಾನೆ. ಅವನ ಜೀವನದಲ್ಲಿ ಒದಗಿದ ಒಂದು ದುರ್ಘಟ ನೆಯೆ ಇದಕ್ಕೆ ಕಾರಣ.

ದ. ಚಿ. ಮೋಡಕ ಗೋವೆಯ ಹೈಸ್ಕೂಲಿನಲ್ಲಿಯ ಒರ್ವ ಶಿಕ್ಷಕ. ಮೈಸೂರಿನ ಪ್ಯಾಲೇಸ್ ಡಾಕ್ಟರ್ ಮೋಡಕ ಅವರು ಇವನ ತಂದೆ. ಧಾರವಾಡದ ವಕೀಲರ ಮಗಳೊಡನೆ ದ. ಚಿ. ಮೋಡಕ ಪ್ರೇಮ-ವಿವಾಹ ಮಾಡಿಕೊಂಡ. ಹೆಂಡತಿಯ ನೌಕರಿಯ ಬೆಂಬಲದಿಂದ ತಾನು ಮೋಸದಿಂದ ಸಂಪಾದಿಸಿದ ನೌಕರಿಗೆ ರಾಜೀನಾಮೆಯಿತ್ತ; ಆದರೆ ಹೆಂಡತಿಯೂ ತನ್ನ ನೌಕರಿಗೆ ರಾಜೀನಾಮೆ ಕೊಟ್ಟಿರುವುದಾಗಿ ತಿಳಿಸಿದಾಗ, ಅವನಿಗಾದ ವ್ಯಥೆ ಹೇಳತೀರದು. ಅವನಿಗೆ ಮುಂದಿನ ದಾರಿ ಕಾಣದಾಯಿತು. ಹೆಂಡತಿಯ ಒತ್ತಾಯದ ಮೇರೆಗೆ ಅವಳನ್ನು ತನ್ನ ತಂದೆಯ ಮನೆಗೆ ಕರೆತಂದ. ತಂದೆ ಮಹಾಜಿಪುಣ. ತಾಯಿ ಸರ್ವಾಧಿಕಾರಿಣಿ. ಇವಳಿಗೆ ಸಹಾಯಕರು ಸಹೋದರಿಯರಿಬ್ಬರು. ಇಂತಹ ವಿಷಮವಾತಾವರಣದಲ್ಲಿ ಸತಿ-ಪತಿಗಳಿಬ್ಬರೂ ನಿತ್ಯ ನರಳುತ್ತಾರೆ. ಇಂತಹದರಲ್ಲಿಯೆ ಗಂಡುಮಗುವೊಂದು ಜನಿಸುತ್ತದೆ. ಮನೆಯವರ ವಿಪರೀತ ತೊಂದರೆ ಸಹಿಸದೆ, ಮೋಡಕನ ಹೆಂಡತಿ ಆತ್ಮ-ಹತ್ಯೆಯ ವಿಚಾರವನ್ನು ಗಂಡನಿಗೆ ಸೂಚಿಸುತ್ತಾಳೆ. ಮೋಡಕ ಅದಕ್ಕೆ ಒಪ್ಪುತ್ತಾನೆ. ಮಗುವಿನೊಂದಿಗೆ ಇಬ್ಬರೂ ಕಾವೇರಮ್ಮನ ಸೇತುವೆಗೆ ಬಳಿ ಬರುತ್ತಾರೆ. ' ಮೂವರೂ ಒಮ್ಮೆಲೆ ಹಾರೋಣ ' ಎಂದು ಹೆಂಡತಿ ಮಗುವನ್ನು ಗಂಡನ ಕೈಗಿತ್ತು ಹೇಳುತ್ತಾಳೆ. ಕೂಡಲೆ ಆಕೆ ಹಾರಿಕೊಂಡು ಕಾವೇರಮ್ಮನಲ್ಲಿ ಲೀನಳಾಗುತ್ತಾಳೆ. ಆದರೆ ಮೋಡಕ ? ಕೂಸನ್ನೆತ್ತಿಕೊಂಡು ಮರಳಿ ಮನೆಗೆ ಬರುತ್ತಾನೆ. ಅವನ ಮುಂದಿನ ಜೀವನವೆಲ್ಲ ' ರಮ್-ರವಿ ' ಯಲ್ಲಿಯೆ ಕಳೆಯುತ್ತದೆ. ಅವರಿಂದಲೇ ಅವನು ಸಾವನ್ನು ಸುಲಭವಾಗಿ ಅಪ್ಪಿಕೊಳ್ಳುವ ಧೈರ್ಯ ಸಂಪಾದಿಸಿ, ಅದೇ ಕಾವೇರಮ್ಮನಲ್ಲಿ ಹಾರಿಕೊಂಡು ಹೆಂಡತಿಯನ್ನು ಸೇರುತ್ತಾನೆ. ಇಷ್ಟು ಈ ಕತೆಯ ಸಾರ.

ಈ ಕತೆಯಲ್ಲಿ ಮುಖ್ಯವಾಗಿ ನಮ್ಮ ಕಣ್ಮುಂದೆ ನಿಲ್ಲುವ ವ್ಯಕ್ತಿ ಯೆಂದರೆ ದ. ಚಿ. ಮೋಡಕ. " ವ್ಯಕ್ತಿ-ವ್ಯಕ್ತಿಗಳ ಸ್ವಭಾವವೈಷಮ್ಯವೇ ಈ ಅದ್ಭುತಗಳಿಗೆ ಮೂಲಕಾರಣ " ಎಂದು ಸಂಪಾದಕರು ಹೇಳಿ ದಂತೆ, ದ. ಚಿ. ಮೋಡಕನ ಪ್ರೇಮದಾಂಪತ್ಯದ ಜೀವನ ಹಾಳಾಗಿ ಹೋಗಲು, ಅವನ ಸ್ವಭಾವವೇ ಕಾರಣವೆಂದು ಸ್ಪಷ್ಟವಾಗಿ ಹೇಳಿ ಬಹುದು. ಅವನು ಯಾವ ಕಾರ್ಯವನ್ನೂ ಗಂಭೀರವಾಗಿ ವಿಚಾರಿಸಿ ಕೈಕೊಂಡವನಲ್ಲ. ಪ್ರತಿಯೊಂದರಲ್ಲಿಯೂ ದುಡುಕುತನ ಎದ್ದು ಕಾಣುತ್ತದೆ. ಚಂಚಲತೆ ಅವನ ಬಾಳಿನುದ್ದಕ್ಕೂ ಬೆನ್ನಟ್ಟಿದೆ. ಮನಸ್ಸಿನ ಅಧೈರ್ಯವೂ ಇದಕ್ಕೆ ಪುಟ ಕೊಟ್ಟಿದೆ. ಎಲ್ಲವನ್ನೂ ಮಿಕ್ಕಿ ಪ್ರೇಮ ಅವನ ಮನವನ್ನು ಆವರಿಸಿದೆ. ದುಡುಕುತನ, ಚಂಚಲತೆ, ಕೋಮಲತೆ, ಅಧೈರ್ಯ ಇವುಗಳಿಂದಾಗಿಯೆ ಅವನ ಬಾಳು ಹಾಳಾಯಿತು. ಯಾರನ್ನೂ ವಿಚಾರಿಸದೆ ವಕೀಲರ ಮಗಳನ್ನು ಲಗ್ನವಾಗುತ್ತಾನೆ. ಲಗ್ನವಾಗುವ ಮೊದಲೇ ಹೆಂಡತಿಯ ನೌಕರಿಯ ಬೆಂಬಲದಿಂದ ತನ್ನ ನೌಕರಿಗೆ ರಾಜೀನಾಮೆ ಸಲ್ಲಿಸುತ್ತಾನೆ. ಮೋಡಕನು ಇಲ್ಲಿ ಸ್ವಲ್ಪ ಸಾವಧಾನದಿಂದ ನಡೆದುಕೊಂಡಿದ್ದರೆ, ಅವನ ಸ್ಥಿತಿ ಶೋಚನೀಯವಾಗುತ್ತಿರಲಿಲ್ಲ. ತಾನೇನೊ ತಮ್ಮನ ಪ್ರಮಾಣ-ಪತ್ರದ ಮೇಲಿಂದ ನೌಕರಿ ಸಂಪಾದಿಸಿದ್ದ; ಅದು ದಕ್ಕಲಾರದೆಂದು ಅವನಿಗೆ ಗೊತ್ತು. ಆದರೆ ಮುಂಜೆ ಹೆಂಡತಿಯೊಡನೆ ವಿಚಾರಿಸಿ ಈ ಕಾರ್ಯ ಕೈಕೊಂಡಿದ್ದರೆ !....ಇಲ್ಲಿ ತನ್ನ ದುಡುಕುಸ್ವಭಾವದಿಂದಾಗಿ ಸಂಕಷ್ಟವನ್ನು ಮೈ[illegible]ಲೆ ತಂದುಕೊಳ್ಳುತ್ತಾನೆ. ಇನ್ನು ಹೆಂಡತಿ " ನನಗೆ ಕಾವೇರಮ್ಮನೇ ಗತಿ; ಸಾಕು ! ನಮಗೆ ಮತ್ತೆ ಈ ಜಗತ್ತು ಬೇಡ " ಎಂದು ಸಾವಿನ ಸೂಚನೆ ಮಾಡಿದಾಗ, ಅದಕ್ಕೆ ಒಮ್ಮೆಲೆ ಒಪ್ಪಿಗೆಕೊಡುತ್ತಾನೆ. ಮೋಡಕನು ಇಷ್ಟೊಂದು ಸುಲಭವಾಗಿ ಆತ್ಮ-ಹತ್ಯೆಗೆ ಹೇಗೆ ಒಪ್ಪಿಕೊಂಡ ?—ಎಂಬ ಪ್ರಶ್ನೆ ಓದುಗರ ಮುಂದೆ ಬಂದು ನಿಲ್ಲುವುದು ಸಹಜ. ಇದಕ್ಕೆ ಅವನ ಮನಸ್ಸಿನ ಶಿಥಿಲತೆಯೆ ಮುಖ್ಯ ಕಾರಣವೆನ್ನಬಹುದು. ಮೋಡಕನಿಗೆ ತನ್ನ ಭಾವೀಜೀವನದ ದಾರಿ ಕಾಣದಾಗಿದೆ. ಮನೆಯ ಕಠೋರ ವಾತಾವರಣದಿಂದಾಗಿ ಇಬ್ಬರ ಹೃದಯಗಳೂ ಬೆಂದುಹೋಗಿವೆ. ಆದರೆ ಈ ಕಾರಣದಿಂದಾಗಿ ಗಂಡುಸಾದ ಮೋಡಕನು ಹೆಂಡತಿ ಹಾಗು ಮಗುವಿನೊಡನೆ ಆತ್ಮ-ಹತ್ಯೆಯ ದಾರಿ ಹಿಡಿಯುವುದು ಯೋಗ್ಯವೆ ? ಇಲ್ಲಿ ಕೂಡ ಮೋಡಕನ ದುಡುಕುತನ ಎದ್ದು ಕಾಣುತ್ತದೆ. ಹೆಂಡತಿ ನದಿಯಲ್ಲಿ ಹಾರಿಕೊಂಡಾಗ, ಕೈಯಲ್ಲಿಯ ಮಗುವಿನ ಮುಖ ಕಂಡಾಗ ಅವನಲ್ಲಿ ಕರುಣೆಯ ಸೆಲೆ-ಯೊಡೆಯುತ್ತದೆ. ಚಂಚಲತೆ ತನ್ನ ಅಧಿಕಾರ ನಡಿಸುತ್ತದೆ. ಅಧೈರ್ಯ ಅವನನ್ನು ಮನೆಯ ದಾರಿ ಹಿಡಿಸುತ್ತದೆ.

ಹೆಂಡತಿಯ ಪ್ರೇಮ ಅವನ ಬಾಳಿನುದ್ದಕ್ಕೂ ನಶಿಸಲಿಲ್ಲ. ಅವಳು ಹೋದನಂತರ ಅದು ವಿರಾಟ್‌ಸ್ವರೂಪ ತಾಳುತ್ತದೆ. " ನೀನು ನನಗೆ ಮೋಸ ಮಾಡಬೇಕೆ ? " ಎಂದು ಹೆಂಡತಿ ಎದುರು ನಿಂತು ಕೇಳಿದಂತಾಗುತ್ತದೆ. ಅವನಿಗೆ ತನ್ನ ಚಂಚಲತೆ ಅಧೈರ್ಯತನ ಗಳಿಗಾಗಿ ಹೇಸಿಗೆ ಬರುತ್ತದೆ. ಅವುಗಳನ್ನು ಹೊಡೆದೋಡಿಸಲು ಈ ' ರಮ್-ರವಿ ' ವೃತ್ತಿ ಕೈಕೊಳ್ಳುತ್ತಾನೆ. ಅದೇ ಅವನ ಅಧೈರ್ಯ-ಚಂಚಲತೆಗಳಿಗೆ ಔಷಧಿಯಾಗುತ್ತದೆ— ಬಾಳಿನ ಮುಕ್ತಾಯಕ್ಕೆ ನಾಂದಿಯಾಗುತ್ತದೆ. ಮೋಡಕನ ಚಿತ್ರ ಸ್ಪಷ್ಟವಾಗಿದೆ. ಅವನ ಒಬ್ಬ ಓದುಗರಲ್ಲಿ ಕನಿಕರ ಉದಿಸುತ್ತದೆ; ಅನುಕಂಪ ಹುಟ್ಟುತ್ತದೆ.

ಇನ್ನು ಎರಡನೆಯದಾಗಿ ಮೋಡಕನ ಹೆಂಡತಿಯ ವಿಚಾರ. ಅವಳು ಸಾಧ್ವಿಯಾಗಿ ನಡೆದುಕೊಂಡಳು. ತನ್ನು ಪ್ರೇಮಿಸಿದ ಪತಿ ನಿರುದ್ಯೋಗಿ; ಅತ್ತೆ ಮಹಾಮಾರಿ; ಮಾವ ಜಿಪುಣರ ಗುರು; ನಾದಿನಿಯರು ಮಂಥರೆಯರು. 'ಇಂತಪರ ಕೈಯಲ್ಲಿ ಆಕೆ ಜೀವನ ಸಾಗಿಸಿದಳು. ಆದರೆ ಆಕೆ ಯಾವ ಆಕೆ ಇರಿಸಿಕೊಂಡು ಮೋಡಕನ ಕೈಹಿಡಿದಿದ್ದಳು! ಅವಳ ಆ ಎಲ್ಲ ಆಶೆಗಳು ಮಣ್ಣುಪಾಲಾದಾಗ—ಸ್ವಾತಂತ್ರ್ಯದ ಬಯಕೆಯಿಂದಾಗಿ ಪ್ರೇಮವಿವಾಹ ಮಾಡಿಕೊಂಡ ಅವಳು ಪಾರತಂತ್ರ್ಯದಲ್ಲಿ ಚಿರಂತನ ಕಾಲಕಳೆಯಬೇಕಾಗಿ ಬಂದಾಗ—ಜೀವನ ಬೇಸರವಾದುದು—ಬೇಡವಾದುದು ಆಶ್ಚರ್ಯವಲ್ಲ. ಆದರೆ ಆಕೆಗೆ ಒಬ್ಬಳೇ ಆತ್ಮಹತ್ಯೆ ಮಾಡಿಕೊಳ್ಳುವ ಇಚ್ಛೆ ಇದ್ದ ಹಾಗಿರಲಿಲ್ಲ. ತಾನು ಇಲ್ಲದಾಗ, ಅನಂತರ ತನ್ನ ಪತಿ ಹಾಗು ಮಗುವಿಗೆ ಈ ಜಗತ್ತಿನಲ್ಲಿ ಸುಖ ಸಾಧ್ಯವಿಲ್ಲವೆಂಬುದು ಅವಳಿಗೆ ಖಚಿತವಾಗಿದ್ದಿತೇನೋ! ಸಾಧ್ವೀ ಸತಿಗೆ ಪತಿಯದೇ ಯೋಚನೆಯಲ್ಲವೆ? ಅಂತೆಯೆ 'ಒಟ್ಟಿಗೆ ಬೀಳೋಣ' ಎಂದು ಹೇಳುತ್ತಾಳೇನೋ! ನುಡಿದಂತೆ ಆಕೆ ನಡೆದು ತೋರಿಸಿದಳು. ಆದರೆ ಆಕೆಗೆ ಸಾವಿನ ದಾರಿಯೊಂದೆ ಇದ್ದಿತೆ? ಬೇರೆ ದಾರಿ ಸಾಧ್ಯವಿರಲಿಲ್ಲವೆ? ಇದನ್ನು ಸ್ವಲ್ಪ ಸೂಕ್ಷ್ಮವಾಗಿ ವಿಚಾರಿಸಬೇಕಾಗಿದೆ.

ಮೋಡಕನ ಪ್ರೇಮವನ್ನು ಬಯಸಿದವಳು ಅವನು ಕೈಹಿಡಿದವಳು. ಇಬ್ಬರೂ ನಿರುದ್ಯೋಗಿಗಳಾಗಿ ಮುಂದಿನ ದಾರಿ ಕಾಣದಾದಾಗ—"ತಮ್ಮ ತಂದೆಯ ಮನೆಯಲ್ಲಿ ಹೋಗಿ ಇರೋಣ; ಅವರು ಎಷ್ಟವರೇ ಇದ್ದರೂ ನಾನು ಸಹಿಸಿಕೊಂಡು ಸಾಗುವೆ" ಎಂದು ಹೇಳಿದಳು. ಆವನು ಅದರಂತೆ ನಡೆದುಕೊಂಡ. ಅಲ್ಲಿಯ ವಿರಸಜೀವನ ಬೇಡವಾದಾಗ—"ನಾವು ಮೂವರೂ ಕಾವೇರಮ್ಮನಲ್ಲಿ ಹಾರಿಕೊಳ್ಳೋಣ." ಎಂದು ಸೂಚಿಸಿದಳು; ಅದಕ್ಕೂ ಅನುಮತಿಯಿತ್ತ. ಇದರಿಂದ ಮೋಡಕನ ಬಾಳಿನಲ್ಲಿ ಅವನ ಹೆಂಡತಿಯು ಪಾತ್ರ ದೊಡ್ಡದು ಎಂದು ತಿಳಿದುಬರುತ್ತದೆ ಅವಳು ಮನಸ್ಸು ಮಾಡಿದ್ದರೆ, ಅವರ ಬಾಳಿನ ಹಡಗ ಒಡೆಯುತ್ತಿರಲಿಲ್ಲವೇನೋ! ಹೇಗೂ ಅವಳು ಸುಶಿಕ್ಷಿತಳು. ಪ್ರಯತ್ನ ಮಾಡಿದ್ದರೆ ಬೇರೆ ಎಲ್ಲಿಯೂ ಅವರಿಗೆ ಉದರಜೀವನಕ್ಕೆ ಸಾಧ್ಯವಾಗುವಷ್ಟು ಆಶ್ರಯ ಸಿಗುತ್ತಿರಲಿಲ್ಲವೆ? "ನಿಮಗಾಗಿ ನಾನು ಮತ್ತೆ ಯತ್ನ ಮಾಡುವೆ" ಎಂದು ಆಕೆ ಒಂದು ಬಾರಿಯೂ ಆಡಲಿಲ್ಲ. ಹೀಗೇಕೆ? ಇನ್ನು ಆಕೆಯ ಆತ್ಮಹತ್ಯೆ ಮಾಡಿಕೊಳ್ಳುವ ವಿಚಾರವಾದರೂ ತಾತ್ಕಾಲಿಕವಾದುದು. ಮುದ್ದಾದ ಮಗುವಿದೆ; ಹೇಳಿದಂತೆ ಕೇಳುವ ಗಂಡನಿದ್ದಾನೆ; ಅವರಿಗಾಗಿಯಾದರೂ ಬಾಳಬೇಡವೆ? ಆತ್ಮಹತ್ಯೆಗೆ ಒಂದು ಆಕಸ್ಮಿಕ ಘಟನೆ ಬೇಕು. ನಿತ್ಯದ ತೊಂದರೆ ಮೈಯುಂಡಷ್ಟಕ್ಕೆ, ಒಂದು ಮಗುವಾದ ಮೇಲೆ ಒನ್ಮೈಲಿ ಈ ಜವ್ಯಾಸಕ್ಕೆ ಬೀಳುತ್ತಾಳೆ. ಆ ದಿನ ಅಂತಹ ವಿಶೇಷ ಘಟನೆಯಾವುದೂ ನಡೆದಂತೆ ಕಂಡುಬರುವುದಿಲ್ಲ. ಲೇಖಕರು ಇಲ್ಲಿ ಆ ದಿನ ಮೋಡಕ ಹಾಗು ಅವನ ಸತಿಯ ಮನಸ್ಸಿಗೆ ಸಹಿಸಲುಸಾಧ್ಯವಾದ ಯಾವುದಾದರೊಂದು ತೊಂದರೆಯ ಘಟನೆಯನ್ನು ಚಿತ್ರಿಸಿದ್ದರೆ, ಇದಕ್ಕೂ ಹೆಚ್ಚು ಸಮಂಜಸವಾಗುತ್ತಿತ್ತು. ಇದೇನೋ ಸತ್ಯಜೀವನದ ಕತೆಯಿರಬಹುದು. ಆದರೆ ಸತ್ಯಜೀವನಕ್ಕೂ ನಿತ್ಯಜೀವನಕ್ಕೂ ಬಹಳಷ್ಟು ಅಂತರ ಬರದ ಹಾಗೆ ನೋಡಿಕೊಳ್ಳಬೇಕಾದುದು ಲೇಖಕನ ಕರ್ತವ್ಯ. ಈ ಸೂಕ್ಷ್ಮ ಕೊರತೆಯೊಂದನ್ನುಳಿದು ಉಳಿದ ದೃಷ್ಟಿಯಿಂದ ಮೋಡಕನ ಸತಿಯ ಚಿತ್ರ ಚೆನ್ನಾಗಿದೆ ಎಂದೇ ಹೇಳಬಹುದು.

ಈ ಕತೆಯಲ್ಲಿ ಇನ್ನುಳಿದವರೆಂದರೆ ಮೋಡಕನ ತಂದೆ–ತಾಯಿಗಳು; ಅವನ ಸಹೋದರಿಯರು ಹಾಗು ಲೇಖಕರು. ಇವರ ಪಾತ್ರ ತೀರ ಕಡಿಮೆ ಇದೆ. (ಲೇಖಕರನ್ನುಳಿದು) ನೂರೆಂಟು ಮಾತುಗಳಿಂದಾಗದ ಕಾರ್ಯವನ್ನು ಲೇಖಕರು ಇಲ್ಲಿ ಒಂದೊಂದೇ ಮಾತುಗಳಿಂದ ಸಾಧಿಸಿದ್ದಾರೆ. 'ತಂದೆ ಹಣದ ದೆವ್ವ' 'ತಾಯಿ ಪ್ರತ್ಯಕ್ಷ ಆನಂದೀಬಾಯಿ' 'ಸಹೋದರಿಯರು ಮಂಥರೆ ನಂ. ೧; ಮಂಥರೆ ನಂ ೨' ಒಂದೊಂದೇ ವಾಕ್ಯಗಳಲ್ಲಿ ಅವರ ಪರಿಚಯ ಮಾಡಿದ್ದರೂ, ಅವರೆಲ್ಲರ ಚಿತ್ರ ಓದುಗರ ಕಣ್ಮುಂದೆ ಸಂಪೂರ್ಣವಾಗಿ ನಿಲ್ಲುತ್ತವೆ. ಆದರೆ ಇಲ್ಲಿ ಸ್ವಾಭಾವಿಕವಾಗಿರಬೇಕಾದ ತಾಯಿಯ ಕರುಳು ಕೆಂಚಿತ್ತಾದರೂ ಕಾಣಬರುವುದಿಲ್ಲ. ಮೊಮ್ಮಕ್ಕಳೆಂದರೆ ಹೆಂಗುಸರಿಗೆ ಪಂಚಪ್ರಾಣ. ಮಗುಹುಟ್ಟಿದ ಮೇಲಾದರೂ ಕೊಂಚ ಅವಳಲ್ಲಿ ಪ್ರೇಮ ಉದಿಸಬೇಕಿತ್ತು! ಇಲ್ಲಿ ಮೋಡಕರ ತಾಯಿಯ ಸ್ಥಾನದಲ್ಲಿ ಮಲತಾಯಿಯನ್ನು ಸೇರಿಸಿದ್ದರೆ ಇನ್ನಿಷ್ಟು ಸ್ಪಷ್ಟವಾಗಬಹುದಿತ್ತು.

ಕತೆಯ ವಸ್ತು ಹೊಸತಲ್ಲವಾದರೂ, ನಿರೂಪಣೆಯಲ್ಲಿ ಹೊಸತನವಿದೆ. ಲೇಖಕರೊಡನೆ ನಡೆದ ಕಥಾನಾಯಕನ ಸಂಭಾಷಣೆಯೊಂದಿಗೆ ಕತೆ ಪ್ರಾರಂಭವಾಗುತ್ತದೆ ನಾಯಕನೆ ತನ್ನ ಕತೆ ಹೇಳುತ್ತಾನೆ. ಆರಂಭದಿಂದ ಕೊನೆಯವರೆಗೂ ಕತೆ ತುಂಬ ಕುತೂಹಲಕಾರಿಯಾಗಿದೆ. ಮುಕ್ತಾಯವಂತೂ ಒಳ್ಳೆ ಪರಿಣಾಮಕಾರಿಯಾಗಿದೆ—ಕತೆ ತುಂಬಿಬಂದ ಹೊಳೆಯಂತೆ ಭರದಿಂದ ಓಡಿದೆ. ಎಲ್ಲಿಯೂ ಅಡೆ-ತಡೆಯಾಗಿಲ್ಲ. ಸುಂದರ ಶೈಲಿ, ಚಿತ್ತಾಕರ್ಷಕವಾದ ಸಂಭಾಷಣೆ, ಹಿತವಾದ—ಮಿತವಾದ ಭಾಷೆ ಇವುಗಳಿಂದೊಡಗೂಡಿದ ಈ ಕತೆಯು, ಒಂದೆರಡು ಸೂಕ್ಷ್ಮದೋಷಗಳನ್ನು ಕೊಚ್ಚಿಕೊಂಡು ರಭಸದಿಂದ ಓಡಿದೆ. ಲೇಖಕರಾದ ಶ್ರೀ. ವೆಂ. ಮು. ಜೋಶಿ ಅವರಿಂದ ಇದಕ್ಕೂ ಮೇಲ್ಮಟ್ಟದ ಕೃತಿಗಳನ್ನು ನಿರೀಕ್ಷಿಸಿದರೆ ತಪ್ಪಾಗಲಿಕ್ಕಿಲ್ಲ.

ಸಂಶಯಪಿಶಾಚಿ

(ವಿನೋದದೃಶ್ಯ)

ವಿಮರ್ಶಕರು: ಕೆ. ಎಸ್. ಶರ್ಮಾ, ಕಾಸರಗೋಡು

ಜೀವನಸಹಜವಾದ ರಸಾನುಭವದಲ್ಲಿ— ಮಾನವನು ಮರುಳಾಗುವುದು ತುಂಬೆದೆಯಿಂದ ಬಯಸುವುದು—ಸಜೀವ ಹಾಸ್ಯರಸವನ್ನೆಂದರೆ ತಪ್ಪಲ್ಲ. ಹಾಸ್ಯಕ್ಕೆ ಮರುಳಾಗದ, ಹಾಸ್ಯವನ್ನು ಬಯಸದ, ಹೆಚ್ಚೇನು ಜೀವನವನ್ನೇ ಹಾಸ್ಯರಸದ ತನಿಗಡಲಲ್ಲಿ ತುಂಬಲು ಬಯಸದವನಿಲ್ಲವೆಂದೇ ಹೇಳಬಹುದು. ಅಷ್ಟೊಂದು ಸೆಳವಿದೆ ಹಾಸ್ಯಕ್ಕೆ!

ಹಾಸ್ಯಜನ್ಯವಾದ ಅನುಭವವು ಸಂತೋಷವೆನ್ನಬಹುದು! ಆದುದರಿಂದಲೆ—" ಸಂತೋಷವೇ ಜನನ— ಚಿಂತೆಯೆ ಮುಪ್ಪು!" ಎಂಬೀ ಮಾತು ಸಾರ್ಥಕ್ಯದಲ್ಲಿದೆ.

× × × ×

ಪ್ರಸ್ತುತ 'ಸಂಶಯ ಪಿಶಾಚಿ'ಯು ಒಂದು ವಿನೋದಚಿತ್ರ! ಸಂಶಯಕ್ಕೆರವಾಗಿ ನಿಂತ,—ಜೀವನದ ಸಕಲ ಸುಖಮಾರ್ಗವನ್ನು ಭದ್ರವಾಗಿರಿಸಿ—ಯಾವೊಂದುಪಯೋಗಕ್ಕೂ ಹೊಂದಿಸಿಕೊಳ್ಳದ ಧನರಾಶಿಯಲ್ಲೇ ಜೀವನದ ಪೂರ್ಣಸ್ವರೂಪವನ್ನು ಕಂಡ— ಮಾನವನೊಬ್ಬನ ಹೃದಯಗತ ಸಂಶಯಪಿಶಾಚಿಯನ್ನು, ದೃಶ್ಯವಿದು ಸೊಗಸಾಗಿ ನಿರೂಪಿಸುತ್ತಿದೆ. ವ್ಯಕ್ತಿಯು ಧನಲೋಲುಪನಾದಾಗ, ಕೃಪಣನಾದಾಗ, ಜೀವನಧರ್ಮವನ್ನು ಮರೆತಾಗ, ತಾನಾಗಿ ಸಂಶಯ ಪಿಶಾಚಿಯು ಅವನೆದೆಯಲ್ಲಿ ತಾಂಡವವಾಡುವುದು. ಈ ತಾಂಡವಕ್ಕನುವಾಗಿ ಕೆಲವೊಂದು ಪರಿಸ್ಥಿತಿಗಳೂ ಬಂದರೆ—ಕೊನೆಗೊಂದು ದಿನ ಅದುವೆ ಮಾನವನು ತನ್ನನ್ನೇ ಕುರಿತು ಬೆದರಿ— ಸಂಶಯ ಪಿಶಾಚಿಗೆಶರಣಾಗಿ ಬಿಡುಗೈಯವನಾಗುವುದೂ ಅಸಂಭವವಲ್ಲ! ಆಗ ಮಾತ್ರ ಅವನು ಬಣ್ಣ ಬದಲಿಸುವನು. ಇದುವೆ ಪರಿಣಾಮ.

ಸಂಭಾಷಣಾಯುಕ್ತವಾಗಿ, ದೃಶ್ಯಸಂಯೋಜನಾಮೂಲವಾಗಿ, ಹರಿದುಬರುವ ರೂಪಕವು—ಶದಂತರ್ಗತ ಪಾತ್ರಗಳ ಪರಿಚಯವನ್ನೂ ತಾನೆತ್ತಿದ ವಸ್ತುವಿನ ಪೂರ್ಣರೂಪವನ್ನೂ ಈಯುವುದದು ಅವಶ್ಯಂಭಾವ್ಯವೆನ್ನಬೇಕು. ಆದುದರಿಂದಲೆ ರೂಪಕನಿರ್ಮಾಣವು ಸುಲಭವಲ್ಲ; ಬಹು ಜಾಗರೂಕನಿರಬೇಕು ರಚಯಿತನು. ಅಲ್ಲೂ ಏಕಾಂಕ ನಿರೂಪಣವೆಂದರೆ ಹೊಣೆ ಹಿರಿದು. ಆದರಲ್ಲೂ ವಿನೋದಮೂಲವಾಗಿಯೆ ಹರಿದುಬರುವ ಕಥನಕ್ರಮವೆಂದರೆ ಬಹು ಗಡಚಿನದೆನ್ನಬೇಕು. ಯಾವ ಭಾಗದಲ್ಲೂ ಸಂಭಾಷಣೆಗಳು, ಸಂಭಾಷಣಾಂತರ್ಗತ ಭಾವಮಾಧುರ್ಯವು ಒಂದಿಷ್ಟೂ ಕೆಡಬಾರದು. ಎಲ್ಲೆತಪ್ಪಿ ಸಾಗಲೂ ಬಾರದು. ಸ್ವಾದ್ಯತ ಕಥಾವಸ್ತುವಿಗನುವಾಗಿ, ಸ್ವನಿರ್ಮಿತ ಪಾತ್ರಯೋಗ್ಯತೆಗನುವಾಗಿ ಪ್ರತಿಯೊಂದು ಘಟಕವೂ ಹಾಯಾಗಿ ಸಾಗುತ್ತಿರಬೇಕ ಸಾಗುದಾರಿಯು ತಿಳಿಯಾಗಿ, ನಿರ್ಮಲವಾಗಿ ಸಾಗಿದರೆ ಮಾತ್ರ ಓದುಗನೆದೆಗೆ ತೃಪ್ತಿ!

ಹಾಗೆಂದಾದರೆ—" ಸಂಶಯ ಪಿಶಾಚಿ?— (ಇಲ್ಲಿ ವಿಮರ್ಶಕರ್ಮ ದೃಶ್ಯವಸ್ತುವನ್ನು ಸಂಗ್ರಹಿಸಿ ಹೇಳಿದ್ದಾರೆ. ಸಂ. ಜ.)

ವಿನೋದದೃಶ್ಯವಿದರಲ್ಲಿ ಲೇಖಕರು ಕೇವಲ ಕಥಾಗತಿಗಾಗಿ ಸನ್ನಿವೇಶವನ್ನು ವಿಭಜನೆ ಮಾಡಿರುವದಷ್ಟೆ ಹೊರತು, ಬೇರಾವ ಬಗೆಯ ತಾಂತ್ರಿಕಪರಿಸ್ಥಿತಿಗೆ ದೃಶ್ಯಾಂತರಗಳನ್ನನುಗೊಳಿಸಿಲ್ಲ; ಆ ಪರಿಸ್ಥಿತಿಯು ಇದಕ್ಕೆ ಬೇಕೆಂದೂ ತೋರುವುದಿಲ್ಲ! ಕೇವಲ ಒಂದೇ ಒಂದು ಭಾವಗತಿಯು ಪೂರ್ಣತಃ ಇದರಲ್ಲಿ ಪ್ರವಹಿಸುವುದರಿಂದಲೇ, ಲೇಖಕರು ಒಂದೇ ದೃಶ್ಯದಲ್ಲಿ ವಸ್ತುವನ್ನು ಹೊಂದಿಸಿಕೊಂಡು ವಿನೋದಕ್ಕೊಂದು ನಾವೀನ್ಯವನ್ನೊಪ್ಪಗೊಟ್ಟಿದ್ದಾರೆನ್ನಬೇಕು!

ವಿನೋದದೃಶ್ಯವಿದು ಕೇವಲ ಮೂರು ಪಾತ್ರಗಳನ್ನೊಳಗೊಂಡು ನಿಂತಿದೆ. ರಾಯರು, ಶೀನಪ್ಪ—ಪುಟ್ಟವ್ವ!— ದೈವಭಕ್ತಿಯಲ್ಲೂ ಧನಪಿಶಾಚವನ್ನು— ತದ್ಭದ್ರತೆಯನ್ನು ಇರಗೊಡಿಸಿಕೊಂಡ ರಾಯರು, ಬಾಯಿಯಲ್ಲಿ ಮಂತ್ರೋಚ್ಚಾರವನ್ನೆಸಗಿ—ಹೃದಯದಲ್ಲಿ ಧನವಿಚಾರವನ್ನು ಜಪಿಸುತ್ತಿರುವ ವ್ಯಕ್ತಿ. ನ್ಯಾಯವಾಗಿ ಸಾಗಬೇಕಾದ ವೆಚ್ಚವನ್ನು ಮರೆಯಲ್ಲಿರಿಸಿ, ಸದಾ ಲೋಭತ್ವದ ತುತ್ತತುದಿಯನ್ನೇರಿ ನಿಂತವರು ರಾಯರು! ಆದರೇನು? ಸಂಶಯಪಿಶಾಚದ ಕೈಯಲ್ಲಿ ಸಿಕ್ಕಿಬಿದ್ದು—ತನ್ನನ್ನು ತಾನೇ ಕೊನೆಗೆ ಸುಧಾರಿಸಿಕೊಳ್ಳುವಂತಾದರು ರಾಯರು! ಇದು ಉಗ್ರ ನರಸಿಂಹನ ದಯೆಯೋ—ಶೀನಪ್ಪನ ಚಾಕಚಕ್ಯತೆಯೋ?— ಶೀನಪ್ಪ—ಪುಟ್ಟವ್ವರು ರಾಯರ ಆಶ್ರಯವನ್ನು ಹೊಂದಿನಿಂತ ದಂಪತಿಗಳು. ಪುಟ್ಟವ್ವ ಸ್ತ್ರೀಸಾಮಾನ್ಯಳಂತೆ— ನಡೆಯುವ ಒರ್ವ ಅಬಲೆ. ಈ ಪಾತ್ರವನ್ನು ಲೇಖಕರು ಸ್ತ್ರೀಸಹಜವಾದ ನೋಟದಲ್ಲೆ ಕಂಡಿದ್ದಾರೆ. ಆದರೆ ಶೀನಪ್ಪ ಹಾಗಲ್ಲ! ಬಲು ಸಾಹಸಿ ಪಾತ್ರವಲ್ಲ, ಚತುರನು. ರಾಯರ ಜೀವನದ ಹಿನ್ನೆಲೆಯನ್ನು ಚೆನ್ನಾಗಿ ಅಭ್ಯಾಸ ಮಾಡಿ—ಅವರ ಮಾನಸಿಕಾಂದೋಲನವನ್ನು ಸಾಧಿಸಿ—ಅವರನ್ನು ತನ್ನ ಸಂತೋಧನೆಯಿಂದ ಸಂಶಯಪಿಶಾಚಿಯ ಊರುಳಿಗೆ ಸಿಲುಕಿಸಿ—ಕಾರ್ಯಸಾಧಕನಾದನು. ಎಂದೆಂದೂ ರಾಯರವರನ್ನುಳಿಯದ ಬ[illegible]ನ್ನೇ ತನ್ನ ನೆಲೆಯನ್ನು ಸಾಧಿಸಿದ ಸಾಹಸಿಯಾತ.

ಹೀಗೆ ಈ ಮೂ[illegible] ಪಾತ್ರಗಳನ್ನು—ಪ್ರಸ್ತುತ ಕಥಾಭಾಗಕ್ಕನುವಾಗಿ ಹೊಂದಿಸಿಕೊಂಡ ಲೇಖಕರು, ಆ ಪಾತ್ರಗಳ ಪೂರ್ಣತೆಯನ್ನು ಒಲಿದಿದ್ದಾರೆನ್ನಬೇಕು!

ಇನ್ನು— ವಿನೋದವಿಸ್ತಾರ.....!!!

ನಾಟಕಾರಂಭದಲ್ಲಿ—ರಾಯರ ಕೇಶವಾಯನಮಃ ಮೊದಲಾದ ನಮಃ ಪರಂಪರೆಯಲ್ಲಿ ಸುಳಿಯುತ್ತಿದೆ—ಕೋಣೆಯ ಮುಂಚೀ ಬಾಗಿಲು ಹಾಕುವ ವಿಚಾರ. ಇದಕ್ಕಾಗಿ ರಾಯರು ಶೀನಪ್ಪನನ್ನು ಕರೆದು—ಬಾಗಿಲು ಮುಚ್ಚಲು ಹೇಳಿದರೂ, ಶೀನಪ್ಪನ ಸಮಾಧಾನದ ಉತ್ತರದಿಂದ ತೃಪ್ತರಾಗದೆ " ಏಳು ಲಿನ್ಹರಿನ ಬೀಗ " ಹಾಕಲು ಅದರ ವಿಧಾನವನ್ನೆಲ್ಲಾ ವ್ಯಕ್ತವಾಗಿ ಸೂಚಿಸುವರು. ಇದರ ಪರಿವಿಡಿಯಲ್ಲಿ ಮುಂದೆ ಬಂದ 'L'—'O' ಗಳ ಅರ್ಥವಿವರಣೆ— ಬೀಗವನ್ನು ಜಡಿವಾಗ ರಾಯರು ಸ್ವತಃ ಕೇಳುವಂತೆ ಮಾಡಬೇಕಾದ ಸದ್ದಿನ ವಿವರ—ಇವುಗಳು ಮೆಲುಮೆಲುವಾಗಿ ನಗೆಯಲೆಗಳನ್ನು ಹಾಯಿಸಿದರೆ— ಶೀನಪ್ಪನಾಡುವ " ಕೀಲಿ ಹಳೇದಾದರ ಲಿವರ್ ವರ್ಕ್ ಮಾಡೋದಿಲ್ಲ ಅಂತಾರೆ, ಮನುಷ್ಯನ ಲಿವರಿನದೂ ಹಾಂಗಽ ಅಲ್ಲೇನ್ರಿ ಮತ್ತ?" ಎಂಬೀ ಮಾತು ರಾಯರಿಂದ "ನೀನು ನನಗೆ ಶಹಣೇತನಾ ಕಲಿಸಬ್ಯಾಡ" ಎಂಬ ಮಾತಿನೊಡನೆ ಬೆರೆತರೆ— ನಾವದರ ಮುಂದೆ ನಗುವುದನ್ನುಳಿದು ಬೇರೇನು ಮಾಡಲಿದೆ?— ಅಲ್ಲಿಂದ ಮುಂದೆ ಶೀನಪ್ಪನನ್ನು ಕಳುಹಿದ ರಾಯರು— " ತಾನು ನಿಲ್ಲಿಸಿದ ಆಚಮನದ ಮಂತ್ರವನ್ನು" ಪುಟ್ಟವ್ವನೊಡನೆ ಕೇಳಿ— ಪುನರಾರಂಭಿಸುವುದು [illegible]ಸು ಜೆಲುವಾಗಿದೆ. ಅಂತೆಯೆ—ಒಳಗಿನಿಂದ ಕೇಳಿಸಿದ ಒಗ್ಗರಣೆಯ

ಕುರಿತು - ಜಪದ ಮಧ್ಯನಲ್ಲೇ— ಪುಟ್ಟಸ್ವಾಮಿಯನ್ನು "ಎರಡು ಸಾರೆ ಒಗ್ಗರಣೇ ಕೊಟ್ಟೇನು?" ಎಂದು ಕೇಳಿದ ರಾಯರು, ಆಕೆಯಿಂದ ಬಂದ ಉತ್ತರದಿಂದ ಸಮಾಧಾನಕ್ಕೆ ಬರುವುದು ಚೆಲುವಾಗಿದೆ. ಅಲ್ಲಿಂದ ಮುಂದೆ ಶೀನಪ್ಪನು ಜಡಿದ ಬೀಗದ ಸದ್ದನ್ನು ಕೇಳಿ—ಶೀನಪ್ಪನನ್ನು ಎಚ್ಚರಿಸುತ್ತ—ಕಳ್ಳರ ಭಯವನ್ನು ಶೀನಪ್ಪನ ಮೂಲಕವಾಗಿ ಶಂಕಿಸುವುದೂ—ಶೀನಪ್ಪನದೇ ಶಂಕೆಯನ್ನು—ರಾಯರ "ದಾವೋದರಾಯನಮಃ" ಜೊಡನೆ ಬೆರೆಸಿ, ರಾಯರ ಮೊದಲಪತ್ನಿಯ ವೃತ್ತಾಂತವನ್ನು ತಾನು ಕಂಡ ಸ್ವಪ್ನದ ನೆಲೆಯಲ್ಲಿ ವಿವರಿಸುವುದೂ—ದೃಶ್ಯಾಂತರ್ಗತ—ರಸಾನುಗುಣ ಸನ್ನಿವೇಶರಚನೆಗೆ ಪೂರ್ಮಿಕವಾದ ಹಿನ್ನೆಲೆಯಾಗಿದೆ. ಶೀನಪ್ಪನು ತಾನು ಕಂಡ ಸ್ವಪ್ನವೃತ್ತಾಂತವನ್ನು ನಿರೂಪಿಸುವಾಗ ನುಸುಳಿಬಂದ ಅವರಿಬ್ಬರ ಸಂವಾದಗಳು ರಸಾವಹವಾಗಿವೆಯೆನ್ನಬೇಕು. ಸಂಶಯ ಪಿಶಾಚಿಯು ಯಾವ ಬಗೆಯಲ್ಲಿ—ರಾಯರೆದೆಯಲ್ಲಿ ನೆಲೆಸಬಹುದೋ, ಆ ಬಗೆಯ ಸಂವಾದರಚನೆಯನ್ನೆಸಗಿ ನಿಷ್ಠೆಸಿದ ಲೇಖಕರು—ಸಫಲರಾಗಿದ್ದಾರೆನ್ನಬೇಕು. ಮುಂದೆ ರಾಯರ ಕೋಣೆಯ ಬಳಿ ಸಾಗುವುದು, ಶೀನಪ್ಪನು ಹಿಂದಿನಿಂದಲೆ ಬಂದು ಜಿಲಕ ಹಾಕಿ—ತನ್ಮೂಲಕವಾಗಿ ರಾಯರ ಚಿತ್ತಭಿತ್ತಿಯಲ್ಲಿ ಸಂಶಯವನ್ನುಲ್ಲೇಖಿಸುವುದು ಮಧುರವಾಗಿದೆ. ಶೀನಪ್ಪನು ತನ್ನ ಪತ್ನಿಯೊಡನೆ ತನ್ನ ಕಾರ್ಯಸಾಧಕಸಾಹಸವನ್ನು ತೋರುವಾಗ—ಆಕೆಯ ಬಾಳನ್ನು "ಸ್ಪೇನ್‌ಲೆಸ್ ತಾಟಿನ್ಹಾಂಗ ಲಕಲಕ ಹೊಳೆಯೋವಂಗಾರಿ, ಈಗ ಕಲಾಯಿ ಹಾರಿಹೋವ ತಬರಿ ಆಗೇದ"— ಎಂದೆನ್ನುವುದು ಸುಂದರವಾಗಿದೆ ಈ ಪ್ರಕರಣದಲ್ಲಿ ಶೀನಪ್ಪನ ಪೂರ್ಣಜ್ಞಾನ್ಯೆಯು ಪ್ರಕಾಶಿಸುವುದು. ಮುಂದೆ ಕಾಣಿಸುವ ರಾಯರ ಮನಃಪರಿವರ್ತನೆಯ ನಿರೂಪಣೆಯು ಏನೂ ಕುಸಿದಿಲ್ಲವೆನ್ನಬೇಕು. ಅಂತೂ ಇದೊಂದು ಸುಂದರ ವಿನೋದದೃಶ್ಯ!

ಹಿತಮಿತವಾದ ಸಂವಾದ, ರಸಾನುಗುಣಸನ್ನಿವೇಶನ ಕಲ್ಪನೆ, ಆವಶ್ಯಕ ಪಾತ್ರಸಂಪಾದನೆ, ವಾತಾವರಣಕ್ಕೊಪ್ಪಿದ ಭಾಷಾಕಲ್ಪನೆ—ಇವುಗಳಿಂದೀ ರೂಪಕವು ಸುಂದರವಿದೆ; ಸುಪುಷ್ಪವಿದೆ ಕೊನೆಯುದಾಗಿ ಶೀನಪ್ಪನಾಡಿದ "ಆಗಲಿ ನಡೀರಿ.... ನಿಮ್ಮ ಜೋಡಿಗೇ.... ಇರೋದಾದರೆ ಭರ್ತೀವಿ.... ಸಾಯೋದಾದರೂ ಸಾಯ್ತೀವಿ.... ನಿಮಗಾದದ್ದು ನಮಗ!"—ಮಾತಿನ ಮುಂದೆ, ನಾವೂ ಒನ್ಮೆ ಪೂರ್ಣರೂಪಕದ ಸಾರವನ್ನು ಸವಿದು— ತುಟಿಗಳೆಡೆಯಿಂದ ನಗೆಯನ್ನಿಳಿಸೋಣವೇ?

ಜಯಂತಿಯ ಸಹಾಯಕರು

(ಒಂದುಪತ್ರ)

"ಸಹೋದರ"

ಸಪ್ರೇಮ ವಂದನೆಗಳು,

ಕಳೆದ ತಿಂಗಳಲ್ಲಿ ಜಯಂತಿ ತನ್ನ ಹತ್ತೊಂಬತ್ತನೆಯ ವರ್ಷದಲ್ಲಿ ಕಾಲಿಟ್ಟಾಗ, ಜಯಂತಿಯು ಬಗ ಹೆಚ್ಚಾಗಬೇಕಾಗಿ, ಸಾಕುತಂದೆಯವರಾದ ನೀವು ಕೇಳಿಕೊಂಡಿದ್ದಿರಿ. ಆದರೆ ಜಯಂತಿಗೆ ಹೆಚ್ಚಾಗಿ ಮಧ್ಯಮ ವರ್ಗದವರೇ ಆಸ್ತರಾದ ಮೂಲಕವೂ, ರಾಷ್ಟ್ರದ ಬೆನ್ನೆಲುಬಾದ ಆ ವರ್ಗವನ್ನೇ ಸರಕಾರವೂ ಬಹುಜನ ಸಮಾಜವೂ ನಿರ್ಮೂಲ ಮಾಡಬೇಕೆಂದು ಹವಣಿಸಿರುವದರಿಂದಲೂ, ಹೆಚ್ಚಿನ ವಿಸ್ತರನ್ನು ಗಳಿಸಿಕೊಳ್ಳುವುದಕ್ಕಿಂತ, ಇದ್ದದ್ದರಲ್ಲಿಯೇ ಕಳೆದುಕೊಳ್ಳುವ ಸಂದರ್ಭ ಹೆಚ್ಚಾಗಿ ಬರುವಂತೆ ಕಂಡು ನಾನು ತುಂಬಾ ನೊಂದುಕೊಂಡಿದ್ದೇನೆ. ನಾನೂ, ಆಕೆಯಂತೆ ಮಧ್ಯಮವರ್ಗದವನೇ! ಆಕೆಯ ಕಷ್ಟಗಳನ್ನು ಅರ್ಥಮಾಡಿಕೊಳ್ಳುವುದು ನನಗೇನೂ ಕಷ್ಟದಾಯಕವಲ್ಲ. ಸಹಜವಾಗಿಯೇ ತಿಳಿಯುತ್ತವೆ. ಈಗ ೧೦ ವರ್ಷಗಳ ಹಿಂದೆ ನಾನು ಆಕೆಯನ್ನು ಕಂಡಾಗ, ೮ ವರ್ಷದ ಚಿಕ್ಕ ಮಗು ಅವಳು. ಅಂದೇ ಅವಳ ಮುಗ್ಧ ಮುಖ, ಆಂತರ್ಯ, ಮತ್ತು ನತತೆ ಎಂತಹ ಸಹೃದಯಿಯನ್ನೂ ಆಕರ್ಷಿವಂತಹದಾಗಿತ್ತು. ಅಂದಿನಿಂದ ಇಂದಿಗೂ ನಾನು ಆಕೆಯಲ್ಲಿ ಸಹೋದರಿತ್ವದ ಪ್ರೀತಿ ಇಟ್ಟುಕೊಂಡಿದ್ದೇನೆ. ಆಕೆ ಇಂದು ಬಾಲ್ಯ ಕಳೆದು ಯೌವನದಲ್ಲಿ ಕಾಲಿರಿಸಿದ್ದಾಳೆ. ಸಾಕುತಂದೆಯಾದ ನಿಮಗೆ ಆಕೆಯ ಸ್ವತಂತ್ರ ಬಾಳುವೆಯ ಚಿಂತೆ ಹೆಚ್ಚಾಗುತ್ತಾ ಇದೆ. ಆಕೆಯನ್ನು ಒಪ್ಪಿ ವರಿಸುವವರು ಮುಂದಾಗದ್ದಕ್ಕೆ ಕೊರಗುತ್ತಿದ್ದೀರಿ. ಇನ್ನೆಷ್ಟು ದಿನ ತಾನೆ ತವರಿನ ಋಣ ಉಣ್ಣಬೇಕು? ಸಹೋದರರಾದ ನಾವು ಈ ವಿಷಯದಲ್ಲಿ ಅಸಹಾಯಕರೂ, ಅಸಮರ್ಥರೂ ಆಗಿದ್ದೇವೆ.

ನಾಡಿನ ನುಡಿ-ಸಂಸ್ಕೃತಿಗಳ ಪ್ರತೀಕವಾಗಿ ಬೆಳೆದು ಸೌಜನ್ಯಶೀಲಳೂ, ಸುಶೀಲಳೂ ಆದ ಆಕೆಯಲ್ಲಿ ಒನಪು ವೈಯ್ಯಾರ, ಮೆರುಗಿನ ಥಳುಕು ಇಲ್ಲದೆ, ಜನಸಾಮಾನ್ಯರ ಚಿತ್ತ ಆಕರ್ಷಿಸುವುದು ಸಾಧ್ಯವಾಗಲಿಲ್ಲ.

ಆದರೆ ಇಂದು ಹರಿದು ಹಂಚಿಹೋದ ನಾಡು ಒಟ್ಟಾಗುವ ಸ್ಪೂರ್ದಭ್ರದಲ್ಲಿ ನಾಡಿನ ನುಡಿ, ಸಂಸ್ಕೃತಿ, ಸಾಹಿತ್ಯಕ್ಕೇನೇ ಅಧಿಕೃತ ಪ್ರೋತ್ಸಾಹ, ಪುರಸ್ಕಾರ ಸಿಗುವ ಸಂದರ್ಭದಲ್ಲಿ, ಚಿನ್ನಕ್ಕೆ ಮೆರುಗು ಕೊಡುವಂತೆ—ಅವುಗಳ ಪ್ರತೀಕಳಾದ ಜಯಂತಿ ಎಲ್ಲರ ಮನವನ್ನು ಸೂರೆಗೊಳ್ಳುವುದು ನಿಶ್ಚಿತ. ಆಗ ಜಯಂತಿಯ ಸುಗಮವಾದ ಮತ್ತು ಸ್ವತಂತ್ರವಾದ ಬಾಳುವೆಯ ದಿನ ಬಹು ದೂರವಿಲ್ಲ. ಅವುಗಳನು ನಿರೀಕ್ಷಿಸಿಯೇ ನೋತ ನಾವು ಇನ್ನು ಚೇತರಿಸಿಕೊಂಡಿದ್ದೇವೆ. ಏಕೀಕೃತ ನಾಡಿನಲ್ಲಿ ಜಯಂತಿ ಜಯಭೇರಿ ಹೊಡೆದು, ಈ ವರೆಗೂ ಅಪೇಕ್ಷಿಸಿದ ನಮ್ಮ ಆಶೆ-ಆಕಾಂಕ್ಷೆಗಳನ್ನು ಪೂರೈಸಿಸುವುದು ಖಂಡಿತ.

ಈ ಸಂದರ್ಭದಲ್ಲಿ ನೊದಲನೆಯ ಮತ್ತು ಮಾದರಿಯ ಹೆಜ್ಜೆಯಾಗಿ ನಾನು ಜಯಂತಿಗೆ ಆರುಜನ ಸಹೋದರರನ್ನು ಗಳಿಸಿಕೊಟ್ಟು ಹರಸುತ್ತಿದ್ದೇನೆ. ಆಕೆಯ ಪ್ರೀತಿಯ ಹಿರಿಯಣ್ಣನ ಈ ಪರಕೆ ಉಜ್ವಲ ಭವಿಷ್ಯದ ನಾಂದಿ ಆಗಲೆಂದು ದೇವರಲ್ಲಿ ಪ್ರಾರ್ಥಿಸುವೆ.

ಸಾದರ ಸ್ವೀಕಾರ

೨೩ **ಪ್ರಶ್ನೋತ್ತರಿ** (ಅನುವಾದದ ಕಿರುಹೊತ್ತಗೆ) ಮೂಲದಲ್ಲಿ ಸ್ವಾಮಿ ಶ್ರೀ ಶಂಕರಾಚಾರ್ಯರು ರಚಿಸಿದ 'ಪ್ರಶ್ನೋತ್ತರ ಮಣಿಮಾಲಾ' ಎಂಬ ಸಂಸ್ಕೃತ ಗ್ರಂಥದ ಕನ್ನಡ ಅನುವಾದ. ಪ್ರಕಾಶಕರು ಶ್ರೀ. ಘನಶ್ಯಾಮದಾಸ ಜಾಲಾನ, ಗೀತಾಪ್ರೆಸ್, ಗೋರಖಪುರ. ಚಿಕ್ಕ ಪುಟಗಳು ೩೨ ಬೆಲೆ ೦–೦–೬.

೨೪ **ಸೇವೆಯ ಮಂತ್ರಗಳು** (ಅನುವಾದಿತ ಕಿರು. ಹೊತ್ತಗೆ) ಶ್ರೀಮಾನ್ ಅರುಂಡೇಲ್ ಅವರು ಇಂಗ್ಲಿಷಿನಲ್ಲಿ ಬರೆದ 'ದಿ ವೇ ಆಫ್ ಸರ್ವಿಸ್' ಎಂಬುದರ ಕನ್ನಡಾನುವಾದ. ಪ್ರಕಾಶಕರು ಮೇಲೆ ಹೇಳಿದ ಗೀತಾ ಪ್ರೆಸ್ಸಿನವರೇ. ಚಿಕ್ಕ ಪುಟಗಳು ೩೨ ಬೆಲೆ ೦–೦–೬.

೨೫ **ಜಂಗಮವಾಡೀ ಮಠಕಾ ಪ್ರಾಚೀನತ್ವ** (ಹಿಂದೀ ಭಾಷೆಯಲ್ಲಿ ಬರೆದ ಪರಿಚಯಾತ್ಮಕ ಪುಸ್ತಕ) ಲೇಖಕರು ಶ್ರೀಮಾನ್ ಕೆಶೋರೀರಮಣ ರಾಣಾ ಅವರು. ಪ್ರಕಾಶಕರು: ಶೈವ ಭಾರತೀಭವನ, ಜಂಗಮವಾಡೀಮಠ, ಕಾಶೀ. ಡೆ. ಅ. ೨೦ ಪುಟಗಳು. ಬೆಲೆ ೦–೨–೦.

೨೬ **ಶ್ರೀ ಜಗದ್ಗುರು ಕಾಶೀಪೀಠದ ಜಡ್ಜ್‌ಮೆಂಟಿನ ಒಂದು ಭಾಗ** (ಕೋರ್ಟಿನ ನಿರ್ಣಯ ಕನ್ನಡ ಇಂಗ್ಲಿಷ್ ಭಾಷೆಗಳಲ್ಲಿ) ಕ್ರಾ. ಅ. ೩೨ ಪುಟಗಳು. ಬೆಲೆ ೦–೨–೦.

೨೭ **ಶ್ರೀಕರಭಾಷ್ಯಮ್** (ಸಂಸ್ಕೃತ ಗ್ರಂಥ) ಬ್ರಹ್ಮ ಸೂತ್ರದ ಮೊದಲಿನ ನಾಲ್ಕು ಸೂತ್ರಗಳ ಮೇಲೆ ಶ್ರೀಪತಿ ಪಂಡಿತಾಚಾರ್ಯರು ಬರೆದ ಭಾಷ್ಯವನ್ನು ಕೈ. ವಾ. ಚಿದರೇ. ಮಠದ ವೀರಭದ್ರ ಶರ್ಮ ಅವರು ಪರಿಷ್ಕರಿಸಿದುದು. ಪ್ರಕಾಶಕರು: ಶೈವ ಭಾರತೀಭವನ, ಜಂಗಮವಾಡೀಮಠ, ಕಾಶೀ. ಡೆ. ಆ. ೨೪ + ೮೮ ಪುಟಗಳು. ಬೆಲೆ ೧–೪–೦.

೨೮ **ಯಕ್ಷಗಾನ ಸಾಹಿತ್ಯ** (ವಿಮರ್ಶಾತ್ಮಕ ಪರಿಚಯಗ್ರಂಥ) ಲೇಖಕರು ಡಾ. ಕೆ. ಎಂ. ಕೃಷ್ಣರಾವ್ ಎಂ. ಎ. ಪಿಎಚ್. ಡಿ. ಅವರು ಧಾರವಾಡದ ಮಿಂಚಿನಬಳ್ಳಿಯ ೧೯ನೆಯ ವರ್ಷದ ಮೂರನೆಯ ಕುಡಿ. ಕ್ರಾ. ಅ. ೧೦೮ ಪುಟಗಳು. ಬೆಲೆ ಒಳ್ಳೆಯ ಪ್ರತಿಗೆ ೧–೮–೦ ಸಾಮಾನ್ಯ ಪ್ರತಿಗೆ ೧–೦–೦

೨೯ **ಕ್ರೀಡಾಂಗಣ** (ಕವಿತಾಸಂಕಲನ) ಲೇ. ಶ್ರೀ. ಎನ್. ಎಸ್. ಗದಗಕರರು. ಪ್ರಕಾಶಕರು ಪ್ರತಿಭಾಗ್ರಂಥಮಾಲೆ, ಧಾರವಾಡ. ಕ್ರಾ. ಅ. ೬ + ೪೬ ಪುಟಗಳು. ಬೆಲೆ ೦–೧೫–೦

೩೦ **ಶಿವಾನಂದ ಲಹರಿ** (ಸಂಸ್ಕೃತ ಗ್ರಂಥದ ಅನುವಾದಿತ ಪದ್ಯಗಳು) ಶ್ರೀ ಶಂಕರಾಚಾರ್ಯರು ಮೂಲ ಸಂಸ್ಕೃತದಲ್ಲಿ ಬರೆದ ಪದ್ಯಗಳನ್ನು, ಶ್ರೀ. ವಿ. ವಿ. ನಾಗಸೆಟ್ಟಿ ನಿವೃತ್ತ ಅಧ್ಯಾಪಕರು, ಕನ್ನಡಶಾಲೆ ಕಿತ್ತೂರ ಅವರು ಅನುವಾದ ಮಾಡಿರುವರು. ಲೇಖಕರೇ ಪ್ರಕಾಶಕರು. ಕ್ರಾ. ಅ. ೬೦ ಪುಟ್ಟಗಳು. ಬೆಲೆ ೦–೬–೦.

೩೧ **ದಾರಿದ್ರ್ಯದ ದುರಂತ ಮತ್ತು ಇತರ ಸಣ್ಣ ಕಥೆಗಳು** (ಕಥಾಸಂಕಲನ) ಶ್ರೀ. ಟಿ. ಎನ್. ಶ್ರೀನಿವಾಸ ಮೂರ್ತಿ ೪೭೭/೧ ಚೆಲುವಾಂಬಾ ಅಗ್ರಹಾರ, ಮೈಸೂರು ಅವರು ಬರೆದು ಪ್ರಕಟಿಸಿದುದು. ಕ್ರಾ. ಅ. ೬೦ ಪುಟಗಳು. ಬೆಲೆ ಒಳ್ಳೆಯ ಪ್ರತಿಗೆ ೦–೧೨–೦ ಸಾಮಾನ್ಯ ಪ್ರತಿಗೆ ೦–೮–೦.

೩೨ **ವಿವೇಕ** (ಯುವಕರ ಮಾಸಪತ್ರಿಕೆ) ಪ್ರಧಾನ ಸಂಪಾದಕರು ಶ್ರೀ. ಬಿ. ಎಸ್. ಸೂರ್ಯನಾರಾಯಣ ವ್ಯವಸ್ಥಾಪಕ ಸಂಪಾದಕರು ಶ್ರೀ. ಎಚ್. ವಿ. ತಿಮ್ಮೇಗೌಡ ಬಿ ಎ ಡಿ. ಸುಬ್ಬಯ್ಯ ರೋಡು, ಮೈಸೂರು. ಕ್ರಾ. ೧೪೦ ಪುಟಗಳು. ಬಿಡಿ ಸಂಚಿಕೆಗೆ ೦–೩–೦.

೩೩ **ಹೆಂಡ್ತಿ ಮತ್ತು ಮಾಂಗಲ್ಯಭಾಗ್ಯ** (ಎರಡು ಕಥೆಗಳು) ಬರೆದವರು ಶ್ರೀ. ಕೆ. ಗುಂಡಣ್ಣ ಪ್ರಕಾಶಕರು [illegible] ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರುನಗರ ಪೂ. ಕ್ಯಾ. ಅ. ೯೬ ಪುಟಗಳು. ಬೆಲೆ ೧–೪–೦.

೩೪ **ಮುಕ್ಕಳ ಮುರಲಿ** (ಮಕ್ಕಳಿಗಾಗಿ ಪದ್ಯ (ಸಂಕಲನ) ಬರೆದವರು 'ಆನಂದಾಗರ ಪ್ರಕಾಶಕರು ಜೇತನ ಪ್ರಕಾಶನ, ಬಸರೂರು (ದ. ಕ.) ಕ್ರಾ. ಅ. ೨೮ ಪುಟಗಳು. ಬೆಲೆ ೦–೪–೦.

೩೫ **ದಿವ್ಯೌಷಧಿ** (ಔಷಧಿ ವಿಷಯಕ ಗ್ರಂಥ) ಸಂಪಾದಕರು ವೈದ್ಯ ಬುರ್ಲಿ ಮಧ್ವಾಚಾರ್ಯರು. ಆಯು. ರ್ವೇದ ಸೇವಾಕುಟೀರರ ಆಶ್ರಮ, ಬಾಗಲಕೋಟ. ಕ್ರಾ. ಅ. ೮೮ ಪುಟಗಳು. ಬೆಲೆ ೨–೦–೦.

೩೬ **ತತ್ತ್ವರಸಾಯನ** (ಕಬೀರನ ತತ್ತ್ವಗಳ ಸಂಗ್ರಹಾನುವಾದ) ಲೇಖಕರು ಶ್ರೀಮಾನ್ ಎಸ್. ಆರ್. ಚಂದ್ರ. ಪ್ರಕಾಶಕರು ಯುವಕರ ಸಂಘ, ಕಳಂಜಬಾಳಿಲ (ದ. ಕ.) ಕ್ರಾ. ಅ. ೧೨ + ೪೦ ಪುಟಗಳು. ಬೆಲೆ ೧–೦–೦.

೩೭ **ತಾಯಿನುಡಿ** (ಕನ್ನಡ ವಾರಪತ್ರಿಕೆ) ಸಂಪಾದಕ ಮತ್ತು ಪ್ರಕಾಶಕರು: ಶ್ರೀ. ದತ್ತಾತ್ರೇಯ ಕೆ. ಮೆಂಡನ್, ೧೪೨ ಮೋದೀಸ್ಟ್ರೀಟ್, ಫೋರ್ಟ್, ಮುಂಬಯಿ. ಕ್ರಾ. ಫೋಲಿಯೊ ೪ ಪುಟಗಳು. ಬಿಡಿಸಂಚಿಕೆಗೆ ೦–೧–೦.

Printed by N. A. Hoskeri at the Vijaya Press, Dharwar and published for the Proprietors Jayanti publications, by K. S. Betgeri at the Jayanti Office, Dhrawar



ನಿಮ್ಮ ಮೋಬಿಲ್‌ಗ್ಯಾಸ್ ಸ್ಟೇಷನ್ನಿನಲ್ಲಿ ನಿಮಗೆ ಸರ್ವೋತ್ಕೃಷ್ಟವಾದ ಪೆಟ್ರೋಲು ಮತ್ತು ಕೀಲೆಣ್ಣೆಗಳು ಮಾತ್ರವಲ್ಲದೆ ನಿಮ್ಮ ಕಾರಿಗೆ ಪ್ರಪಂಚದಲ್ಲೆಲ್ಲಾ ಅತ್ಯುತ್ತಮ ಅನುಭವದ ಫಲವಾದ ತಜ್ಞ ಸರ್ವೀಸೂ ದೊರೆಯುತ್ತದೆ. ನಿಮ್ಮ ಹಣಕ್ಕೆ ಪೂರ್ಣ ಲಾಭ ಪಡೆಯಲು ಇಲ್ಲಿಗೆ ಬನ್ನಿ!

ಸ್ನೇಹಮಯ ಸೇವೆಯ ಸಂಕೇತ

Mobilgas

ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸ್-ದ್ವಿವಿಧ ರಕ್ಷಣೆ ಕೊಡುವ ಮೋಬಿಲಾಯಿಲ್-ಮೋಬಿಲೂಬ್ರಿಕೇಷನ್

ಸ್ಟ್ಯಾಂಡರ್ಡ್-ವ್ಯಾಕ್ಯೂಮ್ ಆಯಿಲ್ ಕಂಪೆನಿ

(ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾದಲ್ಲಿ ಸಂಸ್ಥಾಪಿತವಾದುದು; ಕಂಪೆನಿಯ ಮೆಂಬರುಗಳ ಹೊಣೆಗಾರಿಕೆಯು ವಿಶಿಷ್ಟ)

V. 29

ಇಂದು-ನಾಳೆ

ಇಂದಿನೀ ಜನಮನದ ಮುಗಿದ ನೊಗ್ಗರಳಿದರೆ
ನಾಳೆಯವರಿಗೆ ದೊರೆವುದದರ ಗಂಧ;
ಇಂದಿನವರೆದೆಗಲ್ಲು ಕರಗಿ ಕೆಳೆ ಹರಿಸಿದರೆ
ನಾಳೆಯವರಿಗೆ ಅದುವೆ ಅಮೃತದ
ಇಂದಿನೆಲ್ಲರ ಕರ್ಮ ಧರ್ಮವೆಂದೆನಿಸಿದರೆ
ನಾಳೆಯವರಾ ಬಾಳು ಬೆಲುವು-ಚೆಂದ;
ಇಂದಿನೆಲ್ಲರ ಪ್ರಜ್ಞೆ ಹಿಂಗೆದೆಯೆ ಮಿರುಗಿದರೆ
ಮುಂದೆ ಜನಕರದು ಕಾರಿರುಳ ಬಂಧ!

ಯಜ್ಞ ದಾನ-ತಪವಿಂದಿನ ಬಾಳಲಿ
ಎದ್ದು ಕಾಣುತಿರಲಿ....
ಕರುಣೆ ಮೈತ್ರಿ ಸಮ್ಮೋದಗಳ ಮೇಳವು
ಹಗೆಯ ಮಾಣುತಿರಲಿ!

ನಾಳೆಯ ಭಾರತದೇಳಿಗೆ ಬೇಕೇ
ದುಡಿಯಬೇಕು ಇಂದಿನ ಜನತೆ
ನಮ್ಮ ಕುನ್ನಿಗಳು ಮನ್ನೆಯರಾಗಲು
ಪಡೆಯಬೇಕು ಸ್ವಾತ್ಮದ ಘನತೆ!

— ಅನಂದಕಂದ

ಈ ಸಂಚಿಕೆಯಲ್ಲಿ

ಪ್ರಜಾಪ್ರಭುತ್ವ, ಅಧಿಕಾರವಾದ (ಸಂಪಾದಕೀಯ)
ಸಂಪಾದಕರು ೧೨೧

ನಾಡನಡೆ (ಸಾಂದರ್ಭಿಕ ಟಿಪ್ಪಣಿಗಳು)
ಕಾಲಭೈರವ ೧೨೩

ಅಶಾಂತಿಪರ್ವ (ಐತಿಹಾಸಿಕ ತರಂಗರೂಪಕ ಕೊನೆಯ—ಭಾಗ)
ಶ್ರೀ ಬೆಟಗೇರಿ ಕೃಷ್ಣಶರ್ಮ, ಧಾ[illegible]ಡ ೧೨೫

ಉಪವನ (ಕವನ)
ಶ್ರೀ ಬಾಳು ಬಿ. ಉಪಾಧ್ಯೆ, ಶ[illegible]ವಾಡಿ ೧೨೯

ಮಾನಸಶಾಸ್ತ್ರದ ಮೊದಲ ಹೆಜ್ಜೆಗಳು
ಪ್ರೊ. ಕೆ. ವ್ಹಿ. ಗಜೇಂದ್ರಗಡಕರ್ ಎಂ. ಎ., ಧಾರವಾಡ ೧೩೦

ಸೀತಾವಿಲಾಸ (ಕವನ)
ಶ್ರೀ ಎನ್[illegible]ಕುಲಕರ್ಣಿ, ಬಿ. ಎ., ಶಿಗ್ಗಾವಿ ೧೩೩

ಮೂರು [illegible]ಣ್ಣಕತೆ)
ಶ್ರೀ ಜಿ.[illegible]ಲ್, ಬಿ. ಎ., [illegible]. ಟಿ, ಉಜಿರೆ ೧೩೪

ಬುದ್ಧನಿಗೆ ವಂದನೆಗಳು (ಕವನ)
ಶ್ರೀ ಅರವಿಂದ ನಾಡಕರ್ಣಿ ಬಿ. ಎಸ್ಸಿ., ಎಲ್ಎಲ್. ಬಿ, ಮುಂಬಯಿ ೧೪೦

ಮುಗಿಲ ಮದುವೆ (ಕಾದಂಬರಿಯ ವಿಮರ್ಶೆ)
ಶ್ರೀ ಆರ್. ಜಿ ಕುಲಕರ್ಣಿ (ಬೆನಕಟ್ಟಿ) ಬಿ. ಎ. (ಆನರ್ಸ್), ಧಾರವಾಡ ೧೪೧

ಗುಂಡುಮಾಮಾನ ಯಾತ್ರೆ
ಶ್ರೀ ಪಿ. ವಿ. ಗುಡಿ, ಹೊಸದಿಲ್ಲಿ ೧೪೫

ಭೂಕ್ರಾಂತಿ (ಕವನ)
ಶ್ರೀ. ಎಚ್. ಜೆ ಉಪಾಧ್ಯಾಯ ಎಂ. ಎ. ಹೈದರಾಬಾದ್ ೧೪೭

ಬೆಳಕು—ಕತ್ತಲೆ (ಕವನ)
ಶ್ರೀ. ಮಹಾದೇವ ಬಣಕಾರ, ಧಾರವಾಡ ೧೪೮

ಪ್ರೇಮಪಾಠ (ಪತ್ರಕಥೆ)
ಶ್ರೀ. ಸಂಜೀವ ಲಕ್ಷ್ಮೇಶ್ವರ ಬಿ. ಎ- ಮುಂಬಯಿ ೧೪೯

ಸಾಹಿತ್ಯ ವನವಿಹಾರ
"ಏಪೊಳೆ ವೆಂಕಟೇಶ" ೧೫೪

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಶ್ರೀ. ಕೆ. ಎಸ್. ಶರ್ಮಾ, ಮತ್ತು ಶ್ರೀಮತಿ 'ಕಲಾ' ೧೫೭

ಸಾದರ ಸ್ವೀಕಾರ ಹೊದಿಕೆಯ ೩ನೆಯ ಪುಟದಲ್ಲಿ

ಜಯಂತಿ

ಸಂಪುಟ ೧೯ ಸಂಚಿಕೆ ೪

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೪ ಆಣೆ.

**
**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಪ್ರಜಾಪ್ರಭುತ್ವ, ಅಧಿಕಾರವಾಪ!

ಯಾವುದೇ ನಾಗರಿಕ ರಾಷ್ಟ್ರದ ಜನತೆಯು, ರಾಜಕೀಯ ಆಡಳಿತದ ವ್ಯವಸ್ಥೆಗೆ ಒಪ್ಪಿ ಒಳಗಾಗುವುದು, ಆ ರಾಷ್ಟ್ರದಲ್ಲಿ ಅವಿಚ್ಛಿನ್ನವಾದ ಸುಖ-ಸಮಾಧಾನಗಳು ನೆಲೆಸಲು ಅನುಕೂಲವಾಗಬೇಕು—ಎಂದು. ರಾಜನಂತಹ ವ್ಯಕ್ತಿಪ್ರಧಾನ ರಾಜಕೀಯ ಆಡಳಿತವೇ ಆಗಲಿ, ಪ್ರಜಾಪ್ರಭುತ್ವದಂತಹ ಜನತಾಪ್ರಧಾನ ಆಡಳಿತವೇ ಆಗಲಿ, ಅದು ಮುಖ್ಯವಾಗಿ ನೋಡಿಕೊಳ್ಳಬೇಕಾದ ಸಂಗತಿಯೆಂದರೆ, [illegible]ನರ ಸುಖಜೀವನವನ್ನು—ಸಮಾಧಾನ ಜೀವನವನ್ನು!

ಆಡಿಗೆ ಮಾಡು[illegible] ಸೂಟಮಾಡಬಹುದಾದ ಬಹುಜನರ ಹಿತವನ್ನು ಲಕ್ಷ್ಯಿಸಿ, ತಾನು ಅದಕ್ಕಾಗಿ ಹಲವು [illegible]ಶ್ರಮವನ್ನು ವಹಿಸಬೇಕಾಗುವುದು. ಉರಿಯುವ ಒಲೆಯ ಮುಂದೆ ಕುಳಿತು ಮೈ[illegible]ರಕ್ತವನ್ನು ಕುಚ್ಚಿಕೊಳ್ಳಬೇಕಾಗುವುದು. ಕೈ-ಮೈಗಳನ್ನು ಸುಟ್ಟುಕೊಳ್ಳಬೇಕಾಗುವುದು. ಅಲ್ಲದೆ ಈತನ ಶ್ರಮಕ್ಕಾಗಿ ದೊರೆಯುವ ಪಡಿಯು ಪರಿಮಿತವಾಗಿರುವುದೇ ಹೊರತು ಹೆಚ್ಚಿನ ಲಾಭವೇನೂ ಸಿಗುವಂತಿಲ್ಲ.

ಜನಸಮೂಹವನ್ನೆಲ್ಲ ಆನಂದಗೊಳಿಸಬಲ್ಲ ಸಂಗೀತಗಾರ, ಸಂಗೀತದಲ್ಲಿ ಪ್ರಾವೀಣ್ಯವನ್ನು ಪಡೆಯಲು ತಪಸ್ಸು ಮಾಡಿದ[illegible]ನು. ತನ್ನ ತಲೆಯ ಪ್ರದರ್ಶನವನ್ನು ಮಾಡಬೇಕಾದಾಗಲೂ ಅವನು ತನ್ನನ್ನು ತಾ[illegible]ಮಾಡಿಕೊಳ್ಳಬೇಕಾಗುವುದು. ಅವನ ಕಲೆಗೆ ಮೆಚ್ಚಿದ ಜನರು ಕೊಡುವ ಕಾಣಿಕೆಗಳನ್ನು ಮಾತ್ರ ಅವನು ಪಡೆದು ತೃಪ್ತಿಯನ್ನು ಹೊಂದುವನು.

ಸಮಾಜೋಪಯುಕ್ತವಾದ ಯಾವುದೇ ವ್ಯವಸ್ಥೆಯಲ್ಲಿಯೂ ಕೆಲವೆ ಜನರು ಬಹುಜನರ ಹಿತಕ್ಕಾಗಿ ದುಡಿಯಬೇಕಾಗುತ್ತದೆ....ಪ್ರಾಮಾಣಿಕ ಬುದ್ಧಿಯಿಂದ ದುಡಿಯಬೇಕಾಗುತ್ತದೆ. ರಾಜಕೀಯ ಆಡಳಿತದ ವ್ಯವಸ್ಥೆಯೂ ಇದಕ್ಕೆ ಹೊರತಾದುದಲ್ಲ. ಆಡಳಿತದ ಸೂತ್ರಧಾರಿಗಳು ದಿನದ ಇಪ್ಪತ್ತುನಾಲ್ಕು ತಾಸೂ ತಮ್ಮ ಮೆದುಳನ್ನು ಕಾಯಿಸಿಕೊಳ್ಳಬೇಕಾಗುತ್ತದೆ; ಕರುಳನ್ನು ಬೇಯಿಸಿಕೊಳ್ಳಬೇಕಾಗುತ್ತದೆ. ಆಡಳಿತದ ಸಮರ್ಥ ಸೂತ್ರಧಾರಿಗೆ ಜನರಿಂದ ಮಾನ-ಮನ್ನಣೆಗಳು ದೊರೆಯುವುದೇನೋ ಸಹಜ; ಆದರೆ ಅವನು ಮಾನ-ಮನ್ನಣೆಯ ಕಡೆಗೇ ಲಕ್ಷ್ಯವಿಟ್ಟು ತನ್ನ ಕರ್ತವ್ಯವನ್ನು ದುರ್ಲಕ್ಷಿಸಿದರೆ, ಜನತೆಯೆಂದೂ ಸುಮ್ಮಗಿರದು. ಅವನನ್ನು ಮೇರು-ಶಿಖರದಿಂದ ಕೆಳಗೆಳೆದು ರಸಾತಳಕ್ಕೆ ನೂಕಲಾಗುವುದು.

ಆಡಿಗೆ ಮಾಡುವವನು ತನ್ನ ಕಾರ್ಯದಲ್ಲಿ ಪರಿಣತಿಯನ್ನು ಪಡೆದವನಾಗಿದ್ದರೆಯೆ ಅವನು ಬಹುಕಾಲ ಆಡಿಗೆಯವನಾಗಿ ಉಳಿಯಬಲ್ಲ. ಸಂಗೀತಗಾರ ತನ್ನ ಕಲೆಯಲ್ಲಿ ಪ್ರಾವೀಣ್ಯ ಹೊಂದಿದವನಾಗಿದ್ದರೆಯೆ ಅವನು ಕೊನೆಯವರೆಗೂ ಸಂಗೀತಗಾರನಾಗಿ ಉಳಿಯಬಲ್ಲ. ಆದರೆ ರಾಜಕೀಯ ಆಡಳಿತದ ಒಂದು ರೀತಿ ಇಂದು ವಿಪರೀತವಾಗಿ ಕುಳಿತಿದೆ. ಅರಸರ ಕಾಲವಿದ್ದಾಗ, ಅರಸನೆನಿಸಿಕೊಳ್ಳುವವನು ಎಂತಹ ಅಸಮರ್ಥನಾಗಿ ಇದ್ದರೂ ಸಿಂಹಾಸನದ ಮೇಲೆ ಕುಳಿತು ಶಾಸನಸೂತ್ರವನ್ನು ನಡೆಸುತ್ತಿದ್ದನು. ಇಂದಿನ ಪ್ರಜಾಪ್ರಭುತ್ವದ—ಚುನಾವಣೆಯ ಯುಗದಲ್ಲಿ, ಎಂತಹ ಧೂರ್ತ-ಸ್ವಾರ್ಥಿಯೂ ವಂಚಕನೂ ಬುದ್ಧಿಗೇಡಿಯೂ ಶಾಸನ ಸಭೆಯ ಸದಸ್ಯನಾಗಬಲ್ಲನು; ಆಡಳಿತವನ್ನು ನಡೆಸುವ ಮಂತ್ರಿಯಾಗಬಲ್ಲನು. ಇವನಿಗೆ ಯಾವುದೇ ವಿಷಯದ ಪರಿಣತಿಯೂ ಪ್ರಾವೀಣ್ಯ[illegible] ಬೇಕಾಗುವುದೇ ಇಲ್ಲ.

ಪರಿವಿಡಿ

ಪೀಠಿಕೆ ೧

ಸಂಪಾದಕೀಯ ೩

ಅಭಿನಂದನೆಗಳು ೫

ಲೇಖನಗಳು ೭

ಕವನಗಳು ೨೩

ಕಥೆಗಳು ೩೫

ಪ್ರಬಂಧಗಳು ೪೭

ಹಾಸ್ಯ ೫೯

ಪ್ರವಾಸ ಕಥನ ೬೩

ಸಂದರ್ಶನ ೭೫

ಪುಸ್ತಕ ವಿಮರ್ಶೆ ೮೧

ಚಿತ್ರ ಕಲೆ ೮೭

ಛಾಯಾಚಿತ್ರಗಳು ೯೩

ಸಂಪಾದಕ ಮಂಡಳಿ ೯೭

ಸಂಪಾದಕೀಯ

ಸೈಜಾಲ್ಫಬ್ಬಿನ್ಲೈ ಅಕ್ಷರಾಭಿವಾದ್ಯ ;

ಜಾಪಿಕ್ಷರ ಸಂಗಡ ಬಾಳ್ಲಿರುವ ಜಾಪಿಕೆಯಾ, ರಾಜಕೀಯ ಅಥವಾ ಸಾಮಾಜಿಕ ಸ್ವಭಾವಕ್ಕೆ ಒಳ್ಳೆ ಪಕ್ಷಗಳಿಂದಲೆ ? ಈ ಪ್ರಶ್ನೆಗಳಿಗೆ ಅವಕಾಶವಿಲ್ಲದಂತೆ ಸ್ಪಷ್ಟವಾಗಿ ಸ್ಥಿರವಾದ ಅಭಿಪ್ರಾಯಗಳನ್ನು ಕಳೆದ ಮೂರು ವರ್ಷಗಳಿಂದ ಪ್ರಕಟಿಸುತ್ತಾ ಬಂದಿರುವ ಪತ್ರಿಕೆಯೆಂದರೆ ಅದು ಕರ್ನಾಟಕ ಪತ್ರಿಕೆಯೊಂದೆ. ಕರ್ನಾಟಕದ ಸಂಸ್ಕೃತಿಯ ಪುನರುಜ್ಜೀವನಕ್ಕಾಗಿ ಶ್ರಮಿಸುತ್ತ

ಇಂದು ಪೂರ್ವಖಂಡದ ಹಲವು ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವವೆಂಬುದು ಹೊಸದಾಗಿ ತಲೆಯೆತ್ತಿ ನಿಂತಿದೆ. ಪ್ರಜಾಪ್ರಭುತ್ವದ ಮರ್ಮವೂ ಮಹತ್ತ್ವವೂ ಸರಿಯಾಗಿ ಗೊತ್ತಿರದ ಈ ರಾಷ್ಟ್ರಗಳ ಜನರಲ್ಲಿ, ಕೇವಲ ಅಧಿಕಾರಲುಬ್ಧತೆಯು ಬೆಳೆಯುತ್ತಲಿದೆ. ಭುರೀಣರೆನಿಸಿಕೊಳ್ಳುವವರಲ್ಲಿ ರಾಷ್ಟ್ರಸೇವಾ ಬುದ್ಧಿಗಿಂತ, ಅಧಿಕಾರ ಮೋಹವು ತಾನೆತಾನಾಗಿ ಬೆಳೆದು, ನಿಂತಿದೆ. ಭುರೀಣರೆನಿಸಿಕೊಳ್ಳುವವರು ತಮ್ಮ ನೈಯಕ್ತಿಕ ಬಲವನ್ನು ಪೆಚ್ಚಿಸಿಕೊಳ್ಳುವುದಕ್ಕಾಗಿ, ನಾನಾ-ಬಗೆಯ ಆಸೆ-ಆಮಿಷಗಳನ್ನು ಒಡ್ಡಿ, ಜನರಲ್ಲಿ ಬುದ್ಧಿಭೇದವನ್ನು ಉಂಟುಮಾಡಿ, ಪ್ರಜಾಕೋಟಿಯಲ್ಲಿ ಸಂಗಡಿಗರನ್ನು ಉಂಟುಮಾಡಲು ತೊಡಗಿದ್ದಾರೆ. ಈ ಪಂಗಡಗಳ ಮೂಲಕ ನಾಡಿನ ಜನರಲ್ಲಿ ವಿಧವಿಧದ ವೈಷಮ್ಯಗಳು ತಲೆದೋರುತ್ತಲಿವೆ. ರಾಷ್ಟ್ರ ಆಡಳಿತದ ಯಂತ್ರವು ಸುಗಮವಾಗಿ ನಡೆಯದಂತಾಗಿದೆ. [illegible] ಎಲ್ಲೆಲ್ಲಿಯೂ ಅಸಂತೋಷ—ಅತೃಪ್ತಿ—ಇವು ತಾಂಡವಾಡುತ್ತಿವೆ.

ಇಂದು ಎಲ್ಲೆಲ್ಲಿಯೂ ರಾಜಕೀಯ ವಿವೇಕವುಳ್ಳ ಮುಂದಾಳುಗಳ ಸಂಖ್ಯೆ ಕಡಮೆಯಾಗುತ್ತಲಿದೆ. ವ್ಯಕ್ತಿ-ವ್ಯಕ್ತಿಗಳೂ ಅಧಿಕಾರಿವಾದದ ದಾಸರಾಗಿ ಬಿಟ್ಟಿದ್ದಾರೆ. ಪೂರ್ವಖಂಡದ ಪ್ರತಿಯೊಂದು ರಾಷ್ಟ್ರದಲ್ಲಿಯೂ ಅಧಿಕಾರವಾದಿಗಳ ಚಟುವಟಿಕೆಯ ದುಷ್ಪರಿಣಾಮಗಳು ಕಾಣುತ್ತಲಿವೆ. ಈ ದುಷ್ಪರಿಣಾಮ[illegible] ಪಾಕಿಸ್ತಾನದಲ್ಲಿ ತನ್ನ ಪ್ರಭಾವವನ್ನು ಬೀರಿದಷ್ಟು, ಬೇರೆ ಕಡೆ[illegible] ಬೀರಿಲ್ಲವೆಂದು ಹೇಳಬಹುದಾದರೂ ಭಾರತ, ಬ್ರಹ್ಮದೇ[illegible]ಗಳ ಮೇಲೆ ಇದು ತನ್ನ ದುಷ್ಟ ದೃಷ್ಟಿಯನ್ನು ಹಾಕದೆ ಬಿಟ್ಟಿಲ್ಲ.

ಭಾರತದೊಂದಿಗೆ ಪಾಕಿಸ್ತಾನವೂ ಸ್ವತಂತ್ರವಾಗಿ, ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿತು. ಅಂದಿನ ಆಡಳಿತಸೂತ್ರವನ್ನು ವಹಿಸಿಕೊಂಡ ಮುಸ್ಲಿಮ್ ಲೀಗ್ ನಾಯಕರು, ಪ್ರಜಾಪ್ರಭುತ್ವದ ಪುರಸ್ಕಾರದ ಮಾತನ್ನು ಬಾಯಿಂದ ಆಡತೊಡಗಿದುದೆಷ್ಟೋ ಅಷ್ಟೆ! ಅದನ್ನು ಕೃತಿಯನ್ನು ತರುವ ಯಾವ ಪ್ರಯತ್ನವನ್ನೂ ಅವರು ಮಾಡಲಿಲ್ಲ. ಮುಸ್ಲಿಮ್ ಲೀಗಿನ ಏಕೈಕನಾಯಕರಾದ ಕಾಯದೆ ಅಜಮ್ ಜಿನ್ನಾ ಅವರು ಕಣ್ಮರೆಯಾದ ಮೇಲೆ, ಅಲ್ಲಿ ರಾಷ್ಟ್ರಾಯ ಸತ್ತ ಮೇಲಿನ ಹಾವಳಿ ಪ್ರಾರಂಭವಾಯಿತು. ಪಾಷ, ಜಿನ್ನಾ ಅವರ ಕಾಲದಲ್ಲಿ ಮುಖ್ಯ ಮಂತ್ರಿಗಳಾಗಿ ಆಡಳಿತದ ಸೂತ್ರಗಳನ್ನು ವಹಿಸಿದ್ದ ಲಿಯಾಕತ ಅಲ್ಲಿಖಾನರು ವಿದ್ರೋಹಿಗಳ ಗುಂಡಿಗೆ ಆಹುತಿಯಾಗಬೇಕಾಯಿತು.

ಆ ಮೇಲಿನ ಪಾಕಿಸ್ತಾನದ ರಾಜಕೀಯ ಆಡಳಿತವೆಂದರೆ, ಅಧಿಕಾರವಾದಿಗಳಾದ ಸಂಧಿಸಾಧಕ ಸ್ವಾರ್ಥಿಗಳ ಕಪಟ ನಾಟಕಗಳೇ ನಡೆದಿವೆ. ಅಲ್ಲಿಯದೆಲ್ಲ ಪ್ರಜಾಪ್ರಭುತ್ವದ ಸೋಗು. ಅಲ್ಲಿ ಪ್ರಜಾ ಪ್ರತಿನಿಧ್ಯದ ಹೆಸರಿನ ಸರಕಾರಗಳೇನೋ ಒಂದರಹಿಂದೊಂದರಂತೆ ಮುಂದೆ ಬರುತ್ತಲಿವೆ; ಆದರೆ ಆ ಸರಕಾರಗಳು ಪ್ರಜೆಗಳ ಸಂಬಂಧ ತಮಗಿದೆಯೆಂಬುದನ್ನೇ ಮರೆತುಬಿಟ್ಟಿರುತ್ತವೆ. ಅಲ್ಲಿ ಸರಕಾರವನ್ನು ಕಟ್ಟಿ ನಡೆಸುವ ಯಾವ ನಾಯಕರೂ ಪ್ರಜೆಗಳ ಹಿತವನ್ನು ಕುರಿತು ಎಂದೂ ವಿಚಾರಮಾಡುವುದಿಲ್ಲ. ಏಕೆಂದರೆ, ತಮಗೆ ದೊರೆತಿರುವ ಸ್ಥಾನಗಳನ್ನು ಕಾಯ್ದುಕೊಂಡು ಹೇಗೆ ಹೋಗಬೇಕೆಂಬ ಯೋಚನೆ, ಮಿಕ್ಕ ಯಾವ ವಿಚಾರಗಳಿಗೂ ಅವಕಾಶವನ್ನೇ ಕೊಡುತ್ತಿರುವುದಿಲ್ಲ. ಆದುದರಿಂದಲೇ ಪಾಕಿಸ್ತಾನದ ಪ್ರಜೆಗಳಿಗೆ ಬಗೆಬಗೆಯ ಕರಗಳ ಭಾರಬೀಳುತ್ತಿರುವುದೇ ಹೊರತು, ಸರಕಾರದಿಂದ ದೊರೆಯಬಹುದಾದ ಅನುಕೂಲತೆಗಳಾವುವೂ ದೊರೆಯುತ್ತಿಲ್ಲ. ಅಲ್ಲಿಯ ಸರಕಾರದಲ್ಲಿ ಇರುವ ನಾಯಕರೆಲ್ಲ ಅಧಿಕಾರಭ್ರಾಂತರೇ ಹೊರತು, ಸರಕಾರವು ಏತಕ್ಕಾಗಿ ಇರಬೇಕೆಂಬ ಕಲ್ಪನೆಯುಳ್ಳವರು ಯಾರೂ ಇದ್ದಂತಿಲ್ಲ. ಡಾ. ಖಾನ್‌ಸಾಹೇಬರಂತಹ ಒಬ್ಬಿಬ್ಬರಿಗೆ ಪ್ರಜಾಪ್ರಭುತ್ವದ ಕಲ್ಪನೆಯು ಇರಬಹುದಾದರೂ, ಅವರಿಗೆ ಸ್ವತಂತ್ರವಾಗಿ ಅಧಿಕಾರ ನಡೆಸುವುದಕ್ಕೆ ಅವಕಾಶವಿಲ್ಲದಂತಾಗಿದೆ.

ಏನೇನೋ ಕಲಕುಮಲಕು ನಡೆದು, ಈಗ ಮುಸ್ಲಿಮ್ ಲೀಗಿನ ಪ್ರಭಾವ ಪಾಕಿಸ್ತಾನದಲ್ಲಿ ಕಡಮೆಯಾಗಿದೆ. ಮುಸ್ಲಿಮ್ ಲೀಗಿನ ಅನುಯಾಯಿಗಳೇ ಕೆಲವರು ಈಗ, ಯಾವುದೋ ದೂರದ ಆಶೆಯನ್ನಿರಿಸಿಕೊಂಡು, ಡಾ ಖಾನ್ ಅವರು ಸ್ಥಾಪಿಸಿದ ರಿಪಬ್ಲಿಕ್ ಪಕ್ಷಕ್ಕೆ ಕೂಡಿಕೊಂಡಿದ್ದಾರೆ. ಈಗ ಅವರು ಇವರು ಕೂಡಿ ಹೇಗೋ ಒಂದು ಬಗೆಯ ಬಹುಮತ ಪಕ್ಷದ ಸರಕಾರವನ್ನು ಮಾಡಿಕೊಂಡಿರುವರು; ಆದರೆ ಈ ಪರಿಸ್ಥಿತಿ ಎಷ್ಟುಕಾಲ ಉಳಿದೀತೆಂಬುದನ್ನು ಹೇಳಲು ಬರುವಂತಿಲ್ಲ. ಏಕೆಂದರೆ ಈ ಹೊಸಪಕ್ಷದಲ್ಲಿ ಕೂಡಿಕೊಂಡ ಅನೇಕ ಜನರೂ ಅಧಿಕಾರಸ್ಥಾನಕ್ಕಾಗಿ ತವಕಿಸುವವರೇ ಇದ್ದಾರೆ. ಎಲ್ಲರಿಗೂ ಸ್ಥಾನಗಳನ್ನು ಕಲ್ಪಿಸಿಕೊಡಲಿಕ್ಕೆ ಯಾವ ಸರಕಾರಕ್ಕೆ ಸಾಧ್ಯವಾದೀತು? ತಮ್ಮ ಜೊತೆಯವರು ಅಧಿಕಾರಸ್ಥಾನದಲ್ಲಿ ಕುಳಿತು ಮೆರೆಯತೊಡಗಿದುದನ್ನು ಸಹನೆಯಿಂದ ಕಾಣುವ ಮುಂದಾಳುಗಳ ಸಂಖ್ಯೆ ಪಾಕಿಸ್ತಾನದಲ್ಲಿ ತೀರ ಕಡಮೆ.

ಭಾರತದಲ್ಲಿ ಕೇಂದ್ರ ಸರಕಾರದಲ್ಲಿ ಇಂತಹ ವಿಷಮಪರಿಸ್ಥಿತಿ ಇಲ್ಲವಾದರೂ, ಕೆಲವೊಂದು ರಾಜ್ಯಸರಕಾರಗಳು ಅಧಿಕಾರಲುಬ್ಧರ ಕೈಗೆ ಸಿಕ್ಕಿ ಪಾಕಿಸ್ತಾನದಂತಹ ಪರಿಸ್ಥಿತಿಯನ್ನೇ ನಿರ್ಮಿಸಿಕೊಂಡಿವೆ. ಒನ್ನೆ ಮೊನ್ನೆಯ ಮೈಸೂರು ರಾಜ್ಯಕ್ಕೂ ಈ ಗಾಳಿ ತಗುಲಿತ್ತು. ಅಲ್ಲಿ ಹಲವು ಕಾಲ ಮುಖ್ಯಮಂತ್ರಿಗಳಾಗಿ ಸಮರ್ಥರೀತಿಯಿಂದ ಆಡಳಿತೆ ನಡೆಸಿದ ಕೆಂಗಲ್ ಹನುಮಂತಯ್ಯನವರು ಸ್ಥಾನಚ್ಯುತರಾದರು. ಮದ್ರಾಸ್ ಮಂತ್ರಿಮಂಡಲವೂ ಮೂರು ನಾಲ್ಕು ಸಲ ಬದಲಾವಣೆಯನ್ನು ಪೊಂದಿತು. ಈಗಿನ ಪ್ರಾಂತವುನರ್ಘಟನಾ ಪರಿಸ್ಥಿತಿಯಂತೂ ಹೊಸದೊಂದು ಸಮಸ್ಯೆಯನ್ನೇ ಉಂಟುಮಾಡಿದೆ. ಭಾಷಾನುಗುಣಪ್ರಾಂತರಚನೆಗಾಗಿ ಅಲ್ಲಲ್ಲಿ ನಡೆದ ಭೀಕರ ಚಳವಳಿಗಳು, ಅಧಿಕಾರಮೂಲವಾದುನುಗಳೇ ಆಗಿವೆ. ಈಗ ನಮ್ಮ ನಾಯಕರಲ್ಲಿ ದೇಶಹಿತದ ವಿವೇಕ ತಲೆದೋರದೆ ಹೋದರೆ, ಭವಿಷ್ಯದಲ್ಲಿ ಭಾರತವೂ ಪಾಕಿಸ್ತಾನದಂತಹ ವಿಷಮಪರಿಸ್ಥಿತಿಯಲ್ಲಿ ಸಿಕ್ಕಿಕೊಳ್ಳಬಹುದು. ವೈಯಕ್ತಿಕ ಅಧಿಕಾರಲೋಭದ ಮೊಸಳೆಯ ಬಾಯಿಗೆ ನಮ್ಮ ಭಾರತದ ನಾಯಕರು ಸಿಕ್ಕಿಕೊಳ್ಳಬಾರದೆಂದು ನಾವೆಲ್ಲರೂ ಈಗ ಶಕ್ತಿಮೀರಿ ಪ್ರಯತ್ನಿಸಬೇಕಾಗಿದೆ.

ನಾಡ ನಡೆ

卐

ಮಾನ್ಯ ಮುರಾರಜಿಯವರ ಮಹಾದಿವ್ಯ—

ಮುಂಬಯಿರಾಜ್ಯ ನಿರ್ಮಾಣದ ಪ್ರಶ್ನೆಯನ್ನು ಕೇಂದ್ರಶಾಸನ ಸಭೆಯ ಸದಸ್ಯರು, ಏನೋ ಒಂದು ರೀತಿಯಲ್ಲಿ ಬಗೆಹರಿಸಿರುವರಾದರೂ, ಅವರು ನಿರ್ಣಯದಿಂದ 'ಹಾವನ್ನು ಹೋರಿನಲ್ಲಿ ಇರಿಸಿ ಹೋರಿನ ಬಾಯನ್ನು ಮುಚ್ಚುವಂತಹ ಪ್ರಯತ್ನವನ್ನು ಮಾಡಿದ್ದಾರೆ' ಎಂದು ಹೇಳಬಹುದು. ಆದರ್ಶವಾದಿಗಳ ದೃಷ್ಟಿಗೆ ಅವರ ನಿರ್ಣಯವು ಸಮಂಜಸವೆಂದು ತೋರುವುದರಲ್ಲಿ ಸಂದೇಹವಿಲ್ಲ, ಆದರೆ ವ್ಯವಹಾರಮಯವಾದ ರಾಜಕೀಯ ಜೀವನವನ್ನು ಕೇವಲ ಆದರ್ಶದೃಷ್ಟಿಯೊಂದರಿಂದಲೇ ನೋಡಿ ಅದರ ಸಮಸ್ಯೆಗಳನ್ನು ಬಿಡಿಸಲು ಬರಲಾರದು. ಲೋಕದಲ್ಲಿ ಆದರ್ಶದೃಷ್ಟಿಯಿಂದ ಜೀವನವನ್ನು ನೋಡುವವರು ಸಾವಿರದಲ್ಲಿ ಒಬ್ಬರಾದರೂ ದೊರೆಯುವರೋ ಇಲ್ಲವೊ! ಆದರೆ ಒಂದೊಂದು ಬಗೆಯ ವ್ಯವಹಾರಿಕ ದೃಷ್ಟಿಯಿಂದ ಜೀವನದ ಕಡೆಗೆ ನೋಡುವವರ ಸಂಖ್ಯೆಯೇ ಹೆಚ್ಚಾಗಿರುವುದು.

ಇಂದು ಭಾರತದಲ್ಲಿ ಏರ್ಪಡಲಿರುವ ಪುನರ್ಘಟಿತ ರಾಜ್ಯಗಳು: ಕೇವಲ ವ್ಯಾವಹಾರಿಕ ದೃಷ್ಟಿಯವರ ಅಪೇಕ್ಷೆಯ ಸಂತಾನಗಳೇ ಆಗಿವೆ. ಭಾರತದಲ್ಲಿಯು ಬೇರೆ ಬೇರೆ ಪ್ರದೇಶದ ಮುಂದಾಳುಗಳಿಗೆ ಅಧಿಕಾರಲಾಲಸೆಯು ಉತ್ಕಟತೆ ಉಂಟಾಗದೆ ಹೋಗಿದ್ದರೆ, ಇಂದಿನ ರಾಜ್ಯ ಪುನರ್ಘಟನೆಯು ವ್ಯವಸ್ಥೆ ನಡೆಯುತ್ತಲೇ ಇರಲಿಲ್ಲವೆಂಬುದು, ಕನ್ನಡಿಗರಿಗಂತೂ ಅನುಭವದ ವಿಷಯವಾಗಿದೆ. ಸಾಂಸ್ಕೃತಿಕ ಉನ್ನತಿಯ ದೃಷ್ಟಿಯಿಂದ ಕನ್ನಡಿಗರು ಒಂದೆ ರಾಜಕೀಯ ಆಡಳಿತದಲ್ಲಿ ಇರಬೇಕೆಂಬ ಹಿಂದಿನ ಕರ್ನಾಟಕ ಏಕೀಕರಣವಾದಿಗಳಿಗೆ ದೇಶದ್ರೋಹಿಗಳೆಂಬ ಬಿರುದನ್ನು ಕೊಟ್ಟು, ಅವರ ಚಟುವಟಿಕೆಗಳನ್ನು ನಿರೋಧಿಸಿದ ರಾಜಕೀಯ ಧುರೀಣರೇ, ಅಧಿಕಾರಲಾಲಸೆ ತಮ್ಮನ್ನು ಹಿಡಿದಾಗ, ಹಿಂದಿನವರಿಗಿಂತ ಹೆಚ್ಚಾಗಿ ತೀಕ್ಷ್ಣವಾದ ಚಟುವಟಿಕೆಗಳನ್ನು ನಡೆಸಿದರು. ಇದು ವ್ಯವಹಾರದೃಷ್ಟಿಯೊ, ಆದರ್ಶದೃಷ್ಟಿಯೊ ?

ಮುಂಬಯಿಯನ್ನು ಪ್ರತ್ಯೇಕವಾಗಿ ಇರಿಸಬೇಕೆಂದು ಕೇಂದ್ರ ಮಂತ್ರಿಮಂಡಲ ನಿರ್ಣಯಿಸಿದಾಗ ಮಹಾರಾಷ್ಟ್ರೀಯರು ನಡೆಸಿದ ಹಿಂಸಾತ್ಮಕ ಉಗ್ರ ಚಟುವಟಿಕೆಗಳು ವ್ಯವಹಾರದೃಷ್ಟಿಯವೊ ? ಆದರ್ಶದೃಷ್ಟಿಯವೊ ? ಮುಂಬಯಿಯ ಪ್ರಕರಣದಲ್ಲಿ ಗುಜರಾತಿಗಳು ಮಹಾರಾಷ್ಟ್ರೀಯರಿಂದ ಮರೆಯದಂತಹ ಏಟನ್ನು ತಿಂದಿರುವಾಗ, ಹೊಸದಾಗಿ ನಿರ್ಮಾಣವಾಗಲಿರುವ— ಮಹಾರಾಷ್ಟ್ರೀಯ ಬಹುಸಂಖ್ಯಾತ— ಮುಂಬಯಿ ದ್ವಿಭಾಷಾ ರಾಜ್ಯವನ್ನು ಭೀತಿ-ಸಂದೇಹಗಳ ದೃಷ್ಟಿಯಿಂದ ನೋಡುವುದು ಅವರ ವ್ಯಾವಹಾರಿಕ ದೃಷ್ಟಿಯ ಕರ್ತವ್ಯವಾಗಿದೆ. 'ನಮಗೆ ಮುಂಬಯಿಯ ತೊಡಕೇ ಬೇಡ; ಗುಜರಾತಿಗಳೆ. ದೊಂದು ಪ್ರತ್ಯೇಕ ರಾಜ್ಯ ಬೇಕು!' ಎಂದು ಅವರು ಕೇಳುವುದರಲ್ಲಿ ಅಪರಾಧವೇನಿದೆ? ವ್ಯವಹಾರದೃಷ್ಟಿಯವರೇ ಬಹುಜನರು ಇರುವಾಗ, ಗುಜರಾತಿಗಳಷ್ಟೆ ಆದರ್ಶವಾದಿಗಳಾಗಬೇಕೆಂದು ಬೋಧಿಸುವವರ ಮಾತುಗಳಿಗೆ ಅರ್ಥವೇನಾದರೂ ಇದೆಯೆ ?

ಗುಜರಾತಿಗಳಿಗೆ ಬುದ್ಧಿಯನ್ನು ಕಲಿಸಲು, ಸಂಪೂರ್ಣ ವ್ಯವಹಾರ ದೃಷ್ಟಿಯವರೇ ಆದ ಮಾನ್ಯ ಮುರಾರಜಿಯವರು, ತಾತ್ಕಾಲಿಕ ಆದರ್ಶವಾದಿಗಳಾಗಿ ಮಹಾ ದಿವ್ಯವೊಂದನ್ನು ಮಾಡಿ ಇದರಿಂದ ಗುಜರಾತಿಗಳಿಗೆ ಯಾವ ಬಗೆಯ ಸಮಾಧಾನವೂ ಆದಂತಿಲ್ಲ. ಭವಿಷ್ಯದ ಬಗೆಗೆ ಅವರು ಭೀತಿ-ಸಂದೇಹಗಳನ್ನು ಬಿಡುವುದರಲ್ಲಿ ಒಂದು ಅರ್ಥವಿದೆಯೆಂಬುದನ್ನು ನಮ್ಮ ರಾಷ್ಟ್ರದ ಧುರೀಣರೆಲ್ಲರೂ ವಿಚಾರಮಾಡಬೇಕಾಗಿದೆ.

× × × ×

ಶಿವಯೋಗ ಮಂದಿರದ ಸಂಚಾಲಕರ ಸರ್ವಧರ್ಮ ದೃಷ್ಟಿ!

ಕರ್ನಾಟಕ ಶಿವಯೋಗಮಂದಿರದ ಮಹಾ ಸಂಸ್ಥೆಯು ಸಾಧಿಸಿದ ಕಾರ್ಯವು ಅವಿಸ್ಮರಣೀಯವಾದುದಾಗಿದೆ. ವೀರಶೈವಧರ್ಮಜಾಗೃತಿಯ ಉದ್ದೇಶವನ್ನು ಇರಿಸಿಕೊಂಡು ಹೊರಟ ಸಂಸ್ಥೆಯಿದಾದರೂ, ಈ ಸಂಸ್ಥೆಯ ಸಂಚಾಲಕರ ದೃಷ್ಟಿ ಮೊದಲಿನಿಂದಲೂ ಪ್ರಗತಿನಿಷ್ಠವಾಗಿದೆ. ಈ ಸಂಸ್ಥೆಯು ಈಗ ತನ್ನ ಮೊದಲಿನ ಉದ್ದೇಶವನ್ನು ಯಶಸ್ವಿಯಾಗಿ ಪೂರಯಿಸಿ ಕೃತಾರ್ಥವಾದುದರಿಂದ, ತನ್ನ ಗುರಿಯನ್ನು ಇನ್ನೂ ದೂರದ ಕಡೆಗೆ ಇರಿಸಿ ಹೊರಟುದು ಸಂತೋಷದ ಬೆಳವಣಿಗೆಯಾಗಿದೆ.

ಶಿವಯೋಗಮಂದಿರ ಸಂಸ್ಥೆಯಿಂದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ, ಒಂದು ಲಕ್ಷರೂಪಾಯಿ ನಗದನ್ನೂ ಒಂದು ಲಕ್ಷರೂಪಾಯಿ ಬೆಲೆ ಬಾಳುವ ಸ್ಥಾವರ ಆಸ್ತಿಯನ್ನೂ ಕೊಡಬೇಕೆಂದು ಆ ಸಂಸ್ಥೆಯ ಸಂಚಾಲಕ ಸದಸ್ಯವರ್ಗ ನಿರ್ಣಯಿಸಿದೆ. ಈ ನಿಧಿಯ ಉಪಯೋಗ ಸರ್ವಧರ್ಮಗಳ ಅಭ್ಯಾಸಿ-ವಿದ್ಯಾರ್ಥಿಗಳಿಗಾಗಿ ಆಗಬೇಕೆಂದು ಸದಸ್ಯವರ್ಗ ತನ್ನ ಆಶಯವನ್ನು ಪ್ರಕಟಿಸಿದೆ. ನಮ್ಮ ನಾಡಿನ ವಿಶ್ವವಿದ್ಯಾಲಯವು ಸರ್ವಧರ್ಮಾಭ್ಯಾಸಿಗಳಿಗೆ ಅವಕಾಶವನ್ನು ಕಲ್ಪಿಸಿಕೊಡುವುದು ನಮಗೆಲ್ಲ ಇಷ್ಟವೂ ಹೆಮ್ಮೆಯದೂ ಆದ ಸಂಗತಿ. ಇದಕ್ಕೆ ಎಲ್ಲ ಬಗೆಯಿಂದಲೂ ಅನುಕೂಲತೆಯನ್ನು ಒದಗಿಸಿಕೊಡಲು ಸಿದ್ಧರಾದ ಶಿವಯೋಗಮಂದಿರದ ಸಂಚಾಲಕ ಸದಸ್ಯವರ್ಗಕ್ಕೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು!

× × × ×

ಧಾರವಾಡದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ:

ಬರಲಿರುವ ಡಿಸೆಂಬರ್ ಕೊನೆಯ ವಾರದಲ್ಲಿ ಧಾರವಾಡದಲ್ಲಿ ಕನ್ನಡ ಸಾಹಿತ್ಯಸಮ್ಮೇಲನದ ಅಧಿವೇಶನವು ಜರುಗಲಿರುವುದೆಂಬ ವರ್ತಮಾನ ಅಧಿಕೃತವಾಗಿ ನಮಗೆ ತಿಳಿದಿದೆ. ಕ. ಸಾ. ಪರಿಷತ್ತಿನ ಅಧ್ಯಕ್ಷರು ಇದರ ಬಗೆಗೆ ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳಿಗೆ ಬರೆದು ಬಿನ್ನವಿಸಿಕೊಂಡಿದ್ದಾರಂತೆ. ಕಳೆದ ಸಮ್ಮೇಳನದ ಕಾಲದಲ್ಲಿ ಮುಂದಿನ ಅಧಿವೇಶನ ಧಾರವಾಡದಲ್ಲಿ ಕೂಡಬೇಕೆಂದು ಕರ್ನಾಟಕ ವಿದ್ಯಾವರ್ಧಕಸಂಘವು ಬೇಡಿಕೆಯನ್ನೂ ಕಳುಹಿಸಿದ್ದಿತು. ಯಾವ ಸಾಂಸ್ಕೃತಿಕ ಸಂಸ್ಥೆಯ ನೇತೃತ್ವದಲ್ಲಿ ಕ. ಸಾ. ಸಮ್ಮೇಳನವು ಧಾರವಾಡದಲ್ಲಿ ಜರುಗಿದರೂ ಉತ್ತರ ಕನ್ನಡಿಗರಿಗೆ ಅದು ಸಂತೋಷದ ವಿಷಯವಾಗಿದೆ. ಏಕೀಕೃತ ಕರ್ನಾಟಕ ರಾಜ್ಯದಲ್ಲಿ ಮೊದಲ ಸಲ ಕ. ಸಾ. ಸಮ್ಮೇಳನದ ಅಧಿವೇಶನವನ್ನು ಸೇರಿಸುವ ಮಾನ ಧಾರವಾಡಕ್ಕೆ ಬಂದರೆ, ಅದಕ್ಕಾಗಿ ನಾವು ಅಭಿಮಾನಪಡಲೇ ಬೇಕಲ್ಲವೆ?

(೧೬ನೆಯ ಪುಟದಿಂದ ಮುಂದುವರಿದುದು)

ಸಾಧ್ಯ? ಆದರೆ ಕವಿಯ ಕಣ್ಣಿಗೆ, ಹೊರಗಿನ ಜಗತ್ತಿನ [illegible] ಧಾ[illegible] ಮಾಡಿಕೊಂಡು ಬಂದ ಕವಿಗೆ, ಅಂದು ವಿಸ್ತಾರವಾಗಿ ಕಂಡ [illegible] ಇಂದು ಚಿಕ್ಕದಾಗಿಯೇ ಕಾಣುತ್ತಿದೆ.

ಹಿಂದಿನ ರಸನಿಮಿಷಗಳ ಸ್ಮರಣೆ ಬರುತ್ತದೆ. ಹಿಂದೆ ಇದ್ದ ತನ್ನ ಉದ್ಯಾನವನವನ್ನು ಹೊಕ್ಕು ನೋಡಿದಾಗ, ಅವೆಲ್ಲಕ್ಕೂ ಹನ್ನೆರಡು ವರ್ಷಗಳ ವೃದ್ಧಾಪ್ಯ ಬಂದೊದಗಿತ್ತು. ಆ ಅಶ್ವತ್ಥಕಟ್ಟೆ, ಅಂಗಡಿ, ಗದ್ದೆ, ರಸ್ತೆ, ಓಣಿ ಎಲ್ಲಾ ಗತವೈಭವವನ್ನೇ ಸಾರುತ್ತಿತ್ತು. ಕವಿ ತನ್ನ ಮನೆಯ ಹಿತ್ತಲನ್ನು ಸೇರಿದ್ದಾಗ [illegible] ಹೃದಯವೇ ಬಾಯಿಗೆ ಬಂದಂತಿತ್ತು. ಮುಂದೆ ಸುರಕ್ಷಿತವಾಗಿದ್ದ ಬೆಚ್ಚಗಿನ ಮನೆ. ಇಂದು ಬರಿಯ ಮಣ್ಣಿನ ಗಾಯದ ಸಪ್ಪೆಯ ನೆನಪನ್ನು ಹುದುಗಿಸಿಕೊಂಡು ತಬ್ಬಲಿಯಾಗಿ ಬಿದ್ದಿದೆ. ಅದರ ಮೇಲೆ ಹುಲ್ಲು ಸಹ ಬೆಳೆದಿದೆ.

ಅಂದು ನೀರು ತುಂಬಿದ ಭಾವಿ, ಇಂದು ಬಣ್ಣಗೆಟ್ಟಿದೆ. ಹೂವಿನ ತೋಟವಾಗಿದ್ದ ನೆಲ ಈಗ ಬಟ್ಟಬಯಲಾಗಿದೆ. ಅಲ್ಲಿ ಇದ್ದ ನಾಲ್ಕಾರು ತೆಂಗಿನ ಮರಗಳು ಕಸಿ ಮಾವಿನಮರ ಗತಿಗೆಟ್ಟವರಂತೆ ತಲೆಯೆತ್ತಿಕೊಂಡು "ಸೋ" ಎಂದು ನಿಟ್ಟುಸಿರು ಬಿಡುತ್ತಿವೆ. ಎಷ್ಟೋ ತಲೆಮಾರುಗಳಿಂದ ಅಂಗಳದಲ್ಲಿ ನೆರಳನ್ನಿಯುತ್ತಿದ್ದ ಮಾವಿನ ಮರ ಬೋಳಾಗಿದೆ. ಅದನ್ನು ಸುತ್ತುಗಟ್ಟಿ, ಬಿಗಿದಪ್ಪಿ ನಿಂತಿದೆ ಯಾವುದೋ ಕಾಡುಬಳ್ಳಿ; ಮರದ ಗೋಣನ್ನೇ ಹಿಚುಕುತ್ತಿದೆಯೋ ಎನ್ನಿಸುವಂತೆ ನಿಂತಿದೆ ಆ ಬೇರು. ಆ ಬಂಗಾರಗೊಂಡೆ ಹೂ, ದಾಸವಾಳ, ತುಳಸಿ, ನಿತ್ಯಸುಲ್ಲಿಗೆ ಎಲ್ಲಾ ಕಾಡುಪಾಲಾಗಿವೆ. ಅಂದು ಪುಟ್ಟ ಸಸಿಯಾಗಿ ನೆಟ್ಟಿದ್ದ ದಾಳಿಂಬೆ, ನಿದ್ದೆಯಿಂದ ಎದ್ದು ಬಂದು ಗುರಿ ಇಲ್ಲದೆ ನಿಂತಂತೆ, ವಿಸ್ತಾರವಾಗಿ ಬೆಳೆದಿದೆ. ಅಂದು ಕಿಲಕಿಲನೆ ನಗುತ್ತಾ ಹೊನ್ನಿನಂತಿದ್ದ ಹಳ್ಳಿ ಇಂದು ಮುದುಡಿ, ಗೊತ್ತುಗುರಿ ಇಲ್ಲದೆ, ಹೇಳುವವರು ಕೇಳುವವರು ಇಲ್ಲದೆ ಪಾಳಾಗಿದೆ.

ಕವಿಯು ಹಿಂದಿನ ಮಮತೆ, ಪ್ರೇಮಗಳನ್ನು ನೆನಪಿಗೆ ತಂದುಕೊಳ್ಳುತ್ತಾನೆ. ಜೀವ ಮಮ್ಮಲ ಮರಗುತ್ತದೆ. ತಾಳಿ, ಒಲವಿನ ಮೂರ್ತಿಯಾಗಿದ್ದ ತಾಯಿ ಕಣ್ಮರೆಯಾಗಿದ್ದಾಳೆ. ಒಡಹುಟ್ಟಿ, ಜೆಳೆದು, ಆಟವಾಡಿದ ಅಣ್ಣ ಕೊನೆಯುಸಿರನ್ನು ಎಳೆದಿದ್ದಾನೆ. ಪ್ರೀತಿಯಿಂದ ಲಾಲಿಸುತ್ತಿದ್ದ ತಂದೆ ಮರಣ ಹೊಂದಿದ್ದಾನೆ. ಅವರೊಡನೆ ಕಣ್ಮರೆಯಾಗಿದೆ ಹಿಂದಿನ ಜೀವನವೆಲ್ಲಾ, ಆ ಲೋಕ ಎಲ್ಲೋ ಮಣ್ಣಿನಲ್ಲಿ ಅಡಗಿ ಹುಗುಗಿದೆ,

ಈ ಜಗದ ರೀತಿ ಇದು. ಹಸಿಗಾಯದಿಂದ ಸುರಿವ ರಕ್ತದಂತೆ, ಹುಣ್ಣಿನ ಮೇಲೆ ಬರೆಯೆಳೆದಂತೆ, ಬರೀ ದುಃಖವೇ ಜೀವನವನ್ನು ತುಂಬಿದೆ. ಆ ಮಟ ಮಟ ಮಧ್ಯಾಹ್ನದಲ್ಲೂ ಮನಸ್ಸಿಗೆ ಮಂಜು ಕವಿದು, ಕತ್ತಲು ಆವರಿಸಿದಂತಾಯಿತು. ಹನ್ನೆರಡು ವರ್ಷಗಳ ನಡುವೆ ಕಠೋರ ಕಾಲನದಿ ಹರಿದಿತ್ತು.

ಶ್ರೀಮಾನ್ ಗಂಗಾಧರ ಚಿತ್ತಾಳರ ಈ ಭಾವಗೀತೆ ಸರಳವಾಗಿ, ಕಡೆಯಿಲ್ಲದೆ ಹರಿದಿದೆ, ಸಾಧಾರಣವಾಗಿ ಮನಸ್ಸಿನಲ್ಲಿ ಯಾವುದೊಂದು ಸುಖವನ್ನೇ ಆಗಲಿ, ದುಃಖವನ್ನೇ ಆಗಲಿ, ಅನುಭವಿಸಿದನಂತರ ಒರೆದ ಕೈಯಲ್ಲಿ ಇದರ, ಒಂದು ಕಾಲುಭಾಗ ಮಾತ್ರ ಮೂಡಿರುವುದಂತೆ. P. B. Shelly ಯವರ ಒಂದು ಕವನಕ್ಕೆ ಯಾರೋ ವಿಮರ್ಶಿಸಿದಾಗ ಈ ಮಾತನ್ನು ಹೇಳಿದ್ದರು. ಚಿತ್ತಾಳರ ದುಃಖದ ಬಗೆಗೆ ಮತ್ತೇನೆಷ್ಟಿರಬಹುದು? ನರ್ಣಿಸಲಳವೆ?

ಕಾವ್ಯ ತನ್ನ ಕಾರ್ಯವನ್ನು ಚೆನ್ನಾಗಿ ಮಾಡಿದೆ. ಓದುಗರ ಕಣ್ಣ ಮುಂದೆ ಹಾಳು ಬಿದ್ದ ಹಳ್ಳಿಯ ಪರಿಪೂರ್ಣ ದೃಶ್ಯವನ್ನು ಹಿಡಿದು ತಂದು ನಿಲ್ಲಿಸುತ್ತದೆ. T. S. Eliot ರವರ Preludes ಗಳಂತೆ, ಕವಿತೆ ಪೂರ್ವರಂಗದ ಘಟನೆಗಳನ್ನು ವರ್ಣಿಸುತ್ತದೆ; ವಿಶದೀಕರಿಸುತ್ತದೆ. ಪದ್ಯದಲ್ಲಿರುವ ನ್ಯೂನತೆಯೆಂದರೆ, ಅದರ ಕಥಾ ವಿಷಯ. ಕಾವ್ಯದ ಕಥಾಭಾಗವು ಬಹು ಹಳೆಯದು. ಆದರೂ ಅದು ಕವಿಯ ಸ್ವಂತ ಅನುಭವಚಿತ್ರಣವಾದ್ದರಿಂದ ಇದನ್ನು ಗೌರವಿಸಲೇ ಬೇಕಾಗಿದೆ. ಕಾವ್ಯ ಒಟ್ಟಿನಲ್ಲಿ ಸುಂದರವಾಗಿ, ರಮ್ಯವಾಗಿ, ಸರಳವಾಗಿ ಮೂಡಿದೆ. ಚಿತ್ತಾಳರಿಂದ ಇಂತಹ ಕವನಗಳು ಮತ್ತಷ್ಟು ಬರಲಿ.

ಅಶಾಂತಿಪರ್ವ

(ವಿಜಯನಗರದ ಐತಿಹಾಸಿಕ ತರಂಗರೂಪಕ)

ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

(ಕಳೆದ ಸಂಚಿಕೆಯಲ್ಲಿ ಪ್ರಕಟವಾದುದರ ಮುಂದಿನ ಭಾಗ)

ಏಳನೆಯ ಸನ್ನಿವೇಶ

ನಿರೂಪಕ

ಹಗಲಿನ ಮೂರು ಪ್ರಹರಗಳು ಮುಗಿದುಹೋಗಿವೆ. ಪೆದ್ದರಾಯ ತನ್ನ ಶಯನಗೃಹದ ಪರ್ಯಂಕದಲ್ಲಿ ಬಿದ್ದುಕೊಂಡು ಬಗೆಹರಿಯದ ಯೋಚನೆಯಲ್ಲಿ ತೊಡಗಿದ್ದಾನೆ. 'ಕಮಲಾಂಬಿಕೆಯೊ ? ರತ್ನಾಂಬಿಕೆಯೊ ?' ಎಂಬ ಸಮಸ್ಯೆ ಆತನ ಮನಸ್ಸು-ಹೃದಯಗಳನ್ನು ಸುತ್ತುಹಾಕಿಬಿಟ್ಟಿದೆ. ಆಗಾಗ ಮಗ್ಗಿಲುಗಳನ್ನು ಬದಲಿಸುತ್ತಲಿದ್ದಾನೆ. ರತ್ನಾಂಬಿಕೆಯೊಂದಿಗೆ ಕಳೆದ ತನ್ನ ಹಿಂದಿನ ಕಾಲವನ್ನು ನೆನೆಯುತ್ತಲಿದ್ದಾನೆ; ಆಗಾಗ ನಿಟ್ಟುಸಿರು ಹಾಕುತ್ತಲಿದ್ದಾನೆ. ರತ್ನಾಂಬಿಕೆಯ ಮೂರ್ತಿಯನ್ನು ಮರೆಮಾಡಿ ಕಮಲಾಂಬಿಕೆಯ ಚಿತ್ರ, ಕಲ್ಪನೆಯ ಪಟದಲ್ಲಿ ಮೂಡುಪಡದು. ಆಕೆಯ ಸೌಂದರ್ಯವೂ ಸಂಗೀತವೂ ಪೆದ್ದರಾಯನ ಮನವನ್ನು ಸೆಳೆದುಕೊಂಡು ಎಲ್ಲೆಲ್ಲಿಯೋ ಆತನನ್ನು ಅಲೆದಾಡಿಸುವುವು. ಪಟ್ಟಾಭಿಷೇಕದ ದಿನವು ನಿಶ್ಚಿತವಾಗಿ, ಸಾಮ್ರಾಜ್ಯದಲ್ಲಿಯ ಮಾಂಡಲಿಕ-ಮನ್ನೆಯರಿಗೆಲ್ಲ ಔತಣದೋಲೆಗಳು ಹೋಗಿರುವುವೆಂಬ ಮಾತನ್ನೂ ಆತನ ಹಗಲುಗನಸುಗಳು ಮರೆಸಿಬಿಟ್ಟಿದ್ದುವು. ಅಗಲೇ ಬಾಗಿಲ ಕಾಪಿನಾಳು ಒಳಗೆ ಬಂದು ಹೇಳಿದನು.

ಕಾಪಿ :— ಈಶ್ವರನಾಯಕರು ದಯೆಮಾಡಿಸಿದ್ದಾರೆ ಬುದ್ಧಿ.

ಪೆದ್ದ :— (ಕಾಪಿನಾಳನ ಮಾತಿನ ಕಡೆಗೆ ಲಕ್ಷ್ಯವಿಲ್ಲದೆ) ಏನು ? ಏಕೆ ಬಂದೆ....ನಿನ್ನ ಕೆಲಸಬಿಟ್ಟು ?

ಕಾಪಿ :— ಈಶ್ವರನಾಯಕರು ದಯೆಮಾಡಿಸಿದ್ದಾರೆ. ಸನ್ನಿಧಿಗೆ ಸೂಚಿಕೆ ಮಾಡಬೇಕೆಂದು ಬಂದೆ ಬುದ್ಧಿ.

ಪೆದ್ದ :— ಓ! ಈಶ್ವರನಾಯಕ ಬಂದಿದ್ದಾನೆಯೆ ?..... ಸರಿಯೆಂ ! ಹೋಗು, ಅವರಿಗೆ ಇಲ್ಲಿಗೇ ಬರುವಂತೆ ಹೇಳು ! (ಕಾಪಿನಾಳು 'ಅಪ್ಪಣೆ ಬುದ್ಧಿ' ಎಂದು ಹೋಗುವನು.) ರತ್ನಾಂಬಿಕೆಯ ಸಲುವಾಗಿ ಈಶ್ವರನ ಸಹವಾಸ ನನಗೆ ಗಂಟುಬಿತ್ತು. ಈತನ ಸ್ವಾರ್ಥದ ತಕ್ಕೆ, ಸಾಮ್ರಾಜ್ಯಕ್ಕೆ ಉಪಕಾರಿಯಾಗುವನೊದೋ ಅಪಕಾರಿಯಾಗುವನೊದೋ ತಿಳಿಯದಂತಾಗಿದೆ.

(ಈಶ್ವರನಾಯಕನು ಬರುವನು.)

ಪೆದ್ದ :— (ಆಣಕದ ಧ್ವನಿಯಲ್ಲಿ) ಬರಬೇಕು ! ದಯೆ ಮಾಡಿಸಬೇಕು ಸೇನಾಪತಿಗಳು.

ಈಶ್ವರ :— ಪೆದ್ದಣ್ಣಾ, ಈ ಸೇನಾಪತಿತ್ವದ ಬಿರುದು ನನಗೆ ಹೋಗಿದೆ. (ಪೆದ್ದರಾಯನು ಗಟ್ಟಿಯಾಗಿ ನಗುವನು.) ನೋಡಿ ಪೆದ್ದಣ್ಣಾ! ಕೊನೆಗೂ ವಿಜಯನಗರಕ್ಕೆ ಒದಗಿದ ಮತ್ತೊಂದು ಗಂಡಾಂತರವು ತಾನಾಗಿ ದೂರವಾಗಿ ಹೋಯಿತು. ಇದಕ್ಕಾಗಿ ಮತ್ತೆ ಮತ್ತೆ ಆನಂದ ನನಗೆ.....

ಪೆದ್ದ :— (ಚಕಿತನಾಗಿ ನುಡಿದ) ಇನ್ನೊಂದು ಗಂಡಾಂತರ ಯಾವುದು ಈಶ್ವರಾ?

ಈಶ್ವರ :— ಯಾವುದೆಂದು ಕೇಳುತ್ತೀರಲ್ಲ ಇನ್ನೂ ? ನಿಮ್ಮ ಅಣ್ಣ ವಿಜಯಸಿಂಹಾಸನಾಧಿಕಾರಿಗಳಾಗಬೇಕಾಗಿದ್ದುದು ! ಅದೊಂದು ಗಂಡಾಂತರವೇ ಅಲ್ಲವೇನು ?

ಪೆದ್ದ :— ಇದೇನು ಮಾತು ಈಶ್ವರಾ ?.....ಇದುವರೆಗೆ ನಾವೆಲ್ಲರೂ ಅಣ್ಣಾಜಿಯವರನ್ನು ತಪ್ಪು ತಿಳಿದುಕೊಂಡಿದ್ದೆವು; ಅವರ ಯೋಗ್ಯತೆಯ ಪರೀಕ್ಷೆಯೆ ನಮಗೆ ಆಗಿರಲಿಲ್ಲ.

ಈಶ್ವರ :— ಓ ಹೋ! ಈಗ ಒಮ್ಮೆಲೇ ಆಗಿ ಹೋಯಿತೇನು? ಪೆದ್ದಣ್ಣಾ, ನಿಮಗೊಂದು ಮಂಕು ಕವಿದುಬಿಟ್ಟಿದೆ. ಏನೋ, ಕಾಲಕ್ಕೂ ಕರ್ಮಕ್ಕೂ ಕೂಡಿಬಂತು..... ಎಂತಲೇ ರಾಜಶೇಖರನು ವೇಷ ಬದಲಿಸಿ, ಕಳ್ಳತನದಿಂದ ಅರಮನೆಯಲ್ಲಿ ನುಗ್ಗಿದ; ನಿಃಶಸ್ತ್ರನಾಗಿ ನಿಂತಿದ್ದ ದೊರೆಯನ್ನು ಕೊಲೆಮಾಡಿ, ಸಲ್ಲದ ಕೀರ್ತಿಗೆ ಪಾತ್ರನಾಗಿ ನಿಂತ. ಅಂದು ರಾಜಶೇಖರನೇ ಏಕೆ, ನಿಮ್ಮ ಅಡಿಗೆಮನೆಯ ಲಚ್ಚಮ್ಮ ನನ್ನು ಕಳುಹಿದ್ದರೆ, ಅವಳೂ ಆ ಕಾರ್ಯ ಮಾಡಿ ಬರುತ್ತಿದ್ದಳು, ತಿಳಿಯಿತೆ ?

ಪೆದ್ದ :— ಆ ಕೊಲೆಯ ಮಾತನ್ನು ಬಿಟ್ಟುಬಿಡು ಈಶ್ವರಾ ! ಅಣ್ಣಾಜಿಯವರ ಮನಸ್ಸಿನ ಉನ್ನತಿಯೆಂತಹುದು ? ಮೋಹ-ಲೋಭಗಳ ಸಂಯಮ ಎಂತಹುದು ? ಲೋಕವನ್ನು ನೋಡುವ ಅವರ ದೃಷ್ಟಿಯ ವೈಶಾಲ್ಯವೆಂತಹುದು ? ನಿಜವಾಗಿಯೂ ಅಣ್ಣಾಜಿಯವರು ಒಬ್ಬ ಯೋಗಿಗಳು !

ಈಶ್ವರ:— ಯೋಗಿಯಿರಲಿ, ಭೋಗಿಯಿರಲಿ; ರಾಜಶೇಖರನು

ಜಯನಗರಕ್ಕೆ ಅಧಿಪತಿಯಾಗಿದ್ದರೆ, ಸಾಮ್ರಾಜ್ಯಕ್ಕೇ ಸಂಕಟ. ಂದರ್ಭ ಒದಗುತ್ತಿದ್ದಿತು! ಪೆದ್ದಣ್ಣಾ, ಒಬ್ಬೊಬ್ಬರಿಗೆ ಒಂದೊಂದು ಗೆಯ ಹುಚ್ಚು. ಗತಿಸಿದ ವಿರೂಪಾಕ್ಷರಾಯನಿಗೆ ಹೆಣ್ಣಿನ ಹುಚ್ಚಾ ರೆ, ಈತನಿಗೆ ಯೋಗಿ ಎಂದು ಹೊಗಳಿಸಿಕೊಳ್ಳುವ ಹುಚ್ಚು! ಅವರು ಣ್ಣಿಗೆ ಮರುಳಾಗಿ, ರಾಜ್ಯದಲ್ಲಿ ವಿಧರ್ಮಿಯರಿಗೆ ಆಶ್ರಯ ಕೊಟ್ಟರು; ಇವನು ತನ್ನ ಸಾಧುತ್ವ-ಸಮದೃಷ್ಟಿಗಳ ಸೋಗಿನಿಗಾಗಿ ವರಿಗೆ ಆಶ್ರಯ ಕೊಡುತ್ತಿದ್ದಾನೆ ಇಷ್ಟೆ ಅಲ್ಲ; ಮುಂದೆ ವಿ ಧರ್ಮಿಯರ ಕಡೆಯಿಂದ ಕನ್ನಡಿಗರ ಎದೆಯನ್ನು ತುಳಿಯಲಿಕ್ಕೂ ಬಹುದು!

ಪೆದ್ದ :— ಇದೊಂದು ವಿಷಯವನ್ನು ಬಿಟ್ಟರೆ, ಅಣ್ಣಾಜಿ- ವರಲ್ಲಿ ಯಾವ ಕೊರತೆಯನ್ನೂ ಕಾಣುವಂತಿಲ್ಲ.

ಈಶ್ವರ:— ನೀವು ಭಾವನಾತ್ಮಕ ಮನುಷ್ಯರು; ಬೆಳ್ಳಗಿ ದ್ದನ್ನೆಲ್ಲ ಹಾಲು-ಎಂದೇ ಹೊರಟುಬಿಡುತ್ತೀರಿ! ಪೂರ್ಣ ಪರೀಕ್ಷೆ ಮಾಡದೆ ಯಾವುದನ್ನೂ 'ಹೀಗೆ' ಎಂದು ನಿರ್ಣಯಿಸಿ ಕುಳಿತು ಬಿಡಲಾಗದು! ಮನುಷ್ಯನ ಬೆಲೆಯನ್ನು ಕಟ್ಟುವುದಾದಲ್ಲಿ, ಅವನ ಪ್ರಯುಷ್ಯದ ಪ್ರತಿಯೊಂದು ಕ್ಷಣವನ್ನೂ ತರೆದರೆದು-ಒರೆದೊರೆದು-ನೋಡುತ್ತಿರಬೇಕು!

ಪೆದ್ದ :— ಆಗಲಿ, ನಿನ್ನ ಅನುಭವಜ್ಞಾನ ಪ್ರಯೋಗ ನಡೆಯಲಿ!

ಈ. ನಾ :— ಇದು ನಗೆಮಾತಲ್ಲ ಪೆದ್ದಣ್ಣಾ, ರಾಜ್ಯಾಧಿಕಾರ ನಿಮ್ಮಂತಹ ವೀರಾಗ್ರಣಿಗಳ ಕಡೆಗೆ ಬಂದದ್ದು, ಕರ್ನಾಟಕದ ಸುದೈವವೇ ಸರಿ! ನಾವು ನಮ್ಮ ದೇಶದ ಯಾವ ಮೂಲೆಯಲ್ಲೂ, ವಿಧರ್ಮಿಯರ ಒಂದು ಮುಖ ಕೂಡ ಕಾಣದಂತೆ ಮಾಡಬೇಕು; ಆದರೆ.....ಆದರೆ.....ನರಸಿಂಹನಾಯಕರೇ ದಂಡನಾಯಕರಾಗಿ ಇರಬೇಕೆಂದರೆ, ನಮ್ಮ ಈ ಗುರಿ ಸಾಧಿಸೀತೋ ಇಲ್ಲವೋ ಸಂಶಯ!

ಪೆ. ರಾ. :— (ಯೋಜನೆಯ ಧ್ವನಿಯಲ್ಲಿ) ನರಸಿಂಹನಾಯಕರು-ನರಸಿಂಹನಾಯಕರು....! (ಬಿಸಿಯುಸಿರಿಕ್ಕುವನು).

ಈ. ನಾ. :— ಯೋಜನೆಯೇನು ಪೆದ್ದಣ್ಣಾ? ಹೀಗೇಕೆ ಸುಮ್ಮನೆ ಕುಳಿತಿದ್ದೀರಿ?

(ಪೆದ್ದರಾಯ ಉತ್ತರಕೊಡದೆ ಕುಳಿತಿರುವನು.)

ಈ. ನಾ. :— (ಗಟ್ಟಿಯಾಗಿ) ಪೆದ್ದಣ್ಣಾ!

ಪೆ. ರಾ. :— (ಬೆಚ್ಚಿಬಿದ್ದವನಾಗಿ) ಏಯ್.... ಏಯ್. ಏನು ಈಶ್ವರಾ?

ಈ. ನಾ. :— ಇದೇನು? ಹೀಗೇಕೆ ಕುಳಿತುಕೊಂಡಿದ್ದೀರಿ? ಮತ್ತೆ ಯಾವ ಚಿಂತೆ ನಿಮ್ಮ ತಲೆಯನ್ನು ತಿನ್ನತೊಡಗಿತು? ನರಸಿಂಹನಾಯಕರ ದಂಡನಾಯಕತ್ವದ ವಿಷಯವೇನು?

ಪೆ. ರಾ. :— (ವಿಮನಸ್ಕತೆಯಿಂದ) ಏನು? ಹುಂ!.... ಆಹುದು!

ಈ. ನಾ :— ಆದರದೇನು ದೊಡ್ಡ ವಿಚಾರ? ಮೊದಲಿನ ದೊರೆಗಳು ಅವರನ್ನು ಅಧಿಕಾರದಿಂದ ತೆಗೆದೇಬಿಟ್ಟಿದ್ದಾರೆ. ನೀವು ಹೊಸ ದೊರೆಗಳಾಗುವವರು! ಹೊಸದೊರೆಗಳಿಗೆ ಹೊಸ ದಂಡನಾಯಕ! ಯಾರನ್ನಾದರೂ ಯೋಗ್ಯರಾದವರನ್ನು ಹೊಸತಾಗಿ ಮಂತ್ರಿಗಳನ್ನಾಗಿ ನಿಯಮಿಸಿಕೊಂಡು ಬಿಡಿ—ಆಯಿತು!

(ಈಶ್ವರನ ಮಾತುಗಳ ಕಡೆಗೆ ಲಕ್ಷ್ಯವಿಲ್ಲದೆ)

ಪೆದ್ದ :— ನೀನು.... ಹಿಂದೋಳರಾಗವನ್ನು ಕೇಳಿದ್ದೀಯಾ ಈಶ್ವರ?

ಈ. ನಾ. :— ಓ! ಬೇಕಾದಷ್ಟು ಸಲ ಕೇಳಿದ್ದೇನೆ. ವಿರೂಪಾಕ್ಷರಾಯರ ಆಶ್ರಯದಲ್ಲಿದ್ದ ವೇಳೆ, ಸಂಗೀತ-ನರ್ತನಗಳಿಗೆ ಏನು ಬರಗಾಲ?

ಪೆದ್ದ :— ಮೊನ್ನೆಯ ದಿನ ನರಸಿಂಹನಾಯಕರ ಮಗಳ ಂದ, ಹಿಂದೋಳರಾಗದ ಆಲಾಪನೆಯನ್ನು ಕೇಳಿದೆ....ಎಷ್ಟು ತ್ತು ನೋಡು ಈಶ್ವರಾ!

ಈ. ನಾ. :— ಮರೆತುಬಿಟ್ಟಿದ್ದ ಸಂಗೀತದ ಮೋಹ, ಈಗ ನಿಮ್ಮಲ್ಲಿ ಮತ್ತೆ ತಲೆಯೆತ್ತಿತೇನು ಪೆದ್ದಣ್ಣಾ?

ಪೆದ್ದ :— ನನ್ನ ಪ್ರತಿಜ್ಞೆ, ನನ್ನ ಎಲ್ಲ ಅಭಿರುಚಿಗಳನ್ನು ತಳಕ್ಕೊತ್ತಿಬಿಟ್ಟಿತ್ತು. ಈಗ ಪ್ರತಿಜ್ಞೆಯ ಪೂರ್ಣತೆ, ಅವುಗಳ ತಲೆಯನ್ನು ಮೇಲಕ್ಕೆತ್ತಿದೆ. ಈಶ್ವರಾ, ಮೊನ್ನೆ ಕೇಳಿದ ರಾಗವನ್ನೆ, ಒಂದು ನಿಮಿಷವೂ ಬಿಡದೆ ಕೇಳುತ್ತಿರಬೇಕೆಂದು ನನ್ನ ಆಶೆ!

ಈ. ನಾ. :— ಅಬ್ಬಾ, ಅಷ್ಟು ಚೆನ್ನಾಗಿ ಹೇಳುತ್ತಾಳೇನು.... ನರಸಿಂಹನಾಯಕರ ಮಗಳು? ಅವಳ ಹೆಸರು ಕಮಲಾಂಬಿಕೆಯಲ್ಲವೆ?

ಪೆದ್ದ :— (ದೀರ್ಘವಾಣಿಯಲ್ಲಿ) ಹೂಂ...., ಕಮಲಾಂಬಿಕೆ ....ಕಮಲಾಂಬಿಕೆ!

ಈ. ನಾ. :— ಮದುವೆಯಾಗಿದೆಯೇ ಪೆದ್ದಣ್ಣಾ, ಅವಳಿಗೆ?

ಪೆದ್ದ :— ಅವಳಿಗೆ ಮದುವೆಯೆ?....ಇನ್ನೂ ಆದಂತೆ ಕಾಣೆ!

ಈ. ನಾ. :— (ಸಂಭ್ರಮದ ನಗೆಯೊಂದಿಗೆ) ಹಾಗಿದ್ದರೇನು! ಕೆಲಸವೇ ಆದಂತಾಯಿತು ವಿಜಯನಗರದ ಸಮ್ರಾಟನ ಅಪೇಕ್ಷೆಯೆಂದನೀಲೆ, ಕನ್ಯೆಯಾಗಿದ್ದ ಕಮಲಾಂಬಿಕೆಯು, ಒಂದು ನಿಮಿಷವೂ ಬಿಡದಂತೆ, ತನ್ನ ಹಿಂದೋಳರಾಗವನ್ನು ನಿಮಗೆ ಕೇಳಿಸಬಹುದು!

(ಪೆದ್ದರಾಯ ಸುಮ್ಮನೆ ಕುಳಿತಿರುವನು.)

ಈ. ನಾ. :— ಏನು ಪೆದ್ದಣ್ಣಾ! ನನ್ನ ಮಾತಿಗೆ ನಿಮ್ಮಿಂದ ಮರುಮಾತೇ ದೊರೆಯಲಿಲ್ಲವಲ್ಲ? ನಾನು ಹೇಳಿದಂತೆ ಆಗಬಹುದಲ್ಲವೆ?

ಪೆದ್ದ :— (ಜಡವಾದ ಧ್ವನಿಯಲ್ಲಿ) ಚಂದ್ರಗಿರಿಯಲ್ಲಿ ಇದ್ದಾನಲ್ಲವೇ?....ಮಳುವ ನರಸಿಂಹನಾಯಕ? ಕಮಲಾಂಬಿಕೆಯನ್ನು ಆತನಿಗೆ ಕೊಡುವುದಾಗಿ ನಿರ್ಣಯವಾಗಿದೆಯಂತೆ!

ಈ. ನಾ. :— ಸಮ್ರಾಟರೊಡನೆ ಸಂಬಂಧವನ್ನು ಬೆಳೆಸುವ

ದರ್ಪವಿರುವಾಗ, ಗೂತ್ತಾದುದನ್ನು ಮುರಿಯಲಿಕ್ಕೆ ತಡೆಯೇನೂ ಶೆಕ್ಕಿಲ್ಲ!

ಪೆದ್ದ :— (ಸುಮ್ಮನೆ ಕುಳಿತಿರುವನು)

ಈ. ನಾ. :— ಪೆದ್ದಣ್ಣಾ, ಹಗಲು ಇನ್ನು....ಎರಡು ಗಳಿಗೆ-ಷ್ಟೂ ಉಳಿಯಲಿಲ್ಲ. ಗತಿಸಿದ ವಿರೂಪಾಕ್ಷರಾಯರು ಏರುತ್ತಿದ್ದ ದುರೆಯನ್ನು ಏರಿ ನೋಡಬೇಕು—ಎನ್ನುತ್ತಿದ್ದಿರಿ! ಈಗ ಹೊರ-ಣನೆ ?

ಪೆದ್ದ :— ಇನ್ನೊಂದು ದಿನ ನೋಡೋಣವಂತೆ. ಅದೇಕೋ ದು ಮೈಯೆಲ್ಲವೂ ಜಡವಾಗಿದೆ.

ಈ. ನಾ. :— ಸರಿ ಸರಿ! ನನಗಿನ್ನು ಅಪ್ಪಣೆ ಕೊಡಿರಿ ನಾದರೆ.

ಪೆದ್ದ : — ಆಗಬಹುದು! (ಈಶ್ವರನಾಯಕ ಹೋಗುವನು ರಾಯ ಪರ್ಯಂಕದಿಂದ ಇಳಿದು ಅಡಿಯಿಡುತ್ತ, ಹಿಂದೋಳ ಗದ ಆಲಾಪನೆಯನ್ನು ಗುಣುಗುಣಿಸತೊಡಗುವನು.)

೬ನೆಯ ಸನ್ನಿವೇಶ

ನಿರೂಪಕ

ಈಶ್ವರನಾಯಕನು ತನ್ನ ಕುತಂತ್ರದ ಕೈಚಳಕವನ್ನು ಎಡೆಬಿಡದೆ ಪೆಸಿದ್ದಾನೆ. ಅದರಿಂದ ನರಸಿಂಹನಾಯಕ, ರಾಜಶೇಖರ, ಪೆದ್ದ-ಯ, ರತ್ನಾಂಬಿಕೆ, ಕಮಲಾಂಬಿಕೆ ಎಲ್ಲರ ಮನಸ್ಸಿನಲ್ಲಿಯೂ ಶಾಂತಿಯ ನಂಜು ಸೇರಿಕೊಂಡು, ಸುಖ-ಸಮಾಧಾನಗಳನ್ನು ನುಂಗಿ ಾಕಿದೆ ಪೆದ್ದರಾಯನ ದುಡುಕುತನದ ವರ್ತಮಾನಗಳನ್ನು ಕೇಳಿ ೇಳಿ, ರಾಜಶೇಖರನು ಒಳಗೊಳಗೇ ಕಳವಳಿಸುತ್ತಲಿದ್ದಾನೆ. ಇದೀಗ ಜಶೇಖರ, ಪೆದ್ದರಾಯನಿಗೆ ಬರುವಂತೆ ಹೇಳಿ ಕಳುಹಿ, ಅವನ ರಿಯನ್ನು ಕಾಯುತ್ತ ಕುಳಿತಿದ್ದಾನೆ.

ಪೆದ್ದ :— (ಹೊರಬಾಗಿಲ ಸೇವಕನನ್ನು ಕುರಿತು ದರ್ಪದ ನಿಯಲ್ಲಿ) ಅಣ್ಣಾಜಿಯವರು ಎಲ್ಲಿ ಇರುವರೋ ಚಿಕ್ಕಾ!

ಸೇವಕ :— ವಿಶ್ರಾಂತಿಮಂದಿರದೊಳಗೆ ಕುಳಿತುಕೊಂಡಿದ್ದಾರೆ ಯಾ! ಚಿಕ್ಕ ಬುದ್ಧಿಯವರು ಬಂದರೆ, ಅಲ್ಲಿಗೇ ಕಳುಹಬೇಕೆಂದು ಪ್ಪಣೆ ಕೊಡಿಸಿದ್ದಾರೆ ಬುದ್ಧಿ!

ಪೆದ್ದ :— ಸರಿ! ಅಲ್ಲಿಗೇ ಹೋಗುತ್ತೇನೆ. (ನಡೆಯುವ ಭಿನಯ) (ಆರೆನಿಮಿಷ ತಡೆದು ತಿರುವಾಯ)

ರಾಜಶೇಖರ :— ಬಂದೆಯಾ ಪೆದ್ದಣ್ಣಾ? ಬಾ, ಕುಳಿ-ಕೊ! (ಪೆದ್ದರಾಯ ಮಾತನೇನೂ ಆಡದೆ, ಬಿರುಸಿನಿಂದಲೇ ಳಿತುಕೊಳ್ಳುವನು.)

ರಾ. ಶೇ. :— ಪಟ್ಟಾಭಿಷೇಕದ ಸಿದ್ಧತೆ, ಯಥಾಕ್ರಮವಾಗಿ ಡೆದಿದೆಯಲ್ಲವೆ ?

ಪೆ. ರಾ. :— (ಹೆಮ್ಮೆಯ ಧ್ವನಿಯಲ್ಲಿ) ಹುಂ, ನಡೆದಿದೆ!

ರಾ. ಶೇ :—(ನಾತ್ಸಲ್ಯದ ನುಡಿಗಳಲ್ಲಿ) ನಿನ್ನೊಡನೆ ಒಂದು ವಿಷಯ ಕುರಿತು ಮಾತನಾಡಬೇಕಾಗಿದೆ ಪೆದ್ದಣ್ಣಾ!

ಪೆ. ರಾ. :— ಅದೇನು ?....ಯಾವ ವಿಷಯ ?

ರಾ. ಶೇ. :— ನರಸಿಂಹನಾಯಕರು, ನಾರಾಯಣಪಂಡಿತರ ಕೂಡ ಒಂದು ಮಹತ್ತ್ವದ ಮಾತನ್ನು ಹೇಳಿಕಳುಹಿದ್ದಾರೆ—

ಪೆದ್ದ :— (ಬಿಗುಹಿನ ದನಿಯಲ್ಲಿಯೇ) ಸರಿ!

ರಾ. ಶೇ :— ನೀನೇನೊ ನರಸಿಂಹನಾಯಕರ ಮಗಳನ್ನು ಮದುವೆಯಾಗಲಿಕ್ಕೆ ಅಪೇಕ್ಷಿಸುತ್ತೀಯಂತೆ, ಆಪುದೇನು ?

ಪೆದ್ದ :—ಅಪೇಕ್ಷಿಸುತ್ತಿರಬಹುದು; ಅದರಲ್ಲಿ ತಪ್ಪೇನಾದರೂ ಇದೆಯೇನು ?

ರಾ. ಶೇ. :— ಅದೇನೋ ಸರಿಯೆ! ಮದುವೆಯಾಗದಿದ್ದ ಕನ್ನೆಯನ್ನು ನೂ ಅಪೇಕ್ಷಿಸಬಹುದು! ಆದರೆ ...

ಪೆ. ರಾ. :— ಆದರೆ.....ಏನು ?

ರಾ. ಶೇ. :— ಇನ್ನೇನೂ ಇಲ್ಲ. ಕಮಲಾಂಬಿಕೆಯ ಮದುವೆ ಅರ್ಧ ಆಗಿಬಿಟ್ಟಂತಿದೆ!

ಪೆದ್ದ :— ಯಾರೊಡನೆ ಆಗಿಬಿಟ್ಟಂತಿದೆ, ಅವಳ ಅರ್ಧ-ಮರ್ಧ ಮದುವೆ ?

ರಾ. ಶೇ :— ತುಳುವ ನರಸಿಂಹನಾಯಕನೊಡನೆ!

ಪೆದ್ದ :— ಇರಬಹುದು, ಇರಬಹುದು! ಸರಿ! ಅರ್ಧಮರ್ಧ ಮದುವೆ-ಯೆಂದರೆ....ಸಂಪೂರ್ಣ ಆಗಲಿಲ್ಲವಲ್ಲ!

ರಾ. ಶೇ :— ಪೆದ್ದಣ್ಣಾ! ಕಮಲಾಂಬಿಕೆ, ನರಸಿಂಹ ನಾಯಕ ಒಂದೇ ಮನೆಯಲ್ಲಿ ಕೂಡಿ ಬೆಳೆದವರು. ಎಳೆಯತನ-ದಿಂದಲೂ ಅವರಲ್ಲಿ ಪ್ರೀತಿ ಬೆಳೆದುಬಂದಿದೆ.

ಪೆದ್ದ :— ಬಂದಿದ್ದೀತು ಬೆಳೆದು! ಅದನ್ನು ತೆಗೆದುಕೊಂಡು ನನಗೇನು ಮಾಡಬೇಕಾಗಿದೆ ?

ರಾ. ಶೇ :— ಈ ಸಂಬಂಧದ ಅಪೇಕ್ಷೆಯನ್ನು ಬಿಟ್ಟುಬಿಡು ತಮ್ಮಾ! ಈ ಅಪೇಕ್ಷೆಯಿಂದ ನಮಗೂ ಕಲ್ಯಾಣವಾಗದು; ನೀನು ಏರಲಿರುವ ಸಾಮ್ರಾಜ್ಯ ಸಿಂಹಾಸನಕ್ಕೂ ಕ್ಷೇಮವಾಗದು!

ಪೆದ್ದ :— ಬೇರೆಯವರಿಗೆ ಉಪದೇಶಿಸಬೇಕಾದವರು, ತಮ್ಮ ಅಂತರಂಗದ ಯೋಗ್ಯತೆಯನ್ನು ಚೆನ್ನಾಗಿ ಅರಿತುಕೊಂಡು ಉಪ-ದೇಶಿಸಬೇಕು!

ರಾ. ಶೇ :— (ದೈನ್ಯಧ್ವನಿಯಲ್ಲಿ) ಹೀಗೆಂದರೆ ಏನು ಪೆದ್ದಣ್ಣಾ ?

ಪೆದ್ದ :— (ಬೆಚ್ಚಿ ಬಿದ್ದವನಂತಾಗಿ) ಏನೆಂದರೆ....ಇನ್ನೇನು ಹೇಳಬೇಕು? ಇಲ್ಲಿ ಕಾಣುತ್ತಿದೆಯಲ್ಲ ಮಾಲ್ಯವಂತ ಪರ್ವತ! ಅದಕ್ಕೆ "ನೀನು ಹಿಂದಕ್ಕೆ ಸರಿದು ನಿಲ್ಲು" ಎಂದು ಹೇಳುವ ಯೋಗ್ಯತೆ ಯಾರಲ್ಲಿದೆ? ಆ ತುಂಗಭದ್ರಗೆ "ನೀನು ಮೇಲೆ ಮುಖಮಾಡಿ ಹರಿಯಬೇಕು?" ಎಂದು ಆಜ್ಞೆಮಾಡುವ ಸಾಮರ್ಥ್ಯವು ಯಾರಲ್ಲಿದೆ ?

ರಾ. ಶೇ :— ಚೆನ್ನಾಗಿದೆ ನಿನ್ನ ತರ್ಕ! ಬೆಟ್ಟ-ಹೊಳೆಗಳಂತೆ ಮನುಷ್ಯರು ನಿರ್ಜೀವರಲ್ಲ, ... ನಿರ್ಬುದ್ಧರಲ್ಲ..... ನಿರ್ಹೃದಯರಲ್ಲ! ಇನ್ನೊಂದು ಮಾತು ನೋಡು ಪೆದ್ದಣ್ಣಾ! ಬೆಟ್ಟ ನಿಂತಲ್ಲಿಯೆ ನಿಂತಿರುವುದಲ್ಲದೆ, ಸರಿದಾಡಿ ಇನ್ನೊಬ್ಬರಿಗೆ ತೊಂದರೆಕೊಡುವುದಿಲ್ಲ ಹೊಳೆಯು ತಾನು ಪ್ರವಹಿಸಬೇಕಾದಲ್ಲಿಯೇ ಪ್ರವಹಿಸುವುದಲ್ಲದೆ, ಮೇರೆ ಮೀರಿ ನಡೆದು ಬೇರೆಯವರ ಬದುಕನ್ನು ಕೆಡಿಸುವುದಿಲ್ಲ!

ಪೆದ್ದ :— (ಬಿಗಿದ ಧ್ವನಿಯಲ್ಲಿ) ಆಯಿತು; ಹಾಗೆಯೂ ಇರಬಹುದು.

ರಾ. ಶೇ :— (ನಿಶ್ಚಯ ಧ್ವನಿಯಲ್ಲಿ) ನೀನು ಕಮಲಾಂಬಿಕೆಯ ಆಶೆಯ ಬಿಟ್ಟುಕೊಡಬೇಕು!

ಪೆದ್ದ — (ಬಿರುಸಿನಿಂದ) ಅದೇತಕ್ಕಾಗಿ ಬಿಟ್ಟುಕ್ಕೆಕ ಹೇಳ್ತೀಕು ?

ರಾ. ಶೇ :— ಆಕೆ ನಿನ್ನವಳಲ್ಲವೆಂದು! ಇನ್ನೊಬ್ಬ, ಧೀರನ ಭಾಗ್ಯವನ್ನು ಬಯಸುವುದು ಅಧರ್ಮವೆಂದು! ಇಷ್ಟೇ ಅಲ್ಲ; ನಿನ್ನ ನಾಯಕರಂತಹವರ ಮನಸ್ಸನ್ನು ನೋಯಿಸಿ ನಮ್ಮ ಸಾಮ್ರಾಜ್ಯದ ನಿಜವಾದ ಹಿತೈಷಿಯೊಬ್ಬನನ್ನು ಅಸಂತುಷ್ಟಗೊಳಿಸಲಾಗದು ಅಲ್ಲವೆ ?

ಪೆದ್ದ :— (ಖಂಡಿತ ಸ್ವರದಲ್ಲಿ) ನನಗೆಲ್ಲ ಗೊತ್ತಿದೆ ಅಣ್ಣಾಜಿ! ಕಮಲಾಂಬಿಕೆ ಇನ್ನೊಬ್ಬರ ಪಾಲಿನ ಭಾಗ್ಯ! ಆಕೆ ನನಗಾಗಿಯೇ —ವಿಜಯನಗರ ಮಹಾರಾಣಿಯ ಪಟ್ಟಕ್ಕೆ ಏರಿಸಿಬಿಟ್ಟಬಂದವಳು! ಅಂತಹ ರತ್ನವನ್ನು ತಿಪ್ಪೆಯಲ್ಲಿ ಒಗೆದಿರುವ ನರಸಿಂಹನಾಯಕರಿಗೇ—ಬೇಕಾದರೆ—ನೀವು ಉಪದೇಶಪಾನವನ್ನು ಮಾಡಿಸಿರಿ! ಸಾಮ್ರಾಜ್ಯದ ಹಿತಾಹಿತಗಳ ಹೊಣೆಗಾರಿಕೆ ನನಗೂ ಗೊತ್ತಿದೆಯಲ್ಲವೆ ? ಯಾರು-ಯಾರೊಡನೆ ಹೇಗೆ ಹೇಗೆ ನಡೆದುಕೂಳ್ಳಬೇಕೆಂಬುದನ್ನು, ನಾನು ಇನ್ನೊಬ್ಬರಿಂದ ಹೇಳಿಸಿಕೊಳ್ಳಬೇಕಾಗಿ ಏನೂ ಇಲ್ಲ!

ರಾ. ಶೇ :— (ಮೆಲುಮಾತುಗಳಲ್ಲಿಯೆ) ಪೆದ್ದರಾಯಾ, ಮೊದಲಿನಿಂದಲೂ ನಿನ್ನ ಸ್ವಭಾವವನ್ನು ನಾನು ಬಲ್ಲೆ! ಇಲ್ಲದ ಹುಟದಲ್ಲಿ ಬೀಳುವವನು ನೀನು! ಮನಸಿಗೆ ಬಂದುದು ನಡೆದೇ ತೀರಬೇಕೆನ್ನುವವನು! ತಮ್ಮಾ, ದೊರೆಯಾಗಿರುವವನು ಹೀಗಿದ್ದರೆ ಜೆನ್ನಾಗಿರುವುದಿಲ್ಲ. ತನ್ನ ವೈಯಕ್ತಿಕ ಆಶೆಗಳನ್ನು ಹೋಮಮಾಡುತ್ತಿರುವ ದೊರೆಯ ಆಡಳಿತವೇ, ಲೋಕಕ್ಕೆ ಬಹುಕಾಲ ಬೇಕಾಗುವುದು. ಅದು ಇಲ್ಲದೆ ಇದ್ದ ಚಕ್ರವರ್ತಿಯವರ ಆಡಳಿತದ ಪರಿಣಾಮ ಏನಾಗಿ ಹೋಗಿದೆ; ನೋಡುತ್ತೀಯಲ್ಲವೆ? ನೀನೀಗ ಸಾಮ್ರಾಜ್ಯ ಭಾರವನ್ನು ಕೆ ಕೊಳ್ಳುವುದೆಂದರೆ, ಪ್ರಜೆಗಳೆಲ್ಲರ ಲಕ್ಷ್ಯವನ್ನು ನಿನ್ನ ಕಡೆಗೆ ತಿರುಗಿಸಿಕೊಳ್ಳಬೇಕು! ಅದಕ್ಕಾಗಿ ನೀನು ತ್ಯಾಗಿಯಾಗಬೇಕು; ವೈತಿಯಾಗಬೇಕು; ವಿರಾಗಿಯಾಗಬೇಕು!

ಪೆದ್ದ :— (ಸಿಡಿನುಡಿಗಳಲ್ಲಿ) ಹಾಂ! ವಿರಾಗಿಯಾಗಬೇಕು; ಸಂನ್ಯಾಸಿಯಾಗಬೇಕು! ಬೂದಿ ಬಡಿದುಕೊಳ್ಳಬೇಕು; ಬಿಕ್ಷೆಬೇಡಬೇಕು! ಸರಿ! ಏತಕ್ಕಾಗಿ ಬೇಕು ಇವೆಲ್ಲ ಅಣ್ಣಾಜಿ! ಸಾಮ್ರಾಜ್ಯದಲ್ಲಿ ಸುಖ-ಶಾಂತಿಗಳು ನೆಲೆಸಿರುವಂತೆ ಮಾಡಲಿಕ್ಕೆ, ನನ್ನ ತೋಳುಗಳಲ್ಲಿ ಹರಿಹಂಗದ ಬಲವಿದೆ! ಮನದಲ್ಲಿ ಅಖಂಡವಾದ ಛಲವಿದೆ! ನನ್ನ ಕೈಗತ್ತಿ ಜಂಗುತಿಂದು, ಮೊಂಡುಗೊಂಡೇನೂ ಹೋಗಿಲ್ಲ. ಅದರಲ್ಲಿ ಇನ್ನೂ ಸಾಕಷ್ಟು ನೀರಿದೆ. ನೆತ್ತರ ಕುಡಿಯುವ ಅದರ ಆಶೆಯಿನ್ನೂ ಅಕ್ಷಯವಾಗಿಯೇ ಇದೆ. ಆದರ ಎದುರು, ಯಾರ ಅಸಂತುಷ್ಟಿ-ಅತೃಪ್ತಿಗಳು ಏನು ಮಾಡಬಲ್ಲವು ಅಣ್ಣಾಜಿ!

ರಾ. ಶೇ :— ಬರಿ ಶಸ್ತ್ರಾಸ್ತ್ರ-ಶಕ್ತಿಗಳನ್ನು ನಂಬಿ ನಡೆವವನ ಆಧಿಪತ್ಯಕ್ಕೆ ಸ್ಥೈರ್ಯವಿರದು ಪೆದ್ದಣ್ಣಾ! ಅವುಗಳನ್ನು ನಂಬಿಕೊಂಡಿದ್ದ ರಾಜರ ಮನಸ್ಸಿಗೆ, ಯಾವಾಗಲೂ ಹುರುಕುಹತ್ತಿದಂತಿರುವುದು! ಅಂತಹರ ರಾಜ್ಯದಲ್ಲಿ ವಿದ್ವೇಷ-ವಿದ್ರೋಹದ ಕಿಡಿಗಳು ಅಲ್ಲಲ್ಲಿ ಬಿದ್ದು, ಹೊತ್ತಿಕೊಳ್ಳುತ್ತ, ಅನುಕೂಲ ವಾತಾವರಣಕ್ಕಾಗಿ ದಾರಿಯನ್ನು ಕಾಯುತ್ತಿರುವುವು. ತಕ್ಕ ವಾತಾವರಣವು ದೊರೆತೊಡನೆಯೆ ಭಗ್ನೆಂದು ಉರಿದೆದ್ದು, ಸಾಮ್ರಾಜ್ಯಕ್ಕೆ ಸಾಮ್ರಾಜ್ಯವೇ ಸುಟ್ಟುಹೋದ ಉದಾಹರಣೆಗಳು ಹಲವಾರು ಉಂಟು!

ಪೆದ್ದ :— ಒಬ್ಬೊಬ್ಬರದು ಒಂದೊಂದು ದಾರಿ! ನನ್ನ ದಾರಿ ನನಗೆ; ನಿನ್ನ ದಾರಿ ನಿನಗೆ! ಈಗ ವಿಜಯನಗರದ ದೊರೆಯಾಗಿರುವವನು ನಾನು! ನನ್ನ ದಾರಿಯಲ್ಲಿ ಅದನ್ನು ಕರೆದುಕೊಂಡು ಹೋಗುತ್ತೇನೆ!

ರಾ. ಶೇ :— ಪಂಪಾಪತಿ ನಿನ್ನ ದಾರಿಯನ್ನು ಸುಗುಮವಾಗಿಸಲಿ! ಇದು ನನ್ನ ಹೃದಯದ ಹಾರೈಕೆ! ಅದಕ್ಕೆಂತಲೆ ನಾನು ಹೇಳುತ್ತಿರುವುದು! ಹೇಗಾದರೂ ಮಾಡಿ ಪೆದ್ದಣ್ಣನ ಮನಸ್ಸನ್ನು ತಿರುಗಿಸಬೇಕೆಂದು ನರಸಿಂಹನಾಯಕರು ನನಗೆ ಹೇಳಿಕಳುಹಿದ್ದಾರೆ. ಸಾಮ್ರಾಜ್ಯಕ್ಕೆ ನರಸಿಂಹನಾಯಕರಿಂದ ಸಂದ-ಸಲ್ಲಲಿರುವ—ಸೇವೆಯ ಕಲ್ಪನೆ ನಿನಗೆ ಇದ್ದೇ ಇದೆ!

ಪೆದ್ದ :— ಅದಕ್ಕೆಂತಲೇ ಅವರನ್ನು ವಿಜಯನಗರದ ಅರಮನೆಯ ಸಂಬಂಧಗಳನ್ನಾಗಿ ಮಾಡಿಕೊಳ್ಳಬೇಕೆಂದಿದ್ದೇನೆ.

ರಾ. ಶೇ :— ಈ ಸಂಬಂಧ ಅವರಿಗೆ ಬೇಕಾಗಿರದಿದ್ದರೆ!

ಪೆದ್ದ :— ಅವರಿಗೆ ಬೇಕಾಗಿರದಿದ್ದರೆ ನನಗೆ ಬೇಕಾಗಿದೆಯಲ್ಲ! ಅದುದರಿಂದಲೆ ಇಂದೆಯೇ ಅವರಿಗೊಂದು ಓಲೆ ಕಳುಹಿದ್ದೇನೆ. ನೀವು ಈ ಸಂಬಂಧವನ್ನು ಒಪ್ಪಲೇಬೇಕು!—ಎಂದು.

ರಾ. ಶೇ : —ಬಲುಮೆಯ ಪರಿಣಾಮ ಕಹಿಯಾಗದಿರಲಿ ಪೆದ್ದಣ್ಣಾ!

ಪೆದ್ದ :— (ಹೆಮ್ಮೆಯ ನಗು) ನಿಮ್ಮ ಅಭಿಪ್ರಾಯಕ್ಕೆ— ಅಣ್ಣಾಜಿ, ನನ್ನ ಅಭಿಪ್ರಾಯ ಸಂಪೂರ್ಣ ವಿರೋಧಿಯಾದುದು! ಬಿರುಸಾದ ಉಕ್ಕಿನಲ್ಲಿ ಇಂಚರವನ್ನು ಬಯಸಿದರೆ, ಅದು ಹಾಗೆಯೆ ದೊರೆಯದು. ಅದನ್ನು ಕಾಸಿ ಬಡಿದು ಹೊಡೆದು ಕಂಬಚ್ಚಿನಲ್ಲಿ ಹಾಕಿ ಎಳೆದೆಳೆದು ತಂತಿಯನ್ನು ಮಾಡಬೇಕು! ಬಳಿಕ ವೀಣೆಯ ದಂಡಕ್ಕೆ ಬಿಗಿದು ಕಟ್ಟಿ ಬೆರಳಿನಿಂದ ನಿುತಿಯಬೇಕು. ಆಗಲೇ ನಮ್ಮ ಕಿವಿಗೆ ಸಂಗೀತದ ಸವಿಯು ದೊರೆಯುವುದು. ಸಿಗುರಿನಿಂದ ಕೂಡಿದ ಕಬ್ಬು

ತನ್ನ ಸಿಹಿಯನ್ನು 'ನಿಮ್ಮ ಬಾಯಲ್ಲಿ ಎರೆಯುತ್ತೇನೆ. ಬನ್ನಿ' ಎಂದು ತಾನೇ ತಾನಾಗಿ ಜನರನ್ನು ಕರೆಯದು ಅದನ್ನು ಕೊಯ್ದು ಹೆಚ್ಚಿ, ಹಲ್ಲುಗಳಿಂದ ಕಚ್ಚಿ ತಿನ್ನಬೇಕು! ಆಗಲೇ ಅದರ ಸಿಹಿತನವು ನಮಗೆ ಸಿಕ್ಕುವುದು. ಆಣ್ಣಾಜಿ, ಕ್ಷೀರಸಾಗರವು ಅಮೃತವನ್ನು ಸಹಜವಾಗಿ ಕೊಡಲಿಲ್ಲ. ಅದನ್ನು ಮಂದರಪರ್ವತದ ಮಂಥನದಂಡದಿಂದ ಮಥಿಸಬೇಕಾಯಿತಂತೆ! ಇದು ತನುಗೆ ಗೊತ್ತಿಲ್ಲವೆ?

ರಾ. ಶೇ:— ಜಗತ್ತನ್ನು ಕಾಣುವ ನಿನ್ನ ದೃಷ್ಟಿ ವಿಲಕ್ಷಣವಾಗಿದೆ....ಪೆದ್ದರಾಯಾ!

ಪೆದ್ದ:— ಅದೊಂದೂ ನನಗೆ ಗೊತ್ತಿಲ್ಲ. ನನ್ನ ಮೇಲೆ ತಮ್ಮ ಒತ್ತಾಯ ಬೇಡ! ನನಗೀಗ ನೂರೆಂಟು ಕೆಲಸಗಳ ಹೊಣೆ! ವ್ಯರ್ಥ ವಿಷಯದಲ್ಲಿ ವೇಳೆ ಕಳೆಯಲಿಕ್ಕೆ ನನಗೀಗ ಸಮಯವಿಲ್ಲ! ಬರುತ್ತೇನೆ, ನಮಸ್ಕಾರ! (ಎದ್ದು ಹೊರಡುವನು.)

ರಾ. ಶೇ:— ಸಂಪ್ರಾಪ್ತೇ! ದೇವೀ ಭುವನೇಶ್ವರಿ! ನಿಮ್ಮ ಸಂಕಲ್ಪವೇನಿದೆ? ಕರ್ತವ್ಯವನ್ನರಿಯದ ರಾಜರನ್ನು ಕರ್ನಾಟಕ ಈ ಧರ್ಮಸಿಂಹಾಸನದ ಮೇಲೆ ಕುಳ್ಳಿರಿಸಿ, ಎಂತಹ ನಾಟಕವನ್ನು ಆಡಬೇಕಾಗಿದೆ ನಿಮಗೆ?....ನರಸಿಂಹನಾಯಕರ ಮೇಲೆ—ವಿಜಯನಗರದ ಸಮ್ರಾಟನಿಂದ ಸಂಕಟಪ್ರಾಪ್ತಿಯೆ? ನರಸಿಂಹನಾಯಕರಂತಹ ನರಸಿಂಹರ ಅಭಾವದಿಂದ, ವಿಜಯನಗರದ ಸಾಮ್ರಾಜ್ಯವು ತನ್ನ ಆದರ್ಶವನ್ನು ಸಾಧಿಸೀತೆ? ನೊಂದೆದೆಯ ನರಸಿಂಹನಾಯಕರು ಇನ್ನು ವಿಜಯನಗರದಲ್ಲಿ ಉಳಿಯಲಾರರು! ಅವರ ಅಭಿಮಾನಿಗಳ ಬಳಗ ರಾಜ್ಯದಲ್ಲಿ ಬಂಡೆಬ್ಬಿಸದೆ ಬಿಡದು! ಶಾಂತಿದಾಯಿನೀ, ಪಂಪಾಂಬಿಕೆ! ವಿಜಯನಗರದ ಸಾಮ್ರಾಜ್ಯಚರಿತ್ರೆಯಲ್ಲಿ ಆದೇಕೆ ಈ ಅಶಾಂತಿಪರ್ವದ ಅಧ್ಯಾಯವನ್ನು ಬರೆಸುತ್ತಿರುವೆ? ಜಗಜ್ಯೋತಿಯೆ, ಜಗದ್ಧಾತ್ರಿಯೆ, ಕರ್ನಾಟಕ ಸಾಮ್ರಾಜ್ಯದಿಂದ ಇಂದಿನ ಈ ಅಶಾಂತಿಯನ್ನು ಓಟ್ಟಬಿಡು!

ಭದ್ರಂ ಕರ್ಣೇಭಿಶ್ಶೃಣುಯಾಮ ದೇವಾ!
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾ
ಸ್ಥಿರೈರಂಗೈಃ ತುಷ್ಟುವಾಂಸಸ್ತನೂಭಿಃ
ವ್ಯಶೇಮದೇವಹಿತಂ ಯದಾಯುಃ
ಓಂ ಶಾಂತಿಶ್ಶಾಂತಿಶ್ಶಾಂತಿಃ!

ಉಪವನ

ಶ್ರೀ. ಬಾಳು ಬಿ. ಉಪಾಧ್ಯೆ, ಶಮನೇವಾಡಿ

೧

ಬಾಳಿನ ಉಪವನ ಸಕಲರ ಜೀವನ
ಕಹಿ-ಸಿಹಿ ಭಾವಂಗಳ ಮಿಲನ,
ರವಿ-ಶಶಿ-ತಾರೆಯ ಬುವಿ-ಬಾನ್ ಶೋಭೆಯ
ಸುರುಚಿರ ಪಾವನಸಂಕಲನ.

೨

ಉಜ್ವಲ ಸೋಜ್ವಲ ನೀತಿಯೆ ನಿರ್ಮಲ
ಬಾಳಿನ ಅನುಪಮ ಅಂತರ್ಯ,
ವೃಷ್ಟಿಯೆ ಸೃಷ್ಟಿಯ ಅಂತರ ಶಾಂತಿ
ಸಮನ್ವಯ ಜೀವನ ಸೌಂದರ್ಯ!

೩

ಅನುದಿನ ಅರಳುವ ಸುಮನ ಮನೋಹರ
ವನಸಿರಿ ಶೋಭಾ ಶುಭಶಕುನ—
ತನುಮನ ಪುಲಕಿತ ಪುಂಜ ಪರಾತ್ಪರ
ಜನಗಣ ಜೀವಿತ ತನ್‌ಮನನ!

೪

ಅವಿರತ ಪರಿಶ್ರಮ ಜೀವಿತ ಕರ್ಮ
ಸುಖಕರ ಸಾಧನ ಸತ್ವಶ್ರವು,
ಪ್ರಕೃತಿಯ ಅನುಪಮ ಜೀವನ ಧರ್ಮ
ಪರಂಪರ ಪವಿತ್ರ ಉಪವನವು!

೫

ಅಗಣಿತ ಅಂಕುರ ಸಾರ ಚರಾಚರ
ವಿಚಾರಪೂರಿತ ಭಾವನೆಯ
ಸುಲಲಿತ ಸುಂದರ ಪ್ರಕೃತಿಯ ವಿಸ್ತರ
ತನ್‌ಮನ ಸಂತಸ ಸಾಧನವ—

ಮಾನಸಶಾಸ್ತ್ರದ ಮೊದಲ ಹೆಜ್ಜೆಗಳು

ಪ್ರೊ. ಕೆ. ಸ್ಹಿ. ಗಜೇಂದ್ರಗಡಕರ್ ಎಂ. ಎ., ಜನತಾ ಕಾಲೇಜ್, ಧಾರವಾಡ

ಹಲವು ಬಗೆಯ ವಿಕಾರ, ವಿಚಾರ, ಸಂವೇದನೆ ಇವುಗಳಿಗೆ ಮುಖ್ಯ ಕಾರಣವೆನಿಸಿದ ಮಾನವಮನಸ್ಸನ್ನು ವಿಶ್ಲೇಷಿಸಿ, ಅದರ ರಹಸ್ಯವನ್ನು ಅರಿತುಕೊಳ್ಳಬೇಕೆಂಬ ಪ್ರಯತ್ನಗಳು ಅತಿ ಪುರಾತನಕಾಲದಿಂದಲೂ ನಡೆದುಕೊಂಡು ಬಂದಿವೆ. ಇಂತಹ ಪ್ರಯತ್ನಗಳನ್ನು ಭಾರತೀಯ ತತ್ತ್ವಜ್ಞರೂ ಮಾಡಿದ್ದಾರೆ; ಪಾಶ್ಚಿಮಾತ್ಯ ತತ್ತ್ವಜ್ಞರೂ ಮಾಡಿದ್ದಾರೆ!

ಇಪ್ಪತ್ತನೆಯ ಶತಮಾನವೆಂದರೆ, ಮಾನಸಶಾಸ್ತ್ರದ [illegible] ಮಾನ—ಎಂದು ಹೇಳಬಹುದು. ಆದರೂ ಈ ಶಾಸ್ತ್ರದ ಮೊ[illegible] ಹೆಜ್ಜೆಗಳು ಈಗಲೂ ಅಸ್ಪಷ್ಟ ಮತ್ತು ಸಂದಿಗ್ಧವಾಗಿವೆಯೆಂದು ಹೇಳಿದರೆ, ಅದರಲ್ಲಿ ಏನೂ ಆಶ್ಚರ್ಯವಿಲ್ಲ. ಈ ಶಾಸ್ತ್ರವು ತತ್ತ್ವಜ್ಞಾನದಷ್ಟೇ ಪ್ರಾಚೀನವಿರುವುದು, ಮತ್ತು ಇದರ ಆರಂಭವನ್ನಾದರೂ ತತ್ತ್ವಜ್ಞರೇ ಮಾಡಿರುವರು. [illegible]ನದಲ್ಲಿ ನಾನು ಭಾರತೀಯ ಮತ್ತು ಗ್ರೀಕ ತತ್ತ್ವಜ್ಞ[illegible]ಸ್ತ್ರದ ಬಗೆಗೆ ಏನು ಬರೆದಿರುವರೆಂಬುದನ್ನು ಸ್ವಲ್ಪದರಲ್ಲಿ [illegible]ಸುವೆನು :

ಪ್ರಾಚೀನ ಭಾರತೀಯ ಮಾನಸಶಾಸ್ತ್ರದಲ್ಲಿ (೧) ಆಧಿಭೌತಿಕ, (೨) ಆಧ್ಯಾತ್ಮಿಕ ಮತ್ತು (೩) ವಿಕೃತಮಾನಸಶಾಸ್ತ್ರ ಎಂದು ಮೂರು ಭಾಗಗಳು ಇವೆ. ಆಧಿಭೌತಿಕ ಭಾಗದಲ್ಲಿ ಹೇಳಿದ್ದೇನೆಂದರೆ: ಅನ್ನದ ಸೂಕ್ಷ್ಮ ಭಾಗದಿಂದ ಮನಸ್ಸು ನಿರ್ಮಾಣವಾಗುವುದು. ಈ ಅನ್ನವು ಸಾತ್ತ್ವಿಕ, ರಾಜಸ, ತಾಮಸವಿದ್ದಂತೆ, ಮನುಷ್ಯನ ವೃತ್ತಿಗಳಾದರೂ ಸಾತ್ತ್ವಿಕ, ರಾಜಸ, ತಾಮಸವಾಗುವುವು. ಪವಿತ್ರ ಆಹಾರದಿಂದ ಸತ್ತ್ವಶುದ್ಧಿಯು ಆಗುವುದು. ಸತ್ತ್ವಶುದ್ಧಿಯಾದ ಮೇಲೆ ಸ್ಮೃತಿಯು ದೃಢವಾಗುವುದು. ಅದರಿಂದ ಮನುಷ್ಯನು ಎಲ್ಲ ಬಂಧನದಿಂದ ಮುಕ್ತನಾಗುವನು. ಮನಸ್ಸು ಪ್ರಾಣವಾಯುವಿನಲ್ಲಿ ಬೆರೆತಿರುವುದು. ವಾಯುನಿರೋಧ ಮಾಡಿದರೆ, ಮನಸ್ಸು ಏಕಾಗ್ರವಾಗುವುದು. ಆತ್ಮನು ಒಬ್ಬನೇ ಮತ್ತು ಅದ್ವಿತೀಯನಿರುವನು. ದ್ವೈತದಿಂದ ಭಯ ಉಂಟು!

ಮನಸ್ಸಿನಲ್ಲಿಯ, ಸಂಕಲ್ಪವು ಶ್ರೇಷ್ಠವೋ ಅಥವಾ ಚಿತ್ತವು. ಶ್ರೇಷ್ಠವೋ ಇದರ ಬಗ್ಗೆ ಉಪನಿಷತ್ಕಾರರಲ್ಲಿ ಮತಭೇದವಿರುವುದು. ಉಪನಿಷತ್ ಕಾಲದಲ್ಲಿಯೇ ಮೇಧಾ, ಧೃತಿ, ಮನೀಷಾ, ಸಂಕಲ್ಪ, ಸ್ಮೃತಿ ಮುಂತಾದ ಮನೋವೃತ್ತಿಗಳ ವರ್ಗೀಕರಣವನ್ನು ಮಾಡಿ, ಈ ಪ್ರತಿಯೊಂದರ ಬಗೆಗೂ ಚರ್ಚೆಯು ಆಗಿರುವುದು. (೨) ಮಾನಸಶಾಸ್ತ್ರದ ಆಧ್ಯಾತ್ಮಿಕಭಾಗದಲ್ಲಿ ಭಾರತೀಯ ತತ್ತ್ವಜ್ಞಾನಿಗಳು, ಬಹಳೇ ಪ್ರಗತಿ ಹೊಂದಿದ್ದರು. "ಆತ್ಮದ ಹೊರತು ಮಾನಸಶಾಸ್ತ್ರವೇ ಇಲ್ಲ" ಎಂಬ ಪ್ರೊಫೆಸರ್ 'ವಾರ್ಡ್' ಅವರ ಹೇಳಿಕೆಗೆ ಉಪನಿಷದ್ ವಾಙ್ಮಯದಲ್ಲಿ ಸಾಕಾಗುವಷ್ಟು ಆಧಾರವಿದೆ. ಆತ್ಮನು ಶುದ್ಧ, ಬುದ್ಧ, ಅಮರ, ಶಾಂತ ಮತ್ತು ಶಾಶ್ವತ ಇರುವನು; ಪಕ್ಷಿಯು ಗೂಡಿನಲ್ಲಿ—ಗೂಡಿನ ತುಂಬಾ ಇರುವಂತೆ, ಆತ್ಮನು ಶರೀರವನ್ನು ತುಂಬಿರುವನು. ಆತ್ಮನು ದಿವ್ಯವ್ಯಾಪಿ, ಸೂಕ್ಷ್ಮಕ್ಕಿಂತಲೂ ಸೂಕ್ಷ್ಮನು ಮತ್ತು ದೊಡ್ಡದಕ್ಕಿಂತಲೂ ದೊಡ್ಡವನು ಇರುವನು. ಸ್ವಪ್ನ, ಸುಷುಪ್ತಿ, ಜಾಗೃತಿ, ಮತ್ತು ಸ್ವಸಂವೇದ್ಯತೆ ಇವು ಆತ್ಮದ ನಾಲ್ಕು ಅವಸ್ಥೆಗಳು. ಸ್ಥೂಲದೇಹ, ಲಿಂಗದೇಹ, ಮನಸ್ಸು, ವಿಜ್ಞಾನ ಮತ್ತು ಆನಂದ ಹೀಗೆ ಆತ್ಮನಿಗೆ ಐದು ಕೋಶಗಳಿರುವುವು. (೩) ವಿಕೃತಮಾನಸಶಾಸ್ತ್ರದಲ್ಲಿ ಸ್ವಪ್ನ, ನಿದ್ರೆ ಮುಂತಾದುವುಗಳ ವಿವರಣೆಯು ಇರುವುದು ನಿದ್ರೆ ಎಂದರೆ ಮರಣದ ಚಿಕ್ಕ ತಮ್ಮನೇ ಸರಿ! ಶರೀರವು ದಣಿವ ಕಾರಣ,ಆತ್ಮನು ನಾಡಿಯಲ್ಲಿ ಸೇರಿ ಬೆರೆತುಹೋಗುವನು. ಸ್ವಪ್ನದಲ್ಲಿ ದೇಹವೆಂಬ ಗೂಡನ್ನು ಬಿಟ್ಟು ತನ್ನ ಮನಸಿಗೆ ಬಂದ ಹಾಗೆ ಅವನು ವಿಹರಿಸುವನು; ಅಲ್ಲದೆ ತನ್ನ ಮನಸ್ಸಿಗೆ ಬಂದಂತಹ ಸುಂದರವಸ್ತುಗಳನ್ನು ನಿರ್ಮಾಣಮಾಡಿ, ಅವುಗಳನ್ನು ಉಪಭೋಗಿಸುವನು. ಈ ಸ್ಥಿತಿಯಲ್ಲಿ ಆತ್ಮನಿಗೆ ಪ್ರಚಂಡವಾದ ನಿರ್ಮಾಣಶಕ್ತಿಯು ಪ್ರಾಪ್ತವಾಗುವುದು. ಮನುಷ್ಯನು ಮೃತನಾದ ಮೇಲೆ ಆತ್ಮನು ಎಲ್ಲಿ ಹೋಗುವನು?—ಎಂಬುದರ ಬಗ್ಗೆ, ಎಲ್ಲ ದೇಶದ ತತ್ತ್ವಜ್ಞಾನಿಗಳಲ್ಲಿಯೂ ಬಹಳೇ ಕುತೂಹಲವಿರುವುದು. ಭೂತಬಾಧೆಯು ಸ್ತ್ರೀಯರಿಗೆ ಆಗುವುದು; ಮೃತಾತ್ಮನ ಸಂಗಡ ಸಂಭಾಷಣೆಯನ್ನು ಮಾಡುವುದು ಶಕ್ಯವುಂಟು—ಇತ್ಯಾದಿ ವಿಷಯದ ಬಗ್ಗೆ ಕೆಲವು ವಿಚಾರಗಳು ಬೃಹದಾರಣ್ಯಕ ಉಪನಿಷತ್ತಿನಲ್ಲಿ ಇರುವುವು. ಕಠೋಪನಿಷತ್ತಿನಲ್ಲಿಯು ಯಮನ ಮತ್ತು ನಚಿಕೇತಸನ ಸಂವಾದದಲ್ಲಿ ಪ್ರಕಟವಾಗುವ ಮೃತ್ಯುವಿನ ಸಂಬಂಧದ ವಿಚಾರಗಳು, ಎಷ್ಟು ಉದಾತ್ತವಿರುವುವೆಂಬುದು ಎಲ್ಲರಿಗೂ ಗೊತ್ತಿದ್ದ ಮಾತೇ ಸರಿ. ಸತ್ಕರ್ಮವೆಲೆ ಶುದ್ಧಾತ್ಮನು ಬ್ರಹ್ಮಲೋಕಕ್ಕೆ ಹೋಗುವನು; ಪಾಪಕರ್ಮವನ್ನು ಮಾಡಿದ ಆತ್ಮನ

ಮಾರ್ಗವು ಬೇರೆ ಇರುವುದು. ಅವನು ಅಸಾಧ್ಯವಾದ ಯಮಯಾತನೆಯನ್ನು ಸಹಿಸಬೇಕಾಗುವುದು. ಅವನು ಪುನಃ ಜನ್ಮಕ್ಕೆ ಬರುವನು.

ಆತ್ಮ, ಅವನ ಸ್ವರೂಪ ಮತ್ತು ಕಾರ್ಯಗಳು ಇವುಗಳ ಬಗೆಗೆ ಗ್ರೀಕ ತತ್ತ್ವಜ್ಞಾನಿಗಳ ವಿಚಾರಗಳು ಭಾರತೀಯ ತತ್ತ್ವಜ್ಞಾನಿಗಳ ವಿಚಾರಗಳಂತೆಯೆ ಇರುವುವು. ಥೇಲೀಜ್ ಮುಂತಾದ ಅತಿ ಪ್ರಾಚೀನ ಗ್ರೀಕ ತತ್ತ್ವಜ್ಞಾನಿಗಳ ಮತದಂತೆ, ಸೃಷ್ಟಿಯಲ್ಲಿಯ ಎಲ್ಲ ವಸ್ತುಗಳು ಮತ್ತು ಪ್ರಾಣಿಗಳು—ನೀರು, ವಾಯು, ಅಗ್ನಿ, ಪೃಥ್ವಿ ಮುಂತಾದ ಜಡಭೂತಗಳಿಂದ ಇಲ್ಲವೆ ಸತ್, ಸಂಭೂತಿ, ಪ್ರಜ್ಞಾ ಮುಂತಾದ ಸೂಕ್ಷ್ಮ ತತ್ತ್ವದಿಂದ ಜನಿಸಿರುವುವು. ಗ್ರೀಕ ಅಣುವಾದಿಗಳ ಮತದಂತೆ, ಒಂದೇ ಪ್ರಕಾರದ ಸೂಕ್ಷ್ಮ ಪರಮಾಣುಗಳಿಂದ ಎಲ್ಲ ಪದಾರ್ಥಗಳು ಉತ್ಪನ್ನವಾಗಿರುವುವು. ಈ ಅಣುಗಳು ಭಿನ್ನ ಆಕಾರ ಮತ್ತು ಪ್ರಕಾರದುವುಗಳು ಇರುವುವು. ಅವುಗಳಿಂದ ಆಗುವ ಜ್ಞಾನವಾದರೂ ಭಿನ್ನವಿರುವುದು ಹುಳಿ ವಸ್ತುವಿನ ಸಂಸ್ಕಾರವು ನಾಲಗೆಯ ಮೇಲೆ ವಿಶಿಷ್ಟ ಪ್ರಕಾರದಿಂದ ಆಗಲಿಕ್ಕೆ ಕಾರಣವೇನೆಂದರೆ, ಈ ಅಣುಗಳು ತೀಕ್ಷ್ಣವೂ ಹರಿತವಾದುವೂ ಇರುವುವು. ಇವುಗಳು ಜಿಹ್ವಾ ದ್ವಾರದಿಂದ ಮನಸ್ಸಿನಲ್ಲಿ ಸೇರುವುವು, ಮತ್ತು ತಮ್ಮ ಸ್ವರೂಪದ ಜ್ಞಾನವನ್ನು ಮಾಡಿಕೊಡುವುವು. ಇದೇ ಸಂಗತಿಯು ಉಳಿದ ಇಂದ್ರಿಯಗಳ ಬಗೆಗೂ ಸತ್ಯವಿರುವುದು ಪ್ರಾಣವು ಮನಸ್ಸಿನ ಮಹತ್ತ್ವದ ಅಂಶವಿರುವುದು. ಪ್ರತಿಯೊಂದು ಶ್ವಾಸೋಚ್ಛ್ವಾಸದ ಕೂಡ ಮನಸ್ಸಿಗೆ ಹೊಸ ಜೀವನ ಮತ್ತು ಹೊಸ ಚೈತನ್ಯವು ದೊರೆಯುವುದು.

ಪಾಶ್ಚಿಮಾತ್ಯ ಮಾನಸಶಾಸ್ತ್ರದ ಇತಿಹಾಸದಲ್ಲಿ ಪ್ಲೇಟೋ ಮತ್ತು ಅರಿಸ್ಟಾಟಲ್ ಈ ತತ್ತ್ವಜ್ಞಾನಿಗಳ ವಿಚಾರಕ್ಕೆ ಅಗ್ರಸ್ಥಾನವಿರುವುದು. ಪ್ಲೇಟೋನ ಹೇಳಿಕೆಯಂತೆ, ಆತ್ಮನು ಚೈತನ್ಯರೂಪನಿರುವನು. ಶರೀರದ ಮೇಲೆ ಆತ್ಮನ ಸಾಮರ್ಥ್ಯ ನಡೆಯುವುದು. ಮನಸ್ಸಿನಿಂದ ನಮಗೆ ಜ್ಞಾನವು ದೊರೆಯುವುದು; ಮತ್ತು ಅದರಿಂದಲೇ ಜ್ಞಾನವು ಸುವ್ಯವಸ್ಥಿತ ಸ್ವರೂಪವನ್ನು ಹೊಂದುವುದು. ಇಂದ್ರಿಯಜನ್ಯ ಜ್ಞಾನವು ಕೀಳು ಮತ್ತು ಹೀನ ಸ್ವರೂಪದ್ದಾಗಿದ್ದು, ತಾತ್ತ್ವಿಕಜ್ಞಾನವೇ ಶ್ರೇಷ್ಠ ಮತ್ತು ಸತ್ಯವಿರುವುದು. ಆತ್ಮನಿಂದಲೇ ಎಲ್ಲ ಭಾವನೆಗಳು ಜನಿಸುವುವು. ಈ ಆತ್ಮನು ವಿಭಾಜ್ಯನಿರುವನು. ಮೊದಲು ಬುದ್ಧ (Rational) ಮತ್ತು ಅಬುದ್ಧ (Irrational) ಎಂಬುದಾಗಿ ಆತ್ಮನಲ್ಲಿ ಎರಡು ಬಗೆಯ ಭೇದವನ್ನು ಮಾಡಬಹುದು; ಅಬುದ್ಧ ಆತ್ಮನಲ್ಲಿ ಪುನಃ ಉದಾತ್ತ ಮತ್ತು ಅನುದಾತ್ತ ಹೀಗೆ ಎರಡು ಭಾಗಗಳು ಇರುವವು. ಬುದ್ಧಾತ್ಮನು ತಲೆಯಲ್ಲಿರುವನು. ಅವನಿಂದಲೇ ಜಾಣತನ ಮತ್ತು ಪ್ರಗಲ್ಭ ವಿಚಾರಗಳು ದೊರೆಯುವುವು. ಉದಾತ್ತ ನಿರ್ಬುದ್ಧ ಆತ್ಮನು ಹೃದಯದಲ್ಲಿರುವನು. ಅವನಲ್ಲಿ ಧೈರ್ಯ ಮುಂತಾದ ಉಚ್ಚ ಭಾವನೆಗಳು ಸೇರಿಕೊಂಡಿರುವುವು. ನಿರ್ಬುದ್ಧ ಮತ್ತು ಅನುದಾತ್ತ ಆತ್ಮನು ಎಂದರೆ, ಎಲ್ಲ ಹೀನ-ಪಾಶವೀ-ಭಾವನೆಗಳ ಉಗಮಸ್ಥಾನವೇ ಸರಿ. ಅವನು



ಯೊಳಗೆ ಇರುವನು. ಆತ್ಮನು ಇಹಲೋಕದಲ್ಲಿ ಜನಿಸುವುದಕ್ಕೆ ಮೊದಲು, ಅವನು ಅಂತಿಮ ತತ್ತ್ವಗಳ ಪೂರ್ಣ ಜಗತ್ತಿನಲ್ಲಿ ಇದ್ದನು. ಆದಕಾರಣ ಇಹಲೋಕದಲ್ಲಿ ಆತ್ಮನಿಗೆ ಆಗುವ ಜ್ಞಾನವೆಂದರೆ "ಮೊದಲಿನ ಜ್ಞಾನದ ಸ್ಮೃತಿಯೇ ಸರಿ" ಹೀಗೆ ಎಲ್ಲ ಜ್ಞಾನವು ಸ್ಮೃತಿರೂಪವಿರುವುದು. ಇಹಲೋಕದಲ್ಲಿ ತನ್ನ ಪೂರ್ಣತೆಯ ವಿಸ್ಮರಣೆಯಾದಕಾರಣ, ಆತ್ಮನಿಗೆ ಯಾವುದೇ ಒಂದು ಮಾತಿನ ಕೊರತೆಯು ಕಂಡುಬಂದರೆ, ಅವನಲ್ಲಿ ವಾಸನೆಯು ಉತ್ಪನ್ನವಾಗುವುದು. ಆದರಿಂದ ಇಂದ್ರಿಯಗಳಲ್ಲಿ ಪ್ರಕ್ಷೋಭವು ಹುಟ್ಟುವುದು. ಈ ಮನಸ್ಸಿನ [illegible]ನೆಯೆಂದು ಹೇಳುವರು.

ಅರಿಸ್ಟಾ[illegible]ರದ ಪರಿಣಾಮವು ಜಗತ್ತಿನಲ್ಲಿಯ ಎಲ್ಲ ಶಾಸ್ತ್ರಗಳ ಮೇಲೆ ಆಗಿರುವುದು. ಆತ್ಮವು ಅವಿಭಾಜ್ಯನಿರುವನೆಂದು ಅವನು ಹೇಳಿರುವನು.

ಆತ್ಮನು ವಸ್ತುಸ್ವರೂಪನಲ್ಲ; ಅವನು ಕಾರ್ಯರೂಪನಿರುವನು. ಈ ಕಾರ್ಯವು ಮೂರು ಪ್ರಕಾರದ್ದು ಇರುವುದು; ವನಸ್ಪತಿಯಲ್ಲಿ ಸಂರಕ್ಷಣೆ, ಪಶುಗಳಲ್ಲಿ ಕ್ಷುಧೆ ಮಾನವನಲ್ಲಿ ವಿಚಾರವು! ಇದರಂತೆ ಆತ್ಮನಲ್ಲಿಯೂ ಮೂರು ಪ್ರಕಾರಗಳಿವೆ:—ಮನುಷ್ಯನಲ್ಲಿಲ್ಲಿದ್ದ ಆತ್ಮನು ಚೈತನ್ಯರೂಪನಿರುವನು ಹೊಟ್ಟೆಯಲ್ಲಿದ್ದ ಅನ್ನದಿಂದ ಒಂದು ಸೂಕ್ಷ್ಮ ತತ್ತ್ವವು ನಿರ್ಮಾಣವಾಗುವುದು. ಇದಕ್ಕೆ 'ಆಯ್‌ಕರ್' (Ichor) ಎಂದು ಸಂಜ್ಞೆಯಿದೆ. ಇದರ ಸಂಶುದ್ಧಿಯಿಂದ ರಕ್ತವಾಗುವುದು. ರಕ್ತದಿಂದ ಒಂದು ಸೂಕ್ಷ್ಮತರ ತತ್ತ್ವವು ಜನಿಸುವುದು. ಇದೇ 'ನ್ಯೂಮಾ' (Pneuma). ಇದರ ಮಹತ್ತ್ವವನ್ನು ಅರಿಸ್ಟಾಟಲನು ಮತ್ತು ಎಲ್ಲ ಶಾಸ್ತ್ರಜ್ಞರು ಬಹಳೇ ಮನ್ನಿಸಿರುವರು. ಇದರಲ್ಲಿ ವಾಯು ಬೆರೆತಿರುವುದು. ಇದು ನಾಡಿ ಮತ್ತು ರೋಹಿಣಿಗಳಲ್ಲಿ ಹರಿಯುತ್ತಿರುವುದು. ಎಲ್ಲ ಇಂದ್ರಿಯಗಳ ಹೊರತಾಗಿ ಇನ್ನೊಂದು ಸಾಮಾನ್ಯ ಇಂದ್ರಿಯವು (Common sense) ಪ್ರತಿಯೊಬ್ಬ ಮಾನವನಲ್ಲಿರುವುದು. ಇದರಿಂದಲೇ ಎಲ್ಲ ಇಂದ್ರಿಯಗಳ ಸಂಸ್ಕಾರಗಳು ಸಮ್ಮಿಶ್ರಿತವಾಗುವುವು; ಮತ್ತು ಸುಸಂಘಟಿತವಾಗುವುವು. ಎರಡನೆಯ ಇಂದ್ರಿಯಗಳಿಂದ ಆಗದಂತಹ ಗತಿ, ಸ್ಥಿತಿ, ಆಕಾರ, ಕಾಲ, ಅವಕಾಶ ಮುಂತಾದುವುಗಳ ಜ್ಞಾನವು ಇದರಿಂದಲೆ

ಶ್ರೇಷ್ಠಾಂಗಣ

(ಕಾದಂಬರಿ)

ಬರೆದವರು :

ಎನ್. ಎಸ್. ಗಣಪಕಳರ

ಇದರಲ್ಲಿ ವಿವಿಧಾಕೃತಿಯುಳ್ಳ ನಮ್ಮವನನ್ನಾಗಿ
ಇರಿಸಿಕೊಂಡು ಬರೆದ ೬ ಕಾದಂಬರಿಗಳಿರುವುವು.
ಕೆ ಅನಂದಕಂದರ ಮುನ್ನುಡಿಯನ್ನೊಳಗೊಂಡಿದೆ.

ಕ್ರೌ. ಆ ೭೦ ಪುಟ

ಬೆಲೆ ೧ ರೂಪಾಯಿ

ಮುಖ್ಯ ಮಾರಾಟಗಾರರು :—

ಮನೋಹರ ಗ್ರಂಥಭಾಂಡಾರ್ಯ ಧಾರವಾಡ

ಆಗ ವುದು. ಈ ವಿಚಾರಗಳ ಜೊತೆಗೆ ಪ್ರತಿ ಕಲ್ಪನಾ ಶಕ್ತಿಯು ಭೀತಿ, ಧೈರ್ಯ, ಅಸೂಯೆ ಮುಂತಾದ ಭಾವನೆಗಳನ್ನು ಪ್ರಚೋದಿಸುವುದು. ಅರಿಸ್ಟಾಟಲನು ತನ್ನ ಗ್ರಂಥದಲ್ಲಿ ವಿಸ್ತಾರವಾಗಿ ಮಾಡಿರುವ ಅರಿಸ್ಟಾಟಲನನಂತರ 'ಸ್ಟೋಯಿಕ್' ಎಂಬ ತತ್ವಜ್ಞಾನಿಗಳು ಇವರು ಸಂನ್ಯಾಸವೃತ್ತಿಯವರು. ಮಾನಸಶಾಸ್ತ್ರದಲ್ಲಿ ಭಾವನೆಗಳಿಂದ ಅಲಿಪ್ತತೆ ಇರುವ ಮಾನಸಿಕ ಸ್ಥಿತಿಯೇ ಮೇಲಿನದೆಂದು ಇವರು ಪ್ರತಿಪಾದಿಸಿದರು. ಮೇಲಿನ ಚಿತ್ರಣ ಪ್ರೇಕ್ಷಕನನ್ನು ಮಾಡಿದರೆ ಅತ್ಯದ್ಭುತ ಪರಿಣಾಮವನ್ನು ಬೀರುವುದು. ಇಂದ್ರಿಯಗಳ ಅಸಾಧ್ಯ ಪ್ರಚೋದನೆಯಿಂದ ಭೀತಿಯನ್ನು ಮಾಡಿ ಸಂಯಮವುಂಟಾದ ಮನಸ್ಸಿಗೆ ಸಮಾಧಾನ ಶಾಂತಿಯು ಪ್ರಾಪ್ತಿಯಾಗುವುದು.

ಮಾನಸಶಾಸ್ತ್ರದ ಪ್ರಗತಿಗೆ ಕೆಲವು ಪಾಶ್ಚಾತ್ಯರು ಅಭಿವೃದ್ಧಿಗೆ ಕಾರಣವಾಗಿರುವುದು. ಅವರಲ್ಲಿ 'ಹಿಪ್ನಾಕ್ರೆಟೆಸ್' ಮೊದಲಿಗ. ಇವನ ವಿಚಾರಗಳು ಉಲ್ಲೇಖನೀಯವಾದವು. ಇವನ ಹಿಪ್ಪಾಕ್ರೆಟೆಸ್ ಅನುಯಾಯಿಗಳಾಗಿದ್ದರು. ಮೆದುಳು, ಹೃದಯ ಇವುಗಳಿಂದ ಉದ್ಭವಿಸುವ ಮನೋವ್ಯಾಪಾರಗಳು ಸಂಬಂಧಪಟ್ಟಿರುವುದು ಬಹು ಹಿಂದೆ ಹೇಳಿದ ಮಾತು. ಈ ಮನೋಭೂತಗಳ ಗುಣಧರ್ಮಗಳನ್ನು ವರ್ಗೀಕರಿಸಿ ಹಳದಿ ಪಿತ್ತ, ರಕ್ತ, ಕಫ, ಪಿತ್ತ ಮತ್ತು ಕಪ್ಪು ಪಿತ್ತ ರಸಗಳು ಕ್ರಮವಾಗಿ ಪ್ರಾಧಾನ್ಯವಾಗಿರುವುದರಿಂದ ಮಾನುಷ್ಯನ ಸ್ವಭಾವವು ಭಿನ್ನಭಿನ್ನವಾಗಿ ಪ್ರಾಣಿಸುತ್ತಾನೆಂದು ಮನುಷ್ಯನ ಮುಖ್ಯ ಸ್ಥಾನವು ಹೃದಯವೇ ಮೊದಲು ಅಭಿಪ್ರಾಯಪಟ್ಟರು. ಮತ್ತೆ ಅನಂತರ ಮೆದುಳಿಗೆ ಪ್ರಾಧಾನ್ಯವನ್ನು ಕೊಟ್ಟವರು ಪ್ಲೇಟೋ ಮತ್ತು ಗೆಲಿನ್‌ನು. ಮೆದುಳಿಗೆ ಪ್ರಾಧಾನ್ಯವನ್ನು ಕೊಟ್ಟರೂ ಹೃದಯಕ್ಕೆ ಅಧ್ಯಾತ್ಮಿಕ ಸ್ಥಾನವನ್ನು ಕೊಟ್ಟವರು ಅರಿಸ್ಟಾಟಲನು. ಈ ವಿಚಾರಗಳ ಕಾರ್ಯಾರ್ಥವು ಮುಂದೆ ಬಂದವರಲ್ಲಿ ಪ್ರಮುಖನಾದವನು ಗೆಲಿನ್‌ನು ಮುಖ್ಯವಿವನು. ಪ್ರಕೃತದಲ್ಲಿ ರಕ್ತವನ್ನೇ ಮಾನಸಿಕ ಸ್ಥಿತಿಗೆ ಕಾರಣವೆಂದರೆ, ಆ ಮನುಷ್ಯನ ಸ್ವಭಾವವು ಚಿಂತನೆಯಲ್ಲಿ ಮತ್ತು ಕ್ರಿಯೆಯಲ್ಲಿ ಸ್ವಭಾವಚಿತ್ರಣವನ್ನು ಮತ್ತು ಅವರ ಭಾವನೆಗಳನ್ನು ಕಲಿಯು ಪಿತ್ತದಿಂದ ಉನ್ಮತ್ತತೆಯು ಮತ್ತು ಭಯಂಕರತೆಯು ಉಂಟಾದ ಆ ಮಾನುಷ್ಯನ ಬಹಳ ಜಿಗುಟು ಮತ್ತು ಚಪಲಾಂಗಿಯನ್ನು ಕಫ ಪಿತ್ತದ ಪ್ರಮಾಣವು ಹೆಚ್ಚಾದರೆ ಆ ಮನುಷ್ಯನು ಸಿಟ್ಟಿನವನೂ ಕರ್ಕಶಸ್ವಭಾವಿಯೂ ಆಗುವನು.

ಎಂದೆ ಇದಿಷ್ಟೆಯಲ್ಲದೆ ಬಹಳ ಅರ್ವಾಚೀನ ತರಕ ಈ ವಿಷಯದಲ್ಲಿ ವಿಶೇಷ ಪ್ರಗತಿಯು ಆಗಿಲ್ಲ. ವಿಜ್ಞಾನದ ಮಾನಸಶಾಸ್ತ್ರವು (Faculty Psychology) ಸ್ಥಾಪಿಸಿದ ಸಂತರ ಆಗಿರುವುದು.

ಇಂದಿಗೆ ಅಭಿವೃದ್ಧಿ ಹೊಂದಿತು—ಎಂದು ಹೇಳಬಹುದು. ಈ ಶಾಸ್ತ್ರದಂತೆ ಸ್ಮೃತಿ, ಕಲ್ಪನಾ ಮತ್ತು ಕ್ರಿಯಾ ಇವು ಮನಸಿನ ಸ್ವತಂತ್ರ ಮತ್ತು ಬೇರೆ ಬೇರೆ ವಿಭಾಗಗಳಿರುವುವು. ಈ ಮಾನಸಶಾಸ್ತ್ರಕ್ಕೆ ಕಾರಣವೇನೆಂದರೆ, ಈ ಕಾಲದಲ್ಲಿಯ ಕೆಲವು ವಿಚಿತ್ರಶಾಸ್ತ್ರಜ್ಞರು ಮಜ್ಜಾತಂತುಗಳ ಬೇರೆ ಬೇರೆ ವಿಭಾಗಗಳನ್ನು ಕಲ್ಪಿಸಿ, ಇವುಗಳು ವಿಚಿತ್ರದ ಸ್ವತಂತ್ರ ಮತ್ತು ಭಿನ್ನವ್ಯಾಪಾರಕ್ಕೆ ಕಾರಣವಿರುವುದೆಂದು ಪ್ರತಿಪಾದಿಸಿದ್ದರು. ತಲೆಯ ಎಲುಬಿನ ರಚನೆಯಲ್ಲಿಯೂ ಅಕಾರಣವಾಗಿ ಮತ್ತು ಅವುಗಳ ಮೇಲಿನ ತಗ್ಗುದಿನ್ನೆಗಳನ್ನು ಸಾಧಾರಣವಾಗಿ ಮನುಷ್ಯನ ವಿಚಾರಂಗಳು ಮತ್ತು ಭಾವನೆಗಳು ಹುಟ್ಟುವುದೆಂದು ಕೆಲವು 'ಫ್ರೆನಾಲಾಯಿಸ್ಟ್' ಎಂಬ ವಿಶಿಷ್ಟರು ಮನ್ನಿಸಿದರು.

ಸೆಂಟ್ ಆಗಸ್ಟಾಯಿನನ ಅನಂತರ ಸಿದ್ಧವಾದ ಮಾನಸಶಾಸ್ತ್ರವನ್ನು ಎದರೆ "ಟೆಲಿಪಾಥಿ ಅಚ್ಚಾಯನಸ್!" ಇವು ಅಭಿಪ್ರಾಯಗಳೇನೆಂದರೆ ಆತ್ಮ ಅಭಿವೃದ್ಧಿ ಮತ್ತು ಅನಿರ್ವಚನೀಯವಾದ ಶಕ್ತಿಯಿಂದ ಮೇರೆತ ಜ್ಞಾನ (Personal force) ಪ್ರಾಪ್ತಿಯಾಗುವುದೆಂದು ಮೇಲಿನ ಸಂಯಮನ್ನು ಮಾಡಿದ ಮತ್ತು ಏಕೇಂದ್ರದ ಸಂಸ್ಕಾರದಿಂದ ಅನಂತರ ಅವುಗಳಿಗೆ ಅತೀಂದ್ರಿಯವಾದ ಸ್ವರೂಪವು ಪ್ರಾಪ್ತವಾಗುವುದು.

ಹೀಗೆ ಪ್ರಾಚೀನ ಭೌತಿಕ ಮತ್ತು ಮಾನಸಿಕ ತತ್ವಜ್ಞಾನಗಳ ಮುಂಭಾಗದ್ದರ ಮೊದಲು ಹೆಜ್ಜೆಗಳು ಇರುವುವು.

ಸೀತಾವಿಲಾಸ

ಶ್ರೀ. ಎಸ್. ಸ್ವಿ. ಪುಟ್ಟಕಣಿಕ, ಬಿ. ಎ ಲೈಸೆನ್ಸಿಯೇಟ್

೧

ಶ್ರೀರಾಮನವಮಿಯೆಂಬೊಡಂ ರಾಮ ಪಟ್ಟಾಭಿ
ಷೇಮಾಯಿನೀ ಕಾಂತೆ ಸೀತೆಯುಮಿಹಿಡಗೂಡಿ
ಸೌಂದರ್ಯಮಯಲೀಲೆಯಿಂ ಸಕಲಜನರು ಸಂತೋಷ
ನೈಯಿರಲೆನು—

ಸೀರೆಯಿಂ ಸುಂದರಪ್ರಭೆಯಿಂದ ಮುದ್ದಾಗಿ ಸೋಗಾ
ಕಾರವನ್ನಾಗಳಿ ಪೊರಮಡಿಸಿಕೆಂ ಸಭೆಯಲಿ
ಚಾರುತರವಸ್ತ್ರ ಬಹು ಸಾಲಾವಳಿಗಳಿಂ ಶೋಭಿಸಲ್
ಪನ್ನಂತ್ಯಯಾಗಿ—

೨

ಸೀಮಾಮಣಿ ಪತಿಯು ಪೂಜಿಸಲು ರಾತ್ರಿ ತನಲಿ
ಭೂಮಿಸುತೆ ಸಮಯಮೆಸೆಗಳಿಕೆ ತಾನವಿಸಿ ನಲಿ
ರಾಮನಂಘ್ರಿಯುಸು ಸೇವಿಸುವುದಕೆ ತನಗಾದ ಸಮಯ
ವಿಚ್ಛಿನ್ನವಪ್ಪುದೆಂದು—

ಸೋಮದಿಂ ಕಾಂತನೊಪ್ಪಗೂಡಿ ಕಾಂತಾರಮೋ
ಕಾಮಾಪ್ತ-ಸೀತೆ ಸುಪ್ತ ನುದಿ ನಿಜರಿಪುತಿರೆ
ಕಾಮಿನಿಯು ರಶ್ಮಿಭಕ್ತಿ ನೋಡಲೆನುವಂತೆಮೂಡಿ
ಪೊರಿವಿಸು ಕುಮುದವನಿಂ

೩

ಆರವಿಂದೆ ಸದ್ಮಾಕ್ಷಿ ವಂಕೇತಕೀನರ್ಕ
ಉಷಾರಾಜಾತಪನೆಂ ಮೃಗ್ಯಾಂಗಿ ಭ್ರಾಂತೆ
ಕಾಣೋರು ಬಾಯೆಂದು ಸಂಜೇಭಿಪಂತ ಬಿಗಿ
ಯುಂತಿಯು ಭ್ರಮಿಸಿಗಳೊನ್

ಅರಳುತಲೆ ತನ್ನೆಂದಿನು ಭೂಷ್ಣಗಳ ವಿವಿಧ
ಸಿಂಗಳಿಗಿ ಕೊಡಗಡಲಿ ನಿಮಿಗಡಲಿ ವಿಲಾಸಿನಿ
ಪನಮುಖಿತೆಳಾದ ಜಾನಕಿಯು ಸಂಗಾರ
...ಪಿ ಸ್ವಯಂವರನು

೪

ತನಗೆ ಕಾಯುತಲೆ ಭ್ರಾಂತಿ ಸ್ಮೃತಿ ಮೆ
ವಾಗಮೆಯು ಮುನಿಪುಂಗ ಸೀತೆಯು ಕರುಣಾ
ಮುದಿಯ ನಾ ಎಯುಳ್ಳಂತೆ ವಿನಿಂದಿ
ಪಂಚವಟಿಯ ಪರ್ಣಕುಟಿಕೆ

೫

ಸ್ವರಕಾಂಚ ಸಮುಜ್ವಲಾಲಂಕಾರದಲಿ ಭೂಷಿತೆ
ಭೂಸುತೆಯುಮೇಕಾಂತದೊಳೆಯು ತಾಂತೆ ಕಾಂತೆ
ನಿತರಲು ಮೋಹ ನಿರಾಕರಿಸ್ಪಿಭಾವಾ
ಸ್ಫೂರ್ತಿಯೊಪ್ಪಿರಿದಿರಿದು—

ಅಂದುದು ಏಯುಷ್ಯ ಜಾತಮಾ ಸಂಭವ ಮುಪೇಕ್ಷಿಸಿ
ನೊಂದು ಕಾಮ ಮದಿಂದೆ ಕಾಂಕ್ಷಿಸಿ ಕೆಯುವಾ ನರ
ಕಾದಿನ ನೈಸ್ಯಮನೊಂಸ್ಪದಂ ರಮಿಂಪನೆಂದೆ
ಭಾಸ್ಯಂಯಂ ಮಿಮಿಯಂತೆ

೬

ಕಾಮು ಮಿನಿದಾಲಿಂಗಿಸುತೆ ಮನನ ಕಂಕೆ
ಎಂದಿನಾ ಕಾಂತೆ ಭಜ್ಯಾವಳಿಯು ನೀನೆಲು
ಮೊಂದು ನೈವಾಸ್ಯಮಾ ತಳೆಯುತೆನ್ನಯು ಮನಕೆ
ಭಂತಿಸ್ಪಿಯುಂ ಬಿಡಿಸೆ—

ತಾನೀಗ ಮ್ಮ ಗರಾಡ ವಿನ್ನ ಪಾಸ್ಯಾಗಿ ನಲಿ
ಎಂದೆಯು ಕಾಣದಾ ಕೌಭಾಗ್ಯಮಾ ಕಾಂತೆ
ಶುಂಭದಾ ಕಾಂತಾರವಾಸ್ಯಮಾ ಎಲುಮಾ ರಾ ನೀ
ಮಾಯಿಯಸಕಾರಕ!

೭

ಕಾಂತನಾವನ ಮುನಿಗಳನು ಕೈಲ ಕಾಂತೆಯ
ಸ್ಫೂರ್ತಿಯುನೇಕಾಂತೆಯಂಗೆಯು ಕಾಂತೆ ಕಾಂತೆ
ನಿತರಲು ಮೋಹ ನಿರಾಕರಿಸ್ಪಿಭಾವಾ
ಸ್ಫೂರ್ತಿಯೊಪ್ಪಿರಿದಿರಿದು—

ಅಂದುದು ಏಯುಷ್ಯ ಜಾತಮಾ ಸಂಭವ ಮುಪೇಕ್ಷಿಸಿ
ನೊಂದು ಕಾಮ ಮದಿಂದೆ ಕಾಂಕ್ಷಿಸಿ ಕೆಯುವಾ ನರ
ಕಾದಿನ ನೈಸ್ಯಮನೊಂಸ್ಪದಂ ರಮಿಂಪನೆಂದೆ
ಭಾಸ್ಯಂಯಂ ಮಿಮಿಯಂತೆ

ಮೂರು ಮಜಲು

(ಸಣ್ಣಕತೆ)

ಶ್ರೀ. ಜಿ. ಶಂಕರಭಟ್ ಬಿ. ಎ., ಬಿ. ಟಿ. ಉಜಿರೆ

ಆರ್ಥಿಕವಿಪತ್ತು, ಸಮಾಜದಲ್ಲಿಯ ವ್ಯಕ್ತಿಗಳನ್ನು ಹೇಗೆ ಹೇಗೆ ಪತನದ ಮಹಾಗರ್ತದಲ್ಲಿ ತಳ್ಳುತ್ತದೆ? ಚಂದೂನ ತಾಯಿ ತಾಯ್ತನ ಕಳೆದುಕೊಂಡು ದಾನವಿಯಾದಳು. ಚಂದು ಮನುಷ್ಯತ್ವದ ಶಿಖರದಿಂದ ಗುಟ್ಟಿಲು ಮೆಟ್ಟಿಲಾಗಿ ರಸಾತಳಕ್ಕೆ ಇಳಿದ.

"ಬನ್ನಿ" ಎಂದು ಓಲೆ ಬಂದಿತ್ತು; ಅದಕ್ಕಾಗಿ ಹೊರಟಿದ್ದೆ. ಎಲ್ಲಿಂದ ಕರೆಬಂದೀತೋ ಎಂದು ಕಾಯುತ್ತಿದ್ದವನಿಗೆ "ಬನ್ನಿ" ಎಂಬ ಉತ್ತರ ನೋಡಿ ಸಂತೋಷವಾಗಿತ್ತು. ರಜೆಯಿಡೀ ಬೇರೆ ಬೇರೆ ಶಾಲೆಗಳಿಗೆ ಅರ್ಜಿ ಗುಜರಾಯಿಸುವುದೇ ಕೆಲಸವಾಗಿತ್ತು. ಹಲವೆಡೆಗಳಿಂದ ಮರುವಡಿ ಬಾರದೆ ಬೇಸತ್ತಿದ್ದರು. ಕೆಲವರು "ನಿಮ್ಮ ಅರ್ಜಿಯನ್ನು ಸ್ವೀಕರಿಸಿದ್ದೇವೆ. ಇತರ ಅರ್ಜಿಗಳೂ ಬಂದಿವೆ. ನಿಮ್ಮದನ್ನು ಮೀಟಿಂಗಿನಲ್ಲಿ ಪರಿಶೀಲಿಸುತ್ತೇವೆ." ಎಂದು ಬರೆದಿದ್ದರು. ಕೆಲವರಿಂದ, "ಬರುವ ವರ್ಷ ಬೇಕಿದ್ದರೆ ನಿಮಗೇ ಕೊಡುವ; ಈ ವರ್ಷದ ಮಟ್ಟಿಗೆ ಸಾಧ್ಯವಿಲ್ಲ" ಎಂಬ ಉತ್ತರ ಬಂದಿತ್ತು. ಉಜಿರೆ ಶಾಲೆಯ ಮುಖ್ಯೋಪಾಧ್ಯಾಯರು ಬರೆದಿದ್ದರು: "ಬನ್ನಿ, ನಮ್ಮ ಹೈಸ್ಕೂಲಲ್ಲೊಂದು ಸ್ಥಳ ಖಾಲಿಯಿದೆ. ಒಂದು ವರ್ಷ ಕಳೆದ ಮೇಲೆ ಖಾಯಂ ಆಗಲಿಕ್ಕೂ ಸಾಕು. ಯಾವುದಕ್ಕೂ ನೀವು ಮೊದಲೊಮ್ಮೆ ಬಂದು ನಮ್ಮೂರಿನ ಪರಿಚಯ ಮಾಡಿಕೊಳ್ಳುವುದು ಒಳ್ಳೆಯದು!" ನಿಜವಾಗಿಯೂ ಸಂತೋಷದ ವಿಚಾರವಾಗಿತ್ತು.

ಪುತ್ತೂರಿಗೆ ಬಂದು ಅಲ್ಲಿಂದ ಉಪ್ಪಿನಂಗಡಿಯ ಮಾರ್ಗವಾಗಿ ಉಜಿರೆಯ ಬಸ್ಸನ್ನು ಹಿಡಿಯಬೇಕು. ಎರಡು ಹೊಳೆಗಳು ಕೂಡುವ ಆ ಸಂಗಮಸ್ಥಳದಲ್ಲಿ ಒಂದನ್ನು ದೋಣಿಯಲ್ಲಿ ದಾಟಿ, ಆಚೆ ಬದಿಯಲ್ಲಿ ಕಾಯುತ್ತಿರುವ ಬಸ್ಸನ್ನು ಏರಬೇಕು. ಬೆಟ್ಟದೂರಿನಂತಹ ರಾಜ್ಯದಲ್ಲಿದ್ದ ನನಗೆ, ಆ ಹೊಳೆಯನ್ನು ಕಂಡೇ ಮೈನಡುಕ ಹುಟ್ಟಿತು. ಜೂನ್ ತಿಂಗಳ ಆರಂಭದ ಮಳೆಗೆ ಹೊಳೆ ತುಂಬಿ ಹರಿಯುದಿದ್ದರೂ ಕೆಂಪು ನೀರು ಧಾರಾಳ ಪ್ರವಹಿಸುತ್ತಿತ್ತು. ಗ್ರಹಚಾರದೋಷವೆಂಬಂತೆ, ಬಸ್ಸಿನಿಂದ ಕೆಳಗಿಳಿಯಬೇಕಾದಾಗ, ಹನಿಹನಿಯಾಗಿ ಮಳೆ ಬೀಳುವುದಕ್ಕೆ ಆರಂಭವಾಯಿತು. ಉಳಿದ ಪ್ರಯಾಣಿಕರೊಂದಿಗೆ ನಾನೂ ಅದಷ್ಟು ಬೇಗನೆ ಆಚೆಯ ದಡವನ್ನು ಸೇರಬೇಕು. ಅದರೊಂದಿಗೆ ಹಾಸಿಗೆ—ಟ್ರಂಕುಗಳನ್ನು ಹೊಳೆದಾಟಿಸಬೇಕು. ಆ ಜೋರಾಗಿ ಬಂದರೆ ತೀರ ಪೇಚಾಟ. "ಕೂಲಿ ಕೂಲಿ!" ಎಂದು ಕರೆಯಬೇಕಾಯಿತು.

ದೂರದಿಂದ ಇಬ್ಬರು ಓಡಿ ಬರುತ್ತಿದ್ದರು. ಒಬ್ಬ ಯುವಕ; ಇನ್ನೊಬ್ಬ ಎಂಟು ಹತ್ತು ವರ್ಷದ ಹುಡುಗ. ಓಡುವ ಪಂಥದಲ್ಲಿ ಹುಡುಗ ಯುವಕನನ್ನು ಸೋಲಿಸಲಾರದೆ ಹೋದ. ಹುಡುಗ ದೂರದಿಂದಲೇ, "ಸಾರ್, ನಾನು.... ನಿಮ್ಮ ಲಗೇಜ್ ಎಲ್ಲಿ?..... ಮನಸ್ಸಿದ್ದಷ್ಟು ಕೊಡಿ..... ..." ಎಂದು ಹೇಳುತ್ತಾ ಬರುತ್ತಿದ್ದ. ಮೊದಲಾಗಿ ತಲುಪಿದ ಯುವಕ, "ಸ್ವಾಮಿ,.....ಇದಲ್ಲವೆ ನಿಮ್ಮ ಪೆಟ್ಟಿಗೆ?.... ಇದಲ್ಲವೆ ನಿಮ್ಮ ಬೆಡ್ಡಿಂಗ್?" ಎಂದು ಅವುಗಳಿಗೆ ಹೆಗಲು ಕೊಟ್ಟೂ ಆಗಿತ್ತು. ಅಷ್ಟರಲ್ಲಿ ಆ ಚಿಕ್ಕ ಹುಡುಗ ಬಂದು, "ಸಾರ್...." ಎಂದನು. ಆದರೆ ಧಾಂಡಿಗನ ರಟ್ಟೆಯ ಬಲದ ಮುಂದೆ ಹುಡುಗ ನಿರಾಶನಾಗಬೇಕಾಯಿತು. "ಸಾರ್, ನಾನು ಮೊದಲು ಹೇಳಿದ್ದು....." ಹುಡುಗ ಹೇಳುತ್ತಲೇ ಇದ್ದ. "ಹುಡುಗನೇ ಆಗಬಹುದು. ಅವನಾದರೆ ಕೂಲಿ ಸ್ವಲ್ಪ ಕಡಿಮೆ ಕೊಟ್ಟರೆ ಸಾಕು. ಧಾಂಡಿಗನನ್ನು ತೃಪ್ತಿಪಡಿಸುವುದೂ ಕಷ್ಟ!" ಎಂದು ನನ್ನ ಮನಸ್ಸಿನಲ್ಲಿದ್ದರೂ, ಹೊರೆಯನ್ನು ಹೊತ್ತಮೇಲೆ ಯುವಕನೊಡನೆ ಬೇಡವೆಂದು ಹೇಳುವುದು ಹೇಗೆ? "ಯಾರಾದರೇನು" ಎಂದು ಕಂಡಿತು. ಆ ಧಾಂಡಿಗನೂ ಹೇಳಿದನು: "ಸ್ವಾಮಿ, ನಾನು ಕೂಲಿಗೆ ಚರ್ಚೆ ಮಾಡುವವನಲ್ಲ ... ನಿಮಗೆ ತೋರಿದಷ್ಟು ಕೊಡಿ...."

ಆತ ಬಸ್ಸಿನ ಸವಿೂಪದಿಂದ ನದಿಯ ದಡದವರೆಗೆ ನಡೆದ. ಚಿಕ್ಕ ಹುಡುಗ ಇನ್ನೂ ಹಿಂದಿನಿಂದ ಬರುತ್ತಲೇ ಇದ್ದ. ಸಾಮಾನು ಹೊತ್ತ ಕೂಲಿಗೆ ಕೆವಿ ಕೆವುಡಾಗುವಷ್ಟು ಕಿರುಕುಳ ಕೊಡುತ್ತಲೇ ಇದ್ದ. "ಹೋಗೋ, ನಡಿಯಾಚೆ!" ಎಂದು ಆ ಚಿಕ್ಕ ಹುಡುಗನನ್ನು ಧಾಂಡಿಗ ಗದರಿಸಿದ; ಆದರೆ ಅತ ಹಿಂಬಾಲಿಸುವುದನ್ನು ಬಿಡಲೇ ಇಲ್ಲ. ಕೂಲಿಹೊರೆಯನ್ನು ದೋಣಿಯಲ್ಲಿಟ್ಟು, ದೋಣಿ ಹತ್ತಿ ಆಚೆಯ ದಡದವರೆಗೂ ಬಂದು, ಸಾಮಾನನ್ನು ಬಸ್ಸಿನ ಮೇಲೇರಿಸಿ ಎಂಟಾಣೆ ಕೂಲಿ

ಪಡೆದು ಹೊರಟುಹೋದ. ಅವನು ಹೊಳೆಯನ್ನು ದಾಟಿ ಮೊದಲಿನ ದಡವನ್ನು ಸೇರುವವರೆಗೂ ಆ ಚಿಕ್ಕ ಹುಡುಗ ಅವನಿಗಾಗಿ ಕಾಯುತ್ತಿದ್ದ. ತನಗೆ ಸಿಗುತ್ತಿದ್ದ ಸ್ವಲ್ಪ ಕೂಲಿಯನ್ನೂ ಆತ ಕಸಿದನೆಂದು ಚಿಕ್ಕ ಹುಡುಗನಲ್ಲಿ ಕ್ರೋಧವು ಕೆರಳಿತ್ತು. ಆದರೆ ಹೃದಯದಲ್ಲಿದ್ದ ಕ್ರೋಧ ರಟ್ಟೆಯಲ್ಲಿ ಬರುವುದು ಸಾಧ್ಯವಿರಲಿಲ್ಲ. ದೊಡ್ಡ ಹುಡುಗನಿಗೆ ದೊಡ್ಡದಾದ ಶರೀರವಿದ್ದಿತು; ಶಕ್ತಿಯೂ ಇದ್ದಿತು. ಆದರೂ ಆ ಕೂಲಿ ದೋಣಿಯಿಂದ ಹೊರಗೆ ಕಾಲಿರಿಸಿದಾಗ, ಚಿಕ್ಕ ಹುಡುಗ ಆಹ್ವಾನಿಸುತ್ತಲೇ ಇದ್ದ :

" ಬಾ ನೀನು; ನೋಡು ನಿನ್ನನ್ನು. "

" ನನ್ನೊಡನೆ ನೋಡುವುದು .....! " ಧಾಂಡಿಗ ಪರಿಹಾಸ ಮಾಡಿದ.

" ನನಗೆ ನಾಲ್ಕಾಣೆ ಸಿಗುವುದು ನಿನಗೆ ಹೆಚ್ಚಾಯಿತು. ನಿನಗೆ ಶಕ್ತಿಯಿದ್ದ ಮಾತ್ರಕ್ಕೆ ನೀನು ಮಾಡುವುದೆಲ್ಲ ಸರಿಯಾಗುವುದಿಲ್ಲ. ಇದು ನೀನು ಮಾಡಬಾರದ ಕೆಲಸ. ಬೇಡದ ಬುದ್ಧಿ! "

" ಬುದ್ಧಿ ಹೇಳುವುದಕ್ಕೆ ನೀನು ಯಾರು? ಜೋಟುದ್ದದ ಪೋರ.... ...."

ಜಗಳ ಕಾಯಬೇಕೆಂದೇ ಆ ಹುಡುಗ ಮಾಡಿದಂತಿತ್ತು. ದೊಡ್ಡವನಾದ ಇನ್ನೊಬ್ಬ ಅವನಿಗೆ ಹೆದರುವನೇ? ಆದರೆ ಚಿಕ್ಕವನಿಗೂ ಹಟ.

ಧಾಂಡಿಗಕೂಲಿ ಹೇಳುತ್ತಿದ್ದ : " ನಡಿಯಾಜೆ....ಸುಮ್ಮನೆ ಯಾಕೆ?...." ಎನ್ನುವಷ್ಟರಲ್ಲಿ ಚಿಕ್ಕ ಹುಡುಗ ದೊಡ್ಡವನ ಅಂಗ ಹಿಡಿದೆಳೆದು ಹರಿದುಹಾಕಿದ.

" ನನ್ನಲ್ಲಿ ಯಾಕೆ ಪೆಟ್ಟು ತಿಂದು ಸಾಯುತ್ತೀ?....ಯಾರ್ಯಾರಿಗೋ ಹುಟ್ಟಿದ ನಾಯಿ...." ಎಂದವನೇ ಬಲವಾಗಿ ಆತನ ಕೆನ್ನೆಗೆ ಒಂದೇಟು ಬಿಗಿದ ಧಾಂಡಿಗ.

ಜಗಳ ಜೋರಾಯಿತು. ಚಿಕ್ಕವ ಅತ್ತುಬಿಟ್ಟ....ದೂರದಿಂದ ಚಿಕ್ಕ ಹುಡುಗಿಯೊಬ್ಬಳು ಓಡೋಡಿ ಬರುತ್ತಿದ್ದಳು....

" ಅಣ್ಣ, ಏನಾಯಿತು ...ಆಳುವುದಕ್ಕೆ? "

" ಈತ ಹೊಡೆದ ..... "

" ಆಹಾ.....! " ಆಕೆ ಬರುತ್ತಿದ್ದಾಕೆಗೆ ಒಂದು ಉಪಾಯ ಹೊಳೆಯಿತು. ಆಕೆ ಮೆಲ್ಲನೆ ಆತನ ಬಳಿಗೆ ಹೋಗಿ, " ಯಾಕೆ ಅಣ್ಣನನ್ನು ಹೊಡೆಯುತ್ತೀ ಆತ ಪಾಪ.....! " ಎಂದಳು.

" ಪಾಪ! ಪಾಪದಿಂದ ಆತನನ್ನು ಉದ್ಧರಿಸುವ ಪೋರಿ! ನೀನು ನಡೆಯುತ್ತೀಯೋ ಇಲ್ಲವೋ – ಪ್ರಹಾರ ಬೇಕೋ? " ಎಂದು ದುರುಗುಟ್ಟಿ ನೋಡಿದ. ಆತ ನೋಡುತ್ತಿದ್ದಂತೆಯೇ ಆಕೆ ದಡದಿಂದ ಕೈತುಂಬ ಹೊಯ್ಗೆ ತುಂಬಿಸಿ, ಆತನ ಕಣ್ಣಿಗೆ ಎಸೆದಳು. ಆತ ಕಣ್ಣಿನಲ್ಲಿ ಹೊಯ್ಗೆ ತುಂಬಿ ಕಣ್ಣು ತೆರೆಯುವುದಕ್ಕಾಗದೆ ಮುಗ್ಗರಿಸಿ ಬಿದ್ದ. ಅವಳ ಅಣ್ಣ ಪರಾರಿಯಾದ. ಸ್ವಲ್ಪವೇ ಹೊತ್ತಿನಲ್ಲಿ ಆತ ಹೊಗೆಯಿಂದೆದ್ದು ಆ ಚಿಕ್ಕ ಹುಡುಗಿಯನ್ನು ಅಟ್ಟಿಸಿಕೊಂಡು ಹೋದ. ಆಕೆ ಕಾಲ್ಕಿತ್ತಳು. ಆದರೆ ಮರಳಿನಲ್ಲಿ ಓಡಲಾರದೆ ಸೋತಳು. ಅವಳನ್ನು ಹಿಡಿದು, ಬಡಿದು, ಮರಳಿನಲ್ಲಿ ಹೊರಳಾಡಿಸಿದ.

" ಜೋಟುದ್ದದ ಹುಡುಗಿಗೆ ಇಷ್ಟು ಕಾರುಭಾರವಾದರೆ ಹೇಗೆ? ಕಣ್ಣಿಗೆ ಮಣ್ಣೆರಚುವಷ್ಟು ಬುದ್ಧಿವಂತಿಕೆಯೇ....? "

ಆಕೆ ಆತನ ಕೈಯಿಂದ ಬಿಡಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದರೂ, ಸಾಗಲಿಲ್ಲ. ಆ ಧಾಂಡಿಗ ಒಂದು ಹಿಡಿ ಹೊಯ್ಗೆಯನ್ನು ತೆಗೆದು ಪ್ರತೀಕಾರವೆಂಬಂತೆ ಆಕೆಯ ಕಣ್ಣೊಳಗೆ ಬಲವಾಗಿ ತುರುಕಿ ಓಡಿ ಹೋದ. ಆಕೆ " ಅಯ್ಯೋ " ಎಂದು ಚೀರಿದಳು. " ಅಣ್ಣಾ, ಕಣ್ಣು ಹೋಯಿತು.....ಪಾಪಿ ಏನು ಮಾಡುವುದೂ ಹೇಗಲಾರ.... ಹ್ಞೂ....." ಆತ್ತಳು–ನೋವಿನ ಕತ್ತರಿಯಲ್ಲಿ ಸಿಲುಕಿ. ಬಂದವನೇ, " ತಂಗೀ, ಅಳಬೇಡ, ಏನಾಯಿತು? ಡೋಣ. " ಎಂದು ಪರೀಕ್ಷಿಸತೊಡಗಿದ. ಹೊಯ್ಗೆ ಕಣ್ಣೊಳಗೆ ಸಿಸಿ, ಕಣ್ಣೀರೊಡನೆ ನೆತ್ತರೂ ಸೇರಿ, ತೆಳುವಾಗಿ ಕೆನ್ನೆಗಳ ಮೇಲೆ ಇಳಿಯತೊಡಗಿತು. ತಾನು ಧರಿಸಿದ್ದ ಅಂಗಿಯ ತುದಿಯನ್ನು ಹರಿದು ಆಕೆಯ ಕಣ್ಣಿಗೆ ಮೆಲ್ಲನೆ ಸುತ್ತಿ ಕಟ್ಟಿದ. ಅಳುತ್ತಿರುವ ತಂಗಿಯನ್ನು ಕೈಹಿಡಿದು ಆಧರಿಸಿ, ಮರಳಿನ ಮೇಲೆ ನಿಧಾನವಾಗಿ ನಡೆದ.....

ದಿನದ ಕೊನೆಯಲ್ಲಿ ಸಂಜೆಯ ಕರಿಯ ಛಾಯೆ ಆವರಿಸುತ್ತಿದ್ದ ನದಿಗಳ ಪ್ರವಾಹ ಒಂದನ್ನೊಂದು ಕೂಡುವ ಆ ಸಂಗಮದೃಶ್ಯ ಕಣ್ಣು ಮರೆಯಾಗಿ ಹರಿಯುವ ನೀರು ಮಸಿಯ ಬಣ್ಣವನ್ನು ತಳೆಯಿತು.

ಆಜೆಯ ದಡದಲ್ಲಿ ಬಸ್ಸು ಹಾರನ್ನು ಮಾಡುತ್ತ, ನಮ್ಮನ್ನು ಊರಿಗೆ ಕೊಂಡುಹೋಗಲು ಬಂದಿತು. ಅವಸರವಾಗಿ ಎಲ್ಲರೂ 'ಕನೆಕ್ಟಿನ್' ಬಸ್ಸನ್ನು ಏರತೊಡಗಿದರು. ನಾನು ಅಚ್ಚರಿಯಿಂದ ಆ ಹುಡುಗ-ಹುಡುಗಿಯರ ಕಡೆಗೆ ನೋಡುತ್ತಲೇ ನಿಂತಿದ್ದೆ.

" ಹ್ಯೋ .. ....ಸ್ವಾಮಿ, ಏನು ನೋಡುತ್ತ ನಿಂತಿದ್ದೀರಿ? ನೀವು ಬಸ್ಸಿನಲ್ಲಿ ಬರುವವರಲ್ಲವೋ? ನೋಡಿ, ಇದೇ ಬಸ್ಸು ಊರಿಗೆ ಹೋಗುತ್ತೆ. " ಎಂದು ಕಂಡಕ್ಟರ್ ಎಚ್ಚರಿಸಿದ. ನಾನು ಬಸ್ಸನ್ನೇರಿ, ಕಂಡಕ್ಟರ್ 'ರೈಟ್' ಎಂದು ಹೇಳಿದಾಗ, ಬಸ್ಸು ಗಾಡಿ ಚಲಿಸಿತು.

ಮಲೆನಾಡಾದುದರಿಂದ ಆ ರಾತ್ರಿಕಾಲದಲ್ಲಿ ಬಸ್ಸಿನಲ್ಲಿ ಬರುವವರು ಕಡಿಮೆ ಮಂದಿ ಇದ್ದರು. ಹಿಂದಿನ ಸೀಟಿನಲ್ಲಿ ಕಂಡಕ್ಟರನ ಸಮೀಪದಲ್ಲಿದ್ದ ನಾನು, " ಸ್ವಾಮಿ, ಆ ಧಾಂಡಿಗನ ಕತೆಯೇನು? " ಎಂದು ಪ್ರಶ್ನಿಸಿದೆ.

" ಹೋ....ಅದೇ; ಅದೆಲ್ಲ ಹೇಳಬಾರದು. ಹೊಲಸು ಕತೆ. " ಎಂದ.

" ಹೇಳಬಾರದ್ದನ್ನು ಹೇಳಬೇಡಿ. ಹೇಳಬಹುದಾದದ್ದನ್ನು ಮಾತ್ರ ಹೇಳಿ. ಅಂತೂ ಊರಿಯ ವರೆಗೆ ಸಮಯ ಕಳೆಯುವುದೇಕಲ್ಲ! " ಎಂದು ನಟನೆಯ ಗಂಭೀರತೆಯಿಂದಲೇ ಹೇಳಿದೆ.

"ಹೌದು, ಸ್ವಾಮಿಗಾ. ಆ ಹುಡುಗನ ಕಷ್ಟ ಏನು ಕೇಳುತ್ತೀರಿ! ಯಾರಿಗಾದರೂ ತಮ್ಮ ಹೊಟ್ಟೆ ದೊಡ್ಡದಲ್ಲವೇ? ಉದರ ಪೋಷಣೆಗೆ ನನ್ನನ್ನೇ ತೆಗೆದುಕೊಳ್ಳಿ ನನಗೆ ಸಿಗುವುದು ನಲುವತ್ತೈದು ರೂಪಾಯಿ. ಈಗಿನ ಕಾನೂನಿನ ದೆಸೆಯಿಂದ, ಕಾಸಿ ಕಾಸುಗಿಟ್ಟಿಸುವುದಕ್ಕೂ ಗತಿಯಿಲ್ಲ. ದಿನಕ್ಕೆ ರಾತಲುಗಟ್ಟಲೆ ಧೂಳು ಮುಕ್ಕಿ, ನಮ್ಮ ಆಯುಷ್ಯವನ್ನು ಒಂದಕ್ಕೆ ಅರ್ಧ ಇಳಿಸಿ, ಕ್ಷಯರೋಗ ತಂದು ಕೊಲ್ಲುವ ಕಂಡಕ್ಟರನ ಕೆಲಸ ಯಾರಿಗೂ ಬೇಡ, ಸ್ವಾಮಿ. ಅದರಿ ಬೇರೆ ಉದ್ಯೋಗ ಬೇಕಲ್ಲ....." ಎಂದು ಎಲ್ಲಿಂದ ಎಲ್ಲಿಗೋ ಹೋದವನನು, ಪುನಃ ಹುಡುಗನ ವಿಚಾರಕ್ಕೆ ತಿರುಗಿ, "ನೀವು ಆ ಹುಡುಗನ ವಿಚಾರ ಕೇಳುತ್ತೀರಿ. ಅವನ ಪಾಡು ನಾಯಿಗೂ ಬೇಡ. ಅವನ ಹೊಟ್ಟೆ ತುಂಬಿಸುವ ಕೆಲಸ ಅವನೇ ಮಾಡಬೇಕು. ಇಲ್ಲವಾದರೆ ಸಂಜೆ ಮನೆಗೆ ಹೋಗುವಾಗ, ನಾಲ್ಕು ಪುಡಿಗಾಸನ್ನೂ ತೆಗೆದುಕೊಂಡು ಹೋಗಬೇಕು. ತಪ್ಪಿದರೆ ಅವನನ್ನು ಧಾರಾ ಅವನಿಗೆ ಬೈಗಳನ್ನೂ ಪೆಟ್ಟನ್ನೂ ಕೊಟ್ಟಾಳೀ ಹೊರತು, ಗಂಜಿ ಕೊಡಲಿಕ್ಕಿಲ್ಲ. ಉಪವಾಸ ಬಿದ್ದು ಸತ್ತರೆ—ಮಾರಿ ಹೋಯಿ ಎಂದಾಳು....."

"ಅಂಥ ರಾಕ್ಷಸಿಯೆ ಆಕೆ? ಅವಳ ಮಗನಲ್ಲವೆ? ಮಗನನ್ನು ಏನು ಮಾಡಿದರೂ ಕೇಳುವ ಗಂಡಸರಿಲ್ಲವೇ?" ಎಂದು ನಾನು ಕೇಳಿದಾಗ ಕಂಡಕ್ಟರ್ ಮಹಾಶಯ ಬೀಡಿ ಸಿಗರೇಟನ್ನು, "ಬೆಂಕಿ ಪೆಟ್ಟಿಗೆ ಇದೆಯೇ ಸ್ವಾಮಿ" ಎಂದು ನನ್ನ ಕೋಟಿನ ಕಿಸೆಯೊಳಗೆ ಬೆಂಕಿಪೆಟ್ಟಿಗೆ, ಸಿಗರೇಟ್ ಎರಡೂ 'ಬಸ್ಸಿನ ಒಳಗೆ ಹೊಗೆಬತ್ತಿ ಸೇದುವುದನ್ನು ನಿಷೇಧಿಸಲಾಗಿದೆ' ಎಂದಿದ್ದುದರಿಂದ ಸುಮ್ಮನಿದ್ದೆ. ಬೆಂಕಿಪೆಟ್ಟಿಗೆ ಕೊಡುತ್ತ, "ಬಸ್ಸಿನ ಒಳಗೆ ಬೋರ್ಡು ಇದೆಯಲ್ಲ ಸ್ವಾಮಿ" ಎಂದೆ.

"ಬೋರ್ಡು ಇದೆ. ಆದರೆ ನಾವು ಮಾತ್ರ ಬೋರ್ಡ್‌ಗಳಲ್ಲ.... ನೀವು ಬೆಂಕಿಪೆಟ್ಟಿಗೆ ಕೊಡಿ" ಎಂದ. ನಾನು ಒಂದು ಸಿಗರೇಟನ್ನು ಹಚ್ಚಿ, ಅವನಿಗೂ ಒಂದನ್ನು ನೀಡಿದೆ. ಅವನು ಕಚ್ಚಿದ ಬೀಡಿಯನ್ನು ಕಿಸೆಗೆ ತುರುಕಿ, ಸಿಗರೇಟು ಎಳೆಯುತ್ತ ಹೊಸ ಸ್ಫೂರ್ತಿಯಿಂದ ಹೇಳತೊಡಗಿದ: "ಆ ತಾಯಿ ರಾಕ್ಷಸಿಯೇ! ಅವಳಿಗೂ ಮಕ್ಕಳು ಭಾರವಾಗಿದ್ದಾರೆ. ಹೆಣ್ಣು ಹೆಂಗುಸಾಗಿದ್ದಳು. ಹೇಳುವ ಗಂಡ ಎಂದೋ ತೀರಿಹೋಗಿದ್ದ. ನಿರ್ಗತಿಕಳಾದಳು. ಆಕೆಗೆ ಒಳ್ಳೆಯ ಪ್ರಾಯ. ಎಲ್ಲೊ ಬಸ್‌ಸ್ಟ್ಯಾಂಡಿನ ಹಿಂದೆ ಮುರುಕು ಛಾವಣಿಯಲ್ಲಿದ್ದಳು.....ಗತಿಯಿಲ್ಲದ ಹೆಂಗುಸೆಂದರೆ ಬೇಲಿಯಿಲ್ಲದ ಹೊಲ ನೋಡಿ....." ಎಂದು ಆತ ನಕ್ಕ. ಬಾಯಿಂದ ಸಿಗರೇಟಿನ ಹೊಗೆ ಕಕ್ಕಿದ.

ಆತ ಮುಂದುವರಿದ: "ಮತ್ತೆ ಹಾಗೇ ನಡೆಯಿತು ಆಕೆಯ ಜೀವನ ಅನ್ನಿ. ಜೀವನ ನಡೆದಾಗ ಈ ಮಗು-ಚಂದು-ಹುಟ್ಟಿಕೊಂಡಿತ-ಆಕೆಗೆ ಬೇಡವಾಗಿ, ಅಷ್ಟೇ ಅಲ್ಲ. ಆತನೊಡನೆ ಇನ್ನೊಬ್ಬ ತಂಗಿ ಇದ್ದಾಳೆ—ಮುತ್ತಕ್ಕ ಎಂದು. ಅದು ಇನ್ನೊಂದು ಹೊರೆಯಾಯಿತು ಆಕೆಗೆ....."

ಶಾಂತಿಸೇವಾಸದನದ ಹೊಸ ಪ್ರಕಟಣೆಗಳು

ಜೈನಧರ್ಮ	೧೫–೦–೦
ಶ್ರೀ. ಮಿರ್ಜಿ ಅಣ್ಣಾರಾಯರು	
ಹಾಲು–ಹಣ್ಣು (ಕವನ ಸಂಗ್ರಹ)	೧–೮–೦
ಶ್ರೀ. ಭುಜೇಂಪ್ರ ಮಹಿಷವಾಡಿ	
ಮೂಲಶಿಕ್ಷಣದ ಮೌಲ್ಯಮಾಪಣ	೦–೧೨–೦
ಶ್ರೀ. ಮಿರ್ಜಿ ಅಣ್ಣಾರಾಯರು	
ಬಾಳೆ–ಬಂಡಿ (ಕವನ ಸಂಗ್ರಹ)	೦–೮–೦
ಶ್ರೀ. ಬಾಳ ಬಿ ಉಪಾಧ್ಯೆ	
ಭರತೇಶನ ನಾಲ್ಕು ಚಿತ್ರಗಳು	೧–೪–೦
ಶ್ರೀ. ಮಿರ್ಜಿ ಅಣ್ಣಾರಾಯರು	

ಅಚ್ಚಿನಲ್ಲಿ:

ಸಂಸ್ಕೃತಿಯ ಹೃದಯ

ಭಾಗತದ ಬೆಳಕು

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿ ಸೇವಾಸದನ, ಸೇಡಬಾಳ

ಪೊ. : ಸೇಡಬಾಳ (ಜಿಲ್ಲಾ ಬೆಳಗಾಂವಿ)

"ಹೌದು, ಆ ಹುಡುಗನೊಡನೆ ಇನ್ನೊಬ್ಬಳು ಚಿಕ್ಕ ಹುಡುಗಿಯೂ ಇದ್ದಳು. ಅವಳೂ ಜಗಳದಲ್ಲಿ ಸೇರಿದ್ದಳು. ಆಕೆಗೆ ತುಂಬ ಪೆಟ್ಟಾಗಿರಬೇಕು. ಪಾಪ ಅದೂ ಕಣ್ಣಿಗೆ...." ಎಂದೆ.

"ಅವುಗಳ ಪಾಡನ್ನು ಹೇಳುವುದು ಬೇಡ.... ಹೇಳುವವರಿಲ್ಲ ಕೇಳುವವರಿಲ್ಲ.... ಹಾಗೆಂತ ಬದುಕು ನಿಲ್ಲುವುದಿಲ್ಲ. ಹರಿಯುತ್ತದೆ—ಹೊಳೆಯ ಹಾಗೆ— ಕೆಲವು ಕೊಳಕಾಗಿ, ಕೆಲವು ಬರಡಾಗಿ, ಕೆಲವು ತಿಳಿಯಾಗಿ...." ಇನ್ನು ಅಲ್ಲಿಂದ ಅವನ ಮಾತು ಬಡತನ, ಬೇಡುವುದು, ನಿರುದ್ಯೋಗ, ಅನಾಥಾಶ್ರಮ, ಸರಕಾರದ ಅನ್ಯಾಯ, ಬಸ್ಸು ಮಾಲಿಕರ ನಿರ್ದಯತೆ, ಹೀಗೆ ಹಲವಾರು ವಿಚಾರಗಳ ಕಡೆಗೆ ಸಾಗಿತು. ನನಗೆ ಮಾತಾಡಲು ಎಡೆಯನ್ನೇ ಕೊಡಲಿಲ್ಲ. ಬಹುಶಃ ಆ ಸಮಯದಲ್ಲಿ ಆತನಿಗೆ ಒಂದು ಕಲ್ಲೋ, ಮರವೋ ಸಿಗುತ್ತಿದ್ದರೂ ಅವನು ಹಾಗೆ ಮಾತಾಡುತ್ತಿದ್ದ. ಬಸ್ಸಿನಲ್ಲಿ ಕೆಲವರು ತೂಕಡಿಸುತ್ತಿದ್ದರು. ನಾನು—ಯಾವಾಗ ಊರಿರೆ ಬಂದಿತೋ, ಅದು ಎಂಥ ಊರೋ, ಈ ರಾತ್ರಿ ಎಲ್ಲಿ ಇಳಿದು ಕೊಳ್ಳುವುದೋ—ಎಂದೆಲ್ಲ ಆಲೋಚಿಸುತ್ತಲೇ ಇದ್ದೆ. ಮಳೆಯೆಲ್ಲ ನಿಂತು ಬಾನು ತಿಳಿಯಾಗಿದ್ದರೂ, ಅಮಾವಾಸ್ಯೆ ಹತ್ತಿರವಾದುದರಿಂದ ತಿಂಗಳ ಬೆಳಕು ಇರಲಿಲ್ಲ. ಹೊರಗೆ ಕಾಡಿನಲ್ಲಿ ಜೀರುಂಡೆಗಳ "ಜಿರ್ರೋ" ಎನ್ನುವ ಕರ್ಕಶ ಧ್ವನಿ, ಬಸ್ಸಿನ ಶಬ್ದವನ್ನು ವಿಹರಿಸಿ ಕಿವಿಗೆ ಬಡಿಯುತ್ತಿತ್ತು. ಮರಗಳಲ್ಲಿ ಮಿಂಚುವ

ಹುಳುಗಳು ನಕ್ಷತ್ರಲೋಕವನ್ನು ಸೃಷ್ಟಿಸಿದ್ದುವು. ಒದ್ದೆಯಾದ ವಾತಾವರಣದಿಂದ, ಶೀತವಾದ ಗಾಳಿ, ತೀಕ್ಷ್ಣಗತಿಯಿಂದ ಮೋರೆಗೆ ಅಪ್ಪಳಿಸುತ್ತಿತ್ತು.

೨

ಉಜಿರೆಯಲ್ಲಿ "ಮೇಷ್ಟ್ರು" ಆಗಿದ್ದ ನಾನು, ಆ ದಾರಿಯಾಗಿ ಮತ್ತೆ ಆಗಾಗ ಮನೆಗೆ ಹೋಗುತ್ತಿದ್ದೆ. ಉಜಿರೆ ಮಲೆನಾಡಾದರೇನು? ಕುದುರೆಮುಖದ ಸಾಲುಬೆಟ್ಟಗಳು ಮೈಸೂರಿಗೆ ಗೋಡೆಯಾಗಿ ನಿಂತು, ಯಾವಾಗಲೂ ಹಸುರು ಬಣ್ಣದಿಂದ, ಸುಂದರ ನೀರ ಝರಿಗಳಿಂದ ಕಂಗೊಳಿಸುವ ನಾಡು; ಪ್ರಕೃತಿಪ್ರಿಯನಿಗೆ ಮೆಚ್ಚುಗೆಯನ್ನುಂಟು ಮಾಡುವಂತಹದು. ಉತ್ಸಾಹಿಗಳಾದ ಎಳೆಯ ಹುಡುಗರು, ರಸಿಕರಾದ ಯುವಕ ವಿದ್ಯಾರ್ಥಿಗಳೆಯರು— ನೂತನ ಸಂತಸದ ತೂಗುಯ್ಯಾಲೆಯಲ್ಲಿ ಓಲಾಡುತ್ತ ವರುಷವೊಂದು ಕಳೆಯಿತು.

ಒಂದು ದಿವಸ ಯಲ್ಲಿ ಉಪ್ಪಿನಂಗಡಿಮಾರ್ಗವಾಗಿ ಮನೆಗೆ ಹೋಗುತ್ತಿದ್ದಾಗ ಆ ಹುಡುಗನನ್ನು ಕಂಡೆ; ಆದರೆ ಅವನು ಹೌದೋ ಅಲ್ಲವೋ ಎಂದು ಸಂಶಯವಾಯ್ತು.

ಹುಡುಗ ಮೊದಲಿಗಿಂತ ಸ್ವಲ್ಪ ದೊಡ್ಡವನಾಗಿ ಬೆಳೆದಿದ್ದ. ಆದರೆ ಅದೇ ಹಂಕು ಅಂಗಿ, ಕೆನ್ನೆಗಳಲ್ಲಿ ಎದ್ದುಕಾಣುವ ಎಲುಬುಗಳು, ಸುತ್ತುಗಟ್ಟಿ ಹಾರುವ ಕೂದಲು, ಬೂದಿಕಾರುವ ಮೊಣಕಾಲು, ನಿಶ್ಶಕ್ತಿಯ ಬೆರಳುಗಳು, ಎದುರಿನಲ್ಲಿ ತುಟಿ ಮುಚ್ಚಿದರೂ ಮುಚ್ಚದಿರುವ—ನಸುವಾಗಿ ಮುಂದಕ್ಕೆ ಬಾಗಿದ—ಹಲ್ಲುಗಳು! ಹೌದು, ಅದೇ ಚಂದು.

ಆದರೂ ಈಗ ಅವನು ಮೊದಲಿನ ಚಂದುವಲ್ಲ. ಅವನೊಡನಿರುವ ತಂಗಿ - ಮುತ್ತಕ್ಕ-ಮೊದಲಿನ ಹುಡುಗಿಯಲ್ಲ. ಅವನು ಈಗ ಬಸ್ಸಿನಿಂದ ಯಾರ ಪೆಟ್ಟಿಗೆಯನ್ನೂ ಹೊರುವುದಕ್ಕೆ ಬರುವುದಿಲ್ಲ. ಅವನ ತಂಗಿ, ಅವನೊಡನೆಯೇ ಇದ್ದಾಳೆ— ಅನ್ಯೋನ್ಯದಿಂದ ಆಕೆಯನ್ನು ಕೈ ಹಿಡಿದು ಅತ ನಡೆಸುತ್ತಾನೆ. ಬಸ್ಸು ಬಂದು ನಿಲ್ದಾಣದಲ್ಲಿ ನಿಂತಾಗ, ಚಂದು ಅಲ್ಲಿಗೆ ಬರುತ್ತಾನೆ- ಕೈಯಲ್ಲಿ 'ಕರಟ' ಹಿಡಿದ ಹಿಂದಿನಿಂದ ಅವನ ತಂಗಿ— ಕುರುಡಿ!

..... ನೀನು ಕಣ್ಣಿಗೆ ಹೊಯ್ಗೆ ಬಿಸಾಡು....ಪೋರಿ....ಕಾಸುತ್ತೇನೆ ಬುದ್ಧಿ.... ಧಾಂಡಿಗ...

ಕುರುಡಿ!

ಆಕೆಗೆ ಬುದ್ಧಿ ಬಂದಿದೆಯೋ ಇಲ್ಲವೋ; ಕಣ್ಣಂತೂ ಹೋದುದು ಬರಲಿಲ್ಲ. ಆದರೆ ಆಕೆಗೆ ಒಂದು ಬುದ್ಧಿ ಬಂದಿತ್ತು— ಬೇಡುವ ಬುದ್ಧಿ. ಆಕೆಯ ಕಣ್ಣು ಹೋದುದನ್ನು ನೋಡಿ, ಕೆಲವು ದಿನಗಳವರೆಗೆ ಚಂದುವಿಗೆ ಬೇಸರವಾಗಿತ್ತು. ಆದರೆ ಅದು ಕೆಲವೇ ದಿನ.... ಎಳೆಯತನದಲ್ಲೇ ಬದುಕಿನ ಕಹಿಯುಂಡು, ಕನಿಕರವನ್ನೇ ಕಂಡರಿಯದ ಜೀವ ಕಲ್ಲಾಗಿತ್ತು. ರಭಸವಾದ ಬಿರುಗಾಳಿ—ಬಿರುಮಳೆಯ ಹೊಡೆತಕ್ಕೆ ಮೇಲಿನ ನಯವಾದ ಮಣ್ಣೆಲ್ಲ ಕರಗಿ ಹೋಗಿ, ಕಠಿಣವಾದ ಶಿಲೆಯೇ ಕೊನೆಗೆ ಉಳಿಯುವಂತೆ— ಹೃದಯದಲ್ಲಿ ಕಾಸಿ ಬಡಿ

ಗರ್ಭಾಶಯದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಸೆಪೊಥಿಷ್ಟೆ

ಜೀವನಿ

ದಿ ಸದ್ವೈದ್ಯಶಾಲಾ ರಿ., ನಂಜನಗೂಡು

ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ

ಯಾವಾಗಲೂ ನಂಜನಗೂಡು ಟೂತ್ ಪೌಡರ್ ಉಪಯೋಗಿಸಿರಿ

ಕಠಿಣ ನಿರ್ಧಾರಕ್ಕೆ ಮನೆಮಾಡಿತ್ತು. ಮತ್ತೆ ಅವನಿಗೆ ಅನಿಸಿತು:—ಆಕೆ ಕುರುಡಿಯಾದುದು ಒಂದು ರೀತಿಯಲ್ಲಿ ಒಳ್ಳೆಯದೇ! ಚಂದು ಇನ್ನು ಕೂಲಿ ಕೆಲಸ ಮಾಡುವುದಕ್ಕಾಗಿ ಪೇಚಾಡಬೇಕಾಗಿಲ್ಲ. ಆಕೆಯನ್ನು ಹಿಡಿದುಕೊಂಡು ಬೇಡಬಹುದು. ಒಳ್ಳೆಯ ಉಪಾಯ— 'ಕರಟ— ಕೋಲು'!

ಕುರುಡಿ—ಜನರು ಕುರುಡುಕಾಸು ಎಸೆಯುವ ಕರಟ!
ಚಂದು—ಆಕೆಯನ್ನು ಕೈ ಹಿಡಿದು ನಡೆಸುವ ಕೋಲು!
ಕುರುಡಿ ಬೇಡುವುದೇ ಊರುಗೋಲು!!

* * *

ಬೇಡಿ ಬಂದ ಚಂದು ಕೇಳಿದ: "ಸಾರ್, ಕಾಫಿ ಕುಡಿಯುವುದಕ್ಕೆ ಏನಾದರೂ ಕಾಸು ಕೊಡಿ...."

"ಪ್ರತಿಸಲವೂ ನಿನಗೆ ಕಾಸು ಎಲ್ಲಿಂದಲೋ? ಬೇಡುವುದೊಂದೇ ನಿನಗೆ ಉದ್ಯೋಗವೋ....?"

"ಮತ್ತೇನು ಮಾಡಲಿ, ಸಾರ್! ನನಗೀಗ ಯಾರು ಗತಿ?...."

"ನಿನ್ನ ತಾಯೊಬ್ಬಳು ಇದ್ದಳಲ್ಲವೆ....ಏನಾದಳು? ಮಣ್ಣುಮುಕ್ಕಿದಳೇ?" ತಿರಸ್ಕಾರದ ಕಹಿಮಾತಿನಲ್ಲಿ ಕಾರಿದ ಪ್ರಶ್ನೆಯಿದು.

"ಏನೋ. ಅವಳು.... ಹೋದಳು; ಹೋಗಿಯೇ ಬಿಟ್ಟಳು.... ಒಂದು ದಿನ ರಾತ್ರಿ ... ಮಾರಿಗಳು— ಮನೆಗೆ ಬಂದರು; ಕುಡಿದು ಮತಿ ಇಲ್ಲದವರು. ಏನು ಜಗಳಾಟ ಅವರದು! ಮೊದಲು ಏನೇನೋ ಬೈದುಕೊಂಡು, ಕೊಡೆದಾಡಿಕೊಂಡರು. ಒಬ್ಬ ಗಾಯವಾಗಿ ಬಿದ್ದ.... ಮರುದಿನ ಬೆಳಗ್ಗೆ ತಾಯಿ ಮನೆಯಲ್ಲಿರಲಿಲ್ಲ. ಆಕೆ ಹೊಳೆಯಲ್ಲಿ ಹೋಗಿರಬೇಕೆಂದು ಈ ಊರಿನ ಜನ ನಗುತ್ತಾರೆ! ಏನೋ. ಆಕೆ ಇನ್ನೂ ಬಂದಿಲ್ಲ... ಬರಲಾರಳೋ ಏನೋ...." ಅವನ ದನಿಯಲ್ಲಿ ಎಳ್ಳಿನಿತೂ ಬೇಸರದ ಎಳೆಯಿರಲಿಲ್ಲ. ಏನಾದರೂ ತನಗೆ ಬೇಡುವ ಹಕ್ಕು ಉಂಟು; ಕೊಡುವುದು ಉಳಿದವರ ಕರ್ತವ್ಯ—ಎಂಬ ಧಾಟಿಯಲ್ಲಿ— ಕಟ್ಟುಕತೆ ಹೇಳುವಂತೆ— ಆ ಮಾತುಗಳನ್ನಾಡಿದ. ಒಂದಾಣೆ ಕೊಟ್ಟಮೇಲೆ, ತಂಗಿಯನ್ನು ಎಳೆದುಕೊಂಡು, "ಸಾರ್....ಸಾರ್...." ಎಂದು ಬೇರೆಯವರನ್ನು ಎಚ್ಚರಿಸತೊಡಗಿದ.

ಇನ್ನೊಂದು ಬಾರಿ ಬಂದಾಗ—

ಹಳ್ಳಿ–ಪಟ್ಟಣಗಳಲ್ಲಿ, ಬೀದಿ–ಬೀದಿಗಳಲ್ಲಿ
● ಧ್ವನಿವರ್ಧಕ ಯಂತ್ರದ ಮೂಲಕ
● ಉತ್ತಮ ಚಿತ್ರಗಳ ಮೂಲಕ
● ಮ್ಯಾಜಿಕ್ ಲ್ಯಾಂಟರ್ನ್–ಸ್ಲೈಡುಗಳ ಮೂಲಕ
ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.
ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

"ಸಾರ್, ಬೇಡುವ ಉದ್ಯೋಗ ಯಾರಿಗೂ ಇರಬ್ಯಾ... ಧಾ... ಎಲ್ಲರಿಗೂ ನನ್ನ ಮೇಲೆ ತುಚ್ಛೀಕಾರ. ಕಾಸು ಯಾರೂ ಕೊಟ್ಟಲ್ಲ ದಿಲ್ಲ. 'ಹರಟೆ.. ಬೇವಾರ್ಸಿ.. ಹೋಗು' ಎಂಬ ಬೈಗಳು. ದೊ... ದೊಡ್ಡ ಕೋಟು ಹಾಕಿ ಮೆರೆಯುತ್ತಾರಲ್ಲ ಜನ—ಅವರ ಪಾಕೀಟ್ ನೋಡಿದರೆ ಹತ್ತು ರೂಪಾಯಿ ಬೆಲೆಯಿರಬೇಕು–ಮತ್ಸರವಾಗುತ್ತದೆ! ಸಿಟ್ಟೂ ಬರುತ್ತದೆ. ದರೋಡೆ ಮಾಡಬೇಕು; ಸುಲಿಗೆ ಮಾಡಬೇಕು; ಮಂಡೆ ಬಡಿಯಬೇಕು... ಬೇಡಿ ... ಳುವುದು ಸಾಧ್ಯವಿಲ್ಲ ಈ ಕಾಲದಲ್ಲಿ ಸ್ವಾಮಿಗಾ..... " ಎಂದೆಲ್ಲ ... ಬಿಟ್ಟ.

"ನೀನು ಹೀಗೆ ದಿಟ್ಟತನ ತೋರಿ... ಯಾರು ಭಿಕ್ಷೆ ಹಾಕುತ್ತಾರೆ. ನಿನ್ನಲ್ಲಿ ದೈನ್ಯತೆಯ ಲವಲೇ... ಲ್ಲ!"

"ನನಗೆ ಒಂದು ಕಾಸನ್ನೂ ಕೊಡದಿರುವ ನಿಷ್ಕರುಣಿಗಳಿರುವಾಗ, ನನ್ನದೇನು ದೈನ್ಯತೆಯ ಮಾತು....?"

"ಹಾಗಾದರೆ ನೀನು ಬೇಡುವುದನ್ನು ಬಿಡು. ನಮ್ಮ ಶಾಲೆಯ ಹಾಸ್ಟೆಲಿಗೆ ಬಾ. ನಿನಗೆ ಬಿಸಿನೀರಿಗೆ ನೀರೆಳೆದು ಹಾಕುವ ಕೆಲಸ ಕೊಡಿಸುತ್ತೇನೆ. ಹೊಟ್ಟೆತುಂಬ ಊಟವೂ ಸಿಕ್ಕೀತು. ಆದರ ಮೇಲೆ ಸ್ವಲ್ಪ ಏನಾದರೂ ಸಂಬಳವೂ ಕೊಡಿಸುವ.. ಬಾ" ಎಂದೆ

"ಊಹುಂ, ನೀರೆಳೆದು ನನಗೆ ಅಭ್ಯಾಸವಿಲ್ಲ. ಅಲ್ಲಗ... ಹಾಸ್ಟೆಲಿನಲ್ಲಿ! ಅಲ್ಲಿ ಕಟ್ಟಪಹಾಕಿದ ಹಾಗೆ ಆದೀತು. ನೀನು ಹೇಳಿದ ಹಾಗೆ ನಾನು ಕೆಲಸಮಾಡಬೇಕು. ಬೇಕಾದಾಗ ತಿರುಗುವುದಕ್ಕಿಲ್ಲ. 'ಹಾಗೆ ಮಾಡು, ಹೀಗೆ ಮಾಡು' ಎಂದರೆ ಹಾಗೇ ದುಡಿಯಬೇಕು. ಛೆ, ಅದು ನನ್ನಿಂದಾಗದ ಕೆಲಸ..... "

"ಬೇಡುವವನಾದರೂ ರಾಜಕುಮಾರನ ಮರ್ಜಿಯಿದೆ ನಿನಗೆ ಹೇಳುವುದೂ ಒಂದೇ—ನಾಯಿ ಬಾಲ.. ನಿನ್ನ ದಾರಿ ನಿನಗೆ.... ಹೋಗು!" ಎಂದೆ.

"ನಿನಗೆ ಕಾಸು....ಹೋಗುತ್ತೀಯೋ ಇಲ್ಲವೋ?" ಎಂದು ಬರಿಗೈಯಿಂದ ಕಳಿಸಿದೆ.

"ಇವನಿಗೆ ಕಾಸಂತೆ ಅಬ್ಬಾ, ದಿಟ್ಟತನವೇ! ಸೊಕ್ಕಿನ ಬುರುಡೆ ..... ಬೇಡುವ ಮಕ್ಕಳು ಬೇಡುವವರ ಹಾಗಿರಬೇಕು. ಮೈಮುರಿದು ಕೆಲಸ ಮಾಡುವುದಕ್ಕಾಗುವುದಿಲ್ಲ.. ...." ಎಂದೆಲ್ಲ ಆಲೋಚಿಸುತ್ತಾ ಇದ್ದೆ—ಮತ್ತೆ ಇನ್ನೊಂದು ಯೋಚನೆ ಬಂದು ಅದನ್ನು ಮುರಿವ ವರೆಗೆ.

ಜ

ಉಪ್ಪಿನಂಗಡಿ ಜಾತ್ರೆಗೆ ಮಿತಿಮೀರಿ ಜನ ಸೇರುತ್ತಾರೆ. ಎರಡು ಹೊಳೆಗಳು ಒಂದನ್ನೊಂದು ಸೇರುವ ಆ ಸಂಗಮಸ್ಥಳವು, ಪುಣ್ಯಸ್ಥಳವೆಂಬ ಪ್ರತೀತಿಯಿದೆ. ವಿಶೇಷ ಸಂಭ್ರಮದಿಂದ ನಡೆಯುವ ಜಾತ್ರೆ—ವೈಶಾಖಮಾಸದ ಹುಣ್ಣಿಮೆಗೆ ಜರುಗುವುದರಿಂದ ಛಳಿಯ ಬಾಧೆಯು ಇಲ್ಲ—ಹೋಗುವವರಿಗೂ ಬರುವವರಿಗೂ ಅನುಕೂಲವಾಗಿ, ತಿಂಗಳ ಬೆಳಕಿದೆ. ಮಕ್ಕಳಿಗೆ ಬೇಕಾದ ಸಂತೆಯಿದೆ. ಜಾತ್ರೆಗೆ ಸ್ಥಳವೂ ಇಕ್ಕಟ್ಟಾಗಿಲ್ಲ. ಕಡು ಬೇಸಗೆಕಾಲವಾದ್ದರಿಂದ ಹೊಳೆಗಳ ಆಬ್ಬರವೆಲ್ಲ ಇಳಿದು ತೀರ ಒಣಕಲಾಗಿರುತ್ತವೆ. ಹೊಯ್ಗೆಯ ದಂಡೆಗಳು ವಿಶಾಲವಾಗಿರುತ್ತವೆ. ಒಂದೇ ಅಭಿರುಚಿಯ, ಸಮಪ್ರಾಯದ ಸ್ನೇಹಿತರು ಸಿಕ್ಕಿದರೆ—ಜಾತ್ರೆ ನೋಡದಿದ್ದರೂ—ಮರಳದಿಣ್ಣೆಯಲ್ಲಿ ಮೈಲು ಮೈಲು ಅಲೆಯಬಹುದು. ಮಂಡಕ್ಕಿಯೋ, ನೆಲಕಡಲೆಯೋ ಇದ್ದರೆ ತಿನ್ನುತ್ತಾ, ಮಾತನಾಡುತ್ತಾ 'ಮಜ' ದಲ್ಲಿ ಕಾಲವನ್ನು ಕಳೆಯಬಹುದು.

ಹಾಗೆಯೇ ಆ ಬಾರಿಯೂ ಜಾತ್ರೆ ಬಂದಿತ್ತು. ಜಾತ್ರೆ ಹಲವರಿಗೆ ಹಲವು ವಿಧದಲ್ಲ 'ಮಜಾ' ಮಕ್ಕಳಿಗೆ, ಭಕ್ತರಿಗೆ, ವ್ಯಾಪಾರಿಗಳಿಗೆ, ಯುವಕ-ಯುವತಿಯರಿಗೆ, ಜೂಲಿ ಪೋಲಿಗಳಿಗೆ, ಕಳ್ಳ ಕಾಕರಿಗೆ— ಅಂತೂ ಜನ ಸೇರುತ್ತಾರೆ— ಗುಂಪು ಗುಂಪಾಗಿ, ನೂಕು ನುಗ್ಗಲಾಗಿ, ಬಿಡಿ ಬಿಡಿಯಾಗಿ— ಗಂಡು-ಹೆಣ್ಣೆನ್ನದೆ.

"ಇದೇನಿದು?" ಎಂದು ಹೋಗಿದ್ದೆವು ನಾನೂ, ಗೆಳೆಯ ಸೋಮಯಾಜಿಗಳೂ.

ಗೆಳೆಯರ ಗುಂಪೊಂದರೊಡನೆ ಹರಟುತ್ತಾ, ಕಾಫಿ ಕುಡಿಯಲೆಂದು ಹೋಟಲೊಂದನ್ನು ಹುಡುಕುತ್ತ ನಡೆಯುತ್ತಿದ್ದೆವು. ಮಾತಿನ ರಭಸದಲ್ಲಿ ಮುಳುಗಿದ್ದ ನನಗೆ ಕಾಲಿಗೆ ಹೆಣಿಸೆಮರದ ಬೇರೊಂದು ಎಡವಿ ಮುಗ್ಗರಿಸಿದಾಗಲೇ, ನಾನು ನಡೆಯುತ್ತಿದ್ದೇನೆ—ಎಂಬ ಅರಿವಾಯಿತು. ನನ್ನೊಡನಿದ್ದ ಸೋಮಯಾಜಿಗಳು ನನ್ನನ್ನು ಹಿಡಿದೆತ್ತಿ, "ಹೋ, ಏನಾಯಿತು ಭಟ್ಟರೇ" ಎಂದು ಕೇಳುವಷ್ಟರಲ್ಲಿಯೇ, "ಹೋ.... ಹೋ.... ಹೋ .. ಯಾರದು? ಮೇಷ್ಟ್ರೆ? ಛೆ.... ಛೆ .. ಛೆ....ಏನಾಯಿತು?" ಎಂದು ಕೇಳಿತು ವ್ಯಕ್ತಿಯೊಂದು.

"ಹೂಂ.... ಏನಿಲ್ಲ. ಒಂದು ಮರದ ಬೇರು." ಎನ್ನುವಷ್ಟರಲ್ಲೇ ಆತ ಅಪ್ತನಂತೆ ನನ್ನ ಕೈಕಾಲಿಗೆ ಎಲ್ಲಿ ಪೆಟ್ಟಾಯಿತೋ ಎಂದು ಉಜ್ಜಿ ಉಪಚರಿಸತೊಡಗಿದ.

"ಏನು ಜಾತ್ರೆಗೆ ಬಂದಿರೋ? ನಮ್ಮೂರ ಜಾತ್ರೆ!" ಎಂದಿತ ವ್ಯಕ್ತಿ.

"ಹಾಂ, ಹೌದು...." ಎಂದು ಆ ಹೊಸಬನ ಮುಖವನ್ನೇ ದಿಟ್ಟಿಸಿನೋಡಿದೆ. ಆತ ಹೊಸಬನಲ್ಲ. ಅದೇ ಮುಂದಕ್ಕೆ ಬಾಗಿದ ಹಲ್ಲುಗಳು; ಹಳೆಯ ವ್ಯಕ್ತಿ— ಬೇಡುತ್ತ ಬಂದಿದ್ದ ಚಂದು. ಅಬ್ಬ!

ಈಗ ಎಷ್ಟು ಬದಲಾಗಿದ್ದಾನೆ! ದೊಡ್ಡವನಾಗಿದ್ದಾನೆ. ಮೈಯಲ್ಲಿ ಮಾಂಸ ತುಂಬಿ ದಪ್ಪನಾಗಿದ್ದಾನೆ. ಮಡಿಯಾದ ಅಂಗಿ-ಬಟ್ಟೆ ಧರಿಸಿದ್ದಾನೆ. ತಲೆಯ ಕೂದಲನ್ನು ಅಂದವಾಗಿ ಬಾಚಿದ್ದಾನೆ. ಅವನ ಹಲ್ಲೊಂದನ್ನು ಬಿಟ್ಟರೆ ಅವನ ಗುರುತು ಹಿಡಿಯುವುದೂ ಸಾಧ್ಯವಿಲ್ಲ.

ಅವನೊಡನೆ ಮಾತನಾಡಬೇಕೆನ್ನುವಷ್ಟರಲ್ಲಿ, ನೋಡು-ನೋಡುತ್ತಿದ್ದಂತೆ, "ಬರುತ್ತೇನೆ" ಎಂದು ಹೇಳಿ ಜನರ ಗುಂಪಿನೊಳಗೆ ಆತ ಮರೆಯಾದ.

ನಾವು ಹೊಟೇಲಿನ ದಾರಿ ಹಿಡಿದೆವು. ನಸು ಬೆಚ್ಚಗಿನ ಆ ಬಣ್ಣದ ನೀರನ್ನು ಕುಡಿದು, ಮಂಡಕ್ಕೆ ತಟ್ಟೆಯನ್ನು ಖಾಲಿ ಮಾಡಿದೆವು. ಮತ್ತೆ ಹಣ ಕೊಡುವುದಕ್ಕೆ ನನಗೂ, ಸ್ನೇಹಿತ ಸೋಮಯಾಜಿಯವರಿಗೂ ಸ್ವಲ್ಪ ಚರ್ಚೆಯಾಯಿತು ನಾನು-ನಾನೆಂದು: ಕೊನೆಗೆ ನಾನೇ ಮುಂದಾಗಿ ಹೋಗಿ ಕೋಟಿನ ಕಿಸೆಗೆ ಕೈಹಾಕುತ್ತೇನೆ-ಖಾಲಿ!

ಗಾಬರಿಯಿಂದ ಸೋಮಯಾಜಿಗಳ ಮುಖ ನೋಡಿದೆ. ಅವರು ನನ್ನ ಮುಖ ನೋಡಿದರು. ಅವರಿಗೆ ಅರ್ಥವಾಯಿತು. ಅವರೇ ದುಡ್ಡು ಕೊಟ್ಟರು. ನಾನು ಪೆಚ್ಚುಮೋರೆ ಹಾಕಿ ಅವರನ್ನು ಹಿಂಬಾಲಿಸಿದೆ. "ಎಷ್ಟಿತ್ತು?" ಎಂದು ಕೇಳಿದರು ಗುಟ್ಟಾಗಿ. "ಹತ್ತು" ಎಂದೆ, ನನ್ನಲ್ಲಿದ್ದುದರಿಂದ ಅರೆವಾಸಿಯನ್ನು ಕಳೆದು.

"ನಾನು ಬಿದ್ದಾಗ ಹೋಯಿತೋ ಏನೋ!" ಎಂದೆ.

"ನಿಮ್ಮನ್ನು ಒಂದು ವ್ಯಕ್ತಿ ಉಪಚರಿಸಿತಲ್ಲ. ಇದೇ ನಿಮಗೆ ನಡೆದ ಉಪಚಾರ!" ಎಂದರು ಸೋಮಯಾಜಿ.

ಎಂಥ ಉಪಚಾರ!

"ಇನ್ನು ಈ ಜನರ ಗುಂಪು ಸಾಕು" ಎಂದು ದೂರದ ಹೊಯ್ಗೆಯ ರಾಶಿಯಲ್ಲಿ ನಡೆಯುತ್ತ ಹೋದೆವು. ನದಿಯ ಮರಳ ದಂಡೆಯಲ್ಲೊಂದೆಡೆ ಕುಳಿತೆವು. ಏನೇನೋ ಹರಟೆದೆವು. ಮಾತನಾಡುತ್ತಿದ್ದಂತೆ ಸೋಮಯಾಜಿಗಳಿಗೆ ಜೊಂಪು ಹತ್ತಿತು. ನಾನೂ ಶಾಲನ್ನು ಹೊದ್ದುಕೊಂಡು ಮರಳಿನಲ್ಲೇ—ಹಾಗೆ ಒರಗಿದೆ.

ಸ್ವಲ್ಪ ಹೊತ್ತಾಗಿತ್ತು. ಯಾರೋ ನಮ್ಮನ್ನು ಹಾದು ಮರಳಿನಲ್ಲಿ ಮುಂದೆ ನಡೆದರು. ಅವರಲ್ಲಿ ಒಬ್ಬಳು ಹೆಂಗುಸು. ಸ್ವಲ್ಪ ದೂರ ನಡೆದ ಕೂಡಲೇ ಒಂದು ಗಂಡುಸು ಅಲ್ಲೇ ನಿಂತಿತು. ಉಳಿದಿಬ್ಬರು ಮುಂದೆ ನಡೆದು ಅಲ್ಲೇ ಮರದ ನೆರಳೊಂದರಲ್ಲಿ ಮರೆಯಾದರು....ಹಿಂದೆ ನಿಂತ ವ್ಯಕ್ತಿ ಹೊಯ್ಗೆಯಲ್ಲಿ ಒರಗಿಕೊಂಡಿತು....

× × × ×

ಮರೆಯಾದ ವ್ಯಕ್ತಿಗಳು ಬೆಳುದಿಂಗಳ ಬೆಳಕಿನಲ್ಲಿ ನಡೆದು ಹಿಂದೆ ಬಂದರು. ಗಂಡುಸು ಹೆಂಗುಸನ್ನು ಕೈ ಹಿಡಿದು ನಡೆಸುತ್ತಿತ್ತು. ಅವಳನ್ನು ಹಾಗೇ ಹೊಯ್ಗೆಯಲ್ಲಿ ಒರಗಿದ ವ್ಯಕ್ತಿಯ ಸಮೀಪ ನಿಲ್ಲಿಸಿ, "ಇಲ್ಲೇ ಇದ್ದಾನೆ" ಎಂದು ಹೇಳಿ ಹೊರಟು ಹೋಯಿತು.

ಆ ಹೆಂಗುಸು "ಅಣ್ಣಾ ಅಣ್ಣಾ," ಎಂದು ಹೊಗೆಯ ಮೇಲೆಲ್ಲ ಕೈಯಾಡಿಸಿತು. ಆ ಬೆಳುದಿಂಗಳ ಬೆಳಕಿನಲ್ಲೂ ಆತನ ಮೈ

ಬಡತನದ ಬಾಳು

(ಕಥಾಸಂಕಲನ)

ಬರೆದವರು: 'ಆನಂದಕಂದ'

ಇದರಲ್ಲಿಯ ಒಂದೊಂದು ಕಥೆಯೂ ನಮ್ಮ ಜನಜೀವನದ ವಾಸ್ತವಚಿತ್ರ. ವಾಸ್ತವದಲ್ಲಿಯೆ ಸಾಹಿತ್ಯಿಕಸೌಂದರ್ಯವನ್ನು ಸಹಜವಾಗಿ ಹೇಗೆ ತುಂಬಬಹುದೆಂಬುದಕ್ಕೆ ಇದರಲ್ಲಿಯ ಕಥೆಗಳು ಒಳ್ಳೆಯ ಮಾದರಿಗಳಾಗಿವೆ.

ಕ್ರೌ. ಆ. ೧೨೦ ಪುಟಗಳು. ಬೆಲೆ ೧-೪-೦

'ಜಯಂತಿ' ಕಾರ್ಯಾಲಯ, ಧಾರವಾಡ

ಕೈಗೆ ಸಿಗಲಿಲ್ಲ. ಆಕೆ ಪುನಃ ಗಟ್ಟಿಯಾಗಿ ಕರೆದಳು. ಮೂರನೆಯ ಸಾರಿ ಕೂಗಿದಾಗ ಆತನಿಗೆ ಎಚ್ಚರವಾಯಿತು. "ಚಂದಣ್ಣ ಇಗೋ!" ಎಂದು ಹೇಳಿ, ಆತನ ಕೈಗೆ ಆಕೆ ಏನನ್ನೋ ಕೊಟ್ಟಳು.

"ಎಷ್ಟಿದೆ?" ಎಂದು ಎಣಿಸಿ, "ಇದರಲ್ಲಿ ಮೂರೇ ಇದೆ. ಐದು ರೂಪಾಯಿ ಎಲ್ಲಿ ಕೇಳಿ, ಮೂರನ್ನೇ ಕೊಟ್ಟು ಸೋಲಿಸಿದ ಮೂರ್ಖ....ನಾನು ಅಂದುಹೋಯಿತು. ಇಲ್ಲವಾದರೆ ಕಲಿಸುತ್ತಿದ್ದೆ ಬುದ್ಧಿ. ಮೂ....ಕಣ್ಣಿಲ್ಲದ ಕುರುಡಿ.....ಸುಖ ಬಾಡುವುದಕ್ಕೆ ಮಾತ್ರ ಗೊತ್ತು. ಅದರ ಪ್ರತಿಫಲವನ್ನು ಪಡೆಯಲಾರದ ಪೆದ್ದು...." ಎಂದು ಹಂಗಿಸಿ ಮಾತನಾಡಿದ.

ಆ ಹೆಂಗುಸು ಮಾತನಾಡಲಿಲ್ಲ. ಚಂದಣ್ಣ ಆಕೆಯ ಕೈಗೊಂದು ಕೋಲು ಕೊಟ್ಟು, ಇನ್ನೊಂದು ತುದಿಯಲ್ಲಿ ಅದನ್ನು ಹಿಡಿದುಕೊಂಡು ಮರಳದಿಣ್ಣೆಯಲ್ಲಿ ಆಕೆಯನ್ನು ನಡೆಸುತ್ತ ಹೋದ. ಹರಡಿಕೊಂಡಿದ್ದ ತಿಂಗಳ ಕಾಂತಿಯಲ್ಲಿ ದೂರ-ದೂರಕ್ಕೆ ನಡೆದು ಕಣ್ಮರೆಯಾದ.

ಬೆಳಗಿನ ಜಾವ ಸಮೀಪಿಸಿತ್ತು. ಸೋಮಯಾಜಿಗಳು ಎಚ್ಚತ್ತು "ಹೋಗೋಣ" ಎಂದರು. ಹುಣ್ಣಿಮೆಯ ಚಂದ್ರ ಪಡುವಲಿನಲ್ಲಿ ತಗ್ಗಿಗೆ ಇಳಿದಿದ್ದ. ಮೂಡಣನಾಡಿಂದ ಹರಿದು ಬಂದ ನದಿಗಳೆರಡೂ, ಆಯಾಸಗೊಂಡಂತೆ ನಿಧಾನವಾಗಿ, ಬಡಕಲಾಗಿ, ನಿಶ್ಯಕ್ತಿಯಿಂದ ಒಂದನ್ನೊಂದು ಬಳಸಿಕೊಂಡಂತೆ ಕೂಡಿಕೊಂಡು ಹರಿಯುತ್ತಿದ್ದುವು. ಸಮೀಪದ ಜಾತ್ರೆಯಲ್ಲಿ ಗದ್ದಲವೇ ಗದ್ದಲ. ದೇವಾಲಯದಲ್ಲಿ ದೇವರ ಮುಂದೆ ಬಾರಿಸಿದ ಚಂಡೆ, ಜಾಗಟೆ, ಡೋಲು, ತಮಟೆ, ಕೊಂಬು, ವಾದ್ಯಗಳ ಸದ್ದು, ವೇದಘೋಷದ ಸಂಗೀತದ ನಾದ. ಸಂತೆಯಲ್ಲಿ ಸೋಡಾಬಾಟಲಿ, ತಿರುಗ ತೊಟ್ಟಿಲು, ಮಕ್ಕಳ ಕೇಕೆ, ಪೀಪಿಯ ಚೀರುಧ್ವನಿಯೊಡನೆ ಸಮ್ಮಿಶ್ರವಾಗಿ—ಒಂಟಿ ಜೀವಿಯನ್ನು ಬೆದರಿಸಲು ಬರುವ ವಿಕಾರಭೂತದ ವಿಕರಾಳ ಕೂಗಿನಂತೆ ಕಿವಿದೆರೆಗೆ ಬೀಸಿ ಬಡಿಯುತ್ತಿತ್ತು.

ಬುದ್ಧನಿಗೆ ವಂದನೆಗಳು.

ಶ್ರೀ ಅರವಿಂದ ನಾಡಕರ್ಣಿ ಬಿ. ಎಸ್ಸಿ., ಎಲ್‌ಎಲ್. ಬಿ. ಮುಂಬಯಿ

೧

ಲರಮನೆಯೇ ಚಿನ್ನ-ರನ್ನದ ಕೈಗಳಿಂದ ಕರೆಯುವಾಗ
ಪ್ರೇಮವೇ ಚಂದ್ರಹಾಸದಲಿ ಬೆಣ್ಣೆತೋಳುಗಳ ಬೀಸುವಾಗ
ಕಾಮವೇ ತೊದಲುಲಿಯಲಿ ಕೇಕೆಹಾಕಿ ಸುತ್ತ ಕು[illegible]
ಮಾನವೇ ಗದ್ದುಗೆಬಳಿ ಛತ್ರಹಿಡಿದು ಚಾಮರ ಬೀ[illegible]
ಭೋಗವೇ ಬಾಲಕುಲುಕುತ್ತಕಾಲ ನೆಕ್ಕುವಾಗ
ಅವನೆಲ್ಲ ತುಳಿದು ಜೋಳಿಗೆ ಸಿಕ್ಕಿಸಿ ವನವನು ಹೊಕ್ಕ ಮಾನಸಮೌನಿ,
ನಿನ್ನ ಪದಕಮಲಗಳಲಿ ಅಲ್ಪನ ಅನಂತ ವಂದನೆಗಳು!

ನಾಲ್ಕು ದೃಶ್ಯಗಳ ಮೆರೆವಣಿಗೆಯಲ್ಲಿ ಮನಕದಲಿಸಿ
ಕರೀಟ ಕಿತ್ತೊಗೆದು ಜಟಿಲ[illegible]ನ ಹೇ ದೈವನೇ,
ನಿನ್ನ ಅಮೋಘ ಅಜೇಯಶ್ರ[illegible]ವಂದನೆಗಳು.

೨

ಲಕ್ಷಗಟ್ಟಿಜನ ನಿಲ್ಲುವರು ಕೈಮುಗಿದು
ಅಶ್ವತ್ಥ ಮಹಾಪ್ರಭೆಯನು ಮೆಚ್ಚಿ
ಆದೊಂದೇ ಉಳಿದಿಗುಪ ವಿಮೋಚನದಾರಿಯೆಂದು ನಂಬಿ.
ಇತ್ತ ದಿನ-ರಾತ್ರಿಗಳು ಹೆಣಗುತಿವೆ
ಅಂಗೈಯುದ್ದ ಕೋಣೆಯಲ್ಲೂ ಫರ್ನಿಚರುಸಮೂಹ
ಹೇರಿ ಹೇರಿ ದಿನದಿನಾ,
ಹೊಸಮಾದರಿಯ ಹೊಸಸರಕುಗಳ ಹೊಸ ಸವಲತ್ತನು ನೀಡುತ್ತ.
ಹೊಸಸಂತೆ ತೆರೆದಂತೆ ಹೊಸಗಿರಾಕಿ ಮುತ್ತುವರು.
ಗಾದಿಯಲಿ ರೇಡಿಯೋ ಕೇಳುತ ಹೊರಳಾಡುವ ದೀನ
ಕಾರು ಕೊಳ್ಳಲಾಗಲಿಲ್ಲೆಂದು ಹಂಬಲಿಸುತ್ತಾನೆ.
ಕಾರಿನಲಿ ವಿಹರಿಸುಪ ದರಿದ್ರ
ಬಂಗಲೆ ಕಟ್ಟಲಾಗಲಿಲ್ಲೆಂದು ಅಳುತ್ತಾನೆ.
ಬೇಕೆಂಬವರ ಹಿಟ್ಲರಗುಲ್ಲಿಗೆ ಸಾಕೆಂಬವರ ಕೊರಳೊ
ಸೇರುತಿದೆ ಮೆಲ್ಲಮೆಲ್ಲನೆ ತನ್ನ ತಾನರಿಯದೆಯೇ.

ಆ ಮೋಹಿನಿಯ ಹಿಡಿತದಲ್ಲಿದ್ದ ಜನತೆ
ಬೋಧಿಪ್ರಭಾವಲಂಬನದ ತುಂಬ ವಿಶ್ವಾಸದಲ್ಲಿ ...
ನಿಂತಿದೆ ತಲೆಬಾಗಿ.

೩

ಓ ವಿರುದ್ಧಪ್ರವಾಹದ ಸೆಳೆತಕೆ ಸಿಕ್ಕ ಜೀವಗಳೇ
ಬೇಡಿರಿ ಒಂದು ಗುಟುಕಿನ ಕರುಣೆ
ಅಶ್ವತ್ಥಕಟ್ಟೆಯ ನಿರಂತರ ಸೆಲೆಗಳಲಿ.
ಓ ಕಾಮನಾಸಾಧನೆಯ ಜೂಜಿನಲಿ ಜರ್ಜರಿತ ಮನಗಳೇ
ಕುಡಿಯಿರೀ ನಿತ್ಯಶಾಂತಿಯ ಚ್ಯವನಪಾಕವನು ಈ ಸೆಲೆಗಳಲಿ.
ಬಾಂಬುಗಳಾರ್ಭಟದಿ ಧೂಳುಮುಕ್ಕುವ ಮಲಿನದಿಸೆಗಳೇ
ಈ ಮಹಾಶಾಂತಿಯ ಗಂಗೆಯಲಿ ಮಿಂದು, ಮಿನುಗಿರಿ.
ಭವ-ಭವಾಂತರಗಳ ಕತ್ತಲಿನಲಿ ಸಿಲುಕಿ ಒದ್ದಾಡುವ ತಾರೆಗಳೇ
ಈ ಮಹಾಬೆಳಕಿನಲಿ ಅಡಿಯಿಟ್ಟು ಚಿರವಾಗಿರಿ ಮುಗಿಲಿನಲಿ.
ನೆತ್ತರು-ಮಾಂಸಗಳ ನಾತವನ್ನು ಹೊತ್ತೋಡುವ ಪವನಗಳೇ
ಬೋಧಿಪ್ರಭೆಯಲರಳಿದ ಆತ್ಮಕಮಲದ ಪರಿಮಳಕೊಂಡು
ದಿಗಂತ ಪರಿಹಿ ಪಾವನವಾಗಿರಿ.

ಓ ಬೊಬ್ಬೆಯಿಡುವ ಜೀವಕಲ್ಲೋಲವೇ ನೋಡು.
ಶಾಂತಸಲಿಲದ ನಯದಪ್ಪುಗೆಯಲಿ
ಕೊಣೆವ ಚಾಪ್ಪಲದ ಮಧ್ಯೆ ಕೆರೆಯಲಿ
ಉಯ್ಯಲೆಯಾಡುತಿದೆ ಹಂಸ.
ಅದರ ಕಣ್ಣು ಸವಿಯುತಿವೆ
ಮುಗಿಲ ನೀಲ ಸೌಂದರ್ಯದ ಸವಿ.

ಅದು ರೆಕ್ಕೆ ಚಾಚುತಿದೆ
ದಶದಿಶೆಗಳನ್ನರಸಲು
ಪವನವನ್ನೇರಿ.

ಓ ಜೀವನ! ಓ ಜೀವನ! ಓ ಜೀವನ!

ಮಗಳ ಮದುವೆ

(ಕಾದಂಬರಿಯ ವಿಮರ್ಶೆ)

ಶ್ರೀ. ಆರ್. ಜಿ. ಕುಲಕರ್ಣಿ (ಬೆನಕಟ್ಟಿ), ಬಿ. ಎ. (ಆನರ್ಸ್) ಧಾರವಾಡ

ಈ ಕಾದಂಬರಿಯಲ್ಲಿಯ ಪಾತ್ರಗಳನ್ನು ಆರಿಸುವಾಗಿ ಪಾತ್ರಗಳ ಅಂತಃಸ್ವರೂಪವನ್ನು ಚಿತ್ರಿಸುವದರ ಕಡೆಗೇ ಲೇಖಕರು ವಿಶೇಷ ಲಕ್ಷ್ಯವನ್ನು ಕೊಟ್ಟಿದ್ದಾರೆ; ಆದುದರಿಂದ, ಸಂನಿವೇಶಗಳ ರಚನೆಯಲ್ಲಿ ರೌದ್ರ-ಭಯಾನಕ-ವಿಸ್ಮಯಾದಿ ಭಾವಗಳನ್ನು ಕೆರಳಿಸುವ ದೃಶ್ಯಗಳನ್ನು ಸೇರಿಸುವ ಗೋಜಿಗೆ ಹೋಗಿಲ್ಲ!

" ದಾಂಪತ್ಯಜೀವನವೆಂದರೆ ಇದೊಂದು ಅನಂದ ಯಜ್ಞ. ಅದು ಹೆಚ್ಚು ಹೆಚ್ಚಾದಂತೆ ಆನಂದದ ಅಭಿವೃದ್ಧಿಯಾಗುವುದು....."

ರತ್ನಾಕರ

ನಮ್ಮ ಸಮಾಜದಲ್ಲಿ ಮದುವೆಯ ಸಮಸ್ಯೆಯು ಪ್ರತಿದಿನವೂ ಕ್ಲಿಷ್ಟತರವಾಗುತ್ತ ನಡೆದಿದೆ. ಶ್ರೀ. ಬೆಟಗೇರಿ ಕೃಷ್ಣಶರ್ಮರು ತಮ್ಮ " ಮಗಳ ಮದುವೆ " ಕಾದಂಬರಿಯಲ್ಲಿ ಈ ಸಮಸ್ಯೆಯ ಹಲವಾರು ಪರಿಗಳನ್ನು - ರಾಷ್ಟ್ರೀಯ ಹೋರಾಟದ ಹಿನ್ನೆಲೆಯಲ್ಲಿ— ಚಿತ್ರಿಸಿದ್ದಾರೆ. ೧) ಸುಸಂಸ್ಕೃತ ಅಭಿರುಚಿ, ೨) ಆದರ್ಶದ ಸುಳುಮಾರ ಮುಖ. ೩) ಸಾಮಾಜಿಕ ಸಮಸ್ಯೆಗಳ ತಿಳಿಯಾದ ನಿವೇಚನೆ ಹಾಗೂ ಸಮರಸದ ಲಲಿತದರ್ಶನ, ೪) ನಿರ್ದುಷ್ಟತಂತ್ರ, ೫) ಮನೋವಿಶ್ಲೇಷಣಾತ್ಮಕವಾದ ಜೀವಂತ ಪಾತ್ರಸೃಷ್ಟಿ—ಇವು ಈ ಕಾದಂಬರಿಯ ಮುಖ್ಯ ಲಕ್ಷಣಗಳೆಂದು ಹೇಳಬಹುದು. ಇದರಲ್ಲಿ ನಾವು ಸಮಸ್ಯೆಯ ಘೋರ ಸ್ವರೂಪವನ್ನಾಗಲಿ, ಅದರಿಂದಾಗುವ ಅನಾಹುತದ ಭಯಾನಕ ದೃಶ್ಯಗಳನ್ನಾಗಲಿ ಕಾಣುವುದಿಲ್ಲ. ಸಮಸ್ಯೆಯ ವಿಕೃತಚಿತ್ರವು ಹಿನ್ನೆಲೆಯಲ್ಲಿ ನಿಂತಿದೆ. ಆದರೆ ಲೇಖಕರ ದೃಷ್ಟಿಯಿರುವುದು ಈ ಸಮಸ್ಯೆಯ ಪರಿಹಾರದ ಕಡೆಗೆ. ಸುಸಂಸ್ಕೃತ ಹೃದಯವುಳ್ಳ ವ್ಯಕ್ತಿಗಳಿಂದ ಇಂತಹ ಸಮಸ್ಯೆಗಳು ಹೇಗೆ ಲಲಿತವಾದ ಪರಿಹಾರವನ್ನು ಕಾಣುವುದೆಂಬುದೇ ಇಲ್ಲಿ ಕಾಣುತ್ತಿದೆ. ಎರಡನೆಯ ಅಂಶವೆಂದರೆ, ಇಲ್ಲಿ ಬಂದಿರುವ ಮದುವೆಯ ಪ್ರಶ್ನೆ ರೂಪಗೊಂಡಿರುವುದು, ಒಂದು ವಿಶಿಷ್ಟ ಸಂಸ್ಕೃತಿಯುಳ್ಳ ಮಧ್ಯಮವರ್ಗದ ಸಮಾಜದಲ್ಲಿ ಮಾತ್ರ. ಸಮಸ್ಯೆಯ ಸಾರ್ವತ್ರಿಕತೆಯ ಕಡೆಗೆ ನಾವು ಲಕ್ಷ್ಯವಿಟ್ಟು, ಮದುವೆಯ ಬಗೆಗೆ ಲೇಖಕರ ವಿಶಾಲದೃಷ್ಟಿಯ ವಿಚಾರಗಳ ಕಲಾತ್ಮಕ ಅಭಿವ್ಯಕ್ತಿಯನ್ನು ವಿಮರ್ಶಿಸಬೇಕಾಗುತ್ತದೆ.

ಸ್ವಾತಂತ್ರ್ಯದ ಹೋರಾಟದ ಕಾಲವೆಂದರೆ ನಮ್ಮ ಸಮಾಜದಲ್ಲಿ ಒಂದು ಉತ್ಕ್ರಾಂತಿ ಕಾಲ. ನಮ್ಮ ಒಟ್ಟು ಸಾಮಾಜಿಕ ಜೀವನದಲ್ಲಿ ಎಷ್ಟೇ ಅಧಃಪತನವಾಗಿರಲೊಲ್ಲದೇಕೆ; ಒಂದು ಮಾತು ಮಾತ್ರ ಮಹತ್ತ್ವದ ಘಟಕವಾಗಿ ಈ ಸಮಾಜದಲ್ಲಿ ನಿಂತಿದೆ: ಅದೇ ಮಧ್ಯಮವರ್ಗದ ಅಸ್ತಿತ್ವ. ಅದರಲ್ಲಿ ಪ್ರಗತಿಹೊಂದುವ ಬಯಕೆ ಇಲ್ಲವಾದಾಗಲೂ—ಪ್ರಗತಿಯನ್ನು ಪ್ರತಿಭಟಿಸಿ ರಕ್ತಸುರಿಸುವ ಪ್ರವೃತ್ತಿ ಅದರಲ್ಲಿರುವುದಿಲ್ಲ. ಒಂದು ವಿಶಿಷ್ಟವಾದ ಪರಿಭಾಷೆಯಲ್ಲಿ ಅದಕ್ಕೆ ತಿಳಿ ಹೇಳಿದರೆ, ಹೊಸ ಕಾಲವನ್ನು ಅದು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಪಡೆದಿಲ್ಲದಿದ್ದರೆ, ಅಲ್ಲಿ ಮಾನವೀಯ ಹೃದಯದ ನಿತ್ಯ ಜಾಗೃತಿ ಮಧ್ಯಮವರ್ಗದ ಹೆಣ್ಣುಮಕ್ಕಳಲ್ಲಿ— ಹೆಚ್ಚಾಗಿರುವುದರಿಂದ; ಈ ಸಮಾಜವ್ಯವಸ್ಥೆಯಲ್ಲಿಯ ಬದಲಾವಣೆ ತಿಳಿವಳಿಕೆಯ ಮುಖಾಂತರ ಸಾಧ್ಯವಿದೆ. ಕ್ರಾಂತಿಕಾರಿ ತರುಣರ— ಸಂಪ್ರದಾಯನಿಷ್ಠ ಹಿರಿಯರ— ಸಹಜೀವನವೂ ಇದರಲ್ಲಿ ಸಾಧ್ಯವಿದೆ.

ಶ್ರೀ. ಬೆಟಗೇರಿಯವರು ' ಮಗಳಮದುವೆ'ಯಲ್ಲಿ ಎತ್ತಿದ ಮದುವೆಯ ಸಮಸ್ಯೆ ಈ ಮಧ್ಯಮವರ್ಗದ ಸಾಮಾಜಿಕ ಅಧಃಪತನದಿಂದ ಸಂಕುಚಿತ ಮನೋವೃತ್ತಿ, ದಾರಿದ್ರ್ಯಗಳ ಮೂಲಕ-ಹುಟ್ಟಿದುದು; ಹೊಸಕಾಲದ ವಿಕೃತಿ-ಹಳಗಾಲದ ವಿಕೃತಿಗಳು ಸಂಧಿಸಿದಾಗ ಹುಟ್ಟಿದುದು. ಅದಕ್ಕೆ ಪರಿಹಾರ ಸಿಕ್ಕಿದ್ದಾದರೂ, ಈ ಮಧ್ಯಮವರ್ಗದಲ್ಲಿ ಮೇಲೆ ಹೇಳಿದ ಎರಡು ಮಹತ್ತ್ವದ ಅಂಶಗಳು ಉಳಿದುಕೊಂಡದ್ದರಿಂದಲೇ ಸಾಧ್ಯವಾಗಿದೆ.

೧) ಪ್ರಗತಿಯನ್ನು ಒಪ್ಪದಿದ್ದರೂ ಕ್ರಾಂತಿಗೆ ಘೋರ ಪ್ರತಿಭಟನೆಯನ್ನು ಮಾಡದಿರುವುದರಿಂದಲೇ, ರತ್ನಾಕರ ರಂಗಣ್ಣನವರಂತಹ ಕ್ರಾಂತಿಕಾರಿ ವ್ಯಕ್ತಿಗಳು, ಗೋಪಾಲರಾಯ ಹಾಗೂ ಅನಂತರಾಯರಂತಹರಿಂದಲೂ ಹಳ್ಳಿಗರಿಂದಲೂ ಗೌರವವನ್ನಿಷ್ಟೇ ಅಲ್ಲ, ಅಂತಃಕರಣವನ್ನೂ ಗೆಲ್ಲುತ್ತವೆ.

೨) ಈ ಜನರು ಗಾಂಧೀಜಿಯನ್ನು — ಹಾಗೂ ಅವರ ಕ್ರಾಂತಿಯನ್ನು ಸಂಪೂರ್ಣವಾಗಿ ಒಪ್ಪಿಕೊಂಡಿಲ್ಲ. ಆದರೆ ಈ ಎಲ್ಲ ಕ್ರಾಂತಿಗಳ ಹಿಂದೆ ರತ್ನಾಕರ ಹಾಗೂ ರಂಗಣ್ಣನವರಂತಹ ಶೀಲವಂತ-ಸತ್ತ್ವನಿಷ್ಠ ಮಾನವವ್ಯಕ್ತಿಗಳೂ, ಗಾಂಧೀಜಿಯವರಂತಹ ಪರಮ ಕಾರುಣಿಕ

ಹಾಗೂ ತ್ಯಾಗಿ ಜೀವಿಯೂ ಇದ್ದುದರಿಂದ, ಹಳ್ಳಿಗರಿಗೂ, ಮಧ್ಯಮವರ್ಗದ ಇತರರಿಗೂ 'ಈ ಹೊಸ ಪ್ರಯೋಗವೂ ತಕ್ಕಷ್ಟಕ್ಕೆ ತಾನು ನಡೆದುಕೊಂಡು ಹೋಗಲಿ, ಅದಕ್ಕೆ ವಿರೋಧನನ್ನೊದಗಿಸುವುದು ಬೇಡ' ಎಂಬ ಭಾವನೆ ಅವರಲ್ಲಿ ಬರುತ್ತದೆ. ಹೃದಯದ ಭಾಷೆಯನ್ನು ತಿಳಿದುಕೊಳ್ಳುವ, ಮಾನವತೆಯನ್ನು ಗುರುತಿಸಿ ಗೌರವಿಸುವ ಸಂಸ್ಕಾರವು, ನಮ್ಮ ಸಾಮಾಜಿಕ ಸಂಸ್ಕೃತಿಯಲ್ಲಿ ಬಹು ಪುರಾತನ ಕಾಲದಿಂದಲೂ ಬೆಳೆದುಬಂದಿದೆ

ಅನಂತರಾಯನಂತಹ ಸರಕಾರೀ ನೌಕರನು ಗಾಂಧೀಜನರನ್ನು ತಿರಸ್ಕರಿಸುತ್ತಾನೆ; ಆದರೆ ಅವರ ಗುಣವನ್ನು ಮೆಚ್ಚುವ ಹೃದಯ ಅವನಲ್ಲಿದೆ. "ಸರಕಾರದ ಜೋಡಿ ಬೇಕಾದಷ್ಟು ಉದ್ಧಟ ರೀತಿಯಿಂದ ವರ್ತಿಸಿದರೂ, ಈ ಚಳವಳಿಯ ಜನ ಮಿಕ್ಕ ಜನರ ಜೋಡಿ ಒಳ್ಳೆಯ ರೀತಿಯಿಂದ ನಡಕೋತಾರ ನೋಡು ಕುಮುದಾ...." ಇದೆ[illegible]ನ-ವೀಯತೆಯನ್ನು ಇನ್ನೊಂದು ಕಡೆಗೂ ಕಾಣುತ್ತೇವೆ. [illegible] ರಾಯರು ಹೊಸಕಾಲದ-ಆಂಗ್ಲನಾಗರಿಕತೆಗೆ ಒಲಿದವರು [illegible] ಪತ್ನಿ ಹಳಗಾಲದವಳು. ಆದರೆ ಅವರಿಬ್ಬರಲ್ಲಿಯೂ ವಿರಸಕ್ಕೆಡೆಗೊ[illegible] ಹಳೆಯ ಹೆಣ್ಣುಮಕ್ಕಳು ಪತಿಯ ಸ್ವಾಮಿತ್ವವನ್ನು ಒಪ್ಪಿಕೊಂಡರೂ, ತಮ್ಮ ಸಹಜಬುದ್ಧಿಯನ್ನು ಮಾನವಸ್ವಭಾವದ ತಿಳಿವಳಿಕೆಯನ್ನು ಕಳೆದುಕೊಂಡಿರುವುದಿಲ್ಲ. ಅವರು **ಗಂಡಸರ ತಪ್ಪನ್ನು ಒಪ್ಪಿಕೊಳ್ಳುವುದಿಲ್ಲ; ಕ್ಷಮಿಸುತ್ತಾರೆ.** [illegible] ಪತ್ನಿ ತುಂಗಮ್ಮ, ತನ್ನ ಕಲಿತ ಮಗಳಾದ ಕುಮುದಳಿಗ[illegible]ರು ಹೇಳುವ ಮಾತಿದು: "ಹೆಂಗಸರ ಹೃದಯ ನಿಮ್ಮ [illegible]ಗೇನು ಗೊತ್ತು? ಎಷ್ಟು ಕಲಿತರೂ ಏನಾತು? ಕೊನೆಗೂ ಹೆಂಗಸರಿಗೆ ತಾಯಾಗಬೇಕೆನ್ನೂ ಬಯಕೆ ಏನೂ ತಪ್ಪೂಹಾಂಗಿಲ್ಲ. ಹೆಣ್ಣಿನ ತಾಯಿತನದ ವಿದ್ಯಾ, ಸಾಲ್ಯಾಗ ಕಲಿಸಿದರ ಬರೂದಿಲ್ಲ. ಅದನ್ನ ಕಟ್ಟಿಕೊಂಡೇ ಹುಟ್ಟುರತಾರ ಹೆಣ್ಣುಮಕ್ಕಳು—" ಎನ್ನುವ ಮಾತನ್ನು ಕೇಳಿದಾಗ, ಸುಶಿಕ್ಷಿತಳಾದ ಕುಮುದಾ ಆಶ್ಚರ್ಯದಿಂದ ಅವಳ ಕಡೆಗೆ ನೋಡುತ್ತಾಳೆ. "ತನ್ನ ಹೃದಯವನ್ನು ಕಾಣುವ ಸೂಕ್ಷ್ಮತೆ ಇವಳಲ್ಲಿಯೂ ಇದೆಯೆ?...." ಎಂದು ಅವಳು ವಿಚಾರಿಸುತ್ತಾಳೆ.

ಇವೆಲ್ಲವುಗಳ ಹಿಂದೆ ಒಂದು ಮಾತು ಸ್ಪಷ್ಟವಾಗುತ್ತದೆ: ಈ ಜನರಿಗೆ ರಾಜಕಾರಣ ತಿಳಿಯಲಿಕ್ಕಿಲ್ಲ; ಸಾಮಾಜಿಕ ಪ್ರಗತಿಯೆಂದರೆ ಅರ್ಥವಾಗಲಿಕ್ಕಿಲ್ಲ; ಹೊಸಕಾಲದ ಹೊಸತನವು ಒಪ್ಪಿಗೆಯಾಗಲಿಕ್ಕಿಲ್ಲ; ಆದರೆ ಇವೆಲ್ಲವುಗಳ ತಳದಲ್ಲಿರುವ ಮೂಲಭೂತ ಮಾನವೀಯ ಅಂಶಗಳನ್ನು ಗುರುತಿಸುವ ಕಲೆ, ಬಹು ಪುರಾತನ ಕಾಲದಿಂದ ಹಳ್ಳಿಗರಿಂದಲೂ—ಮಧ್ಯಮ ವರ್ಗದವರಿಂದಲೂ—ತಿಳಿದುಕೊಳ್ಳಲು ಸಾಧ್ಯವಾಗಿದೆ. ಗಾಂಧೀಜಿಯವರ ರಕ್ತರಹಿತ ಕ್ರಾಂತಿಯ ಹಿನ್ನೆಲೆಯಲ್ಲಿ ಈ ಅಂಶವನ್ನು ಗುರುತಿಸಿದ್ದುದೇ ಅವರ ಗೆಲವಿನ ರಹಸ್ಯವಾಗಿ ನಿಂತಿದೆ — ಎಂಬ ಮಾತು ಸ್ಪಷ್ಟವಾಗುತ್ತದೆ. ನಮ್ಮ ಸಮಾಜದಲ್ಲಿ ಬದಲಾವಣೆ ಸಾವಕಾಶವಾಗಿ ಆಗುತ್ತದೆ; ಆದರೆ ರಕ್ತರಹಿತವಾಗಿ ಆಗುತ್ತದೆ. ಶ್ರೀ ಬೆಟಗೇರಿಯವರ "**ಮಗಳ ಮದುವೆ**"ಯಲ್ಲಿ ಈ ಮಾತಿನ ಮೇಲೆ ಬೆಳಕು ಬೀಳುತ್ತದೆ. ಇಂಥದೊಂದು ಸಮಾಜ, ಅದರ ಸುಸಂಸ್ಕೃತ ರೀತಿನೀತಿ—ಅದರ ಸುಖ-ದುಃಖ, ಅದರ ಪ್ರಗತಿಪರ ಅಂಶಗಳು—ಅದರಲ್ಲಿಯೇ ಹುಟ್ಟಿದ ಮೂರು ಹೊಸ ಮುಖಗಳು—"ರತ್ನಾಕರ—ಕುಮುದಾ—ರಂಗಣ್ಣ,—" ಇವರ ವ್ಯಕ್ತಿತ್ವವನ್ನು ಅರಳಿಸಲು ಕಾರಣವಾಗಿ ಬಂದ ಮೂರು ಅಂಶಗಳು—೧) ರಾಷ್ಟ್ರೀಯ ಹೋರಾಟ ೨) ಮಗಳ ಮದುವೆಯ ಸಮಸ್ಯೆ ೩) ಆಂಗ್ಲ ನಾಗರಿಕತೆಗೆ ಮರುಳಾದವರಿಂದಾಗುವ ತೊಂದರೆ.

ಈ ಕಾದಂಬರಿಯನ್ನು ಈ ಅಂಶಗಳ ಹಿನ್ನೆಲೆಯಲ್ಲಿ ನಾವು ಪರಿಶೀಲಿಸಬೇಕು. ಎಂದರೆ ಇಲ್ಲಿ ಕಾದಂಬರಿಯುದ್ದಕ್ಕೂ ಅನುದ್ರೇಕ ಕಾರಕವಾಗಿ ಜೀವನವು ರೂಪುಗೊಳ್ಳುತ್ತ, ದೊಡ್ಡ ದೊಡ್ಡ ಬಂಡೆಗಲ್ಲಿನಂತಹ ಸಮಸ್ಯೆಗಳೂ ಮಂಜಿನಂತೆ ಕರಗುತ್ತ ಹೋಗುತ್ತಿರುವುದರ ರಹಸ್ಯ ಕಾಣುತ್ತದೆ ತನ್ನ ಸದಾಚಾರಿಯಾದ-ಸುಜ್ಞನಾದ-ಸುಶಿಕ್ಷಿತ ರತ್ನಾಕರನು, ತನಗೆ ಒಪ್ಪದ ಕ್ರಾಂತಿಯಲ್ಲಿ ಸೇರಿದಾಗಲೂ ಅವನ ತಾಯಿ ಸುಮ್ಮನಿರುವಳು. ಅದಕ್ಕೆ ಕಾರಣವೆರಡು:

೧) ಮಗನ ಸದ್ಗುಣದಲ್ಲಿಯ ನಂಬುಗೆ, ೨) ವಿಪತ್ತುಗಳ ಉತ್ಪತ್ತಿಯಾಗಲಿ ನಿವಾರಣೆಯಾಗಲಿ ಪರಮಾತ್ಮನ ಕೈಯಲ್ಲಿ ಎಂಬ ಶ್ರದ್ಧೆ—ಅಥವಾ ಜೀವನದ ಸ್ವೀಕಾರ. ಇದೇ ಮಾತನ್ನೆ ಮಗಳ ಮದುವೆಯ ಸಮಸ್ಯೆಯಿಂದ ಕೊರಗುವ ವೇಣಕ್ಕನ—ಕಾವೇರಿಯ ತಾಯಿಯು—ಬಗೆಗಾದರೂ ಹೇಳಬಹುದು.

ಹೀಗೆ ಕಾದಂಬರಿಯನ್ನು ಗುಣಗಳ ದೃಷ್ಟಿಯಿಂದ ಪರಿಶೀಲಿಸಿದರೆ, ಅಲ್ಲಿಯೂ ಸಹನೆ-ಸ್ವೀಕಾರ-ಶ್ರದ್ಧೆ-ಸಹೃದಯತೆಗಳೇ ಇದರ ಚಾಲಕಶಕ್ತಿಗಳಾಗಿ ನಿಂತಿದ್ದುದು ಕಾಣುವುದು.

ಇಂಥದೊಂದು ಸಮಾಜದಲ್ಲಿ—ಅದರ ಈ ಸದಂಶದಲ್ಲಿ—ತಾಪು ಎದುರಿಸಬೇಕಾಗಿ ಬಂದ ಒಂದು ಸಮಸ್ಯೆ—ಮದುವೆ—! ಅದನ್ನು ಶ್ರೀ. ಬೆಟಗೇರಿ ಕೃಷ್ಣಶರ್ಮರು ಯಶಸ್ವಿಯಾಗಿ ಚಿತ್ರಿಸಿದ್ದಾರೆ.

ಮದುವೆಯು ಸರ್ವಸಮಾಜಗಳಲ್ಲಿಯೂ ಒಂದು ಸಮಸ್ಯೆಯಾಗಿದ್ದರೂ, ನಮ್ಮಲ್ಲಿ ಅದಕ್ಕೊಂದು ವಿಶಿಷ್ಟಸ್ವರೂಪ ಬಂದಿದೆ. ಆದ್ದರಿಂದ ಅದರ ಪರಿಹಾರವಾದರೂ ವಿಶಿಷ್ಟರೀತಿಯಲ್ಲಿಯೇ ಬರಬೇಕಾಗಿದೆ. ಕಾಲಪರಂಪರೆಯಲ್ಲಿ ಭಾರತೀಯರು ಎದುರಿಸಬೇಕಾದ ಅಸಂಖ್ಯ ಆಘಾತಗಳಿಗೆ—ಆಂತರಿಕವಾಗಲಿ, ಬಾಹ್ಯವಾಗಲಿ—ಅನುಗುಣವಾಗಿ ನಮ್ಮ ಸಂಸ್ಕೃತಿಯ ಹಿನ್ನೆಲೆಯಲ್ಲಿ ಈ ಮದುವೆಯ ನಿರಪ್ರದಾಯವು ರೂಪುಗೊಂಡಿದೆ. ಯಾವುದೇ ಸಮಸ್ಯೆಯನ್ನು ನಾವು ಎಷ್ಟೇ ಪೂರ್ಣದೃಷ್ಟಿಯಿಂದ ನೋಡಬಯಸಿದರೂ, ಕಾಲಕ್ರಮದಲ್ಲಿ ಕೆಲವೊಂದು ಅಂಶಗಳು ಮಾತ್ರ ಮಹತ್ತ್ವದುವಾಗಿ ನಿಂತುಬಿಡುತ್ತವೆ. ಗಂಡು-ಹೆಣ್ಣಿನ ಹೃದಯಗಳ ಸಮ್ಮಿಲನವೂ ಸಾಮಾಜಿಕ ಕಲ್ಯಾಣವೂ ಪರಸ್ಪರ ವಿರೋಧಿಗಳಾಗಿರಬಾರದೆಂಬುದೇ ನಮ್ಮ ಮದುವೆಯಲ್ಲಿ ಹುದುಗಿದ ಮಹತ್ತ್ವದ ಮಾತು. ಆದರೆ ಅವು ದುರ್ದೈವದಿಂದ ಇಂದು ಪರಸ್ಪರ ವಿರೋಧಿ ಅಂಶಗಳಾಗಿ ನಿಂತಿವೆ. ಎರಡನೆಯದು ವರದಕ್ಷಿಣೆಯ ಸಮಸ್ಯೆ. ವಧೂ-ವರರು ತಮ್ಮ ಕಾಲ ಮೇಲೆ ತಾವು ನಿಲ್ಲುವಂತಾಗಲೆಂದೂ, ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಪಾಲಿಲ್ಲದ ಕಾಲದಲ್ಲಿ—ಅವರಿಗೂ ಪಿತೃವಿನಿಂದ ತುಸು ಕಾಣಿಕೆ

ಸಲ್ಲಲೆಂದು ಈ ವರದಕ್ಷಿಣೆಯ ಸಂಪ್ರದಾಯ ಬೆಳೆದುಬಂದಂತೆ ಕಾಣುತ್ತದೆ. ಈ ವರದಕ್ಷಿಣೆಯ ಸಂಗಡ ಹೊಸಕಾಲದ ಸಮಸ್ಯೆಯೂ ಸೇರಿಕೊಂಡಿದೆ. ಕಲಿಯದವರೊಡನೆ ಮದುವೆಯಾಗಲು ಮನಸ್ಸಿಲ್ಲ; ಕಲಿತವರು ಮದುವೆಯಾಗುವುದಿಲ್ಲ. ಲಲಿತಕಲೆಗಳಿಗೂ ಗೃಹಿಣೀ ಜೀವನಕ್ಕೂ ಸಂಬಂಧವಿಲ್ಲ; ಆದರೆ ಹೊಸಕಾಲದ ತರುಣರು ಅದನ್ನು ಬಯಸುತ್ತಾರೆ. ಇದಕ್ಕೆ ಪರಿಹಾರವೇನು? ಗೃಹಿಣೀಜೀವನವು ಸುಸೂತ್ರವಾಗಿ ಸಾಗುವಂತೆ—ಲಲಿತಕಲೆಗಳು ಅವರ ಬಾಳಿನ ಬೆಳಕಾಗಿ ಬೆರೆಯುವಂತೆ—ಹೇಗೆ ಮಾಡಬೇಕು? ಈ ಸಮಸ್ಯೆಗಳು ಪರಿಹಾರ ಕಾಣದ ಸಂಧಿಕಾಲದಲ್ಲಿ, ಗೋಪಾಲರಾಯರೂ ಅವರ ಹೆಂಡತಿಯಾದ ವೇಣಕ್ಕನೂ ತಮ್ಮ ಮಗಳಾದ ಕಾವೇರಿಯ ಮದುವೆಯ ಸಮಸ್ಯೆಯನ್ನು ಎದುರಿಸುತ್ತಾರೆ.

ಗೋಪಾಲರಾಯರು ಒಬ್ಬ ಸಾಮಾನ್ಯ ಕಾರಕೂನರು. ಮಗಳ ಮದುವೆಗಾಗಿ ಹಗಲಿರುಳೂ ಚಿಂತಿಸುತ್ತಿದ್ದಾರೆ. ಪರಿಹಾರ ಕಾಣದಾಗಿದೆ. ಆರ್ಥಿಕದೃಷ್ಟಿಯಿಂದ ಅಷ್ಟೇನೂ ಗಟ್ಟಿಮುಟ್ಟಾದವರಲ್ಲದ ಅವರಿಗೆ ಅಂತ ಹಳ್ಳಿಯಲ್ಲಿ, ರಂಗಣ್ಣ ತನ್ನ ಸಹನೆ–ತ್ಯಾಗ–ಜ್ಞಾನ–ವಿಧಾಯಕ ನೇತೃತ್ವಶಕ್ತಿಗಳ ಮುಖಾಂತರ, ಗಾಂಧೀಜಿಯವರ ಮಾರ್ಗದರ್ಶನದಲ್ಲಿ ಗ್ರಾಮೋದ್ಧಾರಕ್ಕಾಗಿ ನಿಂತಿದ್ದಾನೆ. ಇಂತಹ ವ್ಯಕ್ತಿಯು ಬಾಳಿನಲ್ಲಿ ಕಾನೇರಿಗೆ ಹಿರಿದಾದ ಸ್ಥಾನವುಂಟು. ತ್ಯಾಗವೊಂದನ್ನೇ ಜೀವನವೆಂದು ತಿಳಿದು ಸಮರ್ಪಿತ ಜೀವನವನ್ನು ಸ್ವೀಕರಿಸುವ ಆ ಸುಕುಮಾರ ಹೆಣ್ಣಿನಲ್ಲಿ ಕಸ್ತೂರಬಾಳ ವ್ಯಕ್ತಿತ್ವದ ಛಾಯೆ ಇದೆ. ಅದು ಸಾಮಾನ್ಯವಾಗಿ ಎಂದೂ ಮಹಿಳೆಯರ ಸಂಪತ್ತು.

ಕಾವೇರಿಯ ಮದುವೆಯನ್ನು ತನ್ನ ಗೆಳೆಯ ರಂಗಣ್ಣನ ಸಂಗಡ ಮಾಡಬಯಸುತ್ತಾನೆ. ರತ್ನಾಕರ—ರಂಗಣ್ಣ ಇವರೂ ಗಾಂಧೀಜಿಯ ಕ್ರಾಂತಿಯ ಎರಡು ಮುಖಗಳಾಗಿ ಬಂದಿದ್ದಾರೆ. ಅವರಿರ್ವರ ಮುಖಾಂತರ, ಗೋಪಾಲರಾಯರ ಮಗಳ ಮದುವೆಯ ಸಮಸ್ಯೆಯ ಪರಿಹಾರವಾಗುತ್ತದೆ.

ರತ್ನಾಕರನು ಸುಶಿಕ್ಷಿತ ತರುಣ. ಕಾಲೇಜಿನಲ್ಲಿ ಸ್ಕಾಲರ್. ಜೀವನದಲ್ಲಿ ಕ್ರಾಂತಿಕಾರಿ. ಬ್ರಿಟಿಶರ ಸಂಗಡ ಹೋರಾಡಲು ಗಾಂಧೀಜಿಯವರ ಹೋರಾಟದಲ್ಲಿ ಪ್ರತ್ಯಕ್ಷ ಭಾಗವಹಿಸಿದವ. ಸ್ವಕಾರದಿಂದ ಕರೆ ಬಂದಾಗಲೆಲ್ಲಾ ಜೇಲಿಗೆ ಹೋಗಲೂ ಸಿದ್ಧನಾದ ವ್ಯಕ್ತಿ. ಸಾಮಾಜಿಕ ಸಮಸ್ಯೆಗಳಲ್ಲಿ ನಿತ್ಯವೂ ಕೈಹಾಕಿ ಅವುಗಳನ್ನು ಬಿಡಿಸಲು ಅತನಿಗ ವ್ಯವಧಾನವಿಲ್ಲ ಆದರೆ ಗಾಂಧೀಜಿಯವರು ರಾಷ್ಟ್ರೀಯ ಹೋರಾಟಕ್ಕಾಗಿ ಜನತೆಯನ್ನು ಜಾಗೃತಗೊಳಿಸಿದಾಗ, ಕೇವಲ ತರುಣರ ರಕ್ತ ಕುದಿಯುವಂತಹ ಆವೇಶವನ್ನು ಮಾತ್ರ ಜಾಗೃತಗೊಳಿಸಲಿಲ್ಲ; ಅವರಲ್ಲಿ ಮಾನವೀಯತೆಯನ್ನೂ, ಅಶಿಕ್ಷಿತವಾದರೂ ಸುಸಂಸ್ಕೃತವಾಗಿರಬಹುದಾದ ಹೃದಯವನ್ನು ಗುರುತಿಸಿ ಗೌರವಿಸುವ ವಿಶಾಲ ಭಾವನೆಯನ್ನೂ ಜಾಗೃತಗೊಳಿಸಿದರು. ಅದರ ಪರಿಣಾಮವಾಗಿಯೇ ರತ್ನಾಕರನಂತಹರ ಕಣ್ಣಿನಲ್ಲಿ "ಕಾವೇರಿ" ಒಂದು ಮುಗ್ಧ ಸುಂದರ ವ್ಯಕ್ತಿಯಾಗಿ ತೋರಿದ್ದಾಳೆ. "ಆಕೆಯ ನಿಸ್ಕಲ್ಮಷ ಮುಖಭಾವದಲ್ಲಿ ಶಾಲೀನತೆ ಒಡೆದು ತೋರುತ್ತಿದ್ದಿತು. ಜೀಲುವಿನಲ್ಲಿಯೂ ಪ್ರಕೃತಿದೇವಿ ತಮ್ಮ ಮಗಳನ್ನು ದರಿದ್ರಳನ್ನಾಗಿ ಮಾಡಿಲ್ಲ."

ಈ ಕನ್ಯೆಯನ್ನು ರಂಗಣ್ಣನಿಗೆ ಕೊಡಬೇಕೆಂದು ರತ್ನಾಕರನು ಗೋಪಾಲರಾಯರಿಗೆ ಬಿನ್ನವಿಸುತ್ತಾನೆ. ಅವರು ನಿಂತಕಾಲ ಮೇಲೆ ಸಿದ್ಧ. ರಂಗಣ್ಣನನ್ನು ಒಪ್ಪಿಸಲು ಸ್ವತಃ ರತ್ನಾಕರನು ಸಿದ್ಧನಾಗುತ್ತಾನೆ. ರಂಗಣ್ಣನಾದರೋ ಸುಶಿಕ್ಷಿತನಾದ ವಿಧಾಯಕ ಕಾರ್ಯಕರ್ತ. ರತ್ನಾಕರನು ಒರ್ವ ಮುಗ್ಧವಾದ—ಹೆಚ್ಚು ಕಲಿಯದ—ವ್ಯಕ್ತಿಯಲ್ಲಿ ಹೃದಯದ ಸಂಸತ್ತನ್ನು ಕಂಡರೆ, ರಂಗಣ್ಣನು ಹಳ್ಳಿಗರ ಅಜ್ಞ ವ್ಯಕ್ತಿತ್ವದ ಹಿಂದೆ ನಿಂತ ಸುಸಂಸ್ಕೃತ ಬಾಳಿನ ಸೌಂದರ್ಯ ಗುರುತಿಸುವ, ಗುರುತಿಸಿ ಅದನ್ನು ಅಭಿವೃದ್ಧಿ ಮಾಡಿ ಹೊಸಕಾಲದ ಸೃಷ್ಟಿಯೊಡನೆ ಸರಿತೂಗಿಸುವ ಪ್ರಯತ್ನದಲ್ಲಿರುವುದು ಕಂಡು ಬರುತ್ತದೆ. ರೋಗ-ರುಜಿನಗಳಿಂದ, ಅಜ್ಞಾನ–ಬಡತನಗಳಿಂದ, ಅವಿಶ್ವಾಸ–ಅಸೂಯೆಗಳಿಂದ ಪ್ರಗತಿಯು ಕಡೆಗೆ ಬೆನ್ನುಮಾಡಿ ನಿಂತ ಹಳ್ಳಿಯಲ್ಲಿ, ರಂಗಣ್ಣ ತನ್ನ ಸಹನೆ–ತ್ಯಾಗ–ಜ್ಞಾನ–ವಿಧಾಯಕ ನೇತೃತ್ವಶಕ್ತಿಗಳ ಮುಖಾಂತರ, ಗಾಂಧೀಜಿಯವರ ಮಾರ್ಗದರ್ಶನದಲ್ಲಿ ಗ್ರಾಮೋದ್ಧಾರಕ್ಕಾಗಿ ನಿಂತಿದ್ದಾನೆ. ಇಂತಹ ವ್ಯಕ್ತಿಯು ಬಾಳಿನಲ್ಲಿ ಕಾನೇರಿಗೆ ಹಿರಿದಾದ ಸ್ಥಾನವುಂಟು. ತ್ಯಾಗವೊಂದನ್ನೇ ಜೀವನವೆಂದು ತಿಳಿದು ಸಮರ್ಪಿತ ಜೀವನವನ್ನು ಸ್ವೀಕರಿಸುವ ಆ ಸುಕುಮಾರ ಹೆಣ್ಣಿನಲ್ಲಿ ಕಸ್ತೂರಬಾಳ ವ್ಯಕ್ತಿತ್ವದ ಛಾಯೆ ಇದೆ. ಅದು ಸಾಮಾನ್ಯವಾಗಿ ಎಂದೂ ಮಹಿಳೆಯರ ಸಂಪತ್ತು.

ರಂಗಣ್ಣ ಕಾವೇರಿಯರ ಸಮ್ಮಿಲನದಲ್ಲಿ 'ಕುಮುದಾ' ಎಂಬ ಇನ್ನೊಂದು ಹೆಣ್ಣುಜೀವ ರತ್ನಾಕರನ ಬಾಳಿನಲ್ಲಿ ಬರುತ್ತಾಳೆ. ಬ್ಯಾಂಕಿನ ಮ್ಯಾನೇಜರರಾಗಿದ್ದ ಅನಂತರಾಯರ ಸುಪುತ್ರಿ ಈಕೆ. ಸುಶಿಕ್ಷಿತ ಹೆಣ್ಣುಮಗಳು. ಆಧುನಿಕ ಶಿಕ್ಷಣದ ಸ್ವಾತಂತ್ರ್ಯದ ಭಾವನೆ ಸಹಜವಾಗಿ ಇವಳಲ್ಲಿ ನೆಲೆಗೊಂಡಿದೆ. ಸಹಜಸ್ವತಂತ್ರವಾದ ನಯವಿನಯಗೂಡಿದ ನಡೆವಳಿಕೆ, ರಾಷ್ಟ್ರೀಯಭಾವನೆಯನ್ನು ಗುರುತಿಸಿ ಗೌರವಿಸುವ ಹೊಸಕಾಲದ ನವಪ್ರಜ್ಞೆ ಇವಳಲ್ಲಿ ಜಾಗೃತವಾಗಿವೆ. ರಾಷ್ಟ್ರೀಯ ಹೋರಾಟದಲ್ಲಿ ಧುಮುಕಿ ಸಾಗಿದ ರತ್ನಾಕರನಂತಹ ತರುಣನನ್ನು—ಸುಸಂಸ್ಕೃತ ತ್ಯಾಗವೀರನನ್ನು—ಪರಹಿತದ ಕಡೆಗೇ ಲಕ್ಷ್ಯವಿರುವ ಹೃದಯವಂತನನ್ನು—ಅವಳು ಬಯಸಿದರೆ ತಪ್ಪಲ್ಲ; ಚಳವಳಿಗಾರನೆಂದು ರತ್ನಾಕರನನ್ನು ಧಿಃಕರಿಸಿದರೂ, ಅವನ ವ್ಯಕ್ತಿತ್ವದ ಔದಾರ್ಯವನ್ನು ಕಂಡು ಕುಮುದೆಯ ತಂದೆ ಅನಂತರಾಯರು ಅತನಿಗೆ ತಲೆಬಾಗುತ್ತಾರೆ.

ಗೋಪಾಲರಾಯರ ಮಗಳ ಮದುವೆಗೆ ಈ ಎಲ್ಲ ಅಂಶಗಳು ಪೋಷಕವಾಗಿದ್ದರೆ, ಸತ್ಯಾಗ್ರಹಿಗಳನ್ನು ಸದೆಬಡೆವ ಕಾರ್ಯದಲ್ಲಿ ಮುಗ್ನವಾಗಿದ್ದ ಸರಕಾರವು ಒಂದು ದೊಡ್ಡ ಆತಂಕವಾಗಿ ನಿಂತಿದೆ. ರತ್ನಾಕರನನ್ನು ಸೆರೆಹಿಡಿಯುವ ಆಜ್ಞೆ ಬಂದಿದೆ. ಅತನಿಗೆ ರಂಗಣ್ಣನ ಕಡೆಗೆ ಹೋಗಿ ಕಾವೇರಿಯ ಮದುವೆಯ ವಿಚಾರವನ್ನು ಮಾತಾಡಲಿಕ್ಕೂ ಅವಕಾಶವಿಲ್ಲ.

ಈ ಪ್ರಸಂಗವನ್ನು ಲೇಖಕರು ೧೯೩೧ರ ಕಾಲದ ರಾಷ್ಟ್ರೀಯ ಹೋರಾಟದ ಚಿತ್ರವನ್ನು ಚಿತ್ರಿಸಲು ಬಳಸಿಕೊಂಡಿದ್ದಾರೆ. ಮದುವೆಯ ಸಮಸ್ಯೆಗೆ ಈ ರಾಷ್ಟ್ರೀಯ ಸಮಸ್ಯೆ ಪೋಷಕವಾಗಿ ಬಂದಿದೆ. ಈ ಹೋರಾಟದ ಚಿತ್ರಣದಲ್ಲಿ ಎದ್ದುಕಾಣುವ ಮುಖ್ಯ ಅಂಶವೆಂದರೆ, ಜನಸಾಮಾನ್ಯರು ಹೇಗೆ ರಾಷ್ಟ್ರೀಯ ಮುಖಂಡರ ನೆರವಿಗೆ ಬಂದು ತಮಗೆ ಶಕ್ಯವಿದ್ದ ರೀತಿಯಲ್ಲಿ ಸಹಾಯ ಸಲ್ಲಿಸಿದರೆಂಬುದಾಗಿದೆ. ಡ್ರೈವ್ರ್ ದತ್ತೋಬನಂತಹ ವ್ಯವಹಾರಜ್ಞರಾದ ಚತುರರಾದ ಶುದ್ಧ ಹೃದಯದ ವ್ಯಕ್ತಿಗಳೂ, ಹವಾಲದಾರ ಹನುಮಂತಪ್ಪನಂತಹ ಪೋಲೀಸ ಅಧಿಕಾರಿಗಳೂ, ಕಟ್ಟೇ ಇನಸ್ಪೆಕ್ಟರರೂ ಸಾನಾರೀತಿಯಿಂದ ಸತ್ಯಾಗ್ರಹಿಗಳಿಗೆ ಅನುಕೂಲ ಒದಗಿಸಿದ್ದಾರೆ. ಸರಕಾರದ ಒಳಗಿದ್ದು ಸರಕಾರದ ಚಲನವಲನವನ್ನು ಸತ್ಯಾಗ್ರಹಿಗಳಿಗೆ ತಿಳಿಸಿ, ಅವರನ್ನು ಆದಷ್ಟು ಸಂರಕ್ಷಿಸುವ ಹೊಣೆ ಹೊತ್ತಿದ್ದವ—ಅವರ ಸಾತ್ವಿಕತೆಯು ಅಲ್ಲಲ್ಲಿ ವ್ಯಕ್ತವಾಗುವ ಸಹಜಹಾಸ್ಯಗಳಿಂದ—ಅವರೆಲ್ಲ, ನಮ್ಮ ಅಂತಃಕರಣವನ್ನು ಗೆಲ್ಲುತ್ತಾರೆ. ಇವೇನೂ ಅಪರ್ಶ ಚಿತ್ರಗಳಾಗಿ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಅಸಂಖ್ಯವಾಗಿ ಕಂಡುಬರುತ್ತಿದ್ದ ಸಾಮಾನ್ಯ ವರ್ಗದ ಮುಗ್ಧ ತ್ಯಾಗಿಗಳಿವರು.

ಇಂತಹ ರಾಷ್ಟ್ರೀಯ ಹೋರಾಟದ ಹಿನ್ನೆಲೆಯಲ್ಲಿ ರತ್ನಾಕರನ ಹಾಗೂ ಕುಮುದೆಯ ಪಾತ್ರ ಅರಳುತ್ತ ಅರಳುತ್ತ—ಕಾವೇರಿಯ ಮದುವೆ ಮುಗಿಯುವಾಗ 'ಮುಂದೇನು' ಸಮಸ್ಯೆ ತಲೆಹಾಕುತ್ತದೆ. ಆಗ ರತ್ನಾಕರನನ್ನು ಸೆರೆಹಿಡಿಯಲಿದೆ; ಜೇಲೆಂಬುದೊಂದು ತೀರ್ಥಯಾತ್ರಾಸ್ಥಳವೆಂಬಂತಹ [illegible]ನ್ನು ರತ್ನಾಕರನು ಹುಟ್ಟಿಸಿದುತ್ತಾನೆ. ಅಂತೆಯೇ ಅವನ ಬರವಿಗಾಗಿ—ಎಂದರೆ ಈ ಕಾದಂಬರಿಯ ಮುಂದಿನ ಭಾಗಕ್ಕಾಗಿ ಓದುಗರು ದಾರಿಕಾಯುತ್ತಾರೆ.

ಈ ಮದುವೆಗೆ ಆತಂಕವೊಡ್ಡಿದವರಲ್ಲಿ ವೆಂಕಣ್ಣ ಎಂದರೆ ರಂಗಣ್ಣನ ತಮ್ಮ ಹಾಗೂ ಈ ವೆಂಕಣ್ಣನ ಸ್ನೇಹಿತರು. ವೆಂಕಣ್ಣ ಶೋಕಿ ಮನುಷ್ಯ. ದುಷ್ಟನಲ್ಲ. ಆದರೆ ಅವನ ಮಿತ್ರ "ಬಳವಂತ ಆಗಲಾವೇ—" ಕುಹಕಿ, ತಂತ್ರಗಾರ! ರಾಷ್ಟ್ರದ್ರೋಹಿ" ಸ್ವಾರ್ಥಿ! ಉಳಿದವರು ಬಡಪ್ರಾಣಿಗಳು.

ಈ ಎಲ್ಲ ಪಾತ್ರಗಳನ್ನು ಅರಳಿಸುವಾಗ ಇವರೆಲ್ಲರ ಅಂತಃಸ್ವರೂಪವನ್ನು ಚಿತ್ರಿಸುವುದರ ಕಡೆಗೇ ಲೇಖಕರ ಲಕ್ಷ್ಯವಿದೆಯಾದ್ದರಿಂದ, ಸಂನಿವೇಶಗಳ ರಚನೆಯಲ್ಲಿ ರುದ್ರ-ಭಯಾನಕ-ವಿಸ್ಮಯಾದಿ ದೃಶ್ಯಗಳನ್ನು ಸೇರಿಸುವ ಗೋಜಿಗೆ ಹೋಗಿಲ್ಲ. ರತ್ನಾಕರನ ತಾಯಿ-ಅವನ ಮಾವ-ಹಾಗೂ ಆ ಮಾವನ ಮಗಳಾದ ಸುಭದ್ರೆ—ಅವಳಿಗೆ ರತ್ನಾಕರನ ಬಗೆಗಿರುವ ಗೌರವ—ಹಾಗೂ ಈ ಸುಭದ್ರೆ ಮತ್ತು ರತ್ನಾಕರನ ತಾಯಿಯ ನಡುವೆ ಬೆಳೆದ ಅನ್ಯೋನ್ಯ ಸುಬಂಧಗಳಲ್ಲಿ ಎರಡು ಮೂರೆಡೆಗಳು ಮಾಡಿನಿಲ್ಲುತ್ತವೆ:

೧) ಶಿಕ್ಷಣದ ಅಭಾವದಿಂದ—ಅನುಭವದ ವಿಸ್ತಾರವಿಲ್ಲದುದರಿಂದುಂಟಾದ ಸಂಕುಚಿತ ಜೀವನದೃಷ್ಟಿ.

೨) ಈ ಸಂಕುಚಿತ ವಾತಾವರಣದಲ್ಲಿಯೂ ಗುಪ್ತವಾಗಿರುವ ಹೃದಯವಂತಿಕೆ—ಇವು ಪಾತ್ರ ಪ್ರತಿಕ್ಷಣಕ್ಕೂ ಎದ್ದುಕಾಣುತ್ತವೆ.

ಸುಭದ್ರೆ ರತ್ನಾಕರನನ್ನು ಪ್ರೀತಿಸಿದರೂ, ಅವನ ಆದರ್ಶವನ್ನು ಅರ್ಥ ಮಾಡಿಕೊಳ್ಳಲಾರಳು. ಅವನು ತನ್ನ ಅತ್ತೆಯ ಮಗ! ಸುಂದರ ವ್ಯಕ್ತಿ. ಗುಣವಂತ! ಇನಲ್ಲದೆ ಬುದ್ಧಿವಂತನೆಂದು ಜನರು ಹೊಗಳುತ್ತಿದ್ದಾರೆ. ಇಂಥವನನ್ನು ಮದುವೆಮಾಡಿಕೊಂಡರೆ ತಾನು ಸುಖಿಯಾಗಿರಬಲ್ಲೆ—ಎಂಬ ಭಾವನೆ ಅವಳಲ್ಲಿದ್ದೆ; ಆದರೆ ತನ್ನ ಆದರ್ಶದಿಂದ, ಸಂಕಲ್ಪ ಶಕ್ತಿಯಿಂದ ಹೊಸ ಜೀವನವನ್ನು ನಿರ್ಮಿಸುತ್ತಿರುವ ರತ್ನಾಕರನಿಗೆ ಶುಭಬ್ರೆಯೊಡನೆ ಮದುವೆಯಾಗುವುದು ಶಕ್ಯವಿಲ್ಲ. ಅವಳ ಬಗೆಗೆ ಆತಶಿಗೆ ಸಹಾನುಭೂತಿ ಇದೆ. ಆದರೆ ಅವನ ಸಂಗಾತಿಯಾಗಲು ಕುಮುದಾಳಿಗೆ ಮಾತ್ರ ಸಾಧ್ಯವಿದೆ. ಈ ಮಾತನ್ನು ತನ್ನ ತಾಯಿಗೆ ತಿಳಿಸಿಹೇಳಿದಾಗ ಅವಳು ಒಪ್ಪುತ್ತಾಳೆ.

ಈ 'ತಿಳಿಹೇಳುವುದು' ಹಾಗೂ "ತಿಳಿದುಕೊಳ್ಳಲು ಸಿದ್ಧವಿರುವದು—" ಈ ಎರಡು ಮಾತುಗಳಲ್ಲಿ ಸಮಸ್ಯೆಯ ಲಲಿತಪರಿಹಾರ ಹಾಗೂ ಸಮರಸದ ಸುಕುಮಾರ ಮುಖದರ್ಶನವಿದೆ. ವಿವೇಕವನ್ನು ಹೇಳುವ, ಆ ವಿವೇಕವನ್ನು ಒಪ್ಪಿಕೊಳ್ಳುವ ಹೃದಯ-ಬುದ್ಧಿಗಳಿದ್ದಲ್ಲಿ ದ್ವಂದ್ವ ನಿವಾರಣೆಯಿದೆ. ಇಂತಹ ಸಮಸ್ಯೆಗಳನ್ನೂ ಈ ಸಮಸ್ಯೆಗಳ ಹಿನ್ನೆಲೆಯಲ್ಲಿ ಅರಳುವ ಮಾನವೀಯ ವ್ಯಕ್ತಿತ್ವವ ಚಿತ್ರಿಸಲು ಅವಶ್ಯವಾದ ಸುಸಂಸ್ಕೃತ ಅಭಿರುಚಿ ತಾಂತ್ರಿಕ ಕೌಶಲ್ಯಗಳನ್ನು ಲೇಖಕರಿಗಿವೆ. ಊದಿನಕಡ್ಡಿಗಳ ಧೂಮನವನ್ನು ಕುಲೀನಸ್ತ್ರೀಯರ ಕೀರ್ತಿಯ ಪರಿಮಳಕ್ಕೆ ಹೋಲಿಸಿದ ಲೇಖಕರ ಸದಭಿರುಚಿಯನ್ನು ಪರೀಕ್ಷಿಸಲು ಬೇರೆ ಸಾಧನಗಳ ಅವಶ್ಯಕತೆಯಿಲ್ಲ. ತಂತ್ರದೃಷ್ಟಿಯನ್ನು ನೋಡುವಾಗ, ಶೈಲಿಯನ್ನು ಗಮನಿಸುವಾಗ, ಕತೆಯ ಸಹಜ ಓಟವೊಂದನ್ನು ನೆನೆದರೆ ಜೀವನದ ಸಹಜ ಘಟನೆಗಳು ರಸವತ್ತಾಗಿ ಸಮಸ್ಯೆಗಳು ಸುರುಳಿಸುರುಳಿಯಾಗಿ ಎದ್ದುಕಾಣುತ್ತವೆ. ಕಾದಂಬರಿಯಲ್ಲಿ ಕುತೂಹಲವನ್ನು ಕೆರಳಿಸುವ ಮುಖ್ಯ ಸಾಧನವೆಂದರೆ, ರಾಷ್ಟ್ರೀಯ ಹೋರಾಟದಲ್ಲಿ ನಿತ್ಯವೂ ಅನಿಶ್ಚಿತ ಸ್ಥಿತಿಯಲ್ಲಿರುವ ರತ್ನಾಕರನ ಪಾತ್ರವೆಂದೇ ಹೇಳಬಹುದು. ಇದರಲ್ಲಿ ಬರುವ ಆದರ್ಶವು ವಾಸ್ತವತೆಯ ಇನ್ನೊಂದು ಮುಖವಾಗಿ ಬಂದಿದೆ. ಆದರ್ಶವು ಅನಿವಾರ್ಯವಾದಾಗ ಅದೇ ವಾಸ್ತವವಾಗುವುದು. ರಂಗಣ್ಣ—ರತ್ನಾಕರರಲ್ಲಿ ಅದು ಅನಿವಾರ್ಯವಾಗಿದೆ; ಇಷ್ಟೇ ಇಲ್ಲ ಸಹಜವೂ ಆಗಿದೆ. ಹಳ್ಳಿಗನಾದ ಸ್ಟಿಂಗಪ್ಪನ ಪಾತ್ರವಾಗಲಿ, ದತ್ತೋಬನಂಥ ಡ್ರೈವರನ ಪಾತ್ರವಾಗಲಿ ಸಾತ್ವಿಕತೆಯ ಶುದ್ಧಸ್ವರೂಪಗಳಾಗಿ ಬಂದಿವೆ. ಕೆಲವರಿಗೆ ಅವು ಆದರ್ಶ ಪಾತ್ರಗಳಾಗಿರಬಹುದು; ಆದರೆ ಸ್ವತಃ ಇವರಿಗೆ ತಾವು ಸಾಮಾನ್ಯರೆಂಬ ಭಾವವಿರುತ್ತದೆ. ಆದರ್ಶದ ಸಾಮಾನ್ಯತೆಯನ್ನೂ ಗುರುತಿಸಿ ಚಿತ್ರಿಸಿದ್ದುದು ಶ್ರೀ ಬೆಟಗೇರಿ ಕೃಷ್ಣಶರ್ಮರ ಕಥನಕಲೆಯ ಒಂದು ಮುಖವಾಗಿದೆ. ರಾಜಯೋಗಿ, ಅಶಾಂತಿಪರ್ವಗಳಲ್ಲಿ ಸಾತ್ವಿಕತೆಯ ತೇಜಸ್ಸನ್ನೂ ಸಾಮರ್ಥ್ಯವನ್ನೂ ಅಭಿವ್ಯಕ್ತಗೊಳಿಸಿದ್ದರೆ—ಮಗಳ ಮದುವೆಯಲ್ಲಿ ಅದರ ಲಲಿತಸುಂದರವಾದ ಸಮರಸ ದರ್ಶನವಿದೆ. ಮಧ್ಯಮವರ್ಗದಲ್ಲಿ ಹುಡುಗಿದ ಈ ದರ್ಶನವನ್ನು ಕೊಟ್ಟ ಲೇಖಕರಿಂದ, ಮುಂದಿನ ಕಾದಂಬರಿಯಲ್ಲಿ ಅದರ ತೇಜಸ್ಸನ್ನು ನಾವು ನೀರೀಕ್ಷಿಸಿದರೆ ತಪ್ಪಾಗಲಿಕ್ಕಿಲ್ಲ

ಗುಂಡೂಮಾಮಾನ ಯಾತ್ರೆ

(ಎರಡನೆಯ ಸಂದರ್ಶನ)

ಶ್ರೀ. ಪಿ. ವಿ. ಗುಡಿ, ಹೊಸದಿಲ್ಲಿ

●

ಗುಂಡುಮಾಮಾನಿಗೆ ಭಾರತದ ಪ್ರಾಚೀನ ಸಂಸ್ಕೃತಿಯ ಬಗೆಗೆ ಅಭಿಮಾನ ಬಹಳ. ಯಾತ್ರೆ-ತೀರ್ಥ ಮಾಡುವವರೆಲ್ಲ ಕೇವಲ ಅಂಧಶ್ರದ್ಧೆಯಿಂದ ಮಾಡದೆ, ನಮ್ಮ ಪ್ರಾಚೀನ ಸಂಸ್ಕೃತಿಯ ಸ್ಮಾರಕಗಳೆಂಬ ತಿಳಿಕೆಯಿಂದ ಮಾಡಬೇಕು— ಎಂಬುದು ಅವರ ಖಂಡಿತ ಅಭಿಪ್ರಾಯ!

ಮರುದಿನ ಸಂಜೆಗೆ ರಂಗಣ್ಣ, ಶೀನಪ್ಪ, ನಾನು—ಎಂದಿನಂತೆ ಗುಂಡುಮಾವಾನ ಮನೆಗೆ ಹೋದೆವು.. ಉಳಿದವರು ನಮಗಿಂತ ಮೊದಲೇ ಬಂದಿದ್ದರು. ಗುಂಡೂಮಾವಾ ಏನೋ ಯೋಚನೆಯಲ್ಲಿ ಇದ್ದಂತಿತ್ತು. ಶೀನಪ್ಪ ಕೇಳಿದ: "ಏನು, ಗುಂಡುಮಾವಾ, ಬದರೀನಾಥಕ್ಕೆ ಹೊರಡುವುದೆಂದು?"

"ಇಂದು ಮುಂಜಾನೆಯಿಂದ ಇದೇ ಒಂದು ದೊಡ್ಡ ಸಮಸ್ಯೆಯಾಗಿದೆ, ಶೀನೂ!" ಎಂದರು ಗುಂಡೂಮಾವಾ. "ಇಂದು ಮುಂಜಾನೆ' ಹೋದ ವರ್ಷ ಯಾತ್ರೆ ಮುಗಿಸಿಕೊಂಡು ಬಂದರಲ್ಲ, ಕುಲಕರ್ಣಿ ರಾಮರಾಯರು— ಅವರು ಭೆಟ್ಟಿಯಾಗಿದ್ದರು. ಅನಾಯಾಸವಾಗಿ ಭೆಟ್ಟಿಯಾದರು, ಎಲ್ಲ ಮಾಹಿತಿಗಳನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಂದು ಅವರನ್ನು ಕೇಳಿದೆ: 'ಯಾವ ಯಾವ ಸ್ಥಳಗಳನ್ನು ನೋಡಿಕೊಂಡು ಬಂದಿರಿ?' ಎಂದು. 'ಬದರೀನಾಥ, ಹರಿದ್ವಾರ, ದಿಲ್ಲಿ, ಆಗ್ರಾ, ಮಥುರಾ.....' ಎಂದು ಪಟ್ಟಣಗಳ ಯಾದಿಯನ್ನೇ ಬಿಚ್ಚತೊಡಗಿದರು. 'ಊರುಗಳ ಹೆಸರುಗಳನ್ನು ನಾನೂ ಕೇಳಿದ್ದೇನೆ; ಆದರೆ ಅಲ್ಲಿ ಮುಖ್ಯವಾಗಿ ನೋಡಿದ್ದೇನನ್ನು?' ಎಂದು ಪ್ರಶ್ನಿಸಿದೆ. 'ಎಲ್ಲ ಕಡೆಗಳಲ್ಲಿಯೂ ಒಂದೊಂದು ದಿವಸವಿದ್ದೆವು. ನೋಡತಕ್ಕ ಎಲ್ಲ ಸ್ಥಳಗಳನ್ನೂ ನೋಡಿದೆವು.' ಎಂದು ಮತ್ತೆ ನುಡಿದರು. ನಾನು ಮೂರು ನಾಲ್ಕು ಬಾರಿ ಕೇಳಿದರೂ, ಅವರು ಮತ್ತೆ ನುತ್ತೆ ಎಲ್ಲವನ್ನೂ ನೋಡಿಕೊಂಡು ಬಂದೆವೆಂದು ಹೇಳಿದರೇ ಹೊರತು, ಏನು ನೋಡಿದರೆಂಬುದನ್ನು ಮಾತ್ರ ಹೇಳಲಿಲ್ಲ. ನಾನೇ ಕೇಳಿದೆ: 'ಮಥುರೆಯಲ್ಲಿ ಕೃಷ್ಣನು ಹುಟ್ಟಿದ ಸ್ಥಳ ನೋಡಿದಿರಾ?' ಎಂದು. ಅವರು ತಲೆ ತುರಿಸಿಕೊಳ್ಳುತ್ತ ನೆನಪು ಮಾಡಿಕೊಳ್ಳತೊಡಗಿದರು. ಆಮೇಲೆ 'ಕೃಷ್ಣನು ಹುಟ್ಟಿದ ಸ್ಥಳ ನೋಡಲಿಲ್ಲ. ಅದು ಮಥುರೆಯಿಂದ ೨-೩ ಮೈಲು ದೂರದಲ್ಲಿದೆಯಂತೆ. ಈಗ ಅಲ್ಲಿ ಏನೂ ನೋಡತಕ್ಕಂತಹದು ಇಲ್ಲ. ಔರಂಗಜೇಬನು ಕಟ್ಟಿಸಿದ ಒಂದು ಮಸೀದೆ ಮಾತ್ರ ಇದೆಯಂತೆ ಅದನ್ನೇನು ನೋಡುವುದೆಂದು ಹೋಗಲಿಲ್ಲ. ಆದರೆ ಮಥುರೆಯಲ್ಲಿ ದೊಡ್ಡ ದೊಡ್ಡ ಕೃಷ್ಣನ ಗುಡಿಗಳಿವೆ. ಎಲ್ಲ ಗುಡಿಗಳಲ್ಲಿಯೂ ಕರಿಯ ಸಂಗಮರವರ ಕಲ್ಲಿನ ಕೃಷ್ಣನ ಸುಂದರ ಮೂರ್ತಿಗಳಿವೆ. ಕಾಲ್ನಡಿಗೆಯಲ್ಲಿ ಬರುವವರಿಗೂ ಸುಮಾರು ೨೫-೩೦ ಗುಡಿಗಳನ್ನು ನೋಡಿ [illegible] ವೃಂದಾವನಕ್ಕೆ ಹೋದೆವು. ಅಲ್ಲಿಯಂತೂ, ಸಂಸ್ಥಾನಿಕರೂ [illegible] ಧನಿಕರೂ ಸೇರಿ ಸುಮಂತಜನರೂ ಕಟ್ಟಿಸಿದ ಅನೇಕ ಗುಡಿಗಳಿವೆ. ದಿಲ್ಲಿಯಲ್ಲಿಯೂ ಕೆಲವು ಹರಿಜನರು ಅಲ್ಲಿಗೆ ಹೋದಾಗ, ಅವರೂ ಒಂದು ಗುಡಿಯನ್ನು ಕಟ್ಟಿಸಿದ್ದಾರೆ. ಅಲ್ಲಿಯ ಕಲಾಕೌಶಲ ನೋಡುವ ಹಾಗಿದೆ. ಒಟ್ಟು ಸಾವಿರದ ಒಂದು ಗುಡಿಗಳಿವೆಯಂತೆ. ನಾವು ಮುಖ್ಯವಾದ ಕೆಲವುಗಳನ್ನು ನೋಡಿಕೊಂಡು ಬಂದೆವು.' ಎಂದು ಹೇಳಿದರು. ನನಗೊಳ್ಳೇ ಆಶ್ಚರ್ಯವಾಯಿತು. ಮಥುರೆಯಲ್ಲಿ ಕೃಷ್ಣನು ಹುಟ್ಟಿದ ಸ್ಥಳ ನೋಡಲಿಲ್ಲ; ಕಂಸನನ್ನು ಕೊಂದ ಸ್ಥಳ ನೋಡಲಿಲ್ಲ; ಕೃಷ್ಣನ ಬಾಲಲೀಲೆಗೆ ಹೆಸರಾದ ಗೋಕುಲ ಇವರ ನೆನಪಿಗೇ ಬರಲಿಲ್ಲ. ವೃಂದಾವನದಲ್ಲಿಯ ಕುಂಜವನ, ಕಾಲಿಯಾಮರ್ದನದ ಸ್ಥಳ, ಗೋವರ್ಧನ ಪರ್ವತ, ಇವೆಲ್ಲ ಇವರಿಗೆ ಮುಖ್ಯವಲ್ಲ; ಯಾರೋ ಕಟ್ಟಿಸಿದ ನಾಲ್ಕು ಗುಡಿಗಳನ್ನು ನೋಡಿಕೊಂಡು ಬಂದರಂತೆ. ದಿಲ್ಲಿಯಲ್ಲಿ ಕುತುಬ್‌ಮಿನಾರ್, ಬಿರ್ಲಾಮಂದಿರ ನೋಡಿದರಂತೆ, ಆದರೆ ಬಿರ್ಲಾಭುವನದಲ್ಲಿಯ ಗಾಂಧೀಜಿಯ ನಿಧನಸ್ಥಳ, ಗಾಂಧೀಜಿಯ ಸಮಾಧಿಗಳನ್ನು ನೋಡಲಿಕ್ಕಾಗಲಿಲ್ಲ! ಮಹಾಭಾರತ, ಭಾಗವತದಲ್ಲಿ ಉಲ್ಲೇಖಿಸಿದ ಎಲ್ಲ ಸ್ಥಳಗಳೂ ಉತ್ತರಭಾರತದಲ್ಲಿಯೇ ಇವೆ. ಅಲ್ಲಿಯ ಪ್ರತಿಯೊಂದು ಸ್ಥಳವೂ ಯಾವುದಾದರೊಂದು ಪುರಾಣಪ್ರಸಿದ್ಧ ಘಟನೆಗಳಿಗೆ ಸಂಬಂಧಿಸಿದ್ದಾಗಿದೆ. 'ಆನಂದಕಂದರು' ಹಾಡಿದ.

'ರಾಯ ಭರತನನು ಬಸಿರಲಿ ಧರಿಸಿ,
ತಾಯ್ ನೆಲಕಾತನ ಹೆಸರನು ಬರಿಸಿ,
ಸ್ತ್ರೀಯರ ಭಿನತೆಯು ಮಹಿಯಲಿ ಮೆರೆಸಿ,
ಮೆರೆಯಾಗಿ ನಿಂತ' ಶಕುಂತಲೆಯ ಜನ್ಮಸ್ಥಳವೂ ಅಲ್ಲಿಯೇ ಇದೆ.

ಈ ಯಾತ್ರಿಕರಿಗೆ ಅದರ ಗೊತ್ತು ಸಹ ಇಲ್ಲ. ಮುನಿಶ್ರೇಷ್ಠರಾದ ಕಣ್ವರ, ವಸಿಷ್ಠರ ಪವಿತ್ರ ಆಶ್ರಮಸ್ಥಾನಗಳೂ ಅಲ್ಲಿಯೇ ಇವೆ ಕುರುಕ್ಷೇತ್ರದಲ್ಲಿಯ, ಶ್ರೀಕೃಷ್ಣನು ಗೀತೆಯನ್ನು ಉಪದೇಶಿಸಿದ ಸ್ಥಳ, ಶರಪಂಜರದ ಮೇಲೆ ಮಲಗಿ ಕುರುಪಿತಾಮಹನು ಧರ್ಮರಾಜ. ನಿಗೆ ಉಪದೇಶಿಸಿದ ಸ್ಥಳ,....ಇಂತಹ ಒಂದೇ ಎರಡೇ— ಎಷ್ಟೋ ಸ್ಥಳಗಳಿವೆ. ಅವುಗಳನ್ನೆಲ್ಲ ಕಣ್ಮಾನ ತಣಿಯುವಂತೆ ನೋಡ ಬೇಕೆನ್ನುತ್ತೇನೆ. ಶೀನೂ, ಈ ಸ್ಥಳಗಳ ನೆನಪಿನಿಂದಲೇ,— ಅವೆಲ್ಲ ಘಟನೆಗಳ— ಪುರಾಣದಲ್ಲಿಯ ಸಂಗತಿಗಳ ನೆನಪಾಗಿ ಮೈ ಜುಮ್ಮೆನ್ನುತ್ತದೆ. ಈ ಜೀವನದಲ್ಲಿ ಆ ಸ್ಥಳಗಳನ್ನು ನೋಡುವುದು ಸಾಧ್ಯವೇ? ಇವರೆಲ್ಲ ಮಥುರೆಗೆ ಹೋಗಿ ಕೃಷ್ಣನ ಜನ್ಮಸ್ಥಳ ನೋಡಬೆ ಕಂದರೇಕೆಂದರೆ---! ಅಲ್ಲಿ ನೋಡತಕ್ಕಂತಹದೇನೂ ಇಲ್ಲವಂತೆ. ಸ್ಥಳದಲ್ಲಿ ಕೃಷ್ಣನು ಹುಟ್ಟಿದ್ದು ಸಾಲದೇ? ಅವಕ್ಕೂ ಹೆಚ್ಚಿಗೆ ಏನು ಬೇಕೋ ತಿಳಿಯದಾಗಿದೆ. ನಿಜವಾಗಿಯೂ ಶೀನು, ನಾನು ಬದರೀನಾಥದಿಂದ ಬರುವಾಗ, ಇವೆಲ್ಲ ಸ್ಥಳಗಳನ್ನೂ ನೋಡಿಕೊಂಡು ಬರುವೆನು. ಮಥುರೆಯಲ್ಲಿ ಇನ್ನೂ ಒಂದು ಪುಣ್ಯಸ್ಥಳವಿದೆ. ಧ್ರುವನು ತಪಸ್ಸುಮಾಡಿ ಶ್ರೀಮನ್ನಾರಾಯಣನನ್ನು ಒಲಿಸಿಕೊಂಡ ಸ್ಥಳ; ಯಮುನಾನದಿಯ ದಂಡೆಗೇ ಇದೆಯಂತೆ; ಎಷ್ಟೋ ಜನರಿಗೆ ಅದರ ಗೊತ್ತು ಸಹ ಇಲ್ಲ.

'ಅಂತೂ ಯಾತ್ರಾಸ್ಪೆಶಲಿಗೆ ಹೋಗ ರದ್ದುಮಾಡಿದಂತೆ ತೋರುತ್ತದೆ.' ಎಂದು ಶೀನಪ್ಪ ನುಡಿದ. ಗುಂಡೂಮಾವನಾ ಈ ವಿಷಯ ಶೀನಪ್ಪನ ಮನಸ್ಸಿಗೆ ಹಿಡಿಯಲಿಲ್ಲ. ಅವನಿಗೆ ಬೇಕಾದ ವಿಷಯವೇ ಬೇರೆ; ಈ ವಿಷಯಕ್ಕೆ ಮೊದಲು ಪೂರ್ಣವಿರಾಮ ಕೊಡಬೇಕಾಗಿತ್ತು ಅವನಿಗೆ. ಮಾತನ್ನು ಬೇರೆ ಕಡೆಗೆ ತಿರುಗಿಸ. ಬೇಕೆಂದು 'ನೀವು ಬೇರೆಯಾಗಿಯೇ ಹೋದರೆ, ತ್ರಿಶೂಲ ಪರ್ವತಕ್ಕೆ ಹೋಗುವ ಪ್ರೋಗ್ರಾಮ್ ಇಟ್ಟುಕೊಂಡಿರುವಿರೋ ಹೇಗೆ? ಈಗ ವೃತ್ತಪತ್ರಗಳಲ್ಲಿ ಅದರ ವಿಷಯವಾಗಿ ಬಹಳವಾಗಿ ಬರುತ್ತದೆ.' ಎಂದು ನುಡಿದ.

ತ್ರಿಶೂಲ ಪರ್ವತದ ಹೆಸರು ಕೇಳಿದ ಕೂಡಲೇ ಗುಂಡೂಮಾವಾ, ಸ್ವಲ್ಪ ಹೊತ್ತು ಏನೋ ಯೋಚಿಸುತ್ತಿದ್ದು, ಆಮೇಲೆ ಹೇಳಿದರು: "ನೀನು ತ್ರಿಶೂಲ ಪರ್ವತದ ಹೆಸರು ಎಷ್ಟೋ ಬಾರಿ ಓದಿರಬಹುದು. ಅದು ಇಷ್ಟು ಬೆಳಕಿಗೆ ಬಂದದ್ದರ ಕಾರಣ ರೂಪಕುಂಡದ ನೆರೆಯಲ್ಲಿ ಸಿಕ್ಕ ಎಲುಬಿನ ರಾಶಿಗಳೇ. ಅದೊಂದು ದೊಡ್ಡ ಸಮಸ್ಯೆಯೇ ಆಗಿದೆ; ಅಲ್ಲಿ ಅಷ್ಟು ಎಲುಬುಗಳು ಸಿಗಬೇಕಾದರೆ, ಸಾವಿರಾರು ಜನರು ಅಲ್ಲಿ ಸತ್ತಿರಬೇಕು. ಅದಕ್ಕೆ ಕಾರಣವೇನು? ಸರಕಾರದವರು ಅದನ್ನು ಗೊತ್ತುಪಡಿಸುವುದಕ್ಕಾಗಿ ಪ್ರಯತ್ನಿಸುತ್ತಿದ್ದಾರೆ ಆದರೆ ಎಷ್ಟೋ ಜನರ ಅಭಿಪ್ರಾಯವೆಂದರೆ 'ರೂಪಕುಂಡವೇ ನಮ್ಮ ಸ್ಕಂದಪುರಾಣದಲ್ಲಿ ಉಲ್ಲೇಖಿಸಲ್ಪಟ್ಟ ರುದ್ರಕುಂಡವಿರಬೇಕು; ಅದರ ಕೆಳಗಡೆಗಿರುವ ಕೊಳ್ಳವೇ ವೈತರಣಿ ಇರಬಹುದು ಎಂದು. ಇದರ ಸಲುವಾಗಿ ಅನಂತರ ಯೋಚಿಸೋಣ, ಅದಕ್ಕೂ ಮುಖ್ಯವಾದ ಮತ್ತೊಂದು ದೇವಾಲಯ ವಿನ ಜನರು—ಹಳೆಯ ಕಾಲದ, ಆ ದೇವಿಯಲ್ಲಿ ಭಕ್ತಿ ಇದ್ದವರು, ಏಟೆ. 'ಜ್ವಾಲಾಮುಖಿ' ಎಂದು— ಪಂಜಾಬ ಪ್ರಾಂತದಲ್ಲಿ ಕಾಂಗ್ರಾ ಜಿಲ್ಲೆಯಲ್ಲಿದೆ. ಅದು ಗುಡ್ಡಗಾಡುಪ್ರದೇಶ. ಒಳ್ಳೇ ಪುರಾತನದ ದೇವಾಲಯ. ಅಲ್ಲಿ ಯಾವಾಗಲೂ ಒಂದು ದೀಪ ಉರಿಯುತ್ತಿರುತ್ತದೆ. ಎಣ್ಣೆ, ತುಪ್ಪ ಹಾಕುವ ಕಾರಣವಿಲ್ಲ ಎಷ್ಟೋ ವರ್ಷಗಳಿಂದ ಉರಿಯುತ್ತಿದೆ. ಔರಂಗಜೇಬನು ಈ ದೀಪವನ್ನು ಆರಿಸಬೇಕೆಂದು ಎಷ್ಟೋ ಪ್ರಯತ್ನಮಾಡಿದನಂತೆ. ನೂರಾರು ಕೊಡ ನೀರು ಸುರುವಿದರೂ ಆರಲಿಲ್ಲವಂತೆ. ಮೇಲೆ ಕಲ್ಲಿನ ಗೋಡೆ ಕಟ್ಟಿಸಿದರೂ ಪ್ರಯೋಜನವಾಗಲಿಲ್ಲವಂತೆ. ಇಲ್ಲಿ ವರ್ಷಕ್ಕೊಮ್ಮೆ ಜಾತ್ರೆಯಾಗುತ್ತದೆ. ಲಕ್ಷಾವಧಿ ಜನರು ಬರುತ್ತಾರೆ. ಯಾರಾದರೂ ಪಾಪಿಷ್ಠರು ಗುಡಿಯೊಳಗೆ ಕಾಲಿಟ್ಟರೆ ದೀಪ ಆರುವುದೆಂದು ಮೂಢನಂಬಿಕೆಯೊಂದಿದೆ. ಹಾಗೆ ದೀಪ ಆರಿದರೆ, ಪೂಜಾರಿಯು ಅಲ್ಲಿದ್ದ ಎಲ್ಲ ಜನರಿಗೂ ಗುಡಿಯ ಹೊರಗೆ ಹೋಗಲಿಕ್ಕೆ ಹೇಳಿ, ಮತ್ತೆ ಕಡ್ಡಿ ಕೊರೆದು ದೀಪ ಹಚ್ಚುತ್ತಾನೆ. ದೀಪ ಉರಿಯತೊಡಗುತ್ತದೆ. ಈ ದೇವಿಗೆ ಭಯಭಕ್ತಿಯಿಂದ ನಡೆದುಕೊಳ್ಳುವ ಜನ ಎಷ್ಟೋ ಇದ್ದಾರೆ. ಯಾವಾಗಲೂ ಈ ದೀಪ ಉರಿಯುವುದರಿಂದ, ಈ ಗುಡಿಗೆ 'ಜ್ವಾಲಾಮುಖಿ' ಎಂದು ಕರೆಯುತ್ತಾರೆ."

"ಎಣ್ಣೆ ತುಪ್ಪ ಇಲ್ಲದೆ ಹಾಗೆಯೇ ಉರಿಯಬೇಕಾದರೆ ಮತ್ತು ಪಾಪಿಷ್ಠರು ಬಂದರೆ ಆರಬೇಕೆಂದರೆ, ಆ ದೇವಿಯ ಪ್ರಭಾವವೆಷ್ಟಿರಬೇಕು!" ಎಂದು ಶೀನಪ್ಪ ಉದ್ಗಾರ ತೆಗೆದ.

"ದೇವಿಯ ಪ್ರಭಾವವನ್ನೇನು ಕೇಳುತ್ತಿ, ಶೀನು? ಆ ದೀಪವೆಂದರೇನೆಂದು ತಿಳಿದಿರುವಿ? ಆ ದೇವಿಯು ಕೆಳಗಿದ್ದ ಅಗಾಧ ಭಾಂಡಾರದ ಹೆಗ್ಗುರುತು! ಆ ದೇವಿಯು ದೀಪ ಹಿಡಿದು, ಬೆಳಕು ತೋರಿಸಿ ಭಾರತೀಯರಿಗೆಲ್ಲ ಇಲ್ಲಿ ಅಗಣಿತ ಧನವಿದೆಯೆಂದು ಕರೆಯುತ್ತಿದ್ದರೂ, ಅದನ್ನು ಕೇಳುವವರ್ಯಾರು ಸಹ ಜ್ವಾಲಾವಿದ್ದಿಲ್ಲ ನಮಗೆ. ಅದು ದೇವಿಯ ಮಹಿಮೆಯೆಂದೇ ಹೊರತು ಏನೆಂದು ಯೋಚಿಸುವ ಗೊಡವೆಗೆ ಹೋಗಲಿಲ್ಲ. ಕೆಳಗೆ ದೊಡ್ಡ ಎಣ್ಣೆಯ ಕಣಿಗಳಿವೆ. ಇರಾಣ, ದಲ್ಲಿಯ ಎಣ್ಣೆಯ ಕಣಿಗಳ ಬಗ್ಗೆ ಕೇಳಿರಬಹುದು. ಬ್ರಿಟಿಶರು ಅದರ ಮೇಲಿನ ಪ್ರಭುತ್ವ ಬಿಡಲೊಪ್ಪದ್ದೂ, ಆಗಿನ ಇರಾಣದ ಮುಖ್ಯ ಮಂತ್ರಿ ಮುಸಾದಿಕರವರು nationalise ಮಾಡಲು ಪ್ರಯತ್ನಿಸಿದ್ದೂ, ಅದರ ಸಲುವಾಗಿ ಅಂಗ್ಲೋ-ಅಮೇರಿಕನ್, ರಸಿಯಾದವರಲ್ಲಾದ ತಿಕ್ಕಾಟವೂ ಇವೆಲ್ಲ ನಿಮಗೆ ಗೊತ್ತಿಲ್ಲದ ವಿಷಯಗಳಲ್ಲ. ಇಲ್ಲಿಯ ವರೆಗೆ ಭಾರತವೂ ಈ ಎಣ್ಣೆಯ ಸಲುವಾಗಿ ಬೇರೆ ರಾಷ್ಟ್ರಗಳನ್ನೇ ಅವಲಂಬಿಸಬೇಕಾಗಿತ್ತು. ಈಗ ಆಸಾಮ ಮತ್ತು ರಾಜಸ್ತಾನದಲ್ಲಿ ಸಹ ಬೇಕಾದಷ್ಟು ಎಣ್ಣೆ ಸಿಗುತ್ತದೆಂದು ಕಂಡುಹಿಡಿದಿದ್ದಾರೆ. ಅದರಂತೆ ಈ ಜ್ವಾಲಾಮುಖಿಯ ಕೆಳಗೂ ಎಣ್ಣೆಯ ಕಣಿಗಳಿವೆ. ಅದರಿಂದಲೇ ಆ ದೀಪ ಉರಿಯುತ್ತಿರುವುದು. ಈಗ ಭಾರತ ಸರಕಾರ ಆ ಗುಡಿಯನ್ನು ಕೆಡಹಿ, ಇದೇ ನವ್ಹಂಬರ್‌ನಿಂದ ಅಲ್ಲಿ ಎಣ್ಣೆ ತೆಗೆಯುವುದನ್ನು ಪ್ರಾರಂಭಿಸಬೇಕೆಂದಿದ್ದಾರೆ. ಆದರೆ ಸುತ್ತುಮುತ್ತಿ

ಪರಕಾರದವರಿಗೆ— ಆ ಗುಡಿಯನ್ನು ಮೊದಲಿನ ಹಾಗೆಯೇ ಬಿಡಬೇಕೆಂದೂ, ಅದರಲ್ಲಿ ಯಾವ ತರದ ಬದಲಾವಣೆ ಮಾಡಬಾರದೆಂದೂ ಹೇಳುತ್ತಿದ್ದಾರೆ. ಇಲ್ಲದಿದ್ದರೆ ಆ ದೇವಿಯ ಕೋಪಕ್ಕೆ ಎಲ್ಲರೂ ಗುರಿಯಾಗಬೇಕಾದೀತೆಂದು ಅವರಿಗೆ ಅಂಜಿಕೆ. "

'ಇಷ್ಟು ಎಣ್ಣೆಯ ಕಣಿಗಳಾದ ಬಳಿಕ ಭಾರತದ ಬಡತನ ಇಷ್ಟೂ ಮಟ್ಟಿಗೆ ಕಡಿಮೆಯಾದಂತಿ. ಮತ್ತೊಂದು ದೇಶದ ಮೇಲೆ ಅವಲಂಬಿಸುವ ಕಾರಣವೇ ಇಲ್ಲ!' ಎಂದು ರಂಗಪ್ಪ ನುಡಿದ.

'ಆಹುದಹುದು! ನಮಗಷ್ಟೇ ಏಕೆ? ನಾವು ಬೇರೆ ದೇಶಗಳಿಗೆ ಕೂಡ ಕೊಡಬಹುದು!' ಎಂದು ಗುಂಡುಮಾಮಾ ಹೆಮ್ಮೆಯಿಂದ ಹೇಳಿದರು.

ಶೀನಪ್ಪನಿಗೆ ಈ ಗುಂಡೂಮಾಮಾನ ಎಣ್ಣೆಯ ಪುರಾಣ ರುಚಿಸಲಿಲ್ಲ. ವಿಷಯವನ್ನು ಬದಲಿಸಲಿಕ್ಕೆ ಮತ್ತೊಮ್ಮೆ ಪ್ರಯತ್ನ ಮಾಡಿದ: 'ಅದೇನು ಗುಂಡೂಮಾಮಾ, ಮಹಾಭಾರತದಲ್ಲಿ ಉಲ್ಲೇಖಿಸಿದ ಸಂಗತಿಗಳನ್ನು ಮತ್ತು ಪ್ರದೇಶಗಳನ್ನಷ್ಟೇ ಹೇಳಿದಿರಲ್ಲ! ರಾಮಾಯಣದ ಕುರುಹುಗಳೇನೂ ಉಳಿದೇ ಇಲ್ಲವೆ?'

ಈ ಸಾರೆ ಶೀನಪ್ಪನ ಪ್ರಯತ್ನ ಫಲಿಸಿದಂತಾಯಿತು. ಗುಂಡೂಮಾಮಾನ ಮೋರೆಯ ಮೇಲಿನ ಕಳೆ ಬದಲಾಗತೊಡಗಿತು. ಕಾರಣ ಗೊತ್ತಾಗದಿದ್ದರೂ ಶೀನಪ್ಪನ ಮುಖವರಳಿತು. ಗುಂಡೂಮಾಮಾ ಹೇಳತೊಡಗಿದರು: " ರಾಮಾಯಣವೆಂದಕೂಡಲೆ, ಜನಕ ಮಹಾರಾಜನ ನೆನಪಾಗುತ್ತದೆ. ಅವನ ಸಭೆಯಲ್ಲಿ ನಡೆದ ಯಾಜ್ಞವಲ್ಕ್ಯ ಮತ್ತು ಗಾರ್ಗಿಯ ಸಂವಾದ.....ಅದನ್ನು ಕೇಳಬೇಡ ಶೀನೂ, ಅದನ್ನು ನೆನೆದರೆ ನಾವು ಅಂತಹ ಆರ್ಯರ ವಂಶಜರೆಂದು ಹೇಳಿಕೊಳ್ಳಲಿಕ್ಕೆ ನಾಚಿಕೆ ಬರುತ್ತದೆ! ಉತ್ತರಭಾರತದ ನಿವಾಸಿಗಳನ್ನೆಲ್ಲ ದೈತ್ಯರೆಂದು ಕರೆದು ಏನಾದರೊಂದು ನೆವದಿಂದ ಅವರನ್ನು ನಿರ್ನಾಮಮಾಡಿ ಅವರ ಭೂಮಿಯನ್ನು ಎತ್ತಿಹಾಕಿದರು. ಬೇಕಾದಷ್ಟು ಸಹಾಯ ಮಾಡಿದರೂ ಸುಗ್ರೀವ-ಹನುಮಂತರಂತಹ ವೀರರನ್ನೂ ಕಪಿಗಳೆಂದು ತುಚ್ಛವಾಗಿ ಭಾವಿಸಿದರು. ರಾವಣನಂತಹ ಸುಸಂಸ್ಕೃತ ಅಸಾಮಾನ್ಯ ಶಿವಭಕ್ತ ನನ್ನು ಇಲ್ಲದ್ದೊಂದು ನೆವಮಾಡಿ ಅನ್ಯಾಯದಿಂದ ಸಂಹರಿಸಿದರು. ದಕ್ಷಿಣ ಭಾರತದಲ್ಲಿದ್ದ ಅತ್ಯುತ್ತಮ ಸಂಸ್ಕೃತಿಯನ್ನು ನಾಶಗೊಳಿಸಲು ಪ್ರಯತ್ನಿಸಿ, ಸಾಧ್ಯವಾಗದೆ ತಮ್ಮ್ಯದನ್ನು ಆದರಲ್ಲಿ ಬೆರೆಯಿಸಿದರು. ಇದನ್ನೇ ನೋಡಿದರೆ, ರಾಮಸ್ವಾಮಿ ನಾಯಕರವರು ಸ್ಥಾರಂಭಿಸಿದ ದ್ರಾವಿಡ [illegible]ನದ ಚಳವಳಿಗೆ ಅಲ್ಲವೆನ್ನುವ ಹಾಗಿಲ್ಲ. "

ಈಗ ಗುಂಡೂಮಾಮಾ ಈಗ Moodನಲ್ಲಿ ಬಂದರೆಂದು ಶೀನಪ್ಪನಿಗೂ ಉತ್ಸಾಹ ಹೇಳತೀರದು. 'ಗುಂಡೂಮಾಮಾ, ಯಾಜ್ಞವಲ್ಕ್ಯ-ಗಾರ್ಗಿ ಇವರ ಸಂವಾದವೇನು? ಆರ್ಯರು ಅಂತಹದೇನು ಮಾಡಿದರು?' ಎಂದು ಕೇಳಿದ.

ರಾತ್ರಿ ಹತ್ತರ ಗಂಟೆ ಕೇಳಿಸಿತು. 'ಈಗ ಹೊತ್ತಾಯಿತು. ಯಾತ್ರಾಸ್ಪೆಶಲಿಗೆ [illegible]ಂತೂ ರದ್ದಾಗಿದೆ. ನಾಳಿನ ದಿವಸ ಆ ಪ್ರಕರಣ ಹೇ[illegible] ಎಂದು ಗುಂಡೂಮಾಮಾ ನುಡಿದ ಬಳಿಕ, ಎಲ್ಲರೂ ಅಲ್ಲಿಂದ ಹೊರಟೆವು.

ಭೂಕ್ರಾಂತಿ

ಶ್ರೀ. ಎಚ್. ಜೆ. ಉಪಾಧ್ಯಾಯ, ಎಂ. ಎ. ಹೈದರಾಬಾದ್

ಭರದಿ ತಂದಿತೋ ಬಿಡುಗಡೆಯ ಸಿರಿಯ ಶಾಂತಿಸತ್ಯಸಮರ,
ತಾರದಿಹುದೆ ವರಭೂಮಿಕಾಂತಿಯನು ಹೃದಯಪ್ರೀತಿ ಪೂರ.
ತ ಯಿಗಿಹುದು ಬಹುದಿನದ ಬಯಕೆ ಕಾದಾಟವಲ್ಲ, ಕೂಟ,
ಇದ್ದುದೆಲ್ಲವನು ಇರುವರೆಲ್ಲರೂ ಉಂಡು ನಲಿಸಿ ನೋಟ.
ತ್ಯಾಗ-ಭೋಗಗಳ ಸಮದ ಬೆರಕೆಯೇ ಬಾಳಸೊಗದ ಸಾರ,
ಚಾಗದೈಸಿರಿಗೆ ತಲೆಯ ಬಾಗಿದನಶೋಕನಂಥ ವೀರ.
ಬಲದಿ ಗೆದ್ದರೂ ಮನದಿ ಸೋತನೋ ಕಂಡು ಜನರ ತಾಪ,
ಹೃದಯದೊಲವೆ ಹಿರಿದಾದ ಗೆಲವು ಎಂದರಿತನಾಗ ಭೂಪ.
ಮರಳಿ ನಾಡ ನಾಡವರಿಗಿತ್ತು ತಾ ಮನದ ಶಾಂತಿ ಪಡೆದ,
ಬುದ್ಧ ಜನರ ಬಾಳ್ಬೆಳಗಲೆಂದೆ ಶ್ರೀಬುದ್ಧತತ್ತ್ವ ಹಿಡಿದ.
ಭೋಗದಿಂದೆ ಭೋಗಾಖಿಲಾಷೆ ಹೆಚ್ಚೀತು ಇರದೆ ತೃಪ್ತಿ,
ತ್ಯಾಗಜೀವನದಿ ಭೋಗವರಸುವುದೆ ಸದಾನಂದ ಮುಕುತಿ.
ದೀನಜನಕೆ ತನುಮನವನೆರೆದನೊ ವಿನೋಬಾ ಹಿರಿತ್ಯಾಗಿ,
ಬೆಂದ ಹೃದಯುಗಳ ಮುರಿದ ಮನಸುಗಳ ಸಂತಯಿಸುವ ಯೋಗಿ.

ಸರಿಲ್ಲದೆಯೆ ಬೇಸರಿಯದೆ ಹೊರಟಿರುವ ಶಾಪಹಾರಿ,
ಮುಪ್ಪು ಬಂದರೂ ಮೆತ್ತಗಾಗ ನಿಶಸ್ತ್ರ ಕ್ರಾಂತಿಕಾರಿ.
ಬಲಿಯ ಬೇಡಿ ತನಗಾಗಿ ಭೂಮಿಯನು ಕುಬುಜನಾದ ದೇವ,
ಭೂಮಿಯಜ್ಞದಲಿ ಬಾಳ ಬೇಳ್ದನೋ ಈ ಮಹಾನುಭಾವ.
ಭೂಮಿಪಡೆದ ಮರುಚಣವೆ ದಾನಿಯನು ತುಳಿದ ಜಗದ ಕಾವ,
ಭೂಮಿಕೊಟ್ಟವರ ಹರಸಿಹಾಡುವನು ದೀನರ ಈ ದೇವ.
ಭರತಭೂಮಿಯಲಿ ಭೂಮಿಕ್ರಾಂತಿಯೇ ರೀತಿ ನೀತಿ ಮೇಲು,
ಮನುಜನೊಳ್ಳತದಿ ನಂಬಿ ನಡೆದರಿಗೆ ಎಲ್ಲಿ ಇಹುದು ಸೋಲು?
ಕೇಳಿದಾಗ ಮನಮೊಸೆದು ಈಯುವುದೆ ದಾನಿಜನರ ಗೆಲವು,
ಯಾರು ಬಲ್ಲರೋ ಮುಂದೆ ಏನಿಹುದು ಯಾವ ತಾಪ ನೋವು!
ಭೂಮಿ ದಾನ ಬೇಡಲು ಬಂದಿಹೆ ಬೈರಾಗಿ ಮನದಿ ನೊಂದು,
ದಾನ ಗೈದು ಬಹು ಧನ್ಯರಾಗಿರೋ ಭೂಮಿಯೊಡೆಯರಿಂದು.
ಭಾಗ್ಯನಗರ ಸೌಭಾಗ್ಯಕಾರಿ ಪೋಚಮದ ಪುಟ್ಟ ಹಳ್ಳಿ,
ಮಿಹೀನರಿಗೆ ನೆಲವನೀವ ಭೂಕ್ರಾಂತಿ ಹುಟ್ಟಿತಲ್ಲಿ.

ಬೆಳಕು-ಕತ್ತಲೆ

ಶ್ರೀ. ಮಹಾದೇವ ಬಣಕಾರ, ಧಾರವಾಡ

ಆ ದಿನದ ಮುಚ್ಚಂಜೆ, ಬುದ್ಧಿಮಂಕಾಗಿರಲು,
ಅಂತರಾಳದ ಕೂಗು ಕೇಳಿತಂತು:
'ಜೀವನದಿ ಬದುಕೆ ಏಳು ಬೀಳಿನ ಸಂತೆ'
ಎಂದೆನ್ನೆ ಶಿಸಿತು ಜ್ಞಾನತಂತು!

'ಸಿರಿ ಇರಲಿ, ಉರಿ ಇರಲಿ; ರೋಗ-ಭೋಗಗಳಿರಲಿ
ಇದ್ದುದೆ ಹಸಾದವೆಂಬಾತ್ಮವಿರಲಿ;
ನಿನಗಿರುವ ಚಿತ್ತ, ಮನ, ಭಾವ, ಬುದ್ಧಿಗಳೆಲ್ಲ
ಕಲ್ಲಿನಲ್ಲಿಯು ಹೂವ[illegible]ನಲ್ಲಿ!'

ಹೀಗೆಂದ ಭಾವನೆಯ, ಬಲವಾ[illegible]ನೆಯ
ನಂಬಿ ನಚ್ಚಿರ್ದಂತೆ ಕುಳಿತುಬಿಟ್ಟೆ;
ಮತ್ತೆ ಮರುಚಣದಲ್ಲಿ ಅನುಭವವು ಹೊರಹೊಮ್ಮಿ
ಹೊನಲಾಗಿ ಹರಿಯೆ ನಾ ತೇಲಿಬಿಟ್ಟೆ!

ಭಾವನೆಯ ಕಾಮನೆಯು ಕಟ್ಟಿರುವ ಈ ಕನಸು
ಕಲ್ಪನಾಜೀವನದೊಳಪ್ಪೆ ಸಾಧ್ಯ;
ಆಕೆ-ಆಕಾಂಕ್ಷೆಗಳ-ರೋಷ-ಹಾಲಾಹಲದ
ನಂಜಿಹುದು ಅನುಭವಿಕಗಿಹುದು ನೇಧ್ಯ!

ಎಂದೆನುತ ಭಾವನೆಯ ವೈರಿ ತಾ ಅನುಭವವು
ಜೀವನದ ಕಟುಸತ್ಯವನ್ನೆ ನುಡಿದು,
ಕುಳ್ಳಿರಿಸಿತೆನ್ನನ್ನು ಯೋಚನಾಯೋಗದಲಿ
ನನ್ನ ದೆನ್ನುವುದನ್ನೆ ತಾನು ಪಡೆದು!

ಮುಂದೆ ಯೋಚನೆ ಶೂನ್ಯ, ಬುದ್ಧಿ-ಭಾವನೆ ಶೂನ್ಯ
ದಿಙ್ಮೂಢನಾಗಿ ನಾ ಕುಳಿತುಕೊಂಡೆ;
ಸುಖವನೋ ದುಃಖವನೊ—ಯಾವುದನ್ನಾರಿಸಲಿ!
ಎನ್ನುತಿರೆ ನನ್ನವಳ ಬರುವ ಕಂಡೆ!

ಬಂದವಳೆ ಪಾರ್ವತಿಯು ತಂದ ದೀವಿಗೆಯನ್ನು
ಕೋಣೆಯೊಳಗಟ್ಟಾಗ ಬುದ್ಧಿ ಬಂತು;
ನನ್ನೆಲ್ಲ ಯೋಚನೆಗೆ ಪರಿಹಾರ ಒದವಿಸಲು
ದೀವಿಗೆಯ ರೂಪದಲಿ ಜ್ಞಾನ ಬಂತು!

ಮೊದಲಿದ್ದ ಬೆಳಕನ್ನು ಕತ್ತಲೆಯು ನೆರೆ ನುಂಗಿ
ಕೋಣೆಯೊಳಗೆಲ್ಲೆಲ್ಲು ಹಬ್ಬಿದ್ದಿತು;
ನನ್ನವಳು ತಂದಿರ್ದ ದೀವಿಗೆಯನಲ್ಲಿಡಲು
ಬೆಳಕು ಚೇತನೆಗೊಂಡು ಮೂಡಿಬಂತು!

ಮತ್ತೆ ಯೋಚನೆಗೈದು, ದೀಪವನು ಆರಿಸಿದೆ
ಕೂಡಲೇ ಬೆಳಕಿಂಗೆ ಸಾವು ಬಂತು—
ಬೆಳಕನ್ನು ನೆರೆನುಂಗಿ ಸಾವನ್ನು ತರುವಂಥ
ಶಕ್ತಿ ಕತ್ತಲೆಯಲ್ಲಿ ಹೇಗೆ ಬಂತು?

ಮತ್ತೆ ಮೌನಿತನಾಗಿ ದೀಪವನು ಹಚ್ಚಿದೆನು
ಅನಿತರೊಳೆ ಕತ್ತಲೆಯು ಕಥಗಿಹೋಯ್ತು!
ಹೀಗಿರುವ ಈ ಎರಡು ದಿವ್ಯಶಕ್ತಿಗಳಲ್ಲಿ
ಹಿರಿದು-ಕಿರಿದೆಂಬುದೇ ತೋರದಾಯ್ತು!

ಇಂತಿಹವು ಸುಖ-ದುಃಖವೆಂದವೇಲಿನ್ನೇನು
ಬೇಕು ಬೇಡಗಳೆಂಬ ಶಂಕೆಯಿಲ್ಲ;
ಬಹುದೆಲ್ಲ ಬಂದರೂ, ಇಹುದೆಲ್ಲ ಹೋದರೂ
ದುಃಖವೆಂಬಾ ಸೊಲ್ಲೆ ಬಾಳಿಗಿಲ್ಲ!

ಪ್ರೇಮಪಾಠ

(ಪತ್ರಕಥೆ)

ಶ್ರೀ. ಸಂಜೀವ ಲಕ್ಷ್ಮೇಶ್ವರ. ಬಿ. ಎ. ಮುಂಬಯಿ

ಲೈಂಗಿಕ ಆಕರ್ಷಣೆಗೆ ಒಳಗಾದ ಮುಗ್ಧಮನುಷ್ಯ, ಎಂತೆಂತಹ ಹುಚ್ಚಾಟಗಳಲ್ಲಿ ಬಿದ್ದು ನಗೇಗೀಡು ಆದಾನೆಂಬುದರ ನಿಯಮವಿಲ್ಲ. ಕರಿಪಿಟ್ಟ ಮಾಸ್ತರರಂತಹ ಅಶಕ್ತಮನಸ್ಕರನ್ನು, ತುಂಟ ಹುಡುಗನೊ[illegible]ಡ ಹೇಳಿದಂತೆ ಕುಣಿಸಬಹುದು!

(೧)

೨೦ ಮಾರ್ಚ್ ೩೫

ಶ್ರೀ ರಾಮರಾವ ಕುಲಕರ್ಣಿ ಅವರಿಗೆ—

ವಂದನೆಗಳು. ತರುವಾಯ ಈಗ ಈ ಪತ್ರ ಬರೆಯಲು ಕಾರಣವೇನೆಂದರೆ, ತಮ್ಮ ಚಿರಂಜೀವನಾದ ರಮಾಕಾಂತನ ವರ್ತನೆಯ ಬಗ್ಗೆ ಅವನ ಪಾಲಕರಾದ ತಮಗೆ ತಿಳಿಸುವುದು ಅವಶ್ಯವೆಂದು ಕಂಡುಬಂದದ್ದರಿಂದ, ಈ ಓಲೆ ಬರೆಯುವ ಸಾಹಸ ಮಾಡಿದ್ದೇನೆ. ತಮ್ಮ ಚಿರಂಜೀವನು ನನ್ನ ವರ್ಗದಲ್ಲಿ ಕಲಿಯುತ್ತಿರುವುದರಿಂದ, ಅವನ ಬಗ್ಗೆ ವಿವರವಾದ ಮಾಹಿತಿ ಕೊಡುವುದು ಆ ವರ್ಗದ ಶಿಕ್ಷಕನಾದ ನನ್ನ ಕರ್ತವ್ಯವೆಂದು ತಿಳಿದಿದ್ದೇನೆ.

ವರ್ಗದ ಅಭ್ಯಾಸದ ಕಡೆಗೆ ಅವನ ಲಕ್ಷ್ಯವು ಇಲ್ಲವೆಂದರೂ ಅಡ್ಡಿ ಇಲ್ಲ. ಅವನ ಅತ್ಯಂತ ಆಸ್ಥೆಯುಳ್ಳ ವಿಷಯವೆಂದರೆ, ಮೇಲಿಂದ ಮೇಲೆ ಚಿತ್ರಪಟಗಳನ್ನು ನೋಡುವುದು. ಸಿನಿಮಾ ನೋಡಲು ಶಾಲೆಯನ್ನು ತಪ್ಪಿಸಿ ಕೂಡ ಅವನು ಹೋದದ್ದು ಉಂಟು. ವಿದ್ಯಾರ್ಥಿಯಾದ ಅವನಿಗೆ ಈ ಚಟವು ಎಷ್ಟೂ ಶೋಭಿಸುವುದಿಲ್ಲ—ಎಂದು ನನ್ನ ಮತ. ಈ ವಿಷಯದಲ್ಲಿ ಹಿರಿಯರಾದ ನೀವು ಕೂಡ ಇದೇ ಅಭಿಪ್ರಾಯ ತಳೆಯುವಿರೆಂದು ನಂಬಿದ್ದೇನೆ. ಅದರಂತೆ ಈ ವಿಷಯದಲ್ಲಿ ಅವನಿಗೆ ತಮ್ಮ ಪ್ರೋತ್ಸಾಹನವೂ ಇಲ್ಲವೆಂದು ನನ್ನ ನಂಬಿಕೆ.

ಅವನ ಈ ನಡತೆಗ ನಿನ್ನೆಯ ಉದಾಹರಣವೇ ಸಾಕು: ನಿನ್ನೆ ಮಧ್ಯಾಹ್ನ ಅವನು ವರ್ಗದಲ್ಲಿ ಕಾಣಲಿಲ್ಲವಾದ್ದರಿಂದ, ಅವನ ಬಗ್ಗೆ ವಿಚಾರಿಸಲಾಗಿ, ಅವನು "ಶ್ರೀ ೪೨೦" ಚಿತ್ರಪಟಕ್ಕೆ ಹೋದದ್ದು ತಿಳಿಯಿತು. ಆದ್ದರಿಂದ ತಾವೂ ಅವನಿಗೆ ಯೋಗ್ಯವಾದ ಬುದ್ಧಿವಾದ ಹೇಳಬೇಕೆಂದು ಕೋರಿ ಈ ಪತ್ರವನ್ನು ಮುಗಿಸುವೆನು.

ತಮ್ಮ ವಿಶ್ವಾಸಿ,
ಕೆಂ. ಪು. ಕರಿಪಿಟ್ಟಿ

ಸಪ್ಟೆಂಬರ್ ೧೯೩೫.

(೨)

೩೧ ಮಾರ್ಚ್ ೩೫

ಶ್ರೀ. ಕೆಂ. ಪು[illegible]ಪ್ಪ ಅವರಿಗೆ—

ವಂದನೆಗ[illegible]ರುವಾಯ ತಮ್ಮ ಓಲೆ ತಲುಪಿ ವಿಷಯು ತಿಳಿಯಿತು. ನಮ್ಮ ತಂದೆಯವರು ಅಡಾರಿ ಇರುವುದರಿಂದ, ತಮ್ಮ ಪತ್ರಕ್ಕೆ ಉತ್ತರ ಬರೆಯುವ ಕೆಲಸ ನನ್ನ ಪಾಲಿಗೆ ಬಂದಿದೆ. ಅವರ ಆದೇಶದಂತೆ ಈ ಪತ್ರ ಬರೆಯುತ್ತಿದ್ದೇನೆ.

ಚಿ. ರಮಾಕಾಂತನ ನಡತೆಯ ಬಗ್ಗೆ ನೀವು ನಮಗೆ ತಿಳಿಸಿದ್ದಕ್ಕಾಗಿ ನಾವು ಬಹಳೇ ಕೃತಜ್ಞರಾಗಿದ್ದೇವೆ. ಅವನ ವರ್ತನವನ್ನು ಸುಧಾರಿಸಲು ಮನೆಯಲ್ಲಿ ನಾವೆಲ್ಲರೂ ಎಲ್ಲ ತರದ ಪ್ರಯತ್ನ ಮಾಡುವುದಾಗಿ ಈ ಮೂಲಕ ಭರವಸೆ ಕೊಡುತ್ತೇನೆ. ಈ ವಿಷಯದಲ್ಲಿ ತಮ್ಮಂತಹ ನುರಿತ ಶಿಕ್ಷಕರ ಸಹಾಯ ಅತ್ಯವಶ್ಯ. ನೀವೂ ಎಲ್ಲ ರೀತಿಯಿಂದಲೂ ಆ ದಿಶೆಯಿಂದ ಪ್ರಯತ್ನಿಸಬೇಕಾಗಿ ವಿನಂತಿ.

ನಮ್ಮ ಆರ್ಥಿಕಪರಿಸ್ಥಿತಿಯು ಸರಿಯಾಗಿರದ ಮೂಲಕ್ಕ, ಚಿ. ರಮಾಕಾಂತನಿಗೆ ಶಾಲೆಯಲ್ಲಿ ಪೂರ್ಣ ಮಾಫೀ ಆಗಬೇಕೆಂದು ನಮ್ಮೆಲ್ಲರ ಇಚ್ಛೆಯಿದೆ. ಅದರ ವಿನಾ ಅವನ ವಿದ್ಯಾಭ್ಯಾಸವು ಮುಂದುವರೆಯುವುದು ಅಸಾಧ್ಯವಾಗುವುದು. ದಯಾಳುಗಳಾದ ತಾವು ಈ ವಿಷಯದಲ್ಲಿ ಪ್ರಯತ್ನ ಮಾಡಿ ನಮಗೆ ಅತ್ಯಂತ ಉಪಕಾರ ಮಾಡಿದಂತಾಗುವುದು.

ಇಷ್ಟೆಲ್ಲ ಪತ್ರ ಬರೆದು ನನ್ನ ವಿಷಯವನ್ನೇ ಬರೆಯಲು ಮರೆತು ಬಿಟ್ಟೆ. ನಾನು ಚಿ. ರಮಾಕಾಂತನ ಅಕ್ಕನಿದ್ದು, ಕಾಲೇಜಿನಲ್ಲಿ ಕಲಿಯುತ್ತಿದ್ದೇನೆ. ನನ್ನ ಹೆಸರು 'ಕುಮಾರಿ ರಮಾ ಕುಲಕರ್ಣಿ'

ತಮ್ಮ ವಿಶ್ವಾಸಿ
ರಮಾ. ಕುಲಕರ್ಣಿ

(೩)

೧೧ ಮಾರ್ಚ್ ೫೫

ಕುಮಾರಿ ರಮಾತಾಯಿ ಅವರಿಗೆ—

ವಂದನೆಗಳು. ತಾವು ಚಿ. ರಮಾಕಾಂತನೊಡನೆ ಕಳಿಸಿದ ಓಲೆ ತಲುಪಿತು. ನನ್ನ ಪತ್ರಕ್ಕೆ ತಾವು ಬೇಗನೇ ಉತ್ತರ ಕಳಿಸಿದ್ದಕ್ಕಾಗಿ ಆಭಾರಿಯಾಗಿದ್ದೇನೆ. ಚಿ. ರಮಾಕಾಂತನ ಬಗ್ಗೆ ತಾವು ಯೋಚನೆ ಮಾಡುವ ಕಾರಣವಿಲ್ಲ. ಅವನನ್ನು ನನ್ನ ತಮ್ಮನೆಂದೇ ತಿಳಿದಿದ್ದೇನೆ. ಅವನ ಸುಧಾರಣೆಗೆ ಸಾಧ್ಯವಿರುವುದನ್ನೆಲ್ಲ ಮಾಡುವುದಾಗಿ ತಮಗೆ ಭರವಸೆ ಕೊಡುವೆನು. ಅವನ ಮಾಫಿಯ ಬಗ್ಗೆ ನಾನು ಎಲ್ಲ ರೀತಿಯ ಪ್ರಯತ್ನ ಮಾಡಿ, ಅವನಿಗೆ ಪೂರ್ಣ ಮಾಫೀ ಮಾಡಿಸುವೆನು. ಈ ಮೂಲಕವಾಗಿ ತಮ್ಮಂತಹ ವಿದ್ಯಾವತಿಯರ ಪರಿಚಯವಾದದ್ದು ನನ್ನ ಪರಮಭಾಗ್ಯವೆಂದು ತಿಳಿದಿದ್ದೇನೆ. ನಿಮ್ಮ ಸೇವೆ ಮಾಡಲು ನನಗೆ ಅತ್ಯಂತ ಆನಂದ ಹಾಗೂ ಅಭಿಮಾನ ಎನಿಸುತ್ತದೆ.

ತಮ್ಮ

ಕೆಂ. ಪು. ಕರಿಪಿಟ್ಟಿ

(೪)

೨೩ ಮಾರ್ಚ್ ೫೫

ಶ್ರೀ. ಕರಿಪಿಟ್ಟಿ ಅವರಿಗೆ—

ಅನಂತ ವಂದನೆಗಳು. ತಮ್ಮ ಕೃಪಾಪತ್ರವನ್ನು ಓದಿ ಆನಂದವಾಯಿತು. ತಾವು ನಮಗೆ ತೋರುತ್ತಿರುವ ಸಹಾನುಭೂತಿಗಾಗಿ ನಾವು ತುಂಬ ಕೃತಜ್ಞರಾಗಿದ್ದೇವೆ. ಚಿ. ರಮಾಕಾಂತನನ್ನು ತಮ್ಮ ತಮ್ಮನೆಂದು ತಿಳಿಯುವುದಾಗಿ ಬರೆದದ್ದನ್ನು ಓದಿ, ತಮ್ಮ ಬಗ್ಗೆ ಆದರಾಭಿಮಾನಗಳು ಉಂಟಾದುವು. ಇನ್ನು ನೀವು ಅವನ ಮಾಫಿಯ ಬಗ್ಗೆ ವಿಶ್ವಪ್ರಯತ್ನ ಗೂಡುವಿರೆಂಬ ಭರವಸೆ ನನಗಿದೆ.

ತಾವು ತಮ್ಮ ಹಿಂದಿನ ಓಲೆಯಲ್ಲಿ, ನನ್ನ ಸೇವೆ ಮಾಡಲು ತಮಗೆ ಅಭಿಮಾನವೆನಿಸುವುದೆಂದು ಬರೆದಿರುವಿರಿ. ಆದರೆ ತಾವು ನನ್ನ ಸೇವೆ ಮಾಡಬೇಕೆಂದು ನನಗೆ ಎನಿಸುವುದಿಲ್ಲ. ತಮ್ಮ ಕಡೆಯಿಂದ ಸೇವೆ ತೆಗೆದುಕೊಳ್ಳುವ ಯೋಗ್ಯತೆ ನನಗೆ ಇಲ್ಲ. ತಾವು ಮಾಡುತ್ತಿರುವ ಈ ಉಪಕಾರವನ್ನು ಯಾವ ರೀತಿಯಿಂದ ತೀರಿಸಬೇಕೋ ತಿಳಿಯದಾಗಿದೆ.

ತಮ್ಮ ಸೇವಾಕಾಂಕ್ಷಿಣಿ

ರಮಾ ಕುಲಕರ್ಣಿ

(೫)

೨೪ ಮಾರ್ಚ್ ೫೫

ಕುಮಾರಿ ರಮಾ ಕುಲಕರ್ಣಿಯವರಿಗೆ—

ಸಪ್ರೇಮ ನಮಸ್ಕಾರಗಳು. ತಮ್ಮ ಪತ್ರ ತಲುಪಿ ಎಲ್ಲ ಸಂಗತಿ ತಿಳಿಯಿತು. ನನ್ನ ಉಪಕಾರ ತೀರಿಸುವ ಬಗ್ಗೆ ನೀವು ವಿಚಾರ ಮಾಡುವ ಕಾರಣವಿಲ್ಲ. ಏಕೆಂದರೆ ಜನತೆಯ ಸೇವೆ ಮಾಡುವುದು, ಜನತೆಗೆ ಸಹಾಯ ಮಾಡಿ ಅವರ ತೊಂದರೆಗಳನ್ನು ದೂರ ಮಾಡುವುದು–ಇದೇ ನನ್ನ ಕರ್ತವ್ಯ ಎಂದು ತಿಳಿದಿದ್ದೇನೆ. ಈ ಉದ್ದೇಶದಿಂದಲೇ ಚಿ. ರಮಾಕಾಂತನಿಗೆ ಪೂರ್ಣ ಮಾಫೀ ಮಾಡಿಸುವ ಹೊಣೆ ಹೊತ್ತಿದ್ದೇನೆ. ಇಂದು ನನ್ನು ಹೆಡ್‌ಮಾಸ್ತರರನ್ನು ಭೆಟ್ಟಿಯಾಗಿ ಮಾಫಿಯ ಸಂಬಂಧದಲ್ಲಿ ಹೇಳಿದ್ದೇನೆ. ಬಹುತರವಾಗಿ ಅವನಿಗೆ ಮಾಫೀ ಆಗುವುದು.

ಈಗ ನಿಮ್ಮ ತಂದೆಯವರ ಪ್ರಕೃತಿ ಹೇಗಿದೆ—ತಿಳಿಯಲಿಲ್ಲ. ಅದಕ್ಕಾಗಿ ನಾನು ಕಾತರನಾಗಿದ್ದೇನೆ. ತಾಯಿ-ತಂದೆಗಳ ಆರೈಕೆಯಲ್ಲಿ ನೀವು ಸುಖವಾಗಿರುವುದನ್ನು ನೋಡಿ ನನಗೆ ಅಭಿಮಾನವೆನಿಸುವುದು. ನಾನು ದುರ್ದೈವಿಯಾದುದರಿಂದ ಒಬ್ಬನೇ ಇರಬೇಕಾಗಿದೆ. ನನ್ನ ತಾಯಿ ತಂದೆಗಳು ತೀರಿಹೋಗಿದ್ದಾರೆ. ಈಗ ನಾನೊಬ್ಬನೇ ಇರುವುದರಿಂದ, ಅಡಿಗೆ ಮಾಡಿಕೊಳ್ಳುವುದರಿಂದ ಮೊದಲಾಗಿ ಎಲ್ಲ ಕೆಲಸಗಳನ್ನು ನಾನೇ ಮಾಡಿಕೊಳ್ಳಬೇಕಾಗಿದೆ. ಇಂತಹ ಕಷ್ಟದ ದಿನಗಳಿಗೆ ಎಂದು ಕೊನೆ ಇದೆಯೋ ದೇವರೇ ಬಲ್ಲ. ನಿಮ್ಮ ಆತ್ಮೀಯತೆಯ ಆಶ್ರಯದಲ್ಲಿ ನನ್ನ ಎಲ್ಲ ದುಃಖಗಳು ಕಡಿಮೆ ಆಗುತ್ತಿವೆ. ನೀವು ತೋರಿಸುತ್ತಿರುವ ಆತ್ಮೀಯತೆಯ ಮೂಲಕ ನನ್ನ ಎಲ್ಲ ಸುಖ-ದುಃಖಗಳನ್ನು ತಮ್ಮ ಮುಂದೆ ತೋಡಿಕೊಂಡು ಹೃದಯಭಾರವನ್ನು ಕಡಿಮೆ ಮಾಡಿಕೊಂಡಿದ್ದೇನೆ.

ಇಂತಿ ತಮ್ಮ

ಕೆಂ. ಪು. ಕರಿಪಿಟ್ಟಿ

(೬)

೨೮ ಮಾರ್ಚ್ ೫೫

ಮಾನ್ಯಶ್ರೀ ಕರಿಪಿಟ್ಟಿ ಅವರಿಗೆ—

ವಂದನೆಗಳು. ತಮ್ಮ ಪತ್ರಕ್ಕೆ ಉತ್ತರ ಬರೆಯಲು ತಡವಾದದ್ದಕ್ಕೆ ಕ್ಷಮೆ ಇರಲಿ. ನಿಮ್ಮಂತಹ ಸುಸಂಸ್ಕೃತ, ದಯಾಮಯಿಗಳಾದ ಗೃಹಸ್ಥರು ದೊರೆಯುವುದು ಅತಿ ದುರ್ಲಭ. ತಮ್ಮ ಕೃಪೆಯಿಂದಲೇ ಚಿ. ರಮಾಕಾಂತನಿಗೆ ಪೂರ್ಣ ಮಾಫೀ ಆಗುವುದರಲ್ಲಿ ಸಂಶಯವಿಲ್ಲ. ಅದಕ್ಕಾಗಿ ಆಭಾರಿ ಆಗಿದ್ದೇವೆ.

ತಾವು ತಮ್ಮ ವೈಯುಕ್ತಿಕ ವಿಷಯಗಳನ್ನು ಪತ್ರದ ಮೂಲಕ ತಿಳಿಸಿರುವಿರಿ. ತಾವೊಬ್ಬರೇ ಇರುವುದನ್ನು ಓದಿ ಅತ್ಯಂತ ಖೇದವಾಯಿತು. ತಮಗೆ ಎಲ್ಲ ರೀತಿಯಿಂದ ಸಹಾಯ ಮಾಡಬೇಕೆಂದು ನನ್ನ ಇಚ್ಛೆ ಇದೆ. ತಿ || ರಾ || ರಾ || ತಂದೆಯವರ ಆರೋಗ್ಯ ಸುಧಾರಿಸುತ್ತಿದೆ. ಚಿಂತೆಗೆ ಕಾರಣವಿಲ್ಲ.

ತಮ್ಮ

ರಮಾ ಕುಲಕರ್ಣಿ

(೭)

೨೯ ಮಾರ್ಚ್ ೫೫

ಕುಮಾರಿ ರಮಾ ಕುಲಕರ್ಣಿಯವರ ಸನ್ನಿಧಿಗೆ—

ತಮ್ಮ ಪತ್ರ ತಲುಪಿತು. ನನ್ನ ಬಗ್ಗೆ ತಮಗೆ ಉಂಟಾದ ಖೇದವನ್ನು ಓದಿ, ತಮ್ಮ ಬಗ್ಗೆ ಅತ್ಯಂತ ಆದರ ಭಾವನೆ ಉಂಟಾಯಿತು. ತಮ್ಮ ದಯಾಳುತನದ ಪ್ರತೀಕವೇ ಆ ಪತ್ರವಾಗಿತ್ತು. ತಮ್ಮಂತಹ ಸುಶಿಕ್ಷಿತ ತರುಣಿಯ ಆದರಕ್ಕೆ ಪಾತ್ರನಾದ ನಾನು ಧನ್ಯನೇ ಸರಿ.

ನಾನು ಪಟ್ಟ ಕಷ್ಟದ ಫಲವಾಗಿ ನಾನೊಂದು ಕಾದಂಬರಿ ಬರೆದಿದ್ದೇನೆ. ಅದರ ನಾಯಕನು ನಾನೇ! ಅದು ನನ್ನ ಆತ್ಮ ಚರಿತ್ರವೆಂದರೂ ಅಡ್ಡಿಯಿಲ್ಲ. ಇನ್ನು ಆಘಟಿತವಾದ ಆ ಕೃತಿ ಒಂದಿಲ್ಲೊಂದು ದಿನ ಸಾಹಿತ್ಯಕ್ಷೇತ್ರದಲ್ಲಿ ಶ್ರೇಷ್ಠ ಕೃತಿ ಎಂಬ ಮನ್ನಣೆಗೆ ಪಾತ್ರವಾಗುವುದರಲ್ಲಿ ಸಂದೇಹವಿಲ್ಲ. ಇದನ್ನು ಓದಿ ನಿಮಗೆ ಆ ಕೃತಿಯ ಬಗ್ಗೆ ಕುತೂಹಲ ಉಂಟಾಗಬಹುದು. ಅಷ್ಟು ಉತ್ಸುಕತೆ ಇದ್ದರೆ ತಿಳಿಸಿ! ಅಂದರೆ ಚಿ. ರಮಾಕಾಂತನೊಡನೆ ಆ ಹಸ್ತಪ್ರತಿಯನ್ನು ಕಳಿಸುವೆನು. ತಮ್ಮ ಉತ್ತರಕ್ಕಾಗಿ ಡಾರೀಕಾಯುತ್ತಲಿದ್ದೇನೆ.

ತಮ್ಮ
ಕೆಂ. ಪು. ಕರಿಪಿಟ್ಟಿ

(೮)

೧೦ ಎಪ್ರಿಲ್ ೫೫

ಮಾನ್ಯ ಕರಿಪಿಟ್ಟಿ ಅವರಿಗೆ—

ತಮ್ಮ ಓಲೆಗೆ ಉತ್ತರ ಬರೆಯಲು ತಡವಾದದ್ದಕ್ಕೆ ಕ್ಷಮೆ ಇರಲಿ. ನಾನು ಊರಲ್ಲಿ ಇಲ್ಲದ್ದರಿಂದ ತಡವಾಯಿತು.

ಚಿ. ರಮಾಕಾಂತನ ಮಾಫಿಯ ಬಗ್ಗೆ ಏಕೋ ಸಂಶಯ ಬರಹತ್ತಿದೆ. ಅವನ ಅಭ್ಯಾಸವು ಅಷ್ಟು ಸರಿಯಾಗಿ ಆಗಿಲ್ಲವಾದ್ದರಿಂದ ಪೂರ್ಣ ಮಾಫಿ ಆಗಲಿಕ್ಕಿಲ್ಲವೆಂದು ಅವನ ಹೇಳಿಕೆ ಇದೆ. ದಯಾಳುಗಳಾದ ತಾವು ಹೆಡ್‌ಮಾಸ್ತರರಿಗೆ ಹೇಳಿ ಪೂರ್ಣ ಮಾಫೀ ಮಾಡಿಸಬೇಕಾಗಿ ವಿನಂತಿ.

ತಮ್ಮವಳೇ [illegible]
ರಮಾ

(೯)

೧೧ ಎಪ್ರಿಲ್ ೫೫

ಕುಮಾರಿ ರಮಾ ಇವಳಿಗೆ—

ನಿನ್ನ ಪತ್ರದ ದಾರೀಕಾಯ್ದು ಬೇಪತ್ತ ಮನಸ್ಸಿಗೆ ನಿನ್ನ ಪತ್ರ ಓದಿ ಸಮಾಧಾನವಾಯಿತು. ಇದರೊಡನೆ ಕಾದಂಬರಿಯ ಹಸ್ತಪ್ರತಿ ಕಳಿಸಿದ್ದೇನೆ. ಅದನ್ನು ಪ್ರಥಮವಾಗಿ ಓದುವ ಭಾಗ್ಯ ನಿನಗೇ ದೊರೆತಿದೆ. ಓದಿ ನಿನ್ನ ಅಭಿಪ್ರಾಯ ತಿಳಿಸು.

ಚಿ. ರಮಾಕಾಂತನ ಮಾಫಿಯ ಬಗ್ಗೇ ಕಾಳಜಿ ಮಾಡುವ ಕಾರಣವಿಲ್ಲ. ನಾನೆಲ್ಲ ವ್ಯವಸ್ಥೆ ಮಾಡಿದ್ದೇನೆ.

ಪತ್ರದ ಕೊನೆಗೆ "ತಮ್ಮವಳೇ ಆದ" ಎಂದು ಬರೆದದ್ದನ್ನು, ಓದಿ ಸಂತೋಷವಾಯಿತು.

ನಿನ್ನ
ಕೆಂ. ಪು. ಕರಿಪಿಟ್ಟಿ

(೧೦)

೧೩ ಎಪ್ರಿಲ್ ೫೫

ಶ್ರೀ ಕರಿಪಿಟ್ಟಿ ಅವರಿಗೆ ವಂದನೆಗಳು—

ತಮ್ಮ ಓಲೆ ಹಾಗೂ ಕಾದಂಬರಿ ತಲುಪಿದುವು. ಇಂಥ ಬೃಹದಾಕಾರದ ಕಾದಂಬರಿಯನ್ನು ನೀವು ಹೇಗೆ ಬರೆದಿರೊ ತಿಳಿಯುಲಿಲ್ಲ. ಕಾದಂಬರಿಯ ಆಕಾರ ನೋಡಿ, ಇದನ್ನು ಬರೆದ ನೀವು ಮಾನ್ಯ ಶಿಕ್ಷಕರೆಲ್ಲ ಎಂದು ತಿಳಿಯಿತು. ಇಷ್ಟು ದೊಡ್ಡ ಗ್ರಂಥ ಓದಲು ಹೆಚ್ಚು ವೇಳೆ ಹಿಡಿಯಬಹುದು. ಅಡ್ಡಿ ಇಲ್ಲವಷ್ಟೇ?

ಜಿ. ರಮಾಕಾಂತನ ಕೆಲ ವಿಷಯಗಳು ಕಚ್ಚಾ ಇರುವುದರಿಂದ ತಾವು ಅವನಿಗೆ ಪ್ರತ್ಯೇಕವಾಗಿ ಅಭ್ಯಾಸ ಹೇಳಿಕೊಟ್ಟರೆ ಅನಂತ ಉಪಕಾರವಾಗುವುದು. ಅವನನ್ನು ವಿದ್ಯಾವಂತನನ್ನಾಗಿ ಮಾಡುವುದು ತಮ್ಮನ್ನೇ ಕೂ[illegible]ದೆ.

ತಮ್ಮ
ರಮಾ

(೧೧)

೧೫ ಎಪ್ರಿಲ್ ೫೫

ಪ್ರಿಯ ರಮಾಳಿಗೆ ವಂದನೆಗಳು—

ನಿನ್ನ ಓಲೆ ತಲುಪಿತು. ಚಿ. ರಮಾಕಾಂತನು ನನ್ನ ತಮ್ಮನೆಂದು ಭಾವಿಸಿರುವುದಾಗಿ ಮೊದಲೇ ಹೇಳಿದ್ದೇನೆ. ಅದರಂತೆ ಅವನಿಗೆ ಇನ್ನು ಮೇಲೆ ದಿನಾಲು ಸಾಯಂಕಾಲ ಪ್ರತ್ಯೇಕವಾಗಿ ಪಾಠ ಹೇಳಿಕೊಡುವೆನು. ಅದಕ್ಕೆ ಚಿಂತೆ ಬೇಡ!

ನಿನ್ನ "ರಮಾ" ಎಂಬ ಹೆಸರು ನನಗೆ ಹುಚ್ಚು ಹಿಡಿಸಿಬಿಟ್ಟಿದೆ. ಅತ್ಯಂತ ಮಾಧುರ್ಯವುಳ್ಳ ಹೆಸರು ನಿನ್ನದು. ನಿನ್ನ ಬಗ್ಗೆ ವಿಚಾರಿಸುತ್ತಿದ್ದ ನಾನು, ಮೊನ್ನೆ ಚಿ. ರಮಾಕಾಂತನನ್ನು "ರಮಾ" ಎಂದೇ ಕರೆದುಬಿಟ್ಟೆ. ಚಾಣಾಕ್ಷನಾದ ಅವನು, "ನಾನು ರಮಾ ಅಲ್ಲ ಸರ್, ರಮಾಕಾಂತ!" ಎಂದು ಎದೆ ಸೆಟಿಸಿ ವರ್ಗದಲ್ಲಿ ಹೇಳಿಬಿಟ್ಟ. ನನ್ನ ಅವಸ್ಥೆಯನ್ನು ಆಗ ದೇವರೇ ಬಲ್ಲ. ನಿನ್ನ ಹೆಸರು ನೋಡುತ್ತಿರಲಾಗಿ ನನ್ನ ಮನಸ್ಸು, ನೀನು ಒಳ್ಳೇ ಚೆಲುವೆ ಇರಲೇಬೇಕು—ಎಂದು ಹೇಳುತ್ತಿದೆ. ಅದರಲ್ಲಿ ನನಗೆ ಸಂಶಯವೇ ಇಲ್ಲ. ನನ್ನ ಈ ಕಲ್ಪನೆ ತಪ್ಪಿರಲಿಕ್ಕಿಲ್ಲವೆಂದು ನಂಬಿದ್ದೇನೆ.

ಉತ್ತರ ಬರೆಯಬೇಕು.

ನಿನ್ನ
ಕೆಂ. ಪು. ಕರಿಪಿಟ್ಟಿ

(೧೨)

೧೫ ಎಪ್ರಿಲ್ ೫೫

ಶ್ರೀ. ಕರಿಪಿಟ್ಟಿಯವರಿಗೆ ನಮಸ್ಕಾರಗಳು—

ನಿಮ್ಮ ಪತ್ರ ತಲುಪಿತು. ಕಾದಂಬರಿ ಓದುತ್ತಿದ್ದೇನೆ. ಈ ಕಾದಂಬರಿಯನ್ನು ನೋಡಲಾಗಿ, ನೀವೊಬ್ಬ ಶ್ರೇಷ್ಠ ಕಾದಂಬರಿಕಾರ. ರಾಗುವಿರೆಂಬ ಭರವಸೆ ನನಗಿದೆ. ಇಂತಹ ಅನೇಕಾನ್ಯೇಕ ಕಾದಂಬರಿ ತಮ್ಮ ಲೇಖ್ಯಣಿಕೆಯಿಂದ ಬೆಳಕಿಗೆ ಬರಲಿ ಎಂದು ಹಾರೈಕೆ.

ನನ್ನ ಬಗ್ಗೆ ನಿಮಗಾದ ಕಲ್ಪನೆ ಓದಿ ಮೋಜೆನಿಸಿತು. ನಿಮ್ಮ ಕಲ್ಪನೆಗೇಕೆ ಹೆಚ್ಚಿನ ತೊಂದರೆ ಕೊಡಬೇಕು? ನನ್ನದೊಂದು ಭಾವ-ಚಿತ್ರ ಕಳಿಸುವೆನು; ಅಂದರೆ ನನ್ನ ಬಗ್ಗೆ ನಿಮಗೆ ಸರಿಯಾದ ಕಲ್ಪನೆ ಬರುವುದು. ಚಿ. ರಮಾಕಾಂತನ ಮಾಫಿಯ ವಿಷಯ [illegible] ಬಂದಿತು ತಿಳಿಯಲಿಲ್ಲ.

ತಮ್ಮ
ರಮಾ

(೧೩)

೧೬ ಎಪ್ರಿಲ್ ೫೫

ಪ್ರಿಯ ರಮಾಳಿಗೆ—

ನಿನ್ನ ಪತ್ರ ಓದಿ ಸಂತೋಷವಾ[illegible] ನನಗಾದ ಸಂತೋಷ. ವನ್ನು ಬಣ್ಣಿಸಲು ಈ ಲೇಖ್ಯಣಿಕೆಗೆ ಅಸಾಧ್ಯ. ನಿನ್ನ ಭಾವ. ಚಿತ್ರವನ್ನು ಖಂಡಿತ ಕಳಿಸು. ಫೋಟೋ[illegible]ರ ಸ್ವತಃ ನೀನೇ ಇದ್ದಂತೆ ಎಂದು ನನ್ನ ಭಾವನೆ. ಈ ಪತ್ರ ಮುಟ್ಟಿದ ಕೂಡಲೇ ಫೋಟೋ ಕಳಿಸು. ಕಾದಂಬರಿಯ ವಾಚನ ಎಲ್ಲಿಗೆ ಬಂದಿತು? ನಿನಗೆ ಅದು ಸೇರಿರಲು ಸಾಕು.

ನಿನ್ನವನೇ ಆದ
ಕೆಂ. ಪು. ಕರಿಪಿಟ್ಟಿ

(೧೪)

೧೭ ಎಪ್ರಿಲ್ ೫೫

ಶ್ರೀ. ಕರಿಪಿಟ್ಟಿ ಅವರಿಗೆ—

ವಂದನೆಗಳು. ತಮ್ಮ ಇಚ್ಛೆಯ ಪ್ರಕಾರ ಈ ಶೈಲಿಯೊಡನೆ ನನ್ನ ಭಾವಚಿತ್ರ ಕಳಿಸಿದ್ದೇನೆ. ಸ್ವತಃ ನಾನೇ ಭೆಟ್ಟಿಆಗಿ ಕೊಡ. ಬೇಕೆಂದು ಮನಸ್ಸಿದ್ದಿತು. ಆದರೆ ಅದು ಈಗಿನ ಪರಿಸ್ಥಿತಿಯಲ್ಲಿ ಅಸಾಧ್ಯವಾದುದರಿಂದ ಹೀಗೆ ಕಳಿಸಬೇಕಾಯಿತು. ಉಪಾಯವಿಲ್ಲ. ಕ್ಷಮೆ ಇರಲಿ. ಫೋಟೋದ ಬಗ್ಗೆ ನಿಮ್ಮ ಅಭಿಪ್ರಾಯ ಕೂಡಲೆ ತಿಳಿಸಿರಿ.

ತಮ್ಮ
ರಮಾ

(೧೫)

೧೮ ಎಪ್ರಿಲ ೫೫

ಕು. ರಮಾಗೆ

ನಿನ್ನ ಫೋಟೋ ನೋಡಿ ಆನಂದಾಶ್ಚರ್ಯಗಳು ಒಮ್ಮೆಲೆ ಆದುವು. ನಿನ್ನ ಫೋಟೋ ನೋಡಿದ ಕೂಡಲೆ ಏನೇಮಾ ಪ್ರಪಂಚ ಪ್ರಸಿದ್ಧ ತಾರೆ ವೈಜಯಂತಿಮಾಲಾಳ ಚಿತ್ರಕಣ್ಣು ಮುಂದೆ ಬಂದಿತು. ಅವಳದೇ ಚಿತ್ರವೇನೋ ಎಂದು ಸಂಶಯವೂ ಬಂದಿತು. ನೀನು ಕಳಿಸಿರುವಿ—ಎಂದಮೇಲೆ ನಿನ್ನದೇ ಇರಲೇ ಬೇಕು. ನಿಜವಾಗಿಯೂ ನಾನು ಧನ್ಯನು. ನಿನ್ನ ಫೋಟೋ ಹಾಕಲು ಒಂದು ಒಳ್ಳೆಯ ಬಂಗಾರದ ಫ್ರೇಮ್ ತಂದಿರುವೆನು. ಅದನ್ನು ನೋಡಲು ನೀನೆಂದು ಬರುವೆ?

ನಿನ್ನ
ಕೆಂ. ಪು. ಕರಿಪಿಟ್ಟಿ

(೧೬)

೧೯ ಎಪ್ರಿಲ್ ೫೫

ಶ್ರೀ. ಕರಿಪಿಟ್ಟಿ ಅವರಿಗೆ—

ವಂದನೆಗಳು. ನಿಮ್ಮ ಬಗ್ಗೆ ನನಗಾದ ಕುತೂಹಲವನ್ನು ನಿಮಗೆ ತಿಳಿಸ ಬಯಸುವೆನು. ನಿಮ್ಮ ಹಾಗು ನಿಮ್ಮ ತಂದೆಯವರ ಹೆಸರಿನ ಮೊದಲನೆಯ ಅಕ್ಷರ ಕೂಡಿಸಿದರೆ "ಕೆಂಪು" ಎಂದು ಆಗುವುದು. ಅದರ ಮೇಲೆ ನೀವು ನಿಜವಾಗಿಯೂ ಕೆಂಪು ಇರಲೇ-ಬೇಕು. ಆದರೆ ನಿಮ್ಮ ಅಡ್ಡ ಹೆಸರು ಕರಿಪಿಟ್ಟಿ ಎಂದು ಇರುವುದರಿಂದ ನೀವು ಕರ್ರಗೆಲ್ಲಿ ಇರುವಿರೋ ಎಂದು ಸಂಶಯ. ಈ ಸಂಶಯ ನಿವಾರಣೆಗೆ ನಿಮ್ಮ ಭಾವಚಿತ್ರ ಕೇಳಬೇಕೆಂದು ಮನಸ್ಸಿದ್ದಿತು. ಆದರೆ ಮನೆಯಲ್ಲಿ ಗೊತ್ತಾದರೆ ನಮ್ಮ ಫಜೀತಿ ಹೇಳ-ತೀರದು. ಆದುದರಿಂದ ಈಗ ಬೇಡ. ಸ್ವಲ್ಪೇ ದಿನಗಳಲ್ಲಿ ನಾವಿಬ್ಬರೂ ಕೂಡಿಯೇ ಭಾವಚಿತ್ರ ತೆಗೆಯಿಸಿಕೊಳ್ಳುವ ಸುದಿನ ಬರಲಿದೆ.

ಚಿ. ರಮಾಕಾಂತನಿಗೆ ಕೆಲವು ಪುಸ್ತಕಗಳು ಬೇಕಾಗಿವೆ. ದಯವಿಟ್ಟು ಅವನ್ನು ಕೊಡಿಸುವ ಕೃಪೆ ಮಾಡಬೇಕು.

ತಮ್ಮ
ರಮಾ

(೧೭)

೨೦ ಎಪ್ರಿಲ್ ೫೫

ಕು. ರಮಾಗೆ—

ನನ್ನ ಹೆಸರಿನ ಸಂಬಂಧದಲ್ಲಿ ಕಲ್ಪಿಸಿದ ಅರ್ಥವನ್ನು ನೋಡಿ ಮೋಜೆನಿಸಿತು. ನಿನ್ನ ಅರ್ಥದ ಪ್ರಕಾರ ನಾನು ಕೆಂಪೂ ಇಲ್ಲ, ಕರ್ರಗೂ ಇಲ್ಲ. ಸಾಧಾರಣ ಇರುವೆ ಎಂದು ಹೇಳಬಯಸುವೆ.

ನಾವಿಬ್ಬರೂ ಕೂಡಿಯೇ ಕುಳಿತ ಭಾವಚಿತ್ರ ತೆಗೆಯಿಸಿ-ಕೊಳ್ಳುವ ನಿನ್ನ ವಿಚಾರ ನನಗೆ ಬಹಳೇ ಸೇರಿತು. ಬರುವ ರವಿವಾರ ನೀನು ನಮ್ಮ ಮನೆಗೆ ಬಂದರೆ, ಇಬ್ಬರೂ ಕೂಡಿ ಫೋಟೊ ತೆಗೆಯಿಸಿ-ಕೊಳ್ಳುವ; ಹಾಗು ಏನೇಮಾ ನೋಡುವ ಕಾರ್ಯಕ್ರಮ ಇಟ್ಟು-ಕೊಳ್ಳೋಣ. ನಿನ್ನ ಒಪ್ಪಿಗೆ ಕೂಡಲೇ ತಿಳಿಸು.

ನಿನ್ನ ಹೇಳಿಕೆಯ ಪ್ರಕಾರ ಚಿ. ರಮಾಕಾಂತನಿಗೆ ಎಲ್ಲ ಪುಸ್ತಕಗಳನ್ನು ನಿನ್ನೆಯೇ ಕೊಡಿಸಿದ್ದೇನೆ.

ನಿನ್ನ
ಕೆಂ. ಪು. ಕರಿಪಿಟ್ಟಿ

(೧೮)

೨೨ ಎಪ್ರಿಲ್ ೫೫

ಶ್ರೀ. ಕೆಂ. ಪು. ಕರಿಪಿಟ್ಟಿ ಅವರಿಗೆ—

ವಂದನೆಗಳು. ನಿಮ್ಮ ಕಾರ್ಯಕ್ರಮ ನನಗೆ ಒಪ್ಪಿತವಾದರೂ, ಈ ರವಿವಾರ ನಮ್ಮಲ್ಲಿ ಅತಿಥಿಗಳು ಬರುವವರಿದ್ದುದರಿಂದ ಬರಲಾಗುವುದಿಲ್ಲ. ಮುಂದಿನ ರವಿವಾರ ನಮ್ಮ ಕಾರ್ಯಕ್ರಮ ಇಟ್ಟುಕೊಳ್ಳೋಣ. ಒಪ್ಪಿಗೆಯಾಯಿತಷ್ಟೇ!

ನಮ್ಮ ಆರ್ಥಿಕಪರಿಸ್ಥಿತಿ ತಮಗೆ ಗೊತ್ತೇ ಇದೆ ಚಿ. ರಮಾಕಾಂತನಿಗೆ ಒಂದು ಒಳ್ಳೆಯ ಫೌಂಟನ್‌ಪೆನ್ ಬೇಕಾಗಿದೆ. ದಯಾಳುಗಳಾದ ತಾವು ಈ ವಿಷಯದಲ್ಲಿ ಸಹಾಯ ಮಾಡಬೇಕಾಗಿ ವಿನಂತಿ. ಇಂದೆಯೇ ಫೌಂಟನ್‌ಪೆನ್ ಕೊಡಿಸಬೇಕು. ಹೆಚ್ಚಿನ ತ್ರಾಸ ಕೊಟ್ಟದ್ದಕ್ಕಾಗಿ ಕ್ಷಮೆ ಇರಲಿ.

ತಮ್ಮ
ರಮಾ

(೧೯)

೨೩ ಎಪ್ರಿಲ್ ೫೫

ಕು. ರಮಾಗೆ –

ನಿನ್ನ ಇಚ್ಛೆಯ ಪ್ರಕಾರ ನಿನ್ನೆಯೇ ಚಿ. ರಮಾಕಾಂತನಿಗೆ ೧೫ ರೂಪಾಯಿಯ ಫೌಂಟನ್‌ಪೆನ್ ಕೊಡಿಸಿದ್ದೇನೆ. ಅವನ ಮಾಫೀಯ ಬಗ್ಗೆ ಹೆಚ್ಚಿನ ಪ್ರಯತ್ನ ನಡೆಸಿದ್ದರ ಫಲವಾಗಿ ಅವನಿಗೆ ಮಾಫಿ ಆಗಿದೆ.

ಇಂದು ನಮ್ಮ ಹೆಡ್‌ಮಾಸ್ತರರು ನನ್ನ ಒಂಟಿಬಾಳಿನ ಬಗೆ ಕೆಲವು ಸೂಚನೆ ಮಾಡಿ, ನಿನ್ನೊಡನೆ ಮದುವೆ ಮಾಡಿಕೊಳ್ಳಲು ಸೂಚಿಸಿದರು. ಅದಲ್ಲದೇ ಈ ವಿಷಯವಾಗಿ ನಿನ್ನ ತಂದೆಯವರನ್ನು ಸಮುಕ್ಷಮ ಬೆಟ್ಟಿ ಆಗಲು ತಿಳಿಸಿದರು. ಅದ್ದರಿಂದ ನಿಮ್ಮ ತಂದೆಯವರನ್ನು ಕಾಣಲು ನಿಶ್ಚಯಿಸಿದ್ದೇನೆ. ಇದಕ್ಕೆ ನಿನ್ನ ಒಪ್ಪಿಗೆ ಇರಲಿಕ್ಕೆ ಸಾಕು. ನಿನ್ನ ಒಪ್ಪಿಗೆ ಬಂದಕೂಡಲೇ ಭೆಟ್ಟಿ ಆಗುವೆನು. ಕೂಡಲೇ ತಿಳಿಸು.

ನಿನ್ನ ಪತ್ರಾಗಮನವನ್ನೇ ನಿರೀಕ್ಷಿಸುತ್ತಿದ್ದೇನೆ.

ನಿನ್ನವನೇ ಆದ
ಕೆಂ. ಪು. ಕರಿಪಿಟ್ಟಿ

(೨೦)

೨೪ ಎಪ್ರಿಲ್ ೫೫

ಮಾನ್ಯ ಶ್ರೀ ಕರಿಪಿಟ್ಟಿ ಅವರಿಗೆ—

ಅನೇಕಾನೇಕ ವಂದನೆಗಳು. ಇಂದು ಅಕಸ್ಮಾತ್ತಾಗಿ ಚಿ. ರಮಾಕಾಂತನ ಜೋಲಿಯಲ್ಲಿ ನನಗೆ ಬೇಕಾದ ಒಂದು ಪುಸ್ತಕ

ಬಣ್ಣ ಬಣ್ಣಗಳಲ್ಲಿ ಮುದ್ರಣ!
ಇದೀಗ ಪ್ರಕಟವಾಗಿದೆ.

ಅಭಿನವ ಗಣಿತ

ಲೇಖಕ: ಹರಿಹರ

ಪ್ರಾಥಮಿಕ ಶಿಕ್ಷಣದ ವರ್ಗಕ್ಕಾಗಿ ೧೯೫೫ರ ಅಭ್ಯಾಸಪತ್ರಿಕೆಯಂತೆ ಬರೆಯಲ್ಪಟ್ಟು ಪ್ರಕಟಿಸಲ್ಪಟ್ಟಿದೆ. ಪುಟಪುಟಕ್ಕೂ ಚಿತ್ರಗಳ ಸೂರೆ! ವರ್ಣರಂಜಿತ ಮುದ್ರಣ!!

ಕೇವಲ ೧೦ ಆಣೆ. ವ್ಯಾಪಾರಿಗಳಿಗೆ ಧಾರಾಳ ಕಮೀಶನ್

ಇಂದೇ ನಿಮ್ಮ ಪ್ರತಿ ಪಡೆಯಿರಿ!

ಶ್ರೀಸಾಯಿ ಪಬ್ಲಿಶಿಂಗ್ ಹೌಸ್, ಧಾರವಾಡ

ಹುಡುಕುತ್ತಿರುವಾಗ ನಿನ್ನ "ರಮಾಗೆ" ಬರೆದ ಪತ್ರಗಳು ದೊರೆತುವು. ಕುತೂಹಲದಿಂದ [illegible] ಓದುತ್ತಿರುವಂತೆ ಒಳ್ಳೇ ಮೋಜೆನಿಸಿತು. ಶಿಕ್ಷಕನಂತಹ [illegible] ಕಾರ್ಯ ಮಾಡುತ್ತಿರುವ ನಿಮ್ಮಂತಹ ವಿದ್ವಾಂಸರು ಈ ರೀತಿ [illegible]ವುದನ್ನು ಓದಿ ಖೇದವೆನಿಸಿತು. ಈ ತರಹದ ನಡತೆ ನಮಗೆ ಎಷ್ಟೂ ಶೋಭಿಸುವುದಿಲ್ಲ.

ಮತ್ತೊಂದು ವಿಶೇಷ ಸಂಗತಿಯೆಂದರೆ, ಚಿ. ರಮಾಕಾಂತನಿಗೆ "ರಮಾ" ಎಂಬ ಹೆಸರಿನ ಅಕ್ಕನಿಲ್ಲ, ಇಷ್ಟೇ ಅಲ್ಲ. ಅವನಿಗೆ ಅಕ್ಕ ತಂಗಿ ಯಾರೂ ಇಲ್ಲ. ಚಿ. ರಮಾಕಾಂತನೇ 'ರಮಾ' ಎಂಬ ಹೆಸರಿನಿಂದ ನಿಮಗೆ ಮೋಸ ಮಾಡಿದ್ದಾನೆ. ನೀವು ಅದಕ್ಕೆ ಸಹಜವಾಗಿಯೇ ಮೋಸ ಹೋದಿರಿ. ಇದೆಲ್ಲವನ್ನು ಓದಿ, ನಿಮ್ಮ ಮನಸ್ಸಿಗೆ ಬಹಳೇ ಕೆಡುಕೆನಿಸಬಹುದು. ಕೋಪವೂ ಬರಬಹುದು. ಆದರೆ ಶಾಂತರೀತಿಯಿಂದ ವರ್ತಿಸಿರಿ. ಚಿ. ರಮಾಕಾಂತನನ್ನು ಇದಕ್ಕಾಗಿ ಶಿಕ್ಷಿಸುವುದು ನನ್ನನ್ನು ಕೂಡಿದೆ.

ತಮ್ಮ ವಿಶೇಷ ಪ್ರಯತ್ನದ ಮೂಲಕ ಚಿ. ರಮಾಕಾಂತನಿಗೆ ಪೂರ್ಣ ಮಾಫೀ ದೊರೆಯಿತು. ಅವನಿಗಾಗಿ ಪುಸ್ತಕ, ಫೌಂಟನ್‌ಪೆನ್ ಮುಂತಾದುವುಗಳನ್ನು ಕೊಡಿಸಿರುವಿರಿ. ಅದಕ್ಕಾಗಿ ನಾನು ಆಭಾರಿಯಾಗಿದ್ದೇನೆ. ಹಿಂದೆ ಆದದ್ದನ್ನೆಲ್ಲ ಮರೆತುಬಿಡಬೇಕಾಗಿ ವಿನಂತಿ.

ತಮ್ಮ ವಿಶ್ವಾಸಿ
ರಾಮರಾವ್ ಕುಲಕರ್ಣಿ

(ಆಧಾರಿತ)

ಸಾಹಿತ್ಯ ವನವಿಹಾರ

ಮೊದಲನುಡಿ

ಕಳೆದ ಸಂಚಿಕೆಯಲ್ಲಿ ಸೂಚಿಸಿದಂತೆ, ಐಹೊಳೆಯ ವೆಂಕಟೇಶಾಂಕಿತ ಕವಿಯ ಕೃತಿಯೊಂದನ್ನು ಇಲ್ಲಿ ಪ್ರಕಟಿಸಲಾಗಿದೆ. ಇದರ ಶುದ್ಧ ಪ್ರತಿಯನ್ನು ನಮಗೆ ಒದಗಿಸಿಕೊಟ್ಟವರು, ಕವಿಯ ಆಪ್ತವರ್ಗಕ್ಕೆ ಸೇರಿದವರಾದ ಶ್ರೀ. ಜೆ. ಎಚ್. ಕುಲಕರ್ಣಿ, ಹುಬ್ಬಳ್ಳಿ ಅವರು. ಇವರು ಈ ಕೃತಿಯನ್ನು ಚೆನ್ನಾಗಿ ಹಾಡಿಯೂ ತೋರಿಸಬಲ್ಲರು.

ಈ ಕೃತಿಯ ವಿಚಾರದಲ್ಲಿ ಕೆಲವೊಂದು ಮಾತುಗಳನ್ನು ಇಲ್ಲಿ ಬರೆಯಬೇಕಾಗಿದೆ. ಇದೊಂದು ಗೀತಪ್ರಬಂಧ. ಕಂಸನ ಆಜ್ಞೆಗನುಸಾರವಾಗಿ ಅಕ್ರೂರನು, ಕೃಷ್ಣನನ್ನು ಮಥುರೆಗೆ ಕರೆದೊಯ್ಯಲೆಂದು ಗೋಕುಲಕ್ಕೆ ಬರುವನು. ಸೆರೆಮನೆಯಲ್ಲಿದ್ದ ತನ್ನ ತಾಯಿ-ತಂದೆ—ವಸುದೇವ ದೇವಕಿ—ಯರನ್ನು ಬಿಡುಗಡೆ ಮಾಡಬೇಕಾದ ತನ್ನ ಕರ್ತವ್ಯವನ್ನು ನೆನೆದು, ಕೃಷ್ಣನು ಅಣ್ಣ ಬಲರಾಮನೊಂದಿಗೆ ಮಥುರೆಗೆ ಹೊರಡಲು ಸಿದ್ಧನಾಗುವನು. ಆಗ, ಕೃಷ್ಣನಲ್ಲಿ ಅತ್ಯುತ್ಕಟವಾದ ಪ್ರೇಮ-ಭಕ್ತಿಗಳನ್ನಿರಿಸಿಕೊಂಡಿದ್ದ ಗೋಪವಧೂಜನರು ಕೃಷ್ಣನ ಬಳಿಗೆ ಬಂದು, ತಮ್ಮ ಕರುಣಾಹೃದಯವನ್ನು ತೆರೆದಿಟ್ಟರುವುದೇ ಈ ಕೃತಿಗೆ ವಸ್ತುವಾಗಿದೆ.

ಹರಿದಾಸರು ತಮ್ಮ ಕೃತಿಗಳಿಗಾಗಿ, ಭಾವೋಚಿತವಾದ ಅನೇಕ ಛಂದೋಗೀತಿಗಳನ್ನು ಬಳಸಿಕೊಂಡಿದ್ದಾರೆ. ಅವುಗಳಲ್ಲಿ ಈ ಗೀತಪ್ರಬಂಧದ ಜಾತಿಯೆನ್ನಲ್ಪಡುವುದು. ಇದೇ ರೀತಿಯಲ್ಲಿ ಬೇರೆ ಬೇರೆ ದಾಸರು ರಚಿಸಿದ 'ಪಾಂಡುರಂಗಾಷ್ಟಕ' 'ವೆಂಕಟೇಶಾಷ್ಟಕ' 'ಕುಲಶೀಲಾಷ್ಟಕ' 'ಸುರಿದು ತಿಂಗಳ ಹಾಡು' 'ಸತ್ಯಭಾಮಾ ವಿರಹವಿಲಾಪ' 'ಭಗವದ್ಗೀತಾಸಾರ' ಮೊದಲಾದ ಗೀತಪ್ರಬಂಧಗಳು ದಾಸಸಾಹಿತ್ಯದಲ್ಲಿ ನೋಡಲು ಸಿಕ್ಕುವುವು.

ಸಾಮಾನ್ಯಜನತೆಯಲ್ಲಿ ದೇವಭಕ್ತಿಯನ್ನು ಪ್ರಚಾರಮಾಡಬೇಕಾಗಿದ್ದುದರಿಂದ, ದಾಸರೆಲ್ಲರೂ ತಮ್ಮ ಕೃತಿಗಳಲ್ಲಿ ರೂಢಿಗನ್ನಡವನ್ನೇ ಹೆಚ್ಚಾಗಿ ಬಳಸಿದ್ದಾರೆ. ವ್ಯಾಕರಣದೃಷ್ಟಿಯಿಂದ ವಿಮರ್ಶಿಸ ಹೊರಟವರಿಗೆ, ಹರಿದಾಸರ ಕೃತಿಗಳ ಭಾಷೆಯಲ್ಲಿ ಅನೇಕ ಶೈಥಿಲ್ಯಗಳು ಕಾಣಬಹುದು. ಆದರೆ ದಾಸರು ಈ ಭಾಷಾದೋಷಗಳನ್ನು—ಸಂಪೂರ್ಣವಾಗಿ ಅರಿತು ವಿಚಾರಮಾಡಿಯೆ—ಒಪ್ಪಿಕೊಂಡು ಹೊರಟಿದ್ದಾರೆ. ವೆಂಕಟೇಶಾಂಕಿತ ಕವಿಯು ಈ ಕೃತಿಯೂ ಹರಿದಾಸರ ಭಾಷಾಮಾರ್ಗದಲ್ಲಿ ನಡೆದುದಾದುದರಿಂದ, ಆ ಬಗೆಯ ಭಾಷಾಶೈಥಿಲ್ಯಗಳು ಇದರಲ್ಲಿಯೂ ಇವೆಯೆಂದು ಹೇಳಬಹುದು.

ಈ ಕೃತಿಯಲ್ಲಿ 'ಪದ' 'ಶ್ಲೋಕ' ಎಂಬ ಎರಡು ಬಗೆಯ ಛಂದೋಗತಿಯನ್ನು ನಾವು ನೋಡುವೆವು. 'ಪದ' ಎಂಬ ಭಾಗವೆಲ್ಲ ಕನ್ನಡಛಂದಸ್ಸಿಗೆ ಸೇರಿದ ಮಾತ್ರಾಗಣ (ಅಥವಾ ಗಣ)ಗಳಿಂದ ಘಟಿತವಾದುದಾಗಿದೆ. ಶ್ಲೋಕಗಳು ಸಂಸ್ಕೃತ ಅಕ್ಷರವೃತ್ತಗಳಾದ ಶಾರ್ದೂಲ-ಮತ್ತೇಭವಿಕ್ರೀಡಿತ ವೃತ್ತಗಳ ಆಭಾಸಗಳಾಗಿವೆ. ಈ ಶ್ಲೋಕಗಳನ್ನು ಆ ವೃತ್ತಗಳ ಧಾಟಿಯಲ್ಲಿ ಅನ್ನಬಹುದೇ ಹೊರತು, ಮೂಲ ಅಕ್ಷರವೃತ್ತಗಳ ಮಿಕ್ಕ ಯಾವ ಲಕ್ಷಣಗಳೂ ಇವುಗಳಿಗೆ ಹೊಂದಿಕೆಯಾಗುವುದಿಲ್ಲ. ಆದರೆ ಈ ಗೀತಪ್ರಬಂಧಕ್ಕೆ ಬಳಸಿರುವ ಈ ಛಂದಸ್ಸಿನ ರೀತಿ, ಹಾಡಲಿಕ್ಕೆ—ಭಾವದ ಅಭಿವ್ಯಕ್ತಿಗೆ ತುಂಬ ಸಾಹಾಯ್ಯಕವೆನಿಸುವಂತಿರುವುದು.

ಪದದ ಭಾಗಗಳೆಲ್ಲ ತಾಳಗತಿಯೊಂದಿಗೆ ನಡೆಯುವುವು. ಶ್ಲೋಕಗಳು ಭಾವೋಚಿತ ರಾಗಾಲಾಪನೆಯೊಂದಿಗೆ ಹೇಳಲ್ಪಡುವುವು. ಈ ರೀತಿಯ ಮೂಲಕ — ಕೃತಿಯು ದೀರ್ಘವಾಗಿದ್ದರೂ — ಹಾಡುವವರಿಗೂ ಕೇಳುವವರಿಗೂ ಬೇಸರೆನಿಸುವುದಿಲ್ಲ.

ಭಾಷೆ-ಛಂದೋರೀತಿಗಳಲ್ಲಿ ಶೈಥಿಲ್ಯ ಕಂಡರೂ, ಈ ಕೃತಿಯಲ್ಲಿ ಕವಿ-ಮನಸ್ಸುಗಳನ್ನು ಸೆಳೆದುಕೊಳ್ಳುವಂತಹ ಶಬ್ದಾಲಂಕಾರಗಳನ್ನು ಬಳಸಲಾಗಿದೆ. ಕನ್ನಡ ಪದ್ಯರಚನೆಯದೊಂದು ವೈಶಿಷ್ಟ್ಯವೆನಿಸುವ ದ್ವಿತೀಯಾಕ್ಷರ ಪ್ರಾಸವನ್ನು ಈ ಕೃತಿಯಲ್ಲಿ ಎಲ್ಲಿಯೂ ಬಿಟ್ಟಿಲ್ಲ. ಅಲ್ಲದ್ದೆ ಕೃತಿಯ ಸಾಲು-ಸಾಲುಗಳಲ್ಲಿಯೂ ಎದ್ದುಕಾಣುವ ಅನುಪ್ರಾಸಪದ್ಧತಿಯು ಭಾವೋತ್ತೇಜಕವಾಗಿದೆಯಲ್ಲದೆ, ಸಂಗೀತಕ್ಕೆ ಹಿತವೆನಿಸುವಂತಹುದಾಗಿದೆ.

ಈ ಗೀತಪ್ರಬಂಧದಲ್ಲಿ ಅಲ್ಲಲ್ಲಿ 'S' ಈ ಗುರುತನ್ನು ಬಳಸಲಾಗಿದೆ. ಈ ಗುರುತಿನ ಹಿಂದೆ ಇರುವ ಅಕ್ಷರವು ಏಕಮಾತ್ರಕವಾಗಿದ್ದರೂ, ಅದನ್ನು ದೀರ್ಘವಾಗಿ ಎಳೆದು ಹೇಳಬೇಕಾಗುವುದು. ಸಾಮಾನ್ಯವಾಗಿ ಅಂಶಗಣಛಟ್ಟತ ವೃತ್ತಗಳಲ್ಲಿಲ್ಲ ಹೀಗೆ ಎಳೆದು ಹೇಳುವುದು ಕನ್ನಡ ಛಂದಸ್ಸಿನ ಒಂದು ವೈಶಿಷ್ಟ್ಯವೇ ಆಗಿದೆ. ಕಾಲಗತಿಯಲ್ಲಿ ನಡೆಯುವ ಸಾಂಗತ್ಯವೃತ್ತದಲ್ಲಿ, ಹೀಗೆ ಹೃಸ್ವಾಕ್ಷರವನ್ನು ದೀರ್ಘವಾಗಿ ಎಳೆಯುವ ಸಂದರ್ಭಗಳಿರುವುದು ಎಲ್ಲರ ಅನುಭವದ ವಿಷಯವೇ ಆಗಿದೆ. ಇನ್ನುಮೇಲೆ ಇಲ್ಲಿ ಕೊಟ್ಟ ಗೀತಪ್ರಬಂಧವನ್ನು ಓದಿ ಮೋದ ಪಡೆಯಿರಿ!

—ಸಂಪಾದಕರು

ಗೋಪನಾರಿಯರ ಕರುಣಾಲಾಪ

(ಗೀತಪ್ರಬಂಧ)

ಪಲ್ಲವಿ

ಮಥುರೆಗೆ ಹೋಗಬೇಡೆಲೊ ರಂಗಾ—ಇದು ಏನಂಗಾ ?
ತಿಳಿಯದು ಮೋಹನಾಂಗಾ !
ಮಥುರೆಗೆ ಹೋಗಬೇಡೆಲೊ ರಂಗಾ—ಇದು ಏನಂಗಾ ?

ಶ್ಲೋಕ

ಮದನಕನ್ಯೆಯನೆ ಕೇಳು, ಅಲ್ಲಿರುತಿಹ—ಮಾನಿನಿಯರತಿ ನಿಪುಣರೋ..
ಉದಕೇಜಾಯತ ನೇತ್ರ ನಿನ್ನ ಮನವ—ಉಗಿವರೊಂದರಕ್ಷಣದೊಳು!
ಯದುವಂಶೋದ್ಭವ ಎಮ್ಮ ಮೇಲೆ ನಿನಗೆ—ಯಾತಕ್ಕೆ
ದಯೆಪುಟ್ಟದೋ !
ಮುದದೀ ಪಯಣವ ನಿಲ್ಲಿಸೆಂದು ನಾವು– ಮುಕ್ಯಂದ ವಂದಿಸುವೆವೊ!

ಪದ

ಮಾತು ಲಾಲಿಸು ಮಧುಸೂದನಾ— ನಿನ್ನಾರಾಧನಾ
ಮಾಡುವೆವನುದಿನಾ....
ಪ್ರೀತಿಯಿಲ್ಲವೆ ಎಮ್ಮ ಮೇಲಿಷ್ಟು—ಯಾತಕೆ ಸಿಟ್ಟು ?
ಪೋಗುವರೇ ಕೈ ಬಿಟ್ಟು....
ಸೋತುಬಂದೆವು ನಿನ್ನ ಕಾಣದೆ—ಪ್ರಾಣ ನಿಲ್ಲದೆ
ಒಬ್ಬರೊಬ್ಬರಗಲದೆ....
ಈತನು-ಮನ ನಿನಗೊಪ್ಪಿಸಿ—ಇರಲು ವಂಚಿಸಿ
ಪೋಗುವರೇ ನೀ ಕೆಡಿಸಿ....
ಮಥುರೆಗೆ ಹೋಗಬೇಡೆಲೊ ರಂಗಾ—ಇದು ಏನಂಗಾ ?

ಶ್ಲೋಕ

ಕರೆಯುತ ಬಂದವನಾರು ಕೇಳಿ ಜಾಣೇ—ಕಾರುಣ್ಯಹೃದಯಾತ್ಮನೇ !
ಕರುಣಾ ಉಳ್ಳವನಲ್ಲವೀತ ಕ್ರೂರ—ಅಕ್ರೂರನಾರೆಂಬರೆ ?
ಕ್ರೂರನಾ ಕೋಲ್ ಗುರಿಯಾದೆವಮ್ಮ ನಾವು—ಶೃಂಗಾರವಿನ್ಯಾತಕೆ ?
ಮರುಗುತ ಮಾಡುವುದೇನೆ ನಾವು ಮನದಿ—ಮುರಹರಗೆ ಅರಿಕಿಲ್ಲನೆ !

ಪದ

ಮರುಳುಗೊಳಿಸಿ ನಮ್ಮನೆಲ್ಲರ—ಮಂದರೋದ್ಧಾರ
ನಂದಗೋಪಕುಮಾರಾ....
ಪರಿಪರಿಯಲಿ ಮೋಹ ಹೆಚ್ಚಿಸಿ—ಬಲು ಮೆಚ್ಚಿಸಿ
ಅದ ಮರೆಸಿ ನಿಶ್ಚಯಿಸಿ....
ತೆರಳುವೆ ನೀನೆಂಬ ಸಮಾಚಾರ—ಗೋಪೀಜನಜಾರ !
ನಿನಗೆ ಯುಚಿತವಿಚಾರ ?....
ನೆರೆನಂಬಿದ್ದೆವೊ ನಿನ್ನ ಅನುದಿನ—ಕ್ಲೇಶಭಂಜನ !
ಸಂತತ ಸುಪ್ರಸನ್ನಾ....
ಮಥುರೆಗೆ ಹೋಗಬೇಡೆಲೊ ರಂಗಾ—ಇದು ಏನಂಗಾ ?

ಶ್ಲೋಕ

ಗೆಳೆಯರಿಂದೊಡಗೂಡಿ ಗೋವುಗಳನು—ನಲವಿಂದೆ ನೀ ಕಾಯುತ
ಕೊಳಲಾ ಧ್ವನಿಯನು ಮಾಡಲಾಗ ವ್ರಜದಾ—ಲಲನೆಯರು
ನಾವೆಲ್ಲರು,
ಹೊಲಬ ತಪ್ಪಿದರಂದವಾಗಿ ಮನದಿ—ಕಳವಳಿಸಿ ಕಾತರದಲಿ
ಕಳಿಗಿಸ ಉಳಿಯದೆ ನಿನ್ನ ಬಳಿಗೆ ಬಂದಾ– ತಿಳಿವಿಕೆಯು ನಿನಗಿಲ್ಲವೇ !

ಪದ

ಗಂಡರಂಜಿಕೆ ಎಮಗಿಲ್ಲದೆ—ಕ್ಷಣನಿಲ್ಲದೆ
ಹಿಂದು-ಮುಂದು ನೋಡದೆ....
ಉಂಡ ಎಂಜಲುಗೈಯ ತೊಳೆಯದೆ—ಒಬ್ಬರುಳಿಯದೆ
ಮಗುಗಳನು ಕರೆಯದೆ....
ದುಂಡು ಮುತ್ತಿನ ಹಾರ ಕಾಲಲಿ—ಕಡಗ ಕೊರಳಲಿ
ಮೂಗುತಿಯ ಕಿವಿಯಲಿ....
ಪೆಂಡೆಯ-ರುಳಿಗಳ ಕೈಗಿಟ್ಟು—ವಿಸ್ಮೃತಿ ಪಟ್ಟು
ಬಂದೆವಲ್ಲೋ ಕೇಳಿಷ್ಟು....
ಮಥುರೆಗೆ ಹೋಗಬೇಡೆಲೊ ರಂಗಾ—ಇದು ಏನಂಗಾ ?

ಶ್ಲೋಕ

ಅಡ್ಡಬಾರದ ಮಾತನಾಡಿತು ಜನಾ - ಅದನೆಲ್ಲ ನೀ ಕೇಳಿದೆ ...
ಮಾಡ್ಬಾರದ ಮಮತೆಯನ್ನು ಮಾಡಿ — ಮನೆವಾರ್ತೆಯನು-
ಬಿಡಿಸಿದೆ !
ರೂಢಿ ನೆಚ್ಚದೊ ರುಕ್ಮಮಾನಪಹರಾ — ರುಕ್ಮಾಂಬರಾಧಾರನೇ....
ನೋಡಿಕ್ಷ ರಕ್ಷಿಸೊ ಎಮ್ಮನೀಗ ಕೃಷ್ಣಾ!--ನೋಯಿಸುವುದ್ದೊಳಿತಲ್ಲವೊ!

ಪದ

ಶಿರವೆತ್ತಿ ತಿರುಗಲಾರೆವು ಇಲ್ಲಿ — ಗೋಕುಲದಲ್ಲಿ
ಅತ್ತೆ-ಮಾವಗಳಲ್ಲಿ....
ಎರವು ಮಾಡಿದೆ ಎಮಗವರನು — ಆಡಿ ಫಲವೇನು ?
ಬ್ರಹ್ಮ ಬರೆದ ಲಿಪಿಯನು ...
ಒರಸುವರಾರುಂಟೋ ಧರೆಯೊಳು — ವ್ಯರ್ಥವೆಮ ಬಾಳ್ವ
ವನಮಾಲೀ ನೀ ಕೇಳು
ಕರುಣಾಸಾಗರನೆಂಬುವರಲ್ಲೋ — ಅದು ಬಲು ಸುಳ್ಳೊ !
ಒಂದೂ ಕೈಗೂಡಲಿಲ್ಲೆನೇ
ಮಥುರೆಗೆ ಹೋಗಬೇಡೆಲೊ ರಂಗ — ಇದು ಏನಂಗಾ ? ೪

ಶ್ಲೋಕ

ಹದಿನಾರೂ ಸಾವಿರದ ಅಂಗನೆಯರ — ಹತಗೈವರೇ ಕೇಶವಾ
ಚದುರಾ, ಚೆನ್ನಿಗ, ಕೇಳು ಎಮ್ಮ ಮನದ ಅಭಿಲಾಷೆ ಪೂರಯ್ಸುದಿ..
ಸದಮಕ್ಷಲಾತ್ಮನೆ ಸಾಗಬೇಡ ಕಂಡ್ಯಾ— ಸಂತೋಷ ಎಮಗಾಗದೋ!
ಉದಕೂವಗಲಿದ ಮೀನಿನಂತೆ ನೂಡಿ — ಕಡೆಗಣಿಸಿ ನೀ ಪೋಗ್ವರೆ ?

ಪದ

ಬೇಸರಾದೆವೆ ಭಕ್ತವತ್ಸಲಾ—ಮುದ್ದು ಗೋಪಾಲಾ,
ನಾನಾ ಲೀಲಾವಿಶಾಲಾ !.....
ಏಸು ಜನ್ಮದ ಪುಣ್ಯ ಒದಗಿದ — ಕಾರಣದಿಂಕೆ
ನಿನ್ನ ಸಂಗದಾನಂದ .. ....
ಲೇಸಾಗಿ ಬಯಸಿಕೊಂಡಿದ್ದೆವೊ — ಕಷ್ಟವೊದ್ದೆವೊ !
ಸುಖದಿಂದ ಬಾಳಿದೆವೊ.....
ಈ ಸಮಯದೊಳಿಮ್ಮನಗಲುವಿ — ಘಾಸಿ ಮಾಡುವಿ
ಮುಂದುಗಾಣದಾದೆವಿ.....
ಮಥುರೆಗೆ ಹೋಗಬೇಡೆಲೊ ರಂಗಾ—ಇದು ಏನಂಗಾ ? ೫

ಶ್ಲೋಕ

ಬಿಲ್ಲುಹಬ್ಬದ ನೆವನವನ್ನೆ ಮಾಡಿ—ಬಿಟ್ಟೆಮ್ಮನುಕ್ಷ ಪೋಗುವಿ
ಕಳ್ಳಕ್ಷ ಸುಳ್ಳನು ಕೇಳು ನಿನ್ನ ಗುಣವ — ಕೊಂಡಾಡಿದಲ್ಲೇನಿದೆ ?
ಎಲ್ಲಾ ಪರಿಯಲಿ ಕೆಟ್ಟಿವಲ್ಲೊ ನಿನಗೆ — ಎಳ್ಳಷ್ಟು ದಯೆ ಬಾರದೆ ?
ಒಳ್ಳೇ ಕೆಲಸವ ಮಾಡಿದೆಮ್ಮ ಉಸಿರು — ಉದ್ಗಾಥದಲಿ ಮುಟ್ಟಲಿ !

ಪದ

ಸಂಗಳೆಯರ ಜನ್ಮನೇತಕೋ — ಈಕ್ಷಸಾರ್ಥಕೋ !
ಬಂದಿತೆಮ್ಮನುಭವಕೋ.....
ಹಂಗಿಗರಾದೆವೊ ನೆರೆಯಲಿ — ಬಹುಪರಿಯಲಿ
ಕರಕಸಿಯು ಮನೆಯಲಿ .. ....
ಮಂಗಳಾತ್ಮಕ ನಿನ್ನ ಮಾಯವು — ತಿಳಿಯಲಿಲ್ಲವು
ಮೋಸಹೋದೆವು ನಾವು.....
ಅಂಗಳದೊಳು ನಿನ್ನ ಕಾಂಬೆವು....ಅಪ್ಪಿಕೊಂಬೆವು
ಅಂಘ್ರಿವನಜ ನೋಡುವೆವು....
ಮಥುರೆಗೆ ಹೋಗಬೇಡೆಲೊ ರಂಗಾ — ಇದು ಏನಂಗಾ ? ೬

ಶ್ಲೋಕ

ಲಲನೇರಿಲ್ಲರು ಲಲ್ಲೆಯಿಂದ ಯಮುನಾ—ಸ್ನಾನಕ್ಕೆ ನಾವ್
ಪೋಗಲು,
ತಿಳಿಸ್ಕದಲ್ಲಿಗೆ ಬಂದು ಎಮ್ಮ ಶಾಲಿ—ಸೆಳೆದೊಯ್ದು ಮರವೇರಿದಿ;
ಜಲದಕ್ಷ ಮಧ್ಯದಿ ನಿಂತು ಬೇಡಲೆಮ್ಮಗೆ— ಜಲಶಾಯಿ ನೀನೀಯದೆ
ಉಳಿಸಕ್ಷದೆಮ್ಮಭಿಮಾನವನ್ನು ಕಳೆದಿ—ಉತ್ಸವವು ಸಮಗಾಯಿತೋ!

ಪದ

ಸರಿ ಬಂದ ಪರಿಯೆಮ್ಮೊಳಾಡಿದಿ — ಕ್ರೀಡೆ ಮಾಡಿದಿ
ಮಾನವೀಡಾಡಿಸಿದಿ.....
ಕೊರಳ ಕೊಯಿದು ಹೋಗುವೆಯಲ್ಲಾ—ಲಕ್ಷುಮಿಯ ನಲ್ಲಾ
ನಿನಗ್ಹೇಳುವರಿಲ್ಲಾ !.....
ಎರವಿನಾಭರಣವನಿಟ್ಟಂತೆ — ಹರುಷಬಟ್ಟಂತೆ
ಎಮಗಾಯಿತೊ ಚಿಂತೆ .....
ಸರಸಿಜಾಂಬಕ ಅಯ್ಯ ಹೊಳ್ಳಯ — ವೆಂಕಟರಾಯಾ
ಕೇಳಿ ನಿಲ್ಲೋ ಮಹರಾಯಾ.....
ಮಥುರೆಗೆ ಹೋಗಬೇಡೆಲೊ ರಂಗಾ — ಇದು ಏನಂಗಾ ? ೭

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಬಿನ್ನವಿಸಿಕೊಂಡಂತೆ 'ಒಲುಮೆ' ಕತೆಯ ವಿಮರ್ಶೆಗಳು ೬ ಜನರಿಂದಲೂ 'ಅಂದು-ಇಂದಿನ ನಡುವೆ' ಕವನದ ವಿಮರ್ಶೆಗಳು ೬ ಜನರಿಂದಲೂ ಬಂದಿದೆ.

'ಒಲುಮೆ' ಕತೆಯ ವಿಮರ್ಶಕರು :

೧ ಶ್ರೀ. ಎಚ್. ಚಂದ್ರಶೇಖರ ದೇವದುರ್ಗ,—ಇಂ[illegible] ದ್ವಿ. ವರ್ಷ, ಸಿಟಿ ಕಾಲೇಜ್, ಹೈದರಾಬಾದ್ ೨ ಶ್ರೀ. ಅನಂತ ಸಿ. ಜಹಾಗಿರ್‌ದಾರ್, ಕಲ್ಲಬುರ್ಗಿ, ೩ ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರಂ, ಕಾಸರಗೋಡು; ೪ ಶ್ರೀ. ಎಚ್. ಎನ್. ದೇಶಪಾಂಡೆ ಬಿ. ಎ. (ಆನರ್ಸ್), ಎಲ್. ಎಲ್. ಬಿ. ವಿಜಾಪುರ; ೫ ಶ್ರೀ. ಎಸ್. ಮಲ್ಲಣ್ಣ ಗೋಗಿ ಸುಲ್ತಾನ್‌ಪುರ; ೬ ಶ್ರೀ. ಹಾಲಾಡಿ ಮಾರುತಿರಾವ್ ಬಿ. ಎ. (ಆನರ್ಸ್); ಹೊನ್ನಾವರ.

'ಅಂದು ಇಂದಿನ ನಡುವೆ' ಕವಿತೆಯ ವಿಮರ್ಶಕರು :

೧ ಶ್ರೀ. ಕೆ. ಬಿ. ಟಿ. ಕಾಸರಗೋಡು; ೨ ಶ್ರೀಮತಿ ಉಮಾಬಾಲ[illegible] ಸೀತಾರಾಮರಾವ್, ಹೊಸಬಾಳೆ. ೩ ಶ್ರೀ. ಪುಂಡೂರ ವೆಂಕಟರಾಜ ಪುಣಿಂಚತ್ತಾಯ, ಕಾಸರಗೋಡು; ೪ ಶ್ರೀಮತಿ [illegible]ಾ" ಬೆಂಗಳೂರು; ೫ ಶ್ರೀ. ಕೆ ಎಸ್. ಶರ್ಮಾ, ಕಾಸರಗೋಡು (ದ. ಕ.) ೬ ಶ್ರೀ. 'ಎಮ್ಮೈಸ್ಟೆ' ಕ್ಯಾನರಾ ಕಾಲೇಜು, ಕುಮಟಾ.

ಎಲ್ಲ ವಿಮರ್ಶೆಗಳನ್ನೂ ಜಯಂತಿಯ ಸಂಪಾದಕ ಸಮಿತಿಯವರು ನೋಡಿ, ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ. ಈ ಸಲದ ವಿಮರ್ಶೆಗಳ ವಿಷಯದಲ್ಲಿ ಅವರು ಪಟ್ಟ ಅಭಿಪ್ರಾಯ ಹೀಗಿದೆ :—

"ಈ ಸಲ ಬಂದ ಪ್ರತಿಯೊಂದು ವಿಮರ್ಶೆಯೂ ವಿಮರ್ಶೆಯೆನಿಸಿಕೊಳ್ಳುವ ಯೋಗ್ಯತೆಯುದಾಗಿ ಇರುವುದು ಸಂತೋಷದ ಸಂಗತಿಯಾಗಿದೆ. ಕತೆಯನ್ನೇ ಆಗಲಿ, ಕವಿತೆಯನ್ನೇ ಆಗಲಿ, ಎಲ್ಲ ವಿಮರ್ಶಕರೂ ಚೆನ್ನಾಗಿ ತಿಳಿದುಕೊಂಡು ವಿಮರ್ಶೆ ಮಾಡಿದ್ದಾರೆ. ನಮ್ಮ ತರುಣರಲ್ಲಿ ಈ ಬಗೆಯ ವಿಮರ್ಶಾವಿವೇಕ ಬೆಳೆಯುತ್ತಿರುವುದು ನಮ್ಮ ಸಾಹಿತ್ಯಕ್ಕೆ ಶುಭಲಕ್ಷಣವಾಗಿದೆ."

'ಒಲುಮೆ' ಕಥೆಯ ವಿಮರ್ಶೆಗಳಲ್ಲಿ **ಶ್ರೀ. ಕೆ. ಎಸ್. ಶರ್ಮಾ** ಮತ್ತು **ಶ್ರೀ. ಎಚ್. ಎನ್. ದೇಶಪಾಂಡೆ** ಅವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ. ಎಸ್. ಮಲ್ಲಣ್ಣ ಗೋಗಿ, ಶ್ರೀ. ಹಾಲಾಡಿ ಮಾರುತಿರಾವ ಅವರ ವಿಮರ್ಶೆಗಳು ಉತ್ತಮವಾಗಿವೆ. ಮಿಕ್ಕುವೂ ಚೆನ್ನಾಗಿವೆ.

'ಅಂದು ಇಂದಿನ ನಡುವೆ' ಕವಿತೆಯ ವಿಮರ್ಶೆಗಳಲ್ಲಿ **ಶ್ರೀಮತಿ 'ಕಲಾ' ಶ್ರೀ. ಕೆ. ಎಸ್. ಶರ್ಮಾ** ಅವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಮಿಕ್ಕುವೂ ಉತ್ತಮವಾಗಿಯೆ ಇವೆ.

ಮುಂದಿನ ಸಂಚಿಕೆಯ ಮೇಲಾಟಕ್ಕಾಗಿ ಈ ೭ಂಗಳ ಸಂಚಿಕೆಯಲ್ಲಿ ಪ್ರಕಟವಾದ **'ಮೂರು ಮಜಲುಗಳು'** ಎಂಬ ಕಥೆಯನ್ನಾಗಲಿ, **'ಅಶಾಂತಿಪರ್ವ'** (ಜುಲೈ–ಆಗಸ್ಟ್ ಎರಡೂ ಸಂಚಿಕೆಗಳಲ್ಲಿ ಬಂದಿದೆ.) ಎಂಬ ತರಂಗರೂಪಕವನ್ನಾಗಲಿ ವಿಮರ್ಶಿಸಿ ಬರೆಹಗಳನ್ನು ಕಳುಹಬೇಕು.

—ಸಂಪಾದಕ

"ಒಲುಮೆ"

(ಚಿಕ್ಕಕತೆಯ ವಿನುರ್ಶೆ)

ಶ್ರೀ. ಕೆ. ಎಸ್. ಶರ್ಮಾ, ವಾಣೀನಿಲಯಂ
ಕಾಸರಗೋಡು ದ. ಕ.

ಜೀವನದಲ್ಲಿ ತಡೆಯಿಲ್ಲದೆ ಏರಿಬರುವ ಅನುಭೂತಿ-ಅನುಭವಗಳು ರಚನಾತ್ಮಕ ಭಾವನೆಯಿಂದದಳಿ ನಿಂತರೆ, ಅದನ್ನೇ ಕಥೆಯೆಂದು ಕರೆಯುವರು. ಕಥೆಯ ಧ್ಯೇಯವು ಮನೋವೈಜ್ಞಾನಿಕ ವಿಶ್ಲೇಷಣದಲ್ಲಿ-ಯಥಾರ್ಥ ಹಾಗೂ ಸ್ವಾಭಾವಿಕ ಚಿತ್ರಣದಲ್ಲಿದೆಯೆಂಬುದನ್ನರಿಯುವುದಗತ್ಯವಿದೆ. ಕಲ್ಪನೆಯು ಮಾತ್ರೆಯು ಕಡಿಮೆಯಿದ್ದು ಜೀವನಾನುಭವಗಳು ತುಂಬಿ ಬಂದರೆ, ಆಗ ಅದು ಸಾಹಿತ್ಯವನ್ನು ಹೊಂದುವುದರೊಡನೆ ಜನತೆಯ ಹೃದಯವನ್ನು ಸೆಳೆದು ಸಾಮರಸ್ಯವನ್ನೆಳೆದುವುದು. ಕಥೆಯೆಂದರೆ ಯಥಾರ್ಥ ಜೀವನಚಿತ್ರವಲ್ಲ; ಕಥೆಯಲ್ಲಡಕವಾದ ಪಾತ್ರಗಳ ಸುಖ-ದುಃಖಾನುಭೂತಿಯುವಾಚಕನ ಹೃದಯಾನುಭೂತಿಯೊಡನೆ ಅಭೇದವನ್ನು ಹೊಂದಿ ಪ್ರಭಾವವನ್ನು ಬೀರಿದರೆ ಸಾಕು; ಆಗ ಮಾತ್ರ ಕಥಾಂತರ್ಗತ ಪಾತ್ರಗಳು ವಾಚಕನೊಡನೆ ಆತ್ಮೀಯತೆಯನ್ನು ಹೊಂದುವುದು.

ಜೀವನದಲ್ಲಿ, ಅಲ್ಲೂ ದಾಂಪತ್ಯದಲ್ಲಿ ಮೂಡಿಬರುವ ಪ್ರಥಮ ಪ್ರೇಮಾನುಭವವೆಂಬುದು ಅತಿ ವಿಶಿಷ್ಟವಾಗಿದೆ. ಈ ಅನುಭವವು ಪರಿಸ್ಥಿತಿಯ ಪ್ರಭಾವದಿಂದ, ಹೃದಯಗತ ಭಾವನಿವೇದನ ಕುತೂಹಲದಿಂದ ವಿಚ್ಛಿನ್ನವಾದರೆ, ಅರ್ಥಾತ್ ಭಾವವೈರಕ್ಯವು ತಲೆದೋರಿದರೆ, ತನ್ನಿಮಿತ್ತವಾಗಿ ತಲೆದೋರುವ ದುರಂತವನ್ನು ನಿರೂಪಿಸಲು ಸಾಧ್ಯವಿಲ್ಲ. ಒಲುಮೆಯಿರಕದಲ್ಲಿರಬೇಕಾದ ಹೃದಯಗಳನ್ನದು ಮುರಿಯಲು ಶಕ್ತನಾಗುವುದೆಂಬುದಿದು ನಿಜವು. ಆದುದರಿಂದಲೆ ವಿಮಲಾ, ತನ್ನ ಮುದುವೆ ಕಳೆದು, ಬಿಡುಮನೆಗೆ ಬಂದು, ತನ್ನಿನಿಯನ ಮಧುರಮಿಲನವನ್ನು ಸಾಧಿಸಿ ಆನಂದಿಸಬೇಕಾದ ಕಾಲದಲ್ಲಿ, ಅನಿರೀಕ್ಷಿತವಾಗಿ ಬಂದೊದಗಿದ ವಿಪ್ಲವದಲ್ಲಿ ಬೆಂದು ಬೇಗುದಿಗೊಂಡಳು. ಇದಕ್ಕೆ ಕಾರಣ ?

" ವಿಮಲಾ ಜೆಲುವೆ. ಆದರ್ಶಸಾಧಕಿ. ಅದುದರಿಂದಲೆ ತನ್ನ ಅತ್ಯಂತ ಗೆಳತಿಯಾದ ರಮಾನ ಅಣ್ಣನ ಎರಡನೆಯ ಸಂಬಂಧವನ್ನೊಲ್ಲದೆ, ಜೀವನದ ಆದರ್ಶಕ್ಕಾಗಿ, ತದಂತರ್ಗತ ಜೀವನಸುಖಕ್ಕಾಗಿ ಆನಂದನನ್ನು ಮದುವೆಯಾದಳು; ತನ್ನನ್ನು ಧನ್ಯೆಯೆಂದು ತಿಳಿದುಕೊಂಡಳು. ಮದುವೆ ಕಳೆದು ಬಿಡುಮನೆಗೆ ಬಂದ ದಿನ, ಆ ಪ್ರಥಮರಾತ್ರಿಯಲ್ಲಿ ಆನಂದಾಭಿವರ್ಧಕವಸ್ತುವಿನ್ಯಾಸವುಳ್ಳ ಆ ಕೋಣೆಯಲ್ಲಿ-ವಿಮಲಾ ತನ್ನಿನಿಯನ ಬಳಿ ಸಾರಿದಾಗ, ಹೃದಯೈಕ್ಯದೊಡನೆ ಜೀವನದ ಆದರ್ಶವನ್ನು ಅಭೇದವಾಗಿ ಹೊಸೆಯ ಬಯಸಿದಾಗ-ಆನಂದ, ತನ್ನ ಮನಸ್ಸಿನ ಉರಿಯನ್ನು ತಣಿಸಬಯಸಿ, ವಿಮಲಾಳ ಪ್ರೇಮಾನುರಂಜಿತ ಮೃದ್ವಾಶ್ವಾಸನೆಯನ್ನು ಪಡೆಯಬಯ್ಯಸಿ, ವಿವಾಹಾತ್ಪೂರ್ವದಲ್ಲಿ ತನ್ನ ಜೀವನದಲ್ಲಿ ಕಾಲಿರಿಸಿ-ತಪ್ಪಿಹೋದ 'ವನಮಾಲಾ'ನ ಆಶಾಭಂಗವನ್ನು ಮಾರ್ಮಿಕವಾಗಿ ನಿರೂಪಿಸುವನು; ನಿರೂಪಣೆಯಲ್ಲಿ ತನ್ನ ಮತ್ತು ಮಾಲಾಳ ಮಧ್ಯೇ ನೆಲೆನಿಂತು, ತಪ್ಪಿ ಹೋದರೂ ಮರೆಯಲಾರದ ಬಾಂಧ್ಯವ್ಯವನ್ನು ತುಂಬಿ, ವಿಮಲೆಯ ಹೃದಯದಲ್ಲಿ ಕಿಚ್ಚನ್ನೆಬ್ಬಿಸುವಂತಾದನು. ಆನಂದನ ಆಶ್ವಾಸನೆಗೆಂದು ಕೈನೀಡಿ ಕಾತರಿಸಿದ ಮನ, ವಿಮಲೆಯು ಉಗ್ರತೆಯನ್ನು ಕಂಡು ತಳಮಳಿಸಿತು. ವಿಮಲೆ—ತನ್ನನ್ನು ನಂಬಿಸಿದ ಪರಿಸ್ಥಿತಿಯನ್ನು ಎದುರಿಸಿ, ಆನಂದನನ್ನು ಕೃತಘ್ನನೆಂದೂ, ವಿಶ್ವಾಸಘಾತಕಿಯೆಂದೂ ಕೆಣಕಿ ಮಾತನಾಡಿ, ಆತ್ಮಹತ್ಯೆಗೆ ಮನ ನೀಡಿ, ಎಂತೊ ಏನೋ-ಉರಿಯಲ್ಲೂ ಒಂದು ಬಗೆಯ ಆತ್ಯಪ್ತಶಾಂತಿಯಲ್ಲಿ ತೊನೆದಾಡುವಳು. ಆದರೆ ವಿಮಲೆಯು ಸಲಹೆಯಂತೆ ಅವರು ಮುಂದಿಯ ಮುಂದೆ ಆದರ್ಶದಂಪತಿಗಳಾದರು. ಏಕಾಂತದಲ್ಲಿ ಸ್ಮಶಾನಂಗಾರವತೆಯನ್ನು ಕಂಡರು. ಕೊನೆಗಂತೂ ಆನಂದ ಆಕೆಯನ್ನು ವಿವಾಹವಿಚ್ಛೇದಕ್ಕೆ ಕೇಳುವಂತಾಯಿತು. ವಿಮಲೆಯೇಕೆ ಆದನ್ನೊಪ್ಪಬೇಕು? ಆದರೆ ಸ್ವಭಾವತಃ ಶಾಂತೆಯಾದ ಹೃದಯಸಂಪನ್ನೆಯಾದ ವಿಮಲೆ, ಒಂದು ದಿನ, ಆನಂದನ ಮನೆಯಲ್ಲೇ ತನ್ನ ಹೃದಯವನ್ನು ಕೊರೆಯುತ್ತಿದ್ದ ಅಶಾಂತತೆಯನ್ನು ತಳ್ಳಿ, ಸುಶಾಂತೆಯಾಗಿ ಒಲುಮೆಯನ್ನಾಹ್ವಾನಿಸಿದಳು. ಆನಂದ-ವಿಮಲೆಯರು ಬದುಕಿನಲ್ಲಿ ನೂತನವಾಗಿ ಮೂಡಿಬಂದ ಪ್ರೇಮಚಂದ್ರಿಕೆಯ ನೇಪಥ್ಯದಲ್ಲಿ, ಗತಿಸಿದ ದಿನಗಳ ರೌದ್ರವನ್ನು ಕಣಿಸಿದರು.

ಮನೋವಿಶ್ಲೇಷಣಾತ್ಮಕ ಗತಿಯಲ್ಲಿ ಹರಿದು ಬಂದ ಕತೆಯಿದು. ಕಥಾಪ್ರಪಂಚದಲ್ಲಿ ಈ ಬಗೆಯ ಚಿತ್ರಣಕ್ಕೆ ವ್ಯಾಕಖ್ಯಾನವೆಯೆಂದಾದರೆ, ಲೇಖಕಿಯರು ತತ್ಸಂಪ್ರದಾಯಕ್ಕನುವಾಗಿಯೆ ಕಥಾಪ್ರವಾಹದಲ್ಲಿ ಮೇಲೇರಿ ಬರುವ ಘಟನಾತರಂಗಗಳನ್ನು ಕಾಣಿಸಿದ್ದಾರೆನ್ನಬೇಕು ಪ್ರಥಮಪ್ರೇಮದಲ್ಲಿ ಒಂದೊದಗಿದ ದುರಂತಘಟನೆಯನ್ನು ಘಟನಾಂತರ್ಗತ ಬಾವಸಂಧಿಗಳನ್ನು, ಚೆಲುವಾಗಿ ಮಾರ್ಮಿಕವಾಗಿ ರೂಪಿಸಿದ ಲೇಖಕಿಯರು- ಜೀವನದ ಪರಿಣಾಮವನ್ನು ಅರ್ಥಾತ್ ಉಪಸಂಹಾರವನ್ನು ಮಾರ್ಮಿಕವಾಗಿ ಕಾಣಿಸಲಿಲ್ಲವೆನ್ನಬೇಕು. ಒಂದು ಅನಿರ್ದಿಷ್ಟವಾಗಿ ಭಾವಪ್ರಜ್ಞೋದನೆಯಿಂದ, ವಿಮಲೆಯ ಹೃದಯಾನುಗತ ಸಹಾನುತಾಪಪ್ರಭಾವದಿಂದ—ಜೀವನವು ತುಂಬಿ ಬಂದಂತೆ ಕಾಣಿಸುತ್ತದೆ ಇಂತಹ ಉಪಸಂಹಾರವು ಸಮರ್ಪಕವಲ್ಲವೆಂಬ ಭಾವವಲ್ಲ ಇಲ್ಲಿರುವುದು; ಆದಿ-ಮಧ್ಯಗಳ ಗತಿಗನುವಾಗುವ ತೆರದಲ್ಲಿ ಅಂತ್ಯವು ಪ್ರಭಾವಾನ್ವಿತವಾಗಿಲ್ಲವೆಂದು ಮಾತ್ರ- ಜಿಜ್ಞಾಸ್ಯವು. ಮನೋವೈಜ್ಞಾನಿಕ ಗತಿಯಲ್ಲಿ ಸಾಗುವ ಕಥೆಯ ಅಂತ್ಯದಲ್ಲಿ, ಜೀವನವು ಮಾರ್ಪಾಟು ಹೊಂದಬಹುದಾದ ಬಗೆಯನ್ನು ಮಾರ್ಮಿಕವಾಗಿ ಸೆಳೆಯಬೇಕು. ಅದುವೆ ಈ ಬಗೆಯ ಕಥೆಯ ಸಾರ್ವಜನೀನ

ಕಥಾನುಗುಣ ಘಟಕಗಳು!

ವಿಮಲೆಯ ಮದುವೆಯ ಗದ್ದಲದಿಂದ ಕಥೆಯು ಆರಂಭವಾದರೆ, ಅಲ್ಲಿ ಒಂದು ಮಾರ್ಮಿಕ ಘಟನೆಯನ್ನು ನಾವು ಕಾಣಬಹುದು. ಅದುವೆ ಆಕೆಯ ಗೆಳತಿ ರಮಾನ ಅಣ್ಣನೊಡನೆ

ಸಾಗುವಂತಾಗದೆ ಉಳಿದ ಮದುವೆಯ ಪ್ರಸ್ತಾಪ. ವಿಮಲೆಯನ್ನು ಉಡುಗೊರೆ ಕೊಡಲು ಸಮೀಪಿಸಿದ ರಮಾ–ಹರಕೆಯನ್ನು ಬಯಸಿ ಸಾಗಿದಾಗ, ಆಕೆಯ ಕಣ್ಣುಗಳಲ್ಲಿ ಮಿಂಚಿಹೋದ ವಿಚಾರವನ್ನು — ನೆನಪನ್ನು — ವಿಮಲಾ ತನ್ನೆದೆಯ ಮುಂದೆ ತರುವಳು. ಎರಡನೆಯ ವಿವಾಹಕ್ಕೊಪ್ಪದ ರೀತಿಯಲ್ಲಿ ಸಾಗಿನಿಂತ ವಿಮಲೆಯ ಮನೋ ನಿರ್ಧಾರವು ರಮಾನ ಮನಸ್ಸನ್ನು ಕೆದಕಿರಬಹುದು. ಆದರೆ ವಿಮಲೆಯದನ್ನು ಆದರ್ಶದ ಮುಂದೆ ಗಣಿಸಬರಬಹುದು; ಅದಕ್ಕೆಂದೇ ಆಕೆ ಆನಂದನ ಕೈ ಹಿಡಿದಳು; ಗತಕಾಲದ ನೆನಪನ್ನು ಮೆಲುಕಾಡಿ ಮರೆತಳು. ಆದರೆ ವಾಚಕನದನ್ನು ಮರೆಯುವಂತಿಲ್ಲ. ವಿಮಲೆ ಬಿಡುಮನೆಯಲ್ಲಿ ಅನುಭವಿಸಿದ ದುಃಖಾತಿರೇಕದ, ಕ್ರೋಧಾನಲ. ಜ್ವಲಿತ ಪರಿಸ್ಥಿತಿಯಲ್ಲದನ್ನು ಪರಿಭಾವಿಸಿ–ಪ್ರಸ್ತುತ ಕಥೆಗೆ ತಳಹದಿ. ಯಾಗಿ ಬಂದ ಆ ಚಿಕ್ಕ ಘಟನೆಯನ್ನು ಮೆಚ್ಚಿ ತಲೆದೂಗುವನು; ಆಕೆಯ ಉದ್ರೇಕಪೂರ್ಣ ರುದ್ರಧ್ವನಿಯಲ್ಲದನ್ನು ಯಾಥಾರ್ಥ್ಯದ ನೋಟದಲ್ಲಿ ಕಾಣುವನೆಂದೆನ್ನಬೇಕು. ಇನ್ನು ಬಿಡುಮನೆಯ ಅಲಂಕಾರ–ಸೌಂದರ್ಯವನ್ನು ನಿರೂಪಿಸಿ ಮುಂದಿನ ದುರಂತದಲ್ಲಿ ಶಕ್ತಿಯನ್ನೊಡಮೂಡಿಸಿ, ರಸಾಂತರ ಪ್ರವೇಶಾನುಕೂಲ್ಯವನ್ನು ಸಾಧಿಸಿದ ಲೇಖಿಕೆಯರ ಜಾಣ್ಮೆಯನ್ನು ಶ್ಲಾಘಿಸಲೇಬೇಕು. ಬಿಡುಮನೆಯಲ್ಲಿ ನಡೆದ ಘಟನೆಯದು ಕಥೆಯ ಜೀವನಾಡಿ. ಈ ಭಾಗವೇ ಕಥೆಯ ಪೂರ್ಣವಾದ ನಿಲುವನ್ನು ತೋರಿದೆ. "ಗಂಡ–ಹೆಂಡಿರ ಜೀವನದಲ್ಲಿ ಯಾವ ಒಡಕೂ ನೆಲೆಸಿರಬಾರದು" ಎಂಬ ಧ್ಯೇಯದಿಂದ ಆನಂದ, ವಿಮಲೆಯ ಶಾಂತಗುಣವನ್ನು ಮುಂದೊಡ್ಡಿ, ತನ್ನ ಜೀವನದಲ್ಲಿ ನಡೆದ ವನಮಾಲೆಯ ಪ್ರಸಂಗವನ್ನು ಮನಮುಟ್ಟುವಂತೆ ವರ್ಣಿಸುವನು. ಆನಂದನು ನೆರೆಯಲ್ಲೆ ಇದ್ದುಕೊಂಡು ಬಾಳಿದ ತನ್ನ ಮತ್ತು ಮಾಲಾನ ವಿದ್ಯಾರ್ಥಿಜೀವನದ ಪ್ರಸಂಗವನ್ನೂ, ತದುಪರಿ ಮೊಳೆದೋರಿದ ವಿವಾಹಪ್ರಸಂಗವನ್ನೂ, ತನ್ನಿಮಿತ್ತವಾಗಿ ಬಂದೊದಗಿದ, ತನ್ನ ತಂದೆ–ತಾಯಿಗಳ ಕೇಳಿಕೆಯ ವರದಕ್ಷಿಣೆಯ ಪ್ರಸಂಗದಲ್ಲಿ ತಪ್ಪಿಹೋದ ಬಗೆಯನ್ನೂ– ಉಲ್ಲೇಖಿಸುತ್ತ, ಆ ಕಾಲದಲ್ಲಿ ಆನಂದ ಮತ್ತು ಮಾಲಾನ ಏಕಾಂತದಲ್ಲಿ ನಡೆದ ಸಂಭಾಷಣೆಗಳನ್ನು ಬಗೆದೋರುತ್ತ, ಸಾಗಿ–ವಿವಾಹದ ಬಳಿಕಲೂ ವನಮಾಲಾ ಆನಂದನಲ್ಲೇ ಜೀವನಾರ್ಪಣವೆಸಗಿ ನಿಂತ ಬಗೆಯನ್ನೂ ಹೇಳಿ, ವಿಮಲೆಯ ಆಶ್ವಾಸನೆಗಾಗಿ– ತನ್ನ ಬಾಳಿನ ಮಧುರರೂಪಣಕ್ಕಾಗಿ– ಹೃದಯವನ್ನು ಆಕೆಯ ಮುಂದಿರಿಸಿ ನಿಲ್ಲುವನು. ಬಿಡುಮನೆಯಲ್ಲಿ–ಏಕಾಂತದಲ್ಲಿ ನಡೆದ ಈ ಪ್ರಸಂಗ– "ಎರಡನೆಯ ಸಂಬಂಧವನ್ನು" ಒಲ್ಲದ ವಿಮಲೆಯ ಮುಂದೆ ರುದ್ರಾಧ್ಯಾಯವನ್ನು ಸೆಳೆಯುವುದು. ಈ ಬಗೆಯ ವಿವಾಹವನ್ನಾಕೆ ಒಲ್ಲದವಳೆಂದರೆ,–ಆನಂದನ ಈ ವೇದನೆಯನ್ನಾಕೆ ಒಪ್ಪುವಳೇ? ಅಲ್ಲೂ ಎರಡನೆಯ ಸಂಬಂಧವೊಂದನ್ನು ಗೆಳೆತನದ ಪರಮಾವಧಿಯಲ್ಲೂ ಕಡೆಗಣಿಸಿ ಮುಂದೆ ಬಂದ ವಿಮಲೆ, ಪ್ರೇಮದ ಪ್ರಥಮಾನುಭವದ ರಾತ್ರಿಯಲ್ಲ, ಹಲವಾರು ಬಗೆಯ ಪ್ರೇಮಾದರ್ಶಗಳನ್ನು ಹೃದಯದಲ್ಲಿ ಸಾಲಾಗಿ ಪೋಣಿಸಿಕೊಂಡು, ಆನಂದನ ಹೃದಯವನ್ನರಿಯುವುದರಲ್ಲಿ ಜತೆಗೊಳಿಸಿ ಅನಂದಿಸಿ ತಣಿಯಬೇಕೆಂದೆಣಿಸಿದ ಆ ರಾತ್ರಿಯಲ್ಲಿ, ಆನಂದನ ಮಾತುಗಳನ್ನು ಕೇಳಿ ತಣಿಯುವಳೆ? ಸಹಾನುಭಾವವನ್ನು ತೋರುವಳೇ?–ಇಲ್ಲ! ಆಕೆ ಮಾನಸಿಕಾಂದೋಲನದ ರುದ್ರವಿಪ್ಲವಗರ್ತದಲ್ಲಿ ಮುಳುಗಾಡಿದಳು; ಸರ್ಪಿಣಿಯಾದಳು. ಆನಂದನನ್ನು ಪ್ರತಿಭಟಿಸಿದಳು. ಹೃದಯವನ್ನೆಲ್ಲ ಬಿಚ್ಚಿ ತೋರಿದ, ವಿಮಲೆಯ ದಯದಿಂದ ಬಾಳಿನಲ್ಲಿ ಬೆಳಕುಕಾಣಬೇಕೆಂದಾಶಿಸಿದ–ಆನಂದ ಕಂಡುದು, ನೆಲೆಯಿಲ್ಲದೆ ಕೊರಗಿ ನಿಂತು–ಪ್ರತಿಭಟಿಸುವ ಘೋರರೂಪವನ್ನು! ನಿಜವಾಗಿ ವಿಮಲೆಯಾಡಿದ ಮಾತುಗಳು ತಪ್ಪಲ್ಲ, ಆಕೆಯ ಬಯಕೆಯ ವಿರುದ್ಧ ಪರಿಸ್ಥಿತಿ ಬಂದಾಗ, ಅದೂ ಆ ಪ್ರಥಮಾನುಭವದ ದಿನ–ಆಕೆಯದನ್ನು ಹೇಗೆ ಸೈರಿಸಬೇಕು? ಜೀವನದ ಕಹಿಯನ್ನರಿಯದೆ ಆದರ್ಶವನ್ನೇ ಹೊಸೆದು ನಿಂತ ವಿಮಲೆ, ವಿಪರೀತಪರಿಸ್ಥಿತಿಯನ್ನು ಎದುರಿಸಬೇಕಾದಾಗ ಧೀರತೆಯನು ಮಾಡಬೇಕು? ಆನಂದನಾಕೆಯನ್ನು ಮೋಸಮಾಡ ಬಯಸಿಲ್ಲ; ಜೀವನದಲ್ಲಿ ಶಾಂತಿಯನ್ನು ತುಂಬಿಕೊಳ್ಳಲು ಬಗೆದೇ ತನ್ನ ಗತೇತಿವೃತ್ತವನ್ನಾಡಿಕೊಂಡ. ವಿಮಲೆ ವಿಪರೀತವೃತ್ತಿಗೆ ಕಾಲ್ನೀಡಿದಾಗ ಆನಂದ ನಿರಾಶಿತನಾಗಿ–ನಿವಾಹವಿಚ್ಛೇದನಕ್ಕಾಗಿ—ಸಹಿಸದೆ ಹೇಳಿಕೊಂಡ. ಅದೂ ವಿಪರೀತವಾಯಿತು. ಆನಂದ–ವಿಮಲೆಯರು ನುಂದಿಯ ಮುಂದೆ ಆದರ್ಶರಾಗಿ, ಏಕಾಂತದಲ್ಲಿ ನೊಂದ್ದರು. ಮುಂದಿನ ಘಟನೆಯೇ— ಆನಂದನ ಮನೆಯಲ್ಲ ನಡೆದ ವಿಚಾರ. ಆನಂದನಲ್ಲಿಗೆ ಬಂದ ವಾರದ ಬಳಿಕೊಂದು ದಿನ, ಆನಂದನಿಗೆ ಕಾರದವಲಕ್ಕಿ ಕೊಡಲು ಬಂದ ವಿಮಲೆ—ಏಕಾಂತದಲ್ಲಿ ನೋಯುತ್ತಿದ್ದ ಆನಂದನನ್ನು ಕಂಡು, ನೊಂದು ಹೃದಯಪರಿವರ್ತನೆಗೆ ಗುರಿಯಾದಳು. ಆನಂದನ ಸಹನೆಗಾಗಿ, ಮೂಕವೇದನೆಗಾಗಿ ಕರಗಿ ಮೃದುವಾದಳು. ಪರಿವರ್ತನೆಗನುವಾಗಿ ಲೇಖಿಕೆಯರು–ಹಿಂದೆ ಒಂದೆಡೆ ಎರಡೇ ಮಾತಿನಲ್ಲಿ, ವಿಮಲೆಯ ಅನುಭೂತಿ ದಯಾಗುಣಸಂಪನ್ನ ಹೃದಯವನ್ನು ರೂಪಿಸಿದ್ದಾರೆ. ಕಥೆಯ ಕೊನೆಯು ವಿಮಲಾನ ಹಿತವಾದ ಸ್ಮಿತದಲ್ಲಿ ಅರಳಿ ಪರಿಮಳಿಸುವುದು. ಬೇರ್ಪಟ್ಟ ಹೃದಯಗಳೊಂದಾಗಿ ನಲಿದುವು!

ಕಥೆಯ ಸ್ವಾಭಾವಿಕತೆಗನುವಾಗಿ ಜೀವನದ ಒಂದೇ ಒಂದು ಘಟನೆಯಿಲ್ಲ ಅರಳಿನಿಂತಿದೆ. ಈ ಘಟನೆಯಲ್ಲಿ ಎರಡು ಪಾತ್ರಗಳು ಮಾತ್ರ ನಮ್ಮ ಮುಂದೆ ಬರುವುವ. ವನಮಾಲಾನ ದುರಂತವು ಮಾತ್ರ ಕಥಾಂತರ್ಗತವಾಗಿ—ಅದೃಶ್ಯವಾಗಿ ಸಾಗಿ ನಿಂತಿದೆ. ಆ ಪಾತ್ರದ ಅಪಾರವೇದನೆಯು—ಪ್ರಸ್ತುತಘಟನೆಯ ಪೂರ್ಣತೆಯು ನಿಲುವಾಗಿದೆ. ಲೇಖಿಕೆಯರು ಆನಂದನನ್ನು ಸಹನೆಯ ಮೂರ್ತಿಯನ್ನಾಗಿ ನಿರೂಪಿಸಿದಂತೆ, ಅನುಭಾವಸಂಪನ್ನ ಹೃದಯದೊಲವಿನಲ್ಲಿ ತುಂಬಿ ಕಾಣಿಸಿದಂತೆ, ಆತನನ್ನು ನಿರ್ಬಲನನ್ನಾಗಿ ಹೊಸೆಯಲು ಮರೆಯಲಿಲ್ಲ! ವನಮಾಲೆಯ ದುರಂತಕ್ಕೆ ಆನಂದನ ದೌರ್ಬಲ್ಯವೇ ಕಾರಣ. ಆದುದರಿಂದಲೆ ಆತ ಪ್ರಥಮದಿನದಲ್ಲೆ—ವಿಮಲೆಯ ಹೃದಯವನ್ನರಿಯದೆಯೆ, ತನ್ನಜೀವನದ ಕಥೆಯನ್ನು ಸಾರಲು ನಿಂತ; ಆತನು ಆ ವೃತ್ತವನ್ನು ತಡೆದು—ಕಾಲವನ್ನು ಕಾಯಬಹುದಿತ್ತು. ಆದರೆ ವಿಮಲೆಯಂತಹ ಜೆಲುವೆ ತನ್ನವಳಾದಾಗ–ಒಮ್ಮಿಂದೊಮ್ಮೆಗೆ

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.
ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!
ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಗಿ

ಆಕೆಯ ಹೃದಯವನ್ನು ಸೆಳೆದು—ತನ್ನ ವ್ಯಕ್ತಿತ್ವವನ್ನು ನೂತನವಾ[illegible] ಹೊಸೆಯಲೆಳಸಿದಾಗ—ಆತನಿಗೆಲ್ಲಿದೆ ಸಹನೆ? ಅತಿರೇಕದ ಈ ಆತುರದಲ್ಲಿ ತನ್ನನ್ನೆ ತಾನು ದುರಂತಕ್ಕೆ ಗುರಿಯಾಗಿಸಿ—ಅದಕ್ಕಾಗಿ ಬಗೆಯ ವಿಮೋಚನೆಯನ್ನೂ ಕಾಣದಷ್ಟು ಅಸಮರ್ಥನಾದ. ಆದರೆ ಅತನ ಸಹನೆ ಆತನನ್ನುಳಿಸಿತು. ಅನವದಂತಲ್ಲ ವಿಮಲೆಯ ನಡತೆ. ಆಕೆ ಆದರ್ಶವನ್ನೇ ಧ್ಯೇಯವಾಗಿಸಿ ಸಾಗಿಸಿದವಳು. ಗುಣವತಿಯಾದರೂ, ಸುಶೀಲೆಯಾದರೂ ಸಹನೆಯನ್ನು ಆದರ್ಶದ ಮುಂದೆ ಪುಡಿಯಾಗಿಸಿದವಳು. ಓದುಗನಾಕೆಯನ್ನು ನಿಂದಿಸಲಾರನು. ಆಕೆಗಾಗಿ ನೋಯುವನು, ಕೊನೆಗವಳ ಪರಿವರ್ತನೆಗಾಗಿ ಶ್ಲಾಘಿಸಲಾವನು.

ರಸಾನುಗುಣವಾದ ಸಂಭಾಷಣೆಗಳಲ್ಲಿ ಸೂರೆಗೊಂಡಿವೆ. ಪನಮಾಲಾನ ಪ್ರಸಂಗದಲ್ಲಿ ಬಂದ ಆಕೆಯಾಡಿದ "ನಾಳೆ ನನ್ನ ಮದುವೆ.. ಮದುವೆಯಲ್ಲಿ, ಮಸಣಯಾತ್ರೆ.....ನಿಮ್ಮ ಹಿಂದೆ ನರಕಕ್ಕಾದರೂ ಬರಲು ಸಿದ್ಧ; ಬದುಕುವ ಮಾರ್ಗ ತೋರಿಸಿ ಎಂದು ಬೇಡಿಕೊಳ್ಳುತ್ತೇನೆ' ಎಂಬುದೂ, ವಿಮಲೆಯಾಡುವ "ನಿಮ್ಮಿಂದ ಒಡವೆ ವಸ್ತು ಒಂದನ್ನೂ ನಾನು ಬಯಸಲಿಲ್ಲ; ನಾನು ಬಯಸಿದು ನಿಮ್ಮ ಒಲುಮೇನ; ನಿಮ್ಮ ಪ್ರೇಮಾನ;—ನನಗೆ ದೊರೆತದ್ದು ಕಾಮ "..... "ಸ್ವಸುಖಕ್ಕಾಗಿ ನಾಲ್ಕು ಮಂದಿಯ ಸುಖ ಜಾಳು ಮಾಡುವವಳು ನಾನಲ್ಲ: ನಾವಿಬ್ಬರೂ ಜನರ ಕಣ್ಣಲ್ಲಿ ಗಂಡ–ಹೆಂಡಿರು, ತುಂಬಾ ಸುಖಿಗಳು. ಹಾಗೇ ನಟಿಸಬೇಕಾಗಿದೆ. ನನ್ನ ಪಾತ್ರ ಎಷ್ಟು ಕಷ್ಟ ನೋಡಿ! ಹೃದಯದಲ್ಲಿ ಅಸಹನೀಯ ದುಃಖ; ನಿರಾಶೆ ತುಂಬಿದೆ!" ಇತ್ಯಾದಿ ಮಾತುಗಳು ತತ್ತತ್ ಸಂದರ್ಭದಲ್ಲಿ ಮಾರ್ಮಿಕವಿದ್ದು ಓದುಗರ ಭಾವತಂತ್ರಿಯನ್ನು ಮೀಟುತ್ತಿವೆ. ಹೀಗೆಯೆ ಉಳಿದೆಲ್ಲಾ ಮಾತುಗಳೂ ಸ್ವಾರಸ್ಯವಿದ್ದು—ಕಥೆಯಿಡೀ ಉತ್ತಮಭಾಷೆಯಿಂದ ತುಂಬಿ ಸೊಗಸಾಗಿದೆಯೆನ್ನಬೇಕು.

ಹಿತಮಿತವಾದ ಸಂಭಾಷಣೆ; ಮಾರ್ಮಿಕ ಘಟನಾಸಮೂಹ, ಮಧುರಕಥಾಪ್ರವಾಹ, ರಸಾನುಗುಣ ಸನ್ನಿವೇಶಗಳು–ಇವುಗಳಿಂದೀ ಕಥೆ ಕೊನೆಯಲ್ಲಿ ತುಸು ಕುಸಿದರೂ, ಸೊಗಸಾಗಿದೆಯೆನ್ನಬೇಕಾಗಿದೆ.

ಅಂದು ಇಂದಿನ ನಡುವೆ

(ಕವನದ ವಿಮರ್ಶೆ)

ಶ್ರೀಮತಿ 'ಕಲಾ' ಮಲ್ಲೇಶ್ವರಂ—ಬೆಂಗಳೂರು

ಅಂದು ಇಂದಿನ ನಡುವೆ ಅದೆಂತಹ ಅಂತರ! ಬರಿಯ ಹನ್ನೆರಡು ವರ್ಷಗಳ ಕಾಲದಲ್ಲಿ, ಕವಿ ತನ್ನ ಹಳ್ಳಿಗೆ ಹಿಂದಿರುಗಿದಾಗ ಕಂಡ ದೃಶ್ಯದ ವರ್ಣನೆಯಿದು. ಹೃದಯಾಂತರಾಳದಿಂದ ಹೊರಟ ಗೀತ! ಈ ಕವಿತೆಯನ್ನು ಓದಿದ ಕೂಡಲೆ ನೆನಪಿಗೆ ಬರುವುದು Oliver Goldsmithರವರ "The Deserted Village" ಎಂಬ ಪದ್ಯ. ಕಾಲನ ಅವಿರತವಾದ ಹೆಜ್ಜೆಗಳಿಗೆ ಸಿಕ್ಕಿ ಜೀವನದ ಮುಖಗಳು ವಿವಿಧವಾಗುತ್ತವೆ. ಇಂದು ಕಂಡವರನ್ನು ನಾಳೆ ಕಾಣೆವು. ಅಂತಹದರಲ್ಲಿ ಹನ್ನೆರಡು ವರ್ಷಗಳ ಮಾತೇನು?

ಅಂದು ಜೀವಚೈತನ್ಯದಿಂದ, ಸಪೋತ್ಸಾಹದಿಂದ, ತುಂಬುಬಾಳುವೆಯಿಂದ ಬೆಳಗುತ್ತಿದ್ದ ಹಳ್ಳಿ, ಇಂದು ಮರಳು ಕಾಡಿನಂತೆ ಸಾವೇ ಸಾಮ್ರಾಜ್ಯವಾಡುತ್ತಿರುವಂತೆ ನೀರಸವಾಗಿವೆ. ಕಾಲಚಕ್ರದಲ್ಲಿಯ ಯಾವಾಗಿನ ನಿಯಮ ಇಲ್ಲಿಯೂ ಅನುಸರಿಸಿದೆ. ಒಮ್ಮೆ ನಾಡಾಗಿದ್ದುದು ಇಂದು ಕಾಡಾಗಿದೆ. ಕಾಲಚಕ್ರದ ಮಹಿಮೆಯದು. ಹಿಂದೆ ಬಾಳಿದ ಎಷ್ಟೋ ರಾಜ್ಯಗಳು ಅಳಿಸಿ ಹೋಗಿಲ್ಲವೆ? ಅವುಗಳ ಗತವೈಭವವನ್ನು ಸಾರುತ್ತಾ ನಿಂತಿಲ್ಲವೆ ನಮ್ಮ ಪೂರ್ವಜರ ದೇಗುಲಗಳು? ಇದನ್ನೆಲ್ಲಾ ನೋಡಿದರೆ ಡಿ. ವಿ. ಜಿ. ಯವರ:

"ಕಾಲನದಿಯಲಿ ನಮ್ಮ ಬಾಳದೋಣಿಯು ಮೆರೆದು।
ತೇಲುತ್ತಿ ಭಯವ ಕಾಣದೆ ಸಾಗುತಿರಲು ॥
ಗಾಳಿಯಾವಾಗ ಬಂದೆತ್ತಣದೊ ಬೀಸುತ್ತ।
ಮೇಲೆ ಕೀಳಾಗಿಪ್ಪುದು—ಮಂಕುತಿಮ್ಮ॥"

ಎಂಬುದು ನೆನಪಿಗೆ ಬರುವುದು. ಇದು ಕಠೋರ ಸತ್ಯ. ಕಾಲನದಿಯಲ್ಲಿ ಬಾಳದೋಣಿ ಯಾವ ಭಯವೂ ಇಲ್ಲದೆ ತೇಲುತ್ತಿರಲು, ಯಾವಾಗ ಬರುವುದೋ ಬಿರುಗಾಳಿ, ನಮ್ಮ ಕರ್ಮಗಳಿಗೆ ಅನುಸರಿಸಿ! ಎಲ್ಲಾ ಕೆಳಗೆ-ಮೇಲಾಗುವುದು. ಶ್ರೀಮಾನ್ ಚಿತ್ತಾಳರ ಹಳ್ಳಿಯ ಸಹ ಇದೇ ಆಯಿತಲ್ಲವೆ?

ಆವಿ ಹನ್ನೆರಡು ವರ್ಷಗಳ ಮೇಲೆ ತಾನು ಜನಿಸಿದ ಹಳ್ಳಿಗೆ ಹಿಂದಿನ ಸವಿನೆನಪುಗಳನ್ನೆಲ್ಲಾ ಹೊತ್ತು ನಡೆದಿದ್ದಾನೆ. ಊರ ಘಟ್ಟವನ್ನು ಇಳಿಯುವಾಗಲಂತೂ ಅವನ ಉತ್ಸಾಹಕ್ಕೆ ಮೇರೆಯಿಲ್ಲ. ಆ ಹಿಳಿಗಿನ ಬಿಸಿಲು, ನೀರವಾದ ಕಡಲು, ಮರಳಿನ ಮೇಲೆ ಹಾಸುತ್ತಿದ್ದ ಬಾಲಿನಂತಹ ಶುಭ್ರವಾದ ನೊರೆ, ಅದರಂಚಿನಲ್ಲಿಯೇ ಕಾಣುತ್ತಿದ್ದ ಹಸಿರುಮರಗಳ ಸಾಲು, ಈ ಕಡೆ ಇದ್ದ ಬೋಳುಗುಡ್ಡ, ಇಳಿಜಾರಿನಲ್ಲಿ ಮೇಯುವ ಕುರಿಹಿಂಡಿನಂತೆ ಅಲ್ಲಲ್ಲೇ ಬೆಳೆದಿರುವ ಜಕುರುಚಲು ಗಿಡಗಳು. ಆ ಕಲ್ಲು, ಈ ಕಣಿವೆ ಎಲ್ಲಾ ಇದ್ದಂತೆಯೇ ಇವೆ. ನಿಸರ್ಗದೇವತೆಯು ಸೊಬಗುಗಳನ್ನು ಅಳಿಸಲು ಯಾರಿಂದ

(೧೩ನೆಯ ಪುಟ ನೋಡಿರಿ)

ಸಾದರ ಸ್ವೀಕಾರ

೬೮ **ಹಜರತ್ ಮೊಹಮ್ಮದ್ ಪೈಗಂಬರವರ ಅವತಾರ:** (ಪರಿಚಯಾತ್ಮಕ ಪುಸ್ತಿಕೆ). ಬರೆದವರು ಶ್ರೀ. ಎಂ. ಐ. ಒಕ್ಕುಂದ, ಕನ್ನಡ ಟ್ರೇಂಡ್, ಸವದತ್ತಿ. ಪ್ರಕಾಶಕರು: ಶ್ರೀ. ಎಂ. ಯು. ಭಡೀದಾರ್, ಉರ್ದು ಸ್ಕೂಲ್ ಹೆಡ್‌ಮಾಸ್ತರ, ನವಲೂರು. ಕ್ರಾ. ಅ. ೮ ಪುಟಗಳು. ಬೆಲೆ ೦-೪-೦

೬೯ **ರಕ್ತದ ಮಡುವಿನಲ್ಲಿ** (ಪತ್ತೇದಾರಿ ಕಾದಂಬರಿ) ಬರೆದವರು 'ಮಧುಕರ'. ಪ್ರಕಾಶಕರು ಜಾತಕ ಪ್ರಕಾಶನ, ಬೆಂಗಳೂರು ೨. ಕ್ರಾ. ಗಟ್ಟಿದ ೧೦೪ ಪುಟಗಳು. ಬೆಲೆ ೦-೬-೦

೭೦ **ಗೆಲವು ನನ್ನ ಕೈಯಲ್ಲಿ** (ಅನುವಾದಿತ ಕಾದಂಬರಿ). ಮೂಲ ಇಂಗ್ಲಿಷ್ ಲೇಖಕರು: ಮಿ. ಹೆರಾಲ್ಡ್ ರಸೆಲ್. ಕನ್ನಡ ಅನುವಾದಕರು 'ಧನ್ವಂತ' ಬೆಂಗಳೂರು. ಪ್ರಕಾಶಕರು ಮೆ. ಎಚ್. ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ನಗರ. ಕ್ರಾ. ಅ. ೧೦೦ ಪುಟಗಳು. ಬೆಲೆ ೧-೪-೦.

೭೧ **ಮಕ್ಕಳ ಪದ್ಯಗಳು** (ಕವನ ಸಂಕಲನ) ಬರೆದವರು ಶ್ರೀಮಾನ್ ದಿನಕರ ದೇಸಾಯಿಯವರು. ಪ್ರಕಾಶಕರು ಕೆಸರಾ ವೆಲ್. ಫೇರ್ ಟ್ರಸ್ಟಿನ ಜನತಾ ಪ್ರಕಾಶನ, ಅಂಕೋಲೆ. ಕ್ರಾ. ಅ. ೫೬ ಪುಟಗಳು. ಬೆಲೆ ೦-೧೨-೦.

೭೨ **ಶ್ರೀಮದ್ರಾಘವೇಂದ್ರ ಗುರುಚರಿತ್ರೆ** (ಮಹಿಮಾ ಪರಿಚಯ) ಲೇಖಕರು ಶ್ರೀಮಾನ್ ನಾರಾಯಣ ಭೀಮರಾವ ಕಲಮದಾನಿಯವರು. ಪ್ರಕಾಶಕರು ಶ್ರೀ. ಎಸ್. ಎಸ್. ಕಾರಂತ, ಶ್ರೀಗುರುದೇವ ಗ್ರಂಥಮಾಲೆ, ಹುಬ್ಬಳ್ಳಿ. ಕ್ರಾ. ಅ. ೬೬ ಪುಟಗಳು. ಬೆಲೆ ೦-೪-೦.

ಶ್ರೀಮಂತ್ರಾಲಯ ಮಹಾಸ್ವಾಮಿ ಶ್ರೀರಾಘವೇಂದ್ರ ಗುರುಗಳವರ ಶ್ರೀರಾಘವೇಂದ್ರರು ನಮ್ಮ ನಾಡಿನ ಎಲ್ಲ ಭಾಗವಲ್ಲಿಯೂ ಇದ್ದಾರೆ. ಈ ಗುರುಗಳ ದಿವ್ಯ ಜೀವನದ ಮಹತ್ತ್ವವನ್ನು ಸಂಪ್ರದಾಯವನ್ನನುಸರಿಸಿ, ಶ್ರೀ. ಕಲಮದಾನಿಯವರು ಬರೆದಿದ್ದಾರೆ. ಕೊನೆಯಲ್ಲಿ ಶ್ರೀ ರಾಘವೇಂದ್ರ ಗುರುಗಳ ಮಂಗಲಾಷ್ಟಕದ ಅರ್ಥವಿವರಣೆಯನ್ನೂ ಶ್ರೀರಾಘವೇಂದ್ರ ಸ್ತೋತ್ರದ ಮೂಲ ಸಹಿತ ಭಾವಾನುವಾದವನ್ನೂ, ಬೇರೆ ಬೇರೆ ಹರಿದಾಸರಿಂದ ವಿರಚಿತವಾದ ಗುರುಗಳ ವಿಷಯಕವಾದ ಪದ ಆರತಿ-ಕೀರ್ತನೆಗಳನ್ನೂ ಸಂಗ್ರಹಿಸಿ ಕೊಡಲಾಗಿದೆ. ಶ್ರೀರಾಘವೇಂದ್ರ ಗುರುಗಳ ಆರಾಧಕರಿಗೆಲ್ಲ ಮೆಚ್ಚಿಗೆಯಾಗುವಂತಹ ಪುಸ್ತಕವಿದು. ಹೆಸರಿಗೆ ಮಾತ್ರ ನಾಲ್ಕಾಣೆ ಬೆಲೆಯನ್ನು ಇರಿಸಲಾಗಿದೆ. ಬೆಲೆಯ ಪೂರ್ಣವೂ ಗುರುಗಳ ಸೇವೆಗಾಗಿ ಸಂದಾಯವಾಗುವುದೆಂದು ಪ್ರಕಾಶಕರು ಹೇಳಿರುವರು.

೭೩ **ಮಕ್ಕಳ ಬಾವುಟ** (ಚಿಕ್ಕ ಮಕ್ಕಳಿಗಾಗಿ ಮಾಸಪತ್ರಿಕೆ). ಸಂಪಾದಿಕೆಯರು ಶ್ರೀಮತಿ ಕೆ. ಟಿ. ಜನಶಂಕರಮ್ಮ ಬಿ. ಎಸ್‌ಸಿ. ಬೆಂಗಳೂರು. ಪ್ರಕಾಶಕರು ಅಖಿಲಕರ್ನಾಟಕ ಮಕ್ಕಳಕೂಟ, ಬೆಂಗಳೂರು. ಕ್ರಾ. ಅ. ೨೪ ಪುಟಗಳು.

ಚಿಕ್ಕ ಮಕ್ಕಳು ಓದಿ ಲೋಕಪರಿಚಯವನ್ನು ಬೆಳೆಯಿಸಿಕೊಳ್ಳಬಹುದಾದ ಪುಟ್ಟ ಪುಟ್ಟ ಲೇಖನಗಳೂ ಕಥೆ ಕವನಗಳೂ ಇದರಲ್ಲಿ ಪ್ರಕಟವಾಗಿವೆ. ಮಕ್ಕಳ ಪಾಲಕರು ಸರಿಯಾದ ನೆರವಿತ್ತು, ಈ ಪತ್ರಿಕೆಯನ್ನು ಅಭಿವೃದ್ಧಿಗೆ ತರಬೇಕು.

೭೪ **ನವ್ಯಧ್ವನಿ** (ನವ್ಯ ಕವನಗಳ ಸಂಕಲನ) ಲೇಖಕರು ಕನ್ನಡನಾಡಿನ ಬೇರೆ ಬೇರೆ ನವ್ಯಕವಿಗಳು. ಸಂಪಾದಕರು ಶ್ರೀಮಾನ್ ವಿ. ಕೃ. ಗೋಕಾಕ ಬಿ. ಎ. (ಆಕ್ಸನ್) ಮತ್ತು ಶ್ರೀ. ಜೀನ್ ಜೆನ್ನವೀರ ಕಣವಿ ಎಂ. ಎ. ಅವರು. ಪ್ರಕಾಶಕರು ಪ್ರ. ಭಾ ಗ್ರಂಥಮಾಲೆ, ಧಾರವಾಡ. ಕ್ರಾ. ಅ. ೧೮+೯೪ ಪುಟಗಳು. ಬೆಲೆ ೧-೮-೦.

೭೫ **ನಮ್ಮದು ಒಂದು ಕುಟುಂಬ** (ಪ್ರಚಾರಕ ಕಿರುಹೊತ್ತಗೆ). ಪ್ರಕಾಶಕರು 'ಮಿನಿಸ್ಟ್ರಿ ಆಫ್ ರೇಲ್ವೇಜ್, ರೇಲ್ವೇ ಬೋರ್ಡ್, ಗವರ್ನ್‌ಮೆಂಟ್ ಆಫ್ ಇಂಡಿಯಾ. ಕ್ರಾ. ಅ. ೧೬ ಪುಟಗಳು.

೭೬ **ಆಲ್ ಇಂಡಿಯಾ ಪೋಸ್ಟಲ್ ಎಂಪ್ಲಾಯಿಜ್ ಯೂನಿಯನ್** (೧೯೫೨-೫೩ರ ವಾರ್ಷಿಕ ವರದಿ). ಕ್ರಾ. ೨೦ ಪುಟಗಳು.

ಶಾಂತರೀತಿಯಿಂದಲೂ ಶಾಸನಬದ್ಧವಾಗಿಯೂ ಅಂಚೆ ಕೆಲಸಗಾರರ ಹಿತಸಾಧನೆಗಾಗಿ ಕಾರ್ಯಮಾಡುತ್ತಿರುವ ಈ ಸಂಸ್ಥೆಯ ಕಾರ್ಯವು ಪ್ರಶಂಸನೀಯವಾಗಿದೆ.

೭೭ **ಹೃದಯಸಮುದ್ರ** (ಕವನಸಂಕಲನ) ಲೇಖಕರು 'ಅಂಬಿಕಾತನಯದತ್ತ'. ಪ್ರಕಾಶಕರು ಸಮಾಜ ಪುಸ್ತಕಾಲಯ, ಧಾರವಾಡ. ಕ್ರಾ. ಅ. ೪೪ ಪುಟಗಳು. ಬೆಲೆ ೧-೪-೦.

೭೮ **ಮುಕ್ತಕಂಠ** (ಕವನ ಸಂಕಲನ) ಲೇಖಕರು 'ಅಂಬಿಕಾತನಯದತ್ತ'. ಪ್ರಕಾಶಕರು ಸಮಾಜ ಪುಸ್ತಕಾಲಯ, ಧಾರವಾಡ. ಕ್ರಾ. ಅ. ೪೪ ಪುಟಗಳು. ಬೆಲೆ ೧-೪-೦.

೭೯ **ಪ್ರೇಮವೈರಾಗ್ಯ** (ಸಾಮಾಜಿಕ ಕಾದಂಬರಿ). ಲೇಖಕರು ಶ್ರೀ. ಚಿದಾನಂದ (ಸಿ ಎಸ್. ಕುಲಕರ್ಣಿ ಎಂ. ಎ., ಬಿ. ಟಿ.), ಧಾರವಾಡ. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೧೪ನೆಯ ವರ್ಷದ ೨೩ನೆಯ ಕಿರಣ. ಕ್ರಾ. ಅ. ೨೦೬ ಪುಟಗಳು. ಬೆಲೆ ೧-೪-೦

೮೦ **ಪ್ರಾರ್ಥನೆ** (ಮಹಾತ್ಮಾಗಾಂಧಿಯವರು ನಿತ್ಯ ಮಾಡುತ್ತಿದ್ದುದರ ಅನುವಾದ ಸಹಿತ ಸಂಕಲನ). ಪ್ರಕಾಶಕರು ಧಾರವಾಡ ಜಿಲ್ಲಾ ಸರ್ವೋದಯ ಯೋಜನೆ, ಅರವಟಿಗಿ. ಪೂ. ಕ್ಯಾ. ಅ. ೪೦ ಪುಟಗಳು. ಬೆಲೆ ೦-೨-೦.

Printed by N. A. Hoskeri at the Vijaya press, Dharwar and published for the proprietors Jayanti publications, by K. S. Beigeri at the Jayanti office, Dharwar



ನಿಮ್ಮ ಮೋಬಿಲ್‌ಗ್ಯಾಸ್ ಸ್ಟೇಷನ್ನಿನಲ್ಲಿ ನಿಮಗೆ ಸರ್ವೋತ್ಕೃಷ್ಟವಾದ ಪೆಟ್ರೋಲು ಮತ್ತು ಕೇರೆಗ್ಲೈಗಳು ಮಾತ್ರವಲ್ಲದೆ ನಿಮ್ಮ ಕಾರಿಗೆ ಪ್ರಹಂಡದಲ್ಲೆಲ್ಲಾ ಅತ್ಯುತ್ತಮ ಅನುಭವದ ಫಲವಾದ ತಜ್ಞ ಸಮೀಕ್ಷೆ ದೊರೆಯುತ್ತದೆ. ನಿಮ್ಮ ಹಣಕ್ಕೆ ಪೂರ್ಣ ಲಾಭ ಸಿಪೆಯಲು ಇಲ್ಲಿಗೆ ಬನ್ನಿರಿ!

ಸ್ನೇಹಮಯ ಸೇವೆಯ

ಸಂಕೇತ

Mobilgas

ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸ್-ದ್ವಿವಿಧ ರಕ್ಷಣೆ ಕೊಡುವ ಮೋಬಿಲಾಯಿಲ್-ಮೋಬಿಲೂಬ್ರಿಕೇಷನ್

ಸ್ಟಾಂಡರ್ಡ್-ವ್ಯಾಕ್ಯೂಮ್ ಆಯಿಲ್ ಕಂಪೆನಿ

(ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾದಲ್ಲಿ ಸಂಸ್ಥಾಪಿತವಾದುದು; ಕಂಪೆನಿಯ ಮೆಂಬರುಗಳ ಹೊಣೆಗಾರಿಕೆಯು ಮಿತಿಯುಳ್ಳದು)

ಸಂಪುಟ ೧೯

ಸಂಚಿಕೆ

ಗೆಯ್ಮೆ ಬೀಕು!

ನಮ್ಮದೇ ಹೊಲವು ಸರಿ | ಸುಮ್ಮಗೆಯೆ ಬೆಳೆವುದೇ ?
ಹಲಧರರು ನಾವಾಗಿ ಗೆದೆಹೂಡಬೇಕು ...
ಕಂಟಿ-ಕುತ್ತುರ ಕಡಿದು, ಕರುಕೆ-ಕಸಗಳೆನಾಯ್ದು
ತಗ್ಗು-ಹಿಗ್ಗುಗಳನ್ನು ಸಮಮಾಡಬೇಕು!

ಬೆದೆಗಾಲವನ್ನರಿತು ಪದದ ಬೀಜಗಳಿಂದ
ಪೊಡವಿತಾಯುಡಿಯನ್ನು ತುಂಬಬೇಕು....
ಮೊಳೆತು ಬೆಳೆದಾ ಪಯಿರು ನಾಳೆ ನಮಗೊಳ್ಳುಸಿಸ
ಕೊಡುವುದೆಂಬಾ ತಾಳ್ಮೆಗಿಂಬು ಬೇಕು!

'ನಮ್ಮದೆ ಹೊಲವಿದು ಗೆಯ್ಮೆಯದೇತಕೆ?'
ಎನ್ನುತ ನಿಷ್ಕರ್ಮಿಗಳಾಗಿ—
ಹುಲ್ಲು ಕಸಬೆಳೆದು ಮುಳ್ಳುಮೆಳೆ ಬಲಿಯೆ
ಅನ್ನ ನಾಳೆ ದೊರೆವುದು ಹೇಗೆ ?
ಮನಕೆ ಬಂದ ಬೀಜವ ಚೆಲ್ಲಿದರೆ—
ಬಯಸಿದ ಬೆಳೆ ಬರುವುದು ಹೇಗೆ?

—ಆನಂದಕಂದ

JAYANTI

ಈ ಸಂಚಿಕೆಯಲ್ಲಿ :

ಇನ್ನು ಒಂದೇ ತಿಂಗಳು ! (ಸಂಪಾದಕೀಯ)
ಸಂಪಾದಕರು ೧೬೧

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೧೬೩

ಪರಿತ್ಯಕ್ತರಾಣಿ (ಐತಿಹಾಸಿಕ ರೂಪಕ)
ಶ್ರೀ. ರಂ. ಸ್ವಾ. ದೇಶಪಾಂಡೆ, ಆಲದಕಟ್ಟಿ ೧೬೫

ಸ್ವಪ್ನಸಂಭವ (ಮನೋವಿಜ್ಞಾನ)
ಶ್ರೀ. ಗೌರೀಶ ಕಾಯಕಿಣಿ, ಗೋಕರ್ಣ ೧೭೩

ಪ್ರಕೃತಿಗೆ ಶರಣು (ಕವನ)
ಶ್ರೀ. ಜಿ ವಿ. ಕುಲಕರ್ಣಿ, ಬಿ. ಎ. (ಆನರ್ಸ್) ಧಾರವಾಡ ೧೭೮

ಕುಸುರೆಳ್ಳು (ಚಿಕ್ಕಕಥೆ)
ಶ್ರೀ. ಮಿರ್ಜಿ ಅಣ್ಣಾರಾಯರು, ಸೇಡಬಾಳ ೧೭೯

ಬಂತು ಶ್ರಾವಣ! (ಗೀತರೂಪಕ)
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ ೧೮೫

ಸೌಂದರ್ಯಲಹರೀ (ಕಾವ್ಯಪರಿಚಯ)
ಪಂಡಿತ ಕೇಶವಶರ್ಮಾ ಗಲಗಲಿ, ಧಾರವಾಡ ೧೮೯

ಸೊಕ್ಕು (ಲಲಿತ ಪ್ರಬಂಧ)
ಶ್ರೀ. ಬಿ. ಆರ್. ವಾಡಪ್ಪಿ ಎಂ. ಎ., ಬಿ. ಟಿ. ಧಾರವಾಡ ೧೯೨

ಆಶೀರ್ವಾದ (ಕವನ)
ಶ್ರೀ. ಶ್ರೀ. ವೆಂ. ಗಲಗಲಿ, ಧಾರವಾಡ ೧೯೪

ಸಾಹಿತ್ಯವಿಮರ್ಶೆಯ ತಿಕ್ಷಣರಂಗ
ಶ್ರೀ. ಕೆ. ಎಸ್. ಶರ್ಮಾ ಮತ್ತು ಶ್ರೀ. "ಕಸ್ತೂರಿ ತನಯ" ೧೯೫

ಸಾದರ ಸ್ವೀಕಾರ ಹೊದಿಕೆಯ ೩ನೆಯ ಪುಟ

ಜಯಂತಿ

ಸಂಪುಟ ೧೯ ಸಂಚಿಕೆ ೫

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಇನ್ನು ಒಂದೇ ತಿಂಗಳು!

ಆಹುದು, ಇನ್ನು ಒಂದೇ ತಿಂಗಳು! ಒಂದೇ ಒಂದು ತಿಂಗಳಿಗೆ ಮುಂಬಯಿ ಕರ್ನಾಟಕವಿಲ್ಲ; ಮದ್ರಾಸ್ ಕರ್ನಾಟಕವಿಲ್ಲ; ಹೈದರಾಬಾದ್ ಕರ್ನಾಟಕವಿಲ್ಲ; ಪ್ರತ್ಯೇಕ ಕೊಡಗು ರಾಜ್ಯವಿಲ್ಲ- ಎಲ್ಲವೂ ಸೇರಿ ಒಂದೇ ಕರ್ನಾಟಕ ರಾಜ್ಯ — ಇಲ್ಲಲ್ಲ ಒಂದೇ ಮೈಸೂರು ರಾಜ್ಯ ರಚನೆಗೊಳ್ಳುವುದು ಕನ್ನಡಿಗರ ಬಹುಕಾಲದ ಕನಸು ನನಸಾಯಿತೆಂದೂ, ಅದಕ್ಕಾಗಿ ಕನ್ನಡಿಗರೆಲ್ಲ ಸಂತೃಪ್ತಿಯಾಗಿದೆಯೆಂದೂ ಒರೆಯುವ—ಬರೆಯುವ—ಕನ್ನಡಿಗರೇನೂ ಕಡಿಮೆಯಿಲ್ಲ.

ಹೊಸ ಮೈಸೂರು ರಾಜ್ಯದ ಪ್ರಾರಂಭೋತ್ಸವವನ್ನು, ಈ ರಾಜ್ಯದ ಜನತೆಯೆಲ್ಲ ಸೇರಿ ವಿಜೃಂಭಣೆಯಿಂದ ಜರುಗಿಸುವ ಹಬ್ಬದ ದಿನದಂದು, ಕಾಸರಗೋಡಿನ ಕನ್ನಡಿಗರು ಕಣ್ಣೀರಿಡಬಹುದು. ಸೊಲ್ಲಾಪುರ ಜಿಲ್ಲೆಯ ಕನ್ನಡಿಗರು ಸೊಲ್ಲುಡುಗಿದವರಾಗಿ ಬಿಸಿಯುಸಿರಿಕ್ಕಬಹುದು. ದಕ್ಷಿಣೋತ್ತರ ಸಾತಾರಾ ಜಿಲ್ಲೆಗಳ ಕನ್ನಡಿಗರು, ಕಾತರಭಾವದವರಾಗಿ ಕುಳಿತುಕೊಳ್ಳಬಹುದು. ನಮ್ಮವರೆಲ್ಲ ಸೇರಿ ಸಂತೋಷದಿಂದ ಮಾಡಿದರೆ ಅದೊಂದು ನಾಡಹಬ್ಬವೆನಿಸೀತು; ಇಲ್ಲವಾದರೆ ಅದೆಂತಹ ಹಬ್ಬ?

ಕನ್ನಡ ನುಡಿ-ನಡೆವಳಿಗಳ ಸಂರಕ್ಷಣೆ-ಸಂವರ್ಧನೆಗಾಗಿ ಕನ್ನಡಿಗರಿಗೆಲ್ಲ ಒಂದೇ ರಾಜ್ಯ ಬೇಕೆಂದು ಏಕೀಕರಣವ ಜಳವಳಿ ಹುಟ್ಟಿಕೊಂಡಿತು. ಅದಕ್ಕಾಗಿ ಕನ್ನಡ ಮಾತು ಪ್ರಚಾರದಲ್ಲಿರುವ ಎಲ್ಲ ಪ್ರದೇಶಗಳಲ್ಲಿಯೂ ಆಂದೋಲನ ಹಬ್ಬಿಕೊಂಡಿತು. ಏಕೀಕರಣದ ತತ್ತ್ವವನ್ನು ಕನ್ನಡಿಗರೆಲ್ಲರೂ ಎತ್ತಿಹಿಡಿದರು. ಆದರೆ ಎಣ್ಣೆ ಬರುವ ಕಾಲದಲ್ಲಿಯೆ ಗಾಣದ ದಿಂಡು ಮುರಿಯಿತೆಂಬಂತೆ ಪರಿಸ್ಥಿತಿ ಒದಗಿಬಂದಿತು. ಸಂಸ್ಕೃತಿಯ ಅಭಿಮಾನಿಗಳೆಲ್ಲ ಏಕಕಂಠದಿಂದ ಕರ್ನಾಟಕ ರಾಜ್ಯವನ್ನು ಅಪೇಕ್ಷಿಸಿದರೂ, ಅಧಿಕಾರ ಲೋಭಿಗಳಾದ ರಾಜಕೀಯ ಧುರೀಣರು ಕೆಲವರ ಕುಪ್ರಯತ್ನದ ಫಲವಾಗಿ, 'ಕರ್ನಾಟಕ ರಾಜ್ಯ' ದೊರೆಯದೆ, 'ಮೈಸೂರುರಾಜ್ಯ', ನಮಗೆ ದೊರೆಯಿತು.

'ಹೋಗಲಿ, ಹೆಸರಿನಲ್ಲೇನಿದೆ?' ಎಂದು ಸಮಾಧಾನಪಡಬಹುದೆಂದರೆ, ಅದಕ್ಕೂ ಅವಕಾಶವಿಲ್ಲದಂತಾಗಿದೆ. ನಮ್ಮವರಾದ ಕನ್ನಡಿಗರನ್ನೂ, ನಮ್ಮದೇ ಆದ ಪ್ರದೇಶವನ್ನೂ ಅನ್ಯಿಗರ ಕೈಗೆ ಒಪ್ಪಿಸಬೇಕಾದ ಅಸಹಾಯಾನವಂತೂ ಅಸಹನೀಯವಾದುದು. ಅದಕ್ಕೆ ಪರದೆಯೆಳೆದು, ಒಂದೆ ರಾಜ್ಯದಲ್ಲಿ ಬಹುಜನ ಕನ್ನಡಿಗರು ಒಟ್ಟುಗೂಡುವೆವಲ್ಲ—ಎಂಬ ಸಮಾಧಾನ ತಳೆಯಬೇಕೆಂದರೆ, ಮೈಸೂರಿನಲ್ಲಿಯ ಬಹುಜನರ ಪ್ರತ್ಯೇಕ ಸಾಂಸ್ಕೃತಿಕ ಭಾವನೆಯ ಮೂಲಕ, ಅದಕ್ಕೂ ಎಡೆಯಿಲ್ಲದಂತಾಗಿದೆ. ಉತ್ತರ ಕನ್ನಡಿಗರನ್ನು ತಮ್ಮವರೆಂದು ಭಾವಿಸಲಿಕ್ಕೆ ಅವರು ಏಕೋ ಏನೋ ಹಿಂಜರಿಯುತ್ತಿದ್ದಾರೆ. ಸಾಂಸ್ಕೃತಿಕ ಕ್ಷೇತ್ರದಲ್ಲಿ ಕಾರ್ಯಮಾಡುವವರು ಈ ಹಿಂಜರಿಕೆಯಲ್ಲಿ ಭಾಗವಹಿಸುತ್ತಿಲ್ಲವಾದರೂ, ರಾಜಕೀಯ ಕ್ಷೇತ್ರದ ಕಾರ್ಯಕರ್ತರು ಹೊರಗಿನಿಂದ ಬರಲಿರುವ ಕನ್ನಡ ಬಂಧುಗಳನ್ನು ಪರಕೀಯರೆಂದೇ ಗಣಿಸುತ್ತಲಿದ್ದಾರೆ.

ಇದುವರೆಗೆ ಕೂಡಿ ಇರಬೇಕಾಗಿ ಬಂದಿದ್ದ ಮರಾಠಿಗರು, ಗುಜರಾಥಿಗಳು, ಆಂಧ್ರರು, ತಮಿಳರು, ಕೇರಳರು ಇವರೆಲ್ಲ ಪ್ರತ್ಯೇಕ ಭಾಷೆ-ಸಂಸ್ಕೃತಿಗಳವರೆಂದು, ಕೇವಲ ಕನ್ನಡಿಗರೇ ಒಟ್ಟುಗೂಡಿ ಇರಬೇಕೆಂದು ಬಯಸಿದ ಜನತೆಯು ಬಯಕೆಯ ಬೇರಿಗೆ ಬೆನ್ನೀರು ಎರೆದಂತಾಗಿದೆ. ಏಕೆಂದರೆ ಕನ್ನಡಿಗರೆಂಬ ಆತ್ಮೀಯ ಭಾವದಿಂದ ಮಿಕ್ಕವರೆಲ್ಲರೂ ಕೂಡಿ ಇರಲು ಬರುತ್ತಿರುವಾಗ, ಮೈಸೂರಿಗರು ದೂರದೂರಕ್ಕೆ ಸರಿದುನಿಲ್ಲುವ ವಿಚಾರದಲ್ಲಿದ್ದಾರೆ. ಇದು ನಮ್ಮ ಪ್ರತ್ಯೇಕ ರಾಜ್ಯದ ಪ್ರಾರಂಭಕ್ಕೆ ಶುಭದ ಲಕ್ಷಣವೆ?

ಹೊಸತಾಗಿ ಪ್ರಾರಂಭವಾಗಲಿರುವ ಮೈಸೂರು ರಾಜ್ಯಕ್ಕೆ ಆಡಳಿತವನ್ನು ನಡೆಯಿಸುವ ಅಧಿಕಾರಿಗಳ ಮತ್ತು ಮಂತ್ರಿವರ್ಗದ ಅಗತ್ಯವಿದೆ. ರಾಜ್ಯದ ಜನತೆಯ ಸುಖ-ದುಃಖಗಳನ್ನು ಸಮದೃಷ್ಟಿಯಿಂದ ಕಾಣುವ ಯಾವ ಧುರೀಣರೂ, ಅಧಿಕಾರಿಗಳಾಗಿ ಮಂತ್ರಿಗಳಾಗಿ ಕಾರ್ಯವನ್ನು ವಹಿಸಬಹುದು. ಅದಕ್ಕೆ ಜನತೆಯಿಂದ ಯಾವ ಬಗೆಯ ಆಕ್ಷೇಪವೂ ಬರಲಾರದು. ಆದರೆ ಇದು ಸುಸೂತ್ರವಾಗಿ ಆಗುವ ಲಕ್ಷಣವಿಲ್ಲ. ಅಧಿಕಾರಸ್ಥಾನಗಳಿಗಾಗಿ ನಮ್ಮ ನೂತನ ರಾಜ್ಯದ ರಾಜಕೀಯರಂಗ, ಕುಸ್ತಿಯ ಕಣವಾಗಿ ನಿಲ್ಲುವುದೇನೋ—ಎಂಬ ಸೊಲ್ಲು-ಗುಲ್ಲುಗಳು ಅಲ್ಲಲ್ಲಿ ಕಿವಿಗೆ ಬೀಳತೊಡಗಿವೆ. ಹೀಗಾಗುವುದಕ್ಕೆ ನಮ್ಮ ರಾಜ್ಯದ ರಾಜಕೀಯ ಧುರೀಣರಿನಿಸಿಕೊಳ್ಳುವವರಲ್ಲಿರುವ ಒಳತೋಟಿಗಳೇ ಕಾರಣವಾಗಿವೆ. ಈ ಧುರೀಣರಲ್ಲಿಯ ಒಳತೋಟಿಗಳು, ನಿಷ್ಪಾಪಜನತೆಯ ಹೃದಯ-ಮನಗಳನ್ನೂ ಪ್ರಕ್ಷುಬ್ಧಗೊಳಿಸತೊಡಗಿದೆ.

ವ್ಯಕ್ತಿ-ವ್ಯಕ್ತಿಗಳೆಲ್ಲ ಸೇರಿ ಒಂದು ಸರಕಾರವನ್ನು ಹೂಡಿದ ಮೇಲೆ, ಆ ಸರಕಾರವೆಂಬುದು ಜಾತ್ಯತೀತ ಭಾವನೆಯನ್ನು ತಾಳಲು ಜನಸಾಮಾನ್ಯರಿಗೆ ಉಪದೇಶಿಸತೊಡಗುತ್ತದೆ. ಇದೊಂದು ಇಂದಿನ ರಾಜಕೀಯ ಸಮಯವಾಗಿದೆ. ಆದರೆ ಸರಕಾರದ ಘಟಕನಾಗಿರುವ ವ್ಯಕ್ತಿ-ವ್ಯಕ್ತಿಗಳು, ಅದಾಗಿವುದಕ್ಕಿಂತ ಮೊದಲು, ಅದು ಆಗುವುದಕ್ಕಾಗಿ, ಎಂದೆಂದೂ ಅಡಗಲಾರದಂತಹ ಜಾತೀಯಭಾವನೆಯನ್ನು ಜನಸಮಾಜದಲ್ಲಿ ಹುಟ್ಟಿಸಿಹೋಗಿರುತ್ತಾರೆ ಇದನ್ನು ಮಾಡದಿದ್ದರೆ, ಅವರಿಗೆ ಬಹುಮತ ದೊರೆಯುವುದಿಲಾರದು; ಅವರು ಸರಕಾರದ ಘಟಕವಾಗಲಾರರು. ಇಂತಹ ಭೇದ ನೀತಿಯಿಂದ ಮುಂದೆ ಬಂದ ಧುರೀಣರನ್ನೊಳಗೊಂಡ ಸರಕಾರವು ಸಮರ್ಥವೂ ಆಗಲಾರದು; ಪ್ರಾಮಾಣಿಕವಾಗಿ ಶಾಸನವನ್ನೂ ನಡೆಸಲಾರದು. ಮುಂಬರುವ ಮೈಸೂರು ರಾಜ್ಯದ ಸರಕಾರ, ಈ ಬಗೆಯ ಅಸಮರ್ಥ—ಅಪ್ರಾಮಾಣಿಕ ಸರಕಾರವಾಗಬಾರದೆಂದು ನಮ್ಮ ಹಾರೈಕೆ. ಆದರೆ, ಅಧಿಕಾರಸ್ಥಾನದ ಆಕ್ರಮಣಕ್ಕಾಗಿ ಈಗ ನಡೆದಿರುವ ಒಳಸಂಚು— ಗುಸುಗುಸು ಸುದ್ದಿಗಳನ್ನು ಕೇಳಿದರೆ, ನಮ್ಮ ರಾಜ್ಯದಲ್ಲಿ ಅಂತಹ ಸಮರ್ಥವಾದ ಮತ್ತು ಪ್ರಾಮಾಣಿಕ ಬುದ್ಧಿಯ ಸರಕಾರ ತಲೆದೋರಲಾರದೆಂದು ಎನಿಸುತ್ತಲಿದೆ. ಈ ಎನಿಸಿಕೆ ಪುಸಿಯಾಗಲವಂಡವಾದರೆ ಅದೊಂದು ಸಂತೋಷದ ಸಂಗತಿಯೆ ಸರಿ!

ನಮ್ಮ ರಾಜ್ಯದ ಮೂಲೆಮೂಲೆಗಳಲ್ಲಿಯೂ, ನಮ್ಮ ಧುರೀಣರು ಬಡಿದೆಬ್ಬಿಸಿ ಕೆಲಸ ಮಾಡಲಿಕ್ಕೆ ಹಚ್ಚಿದ ಜಾತೀಯಭಾವನಾಭೂತಗಳು, ಇನ್ನೂ ರಭಸದಿಂದಲೇ ತಮ್ಮ ಕೈಚಳಕವನ್ನು ನಡೆಸಿರುವುದು. ಇವುಗಳ ಕೈಚಳಕ ಕಡಮೆಯಾಗದೆ ಹೋದರೆ, 'ನಾವೆಲ್ಲ ಕನ್ನಡಿಗರು' ಎಂಬ ಐಕ್ಯಭಾವದ ಎಳಗೂಸು ಬೆಳೆಯಲಿಕ್ಕೆ ಸಾಧ್ಯವೇ ಇಲ್ಲ. ನುಡಿ-ಸಂಸ್ಕೃತಿಗಳ ಐಕ್ಯಬುದ್ಧಿಯೇ ಈ ಜಾತೀಯ ಭಾವನಾಭೂತಗಳನ್ನು ಅಡಗಿಸುವ ಮಹಾಮಂತ್ರನಾಗಿದೆ. ಆದುದರಿಂದ ನಮ್ಮ ರಾಜಕೀಯ ಧುರೀಣರು ಇನ್ನು ಮೇಲೆ ಶಾಸನಸಭೆ, ಮಂತ್ರಿಮಂಡಳಗಳಿಗೆ ಹೋಗುವಾಗ, ಅವರು ಕನ್ನಡಜನತೆಯ ಪ್ರತಿನಿಧಿಗಳಾಗಿ ಹೋಗಬೇಕೇ ಹೊರತು ಯಾವುದೊಂದು ಜಾತೀಯಭೂತದ ಪ್ರತಿನಿಧಿಗಳಾಗಿ ಹೋಗಲಾಗದು. ಅವರ ವೈಯಕ್ತಿಕ ಅಭಿಪ್ರಾಯ-ಕೃತಿಗಳು, ಚುನಾವಣೆಯ ಘೋಷಣೆ-ಪ್ರಚಾರಗಳು, ಈ ಬಗೆಯ ಐಕ್ಯಭಾವ-ಸಮತಾಭಾವ ಸೂಚಕವಾದುವುಗಳೇ ಆಗಬೇಕು.

ಬಹುಕಾಲ ಹೊಂದಿಕೊಂಡಿದ್ದ ಜನರನ್ನು ಅಗಲಿಬರಬೇಕಾಗಿರುವ ಹೊರಗಿನ ಜನರು, ಹೊಸತಾಗಿ ಬೆರೆಯಬೇಕಾಗಿರುವ ಜನರನ್ನೂ, ಅನುಭವಿಸಬೇಕಾಗಿರುವ ಆಡಳಿತವನ್ನೂ ಸಂದಿಗ್ಧಮನಸ್ಸಿನಿಂದ ನೋಡುತ್ತಿರುವುದು ಸ್ವಾಭಾವಿಕವೇ ಆಗಿದೆ. ಅಂತಹ ಸಂದಿಗ್ಧಭಾವದ ಬಂಧುಗಳನ್ನು ಪ್ರೀತಿಯಿಂದ ಬರಮಾಡಿಕೊಂಡು, ಅವರಲ್ಲಿ ಆತ್ಮೀಯತೆಯ ವಿಶ್ವಾಸವನ್ನು ಹುಟ್ಟಿಸುವುದು, ಮೈಸೂರು ಕನ್ನಡಿಗರ ಕರ್ತವ್ಯವಾಗಿದೆ. 'ಮೊದಲಿನ ಆಡಳಿತವೇ ವಾಸಿ' ಎಂಬ ಭಾವನೆ ಅವರಲ್ಲಿ ಉದಿಸದಂತೆ ಜಾಗೃತಿವಹಿಸುವುದು ರಾಜ್ಯಸರಕಾರದ ಕರ್ತವ್ಯವಾಗಿದೆ.

ದೀರ್ಘಕಾಲಾವಧಿಯನ್ನು ಬೇರೆಬೇರೆಯವರ ಪ್ರಭಾವದ ಛಾಯೆಯಲ್ಲಿ ಕಳೆದ ಕನ್ನಡಿಗರು—ಬಹುಸಂಖ್ಯೆಯಲ್ಲಾದರೂ—ಇಂದು ಒಟ್ಟುಗೂಡಿ ಸ್ವತಂತ್ರರಾಗಿ ನಿಲ್ಲಲಿದ್ದಾರೆ. ಕನ್ನಡಿಗರಿಗೆ ಮಿಕ್ಕ ಯಾವ ಪ್ರಾಂತಿನ ಕೊರತೆಯೂ ಇಲ್ಲ ಫಲವತ್ತಾದ ಭೂಮಿಯಿದೆ, ಜಲಭರಿತವಾದ ನದಿಗಳಿವೆ, ವಿವಿಧ ವೃಕ್ಷ-ವನಸ್ಪತಿಗಳಿಂದ ಕೂಡಿದ ಅರಣ್ಯ-ಗಿರಿಗಳಿವೆ, ವಿಸ್ತಾರವಾದ ಸಮುದ್ರತೀರವಿದೆ. ದುಡಿವ ಜನರಿಗೂ ಕೊರತೆಯಿಲ್ಲ. ಆದರೆ ಮುಖ್ಯವಾದ ಒಂದು ಪ್ರಾಂತಿನ ಕೊರತೆ ಎಲ್ಲರಿಗೂ ಎದ್ದು ಕಾಣುವಂತಿದೆ. ಅದಾವುದೆಂದರೆ: ನಮ್ಮ ಜನತೆಯಲ್ಲಿಯ ಸಂಘಟನಾಬುದ್ಧಿ, ಸೌಹಾರ್ದಭಾವಗಳು! ಹೊಸ ಕನ್ನಡನಾಡು ಆ ಕೊರತೆಯನ್ನೂ ತುಂಬಿಕೊಂಡು, ಭಾರತದ ಬಲವನ್ನು ಹೆಚ್ಚಿಸಲಿ!

ಚಂದಾದಾರರ ಬಲ

ಜಯಂತಿಯ ಅಪ್ತಮಿತ್ರರೊಬ್ಬರು ಜಲ್ಯಾಳ ತಾಲೂಕಿನಿಂದ ಬೇರೆ ಬೇರೆ ೬ ಜನ ಚಂದಾದಾರರನ್ನು ಒದಗಿಸಿರುವರು ಹಿಲ್ಲದೆ ಗೆಂಗಾವತಿಯ ಕನ್ನಡ ಕಾರ್ಯಕರ್ತರಾದ ಶ್ರೀಮಾನ್ ನವಲೆ ವೇದವ್ಯಾಸರಾಯರು, ಏಳು ಜನ ಚಂದಾದಾರರನ್ನು ಮಾಡಿ ಅವರ ವಿಳಾಸಗಳನ್ನು ಕಳುಹಿಸಿರುವರು. ಈ ಇಬ್ಬರೂ ಮಹನೀಯರಿಗೆ ನಮ್ಮ ಕೃತಜ್ಞತೆಯ ವಂದನೆಗಳು.

ನಾಡನಡೆ

ಸಣ್ಣ ಕತೆಗಾರರ ಮತ್ತು ಲಲಿತಪ್ರಬಂಧಕಾರರ ಸಮ್ಮೇಳನ

ಬರಲಿರುವ ನವಂಬರ್ ತಿಂಗಳ ಮಧ್ಯದಲ್ಲಿ, ಧಾರವಾಡದಲ್ಲಿ ಸಣ್ಣ ಕತೆಗಾರರ ಮತ್ತು ಲಲಿತಪ್ರಬಂಧಕಾರರ ಸಮ್ಮೇಳನವನ್ನು ಏರ್ಪಡಿಸಬೇಕೆಂದು ಗೊತ್ತಾಗಿ, ಅಧ್ಯಕ್ಷ-ಕೋಶಾಧ್ಯಕ್ಷ ಸಹಿತವಾಗಿ ೨೦ ಜನರ ಕಾರ್ಯಕಾರಿ ಮಂಡಲ ರೂಪುಗೊಂಡು, ಕಾರ್ಯವನ್ನು ಪ್ರಾರಂಭಿಸಿದೆ. ನಮ್ಮ ನಾಡಿನ ಎಲ್ಲ ಕತೆಗಾರರೂ ಪ್ರಬಂಧಕಾರರೂ ಸಾಹಿತ್ಯಾಭಿಮಾನಿಗಳೂ ಈ ಕಾರ್ಯದಲ್ಲಿ ಉಚಿತರೀತಿಯಿಂದ ಸಹಕರಿಸಿ ಸಮ್ಮೇಳನದನ್ನು ಯಶಸ್ವಿಯಾಗಿಸಬೇಕೆಂದ ನಮ್ಮ ವಿನ್ನಹ.

ಇಂದಿನ ಹೊಸಕಾಲದ ಸಾಹಿತ್ಯನಿರ್ಮಿತಿಯ ರೀತಿಯನ್ನು ನೋಡಿದರೆ, ಸಣ್ಣಕತೆ ಮತ್ತು ಲಲಿತಪ್ರಬಂಧಗಳು ಅನ್ಯೋನ್ಯ ಸಂಬಂಧಿಗಳಾಗಿವೆಯೆಂಬುದು ಒಡೆದು ಕಾಣುವುದು. ಸಣ್ಣಕತೆಗಳಲ್ಲಿ ಲಲಿತಪ್ರಬಂಧದ ಪ್ರಭಾವ ಒಡನಾಡಿರುವುದು; ಲಲಿತಪ್ರಬಂಧವೆನಿಸಿಕೊಳ್ಳುವುವುಗಳಲ್ಲಿ ಸಣ್ಣಕತೆ ಹೆಣೆಯಿಕ್ಕುತ್ತಿರುವುದು. ಆದುದರಿಂದ ಇವೆರಡನ್ನೂ ನಿರ್ಮಿಸುವ ಲೇಖಕರನ್ನು ಒಟ್ಟುಗೂಡಿಸಿ ಒಂದು ಸಮ್ಮೇಳನ ಕರೆದುದರಲ್ಲಿ ಒಂದು ಔಚಿತ್ಯವಿಲ್ಲದೆ ಇಲ್ಲ.

ಸಣ್ಣಕತೆ ಮತ್ತು ಲಲಿತಪ್ರಬಂಧಗಳು ಸಾಹಿತ್ಯ ಪ್ರಪಂಚದಲ್ಲಿಯ ಒಂದೊಂದು ಮಹತ್ತ್ವದ ಮತ್ತು ಸತ್ಪ್ರಯುಕ್ತವಾದ ವಿಭಾಗಗಳು. ಇಂದು ಸಣ್ಣಕತೆಯ ಸಾಹಿತ್ಯವಿಭಾಗ ಸ್ವೈರವಾಗಿ ಬೆಳೆಯುವುದರಲ್ಲಿದೆ. ಲಲಿತಪ್ರಬಂಧವಿಭಾಗ ತೆರವು ತೆರವಾಗಿ ಬಿದ್ದುಕೊಂಡಿದೆ. ಹೊಸತಾಗಿ ಲೇಖಕರಾಗಬೇಕೆನ್ನುವವರೆಲ್ಲರೂ ಸಣ್ಣಕತೆಗಳನ್ನು ಬರೆಯುತ್ತಲಿದ್ದಾರೆ. ಇದು ಸಮಾಧಾನದ ಸಂಗತಿಯಾದರೂ, ಲೋಕಾನುಭವ, ಜೀವನದ ಹೊಣೆಗಾರಿಕೆ, ಸಾಹಿತ್ಯವ್ಯಾಸ, ಭಾಷಾಭಿಜ್ಞತೆ ಇವುಗಳ ಅಭಾವದ ಮೂಲಕ, ಸಣ್ಣಕತೆಗಳ ಪೂರ್ಣಸಾದ ನಿರ್ಮಿತಿಯಲ್ಲಿ ಜೊಳ್ಳಿನ ಭಾಗವೇ ಬಹಳವಾಗಿದೆ. ಇಂತಹ ಕತೆಗಳ ಲೇಖನ-ಪ್ರಕಾಶನಗಳಿಂದಲೆ, ವ್ಯಕ್ತಿಗಳ ಶಕ್ತಿವ್ಯಯ, ನಾಡಿನ ಧನವ್ಯಯ. ಈ ವ್ಯಯಗಳನ್ನು ತಡೆಯಲು ಸಣ್ಣಕತೆಗಾರರು ಒಟ್ಟುಗೂಡಿ ವಿಚಾರ ಮಾಡಬೇಕಾದುದು ಅತ್ಯಗತ್ಯವಾಗಿದೆ.

ವ್ಯಕ್ತಿ-ವ್ಯಕ್ತಿಗಳ ಜೀವನಾನುಭೂತಿಗಳು ಶಬ್ದಚಿತ್ರಗಳಾಗಿ ಮೂಡಿಬರುತ್ತಿದ್ದರೆ, ಈ ವಾಸ್ತವ ಸಾಹಿತ್ಯ ನಾಡಿನ ಜನರಿಗೆ ಒಂದು ಹೊಸದೃಷ್ಟಿಯನ್ನೂ ಕೊಡುವುದು; ಮನಸ್ಸು ಬುದ್ಧಿಗಳಿಗೆ ಆಹಾರವನ್ನೂ ಒದಗಿಸುವುದು. ಇಂತಹ ಶಬ್ದಚಿತ್ರಗಳೆಂದರೆಯೆ ಲಲಿತಪ್ರಬಂಧಗಳೆನಿಸಿಕೊಳ್ಳುವುವು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಇವುಗಳ ಕೊರತೆ ಬಹಳವಾಗಿದೆ. 'ಇವರು ಒಳ್ಳೆಯ ಲಲಿತಪ್ರಬಂಧಕಾರರು!' ಎಂದು ಬೆರಳೆತ್ತಿ ತೋರಿಸುವಂತಹ ಸಾಹಿತ್ಯಿಕರ ಸಂಖ್ಯೆ ನಮ್ಮಲ್ಲಿ, ಒಂದು ಕೈಬೆರಳೆಣಿಕೆಗಿಂತ ಹೆಚ್ಚಿಗಿಲ್ಲ. ಈ ಕೊರತೆಯನ್ನು ಕಳೆಯುವ ಬಗೆಯನ್ನು ಕುರಿತು ನಮ್ಮ ಲಲಿತಸಾಹಿತ್ಯಿಕರು ವಿಚಾರ ಮಾಡಬೇಕಾದುದೂ ಅತ್ಯಗತ್ಯವಾಗಿದೆ. ಧಾರವಾಡದಲ್ಲಿ ಸೇರಲಿರುವ ಸಮ್ಮೇಳನವು ಈ ಮಹತ್ತ್ವದ ವಿಚಾರವನ್ನು ಚರ್ಚಿಸಿ, ತರುಣ ಸಾಹಿತ್ಯಿಕರಿಗೆಲ್ಲ ಒಳ್ಳೆಯ ಮಾರ್ಗವನ್ನು ತೋರಿಸಿ, ಕೊಡಲೆಂದು ನಮ್ಮ ಹಾರೈಕೆ.

ಡಾ. ರಂ. ಶ್ರೀ. ಮುಗುಳಿಯವರಿಗೆ ಕೇಂದ್ರಸರಕಾರದ ಮನ್ನಣೆ

ಡಾ. ರಂ ಶ್ರೀ. ಮುಗಳಿಯವರನ್ನು ಕನ್ನಡಿಗರಿಗೆ ಹೊಸತಾಗಿ ಪರಿಚಯವನ್ನು ಮಾಡಿಕೊಡಬೇಕಾಗಿಲ್ಲ. ತಮ್ಮ ವಿವಿಧಮುಖದ ಸಾಹಿತ್ಯಕೃತಿಗಳಿಂದ ಅವರು ಅಖಿಲಕನ್ನಡಿಗರಿಗೂ ಹತ್ತಿರದವರಾಗಿದ್ದಾರೆ. ಅವರು ಇತ್ತೀಚೆಗೆ ಬರೆದ 'ಕನ್ನಡಸಾಹಿತ್ಯಚರಿತ್ರೆ' ಎಂಬ ಗ್ರಂಥವು, ತನ್ನ ಮೇಲ್ಮೈಯಿಂದ, ಕಳೆದ ವರ್ಷವೇ ಮಹಾರಾಷ್ಟ್ರ ವಿಶ್ವವಿದ್ಯಾಲಯದವರಿಂದ ಅವರಿಗೆ ಡಿ.ಲಿಟ್. ಪದವಿಯನ್ನು ಕೊಡಿಸಿತು. ಈ ವರ್ಷ ಕೇಂದ್ರ ಸರಕಾರದ ಸಾಹಿತ್ಯ ಅಕ್ಯಾಡಮಿಯಿಂದ ಬಹುಮಾನರೂ. ಗಳ ಗೌರವಧನವು ಆ ಗ್ರಂಥಕ್ಕೆ ದೊರೆಯಿತು. ಭಾರತ ರಾಷ್ಟ್ರದಿಂದಲೇ ದೊರೆತ ಈ ಕನ್ನಡ ಸಾಹಿತ್ಯಿಕರೊಬ್ಬರ ಮನ್ನಣೆಗಾಗಿ ನಮಗೆ ತುಂಬ ಸಂತೋಷವಾಗಿದೆ.

ಹತ್ತಲಬಳ್ಳಿ ವಜ್ರದ ಮಹತ್ತ್ವವನ್ನು ಪಡೆಯದೆ ಬಿದ್ದಿರುವುದು. ದೂರದ ನಾಡಿನ ವೈದ್ಯ ಅದರ ಮಹತ್ತ್ವವನ್ನು ಕುಂಪು ಕೊಂಡಾಡತೊಡಗಿದಾಗ, ನಮಗದರ ಬೆಲೆಯೇನೆಂಬುದು ಗೊತ್ತಾಗುವುದು. ಇದು ಲೋಕನ ರೂಢಿ. ನಿಜವಾಗಿಯೂ ಡಾ. ಮುಗುಳಿಯವರು ಬರೆದು ಪ್ರಕಟಿಸಿದ ಗ್ರಂಥದ ಬೆಲೆ ಎಂತಹದೆಂಬುದು ನಮ್ಮಲ್ಲಿ ಬಹುಜನರಿಗೆ ಗೊತ್ತಿರಲಿಲ್ಲ. ಸರಕಾರವೇ ಅಂತಹದೊಂದು ಪುಸ್ತಕವನ್ನು ಬರೆಯಿಸಿ ಪ್ರಕಟಿಸಬೇಕೆಂದು ಮನಸ್ಸು ಮಾಡಿದ್ದರೆ, ಅದಕ್ಕಾಗಿ ಹಲವಾರು ತಜ್ಞರನ್ನು ಕೂಡಿಸಿ, ವರ್ಷಾನುವರ್ಷ ಕಾರ್ಯದಲ್ಲಿ ತೊಡಗಿಸಿ, ಲಕ್ಷಗಟ್ಟಲೆ ಹಣವನ್ನು ವಿಚ್ಛಮಾಡಬೇಕಾದೀತು. ಆವರ ಅಷ್ಟೊಂದು ಕೆಲಸವನ್ನು ಡಾ. ಮುಗಳಿಯವರು ಒಬ್ಬರೇ ಮಾಡಿ, ಬಹುಜನರ ಮನ್ನಣೆಗೆ ಪಾತ್ರವಾಗುವಂತಹ ಗ್ರಂಥವನ್ನು ನಿರ್ಮಿಸಿಕೊಟ್ಟಿದ್ದಾರೆ. ಭಾರತ ಸರಕಾರವು ಡಾ. ಮುಗಳಿಯವರ ಈ ಗ್ರಂಥದ ಬೆಲೆಯನ್ನು ಸರಿಯಾಗಿ ಅರಿತುಕೊಂಡು ಅಭಿನಂದನೀಯ ಕಾರ್ಯವನ್ನು ಮಾಡಿರುವುದು. ರಾಷ್ಟ್ರದ ಮನ್ನಣೆಯನ್ನು ಪಡೆದ ಡಾ ಮುಗಳಿಯವರನ್ನೂ ನಾವು ಮನವಾರೆ ಅಭಿನಂದಿಸುವೆವು.

ಭಾರತದ ಮುಖ್ಯಪ್ರಧಾನರ ಅರಬಸ್ತಾನ್ ಯಾತ್ರೆ

ಮಾನವತಾಭಾವವು ಮತ-ಪಂಥಗಳ ಅಂಧಾಭಿಮಾನದ ಬಂಧನವನ್ನೂ ಹರಿದೊಗೆಯುವುದೆಂಬುದಕ್ಕೆ, ಮಾನ್ಯ ಪಂಡಿತ ಜವಾಹರಲಾಲರ ಸೌದೀ ಅರೇಬಿಯದ ಸ್ನೇಹಯಾತ್ರೆ ಪ್ರತ್ಯಕ್ಷ ನಿದರ್ಶನ.

ವಾಗಿದೆ. ಇಂದಿನ ಅರಬ್ ಜನತೆಯ ವಿಚಾರದಲ್ಲಿ ಭಾರತೀಯ ಜನಸಾಮಾನ್ಯರ ಮನದಲ್ಲಿದ್ದ ತಿಳಿವಳಿಕೆಯೆಂದರೆ: ಅರಬಸ್ತಾನದ ಜನರು ಹುಂಬರು, ಅಸಂಸ್ಕೃತರು, ಮತಾಂಧರು, ಕ್ರೂರರು—ಎಂದು. ಈ ತಿಳಿವಳಿಕೆಯನ್ನು ನಮ್ಮ ಜನರಲ್ಲಿ ಹುಟ್ಟಿಸಿದವರು, ಇದುವರೆಗೆ ನಮ್ಮನ್ನು ಆಳುತ್ತಿದ್ದ ಬ್ರಿಟಿಶರು ಭಾರತದ ನಾಯಕರಾರೂ ಇಂದಿನ ತನಕ ಅರಬದೇಶಗಳಿಗೆ ಹೋಗಿರಲಿಲ್ಲ; ಅವರ ಸಂಸ್ಕೃತಿ–ಸೌಜನ್ಯ ಸಮಂಜಸವೃತ್ತಿಗಳನ್ನು ಅರಿತುಕೊಳ್ಳುವುದಕ್ಕಾಗಿರಲಿಲ್ಲ.•

ಈಗ ಸ್ವತಂತ್ರಭಾರತ, ಜಗತ್ತಿನಲ್ಲಿಯ ಸಕಲ ರಾಷ್ಟ್ರಗಳೊಂದಿಗೂ ಸ್ನೇಹ–ಸೌಹಾರ್ದಗಳನ್ನು ಬೆಳೆಸಲು ಕಂಕಣಕಟ್ಟಿ ನಿಂತಿದೆ. ಅದಕ್ಕನುಗುಣವಾಗಿ ಎಲ್ಲ ರಾಷ್ಟ್ರಗಳ ನಾಯಕರನ್ನೂ ಸ್ನೇಹದಿಂದ ತನ್ನಲ್ಲಿಗೆ ಬರಮಾಡಿಕೊಂಡು, ಭಾರತದ ನಾಯಕರ ರಾಜಕೀಯ ಗುರಿ-ನಿರಿಗಳನ್ನು ತೋರಿಸಿ, ಅವರ ಆದರ ಪ್ರೀತಿಗಳನ್ನು ಸಂಪಾದಿಸಿದೆ. ಮಿಕ್ಕವರಂತೆ ಸೌದೀಅರೇಬಿಯದ ಅರಸರೂ ಪರಿವಾರದೊಂದಿಗೆ ಇಲ್ಲಿಗೆ ದಯೆಮಾಡಿಸಿ, ಭಾರತಸರಕಾರದ ಸ್ನೇಹಪೂರ್ಣ ಆತಿಥ್ಯವನ್ನು ಪಡೆದು ಸಂತುಷ್ಟವಾಗಿ ಹೋದರು. ಭಾರತೀಯರ ಧರ್ಮಸಹಿಷ್ಣುತಾ ದೃಷ್ಟಿಯಿಂದ ನೋಡಿದರೆ, ಸೌದೀ ಅರೇಬಿಯಾದ ಅರಸರು ಭಾರತಕ್ಕೆ ಬಂದು ಆತಿಥ್ಯಪಡೆದುಹೋದುದು, ಅಷ್ಟೊಂದು ದೊಡ್ಡ ವಿಷಯವಾಗಿ ತೋರಲಾರದು; ಆದರೆ ಭಾರತದ ಮುಖ್ಯಮಂತ್ರಿಗಳನ್ನು ಸೌದೀ ಅರೇಬಿಯಕ್ಕೆ– ಬರಮಾಡಿಕೊಂಡು ಅಭೂತಪೂರ್ವವಾದ ಸ್ವಾಗತ ಸತ್ಕಾರಗಳನ್ನಿತ್ತು, ಅವರೊಂದಿಗೆ ಹೆಚ್ಚಿನ ರಾಷ್ಟ್ರೀಯ ಸ್ನೇಹ, ಸೌಹಾರ್ದಗಳನ್ನು ಬೆಳಿಸಿದುದು, ಇಂದು ಜಗತ್ತಿಗೆಲ್ಲ ಒಂದು ಮಹತ್ವದ ವಿಷಯವಾಗಿ ತೋರದಿರದು.

ಮತೀಯ ಕಲಹವನ್ನು ಹುಟ್ಟಿಸಿ ತಾನು ಮುಂದಾಳಾಗಿ ಮೆರೆಯಬೇಕೆನ್ನುವ ಪಾಕಿಸ್ತಾನ್ ರಾಷ್ಟ್ರಕ್ಕಂತೂ ಈ ಘಟನೆ ಹೊಟ್ಟೆಕೂಲಿಯನ್ನೇ ಎಬ್ಬಿಸಿಬಿಟ್ಟಿದೆ. ಅದೀಗ ಇಜಿಪ್ತದ ವಿಶ್ವಾಸವನ್ನು ಕಳೆದುಕೊಂಡಿದೆ; ಇಜಿಪ್ತಕ್ಕೆ ಬೆಂಬಲವಾಗಿ ನಿಂತ—ಅರಬ ರಾಷ್ಟ್ರಗಳ ಸ್ನೇಹ–ಸಹಾನುಭೂತಿಗಳಿಗೂ ಎರವಾಗಿದೆ. ಧರ್ಮ, ಮತಗಳಿಗಿಂತ ಮಾನವತೆ, ಜೀವನಗಳು ಮಹತ್ವದ್ದೆಂಬುದರ ಮನವರಿಕೆ ಪಾಕಿಸ್ತಾನದ ಧುರೀಣರಿಗೆ ಆಗಿಯೇ ಇಲ್ಲ. 'ಮುಸಲ್ಮಾನ್ ಧರ್ಮ' ಎಂಬ ನೋಡಿಯಿಂದ ಮುಸಲ್ಮಾನ್ ರಾಷ್ಟ್ರಗಳೆಲ್ಲವುಗಳನ್ನೂ ಕಟ್ಟಹಾಕಿ ಆಳಬೇಕೆಂಬ ಅವರ ಸ್ವಾರ್ಥವನ್ನು ಅರಬ ರಾಷ್ಟ್ರಗಳೆಲ್ಲ ಚೆನ್ನಾಗಿ ಅರಿತುಕೊಂಡಿವೆ. ಆದುದರಿಂದಲೇ ಅವು ಪಾಕಿಸ್ತಾನದ ನಾಯಕರನ್ನು ದೂರ ಸರಿಸಿ, ಶಾಂತಿಸ್ಥಾಪನೆಯ ಗುರಿಯಿಂದ ಹೊರಟಿರುವ ಭಾರತದ ನಾಯಕರನ್ನು ಹತ್ತಿರಕ್ಕೆ ಕರೆಯುತ್ತಲಿವೆ.

ಪಾಕಿಸ್ತಾನಿಗಳ ಕ್ರೋಧಾಲಾಪ ವೃಷ್ಟಿ

ಭಾರತದ ರಾಜಕೀಯ ನಾಯಕರ ಜೀವನೋನ್ನತಿಯು ಸಹನವಾಗದೆ, ಪಾಕಿಸ್ತಾನದ ಕೆಲವು ಜನ ಧುರೀಣರೂ ಪ್ರಮುಖ ಪತ್ರಿಕಾಕಾರರೂ ಭಾರತೀಯರನ್ನು ಬೈದು ಬೈದು, ತಮ್ಮ ಹೊಟ್ಟೆಯ ಕಿಚ್ಚನ್ನು ತಣಿಸಿಕೊಳ್ಳುತ್ತಲಿವೆ. ಇದೇ ಸಮಯದಲ್ಲಿ ಮಾನ್ಯ ಮುನಶಿಯವರು ಪ್ರಕಟಿಸಿದ ಧಾರ್ಮಿಕಪುರುಷರ ಚರಿತ್ರಗ್ರಂಥವೊಂದು ಅವರಿಗೆ ನೆಪವಾಗಿ ದೊರೆತಿದೆ. ಅದನ್ನು ಬರೆದಿರುವ—ಈ ಮೊದಲೇ ಪ್ರಕಟಿಸಿರುವ–ಅಮೇರಿಕನ್ ಲೇಖಕ–ಪ್ರಕಾಶಕರ ವಿಚಾರದಲ್ಲಿ ಯಾವ ಆಕ್ಷೇಪಣೆಯೂ ಇಲ್ಲ. ಆದರೆ ಭಾರತದಲ್ಲಿಯ ಯಾವುದೋ ಒಂದು ಪ್ರಕಾಶನ ಸಂಸ್ಥೆ ಈಗ ಆ ಪುಸ್ತಕವನ್ನು ಪ್ರಕಟಿಸಿದುದರಿಂದ, ಭಾರತ ಸರಕಾರವನ್ನೇ ಅವರು ಬಾಯಿಗೆ ಬಂದಂತೆ ಬಡಿಕೊಳ್ಳುತ್ತಿರುವರು. ಭಾರತೀಯ ಮುಸಲ್ಮಾನರನ್ನು ಕೆಣಕಿ ಕೆರಳಿಸುವ ಪ್ರಚಾರವನ್ನು ನಡೆಸಿರುವರು. ತಮ್ಮನ್ನು ಮಾತ್ರ 'ವಾಕ್' (ಪವಿತ್ರ) ಎಂದು ಕರೆದುಕೊಂಡು, ಮಿಕ್ಕವರನ್ನೆಲ್ಲ ಅಪವಿತ್ರಭಾವನೆಯಿಂದ ಕಾಣುವುದು ಇಂದಿನ ಕಾಲದಲ್ಲಿ ಸರಿಯೆನಿಸುವುದೆ? ಇದಕ್ಕಾಗಿ ಜಗತ್ತಿನ ಜನರೆಲ್ಲರೂ ಪಾಕಿಸ್ತಾನಿಗಳ ಬಗೆಗೆ ಕೆರಳಿ ಅವರ ಮೇಲೆ ಏರಿಹೋಗಬೇಕೆನು? ವ್ಯವಹಾರನಲ್ಲಿ ಯಾವ ತರ್ಕವನ್ನೂ ಅನುಸರಿಸದೆ, ಮನಸ್ಸಿಗೆ ಬಂದಂತೆ ಗಳಹುತ್ತಿರುವ ಪಾಕಿಸ್ತಾನಿಗಳನ್ನು ಕಂಡು ಕೆರಳಬೇಕೋ ಕನಿಕರಪಡಬೇಕೋ ಎಂಬುದು ತಿಳಿಯದಂತಾಗುವುದು. ಇವರಲ್ಲಿ ವಿವೇಕ ಮೂಡಿಬಿಡೋದರೆ, ಜಾಗತಿಕ ಶಾಂತಿಯೆಂಬುದು ಕನಸಿನ ಮಾತೇ ಸರಿ!

ಪರಿತ್ಯಕ್ತರಾಣಿ

(ಐತಿಹಾಸಿಕ ರೂಪಕ)

ಶ್ರೀ. ರಂ. ಸ್ವಾ. ದೇಶಪಾಂಡೆ, ಆಲದಕಟ್ಟಿ

ಪಾತ್ರವರ್ಗ

ಕೃಷ್ಣದೇವರಾಜ — ವಿಜಯನಗರದ ಅರಸು
ಅಮಾತ್ಯ ತಿಮ್ಮರಸ — ವಿಜಯನಗರದ ಅಮಾತ್ಯ
ಪ್ರೇತಾತ್ಮ — ಉತ್ಕಲದ ರಾಜಪುತ್ರಿಯ ಪ್ರೇಮಪಾತ್ರ
ಪ್ರತಾಪರುದ್ರ — ಉತ್ಕಲದ ಮಹಾರಾಜ
ಜಗನ್ಮೋಹಿನಿ — ಉತ್ಕಲದ ರಾಜಪುತ್ರಿ
ನರಹರಿ ಪಾತ್ರನ ಮೃತಾತ್ಮ.

೧

ನಿವೇದಕ

ವಿಜಯನಗರ ಮತ್ತು ಉತ್ಕಲಗಳಲ್ಲಿ ಯುದ್ಧಪ್ರಸಂಗ. ಅದನ್ನು ತಪ್ಪಿಸಲು ಉತ್ಕಲದ ರಾಜ ಪ್ರತಾಪರುದ್ರ ಗಜಪತಿಯೊಂದಿಗೆ ಸ್ನೇಹ-ಸಂಬಂಧ ಬಯಸಿ ವಿಜಯನಗರದ ಕೃಷ್ಣದೇವರಾಜನು ಕಳುಹಿದ ರಾಯಭಾರಿ ಅವಮಾನಿತನಾಗಿ, ಅಯಶಸ್ವಿಯಾಗಿ ಮರಳಿ ಬಂದಿರುವ. ಕೃಷ್ಣದೇವರಾಜನ ಮಂತ್ರಾಗಾರ.

ಅಮಾತ್ಯ :— ಕ್ಷಮೆ ಇರಲಿ ಪ್ರಭು....ಕ್ಷಮಿಸಬೇಕು.

ಕೃ. ದೇ. ರಾ :— (ಸಿಟ್ಟಿನಿಂದ) ಕ್ಷಮೆ, ಕ್ಷಮೆ! ಯಾರಿಗಾಗಿ ಕ್ಷಮೆ! ನಿಮ್ಮ ಪ್ರಭುವಿನ ಕುಲಕೋಟಿಯನ್ನು ಉದ್ಧಾರಮಾಡಿದ ಆ ಬದ್ಧವೈರಿ..... ಗಜಪತಿಗಾಗಿ ಕ್ಷಮಾಯಾಚನೆಯೇ?

ಅಮಾತ್ಯ :— ಅಲ್ಲ, ಪ್ರಭು, ಅಲ್ಲ. ನನಗಾಗಿ—ಮನಸ್ಸಿಲ್ಲದ ಮನ್ಮನ್ನು ಈ ಸಂಧಾನಕಾರ್ಯಕ್ಕಾಗಿ ಬಲವಂತ ಪಡಿಸಿದ ನನ್ನ ಮೂರ್ಖತನಕ್ಕಾಗಿ! ಈ ಅನ್ಯೋನ್ಯ ಸಂಬಂಧದಿಂದ ಆಕ್ರಮಣಶೀಲರಾದ ಆದಿಲ್‌ಶಾಹಿ ಬಾಹಮನಿಸಿಗಳನ್ನು ಬಡಿದೋಡಿಸಲು ಎಷ್ಟು ಯಾದೀತೆಂದು ನೀನೇನೋ ಎಣಿಸಿಕೊಂಡಿದ್ದೆ. ಆದರೆ.....

ಕೃ. ದೇ. ರಾ :— ಮುತ್ತುಗದ ಹೂವಿನಲ್ಲಿ ಮಕರಂದ ಜಯಸಲಾಗದೆಂದು ನಾವು ಹೇಳಿದುದು ಈಗಲಾದರೂ ಪ್ರತೀತಿಗೆ ಬಂದಿತೇ? ಹೂಂ, ಓದಿ ಓದಿ; ಮುಂದೆ ಓದಿ.... ಯಾಕೆ? ಅನುಮಾನವೇಕೆ? ನಮಗೆ ಅವಮಾನಕರ ಶಬ್ದಗಳಿರುವುವೆಂದೇ? ಇರಲಿ ಓದಿ, ಓದಿ!

ಅಮಾತ್ಯ :— ಆಗಲಿ, ಪ್ರಭು! ಅವಸ ಶಬ್ದ, ನುಡಿಯುವವ ನಾನು. ಅದಕ್ಕೆ ಕ್ಷಮೆ ಇರಲಿ! "ನನ್ನೊಡನೆ ಸಂಧಾನ ಬಯಸುವುದಾದರೆ ಜಗನ್ಮೋಹಿನಿಯೊಡನೆ ವಿವಾಹದ ಕನಸನ್ನು ಮರೆಯಬೇಕು. ಅಜ್ಞಾತಕುಲ ಸಂಜಾತರಾಗಿ, ಅಧರ್ಮದಿಂದ ಸಿಂಹಾಸನ ಆಕ್ರಮಿಸಿಕೊಂಡವರಿಗೆ ಗಜಪತಿಕುಲದ ಕುವರಿಯನ್ನು ಕೊಡುವುದೆಂದರೆ, ಪವಿತ್ರ ಚಂದ್ರವಂಶದ ಕೀರ್ತಿಗೆ ಕಲಂಕ ತಂದುಕೊಂಡಂತೆ.

ಕೃ. ದೇ. ರಾ :— (ಸಿಟ್ಟಿನ ಹೂಂಕಾರ) ಹೂಂ, ಅ–ಜ್ಞಾ–ತ ಕು–ಲ–ಸಂ–ಜಾ–ತ–ರು ನಾವು! ಹೂಂ....ಮುಂದೆ?

ಅಮಾತ್ಯ :— "ಸಂಧಾನದ ಚರಮಗುರಿ ಜಗನ್ಮೋಹಿನಿಯನ್ನು ಪಡೆಯಲೆಂದೇ ಇದ್ದರೆ, ಅಂತಹ ಸಂಧಾನಕ್ಕೆ ಒಪ್ಪಲು ಸಾಧ್ಯವಿಲ್ಲ. ದಂಡೆತ್ತಿ ಬಂದು ಬಲಾತ್ಕಾರದಿಂದ ಕುವರಿಯನ್ನು ಪಡೆಯಬಯಸಿದರೆ.....

ಕೃ. ದೇ. ರಾ :— (ಸಿಟ್ಟು) ಅಧಮಾ, ನೀಚಾ! ಕಾಲಗರ್ಭದಲ್ಲಿ ಲೀನವಾಗಿದ್ದ ಘೋರ ಅನ್ಯಾಯವೊಂದನ್ನು ನೀನೇ ಕೆಣಕಿ ತೆಗೆದೆ. ಆ ಪಾಪದ ಫಲವನ್ನು ಈಗ ನೀನು ಅನುಭವಿಸಲೇ ಬೇಕು. ಹೂ, ಮುಂದೆ.....

ಅಮಾತ್ಯ :— "ಕಳಿಂಗಮಾತೆ ಬಂಜೆಯಲ್ಲ; ಕಳಿಂಗಪುತ್ರರ ಕೂರಸಿಯಲಗಿನ ಸವಿಯುಣ್ಣುವ ಇಚ್ಛೆಯಿದ್ದರೆ, ಪೊಟ್ಟನೂರಿನ ಸಮರಭೂಮಿಗೆ ಬರಲು ಇದೇ ಆಮಂತ್ರಣ!"

ಕೃ. ದೇ. ರಾ :— (ಸಿಟ್ಟಿನಿಂದ ಕಾಲನ್ನಪ್ಪಳಿಸುತ್ತ) ಹೇಡಿ! ಕೊಂಡವೀಡು–ಕೊಂಡಪಲ್ಲಿಗಳಲ್ಲಿ ವಿಜಯನಗರದ ವೀರರ ಕೂರಸಿಯ ಸವಿಯುಂಡು ಓಡಿಹೋದ ಹೇಡಿಯಿಂದ ಮತ್ತೆ ಈ ಸಮರಾಹ್ವಾನವ? ಒಣ ಜಂಭ! ಅಮಾತ್ಯರೇ, ದಂಡನಾಯಕರೇ, ನಾಳೆ....ಬೆಳಗಾಗುತ್ತಲೇ, ಸಾಗಲಿ ನಮ್ಮ ದಂಡು....ಪೊಟ್ಟನೂರಿನತ್ತ! ಆ ರಣಚಂಡಿಯನ್ನು ಸೆರೆಹಿಡಿದು ಸದ್ವಂಶದ ಕೊಬ್ಬಿಳಿಸಿ, ದಮ್ಮಯ್ಯಾ ಎಂದು ಕಾಲಿಗೆ ಬೀಳುವಂತೆ ಮಾಡದಿದ್ದರೆ, ವಿಜಯನಗರದ ವೀರ ನರಪತಿ ಅಲ್ಲ ಈ ಕೃಷ್ಣದೇವರಾಜ!

೨

ನಿವೇದಕ

ಪೊಟ್ಟನೂರಿನತ್ತ ಸಾಗಿದ ವಿಜಯನಗರದ ಸೇನೆ ಅಲ್ಲಿಂದ ಪರಿವಾರ ಸಹಿತ ಪಾರಾಗಿ ಪ್ರತಾಪರುದ್ರ ಆಶ್ರಯಿಸಿದ ಕಟಕಪುರಿಯ ಕೊಟೆಯನ್ನು ಮುತ್ತಿದೆ. ಈಗ ಉಭಯ ಸೇನೆಗಳಲ್ಲಿ ತುಮಲಯುದ್ಧ. (ಹಿನ್ನೆಲೆಯಲ್ಲಿ ಕದನದ ಕೋಲಾಹಲ)

ಅಮಾತ್ಯ :— ಏನು? ಶೋಧಿಸಿಯಾಯಿತೆ ಎಲ್ಲ ಕಡೆಗೂ? ಗೋವಿಂದರಾಜ! ಏನು? ಎಲ್ಲಿಯೂ ಇಲ್ಲ! ಇಲ್ಲಿಂದಲೂ ಪಲಾಯನ! ಹೇಡಿ....ರಣಹೇಡಿ! ಹೆಸರು ಪ್ರತಾಪರುದ್ರ. ಕೃತಿಯೋ, ಅತೀನಕೃತ್ಯ! ಜೀವಗಳ್ಳ! ಇಲಿಯಂತೆ ಬಿಲದಲ್ಲಿ ಹೊಕ್ಕು ಪಾರಾಗಬಹದು. ಇರಲಿ. ಏರಲಿ ಇನ್ನು ವಿಜಯನಗರದ ವಿಜಯವರಾಹ ಬಾವುಟ! (ಹಿನ್ನೆಲೆಯಲ್ಲಿ " ಉಫೆ ಉಫೇ " ಎಂಬ ವಿಜಯಘೋಷ)

೩

ನಿವೇದಕ

ಸುರಂಗಮಾರ್ಗದಿಂದ ತಲೆಮರೆಸಿಕೊಂಡು ಪಾರಾದ ಪ್ರತಾಪರುದ್ರ, ಪರಿವಾರ ಸಹಿತ ಕಾಡಿನ ಕುಗ್ರಾಮವೊಂದರಲ್ಲಿ ಕಾಲಕಳೆಯುತ್ತಿರುವ. ರಾಜಪುತ್ರಿ ಜಗನ್ಮೋಹಿನಿ, ವಿಕಾಕಿನಿಯಾಗಿರುವ ಒಂದು ಸಮಯದಲ್ಲಿ, ಯುದ್ಧದಲ್ಲಿ ಮೃತನಾದ ಅವಳ ಪ್ರೇಮಪಾತ್ರ ನರಹರಿಪಾತ್ರನ ಪ್ರೇತಾತ್ಮ ಕಾಣಿಸಿಕೊಂಡಿದೆ. (ಹಿನ್ನೆಲೆಯಲ್ಲಿ ಪ್ರೇತಾತ್ಮ ಸಂಚಾರ ಸೂಚಕ ಘೋರ ಶಬ್ದ.)

ಜಗನ್ಮೋಹಿನಿ :— (ಅಂಜಿಕೆಯಿಂದ ಚಟ್ಟನೇ ಚೀರಿ ಕಂಪಿತ ಸ್ವರದಲ್ಲಿ) ಅಯ್ಯೊ, ಅಯ್ಯೋ, ಇದೇನು, ಇದೇನು? ಅದೊ, ಅದೊ! ಇತ್ತ ಕಡೆಗೆ.....ಯಾರು.....ಯಾರು?

ಪ್ರೇತಾತ್ಮ :— ಹಾ, ಹಾ, ಹೆದರದಿರು. ಬೆದರದಿರು! ನಾನು ನಿನ್ನ ಪ್ರೀ....ತಿಪಾತ್ರ; ಪರಿಚಯವಾಗಲಿಲ್ಲವೇ?

ಜಗನ್ಮೋಹಿನಿ :— (ಭಯಕುಗ್ಗಿದ ಮೇಲಣ ಸಮಾಧಾನದ ಧ್ವನಿ.) ಆ, ಆ; ಅ... ಹು....ದು. ಅಹುದು!

ಪ್ರೇತಾತ್ಮ :— ಪರಿಚಯವಾಯಿತೆ? ಯಾರು ನಾನು?

ಜಗನ್ಮೋಹಿನಿ :— (ಮೆಲುನಗು) ಹ್ಹಿ....ಹ್ಹಿ....ಹ್ಹಿ; ಒಳ್ಳೆ ಚಕಿತಗೊಳಿಸುವ ರೀತಿ! ವೇಷ ಬದಲಾಯಿಸಿ ಜನಗಳನ್ನು ಮೋಸಗೊಳಿಸುವ ಯುಕ್ತಿ ಚೆನ್ನಾಗಿ ಸಾಧಿಸಿದೆ....ವೀರ ನರಹರಿ ಪಾತ್ರರಿಗೆ! ಏನಾದರಾಗಲಿ, (ಕಂಪಿತ ಸ್ವರದಲ್ಲಿ) ಜಗದೀಶ ಜಗನ್ನಾಥ ನನ್ನ ಮನದಿಷ್ಟ ಸಲ್ಲಿಸಿದ. ಆದರೆ " ಭದ್ರೆ, ಭಯಪಡಬೇಡ! ಕೂಡಲೇ ಬಂದು ಕೂಡಿಕೊಳ್ಳುವೆ, " ಎಂದು ಹೇಳಿದವರು ಸಮಾಚಾರವನ್ನಾದರೂ ತಿಳಿಸಬಾರದಿತ್ತೇ? ಅಣ್ಣ ವೀರಭದ್ರನೆಲ್ಲಿ? ಬಪು ಸುತ್ತುವರಿದು ಬಂದಿರಾ? ಅಯ್ಯೋ ಎಷ್ಟು ಕಷ್ಟ!

ಪ್ರೇತಾತ್ಮ :— ಭದ್ರೆ, ಎಲ್ಲ ಸಂಗತಿಯನ್ನೂ ಸವಿಸ್ತಾರನಾಗಿ ಹಿಂದಿನಿಂದ ಹೇಳುವೆನಂತೆ. ಈಗ ಪದ್ಯಕ್ಕೆ.....

ಜಗನ್ಮೋಹಿನಿ :— ಅಯ್ಯೋ, ನನ್ನ ಹುಚ್ಚು! ಬಳಲಿಬಂದವರನ್ನು ಉಪಚರಿಸುವುದನ್ನು ಬಿಟ್ಟು, ಆತುರದಲ್ಲಿ ಏನೇನೋ ಹರಟಿದೆ. ಕ್ಷಮಿಸಿ.

ಪ್ರೇತಾತ್ಮ :— ಭದ್ರೆ, ಬಳಲಿಕೆಯಿಲ್ಲ ನನಗೆ....ಹಸಿವೆ ಇಲ್ಲ; .....ನೀರಡಿಕೆಯಿಲ್ಲ! ....ಉತ್ಕಲದ ವಿಮೋಚನೆಯೊಂದೇ ನನ್ನ ಆಕಾಂಕ್ಷೆ! ಇರಲಿ, ನಿನ್ನಿಂದ ಈಗ ಒಂದು ಕಾರ್ಯವಾಗಬೇಕು.

ಜಗನ್ಮೋಹಿನಿ :— ಅಯ್ಯೋ ಹೇಳಿ ಹೇಳಿ, ಬೇಗ ಹೇಳಿ! ಏನಾಗಬೇಕು ನನ್ನಿಂದ?

ಪ್ರೇತಾತ್ಮ :— ನೀನು ತ್ಯಾಗಕ್ಕೆ ಸಿದ್ಧಳಾಗಬೇಕು.

ಜಗನ್ಮೋಹಿನಿ :— (ಆಶ್ಚರ್ಯ) ತ್ಯಾಗ? ತ್ಯಾಗ! ನೀವೆಲ್ಲ ಪ್ರಾಣತ್ಯಾಗಕ್ಕೆ ಸಿದ್ಧರಾಗಿರುವಾಗ ನಾನು ಹಿಂಜರಿಯಲೇ?

ಪ್ರೇತಾತ್ಮ :— ಆ ರೀತಿ ವಚನ ಕೊಡು.

ಜಗನ್ಮೋಹಿನಿ :— ವಚನ ಬೇಕೆ? ಆಗಲಿ, ಜಗದೀಶನನ್ನು ಸ್ಮರಿಸಿ, ಮಾತಾ-ಪಿತೃಗಳ ಆಣೆಯೆಂದರೂ ನೀವು ಹೇಳುವ ತ್ಯಾಗಕ್ಕೆ ಸಿದ್ಧಳು, ಆಯಿತೇ?

ಪ್ರೇತಾತ್ಮ :— ನೀನು ವಿವಾಹಕ್ಕೆ ಸಿದ್ಧಳಾಗಬೇಕು.

ಜಗನ್ಮೋಹಿನಿ :— (ಅಂತಸ್ತಿನ ನಗು) ಹೆ....ಹೆ....ಹ ... ಇದೊಳ್ಳೆ ತಮಾಷೆ. ಈ ಹಿಂದೆ....ತಾತನವರು ...ನಮ್ಮ ವಿವಾಹ ನಡೆದುಹೋಗಲೆಂದು ಆತುರಪಡುತ್ತಿದ್ದಾಗ, ಮುಂದೂಡಿದವಳು ನಾನೇ?

ಪ್ರೇತಾತ್ಮ :— ಅಲ್ಲ....ನಾನೇ! ಆ ವಿಷಮಪರಿಸ್ಥಿತಿಯಲ್ಲಿ ನನಗದು ಸರಿ ಎನಿಸಲಿಲ್ಲ. ಅದಿರಲಿ, ಈಗ ನಾನು ಹೇಳುವ ವಿವಾಹ ನನ್ನ-ನಿನ್ನ ದಲ್ಲ....ನಿನ್ನ.... ಕೃಷ್ಣದೇವರಾಯನದು!

ಜಗನ್ಮೋಹಿನಿ :— (ಹುಸಿಮುನಿಸು) ಸಾಕು....ಇದೇನು ಚೆಂದ?....ರೇಗಿಸಿ ನೋಡು ನೋಡಬೇಕೆಂತಲೇ? ಅರ್ಥವಿಲ್ಲದ ಮಾತು!

ಪ್ರೇತಾತ್ಮ :— ರಾಜಪುತ್ರಿ, ನನ್ನ ಮಾತಿನಲ್ಲಿ ಅರ್ಥ ತುಂಬಿದೆ. ಆಲೋಚಿಸಿ ನೋಡು. ಮಹಾರಾಜರ ಸ್ಥಿತಿ ಎಷ್ಟು ಶೋಚನೀಯ! ತಮ್ಮ ಪಕ್ಷದಲ್ಲಿ ಬಲವಿದೆಯೇ? ನಮ್ಮೆಲ್ಲರೊಂದಿಗೆ ಈ ಕುಗ್ರಾಮದಲ್ಲಿ....ಸೈನ್ಯವೇ? ವಿಜಯನಗರದ ಗುಪ್ತಚಾರರ ಜಾಲ ನಿಮ್ಮ ಸುತ್ತಲೂ!....ರಾಜಪುತ್ರಿ, ವಿಜಯನಗರದ ಅರಸನ ಘೋರ ಪ್ರತಿಜ್ಞೆಯನ್ನು....ಕಮ್ಮಾರನ ಕೊರಳಿಗೆ ನಿನ್ನನ್ನು ಕಟ್ಟುವ ಘೋರ ಪ್ರತಿಜ್ಞೆಯನ್ನು.... ಈ ಪರಿಸ್ಥಿತಿಯಲ್ಲಿ ಪ್ರತಿಭಟಿಸಲು ಸಾಧ್ಯವೆ? ಬಲುಮೆಯಿಂದ ಬಲಿಯಾಗುವುದರ ಬದಲು.....

ಜಗನ್ಮೋಹಿನಿ :— (ಆಕ್ರಂದನ) ಅಯ್ಯೋ, ಕವುಡಾದರೂ ಆಗಬಾರದಿತ್ತೇ? ಹಿಂದೊಮ್ಮೆ ತಮ್ಮ ಪ್ರಾಣದ ಪ್ರಾಣ ನಾನೆಂದು ಹೇಳುತ್ತಿದ್ದ ಉತ್ಕಲದ ಶಿರೋರತ್ನ ನರಹರಿ ಪಾತ್ರ, ಇಂದು....ಇಂದು .....ಸ್ವಮುಖತಃ ಪರರ ಕರಗ್ರಹಣಮಾಡೆಂದು ಹೇಳುವುದೆಂದರೆ? ಅಯ್ಯೋ, ವಿಧಿ ಉತ್ಕಲಮಾತೆ! ನಿನ್ನ ದುರ್ದೈವಕ್ಕೆ ಕೊನೆ-ಮೊದಲೆಲ್ಲವೇ? ವೈರಿಯ ಭೇದನೀತಿ ಹೊತ್ತಿಸಿದ ಹೋಳಿಯಲ್ಲಿ ಸ್ವಾಭಿಮಾನ

ಬೆಲ್ಲಿಕೊಟ್ಟೂ, ವೈರಿಯ ಅಡಿಯಾಳಾಗಿ ದುಡಿಯುವವರಲ್ಲೇ ನರಹರಿ-ಪಾತ್ರರೂ ಒಬ್ಬರಾದರಿ ?

ಪ್ರೇತಾತ್ಮ :— ಛೇ, ಛೇ, ಛೇ, ಛೇ, ಮರ್ಮವನ್ನರಿಯದೆ ದೋಷ ಕೊಡುತ್ತಿರುವೆ! ವಿಜಯನಗರದ ಅಡಿಯಾಳಲ್ಲ; ಛೇದ-ನೀತಿಯ ಸೇಡಿಗಾಗಿ ಹಗಲು ರಾತ್ರಿ ಹಂಬಲಿಸುತ್ತಿರುವ ಕಾಳ ನಾನ! ರಾಜಪುತ್ರಿ, ನನ್ನ ಹೃದಯದಲ್ಲಿ ಪ್ರಜ್ವಲಿಸುತ್ತಿರುವ ಸ್ವಾಭಿಮಾನ, ಸ್ವದೇಶಾಭಿಮಾನ, ಅವನೊಟ್ಟಿಗೆ ವಿವಾಹವಿಧಿಯ ಮಟ್ಟಿಗೆ ಪ್ರೇರೀಪಿಸಿತು, 'ದಾಂಪತ್ಯ ಸುಖಕ್ಕಲ್ಲ ನನಗಾಗಿ, ನಿನಗಾಗಿ, ಆಪ್ತ- ಇಷ್ಟ-ಮಿತ್ರ-ಸಿತೃ ಮಾತೃಗಳ ಉತ್ಕರ್ಷಕ್ಕಾಗಿ! ನೀನು ತ್ಯಾಗ ಮಾಡಬೇಕಾದದ್ದು ದಾಂಪತ್ಯ ಸುಖ! ಇನ್ನು ನಿಜಾಂಶ ಹೇಳದೆ ಗತ್ಯಂತರವಿಲ್ಲ. ಕೇಳಲು ಧೈರ್ಯವಿದೆಯೇ ?

ಜಗನ್ಮೋಹಿನಿ :— ಹೇಳಿ, ಹೇಳಿ.

ಪ್ರೇತಾತ್ಮ :— ನನ್ನ ನಿನ್ನ ದಾಂಪತ್ಯಯೋಗ ಈ ಜನ್ಮದಲ್ಲಿ ಲಭ್ಯವಿಲ್ಲ. ವಿಚ್ಛೇದಿಸಿದವ ಆ ವೈರಿ ಕೃಷ್ಣದೇವ. (ಕಂಪಿತಸ್ವರ) ರಾಜಪುತ್ರಿ, ಈ ದೇಹ ಈ ದೇಹ, ನೀನು ನೋಡುವ ಈ ದೇಹ, ವಾಸನಾಮಯ ದೇಹ. ನನ್ನ ಭೌತಿಕದೇಹ ಬಿದ್ದುಹೋಯಿತು, ಯುದ್ಧಮಾಡುತ್ತ-ಮಾಡುತ್ತ....ಕಟಕಪುರಿಯ ಕೋಟೆಯಲ್ಲಿ.

ಜಗನ್ಮೋಹಿನಿ :— ಅಯ್ಯೋ! (ಅಳುವಳು.)

ಪ್ರೇತಾತ್ಮ :— (ಕಂಪಿತ ಸ್ವರ) ಬೇಡ, ಬೇಡ, ಕಣ್ಣೀರು ಸುರಿಸಬೇಡ. ಮೃತಾತ್ಮರಿಗೆ ಕಣ್ಣೀರಿನ ಕೋಡಿ ಹರಿಸಿದರೂ ಸಂತೃಪ್ತಿ ಇಲ್ಲ. ರಕ್ತವಾಹ! ರಕ್ತದಾಹ!!

ಜಗನ್ಮೋಹಿನಿ :— (ದುಃಖದಿಂದ ಅಳುವಳು).

ಪ್ರೇತಾತ್ಮ :— ಸಾಮ್ರಾಜ್ಯತೃಷ್ಣೆಗಾಗಿ ನಿನ್ನ ಸೌಂದರ್ಯದ ಭೋಗತೃಷ್ಣೆಗಾಗಿ, ರಣಭೂಮಿಯನ್ನು ವೀರಾಧಿವೀರರ, ವೀರಭದ್ರ-ದೇವನ, ರಕ್ತದಿಂದ ರೊಜ್ಜು ಮಾಡಿದ ಆ ಕೃಷ್ಣದೇವನ ಬೊಜ್ಜಿನ ರಕ್ತದಿಂದ ನಮ್ಮೆಲ್ಲರ ಸಂತೃಪ್ತಿ! ಜೋಕೆ, ಆಣೆ ಇಟ್ಟುಕೊಂಡು ವಚನ ಕೊಟ್ಟಿರುವೆ. ಜೋಕೆ! (ಹಿನ್ನೆಲೆಯಲ್ಲಿ ಘೋರ ಶಬ್ದ).

ಜಗನ್ಮೋಹಿನಿ :— (ಬಿಕ್ಕಿ ಬಿಕ್ಕಿ ಅಳುತ್ತಿರುವ ಧ್ವನಿ.)

೪

ಪ್ರತಾಪರುದ್ರ—ಜಗನ್ಮೋಹಿನಿ

ಪ್ರ. ರು :— (ದೀರ್ಘ ನಿಟ್ಟುಸಿರು) ಜಗದೀಶ, ಜಗದೀಶ, ಜಗನ್ನಾಥಾ, ಪ್ರಭು, ನಿನ್ನಿಚ್ಛೆ!

ಜ :— ತಾತಾ!

ಪ್ರ. ರು :— (ನಿಟ್ಟುಸಿರು) ಬಾ, ಮಗು, ಬಾ, ಇತ್ತ ಬಾ! ಈ ನಿಷ್ಠುರವಿಧಿ ಕಾಡಿನಲ್ಲಿ ತಂದು ಬೀಸಾಡಿತು ಮಗು! ನೀನೆಲ್ಲ ಪಡುತ್ತಿರುವ ಕಷ್ಟ ನೋಡಿ ಹೊಟ್ಟೆಯಲ್ಲಿ ಕಸವಿಸಿ! ಈ ಕಸವಿಸಿ ಎಂದಿಗೆ ಪರಿಹಾರವೋ ಕಾಣೆ.

ಜ :— ಒಂದು ಮಾತು ಹೇಳಬೇಕೆಂದಿದ್ದೇನೆ. ಹೇಳಲೇ ?

ಪ್ರ. ರು :— ಹೇಳಮ್ಮಾ ಹೇಳು, ಏನದು ?

ಜ :— ನಡೆಸಿಕೊಡುವುದೆಂದು ಭರವಸೆಯಾದರೆ.....

ಪ್ರ. ರು :— ಆ; ಆ!! ಇದೇನಮ್ಮಾ ಹೀಗೆ? ಯಾವ ನಿನ್ನ ಮಾತನ್ನು ಅಲ್ಲಗಳೆದಿರುವೆ? ಎಂದೂ ಹೀಗೆ ಹೇಳದಿದ್ದವಳು..... (ನಿಟ್ಟುಸಿರು) ಆಗಲಿ, ಮಗು! ನಡೆಸಿಕೊಡುವೆ; ಹೇಳು?

ಜ :— ನೋಡಿ, ನಿಮ್ಮ ಮನಸ್ಸಿದೆ ಅದು ಹಿಡಿಸದಿದ್ದರೆ.... ಕಡೆಗೆ.... .

ಪ್ರ. ರು :— ಅಯ್ಯೋ, ಕಾಲ ವೈಪರೀತ್ಯವೇ! ಹೇಳು ಮಗು, ಹೇಳು. ಜಗನ್ನಾಥನ ಸಾಕ್ಷಿಯಾಗಿ.....

ಜ :— ನ....ನ್ನ .. ನ್ನು ಆ ಕೃಷ್ಣದೇವ ರಾಜನೊಂದಿಗೆ ವಿ.... ವಾ....ಹ ಮಾಡಿಕೊಡಿ!

ಪ್ರ. ರು :— (ದೀರ್ಘ ನಿಟ್ಟುಸಿರೊಂದಿಗೆ ಹೂಂಕಾರ) ಹೂಂ....ಆಗಲೆಮ್ಮಾ ಆಗಲಿ. ಮರು ಮಾತಾಡಲು ಮಾರ್ಗವೇ ಇಲ್ಲ. ನಿಜವಾದ ಅರಿವು ಈಗಾಯಿತು. ರಾಮಾಯಣದ ಪಾರಾಯಣ, ಪುರಾಣಶ್ರವಣ, ಕತೆ ಕಲ್ಪ ಓದಿದೆ, ಕೇಳಿದೆ! ನಾನೆಂಬ ಅಭಿಮಾನ ಮಾತ್ರ ತೊಲಗಿರಲಿಲ್ಲ. ಇಂದು ಅರಿವಾಯ್ತು. ಅಭಿಮಾನ ಬರಿದಾಯ್ತು. ಪರಮಾತ್ಮನ ಸಂಕಲ್ಪವೇ ಸತ್ಯಸಂಕಲ್ಪ. ನಿನ್ನ ಹೆತ್ತವಳ ಅಪೇಕ್ಷೆಗೆ ಗೆಲವಾಗಲೆಂದೇ ಇದೆಲ್ಲ ಅನಾಹುತವಾಯಿತೇನೋ! ಮಗೂ, ಈ ವಿಷಯ ಕೃಷ್ಣದೇವರಾಜನಿಗೆ ತಿಳಿಸುವ ಬಗೆ?

ಜ. :— ಓಲೆಯ ಮುಖಾಂತರ.

ಪ್ರ. ರು. :— (ನಿಟ್ಟುಸಿರು) ಬರೆಯುವವರಾರು ? ಒಯ್ಯುವವರಾರು ? ಈ ವಿಪನ್ನಸ್ಥಿತಿ.

ಜ. :— ನಾನೇ ಬರೆದರಾಗದೇ ? ಪರಿಜನರಲ್ಲಿ ಯಾರನ್ನಾದರೂ ಕಳಿಸಿದರೆ ಆಗಬಹುದಲ್ಲ.

ಪ್ರ. ರು. :— (ದೀರ್ಘನಿಟ್ಟುಸಿರು) ಆಗಲಿ!

೫

ನಿವೇದಕ

ಕಟಕಪುರಿಯ ವಿಜಯಾನಂತರ ಕೃಷ್ಣದೇವರಾಜನನ್ನು ಕಾಣಬಂದಿರುವ ಅಮಾತ್ಯ ತಿಮ್ಮರಸ.

ಕೃ. ದೇ. :— ಅಪ್ಪಾಜಿ, ಪಂಪಾಪತಿಯ ಅನುಗ್ರಹ! ಸಮಗ್ರ ಉತ್ಕಲವೇನೋ ಕೈಸೇರಿತು. ಆದರೆ....ಒಂದು ವಿಷಯ.

ಅಮಾತ್ಯ :— ಯಾವ ವಿಷಯವೂ ಶೇಷವುಳಿಯಲಿಲ್ಲ ಪ್ರಭು.

ಕೃ. ದೇ. :— (ಆಶ್ಚರ್ಯ) ಆ! ಪ್ರತಾಪರುದ್ರ ಸೆರೆಸಿಕ್ಕನೇ? ಅವನ ಕುವರಿ ?

ಅ. :— ಸೆರೆಸಿಕ್ಕಂತೆಯೇ! ಶರಣು ಬಯಸಿ.... ...

ಕೃ. ದೇ. :— (ಉಪಹಾಸ) ಶರಣು! ಹ್ಹ ಹ್ಹ ಹ್ಹ! ನಮ್ಮಲ್ಲಿ....ಆಜ್ಞಾತ ಕುಲಸಂಜಾತರಾದ ನಮ್ಮಲ್ಲಿ . ಕುಬ್ಜ—ಸದ್ವಂಶ ಸಂಭೂತ ಪ್ರತಾಪರುದ್ರ....ಶರಣು?....ಹ್ಹೆ ಹ್ಹೆ ಹ್ಹೆ! ಹ್ಹ ಹ್ಹ ಹ್ಹ! ಇರಲಿ. ಯಾರ ಮುಖಾಂತರ?

ಅ. :— ಓಲೆ!

ಕೃ. ದೇ. :— ಯಾರ ಮುಖಾಂತರ?

ಅ. :— ಹಳ್ಳಿಯ ಹೈದ. ಪರಿವಾರಹೀನನಾದ ಪರದೇಶಿಗೆ ರಾಯಭಾರಿಯೆಲ್ಲಿ ಪ್ರಭು?

ಕೃ. ದೇ. :— ಇನ್ನೂ ಸ್ವಾರಸ್ಯ! ಎಲ್ಲಿದೆ ಓಲೆ?

ಅ. :— ಇದೇ ಆ ಓಲೆ! ಪ್ರಭೂ, ಅವಲೋಕನವಾಗಲಿ.

ಕೃ. ದೇ. :— (ಆಶ್ಚರ್ಯ) ಓ! ಎಂತಹ ಸ್ಥಂ....ದ....ರ ಹಸ್ತಾಕ್ಷರ! ಆ, ಇರಲಿ. ಓದಿ!

ಅ. :— (ಓದುವನು) ಸ್ವಸ್ತಿ ಶ್ರೀಮನ್ ಮಹಾರಾಜಾಧಿರಾಜ.....

ಕೃ. ದೇ :— ನಮ್ಮ ಬಿರುದಾವಳಿಗಳಿರಲಿ. ಮುಖ್ಯಾಂಶ ಓದಿ.

ಅ. :— "ನಾನು ಮಡುಕಿನಾಡಿದ ಕಾರ್ಯಕ್ಕೆ ತಕ್ಕ ಶಾಸ್ತ್ರಿಯಾಯಿತು. ಉದಾರ ಅಂತಃಕರಣಿಗಳಾದ ತಾವು ನನ್ನ ಕಡೆಗೆ ಸ್ನೇಹಹಸ್ತ ಚಾಚಿ, ಒಮ್ಮೆಯಲ್ಲದಂತೆ ಎರಡು ಬಾರಿ ರಾಯಭಾರಿಯನ್ನು ಕಳಿಸೋಣವಾಯ್ತು. ನಾನು ಮೂರ್ಖತನದಿಂದ ನಿರಾಕರಿಸಿಯುವ್ಚಕ್ಕೆ ಅಣಿಯಾದೆ. ನನ್ನಿಂದಾದ ಶತಾಪರಾಧಗಳನ್ನೂ ಕ್ಷಮಿಸಿ, ಇನ್ನೊಂದು ಸಲ ಉಭಯತರಲ್ಲಿ ಸ್ನೇಹ ಕುದುರುವಂತೆ ಅವಕಾಶ ಕಲ್ಪಿಸಿಕೊಡೋಣವಾಗಬೇಕಾಗಿ ಪ್ರಾರ್ಥನೆ. ನನ್ನ ಪುತ್ರಿ..... ಜಗನ್ಮೋಹಿನಿ ತಮ್ಮ ವಿಜಯವಧು! ದಯೆಯಿಟ್ಟು ಪಾಣಿಗ್ರಹಣದಿಂದ ಸ್ವೀಕರಿಸಿ ಕೃತಾರ್ಥನೆನ್ನಾಗಿ ಮಾಡುವೆರೆಂದು ಹಾರೈಸುವ ತಮ್ಮ ಸ್ನೇಹ ಕೃಪಾಕಾಂಕ್ಷಿ— ಪ್ರತಾಪರುದ್ರ."

ಕೃ :— (ಉಪಹಾಸದ ನಗು) ರಾಜಪುತ್ರಿ .... ನಮ್ಮ .... ವಿಜಯವಧು! ಸ್ವೀ....ಕ....ರಿ....ಸ....ಬ....ಹು....ದು; ಆದರೆ, ನಮಗಾಗಿ ಅಲ್ಲ.

ಅ :— ಇದೇನು ಹೀಗೆ? ಪ್ರಭು ಇನ್ನಾರಿಗಾಗಿ?

ಕೃ :—ನಮ್ಮ ಕುದುರೆಯನ್ನು ಹೊಡೆಯುವ ಕಮ್ಮಾರನಿಗಾಗಿ.

ಅ :— ಶಾಂತಂ ಪಾಪಂ, ಶಾಂತಂ ಪಾಪಂ! ಹಾಗೆ ಹೇಳ ಕೂಡದು ಪ್ರಭು.

ಕೃ :— ಬಹು ಸಾತ್ತ್ವಿಕಪ್ರಭಾವ ಅಪ್ಪಾಜಿ, ನಿನ್ನದು! ಅನ್ಯರ ಅಪರಾಧಗಳನ್ನು ಬೇಗ ಮರೆತುಬಿಡುವಿರಿ.

ಅ— :— ಘನನಂತರಾದ ತಮಗೂ ಇದೇ ಶ್ರೇಯಸ್ಕರ ಪ್ರಭು!

ಕೃ :— (ಅಕ್ಕಸ) ಅಪ್ಪಾಜಿ, ಈ ಪ್ರತಾಪರುದ್ರನ ತಂದೆ.... ಪುರುಷೋತ್ತಮ ...ಮುದಿಗೂಬೆ....ವಿಜಯನಗರರಾಜಪುತ್ರಿ.... ಸಾಳ್ವ ನರಸಿಂಹ ರಾಜಕುವರಿ....ಜೇವಾಬಿಕೆಯನ್ನು ಬಲಾತ್ಕರಿಸಿ ತಂದು, ಹಿಂಸಿಸಿ, ಬೀದಿಯ ಕಸಗೂಡಿಸುವ ಜಾಲಗಾರನಿಗೆ ಕೊಡಮಾಡಿದ ಪ್ರತಿಜ್ಞೆ.....

ಅ :— ಅವನೊಬ್ಬ ಮೂರ್ಖ, ಶತಮೂರ್ಖ ಪ್ರಭು! ಒಬ್ಬ ಮೂರ್ಖ ಮುಖಕ್ಕೆ ಕಪ್ಪು ಬಳಿದುಕೊಂಡರೆ ಅನ್ಯರೂ ಹಾಗೇ ಬಳಿದು ಕೊಳ್ಳುವುದೇ? ಪ್ರಭು—ಅವಿಚಾರ ಅಪಕೀರ್ತಿಗೆ ಸಾಧನ! ಪ್ರಭು, ಸ್ತ್ರೀ .... ಪೃಕೃತಿಮಾತೆಯ ಪ್ರತಿನಿಧಿ! ರಾಜಮನೆತನದವಳಿರಲಿ, ಸಾಮಾನ್ಯಳಿರಲಿ, ದರಿದ್ರಳೇ ಇರಲಿ; ಪೂಜ್ಯಳು, ಮಾನ್ಯಳು! ಗಜಪತಿ ನಂದಿನಿಯ ಅಪಮಾನಕ್ಕಾಗಿ ಸಾಮಂತ ಮಾಂಡಲಿಕರ ಭಾವನೆ ಉದ್ರೇಕಗೊಂಡರೆ ಸಾಮ್ರಾಜ್ಯದ ಕ್ಷೇಮಚಿಂತನೆಯು ಗತಿಯೇನು, ಪ್ರಭು? ಕೊಡ ಹಾಲಿನಲ್ಲಿ ಒಂದು ಕಣ ಉಪ್ಪು ಕಲಕಿ ಕೆಡಿಸುವುದಲ್ಲವೆ ಪ್ರಭು? ಅಭಯವಾದರೆ....ಇನ್ನೂ ಒಂದು ವಿಷಯ.

ಕೃ :— ಅಭಯ! ನಿಮಗೆ! ಅಂತರಂಗದ ವಿಷಯದಲ್ಲಿ ಅಭಯ ಆವಶ್ಯವಿಲ್ಲ ಅಪ್ಪಾಜಿ! ಹೇಳಿ ಹೇಳಿ; ಮನ ಬಿಚ್ಚಿ ಎಲ್ಲವನ್ನೂ ಹೇಳಿ.

ಅ :— ಪ್ರಭುಗಳ ಹೃದಯದಲ್ಲಿ ಈ ಗಜಪತಿನಂದಿನಿಗೆ ಒಂದು ಕಾಲದಲ್ಲಿ ಸ್ಥಾನ ದೊರಕೆತ್ತೆಷ್ಟೆ! ಪರಿಸ್ಥಿತಿ ಬದಲಾದರೂ ಅಧಿಷ್ಠಾನಕ್ಕೆ ಚ್ಯುತಿ ಇಲ್ಲ; ಅಲ್ಲವೇ ಪ್ರಭು? ಭಾವನೆಗಳ ತುಮುಲ ಪ್ರಭುಗಳ ಹೃದಯಾಂತರಾಳದಲ್ಲಿ ನಡೆದು ಈಗ ಪ್ರಭುಗಳನ್ನು ಧರ್ಮಸಂಕಟದಲ್ಲಿ ನೂಕಿವೆ ಎಂಬುದನ್ನು ಧೈರ್ಯವಾಗಿ ಹೇಳಬಲ್ಲೆ. ಏನೋ ಒಮ್ಮೆ, ಸಿಟ್ಟಿನ ಭರದಲ್ಲಿ ಮಾಡಿದ ಪ್ರತಿಜ್ಞೆ. ಈಡೇರಿದರೂ ಕಷ್ಟ, ಈಡೇರದಿದ್ದರೂ ಕಷ್ಟ! ಪ್ರಭು, ದಯೆಯಿಟ್ಟು ಮನಸ್ಸಿನ ಶಾಂತಿಯನ್ನು ಬಲಿಕೊಡಬೇಡಿ. ತಮ್ಮ ಸುಖ, ಶಾಂತಿ, ನಿರ್ಮಲ ಚಾರಿತ್ರ್ಯ ಎಲ್ಲವನ್ನೂ ಆಲೋಚಿಸಿ ಹೀಗೆ ಹೇಳಿದ್ದಾಯ್ತು ಪ್ರಭು! ಅಪಚಾರವಾಗಿದ್ದರೆ ಕ್ಷಮಿಸಿ!

ಕೃ :— (ನಿಟ್ಟುಸಿರು.) ಅಪ್ಪಾಜಿ, ನನ್ನ ಮನಸ್ಸಿನಲ್ಲಿ ನಡೆದ ತುಮುಲವನ್ನು ಜೀರ್ಣಾಗಿ ಅರ್ಥಮಾಡಿಕೊಂಡವರೆಂದರೆ ನೀವೇ! ಅಪ್ಪಾಜಿ, ಯಾವ ದುಷ್ಟ ಶಕ್ತಿ ಆ ಪ್ರತಿಜ್ಞೆಯನ್ನು ಮಾಡಲು ನನ್ನನ್ನು ಪ್ರೇರೇಪಿಸಿತೋ ನಾ ಕಾಣೆ. ಬಿಸಿ ತುಪ್ಪ ನುಂಗಲೂ ಆರೆ, ಜೆಲ್ಲಲೂ ಆರೆ. ಧರ್ಮ ಸಂಕಟದಿಂದ ಪಾರಾಗುವ ಮಾರ್ಗ?

ಅ :— ಜಗದೀಶ ತೋರದಿರಲಾತ! ಪ್ರಭುಗಳು ಚಿಂತಿಸಬಾರದು. ಧರ್ಮಾವತಾರರಾದ ತಮಗೆ ಖಂಡಿತವಾಗಿ ದೈವ ಸಹಾಯ ವಿಲ್ಲದಿಲ್ಲ. ಪ್ರಕೃತ....ಸಂಧಿಗೆ ಅನುಕೂಲಾಭಿಪ್ರಾಯವೆಂದು ಗೃಹಿಸಬಹುದಷ್ಟೇ?

ಕೃ :— (ಸಮಾಧಾನದ ನಿಟ್ಟುಸಿರು) ಆಗಲಿ, ಅಪ್ಪಾಜಿ, ಸಮ್ಮತಿ ಎಂದು ತಿಳಿಸಿಬಿಡಿ!

[ಹಿನ್ನೆಲೆಯಲ್ಲಿ ನಾಗಸ್ವರ ಇತ್ಯಾದಿ ವಾದ್ಯ ಮೇಳಗಳ ಧ್ವನಿ. ಮತ್ತೆ ಮತ್ತೆ "ಉಘೇ ಉಘೇ, ವೀರ ನರಪತಿ ಕೃಷ್ಣದೇವರಾಜ ಉಘೇ ಉಘೇ" ಎಂಬ ಜಯಜಯಕಾರ.]

ನಿವೇದಕ

ಜಗನ್ಮೋಹಿನಿಯು ಅಪೇಕ್ಷೆಯಂತೆ, ಕೃ. ದೇ ರಾಜನ ಮಡದಿಯಾಗಿ ವಿಜಯನಗರದ ಮಹಾರಾಣಿಯಾಗಿ, ಶೃಂಗರಿಸಿದ ಪಟ್ಟದಾನೆಯ ಮೇಲಿಟ್ಟ ಅಂಬಾರಿಯಲ್ಲಿ ಕೃಷ್ಣದೇವರಾಜನ ಪಾರ್ಶ್ವದಲ್ಲಿ ಕುಳಿತು ವಿಜಯನಗರದ ಅರಮನೆಯನ್ನು ಪ್ರವೇಶಿಸಿದಳು. ದಂಪತಿಗಳು ಬಹುಕಾಲದಿಂದ ನಿರೀಕ್ಷಿಸುತ್ತಿದ್ದ ಪ್ರಥಮ ಸಮಾಗಮದ ರಾತ್ರಿ ಅದೆಂತೋ ಕಳೆಯಿತು. ಮರುದಿನ ಬೆಳಗಿನಲ್ಲಿ

ಕೃ. :— (ದೀರ್ಘನಿಟ್ಟುಸಿರು) ಈ .. ಶ್ವ....ರೇ ...ಚ್ಚಾ .. ಬ....ಲೀ.... ಯ .. ಸೀ !

ಅ. :— (ಮೆಲುದನಿಯಲ್ಲಿ) ಪ್ರಭು !

ಕೃ. :— (ಸ್ವಪ್ನಲೋಕದಿಂದ ಎಚ್ಚೆತ್ತವನಂತೆ) ಓ! ಯಾರು? ಅಪ್ಪಾಜಿ! ಬನ್ನಿ, ಬನ್ನಿ, ಇತ್ತ ಬನ್ನಿ !

ಅ. :— ಪ್ರಭುಗಳು ಧಾತ್ರಿಯ ದುರ್ಘಟನೆಯನ್ನೇ ನೆನೆನೆನೆ-ಯುತ್ತ ಮನಸ್ಸಿಗೆ ಬಹು ಬೇಸರಪಟ್ಟುಕೊಂಡಂತಿದೆ. ಅನಾವಶ್ಯಕ, ಪ್ರಭು! 'ಈಶ್ವರೇಚ್ಛಾ ಬಲೀಯಸೀ' ಎಂದು ಇದೀಗ ಹೇಳಿಕೊಳ್ಳ-ಲಿಲ್ಲವೇ? ಅದೇ ತ್ರಿಕಾಲದಲ್ಲೂ ಸತ್ಯ, ಮಾನವನ ಆಕೆ ಆಕಾಂಕ್ಷೆ ಕೇವಲ ಮನಸ್ಸಿನ ಮಂಡಿಗೆ! ಮರೆತು ಬಿಡಿ, ಪ್ರಭು! ಎಲ್ಲವನ್ನೂ ಮರೆತು ಬಿಡಿ! ಪರಮ ಭಾಗ್ಯ ನಮ್ಮದು....ಬಂದ ಕಂಟಕ ಬಯ-ಲಾಯ್ತು.

ಕೃ. :— ಅಪ್ಪಾಜಿ, ಇದೆಲ್ಲ ತಮ್ಮ ದಕ್ಷತೆಯ ಫಲ. ಆ ಮೇಣದ (ಕಂಪಿತ ಸ್ವರ) ಬೊಂಬೆ ಪರ್ಯಂಕದಲ್ಲಿ ನನ್ನ ಸ್ಥಾನದಲ್ಲಿಲ್ಲ-ದಿದ್ದರೆ, ಆ ರಕ್ಕಸಿಯ ಕೈಗತ್ತಿಗೆ ತುತ್ತಾಗಿ....

ಅ. :— ಅಮಂಗಳ ದೂರಾಯ್ತಲ್ಲ ಪ್ರಭು! ಮಹಾರಾಣಿ-ಯವರ ಹೃದಯ ಪರೀಕ್ಷಿಸಲೆಂದು, ತನ್ಮ ಪ್ರತಿಕೃತಿಯನ್ನು ಆ ಪರ್ಯಂಕದಲ್ಲಿರಿಸೆಂದು ಈಶಪ್ರೇರಣೆಯಾಯ್ತು. ನನ್ನದೇನು ಮಹಾ! ಇನ್ನು ಮೇಲೆ ಜಾಗರೂಕರಿದ್ದರಾಯ್ತು.

ಕೃ. :— (ಕಂಪಿತಸ್ವರ) ಇಷ್ಟಪಟ್ಟು, ಕಷ್ಟಪಟ್ಟು ಈ ಅನಿಷ್ಟವೃತ್ಯುವನ್ನು ಮನೆಯಲ್ಲಿ ಸೇರಿಸಿಕೊಂಡಂತಾಯಿತಲ್ಲ! ಅಪ್ಪಾಜಿ! ಮೊದಲು ಇವನ್ನು ಇಲ್ಲಿಂದ ತೊಲಗಿಸಿರಿ! ಲೋ-ವಿಲಕ್ಷಣ!!

ಅ. :— ಸ್ತ್ರೀಹೃದಯ ಸ್ವಭಾವತಃ ಕೋಮಲ; ಆದರೆ ..... ಅಸ್ಪ-ಇಷ್ಟ-ಪ್ರೀತಿಪಾತ್ರರ ಆಕಸ್ಮಿಕ ವಿಯೋಗದಿಂದ, ವಿಧಿಯ ಕರಾಳ ಸಖ, ಅವರ ಚಿತ್ತವನ್ನು ಚಿವುಟಿ ಭ್ರಾಂತಿಗೊಳಿಸಿರುವುದು! ರಾಣಿಯ-ವರ ವಿಷಯದಲ್ಲಿಯೂ ಹೀಗಾಗಿರಲು ಸಾಕು. ಕೆಲಕಾಲ ಅನುಕೂಲ ಪರಿಸ್ಥಿತಿಯ ಶಾಂತ ಸ್ಥಳದಲ್ಲಿರಿಸಿದರೆ, ಹೃದಯದಲ್ಲಿಯ ಕ್ರೋಧದ ಕಿಚ್ಚು ಉರಿದುರಿದು ಬೂದಿಯಾಗಿ ಶಾಂತವಾಗಬಹುದು! ಪಶ್ಚಾತ್ತಾಪ-ದಿಂದ ಮನಸ್ಸು ಪರಿಶುದ್ಧವಾಗಲು ಅವಕಾಶಕಲ್ಪಿಸಿಕೊಡುವ ಕ್ರಮ ವೆ-ಯಾಗಬೇಕು!

ಕೃ. :— ಏನಾದರೂ ಮಾಡಿ, ಅಪ್ಪಾಜಿ! ಸಂಪೂರ್ಣ ಸ್ವತಂತ್ರರು ನೀವು ಇದರಲ್ಲಿ. ನಿಮಗೆ ಸರಿಕಂಡಲ್ಲಿ ಸರಿನೋರಿದಂತೆ....

ಅ. :— ಪ್ರಭು, ಕುಂಭಂ ಗ್ರಾಮದ ರಾಜಭವನ ಎಲ್ಲ ವಿಷ-ಯಿಂದಲೂ ಅನುಕೂಲ ಆದೀತಲ್ಲವೆ?

ಕೃ. :— (ಅಕ್ಕಸ) ಯಾವ ಮಸಣವಾದರೂ ಆದೀತು! ಅಪ್ಪಾಜಿ, ಬಿಟ್ಟುಬಂದು ಬಿಡಿ ಈ ಪಿಶಾಚಿಯನ್ನು!

ಅ. :— ಪ್ರಭು, ಯಾವ ಕಾರ್ಯವನ್ನಾದರೂ ಯುಕ್ತಿಯುಕ್ತ-ವಾಗಿ ಮಾಡುವುದೇ ವಿಹಿತವಲ್ಲವೇ? ಯೋಗ್ಯ ಸೈನ್ಯ ಸಿಬ್ಬಂದಿ-ಯೊಂದಿಗೆ, ಮಹಾಪ್ರಭುಗಳೂ ರಾಣಿಯವರನ್ನನುಸರಿಸಿ ಕುಂಭಂ ಗ್ರಾಮಕ್ಕೆ ಪ್ರಯಾಣ ಬೆಳಸಿ, ಎರಡು ದಿವಸ ವಾಸ್ತವ್ಯಮಾಡಿ, ಅನಂತರ ಮರಳುವ ಕೃಪೆ ಮಾಡಿದರೆ.....

ಕೃ. :— (ನಿಟ್ಟುಸಿರು) ಆಗಲಿ, ಆಲೋಚನೆ ಸರಿಯಾಗಿದೆ. ತೀವ್ರ .. ಅದಷ್ಟು ತೀವ್ರ....(ನಿಟ್ಟುಸಿರು) ಅಪ್ಪಾಜಿ, ವಿಪತ್ತಿನಿಂದ ಪಾರುಮಾಡಿದ ಮೃತ್ಯುಂಜಯನಿಗೆ ಇಂದು ವಿಶೇಷಪೂಜೆ ಸಲ್ಲಿಸ-ಬೇಕು ಅಪ್ಪಾಜಿ!

ಅ. :— ಅರ್ಚಕರಿಗೆ ಆಗಲೇ ಆದೇಶ ಕಳಿಸಿ ಆಗಿದೆ ಪ್ರಭು

ಕೃ. :— (ಆಶ್ಚರ್ಯ) ಓ! ಸರಿ, ಸಂತೋಷ!

೭

[ಹಿನ್ನೆಲೆಯಲ್ಲಿ ಪ್ರಯಾಣಸೂಚಕ ರಥನಾಮನಾದಿಗಳ ಸಂಚಲನಧ್ವನಿ.]

ನಿವೇದಕ

ಕುಂಭಂ ರಾಜಭವನದಲ್ಲಿ. ಜಗನ್ಮೋಹಿನಿಯ ವಸತಿ.

ಜ :— (ಬಿಕ್ಕಿ ಬಿಕ್ಕಿ ಅಳುತ್ತಿರುವಳು.)

ಕೃ :— ಏಕೆ? ಅಳುವುದೇಕೆ? ನಾನು ದೂರ ಹೋಗಲಿರುವೆ-ನೆಂದೆ? ಆಥವಾ.....

ಜ :— (ಬಿಕ್ಕುತ್ತಲೇ) ಬೇಡಿ, ಬೇಡಿ, ಹೋಗಬೇಡಿ! ಹಾಗೇ ಹೋಗಬೇಡಿ! ನನ್ನ ಪ್ರಾ....ಣ....ತೆ....ಗೆ....ದು ಅಮೇಲೆ.

ಕೃ :— ನಿನ್ನ ಪ್ರಾಣ ತೆಗೆದು! ಮೋಹಿನಿ, ಪ್ರಾಣ ತೆಗೆಯ-ಲೆಂದು ನಿನ್ನನ್ನು ಲಗ್ನವಾಗಲಿಲ್ಲ. ಪ್ರಾಣಪದಕವೆಂದು ನಿನ್ನನ್ನು ಧರಿಸಿದೆನಲ್ಲವೆ! (ಅಕ್ಕಸ) ನಲ್ಲೇ....ನಲ್ಲೇ,....ಅಗ್ನಿಸಾಕ್ಷಿಯಾಗಿ 'ಧರ್ಮೇಚ, ಅರ್ಥೇಚ, ಕಾಮೇಚ ನಾತಿಚರಾಮಿ ನಾತಿಚರಾಮಿ' ಎಂದು ಪ್ರತಿಜ್ಞೆಮಾಡಿ ಪಾಣಿಗ್ರಹಣಮಾಡಿದ ಪತ್ನಿಯ ಪ್ರಾಣಘಾತ ಮಾಡುವ ಕ್ರೂರ ನಾನಲ್ಲ ಮೋಹಿನಿ! ನಿನ್ನ ವಿಷಯಕ್ಕೆ ನನ್ನ ಭಾವನೆ ಮೊದಲು ಏನೇ ಇದ್ದಿರಲಿ; ನಿನ್ನ ತಾತನವರು ಸಂಧಾನಕ್ಕಾಗಿ ಬರೆಸಿದ ಬಿನ್ನಹಪತ್ರೋಲೆಯಲ್ಲಿಯ ನಿನ್ನ ಹಸ್ತಾಕ್ಷರಗಳು ನಿನ್ನ ಪ್ರೇಮ-ಕುಸುಮದ ಮಾಲೆಯೆಂದು ತಿಳಿದೆ. ದ್ವೇಷದ ಜ್ವಾಲಾಮಾಲೆಯೆಂದು ತಿಳಿಯಲಿಲ್ಲ. ಋಣಾನುಬಂಧ ನಮ್ಮನ್ನು ಸತಿಪತಿಗಳನ್ನಾಗಿ ನೂಡಿತು. ಆದರೆ....ಯಾವ ದೈವೀಶಾಪವೋ; ಈ ರೀತಿ ವಿಪರೀತ-ಕ್ಕೆಟ್ಟಿತು. ಬದ್ಧ ವೈರಿಯಂತೆ!

ಜ :— (ಅಳುತ್ತಲೇ) ಹೆ....ಹ....ತ್ಯಾಕಾರಿಣಿಯಾದೆ..... .ಘಾತಿಸಿ, ನನ್ನನ್ನು ಘಾತಿಸಿ!

ಕೃ :— ಗಜಪತಿನಂದಿನಿ, ಈ ಆಕ್ಕಸದಿಂದೇನು? ಯುದ್ಧದಲ್ಲಿ ಮಡಿದುಹೋದ ಅಸ್ಮೇಷ್ಟರ ಮರಣಕ್ಕೆ ನಾನು ಕಾರಣನೆಂದು ದ್ವೇಷಿಸುವೆಯಾ! ಯುದ್ಧಕ್ಕೆ ಆಹ್ವಾನನಿತ್ತವನು ನಾನಲ್ಲ; ನಿಮ್ಮ ತಂದೆ! ಸಂಧಾನ ಬಯಸಿ ಎರಡು ಸಲ ರಾಯಭಾರಿಯನ್ನು ಕಳುಹಿ-ದರೂ, ಅವನನ್ನು ಅವಮಾನಿಸಿ ಕಳುಹಿದರು ನಿನ್ನ ತಾತರು! ಇದೆಲ್ಲಕ್ಕೂ ನನ್ನ ಸಾಮ್ರಾಜ್ಯತೃಷ್ಣೆಯೇ ಕಾರಣವಲ್ಲ. ಹಾಗಿದ್ದರೆ, ಕೆದ್ದುಕೊಂಡ ರಾಜ್ಯವನ್ನು ಮತ್ತೆ ಪ್ರತಾಪರುದ್ರರಿಗೆ ಮನ್ನಿಸಿ

ತಿರುಗಿಸುತ್ತಿರಲಿಲ್ಲ. ಮೋಹಿನಿ, ಇಷ್ಟಿದ್ದರೂ ನನ್ನಿಂದ ಅಪಚಾರ ಏನಾದರೂ ಆಗಿದ್ದರೆ ಮನ್ನಿಸು!

ಜ :— (ಅಳು.)

ಕೃ :— ದೇವಿ, ಈಗಲೂ ಕಾಲ ಮಿಂಚಿಲ್ಲ! ಈ ಪ್ರಶಾಂತ ವಾತಾವರಣ, ಕಳೆದುಕೊಂಡ ನಿನ್ನ ಮನಸ್ಸಿನ ಶಾಂತಿಯನ್ನು ಮರಳಿ ತಂದುಕೊಡಲು ಅನುಕೂಲವಿದೆ. ರಾಜಭವನದಲ್ಲಿ ಎಲ್ಲ ಅನುಕೂಲತೆಗಳಿವೆ. ಯಾವ ದುರುದ್ದೇಶದಿಂದಲೂ ನಾನು ನಿನ್ನನ್ನು ಇಲ್ಲಿ ಇರಿಸಿಲ್ಲ. ಸಾಕಷ್ಟು ಅವಕಾಶ ಕೊಡುತ್ತಿರುವೆ. ನಿನ್ನ ದುಷ್ಕೃತಿಗಾಗಿ ನಿನಗೆ ನಿಜವಾಗಿ ಪಶ್ಚಾತ್ತಾಪವಾದರೆ, ಆ ದಿನ ನಮ್ಮ ಬಾಳಿಗೆ ಭಾಗ್ಯೋದಯ!

ಜ. :— (ಅಳು) ಅಯ್ಯೋ.... ...

ಕೃ. :— ಪಶ್ಚಾತ್ತಾಪದಿಂದ ಅಂತಃಕರಣ ಶುದ್ಧವಾಗಿ ಕ್ಷಮೆ ಯಾಚಿಸಿದರೆ, ಸರ್ವ ಅಪರಾಧವನ್ನೂ ಕ್ಷಮಿಸಿ ಮನ್ನಿಸಿ ನನ್ನ ಬಳಿಗೆ ಕರೆಯಿಸಿಕೊಳ್ಳುವೆ. ಜಗದೀಶ–ಪಂಪಾಪತಿ ನಿನಗೆ ಸದ್ಬುದ್ಧಿ ಕೊಡಲಿ!

ಜ :— (ಗಟ್ಟಿಯಾಗಿ ಅಳುವಳು).

೮

ನಿವೇದಕ

ಕುಂಭಂ ಗ್ರಾಮದಲ್ಲಿ ಪರಿತ್ಯಕ್ತರಾಣಿಯಾಗಿ ಜೀವಿಸುತ್ತಿರುವ ಜಗನ್ಮೋಹಿನಿ, ಚಿಂತಾಸಂತಾಪಗಳಿಂದ ಆರೋಗ್ಯ ಕೆಟ್ಟು ಹಾಸಿಗೆ ಹಿಡಿದಳು. ರಾಜವೈದ್ಯರ ಔಷಧೋಪಚಾರಗಳಿಂದ ಗುಣ ಹೊಂದಿದಳು. ವಿಜಯನಗರಕ್ಕೆ ಹಿಂದಿರುಗಿದ ರಾಜವೈದ್ಯರು ರಾಣಿಯ ನಿರೋಗಸ್ಥಿತಿಯನ್ನು ತಿಳಿಸಿದರಲ್ಲದೆ, ಅವಳು ಕೊಟ್ಟ ಒಂದು ಪತ್ರವನ್ನೂ ತಲುಪಿಸಿದರು. ಪತ್ರದಲ್ಲಿಯ ಅಭೀಷ್ಟೆಯನ್ನು ಈಡೇರಿಸಲು ಕೃಷ್ಣದೇವರಾಯನು ತಿಮ್ಮರಸನ ಜೊತೆಯಲ್ಲಿ ಕುಂಭಂ ಗ್ರಾಮಕ್ಕೆ ಬಂದಿರುವ.

ಜ. :— (ಪಶ್ಚಾತ್ತಾಪ ಸೂಚಕ ಅಳು) ಪ್ರಭು–ಪ್ರಭು.... ಇಂದು ನಾನು ಧನ್ಯಳಾದೆ. ಮಾಣಿಕ್ಯದ ಮಹಿಮೆ ತಿಳಿಯದ ಮುಂಗನಂತೆ, ತಮ್ಮ ಕರುಣಾರ್ದ್ರ ಹೃದಯದ ಮರ್ಮ ತಿಳಿಯದ ಮಹಾ ಪಾತಕಿ ನಾನು! ದಯಾಮಯರು ಕೊನೆಯ ಮನದಾಶೆಯನ್ನಿಷ್ಟು ಸಲಿಸಿ.....

ಕೃ. :— (ಮಂದಹಾಸ) ಕೊನೆಯ ಆಶೆ....ಕೊನೆಯ ಆಶೆ ಏನದು ?

ಜ. :— (ಕಂಪಿತಸ್ವರ) ನಾಥ, ನಾಥ! ಈ ದೇಹಕ್ಕೆ ಸ್ವಾಮಿ ತಾವು! ಪ್ರೇಮವಂಚಿತಳಾಗಿ ನಾನಿನ್ನು ಬಾಳ ನೂಕಲಾರೆ. ದರ್ಶನಕ್ಕೆ ಅವಕಾಶ ಕೊಟ್ಟು ಪುನೀತಳನ್ನಾಗಿ ಮಾಡಿದಿರಿ. ಇನ್ನು ಪಾವನೆಯಾದ ಗಂಗೆಯಲ್ಲಿ....ಈ ದೇಹ .....

ಕೃ. :— (ನಿಟ್ಟುಸಿರೊಂದಿಗೆ) ಹೂಂ, ಹೂಂ, ಹುಚ್ಚುಕಲ್ಪನೆ! ಇದರಿಂದ ದೇಹಸಾರ್ಥಕವೇ ? ಜೀವಿಸಬೇಕು. ಜೀವಿಸಿರುವಷ್ಟಿಗ ದಾನಧರ್ಮ-ಪರೋಪಕಾರ-ರಾಷ್ಟ್ರಸೇವೆ,-ಜನಸೇವೆಯಿಂದ ಬಾಳನ್ನು ಸಾರ್ಥಕಗೊಳಿಸಬೇಕು. ಪಶ್ಚಾತ್ತಾಪದಿಂದ ಅಂತಃಕರಣ ಶುದ್ಧಿಯಾದ ಮೇಲೆ.....

ಜ. :— (ಕಂಪಿತ ಸ್ವರ) ಕ್ಷಮಿಸಿ, ಪ್ರಭು, ಕ್ಷಮಿಸಿ! ಸರ್ವಾಪರಾಧಗಳನ್ನೂ ಕ್ಷಮಿಸಿ? ಇನ್ನೂ ಬೇರೆ ರೀತಿಯಿಂದ ಶಿಕ್ಷಿಸಿ; ಆದರೆ ತಮ್ಮ ಚರಣಸೇವೆಗೆ ಅಂತರ ಬಾರದಂತೆ ಅನುಗ್ರಹಿಸಿ. (ಪಾದಕ್ಕೆ ಬೀಳುವಳು).

ಕೃ. :— ಏಳು, ಚಿನ್ನಾ, ಏಳು! ಎಲ್ಲ ಪರಮಾತ್ಮನ ಅನುಗ್ರಹ! ಇಲ್ಲಿ ಬಾ. ಈ ಆಸನದ ಅರ್ಧಾಸನ ನಿನ್ನದು!

(ಹಿನ್ನೆಲೆಯಲ್ಲಿ ಗಂಟೆ, ಜಾಗಟೆ, ಸನಾದಿಗಳ ಸ್ವರಮೇಳ).

ಇದೇನು ?

ಜ. :— (ನಿಟ್ಟುಸಿರು) ಪಾಪ ಪರಿಹಾರಾರ್ಥ ಪ್ರೀತುಳಸಿಯ ಆರಾಧನೆಯ ವ್ರತ! ಇಂದು ಕಾರ್ತಿಕ ಶುಕ್ಲ ದ್ವಾದಶಿಯಲ್ಲವೇ? ಇಂದೇ ಈ ವ್ರತದ ಸಮಾಪ್ತಿ.

ಕೃ. :— ಓ, ಹೀಗೇನು? ಪೂಜೆ ನಡೆಯಲಿ.

ಜ. :— (ವಿನಯಪೂರ್ವಕ) ವಿಶ್ರಮಿಸಿಕೊಳ್ಳೋಣವಾಗಲಿ. ಪೂಜೆ ಪೂರಯಿಸಿದ ಕೂಡಲೇ ಬಂದುಬಿಡುವೆ.

೯

[ಹಿನ್ನೆಲೆಯಲ್ಲಿ ಭೂತಸಂಚಾರಸೂಚಕ ಶಬ್ದ].

(ಪ್ರೇತಾತ್ಮ)

(ಹುಚ್ಚುನಗು) ಅಹ್ಹ ಆಆಆ ಇನ್ನೊಂದೇ ಗಳಿಗೆ! ಸಮ್ರಾಟನ ಆಯುಃಸಮಾಪ್ತಿ! ಸಮಸ್ತ ಪ್ರೇತಾತ್ಮರಿಗೆ ಸಂತೃಪ್ತಿ! ಬಿತ್ತು, ಬಿತ್ತು, ಹಾಲಿನಲ್ಲಿ ಹಾಲಾಹಲ.....ಹಾಲಿನಲ್ಲಿ ಹಾಲಾಹಲ..... ಅಹಹಹಹ.....

(ಹಿನ್ನೆಲೆಯಲ್ಲಿ ಪೂಜಾಸಮಾಪ್ತಿಸೂಚಕ ಮಂಗಲವಾದ್ಯರವ)

ಜ. :— (ಮಂದವಾದ ಉಸಿರ್ಗರೆತ) ಕ್ಷಮಿಸಬೇಕು. ಸ್ವಲ್ಪ ವಿಳಂಬವಾಯಿತೇನೋ!

ಕೃ. :— (ಮಂದಹಾಸ) ಪೂಜೆ....ಪೂರಯಿಸಿತೇ ? ತುಂಬ ದಣಿವಾಗಿರಬೇಕು! ಕೊಂಚ ಊಟವಾಡಿ ಬಂದುಬಿಟ್ಟರೆ.....

ಜ. :— ಪೂಜೆಯ ನಂತರ ಊಟಮಾಡಿದರೆ ಫಲವಿಲ್ಲವಂತೆ.

ಕೃ. :— ಹಾಗಾದರೆ ನಿನಗೆ ಇಂದು ಸಂಪೂರ್ಣ ಉಪವಾಸ .....ಆ ?

ಜ. :— ಹಾಗೇನಿಲ್ಲ. ಕೊಂಚ ಹಾಲು ಹಣ್ಣು....ಪರದೈವತದ ಸಾನ್ನಿಧ್ಯ ಲಭಿಸಿದೆ. ಒಟ್ಟಿಗೇ.....

ಕೃ. :— (ಮಂದನಗು) ಹೆ.....ಹೆ.....ಹೆ.....ಅದಕ್ಕೇನಂತೆ ಆಗಲಿ.

(ಹಿನ್ನೆಲೆಯಲ್ಲಿ ಫಲಾಹಾರಪ ತಟ್ಟೆಯನ್ನಿಟ್ಟ ಶಬ್ದ)

ಜ. :— ತೆಗೆದುಕೊಳ್ಳೋಣವಾಗಲಿ.

ಕೃ. :— ಏನಿದು ?

ಜ. :— ಕಿತ್ತಳೆಯ ತೊಳೆ.

ಕೃ. :— (ಹುಳಿ ಹತ್ತಿದಂತೆ ನಟಿಸಿ) ಹಿ, ಹಿ .....

ಜ. : — ಯಾಕೆ ?

ಕೃ. :— ಹುಳಿ !

ಜ. :— ಅಯ್ಯೋ, ನನ್ನ ವಿಧಿ, ಮೊದಲ ತುತ್ತಿಗೇ ಹುಳಿ ಹಿಂಡಿದನೇ ?

ಕೃ. :— ಚಿನ್ನಾ, ಹೀಗೆ ಮಾಡು. ಮೊದಲು ನೀನು ರುಚಿ ನೋಡು; ಆಮೇಲೆ ನನಗೆ ತಾ ! ಎಂದರೆ....ಹಳಹಳಿಸುವ ಕಾರಣವೇ ಇಲ್ಲ.

ಜ. :— ಇಶ್ ! ಎಂಜಲು !

ಕೃ. :— (ಮೆಲುನಗು) ಅ....ಛ....ರಾ .. ಮ್ಯ....ತ ?

(ಇಬ್ಬರೂ ನಗುವರು.)

ಜ. :— ಇದು ಕೊಳ್ಳಿರಿ !

ಕೃ. :— ಇದೇನು ?

ಜ. :— ನೈವೇದ್ಯ....ಪಸುವಿನ ಹಾಲು.

ಕೃ. :— (ನಿಧಾನವಾಗಿ) ಹೂಂ, ತೆಗೆದುಕೋ....ಪೂಜಾಫಲ ನಿನಗೆ ಸಲಬೇಕು ಮೊದಲು, ಅಲ್ಲವೇ ?

ಜ. :— ದೇವಿಗೆ ನಿವೇದನವಾದರೂ, ಪರದೈವತಕ್ಕೆ ನಿವೇದನೆಯಾದ ಮೇಲೆ ನನಗೆ !

ಕೃ. :— (ಮೆಲುನಗು) ಹೃದಯವೊಂದಾದ ಮೇಲೆ ಭೇದವೆಲ್ಲಿ ? ಉಪವಾಸ ಬಿದ್ದು ತುಂಬ ಬಳಲಿದವಳು ನೀನು; ಕೊಂಚ, ಕೊಂಚ, ಒಂದು ಗುಟುಕು, ರುಚಿನೋಡಿ ನನಗೆ ಕೊಡು !

ಜ. :— ಬಳಲಿಕೆ, ಶ್ರಮ, ಎಲ್ಲ ತಮ್ಮ ದರ್ಶನದಿಂದ ಪರಿಹಾರವಾಗಿಬಿಟ್ಟಿವೆ. ಪ್ರಭು, ತೆಗೆದುಕೊಳ್ಳಿ.

ಕೃ. :— ಇಲ್ಲಿ ತಾ.

ಜ. : — ಯಾಕ ? ತುಂಬ ಬಿಸಿಯಾಗಿದೆಯೇ ?

ಕೃ. : —ಇಲ್ಲ ... (ಅನುಮಾನಿಸುತ್ತ).

ಜ. : — ಹಾಗಾದರೆ....

ಕೃ. : —ಏನೋ ಒಂದು ಅನುಭವಾಮೃತದ ನುಡಿ ನೆನಪಾಯಿತು, ಯೋಚಿಸುತ್ತಿದ್ದೆ.

ಜ. : —ಅದಾವ ನುಡಿ ?

ಕೃ. : —" ಯಾವುದನ್ನೂ....ಪರೀಕ್ಷಿಸದೆ....ಒಮ್ಮೆಲೆ.... .... ಕುಡಿಯಬಾರದು....ತಿನ್ನಬಾರದು.... "

ಜ. : —(ಮಂದಹಾಸ) ಹ, ಹ, ಹ, ಹ,....ಇದು ರಾಜನೀತಿ ನಿಜ....ಆದರೆ .. ಸ್ಥಳಕಾಲ ಪರಿಗಣನೆ ಇಲ್ಲವೇ ?.....ಅನುಮಾನವಾದರೆ ಬಿಟ್ಟುಬಿಡಿ. ನೈವೇದ್ಯವೆಂದು ಬಲವಂತಪಡಿಸಿದೆ ಅಷ್ಟೇ.... (ಕುಪಿತ ಸ್ವರದಲ್ಲಿ) ಸಹಜವಿದೆ, ಸಹಜವಿದೆ, ಪ್ರಭು ! ಒಮ್ಮೆ ನಂಬುಗೆಗೇಡಾದ ಮೇಲೆ ನಂಬುಗೆ ಹುಟ್ಟುವುದು ಸಾಧ್ಯವಿಲ್ಲ. (ಅಕ್ಕಸದಿಂದ ಅಳು) ನಾನೇ, ನಾನೇ ದುರ್ದೈವಿ. ಇದೇ ನನಗೆ ತಕ್ಕ ಶಿಕ್ಷೆ. ನನ್ನ ಮಾತಿನಲ್ಲಿ ನಂಬುಗೆ ಹುಟ್ಟಬಹುದೆಂದು ನಂಬಿದ ನಾನೇ ಮೂರ್ಖಳು ! ಪ್ರಭು ದಯಾಳುಗಳು ತಾವು ! ಮುಖಾವಲೋಕನಕ್ಕೂ ಯೋಗ್ಯಳಲ್ಲದ ಪತಿತಳು ನಾನು ! ದರ್ಶನ ನೀಡಿ ಪಾವನ ಮಾಡಿದಿರಿ. ಹೀಗಾಗಬಹುದೆಂದು ಮೊದಲೇ ನಾನು ಬಿನ್ನವಿಸಿಕೊಂಡಿದ್ದೆ. ಇನ್ನು, ಇನ್ನು ಈ ಜನ್ಮದ ದುಃಖ-ಶೋಕ-ಸಂತಾಪಗಳ ಪರಿಹಾರಕ್ಕೆ ಗಂಗೆಯ ಮಡಿಲೊಂದೇ....(ಬಿಕ್ಕಿ ಬಿಕ್ಕಿ ಅಳು).

ಕೃ. :— ದೇವಿ, ನಿನ್ನಲ್ಲಿ ಅಪನಂಬಿಗೆಯೆಂದಲ್ಲ....ತಾ, ಇಲ್ಲಿ ತಾ, ಆ ನೈವೇದ್ಯ !

ಅ. :— (ಪ್ರವೇಶಿಸುತ್ತ) ಅ....ನು....ಭ....ವಾ....ಮ್ಯ....ತ.

ಕೃ. :— ಓ ! ಆಪ್ತಾಜಿಯವರು ! ಯಾವಾಗ ಬರೋಣವಾಯ್ತು. ಬನ್ನಿ....ಬನ್ನಿ....

ತಿಮ್ಮರಸ : —ಇದೀಗ ತಾನೇ ಬರುತ್ತಿರುವೆ ಪ್ರಭು !

ಕೃ. :— ಬನ್ನಿ....ನಿಂತೇ ಇರುವಿರೇಕೆ ? ಕುಳಿತುಕೊಳ್ಳಿ.

ಶಾಂತಿಸೇವಾಶ್ರಮದ ಹೊಸ ಪ್ರಕಟಣೆಗಳು

ಜೈನಧರ್ಮ	೧೫–೦–೦
ಶ್ರೀ. ಮಿರ್ಜಿ ಅಣ್ಣಾರಾಯರು	
ಹಾಲು–ಹಣ್ಣು (ಕವನ ಸಂಗ್ರಹ)	೧–೮–೦
ಶ್ರೀ. ಭುಜೇಂದ್ರ ನುಹಿಷವಾಡಿ	
ಮೂಲಶಿಕ್ಷಣದ ಮೌಲ್ಯಮಾಪಣ	೦–೧೫–೦
ಶ್ರೀ. ಮಿರ್ಜಿ ಅಣ್ಣಾರಾಯರು	
ಬಾಳ–ಬಂಡಿ (ಕವನ ಸಂಗ್ರಹ)	೦–೮–೦
ಶ್ರೀ. ಬಾಳ ಬಿ ಉಪಾಧ್ಯೆ	
ಭರತೇಶನ ನಾಲ್ಕು ಚಿತ್ರಗಳು	೧–೪–೦
ಶ್ರೀ. ಮಿರ್ಜಿ ಅಣ್ಣಾರಾಯರು	

ಅಚ್ಚಿನಲ್ಲಿ :

ಸಂಸ್ಕೃತಿಯ ಹೃದಯ

ಭಾರತದ ಬೆಳಕು

ಪ್ರತಿಗಳಿಗಾಗಿ ಬರೆಯಿರಿ :

ಶಾಂತಿ ಸೇವಾಸದನ, ಸೇಡಬಾಳ

ಪೊ. : ಸೇಡಬಾಳ (ಜಿಲ್ಲಾ ಬೆಳಗಾಂವಿ)

ತಿ. :— ಪ್ರಭುಗಳ....ಏಕಾಂತಸ್ಥಾನ....ನನ್ನಿಂದ ಅಪರಾಧವಾಗಿದ್ದರೆ....ಕ್ಷಮಿಸಬೇಕು.

ಜ. :— (ಸಿಡುಕು) ಹೌದು, ನಿಮ್ಮಿಂದ ಏಕಾಂತಕ್ಕೆ ಭಂಗ. ಯಾರು ತಮ್ಮನ್ನು ಇಲ್ಲಿ ಬಿಟ್ಟರೋ ಕಾಣೆ.

ತಿ. :— ಯಾರೂ ಬಿಡಲಿಲ್ಲ. ಆವಶ್ಯವಾಗಿ ಬರಬೇಕಾಯ್ತು' ಬಂದೆ—ದಯವಿಟ್ಟು ಮನ್ನಿಸಬೇಕು, ಮಹಾರಾಣಿಯವರ್ಕು!

ಜ. :— ಅವಶ್ಯವಾಗಿ ಬರಬೇಕಾಯಿತೇ? ಅಂತಹ ನಿಕರದ ಕಾರ್ಯ?

ತಿ. :— ಪ್ರಾಣಾಪತ್ತು.

ಜ :— ಪ್ರಾಣಾಪತ್ತು! ಯಾರ ಪ್ರಾಣಕ್ಕೆ ಆಪತ್ತು!!

ತಿ :—ಪ್ರಭುಗಳ ಪ್ರಾಣಕ್ಕೆ.

ಜ :—ಆ? ನಾನು ಪ್ರಭುಗಳ ಧರ್ಮಪತ್ನಿ ನೆನಪಿದೆಯೇ?

ತಿಮ್ಮರಸ :— ಮರೆಯುವುದೆಂತು ಮಹಾರಾಣಿಯವರೇ? ಅಕಾರಣವಾಗಿ ಕೋಪಿಸಿಕೊಂಡಂತೆ ಮಹಾರಾಣಿಯವರು!

ಜ. :—ಹಾಗಾದರೆ, ನನ್ನೊಂದಿಗೆ ಏಕಾಂತದಲ್ಲಿರುವ ಪ್ರಭುಗಳ ಪ್ರಾಣಕ್ಕೆ ಆಪತ್ತೆಂದು ಹೇಳುವ ಮಾತು ನನ್ನನ್ನೇ ಉದ್ದೇಶಿಸಿ ಆಡಿದುದೆಂದು ನಾನು—ನಾನು ತಿಳಿಯಲೇ?

ತಿಮ್ಮರಸ :—ಇದ್ದ ಸಂಗತಿಯನ್ನು ತಿಳಿಸಿ ಎಚ್ಚರಿಸುವುದು ನನ್ನ ಕರ್ತವ್ಯ ದೇವಿ!

ಜ. :— (ಸಿಟ್ಟು) ಏನು ಇದ್ದ ಸಂಗತಿ?

ತಿಮ್ಮರಸ :—ಪ್ರಭುಗಳ ಕೈಯಲ್ಲಿರುವ ಹಾಲಿನಲ್ಲಿ ವಿಷ!

ಜ. :—ಏನು, ಏನು? ಈ ಹಾಲಿನಲ್ಲಿ....ಈ ಹಾಲಿನಲ್ಲಿ ವಿಷ! (ಆಕ್ರಂದನದಿಂದ ಅಳು) ಮಿಥ್ಯಾ ಆರೋಪ....ಮಿಥ್ಯಾ ಆರೋಪ ....ನನ್ನ ಮೇಲೆ! ಆದೆಷ್ಟು ಧೈರ್ಯ ನಿಮಗೆ!

ತಿ. :—ಮಿಥ್ಯಾರೋಪವಲ್ಲ ತಾಯಿ, ಕಟುಸತ್ಯ! ಪ್ರಭು, ಇಲ್ಲಿ ಕೊಡಿ ಆ ಬಟ್ಟಲನ್ನು!

ಜ. :—(ಕ್ರೋಧ-ಧದುಃಖ ಮಿಶ್ರಿತ ಧ್ವನಿ) ಈ ಹಾಲಿನಲ್ಲಿ ವಿಷ ಬೆರೆತಿದೆ ಎಂಬುದನ್ನು ಕೂಡಲೆ ಸಿದ್ಧಪಡಿಸಿ ತೋರಿಸಿದರೆ ಸಮ; ಇಲ್ಲದಿದ್ದರೆ ಬಟ್ಟವಳಲ್ಲ ನಾನು!

ತಿ. :— ಆಗಲಿ, ತಾಯಿ! ಎಲೋ ಯಾರಲ್ಲಿ? ಆ ಬೆಕ್ಕನ್ನು ಹಿಡಿದು ತಾ ಇಲ್ಲಿ. (ಹಿನ್ನೆಲೆಯಲ್ಲಿ ಬೆಕ್ಕಿನ 'ಮೆವ್ ಮೆವ್'—ಹಾಲು ಕುಡಿಯುವ ಲೊಚ ಲೊಚ ಶಬ್ದ. ಕ್ಷಣ ತಡೆದು ಪ್ರಾಣ ಸಂಕಟದ ಕರ್ಕಶವಾದ ಒದರುವಿಕೆ. ಜಗನ್ಮೋಹಿನಿಯ 'ಅಯ್ಯೋ' ಎಂಬ ದುಃಖದ ಉದ್ಗಾರ.)

ಕೈ. :—(ಕ್ರೋಧ) ಚಾಂಡಾಲಿನಿ, ರಕ್ಕಸಿ, ಸೌಜನ್ಯದ ನಟನೆ....ಪಶ್ಚಾತ್ತಾಪದ ಕಪಟನಾಟಕ! ವಿಷ ಕೊಟ್ಟು ಕೊಲ್ಲಲಿದ್ದೆಯಾ? ಕುಕ್ಕುರಿಸಿಲ್ಲಿ ಕುಕ್ಕುರಿಸಿಲ್ಲಿ! ಅಪ್ಪಾಜಿ! ಕೊಡಿ-ಕೊಡಿ-ಇಲ್ಲಿ, ಆ ಬಟ್ಟಲ ಕೊಡಿ, ಕುಡಿ... ಕುಡಿ....

ತಿ : —ಹಾ ಹಾ ಪ್ರಭು ತಾಳಬೇಕು! ಸೈರಣೆ ಇರಲಿ!

ಕೈ. : —ಬಿಡಿ. ಅಪ್ಪಾಜಿ, ಬಿಡಿ ಈ ರಕ್ಕಸಿ ಜೀವಿಸಿರಲು ಯೋಗ್ಯಳಲ್ಲ. ಕುಡಿ....ಕುಡಿ....

ತಿ : —ಪ್ರಭು, ಶಾಂತರಾಗಬೇಕು. ಅಪರಾಧ ಕ್ಷಮಿಸಬೇಕು' ಪ್ರಾಜ್ಞರಾದ ತಮಗೆ ನಾನು ಹೇಳಬೇಕೇ? ಸ್ತ್ರೀಹತ್ಯೆ ಘೋರ-ಪಾತಕ ಪ್ರಭು. ಸತ್ಕೀರ್ತಿಗೆ ಕಲಂಕ ತಟ್ಟದಿರಲಿ. ಅಲ್ಲವೇ? ರಾಣಿಯವರು ತಮ್ಮ ಧರ್ಮಪತ್ನಿ. ಬೇಡ ಪ್ರಭು, ಈ ಸಾಹಸ ಬೇಡ! ಅನಂತ ಅಪರಾಧಗಳನ್ನೂ ಕ್ಷಮಿಸಿ ಅವರನ್ನು ಕಾಪಾಡುವುದು ತಮ್ಮ ಧರ್ಮ ಪ್ರಭು! ಸಿಟ್ಟಿನ ಕೈಯಲ್ಲಿ ಬುದ್ಧಿಕೊಟ್ಟು ಅನುಚಿತ ಕಾರ್ಯ ತಮ್ಮಿಂದ ಆಗದಿರಲಿ ಪ್ರಭು!

ಕೈ. : —ಪತಿಘಾತಕಿಗೆ ತಕ್ಕ ಶಿಕ್ಷೆಯಾಗಲೇಬೇಕು.

ತಿ. : —ಪ್ರಭು, ಎರಡೆರಡು ಸಲ ತೇಜೋವಧೆ ಸೋಲು.. ಇವೇ ಸಾಕು ಪ್ರಭು ಅಮರಣಾಂತ ಅವರ ಹೃದಯ ದಹಿಸಲು! ಇದಕ್ಕೂ ಮಿಗಿಲಾದ ಶಿಕ್ಷೆ ಯಾವುದು ಪ್ರಭು? ದಯವಿಟ್ಟು ಕ್ಷಮಿಸಿ, ಹಿಂಸಿಸಬೇಡಿ!

ಕೈ. : —(ಕ್ರೋಧ) ಹೋಗು, ಪ್ರಾಣದಾನ ಮಾಡಿರುವೆ ಹೆಣ್ಣೆಲ್ಲ ನೀನು ರಕ್ಕಸಿ! ಆಪ್ತ ಪ್ರತಾಪರುದ್ರರಿಗಾಗಿ ನೀನು ಜೀವಿಸಿರುವೆ. ನನ್ನ ಭಾಗ್ಯಕ್ಕೆ ಇನ್ನು ನೀನು ಇದ್ದೂ ಇಲ್ಲದಂತೆ. ಬದುಕಿರುವವರೆಗೂ ನನಗೆ ಮುಖ ತೋರಿಸಬೇಡ. ನಿನ್ನ ಮುಖಾವಲೋಕನ ನನಗೆ ಬೇಕಿಲ್ಲ! ಹೋಗು, ಹೋಗು, ತೊಲಗು ಇಲ್ಲಿಂದ.....

(ಜಗನ್ಮೋಹಿನಿಯ ಅಳುವಿನ ಧ್ವನಿ)

ಬಡತನದ ಬಾಳು

(ಕಥಾಸಂಕಲನ)

ಬರೆದವರು : 'ಆನಂದಕಂದ'

ಇದರಲ್ಲಿಯ ಒಂದೊಂದು ಕಥೆಯೂ ನಮ್ಮ ಜನಜೀವನದ ವಾಸ್ತವಚಿತ್ರ. ವಾಸ್ತವದಲ್ಲಿಯೆ ಸಾಹಿತ್ಯಿಕಸೌಂದರ್ಯವನ್ನು ಸಹಜವಾಗಿ ಹೇಗೆ ತುಂಬಬಹುದೆಂಬುದಕ್ಕೆ ಇದರಲ್ಲಿಯ ಕಥೆಗಳು ಒಳ್ಳೆಯ ಮಾದರಿಗಳಾಗಿವೆ.

ಕ್ರೌ. ಆ. ೧೨೦ ಪುಟಗಳು. ಬೆಲೆ ೧-೪-೦

'ಜಯಂತಿ' ಕಾರ್ಯಾಲಯ, ಧಾರವಾಡ

ಸ್ವಪ್ನ ಸಂಭವ

(ಮನೋವೈಜ್ಞಾನಿಕ ಭಾಷಣ)*

ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

ಭೌತಿಕಪ್ರಪಂಚವನ್ನೆಲ್ಲ ಪೃಥಕ್ಕರಿಸಿ ವಿಶ್ಲೇಷಿಸಿ ನೋಡಲು ಹೊರಟಿರುವ ಇಂದಿನ ವಿಜ್ಞಾನ, ಸ್ವಪ್ನ ಪ್ರಪಂಚದಂತಹ ಮನೋಲೋಕದ ಅಂತರಂಗವನ್ನೂ ವಿಶ್ಲೇಷಿಸಿ ನೋಡಿರುವುದು. ಆದುದರಿಂದಲೇ ಕನಸುಗಳ ಕಲ್ಪನಾತ್ಮಕ ಪರಿಣಾಮಗಳ ಭೀತಿ ಇಂದು ಕಡಿಮೆಯಾಗಿದೆ !

ಈ ಸೃಷ್ಟಿಯಲ್ಲಿ ಮನುಷ್ಯನಿಗಿಂತ ಹೆಚ್ಚಿನ ಸೋಜಿಗದ ಸಂಗತಿ ಬೇರೊಂದಿಲ್ಲ. ಹಾಗೆಯೇ ಮನುಷ್ಯನಲ್ಲಿ ಮನಸ್ಸಿಗಿಂತಲೂ ಮಿಗಿಲಾದ ಸ್ವಾರಸ್ಯದ ವಿಷಯ ಇನ್ನೊಂದಿಲ್ಲ. ಈ ಮನವೆಂಬ ಮರ್ಕಟದ ಚಪಲಚೇಷ್ಟೆಗಳನ್ನು ಬಣ್ಣಿಸಲು ನಮ್ಮ ವೈಷ್ಣವದಾಸರು ವೈಸೋತಂತೆ, ವೈಜ್ಞಾನಿಕರೂ ದಾರ್ಶನಿಕರೂ ಕೂಡಿಯೇ ಈ ಸಂಶೋಧನೆಗಾಗಿ ತಮ್ಮನ್ನು ಮುಡಿಪಾಗಿಟ್ಟಿದ್ದಾರೆ. ಮನಸ್ತತ್ತ್ವದ ಮನೋಧರ್ಮದ ಸರ್ವಾಂಗೀಣ ಶಾಸ್ತ್ರೀಯ ವಿಚಿಕಿತ್ಸೆಯಲ್ಲಿ, ಸ್ವಪ್ನಾವಸ್ಥೆಗೆ ಎಂದರೆ ನಮ್ಮ ಮನಸ್ಸು ನಮ್ಮ ನಿದ್ದೆಯಲ್ಲಿ ನಮ್ಮ ಒಳಗಣ್ಣಿನೆದುರು ಒಡ್ಡುವ ಚಿತ್ರ ವಿಚಿತ್ರ ದೃಶ್ಯಪ್ರಪಂಚಕ್ಕೆ—ಒಂದು ಅಸಾಮಾನ್ಯವೂ ಸರ್ವಸನ್ಮಾನ್ಯವೂ ಆದ ಸ್ಥಾನವು ಬಂದಿದೆ. ಅನಾದಿಕಾಲದಿಂದಲೂ ಮಾನವನು, ಕನಸುಗಳಿಗೆ ಬೆರಗಾಗುತ್ತ—ಬೆದರುತ್ತ—ಬೆಲೆ ಕೊಡುತ್ತ—ವಿವೇಕದ ಬೆಳಕಿನಲ್ಲಿ ವಿಮರ್ಶೆಯ ಒರೆಗೆ ಹಚ್ಚುತ್ತ—ಬಂದಿದ್ದಾನೆ ಪಾಮರನಿಂದ ಪೋಮರನ ವರೆಗೂ, ವೈದಿಕನಿಂದ ವೈದ್ಯಕೀಯ ವಿಶೇಷಜ್ಞನ ವರೆಗೂ, ಕಾಡಾಡಿ ಅಜ್ಞಬುದ್ಧನಿಂದ ನವನಾಗರಿಕ ಜ್ಞಾನವೃದ್ಧನ ವರೆಗೂ ಸ್ವಪ್ನಜಿಜ್ಞಾಸೆ ಬ್ರಹ್ಮಜಿಜ್ಞಾಸೆಯಷ್ಟೇ ಪ್ರಾಧಾನ್ಯವನ್ನೂ ಪ್ರಾಮುಖ್ಯವನ್ನೂ ಪಡೆದಿದೆ; ಟೀಕಾ ಭಾಷ್ಯಗಳನ್ನೆಲ್ಲ ಒಳಗೊಂಡು ಶಾಖೋಪಶಾಖೆಯಾಗಿ ಬೆಳೆದಿದೆ—ಬೆಳೆಯುತ್ತಿದೆ.

ಎಂದಾದರೂ ಒಂದಾದರೂ ಕನಸು ಕಾಣದ ವ್ಯಕ್ತಿಯು ಕನಸಿನಲ್ಲಿಯೂ ಕಾಣುವುದು ವಿರಳವೇನೋ ! 'ಕನಸು' 'ಕನವರಿಸು' ಎಂಬ ಶಬ್ದಗಳೇ ಕನ್ನಡಿಗರ ಆ ಕುರಿತ ಪ್ರತ್ಯೇಕ ಕಟಾಕ್ಷವನ್ನು ಒತ್ತಿ ತೋರಿಸುತ್ತವೆ. ಸಂಸ್ಕೃತದಲ್ಲಿ "ಸ್ವಪ್ನ" ಶಬ್ದವು ಕನಸಿಗೂ ನಿದ್ದೆಗೂ ಕೂಡಿಯೇ ಅನ್ವಯಿಸುತ್ತದೆ. ಅಲ್ಲಿ ಜಾಗೃತಿಯಿಂದ ಸುಷುಪ್ತಿಯನ್ನು ಬೇರ್ಪಡಿಸುವ ನಡುವಿನ ನೆಲೆಯೇ ಸ್ವಪ್ನ. ಸ್ವತಂತ್ರವಾಗಿ ಕನಸಿನ ಅರ್ಥ ಕೊಡುವ ಮೂಲಶಬ್ದ ಸಂಸ್ಕೃತದಲ್ಲಿ ದೊರೆಯುವುದಿಲ್ಲ. ಅದೇ ರೀತಿ ಕನಸುಗಳ ರೂಪರೇಖೆಗಳ ಕುರಿತು ನಮ್ಮ ಉಪನಿಷತ್ತುಗಳಲ್ಲಿ ಆಗಲಿ, ಯೋಗ ಸೂತ್ರಗಳಲ್ಲಿ ಆಗಲಿ—ಅದೇಕೆ ಆಯುರ್ವೇದದಲ್ಲಿಯೂ ಕೂಡ ಆಗಲಿ—ಒಂದು ಪ್ರತ್ಯೇಕ ಸೋಪಪತ್ತಿಕ ಮೀಮಾಂಸೆ ಸಿಗುವುದಿಲ್ಲ. ಚರಕ-ವಾಗ್ಭಟಗಳಂಥ ಪ್ರಮಾಣಗ್ರಂಥಗಳೂ ಈ ಕುರಿತು ಗಾಢವಾದ ಮೌನತಾಳಿವೆ. ಒಂದೆರಡು ಶ್ಲೋಕಗಳು ಕ್ಷಯರೋಗ ಲಕ್ಷಣದ ಪೂರ್ವಸೂಚನೆಯೆಂದು ಇಂಥಿಂಥ ವಸ್ತುಗಳು ಕನಸಿನಲ್ಲಿ ಕಾಣುತ್ತವೆಂಬ ಮಟ್ಟಿಗೆ ಉಲ್ಲೇಖವಿದೆ. ಸ್ವಪ್ನದ ಅಶಾಸ್ತ್ರೀಯ ವಿಶ್ಲೇಷಣೆಗಿಂತಲೂ ದುಃಸ್ವಪ್ನ ದೋಷ ನಿವಾರಣೆಯ ಉಪಾಯೋಪಚಾರಗಳತ್ತಲೇ ಫಲಜ್ಯೋತಿಷವು ಹಾಯ್ದಿದೆ. ಆಯುರ್ವೇದದಲ್ಲಿ ಅಪಸ್ಮಾರ-ಉನ್ಮಾದಗಳ ಲಕ್ಷಣ-ಚಿಕಿತ್ಸೆಗಳಿಗೆ ನಿದ್ರಾನಾಶದಷ್ಟೂ ಗಮನಕೊಟ್ಟಂತೆ ಇಲ್ಲ. ಸ್ವಪ್ನಫಲದಂಥ ಸಂದಿಗ್ಧ ಪ್ರಯೋಜನದ ಆಚೆಗೆ ನಮ್ಮ ಪ್ರಾಚೀನರ ಶಾಸ್ತ್ರ ವಿಚಿಕಿತ್ಸೆ ದುಡುಕಲಿಲ್ಲ. ಇದೂ ಒಂದು ಸೋಜಿಗವೇ; ಅಥವಾ 'ಜಗತ್ತೇ ಒಂದು ಸ್ವಪ್ನ—ದರ್ಪಣದೃಶ್ಯ ಜೀವನವೇ ಒಂದು ವಿಕೃತಿ'—ಎಂದು ಭಾವಿಸಿದ ಭಾರತೀಯ ದಾರ್ಶನಿಕಬುದ್ಧಿಗೆ, ಆ ದೊಡ್ಡ ಸ್ವಪ್ನದೊಳಗಿನ ಚಿಕ್ಕಪುಟ್ಟ ಇತರೇತರ ಸ್ವಪ್ನಗಳ ಇತ್ಯರ್ಥದಲ್ಲಿ ಯಾವ ಸಾರ್ಥಕ್ಯವೂ ಉಳಿದಿಲ್ಲವೇನೋ !

ಆದರೂ ನಮ್ಮ ತಾರ್ಕಿಕರು ಸ್ವಪ್ನಕಾರಣದ ಒಂದು ಉಪಪತ್ತಿಯನ್ನು ಉದಾಹರಿಸಿದ್ದಂಟು. ನಮ್ಮ ದೇಹದಲ್ಲಿ "ಪುರೀತತ್" ಎಂಬುದೊಂದು ನಾಡಿ. ಮನಸ್ಸು ಹೊರಗಿನ ಇಂದ್ರಿಯಜ್ಞಾನದಿಂದ ಜಾರಿ ಒಳಹೊಕ್ಕು, ಆ ನಾಡಿಯಲ್ಲಿ ಸ್ಥಿರವಾದಾಗಲೆ ನಮಗೆ ಗಾಢ ನಿದ್ರೆ. ಹಾಗೆ ಆಗದೆ ಅದು ನಡುವೆಯೆ ಅಲೆಯುತ್ತಿದ್ದರೆ, ಅದರ ಅಂಥ ಅಲೆದಾಟವೆ ಸ್ವಪ್ನವಿನ್ಯಾಸ—ಇದೇ ಅವರ ಸಿದ್ಧಾಂತ. ಇದೇ ರೀತಿ ಕ್ರಿಸ್ತಶಕದ ಆರಂಭದ ಸುಮಾರಿಗೆ ಬರೆಯಲ್ಪಟ್ಟ "ಮಿಲಿಂದ ಪ್ರಶ್ನೆ" ಎಂಬ ಬೌದ್ಧ ತಾತ್ತ್ವಿಕಗ್ರಂಥದಲ್ಲಿ ಸ್ವಪ್ನಗಳಿಗೆ ಈ ಕಾರಣಗಳನ್ನು ಹೇಳಿದ್ದುಂಟು:—ವಾತ ಪಿತ್ತ ಕಫ ಪ್ರಕೃತಿಗಳು ಇವು ಮೂರು; ದೈವಿಕ ಪ್ರಭಾವ, ವೈಯಕ್ತಿಕ ಸಂಸ್ಕಾರ-ರೂಢಿಬಲ, ಹಾಗೂ ಭವಿಷ್ಯ ಸೂಚನೆ—ಇವು ಮೂರು. ಈ ಆರರಲ್ಲಿ ಭವಿಷ್ಯಸೂಚನೆಯೇ ಸ್ವಪ್ನಕ್ಕೆ ಸತ್ಯವಾದ ಕಾರಣವೆಂದು ಅಲ್ಲಿ ಹೇಳಲಾಗಿದೆ. ಇದರಿಂದ ಕಂಡುಬರುವುದೇನೆಂದರೆ, ಜಗತ್ತಿನ ಇತರ ಜನಾಂಗಗಳಲ್ಲಿಯಂತೆ ಭಾರತೀಯರಲ್ಲೂ ಜನಸಾಮಾನ್ಯವು ಸ್ವಪ್ನಪ್ರಪಂಚದಲ್ಲಿ ತುಂಬ ಜಿಜ್ಞಾಸೆಯನ್ನೂ ಶುಭಾ-ಶುಭ ಫಲಗಳ ಆಸೆಯನ್ನೂ ಇಂದಿನಂತೆ ಅಂದೂ ತಾಳಿತ್ತು.

ಕನಸು 'ಕನಕ'ದಂತೆ 'ಕನ್' ಎಂದರೆ ಹೊಳೆ ಎಂಬ ಧಾತುಮೂಲದಿಂದ ಸಿದ್ಧವಾದ ಶಬ್ದವು. ಈ ಹೊಳಪೇ ಆದ್ಯ ಶಂಕರಾಚಾರ್ಯರು ಕರೆದ ಪ್ರಾತಿಭಾಸಿಕ ಸತ್ತೆ. ಇದು ಯಾತರ

---

* ಧಾರವಾಡದ ಆಕಾಶವಾಣಿಯ ಅಧಿಕಾರಿಗಳ ಕೃಪೆಯಿಂದ
ಸಂ. ಜ.

ಪ್ರತಿಭಾನ? ಎಂತಹ ಹೊಳಪು? ಇದು ಬರೀ ಪರಿವರ್ತನೆಯೋ ಪರಾವರ್ತನೆಯೋ—ಎಂಥ ಪ್ರತಿಕ್ಷೇಪ? ಕನಸಿಗೂ ಒಂದು ಸತ್ಯವಿದೆ ಸತ್ಯವಿದೆ ಎಂಬ ವಿಚಾರ ಸೊಕ್ರೆಟಿಸ್, ಪ್ಲೇಟೋ, ಎರಿಸ್ಟಾಟಲ್ ಮತ್ತು ಆರ್ಟೆಮಿಡೊರಸ್‌ರಂಥ ಪ್ರಾಚೀನ ತತ್ತ್ವವೇತ್ತರಿಗೂ ಮಾನ್ಯವಿತ್ತು. ಆದರೆ ಆ ಸತ್ಯದ ಸಾಕ್ಷಾತ್ಕಾರವನ್ನು ಮಾಡಿಕೊಂಡು ಲೋಕಕ್ಕೆ ಮಾಡಿಸಿಕೊಟ್ಟ ಮೊತ್ತಮೊದಲಿನ ಮಹಾನುಭಾವನು ಡಾ. ಸಿಗ್ಮಂಡ್ ಫ್ರಾಯ್ಡನು. ೧೯೦೦ರಲ್ಲಿ ಈ ಮಹಾ ಶೋಧಾವಿಯು ತನ್ನ ಸ್ವಪ್ನವಿಶ್ಲೇಷಣೆಯ ಉದ್ಗ್ರಂಥವನ್ನು ಪ್ರಕಟಿಸಿ, ಮನಸ್ತತ್ತ್ವದ ಅಂತರಾಳದ ಪರಿಗೂ ತನ್ನ ಮಹಿಮಾಮಯ ಪ್ರತಿಭೆಯ ಪ್ರಕಾಶವನ್ನು ಬೀರಿ ಹೊಸಹೆದ್ದಾರಿ ತೆರೆದುಕೊಟ್ಟನು.

ಅದುವರೆಗೆ ಸ್ವಪ್ನಗಳ ಸ್ವರೂಪದ ಕುರಿತು ಅನೇಕ ತರ್ಕಗಳು ಪ್ರಚಲಿತವಿದ್ದುವು. ನಿದ್ರೆಯಲ್ಲಿ ಆತ್ಮವು ಶರೀರದಿಂದ ಬೇರೆಯಾಗಿ ಕೆಲವೊಂದು ಅನುಭವ ಪಡೆಯುತ್ತದೆ; ಅಥವಾ ದೇವತೆಗಳಿಂದಲೊ, ರಾಕ್ಷಸರಿಂದಲೂ ಪ್ರೇರಣೆ ಹೊಂದುತ್ತದೆ; ಇಲ್ಲವೆ ಮನುಷ್ಯನದೇ ಅಪಭ್ರಷ್ಟ ವಿಕಾರವಿಲಸಿತವು ಕಾಣಿಸಿಕೊಳುತ್ತದೆ—ಹೀಗೆ ಒಂದಲ್ಲ ಒಂದು ರೀತಿ ಜನ ನಂಬಿದ್ದರು; ಇನ್ನೂ ನಂಬಿದ್ದಾರೆ. ಆದರೆ ಈ ನಂಬಿಗೆಯಲ್ಲಿಯೂ ಒಂದು ನಿಜಾಂಶವಿದೆ; ಆ ಅಂಶವೆಂದರೆ ಸ್ವಪ್ನಕ್ಕೆ ಏನೋ ಅರ್ಥವಿದೆ—ಅದಾದೇನೋ ಇಂಗಿತವಿದೆ. ಇದನ್ನು ಪೂರ್ವಿಕರೂ ಆಧುನಿಕರೂ, ಪೌರ್ವಾತ್ಯರೂ ಪಾಶ್ಚಿಮಾತ್ಯರೂ ಇದುವರೆಗೆ ಒಪ್ಪಿ ಬಂದಿದ್ದಾರೆ. ಇಷ್ಟೇ: ಈ ಅರ್ಥವನ್ನು ಅರಿತುಕೊಳ್ಳುವ ಅರಸಿಕೊಳ್ಳುವ ಅವರ ದಾರಿ ಬೇರೆ ಆಯಿತು, ಅಡ್ಡ ಹೋಯಿತು. ಮೂಢಶ್ರದ್ಧೆಯ ಮರಳುಗಾಡನ್ನು ಸೇರಿತು.

ಅದನ್ನು ತಿರುವಿ ತಿದ್ದಿ ಸರಿಯಾದ ನಿಟ್ಟಿನಲ್ಲಿ ನಡೆಯುವಂತೆ ನಿಲ್ಲಿಸಿದ ಆಚಾರ್ಯನು ಡಾ. ಫ್ರಾಯ್ಡನು. ಕನಸಿಗೆ ಅರ್ಥವಂತಿಕೆ ಬರಬೇಕಾದರೆ, ಅದಕ್ಕೆ ಒಂದು ಕಟ್ಟು-ನಿಟ್ಟು ಇದೆಯೆಂದಾಯಿತು. ಆ ಕಟ್ಟು ಯಾವುದು? ನಿಟ್ಟು, ಯಾವ ಕಡೆ? ಸ್ವಪ್ನದ ರಚನೆ ಹೇಗೆ? ಅದರ ಹಿಂದಿನ ರಹಸ್ಯವೇನು? ಈ ರಹಸ್ಯವನ್ನು ನಿಲುಕಬೇಕಾದರೆ ಮನಸ್ಸಿನ ಸ್ವರೂಪವನ್ನು ತುಸು ವಿಶ್ಲೇಷಿಸಿಯೆ ತಿಳಿದುಕೊಳ್ಳಬೇಕು. ಮನಸ್ಸಿಗೆ ಪ್ರಜ್ಞೆಗಳು ಮೂರು: ಜಾಗೃತ ಪ್ರಜ್ಞೆ,—ವ್ಯಾವಹಾರಿಕ ಜಗಜ್ಜೀವನಕ್ಕೆ ಒಪ್ಪಿದ್ದು; ಉಪಜಾಗೃತ ಪ್ರಜ್ಞೆ,—ಮರೆವಿನ ಮರೆಯು ನೆನಪಿನ ನೆರೆಯ ಒಳಬೀಡು. ಮತ್ತು ಅಜಾಗೃತ ಪ್ರಜ್ಞೆ,—ಇದನ್ನೇ ನಮ್ಮ ನವಕವಿ ಲಕ್ಷ್ಮೀಶ ಅಂತಸ್ತಮವೆಂದು ಕರೆದಿರಬೇಕು. "ಅಂತಸ್ತಮ ತಾನೆ ತುಬ್ಬದೇ?" ಎಂದಿದ್ದಾನೆ ಅತಿ ಮಾರ್ಮಿಕವಾಗಿ. ಸ್ವಪ್ನ ವ್ಯಾಪಾರಗಳು ಮೂಡಿಬರುವುದು ಕೂಡಿಬರುವುದು—ಇದೇ ಅಜಾಗೃತ ಪ್ರಜ್ಞೆಯಿಂದ. ಮನೋಲೋಕದ ಈ ಅಜ್ಞಾತಖಂಡವನ್ನು ಕಂಡು ಹಿಡಿದು ಅವರ ಭೂಪಟವನ್ನು ಸಿದ್ಧಪಡಿಸಿದ ಶೋಧಯಾತ್ರಿಕ ಡಾ. ಫ್ರಾಯ್ಡ್. ಇದು ಮನಸ್ಸಿನ ಶಕ್ತಿಸಂಚಯ. ಹಾಗೆಯೇ ಅಭಿವ್ಯಕ್ತಿಗಾಗಿ ತವಕಪಡುತ್ತಿರುವ ಒತ್ತಿಟ್ಟ ವಿಕಾರ, ಪ್ರವೃತ್ತಿಗಳ ಕಾಮ-ಕಾಮನೆಗಳ ಪಶುಸಂಗ್ರಹಾಲಯ. ಚಿಕ್ಕಂದಿನಿಂದಲೆ ಪ್ರಪಂಚದ ಪರಿಜ್ಞಾನ ಬೆಳೆದಂತೆ, ಅಹಂಭಾವ—ಲಜ್ಜಾಭಾವನೆಗಳು ಮೊಳೆತಂತೆ, ಕುಲ-ಸಮಾಜ-ಧರ್ಮ-ನೀತಿ-ರೂಢಿ ಮುಂತಾದುವುಗಳ ಕಟ್ಟುಪಾಡುಗಳ ಬಿಗುವು ಬಲಿತಂತೆ, ಈ ಒತ್ತಿಡುವಿಕೆ ಹೆಚ್ಚಿಕ್ಕುವಿಕೆ ಈ ಮನೋದಮನವೂ ಬೆಳೆಯುತ್ತ ಹೋಗುತ್ತದೆ. ಜಾಗೃತಪ್ರಜ್ಞೆಗೆ ಅಜ್ಞಾತವಾದ ಅಜಾಗೃತವಾದ ಈ ಅಂತಸ್ತಮದ ಆಳ-ಅಗಲ, ಕುಟಿಲ ಜಟಿಲಗಳು ಹೆಚ್ಚುತ್ತ ಹೋಗುವುವು. ಈ ಮನೋದಮನವೂ ನಮಗೆ ಗೊತ್ತಾಗದಂತೆ ಎಂದರೆ, ಜಾಗೃತಪ್ರಜ್ಞೆಗಿಂತ ಹಿಂದೆಯೇ ತಾನಾಗಿ ಒದಗಿ ಬರುವುದು. ಇದರಲ್ಲಿ ನಾವಾಗಿ ವಿವೇಕದಿಂದ ಮನಃಸಾಕ್ಷಿಯಿಂದ ನಡೆಯಿಸಿದ ದಮನವೂ ಸೇವೆ ಸಲ್ಲಿಸುವುದು.

ಜಾಗೃತಪ್ರಜ್ಞೆಗೆ ದೇಶ-ಕಾಲಗಳ ಬಂಧನ, ಶಕ್ಯಾಶಕ್ಯತೆ, ಹಿತಾಹಿತ, ಕಾರ್ಯಾಕಾರ್ಯ, ಜಯಾಪಜಯಗಳ ಅರಿವು ಮತ್ತು ಪರಿವೆ; ಆವಶ್ಯಕತೆ, ಉಪಯುಕ್ತತೆ, ಸಯುಕ್ತಿಕತೆಗಳ ಅಂಕೆ-ಆಳಿಕೆ; ವಿವೇಕ-ವಿಮರ್ಶೆಗಳ ತರ್ಕಕರ್ಕಶತೆ. ಉಪಜಾಗೃತವು ಹೊಟೆಲು ಮಾಣಿಯಿದ್ದಂತೆ. ಬೆನ್ನಿಗೆ ನಿಂತು ಬೇಕಾದುದನ್ನು ಬೇಕಾದಾಗ ಸಲ್ಲಿಸುವ ಅನುಚರ....ಜಾಗೃತಪ್ರಜ್ಞೆಗೆ. ನಾನೀಗ ಕನ್ನಡದಲ್ಲಿ ಕನಸುಗಳ ಕಾರಣದ ಕುರಿತು ಮಾತನಾಡುತಿದ್ದೇನೆ. ಆದರೆ ಇದೇ ಸಮಯ ನನ್ನ ಇತರ ಭಾಷೆಗಳ ಮತ್ತು ವಿಷಯಗಳ ಪರಿಜ್ಞಾನ ಎಲ್ಲಿ ಅವಿತುಕೊಂಡಿದೆ? ಕೈಕಟ್ಟಿಕೊಂಡು ಕರೆದಾಗ ಕೈಂಕರ್ಯಕ್ಕೆ ಅಣಿಯಾಗಿ ನಿಂತಿದೆ ಉಪಜಾಗೃತವೆಂಬ ಪ್ರಜ್ಞೆಯ ಒಳಮನೆಯಲ್ಲಿ—ಜಾಗೃತದ ಪಡಸಾಲೆಯ ಬೆನ್ನಿಗೆ. ಇದರ ಆಚೆ ಇದಕ್ಕೂ ಆಳಕ್ಕೆ ಮನೋಮಂದಿರದ ನೆಲಮನೆಯಲ್ಲಿ ಅಪರಂಪಾರವಾಗಿ ವಿಜೃಂಭಿಸುತ್ತಿದೆ ಅಜಾಗೃತ ಪ್ರಜ್ಞೆ!

ಸ್ವಪ್ನ ಕಾರಣದ ನಿವೇಚನೆಗೆ ಇನ್ನೂ ಮೂರು ಪದಗಳನ್ನು ತಿಳಿದುಕೊಳ್ಳಬೇಕು, ಫ್ರಾಯ್ಡನ ಪರಿಭಾಷೆಯಲ್ಲಿ. ಈ ಪದಗಳು—ಲಿಬಿಡೊ, ಸೆನ್ಸರ್, ಮತ್ತು ಇಗೊ. ದಮಿತಕಾಮ-ಕಾಮನೆಗಳ ಸಂಚಯವೆ ಲಿಬಿಡೊ! ಇದನ್ನೆ "ಇಡ್" ಎಂದಿದ್ದಾನೆ ಫ್ರಾಯ್ಡ. ಅದನ್ನು ನಾವು "ತತ್" ಎನ್ನೋಣ—ಜಾಗೃತಪ್ರಜ್ಞೆಯ 'ಸತ್'ದಿಂದ ವಿಂಗಡಿಸಲು. ಸ್ವಪ್ನದರ್ಶನ ಈ ಲಿಬಿಡೋದ ಬಣ್ಣದ ಮನೆಯಿಂದ ಹೊರಬಿದ್ದು ಕುಣಿಯುವ ಹಗರಣ! ಅಜಾಗೃತಪ್ರಜ್ಞೆಯ ಹೈವ್ಯ ಲಿಬಿಡೊ ಇದ್ದಂತೆ, ಸೆನ್ಸರ್‌ದ ಸತ್ತ್ವ ಇಗೊ, ಇಗೊ ಎಂದರೆ ಅಹಂಕಾರ, ಅಸ್ಮಿತೆ. ಅದು ಮನೋದಮನಕಾರಿಯಾದ ನಿಯಂತ್ರಿಕನ ಭೂಮಿಕೆಯೇ ಸೆನ್ಸರ್.

ಇನ್ನು ಸ್ವಪ್ನವೆಂಬ ಹಗರಣದ ಹವ್ಯಾಸ ಅಜಾಗೃತ ಪ್ರಜ್ಞೆಗೆ ತಕೆ? ಜಾಗೃತದಿಂದ ಅಜಾಗೃತವನ್ನು ದೂರವಿಡಲು ಉಪಜಾಗೃತದ ಒಳಮನೆಯ ಹೊಸ್ತಿಲಿನಲ್ಲಿ ಮೇಲೆ ಹೇಳಿದ 'ಸೆನ್ಸರ್'ನ ಪ್ರತಿಷ್ಠೆಯಾಗಿದೆ. ಇದು ಮೂಲವಿಗ್ರಹವೆಂತಾದರೆ, ನಮ್ಮ ಮನಃಸಾಕ್ಷಿ, ಅಂತಃಕರಣ, ವಿವೇಕ ಎಂತೆಲ್ಲ ಹೆಸರಾದ ವ್ಯವಸ್ಥಾಪಕಶಕ್ತಿ ಇದರ ಉತ್ಸವಮೂರ್ತಿ. ಕುಲ, ಸಮಾಜ, ಧರ್ಮ, ರೂಢಿ, ಶಿಷ್ಟಾಚಾರ, ಸಭ್ಯತೆ, ನಾಗರಿಕತೆ, ಮತ್ತು ಸಂಸ್ಕೃತಿ ಈ ಆಸ್ಥದಿಕ್ಕಾಲಕರ ಅಧಿಪತ್ಯದಲ್ಲಿ ಲೋಕವ್ಯವಹಾರ ನಡೆದಿದೆ. ಅದರ

ನಿಷ್ಠೆ-ಪ್ರತಿಷ್ಠೆಗಳನ್ನು ಕಾಪಾಡಿಕೊಳ್ಳುವುದರಲ್ಲಿ ಜಾಗೃತಮನಸ್ಸಿಗೆ ಸ್ವಾಸ್ಥ್ಯ ಮತ್ತು ಸ್ಥೈರ್ಯ; ಶಾಂತಿ ಮತ್ತು ಕ್ಷೇಮ. ಇದಕ್ಕಾಗಿ ವ್ಯಾಹತವಾಗಿ ಮನೋದಮನ ನಡೆಯುತ್ತದೆ—ಶೈಶವಾವಸ್ಥೆಯಿಂದ ಶವಾವಸ್ಥೆಯ ತನಕ ಈ ದಮನದ ಹೆಚ್ಚಿನ ಭಾಗ ಕೆಚ್ಚಿನ ಭಾಗ ವ್ಯಕ್ತಿಯ ಚಿಕ್ಕಂದಿನಲ್ಲಿಯೇ ಆಗಿಬಿಡುತ್ತದೆ. ಇದರ ಪರಿಣಾಮವೇನೆಂದರೆ, ಅಜಾಗೃತಮನಸ್ತರಗಳಲ್ಲಿ ಬಾಲಿಶ ಕಾಮಾಚಾರ. ಹಿಂಸಾಚಾರಗಳ ಪ್ರವೃತ್ತಿಗಳೆ ಹೆಚ್ಚು ಜಿಡುಕಾಗಿ ಬಿದ್ದಿರುತ್ತವೆ. ಅವು ಪ್ರಕಟವಾಗಲು—ಜಾಗೃತಸ್ತರಗಳನಕವೂ ಎದ್ದುಬರಲು—ಸದಾಕಾಲವೂ ಹಾತೊರೆಯುತ್ತಿರುತ್ತವೆ. ಅಹಂಭಾವನೆಯು ಇವುಗಳನ್ನು ಮೆಟ್ಟಿ ನಿಂತಿರದಿದ್ದರೆ, ಇವುಗಳ ಅನಿರ್ಬಂಧ ಅಸಂಬದ್ಧ ಚೇಷ್ಟೆಗಳಿಂದ ಸಾಮಾಜಿಕ ಜೀವನದಲ್ಲಿ ಸಂಕರ-ಸಂಕಟುಗಳು ಉಂಟಾಗುತ್ತಿದ್ದುವು.

ದಮಿತ ಕಾಮನೆಗಳೆಲ್ಲ—ಅವುಗಳಲ್ಲಿ ದಮಿತ ಕಾಮಪ್ರವೃತ್ತಿಗಳೇ ಹೆಚ್ಚು—ಸೆನ್ಸರನ ಕಣ್ಣು ತಪ್ಪಿಸಿ ಹೊರಬರಲು ಹೆಣಗುತ್ತಿರುತ್ತವೆ. ಜಾಗೃತಪ್ರಜ್ಞೆಯಲ್ಲಿಯೂ ಆಗಾಗ ಒದಗುವ ಮಾತು-ಕೃತಿಗಳ ಮರೆವು-ತಪ್ಪುಗಳೂ ಹಗಲುಗನಸು-ಮನೋರಾಜ್ಯಗಳೂ ಇಂಥ ಹೊರಹೊಮ್ಮಿಕೆಯ ಧುಡುಂ ಪ್ರವೇಶಗಳು. ಇದನ್ನು ಬಿಟ್ಟರೆ ಈ ದಮಿತ ಅಭಿಲಾಷೆಗಳ ಅಭಿವ್ಯಕ್ತಿಯ ಅನುಕೂಲರಂಗವೆಂದರೆ ನಿದ್ರಾವಸ್ಥೆಯೇ. ನಿದ್ದೆಯಲ್ಲಿ ಸೆನ್ಸರ್ ಶಕ್ತಿ ಸಡಿಲುಬೀಳುತ್ತದೆ. ಆಗ ಹೊರಬರಲು ದಮಿತಪ್ರವೃತ್ತಿಗಳು ಹೊಂಚು ಸಾಧಿಸುವುವು. ಈ ಸಾಧನೆಯು ಒಂದು ಹಂಚಿಕೆಯಿಂದ ಆಗುವುದು. ಇದ್ದಕ್ಕಿದ್ದಂತೆ ಆ ಕಾಮುಕ ಅಥವಾ ಹಿಂಸಕ ಹೀನಪ್ರವೃತ್ತಿಗಳು ನುಗ್ಗಿಬಂದರೆ ಸೆನ್ಸರ್ ಜಾಗೃತವಾಗಿ ಮತ್ತೆ ಹತ್ತಿಕ್ಕಬಹುದು. ಹಾಗೆ ಆದರೆ ಆ ಘರ್ಷಣೆಯು ಕ್ಷೋಭಕ್ಕೆ ನಿದ್ದೆಯೇ ಬಲಿಯಾಗುವುದು. ಹಾಗೆ ಆಗದೆ ಇರುವಂತೆ, ಒಂದು ಹಗರಣ ನಡೆಯುವುದು. ದಮಿತ ಪ್ರವೃತ್ತಿಗಳ ಪ್ರಕಟೀಕರಣ ಅಥವಾ ವಾಸನಾಪೂರ್ತಿ ನೇರವಾಗಿ ಆಗದೆ, ವೇಷಾಂತರ-ರೂಪಾಂತರಗಳಿಂದ ಜರುಗುವುದು. ಈ ರೂಪಾಂತರ ಕ್ರಿಯೆಯೇ ಸ್ವಪ್ನರಚನಾಪ್ರಕ್ರಿಯೆ. ಈ ಕಾರ್ಯದಲ್ಲಿ ಜಾಗೃತಪ್ರಜ್ಞೆಯು ಅಪ್ರತ್ಯಕ್ಷವಾಗಿ ಸಹಾಯ ನೀಡುವುದು. ಎಂದರೆ, ಜಾಗೃತಿಯಲ್ಲಿ ಜರುಗಿದ ತೀರ ಹತ್ತಿರದ ಸದ್ಯದ ಘಟನಾಪ್ರಸಂಗಗಳ ಛಾಯೆಯಿಂಡು ಈ ಸ್ವಪ್ನಮಾಯೆಯ ಕಾಯಕ ತೈಗೂಡುವುದು. ಕಣ್ಣು ಕಟ್ಟುವುದು. ಈ ಕಾಯಕದ ಉದ್ದೇಶ ದಮಿತಕಾಮನಾಪೂರ್ತಿಯೊಂದಿಗೇ ನಿದ್ರಾರಕ್ಷಣೆಯೂ ಆಹುದು. ಏಕೆಂದರೆ, ಸ್ವಪ್ನ ರೂಪಕವಾಗಿ ರೂಪಾಂತರ ಹೊಂದದಿದ್ದರೆ, ಪ್ರಕಟೀಕರಿಸಲಿರುವ ದಮಿತ ಪ್ರವೃತ್ತಿಗಳೊಂದಿಗೆ ಅಹಂಭಾವದ ತೀವ್ರ ಘರ್ಷಣವಾಗಿ, ಚಿತ್ತಕ್ಷೋಭೆ ಪಡೆದು ಮಲಗಿದವನು ದಿಗಿಲುಗೊಂಡು ನಿದ್ದೆಯಿಂದ ಎದ್ದಾನು.

ಎಂದರೆ ಸ್ವಪ್ನಗಳು ಏಕೆ ಬೀಳುತ್ತವೆ? ಎಂಬುದಕ್ಕೆ ಡಾ. ಫ್ರಾಯ್ಡನು ಇತ್ತ ಉತ್ತರ ಸಂಕ್ಷೇಪದಲ್ಲಿ ಹೀಗೆ:—ಪ್ರತಿಯೊಂದು ಸ್ವಪ್ನ ದಮಿತವಾಸನೆಗಳ ಪ್ರವೃತ್ತಿಗಳ ಕಾಮನಾಪೂರ್ತಿ. ಈ ಪೂರ್ತಿ ಕೇವಲ ಪ್ರಕಟೀಕರಣದಿಂದ ಆಗುತ್ತದೆ. ಈ ಪ್ರಕಟೀಕರಣ ಅಜಾಗೃತದಿಂದ ಜಾಗೃತ ಪ್ರಜ್ಞೆಗೆ ಬರುವ ಹವ್ಯಾಸ. ಈ ಹವ್ಯಾಸಕ್ಕೆ ಸೆನ್ಸರ್ ಶಕ್ತಿಯು ಪ್ರಬಲವಾದ ಆತಂಕವಿರುತ್ತದೆ. ಈ ಆತಂಕ ನಿದ್ದೆಯಲ್ಲಿ ಕ್ಷೀಣವಾಗುತ್ತದೆ. ಈ ಅನುವು ದೊರೆತಾಗಲೆ ಸೆನ್ಸರನ ಕಣ್ಣು ತಪ್ಪಿಸಿ, ದಮಿತಪ್ರವೃತ್ತಿಗಳು ನಿಜರೂಪ ಮರೆಯಿಸಿಕೊಂಡು ಪ್ರಕಟವಾಗುತ್ತವೆ. ಈ ರೂಪಕದೃಷ್ಟಾಂತವೇ ಸ್ವಪ್ನ.

ಇನ್ನು ಈ ರೂಪಾಂತರದ ರೀತಿಯೇನು? ಅದು ಒಂದು ಬಗೆಯ ಚಿತ್ರಮಯ ಭಾಷೆ. ಹಾಗಿದ್ದರೆ ಈ ವಿಚಿತ್ರ ಭಾಷೆಯ ವ್ಯಾಕರಣವೇನು? ಒಕ್ಕಣಿಕೆಯೇನು? ಸ್ವಪ್ನವೆನ್ನುವುದೇ ಒಂದು ರೂಪಕ—ಒಂದಲ್ಲ, ಸಂಸ್ಲಿಶ್ರ ರೂಪಕ! ಎಂದರೆ ಅದರಲ್ಲಿ ಬರುವ ವ್ಯಕ್ತಿ-ವಸ್ತು-ವಿಶೇಷಗಳೆಲ್ಲ ತಾವು ತಾವಾಗಿರುವುದಿಲ್ಲ. ಅವು ಲಿಬಿಡೋದಿಂದ ಒತ್ತಿ ಬರುವ ವಿಚಾರ ವಿಕಾರಗಳ ಪ್ರತಿನಿಧಿ-ಪ್ರತೀಕಗಳಾಗಿರುತ್ತವೆ. ನೀವು ದಿನವೆಲ್ಲ ಉದಾಸೀನರೂ ಖಿನ್ನರೂ ವಿಕಾಂತ ಜೀವಿಯೂ ಆಗಿದ್ದರೆ, ಆ ರಾತ್ರಿ ಕನಸಿನಲ್ಲಿ ಊರ ಹೊರಗೆ ನಸುಕಿನ ಮಬ್ಬುಗತ್ತಲಲ್ಲಿ ಒಂಟಿಯಾಗಿ 'ಯಾವುದೋ ಹಾಳು ಸುರಿಯುವ ಅಥವಾ ನಿರ್ಜನ ಬಡಕೇರಿಯಲ್ಲಿ ಗೊತ್ತಿಲ್ಲದತ್ತ ನಡೆದಂತೆ ತೋರೀತು. ಆ ಭಾವದ ಭಾವಚಿತ್ರವಿದು. ಇದು ಪ್ರತೀಕಗಳ ಭಾಷೆ—ರೂಪಕ ಚಿತ್ರಣದಿಂದ ಆಗುವ ಭಾವಪ್ರಕಟಣೆ. ಇನ್ನೊಂದು ಉದಾಹರಣೆ ಕೊಳ್ಳಿರಿ:—ಒಬ್ಬ ಧೃಷ್ಟಪುಷ್ಟ ಗಂಡಾಳು; ಆದರೆ ಆಳೆದೆಯ ಹೇಡಿ ಈತ ಎಂದು ನಾವು ಊಹಿಸುತ್ತೇವೆ. ಕನಸಿನಲ್ಲಿ ಒಬ್ಬ ವ್ಯಕ್ತಿ ಪಿದ್ದುನಿಂತು ಭುಜಗಳನ್ನು ಎತ್ತುತ್ತಿದ್ದಂತೆಯೇ ಹೇಂಟೆಯ ಮರಿಯಾಗಿಬಿಡುತ್ತಾನೆ. ಇದು ಪ್ರತೀಕ ಪ್ರಕಟಣೆ. ಆತ ಹೇಂಟೆಯು ಮರಿಯಂತೆ ಹೇಡಿ ಎಂಬುದು ತರ್ಕಾನುಮಾನದ ವಿಚಾರ. ಕನಸಿನ ವ್ಯಾಕರಣದಲ್ಲಿ ಸಮುಚ್ಚಾಯಕಾವ್ಯಯಗಳೇ ಇಲ್ಲ. 'ಆಂತೆ' 'ಎನ್ನುವಂತೆ' ಇತ್ಯಾದಿ ಉತ್ಪ್ರೇಕ್ಷೆಯೂ ಇಲ್ಲ. ಎಲ್ಲವೂ ಪ್ರತ್ಯಕ್ಷ, ಪ್ರಸ್ತುತ. ಇಲ್ಲಿಯೇ ಈಗಲೆ ಇದ್ದಕ್ಕಿದ್ದಂತೆಯೇ ಜರುಗುವುದು. ತರ್ಕಶುದ್ಧತೆ ಜಾಗೃತಪ್ರಜ್ಞೆಯ ಪ್ರತಿಜ್ಞೆ. ಅಜಾಗೃತ ಪ್ರಜ್ಞೆಗೆ ಸಾರೂಪ್ಯವೇ ಸಾಮಾನ್ಯ; ಸಾಮಾನ್ಯವೇ ಸಾಯುಜ್ಯ. ಹೋಲಿಕೆ ಹೊಂದಿಕೆ ಎಲ್ಲ ಒಂದೇ ಸಂಜ್ಞೆ, ಮನೋವೇಗ ಇಚ್ಛಾಮಾತ್ರವೆಂಬುದು ಸ್ವಪ್ನಕ್ಕೆ ನಿತ್ಯ.

ಇದೇ ಮಾದರಿಯ ಪ್ರತೀಕಾತ್ಮಕ ಭಾವಾವಿಷ್ಕಾರ ಅಥವಾ ವಿಚಾರಧದ ರೀತಿ ಚಿಕ್ಕಮಕ್ಕಳಲ್ಲಿ—ಕಾಡುಜನರ ಮಾತಿನಲ್ಲಿ ಕಾಣಬಹುದು. ವಾಚಾರಂಭಣವಾದ ವಿಚಾರ-ವಿವೇಚನೆ ಪ್ರಬುದ್ಧ ಬುದ್ಧಿಯ ಧರ್ಮ. "ಯತೋ ವಾಚೊ ನಿವರ್ತಂತೇ" ಅಲ್ಲಿಂದ ಮುಂದೆ 'ಪಶ್ಯಂತೀ'ಯೇ ನಮ್ಮ ಮನೋಗತದ ಮಾಧ್ಯಮ. ನಿದ್ದೆಯಲ್ಲಿ ನಿದುಳಿನ ಪ್ರಬುದ್ಧ ತರ್ಕನಿಷ್ಠ ನಿಚಾರಸರಣಿಯ ಅಂಗವು ವಿಶ್ರಾಂತಿ ಹೊಂದುತ್ತದೆ. ಆಗ ಪ್ರಾಥಮಿಕ ಬಾಲಿಶ ಅವಸ್ಥೆಯು ಚಿತ್ರ-ರೂಪಣದ ಸಂಜ್ಞಾಕ್ರಮವು ಭಾವಾಬದ್ಧ ತರ್ಕದ ಸ್ಥಾನವನ್ನು ಆಕ್ರಮಿಸುತ್ತದೆ. — ಸಾಮಾನ್ಯವಾಗಿ ಸರಾಯಿಯ ಅಮಲಿನಲ್ಲಿಯೂ ಹೀಗೆಯೇ ಜರುಗುತ್ತದೆ. ಭಾಷೆ-ತರ್ಕಗಳನ್ನು

ಬಿಟ್ಟು ಭಾವಪ್ರಕಟಣೆಗೆ ಹೊರಟರೆ, ಪ್ರತೀಕಾತ್ಮಕ ಚಿತ್ರರೂಪಣದ ಕಲ್ಪನಾತಂತ್ರವನ್ನೇ ಮನಸ್ಸು ಅನುಸರಿಸಬೇಕಾಗುತ್ತದೆ.

ಎಂದರೆ ಕೇವಲ ಸೆನ್ಸರ್‌ನ ಕಣ್ಣು ಕಟ್ಟಿ, ಬುದ್ಧಿಯಿಂದೆಲ್ಲದೆ, ಭಾವಾವಿಷ್ಕಾರವು ಆಗುವುದೇ ಕಲ್ಪನಾಚಿತ್ರಗಳ ಮುಖಾಂತರ-ವೆಂದಾಯಿತು. ಇನ್ನು ಈ ಚಿತ್ರಗಳಲ್ಲಿ ಲಿಬಿಡೊ ಅಥವಾ ಅಜಾಗೃತ ಪ್ರಜ್ಞೆ ತನ್ನ ಪ್ರತೀಕಗಳನ್ನು ಆಯ್ದು ನೇಯ್ದು ಕನಸುಕಟ್ಟುತ್ತದೆಂಬುದು ಮಾತ್ರ ನಿಜವು. ಸ್ವಪ್ನಸೃಷ್ಟಿಯ ಈ ಪ್ರತೀಕಗಳನ್ನು ಡಾ. ಫ್ರಾಯ್ಡನೂ ಅವನ ಅನುಯಾಯಿಗಳೂ ನಿರ್ದಿಷ್ಟಪಡಿಸಿದ್ದಾರೆ. ಅವುಗಳ ವಿವರ ನಮ್ಮ ವಿಷಯಕ್ಕೆ ಅಪ್ರಸ್ತುತ. ಈ ಪ್ರತೀಕಗಳಲ್ಲಿ ದಮಿತ ಬಾಲಿಶ ವಾಸನಾಪೂರ್ತಿಯ ಪ್ರತೀಕಗಳೇ ಅವರ ದೃಷ್ಟಿಯಿಂದ ಹೆಚ್ಚು ಮಹತ್ವದುವು

ಸ್ವಪ್ನರಚನೆ ಹೀಗೆ ಪ್ರತೀಕಮಯವಾಗಿ ನಡೆಯುವುದು. ಈ ರೂಪಣಕ್ರಿಯೆಯು ಅತಿ ಶೀಘ್ರವಾಗಿ ಒಂದೆರಡು ನಿಮಿಷಗಳಲ್ಲಿ ನಡೆದುಹೋಗುವುದು. ಅದಕ್ಕೆ ನಿಮಿತ್ತ ಹೊರಗಿನದು. ಹತ್ತಿರದ್ದು, ಆ ಹೊತ್ತಿನದಿದ್ದರೂ, ಅದರಿಂದ ಬುನಾದಿಯ ಮಲೆತು ಮಡುವ್ರೆ. ಗಟ್ಟಿದ ಬಯಕೆಗಳು ಕದಡಿ ಕೆದರಿದಂತಾಗಿ ಕನಸು ಆಕಾರಗೊಳ್ಳುವುದು. ಈ ಆಕಾರರಚನೆ ಹೀಗಿದೆ: ನಮಗೆ ಕಾಣಿಸುವ ಕನಸು "ಹೊರಗನಸು" ಅಥವಾ "ಪ್ರಕಟ ಸ್ವಪ್ನ"-ಅದು ಅತ್ಯಂತ ಸಂಕ್ಷಿಪ್ತ. ಆದರ ಪ್ರತೀಕಗಳನ್ನೂ ಪ್ರಸಂಗಗಳನ್ನೂ ವಿಂಗಡಿಸಿ ವಿಕಲನಮಾಡಿ ನೋಡಿದಾಗ ದೊರೆಯುವುದು "ಒಳಗನಸು" ಅಥವಾ "ಅಧ್ಯಾಸ್ಥಿತ ಸ್ವಪ್ನ"—ಹಾಡುಗಾರನ ರಾಗಾಲಾಪದ ಹಿಂದೆ ನೋಟೇಶನ್ ಅಥವಾ ಸ್ವರ-ಪ್ರಸ್ತಾರವಿದ್ದಂತೆ. ಇದೇ ನಮ್ಮ ದಮಿತ ವಾಸನಾಪೂರ್ತಿಯ ನಗ್ನಸತ್ಯ. ಅಜಾಗೃತದಿಂದ ಬಿಡ್ಡ ಸತ್ಯ ಸ್ವಪ್ನರೂಪ ತಾಳುವಾಗ, ಸಂಯೋಗ, ಸಂಕಲನ ಮತ್ತು ಸಂಕ್ಷೇಪಗಳು ಘಟಿಸುವುವು ತಂದೆಯ ಕೂದಲು, ಗುರುವಿನ ಮೋರೆ, ಸಾಹೇಬರ ಉಡುಪು ಒಟ್ಟಾಗಬಹುದು. ಬೇರೆ ಬೇರೆ ದೂರದ ಸ್ಥಲ-ಕಾಲಗಳು ಏಕತ್ರ ಕಲೆಬೆರಕೆಯಾಗಿ ಕಾಣಬಹುದು ಇದೂ ಇಲ್ಲದೆ ಸ್ವಪ್ನಘಟಕಗಳ ಸ್ಥಲಾಂತರ ಅಥವಾ ವರ್ಗಾವರ್ಗಿ ಆದಲುಬದಲಾಗಬಹುದು. ಮುಖ್ಯ ಅಂಶಗಳು ಗೌಣವಾಗಿ ಕಾಣಬಹುದು. ಕಾಣಬೇಕಾದುದರ ತೀರ ವಿರುದ್ಧ ಸಂಗತಿ ಆದರ ಪ್ರತೀಕವಾಗಿ ಕಾಣಬಹುದು. ಇಷ್ಟೆಲ್ಲ ಮಾರ್ಪಾಟುವಾಗಿಯೂ ಕೊನೆಯ ನಿಮಿಷಕ್ಕೆ ಸ್ವಪ್ನ ಪುನರ್ಘಟನೆ ಹೊಂದಬಹುದು. ಈ ಪುನರ್ಘಟನೆ ಕನಸಿನ ಹಂದರದ ಬಿರುಕು ತುಂಬಿ ಮುರುಕು ತಿದ್ದಿ, ಅದನ್ನು ಅಚ್ಚುಕಟ್ಟಾಗಿ ಮಾಡಿ ಕಾಣುವ ಮಟ್ಟಿಗೆ ಸುಸಂಗತವಾಗುವಂತೆ ನಯಗೊಳಿಸುವ ಮಟ್ಟ. ಹೀಗಿದೆ ಸ್ವಪ್ನಸಂಭವದ ಸಂಭ್ರಮ.

ಇಲ್ಲಿ ಒಂದು ಪ್ರಶ್ನೆ: ಡಾ. ಫ್ರಾಯ್ಡರ ಈ ವಿಮಾಂಸೆಯೇ ಸ್ವಪ್ನಸಿದ್ಧಾಂತದ ಏಕಮೇವ ಪ್ರಮಾಣವೇ? ಅಲ್ಲ. ಫ್ರಾಯ್ಡರ ಅನುಯಾಯಿಗಳಾಗಿದ್ದರೂ ಅವರಿಂದ ಬೇರೆಯಾಗಿ, ಅವರದೇ ತೂಕದ ಅಧಿಕಾರಸ್ಥಾನದಲ್ಲಿ ನಿಂತವರಿದ್ದಾರೆ. ಅವರು ಮುಖ್ಯವಾಗಿ ಡಾ.

ಬಣ್ಣ ಬಣ್ಣಗಳಲ್ಲಿ ಮುದ್ರಣ!
ಇದೀಗ ಪ್ರಕಟವಾಗಿದೆ.

ಅಭಿನವ ಗಣಿತ

ಲೇಖಕ: ಹರಿಹಪ

ಪ್ರಾಥಮಿಕ ಶಿಕ್ಷಣದ ವರ್ಗಕ್ಕಾಗಿ ಗಣಿತದ ಅಭ್ಯಾಸಪತ್ರಿಕೆಯಂತೆ ಬರೆಯಲ್ಪಟ್ಟು ಪ್ರಕಟಿಸಲ್ಪಟ್ಟಿದೆ. ಪುಟಪುಟಕ್ಕೂ ಚಿತ್ರಗಳ ಸೂರೆ! ವರ್ಣರಂಜಿತ ಮುದ್ರಣ!!

ಬೆಲೆ ಕೇವಲ ೧೦ ಆಣೆ. ವ್ಯಾಪಾರಿಗಳಿಗೆ ಧಾರಾಳ ಕಮೀಶನ್.

ಇಂದೇ ನಿಮ್ಮ ಪ್ರತಿ ಪಡೆಯಿರಿ!

ಶ್ರೀಸಾಯಿ ಪಬ್ಲಿಶಿಂಗ್ ಹೌಸ್, ಧಾರವಾಡ

ಯುಂಗ, ಮತ್ತು ಎಡ್ಲರ್ ಪ್ರಭೃತಿಗಳು. ಇವರು ಫ್ರಾಯ್ಡನ ಸಿದ್ಧಾಂತವನ್ನು ತಮಗೆ ಯೋಗ್ಯ ಕಂಡಂತೆ ತಿದ್ದಿ, ಸ್ವತಂತ್ರ ಪ್ರತಿಪಾದನೆ ಮಂಡಿಸಿದ್ದಾರೆ. ಅವರ ಮತಭೇದದ ಮುಖ್ಯಬಿಂದು—ಲಿಬಿಡೋದ ಸ್ವರೂಪ. ಅದು ಮುಖ್ಯವಾಗಿ ದಮಿತಕಾಮದ ಪುಂಜವೆಂಬ ಫ್ರಾಯ್ಡನ ತತ್ತ್ವ ಈ ಬಂಡುಗಾರರಿಗೆ ಒಪ್ಪಿಗೆ ಇಲ್ಲ. ವಿಶೇಷತಃ ಡಾ. ಯುಂಗ ಅಜಾಗೃತಪ್ರಜ್ಞೆಯ ವ್ಯಾಪ್ತಿಯನ್ನು ವ್ಯಾಪ್ತಿಯನ್ನು ವಿಸ್ತಾರಗೊಳಿಸಿದನು ಎಡ್ಲರನಿಗಿಂತ ಯುಂಗನು ಹೆಚ್ಚು ಆಳಕ್ಕೆ ಇಳಿದಿದ್ದಾನೆ ಅಜಾಗೃತ ಪ್ರಜ್ಞೆಯಲ್ಲಿ ಯುಂಗನು ಎರಡು ಪಾತಳಿಗಳನ್ನು ಕಂಡುಕೊಂಡಿದ್ದಾನೆ: ಒಂದು ವೈಯಕ್ತಿಕ, ಇನ್ನೊಂದು ಸಾಮುದಾಯಿಕ. ವೈಯಕ್ತಿಕ ಲಿಬಿಡೊ ಚಿಕ್ಕಂದಿನ ಮನೋದಮನದ ಫಲ; ಆದರೆ ಅಲ್ಲಿಯೂ ಕಾಮದ ಹೊರತಾಗಿ ಭಯ, ಮಹತ್ವಾಕಾಂಕ್ಷೆ ಮುಂತಾದ ಪ್ರವೃತ್ತಿಗಳನ್ನು ಅಜಾಗೃತ ಪ್ರಜ್ಞಾಂತರ್ಗತವೆಂದು ಅವನು ತಿಳಿಯುತ್ತಾನೆ. ಸಾಮುದಾಯಿಕ ಲಿಬಿಡೊ ಎಂದರೆ ಮಾನವವಂಶದ ವಿಕಾಸದಲ್ಲಿಯೇ ರೂಪಗೊಂಡ ಎಲುವು ಪ್ರಾಚೀನದ ಭಾವಮುದ್ರೆಗಳೂ ವಿಕಾರಗ್ರಂಥಿಗಳೂ ಸೂಚಿತ ಸಂಸ್ಕಾರರೂಪವಾಗಿ ಕೂಡಿಬಂದ ಅಂತಃಪ್ರಜ್ಞೆ. ಈ ಜನಾಂಗದ ಮಹಾಪ್ರಜ್ಞೆಯ ಅಂಗಗಳೂ ಪ್ರತೀಕಾತ್ಮಕವಾಗಿ ವ್ಯಕ್ತಿಯ ಕನಸುಗಳಲ್ಲಿ ಕಾಣಿಸಿಕೊಳ್ಳುತ್ತವೆ.

ಈ ವಾದಭೇದವೇನೇ ಇದ್ದರೂ, ಸರ್ವಸಮ್ಮತವಾದ ಸ್ವಪ್ನಕಾರಣದ ವಿಮಾಂಸೆಯೆಂದರೆ—ಕನಸಿಗೆ ಇಚ್ಛಾಶಕ್ತಿಯೇ ಆಧಾರ,

ದಮಿತಪ್ರವೃತ್ತಿಗಳಿಗೆ ಕನಸಿನಲ್ಲಿ ಅವಿಷ್ಕಾರ. ಕನಸು ಪ್ರತೀಕಾತ್ಮಕ—ರೂಪಕಾತ್ಮಕ. ಕನಸಿನಿಂದ ನಿದ್ರಾರಕ್ಷಣೆ ದೃಶ್ಯಫಲ, ಅಜಾಗೃತ ಮನಸ್ತೃಪ್ತಿ ಅದೃಷ್ಟಫಲ.

ಇದುವರೆಗೆ ವರ್ಣಿಸಿದ ಕಾರಣಗಳು ಆಂತರಿಕವಾದುವು. ಇವಲ್ಲದೆ ಅನೇಕ ಕನಸುಗಳಿಗೆ ಆಕಸ್ಮಿಕ ಮತ್ತು ಆಗಂತುಕ ಎಂಬೆರಡು ಕಾರಣಗಳು ಇರುತ್ತವೆ. ಆಕಸ್ಮಿಕ ಕಾರಣಗಳು ಮುಖ್ಯವಾಗಿ ಹಲವುತರದ ಹೆದರಿಕೆಗಳು. ಕಳೆದ ಮಹಾಯುದ್ಧದಲ್ಲಿಯೂ ಅಮೇಲೂ ಅನೇಕ ಸೈನಿಕರಿಗೆ ಕಾಳೆಗದ ಕಂಗೆಟ್ಟ ಕನಸುಗಳು ಬಾಧಿಸಿದ್ದುವಂತೆ ಕಾಮದಂತೆ ಭಯವೂ ಒಂದ ಪ್ರಚಂಡ ದಮಿತಪ್ರವೃತ್ತಿ. ಕಾಮಕ್ಕಿಂತಲೂ ಮೂಲದ ಆದಿಯ ಪ್ರವೃತ್ತಿ. ಭಯವಲ್ಲದೆ ಶೋಕ, ಆತ್ಮಗ್ಲಾನಿ, ಈರ್ಷೆ, ಹಿಂಸಾವೃತ್ತಿ ಮುಂತಾದುವೂ ದಮನಗೊಂಡು ಲಿಬಿಡೋದಲ್ಲಿ ಸ್ಥಾಯಿಯಾಗಿ ಉದ್ರೇಕವನ್ನು ಉಂಟುಮಾಡಬಲ್ಲವು.

ಆಗಂತುಕ ಕಾರಣಗಳಿಂದರೆ ಇಂದ್ರಿಯಜ್ಞಾನದ ಪ್ರಭಾವ. ದೋಷಗಳು. ನಿದ್ದೆಯಲ್ಲಿದ್ದವನ ಮೈಯ ಮೇಲೆ ಜರುಗುವ ಪ್ರಭಾವಗಳು ಕನಸಿನ ಮುಖವಾಡಗಳಾಗಿ ಕಾಣಬಹುದು. ಇಂದ್ರಿಯಜ್ಞಾನದಿಂದ ಬಂದ ಸಂಜ್ಞೆಗಳ ಯಥಾರ್ಥಬೋಧವು ತಪ್ಪುವಲ್ಲಿಯೇ ನಿದ್ದೆಯ ಸರಹದ್ದು ಶುರುವಾಗುವುದು. ಆಗ ಒಂದು ಗುಂಗಾಡಿನ ಸದ್ದೂ ಬೆಟ್ಟದ ತೊರೆಯ ಮರ್ಮರವಾದೀತು. ಎಲಾರ್ಮ್ ಗಡಿಯಾರದ ಗಜರು, ಗುಡಿಗಳಲ್ಲಿ ಮೊಳಗುವ ಗಂಟೆಗಳಾಗಬಹುದು. ವಸ್ತ್ರದ ಸಪ್ಪಳ ಕಡಲ ನೊರೆತ, ತಡಸಲು-ಬಿರುಗಾಳಿಗಳ ಭೋರ್ಗರೆತನೆನಿಸಬಹುದು ನಿದ್ದೆಯಲ್ಲಿ ಕಾಲು ಹೊದಿಕೆಯ ಬೊರಗೆ ಬಿದ್ದರೆ ನೀರಿನಲ್ಲಿ ನಡೆದ—ಹಿಮದಲ್ಲಿ ನಿಂತ ಭಾಸವಾದೀತು. ಚರ್ಮದ ಮೇಲೆ ಜಿಜ್ಞೆಯೆನಿಸದಿದ್ದರೆ ಗಾಳಿಯಲ್ಲಿ ತೇಲಾಡಿದಂತೆ, ಆಧಾರನೇ ತಪ್ಪಿದಂತೆ ಕಾಣಬಹುದು. ಚರ್ಮರೋಗಿಗೆ ಮರುಭೂಮಿಯ ಮಳಲ ವಿಸ್ತಾರ ಕಾಣಬಹುದು. ನಮ್ಮಲ್ಲಿ ಕೆಸರು ರಾಡಿ ಕನಸಿನಲ್ಲಿ ಕಂಡರೆ ಕಜ್ಜಿ

ಕ್ರೀಡಾಂಗಣ

(ಕವನ ಸಂಕಲನ)

ಬರೆಹಗಾರರು :

ಎನ್. ಎಸ್. ಗದಗಕರ

ಇದರಲ್ಲಿ ವಿವಿಧವಿಷಯಗಳನ್ನು ವಸ್ತುವನ್ನಾಗಿ ಇರಿಸಿಕೊಂಡು ಬರೆದ ೬೬ ಕವನಗಳಿರುವವು. ಶ್ರೀ. ಆನಂದಕಂದರ ಮುನ್ನುಡಿಯನ್ನೊಳಗೊಂಡಿದೆ.

ಕ್ರೌ. ಅ ೬೦ ಪುಟ

ಬೆಲೆ ೧ ರೂಪಾಯಿ

ಮುಖ್ಯ ಮಾರಾಟಗಾರರು :—

ಮನೋಹರ ಗ್ರಂಥಭಾಂಡಾರ, ಧಾರವಾಡ

ಬರುವುದೆಂದು ಹಳ್ಳಿಗರು ನಂಬುವುದು ಇದನ್ನು ಹೋಲುತ್ತದೆ. ಎದೆಯ ನಾಡಿಯ ಜೋರಿನ ಮಿಡಿತ ಕುದುರೆಯ ಕುದುರಾಟವಾಗಿ ತೋರಬಹುದು. ನಿದ್ದೆಯಲ್ಲಿ ನೀರಡಿಸಿದರೆ, ಕನಸಿನಲ್ಲಿ ಹಳ್ಳದಿಂದ ಬೊಗಸೆ ಬೊಗಸೆ ನೀರು ಕುಡಿದಂತೆ ಎನಿಸಬಹುದು. ಹೀಗೆ ಶಾರೀರಿಕ ಅವಸ್ಥೆ-ಪ್ರತಿಕ್ರಿಯೆಗಳು ಆಗಂತುಕ ನಿಮಿತ್ತಗಳಾಗಿ ಕನಸಿಗೆ ಕಾರಣಕೆ ಪಲ್ಲಿಸುವುದುಂಟು.

ಆದರೆ ಇದೊಂದೇ ಸ್ವಪ್ನಕಾರಣವಾಗಲಾರದು. ಏಕೆಂದರೆ ಅರೆನಿಮಿಷದಲ್ಲಿ ಇಂಥ ಆಗಂತುಕ ನೆವಗಳಿಂದ ಒಂದು ವಿಶಿಷ್ಟ ಚಿತ್ರಾವಲಿಯು ಅದರೊಳಗಿನ ಒಂದು ವಸ್ತುವಿನ್ಯಾಸವೂ ಸುಸಂಗತವಾಗಿ ಸಮಗ್ರವಾಗಿ ಫಕ್ಕನೆ ಮುಂದೊಡ್ಡಿ ನಿಲ್ಲುವುದು ಹೇಗೆ? ಕನಸಿನ ಈ "ರೆಡಿಮೇಡ್" ರೂಪವು ಹೇಗೆ ಸಿದ್ಧವಾಗುತ್ತದೆ? ಈ ರೂಪಸಿದ್ಧಿಯ ರಹಸ್ಯವೆ ಅಜಾಗೃತ ಪ್ರಜ್ಞೆಯ ಚಪಲಚೇಷ್ಟಿತ. ಅದರ ಅಂಧಕೂಪದಿಂದ ಅದರ ಇಚ್ಛಾಪೂರ್ತಿಗಾಗಿ ಆಗಂತುಕ ನಿಮಿತ್ತವನ್ನೊಂದು ಅವಲಂಬಿಸಿ ಹೀಗೆ ವಿಶಿಷ್ಟ ಪ್ರತೀಕ-ರೂಪಕಗಳು ಹುಟ್ಟಿಬರುತ್ತವೆ; ಕಟ್ಟಿ ನಿಲ್ಲುತ್ತವೆ ಆದ್ದರಿಂದ ನಿಮಿತ್ತ ಕಾರಣವೇನೇ ಇರಲಿ, ಸ್ವಪ್ನಸೃಷ್ಟಿಗೆ ಲಿಬಿಡೋ ಉಪಾದಾನ, ಅಜಾಗೃತಪ್ರಜ್ಞೆಯೇ ಅಧಿಷ್ಠಾನ. ಪ್ರತೀಕಪ್ರಕಟೀಕರಣವೇ ಸಾಧನ ಮತ್ತು ದಲಿತ ಕಾಮನಾಪೂರ್ತಿಯೇ ಪ್ರಯೋಜನ. ಹೀಗಿದೆ ಸ್ವಪ್ನಕಾರಣದ ಸಮಾಲೋಚನೆ.

ಪ್ರಕೃತಿಗೆ ಶರಣು

ಜಿ. ವ್ಹಿ. ಕುಲಕರ್ಣಿ ಬಿ. ಎ. (ಆನರ್ಸ್) ಜನತಾ ಕಾಲೇಜು, ಧಾರವಾಡ

೧

ಇಲ್ಲಿ ಅಲ್ಲಿ ಎಲ್ಲೆಡೆಗೆ ಕಾಣುತಿದೆ ಕಪ್ಪು ಮೇಘಮಾಲೆ,
ಮನದ ಒಳಗೊಳಗೆ ಹೊತ್ತಿ ಉರಿಯುತಿದೆ ಪ್ರಳಯ ಕರೆವ ಜ್ವಾಲೆ;
ಚಿಂತೆಯಿಂದ ಸಂಭ್ರಾಂತನಾಗಿಯಿರೆ ತಾಳ್ಮೆ ತಪ್ಪಿ ಬಾಳು—
ಹೃದಯವೇದನೆಯು ಏನಾರಿ ಆಗುತಿದೆ ತಲೆ ಸಹಸ್ರ ಹೋಳು.

೨

ಮಾರ್ಗದೋರದಿರೆ—ಬೆಳಕು ಕಾಣದಿರೆ—ಮನೆಯ ಬಿಟ್ಟು ನಡೆದೆ;
ದೇವದೇವನನು ದೈನ್ಯಭಾವದಲಿ 'ದಾರಿ ತೋರು' ಎಂದೆ:
'ಮನದ ಕಿಚ್ಚು ಮೈಮನವ ಸುಡುತಲಿದೆ ತಿಳಿಯದೇನು ಮುಂದು
ಅಂತರಂಗದಲಿ ಇದ್ದ ನೀನೆಸಗೆ ದಾರಿ ತೋರು ಇಂದು!'

೩

ಗಟ್ಟಿಯಾಗು ನೀ ಎಂದು ಹೇಳುತಿದೆ ಒಳಗೆ ಒಂದು ಮನವು,
ಅದನು ಕೇಳಯೇ ಜಗದಿ ಬಾಳಲಿಕೆ ನನಗೆ ಇಲ್ಲ ಬಲವು;
ಸಾವು-ಜೀವಗಳ ದ್ವಂದ್ವದಲ್ಲಿಯೇ ನಾನು ಮೂಢನಾದೆ,
ಪ್ರಕೃತಿಪುಸ್ತಕದಿ ಬಯಸಿ ಉತ್ತರವ—ಅದನೆ ನೋಡ ಹೋದೆ.

೪

ತಾಯಿ ಪ್ರಕೃತಿಯೇ, ನಿನ್ನ ತೊಡೆಯೊಳಹ ಚಿಕ್ಕ ಕಂದ ನಾನು
ಎತ್ತಿಕೊಳ್ಳುತಲಿ ಆಪ್ಪಿ ಕಂದನಿಗೆ ಕಲಿಸು ಪಾಠವನ್ನು
ನಿನ್ನ ಒಡಲಿನಲಿ ಇಹುದೆ ಉತ್ತರವು ಚಿಕ್ಕ ಪ್ರಶ್ನೆಯಿಂತು:
'ವಿರಸದಿಂದ ಪ್ರಕ್ಷುಬ್ಧವಾದ ಜೀವನದಿ ಬಾಳ್ವುದೆಂತು?'

೫

ದಂಗುಬಡಿದು ನಾ ಬಿಸಿಲು-ನೆಳಲಿನಲಿ ಅಲೆದೆ ಕಾಡುಕಾಡು,
ಶೂನ್ಯಬುದ್ಧಿಯಲಿ ಹುಚ್ಚನಾದೆ ನಾ ದೇವ ಬಲ್ಲ ಪಾಡು!
'ಕಾಯೆ ತಾಯಿಯೇ ನಿನ್ನ ಕಂದನಾ' ಎಂಬುದೊಂದೆ ಹಾಡು,
ಆಗ ತಾಯಿಯೇ ಪಾಠ ಕಲಿಸಿದಳು ಎಂಥ ಮೋಜು ನೋಡು!

೬

ಕಂಡೆ ಎದುರಿನಲಿ ಬಂಡೆಗಲ್ಲುಗಳ ಸಾಲ ರಾಶಿಯನ್ನು—
ಅದರ ಮಧ್ಯದಲಿ ಬೆಳೆದು ನಿಂತಿರುವ ಭವ್ಯವೃಕ್ಷವನ್ನು.
ನೋಡಿ ಪ್ರಶ್ನಿಸಿದೆ ಇಂಥ ಸ್ಥಾನದಲಿ ಹೇಗೆ ನಿನ್ನ ವಾಸ?
ಎಲ್ಲಿ ನೀರು—ಎಲ್ಲಿಯದು ಮಣ್ಣು - ಇಂಥಲ್ಲಿ ಹೇಗೆ ವಾಸ?

೭

ಆದರ ಸ್ನಿಗ್ಧ ಛಾಯೆಯಲಿ ಮಲಗುತಲಿ ಪೂರ್ತಿ ನಿದ್ರೆಗೊಂಡೆ,
ನನ್ನ ಪ್ರಶ್ನೆಗಾ ಮರವು ಉತ್ತರವ ಕೊಡುವ ಕನಸ ಕಂಡೆ.
ಪ್ರಕೃತಿದೇವಿಯೇ ನನ್ನ ಸ್ಥಿತಿಯನ್ನು ಕಂಡು ಮರುಗಿ ಇಂದು
ಮಾರ್ಗದರ್ಶನವ ಮಾಡುತಿರುವಳೋ—ಎಂದುಕೊಂಡೆನಂದು.

೮

ಒಂದು ಬೀಜವನು ಚಂಡಮಾರುತವು ಕೊಲ್ಲಲೆಂದು ಬಯಸಿ
ದೂರ ಎಸೆಯಿತದು ಬಿದ್ದ ಎಡೆಯಿಬೇ ಬಂಡೆಗಲ್ಲ ರಾಶಿ.
ಬಂಡೆಗಲ್ಲಿನಲಿ ಬಿರುಕ ಕಂಡು ಅದರಲ್ಲಿ ವಾಸವಾಯ್ತು,
ಸಣ್ಣತನದಲ್ಲಿ ಬೀಜ ಬೆಳೆವುದರ ಆಶೆ ನಾಶನಾಯ್ತು.

೯

ಗಾಳಿ ಬೀಸಿ ತರಗೆಲೆಗಳೊಡನೆಯೇ ಮಣ್ಣು ಬಿದ್ದಿತಲ್ಲಿ,
ಕಾಲ ಕಳೆಯುತಿರೆ ಬಂದು ಮಳೆಗಾಲ ಮಳೆಯು ಸೂಸಿತಲ್ಲಿ;
ಸೂರ್ಯದೇವನಾ ಕೃಪೆಯ ಕಿರಣದಾ ಮೊಳಕೆ ಮೂಡಿತೊಂದು,
ಕೆಲವೆ ದಿನಗಳಲಿ ಮೊಳಕೆ ಚಿಗುರಿತದು ಪ್ರಕೃತಿಯನ್ನು ನೆನೆದು.

೧೦

ಸಹನೆ-ಶಾಂತಿಯಲಿ ಗಾಳಿ-ಮಳೆಗಳಲಿ ತಡೆದು ನಿಂತಿತಲ್ಲಿ
ಬೇರು ಬಿಡುತಲೇ ಗಟ್ಟಿ ನಿಂತಿತದು ಬಂಡೆಗಲ್ಲಿನಲ್ಲಿ;
ಕೆಲವು ವರುಷಗಳ ಕಾಲದಲ್ಲಿಯೇ ಬಂಡೆಯೊಡೆದು ಹೋಯ್ತು
ಬೇರು ಆಳದಲಿ ಬಿಟ್ಟು ಸಸಿಯಿಂದು ಭವ್ಯ ಮರವು ಆಯ್ತು.

೧೧

ಇಂದು ತಣ್ಣೆಳಲ ಬೀರುತಿರುವುದಿದು ಎಲ್ಲ ಯಾತ್ರಿಕರಿಗೆ—
ಅದರ ಕಷ್ಟಜೀವನವೆ ಪಾಠವನು ಹೇಳುತಿದುದು ನನಗೆ;
'ಓಡಿ ಹೋಗದಿರು ಇಂದು, ಜೀವನದಿ ಇದ್ದು ಜಯಿಸಬೇಕು;
ಕರ್ಮದಲ್ಲಿಯೇ ದಿವ್ಯ "ಸ್ವೀಕಾರ" ಮಂತ್ರ ಪಠಿಸಬೇಕು!'

೧೨

ಕೇಳಿತಲ್ಲಿಯೇ ಪ್ರಕೃತಿ ಮಂಡಲದಿ ಒಂದು ದಿವ್ಯ ಕೂಗು:
"ಎಲ್ಲ ಪ್ರಶ್ನೆಗಳ ಬಿಡಿಸ ಬಯಸಿದೊಡೆ ಬಂದು ಇಲ್ಲಿ ಬಾಗು!
ಪ್ರಕೃತಿದೇವಿಯಾ ಒಡಲಿನಲ್ಲಿ ಇದೆ ಹಿರಿಯ ಜ್ಞಾನಕೋಶ,
ಆವಳ ಮೊರೆಹೊಕ್ಕು ಕಲಿತೆಯಾದರೆಯೆ ನಿನ್ನ ತಾಪನಾಶ!"

ಕುಸುರೆಳ್ಳು

(ಚಿಕ್ಕಕಥೆ)

ಶ್ರೀ. ಮಿರ್ಜಿ ಅಣ್ಣಾರಾಯರು, ಸೇಡಬಾಳ

卐

ದಾಂಪತ್ಯಜೀವನದಲ್ಲಿ ಸಂಶಯಪಿಶಾಚಿ ತನ್ನ ಕೈಚಳಕವನ್ನು ನಡೆಯಿಸಿತೆಂದರೆ, ಗೆಂಡು-ಹೆಣ್ಣಿನ ಸುಖ, ಸಮಾಧಾನ, ಶಾಂತಿ, ಸಂತೃಪ್ತಿಗಳನ್ನು ತಿಂದುಹಾಕುವುದು. ಸಂಸಾರವು ವಿಷದ ಸಾಗರವಾಗುವುದು. ಆನಂದನ ವ್ಯರ್ಥಸಂಶಯದ ನಿವಾರಣೆಯು ಹೇಗಾಯಿತು?

卐

ಕುಸುರೆಳ್ಳು ತಕ್ಕೊಂಡು ದೇವಸ್ಥಾನಕ್ಕೆ ಹೋಗುವುದಕ್ಕೆಂದು, ಅತ್ತೆ ತಲೆಬಾಗಿಲಲ್ಲಿ ನಿಂತು ಎಷ್ಟು ಅವಸರಪಡಿಸುತ್ತಲಿದ್ದರೂ, ಲೀಲೆ ತನ್ನ ಶೃಂಗಾರವನ್ನು ನಿದಾನವಾಗಿಯೇ ನಡೆಯಿಸಿದ್ದಳು. ತನಗೊಪ್ಪುವ ಪಸಿರುಬಣ್ಣದ ಜರದಂಚಿನ ಪತ್ತಲವನ್ನು ತೆಗೆದು, ನಿಲುವುಗನ್ನಡಿಯ ಮುಂದೆ ನಿಂತು, ಉಟ್ಟುಕೊಂಡಳು. ಆ ಪತ್ತಲ ಕೈಗೆ ತೆಗೆದುಕೊಂಡಾಗೊಮ್ಮೆ, ಅವಳಿಗೆ ಆ ಒಂದು ಸನ್ನಿವೇಶ ನೆನಪಾಗುವುದು. ಮದುವೆಯ ಅರಿವೆಗಳನ್ನು ಕೊಳ್ಳುವಾಗ ಆನಂದ, ಬೆಲೆ ಹೆಚ್ಚೆನಿಸಿದರೂ ಕೂಡ—ಅದನ್ನೇ ಆರಿಸಿದನಂತೆ. ಅದನ್ನು ಅವಳ ಅಕ್ಕ ಹಲವು ಸಲ ಕತೆ ಮಾಡಿ ಲೀಲೆಗೆ ಹೇಳುತ್ತಿದ್ದಳು. ಅಕ್ಕ-ತಂಗಿಯರು ಕೂಡಿದಾಗೊಮ್ಮೆ, ಆ ಪತ್ತಲ ಕೊಂಡ ಪ್ರಸಂಗ ಕತೆಯಾಗಿ ಅರಳುವುದು. ಅಷ್ಟು ಉತ್ಸಾಹದಿಂದ, ಲೀಲೆಗೆ ಆನಂದ ಆ ಪತ್ತಲವನ್ನು ಮದುವೆಯ ಮುಂಚೆಯೇ ಕೊಂಡಿದ್ದ. 'ಗಂಡಸರಿಗೆ ಬಹು ಸೂಕ್ಷ್ಮ ಬುದ್ಧಿ! ಒಂದೇ ಒಂದು ಸಲ ನನ್ನೆನ್ನು ನೋಡಿದ್ದರೂ ನನಗೆ ಎಂಥ ಸೀರೆ ಚೆಂದ ಕಾಣುವುದೆಂಬುದನ್ನು ಅವರು ಕಂಡುಹಿಡಿದಿದ್ದರು! ಅಂಥದನ್ನೇ ತಂದಿದ್ದರು!' ಈ ವಿಚಾರ ಲೀಲೆಯ ತಲೆಯಲ್ಲಿ ಮೂಡಿದೊಡನೆಯೇ ಆ ನಡುಮನೆಯಲ್ಲಿ ಇನ್ನಾರು ಇರದಿದ್ದರೂ ಕೂಡ—ಅವಳ ಮುಖದಲ್ಲಿ ಲಜ್ಜೆ ಅವರಿಸುವುದು. ಮೊದಲೇ ಮೋಹಕವಾದ ಮುಖ ಇನ್ನಿಷ್ಟು ಸುಂದರವಾಗಿ—ಕನ್ನಡಿಯಲ್ಲಿ—ಅವಳಿಗೇ ತೋರುವುದು. ಒಂದು ಅರೆಕ್ಷಣ ಅಭಿಮಾನವೂ ಮಿಂಚಿ ಮಾಯವಾಗುವುದು. ಈ ಲೀಲೆಗೆ ಆನಂದ ಮೆಚ್ಚಿದುದು ಸಹಜವೆನ್ನಿಸುವುದು.

ಮೇಲೆ ಅದಕ್ಕೊಪ್ಪುವ ರವಿಕೆ. ಅದೂ ಆನಂದನ ಪ್ರೀತಿಗೊಂದು ಪ್ರತೀಕ. 'ಇವನ್ನೆಲ್ಲ ನೋಡುವುದಕ್ಕೆ ಆನಂದ ಬರಬೇಕು. ಈಗ ಬಂಡಾನು. ಬರುವ ಹೊತ್ತು. ಅಲ್ಲಿಯ ವರೆಗೆ ಅತ್ತೆ ಎಷ್ಟು ಆತುರಗೊಳಿಸಿದರೂ ದೇವಾಲಯಕ್ಕೆ ಹೊರಡಕೂಡದು. ಈ ಹೃದಯೇಶ್ವರನಿಗೆ ನೀಡದೆ ಆ ದೇವಸ್ಥಾನದ ಕಲ್ಲಿನ ಮೂರುತಿಗೆ ಮೊದಲು ಎಳ್ಳುಬೆಲ್ಲವನ್ನು ಅರ್ಪಿಸಲಿಕ್ಕೆ ಲೀಲೆಯ ಮನಸ್ಸು ಒಲಿಯುತ್ತಿರಲಿಲ್ಲ. ಮೊಪಲು ಗುಡಿಗೆ ಹೋಗಿ, ಬಂದು ಬಿಡೋಣ—ಎಂಬುದು ಅತ್ತೆಯ ಯೋಜನೆ. ಓಣಿಯೊಳಗಿನ ಹೆಣ್ಣುಮಕ್ಕಳೆಲ್ಲ ಅಂಗಳದಲ್ಲಿ ಸೇರಿದ್ದಾರೆ. ಲೀಲೆಗಾಗಿ ಕಾಯುತ್ತಿದ್ದಾರೆ. ಲೀಲೆ ಮಾತ್ರ ಆನಂದನ ದಾರೀ ಕಾಯುತ್ತಿದ್ದಾಳೆ.

ಆನಂದ ಇಷ್ಟರಲ್ಲಿ ಬರುವನೆಂದು ಲೀಲೆಯ ಮುಗ್ಧಮನಸ್ಸು ಹೇಳುತ್ತಿತ್ತು. ಬರೀ ಬರುವನಿಷ್ಟೇ ಅಲ್ಲ, ತನಗಾಗಿ ಕುಸುರೆಳ್ಳಿನ ಪುಡಿಕೆಯೊಂದನ್ನೂ ತರುವನೆಂಬ ಭರವಸೆ ಅವಳಿಗೆ. ಜೊತೆಗೆ ತನ್ನ ತವರೂರಿನಿಂದ ಇಂದಿನ ಅಂಚೆಗೆ ಬರಬಹುದಾದ ಸಂಕ್ರಾಂತಿಯ ಸವಿನೆನಪನ್ನೂ ತರುವನು. ಆಫೀಸಿನ ವಿಳಾಸ ಬಿಟ್ಟು, ಮನೆಯ ವಿಳಾಸ ಕೊಡಲಿಕ್ಕೆ ಯಾವಾಗಲೋ ಹೇಳಿಯಾಯಿತು. ಇನ್ನೂ ಬದಲಿಸಲಿಲ್ಲ. ಇಲ್ಲವಾದರೆ ಅವರು ಇಂದು ಸ್ವಲ್ಪ ಮುಂಚಿತವಾಗಿಯೇ ಮನೆಗೆ ಬರಬಹುದಿತ್ತು. ಹಾಳೂರು! ಈ ಊರಲ್ಲಿ ಅಂಚೆಯಾಳು ಒಬ್ಬ ಹೊತ್ತಿಗೆ ಸರಿಯಾಗಿ ಬರುವುದೇ ಇಲ್ಲ...."

"ಲೀಲಾ!" ಅತ್ತೆ ಕೂಗಿದರು.

"ಹೂಂ!"

ಎಂದಳು ಲೀಲೆ. ನಿಂತ ಸ್ಥಳವನ್ನು ಬಿಟ್ಟು ಕದಲಲಿಲ್ಲ ಮಾತ್ರ. ಅದೇ ಕನ್ನಡಿ, ಅದೇ ಮುಖ, ಅದೇ ಉತ್ಸಾಹ. ಹೊರಗಿನ ಓರಗೆಯರ ಮಾತು-ಕತೆ ಒಂದೂ ಅವಳ ಕಿವಿಯಲ್ಲಿ ಸೇರವು. ತನ್ನಲ್ಲಿಯೇ ತಾನು ಮೈಮರೆತಿದ್ದಾಳೆ. ಆನಂದನೊಡನೆ ಬೆರೆತಿದ್ದಾಳೆ:

"ಇಸ್ಸಿ! ಸರೀರಿ ಎಂದರೆ...."

"ನಿಜಕ್ಕೂ!"

"ಗಂಡುಸರೆಂದರೆ ಹೀಗೇ...."

"ಅಂದರೆ?

"ನೋಡಿ! ತುಟಿ ಕೆಂಪಾಯಿತು...."

"ಆಯಿತೊ? ಇತ್ತೊ?"

"ನಿಮಗೇ ಚೆಂದ....ಏನೆಂತ ಹೀಗೆ ಮಾಡ್ತೀರೊ...?"

"ಹೇಗೆ?"

" ಊಂ! ಹೋಗಿರಿ ಅತ್ತಕ! ಚಂದ್ರಹಾರ ಒತ್ತಿತು ನೋಡ್ರಿ, ಇಲ್ಲಿ ಎದೆಗೆ...."

" ನನಗೂ ಒತ್ತೆಯಲ್ಲ.... "

" ಯಾವಾಗಲೂ ಇಂಥದೇ ಆಟ ನಿಮ್ಮದು...."

" ನಿನ್ನೊಡನೆ...."

" ಏನು ಹುತುಗಾಟಕೆ ಎಂತ ಮಾಡ್ತೀರಿ ಇನ್ನು ಮತ್ತೆ ತಲೆ ಬಾಚಿಕೊಳ್ಳಬೇಕು ನಾನು....! "

" ಹೌದೊ ? "

" ನೋಡಿ! ಮಲ್ಲಿಗೆಯ ಹಾರವೂ ತರಿಯಿತು .. ....! ಒಮ್ಮೆ ಅವರೆ ಸಾಕಾಗಲಿಲ್ಲವೇನೊ ! "

" ಇದೊಮ್ಮೇ...."

" ಗುಡಿಗೆ ಹೊರಟು ನಿಂತ ಹೊತ್ತಿನಲ್ಲಿ ಇದೇನು ಹುಚ್ಚು ? ಅತ್ತೆ ಬಂದರು ನೋಡಿ ಒಳಗೆ ..."

" ಅದೆಲ್ಲ ನನಗೆ ಗೊತ್ತು...."

" ಹೊರಗೆ ಹೆಂಗುಸರು ನಿಂತಿದಾರೆ; ಒಳಗೆ ನೀವು...."

" ಅವರಿಗೇನೂ ಗೊತ್ತಿಲ್ಲವೇನು ತಗೊ ! "

" ಇರಲಿ; ಬಿಡಿರಿ....! "

" ನಾನೆಲ್ಲಿ ಹಿಡಿದಿರುವೆ..."

" ಎಂಥ ಹೊತ್ತಿನಲ್ಲಿ ಬಂದು ತಡೆದಿರಿ ನೋಡಿ—ಎನ್ನುವೆ; ಇಷ್ಟರಲ್ಲಿ ಗುಡಿಯಲ್ಲಿರುತ್ತಿದ್ದೆವು .. "

" ಹೋಗಿರೆಲ್ಲ....! "

" ಏನು ಹೋಗತಾರೆ ? "

" ಏಕೆ, ಮುಹೂರ್ತ ಮಿಾರಿ ಹೋಯಿತೇನು ಈಗ ? "

" ಹೋದ ಹಾಗೇ...."

" ಅಂದರೆ ? "

" ದೇವರಿಗೆ ಇಡೂ ಎಳ್ಳು...."

" ಈ ದೇವರು ಎತ್ತಿ ಹಾಕಿದ ಅನ್ನುವೆ ಏನು ಮತ್ತೆ ! "

" ಏನು ಅನ್ನುವಿರೋ ನೀವೇ ಎನ್ನಿರಿ...."

" ತಿನ್ನುವವಳು ನೀನು....ಅನ್ನಲಿಕ್ಕೆ ಮಾತ್ರ ನಾನು...."

" ಬೇಡ ಬೇಡ ಎಂದರೆ ನೀವೇ ಬಾಯಲ್ಲಿ ಹಾಕೋದು ..... ಮತ್ತೆ ಮೇಲೆ....."

" ಮೇಲೆ ತುಟಿಗೆ ಹತ್ತಿದ್ದರಲ್ಲಷ್ಟೇ ಇಲ್ಲವೆ, ಗಂಡುಸರಿಗೆ ಪಾಲು....."

" ಸಾಕು ಸುಮ್ಮನಾಗಿರಿ. ಏನು ಚೆಂದ ಅಂತ ಮಾತನಾಡ-ತೀರೋ ! "

" ಬರೀ ಮಾತು ಸೇರುವುದಿಲ್ಲ ನೋಡು ಹೆಂಗುಸರಿಗೆ ! "

" ಆಯ್ತೇನ್ರ ಲೀಲಾ ? ಲಗೂನೆ ಹೊರಡು ತಾಯಿ....ಆನಂದ ಬರುವಷ್ಟರಲ್ಲಿ ಬಂದುಬಿಡೋಣ. ಸೂರ್ಯ ತಾಯಿಯ ಹೊಟ್ಟೆಯಲ್ಲಿ ಸೇರಿದ...."

ನಸು ಬೇಸರದಿಂದ ಕೂಡಿದ ಅತ್ತೆಯ ಈ ಮಾತುಗಳಿಂದ, ಮೇಲೆ ಹೊರಜಗತ್ತಿಗೆ ಬಂದಳು. ಹಾಗೆಯೇ ಜಡವಾದ ಹೆಜ್ಜೆಗಳನ್ನು ಎತ್ತಿಡುತ್ತ ನಡುಮನೆಯಿಂದ ಪಡಸಾಲೆಗೂ ಬಂದಳು. ನಡು ಬಾಗಿಲಿನ ಹೊಸ್ತಿಲನ್ನು ದಾಟುವಾಗೊಮ್ಮೆ ಪತ್ತಲದ ಪದರಿಂದ ತನ್ನ ತುಟಿಗಳನ್ನು ಒರಸಿಕೊಳ್ಳಲಿಕ್ಕೆ ಮರೆಯಲಿಲ್ಲ. ಹಾಗೆಯೇ ಬಲಗೈಯಿಂದ ಮುಡಿದ ಮಲ್ಲಿಗೆಯನ್ನು ಒತ್ತಿ ನೋಡಿಕೊಂಡಳು.

ಮಂದಹಾಸವೊಂದು ಮುಖದಲ್ಲಿ ಮೂಡಿತು. ಆದರಲ್ಲಿ ವಿಷಾದದ ಸೂಕ್ಷ್ಮ ರೇಖೆಯೊಂದು ಇಲ್ಲದಿರಲಿಲ್ಲ.

ತಲೆಬಾಗಿಲ ಹೊಂಬಿದ್ದಳು ಲೀಲೆ; ಜೊತೆಯವರಲ್ಲಿ ಸೇರಿದಳು.

ಅಷ್ಟರಲ್ಲಿ ಎದುರಿಗೆ ಆನಂದ ಬಂದ.

ಮಿಂಚುನೋಟವೊಂದನ್ನು ಆನಂದನತ್ತ ಬೀರಿದಳು ಲೀಲೆ. ದೃಷ್ಟಿಗೆ ದೃಷ್ಟಿ ಓಗೊಡಲಿಲ್ಲ. ಆನಂದನ ಮುಖದಲ್ಲಿ ನಗೆಮುಗು ಅರಳಲಿಲ್ಲ. ಗಂಭೀರವಾಗಿ, ಇತ್ತ ನೋಡಿಯೂ ನೋಡದಂತೆ ಆನಂದ ಮನೆಯೊಳಗೆ ಹೋದ

\+ + + +

ಆನಂದ ಹೂಬಳ್ಳಿಯ ಗಿರಣಿಯೊಂದರಲ್ಲಿ ಕಾರಕೂನನಾಗಿದ್ದ. ಮನೆಯ ಆರ್ಥಿಕ ಸ್ಥಿತಿಯು ತಂದೆಯ ಅಕಸ್ಮಿಕ ಮರಣದಿಂದಾಗಿ ಹದಗೆಟ್ಟಿದ್ದರಿಂದ, ಕಾಲೇಜಿಗೆ ಶರಣುಹೊಡೆದು, ಈ ಕಾರಕೂನಿಕೆಯ ಕೆಲಸಕ್ಕೆ ಸೇರಬೇಕಾಯಿತು ಹಳ್ಳಿಯಲ್ಲಿ ಹೋಗಿ ನಿಂತು, ಹೊಲ-ಮನೆಗಳ ವ್ಯವಸ್ಥೆಯನ್ನು ನೋಡಿಕೊಂಡಿದ್ದರೂ ಸುಖಜೀವನ ಸಾಗುವಂತಿತ್ತು. ಅದನ್ನೆಲ್ಲ ಅವನ ತಾಯಿ ಆಗಾಗ ಒತ್ತಿ ಒತ್ತಿ ಹೇಳುತ್ತಿದ್ದಳು.

ಲೀಲೆಗೆ ಹಳ್ಳಿಯೆಂದರೆ ಆಗದು. ಒಬ್ಬ ದೊಡ್ಡ ಶಿಕ್ಷಣಾಧಿಕಾರಿಯ ಮಗಳಾಗಿ ಬೆಳೆದುದರಿಂದ, ಇಲ್ಲಿಯ ವರೆಗಿನ ಅವಳ ಬೆಳೆವಣಿಗೆಯೆಲ್ಲ ಪಟ್ಟಣಗಳಲ್ಲಿಯೇ ಆಗಿತ್ತು. ಧಾರವಾಡ, ಬೆಳಗಾವಿಗಳಂಥ ಜಿಲ್ಲೆಯ ಮುಖ್ಯ ಸ್ಥಳಗಳಲ್ಲಿಯೇ ಅವಳು ಓಡಾಡಿದ್ದಳು, ಓದಿದ್ದಳು, ಕಲಿತಿದ್ದಳು. ತನ್ನ ಗಂಡನು ಕಾಲೇಜಿನಲ್ಲಿ ಓದಿ, ಯಾವುದಾದರೂ ಒಂದು ದೊಡ್ಡ ಹುದ್ದೆಯಲ್ಲಿ ಬಾಳುವನೆಂದು ಅವಳ ಕಲ್ಪನೆ ಇತ್ತು. ಅನೇಕ ಜನ 'ಪಟ್ಟೀವಾಲಾ' ಗಳಿಗೆ ತಾನು ಕೆಲಸ ಹೇಳಬಹುದೆಂದು ಅವಳು ನಂಬಿದ್ದಳು; ಆದರೆ ಈಗ ಗಿರಣಿಯೊಂದರ ಕ್ಲಾರ್ಕನ ಹೆಂಡತಿಯಾಗಿ, ಪುಟ್ಟಮನೆಯೊಂದರಲ್ಲಿ ಬಾಳುವ ಪ್ರಸಂಗ ಅವಳಿಗೆ ಒದಗಿತ್ತು. ಆದರೂ ಆನಂದನ ಒಲವೊಂದೇ ಅವಳ ಎಲ್ಲ ಅಸಮಾಧಾನಗಳನ್ನು ಮರೆಯಿಸಿ ಸ್ವರ್ಗದ ಸುಖದಲ್ಲಿ ಒಯ್ದು ಓಲಾಡಿಸಲು ಸಮರ್ಥವಾಗಿತ್ತು. ಆದೇ ಅವಳ ಐಶ್ವರ್ಯ.

ಲೀಲೆ–ಆನಂದರ ಮದುವೆಯು ಕೂಡ ಒಂದು ಅಕಸ್ಮಿಕ ಘಟನೆ ಎಂದು ಹೇಳುವಂತೆಯೆ ಕೂಡಿಬಂದಿದ್ದಿತು. ಸಾಹೇಬರು ಸಂಜಾದದ ಮೇಲೆ ಹೋದಾಗ, ಅಲ್ಲಿ ಇಲ್ಲಿ ತಮ್ಮ ಹಿರಿಯ ಮಗಳಿಗಾಗಿ ಮನೆತನ ಒಂದನ್ನು ನೋಡುತ್ತಿದ್ದರು. ತಮ್ಮ ಬೈಕಳಗಿನ ಅಧಿಕಾರಿಗಳಿಗೂ ನೋಡಿ ತಿಳಿಸಲು ಹೇಳುತ್ತಿದ್ದರು ಸಂದರ್ಭದಲ್ಲಿ, ಮಾಧ್ಯಮಿಕ ಶಾಲೆಯ ಮುಖ್ಯಾಧ್ಯಾಪಕರೊಬ್ಬರಿಂದ

ಆನಂದನ ತಂಡೆ-ತಾಯಂದಿರ ಪರಿಚಯ ಸಾಹೇಬರಿಗೆ ಆಯಿತು. ಹಳ್ಳಿಯಲ್ಲಿ ಹತ್ತೆಂಟು ಕೂರಿಗೆ ಹೊಲ, ವಿಶಾಲವಾದ ಮನೆ, ಕಾಲೇಜಿನಲ್ಲಿ ಓದುವ ಹುಡುಗ, ಸುಖದ ಸಂಸಾರ ಇವುಗಳನ್ನು ಕಂಡು, ಸಾಹೇಬರ ಮನಸ್ಸು ಮಗಳನ್ನು ಕೊಡಲು ಸ್ವಲ್ಪ ಆತುರ-ಗೊಂಡಿತು. ಹಳ್ಳಿಯ ರೈತನಾದ ಆನಂದನ ತಂಡೆಗೂ ಸಾಹೇಬರ ಆಪ್ತತ್ವ ಬೆಳೆಸುವುದು ಹಿತಕರವೆನಿಸಿತು. ಆದರೂ ವರನ ತಂಡೆಯಾದ ಅವರು "ಆನಂದ ಒಪ್ಪಿದರೆ ಅಡ್ಡಿಯಿಲ್ಲ..." ಎಂದು ಸಾಹೇಬರಿಗೆ ಹೇಳಿದರು.

ಮಗಳನ್ನು ಆಳಿಯ ಬಂದು ನೋಡುವ ಮೊದಲು, ಅವಳ ಅತ್ತೆ-ಸಾಮಾವಂದಿರಾಗುವವರೇನೋಡಿಕೊಂಡು ಹೋಗಲೆಂದ ಸಾಹೇ-ಬರೂ ಆಗ್ರಹದಿಂದ ಕರೆದರು. ಆ ಮೊದಲೇ ಕಾಲೇಜಿನಲ್ಲಿ ಓದು-ತ್ತಿರುವ ಆನಂದನನ್ನು ಅವರು ಸಹಜ ತಮ್ಮ ದೃಷ್ಟಿಪಥದಲ್ಲಿ ಹಾಯ್ದು ಹೋಗುವಂತೆ ಏರ್ಪಾಡು ಮಾಡಿದ್ದರೆಂಬುದನ್ನು ಇಲ್ಲಿ ಬೇರೆ ಹೇಳಬೇಕಾಗಿಲ್ಲ. ಸಾಹೇಬರ ಅಂತಸ್ತಿಗೆ ತಕ್ಕ ವ್ಯವಸ್ಥೆಯಲ್ಲಿ ಇದ್ದ ವಧೂಪರೀಕ್ಷೆಯ ಶಾಸ್ತ್ರವೂ ಮುಗಿದುಹೋಯಿತು. ಆಗಲೂ ಆನಂದನ ತಾಯಿ ಹೇಳಿದಳು:

"ಈಗಿನ ಕಾಲದ ಹೊಸ ಹುಡುಗರು. ಅವರೇ ನೋಡಿ ಒಪ್ಪಬೇಕು. ನಮ್ಮದೇನು ತಾಯಿ,ಎಷ್ಟು ದಿನದ ಹೋಳಿಗೆಯವರು!"

"ನೀವು ಹೀಗೆಂದರೆ ಹೇಗಾದೀತು.... ? ಬರೀ ಹುಡುಗರಿಗೆ ಏನು ತಿಳಿಯುವುದು? ಕಣ್ಣು-ಮೂಗಿನಿಂದ ಪೆಜ್ಜೊಂದು ಜೆಂದ ಕಂಡರೆ ಆಯಿತವರಿಗೆ.....ನಾವು ಹಿರಿಯರು ಅನುಭವಸ್ಥರು—ಎಲ್ಲವನ್ನೂ ನೋಡಬೇಕಾಗತದಲ್ಲ..."

ಸಾಹೇಬರ ಹೆಂಡತಿ, ಬೀಗರನ್ನು ಕಾರಿನವರೆಗೆ ಕಳಿಸುತ್ತ ಸೂಚಿಸಿದರು.

ಆನಂದ—ಈಗ ತನಗೆ ಮದುವೆ ಬೇಡ, ಬಿ.ಎ. ಆಗುವ ವರೆಗೆ ಲಗ್ನದ ವಿಚಾರವೇ ಇಲ್ಲ—ಎನ್ನುವ, ಸಾಹೇಬರ ಆಗ್ರಹಕ್ಕೂ ತಂಡೆ-ತಾಯಂದಿರ ಒತ್ತಾಯಕ್ಕೂ ಬೇಸಗೆಯ ಬಿಡುವಿನಲ್ಲಿ ಸಾಹೇ-ಬರ ಬಂಗಲೆಯ ವರೆಗೂ ಹೋಗಿ ಬಂದ. ತನಗೆ ತೋರಿಸಿದ ವಧುವನ್ನು ಬಿಟ್ಟು, ಲೀಲೆಯನ್ನು ಮೆಚ್ಚಿದ. ತಿರುಗಿ ಕಾಲೇಜಿಗೆ ಹೋಗುವ ಮುಂಜೆ "ಸಣ್ಣ ಹುಡುಗಿಯಾದರೆ ಅಡ್ಡಿಯಿಲ್ಲ....." ಎಂದು ತಂಡೆ-ತಾಯಂದಿರ ಎದುರಿಗೆ ಹೇಳಿ ಹೋಗಲಿಕ್ಕೂ ಮರೆಯ-ಲಿಲ್ಲ ಆನಂದ.

ಅಕ್ಕನ ಮದುವೆಗೆ ಮುಂಜೆ ತನ್ನ ಮದುವೆಯ ವಿಚಾರವೇ ಇಲ್ಲ—ಎನ್ನುವ ಲೀಲೆ, ಆನಂದನ ಕಾಗದ ತನ್ನ ಹೆಸರಿಗೆ ಬಂದಾಗ ಒಳಗೊಳಗೇ ಸಂತಸಗೊಳ್ಳದೆ ಇರಲಿಲ್ಲ. ಅದಕ್ಕೆ ಉತ್ತರ ಬರೆಯ-ದಿದ್ದರೂ, ಆ ಸಂಗತಿಯನ್ನು ಯಾರ ಮುಂದೆಯೂ ಹೇಳಲಿಲ್ಲ. ಇತ್ತೀಚೆಗೆ ಅಕ್ಕನೊತನೆ ಮೊದಲಿನ ಸಲುಗೆಯೂ ಸಹ ಕಡಿಮೆ-ಯಾಗುತ್ತ ನಡೆಯಿತು. ಅದಕ್ಕೆ ಒಂದರ ಹಿಂದೊಂದು ಬರುವ ಆನಂದನ ಕಾಗದಗಳೇ ಕಾರಣವಾದುವು. ಬರುಬರುತ್ತ ಅಂಜೆ-ಯೂಳೊಬ್ಬ ಅವಳ ಹಿತೈಷಿಯಂತೆ ತೋರತೊಡಗಿದ. ಆತ್ಮೀಯತೆ ಅಕ್ಕನಲ್ಲೂ ಈಗ ಉಳಿದಿರಲಿಲ್ಲ.

ತನ್ನ ತಂಗಿಯಲ್ಲಾದ ಈ ಪರಿವರ್ತನೆಯ ಅರಿವು ಲೀಲೆಯ ಅಕ್ಕನಿಗೆ ಆಗದೆ ಇರಲಿಲ್ಲ. ಮೇಲಾಗಿ ಅವಳಿಗೆ ತನ್ನ ತಂಡೆಯಿಂದ ಆನಂದ ಲೀಲೆಯ ಬೇಡಿಕೆಯನ್ನು ಮುಂದಿಟ್ಟಿರುವನೆಂಬ ಸಂಗತಿಯು ತಿಳಿದಿದ್ದಿತು. "ಅವಳನ್ನಾದರೂ ಒಳ್ಳೆಯದೇ ಆಯಿತು" ಎಂದವಳು ನುಡಿದಿದ್ದಳು. ಆದರೆ ತಂಡೆಯವರು "ನನಗೆ ಈಗ ಅವಳ ಲಗ್ನದ ವಿಚಾರವೇ ಇಲ್ಲ..." ಎಂದು ಸುಮ್ಮನಾಗಿದ್ದರು. ಈ ಮಗಳ ಮುಂದೆ. ಆದರೆ ಒಳಗೊಳಗೇ "ಲೀಲೆಯ ಮದುವೆ ಮೊದಲು ಆದರೂ ತಪ್ಪೇನಿದೆ? ಹುಡುಗನಿಗೆ ಒಳ್ಳೆಯ ಭವಿಷ್ಯವಿದೆ. ನೋಡಲಿಕ್ಕೆ ಸುಂದರ. ಯಾವ ದುರ್ವ್ಯಸನಗಳೂ ಇಲ್ಲ. ತಂಡೆ-ತಾಯಂದಿರಿಗೆ ಒಬ್ಬನೇ ಮಗ. ನಾಳೆ ಒಂದು ವೇಳೆ ಕೆಲಸ ಸಿಕ್ಕದಿದ್ದರೂ ಮಗಳಿಗೆ ತಿನ್ನುಣ್ಣಲಿಕ್ಕೇನೂ ಕೊರತೆಯಿಲ್ಲ. ನಿಜವಾಗಿ ನೋಡಿದರೆ ಆನಂದ ಲೀಲೆಗೇ ತಕ್ಕ ವರ...." ಎಂದುಕೊಳ್ಳುತ್ತಿದ್ದರು. ಆದರೂ ಬೆಳೆದು ನಿಂತ ಹಿರಿಯ ಹುಡುಗಿಯ ಮದುವೆಯ ಚಿಂತೆಯು ಅವರ ಹೃದಯವನ್ನು ಕರಗಸಕ್ಕೆ ಒಡ್ಡಿದ ಕೊರಡನ್ನಾಗಿಸಿತ್ತು. ಕೊನೆಗೆ ಅವರು ಲೀಲೆಯನ್ನು ಆನಂದನಿಗೆ ಕೊಡುವ ನಿರ್ಣಯಕ್ಕೆ ಬಂದರು. ಹಾಗೆ ಅವನಿಗೆ ತಿಳಿಸುವ ಪೂರ್ವದಲ್ಲಿ ಮಗಳ ಮನಸ್ಸನ್ನು ಗಮನಿಸ-ಬೇಕೆಂದು, ಲೀಲೆಯನ್ನು ಹತ್ತಿರ ಕರೆದು ಕೇಳಿದರು:

"ಲೀಲಾ, ನಿನ್ನ ವಿಚಾರವೂ ನಮಗೆ ತಿಳಿಯಬೇಕಲ್ಲ?"

ಲೀಲೆಗೆ ತಂಡೆಯು ಕೇಳುತ್ತಿರುವ ಸಂಗತಿಯ ಕಲ್ಪನೆಯೇ ಮೊದಲು ಆಗದಂತಾಯಿತು. ಹಾಗೆಯೇ ಒಂಟಿಗಾಲಿನ ಮೇಲೆ ತಂಡೆಯ ಎದುರಿಗೆ ನಿಂತಿದ್ದಳು.

"ಅದೇ ಆ ಆನಂದನ ವಿಷಯ. ನಿನಗೆ ಹೇಳಲಿಲ್ಲವೆ,ಅವಳು?" ಎಂದು ಮಾತನ್ನು ಈ ಮಗಳ ಮುಂದೆ ಹೀಗೆ ಮೆಲ್ಲನೆ ಜಾಚಿದರು.

ಲೀಲೆಯ ಹೃದಯ ಪವ್ವನೆ ಹಾರಿತು. ಆನಂದನ ಪತ್ರಗಳ ಸಂಗತಿ ತಂಡೆಗೂ ತಿಳಿದು ಹೋಯಿತೇನೋ—ಎಂದು ಒಂದು ಕ್ಷಣ ಅನುಮಾನ ಉಂಟಾಯಿತು. ಅಷ್ಟರಲ್ಲಿ ತಂಡೆ ಮಾತನ್ನು ಮುಂದು-ವರಿಸಿದರು:

"ಮೊದಲು ನಿನ್ನ ಲಗ್ನದ ಯೋಗಾಯೋಗ ಕೂಡಿ ಬಂದಿದ್ದರೆ ಆಗಲಿ, ಅದರಲ್ಲೇನು?"

ಲೀಲೆಯ ಮುಖ ಈಗ ಜೆಂಬಣ್ಣ ತಳೆಯಿತು. ಲಜ್ಜೆಯಿಂದ ತಲೆ ಬಾಗಿತು, ಬಾಳೆಗೊನೆಯಂತೆ. ಹೆಚ್ಚು ಹೊತ್ತು ಅಲ್ಲಿ ನಿಲ್ಲದೆ ಮೆಲ್ಲನೆ ನಡುಮನೆಗೆ ಸರಿದಳು. ಆಗ ಅವಳ ನಡಿಗೆಯಲ್ಲಿ ಒಂದು ಕುಣಿತವಿತ್ತು.

ಇದು ಅವಳ ತಾಯಿಯ ಗಮನಕ್ಕೆ ಬಾರದೆ ಇರಲಿಲ್ಲ.

ಲೀಲೆಯನ್ನು ನೋಡಲಿಕ್ಕೆಂದು ಅಲ್ಲದಿದ್ದರೂ, ಮದುವೆಗೆ ಮುಂಜೆಯೇ ಆನಂದ ಎರಡು ಸಲ ಅವರ ಮನೆಗೆ ಬಂದು ಹೋದ. ಅಕ್ಕನಿಗೆ ತನ್ನಿಂದ ದ್ರೋಹವಾಯಿತೇನೋ ಎಂದು ಲೀಲೆ, ಮನ-ದಲ್ಲಿದ್ದರೂ ಅಷ್ಟು ಉತ್ಸಾಹವನ್ನೂ ವ್ಯಕ್ತಪಡಿಸಲಿಲ್ಲ.

ತನ್ನ ತಂಗಿಗೆ ಎಂಥ ಅರಿವೆಗಳು ಬೇಕು, ರವಿಕೆ ಯಾವುದಿರ-ಬೇಕು, ಕೆನೆಯ ಹರಳುಗಳ ಬಣ್ಣ ಎಂಥದು?—ಇವೆಲ್ಲವನ್ನೂ ಅಕ್ಕನೇ ಮುಂದಾಗಿ ಸೂಚಿಸಿ, ಮದುವೆಯ ಸಂತೆಯನ್ನೆಲ್ಲ

ಮಾಡಿಸಿದಳು. ಲೀಲೆಗೆ ಆನಂದನ ವಿಷಯಕ್ಕೆ ಒಳ್ಳೊಳ್ಳೆಯ ಪ್ರಸಂಗಗಳನ್ನು ಹೇಳಿ, ಅನುರಾಗ ಹೆಚ್ಚುವಂತೆ ಅಕ್ಕ ಯತ್ನಿಸಿದಳು. ಆಗೆಲ್ಲ ಲೀಲೆಯ ಹೃದಯ ಹಿಗ್ಗಿನಿಂದ ಅಗಲವಾಗುತ್ತಿದ್ದಾದರೂ, ಅಕ್ಕನೊಂದುಕೊಂಡಾಳೆಂದು ಸಂಯಮಿಯಾಗಿರುವಳು. ಸಹಜ ನಗೆಯೊಂದನ್ನು ಬೀರುವಳು.

ಮದುವೆಯ ಹೊತ್ತಿಗೂ ಇದೇ ಸಂಯಮವನ್ನು ಕಾಪಾಡಿಕೊಂಡು ಲೀಲೆ ಆನಂದನ ಕೈಸೇರಿದ್ದಳು.

× × × × ×

ಆನಂದ ಆಫೀಸಿನ ಡ್ರೆಸ್ಸನ್ನು ಕಳಚಿದವನೇ, ಪಲ್ಲಂಗದ ಮೇಲಿನ ಗಾದಿಯ ಸುರುಳಿಯನ್ನು ಬಿಚ್ಚಿ ಉಸ್ಸೆಂದು ಉರುಳಿದ. ತಲೆ ಕಾಯ್ದು ಸಿಡಿಯುತ್ತಿದ್ದಿತು. ಸಂಜೆಯ ಹೊತ್ತಿನಲ್ಲಿ ಸಂಕ್ರಾಂತಿಯ ಎಳ್ಳು—ಬೆಲ್ಲವನು ಮನೆಮನೆಗೂ ಬೀರುತ್ತ ಓಣಿ ಓಣಿ ತಿರುಗುವ ತರುಣಿಯರ ನಗೆ—ಚಿಲ್ಲಾಟಗಳು ಕೇಳಿ ಬಂದಷ್ಟೂ, ಅವನ ಮನಸ್ಸು ಕೆರಳುವುದು. ಸಿಡಿಮಿಡಿಗೊಳ್ಳುವನು. ಹಾಗೆಯೇ ಎದ್ದು, ಜೇಬಿನೊಳಗಿನ ಆ ಕುಸುರೆಳ್ಳಿನ ಜೀಲವನ್ನು ಹೊರಳಿಸಿ, ಹೊರಳಿಸಿ ನೋಡುವ ನೋಡಿದಷ್ಟೂ ಅವನ ಸಿಟ್ಟು ಹೆಚ್ಚುವುದು. ಅದರಲ್ಲೂ ಇಂದು ಅಂಚೆಯಾಳು ಬರುವ ಹೊತ್ತಿಗೆ, ಗೆಳೆಯ ಬೇರೆ ಹತ್ತಿರ ಇದ್ದ. ಅವನೂ ಅಂಚೆಯಿಂದ ಬಂದ ಆ ಕುಸುರೆಳ್ಳಿನ್ನು ನೋಡಿದ್ದ. ಏನೋ ಒಂದು ಅರ್ಥಪೂರ್ಣವಾದ ನಗೆಯೊಂದನ್ನು ಬೀರಿ, ಆನಂದನ ಕೈಗೆ ಇತ್ತಿದ್ದ. ಅವನ ಆ ನಗೆ ಇನ್ನೂ ಆನಂದನ ಮನಸ್ಸನ್ನು ಕೆಣಕುತ್ತಲಿತ್ತು; ಕದಡುತ್ತಲಿತ್ತು.

ಆನಂದ ಮಲಗಿದಲ್ಲಿ ಎದುರಿಗಿನ ಗೋಡೆಗೇನೇ ಲೀಲೆಯ ಭಾವಚಿತ್ರ. ಹಲವು ಸಲ ಅಭಿಮಾನದಿಂದ ಅದನ್ನು ಆನಂದ ಕಂಡಿದ್ದ. ಇಂದು ಅದನ್ನು ನೋಡಿದರೆ ಎಂದಿಲ್ಲದ ಬೇಸರ. ಮುಖದಿರುವಿನುಲಗಿಕೊಂಡ. ಅದರೂ ಒಗೆಗಣ್ಣಿನೆದುರಿಗೆ ಆ ಚಿತ್ರ. ಹಿಂದಿನ ದಾಂಪತ್ಯಜೀವನದ ಒಂದೊಂದೇ ಘಟನೆಗಳು ಅವನ ಒಗೆಗಣ್ಣೆನೆದು ರಿಗೆ ಸುಳಿದು ಹೋಗಹತ್ತಿದುವು.

'ಲೀಲೆ ನನ್ನ ಪ್ರೇಮಪತ್ರಗಳಿಗೆ ಒಂದಕ್ಕೂ ಉತ್ತರ—ಮದುವೆಗೆ ಮುಂಚೆ—ಬರೆದಿರಲಿಲ್ಲ.'

'ಮದುವೆಯ ಪೂರ್ವದಲ್ಲಿ ಮನೆಗೆ ಹೋದರೆ ಎಲ್ಲೆಲ್ಲೋ ಮರೆಯಾಗಿ ಬಿಡುವಳು.'

'ಮದುವೆಯಲ್ಲೂ ಉತ್ಸಾಹದಿಂದ ಇರಲಿಲ್ಲ....'

'ಏನು ಹುಚ್ಚು ನಾನು! ಲೀಲೆ ನನ್ನನ್ನು ಒಲಿದಿರುವಳೆಂದೇ ಭಾವಿಸಿರುವೆ. ಆವಳ ಮನಸ್ಸಾದರೊ....ಎಲ್ಲೆಲ್ಲಿಯೊ....' ಇನ್ನೂ ಆನಂದನ ವಿಚಾರಗಳು ಎಲ್ಲಿಯ ವರೆಗೆ ಮುಂದುವರಿಯುತ್ತಿದ್ದುವೋ ಏನೋ! ಅಷ್ಟರಲ್ಲಿ ಲೀಲೆ ಸರಿಕರೊಡನೆ ನಗುತ್ತ ಕೆಲೆಯುತ್ತ ಮನೆಯನ್ನು ಪ್ರವೇಶಿಸಿದಳು. ಇಂದಿನ ಅವಳ ಸಿಂಗಾರ ಆನಂದನಿಗೆ ಅಸಹ್ಯವೆನಿಸಿತು. ಕಣ್ಣುಗಳು ಕೆಂಪಾದುವು.

ಅತ್ತೆಯ ಕಣ್ಣು ತಪ್ಪಿಸಿ, ಲೀಲೆ ಆನಂದನ ಕೋಣೆಯನ್ನು ಪ್ರವೇಶಿಸಿದಳು. ಪತಿಗೆ ಸಂಕ್ರಾಂತಿಯ ಕುಸುರೆಳ್ಳನ್ನು ಕೊಡಬೇಕಾಗಿತ್ತವಳಿಗೆ. ಗುಡಿಗೆ ಹೋದರೂ ಅವಳ ಮನಸ್ಸೆಲ್ಲ ಆನಂದನಲ್ಲಿಯೇ!

"ಇಂದು ಮನೆಗೆ ಬರಲು ತಡ ಮಾಡಿದಿರಲ್ಲ.....?"

ಉತ್ಸಾಹದ ಸ್ವರದಲ್ಲಿಯೇ ಲೀಲೆ, ಕೋಣೆಗೆ ಕಾಲಿಕ್ಕುತ್ತ ಕೇಳಿದಳು.

"..... ...."

"ಟಪಾಲಿನ ದಾರೀ ಕಾಯುತ್ತ ಕುಳಿತಿರೇನೋ?"

"ನಿನ್ನದೇನಾದರೂ ಅಂಚೆಗೆ ಬರುವುದಿತ್ತೇ?"

ಮಾತಿನೊಳಗಿನ ಆನಂದನ ಇಂದಿನ ವಿಚಿತ್ರಧ್ವನಿಯಿಂದ ಲೀಲೆ ಕ್ಷಣ ಹೊತ್ತು ಚಮಕಿತಳಾದಳು.

ಆನಂದ ಮಾತಿನೊಡನೆ ಎದ್ದು ಬಂದ. ಅವಳ ಕೈಯನ್ನು ಹಿಡಿದು "ಮನೆಯ ವಿಳಾಸ ಕೊಡುವುದೇ ನಿನ್ನ ಇಷ್ಟವಲ್ಲವೆ?"

ಎಂದು ಕ್ರೂರವಾದ ನೋಟವೊಂದನ್ನು ಲೀಲೆಯ ಮುಖಕ್ಕೆ ತಿವಿದು ಕೇಳಿದ.

ಆನಂದನ ಆ ಹಿಡಿತದ ಬಿಗಿತವನ್ನೂ ಬಿರುಸನ್ನೂ ಲೀಲೆ ಅನುಭವಿಸುತ್ತಿದ್ದುದು ಇದೇ ಮೊದಲ ಸಲ. ಅದರಿಂದ ಅವಳ ತಲೆ ತಿರುಗಿದಂತಾಗಿ ತಟ್ಟನೆ ನೆಲಕ್ಕೆ ಕುಳಿತಳು.

ಅಂದಿನಿಂದ ಮನೆಯ ವಾತಾವರಣವೇ ಬದಲಿಸಿಹೋಯಿತು. ಆನಂದನ ಮುಖದಲ್ಲಿ ದಿನಕ್ಕೆ ಹದಿನಾರು ಗಂಟುಗಳು. ಯಾವುದಕ್ಕೂ ಮುಂಗೋಪ. ಹೆಂಡತಿಯ ಮಾತೆಂದರೆ ಸೇರದು. ಎದುರಿಗೆ ಸುಳಿದರೆ ಸಿಟ್ಟು ಬೆಂಕಿ! ಅಕಾರಣವಾಗಿ ಹಲವು ಸಲ ಕೊಂಕು ನುಡಿಯುವನು. ಏನೇನೋ ಮಾತು ತೆಗೆದು ಹೊಡೆಯುವನು. ಇದ್ದೊಬ್ಬ ಮಗನ ಈ ಜೀವನಚಿತ್ರವನ್ನು ಕಾಣಲಾಗದೆ ತಾಯಿ ಬೇಸತ್ತು ಹಳ್ಳಿಗೆ ಹೋಗಿಬಿಟ್ಟಳು. ಆ ಮೇಲೇನು? ಆನಂದನೇ ಮನೆಗೆ ಸರ್ವಾಧಿಕಾರಿ ದಿನವೂ ಲೀಲೆಗೆ ಶಿಕ್ಷೆ ತಪ್ಪಿದ್ದಿಲ್ಲ.

"ಬೆಳಗಾಂವಿಯಲ್ಲಿ ಯಾವ ಹಾಯ್‌ಸ್ಕೂಲಿಗೆ ಹೋಗುತ್ತ ಇದ್ದಿ?"

"ಧಾರವಾಡದಲ್ಲಿ ನಿಮ್ಮ ತಾಯಿ ಎಷ್ಟು ದಿನ ಇದ್ದರು?"

"ಧಾರವಾಡದಲ್ಲಿ ನಿನ್ನವರು ಯಾರಿದ್ದಾರೆ?"

"ಹುಬ್ಬಳ್ಳಿ ಬಿಟ್ಟು ಹಳ್ಳಿಗೆ ಬರಲಿಕ್ಕೆ ಒಪ್ಪಲಿಲ್ಲವೇಕೆ?"

ಆನಂದನ ಇಂಥ ಪ್ರಶ್ನೆಗಳಿಗೆ ಲೀಲೆ ಉತ್ತರ ಕೊಟ್ಟು ಕೊಟ್ಟು ಬೇಸತ್ತಳು. ಯಾವುದರಿಂದಲೂ ಆನನಿಗೆ ಸಮಾಧಾನವಿಲ್ಲ. ಗಂಡನ ಮನಸ್ಸಿನ ಹುಳಿ ಹೆಂಡತಿಗೆ ತಿರಿವಾಗದೆ ಇರಲಿಲ್ಲ. ಆದರೆ ಅದನ್ನು ಕಳೆಯುವ ಉಪಾಯಗಾಣದ್ದಕ್ಕೆ ಒಳಗೊಳಗೇ ಕೊರಗತೊಡಗಿದಳು. ಬಂದ ಕಷ್ಟವನ್ನು ಸುಮ್ಮನೆ ಸಹಿಸಹತ್ತಿದಳು. ಇದರಿಂದ ಆನಂದ ಇನ್ನಷ್ಟು ಕೆರಳಿದ. ಅವನ ಸ್ವಭಾವವೂ ದಿನದಿನಕ್ಕೆ ವಿಚಿತ್ರವಾಗುತ್ತ ನಡೆಯಿತು.

ಒಂದೆರಡು ಸಲ ತಂದೆ ಮಗಳ ಮನೆಗೆ ಬಂದರು. ಮಗಳ ಸಂಸಾರ ಸರಿಯಾಗಿಲ್ಲವೆಂದು ತಿಳಿದರು. ಕಾರಣ ತಿಳಿಯಲಿಲ್ಲ. ಕೊರಗುತ್ತ ತೆರಳಿದರು. ಚಿಕ್ಕ ಮಗಳು ಲೀಲೆ ಇಲ್ಲದೆ, ಹಿರಿಯ ಮಗಳ ಮದುವೆಯನ್ನೂ ಅವರು ಮುಗಿಸಬೇಕಾಯಿತು. ಆನಂದ-

ನನ್ನು ಕರೆಯಿಸಿಕೊಳ್ಳುವುದೆಂತೂ ದೂರವೇ ಉಳಿಯಿತು. ಅಣ್ಣ ಬಂದ ತಂಗಿಯ ಹತ್ತಿರ ಎರಡು ದಿನ ನಿಂತು ಹೋದ. ಆದರೆ ಯಾರಿಗೂ ಸೌಖ್ಯವಿಲ್ಲ. ಲೀಲೆ ಅಣ್ಣನ ಮುಂದೆ ಪುಟ ಎರಡು ಮಾತಾಡಲಿಲ್ಲ. ಆನಂದ ಮಾತನಾಡಿಸಲಿಲ್ಲ. ಆನಂದ ಒಬ್ಬೊಬ್ಬರ ಬೀಗನಿಗೆ ಏನೇನೋ ಅವೇಶದಲ್ಲಿ ಹೇಳಬೇಕೆನ್ನುವ : 'ಇನ್ನೂ ಸರಿಯಾದ ಹೊತ್ತು ಬಂದಿಲ್ಲ'— ಎಂದುಕೊಂಡು ಸುಮ್ಮನಾಗಿ ಬಿಡುವ ಅಸಹ್ಯದೃಷ್ಟಿಯಿಂದ ಅಪ್ಪನನ್ನು ಕಾಣುವನು. 'ಇನರೆಲ್ಲರದೂ ಇವಳಿಗೆ ಸವಲತ್ತು....!' ಎಂದು ಹಲ್ಲು ತಿನ್ನುವನು. ದವಡೆ ಕಚ್ಚುವನು.

ಮಗಳ ಕಷ್ಟವನ್ನು ನೆನೆದು ತಾಯಿ ತಂಗರಿಗೆ ಲೀಲೆಯನ್ನು ಕರೆದಳು. ಮಗಳೇ ಬರಲಿಕ್ಕೆ ಒಪ್ಪಲಿಲ್ಲ ಮಾವ ಹಲವು ಸಲ ಅಳಿಯನಿಗೆ ಲೀಲೆಯೊಡನೆ ಬರಲಿಕ್ಕೆ ಆಗ್ರಹ ಮಾಡಿ ಸೋತು ಸುಣ್ಣಾದರು. ಆನಂದನ ಮನಸ್ಸೇನು ಒಲಿಯಲಿಲ್ಲ. 'ಹಳ್ಳಿಯ ಒಕ್ಕಲಿಗರ ಹುಡುಗ! ಹುಟ್ಟಾ ಸುಸಂಸ್ಕೃತನಲ್ಲ....ಒರಟು ಸ್ವಭಾವದವ....ನನಗೆ ಮುಂಚೆಯೇ ಗೊತ್ತಾಗಲಿಲ್ಲ.....ಮಗಳ ಬಾಳನ್ನು ಹಾಳು ಮಾಡಿದೆ.' ಎಂದು ಒಳಗೊಳಗೇ ಕಣ್ಣೀರುಗರೆದರು, ಸಾಹೇಬರು. ಕೊನೆಗೆ ತಮ್ಮ ಹೋಗಿ, ಹಟ ಹಿಡಿದು, ಅಕ್ಕನನ್ನು ಈ ಸಲ ದೀಪಾವಳಿಗೆ ಬೆಳಗಾಂವಿಗೆ ಕರೆದುಕೊಂಡೇ ಬಂದ. ಅದೇಕೋ ಏನೋ, ಆನಂದನೂ ಈ ಸಲ ಲೀಲೆ, ತವರುಮನೆಗೆ ಹೋಗಲು ಒಪ್ಪಿದ. ತಾನೊಬ್ಬನೇ ಹುಬ್ಬಳ್ಳಿಯಲ್ಲಿ ಇರುವುದಾಗಿ ಹೇಳಿದ.

ಲೀಲೆ ಮದುವೆಯಾದ ಮೇಲೆ ಮೊದಲನೆಯ ಸಲ ತವರುಮನೆಗೆ ಬಂದಳು. ತಿರುಗಿ ಹುಬ್ಬಳ್ಳಿಗೆ ಹೋಗುವೆನೋ ಇಲ್ಲವೋ ಎಂಬ ಸಂಶಯದಿಂದಲೇ ಬಂದಳು!

* * * *

ಲೀಲೆಯ ತಂದೆ ಈಗ ಜಿಲ್ಲಾ ಶಿಕ್ಷಣಾಧಿಕಾರಿಗಳು. ಬಹುದಿನಗಳಿಂದ ಬೆಳಗಾಂವಿಯಲ್ಲಿಯೇ ವಾಸಿಸುತ್ತಿದ್ದರು. ಅದಕ್ಕೂ ಪೂರ್ವದಲ್ಲಿ ಅಲ್ಲಿಯ ಸರಕಾರೀ ಹಾಯ್‌ಸ್ಕೂಲಿನಲ್ಲಿ ಹೆಡ್‌ಮಾಸ್ತರರಾಗಿಯೂ ಕೆಲಸ ಮಾಡಿದ್ದರು. ಇದರಿಂದಾಗಿ ಬಹು ಜನರಿಗೆ ಬೇಕಾಗಿದ್ದರು. ಲೀಲೆಯ ವಿದ್ಯಾಭ್ಯಾಸದ ಬಹುಭಾಗವೆಲ್ಲ ಅದೇ ಊರಲ್ಲಿ ಕಳೆದಿದ್ದಿತು. ಅದರಿಂದ ಅವಳಿಗೆ ಊರಲ್ಲೆಲ್ಲ ಗೆಳತಿಯರು. ಸಾಹೇಬರ ಮಗಳೆಂದರೆ ಹಲವರಲ್ಲಿ ಗೌರವ ಆದರಗಳು. ಸಾಹೇಬರ ಮನೆಯವರಿಗೂ ಲೀಲೆಗೂ ದೀಪಾವಳಿಯಲ್ಲಿ ಹಲವರಿಂದ ಫಲಾಹಾರಕ್ಕೆ ಆಹ್ವಾನ. ಸಾಹೇಬರಿಗಂತೂ ಬಿಡುವೇ ಇಲ್ಲ. ಲೀಲೆಗೆ ಅದಕ್ಕೂ ಹೆಚ್ಚು. ನುಂಚಾನೆ ಮೂರು ಮನೆಗಳಲ್ಲಿ ಫಲಾಹಾರವಾದರೆ ಮಧ್ಯಾಹ್ನ ಮತ್ತಾರು ಮನೆಗಳಲ್ಲಿ ಚಹ, ತಿನಿಸು! ಅದರಲ್ಲೂ ಬಹುದಿನಗಳ ಮೇಲೆ ತವರಿಗೆ ಬಂದ ಲೀಲೆ, ಅನೇಕ ಗೆಳತಿಯರನ್ನು ಕಾಣುವವಳು ಬೇರೆ. ಅವಳನ್ನು ಕಾಣುವವರು, ಕರೆಯಿಸುವವರು ಹಲವರು. ಇದರಿಂದಾಗಿ ಲೀಲೆಯ ನೈಮನಗಳೆಲ್ಲ ನಾಲ್ಕು ದಿನಗಳಲ್ಲಿ ತುಂಬಿ ಬಂದುವು. ಹೂಬಳ್ಳಿಯ ಬಾಡಿದ ಮೊಗದ ಲೀಲಾಮೊಗ್ಗೆಯು ಲೀಲಾಕುಸುಮ ಇದುವೆ?— ಎಂದು ನೋಡಿದವರೆಲ್ಲ ಆಶ್ಚರಿಪಡುವಂತೆ ಇಲ್ಲಿ ಇದ್ದಳು ಲೀಲೆ. ಮಗಳು ಸದ್ಯ ಉಲ್ಲಾಸವಾಗಿ ಇರುವಳು, ಇಷ್ಟೇ ಸಾಕೆಂದು ತಂದೆ-ತಾಯಂದಿರೂ ಆನಂದದಿಂದ ಇದ್ದರು. ಅವಳಿಗೆ ಸಂಪೂರ್ಣ ಸ್ವಾತಂತ್ರ್ಯವನ್ನೂ ಕೊಟ್ಟಿದ್ದರು.

ಇಂದು ಧಾರ್ಮಿಕ ಶುದ್ಧ ಪ್ರತಿಪದೆ. ನಗರದಲ್ಲೆಲ್ಲ ದೀಪೋತ್ಸವ. ದೀಪೋತ್ಸವವನ್ನೂ ನೋಡಿದಂತಾಯಿತು, ಊರಲ್ಲಿ ಗೆಳತಿಯೊಬ್ಬಳಲ್ಲಿ ಫಲಾಹಾರಕ್ಕೂ ಹೋದಂತಾಯಿತೆಂದು ಲೀಲೆ, ಸಾಯಂಕಾಲ ಬೇಗನೆ ಮನೆಯಿಂದ ಹೊರಬಿದ್ದಳು. ಹೆಬ್ಬ, ಹೊಸ ಅರಿವೆಗಳನ್ನು ತೊಟ್ಟು ಅವಳು ದಿನಕ್ಕಿಂತ ಸ್ವಲ್ಪ ಸುಂದರಿಯಾಗಿಯೇ ತೋರುತ್ತಿದ್ದಳು. ಯಾರೂ ಒಂದು ಕ್ಷಣ ತಡೆದು ನಿಂತು, ನೋಡುವಂಥ ರೂಪು ಇವಳದು. ಅದಕ್ಕೆ ಹಬ್ಬದ ಬೆಡಗಿನ ಬಟ್ಟೆಗಳ ಒಪ್ಪ ಬೇರೆ. ಲೀಲೆ ಲೀಲೆಯಿಂದ ಊರಲ್ಲಿ ನಡೆದಳು. ದೀಪಾವಳಿಯ ಆ ಬೆಳಕಿನಲ್ಲಿ ಲೀಲೆ ಸುರಸುಂದರಿಯಾಗಿ ಕಂಡಳು.

ನೆಟ್ಟಗೆ ಇವಳು ಹೋದುದು ಮೊದಲು ವಿಮಲೆಯ ಮನೆಗೆ. ಅಲ್ಲಿ ಚಹಪತಕ್ಕೊಂಡ ನಂತರನೇ ಮುಂದಿನ ತಿರುಗಾಟ, ವಿಮಲೆಯ ಜೊತೆಯಲ್ಲಿ—ಇದು ಮುಂಚಿನ ದಿನ ಗೊತ್ತುಮಾಡಿದ ಕಾರ್ಯಕ್ರಮ. ಹೊಸ್ತಿಲಲ್ಲಿ ಕಾಲಿಡುತ್ತಲೇ,

"ವಿಮಲಾ!"

ಎಂದು ಉತ್ಸಾಹಿತ ಸ್ವರದಲ್ಲಿ ಕೂಗಿದಳು ಲೀಲಾ.

"ಲೀಲಾ! ಬಾ; ಸರಿಯಾದ ಹೊತ್ತಿಗೇ ಬಂದೆಯಲ್ಲ! ಏನು ಮುಂಚಿತ ನಂತನಾಡಿಕೊಂಡಿದ್ದಿರೊ!"

ಎಂದು ವಿಮಲೆಯ ಅಣ್ಣ ಎದ್ದು ಅತ್ಯೀಯತೆಯಿಂದ ಸ್ವಾಗತಿಸಿದ.

'ಅಹುದು' ಎಂಬ ಭಾವದ ಮುಗುಳುನಗೆಯೊಂದನ್ನು ಬೀರಿ, ಗೋಣನ್ನು ಕೊಂಕಿಸಿ ಉಲ್ಲಾಸದಿಂದ ಮುಂದೆ ಹೆಜ್ಜೆ ಇಟ್ಟಾಗಲೇ ಅವಳು ಕಂಡುದು, ಆನಂದನನ್ನು!

ಇಬ್ಬರ ದೃಷ್ಟಿಗಳೂ ಒಂದಾದುವು. ನೋಡ ಆವರಿಸಿತು. ಗುಡುಗು ಹುಟ್ಟಿತು. ಮಿಂಚೂ ಹೊಡೆಯಿತು.

"ನಡೆ ಮನೆಗೆ!"

ಗುಡುಗಿದ ಆನಂದ. ಧ್ವನಿ ಸಿಟ್ಟಿನಿಂದ ತಾರಸ್ವರಕ್ಕೆ ಏರಿತ್ತು. ಒಂದು ಕ್ಷಣ ದಿಙ್ಮೂಢಳಾಗಿ ನಿಂತಳು ಲೀಲೆ.

"ಹೂಂ! ತಿರುಗು!"

ಆನಂದ ಆಜ್ಞಾಪಿಸಿದ:

"ನಡೆ; ಕಲೆ ಬೋಳಿಸಿ ಕೈಯಲ್ಲಿ ಕೊಡುವೆ!..... ಹ....ಲ....ಕ....ಟ್.... ಎಂದು ಹಲ್ಲು ಕಡಿದು ಎದ್ದ.

ಗರ್ರನೆ ತಿರುಗಿ ಲೀಲೆ ನಡೆದಳು. ಧಡಧಡ ಜಿನ್ನಿಟ್ಟಿದ ಆನಂದ.

ಚಹದ ಎರಡು ಕಪ್ಪುಗಳನ್ನು ಹಿಡಿದುಕೊಂಡು ಪಡಸಾಲೆಗೆ ಬಂದ ವಿಮಲೆ, ಬೆರಗಿನಿಂದ ಇವನ್ನೇ ಕಂಡಳು. ಆನಂದ-ಲೀಲೆಯರ ಭೇಟ್ಯೆಯ ಚಮತ್ಕೃತಿಯನ್ನು ಕಾಣಬಯಸಿದ ಆ ಅಣ್ಣ-ತಂಗಿಯರು ಬೆಪ್ಪಾಗಿ ನಿಂತರು.!

ಮನೆಯನ್ನು ಸೇರುವಷ್ಟರಲ್ಲಿ ಲೀಲೆಯ ಕಪ್ಪೋಲಗಳಲ್ಲಿ ಬೆರೆಳುಗಳು ಮೂಡಿದ್ದುವು; ಕಂಬನಿಗಳು ಸರಾಗವಾಗಿ ಕೆಳಗಿಳಿದು ಬರುವಂತೇನೂ ಇರಲಿಲ್ಲ. ಮುಡಿ ಜೆಲ್ಲಾಪಿಲ್ಲಿಯಾಗಿತ್ತು. ತಲೆ ಕೆದರಿತ್ತು.

ಹಬ್ಬದ ಹರುಷದಲ್ಲಿ ಎಲ್ಲೆಲ್ಲಿಯೋ ಹೋಗಿದ್ದ ಲೀಲೆಯ ಮನೆಯವರೆಲ್ಲ, ಸ್ವಲ್ಪ ಹೊತ್ತಿನಲ್ಲಿ ವಾರ್ತೆ ತಿಳಿದು ಮನೆ ಸೇರಿದರು. ಆನಂದ ಹುಲಿಯಂತೆ ಎಲ್ಲರನ್ನೂ ಹೆದರಿಸಿದ. ಕಣ್ಣುಗಳು ಕಾಯ್ದು ಕೆಂಡದಂತಾಗಿದ್ದುವು. ತುಟಿಗಳು ಅದುರುತ್ತಿದ್ದುವು.

"ಇದಕ್ಕೇ ತವರುಮನೆಗೆ ಕರೆಯಿಸಿಕೊಂಡದ್ದೋ ?"

"ಧಾರವಾಡದಲ್ಲಿ ಇವಳಿಗೆ ಯಾರೂ ಇಲ್ಲವಂತೆ !"

"ಈಗ ಹೇಗೆ ಹೊರಬಿದ್ದ ಧಾರವಾಡದ ಗೆಣೆಯ ?"

"ಹಿಂದಿನ ಸ್ನೇಹಚ್ಚಿ ನನ್ನನ್ನು ಬೇರೆ ದಾರಿಯಲ್ಲಿ ಇಳಿಸಿಕೊಂಡ! ಇಂದು ನಾನು ಬಂದಿರದಿದ್ದರೆ ಇವರ ದೀಪಾವಳಿ ಸರಾಗವಾಗಿ ಸಾಗುತ್ತಿತ್ತು ! "

"ಎಲ್ಲ....ಪೂರ್ವಸಂಕೇತ .....ನಾನು ಬಂದದ್ದು ಶಿವಪೂಜೆಯಲ್ಲಿ ಕರಡಿ ಬಿಟ್ಟಂತಾಯಿತು ... "

ಈ ಆನಂದನ ಬಡಬಡಿಕೆಗಳನ್ನು ಕೇಳಿ, ಎಲ್ಲರೂ ನೊಂದುಕೊಂಡರು. ತುಂಬ ಗಾಬರಿಯಾದರು. ತಾಯಿ ಬಿಕ್ಕಿ ಬಿಕ್ಕಿ ಅಳುತ್ತಿರುವ ಮಗಳ ಹತ್ತಿರ ಬಂದು,

"ಸಂಜೆ ಯಾರಲ್ಲಿ ಹೋಗಿದ್ದೆ ಮಗೂ?" ಎಂದು ಕಳವಳದಿಂದ ಕೇಳಿದಳು.

"ಎತ್ತಿ ಮೊಲೆಯುಣಿಸು ನಿನ್ನ ಕಂದವ್ವನಿಗೆ...." ಕೊಂಕು ನುಡಿದ ಆನಂದ.

"ವಿ.....ಮ.....ಲೆ... ...."

ಬಿಕ್ಕುತ್ತ ಉಚ್ಚರಿಸಿದಳು ಲೀಲೆ.

ಈ ಮೂರಕ್ಷರಗಳನ್ನು ಕೇಳಿದೊಡನೆಯೇ ಸಾಹೇಬರ ತಲೆಯಲ್ಲಿ ತಟ್ಟನೆ ಪ್ರಕಾಶ ಬಿತ್ತು. ಧಾರವಾಡದ ಕಾಲೇಜಿನಲ್ಲಿ ಓದುತ್ತಿರುವ ವಿಜಯ—ವಿಮಲೆಯ ಅಣ್ಣ—ನ ಚಿತ್ರ ಅವರ ಬಗೆಗಣ್ಣಿನೆದುರಿಗೆ ಸುಳಿಯಿತು. ಅದರೊಡನೆಯೇ ಮಗಳ ಚಾರಿತ್ರ್ಯದ ವಿಷಯದಲ್ಲಿ ಅವರಲ್ಲಿ ಆತ್ಮವಿಶ್ವಾಸ ಮೂಡಿತು. ಗಂಭೀರವಾಗಿಯೇ ಅಳಿಯನ ಕೈ ಹಿಡಿದು, ಕುರ್ಚಿಯೊಂದರಲ್ಲಿ ಕೂಡಿಸುತ್ತ ಕೇಳಿದರು:

"ವಿಜಯ ನಿಮ್ಮ ಸ್ನೇಹಿತನೋ ?"

"ಹೂಂ! ಇದ್ದ..... "

ಘೂತ್ಕರಿಸಿದ ಆನಂದ.

"ಹುಬ್ಬಳ್ಳಿಯಲ್ಲಿ ಯಾವಾಗಲಾದರೂ ಮನೆಗೆ ಬಂದಿದ್ದನೆ.?"

ಅನುಭವಿಕ ನ್ಯಾಯಾಧೀಶರಂತೆ ಸಾಹೇಬರ ಪ್ರಶ್ನೆಯಿತ್ತು.

"ಇಲ್ಲಿ ನೋಡಿ ಸಾಕ್ಷಿ! "

ತುಂಬಿದ ನದಿಯ ಅಣೆಕಟ್ಟು ಒಮ್ಮೆಲೇ ಒಡೆಯುವಂತೆ ಗದ್ದರಿಸಿ, ಕೋಟಿನ ಒಳಜೇಬಿನೊಳಗಿಂದ ಒಂದು ವಸ್ತುವನ್ನು ಹೊರಗೆ ತೆಗೆದು, ಮೇಜಿನ ಮೇಲೆ ಒಗೆದ ಆನಂದ. ಸ್ವಲ್ಪ ಹಳೆಯ ಕೋಟಾಗಿದ್ದರೆ ಆ ರಭಸಕ್ಕೆ ಮೈಯಿಂದ ಕಳಚಿಯೇ ಬಂದು ಬಿಡುತ್ತಿದ್ದಿತೇನೋ !

ಸಾಹೇಬರು ಅದನ್ನು ಕೈಗೆತ್ತಿಕೊಂಡರು. ಮನೆಯವರೆಲ್ಲ ನೆರೆದರು.

ಜಿಪುಣ ನಿಧಿಯನ್ನು ಇನ್ನೊಬ್ಬರ ಕೈಗೆ ಒಪ್ಪಿಸಿ ಕುಳಿತಂತೆ ಆನಂದ ಕುಳಿತಿದ್ದ

ಆದರೆ ಅದರಿಂದ ಯಾರಿಗೂ ಏನೂ ಅರ್ಥವಾಗಲಿಲ್ಲ !

ಒಂದೆರಡು ನಿಮಿಷಗಳು ಉರುಳಿದುವು.

ಎಲ್ಲರೂ ನೀರವ, ನಿಃಶಬ್ದ.

ಆನಂದನ ಮುಖದಲ್ಲಿ ವಿಜಯ ಮೂಡಿದಂತಾಯಿತು. ತನ್ನ ಕರ್ತವ್ಯ ತೀರಿತೆಂದುಕೊಂಡನೇನೋ ! ತಟ್ಟನೆ ಎದ್ದ.

ಲೀಲೆಯ ತಮ್ಮ, ವಿದ್ಯುದ್ದೀಪದ ಗುಂಡಿಯೊಂದನ್ನು ಒತ್ತಿದ. ಆ ಕೋಣೆಯೊಳಗಿನ ಇನ್ನೊಂದು ದೊಡ್ಡ ದೀಪ ಝಗ್ಗನೆ ಬೆಳಗಿತು. ಅದರೊಡನೆಯೇ,

"ಇದು ನಾನು ಅಕ್ಕನಿಗೆ ಕಳಿಸಿದ ಸಕ್ರಾಂತಿಯ ಕುಸುರೆಳ್ಳು!" ಎಂದು ಅವನು ಉದ್ಗರಿಸಿದ :

ಹಾಗೆಯೇ ಮುಂದುವರಿದು "ನಾವು ಗೆಳೆಯರೆಲ್ಲ ಹಂಪೆಯ ಪ್ರವಾಸಕ್ಕೆ ಆಗ ಹೋಗಿರಲಿಲ್ಲವೆ ? ಆಗ ಬರುವಾಗ ಧಾರವಾಡದಲ್ಲಿ ಇಳಿದಿದ್ದೆವು, ಒಕ್ಕಲತನ ಕಾಲೇಜ ನೋಡಲಿಕ್ಕೆ. ಅಂದೇ ನಾನಿದನ್ನು ಅವಸರದಲ್ಲಿ ಅಂಚೆಗೆ ಹಾಕಿದ್ದು ...ಈ ವಿಳಾಸ ನಾನು ಬರೆದದ್ದೇ...."

ಸ್ವಲ್ಪ ತಡೆದು ಹೇಳಿದ, :

"ಲೀಲಕ್ಕಾ ! ಮೇಜಿನ ಮೇಲಿನ ನನ್ನ ಡಾಯರಿ ತಾ....! ಭಾವನಿಗೆ ತೋರಿಸೋಣ. ಅಂದು ನಿಮ್ಮಿಬ್ಬರ ಹೆಸರಿನಿಂದ ಒಂದಾಣೆ ಖರ್ಚು ಬಿದ್ದಿದೆ.... "

ಲೀಲೆ ಲೀಲೆಗೆಂಬಂತೆ ತಟ್ಟನೆದ್ದಳು. ಬಾಯಲ್ಲಿ: "ದೇವಾ ನೀನೇ ಪ್ರಾಣವು ! ನೀನೇ ತ್ರಾಣವು ... " ಎಂದು ಗುಣಗುಣಿಸುತ್ತಿದ್ದಳು. ಅವಳ ಹೃದಯಜ್ಯೋತಿ ತಿಗುಗಿ ಹೊತ್ತಿದಂತಾಗಿದ್ದಿತು.

ಅಂದಿನ ಮಾವನ ಮನೆಯ ದೀಪಾವಳಿಯ ಇರುಳು ಆನಂದನ ಹೃದಯವನ್ನು ಬೆಳಗಿಸಿತು.

ಎಳ್ಳು-ಬೆಲ್ಲದ ಸ್ನೇಹವನ್ನು ಕುಸುರೆಳ್ಳು ಅದಾಗಲೇ ಬೀರಿದ್ದಿತು.

ಭಾವಬಿದಿಗೆಯ ಬೆಳಗಿನಲ್ಲಿ ಆನಂದ ಹೊಸ ಅಳಿಯನಾಗಿದ್ದ. ಲೀಲಾನಂದನಾಗಿದ್ದ.

ಬಂತು ಶ್ರಾವಣ!

(ಗೀತರೂಪಕವು)

ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

ನಿರೂಪಕ :

ಆಷಾಢಮಾಸದ ಕೊನೆಯ ದಿನ. ರಾತ್ರಿಯ ಕೊನೆಯ ಯಾಮದ ಅರ್ಧಭಾಗ ಕಳೆದಿದೆ.

(ನುಂಜಾವದ ಕೋಳಿಗಳ ಕೂಗು. ಎಚ್ಚತ್ತ ಹಕ್ಕಿಗಳ ಚಟುವಟಿಕೆ-ಕಿಲಕಿಲಾಟದ ಧ್ವನಿ.)

ವೃಂದಗೀತ :

(ಉದಯಕಾಲೋಚಿತ ರಾಗದಲ್ಲಿ)

ಏಳು ಶ್ರಾವಣರಾಜ, ಏಳು ಭೂವನದೋಜ
ಏಳು ಜೀವನತೇಜ, ಕಾಲಸುರಭೂಜ.... !
ಪಡುಗಡಲು ನಿನಗೆಂದೆ ಪಡೆದಿಹುದು ಜಡನೋಡ
ನಡುಬಾನಿಗವನು ಎಳೆತರುವರಾರೋ !
ಘೋಡವಿತಾಯಿಯು ನೋಡುತಿಹಳು ನಿನ್ನೆಚ್ಚರವ
ಬಿಡು ನಿದ್ದೆಯನ್ನೀಗ, ನಿನ್ನಿರವ ತೋರೋ !
ಏಳು ಶ್ರಾವಣರಾಜ, ಏಳು ಭೂವನದೋಜ,
ಏಳು ಜೀವನತೇಜ ಕಾಲಸುರಭೂಜ !

(ಮತ್ತೆ ಮತ್ತೆ ಕೋಳಿಗಳ ಕೂಗು. ಬೆಳಗಿನ ಗಾಳಿ—ಮಳೆಯ ಸಳಕುಗಳ ಸಪ್ಪಳ)

ಶ್ರಾವಣ :

(ಗೆಜ್ಜೆಗಳ ಗತಿಯೊಂದಿಗೆ ಕುಣಿಕುಣಿಯುತ್ತ.)

ಎದ್ದೆನಿದೋ ಎದ್ದೆನಿದೋ ಸಿದ್ಧಿಪಡೆದು ಬಂದೆ....
ನನ್ನ ಕಾರ್ಯದರಿಕೆಯೊಳೇ ಇಳೆಯಲಿಳಿದು ನಿಂದೆ !
ಆಷಾಢನ ಆಳಿಕೆಯಲಿ ನನಗದೆಂತು ಸ್ಥಾನ ?....
ಈಸುಕಾಲ ಆದಕಾಗಿಯೆ ತಾಳಿಯಿದ್ದೆ ಮೌನ !
ಇಂದಿನುದಯ ರವಿಯು ನನ್ನ ಬುವಿಗೆ ಕರೆದು ತ್ತಂದ....
ಇಂದಿನಿಂದ ನನ್ನಾಳಕೆ, ತಂದಿಹೆನಾನಂದ !
ಹರಡುವುದಾನಂದ....
ಹರಡುವುದಾನಂದ....ಇದೇ
ನನ್ನ ಕಾರ್ಯದಂದ !

(ಬೆಳಗಿನ ಭೇರಿಗಳ ಸಪ್ಪಳ. ದೇವಮಂದಿರಗಳಲ್ಲಿಯ ಘಂಟಾರವ; ಸಂಧ್ಯಾಮಸೂಚಕ ರಾಗದಲ್ಲಿ ನಾಗಸ್ವರವಾದನ. ಬನದ ಉಲ್ಲಾಸದ ಕಲಕಲಾಟ)

ವೃಂದಗೀತ :

(ಮೊದಲು ಉದಯಗೀತ ಹಾಡಿದವರೇ ಹಾಡಬೇಕು.)

ಇದೊ—ಶ್ರಾವಣ ಬಂದಿದೆ ಭೂವನಕೆ—
ಜನಜೀವನ ಪಾವನ ಗೈಯಲಿಕೆ—
ಇದೊ—ಶ್ರಾವಣ ಬಂದಿತು ಭೂತಲಕೆ ‖ ಪಲ್ಲವಿ

ಬಾನೊಳು ತುಂಬಿದೆ ಜೀವದ ಜಲವು....
ಬುವಿಯೊಳು ತಂಗಿದೆ ಬೆಳಸಿನ ಬಲವು....
ಏಳಲಿ ಏಳಲಿ ಕೃಷಿಕರ ಕುಲವು....
ಗಾಳಿ ಕೂಗುತಿದೆ ಕೇಳದೆ ಉಲಿವು ?
ಸಿರಿದೇವಿಯ ಕರುಣೆಯ ಸಾರಲಿಕೆ....
ಇದೊ—ಶ್ರಾವಣ ಬಂದಿದೆ ಈ ನೆಲಕೆ !

× × × ×

(ಹಳ್ಳಿಯ ವಾತಾವರಣವನ್ನು ಸೂಚಿಸುವ ಹಸು-ಮೇಕೆ ಕೂಗು; ಕಾಗೆಗಳ ಕಾಕಾರವ ಕೇಳಿಸಬೇಕು.)

ಕೃಷಿಕರ ಗುಂಪು :

(ಎಲ್ಲರೂ ಕೂಡಿ)

ಇದೊ ಬಂತು ಬಂತು ಶ್ರಾವಣಾ,
ನಲಿಯತ್ತದ ಬನಾ
ಹಿಗ್ಗಿನಲಿ ಜನಾ ಕುಣಿಯತ್ತದ !
ಬಾನೊಳಗೆ ತುಂಬಿ
ನೀರ್ಮುಗಿಲ ಹಿಂಬಿ
ತನಿಮಳೆಯ ನಿಳಿಸುತ್ತದ !

ಒಬ್ಬ :

ಹೊನ್ನ್ಹತಾಳಕೂರಿಗೀ ಹೂಡಿ
ಬೀಜ ಈಡಾಡಿ
ಭೂಮಿತಾಯುಡೀ ತುಂಬಿ ತಣಿಸೋಣು;
ಬೆಳೆಸಾಲಗಳೆಯ ಬನವಣ್ಣಾ
ಬೀಜಗಳ ಹೊನ್ನ ಹೊಲದಿ ಹೂಳುವನು.

ಇನ್ನೊಬ್ಬ :

ಇಂದು ಬಿತ್ತಿದ ಬೀಜದ ಕಾಳು
ನಾಳಿನಾ ಕೂಳು—
ಕೇಳತಕದ ಗೋಳು ಸುಖದ ಸಂಸಾರಾ—
ಸುಖದ ಸಂಸಾರಾ !
ಒಂದಕ್ಕ ಆಗಿ ಸಾವಿರಾ
ಓಡತಕದ ಬರಾ
ಹೆಸಿವಿಯಬ್ಬರಾ ಅಡಗತಕದ ಪೂರಾ !

ಒಬ್ಬ :

ಅಂಥಿಂಥದಲ್ಲೊ ಈ ಕಾಲ,
ಸಂತಸದ ಮೂಲ,
ಹಬ್ಬಗಳ ಜಾಲ ನಾಡ ತುಂಬೆಲ್ಲಾ !
ಮೂಡೇದ ಜನರ ಎದಿಯೊಳಗ
ತಮ್ಮ ತಮ್ಮ ಬಳಗ–
ದೊಲವಿನಾ ಬೆಳಗದೇನು ಸುಳ್ಳಲ್ಲಾ !

ಇನ್ನೊಬ್ಬ :

ಮನಿ-ಮನಿಗಳೊಳಗ ತೋಂ ತನನ
ಭಕ್ತಿರಸಗಾನ
ಗಂಟಿಗಳ ಗಣಣ ಕೇಳತಕದ !
ಜನ-ಜನವು ಕೂಡಿ
ಕೆಳೆಯಾಟ ಹೊಡಿ
ಹುರುಪಿನಲಿ ಹಾಡತಕದ !

ಎಲ್ಲರೂ ಕೂಡಿ :

ಇದೊ ಬಂತು ಬಂತು ಶ್ರಾವಣಾ
ಗೆಜ್ಜೆಝಲ್ಲುಣ್ಣಾ ಝಲ್ಲುಣ್ಣಾ-!
ಹಿಗ್ಗಿ ಜನಮನಾ ನಲಿಯುತಕದ;
ಶ್ರಾವಣನ ಕಂಬಿ—
ಕೊಡ ತುಂಬಿ ತುಂಬಿ
ಭೂಮಾತೆಗೆರೆಯತಕದ—
ಜೀವನವ ಕರೆಯತಕದ !

(ಹಾಡಿನ ಜೊತೆಗೆ ಬಾರಿಸುತ್ತಿದ್ದ ಡಪ್ಪಿನ ಮುಕ್ತಾಯದ ಸಪ್ಪಳ ಮೇಲೆ)

× × × ×

(ನದಿಗಳು ತುಂಬಿ ಹರಿಯುವ ಸಪ್ಪಳ. ನೀರ ಹಕ್ಕಿಗಳ ಕೂಗು.)

ನದೀದೇವಿಯರು :

(ಗೆಜ್ಜೆಯ ತಾಲಿನ ಕುಣಿತದ ಗತಿಯೊಂದಿಗೆ ಕೂಡಿ ಹಾಡುವರು.)

ಜಯ ಜಯ ದೇವೇಂದ್ರ, ಜಯ ಕರುಣಾಸಾಂದ್ರ—
ಜಯಗೀತ ನಿನ್ನದೆ ಹಾಡುವೆವು....
ದಯೆಯಿಂದ ನೋಡಿದೆ, ದೈನ್ಯ ನೀ ದೂಡಿದೆ;
ನವಜಲ ತುಂಬಿ ನಾವಾಡುವೆವು. ‖ ಪಲ್ಲವಿ ‖

(ಒಂದು ನದಿ) ಬೇಸಗೆ ನೀಸರು ನಮಗಾದ ವೈರಿ....
(ಮತ್ತೊಂದು) ಲೇಸಾದ ನಮ್ಮಯ ಜೀವನ ಹೀರಿ !....
(ಬೇರೊಂದು) ಆಶೆಯಿಂ ನಿನ್ನಯ ಕರುಣೆಯ ಕೋರಿ....
ಏಸೊಂದು ನೋಡುತಲಿದ್ದೆವು ದಾರಿ.....
(ಒಂದು ನದಿ) ಕಳುಹಿದೆ ಇಳೆಗಿಂದು ಶ್ರಾವಣನವನ್ನ—
ಕಳೆಯಿತು ಬಂದದು ನಮಗಿದ್ದ ಬನ್ನ !
(ಎಲ್ಲ ನದಿಗಳೂ ಕೂಡಿ)
ಜಯ ಜಯ ದೇವೇಂದ್ರ, ಜಯ ಕರುಣಾಸಾಂದ್ರ,
ಜಯಗೀತ ನಿನ್ನದೆ ಹಾಡುವೆವು.
ದಯೆಯಿಂದ ನೋಡಿದೆ, ದೈನ್ಯವ ದೂಡಿದೆ;
ನವಜಲ ತುಂಬಿ ನಾವಾಡುವೆವು !

(ಒಂದು ನದಿ) ತಂಗಾಳಿ ಮಿಡಿವುದು ತಂಬೂರಿಯ
ತೆರೆಗಳು ಬಡಿವುವು ಮದ್ದಳೆಯ....
(ಇನ್ನೊಂದು) ನೊರೆಯ ನಗೆಗಳಿಂದ ಹೊನಲ ಹಾಡುಗಳಿಂದ
ಕುಣಿಯುತಿಹೆವು ನಾವು ಸುರರಾಯಾ !
(ಎಲ್ಲ ನದಿಗಳೂ ಕೂಡಿ)
(ಕುಣಿಯುತ್ತ)
ಜಯ ಜಯ ದೇವೇಂದ್ರ, ಜಯ ಕರುಣಾಸಾಂದ್ರ,
ಜಯಗೀತ ನಿನ್ನದೆ ಹಾಡುವೆವು;
ದಯೆಯಿಂದ ನೋಡಿದೆ; ದೈನ್ಯವೀಡಾಡಿದೆ
ಜಯಜಯವೆಂದು ಕೊಂಡಾಡುವೆವು !

× × × ×

(ವನದ ವಾತಾವರಣ. ಗಿಳಿಗಳ ಉಲುಹು. ನವಿಲುಗಳ ಕೇಕೆ. ಗೊರವಂಕದ ಕೆಲಿತ)

ಶ್ರಾವಣ :

ಬಾ ಮಲ್ಲಿಗೆ, ಬಾ ಗುಲಾಬಿ, ಜೆಂಗಣಿಗಿಲೆ ಬಾರೆ....
ಬಾ ಸಂಪಗೆ, ಬಾ ಬಂದುಗೆ, ಹೊಂಗೇದಗೆ ಬಾರೆ !
ಬನ್ನ ಬನದಲಿ ನಗುತಲಿರಲಿ ನಿಮ್ಮ ಅರಳ ಜಾಲ....
ನಿಮ್ಮ ಬಾಳ ಸಾರ್ಥಕತೆಗೆ ಬಂದಿದೆ ಶುಭಕಾಲ !
ದೇವ-ದೇವತಾದಿ ಪೂಜೆ ನೀವಿಲ್ಲದೆ ನಡೆವುದೆ ?
ಗರತಿಯರಾ ಸಿರಿಮುಡಿಯದು ಜೆಲುವನೆಂತು ಪಡೆವುದೆ ?
ಅರಳಿ ನಿಂತು ಹರಡಿರೀಗ ನಿಮ್ಮ ಸುರಭಿಯನ್ನು....
ಸುಖಲೋಕದ ಸುಮದ ಸೊಬಗ ಮೆರೆವುದು ನೀವಿನ್ನು !
(ಮೆಲುನಗೆಯ ಛಾಯೆಯೊಂದು ಸುಳಿಯುವೇಕು.)

ಮಲ್ಲಿಗೆ :

ಮಳೆಗಾಲದ ಮೃದುಮಲ್ಲಿಗೆ ನಾನು—
ನಳನಳಿಸುತಲಿಹೆನೋ....
ಹಸುರು ಪತ್ತಲವ ಹಾಸಿ ಹೂವುಗಳ
ಮೊಸರನು ಚೆಲ್ಲಿಹೆನೋ !

ಗುಲಾಬಿ :

(ಹಸುಳೆಯ ಮುತ್ತಿಟ್ಟ ಉಲುಹು ಕೇಳಬೀಳು.)

ಮುಳ್ಳುಗಳಿಲ್ಲವ ಮರೆಗೊಳಿಸಿಹೆ ಹಸು–
ರೆಲೆಗಳ ಮುಸುಕಿಡುತ....
ಒಳ್ಳೆಯ ಹಸುಳೆಯ ಗಲ್ಲಗಳಂದದಿ
ಹೂಗಳನರಳಿಸುತ—
ಸುಮರಾಜ್ಯದ ಸಮ್ರಾಜ್ಞಿಯು ನಾನು
ಚೆಂಗುಲಾಬಿ ರಮಣಿ....
ರಮಣನ ಕಣ್-ಮನ ಸೆಳೆವಳು ದಿಟ ದಿಟ
ನನ್ನ ಮುಡಿದ ತರುಣಿ !

ಸಂಪಗೆ :

ತಳಿರ ಬಾನೊಳು ತಾರೆಗಳ ತೊಳಗಿಸಿರುವೆ....
ಪರಿಮಳವ ದೆಸೆದೆಸೆಗಳಲಿ ಪಸರಿಸಿರುವೆ !
ಕಾಯುತಿಹೆ ಪರಮಾತ್ಮಪೂಜೆಯು ಸುಕಾಲ....
ಆ ಯುವತಿಯರ ಕರೆಗೆ ನಾನು ಅನುಕೂಲ !

ಕೇತಕಿ :

ಕೇತಕೀವಧುವು ನಾ ಶ್ರಾವಣನ ಕನ್ಯೆ,
ಕಂಟಕಿನಿಯಾದರೂ ಸುರಭಿಸಂಪನ್ನೆ !
ಕಾಣದಂತಿರುವೆನಾದೊಡೆ ನನ್ನ ಜೀವ....
ನಿನ್ನ ಸೇವೆಯ ಬಯಸುತಿದೆ ದೇವದೇವ !

ಶ್ರಾವಣ :

ಧನ್ಯ–ಧನ್ಯರು ನೀವು ನಂದನ—
ಕನ್ಯೆಯರೆ ನಲಿದಾಡಿರಿ....
ಪುಣ್ಯಕಾರ್ಯಕೆ ನಿಮ್ಮ ಬಾಳನು
ನೀಡಿ ನಾಕವ ಸೇರಿರಿ !
ನೀಡಿ ನಾಕವ ಸೇರಿರಿ— ಭೂ
ಜನಕೆ ಬಾಳ್‌ಗುರಿ ತೋರಿರಿ !

(ದೃಶ್ಯದ ಬದಲಾವಣೆಗಾಗಿ ವಾದ್ಯವಾದನ.)

ನಿರೂಪಕ :

ಹಳ್ಳಿಯ ಒಕ್ಕಲಿಗನ ಮನೆಯ ಮುಂಗಟ್ಟಿ. ಅಲ್ಲಿ ಕುಳಿತ ಗೆಳತಿಯರಲ್ಲಿ ಒಬ್ಬಳು ಆ ಮನೆಯ ಸೊಸೆ. ಆಕೆ ತನ್ನ ಗೆಳತಿಯೊಂದಿಗೆ ತನ್ನ ಆತುರ-ಕಾತರಗಳನ್ನು ತೋಡಿಕೊಳ್ಳುತ್ತಲಿದ್ದಾಳೆ :

ಸೊಸೆ :

ಪಂಚಮಿ ಹಬ್ಬಾ ಉಳಿತವ್ವಾ ದಿನಾ ನಾಕ....
ಅಣ್ಣ ಬರಲಿಲ್ಲ ಯಾಕೋ ಕರಿಲಾಕ ‖ ಪಲ್ಲವಿ ‖

ನಮ್ಮ ತವರೂರು ಗೋಕುಲ ನಗರಾ !
ಮನಿಯೆಂಥಾದs ರಾಜಮಂದಿರರಾ,
ನಮ್ಮ ಅಣ್ಣಯ್ಯ ದೊಡ್ಡs ಸಾವಕಾರಾ....
ಹ್ಯಾಂಗಾದೀತs ತಂಗಿನ್ನ ಮರಿಯಾಕ
ಅಣ್ಣ ಬರಲಿಲ್ಲ ಯಾಕೋ ಕರಿಲಾಕ.....‖ ೧ ‖

ಮುತ್ತಿನಂಥಾಕಿ ಅಕ್ಕಾ ನಮ್ಮತಿಗಿ....
ಆರ್ತಿ ಭಾಳ ನನಮ್ಯಾಗs ಅವಳಿಗಿ....
ಎಂದು ನೋಡೇನೌ ತವರಿಗೆ ಹೋಗಿ....
ಬಿಟ್ಟಾಳೇನವ್ವ ಇಲ್ಲೇ ಇರಲಾಕ....
ಅಣ್ಣ ಬರಲಿಲ್ಲ ಯಾಕೋ ಕರೀಲಾಕ ‖ ೨ ‖

ನಮ್ಮ ತವರೀಲಿ ಪಂಚಮಿ ಭಾರಿ....
ಮಣದs ತೂಕಾ ಬಟ್ಟಲ ಕೊಬ್ಬರಿ....
ಅಳ್ಳು ಅವಲಕ್ಕಿ ತಂಬಿಟ್ಟು ಸೂರಿ !
ನಾನೂ ತಿನುವಾಕ ಬಂದ್ಹಾಂಗ ಮನಕ
ಅಣ್ಣ ಬರಲಿಲ್ಲ ಯಾಕೋ ಕರೀಲಾಕ.... ‖ ೩ ‖

ಎಣಕಲ್ಲಾಂಗ ಮುರಜೋಕಾಲಿ....
ಓಣಿ ಓಣೀಗೆ ತೊಲಿಯುಯ್ಯಾಲಿ....
ಕಟ್ಟತಾರವ್ವ ಕೊಬ್ಬರೀಸರಮಾಲಿ....
ಸರಗತಿರತಾವ ತೊಟ್ಟಲ ಜೀಕಾ....
ಅಣ್ಣ ಬರಲಿಲ್ಲ ಯಾಕೋ ಕರೀಲಾಕ ‖ ೪ ‖

(ಬಂಡಿಯ ಗಾಲಿಗಳು ಓಡುವ ಶಬ್ದ. ಎತ್ತುಗಳ ಕೊರಗಂಟೆ, ಗೆಜ್ಜೆಸರಿಗಳ ಸಪ್ಪಳ)

ಅಣ್ಣನ ಹಾಡು :

(ಬಂಡಿ ನಡೆಸುತ್ತ)

ನಾಗರಪಂಚಮಿ....ನಾಡಿನ ಜನಕೆಲ್ಲಾ....
ಬ್ಯಾಗನ ನಡಿಯೋ ಬಸವದೊರಿ !
ಬ್ಯಾಗನೆ ನಡೆಯೋ....ಬಸವದೊರಿ ತಂಗೆಮ್ಮ....
ನೋಡುತಿದ್ದಾಳೋ ನಮ್ಮ ದಾರಿ.

(ಎತ್ತುಗಳ ಓಟದ ಶಬ್ದ : ಬಂಡಿಯ ಗಾಲಿಗಳ ಗಡಗಡಾಟ)

ಬಿತ್ತುವ ತಿಂಗಳ ಬಿಟ್ಟು....ಒತ್ತರದಿ ಬಂದೇನೋ....
ಮುತ್ತೈದಿ ತಂಗೀನs ತವರಿಗೆ....
ಮುತ್ತೈದಿ ತಂಗೀನs....ತವರಿಗೆ ಕರೆದೊಯ್ದು....
ಹುತ್ತಪ್ಪಗ್ವಾಲ ಎರಿಸೋಣೋ !

(ಗಾಡಿಯ ಮಂದಗತಿಯ ಸಪ್ಪಳ; ಎತ್ತುಗಳ ಗೆಜ್ಜೆಗಳ ಉಲಿವು)

ಗೆಳತಿ :

(ಸಂಭ್ರಮಭಾವದಲಿ)

ಬಂದ ನೋಡು ನೋಡು ನಿನ್ನ ಅಣ್ಣನವ
ಬಂಡಿಯ ಹೊಡಕೊಂಡ.....
ಚಿಗರಿಯ ಓಟನ ಚಿನ್ನಾಸಿ ಹೊನ್ನಾಸಿ
ಹೋರಿ ಹೂಡಿಕೊಂಡ.... !
ಮೂರು ದಿನಾ ಆತು, ದಾರಿ ನೋಡತೀ
ತೀರಿತೇನ ಬಯಕೆ ?

ನೀರು ತಂದು ಇಡು ಅಣ್ಣನ ಕಾಲಿಗೆ
ಮೆಲ್ಲಕ್ಹೋಗು ಜ್ವಾಕಿ !
(ಸಂಭ್ರಮ ಸೂಚಕ ಸ್ವರಮಾಲಿಕೆಯು ಮಿಡಿತ.)

× × × ×

ನಿರೂಪಕ :

ಸೊಸೆ ಹೆಣ್ಣುಮಗಳಾಗಿ ತವರಿಗೆ ಬಂದಳು. ಮನೆಯಲ್ಲಿ ಸಂತಸದ ಹುಗ್ಗಿ. ನಾಗಚತುರ್ಥಿಯ ಬೆಳಗಿನ ಹತ್ತುಗಂಟೆಯ ಸಮಯ. ಹಳ್ಳಿಯ ಸುಮಂಗಲೆಯರು ನಾಗಪೂಜೆಗೆ ಹೊರಟಿರುವರು.
(ಪೈಜಣ, ಕಾಲುಂಗುರ-ಪಿಲ್ಲೆಗಳ ಮೆಲ್ಲುಲಿಗಳೊಂದಿಗೆ)

ಎಲ್ಲರೂ ಕೂಡಿ :

ವಾರಿಗೀ ಗೆಳತ್ಯಾರು ಸೇರಿ ನಾವೆಲ್ಲಾರು
ಊರಕ ದೇವಿಯ ಗುಡಿಗ್ಹೋಗೋಣ....
ಊರಕ ದೇವಿಯ ಗುಡಿಯೆದುರ ನಾಗಪ್ಪಗ
ಸೂರ್ಯಾಡಿ ಅರಳು-ಹಾಲೆರೆಯೋಣ—ನಾವು
ತಂಬಿಟ್ಟನಾರತಿ ಬೆಳಗೋಣ.! ॥

ಒಬ್ಬಳು :

ಚಂದಕ್ಕನಾ ನೀರೀ ಚೆಂದವ ನೋಡಿರಿ,
ಮಂದಿಯ ಕಣ್ಣೆಲ್ಲಾ ಅವಳತ್ತ....
ಸುಂದರಾ, ಬಡಿವಾರ ನಿಂದೆಷ್ಟ ? ಕೊರಳಾಗ
ಧರಿಸಿದಿಯುಂತೇನು ಸರಮುತ್ತ ?....ಗೆಳತಿ
ನಿನ್ನ ಸೊಭಾಮ ನನಗ ಗೊತ್ತ !

ಇನ್ನೊಬ್ಬಳು :

ಇಲ್ಲೀ ನೋಡೀ ಶಾಂತಾ, ಮಲ್ಲಮ್ಮನ ತುಬಸಾ—
ಮಲ್ಲೀಗಿ ಮಗ್ಗೀ ಮೈ ಪೂರಾ !
ಮಲ್ಲೀಗಿ ಮಗ್ಗಿ ಮೈ ಪೂರಾ ಆಂಚಿನ
ಸುಳುವು-ಬಳ್ಳೀಲ್ಲಾ ಬಂಗಾರಾ—ಮಲ್ಲಮ್ಮ
ಎಲ್ಲಿಂದ ತರಿಸಿದಿ ಹೊಸತುರಾ !

ಮತ್ತೊಬ್ಬಳು :

ಹೊತ್ತಾಯ್ತು ಬನ್ನಿರೇ, ಒತ್ತರ ಮಾಡಿರೇ,
ಹುತ್ತಿನಯ್ಯನ ಪೂಜಿ ಮುಗಿಸೋಣ....
ಜತ್ತಾಗಿ ನಾವೆಲ್ಲಾ ಕಡಬು ಕಿಚ್ಚಡಿಯುಂಡು
ಜೋಕಾಲಿಯಾಡಲು ಹೋಗೋಣ—ನಾವು
ಒಬ್ಬರನೊಬ್ಬರು ತೂಗೋಣ !

ಎಲ್ಲರೂ :

ವಾರಿಗೀ ಗೆಳತೇರು ಸೇರಿ ನಾವೆಲ್ಲಾರೂ
ಊರ ದೇವಿಯ ಗುಡಿಗ್ಹೋಗೋಣ....ಇತ್ಯಾದಿ
(ಧ್ವನಿಯು ದೂರಕ್ಕೆ ದೂರಕ್ಕೆ ಹೋಗಿ ನಿಧಾನವಾಗಿ ಅಡಗಬೇಕು.)

× × × ×

ನಿರೂಪಕ :

ಉಪ್ಪರಿಗೆಯು ಮನೆಯೊಂದರ ಮೊಗಸಾಲೆ; ಅಲ್ಲಿ ಕಟ್ಟಿದ ತೂಗು ಮಂಚದ ಮೇಲೆ ಕುಳಿತ ಸುಮಂಗಲೆಯರು, ನಿಧಾನವಾಗಿ ತೂಗಿಕೊಳ್ಳುತ್ತಲಿದ್ದಾರೆ.

ಎಲ್ಲರೂ ಕೂಡಿ :

ನಾಗರ ಪಂಚಮಿ ಹಬ್ಬಾ....ಸೊಗಸಿನ
ಸಾಗರವೇ ಸರಿಯಬ್ಬಾ !
ನಾಗರ ಪಂಚಮಿ ಹಬ್ಬಾ....ಒಲವಿನ
ಬೀಗವ ತೆಗೆಯುವ ಕಬ್ಬಾ !

ಒಬ್ಬಳು :

ಗೆಳತಿಯು ಕೂದಲು ಜೊಗಜೀ ಕಾಯಿಹಾಂಗ
ನಿಗುಚಿ ಬೈತಲಾ ತೆಗೆದಾಳ....
ನಿಗುಚಿ ಬೈತಲಾ ತೆಗೆದಾಳ ನನ ಗೆಳತೀ
ಸೊಗಸಿಗೆ ಸಿರಿದೇವಿ ಒಲಿದಾಳ !

ಎಲ್ಲರೂ :

ನಾಗರ ಪಂಚಮಿ ಹಬ್ಬಾ....ಸೊಗಸಿನ
ಸಾಗರವೇ ಸರಿಯಬ್ಬಾ !

ಒಬ್ಬಳು :

ಹಸುಗೂಸು ಹುಟ್ಟಲಿ, ಹೊಸಸ್ಯಾಟಿ ಕಟ್ಟಲಿ
ರಸಬಾಳೆ—ಕಬ್ಬು ಬೆಳೆಯಲಿ !
ರಸಬಾಳೆ ಕಬ್ಬು ಬೆಳೆಯಲಿ ತವರೂರ
ಬಸವಣ್ಣನ ತೇರು ಎಳೆಯಲಿ !

ಎಲ್ಲರೂ :

ನಾಗರ ಪಂಚಮಿ ಹಬ್ಬಾ....ಸೊಗಸಿನ
ಸಾಗರವೇ ಸರಿಯಬ್ಬಾ !

ಒಬ್ಬಳು :

ಬಂದಿದೆ ಬಂದಿದೆ ಹಬ್ಬದ ಮಾಸ....
ತಂದಿದೆ ತಂದಿದೆ ಸವಿಸವಿ ತಿನಿಸ—
ಹೆಂದದರಳು-ತಂಬಿಟ್ಟನು ಮೆಲ್ಲುತ
ಉಯ್ಯಾಲೆಯಾಡುವುದೆಂಥಾ ಸರಸ !

ಎಲ್ಲರೂ :

ನಾಗರ ಪಂಚಮಿ ಹಬ್ಬಾ....ಸೊಗಸಿನ
ಸಾಗರವೇ ಸರಿಯಬ್ಬಾ !

ವೃಂದಗೀತ :
(ಭೈರವೀರಾಗದಲ್ಲಿ)

ಶರಣು ಶರಣು ಶ್ರಾವಣ !—ಧರೆಯು ಸುಖಕೆ ಕಾರಣಾ !
ಬರವಿನೊಡನೆ ತಂದಿರುವೆಯೊ, ಸಿರಿಯೊಸಗೆಯ ತೋರಣಾ !
ಮದುವಣಿಗಿತ್ತಿಯರ ನೋಂಪಿ
ಮಂಗಲಗೌರಿಯು ವಾರ....
ಗರತಿಯರೆಲ್ಲರ ಪೂಜೆಗೆ
ಸಂಪದದಾ ಶುಕ್ರವಾರ—
ತರುವೆ ನೀನು ಶ್ರಾವಣಾ ! ಸೌಭಾಗ್ಯದ ಕಾವಣಾ !
ಶರಣು ಶರಣು ಶ್ರಾವಣಾ—ಧರೆಯು ಸುಖಕೆ ಕಾರಣಾ !
(ನಾಗಸ್ವರದ ಮಂಗಲಗೀತದೊಂದಿಗೆ ಸಮಾಪ್ತಿ.)*

---

* ಈ ಶ್ರಾವಣಮಾಸದ ಪ್ರಾರಂಭದಿನದಂದು, ಮುಂಬಯಿ ಆಕಾಶವಾಣಿಯಿಂದ ಚಿತ್ರರಗೊಂಡ ಗೀತರೂಪಕವಿದು. ಸಂ. ಜ.

ಸೌಂದರ್ಯ ಲಹರೀ

(ಕಾವ್ಯಪರಿಚಯ)

ಪಂಡಿತ ಶ್ರೀ. ಕೇಶವಶರ್ಮಾ ಗಲಗಲಿ, ಧಾರವಾಡ

ಇದೊಂದು ಸಂಸ್ಕೃತ ಸಾಹಿತ್ಯದಲ್ಲಿಯ ಶ್ರೇಷ್ಠವಾದ ಸ್ತೋತ್ರ-ಶತಕಗ್ರಂಥ. ಇದರಲ್ಲಿಯ ಪ್ರತಿಯೊಂದು ಪದ್ಯವೂ ಭಾವಪೂರ್ಣವಾಗಿರುವುದಲ್ಲದೆ ಬೇರೆ ಬೇರೆ ಅರ್ಥಾಲಂಕಾರಗಳಿಗೆ ಲಕ್ಷ್ಯಪದ್ಯದಂತಿರುವುದು.

ಶ್ರೀಮತ್ ಶಂಕರಾಚಾರ್ಯರಂತಹ ತತ್ತ್ವಜ್ಞಾನಿಗಳ ಮೂರ್ಧನ್ಯ ಸ್ಥಾನದಲ್ಲಿ ಶೋಭಿಸುವವರು, ಕಾವ್ಯವನ್ನೂ ಬರೆದಿರುವರೆಂಬುದು ವಿಶೇಷ್ಯಕರ. ಯಾಕೆಂದರೆ : 'ಶಾಸ್ತ್ರಾಭ್ಯಾಸಿಗಳ ಮತಿಯು ತರ್ಕ-ಕರ್ಕಶವಾಗಿರುವುದು; ಜಡವಾಗಿರುವುದು — ಎಂದು ಸಾಮಾನ್ಯ ತಿಳಿವಳಿಕೆ. ಬ್ರಹ್ಮಾನಂದದಲ್ಲಿ ಲೀನರಾದವರಿಗೆ ಲೌಕಿಕ ಆನಂದವು ಕ್ಷುದ್ರವಾಗಿ ತೋರುವುದು; ಇದು ನಿಜ! ಆದರೆ ಶಂಕರಾಚಾರ್ಯರು ಮುಖ್ಯವಾಗಿ ಲೋಕಸಂಗ್ರಬುದ್ಧಿಯುಳ್ಳವರು. ಆದಕ್ಕಾಗಿ ಅವರು ಅನೇಕ ದೇವತಾಸ್ತುತಿಪರ ಪದ್ಯಗಳನ್ನೂ ಕಾವ್ಯವನ್ನೂ ಬರೆದಿರುವರು. ಕಾವ್ಯಾನಂದವೂ ಬ್ರಹ್ಮಾನಂದ ಸೋದರವಾದದ್ದು. ಇದಲ್ಲದೆ ದೇವತಾಸ್ತುತಿಪರ ಪದ್ಯಗಳು ಮಾನಸಿಕಜಾಡ್ಯವನ್ನು ಹೋಗಲಾಡಿಸಿ, ಆತ್ಮಜ್ಞಾನಕ್ಕೆ ದಾರಿ ಮಾಡಿಕೊಡುವುವು. ಶ್ರೀ ಶಂಕರಾಚಾರ್ಯರು ಈ ದೃಷ್ಟಿಯಿಂದಲೇ 'ಸೌಂದರ್ಯಲಹರೀ' ಮೊದಲಾದ ಕಾವ್ಯಗಳನ್ನು ಬರೆದಿರುವಂತೆ ತೋರುವುದು. ಉಪಾಸನಾಮಾರ್ಗಿಗಳಂತೂ ಈ ಕಾವ್ಯಕ್ಕೆ ಬೀಜಾಕ್ಷರಗಳನ್ನು ಹೊಂದಿಸಿ, ಉಪಾಸನಾ ರೀತಿಯನ್ನು ಪ್ರತಿಪದ್ಯಕ್ಕೆ ಹೇಳಿ, ಲೌಕಿಕರಿಗೂ ಸಂಸಾರಿಗಳಿಗೂ ಇಷ್ಟಸಿದ್ಧಿಯ ದಾರಿಯನ್ನು ತೋರಿದ್ದಾರೆ. ಈ ದೃಷ್ಟಿಯಿಂದಲೂ, ಈ ಕಾವ್ಯವು ಪ್ರಖ್ಯಾತವಾಗಿದೆ. ಕಾವ್ಯದೃಷ್ಟಿಯಿಂದ ನೋಡಿದರೆ, ಇದು ರಸಿಕ ವಾಚಕರಿಗೆ ಮಿಷ್ಟಾನ್ನದೂಟವನ್ನುಣ್ಣಿಸುವುದು. ಕೇವಲ ಶಾಸ್ತ್ರರತರು, 'ಕಾವ್ಯಾಲಾಪಾಂಶ್ಚ ವರ್ಜಯೇತ್' ಎಂದು ಹೇಳಬಹುದಾದರೂ, ಶಾಸ್ತ್ರವ್ಯಾಸಂಗಕ್ಕೆ ತಕ್ಕ ಮಾರ್ಗವನ್ನು ಮಾಡಿಕೊಡುವಲ್ಲಿ, ವ್ಯಾಸಂಗದಲ್ಲಿ ಅಭಿರುಚಿಯನ್ನು ಹುಟ್ಟಿಸಲಿಕ್ಕೆ, ಕಾವ್ಯವಾಚನ ಆರಂಭಾವಸ್ಥೆಯಲ್ಲಿ ಅನಿವಾರ್ಯವಾಗಿ ಬೇಕು. ಕೆಲವು ನೀತಿಬೋಧಕ ಕಾವ್ಯಗಳು ಆನಂದವನ್ನು ಜನಿಸುತ್ತ....ವಾಚಕರನ್ನು ಸನ್ಮಾರ್ಗಗಾಮಿಗಳನ್ನು ಮಾಡಬಹುದು....

ಶ್ರೀಶಂಕರಾಚಾರ್ಯರು ಬರೆದ ಸೌಂದರ್ಯಲಹರಿಯು, ತ್ರಿಪುರಸುಂದರೀ ದೇವಿಯ ಸ್ತುತಿರೂಪವಾದ ಕಾವ್ಯವು. ಇದರಲ್ಲಿ ೧೦೩ ಪದ್ಯಗಳಿರುವುವು. ಸಂಸ್ಕೃತದಲ್ಲಿಯ ಕೆಲವು ಶತಕಕಾವ್ಯಗಳು ಅಜರಾಮರವಾಗಿವೆ: ಭರ್ತೃಹರಿಯ ಶತಕತ್ರಯ, ಭಲ್ಲಟಕಶತಕ, ಮಯೂರಶತಕ ಮೊದಲಾದುವು. ಕನ್ನಡದಲ್ಲಿಯೂ ಕವಿಗಳು ಶತಕ. ಕಾವ್ಯಗಳನ್ನು ರಚಿಸಿರುವರು: ಅಪರಾಜಿತೇಶ್ವರಶತಕ, ತ್ರಿಲೋಕಶತಕ, ಸೋಮೇಶ್ವರಶತಕ. ಇಂತಹ ಪರಂಪರೆಯು ಲುಪ್ತವಾಗಬಾರದು. ಸಿನಿಮಾನೃತ್ಯದಲ್ಲಿ ಲೋಲುಪರಾದ ತರುಣರು, ಇಂತಹ ಶತಕ-ಕಾವ್ಯವನ್ನು ಓದಿ ಮನೋರಂಜನೆ ಮಾಡಿಕೊಳ್ಳಲಿ, ಮನೋ-ಮಾಲಿನ್ಯವನ್ನು ಕಳೆದುಕೊಳ್ಳಲಿ—ಎಂದು ನಾವು ಹಾರೈಸುವೆವು.

ದೇವಿ, ನಿನ್ನ ಮಹಿಮೆ ಎಂತಹದು ನೋಡಾ!
ಶಿವಃ ಶಕ್ತ್ಯಾಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ।
ನ ಚೇದೇವಂ ದೇವೋ ನ ಖಲು ಕುಶಲಃ ಸ್ಪಂದಿತುಮಪಿ ॥
ಅತಸ್ತ್ವಾಮಾರಾಧ್ಯಾಂ ಹರಿಹರವಿರಂಚ್ಯಾದಿಭಿರಪಿ।
ಪ್ರಣಂತುಂ ಸ್ತೋತುಂ ವಾ ಕಥಮಕೃತಪುಣ್ಯಃ
ಪ್ರಭವತಿ ॥೧॥

ದೇವೀ, ಶಿವನು ನಿನ್ನ ಶಕ್ತಿಯಿಂದ ಯುಕ್ತನಾಗಿದ್ದಾನೆಂದು ಜಗಜ್ಜೇತೃವೆನ್ನಿಸಿಕೊಂಡಿರುವನು. ನಿನ್ನ ಶಕ್ತಿಯಿಂದ ಒಡಗೂಡಿರದಿದ್ದರೆ, ಇವನಿಗೆ ಚಲಿಸಲು ಕೂಡ ಶಕ್ತಿ ಇರಲಿಲ್ಲ. ಕಾರಣ ಹರಿ-ಹರ-ಬ್ರಹ್ಮರಿಂದ ಆರಾಧ್ಯಳಾದ ನಿನ್ನನ್ನು ನಮಸ್ಕರಿಸಲಿಕ್ಕೆ ಅಥವಾ ಸ್ತುತಿಸಲಿಕ್ಕೆ, ಪುಣ್ಯಮಾಡದಿದ್ದವರಿಗೆ ಸ್ಥಾನವಿಲ್ಲ.

ತನೀಯಾಂಸಂ ಪಾಂಸುಂ ತವಚರಣಪಂಕೇರುಹಭವಂ।
ವಿರಿಂಚಿಃ ಸಂಚಿನ್ವನ್ ವಿರಚಯತಿ ಲೋಕಾನವಿಕಲಂ।
ವಹತ್ಯೇನಂ ಶೌರಿಃ ಕಥಮಪಿ ಸಹಸ್ರೇಣ ಶಿರಸಾಂ।
ಹರಃ ಸಂಕ್ಷುದ್ಯೈನಂ ಭಜತಿ ಭಸಿತೋದ್ಧೂಲನವಿಧಿಂ ॥

ನಿನ್ನ ಚರಣದ ಧೂಲಿಯ ಒಂದು ಕಣ್ಣಿಕಣವನ್ನು ತಕ್ಕೊಂಡು ಬ್ರಹ್ಮನು ಲೋಕಗಳನ್ನು ಹುಟ್ಟಿಸುವನು. ಅದನ್ನು ಹೇಗೋ ವಿಷ್ಣು, ಸಾವಿರ ಮಸ್ತಕಗಳಿಂದ ಮಹಾಶೇಷರೂಪದಿಂದ ಧಾರಣಮಾಡುವನು. ಕೊನೆಗೆ ಅವುಗಳನ್ನು ಕುಟ್ಟಿ ವುಡಿದೂಡಿ, ಭಸ್ಮಮಾಡಿ ಮಹಾದೇವನು ಹಣೆಗೆ ಹಚ್ಚುವನು. ದೇವಿ, ಇದೆಲ್ಲ ತ್ರಿಮೂರ್ತಿಗಳ ಲೀಲೆ ನಿನ್ನ ಅನುಗ್ರಹದ ಮಹಿಮೆ.



ಈ ಕಾವ್ಯದಲ್ಲಿಯ ಳಿಳನೆಯ ಪದ್ಯವು. ಅಪ್ಪಯ್ಯದೀಕ್ಷಿತರಿಂವ, ಅಲಂಕಾರದ ಚಮತ್ಕಾರವನ್ನು ತೋರುವುದಕ್ಕಾಗಿ, ಕುವಲಯಾನಂದದಲ್ಲಿ ಉದಾಹರಿಸಲ್ಪಟ್ಟಿದೆ. ಇದು ಕವಿಕಲ್ಪನೆಯ ಸೌಂದರ್ಯದ ಚರಮಸೀಮೆಯನ್ನು — ದೇವಿಯ ಸೌಂದರ್ಯದಂತೆ — ತೋರುವುದು.

ವಹಂತೀ ಸಿಂದೂರಂ ಪ್ರಬಲಕಬರೀಭಾರತಿಮಿರ. ।
ದ್ವಿಷಾಂ ವೃಂದೈಃ ಬಂದೀಕೃತಮಿವ ನವೀನಾರ್ಕಕಿರಣಂ ।
ತನೋತು ಕ್ಷೇಮಂ ನೋ ತವವದನ ಸೌಂದರ್ಯಲಹರೀ
ಪರೀವಾಹಃ ಸ್ರೋತಃ ಸರಣಿರಿವ ಸೀಮಂತ ಸರಣಿಃ ॥

ದೇವೀ ನೀನು ಬೈತಲೆಯಲ್ಲಿ ಸಿಂದೂರವನ್ನು ಇಟ್ಟಿರುವೆಯಷ್ಟೇ! ಅದು ಸೂರ್ಯನ ಶತ್ರುವಾದ ಕತ್ತಲೆಯಿಂದ ಸೆರೆಹಿಡಿಯಲ್ಪಟ್ಟ ಸೂರ್ಯಕಿರಣದಂತೆ ನಿನ್ನ ಕಚಕಲಾಪದಲ್ಲಿ ಶೋಭಿಸುತ್ತಿರುವುದು. ನಿನ್ನ ಬೈತಲೆ (ಸಿಂದೂರಯುಕ್ತ) ನಿನ್ನ ಮೊಗದ ಸೌಂದರ್ಯಪ್ರವಾಹವು ಹರಿದು ಹೋಗಲಿಕ್ಕೆ ಮಾಡಿಟ್ಟ ಕೋಡಿಯಂತೆ ಕಾಣುವುದು. ಇದು ನಮಗೆ ಕ್ಷೇಮವನ್ನುಂಟುಮಾಡಲಿ.

ಉತ್ಪ್ರೇಕ್ಷಾಲಂಕಾರದ ಶೋಭೆಯಿಂದ ಕಂಗೊಳಿಸುವ ಈ ಪದ್ಯದ ಸೌಂದರ್ಯ, ದೇವಿಯ ಮುಖದ ಸೌಂದರ್ಯದಂತೆ ಚಿತ್ತಾಕರ್ಷಕವಾಗಿರುವುದು. ೭೬ನೆಯ ಪದ್ಯವನ್ನೂ ಅಪ್ಪಯ್ಯದೀಕ್ಷಿತರು ಉದಾಹರಿಸಿದ್ದಾರೆ:

ಹರಕ್ರೋಧಜ್ವಾಲಾವಲಿಭಿರವಲೀಢೇನ ವಪುಷಾ ।
ಗಭೀರೇ ತೇನಾಭೀ ಸರಸಿಕೃತಸಂಗೋ ಮನಸಿಜಃ ।
ಸಮುತ್ತಸ್ಥೌ ತಸ್ಮಾದಚಲತನಯೇ ಧೂಮಲತಿಕಾ ।
ಜನಸ್ತಾಂ ಜಾನೀತೇ ತವ ಜನನಿ ರೋಮಾವಲಿರಿತಿ ॥

ಮಹಾದೇವನ ಕ್ರೋಧವಹ್ನಿಯ ಜ್ವಾಲೆಗಳಿಂದ ದಗ್ಧನಾದ ಕಾಮನು, ನಿನ್ನ ನಾಭಿಯೆಂಬ ಸರೋವರದಲ್ಲಿ ಮುಳುಗಿದನು. ಆದುದರಿಂದ ದಗ್ಧಕಾಮನಿಂದ ಹೊಗೆಹೊರಟಿತು. ಆದನ್ನೇ ರೋಮಾವಲಿಯೆಂದು ಕರೆಯುವರು. ಅತಿಶಯೋಕ್ತಿ-ಉತ್ಪ್ರೇಕ್ಷೆಗಳ ಸೌಂದರ್ಯ ಅಲ್ಲಿ ಅಡಕವಾಗಿರುವುದು. ಕುವಲಯಾನಂದವನ್ನು ಅಲಂಕಾರತೃಷ್ಣೆಯುಳ್ಳ ತರುಣರು ಅವಶ್ಯವಾಗಿ ಅಭ್ಯಾಸಮಾಡಬೇಕು.

ಪೃಶಾದ್ರಾಘೀಯಸ್ಯಾ ದರದಲಿತ ನೀಲೋತ್ಪಲರುಚಾ.
ದವೀಯಾಂಸಾಂ ದೀನಂ ಸ್ನಪಯ ಕೃಪಯಾ ಮಾಮಪಿ ಶಿವೇ।
ಅನೇನಾಯಂ ಧನ್ಯೋ ಭವತಿ ನ ಚ ತೇ ಹಾನಿರಿಯತಾ ।
ವನೇವಾ ಹಮ್ರ್ಯೇವಾ ಸಮಕರನಿಪಾತೋ ಹಿತಕರಃ ।

ಅರ್ಧ ಅರಳುವ ನಿಲೇಂದೀವರದಂತೆ ಇರುವ ನಿನ್ನ ಕೃಪಾಕಟಾಕ್ಷದಿಂದ, ದೀನನಾದ ನನ್ನನ್ನು ಸ್ನಾನಮಾಡಿಸಿಬಿಡು. ನಿನಗೆ ಇದರಿಂದ ಅಷ್ಟೇನು ಹಾನಿಯಿಲ್ಲ. ನನಗೆ ಮಹತ್ತ್ವವಾದದ್ದು. ದೀನನ ಉದ್ಧಾರವಾಗಿ ಬಿಡುವುದು. ಅರಮನೆಯಲ್ಲಿ ಏನು, ಅಡವಿಯಲ್ಲಿ ಏನು ಚಂದ್ರಕಿರಣ ಸಮವಾಗಿ ಬೆಳಕು ಕೊಡುವುದು. ನಿನ್ನ ಕಟಾಕ್ಷವನ್ನು ನೀನು ಏಕ್ಕೃತವಾಗಿ ಮಾಡಿದಲ್ಲಿ, ದೂರದಲ್ಲಿದ್ದ ನನ್ನನ್ನೂ ಅದು ಉದ್ಧರಿಸುವುದು — ಅರ್ಥಾಂತರದಿಂದ ಕಂಗೊಳಿಸುವುದು. ಸಮರ್ಥವಾದ ಅರ್ಥವನ್ನು ಸಮರ್ಥಿಸುವುದು ಕಾವ್ಯಲಿಂಗ. ಸಾಮಾನ್ಯವನ್ನು ವಿಶೇಷದಿಂದ, ವಿಶೇಷವನ್ನು ಸಾಮಾನ್ಯದಿಂದ ಸಮರ್ಥಿಸುವುದು ಅರ್ಥಾಂತರನ್ಯಾಸ.

ದೇವಿ, ನಿನ್ನ ದೃಷ್ಟಿ ಎಂತಹದು? ಅದು ಭಾರತದ ಮುಖ್ಯ ನಗರಗಳನ್ನು ನೆನಪಿಗೆ ತರುವುದು:

ವಿಶಾಲಾ ಕಲ್ಯಾಣೀ ಸ್ಫುಟರುಚಿರಯೋಧ್ಯಾ ಕುವಲಯೈಃ ।
ಕೃಪಾಧಾರಾ ಽಽಧಾರಾ ಕಿಮುಪಿ ಮಧುರಾ ಭೋಗವತಿಕಾ ।
ಅವಂತೀ ದೃಷ್ಟಿಸ್ತೇ ಬಹುನಗರ ವಿಸ್ತಾರವಿಜಯಾ ।
ಧ್ರುವಂ ತತ್ತನ್ನಾಮವ್ಯವಹರಣ ಯೋಗ್ಯಾ ವಿಜಯತೇ ॥

ಸ್ತ್ರೀಯರಲ್ಲಿ ಆ ಪ್ರಕಾರದ ದೃಷ್ಟಿ ಸಾಮಾನ್ಯವಾದದ್ದು. ನೋಟ ವಿಸ್ತೃತವಾದದ್ದು. ಕಲ್ಯಾಣೀ ಅಭ್ಯುದಯಕಾರಕ — ಕುವಲಯೈಃ ಅಯೋಧ್ಯಾ: ನೀಲಕಮಲಗಳು, ಆ ನೋಟದೊಡನೆ ಯುದ್ಧಮಾಡಲಾರವು. ನೀಲಕಮಲಗಳ ಸೌಂದರ್ಯವನ್ನು ನಿನ್ನ ನೋಟ ಜಯಿಸಿದೆ. ಅಯೋಧ್ಯಾ ಒಂದು ನಗರ (ಇಲ್ಲಿ ಶ್ಲೇಷವಿರುವುದು). ಕರುಣೆಯ ಧಾರೆಗಳಿಗೆ ಆಧಾರವಾದದ್ದು. ಧಾರಾ-ಇದೊಂದು ನಗರ. ಭೋಜರಾಜನ ರಾಜಧಾನಿಯಾಗಿತ್ತು. ನಿನ್ನ ದೃಷ್ಟಿ ಮಧುರವಾದದ್ದು ಮಧುರೆ ಕೃಷ್ಣನ ನಗರ. ಭೋಗವುಳ್ಳದ್ದು (ಮೈತ್ರೀ) ನೋಟ. ಭೋಗವತಿಯೂ ಒಂದು ನಗರ. ಅವಂತೀ: ಕಾಪಾಡತಕ್ಕದ್ದು. ಅವಂತೀನಗರ ಮುಖ್ಯ ನಗರಗಳ ಸ್ವಾಮಿಕವಾಗಿರುವುದು.

ಕವಿಸಮಯದ ಚಮತ್ಕಾರವನ್ನೂ ಈ ಕಾವ್ಯದಲ್ಲಿ ಕಾಣಬಹುದು. ಕುರವಕತರು ಪದ್ಮಿನೀ ಜಾತಿಯ ಸುಂದರ ಸ್ತ್ರೀಯರಿಂದ ಆಲಿಂಗಿತವಾದರೆ ಚಿಗಿಯುವುದೆಂದು ಕವಿಸಮಯ — ಈ ಕಲ್ಪನೆಯನ್ನು ಮುಂದಿಟ್ಟುಕೊಂಡು ಕವಿ ಪಾರ್ವತಿಯ ಪಾತಿವ್ರತ್ಯವನ್ನು ಬಣ್ಣಿಸಿರುವನು:

ಕಲತ್ರಂ ವೈಧಾತ್ರಂ ಕಮಕಲಿ ಭಜಂತೇ ನ ಕವಯಃ ।
ಶ್ರಿಯೋ ದೇವ್ಯಾಃ ಕೋವಾ ನ ಭವತಿ ಪತಿಃ ಕೈರಪಿಧನೈಃ ।
ಮಹಾದೇವಂ ಹಿತ್ವಾ ತವ ಸತಿ ಸತೀನಾಮಚರಮೇ ।
ಕುಚಾಭ್ಯಾಮಾಸಂಗಃ ಕುರವಕತರೋರಪ್ಯಸುಲಭಃ ॥

ಎಷ್ಟೋ ಕವಿಗಳು ಬ್ರಹ್ಮನ ರಾಣಿಯಾದ ಸರಸ್ವತಿಗೆ ಪತಿ ಎನ್ನಿಸಿಕೊಂಡಿರುವರು. ಕೆಲಮಟ್ಟಿಗೆ ಧನವಿದ್ದರಿ ಸಾಕು; ಲಕ್ಷ್ಮೀಪತಿ ಎನ್ನಿಸಿಕೊಳ್ಳುವನು. ನೀನು ಮಾತ್ರ ಪತಿವ್ರತೆಯರಲ್ಲಿ ಪ್ರಥಮಳು. ನಿನ್ನ ಕುಚಾಲಿಂಗನವು, ಮಹಾದೇವನನ್ನು ಉಳಿದು, ಆಲಿಂಗನವನ್ನು ಬಯಸುವ ಕುರವಕ ವೃಕ್ಷಕ್ಕೂ ದುರ್ಲಭ.

ಚಕೋರವು ಚಂದ್ರನ ಬೆಳುದಿಂಗಳನ್ನು ಕುಡಿಯುವುದೆಂದು ಕವಿಸಮಯ. ಆದರೆ—

ಸ್ಮಿತಜ್ಯೋತ್ಸ್ನಾಜಾಲಂ ತವವದನ ಚಂದ್ರಸ್ಯ ಪಿಬತಾಂ ।
ಚಕೋರಾಣಾಮಾಸೀದತಿ ರಸತಯಾ ಚಂಚುಜಡಿಮಾ ।
ಅತಸ್ತೇ ಶೀತಾಂಶೋರಮೃತಲಹರೀಮಾಮ್ಲರುಚಯಃ ।
ಪಿಬಂತಿ ಸ್ವಚ್ಛಂದಂ ನಿಶಿನಿಶಿಭೃಶಂಕಾಂಜಿಕಧಿಯಾ ।

ಚಕೋರಗಳು ನಿನ್ನ ಮುಖಚಂದ್ರಿಕೆಯನ್ನು ಕುಡಿಕುಡಿದು ಅತಿ ಮಾಧುರ್ಯದಿಂದ ಅವುಗಳ ಚಂಚುಪುಟವು. ಜಡತ್ವವನ್ನು ಪಡೆಯಿತು. ಬಳಿಕ ಅವು ಹುಳಿಯನ್ನು ಸೇವಿಸಬೇಕೆಂದು. ಚಂದ್ರನ ಬೆಳುದಿಂಗಳನ್ನು ಕಾಂಜಿಕ (ಕಾಡಿ) ಬುದ್ಧಿಯಿಂದ ರಾತ್ರಿರಾತ್ರಿಗಳಲ್ಲಿ ಕುಡಿಯುತ್ತಲಿವೆ. ಚಂದ್ರನ ಬೆಳುದಿಂಗಳು ರುಚಿ ದೇವಿಯ ಮುಖಚಂದ್ರನ ಬೆಳುದಿಂಗಳ ಮುಂದೆ ಹುಳಿಯಾಯಿತು—

ವ್ಯತಿರೇಕಾಲಂಕಾರವನ್ನು ಇಲ್ಲಿ ಹೇಳಬಹುದು. ಮುಖದ ಬೆಳುದಿಂಗಳು ತೇಜಸ್ವಿ;....ಚಂದ್ರನ ಬೆಳಕೂ ಹಾಗೆ. ಆದರೆ ಅದು ಮಧುರ; ಇದು ಆಮ್ಲ. (ವ್ಯತಿರೇಕೋ ವಿಶೇಷಶ್ಚೇತ್ ಉಪಮಾನೋಪಮೇಯಯೋಃ)

ಕಂಕೇಲಿ ತರು ಸ್ತ್ರೀಯರ ಪಾದಾಘಾತದಿಂದ ಹೂಬಿಡುವುದು. ಇದೂ ಕವಿಸಮಯ ಇದನ್ನು ಕವಿ ದೇವಿಯ ಸ್ತುತಿಯಲ್ಲಿ ಚಾತುರ್ಯದಿಂದ ಉಪಯೋಗಿಸಿಕೊಳ್ಳುವನು:

ನಮೋ ವಾಕಂ ಬ್ರೂಮೋ ನಯನ ರಮಣೀಯಾಯ ಪದಯೋಃ ।
ಸ್ತವಾಸ್ಮೈ ದ್ವಂದ್ವಾಯ ಸ್ಫುಟರುಚಿರ ಸಾಲಕ್ತಕವತೇ ।
ಅಸೂಯತ್ಯತ್ಯಂತಂ ಯದಭಿಹನನಾಯ ಸ್ಪೃಹಯತೇ ।
ಪಶೂನಾಮಿಶಾನಃ ಪ್ರಮದವನ ಕಂಕೇಲಿ ತರವೇ ।

ನಿನ್ನ ಚರಣಗಳಿಗೆ ನಮಸ್ಕಾರ. ಅವು ಲಾಕ್ಷಾರಸವನ್ನು ಪಡೆದಿದ್ದರೂ ಅದರಂತೆ ಕೆಂಪಾಗಿವೆ. ನಿನ್ನ ಚರಣತಾಡನವನ್ನು ಮಹಾದೇವನು ಬಯಸುವನು ಕಂಕೇಲಿ ತರುವಿಗೆ ಎಲ್ಲಿ ಪದಾಘಾತಮಾಡುವೆಯೋ ಎಂದು ಅಸೂಯೆ ಪಡುವನು.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ

● ಧ್ವನಿವಾಹಕ ಯಂತ್ರದ ಮೂಲಕ

● ಉತ್ತಮ ಚಿತ್ರಗಳ ಮೂಲಕ

● ಮ್ಯಾಜಿಕ್ ಲ್ಯಾಂಟರ್ನ್-ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್

ಗಾಂಧಿಚೌಕ, ಧಾರವಾಡ

ಪಾರ್ವತಿಯ ಪಾದಾಘಾತವನ್ನು ಕವಿ ಇನ್ನೊಂದು ರೀತಿಯಿಂದಲೂ ಉತ್ಪ್ರೇಕ್ಷಿಸುವನು:

ವೃಷಾಕೃತ್ವಾ ಗೋತ್ರಸ್ಖಲನಮಥ ವೈಲಕ್ಷ್ಯ ನಮಿತಂ ।
ಲಲಾಟೇ ಭರ್ತಾರಂ ಚರಣಕಮಲೇ ತಾಡಯತಿ ತೇ ।
ಚಿರಾದಂತಃಶಲ್ಯಂ ದಹನಕೃತಮುನ್ಮೂಲಿತವತಾ ।
ತುಲಾಕೋಟಿಕ್ವಾಣೈಃ ಕಲಿಕಿಲಿತವಿಶಾನರಿಪುಣಾ ॥

ಮಹಾದೇವನು ಒಮ್ಮೆ ಪಾರ್ವತಿಯನ್ನು, ತಪ್ಪಿ ಬೇರೆ ಹೆಸರಿನಿಂದ ಕರೆದನು. ದೇವಿ, ಬೇರೆ ಸ್ತ್ರೀಯ ಹೆಸರನ್ನುಚ್ಚರಿಸಿದ ಕೂಡಲೆ ಅವನ ಹಣೆಯಲ್ಲಿ ಒದ್ದುಬಿಟ್ಟಳು. ಶಿವನ ಶತ್ರು ಕಾಮ. ಅವನಿಗೆ ಶಿವನ ಅವಮಾನದಿಂದ ಆನಂದವಾಯಿತು. ಪಾರ್ವತಿ ಒದ್ದ ಕೂಡಲೆ ಕಾಲಿಲ್ಲಿಯ ವೈಜಯಂತಿಗಳು ಝಣತ್ಕಾರ ಮಾಡಿದುವು. ಅದನ್ನು ಕವಿ ಉತ್ಪ್ರೇಕ್ಷಿಸುವನು. ಈ ಶಬ್ದ ಕಾಮನ ಕಿಲಿ ಕಿಲಿ ನಗೆ; ತನ್ನನ್ನು ಸುಟ್ಟ ಸೇಡುತೀರಿತೆಂದು.

ದೇವಿ, ನಿನ್ನ ಸ್ತುತಿಯನ್ನು ಮಾಡುವ ಶಬ್ದಗಳು—ನಿನ್ನವು. ನನ್ನವಲ್ಲ. ಕೆರೆಯ ನೀರನ್ನು ಕೆರೆಗೆ ಅರ್ಪಿಸಿ ಪುಣ್ಯಪಡೆಯುವೆನು. ಔಪಮ್ಯ ಸೌಂದರ್ಯ ನೋಡಿರಿ :

ಪ್ರದೀಪಜ್ವಾಲಾಭಿಃ ದಿವಸಕರನೀರಾಜನವಿಧಿಃ ।
ಸುಧಾ ಸೂತೇ-ಚಂದ್ರೋಪಲಜಲಲವೈರರ್ಘ್ಯರಚನಾ ।
ಸ್ವಕೀಯೈರಂಭೋಭಿಃ ಸಲಿಲನಿಧಿ ಸೌಹಿತ್ಯಕರಣಂ ।
ತ್ವದೀಯಾಭಿರ್ವಾಗ್ಭಿಃ ತವಜನನಿವಾಚಾಂ ಸ್ತುತಿರಿಯಂ ।

ದೀಪಮಾಲೆಯಿಂದ ಸೂರ್ಯನನ್ನು ಬೆಳಗಿದಂತೆ ಚಂದ್ರಕಾಂತ ಕಲ್ಲುಗಳು ನೀರಿನಿಂದ ಚಂದ್ರನಿಗೆ ಅರ್ಘ್ಯಪ್ರದಾನಮಾಡಿದಂತೆ, ಸಮುದ್ರಜಲದಿಂದ ಸಮುದ್ರನನ್ನು ಪೂಜಿಸಿದಂತೆ.

ಸೊಕ್ಕು

(ಲಲಿತಪ್ರಬಂಧ)

ಶ್ರೀ. ಬಿ. ಆರ್. ವಾಡಪ್ಪಿ, ಎಂ. ಎ., ಬಿ. ಟಿ ಧಾರವಾಡ

卐

'ಸೊಕ್ಕು' ಎಂಬ ಮಾತಿನ ನಿಜಾರ್ಥವೇನೇ ಇದ್ದರೂ, 'ಅಹಂಕಾರ' 'ಗರ್ವ' 'ಅಭಿಮಾನ' ಎಂಬ ಅರ್ಥದಲ್ಲಿ ಅದು ಪ್ರಚಾರದಲ್ಲಿದೆ. ಸೊಕ್ಕು ಮಾಡಬಾರದೆಂಬುದು ಹಿರಿಯರ ಉಪದೇಶವಾಣಿ! ಸೊಕ್ಕು ಬೇಕೇಬೇಕೆಂಬುದು ವ್ಯವಹಾರಿಗಳ ಅನುಭವವಾಣಿ!

卐

ಕಳೆದ ರವಿವಾರ ಜಡಿಮಳೆ ಒಂದೇ ಸವನೆ ಸುರಿಯುತ್ತಿತ್ತು. ನಮ್ಮ ಮನೆಯ ಎದುರಿನಲ್ಲಿ ವಿಶಾಲವಾಗಿ ಹಬ್ಬಿರುವ ಹೊಲಗಳೆಲ್ಲ ಸಮುದ್ರದ ರೂಪ ತಾಳಿದ್ದುವು! 'ಪುರಾಣಗಳಲ್ಲಿ ವರ್ಣಿತವಾದ ಪ್ರಳಯವೆಂದರೆ ಹೇಗಿರಬಹುದು?' ಎಂಬ ಯೋಚನೆಯೊಂದು ಮನದಲ್ಲಿ—ಕಳ್ಳನಂತೆ—ಸುಳಿಯುತ್ತಿತ್ತು.

'ಓಹೋ.....ಪ್ರಳಯಕಾಲದ ವರ್ಣನೆಯನ್ನು ನಾವು ಪುರಾಣಗಳಲ್ಲಿ ಮಾತ್ರ ನೋಡಬಲ್ಲೆವೇ ವಿನಾ, ಅದನ್ನು ಪ್ರತ್ಯಕ್ಷವಾಗಿ ಈ ನಮ್ಮ ಕಣ್ಣುಗಳಿಂದ ಕಾಣೆವು. ಅವಕ್ಕೇ ಅಂತಶ್ಚಕ್ಷು ಬೇಕಲ್ಲವೆ?' ಹೀಗೆ ವಿಚಾರ ಸೂಡುತ್ತ ಶತಪಥ ಮಾಡುತ್ತಿದ್ದೆ. ಒಮ್ಮೆಲೇ ಬೀದಿಯಲ್ಲಿ ಒಬ್ಬ ಅಜ್ಞಾತನ್ಯಕ್ತಿ "ನಿನ್ನ ಸೊಕ್ಕು ಬಿಟ್ಟುಬಿಡು.... ತಿಳೀತಾ?" ಎಂದು ಮತ್ತೊಬ್ಬನಿಗೆ ಬಿರುದನಿಯಲ್ಲಿ ನುಡಿದ. 'ಯಾರಿರಬಹುದು?' ಎಂದು ಹೊರಗೆ ಬರುವಷ್ಟರಲ್ಲಿಯೇ ಆ ವ್ಯಕ್ತಿಗಳು ಮಾಯವಾಗಿದ್ದರು. ವ್ಯಕ್ತಿಗಳೇನೋ ಮಾಯವಾದರು; ಆದರೆ 'ಸೊಕ್ಕು' ಎಂಬ ಧ್ವನಿಯು ನನ್ನ ಅಂತರಂಗವನ್ನು ಪ್ರವೇಶಿಸಿ 'ಸೊಕ್ಕಿನ' ಸ್ವರೂಪದ ಬಗ್ಗೆ ವಿಚಾರಮಾಡಹಚ್ಚಿತೆಂದರೆ ನೀವು ನಂಬಲಿಕ್ಕಿಲ್ಲ! ಒಮ್ಮೊಮ್ಮೆ ಹೀಗೆ ಸಾಮಾನ್ಯ ಸನ್ನಿವೇಶಗಳಿಂದಲೂ ಘನಕಾರ್ಯಗಳಿಗೆ ಚಾಲನೆ ಸಿಕ್ಕುತ್ತದಂತೆ ಅಲ್ಲವೆ?

ನಮ್ಮ ತಾಯಿಯವರು ದಾಸರ ಪದಗಳನ್ನು ಹೇಳುತ್ತಿದ್ದರು. ಅದರಲ್ಲಿಯ ಈ ಚರಣಗಳು ನನಗೆ ಇನ್ನೂ ನೆನಪಿನಲ್ಲಿವೆ:

"ಗುರುವವೇಕೋ ನಿನಗೆ ಪಾಮರ ಮನುಜನೆ,
ಧರೆಯೊಳಗೆ ಕುರುಸತಿಯ ಸರಿಯಾದೆನೆಂತೆಂಬ."

ಈ ಪದ್ಯವನ್ನು ಅವರು ಹೇಳಿದಂಗಲೆಲ್ಲ, ಗರುವ ಎಂದರೆ ಸೊಕ್ಕು ಮಾಡುವುದು ಒಳಿತಲ್ಲ—ಎಂದು ವಿವೇಕದ ನುಡಿಗಳನ್ನು ಹೇಳುತ್ತಿದ್ದರು. ಆಗ ನಮಗೇನೋ—ಅವರ ನುಡಿ ಕೇಳಬಾರದೆಂಬ ಸೊಕ್ಕೇ ತುಂಬಾ ಇತ್ತು! 'ಸೊಕ್ಕು ಇಲ್ಲದ ಮೇಲೆ ನಾವು ಇದ್ದಾವರೂ ಏನು ಪ್ರಯೋಜನ?' ಎಂದು, ನಮ್ಮ ಆ ತಾರುಣ್ಯದ ದಿನಗಳಲ್ಲಿ ನಮಗೆನಿಸುತ್ತಿತ್ತು. ಹಾಗೆ ಎನಿಸುವುದು ಸಹಜವಲ್ಲವೆ? ತರುಣರಾದವರಿಗೆ ಸೊಕ್ಕು ಇರಲೇಬೇಕೆಂದು ನಾನು ಹೇಳುತ್ತೇನೆ. ಅದನ್ನು ಕಳೆದುಕೊಂಡರೆ ತಾರುಣ್ಯದಲ್ಲಿಯೇ ಮುಪ್ಪನ್ನು ಅಪ್ಪಿಕೊಂಡಂತಾದೀತು! ಅದಕ್ಕೇ ತರುಣವಾಚಕರಿಗಾಗಿ ನಾನೊಂದು ಎಚ್ಚರಿಕೆ ಕೊಡಬಯಸುತ್ತೇನೆ: ನೀವು ಸರಿಯಾಗಿ ಸೊಕ್ಕು ಮಾಡುವುದನ್ನು ಕಲಿಯಿರಿ, ತಿಳಿಯಿತೇ? ಈ ಪ್ರಸಂಗದಲ್ಲಿ ಬಾಣಕಾದಂಬರಿಯ ಒಂದು ಪ್ರಸಂಗವು ನೆನಪಾಗುವುದು— ಸಂಸ್ಕೃತ ಪ್ರಿಯರಾದವರಿಗೆ— ಸಹಜವೆ! ಯುವರಾಜ ಚಂದ್ರಾಪೀಡನಿಗೆ ಶುಕನಾಸಮಂತ್ರಿಯು ಮಾಡುವ ಉಪದೇಶವು ಬಹಳ ಮಾರ್ಮಿಕವಾಗಿದೆ ತಾರುಣ್ಯದಲ್ಲಿ ಮನುಷ್ಯನು ಯಾರನ್ನೂ ಲೆಕ್ಕಿಸುವುದಿಲ್ಲವಂತೆ! ಮುಖ್ಯವಾಗಿ ಯೌವನವು ಸೊಕ್ಕಿನ ಸುಗ್ಗಿಯ ಕಾಲವೆಂದು ಅಲ್ಲಿಯ ಅಭಿಪ್ರಾಯ. ಅಹುದು, ಈ ಅಭಿಪ್ರಾಯಗಳನ್ನು ನಾವು ಲೆಕ್ಕಿಸದೆ ಮುಂದೆ ಹೋದರೆ ಮಾತ್ರ ಸಾಹಸದ ಕೆಲಸಗಳನ್ನು ಕೈಕೊಳ್ಳಬಲ್ಲೆವು. ಚಂದ್ರಾಪೀಡನಿಗಾದರೂ ಆ ಸುದೀರ್ಘ ಉಪದೇಶ ಕೇಳಿ 'ಇದೆಲ್ಲಿಯ ಪೀಡಾ?' ಎಂದು ಏಕೆ ಎನಿಸಲಿಲ್ಲವೋ ಏನೋ! ಈಗಿನ ಯುವಕರಿಗೆ, ಹೆರವರು ಮಾಡುವ ಉಪದೇಶವು ಒಂದು ಪೀಡೆಯಂದೆನಿಸುವುದಲ್ಲವೆ? ಇರಲಿ! ಸೊಕ್ಕು ಸಾಹಸಿಗಳಿಗೆ ಮಾತ್ರ ಸಿಗುವ ಸೊತ್ತು! ಮಹಾಭಾರತದ ಅರ್ಜುನನಾದರೂ ತನ್ನ ಶೌರ್ಯದ ಸೊಕ್ಕಿನಿಂದಲೇ ಪಾಶುಪತಾಸ್ತ್ರವನ್ನು ಶಿವನಿಂದ ಪಡೆದ. ತಾನು ಶಿವನಿಗೆ ಸೋಲುವ ಪ್ರಸಂಗ ಬಂದಾಗಿನ ಆತನ ನುಡಿಗಳನ್ನು ಕೇಳಿದರೆ, ಸೊಕ್ಕಿನ ಮಹತ್ತ್ವ ನಮಗೆ ವಿದಿತವಾಗುವುದು.

"ಜಗದೇಕವೀರನಾಮಂ ನಿನಗೆಗೆಡೆಯಾಯ್ತೆನಗೆ – ಪರ್ಬಿದತ್ತಣ್ದೆಸೆಯೊಳ್"

ಎಂದು ಆತನು ದುಃಖಿಸುತ್ತಾನೆ! ಸೊಕ್ಕು ಎಂತೆಂತಹವರನ್ನೂ ಬಿಟ್ಟಿಲ್ಲವೆಂದಬಳಿಕ, ಪಾಮರರಾದ ನಾವೇಕೆ ಅದನ್ನು ಬಿಟ್ಟುಕೊಡಬೇಕೆಂದು ಯಾರಾದರೂ ಕೇಳುವುದು ಸಹಜವೇ ಆಗಿದೆ.

ಪ್ರತಿಯೊಬ್ಬ ಮನುಷ್ಯನಲ್ಲಿ ಒಂದೊಂದು ವಿಶಿಷ್ಟವಾದ ಶಕ್ತಿ ಇದ್ದೇ ಇರುವುದು. ಅದರ ಬಗ್ಗೆ ಅತನಿಗೆ ಅಭಿಮಾನವಿದ್ದರೇನು ತಪ್ಪು? ಹಾಗೆ ಅವನು ಗರ್ವಪಡದಿದ್ದರೆ, ಹೆರವರು ಅತನನ್ನು ಗಣಿಸದೇ ಬಿಡಬಹುದಲ್ಲವೆ? "ಕಲಗಡಿಗೆಯ ಉಕ್ಕು, ಬಡವರ ಸೊಕ್ಕು!" ಎಂಬುದೊಂದು ಜಾನಪದದ ಹೇಳಿಕೆಯುಂಟು. ಇದರ ಮಥಿತಾರ್ಥವೇನು?—ಎಂದು ಹಲವರಿಗೆ ಕುತೂಹಲ ಉಂಟಾಗುವುದು ಸಹಜವಿದೆ ಬಡವರಾದವರಿಗೆ, ತಾವು ಬಡವರಾದರೂ ಅಭಿಮಾನದಿಂದ ಬಾಳಬೇಕೆಂಬ ಒಂದು ಅನುಪಮ ಸೊಕ್ಕು ಇರುತ್ತದೆ! ಹೀಗೆ ಅವರು ಸೊಕ್ಕುಮಾಡದಿದ್ದರೆ— ಸಿರಿವಂತರೆಂಬವರು ಅವರನ್ನು ಮನುಷ್ಯರೆಂದು ಗಣಿಸುತ್ತಿದ್ದರೋ ಇಲ್ಲವೋ ಹೇಳಲು ಸಾಧ್ಯವಿಲ್ಲ! ಸಿರಿವಂತರಿಗೆ ತಮ್ಮ ಅಂತಸ್ತಿನ ಸೊಕ್ಕು ಅವರಿಸಿದ್ದರೆ— ಬಡವರಿಗೆ, "ಹಂಗಿನರಮನೆಗಿಂತ ಬಿಂಗಡದ ಗುಡಿಲೇಸು" ಎಂಬ ವಿವೇಕ ಜಾಗೃತವಾಗಬೇಡವೆ?

ಕೆಲವರು ಸೊಕ್ಕನ್ನು ಮೇಲೆ ತೋರಗೊಡುವುದಿಲ್ಲ. ಮುಖದಲ್ಲಿ ನೂತ್ರ ಸಮುದ್ರದ ಶ್ರೀಮದ್ಗಾಂಭೀರ್ಯ ಎದ್ದುಕಾಣುತ್ತಿರುತ್ತದೆ. ಆಂತರ್ಯದಲ್ಲಿಯ ಸೊಕ್ಕು ವಡವಾನಲವಿದ್ದಂತೆ! ಇನ್ನು ಕೆಲವರ ಸೊಕ್ಕು ಪಕ್ಷತೆಯ ಸೋಗಿನಲ್ಲಿರುವುದುಂಟು. ಅದು ಮುಸುಕಿನೋಗಿನ ಬೊಣ್ಣೆಯಾಗಿ ಪರಿಣಮಿಸಿದಾಗ, ಎದುರಾಳಿಗಳು ಪಂಗುಬಡೆದು ನಿಲ್ಲಬಹುದು. ಸೊಕ್ಕು ಸಾರ್ವತ್ರಿಕವಾಗಿ ಕಬ್ಬಿಕೊಂಡಿದ್ದರೂ ಹಲವರು ಅದನ್ನು ಕಡಿಮೆಮಾಡಲು ಯತ್ನಿಸಬಹುದು; ಕಡಿಮೆನೂಡಿಕೊಳ್ಳಲೂ ಬಹುದು. ಅಂತಹ ಮಹಾತ್ಮರು ತೀರ ವಿರಳವೆಂದೇ ಹೇಳಲಡ್ಡಿಯಿಲ್ಲ ತನ್ಮಲ್ಲಿ ಯಾವ ಗುಣಗಳಿಲ್ಲದಿದ್ದರೂ 'ಒಣ ಸೊಕ್ಕು' ಮಾಡುತ್ತ ಬಿರ್ರನೇ ಬಿಗಿದುಕೊಂಡ ಮುಖಮುದ್ರೆಯ ಮಹಾತ್ಮರಿಗೆ, ಸೊಕ್ಕಿನ ಹೊರತು ಜಗತ್ತಿನಲ್ಲಿ ಬೇರೆ ಸೊತ್ತೇ ಇರಲಾರದು! ಅಧಿಕಾರದ ಸೊಕ್ಕು ಮಹಾ ಅಧಿಕಪ್ರಸಂಗಿಯಂತೆ ಹಾರಾಟ ನಡೆಸುತ್ತದೆಂದು ಸಾಮಾನ್ಯರು ಗುಣಗುಟ್ಟುವುದನ್ನು ಕೇಳಿರಬಹುದಲ್ಲವೆ? ಅದರಲ್ಲಿಯೂ ತೀರ ಹೆಡ್ಡರಿಗೆ ಅಧಿಕಾರ ದೊರೆತರಂತೂ ಕೇಳಿಯೇ ಹೋಯಿತು — ಬುದ್ಧಿವಂತರಿಗೆ ಬವಣೆಯ ಕಾಲ ಬಂದೊದಗಿತೆಂದು ಧಾರಾಳವಾಗಿ ಹೇಳಬಹುದು.

ರಾಜಸೂಯ ಯಾಗವನ್ನು ಮಾಡಿ ಧನ್ಯನಾದೆನೆಂಬ, ಧರ್ಮರಾಜನ ಅಂತರಂಗದ ಯಾವುದೋ ಒಂದು ಭಾಗದಲ್ಲಿ ಸೊಕ್ಕಿನ ಒಂದು ಅಂಶವು ಅಡಗಿಕೊಂಡಿತ್ತು; ಶ್ರೀಕೃಷ್ಣನಿಗೆ ಅದರ ಮನವರಿಕೆಯಾಯಿತಂತೆ. ಧರ್ಮರಾಯನಲ್ಲಿ ಹುದುಗಿದ್ದ ಆ ಸೊಕ್ಕನ್ನು ಬಹಿರಂಗಗೊಳಿಸುವುದು ಎಂತು? ಶ್ರೀಕೃಷ್ಣನು ಧರ್ಮನನ್ನು ಕರೆದುಕೊಂಡು ಯಜ್ಞಭೂಮಿಯನ್ನೆಲ್ಲ ತಿರುಗಾಡಿಸಿದ. ಮಹಾ ವೈಭವದಿಂದ ಜರುಗಿದ ಯಜ್ಞದ ಚಿತ್ರವು ಧರ್ಮನ ಮನಸ್ಸಿನಲ್ಲಿ ಒರಿದು ಅಭಿಮಾನವನ್ನು ತಂದೊಡ್ಡಿತು. ಹಾಗೆ ಅವರಿರ್ವರೂ ಮುಂದೆ ಸಾಗಿರುವಾಗ, ಯಜ್ಞಕುಂಡದಲ್ಲಿ ಒಂದು ಬಂಗಾರದ ಮುಂಗಲಿ ಹೊರಳಾಡುತ್ತಿತ್ತು! ಅದನ್ನು ನೋಡಿ ಧರ್ಮರಾಯನಿಗೆ ಬಹು ಆಶ್ಚರ್ಯವಾಯಿತು. ಶ್ರೀಕೃಷ್ಣ ಮುಗುಳು ನಗೆ ನಕ್ಕು "ಧರ್ಮರಾಜಾ, ಅದರ ಬಾಲ ಮಾತ್ರ ಬಂಗಾರದ್ದಾಗದೇ ಉಳಿದಿದೆ—ತಿಳಿಯಿತೆ?" ಎಂದ. ಆಗ ಮುಂಗಲಿ ತಾನೇ ಬಂದು ಕಥೆ ಹೇಳಿತಂತೆ: ಹಿಂದಕ್ಕೆ ಒಬ್ಬ ಬಡ ಬ್ರಾಹ್ಮಣನಿದ್ದ—ಅದರೂ ಅತನು ಮಹಾ ದಾನಿಯಾಗಿದ್ದ. ಒಂದು ದಿನ ಮನೆಯಲ್ಲಿ ಏನೂ ಇರಲಿಲ್ಲವಂತೆ; ಆಗ ಒಬ್ಬ ಭಿಕ್ಷುಕನು ಬಂದು ದಾನಬೇಡಿದಾಗ—ಆ ಬ್ರಾಹ್ಮಣನು ತನ್ನ ಭಾಗದ ಜನ್ನವನ್ನು ದಾನಮಾಡಿ ತಾನು ಉಪವಾಸ ಉಳಿದನಂತೆ! ಆ ಬ್ರಾಹ್ಮಣನ ಮನೆಯ ಒಲೆಯ ಬೂದಿಯಲ್ಲಿ ಹೊರಳಿದಾಗ ಮುಂಗಲಿಯ ಮೈಯೆಲ್ಲ ಬಂಗಾರವಾಯಿತಂತೆ—ಛೆ! ಬಾಲ ಮಾತ್ರ ಹಾಗೆಯೇ ಉಳಿಯಿತು. ಧರ್ಮರಾಜನ ಯಜ್ಞಕುಂಡದಲ್ಲಿ ಬಂಗಾರವಾದೀತೆಂದು ಹೊರಳಾಡಿದರೂ, ತನ್ನ ಬಾಲ ಹಾಗೆಯೇ ಉಳಿಯಿತೆಂದು ಹೇಳಿದಾಗ, ಧರ್ಮರಾಯನ ಸೊಕ್ಕು ತಾನೇ ಮಾಯವಾಗಿ ಹೋಗಿತ್ತು. ಸೊಕ್ಕು ನಮ್ಮನ್ನು ಹೇಗೆ ಆವರಿಸುವುದೆಂದು ನಮಗೆ ಹೇಳಲು ಒಮ್ಮೊಮ್ಮೆ ಬರುವುದೇ ಇಲ್ಲ. ಆದರೂ ಸೊಕ್ಕು ನಮ್ಮನ್ನು ಕೈವಶಮಾಡಿಕೊಂಡಿರುತ್ತದೆ. ಸೊಕ್ಕಿಗೆ ಸೋಲದವರಿಲ್ಲ. ಆದರೂ ಸೊಕ್ಕನ್ನು ಬಿಡಲು ಉಪದೇಶಗಳೇನೋ ಜಗತ್ತಿನಲ್ಲಿ ನಡೆದೇ ನಡೆದಿರುವುವಲ್ಲವೆ?

ಸಾರಸ್ವತಪ್ರಪಂಚದಲ್ಲಿ ಸೊಕ್ಕು ಪ್ರತಿಭೆಯ ಒಂದು ಅಪರಾವತಾರವೇ ಆಗಿರುವುದೆಂದು ಹೇಳಲಡ್ಡಿಯಿಲ್ಲ. ಪುರಾತನ ಕವಿಗಳ ಕಾವ್ಯಗಳನ್ನು ಓದಿದಾಗೆಲ್ಲ ಈ ಮಾತು ವಿದಿತವಾಗುವುದಲ್ಲವೆ! ಅದೇಕೆ? ಕನ್ನಡದ ಆದಿಕವಿ ಪಂಪನೇ ವಿಕ್ರಮಾರ್ಜುನ ವಿಜಯದಲ್ಲಿ ಹೇಳುವ ಮಾತನ್ನು ಗಮನಿಸಬಹುದು: "ಮುನ್ನಿನ ಕಬ್ಬಮೆಲ್ಲನುಂ ಇಕ್ಕಿ ನೆಟ್ಟಿದುವು ಎನೆ." ಎಂದು ಬಹು ಹೆಮ್ಮೆಯಿಂದ (?) ಕವಿ ತನ್ನ ಕವಿತಾಸಾಮರ್ಥ್ಯವನ್ನು ಕುರಿತು ಹೇಳಿಕೊಳ್ಳುತ್ತಾನೆ. ಪಂಪನ ಕಾವ್ಯ ಓದಿದ ಮೇಲೆ, ನಮಗೆಲ್ಲ ಆತನ ಸೊಕ್ಕಿನ ಬಗ್ಗೆ ಕೋಪವೇನೂ ಬರುವುದಿಲ್ಲ ನಿಜ.....ಆದರೆ 'ವಿದ್ಯಾ ವಿನಯೇನ ಶೋಭತೇ' ಎಂಬ ಸುಭಾಷಿತವನ್ನು 'ವಿದ್ಯಾವಿನಯೇನ....ನ ಶೋಭತೆ' ಎಂದು ಅರ್ಥ ಮಾಡಿಕೊಳ್ಳಬೇಕೇನೋ ಎಂದೆನಿಸುವುದಿಲ್ಲವೆ? ಸೊಕ್ಕಿನಿಂದ ಬೆಳೆದ ಬೆಳೆ ಕಣ್ಣಿಗೆ ಬಹು ಅಂದವಾಗಿ ಕಾಣುವುದಲ್ಲವೆ? ಹಾಗೆ ಸೊಕ್ಕಿನಿಂದ ಹೊರಹೊಮ್ಮಿದ ಕಾವ್ಯಗಳೂ 'ಓಜಸ್ಸು.....ಕಾಂತಿ' ಇವುಗಳಿಂದ ತಮ್ಮ ಖ್ಯಾತಿಯನ್ನು ಪ್ರಪಂಚದಲ್ಲಿ ಹಬ್ಬಿಸಬಲ್ಲವು ಅಂತಹ ಸುಂದರ ಕೃತಿಯನ್ನು ನಿರ್ಮಾಣಮಾಡಿದ ಕವಿ ಧನ್ಯನಲ್ಲವೆ? ಸೊಕ್ಕನ್ನು ನಾವು ಹಳಿಯುವುದಕ್ಕಿಂತ ಸೊಕ್ಕಿನ.....ಸದುಪಯೋಗ ಮಾಡಿಕೊಳ್ಳುವುದು ಅವಶ್ಯವಲ್ಲವೆ? ಸೊಕ್ಕು ತುಂಟ ಕುದುರೆ—ಅದನ್ನೇರುವವರು ಬಹು ಜಾಗರೂಕತೆ ವಹಿಸಬೇಕು....ಎಚ್ಚರಿಕೆ! ರತ್ನತ್ರಯರಲ್ಲೊಬ್ಬನಾದ ಮಹಾಕವಿ ರನ್ನನ ಗದಾಯುದ್ಧದ ಪ್ರಥಮಾಶ್ವಾಸವನ್ನು ಓದಿದಾಗ ರನ್ನನು ಮಹಾ ಎದೆಗಾರನೆಂಬುದು ಸಿದ್ಧನಾಗುವುದು:—

ರತ್ನಪರೀಕ್ಷಕ ನಾಂ ಕೃತಿ
ರತ್ನಪರೀಕ್ಷಕನೆನೆಂದು ಫಣಿಪತಿಯ ಫಣಾ–
ರತ್ನಮುಮಂ ರತ್ನವ ಕೃತಿ–
ರತ್ನಮುಮಂ ಪೇಳ್ ಪರೀಕ್ಷಿಪಂಗೆಂಟಿರ್ದೆಯೇ? ||

ಈ ಸಾಹಸದ ಮಾತುಗಳನ್ನಾಡಿದ ಕವಿಗೆ ತನ್ನ ಕವಿತಾ ಸಾಮರ್ಥ್ಯದ ಬಗೆಗೆ ಸೊಕ್ಕು ಇದ್ದಿತೆಂದು 'ಬೀರನ ಕಥೆ' ಹೇಳುವ ಸಾಮಾನ್ಯಕವಿಗಳಿಗೆ ಎನಿಸಬಹುದು. ರನ್ನನಾದರೋ ಅಂತಹ ಪಳಿಗೆ ಅಂಜುವ ಅಳ್ಳೆದೆಯವನಲ್ಲ. ಆತನು ಇನ್ನೂ ಒಂದು ಹೆಜ್ಜೆ ಮುಂದಿಟ್ಟು—

ಅರಾತೀಯ ಕವೀಶ್ವರ–
ರಾರುಂ ಮುನ್ನಾರ್ತರಿಲ್ಲ, ವಾಗ್ದೇವಿಯ ಭಂ-।
ಡಾರದ ಮುಂದ್ರೆಯನೊಡೆವಂ
ಸಾರಸ್ವತನೆನಿಪ ಕವಿತೆಯೊಳ್ ಕವಿರತ್ನಂ ||

ಎಂದು ಇನ್ನುಳಿದ ಕವಿಗಳು ಗದಗದ ನಡಗುವಂತೆ ಮಾಡಿವ್ವಾನೆಂದು ಹೇಳಿದರೂ, ಆತನ ಸೊಕ್ಕು ಪ್ರತಿಭೆಯ ಮಾತಾಗಿದೆ ಎಂದು ಹೇಳಿನ್ನಾವೆಲ್ಲಾ ರಸಿಕರು ತಣಿಯಬಹುದಲ್ಲವೆ? ಒಂದಲ್ಲ ಎರಡಲ್ಲ —

ಅನೇಕ ಬಗೆಯಾಗಿ ಹಿಂಬಣ ಕವಿಗಳು ತಮ್ಮ ಕಬ್ಬದ ಮಹಿಮೆ— ತಮ್ಮ ಕವಿತಾಸಾಮರ್ಥ್ಯದ ಮಹಿಮೆಯನ್ನು ಸ್ವತಃ ಹೊಗಳಿ ಕೊಂಡಿದ್ದಾರೆ. (ಅನ್ಯರು ಹೊಗಳಲಿಕ್ಕಿಲ್ಲವೆಂದು!) ಗಮಗಿನ ನಾರಾಯಣಪ್ಪನಾದರೋ ವೀರನಾರಾಯಣನ ಭಕ್ತ ....ಏಕೋ, ವಿರಕ್ತಿಭಾವವನ್ನು ತನ್ನ ಬಗ್ಗೆ ಇಟ್ಟುಕೊಳ್ಳದೆ "ಪದವಿಟ್ಟಳುಪದೊಂದಗ್ಗಳಕೆ" ಎಂದು ಹೇಳಿಕೊಂಡೇ ಮುಂದೆ ಸಾಗಿದ್ದಾನೆ! ಇರಲಿ. ಹಿಂದಿನವರ ಮಾತು ಹಾಗಾದರೆ ಇಂದಿನವರ ಮಾತು ತುಸು ಬೇರೆಯಾಗಿದೆ. ಏಕಾಂಕನಾಟಕಗಳನ್ನು ಬರೆಯುವವರಿಗೆ ತಾವು 'ಶಾ' 'ಇಬ್‌ಸನ್' ಎನ್ನುವಷ್ಟರ ಮಟ್ಟಿಗೆ ಅಭಿಮಾನ! ಕಾದಂಬರಿಕಾರರಿಗೆ ಯಾರೂ ಬಳಸದ ತಂತ್ರ ಬಳಸಿದ್ದೇವೆ—ಎಂಬ ಬಿಂಕ! ಚಿಕ್ಕ ಕಥೆಗಳಲ್ಲಿ ತಮ್ಮದೇ ಪಳಗಿದ ಕೈ—ಎಂದು ಪಲವು ಲಘುಕಥಾ ಲೇಖಕರ ಪಾರಾಟ ಹೀಗೆ ಏನೋ ನಡೆದಿರುವುದನ್ನು ಕಂಡ ಸಾಮಾನ್ಯ ಓದುಗನು ಬೆಪ್ಪಾಗಿ ನಿಲ್ಲಬಹುದು! ಇದು ಇಂದಿನ ಸಾಹಿತ್ಯಪ್ರಪಂಚ! ಆದರೂ ಸಾಹಿತ್ಯವು ಜೀವನದ ಸವಿಯೂಟವಲ್ಲವೆ? ಸಾಹಿತಿಗಳಲ್ಲಿ ಕಾಣಬರುವ ಈ ವಿಧಾನಗಳನ್ನು ಕಂಡಾಗ, ಒಂದು ಬಗೆಯ ಸಮಾಧಾನ— ಮತ್ತೊಂದು ರೀತಿಯ ಅಸಮಾಧಾನವಾಗುವುದು ಸಹಜವಿದೆ. 'ಸಮಾಧಾನವೇಕೆ?' ಎಂದು ಯಾರಾದರೂ ಕೇಳಿದರೆ— 'ಅವರು ಬರೆಯುತ್ತಾರಲ್ಲ, ಅಷ್ಟೇ ಸಾಕು!' ಎಂದು 'ಅಸಮಾಧಾನವೇಕೆ?' ಎಂದು ಕೇಳಿದಾಗ, ಆತ್ಮರಕ್ಷಣೆಯ ಸಲುವಾಗಿ ಮೌನವಾಗಿರುವುದು ಒಳಿತು!

ನಿತ್ಯಜೀವನದಲ್ಲಿಯ ಸೊಕ್ಕಿನ ಸ್ವರೂಪದರ್ಶನವನ್ನು ಮಾಡಿಕೊಳ್ಳುವುದು ಅಸಾಧ್ಯವೇ ಸರಿ. 'ಸರ್ವಂ ಸೊಕ್ಕುಮಯಂ ಜಗತ್' ಎಂದು ಹೇಳಬಹುದು. ಇಷ್ಟೇಕೆ? ಮುಖಪ್ಪೌರಮಾಡಿಕೊಂಡು ಇಸ್ತ್ರೀ ಪ್ಯಾಂಟ್ ಹಾಕಿಕೊಂಡಾಗ, ಒಂದು ಅಪೂರ್ವ ತೇಜಸ್ಸಿನ ಕೊಂಚ ಸೊಕ್ಕು ಮುಖಕಮಲವನ್ನೂ ಆವರಿಸಿಸುವಾಗ, ಬಿಂಕದ ತರುಣರು ಇನ್ನೂ ಸೊಕ್ಕಿನಿಂದ ಬಿಗಿದುಕೊಳ್ಳಬಹುದು. ಗೌಡರ ಮನೆಯ ಮುಂದಿನ ನಾಯಿ ಕೂಡಾ ಬೇರೊಂದು ನಾಯಿ ಹಾಯ್ದು ಹೋಗುವಾಗ, 'ನಾವು ಗೌಡ್ರು' ಎಂದು ಗುರುಗುಟ್ಟುತ್ತದಂತೆ! ಅಂದ ಬಳಿಕ ಮಾನವರಾದ ನಮಗೆಲ್ಲ ಸೊಕ್ಕು ಇದ್ದೇ ಇರುವುದು ಒಳಿತೆಂದು ಹೇಳಿ, ನಮ್ಮನ್ನು ಎಂದೂ ಬಿಡಲಾರದ ಸೊಕ್ಕನ್ನು ಬಿಟ್ಟು ಏನು ಪ್ರಯೋಜನ ಎಂದು ಮನಸ್ಸಿಗೆ ಸಮಾಧಾನತಂದುಕೊಂಡು ಮತ್ತೆ ಸೊಕ್ಕು ಮಾಡುತ್ತ ಇರುವುದೇ ಲೇಸು!

ಆಶೀರ್ವಾದ

ಶ್ರೀ. ಶ್ರೀ. ವೆಂ. ಗಲಗಲಿ, ಧಾರವಾಡ

(ತಾಟಕಾವಧದ ಸಂದರ್ಭದಲ್ಲಿ ವಿಶ್ವಾಮಿತ್ರರು ಶ್ರೀರಾಮಚಂದ್ರನಿಗೆ ಹೀಗೆ ಹೇಳಿದ್ದರೆ ನಿನಾಶ್ಚರ್ಯ?)

೧

ಇವಳೆ ನೋಡು ತಾಟಿಕೆಯು! ಜಗದ ಘಾತಕಿಯು ಮೂರ್ತಿಮಂತ!
ಹೋಮ-ಹವನಗಳ ಧೂಳಿಗೊಳಿಸಿ ಕುಣಿಯುವಳು; ಇಲ್ಲ ಅಂತ!
ಧರ್ಮ-ಕರ್ಮಗಳ ಅರಿಯಳಿವಳು; ಅರಿತವರ ಕಾಡುತಿಹಳ್ಳು;
ತನಗೆ ಎದುರು ಯಾರಿಲ್ಲವೆಂದು, ನರಬಲಿಯ ಬೇಡುತಿಹಳು.

೨

ಏನಿದೇನು? ಶ್ರೀರಾಮಚಂದ್ರ, ಮೌನದಲಿ ಕುಳಿತೆಯೇಕೆ?
ಸಾಧಿಸಿರುವ ಸಮಯದ ಮಹತ್ತ್ವವನು ನಿನಗೆ ಹೇಳಬೇಕೆ?
ಆಗ ಈಗ ಯಾವಾಗಲಾದರೂ ಒದಗಿದಂಥ ಹೊತ್ತೇ—
ದುಷ್ಟಜೀವಿಗಳ ಅರೆದು ನುಂಗಲದು ಶುಭದ ಗಳಿಗೆ ಗೊತ್ತೇ?

೩

ನಿನಗೆ ಆಹಿತಮಾಡಿಲ್ಲವೆಂದು, ನಿಶ್ಯಸ್ತ್ರಳೆಂದು ಬಗೆದು,
ಅಬಲೆಯೆಂದು, ಸಮಬಲಿಯೆ ಎಂದು, ಕಾರಣವೆ ಇಲ್ಲವೆಂದು,
ವೀರಧರ್ಮಬಾಹಿರವು ಎಂದು, ನುಡಿಯುವುದೆ? ಏನು ರೀತಿ?
ಇದ್ದ ಬಲವು, ಇದ್ದವನ ಹಿತವ ಸಾಧಿಸುವುದಾವ ನೀತಿ?

೪

ಮನೆಯ ಹೊಕ್ಕ ಹುಲಿ-ಹಾವು-ಸಿಂಹಗಳ ಹೊಡೆವುದಲ್ಲೆ ಧರ್ಮ?
ಲೋಕಕಂಟಕರ ಒಕ್ಕಲಿಕ್ಕುವುದು ಅಲ್ಲೆ ದೇವಧರ್ಮ;
ದ್ವಿಜರೆಲ್ಲ ಆರ್ಯರಿಗೆ ವೈರಿಗಳು, ಅಂದು ಇಂದು ಮುಂದು!
ಉರುಳಿಹೋದ ಶತಶಾನುಶತಕಗಳು ಸಾಕ್ಷಿ, ಹೌದು ಎಂದು

೫

ಬಾರಿಬಾರಿಗಿಟ್ಟಿಟ್ಟು ದಾಳಿ, ಹುಡಿಗೂಡಿಸಿಟ್ಟರಿಲ್ಲಾ!
ಕದ್ದರೆಸ್ಕೊ ಹಣ! ಕೊಂದರೆಸ್ಕೊ ಜನ! ಗುಡಿಗಳುಳಿಯಲಿಲ್ಲ!
ಮೂರ್ತಿ-ಮೂರ್ತಿಗಳ ಭಂಗವಾಯ್ತು! ಶೀಲಕ್ಕೆ ವ್ಯಂಗವಾಯ್ತು!
ದುಷ್ಟತನವೆ ಮೆರೆತ್ತ ಹಾಗೆ. ದಿತಿಸುತರು ನೀಚರಾಯ್ತು!

೬

ಏಳು ಬಿಲ್ಲು ಹಿಡಿ; ಬಾಣ ಹೂಡು; ರಕ್ಷಸಿಯ ಜೀವ ಹೀರು!
ರಾಜಕಾರಣವು! ಶಕ್ತಿಯುಕ್ತಿ ಸಮಯಗಳ ಬೆರಕೆ ಬೀರು!
ರಾಮಬಾಣದುಪಯೋಗ ಮಾಡು ದುರ್ಜನರ ನೀಗಲೆಂದು!
ರಾಮಬಾಣವೀರಾಜ್ಯರಕ್ಷಣೆಯ ದೀಕ್ಷೆ ಪಡೆಯಲಿಂದು.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಬಿನ್ನವಿಸಿಕೊಂಡಂತೆ 'ಅಶಾಂತಿಪರ್ವ'ವನ್ನು ವಿಮರ್ಶಿಸಿ ೩ ಜನರಿಂದಲೂ 'ಮೂರು ಮಜಲು' ಸಣ್ಣಕಥೆಯನ್ನು ವಿಮರ್ಶಿಸಿ ೪ ಜನರಿಂದಲೂ ಲೇಖನಗಳು ಬಂದಿವೆ. ಅದೇಕೋ, ಈ ಸಲ ಹೆಚ್ಚು ಜನರು ಈ ಮೇಲಾಟದಲ್ಲಿ ಭಾಗವಹಿಸಿಲ್ಲ.

'ಅಶಾಂತಿಪರ್ವ'ವನ್ನು ವಿಮರ್ಶಿಸಿದವರು:

೧. ಶ್ರೀ. ಕೆ. ರಾಮಾನುಜಂ, ತಾಂಬರಂ—ಮದ್ರಾಸ್. ೨. ಶ್ರೀ. ಕೆ. ಎಸ್. ಶರ್ಮಾ 'ವಾಣೀಮಂದಿರಂ' ಕಾಸರಗೋಡು. ೩. ಶ್ರೀ. ಕುಲಕರ್ಣಿ ಪುರುಷೋತ್ತಮ, ಮುಂಬಯಿ.

'ಮೂರು ಮಜಲು' ಕಥೆಯ ವಿಮರ್ಶಕರು:

೧. ಶ್ರೀ. ಮೇಘರಾಜ, ಕಾಗಾಲ. ೨. "ಕಸ್ತೂರಿತನಯ" ಸೋಂದಾ (ಉ. ಕ. ಜಿಲ್ಲಾ). ೩. ಶ್ರೀ. ಕೆ. ಎಸ್. ಶರ್ಮಾ 'ವಾಣೀಮಂದಿರಂ' ಕಾಸರಗೋಡು. ೪. ಶ್ರೀ. ಎಚ್. ಸೀತಾರಾಮರಾವ್, ಹೊಸಬಾಳೆ—ಸೊರಬ.

ಎಂದಿನಂತೆ ಈ ಸಲದ ವಿಮರ್ಶೆಗಳನ್ನೂ ನಮ್ಮ ಸಂಪಾದಕಸಮಿತಿಯೇ ನಿರೀಕ್ಷಿಸಿ ತನ್ನ ನಿರ್ಣಯವನ್ನು ಕೊಟ್ಟಿದೆ. 'ಅಶಾಂತಿಪರ್ವ'ದ ವಿಮರ್ಶೆಗಳಲ್ಲಿ ಶ್ರೀ. ಕೆ. ಎಸ್. ಶರ್ಮಾ ಅವರದು ಅತ್ಯುತ್ತಮವಾಗಿದೆ. ಶ್ರೀ. ಕುಲಕರ್ಣಿ ಪುರುಷೋತ್ತಮರದು ಚೆನ್ನಾಗಿದೆ. ಮಿಕ್ಕುದು ಸಾಮಾನ್ಯ.

'ಮೂರು ಮಜಲು' ಕಥೆಯು ವಿಮರ್ಶೆಗಳಲ್ಲಿ "ಕಸ್ತೂರಿತನಯ" ಸೋಂದಾ ಮತ್ತು ಶ್ರೀ. ಕೆ. ಎಸ್. ಶರ್ಮಾ ಅವರ ವಿಮರ್ಶೆಗಳು ಉತ್ತಮವಾಗಿವೆ. ಮಿಕ್ಕುವೆರಡು ಚೆನ್ನಾಗಿವೆ.

ಮುಂದಿನ ತಿಂಗಳ ಮೇಲಾಟಕ್ಕಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ 'ಪರಿತ್ಯಕ್ತರಾಣಿ' ಎಂಬ ಐತಿಹಾಸಿಕ ರೂಪಕವನ್ನಾಗಲಿ, 'ಬಂತು ಶ್ರಾವಣ' ಎಂಬ ಗೀತರೂಪಕವನ್ನಾಗಲಿ ವಿಮರ್ಶಿಸಿ ಕಳುಹಬೇಕು. ಸೋಲಿಗಾಗಿ ಯಾರೂ ಹಿಂಜರಿಯಬೇಕಾಗಿಲ್ಲ. ಇಂತಹ ವಿಧಾಯಕ ಸ್ಪರ್ಧೆಗಳಲ್ಲಿಯು ಸೋಲುಗಳು ಗೆಲವಿಗೆ ಮೆಟ್ಟಿಲುಗಳಾಗಿರುತ್ತವೆ.

— ಸಂಪಾದಕರು

ಅಶಾಂತಿಪರ್ವ

(ಐತಿಹಾಸಿಕ ತರಂಗರೂಪಕದ ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು ದ. ಕ.

'ವಿಜಯನಗರ'—ಖ್ಯಾತಿವೆತ್ತ ಅರಸು ಮನೆತನದ ಪೌರುಷದ ನೆಲೆವೀಡು. ಕರ್ನಾಟಕ ಜನಜೀವನದ ಸ್ವಯಂಕೃತವನ್ನರಳಿಸಿ — ಜೀವನದ ಪೂರ್ಣಪ್ರಗತಿಯನ್ನು ಸಾಧಿಸಿ, ವಿಜಯದುಂದುಭಿಯನ್ನು ಮೊಳಗಿಪ ರಾಜ್ಯ. ವಿದ್ಯಾರಣ್ಯರ ದಿವ್ಯಜೀವನದ ಪೂರ್ಣ ಪ್ರಕಾಶವು ಪೂರ್ಣತಃ ಬಿಂಬಿಸಿ, ಧಾರ್ಮಿಕ ಜೀವನವನ್ನರಳಿಸಿ ಸಮಸ್ತ ಕನ್ನಡಿಗರ ಹೃದಯಕ್ಷೇತ್ರವನ್ನು ಹುಲುಸಾಗಿಸಿದ ನಾಡದು. ಆದುದರಿಂದಲೆ ಅದು ಚಿರಸ್ಮರಣೀಯವಿದೆ.

ಆದರೆ—

ನಿನ್ನೆಯಂತೆ ಇಂದಿಲ್ಲ, ಇಂದಿನಂತೆ ನಾಳೆಯಿಲ್ಲ. ಬದಲಾವಣೆ ಯಾಗುತ್ತಲೇ ಇದೆ. ಒಳಿತು-ಕೆಡುಕುಗಳ ಸಾಗಿನಲ್ಲಿ ಜೀವನವುರುಳು-ತ್ತಿದೆ. ಈ ಮಾತನ್ನು ಸಾಮಾನ್ಯಜನತೆಯ ನಡೆಯಲ್ಲೇ ಸತ್ಯ-ಪ್ರಚುರವನ್ನಾಗಿ ನಾವೆಣಿಸಬಹುದಾದರೆ, ಇನ್ನು ರಾಜಪರಂಪರೆಯ ಕುರಿತಾಡುವಾಗ ಪೂರ್ಣತಃ ನೋಡಬಹುದು.

ಅರಸುತನವೆಂಬುದು ಹಕ್ಕಿನಿಂದ ಬರುವಂತಹುದು; ಎಂದ ನೆಲೆ ಹಕ್ಕುದಾರನು ಶಿಕ್ಷಿತನಾದರೂ ಅಶಿಕ್ಷಿತನಾದರೂ ಉತ್ತಮ

ನಾದರೂ, ಅಧಮನಾದರೂ, ಪೀಠವನ್ನೇರಿಯೆ ತೀರುವನು. ಅರ್ಥಾತ್ ಅದವನ ಸೊತ್ತು. ಅವನಿಚ್ಛೆಯ ಮುಂದೆ ಎದೆತಡೆಗಳಿಲ್ಲ. ಅದರೇನು? ಉತ್ತಮನಾಡ ರಾಜನು ಪ್ರಜೆಗಳಿಂದ ಬಹುಕಾಲ ಮನ್ನಿಸಲ್ಪಡುವನಾದರೆ, ಅಧಿಕಾರದ ದುರುಪಯೋಗಿಯು ಪ್ರಜೆಗಳ ವಿದ್ವೇಷಕ್ಕೆ ಗುರಿಯಾಗಿ ಒಂದಲ್ಲ ಒಂದು ದಿನ ಪತನದ ಮಹಾಗರ್ತವನ್ನು ಕಂಡೇ ಕಾಣುವನು. ಉರಿದೆದ್ದ ಪ್ರಜೆಗಳ ಹಾಹಾಕಾರವೇ ಒಂದಲ್ಲ ಒಂದು ದಿನ ಅನಂತಸಾಗರದಷ್ಟು ಬಲಿಷ್ಠವಾಗಿ, ಏನನ್ನು ಮಾಡಲೂ ಶಕ್ತವಾಗುವುದು. ಈ ಮಾತಿನ ಸತ್ಯತೆಯನ್ನು ಐತಿಹಾಸಿಕ ವಿಚಾರಜ್ಞರ ಮುಂದೆ ಸಾರುವುದವಶ್ಯವಿಲ್ಲ. ಯಾವ ವಿದ್ರೋಹೀ ರಾಜನೂ ಇಂದಿನವರೆಗೆ ಜೀವನದ ಪೂರ್ಣ ಸುಖವನ್ನು ಕಂಡುದಿಲ್ಲ. ದೈವಾಯತ್ತವಾಗಿ ದೊರಕಿದ ಪದವಿಯ ಗೌರವವನ್ನುಳಿಸಿ ಕೀರ್ತಿಯನ್ನು ಮೆರೆಸಿಲ್ಲ.

ಇರಲಿ—ವಿಜಯನಗರದ ವೈಭವಕಥನದ ಮುನ್ನ "ಆ ಸರ್ವರ ಮರೆಯಾದರಾರ ಕತದಿಂದಾ ಕಾಲಗೀ ವಂದನಂ" ಎಂದರಿದು "ಅಶಾಂತಿ ಪರ್ವ"ದ ಜೀವಿತವನ್ನು ಅಂತರ್ಗತಶಕ್ತಿಯನ್ನು ವಿವೇಚಿಸಬೇಕಾಗಿದೆ.

ಪ್ರಸ್ತುತ ತರಂಗರೂಪಕವು "ಕರ್ಣಾಟಕ ರಾಜ್ಯಲಕ್ಷ್ಮಿಗೆ ಅಯೋಗ್ಯವರನಾಗಿದ್ದ "ವಿರೂಪಾಕ್ಷ"ನ ಕೊಲೆಯ ಬಳಿಕಿನ ಅಶಾಂತಿಪರ್ವವನ್ನು ತಲೆದೋರಿದೆ. ಪ್ರಜಾಕಂಟಕನಾಗಿದ್ದ, ಅತಿ ವಿಲಾಸಿಯಾಗಿದ್ದ ವಿರೂಪಾಕ್ಷನನ್ನು, ಮಲ್ಲಿಕಾರ್ಜುನದೊರೆಯ ಹಿರಿಯ ಮಗನಾದ ರಾಜಶೇಖರನು ಕೊಲೆಮಾಡುವನು; ಪ್ರಜೆಗಳ ಹಿತವನ್ನು ಸಾಧಿಸುವನು. ಆದರೆ ಈ ಹತ್ಯಾಕಾಂಡದಿಂದ ರಾಜ್ಯವನ್ನೊಲ್ಲದ ರಾಜಶೇಖರನು, ತನ್ನ ತಮ್ಮನಾದ ಪೆದ್ದರಾಯನನ್ನು ಪಟ್ಟಾಭಿಷೇಕಕ್ಕೆ ಅಣಿಯಾಗಿಸಿ, ಜೀವನದ ವಿರಕ್ತಿಯನ್ನು—ತದ್ಜನ್ಯ ಶಾಂತಿಯನ್ನು ಹೊಂದಬಯಸಿದನು. ಆದರೆ ಅರಮನೆಯ ಜೀವಿತದಲ್ಲೊಂದು ಕ್ರಾಂತಿ ತಲೆಯೆತ್ತಿತು. ಮೊದಲೊಮ್ಮೆ ರತ್ನಾಂಬಿಕೆಯನ್ನು ಮೆಚ್ಚಿದ್ದ ಪೆದ್ದರಾಯ, ಕೊನೆಗೆ ದಂಡನಾಯಕ ನರಸಿಂಹನಾಯಕರ ಮಗಳಾದ ಚಂದ್ರಗಿರಿಯ ತುಳುವ ನರಸಿಂಹನಾಯಕ ಕೈಹಿಡಿದು ಬಾಳನ್ನು ಹೊಸೆಯಲಿರುವ—ಕಮಲಾಂಬಿಕೆಯನ್ನು ವರಿಸಲೆಳಸಿ—ತನ್ನ ಆಪ್ತ ಸ್ನೇಹಿತ ಈಶ್ವರನಾಯಕನ ದುರ್ಬೋಧನೆಯಿಂದ ಅಣ್ಣನನ್ನು ಪ್ರತಿಭಟಿಸಿ ರಾಜಕೀಯ ಭವ್ಯಜೀವನದಲ್ಲಿ ಅಶಾಂತಿಯನ್ನು ತಂಬಬಹುದಾದ 'ಪರ್ವ'ವೊಂದನ್ನು—ಕಾಲವಿಶೇಷವೊಂದನ್ನು— ಗಂಟನ್ನೊಂದನು ಬಲಿಯುವನು. ಅಶಾಂತಿಯ ವಾತಾವರಣಕ್ಕೆ ತಳಹದಿಯನ್ನು ಬಲಿಯುವನು. ಈ ಬಗೆಯ ಕ್ರಾಂತಿಯು ತಳಹದಿಯೊಂದು ಈ ಅಶಾಂತಿಪರ್ವದಲ್ಲಿ ರೂಪಿತವಾಗಿದೆಯೆಂದೆನ್ನಬಹುದು.

ನಾಟಕೀಯತೆಯ ಬಂಧುರ ಘಟನಾಸಮಾವೇಶದಲ್ಲಿ ವಸ್ತು ಪೋಷಣೆಗೆ ನೆರವಾಗಿ ನಿಂತ ಉದಾತ್ತ ಹಾಗೂ ಅವಶ್ಯಂಭಾವೀ ಪಾತ್ರಗಳ ಮಧುರಾವತರಣದಲ್ಲಿ ಒಪ್ಪುಗೊಂಡು, ರಂಗವನ್ನು ಬೆಳಗಬಹುದಾದ ನಾಟಕವಿದು, ಓದುಗನ ಹೃದಯರಂಗದಲ್ಲೂ ಆನಂದದ ರಂಗವಲ್ಲಿಯನ್ನು ಓರಣವಾಗಿ ಸಮೆಯ ಬಲ್ಲುದೆಂದಾಡಲು ಸಂದೇಹವೇನಿದೆ? ಕೇವಲ ಆರು ದೃಶ್ಯಗಳಲ್ಲಿ ಈ ನಾಟಕ ಪೂರ್ಣತೆಯನ್ನು ಸಾಧಿಸಿದೆ. ನಾಟಕಾನುಗುಣವಾಗಿ ಮೂರು ಪುರುಷ ಪಾತ್ರಗಳನ್ನೂ—ಮೂರು ಸ್ತ್ರೀ ಪಾತ್ರಗಳನ್ನೂ ಎತ್ತಿಕೊಂಡ ಲೇಖಕರು, ನಾಟಕೀಯ ಸಂಪ್ರದಾಯಕ್ಕೆ ಒಪ್ಪುವ, ಗತಾಗತ-ವರ್ತಮಾನವನ್ನು ಸಾರಿ, ಪಾತ್ರ ಪ್ರವೇಶೌಚಿತ್ಯವನ್ನು ಸಾಧಿಸಬಹುದಾದ "ನಿರೂಪಕ"ನ ಪಾತ್ರವನ್ನು ಬಹುಜಾಣ್ಮೆಯಿಂದ ಬಗೆದೋರಿದ್ದಾರೆಂದರೆ, ಶ್ರೀ. ಬೆಟಗೇರಿ ಕೃಷ್ಣಶರ್ಮರ ಮಾರ್ಮಿಕ ಘಟನಾಚಾತುರ್ಯವನ್ನು ಪ್ರಶಂಸಿಸಲೇಬೇಕು. ನಾಟಕವನ್ನುದ್ದವಾಗಿ ಬೆಳೆಸಿಕೊಳ್ಳದೆ, ಇತಿವೃತ್ತದ ಪೂರ್ಣ ಸ್ವರೂಪವನ್ನು ಸಾಧಿಸುವ ಅಭ್ಯಾಸವುಳ್ಳ ಪ್ರಸ್ತುತ ನಾಟಕಕಾರರ "ನಿರೂಪಕ"ನ ಯೋಜನೆಯ ಕೌಶಲವನ್ನು, ಅಗಾಗ ಬರುವ ನಾಟಕ ಸಮಾಲೋಕನದಿಂದರಿಯಬಹುದು. ಇಡಿಯೆ ನಾಟಕವನ್ನು ಬೆಳಗುವ ಒಂದು ರಸವರ್ತಿಕೆಯೆಂದರೆ ಈ "ನಿರೂಪಕ"ನ ಸ್ವಾನಗೌರವ!

ನಾಟಕದ ಮೊದಲ ಸನ್ನಿವೇಶದ ಅವತರಣವು ಬಹು ಸುಂದರವಾಗಿ, ಸಮಗ್ರ 'ಅಶಾಂತಿಪರ್ವ'ದ ಪೂರ್ಣಸ್ವರೂಪವನ್ನು ಸೆಳೆದು ತೋರಿದೆಯೆನ್ನಬೇಕು. ಪ್ರಥಮವಾಗಿ ಮಧುರವಾದ ವೀಣಾನಾದವು ಕಲ್ಯಾಣಿ ರಾಗದಲ್ಲಿ ಮೊರೆದೇಳುವಾಗ, ನಿರೂಪಕನು ಬಂದು ನರಸಿಂಹ ನಾಯಕರ ಮಗಳು ಕಮಲಾಂಬಿಕೆಯ ಕಲಾವಂತಿಕೆಯ ಕುರಿತಾಡಿ, ಆಕೆಯು ಸಂಗೀತಶಾರದೆಯ ಅವತಾರವೆಂದು ಹೇಳುವನು. ಗಾನವು ನಿಂತಾಗ, ನಿರೂಪಕನು ವಿರೂಪಾಕ್ಷನ ಕೊಲೆಯನ್ನೂ, ವಿಜಯನಗರ ರಾಜ್ಯಾಧಿಕಾರಿಗಳ ಪರಿವಿಡಿಯನ್ನೂ ನಿರೂಪಿಸುತ್ತ, ಕಮಲಾಂಬಿಕೆಯು ಅಂತಃಪುರಕ್ಕೆ ಸಾಗಿಬಂದ ರತ್ನಾಂಬಿಕೆಯನ್ನು ತೋರಗೊಟ್ಟು ವಿರಮಿಸುವನು. ಈ ನಿರೂಪಕನ ಮಾತುಗಳನ್ನು ಪರಿಶೀಲಿಸುವಾಗ, ಅವನು ತನ್ನ ಪ್ರವೇಶದಲ್ಲೆ ಆಡಿದ್ದ 'ಕಮಲಾಂಬಿಕೆ'ಯ ವೃತ್ತಕ್ಕೊಂದು ಅರ್ಥವಿದೆಯೆಂದು ತೋರುತ್ತದೆ. ವಿಜಯನಗರದ ವೃತ್ತವನ್ನು ನಿರೂಪಿಸುವುದಕ್ಕಿಂತಲೂ ಮೊದಲಾಗಿ ಕಮಲಾಂಬಿಕೆಯ ವೃತ್ತವನ್ನೆತ್ತಿ ತೋರಿದುದು, ತುಂಬಿನಿಂತ ಚೆಲುವಿನ ನಾಟಕದ ಜೀವನಾಡಿಯೆನ್ನುವುದರಲ್ಲಿ ಸಂಶಯವಿಲ್ಲ. ಲೇಖಕರೀ ಮಾತನ್ನು ಅರ್ಥಪೂರ್ಣವನ್ನಾಗಿಸಿದ್ದಾರೆ. ಕಮಲಾಂಬಿಕೆ—ರತ್ನಾಂಬಿಕೆಯರ ಮಾತುಗಳು "ರತ್ನಾಂಬಿಕೆಗೆ ಪೆದ್ದರಾಯನ ಮೇಲಿರುವ ಒಲವನ್ನು ಇಂದೆಡೆಯಿಂದ ತೋರಿದರೆ, ಮತ್ತೊಂದೆಡೆಯಿಂದ" ರತ್ನಾಂಬಿಕೆಯ ಹೃದಯಗರ್ತದಿಂದ ಹೊರಹೊಮ್ಮಿದ ರಾಜಶೇಖರನ ಹೃದಯವಂಚಕೆಯನ್ನು ಛೇಗುಟ್ಟುವ ಮನೋಭಾವನವನ್ನೂ ವ್ಯಕ್ತೀಕರಿಸುತ್ತಿದೆ. ವಿರೂಪಾಕ್ಷನ ಕೊಲೆಗೆ ಕಾರಣಪುರುಷ ಪೆದ್ದರಾಯನೇ ಎಂದಾಡಿದ ರತ್ನಾಂಬಿಕೆಯನ್ನು ಸರಿದೋರಿ—ಸರದೋರಿ ನೇರ್ಪಡಿಸಿದ ಕಮಲಾಂಬಿಕೆಯ ಮಾತಿನಲ್ಲಿ—ರತ್ನಾಂಬಿಕೆ ಅವಹೇಳನವನ್ನೇ ಬಗೆದಳಾ—ರಾಜಶೇಖರನು ಒಲ್ಲದ ರಾಜ್ಯವನ್ನು ಪೆದ್ದರಾಯನು ವಹಿಪುವನೆಂದೂ, ತಾನವನ ರಾಣಿಯಾಗುವೆನೆಂದೂ ಬಗೆದುಬ್ಬಿ ಕಮಲಾಂಬಿಕೆಯಲ್ಲಿಂದ ತೆರಳುವಾಗ, ನಾವು ಅಶಾಂತಿಪರ್ವದ ಬೆಳೆವಣಿಗೆಯನ್ನು ತೋರಿನಿಂತ ಕಥಾಘಟಕದ 'ಬೀಜಾವಾಪ'ವನ್ನು ಕಣ್ಮುಟ್ಟಿ ಕಂಡು ಆನಂದಿಸಬಹುದು. ಈ ದೃಶ್ಯದ ಮಾತುಗಳನ್ನು ಜೀವಿಸಿದ ಅಂತರ್ವಿಲೀನಭಾವವಿಸರವನ್ನು, ಓದುಗನು ಕೊನೆಯವರೆಗೂ ಮರೆಯಲಾರನು. ಅಷ್ಟೊಂದು ಹಿಡಿತವಿದೆ ಈ ಭಾಗಕ್ಕೆ. ಕಮಲಾಂಬಿಕೆಯ

ಹೃದಯಸಂಪನ್ನತೆಯನ್ನು, ರತ್ನಾಂಬಿಕೆಯ ಉದ್ವೇಗಭರಿತವಾದ, ಚಾಂಚಲ್ಯಪೂರ್ಣವಾದ — ಆದರೂ ಪ್ರೇಮಭರಿತವಾದ ಭಾವಗತಿಯನ್ನು ನಿಬ್ಬೆರಗುಗೊಳಿಸಬಹುದು — ಎರಡನೆಯ ದೃಶ್ಯವೆಂಬುದು ಪ್ರಕೃತಿರಮಣೀಯತೆಯನ್ನು ಸಾಧಿಸಿ ನಿಂತ, ಆತ್ಮಸಂವೇದನೆಯನ್ನು ಮೊಗೆಮೊಗೆದೀವ "ಶಾಂತಿಕುಟೀರ"ದ ಮಧುರಸ್ವಾಸ್ಥ್ಯ. ಇಲ್ಲೇ ಉಪನಿಷದ್ವಾಣಿಯನ್ನು — ಭಾರತದ ಪೂಜ್ಯಋಷಿಗಳು ಕಂಡ ಸತ್ಯಾನುಭವದ ವಾಣಿಯನ್ನು — ಪೂರ್ಣಹೃದಯದಿಂದ ಹಾಡಿ ನಿಂತ — ರಾಜಶೇಖರನ ಬಳಿಗೆ ಬರುವ ವಿನೀತ ಪೆದ್ದರಾಯುನನ್ನು ಕಾಣಬಹುದು. ಈ ಭಾಗದಲ್ಲಿ ಭ್ರಾತೃಹೃದಯದಲ್ಲಿ ನೆಲೆಗೊಂಡ ಉದಾತ್ತ-ಪಿತೃಪ್ರೇಮದ ಝರಿಯು-ರಾಜಶೇಖರನ ಹೃದಯದಲ್ಲಿ ಓಲಾಡುವುದನ್ನು ನಾವು ಕಾಣಬಹುದು. ರಾಜಶೇಖರನು ಪೆದ್ದರಾಯನನ್ನು ರಾಜ್ಯಾಧಿಕಾರಿಯನ್ನಾಗಿ ಮಾಡಲು ಹವಣಿಸಿ, ಅನಂತನಿಗೀಯುವ ಉಪದೇಶಗಳನ್ನು ತೋರಿದ ರೀತಿಯದು ಮಧುರವಾಗಿದೆ. ಪೆದ್ದರಾಯನು ಅಣ್ಣನನ್ನು ರಾಜ್ಯಾಧಿಕಾರಕ್ಕೆ, ಕರ್ಣಾಟಕ ಶ್ರೀರಮಣಿಯ ಕೈಹಿಡಿಯುವುದಕ್ಕೆ ಕೇಳುತ್ತಿರುವ ಬಗೆಯುದು ಮಾರ್ಮಿಕವಿದ್ದಂತೆ, ಮುಂದೆ ಪೆದ್ದರಾಯನ ಹೃದಯಪರಿವರ್ತನೆಯು ಕೌಶ್ಯವನ್ನು ಉಜ್ವಲವಾಗಿ ತೋರುವ ಒಂದು ಹೃದಯದರ್ಪಣವೆಂದರೆ ತಪ್ಪಲ್ಲ. ಈ ದೃಶ್ಯದಲ್ಲಿ ರಾಜಶೇಖರನ ಉದ್ಬುದ್ಧಹೃದಯವನ್ನೂ, ವಿನೀತನಾದ ಪೆದ್ದರಾಯನ ಭ್ರಾತೃಗೌರವದ ಬಲವನ್ನೂ ಜೀವಂತವಾಗಿ ರೂಪಿಸಿರುತ್ತದೆ. ಈ ದೃಶ್ಯದಲ್ಲಿ ಬರುವ ರಾಜಶೇಖರನ "ಸಾಮ್ರಾಜ್ಯದೇವಿಯ ಸಂದೇಶವನ್ನು ನುಡಿಯುವ ನಾಲಗೆಯಾಗಿ ನಾನು ಇರುತ್ತೇನೆ ಬೇಕಾದರೆ" ಎಂಬ ಮಾತೂ ಪೆದ್ದರಾಯನ "ನಿಮ್ಮ ಆದರ್ಶ ಜೀವನಕ್ಕೆ ನನ್ನ ಸಾವಿರ-ಸಾವಿರ ಶರಣುಗಳು" ಎಂಬಾಡುವ ಮಾತೂ ಹೃದಯವನ್ನು ತುಂಬುವಂತೆ, ರಾಜಶೇಖರನು ಮಾತಿನ ಕೊನೆಯಲ್ಲಾಡಿದ "ಸಾಳುವ ನರಸಿಂಹನಾಯಕರು ಸಾಮ್ರಾಜ್ಯದ ನಿಜವಾದ ಹಿತಚಿಂತಕರು" ಎಂಬ ಮಾತಿದು ಮುಂದೆ ಬರಲಿರುವ ಪೆದ್ದರಾಯನ ಹೃದಯಕಾಲುಷ್ಯಕ್ಕೆ ಮನಃಪರಿವರ್ತನೆಗೆ ಹೊಂದಿಕೆಯಾಗಿ ನಿಂತ ಮಾರ್ಮಿಕವಾದ ಸಲೆಯಾಗಿದೆ. ದೃಶ್ಯದ ಕೊನೆಯಲ್ಲೂ ಉಪನಿಷದ್ವಾಣಿಯ, ಭವ್ಯಭಾವಿಯ ನೆಲೆಯು ಅದುಮಿ ಸೇರಿನಿಂತಿದೆ. ಶ್ರೇಯಸ್-ಶ್ರೇಯಸ್ಸುಗಳಲ್ಲಿ ಕಥಾಜೀವಿತದ 'ಅಶಾಂತಿ'ಯು ಭವಿಷ್ಯದ್ವಾಣಿಯು ಸೇರಿನಿಂತಿದೆ ಮುಂದಿನ ದೃಶ್ಯವು ಪೆದ್ದರಾಯನು — ರತ್ನಾಂಬಿಕೆಯೊಡನೆ ಸರಸಸಲ್ಲಾಪಕ್ಕೆಡೆಯಿತ್ತು — ಕೊನೆಗೆ ತನ್ನ ಮನಸ್ಸನ್ನು ಹಿಂಸೋಳರಾಗದಿಂದ ಸೆರೆಹಿಡಿದ ಕಮಲಾಂಬಿಕೆಯ ಕಡೆಗೆ ಹೊರಳಿಸಿ — ವಿರಸವನ್ನೆಬ್ಬಿಸುವಲ್ಲಿಗೆ ಕೊನೆಗಾಣುವುದು. ರತ್ನಾಂಬಿಕೆಯು ಮೊದಮೊದಲು ರಾಜಶೇಖರನನ್ನು ಕೆಣಕಿ ಪೆದ್ದರಾಯನನ್ನು ಟೀಕಿಸಿದರೆ, ಆ ಟೀಕೆಯ ಮುಂದೆಯೆ ಕಮಲಾಂಬಿಕೆಯ ಮಾತು ಬರುವಾಗ, ರತ್ನಾಂಬಿಕೆ 'ತಲೆನೋವು' ಎಂದು ಸರಿದುದು — ಅಕೆಯ ಜೀವನಕ್ಕೇ ತಗುಲಿದ ಕೊಡಲಿಯೇಟಲ್ಲದೆ ಮತ್ತೇನು? ಪ್ರಸಂಗಾಯತ್ತವಾಗಿ ಬರುವ ರಸಾಂತರಸಮಾವೇಶದ ಔಶಲ್ಯವಿದು. ದೃಶ್ಯದ ಕೊನೆಯಲ್ಲಿ ಬರುವ "ಹೊನ್ನಪ್ಪ" (ದಾಸಿ)ನ ಮಾತು — "ಅಯ್ಯೋ, ನನ್ನ ಹಾಲುಗಾರಿಗೆಯೆ. ನೀ ಇನ್ನು ಯಾರ ಬಾಯೊಳಗೆ ಬಿದ್ದು. ಯಾರ ಹೊಟ್ಟೆಯಲ್ಲಿ ಕೂಡಬೇಕಾಗಿದೆಯೋ ಏನೋ!" — ಎಂಬುದು ರಸಾನಹವಾಗಿ ಒಳದನಿಯನ್ನು ಬಿಂಬಿಸುತ್ತಿದೆ. ಮುಂದೆ ರಾಜಶೇಖರನನ್ನು — ರತ್ನಾಂಬಿಕೆ ಭೇಟಿಯಾಗುವುದೂ, ಈ ಭೇಟಿಯು ಹಿನ್ನೆಲೆಯಾಗಿ ವಿರೂಪಾಕ್ಷನ ಜೀವನದ ಹೇಯಕೃತ್ಯಗಳೂ ಹೊರಬರುವುವು. ಈ ದೃಶ್ಯದಲ್ಲಿ ಕಾಣುವ 'ರತ್ನಾಂಬಿಕೆ'ಯ ಹೃದಯ, ಓದುಗನನ್ನು ನಿರ್ವಿಚಾರಕ್ರಾಂತನನ್ನಾಗಿ ಮಾಡುತ್ತದೆ. ಹಿಂದೊಮ್ಮೆ ರಾಜಶೇಖರನನ್ನು ಛೀಗಳೆದಿದ್ದ ರತ್ನಾಂಬಿಕೆ, ಇಂದಿಲ್ಲಿ ಬಂದು ಆತನನ್ನು ಶ್ಲಾಘಿಸುವುದು, ವಿರೂಪಾಕ್ಷನ ಕೊಲೆಗಾಗಿ ಧನ್ಯವಾದಗಳನ್ನರ್ಪಿಯುವುದು ನೂತನ ವಾತಾವರಣಕ್ಕೆ ಎಡೆಯಿತ್ತಿದೆ. ಇದೊಂದು ನೂತನ ವಸ್ತುನಿವೇಶ. ಈ ವಸ್ತುನಿವೇಶದ ಪೂರ್ಣಭದ್ರತೆಗೆ ಸಾಕಾಗುವಷ್ಟು ಹಿನ್ನೆಲೆ ಈ ನಾಟಕದಲ್ಲಿ ಸಿಗದಿರುವುದೂ, ರತ್ನಾಂಬಿಕೆಯು ಮುಂದೆ ಯಾವ ದೃಶ್ಯದಲ್ಲೂ ಕಾಣಿಸದಿರುವುದೂ ಒಂದು ಚಿಕ್ಕ ನ್ಯೂನತೆಯನ್ನೀ ನಾಟಕದಲ್ಲಿರಿಸಿದೆಯೆನ್ನಬೇಕು. ಆದರೆ ನಿರೂಪಕನ ಚಾತುರ್ಯದ ಹಿಡಿತದಿಂದ, ಮುಂದಿನ ದೃಶ್ಯದಲ್ಲಿ ಕಾಣಿಸುವ 'ಈಶ್ವರನಾಯಕ'ನ ಪ್ರವೇಶಸಂದರ್ಭದಿಂದ ಈ ದೋಷವು ತುಸು ಮರೆಯಾಗಿ ನಿಂತರೂ, ಆವುದೋ, ಒಂದು ಬಗೆಯ ನ್ಯೂನತೆಯು ತಲೆಗಾಣಿಸಿಕೊಂಡೇ ಕಾಣುತ್ತಿದೆ. ಈ ನ್ಯೂನತೆಯು ರತ್ನಾಂಬಿಕೆಯ ಪೂರ್ಣರೂಪವನ್ನು ತೋರುವಲ್ಲಿ ತೊಂದರೆಕೊಟ್ಟಿದೆ. ಆದರೆ ಕೇವಲ ಎರಡೇ ದೃಶ್ಯಗಳಲ್ಲಿ ಕಾಣಿಸಿಕೊಂಡ ಕಮಲಾಂಬಿಕೆ ಮಾತ್ರ ಪೂರ್ಣರೂಪದಲ್ಲಿ ಕಾಣಿಸಿಕೊಂಡಿದ್ದಾಳೆ.

ಮುಂದಿನ ದೃಶ್ಯಗಳ ವೃತ್ತಮಾತ್ರ ಬಹು ಮಾರ್ಮಿಕ. ಶನೆಯ ದೃಶ್ಯದಲ್ಲಿ ಕಾಣಿಸಿಕೊಂಡ ಈಶ್ವರನಾಯಕನು ವಿರೂಪಾಕ್ಷನ ಹೃದಯದಲ್ಲಿ "ಭ್ರಾತೃವಿದ್ವೇಷ"ವನ್ನು ಒಡಮೂಡಿಸಿದಂತೆ — ತುಳುವ ನರಸಿಂಹ ನಾಯಕನ ಕೈಹಿಡಿಯ ಬಗೆದ — ನರಸಿಂಹನಾಯಕರ ಪುತ್ರಿ ಕಮಲಾಂಬಿಕೆಯನ್ನು ಪೆದ್ದರಾಯನು ವರಿಸಬಹುದಾದ ಧಾನ್ಯರ್ಯಕ್ಕೆ ಪೋಷಣೆಯಿತ್ತಿರುವನು. ರತ್ನಾಂಬಿಕೆಯ ಸ್ನೇಹವನ್ನು ಪೆದ್ದರಾಯನಿಗೊದಗಿಸಿದ್ದ ಈಶ್ವರನಾಯಕನೇ — ತನ್ನ ಇಷ್ಟಪೂರ್ತಿಗಾಗಿ-ಸ್ವಾರ್ಥಕ್ಕಾಗಿ, ವಿರಮನೆಯನ್ನೇ ವಿಶ್ಲಿಷ್ಟವಾಗಿಸುವ ಪೆದ್ದರಾಯನ ಜೀವನದೊಡನೆ, ಇಡಿಯ ವಿಜಯನಗರವನ್ನೇ ಅಶಾಂತಿಗೆ ಗುರಿಯಾಗಿಸುವ ಕಾರ್ಯಕ್ಕೆ ಕೈಯೊಡ್ಡುವನು. ಈಶ್ವರನಾಯಕನಿಂದ ಪ್ರೇರಿತನಾದ ಪೆದ್ದರಾಯ, ಈಶ್ವರನಾಯಕನು ಸಮೆದ ಕಾಪಟ್ಯವನ್ನರಿಯದೆ, ಅಣ್ಣನನ್ನು ಪ್ರತಿಭಟಿಸುವ ಕೊನೆಯ ದೃಶ್ಯವದು ಮಹದಾಂದೋಲನದ ಭಾವವಿಕ್ಷಿಪ್ತ ಸಂಧಿಗೆರವೆನ್ನಬೇಕು. ಕಮಲಾಂಬಿಕೆಯ ವಿವಾಹದಿಂದ ವಿಮುಖನಾಗಬೇಕೆಂದು ರಾಜಶೇಖರನು ತಮ್ಮನನ್ನು ಒಲವಿನಿಂದ ದನಿಗೂಡಿಸಲು — ಪೆದ್ದರಾಯನು ಅಣ್ಣನನ್ನು ಪ್ರತಿಭಟಿಸಿ ನಿಲ್ಲುವನು. ತಮ್ಮನ ಮನೋಗತವನ್ನರಿತ ರಾಜಶೇಖರ, ವಿಜಯನಗರದ ಭವಿಷ್ಯವನ್ನು ಬೆರಗಿನಿಂದ ನೋಡಿ, ಪದ್ಮಾಂಬಿಕೆಯೊಡನೆ ರಾಜ್ಯಶಾಂತಿಗಾಗಿ ಬೇಡಿ "ಭದ್ರಂ ಕರ್ಣೇಭಿಃ" — ಎಂದೆತ್ತಿದ ಶಾಂತಿಯ ವಚನವದು

ಭರತವಾಕ್ಯಕ್ಕೆ ನೆಲೆಯಾಗುವುದು. ಆವುದೋ ಒಂದು ಅಶಾಂತಿಯ ಪ್ರವೇಶದ್ವಾರದಲ್ಲಿ ಕಥೆ ನೆಲೆನಿಲ್ಲುವುದು!

ರುಚಿಕರವಾದ ಇತಿವೃತ್ತ; ಪಂದರ್ಭಾನುಗುಣವಾಗಿ ತಲೆಯೆತ್ತಿ ನಿಂತ ಕಲ್ಯಾಣಿ ಹಾಗೂ ಹಿಂದೋಳರಾಗಗಳ ಮಧುರಪ್ರಸ್ತಾಪ, ಕಥೆಯ ಗತಿಯನ್ನು ಸೂಕ್ಷ್ಮವಾಗಿ ಸೆಳೆದು ಸಾಗಿಸಿ ನಿಲಿಸುವ ನಿರೂಪಕನ ಕಥಾಪ್ರಸ್ತಾಪ,—ಉದ್ಬುದ್ಧ ಭಾಷಾಸರಣಿಯಿಂದ ಬೆಳಗಿ ನಿಂತ ರಸಾವಹಗಳಾದ ವಚನಗಳ ಮಧುರಪದವಿನ್ಯಾಸ,—ಆಂತರಿಕವಾದ ಸೆಳೆತವನ್ನು ಸಾಧಿಸಿ ನಿಂತ ದೃಶ್ಯಯೋಜನೆ—ಇವು ಶ್ರೀ. ಬೆಟಗೇರಿಯವರ ಈ ಅತ್ಯುತ್ತಮ ನಾಟಕದ ಮಧುರಂಗತಿಗೆ ಅನುವಾಗಿ ನಿಂತ ಸಾಧನಗಳು. ಇಡಿಯ ನಾಟಕದಲ್ಲಿ ಮೈವೆತ್ತು ನಿಂತ "ಸೆದ್ದರಾಯ-ರಾಜಶೇಖರ — ಈಶ್ವರನಾಯಕ"— ಈ ಮೂರು ಪಾತ್ರಗಳ ವೈವಿಧ್ಯಪೂರ್ಣ ಹೃದಯಗತಿಯನ್ನು ಸಾಧಿಸುವಲ್ಲಿ— ತದಂತರ್ಗತ ಜೀವನಧ್ಯೇಯವನ್ನು ಒರೆದೋರುವಲ್ಲಿ— ಲೇಖಕರು ಸಫಲರಾಗಿದ್ದಾರೆಯೆನ್ನುವಂತೆ—ಪ್ರಸ್ತುತ ಲೇಖಕರು "ವಿಜಯನಗರ"ದ ರಾಜ-ಪರಂಪರೆಯ ಒಂದು ಜೀವನವನ್ನು ವ್ಯಾರ್ಥಿಕವಾಗಿ ರೂಪಿಸಿದ್ದಾರೆಂದು ಇದಕ್ಕೆ ಹಾರ್ದಿಕ ಸ್ವಾಗತವನ್ನೀಯಲು ಆನಂದಿಸುವೆ.

ಮೂರು ಮಜಲು

(ಕಥೆಯ ವಿಮರ್ಶೆ)

"ಕಸ್ತೂರಿತನಯ" ಸೋಂದಾ, ಉ. ಕ. ಜಿಲ್ಲೆ

ಮನುಷ್ಯಜೀವನದಲ್ಲಿ ಹಂತ-ಹಂತವಾಗಿ ಇಳಿಯುವಮೆಟ್ಟಿಲುಗಳಿದ್ದು, ಅವು ಅವನನ್ನು ಕೆಲವೊಮ್ಮೆ ಮಾನವ ವನ್ನು ಮೀರಿದ ಆವುದೋ ಲೋಕಕ್ಕೊಯ್ದು.—ಕೊನೆಗೊಮ್ಮೆ ನರಕದ ಮಹಾಗರ್ತದಲ್ಲಿ ತಳ್ಳುತ್ತವೆ. ವಿಷಮಪರಿಸ್ಥಿತಿಯನ್ನು ಎದುರಿಸಬೇಕಾದಾಗ, ಇಂಥವುಗಳಲ್ಲಿ—"ಬದುಕು ಹರಿಯುತ್ತದೆ—ಹೊಳೆಯ ಹಾಗೆ—ಕೆಲವು ಕೊಳಕಾಗಿ, ಕೆಲವು ಬರಡಾಗಿ, ಕೆಲವು ತಿಳಿಯಾಗಿ....." ಇದನ್ನು ಲೇಖಕರೇ ಬಸ್ಸು ಕಂಡಕ್ಟರನ ಬಾಯಿಂದ ಹೊರಗೆಡಹಿದ್ದಾರೆ ಕತೆಯಲ್ಲಿ. ಜೀವನದ ಮಹಾಗರ್ತದಲ್ಲಿ ಉದ್ದಕ್ಕೂ ಹಾಸುಹೊಕ್ಕಾಗಿ ಬಂದಿರುವ ಬಡತನ, ನಿರುದ್ಯೋಗ, ಬೇಡುವುದು, ಅನಾಥತನ, ಸರಕಾರದವ ಅನ್ಯಾಯ, ಆರ್ಥಿಕವಿಪತ್ತು ಇವು ಮನುಷ್ಯನನ್ನು ತಾಳ್ಮೆಗೆಡಿಸದೆ ಇರವು. ಇಂಥ ಒಂದು ಝಂಝಾವಾತ ಬಿಟ್ಟಾಗ, ಏನು ಬಂದರೂ ಗಟ್ಟಿಯಾಗಿ ಎದುರಿಸುವವರು ತೀರ ಕೆಲವರು; ಇದರ ವಿರುದ್ಧವಾಗಿ, ಹೊಡೆತ ತಾಳದೆ ಸಾಪದ ಮಹಾರಸಾತಳದಲ್ಲಿ ಬೀಳುವವರು ಕೆಲವರು. ಇದು ನಿನ್ನೆ ಮೊನ್ನೆಯ ವಿಷಯವೇನೂ ಅಲ್ಲ. ಬದುಕು ಹುಟ್ಟಿದಾಗಲೇ ಹುಟ್ಟಿಕೊಂಡಿದೆ, ಪೇಪಕ್ಕಂಟಿದ ಚರ್ಮದಂತೆ ಇವುಗಳಲ್ಲೊಂದಾದ ಆರ್ಥಿಕ ವಿಪತ್ತು (!) ಈ ಕಥೆಗೆ ಪೂರಕವಾಗಿ, ಬೆನ್ನೆಲುಬಾಗಿ, ನಾಜೂಕಾಗಿ, ಸೂಕ್ಷ್ಮವಾಗಿ ಮೈದುಂಬಿಕೊಂಡು ನಿಂತಿದೆ ಈ ಕತೆಯಲ್ಲಿ.

ಕತೆಯ ಸಾರವಿಷ್ಟು: ಚಂದು ಒಬ್ಬ ಸಾಮಾನ್ಯಜೀವಿ; ಮುತ್ತಕ್ಕ ಅವನ ತಂಗಿ. ಇವರ ತಾಯಿ ಇವರ ಶೈಶವಾವಸ್ಥೆಯಲ್ಲೇ ಗಂಡನನ್ನು ಕಳೆದುಕೊಂಡು ದಿಕ್ಕುಗೇಡಿಯಾಗಿ ಬದುಕುತ್ತಾಳೆ. 'ತನ್ನ ಪಾಡಿಗೆ ತಾನು' ಎಂಬಂತೆ. ಸರಿ, ಚಂದು ಬಾಲ್ಯದಲ್ಲೇ "ಕೂಲಿ" ಯಾಗಿ ದುಡಿಯುತ್ತಾನೆ—ಇವನ ದುಡಿತವೇ ತಂಗಿಗೂ ಆಧಾರ ಶೈಶವಾವಸ್ಥೆಯಲ್ಲಿಯೇ ಮಾತೃತ್ವದ ಕರುಣೆ, ಸಹಾನುಭೂತಿ, ಪ್ರೇಮ, ದಯೆ—ಇವುಗಳೆಲ್ಲ ಈ ದುರ್ದೈವೀ ಜೀವಿಗಳ ಪಾಲಿಗೆ ಗಗನಕುಸುಮವಾಗಿವೆ. ತಾಯಿ ದಾನವಿಯ ಸ್ಥಾನದಲ್ಲಿರುವುದರಿಂದ, ಅಣ್ಣನ ಬೆಂಬಲಿಗಳಾಗಿ, ಅಣ್ಣ ಮತ್ತು ಒರ್ವ ಧಾಂಡಿಗ ಕೂಲಿಯಲ್ಲಿ ನಡೆದ ಚಿಕ್ಕದೊಂದು ಆಕಸ್ಮಿಕ ಘಟನೆಯಲ್ಲಿ ಭಾಗವಹಿಸಿ, ಮುತ್ತಕ್ಕ ತನ್ನ ಬದುಕಿನ ಆಧಾರವಾದ ಕಣ್ಣುಗಳನ್ನೇ ಬಲಿ ಕೊಡಬೇಕಾಗುತ್ತದೆ; ಅಂದಿನಿಂದ ಅವಳು ಕುರುಡಿ. ಜೀವನದ ಕಹಿ ಬಾಲ್ಯದಲ್ಲೇ ಮೈಯ್ಯುಂಡ ಚಂದು, ತಂಗಿಯನ್ನು ಕಟ್ಟಿಕೊಂಡು ಬೇಡುತ್ತಾನೆ; ಹೊಟ್ಟೆ ತುಂಬಿಕೊಳ್ಳುತ್ತಾನೆ. ಅನಂತರ ಇದಕ್ಕಿಂತಲೂ ಸುಲಭ—ಸುಲಭತರ—ದಾರಿ ಕಳವು; ಅದಕ್ಕೂ ಅವನು ಕೈಹಚ್ಚುತ್ತಾನೆ. ಅದೂ ಸಾಲದೆ, ತಂಗಿಯ ದೇಹದ ವ್ಯಾಪಾರವೂ ನಡೆಯುತ್ತದೆ ಪ್ರತಿದಿನ—ಇದಿನ್ನೂ ಸುಲಭತಮವೆಂಬಂತೆ. ಚಂದುವಿನ ತಾಯಿ, ಬಸ್ಸು ಕಂಡಕ್ಟರ್, ಧಾಂಡಿಗ ಕೂಲಿ ಮೊದಲಾದ ಪೋಷಕಪಾತ್ರಗಳೂ ಯಥಾಪಾತ್ರವಾಗಿ ಕತೆಗೆ ಹಿನ್ನೆಲೆಯಾಗಿ ನಿಂತಿವೆ.

ಲೇಖಕರು ಕತೆಯುದ್ದಕ್ಕೂ ಕೇಂದ್ರವ್ಯಕ್ತಿಯಾಗಿದ್ದು, ಈ ಕತೆಯ ಆರಂಭವನ್ನು ಬಸ್ಸು ಕಂಡಕ್ಟರನ ಬಾಯಿಂದ ಹೊರಗೆಡಹಿದ್ದಾರೆ—ಕತೆಯ ಮೊದಲ ಮೆಟ್ಟಿಲಾಗಿ. ಅನಂತರದ ಕತೆ ಲೇಖಕರಿಗೂ, ಚಂದುವಿಗೂ ನಡೆದ ಆಕಸ್ಮಿಕ ಭೇಟಿಯ ಮೂಲಕ ಸಂಭಾಷಣೆಯಲ್ಲಿ ಹರಿಯುತ್ತದೆ — ಕತೆಯ ಎರಡನೆಯ ಮೆಟ್ಟಿಲಾಗಿ. ಮುಕ್ತಾಯದ ಮೂರನೆಯ ಮೆಟ್ಟಿಲಾಗಿ, ಕತೆಗಾರರು ತಮ್ಮ ಗೆಳೆಯರೊಡನೆ ಜಾತ್ರೆಗೆ ಹೋದಾಗ—ಚಂದುವಿನಿಂದ ಒಂದು ಕಳವು ಮಾಡಿಸಿ, ಓದುಗನನ್ನು ದಂಗುಬಡಿಸುತ್ತಾರೆ. ಅದರ ಬದಲು ಇಡಿಯ ಕತೆಯನ್ನು ಬಸ್ಸು ಕಂಡಕ್ಟರನೆನ್ನಬ್ಬನ ಬಾಯಿಂದಲೇ ಹೇಳಿಸಿದ್ದರೆ, ಅಥವಾ ಇವರೇ ಮುಂದಿನದನ್ನು ಹೇಳಿದ್ದರೆ, ಕತೆಯು ಸಾಹಜಿಕವಾದ, ಸ್ವತಂತ್ರವಾದ ಓಟಕ್ಕೆ ಚ್ಯುತಿ ಬರುತ್ತಿತ್ತೆಂದೇ ಹೇಳಬೇಕು.

ಈ ಸಣ್ಣಕತೆಯಲ್ಲಿ ಆರಂಭದಿಂದ ಮುಕ್ತಾಯದ ವರೆಗೂ ಓದುಗನ ಚಿತ್ತಜ್ವೋಭೆಗೊಳಿಸುವುದು ಚಂದಣ್ಣನ ಪಾತ್ರ. ಹುಬ್ಬಾಗಿ "ಆ" ಎಂದು ಬಾಯ್ದೆರೆದು ನುಂಗಿ ಬಿಡುತ್ತದೆ—ಪಾತ್ರದ ಮಹಾತರ್ಗ ಈ ಪಾತ್ರವನ್ನು. ಈ ಪಾತ್ರದ ಕುರಿತು ತುಂಬ ಯೋಚಿಸಬೇಕಾಗಿದೆ. ಹೃದಯ ಮಥಿಸಿ, ಹೊರಬಂದ ಅನುಭವದ ರಸಪಾಕವನ್ನು ಭಟ್ಟಿಯಿಳಿಸಿ ನೋಡಬೇಕು. ಅಂದರೇನೇ, ತಿಳಿಯುವುದು, ನಮ್ಮ ಸಮಾಜದಲ್ಲಿಯ ಇಂಥ ಕೋಟ್ಯನುಕೋಟಿ "ಚಂದಣ್ಣ"ರು ಹುಟ್ಟಿ ತಮ್ಮ ಬಾಳನ್ನು ಹೊಲೆಗೆಡಿಸಿಕೊಳ್ಳುವರೆಂದು. ಆದರೆ ಇದು ಬರಿಯ ಪಾತ್ರದ ದೋಷವೂ ಅಲ್ಲ; ಚಂದಣ್ಣ

ಹುಟ್ಟಿ ಬೆಳೆದ ವಾತಾವರಣ, ಅವನಿಗೆ ಸಿಕ್ಕಿದ ಕೆಂಚಿತ್ ಆಸರೆ, ಕುಸಂಸ್ಕೃತಿ, ಪಾಷಾಣವಾಸ್ಯಹೃದಯ — ಇವು ಒಂದೊಂದೂ ಅವನನ್ನು ಜೆನ್ನಟ್ಟಿ, ಬಂದು, ಹೃದಯವನ್ನು ಹಿಂಡಿ ಹಿಪ್ಪೆಮಾಡುತ್ತಲಿವೆ; ಜೀವವನ್ನು ಕಲ್ಲಾಗಿಸುತ್ತವೆ. ಅವನು ಸನ್ನಿವೇಶಗಳ ಸೆಳೆತಕ್ಕೆ ಸಿಕ್ಕಿ, ಅದು ಹೇಳಿದತ್ತ ಕೊಚ್ಚಿಕೊಂಡು ಹೋಗುವ ಬರಿಯ "ಕೈಗೊಂಬೆ" ಮಾತ್ರವೇನೋ!—ಎನಿಸದೆ ಬಿಡುವುದಿಲ್ಲ. ಚಂದಣ್ಣನ ಪಾತ್ರದ ಪೂರ್ತಿ ವಿಮರ್ಶೆ ಮಾಡಿದಾಗ, ಅವನೇ ತನ್ನ ತಾಯಿಯ ಕುರಿತು ಕತೆಗಾರರೊಡನೆ ಸಂಭಾಷಿಸುವ — "ಏನೋ ಅವಳು ಹೋದಳು..... .....ಹೋಗಿಯೇ ಬಿಟ್ಟಳು.....ಆಕೆ ಹೊಳೆಯಲ್ಲಿ ಹೋಗಿರಬೇಕೆಂದು ಈ ಊರಿನ ಜನ ನಗುತ್ತಾರೆ. ಏನೋ! ಆಕೆ ಇನ್ನೂ ಬಂದಿಲ್ಲ..... ಬರಲಾರಳೋ ಏನೋ..... ." ಎಂದು ಹೇಳಬೇಕಾದರೆ, ಅವನ ಬದುಕಿನುದ್ದಕ್ಕೂ ಹರಿದ, ಅನುರೂಪ ವಿಷಾದಪೂರಿತ ಸತಕ್ಕಂಥ (?) ಕಟುಸತ್ಯದ ಎಳೆ ನಿಲುಕುತ್ತದೆ ನಮಗೆ. ಹೀಗೆಯೇ ಬದುಕು ಹರಿಯುವಾಗ, ಚಂದಣ್ಣ ತಿರುಪೆಯೆತ್ತಿ ಬದುಕುವಾಗ, ಅವನೇ ಹೇಳುವ—"ಸಾರ್, ಬೇಡುವ ಉದ್ಯೋಗ ಯಾರಿಗೂ ಬರಬಾರದು. ಎಲ್ಲರಿಗೂ ನನ್ನ ಮೇಲೆ ತುಚ್ಛೀಕಾರ.....ಬೇಡಿ ಬದುಕುವುದು ಸಾಧ್ಯವಿಲ್ಲ ಈ ಕಾಲದಲ್ಲಿ ಸ್ವಾಮಿ....." ಎಂಬುದಿದು ಯಾರು ಲಕ್ಷ್ಯಿಸುವ ಮಾತು? ಆದರೂ ಚಂದಣ್ಣನ ಪಾತ್ರದುದ್ದಕ್ಕೂ ಹರಿಯುವುದು, ಏಕಮುಖೀಯವಾದ, ಕಟುವಾದ ಅಜ್ಞಾನ; ಸಾರಾಸಾರ ವಿಚಾರದ ಕೊರತೆ. ಕತೆಗಾರರೊಡನೆ ಸಂಭಾಷಿಸುವ ಚಂದಣ್ಣ—"ಊಹುಂ, ನೀರೆಳೆದು ನನಗೆ ಅಭ್ಯಾಸವಿಲ್ಲ.....ಛೇ, ಅದು ನನ್ನಿಂದಾಗದ ಕೆಲಸ"—ಎಂದು ಹೇಳಬೇಕಾದರೆ, ಅವನಿಗೆ ಬಾಳಿನ ಬಗ್ಗೆ ನಿರ್ದಿಷ್ಟವಾದ, ಸಾಧುವಾದ, ತಾತ್ತ್ವಿಕವಾದ ವಿವೇಕ ಪೂರ್ಣ ಗುರಿಯೇ ಇಲ್ಲವೆಂದು ಹೇಳಬೇಕಾಗುತ್ತದೆ. "ಬೇಡುವವನಾದರೂ ರಾಜಕುಮಾರನ ಮರ್ಜಿಯಿದೆ. ನಿನಗೆ ಹೇಳುವುದು ಒಂದೇ — ನಾಯಿ ಬಾಲ—ನಿನ್ನ ದಾರಿ ನಿನಗೆ—ಹೋಗು!—" ಎಂದು ಕತೆಗಾರರು ಹೇಳುವ ಮಾತು ಬರಿಯ ಮಾತಲ್ಲ! ಅಸಂಭವನ ಅಗರವೇ ಅವನನ್ನು ಪತನದ ದಾರಿಯೆಡೆಗೆ ಬೆನ್ನಟ್ಟಿಕೊಂಡು ಹೋಗಿದೆ. "ಇಂಥವರನ್ನು ಸುಧಾರಿಸಿ, ಮಾನವರನ್ನಾಗಿ ಬಾಳಿಸಿ, ಅವರಿಂದ ಸತ್ಫಲಗಳನ್ನು ಆಕಾಂಕ್ಷಿಸುವುದಂತೂ ಬಹು ದೂರವೇ ಉಳಿಯಿತು" ಎಂಬ ಸಾಮಾನ್ಯಭಾವ ನಮ್ಮ ಸಮಾಜದ ಪ್ರತಿಕೆಯ, ನಿರ್ದಯತೆ—ಇವುಗಳಿಗೆ ಕಾರಣವಾಗಿದೆಯೇನೋ! ಹಾಗೆ ನೋಡಬೇಕಾದರೆ ಚಂದು ತನ್ನ ಬಾಲ್ಯದಲ್ಲಿ ಈ ಪತನಗಳನ್ನೊಂದೂ ಅರಿಯದ ಮುಗ್ಧನಾಗಿದ್ದ—ವರ್ಡ್ಸ್‌ವರ್ತ್ ಹೇಳುವಂತೆ:

"Heaven lies about us in our infancy!
Shades of the Prison house begin to close,
Upon the growing boy

....

And fade into the light of common day."

ಹೀಗೆಯೇ ಬಾಳಿನ ಹೊಸ ಅರಳಿನಿಂತಂದಿನಿಂದ ಕೊನೆಯವರೆಗೂ ನಡೆಯುವುದೇನೋ ಇಂಥ "ಚಂದಣ್ಣ" ರ ಪಾತ್ರಗಳ ಸೃಷ್ಟಿಕ್ರಮ! ಹಂಪಹಂತವಾಗಿ ಕೆಡುತ್ತ ಹೋಗಿದ್ದಾನೆ—ಚಂದು; ಕೊನೆಗೊಮ್ಮೆ ಸಾಮಾನ್ಯರಲ್ಲಿ ಸಾಮಾನ್ಯವಾಗಿ ಹೋಗಿದ್ದಾನೆ. ಎಂದರೆ, ದುರ್ಭಾವಮಯ ವಿಷಪೂರಿತ ವ್ಯೂಹಚಕ್ರದ ನೆಲೆಯಲ್ಲಿ ಸಿಲುಕಿದ ಚಂದಣ್ಣ, ಹಂಗು ಮುತ್ತಕ್ಕನನ್ನು ನರಕದ ಭಯಂಕರವಾದ ಪಾಪಕೂಪಕ್ಕೆ ನೂಕಲು ಸಣ್ಣ ಹೇಸದೆ ಹೋಗಿದ್ದಾನೆ. ಕೊನೆಯವರೆಗೂ "ಚಂದಣ್ಣ" ನ ಪಾತ್ರ ರಭಸವಾಗಿ ಹರಿಯುವ ಜೊಳೆಯಂತೆ ಅಡೆ-ತಡೆಯಿಲ್ಲದೆ ಹರಿದಿದೆ; ಜೆನ್ನಾಗಿ ಮೈದುಂಬಿಕೊಂಡು ನಿಂತಿದೆ; ಪರಿಪುಷ್ಟವಾಗಿ ಬೆಳೆದಿದೆ.

ಎರಡನೆಯದಾಗಿ, ಚಂದುವಿನ ತಾಯಿಯ ಪಾತ್ರಪೋಷಣೆ: ಸ್ವಾಭಾವಿಕವಾಗಿ ತಾಯಿಯ ಕರುಳು ಮಕ್ಕಳೆಂದಾಗ,—"ಹೆತ್ತ ಕರುಳಿಗೆ ಹೆಗ್ಗಣ ಮುದ್ದು" ಎಂಬಂತೆ—ಇರಬೇಕಾದ ಪ್ರೀತಿಯ ಲವಲೇಶವಾದರೂ ಇಲ್ಲಿ ಕಾಣುವುದಿಲ್ಲ. ಎಂದರೆ, ಚಂದುವಿನ ತಾಯಿ ಈ ಮಕ್ಕಳನ್ನು ಬೀದಿಗೆ ಎಸೆಯುವಷ್ಟು ಕಲ್ಲಾಗಿದ್ದಾಳೆ; ಈ ಪ್ರಕ್ರಿಯೆಯೇ ಮಕ್ಕಳ ವರ್ತನೆಯ ದುರ್ಬೀಜಕ್ಕೆ ನೀರೆರೆದಿದೆಯೆನ್ನಬೇಕೇ?

"ಚಂದುವಿನ ತಾಯಿ ತಾಯ್ತನ ಕಳೆದುಕೊಂಡು ದಾನವಿಯಾದಳು" ಎಂಬ ಸಂಪಾದಕರ ಮಾತಿನಂತೆ ಇದಕ್ಕೂ ಆರ್ಥಿಕವಿಷಮತ್ವೊಂದೇ ಕಾರಣವಿರಬಹುದೇ? ಕತೆಯಲ್ಲಿ ಈ ತಾಯಿಯ ಪಾತ್ರ ಬಹಳಷ್ಟಿರದಿದ್ದರೂ, ಇವಕ್ಕೆಲ್ಲ ಪೂರ್ವಭಾವಿಯಾಗಿ ತಾಯಿಯ ರಕ್ತಗತ ಸಂಸ್ಕೃತಿಯ ಜೀವಾಣುಗಳೇ ಮಕ್ಕಳ ವರ್ತನೆಗಳಿಂದಾಗಿ ಒದಗುವ ಪಕ್ಷನಗಳಲ್ಲಿ ಹರಿಯುವುದೆಂದ ಬಳಿಕ, ಅವುಗಳೆಲ್ಲಿ ತಪ್ಪಬೇಕು? ಕತೆಯಲ್ಲಿ ತಾಯಿಯ ಪಾತ್ರದ ವಿರೋಧಾಭಾಸಕ್ಕೆ ಹಿನ್ನೆಲೆಯಾಗಿ ಅವಳ ಬಾಳು ಸಿಡಿದು ಗೋಗರೆದು, ಬರುಕುಬಿಟ್ಟ ದುರ್ಬೀಜಗಳನ್ನು ಒಡಮೂಡಿಸುವ ಕೆಲಸವನ್ನು ಕತೆಯ ಮೊದಲ ಹಂತದಲ್ಲಿ ಬರುವ ಕೆಂಡಕ್ಷರನ ಮಾತು— ".....ಗತಿಯಿಲ್ಲದ ಹೆಂಗುಸೆಂದರೆ ಬೇಲಿ ಇಲ್ಲದ ಹೂಲ ನೋಡಿ....."—ಮೊದಲಾದುವುಗಳು ತಮ್ಮ ಕೆಲಸವನ್ನು ಜೆನ್ನಾಗಿ ಮಾಡಿವೆ; ಒಟ್ಟಿನಲ್ಲಿ, ಇಲ್ಲಿಯ ತಾಯಿಯ ಪಾತ್ರದ ಚಿತ್ರಣ ಪರ್ಯಾಯವಾಗಿ ವಾಚಕನ ಹೃದಯಾಂತರಾಳದಲ್ಲಿ ಸಮಸ್ಯಾವಿಪ್ಲವವನ್ನೆಬ್ಬಿಸದೆ ಬಿಡದು. ಈ ಪಾತ್ರವೇ ಕತೆಯ ಜೀವ-ಜೀವಾಳವಾಗಿರುವುದರಿಂದ, ಇದರ ಉಗಮವನ್ನು ಕತೆಗಾರರು ಜೆನ್ನಾಗಿ ಚಿತ್ರಿಸಿಲ್ಲವೆಂಬುದು ಓದುಗರ ಒಳಗಣ್ಣಿಗೆ ಹೊಳೆಯದಿರದು.

ಮಿಕ್ಕುಳಿದುವುಗಳಿಂದರೆ—ಮುತ್ತಕ್ಕ: ಕತೆಯ ಆರಂಭದಿಂದಲೂ ಕೊನೆಯವರೆಗೂ ಈ ಪಾತ್ರದ ಪೋಷಣೆಯ ಕೆಲಸವನ್ನು ತುಂಬ ಸೊಗಸಾಗಿ ನಡೆಸಿದ್ದಾರೆ—ಲೇಖಕರು. ಮುತ್ತಕ್ಕನ ಪಾತ್ರಪೋಷಣೆಯ ಸನ್ನಿವೇಶಗಳ ಜೋಡಣೆಯಲ್ಲಿ, ಕತೆಯ ಮೊದಲ ಮೆಟ್ಟಿಲಲ್ಲಿ ಉಪಳೇ ಜೋಳುವ—"ಅಣ್ಣಾ, ಕಣ್ಣಾ ಹೋಯಿತು....ಸಾಪಿ ಏನು ಮಾಡುವುದಕ್ಕೂ ಹೇಸಲಾರ..... ಹ್ಞೂ.... ಹ್ಞೂ"—ಇವೆಲ್ಲ

ಮಾತುಗಳು ವಾಚಕನನ್ನು ಕರುಣಾರಸದಲ್ಲಿ ಅದ್ದಿ, ಪುನಃ ಬದುಕಿನ ಕಠಾಳಸತ್ಯವನ್ನು ಹೊರಗೆಡಹಿ ತೋರಿಸಲು ತುಂಬ ಸಹಾಯಕಾರಿಯಾದಂತೆ—ಕೈಯಲ್ಲಿ " ಕರಟ ಕೋಲು " ಹಿಡಿದು ಬರುವ ಅವರ ಬದುಕಿನ ಕಟುಸತ್ಯವಂತೂ ಹೃದಯತಂತಿಯನ್ನು ಮಿಟಿ, ಸಮಸ್ಯೆಯ ಗಂಟನ್ನು, ಇನ್ನಷ್ಟು ಭದ್ರಗೊಳಿಸಿ, ಮತಿ ಮಸಣಿಸುತ್ತದೆ.

ಕತೆಯಲ್ಲಿ ಆರಂಭದಿಂದ ಹುದಿಯವರೆಗೂ ವರ್ಣಿತವಾದ ಸಂಭಾಷಣಾವೈಖರಿ ಸೊಗಸಾಗಿದೆ. ಸಾವಿರ ಮಾತುಗಳ ಬಣ್ಣನೆಯಿಂದಾಗದಷ್ಟು ಕೆಲಸವನ್ನು ಇಲ್ಲಿಯ ಒಂದೊಂದೇ ಸಂಭಾಷಣೆ ಮಾಡಿದೆಯೆಂದು ಹೇಳಲಡ್ಡಿಯಿಲ್ಲ. ಕತೆಯಾರಂಭದಿಂದ ಅಲ್ಲಿ ಸುಳಿದು, ಇಲ್ಲಿ ನುಸುಳಿ ಬರುವ ಹಿತ-ಮಿತದ ನಿಸರ್ಗಚಿತ್ರಿಕೆಗಳು ಕಥಾತಂತ್ರಕ್ಕೆ ತಮ್ಮನೇ ಅದ ಹೊಸತನವನ್ನು ತಂದುಕೊಟ್ಟಿವೆ. ಇವಿಷ್ಟೂ ಅಲ್ಲದೆ, ಇಲ್ಲಿನ ಅಕರ್ಷಕವಾದ, ಆದರೂ ತುಂಬ ಚೇತೋಹಾರಿಯಾದ ಸಾಂದರ್ಭಿಕ ಮುಗಿತಾಯು ಸೊಗಸಾಗಿದೆ. ತುಂಬಿ ಹರಿಯುವ ಹೊಳೆಯಂತೆ ಹರಿಯುವ, ನವೀನವೆನಿಸುವ ರಸಾನಂದ ಪೂರಿತ ರುದ್ರಸನ್ನಿವೇಶಗಳಿಂದ ಕೂಡಿದ ಕತೆಯು ಹೊನಲಿಕೆ, ಇವಿಷ್ಟರಿಂದ ಪರಿಪುಷ್ಟವಾದ ಕತೆಯಿದು ಮಧ್ಯದಲ್ಲಿ ಕಂಡುಬರುವ ಕೇವಲ ಒಂದೆರಡು ದೋಷಗಳನ್ನು ಕೊಚ್ಚಿಕೊಂಡು, ನಿರರ್ಗಳವಾಗಿ ಹರಿದು, ಕತೆಯ ಕೆಲಸವನ್ನು ತುಂಬಿ ಯಶಸ್ವಿಯಾಗಿ ಮಾಡಿದೆಯೆಂದು ಹೇಳಬಹುದು.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಜಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.
ನಂಬುಗೆಯು ಮೂಲು! ಪ್ರಾಮಾಣಿಕ ವ್ಯವಹಾರ!
ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.
ಮಾಲಕರು: ಬಿ. ಜೆ. ಮುತ್ತಗಿ

ಸಣ್ಣಕತೆಗಾರರ ಮತ್ತು ಲಲಿತ ಪ್ರಬಂಧಕಾರರ ಸಮ್ಮೇಲನ, ಧಾರವಾಡ

ಉದ್ದೇಶಗಳು :

೧. ಸಣ್ಣ ಕಥಾಸಾಹಿತ್ಯ ಬೆಳೆಯುತ್ತ ನಡೆದಿದ್ದರೂ ಕಥಾಸಂಕಲನ ರೂಪವಾಗಿ ಪ್ರಕಾಶನಕ್ಕೆ ಪ್ರೋತ್ಸಾಹ ಸಾಕಷ್ಟು ದೊರೆಯುತ್ತಲಿಲ್ಲ. ಲಲಿತಪ್ರಬಂಧ ಸಾಹಿತ್ಯವು ಅವಶ್ಯವಿದ್ದರೂ ಬೆಳೆಯಬೇಕಾದಷ್ಟು ಬೆಳೆದಿಲ್ಲ. ಆದುದರಿಂದ ಹುಲುಸಾಗಿ ಬೆಳೆಯುತ್ತಿರುವ ಸಣ್ಣ ಕಥಾಸಾಹಿತ್ಯವು ಸತ್ತ್ವಯುತವೂ ರಸಪೂರ್ಣವೂ ಆಗುವಂತೆ ಮತ್ತು ಕೊರತೆ ಇರುವ ಲಲಿತಪ್ರಬಂಧ ಸಾಹಿತ್ಯವು ಪರಿಪೂರ್ಣವಾಗಿ ಬೆಳೆಯುವಂತೆ ಕನ್ನಡಕತೆಗಾರರು ಹಾಗೂ ಲಲಿತಪ್ರಬಂಧಕಾರರು ವಿಚಾರವಿನಿಮಯ ಮಾಡುವುದು—

೨. ಸಣ್ಣಕತೆಗಾರರು ಮತ್ತು ಲಲಿತಪ್ರಬಂಧಕಾರರಲ್ಲಿ ಒಂದು ವಿಧಾಯಕ ಸಂಘಟನೆಯನ್ನುಂಟುಮಾಡುವುದು—

೩. ಬರೆಹಗಾರರಲ್ಲಿ ಸಂಪರ್ಕ ಹಾಗೂ ಸಹಕಾರಗಳನ್ನು ಹೆಚ್ಚಿಸುವುದು—

೪. ಕವಿಗೋಷ್ಠಿ, ನಾಟಕಗೋಷ್ಠಿಗಳಂತೆ ಸಣ್ಣಕತೆಗಾರರ ಲಲಿತಪ್ರಬಂಧಕಾರರ ಗೋಷ್ಠಿಗಳನ್ನು ಏರ್ಪಡಿಸುವಂತೆ ಕೆಲವು ಸಂಘ-ಸಂಸ್ಥೆಗಳಿಗೆ ವಿನ್ನಹ ಮಾಡಿಕೊಳ್ಳುವುದು.

ಸಮ್ಮೇಲನದ ಕಾಲ

● ಈ ಸಮ್ಮೇಲನವನ್ನು ನವೆಂಬರ ಮಧ್ಯದಲ್ಲಿ ಧಾರವಾಡದಲ್ಲಿ ಕರೆಯಬೇಕೆಂದು ಯೋಜಿಸಲಾಗಿದೆ.

ವ ತಿಕೆ

● ಎರಡು ರೂಪಾಯಿಗಳನ್ನು ಈ ಸಮ್ಮೇಲನದ ಪ್ರತಿನಿಧಿ-ಶುಲ್ಕವೆಂದೂ ಅದಕ್ಕೂ ಹೆಚ್ಚಿನ ಹಣವನ್ನು ಸಹಾಯಧನವೆಂದೂ ಸ್ವೀಕರಿಲಾಗುವುದು.

● ಬೇರೆ ಬೇರೆ ಭಾಗಗಳಲ್ಲಿ ಇರುವ ಸಣ್ಣಕತೆಗಾರರು ಮತ್ತು ಲಲಿತಪ್ರಬಂಧಕಾರರು ತಮ್ಮ ಪೂರ್ಣ ಹೆಸರು, ವಿಳಾಸಗಳನ್ನು ತಾವು ಬರೆದ ಪುಸ್ತಕಗಳ ಪಟ್ಟಿಯೊಂದಿಗೆ ತಿಳುಹಿಸಿದಲ್ಲಿ, ಸಂಪರ್ಕವೇರ್ಪಡಿಸಲು ಅನುಕೂಲವಾಗುವುದು. ಈ ಸಮ್ಮೇಲನದ ಕಾಲದಲ್ಲಿ ಗ್ರಂಥಪ್ರದರ್ಶನ ಒಂದನ್ನು ಏರ್ಪಡಿಸಲು ನಿಶ್ಚಯಿಸಿದೆ. ಲೇಖಕರು ತಮ್ಮ ಪ್ರಕಟವಾದ ಕಥಾ ಹಾಗೂ ಪ್ರಬಂಧ ಸಂಕಲನಗಳನ್ನು ಕಳುಹಿಸಬೇಕು. ಆ ಗ್ರಂಥಗಳನ್ನು ಆಯಾವರಿಗೆ ತಲುಪಿ ಕಳುಹಿಸುವ ಏರ್ಪಾಡನ್ನು ಮಾಡಲಾಗಿದೆ.

● ಕನ್ನಡನಾಡಿನ ಜನರೆಲ್ಲರೂ—ಅದರಲ್ಲಿಯೂ ಮುಖ್ಯವಾಗಿ ಬರೆಹಗಾರರು ಹಾಗೂ ಸಾಹಿತ್ಯಪ್ರೇಮಿಗಳು—ಧನಸಹಾಯ ಮಾಡಿ, ಸಮ್ಮೇಲನ ಯಶಸ್ವಿಯಾಗುವಂತೆ ಸಹಕರಿಸಬೇಕಾಗಿ ಬೇಡುತ್ತೇವೆ:

ಕಾರ್ಯದರ್ಶಿಗಳು

ಸಣ್ಣಕತೆಗಾರರ ಮತ್ತು ಲಲಿತಪ್ರಬಂಧಕಾರರ ಸಮ್ಮೇಲನ
'ಜಯಂತಿ' ಆಫೀಸ್ ಧಾರವಾಡ

ಸಾದರ ಸ್ವೀಕಾರ

೫೧ **ಕಸ್ತೂರಿ** (ಸಾರಸಂಕಲನಾತ್ಮಕ ಮಾಸಪತ್ರಿಕೆ). ಸಂಪಾದಕರು: ಶ್ರೀಮಾನ್ ಮೋಹರೇ ಹಣಮಂತರಾಯರು. ಪ್ರಕಾಶಕರು: ಲೋಕಶಿಕ್ಷಣ ಟ್ರಸ್ಟ್, ಸಂಯುಕ್ತಕರ್ನಾಟಕ ಕಾರ್ಯಾಲಯ, ಹುಬ್ಬಳ್ಳಿ. ಡೆ. ಅ. ೧೪೪ ಪುಟಗಳ ಸಂಚಿಕೆ. ವಾರ್ಷಿಕ ವರ್ಗಣಿ ೯—೦—೦; ಬಿಡಿ ಸಂಚಿಕೆ ೦—೧೨—೦.

ಇಂದಿನ ಸ್ವತಂತ್ರಭಾರತದಲ್ಲಿ ಸಾಕ್ಷರಿಗಳ ಸಂಖ್ಯೆ ಹೆಚ್ಚುತ್ತಲಿದೆ ಬರಿ ಸಾಕ್ಷರಿಗಳಾದ ಮಾತ್ರಕ್ಕೆ ಜನರು ನಾಗರಿಕರೆನಿಸಿಕೊಳ್ಳಲಾರರು. ಇಂದು ವಿಸ್ತಾರವಾಗುತ್ತ ನಡೆದಿರುವ ಲೋಕಾನುಭವವನ್ನೂ ದೇಶ-ವಿದೇಶದ ರೀತಿ-ನಡತೆಗಳನ್ನೂ ವಿಜ್ಞಾನದ ಬೆಳೆವಣಿಗೆಯನ್ನೂ ಜ್ಞಾನದ ಪರಿಚಯವನ್ನೂ ಅವರು ಅರಿತುಕೊಂಡಾಗಲೇ ಸಜೀವವಾದ ನಾಗರಿಕರಾಗುವರು ಈ ಬಗೆಯ ಜ್ಞಾನ-ವಿಜ್ಞಾನಗಳನ್ನು ಸುಲಭವಾಗಿ ಸಂಕ್ಷೇಪವಾಗಿ ಮಾಡಿಕೊಡುವಂತಹ ಸಾರಸಂಕಲನ (ಡೈಜೆಸ್ಟ್) ಪತ್ರಿಕೆಗಳು ವಿದೇಶಗಳಲ್ಲಿ ಪ್ರಾರಂಭವಾಗಿ ಅನೇಕ ವರ್ಷಗಳಾದುವು. ಅವುಗಳ ಸಾಮಾಜಿಕ ಪ್ರಯೋಜನವನ್ನು ಅರಿತುಕೊಂಡು, ಇತ್ತೀಚೆಗೆ ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿಯೂ ಸಾರಸಂಕಲನಾತ್ಮಕ ಮಾಸಪತ್ರಿಕೆಗಳು ಹುಟ್ಟಿ ಕೆಲಸ ಮಾಡುತ್ತಲಿವೆ. ಮೈಸೂರು ಪ್ರೌಢ ಶಿಕ್ಷಣ ಪ್ರಚಾರ ಸಮಿತಿಯವರು ೧೦-೧೧ ವರ್ಷಗಳಿಂದ 'ಪುಸ್ತಕಪ್ರಪಂಚ' ಎಂಬ ಹೆಸರಿನ ಸಾರಸಂಕಲನ ಪತ್ರಿಕೆಯನ್ನು ಕನ್ನಡ ಭಾಷೆಯಲ್ಲಿಯಲ್ಲಿಯೂ ನಡೆಸಿಕೊಂಡು ಬಂದಿದ್ದಾರೆ. ಅದರ ಗಾತ್ರದಲ್ಲಿ ಅದು ಕಿರಿಯದು.

ಈಗ ನಮ್ಮ ಕೈಗೆ ಬಂದಿರುವ 'ಕಸ್ತೂರಿ' ಮಾಸಪತ್ರಿಕೆಯು ಗಾತ್ರ, ಬಹಿರಂಗ ಸೌಂದರ್ಯ, ಅಂತರಂಗ ಸತ್ತ್ವ ಇವುಗಳ ದೃಷ್ಟಿಯಿಂದ, ಮಿಕ್ಕ ಯಾವ ಭಾಷೆಯ ಸಾರಸಂಕಲನಾತ್ಮಕ ಪತ್ರಿಕೆಗಳನ್ನೂ ಸರಿಗಟ್ಟಿ ನಿಲ್ಲುವಷ್ಟು ತಕ್ಕದಾಗಿದೆ. ಲೋಕಶಿಕ್ಷಣ ಟ್ರಸ್ಟಿನಿಂದ ಇದು ಪ್ರಕಾಶಿತವಾಗುವುದೆಂದ ಮೇಲೆ, ಇದು ಜೆನ್ನಾದ ಆರ್ಥಿಕ ಭದ್ರತೆಯಿಂದ ಕೂಡಿದ್ದು, ಶಾಶ್ವತವಾಗಿ ಬದುಕಿಬಾಳುವುದೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಕನ್ನಡ ವಾಚಕರ ಕೈಯಲ್ಲಿ ಪ್ರತಿ ತಿಂಗಳೂ ಕಸ್ತೂರಿಯು ಕಂಡು, ಅವರ ಸಂಸ್ಕೃತಿಯ ಅರಳುವಿಕೆಗೆ ಒಂದು ಸಾಧನವಾಗಲಿ— ಎಂದು ನಮ್ಮ ಹಾರೈಕೆ.

೫೨ **ಸಂಗಮ** (ಸಾರಸಂಕಲನಾತ್ಮಕ ಮಾಸಪತ್ರಿಕೆ) ಸಂಪಾದಕರು: ಶ್ರೀಮಾನ್ ಪಾಟೀಲ ಪುಟ್ಟಪ್ಪನವರು. ಪ್ರಕಾಶಕರು: ಪ್ರಸಂಚ-ಸಂಗಮ ಕಾರ್ಯಾಲಯ, ದುರ್ಗದ ಬಯಲು, ಹುಬ್ಬಳ್ಳಿ. ಡೆ. ಅ. ೧೬೦ ಪುಟಗಳು. ವಾರ್ಷಿಕ ವರ್ಗಣಿ ೯—೦—೦. ಬಿಡಿ ಸಂಚಿಕೆ ೦—೧೨—೦.

ಇದೂ ಸಮಾಜಶಿಕ್ಷಣಕ್ಕಾಗುಗಿಯೆ ಹೊರಟ ಸಂಕಲನಾತ್ಮಕ ಪತ್ರಿಕೆಯಾಗಿದೆ. ಸಂಪಾದಕರು ವಿದೇಶಕ್ಕೆ ಹೋಗಿ ಪತ್ರಿಕೋದ್ಯಮದ ಉಚ್ಚಶಿಕ್ಷಣವನ್ನು ಪಡೆದು ಬಂದವರಾಗಿರುವರು. ಜನಸಾಮಾನ್ಯರಲ್ಲಿ ನಾಗರಿಕತೆಯ ಅರುನ್ನು ಯಾವ ಯಾವ ದಾರಿಗಳಿಂದ ತುಂಬಬೇಕೆಂಬ ವಿಷಯವನ್ನು ಸಂಪಾದಕರು ಚೆನ್ನಾಗಿ ಬಲ್ಲರು. ಅವರ ಧೋರಣೆಗೆ ಅನುಗುಣವಾಗಿಯೆ ಈ ಮೊದಲನೆಯ ಸಂಚಿಕೆಯು ವಿವಿಧ ವಿಷಯಸಂಚಯಗಳನ್ನೂ ಲಲಿತಲೇಖನಗಳನ್ನೂ ತುಂಬಿಕೊಂಡು ಹೊರಟಿದೆ. ಮುದ್ರಣದ ಅಚ್ಚುಕಟ್ಟು ಇನ್ನೂ ಚೆನ್ನಾಗಬೇಕೆಂದು ವಾಚಕರು ಬಯಸಿದರೆ ಅದು ತಪ್ಪಲ್ಲ ಸಂಗಮವು ಕನ್ನಡಿಗರ ಹೃದಯಸಾಗರಕ್ಕೆ ವಿವಿಧ ಜ್ಞಾನಸತರಂಗಿಣಿಗಳನ್ನು ಸೇರಿಸಿ, ತನ್ನ ಧ್ಯೇಯವನ್ನು ಅನ್ವರ್ಥವಾಗಿಸಿಕೊಂಡು ಬಹುಕಾಲ ಬಾಳಲಿ!

೫೩ **ರಣರಂಗದಲ್ಲಿ** (ಭಗವದ್ಗೀತೆಯ ಪದ್ಯಾನುವಾದ) ಅನುವಾದಕರು: ಶ್ರೀಮಾನ್ ಕುಡಿತಿನಿ ರಂಗಾಚಾರ್. ಪ್ರಕಾಶಕರು: ಚಿಕ್ಕಳಂಬಾಡಿ ಬುಕ್ ಡಿಪೊ, ಧಾರವಾಡ. ಕ್ರೌ. ಅ. ೧೦೦ ಪುಟಗಳು. ಬೆಲೆ ೧—೦—೦.

೫೪ **'ಬಿಸಿಲು ಬೆಳದಿಂಗಳು' ಕಥಾಸಂಕಲನದ ವಿಮರ್ಶೆ** (ವಿಮರ್ಶಾತ್ಮಕ ಗ್ರಂಥ) ಬರೆದವರು: ಶ್ರೀಮಾನ್ ಎಚ್. ವಿ. ಚಂದ್ರಶೇಖರ. ಪ್ರಕಾಶಕರು: ಸಿರಿಗನ್ನಡ ಪ್ರಕಾಶನ, ಹಿರಿಯೂರು. ಚಿತ್ರದುರ್ಗ ಜಿಲ್ಲೆ. ಕ್ರೌ. ಅ. ೪೮ ಪುಟಗಳು. ಒಳ್ಳೆಯ ಪ್ರತಿಗೆ ೦—೫—೦; ಸಾಮಾನ್ಯ ಪ್ರತಿಗೆ ೦—೪—೦.

೫೫ **ಹೂಗೊಂಚಲು** (ವಾರ್ಷಿಕಪತ್ರಿಕೆ) ಸಂಪಾದಕರು: ಶ್ರೀ. ಬೂಚಾ ಬಿ. ಎಸ್., ಸಹಸಂಪಾದಕರು: ಶ್ರೀ. ಕೊಲ್ಲೂರ ಬಿ. ಬಿ. ಅವರು. ಕಲಬುರ್ಗಿಯ ಶ್ರೀ ಶರಣಬಸವೇಶ್ವರ ಹೈಸ್ಕೂಲಿನಿಂದ ಪ್ರಕಾಶಗೊಂಡುದು. ಕ್ರೌ. ೧೭೮ ಪುಟಗಳು ಕನ್ನಡ ವಿಭಾಗಕ್ಕೆ ೬೪; ಇಂಗ್ಲಿಷ ವಿಭಾಗಕ್ಕೆ ೧೦; ಹಿಂದೀ ವಿಭಾಗಕ್ಕೆ ೧೦.

ಹೆಚ್ಚಾಗಿ ವಿದ್ಯಾರ್ಥಿಗಳ ಲೇಖನ—ಅವರ ಬೇರೆ ಬೇರೆ ಚಟುವಟಿಕೆಗಳ ಸಚಿತ್ರ ವರದಿಗಳಿಂದ ಇದು ಕೂಡಿದ್ದು, ಅಚ್ಚು-ಕಟ್ಟುಗಳು ಸುಂದರವಾಗಿವೆ.

೫೬ **ಹೈದರಾಬಾದ್ ಹಿಂದೀಪ್ರಚಾರ ಸಮಿತಿಯ ಗಂಗಾವತಿ ಕೇಂದ್ರ** (ಹದಿನೈದು ವರ್ಷಗಳ ಪರಿಚಯಾತ್ಮಕ ವರದಿ) ಸಂಚಾಲಕರು: ಶ್ರೀ. ಜಯರಾಮಾಚಾರ್ಯ ಸದರಜೋಶಿಯವರು. ಪ್ರಕಾಶಕರು: ಶ್ರೀ. ಕೇಶವರಾವ ಶ್ರೀಖಂಡೇ, ಅಧ್ಯಕ್ಷ ಹಿಂದೀ ಕೇಂದ್ರ, ಗಂಗಾವತಿ. ಕ್ರೌ. ಅ. ೧೪ ಪುಟಗಳು.

ಈ ಹಿಂದೀಪ್ರಚಾರಕೇಂದ್ರದ ವರದಿಯೆಂದರೆ, ಹೈದರಾಬಾದಿನ ಹಿಂದಿನ ನವಾಬರ ಆಳಿಕೆಯಲ್ಲಿ, ಹಿಂದುಗಳ ಮೇಲೆ ನಡೆಯುತ್ತಿದ್ದ ಒತ್ತಾಯದ ಕಾರಭಾರದ ಚಿತ್ರಣವಾಗಿದೆ. ಅಂತಹ ವಿಷಮ ಕಾಲದಲ್ಲಿಯೂ ನಿಷ್ಠೆಯಿಂದ ಈ ಸಂಸ್ಥೆಯನ್ನು ನಡೆಸಿಕೊಂಡು ಬಂದು ಇದುವರೆಗೆ ಜೀವಂತವಾಗಿ ಇರಿಸಿರುವ ಕಾರ್ಯಕರ್ತರಿಗೆ ನಮ್ಮ ಧನ್ಯವಾದಗಳು. ಪ್ರಾದೇಶಿಕ ಭಾಷೆಯ ಸ್ಥಾನವನ್ನು ಮರೆಯದೆ, ಈ ಸಂಸ್ಥೆ ತನ್ನ ಪ್ರಚಾರಕಾರ್ಯವನ್ನು ಸಾಗಿಸಲಿ.

V. 1777

— ದ್ವಿಶಕ್ತಿಯುತವಾದ —

ಮೋಬಿಲ್‌ಗ್ಯಾಸ್

ಉಪಯೋಗಿಸಿ. ಪ್ರತಿ ಗ್ಯಾಲನ್ನಿಗೂ ಅತ್ಯಂತ ಹೆಚ್ಚು ಮೈಲೇಜನ್ನು ಪಡೆಯಿರಿ

ಇಂದಿನ ಪೆಟ್ರೋಲುಗಳ ಪೈಕಿ ಯಾವುದು ಅತ್ಯಂತ ಹೆಚ್ಚು ಮೈಲೇಜನ್ನು ಕೊಡುತ್ತದೆ? ಯಾವುದು ನಿಮ್ಮ ಎಂಜಿನ್ನನ್ನು ಅತ್ಯುತ್ತಮ ಸ್ಥಿತಿಯಲ್ಲಿರುತ್ತದೆಯೋ ಅದು ಎಂಬುದು ಪ್ರಶ್ನೆಯೇ ಎಂದರೆ ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸ್—ಏಕೆಂದರೆ ಇದು ಬೇರೆ ಯಾವ ಪೆಟ್ರೋಲಿಯಮ್ಮಿಂತಲೂ ಹೆಚ್ಚು ಎಂಜಿನ್ ಕೊಂಡ ತೊಂದರೆಗಳನ್ನು ನಿವಾರಣೆ ಮಾಡುತ್ತದೆ.

ಅದುದರಿಂದ ನಿಮ್ಮ ಎಂಜಿನ್ನು ಹೆಚ್ಚು ಶಕ್ತಿಯನ್ನು ಹೊಮ್ಮಿಸಲು ಮತ್ತು ಕಡಿಮೆ ಕಾಸಿನಲ್ಲಿ ನಿಮ್ಮ ಕಾರು ಅಧಿಕ ದೂರವನ್ನು ನಿಮ್ಮನ್ನು ತಲಪಿಸಲು ಪೂರ್ಣ ಶಕ್ತಿಭರಿತವಾಗಿ ಸುಗಮವಾಗಿ ನಡೆಯುತ್ತದೆ.

ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸ್ ಉಪಯೋಗಿಸಲು ಇಂದೇ ಸುರು ಮಾಡಿರಿ. ಮೋಬಿಲ್ ಪವರ್ ಕಾಂಪೌಂಡನ್ನೊಳಗೊಂಡ ಪೆಟ್ರೋಲು ಇದೊಂದೇ. ಈ ಕಾಂಪೌಂಡಿನಷ್ಟು ಬಲವಾದ ಆಡಿಟಿವ್‌ಗಳ ಮಿಶ್ರಣವು ಇದುವರೆಗೆ ಪೆಟ್ರೋಲಿನಲ್ಲಿ ಸೇರಿಸಲ್ಪಟ್ಟ ದರೇ ಇಲ್ಲ. ಮೋಬಿಲ್‌ಗ್ಯಾಸ್ ಉಪಯೋಗಿಸಲು ಸುರು ಮಾಡುವುದು ಲಾಭಕರ, ಏಕೆಂದರೆ ಅದು ನಿಮ್ಮ ಹಣಕ್ಕೆ ಹೆಚ್ಚು ಮೌಲ್ಯವನ್ನು ಕೊಡುತ್ತದೆ.

ಇದು ದೊರೆಯುವುದು
ಹಾರುವ ಕೆಂಪು ಕುದುರೆಯ
ಗುರುತಿರುವಲ್ಲಿ ಮಾತ್ರ
—ಇನ್ನೆಲ್ಲಿಯೂ ಇಲ್ಲ!



ಎಲ್ಲೆಲ್ಲಿಯೂ ಟ್ರಕ್ ಡ್ರೈವರುಗಳು ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸನ್ನು ನೋಗಳುತ್ತಾರೆ — ಅದು ಪೂರ್ಣ ಶಕ್ತಿಯನ್ನು ಕೊಟ್ಟು, ಮಿಲೇಜನ್ನು ಇಳಿಸುತ್ತದೆ ಎಂಬುದನ್ನು ಅವರು ಕಂಡುಕೊಂಡಿದ್ದಾರೆ!

ಸ್ಟಾಂಡರ್ಡ್-ವ್ಯಾಕ್ಯೂಮ್ ಆಯಿಲ್ ಕಂಪೆನಿ (ಕಂಪೆನಿಯ ಮೆಂಬರುಗಳ ಹೂಡಿಗಾರಿಕೆಯು ಮಿಶ್ರವಿದೆ)

Printed by N. A. Hoskeri at the Vijaya press, Dharwar and published for the proprietors Jayanti publications, by K. S. Betgeri at the Jayanti office Dharwar



ಸಂಪುಟ
೧೯

ಕನ್ನಡಜನನಿ!

ಸಂಚಿಕೆ
೬

ಪಲ್ಲವಿ

ಶರಣು ಶರಣು, ಸಿರಿಗನ್ನಡಜನನಿ!
ಕರಗಳ ಮುಗಿಯುತ ಮುಣಿವೆನು ಕರುಣೇ!

೧

ಸಿರಿ-ಸೊಗಸುಗಳಾ ಸರಿಯನು ಸುರಿಸುತ,
ಆರುಹಿನ ತೊರೆಗಳ ಅವಿರತ ಹರಿಸುತ,
ಬಿರುದಿನ ನರಕೇಸರಿಗಳ ಮೆರೆಸುತ
ಸಿರಿ-ಸರಸತಿ-ಗೌರಿಯರೊಲು ಮೆರೆವೆ...
ಶರಣು ಶರಣು ಸಿರಿಗನ್ನಡಜನನಿ!

೨

ಭುವನವಮಾನ್ಯ ಗುರುವರರನು ಕರೆಯಿಸಿ
ನವ-ನವನೀತಿಯ ತನಯರಿಗೊರೆಯಿಸಿ,
ವ್ಯವಹಾರಕೆ ಪರಮಾರ್ಥವ ಬೆರೆಯಿಸಿ,
ಅವನಿಯ ನಗಿಸಿದೆ ಸುಖವ ಪಸರಿಸಿ....
ಶರಣು ಶರಣು ಸಿರಿಗನ್ನಡಜನನಿ!

೩

ನಿನ್ನಯ ಅನ್ನವನುಣ್ಣುತ ಬಳೆವೆವು,
ಚೆನ್ನನುಡಿಯನಾಡುತ ಸುಖ ತಳೆವೆವು,
ನಿನ್ನ ನಲುಮೆಯಿಂದಳಲನು ಕಳೆವೆವು,
ನಿನ್ನ ಸುಖಕೆ ತನುವನು ಸವೆಸುವೆವು....
ಶರಣು ಶರಣು ಸಿರಿಗನ್ನಡಜನನಿ!

JAYANTI

ಈ ಸಂಚಿಕೆಯಲ್ಲಿ :

卐

ನವೋದಿತ ಕರ್ನಾಟಕ (ಸಂಪಾದಕೀಯ)
ಸಂಪಾದಕರು ೨೧೧

ನಾಡನಡೆ (ಸಾಂದರ್ಭಿಕ ಟಿಪ್ಪಣಿ)
'ಕಾಲಭೈರವ' ೨೦೩

ಸುಖದೊಂದಿಗಿನ ದುಃಖ (ಪತ್ರವ್ಯವಹಾರ)
ಸಂಪಾದಕರು ೨೦೪

ಪೂರ್ಣಾಹುತಿ (ಐತಿಹಾಸಿಕ ರೂಪಕ)
'ಆನಂದಕಂದ' ೨೦೫

ಅತೀಂದ್ರಿಯಗೋಚರತೆ, ಸ್ವಪ್ನಗಳು (ಮನೋವಿಜ್ಞಾನ)
ಪ್ರೊ. ಎಸ್. ಕೆ. ರಾಮಚಂದ್ರರಾವ್, ಧಾರವಾಡ ೨೧೩

ಕೆಳದಿಗೆ ಕತೆ (ಕವನ)
ಶ್ರೀ. ಮ. ಗು. ಬಿರಾದಾರ ಬಿ. ಎ. (ಆನರ್ಸ್) ಧಾರವಾಡ ೨೧೬

ಮಬ್ಬುಹರಿಯಿತು (ಪಣ್ಣಕಥೆ).
ಶ್ರೀಮತಿ ಎಂ. ಕೆ. ಜಯಲಕ್ಷ್ಮಿ. ಕೆರಗಡ ೨೧೭

ಗುಂಡೂಮಾಮಾನ ಯಾತ್ರೆ (೩ನೆಯ ಸಂದರ್ಶನ)
ಶ್ರೀ. ಪಿ. ವ್ಹಿ. ಗುಡಿ, ನ್ಯೂದಿಲ್ಲಿ ೨೨೩

ಮುಡದಿಯ ಪತ್ರ (ಕವನ)
'ಶಿವಶ್ರೀ' ಹೈದರಾಬಾದ್ ೨೨೬

ದೀಪೋತ್ಸವಗೀತ (ನವ್ಯಕವನ)
ಶ್ರೀ. ಅರವಿಂದ ನಾಡಕರ್ಣಿ ಬಿ. ಎಸ್ಸಿ., ಎಲ್‌ಎಲ್. ಬಿ. ಮುಂಬಯಿ ೨೨೭

ಶಿವ-ಪಾರ್ವತಿ (ಚಿಕ್ಕಕಥೆ)
ಶ್ರೀ. ಗೋವಿಂದಮೂರ್ತಿ ದೇಸಾಯಿ, ಧಾರವಾಡ ೨೩೮

ಶ್ಯಾಮನವಸನಾ (ಅನುವಾದಿತ ಕವನ)
ಶ್ರೀ. ಗೋವರ್ಧನಾಚಾರ್ಯ ಗಲಗಲಿ ಎಂ. ಎ., ಬಿ. ಟಿ. ಧಾರವಾಡ ೨೪೩

ತಾಯಿ (ಲಘುಸ್ರಬಂಧ)
ಶ್ರೀ. ಎನ್. ಎಸ್. ಗದಗಕರ ಬಿ. ಎ. ಧಾರವಾಡ ೨೪೪

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರಂ, ಕಾಸರಗೋಡು ೨೪೬

ಸಾದರ ಸ್ವೀಕಾರ ಹೊದಿಕೆಯ ೩ನೆಯ ಪುಟದಲ್ಲಿ

ಜಯಂತಿ

ಸಂಪುಟ ೧೯ ಸಂಚಿಕೆ ೬

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

**

ಜಾಹೀರಾತು ಕೊಡಬಯಸುವವರು
ಬರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ನವೋದಿತ ಕರ್ನಾಟಕ

ಭಾರತಕ್ಕೆ ಸ್ವಾತಂತ್ರ್ಯ ದೊರೆತುದರ ಫಲವಾಗಿ, ಜನತೆಯ ಅಭೀಷ್ಟಗಳು ಒಂದರ ಹಿಂದೆ ಒಂದರಂತೆ ಪೂರೈಕೆಯಾಗುತ್ತ ನಡೆದಿವೆ. ಮಿಕ್ಕೆಲ್ಲ ಅಭೀಷ್ಟಗಳಲ್ಲಿ, ಮಹತ್ತ್ವಪೂರ್ಣವಾದುದೂ ಅತ್ಯಾವಶ್ಯಕವಾದುದೂ ಎಂದರೆ ಭಾಷಾನುಗುಣ ರಾಜ್ಯಪುನರ್ಘಟನೆ. ತಮ್ಮದೇ ಆದ ಪ್ರತ್ಯೇಕ ರಾಜ್ಯರಚನೆಯಿಲ್ಲದುದರಿಂದ, ಕನ್ನಡಿಗರು ಅನುಭವಿಸಿದಂತಹ ದುರ್ದಸೆಯನ್ನು, ಮಿಕ್ಕ ಭಾರತೀಯರಾರೂ ಅನುಭವಿಸಿಲ್ಲವೆಂದು ಹೇಳಬಹುದು. ಕನ್ನಡ ಭಾಷೆ ತನ್ನ ನಾಡಿನಲ್ಲಿ ತನ್ನವರಿಂದಲೇ ಉಪೇಕ್ಷೆಗೆ ಗುರಿಯಾಗಬೇಕಾಯಿತು. ಕನ್ನಡ ಪ್ರದೇಶದಲ್ಲಿಯೇ ಜನಂಗೆ ಕನ್ನಡ ಭಾಷೆಯ ಶಿಕ್ಷಣವು ದೊರೆಯದೆ ಹೋಯಿತು. ಉಜ್ವಲವಾದ ಇತಿಹಾಸ-ಸಂಸ್ಕೃತಿಪರಂಪರೆಗಳಿದ್ದರೂ, ಅಪಾರವಾರಾಶಿಯಂತಹ ವಾಙ್ಮಯವಿದ್ದರೂ, ಅವೆಲ್ಲ ಕಣ್ಮರೆಯಾಗಿ ಕುಳಿತುಕೊಂಡುವು. ಇಷ್ಟೇ ಅಲ್ಲ; ಪುರಾಣ-ಇತಿಹಾಸಗಳ ಕಾಲದಲ್ಲಿ ಜಗತ್ತಿನಲ್ಲೆಲ್ಲ ತನ್ನ ಪ್ರಭಾವವನ್ನು ಮೆರೆಸಿದ 'ಕರ್ನಾಟಕದೇಶ'ಕ್ಕೆ ಅರ್ವಾಚೀನ ಭಾರತದ ಭೂಪಟದಲ್ಲಿ ಸ್ಥಾನವೇ ಇರಲಿಲ್ಲ. ವಾಸ್ತವವಾಗಿ ಕರ್ನಾಟಕದ ಪ್ರದೇಶ, ಜನತೆ ಇವು ಇಲ್ಲದಂತಾಗಿರಲಿಲ್ಲವಾದರೂ, ಕರ್ನಾಟಕಕ್ಕೆ ಹೇಳಲು ಹೆಸರು ಇಲ್ಲದಂತಾಗಿತ್ತು!

ರತ್ನದ ಮೇಲೆ ಧೂಳಿ ಮುಸುಕಿದ್ದರೇನಾಯಿತು; ಅದು ಕಲ್ಲುಹರಳಾಗಿ ಮಾರ್ಪಡುವುದೆ? ಬಿರುಸಿನ ಗಾಳಿ ಬೀಸಿ ಧೂಳಿ ಹಾರಿದಾಗ, ಅದು ಮತ್ತೆ ತನ್ನ ರತ್ನತ್ವವನ್ನು ಮೆರುಗಿನಿಂದಲೇ ಮೆರುಗಿಸುವುದು. ಭಾರತದಲ್ಲಿ ಹೊಸತಾಗಿ ತಲೆದೋರಿದ ದೇಶಭಕ್ತಿ ಕರ್ನಾಟಕದಲ್ಲಿಯೂ ಜಾಗೃತವಾಗದೆ ಇರಲಿಲ್ಲ. ಆಲ್ಲದೆ ಆಗ ಆಳುತ್ತಿದ್ದ ಬ್ರಿಟಿಶರಲ್ಲಿಯ ಸಮಂಜಸ ಬುದ್ಧಿಯ ಕೆಲವು ಜನ ಅಧಿಕಾರಿಗಳೂ ವಿದ್ವಾಂಸರೂ, ಕನ್ನಡ ನಾಡು ನುಡಿಗಳ ಅಸ್ತಿತ್ವವನ್ನೂ ಅವುಗಳ ಮೇಲ್ಮೈಯನ್ನೂ ಕಂಡು, ಒಪ್ಪಿಕೊಂಡು, ಅವುಗಳಿಗೆ ಸ್ಥಾನವನ್ನು ಕಲ್ಪಿಸಿಕೊಡುವ ಪ್ರಯತ್ನ ಮಾಡಿದರು. ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ, 'ದಕ್ಷಿಣ ಮಹಾರಾಷ್ಟ್ರ' ಪ್ರದೇಶದಲ್ಲಿ ಮುಖ್ಯಾಧಿಕಾರಿಗಳಾಗಿ ಬಂದ ಕ. ಮನ್ರೋ ಎಂಬವರು, 'ಭಾಷೆ-ಸಂಸ್ಕೃತಿಗಳ ದೃಷ್ಟಿಯಿಂದ ಈ ಪ್ರದೇಶವನ್ನು ಮದ್ರಾಸ್ ವಿಭಾಗಕ್ಕೆ ಸೇರಿಸಜೀಕು!' ಎಂದು ಸರಕಾರಕ್ಕೆ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ೧೮೬೦-೬೧ರಲ್ಲಿ ಈ ಭಾಗಕ್ಕೆ ಶಿಕ್ಷಣಾಧಿಕಾರಿಯಾಗಿ ಬಂದ ಮಿ. ರಸೆಲ್ ಸಾಹೇಬರು, ಈ ನಾಲ್ಕೂ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಭಾಷೆಯನ್ನೇ ಕಲಿಸಬೇಕೆಂದು ಏರ್ಪಾಡು ಮಾಡಿದರು. ಆ ಕಾಲದಲ್ಲಿಯೆ ಗ್ರಾಮಾಧಿಕಾರಿಗಳು ಕಾಗದಪತ್ರಗಳನ್ನೆಲ್ಲ ಕನ್ನಡದಲ್ಲಿಯೆ ಬರೆಯಬೇಕೆಂದು ಮುಂಬಯಿ ಸರಕಾರ ಆಜ್ಞೆ ಮಾಡಿತು. ಧಾರವಾಡ, ಬೆಳಗಾಂವಿ, ವಿಜಾಪುರ, ಕಾರವಾರ ಈ ನಾಲ್ಕೂ ಜಿಲ್ಲೆಯ ಕೋರ್ಟು-ಕಚೇರಿಗಳಲ್ಲಿ ಕನ್ನಡ ಭಾಷೆಗೆ ಅಧಿಕೃತ ಸ್ಥಾನ ದೊರೆಯಿತು.

೧೯ನೆಯ ಶತಮಾನದಲ್ಲಿಯೆ ಕನ್ನಡ ಜಾಗೃತಿಯ ಇನ್ನೊಂದು ಕಾರ್ಯವು ನಡೆದಿತ್ತು. ರೆ. ಕಿಟೆಲ್, ಡಾ. ಫ್ಲೀಟ್, ರೆ. ಡಿಗ್ಲರ್, ರೈಸ್ ಸಾಹೇಬದ್ವಯರು, ಮಿ. ವರ್ಥ್ ಇವರೆಲ್ಲರ ಪ್ರಯತ್ನದ ಫಲವಾಗಿ, ಕನ್ನಡ ಸಾಹಿತ್ಯ, ಇತಿಹಾಸ-ಸಂಸ್ಕೃತಿಗಳ ಕೆಲವು ಭಾಗವು ಬೆಳಕಿಗೆ ಬಂದಿತು. ನಮ್ಮ ನಾಡಿನ ಶುಶಿಕ್ಷಿತರ ಕಣ್ಣಿಗೆ, ಕಣ್ಮರೆಯಾದ ಕರ್ನಾಟಕದ ಚಿತ್ರವು ಕಾಣಲಿಕ್ಕೆ ಅವಕಾಶವು ದೊರೆಯಿತು. ಆದರೂ ಇದೇ ಕಾಲದಲ್ಲಿ, ಬಳ್ಳಾರಿಯ ಭಾಗದ ಕನ್ನಡಿಗರೆಲ್ಲ ತೆಲುಗುಭಾಷೆಯನ್ನು ಕಲಿಯಬೇಕಾಗಿತ್ತು; ರಾಜಕೀಯ ವ್ಯವಹಾರಗಳೆಲ್ಲ ಅಲ್ಲಿ ತೆಲುಗು ಭಾಷೆಯಲ್ಲಿಯೇ ನಡೆಯಬೇಕಾಗಿತ್ತು.

ಮೈಸೂರೊಂದನ್ನು ಬಿಟ್ಟರೆ ಮಿಕ್ಕ ಸಂಸ್ಥಾನಗಳಲ್ಲಿ ವಾಸಿಸುವ ಕನ್ನಡಿಗರ ಗೋಳು ಮೊನ್ನೆ ಮೊನ್ನೆಯ ವರೆಗೂ ನಡೆದೇ ಇತ್ತು. ಉತ್ತರ ಕರ್ನಾಟಕದ ಸಂಸ್ಥಾನದ ಅಧಿಪತಿಗಳೆಲ್ಲ ಮರಾಠಿಗರು. ಅವರು ಕೊನೆಯ ವರೆಗೂ ತಮ್ಮ ಭಾಷೆಯ ಒತ್ತಾಯದಿಂದ ಕನ್ನಡಿಗರನ್ನು ಬಿಡುಗಡೆಗೊಳಿಸಲಿಲ್ಲ. ಹೈದರಾಬಾದ್ ಕರ್ನಾಟಕ ಪ್ರದೇಶದ ಜನರ ಪಾಡನ್ನು ಯಾರೂ ಕೇಳುವವರೇ ಇರಲಿಲ್ಲ. ಉರ್ದುವೊಂದನ್ನು ಬಿಟ್ಟು ಮಿಕ್ಕ ದೇಶಭಾಷೆಗಳಿಗೆ ಅಲ್ಲಿ ಮುಖವೆತ್ತಿ ನಿಲ್ಲಲು ಅವಕಾಶವೇ ಇರಲಿಲ್ಲ.

ಕರ್ನಾಟಕದ ಸತ್ತ್ವ ದೊಡ್ಡದು. ವಿಪರೀತ ಪರಿಸ್ಥಿತಿಯ ಮೂಲಕ ಹೇಳಲು ಹೆಸರಿಲ್ಲದಂತೆ ಹುದುಗಿಕೊಂಡಿದ್ದರೂ, ಬೇರೆ ಬೇರೆ ವ್ಯಕ್ತಿಗಳಲ್ಲಿ ಅದು ತನ್ನ ಸತ್ತ್ವವನ್ನು ಪ್ರಕಟಿಸತೊಡಗಿತ್ತು. ದಿವಂಗತರಾದ ರಾಮಚಂದ್ರ ಹಣಮಂತ ದೇಶಪಾಂಡೆ, ಧಾರವಾಡ ಬೆನ್ನೆ-ಬಸಪ್ಪನವರು, ವೆಂಕಟರಂಗೋ ಕಟ್ಟಿಯವರು, ಕುರಮರಿ ಗಂಗಾಧರಯ್ಯನವರು, ಕಾಯಕಿಣಿ ಶ್ಯಾಮರಾಯರು ಇವರೆಲ್ಲ ಕನ್ನಡ ಭಾಷೆ-ಸಂಸ್ಕೃತಿಗಳ ಸಂಗೋಪನ ಸಂವರ್ಧನಗಳ ಕಾರ್ಯವನ್ನು ಕೈಕೊಂಡರು. ಇವರ ಪ್ರಯತ್ನದ ಫಲವಾಗಿಯೇ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವು ತಲೆಯೆತ್ತಿ ನಿಂತು ಕನ್ನಡಕ್ಕಾಗಿ ದುಡಿಯಲು ತೊಡಗಿತು.

ಮೊದ-ಮೊದಲು ಕೇವಲ ಕನ್ನಡ ಭಾಷೆಯ ಸಂರಕ್ಷಣೆ, ಸಂವರ್ಧನೆಗಳಷ್ಟೇ ಗುರಿಯಾಗಿ ಉಳ್ಳ ಕನ್ನಡಿಗರ ಚಳುವಟಿಕೆ, ಮುಂದಿನ ತಲೆಮಾರಿನಲ್ಲಿ ರಾಜಕೀಯದತ್ತಲೂ ಮುಖ ತಿರುಗಿಸಿತು. ೨೦ನೆಯ ಶತಮಾನದ ಎರಡನೆಯ ದಶಕದಲ್ಲಿ, ಕರ್ನಾಟಕ ಪ್ರಾಂತೀಕರಣದ ಕೂಗು ಕೇಳತೊಡಗಿತು. ಶ್ರೀಮಾನ್ ಆಲೂರ ವೆಂಕಟರಾಯರ 'ಕರ್ನಾಟಕ ಗತವೈಭವ' ಎಂಬ ಪುಸ್ತಕದ ಪ್ರಕಟನೆಯೇ ಈ ಪ್ರಾಂತೀಕರಣ ಚಳವಳಿಯ ಮೊದಲ ಕಹಳೆಯಾಯಿತು. ಸಾಂಸ್ಕೃತಿಕ ದೃಷ್ಟಿಯಿಂದಲಾದರೂ ಕನ್ನಡಿಗರು ಒಂದುಗೂಡಬೇಕೆಂಬ ಉದ್ದೇಶದಿಂದ ಬೆಂಗಳೂರಲ್ಲಿ ಕನ್ನಡ ಸಾಹಿತ್ಯಪರಿಷತ್ತು ಸ್ಥಾಪಿತವಾಗಿ, ಸಾಹಿತ್ಯಿಕ ಚಟುವಟಿಕೆಗಳನ್ನು ನಡೆಸಿತು.

ಉತ್ತರ ಕರ್ನಾಟಕದಲ್ಲಿ ರಾಜಕೀಯ ದೃಷ್ಟಿಯಿಂದ ಕರ್ನಾಟಕವು ಒಂದು ಪ್ರಾಂತವಾಗಬೇಕೆಂಬ ಆಂದೋಲನವು ನಡೆಯಿತಾದರೂ, ಅಂದಿನ ಕಾರ್ಯಕರ್ತರ ದೃಷ್ಟಿಯಲ್ಲಿ ಸಂಸ್ಥಾನ ಕರ್ನಾಟಕ ಪ್ರದೇಶವು, ಆಪೇಕ್ಷಿತ ಕರ್ನಾಟಕದ ವ್ಯಾಪ್ತಿಯಲ್ಲಿ ಒಳಗೊಳ್ಳುತ್ತಿರಲಿಲ್ಲ. ಕೇವಲ ಬ್ರಿಟಿಶರ ವಶವಲ್ಲಿರುವ ಕನ್ನಡ ಪ್ರದೇಶವನ್ನೇ ಒಂದು ರಾಜಕೀಯ ವಿಭಾಗವಾಗಿ ಮಾಡಬೇಕೆಂಬ ಪ್ರಯತ್ನವಿದ್ದಿತಷ್ಟೆ! ಆಗ ಸ್ಥಾಪಿತವಾದ ಕರ್ನಾಟಕ ಏಕೀಕರಣಸಂಘವೂ ಆಗಾಗ ಸೇರುತ್ತಿದ್ದ ಏಕೀಕರಣ ಪರಿಷತ್ತುಗಳೂ ಸಂಸ್ಥಾನ ಭಾಗವಿರಹಿತ ಕರ್ನಾಟಕ ಪ್ರಾಂತವನ್ನೇ ಬೇಡುವ ನಿರ್ಣಯವನ್ನು ಮಾಡುತ್ತಿದ್ದುವು. ನಮ್ಮ ನಾಡಿನ ಕಾಂಗ್ರೆಸ್ಸಿನ ಧುರೀಣರು ಸುಮ್ಮಗಿದ್ದು ಬಿಟ್ಟಿದ್ದರೆ, ಭಾರತಕ್ಕೆ ಸೈಮನ್ ಕಮಿಶನ್ ಬಂದಾಗಲೇ ಸಿಂಧ, ಓಡಿಸಾ ಪ್ರಾಂತಗಳಂತೆ ಕರ್ನಾಟಕಕ್ಕೂ ಪ್ರತ್ಯೇಕಪ್ರಾಂತ್ಯವು ಹಿಂದೆಯೇ ದೊರೆಯಬಹುದಾಗಿತ್ತು. ಅಂದು ನಮ್ಮ ಕಾಂಗ್ರೆಸ್ಸಿನ ಧುರೀಣರು ನಡೆದುಕೊಂಡ ರೀತಿ, ಕೇವಲ ಸದುದ್ದೇಶ ಪ್ರೇರಿತವಾದುದೆಂದು ಅನೇಕ ಜನರು ಒಪ್ಪಲಿಲ್ಲ; ಆದರೂ ನಿಜವಾದ ಏಕೀಕರಣವಾದಿಗಳನ್ನು ಕಾಂಗ್ರೆಸಿಗರು ಕುಸ್ತಿಯಲ್ಲಿ ಸೋಲಿಸಿದುದೇನೋ ನಿಜವಾದ ಸಂಗತಿ.

ಕಾಂಗ್ರೆಸಿಗರಲ್ಲಿಯೂ ಶ್ರೀಮಾನ್ ದಿವಾಕರ, ಹುಕ್ಕೇರಿಕರ, ಬಿಂದುಮಾಧವ ಬುರ್ಲಿ, ಮಂಗಳವೇಡೆ ಶ್ರೀನಿವಾಸರಾವ ಮೊದಲಾದ ವರಂತಹ ಪ್ರಮಾಣಿಕ ಏಕೀಕರಣವಾದಿಗಳೂ ಕೆಲವು ಜನರು ಇದ್ದರು. ದಿ ಮೋತೀಲಾಲ ನೆಹರೂ ಅವರ ಅಧ್ಯಕ್ಷತೆಯಲ್ಲಿ ಸೇರಿದ ಸರ್ವಪಕ್ಷೀಯ ಪರಿಷತ್ತಿನೆದುರು ಶ್ರೀ. ದಿವಾಕರ ರಂಗರಾಯರು ಮಂಡಿಸಿದ ಕರ್ನಾಟಕ ಏಕೀಕರಣ ವಿಚಾರದ ಮಹತ್ತ್ವದ ವರದಿಯು ಇದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ.

ಬಹುಜನ ಕಾಂಗ್ರೆಸಿನ ಕಾರ್ಯಕರ್ತರಿಗೆ ಕರ್ನಾಟಕ ಏಕೀಕರಣದ ಅವಶ್ಯಕತೆಯು ಕಂಡುದು ತೀರ ಇತ್ತೀಚೆಗೆ. ಸ್ವತಂತ್ರ ಪ್ರಾಂತ ದೊರೆತರೆ ಅಡಳಿತದ ಸೂತ್ರಗಳೆಲ್ಲ ತಮ್ಮ ಕೈಸೇರುವುವೆಂಬ ಕಲ್ಪನೆ ತಲೆದೋರಿನ ಮೇಲೆ. ಮಹಾತ್ಮರಿರುವಾಗಲೇ ಕಾಂಗ್ರೆಸ್ಸು ಭಾಷಾನುಗುಣ ರಾಜ್ಯ ವಿಭಜನೆಯನ್ನು ಒಪ್ಪಿಕೊಂಡಿತ್ತು. ಸ್ವಾತಂತ್ರ್ಯ ದೊರೆತ ಮೇಲೆ ಕಾಂಗ್ರೆಸ್ಸು ಆ ಮಾತನ್ನು ನಡೆಸಲೇಬೇಕಾಗಿತ್ತು. ಆದರೆ ಸ್ವಾತಂತ್ರ್ಯೋತ್ತರ ಅನೇಕ ಕಾಂಗ್ರೆಸ್ ಧುರೀಣರ ಮನಸ್ಸು ಭಾಷಾನುಗುಣ ಪ್ರಾಂತರಚನೆಯ ವಿಚಾರದಲ್ಲಿ ಮಾಪಾರ್ಡನ್ನು ಹೊಂದಿತು. ಆಂಧ್ರರು ತೀಕ್ಷ್ಣವಾದ ಹೋರಾಟವನ್ನು ಹೂಡಿ ಧುರೀಣರಿಗೆ ತಲೆಭಾರವಾಗಿ, ಪ್ರತ್ಯೇಕ ಪ್ರಾಂತ್ಯವನ್ನು ಪಡೆಯಹೋಗಿದ್ದರೆ, ಇಂದಿನಂತೆ ರಾಜ್ಯಗಳ ಪುನರ್ಘಟನೆಯು ಏರ್ಪಾಡು ಆಗುತ್ತಿದ್ದಿತೋ ಇಲ್ಲವೋ!

ಅಂತೂ ಅನೇಕ ವಿಘ್ನಪರಂಪರೆಯನ್ನು ದಾಟಿ ಮಿಕ್ಕ ಭಾರತೀಯರೊಂದಿಗೆ ಕನ್ನಡಿಗರಿಗೂ ತಮ್ಮದೆಂದು ಹೇಳಿಕೊಳ್ಳುವಂತೆ ಒಂದು ರಾಜ್ಯವು ದೊರೆಯಿತು. ಸಂಸ್ಥಾನಗಳ ಲೀನೀಕರಣದ ಮೂಲಕ, ಅಪೇಕ್ಷಿಸಿದುದಕ್ಕಿಂತ ಹೆಚ್ಚಾಗಿ ಪ್ರದೇಶವೂ ಜನತೆಯೂ ದೊರೆಯಿತು. ಈ ದೊಡ್ಡ ಸಮಾಧಾನದಲ್ಲಿ, ಈಗ ಕಳೆದುಕೊಂಡಿರುವ ಕನ್ನಡ ಪ್ರದೇಶಗಳ ಮೂಲಕ ಉಂಟಾದ ಅಸಮಾಧಾನವನ್ನು ಸ್ವಲ್ಪ ಕಡಿಮೆ ಮಾಡಿಕೊಳ್ಳಬಹುದು. ಆದರೆ ಭಾರತದ ಹೊಸ ಭೂಪಟದಲ್ಲಿಯೂ 'ಕರ್ನಾಟಕ' ಎಂಬ ಹೆಸರಿಗೆ ಸ್ಥಾನವು ಇಲ್ಲದಿರುವುದು ಕರ್ನಾಟಕ ಸಂಸ್ಕೃತಿಯ ಅಭಿಮಾನಿಗಳಿಗೆ ಅತೃಪ್ತಿಯ ವಿಷಯವಾಗಿದೆಯೆಂಬುದನ್ನು ಯಾರೂ ಮರೆತು ನಡೆಯುವಂತಿಲ್ಲ.

ಬಹಳ ದಿನಗಳ ಮೇಲೆ ಕನ್ನಡಿಗರು ಒಂದೇ ಅಡಳಿತದ ಛತ್ರದಲ್ಲಿ ಒಟ್ಟುಗೂಡುತ್ತಲಿದ್ದೇವೆ. ಕನ್ನಡ ಭೂಮಾತೆ ಸುಜಲೆ, ಸುಫಲೆ, ಸಮೃದ್ಧ ಸಸ್ಯಶಾಲಿನಿ! ದುಡಿದಂತೆ ಪಡೆಯುವವಳು ಕೊಡಒಲ್ಲಳು. ಕನ್ನಡ ಜನತೆ ಬಲ, ಬುದ್ಧಿ, ಕರ್ತೃತ್ವಶಾಲಿತ್ವದಲ್ಲಿ ಕಡಿಮೆಯಿದೇನೂ ಅಲ್ಲ. ಆದರೆ ಸಾವಿರಾರು ವರ್ಷದ - ವೈಭವ- ಪರಾಕ್ರಮಗಳಿಂದ ಕೂಡಿದ— ಪೂರ್ವೇತಿಹಾಸವು ಸತ್ತ್ವಯುತವಾದುದಾಗಿದೆ. ತನ್ನ ಧೀರೋದಾತ್ತ ಸಂಸ್ಕೃತಿಯ ಮೂಲಕ ಕನ್ನಡಜನತೆ, ಭಾರತದಲ್ಲಿ ಒಂದು ಪ್ರಮುಖ ಸ್ಥಾನವನ್ನು ಪಡೆದುದಾಗಿದೆ. ಮುಂದೆಯೂ ಪಡೆಯಲಿ!

—ಸಂಪಾದಕರು

ನಾಡನಡೆ

卐

ಹೊಗೆಯಿದ್ದು ತಣ್ಣಗಾಯಿತು!

ಕರ್ನಾಟಕದ ಯಾವುದೇ ಪ್ರದೇಶದಲ್ಲಿಯೂ, ರಾಜಕೀಯ ಸೂತ್ರಗಳು ಕಾಂಗ್ರೆಸ್ ಪಕ್ಷದವರ ಕೈಯಲ್ಲಿಯೆ ಇವೆ. ಬಲಿಷ್ಠವಾದ ಯಾವ ವಿರೋಧಿ ಪಕ್ಷವೂ ಇಲ್ಲಿ ಅಸ್ತಿತ್ವದಲ್ಲಿ ಇಲ್ಲ. ಇದ್ದರೂ ಸಾಮರ್ಥ್ಯ-ಸತ್ತ್ವಗಳಿಲ್ಲದಂತಹವು. ಕಾಂಗ್ರೆಸ್‌ಪಕ್ಷ ಪ್ರಬಲವಾಗಿರುವುದರಿಂದ, ನೂತನ ಕರ್ನಾಟಕರಾಜ್ಯದ ಧುರೀಣನನ್ನು ಆರಿಸುವ ಕಾರ್ಯ, ಯಾವ ಬಗೆಯ ಅಡೆತಡೆಯಿಲ್ಲದೆ ನಡೆಯಬೇಕಾಗಿತ್ತು. ಹಾಗೆ ನಡೆಯುವುದು ಕನ್ನಡ ಕಾಂಗ್ರೆಸ್ ಧುರೀಣರಿಗೆ ಶ್ರೇಯಸ್ಸನ್ನು ಉಂಟುಮಾಡುವಂತಹದೂ ಆಗಿತ್ತು. ಆದರೆ ಅಧಿಕಾರಮೋಹವು ಪಕ್ಷೈಕ್ಯದ ಕೋಟೆಯನ್ನು ಕೆಡಹಿತು; ಕಾಂಗ್ರೆಸ್ಸಿನ ಉದಾತ್ತ ತತ್ತ್ವವನ್ನು ಕಾಲಕೆಳಗೆ ಹಾಕಿ ಮೆಟ್ಟಿತು.

ಪಟ್ಟಬಿಟ್ಟು ಕೆಳಗಿಳಿದ ಮೈಸೂರಿನ ಹಳೆಯ ಪ್ರಧಾನಮಂತ್ರಿ ಶ್ರೀಮಾನ್ ಕೆ. ಹನುಮಂತಯ್ಯನವರು, ಕೊನೆಯುವರೆಗೂ ತಮ್ಮ ಕುದುರೆಯನ್ನೋಡಿಸಿದರು. ಹೊಸತಾಗಿ ಪ್ರಧಾನಮಂತ್ರಿಗಳಾದ ಮಾನ್ಯ ಕಡಿದಾಳ ಮಂಜಪ್ಪನವರು ತಮ್ಮ ರಾಜಕೀಯ ಚದುರಂಗದಾಟವನ್ನು ನಿಲ್ಲಿಸಲಿಲ್ಲ. ಮೈಸೂರಿನ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾದ ಸಾಹುಕಾರ ಚೆನ್ನಯ್ಯನವರು, ತಮ್ಮ ಬುದ್ಧಿಯು ಸಾಹುಕಾರಿಕೆಯನ್ನು ಕೊನೆಯನರೆಗೂ ತೋರಿಸಿದರು. ಶ್ರೀ. ನಿಜಲಿಂಗಪ್ಪನವರು ಅಷ್ಟೊಂದು ಅಸ್ಥೆಯಿಂದ ಧುರೀಣತ್ವಕ್ಕಾಗಿ ಪ್ರಯತ್ನಿಸುತ್ತಿದ್ದರೋ ಇಲ್ಲವೋ ಹೇಳಲಾರೆವು; ಆದರೆ ಬಹುಕಾಲ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಗೆ ಅಧ್ಯಕ್ಷರಾಗಿ ಕಾರ್ಯಮಾಡಿ, ಮೈಸೂರಿನ ಹೊರಗಡೆಯ ಕಾಂಗ್ರೆಸ್ ಕಾರ್ಯಕರ್ತರಿಗೆಲ್ಲ ಬೇಕಾದವರಾದುದರಿಂದ, ಅವರ ಪರವಾಗಿ ಅನೇಕರು ಚಟುವಟಿಕೆ ನಡೆಯಿಸಿಯೇ ಇದ್ದರು.

ತಂತಮ್ಮ ಪಕ್ಷದ ಬಲಾಬಲಗಳ ಅರಿವು ಉಂಟಾಗುವವರೆಗೂ, ಧುರೀಣತ್ವದ ಆಶೆಯನ್ನು ಯಾರೂ ಬಿಟ್ಟಿರಲಿಲ್ಲ. ಹೇಗೋ ಅದರ ಅರಿವು ಉಂಟಾದಾಗ, ನಿರ್ವಿಣ್ಣರಾದರು ಅಭಾವ ವೈರಾಗ್ಯವನ್ನು ತಳೆದು ತಾತ್ಪೂರ್ತಿಕವಾಗಿಯಾದರೂ ವಿವೇಕಿಗಳೆನಿಸಿಕೊಳ್ಳಬೇಕೆಂದು, ಒಮ್ಮತದಿಂದಲೆ ಶ್ರೀಮಾನ್ ನಿಜಲಿಂಗಪ್ಪನವರನ್ನು ಧುರೀಣಪದವ್ಯಾಗಿ ಆರಿಸಿದರು. ಈ ಒಮ್ಮತದ ಆಯ್ಕೆಯು ಗಿಲಾಯಿಗೋಡೆಯೊಳಗೆ ಎಂತೆಂತಹ ಹೆಗ್ಗಣಗಳು ಹುದುಗಿಕೊಂಡಿವೆಯೋ ಎಂಬುದನ್ನು ಹೇಳಲು ಬರುವಂತಿಲ್ಲ. ಸಮಯ ಸಾಧಿಸಿದಾಗ, ಗೋಡೆಯನ್ನೆಡೆದು ಹೆಗ್ಗಣಗಳು ಹೊರಬೀಳಲೂಬಹುದು.

ಮಾನ್ಯ ನಿಜಲಿಂಗಪ್ಪನವರ ಕಾಲೋಚಿತ ಆಯ್ಕೆ

ಮುಂದಾಳುಗಳ ಒಳತೋಟಿ ಶ್ರೀ. ನಿಜಲಿಂಗಪ್ಪನವರ ಆಯ್ಕೆಯನ್ನು—ಅನಿವಾರ್ಯವಾಗಿ—ಒಪ್ಪಿಕೊಂಡಿರಬಹುದು; ಆದರೆ ಈ ಆಯ್ಕೆ, ಕನ್ನಡ ಜನಸಾಮಾನ್ಯರಿಗೆಲ್ಲ ಬೇಕಾದ ಮಾತೇ ಆಗಿದೆಯೆಂದು ಹೇಳಬಹುದು.

ಮೊದಲನೆಯದಾಗಿ ಶ್ರೀ. ನಿಜಲಿಂಗಪ್ಪನವರು ಕರ್ನಾಟಕ ಏಕೀಕರಣವನ್ನು ಮನವಾರೆ ಬಯಸುವವರು; ಅದಕ್ಕಾಗಿ ಕೊನೆಯವರೆಗೂ ಪ್ರಾಮಾಣಿಕತನದಿಂದ ಹೋರಾಡಿದವರು. ತನು-ಮನೋಧನಗಳಿಂದ ಕಷ್ಟಪಟ್ಟವರು. ಮಿಕ್ಕವರಲ್ಲಿ ಶ್ರೀ. ಕೆ. ಹನುಮಂತಯ್ಯನವರು! ಯಾರಿಗೂ ಗೊತ್ತಾಗದಂತಹ ವ್ಯಕ್ತಿತ್ವ ಇವರದು. ಇವರು ಕರ್ನಾಟಕ ಏಕೀಕರಣಕ್ಕೆ ಅನುಕೂಲರಿದ್ದರೋ ಪ್ರತಿಕೂಲರಿದ್ದರೋ ಎಂಬುದು ಯಾರಿಗೂ ತಿಳಿಯಲಿಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರಧಾನ ಮಂತ್ರಿಗಳಾಗಿದ್ದರೂ, ಯಾವಾಗಲೂ ಇವರು ಆಡುವ ಮಾತುಗಳು ಸೀಮಿತಾರ್ಥಕಾರತ್ವಕ್ಕೆ ತಳ್ಳುವುಗಳು. ಎಲ್ಲ ವಿಧಿ-ವಿಧಾನಗಳೂ ತಮ್ಮೊಬ್ಬರ ಕೈಯಲ್ಲಿಯೆ ಇವೆಯೆಂದು ಪಾಪ, ಇವರು ತಿಳಿದುಕೊಂಡಿದ್ದರೇನೋ! ತಪ್ಪು ತಿಳಿವಳಿಕೆಯ ಫಲವನ್ನಿವರು ಬೇಗನೆ ಅನುಭವಿಸಬೇಕಾಯಿತು. ಇನ್ನು ಶ್ರೀ. ಕಡಿದಾಳ್ ಮಂಜಪ್ಪನವರು! ಇವರಿಗೆ ಕರ್ನಾಟಕ ಏಕೀಕರಣ ಬೇಕಾಗಿಯೇ ಇರಲಿಲ್ಲ. ಏಕೆಂದರೆ ತಮ್ಮಲ್ಲಿರುವ ಶಕ್ತಿ, ಪುಟ್ಟ ಮೈಸೂರು ರಾಜ್ಯವನ್ನು ಆಳುವ ಮಟ್ಟಿಗೆ ಇದೆಯೆಂಬುದನ್ನು ಇವರು ಒಳಗೊಳಗೇ ಅರಿತುಕೊಂಡಿರಬಹುದು.

ಶ್ರೀ. ಸಾಹುಕಾರ ಚೆನ್ನಯ್ಯನವರೂ ಮೈಸೂರಿನ ಕೂಪವಜ್ಞೇ ಸಾಕೆನ್ನುವ ಕಪ್ಪೆಯಂತಹರು. ಇವರ ಸಾಹುಕಾರಿಕೆಯಲ್ಲಿ ರಾಜಕೀಯ ತಂತ್ರಗಳನ್ನು ನಡೆಯಿಸುವ ಶಕ್ತಿಯಿರಬಹುದು; ಆದರೆ ರಾಜ್ಯವನ್ನು ನಡೆಯಿಸುವಂತಹ ಶಕ್ತಿ ಸಾಲದೆಂಬುದು ಬಹುಜನರು ಆಡುತ್ತಿರುವ ಮಾತು.

ಇದೆಲ್ಲವನ್ನೂ ವಿಚಾರಮಾಡಿ ನೋಡಿದಾಗ, ಶ್ರೀಮಾನ್ ನಿಜಲಿಂಗಪ್ಪನವರು ಧುರೀಣರಾಗಿ ಆಯ್ಕೆಪಡೆದು ಬಂಪುದು ಹೆಚ್ಚು ಒಳ್ಳೆಯದಾಯಿತೆಂದು ಸಮಂಜಸ ಬುದ್ಧಿಯವರೆಲ್ಲ ಒಪ್ಪಿಕೊಳ್ಳುವಂತಹ ಮಾತಾಗಿದೆ. ಅವರು ಮೈಸೂರು ಪ್ರದೇಶದಲ್ಲಿಯೇ ಹುಟ್ಟಿ ಬೆಳೆದುದರಿಂದ ಮೈಸೂರುಜನತೆಯ ಹೃದಯವನ್ನು ಚೆನ್ನಾಗಿ ಬಲ್ಲರು. ಅಲ್ಲದೆ ಕರ್ನಾಟಕ ಪ್ರದೇಶವನ್ನು ತಮ್ಮ ರಾಜಕೀಯ ಕಾರ್ಯಕ್ಷೇತ್ರವನ್ನಾಗಿಸಿಕೊಂಡುದರಿಂದ, ಮೈಸೂರೇತರ ಕನ್ನಡಜನದ ನಾಡಿಯ ಮಿಡಿತಗಳನ್ನೂ ಸರಿಯಾಗಿ ಅರಿತವರು. ಅವರ ದೃಷ್ಟಿ ವಿಶಾಲಕರ್ನಾಟಕದತ್ತಾಗಿದೆ. ಆದುದರಿಂದ ಸದ್ಯ ಉದಯವಾಗಿರುವ ಕರ್ನಾಟಕದ ಆಡಳಿತದ ಸೂತ್ರಗಳು ಅವರ ಕಡೆಗೆ ಬಂದುದು, ಕರ್ನಾಟಕದ ಕಲ್ಯಾಣಕ್ಕಾಗಿಯೇ ಇದೆಯೆಂದು ನಮ್ಮ ಅಭಿಪ್ರಾಯವಾಗಿದೆ.

ಸುಖದೊಂದಿಗಿನ ದುಃಖ

(ಒಂದು ಪತ್ರವ್ಯವಹಾರ)

ಸಂಪಾದಕರು

ಬಹುದಿನಗಳಿಂದಲೂ ಒಡೆದು ತುಂಡಾಗಿದ್ದ ಕರ್ನಾಟಕವು ಒಂದುಗೂಡಿ, ಸ್ವತಂತ್ರಭಾರತದಲ್ಲಿ ಒಂದು ರಾಜ್ಯವಾಗಿ ರೂಪುಗೊಂಡುದಕ್ಕಾಗಿ, ನವಂಬರ್ ೧೯ನೆಯ ದಿನಾಂಕ; ನಾಡಿನಲ್ಲೆಲ್ಲ ವಿಜೃಂಭಣೆಯ ಉತ್ಸವ ನಡೆಯಲಿದೆ. ಈ ಉತ್ಸವದ ಉತ್ಸಾಹ ಧ್ವನಿಯೊಂದಿಗೆ, ಕನ್ನಡತಾಯ ಕೆಲವು ಒಲವಿನಣುಗರ ಸಂತಾಪಾಲಾಪದ ಕೂಗೂ ಕವಿಗೆ ಕೇಳುವಂತಾದುದು ಅಸಮಾಧಾನದ ಸಂಗತಿ. ಅಂತಹ ಸಂತಪ್ತಹೃದಯದ ಕನ್ನಡಿಗರ ಪ್ರಾತಿನಿಧ್ಯವನ್ನು ವಹಿಸಿ ಬರೆದ ಒಂದು ಮೊರೆಯೋಲೆ ಜಯಂತಿಗೆ ಬಂದಿದೆ. ಆ ಕಾಗದದಲ್ಲಿರುವ ವ್ಯಥೆಯ ಮಾತುಗಳು ಎಂತಹವಿನೆಯೆಂಬುದನ್ನು ನೋಡಿ:

" ಕರ್ನಾಟಕ ಸಾಹಿತ್ಯಾಲಂಕೃತಿ–ತಾಯಿ ಜಯಂತಿ! —

ಇದೋ, ನಿನ್ನ ಸೇವಾಭಾಗ್ಯವನ್ನು ಪಡೆದು, ಇನ್ನು ಮುಂದಿನ ತಿಂಗಳಲ್ಲಿ ನಿನ್ನನ್ನು ಕೇರಳ ರಾಜ್ಯದಲ್ಲಿದ್ದು ಪಡೆಯುವಂತಾದ ಒಬ್ಬ ಬಡ ದುರ್ದೈವಿಯ ಪೊಡಮಡಿಕೆ! ನವಂಬರ ತಿಂಗಳು ಸಮೀಪಿಸುತ್ತಿದ್ದಂತೆ ಹೃದಯವೇಕೋ ನೋಯುತ್ತಿದೆ! ಇದು ಕೇರಳ ಭಾಷಾದೇವಿಯ ಮೇಲೆ ಇದ್ದ ಹುಗುಸ್ಸಿಯಿಂದಾಡಿದ ಮಾತಲ್ಲ; ಕನ್ನಡವೇ ಹೊಲವಾಗಿದ್ದ ಕಾಸರಗೋಡು, ಯತ್ಕಿಂಚಿತ್ತಾದರೂ ಕನ್ನಡದ ಸೇವೆಯನ್ನು ಮಾಡುವ ತರುಣ ವಿದ್ಯಾರ್ಥಿಗಳಿಂದ ಹಾಗೂ ಸಾಹಿತ್ಯ ಸೇವಕರಿಂದ ಕೂಡಿದ—ಒಂದು ಹೊಲವಾಗಿದೆ. ಅಂತಹ ಈ ಹೊಲವು ಇಂದು ಕನ್ನಡತನವನ್ನುಳಿದು ನಿರಾಶೆಯುಲ್ಲಾರುಳುವಂತಾದರೆ, ಆ ದುಃಖವನ್ನು ನೆನೆಯಲು ಸಾಧ್ಯವೆ? ಸಹಿಸಲಳವೆ? ಕನ್ನಡಿಗರೆದೆಯೆಲ್ಲ ಕುದಿಯುತ್ತಿದೆ. ನೋಯುತ್ತಿದೆ! ಅವುಗೋ ಒಂದು ಬಗೆಯ ಗುಪ್ತ ವೇದನೆಯು ಹೃದಯವನ್ನು ಹಿಂಡುತ್ತಿದೆ! ಈ ನೋವನ್ನು ನಿನ್ನಂತಹ ಘನತೆಗೇರಿದ, ನಾಡಿನ ಸಂಸ್ಕೃತಿಯನ್ನು ಬೆಳಗುವ ಸಾಹಿತ್ಯದೀಪಿಕೆಯ ಮುಂದಲ್ಲದೆ ಬೇರೆ ಯಾರಲ್ಲಿ ಹೇಳಲಿ? ಇಷ್ಟು ದಿನ ಕನ್ನಡಿಗನಾಗಿಯೇ ಇದ್ದು ನಿನ್ನ ಸೇವೆ ಮಾಡಿದೆ; ಅಭಿವಾನ ತಾಳಿದೆ! ಆದರೆ ಮುಂದಿನ ದಿನದಲ್ಲಿ! ಆದರೂ ಓ ಭಾಷಾ ಪ್ರದೀಪಿಕೆ,— ನಿನ್ನ ಸೇವೆಯನ್ನು ಮಾಡಲು ನಾನು ಮರೆಯಲಾರೆ. ನಿನ್ನಿಂದ, ನಿನ್ನ ಪೋಷಕರಿಂದ ಹಲವಾರು ತಿಳಿವಿನಂಶಗಳನ್ನುಂಡಿದ್ದೇನೆ. ಕೇರಳದಲ್ಲಿದ್ದರೂ, ಏನೇ ಆದರೂ ಈಶನೊಲುಮೆಯುಲ್ಲಿ ಸದಾ ನಿನ್ನ ಕಿಂಕರನಾಗಿರಲು ಯತ್ನಿಸುವೆ! ಈ ಪರಿಸ್ಥಿತಿಯಲ್ಲೇಕೋ ಈ ನೊಂದೆದೆ. ಯುರಿಯನ್ನು ನಿನ್ನಲ್ಲುಸುರಲು ಏನಬಂತು. ಉಸುರಿದೆ. ನೋವು ಕಡಿಮೆಯಾಗಬಹುದೆಂದಲ್ಲ! ಕರ್ತವ್ಯವೆಂದು ಮಾತ್ರ!

ಕೇರಳ ರಾಜ್ಯರೂಪೀಕರಣವಾಗಿ ಕಾಸರಗೋಡು ಕನ್ನಡದಿಂದ ತೊಲಗುವಾಗ—ಸದಾ ನಿನ್ನ ಹರಕೆಯನ್ನು ಬೇಡಿ, ಇಗೋ ನೀನೀವ ಶ್ರೇಯಸ್ಸಿಗಾಗಿ ಶಿರವನ್ನು ಬಾಗಿಸಿರುವೆ. ಅನುಗ್ರಹಿಸಮ್ಮಾ! ಈ ಕನ್ನಡಿಗನನ್ನು ಮರೆಯದಿರು!"

ಈ ಕಾಗದವನ್ನು ಬರೆದವರು ಕಾಸರಗೋಡಿನ ಒಬ್ಬ ಕನ್ನಡ ಪುತ್ರರು. ಜಯಂತಿಯ ವಾಚಕರಿಗೆ ಸಾಕಷ್ಟು ಪರಿಚಿತರು. ಇವರಂಯೇ ಕಳವಳದಿಂದ ಕುದಿಯುವ ಕನ್ನಡಿಗರು ಅದೆಷ್ಟು ಜನರೊ!

ಕೊಲ್ಲಾಪುರ, ಸೊಲ್ಲಾಪುರ, ದಕ್ಷಿಣಸಾತಾರಾ ಮೊದಲಾದ ಉತ್ತರಗಡಿಯ ಕನ್ನಡಪ್ರದೇಶಗಳಲ್ಲಿ. ಮುಂದುವರಿದವರು ಪರಭಾಷಾಭ್ರಾಂತರು; ಜನಸಾಮಾನ್ಯರು ಕರ್ನಾಟಕತ್ವದ ಎಚ್ಚರು ಇಲ್ಲದವರು. ಆದುದರಿಂದ, ಈಗಿನ ಹೊಸ ರಾಜ್ಯವ್ಯವಸ್ಥೆಯಿಂದ ಅಲ್ಲಿಯ ಜನರಲ್ಲಿ ಆಗಬೇಕಾದಷ್ಟು ಅಸಮಾಧಾನ ಆಗಿರಲಿಕ್ಕಿಲ್ಲ; ಆದರೆ ಕಾಸರಗೋಡು ತಾಲ್ಲೂಕು ಸಾಕಷ್ಟು ಕರ್ನಾಟಕತ್ವದ ಜಾಗೃತಿಯಿಂದ ಕೂಡಿದುದು. ಅಲ್ಲಿಯವರ ಕರ್ನಾಟಕ ಅಭಿಮಾನ, ಕಾಸರಗೋಡಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನೂ ಕರ್ನಾಟಕ ಏಕೀಕರಣ ಪರಿಷತ್ತಿನ ಅಧಿವೇಶನವನ್ನೂ ಕೂಡಿಸಿ, ಏಕೀಕೃತ ಕರ್ನಾಟಕಭಾವನೆಯನ್ನು ಯಶಸ್ವಿಯಾಗಿ ಬೆಳೆಸಿಕೊಂಡಿತು. ದಕ್ಷಿಣಕನ್ನಡಜಿಲ್ಲೆಯ ಬಹುಜನ ಕನ್ನಡ ಸಾಹಿತ್ಯಿಕರು ಕಾಸರಗೋಡು ತಾಲೂಕಿನಲ್ಲಿರುವರು. ಕನ್ನಡ ಜಾನಪದ ಕಲೆಯಾದ ಯಕ್ಷಗಾನ ಬೆಳೆದುದು ಕಾಸರಗೋಡಿನ ಜನಸಾಮಾನ್ಯರಲ್ಲಿಯೆ. ಅಲ್ಲದೆ ಅಲ್ಲಿಯವರಾರಿಗೂ ಕರ್ನಾಟಕವಸ್ಸನ್ನು ಬಿಟ್ಟು ಅನ್ಯರಾಜ್ಯಕ್ಕೆ ಸೇರಲು ಒಪ್ಪಿಗೆಯಿಲ್ಲ. ಇಂತಹವರನ್ನು ಕೇರಳರಾಜ್ಯಕ್ಕೆ ಒತ್ತಾಯದಿಂದ ಕಳುಹಿಸುವುದೆಂದರೆ, ಇದೊಂಥ 'ಮಹಮ್ಮದ್ ತಘಲಖನ' ಹುಚ್ಚುಕಟ್ಟಳೆಯೇ ಎನಿಸುವಂತಿದೆ. ಇಂದಿನ ನಮ್ಮ ಕನ್ನಡ ಮುಂದಾಳುಗಳ ಮನೋನೃತ್ತಿಯನ್ನು ನೋಡಿದರೆ, ಕಾಸರಗೋಡಿನ ಕನ್ನಡಿಗರಿಗೆ ಮರಳಿ ತಾವು ತಮ್ಮ ತಾಯನ್ನು ಕೂಡಿಕೊಂಡೇವೆಂಬ ಆಶೆ ಕೂಡ ಉಳಿಯುವಂತಿಲ್ಲ. ನೀರಲ್ಲಿ ಮುಳುಗಿ ಹೋಗುವವರಂತಾಗಿದೆ ಅವರ ಮನಃಸ್ಥಿತಿ. ಇಂತಹ ಜನರು ಕರ್ನಾಟಕದ ನವೋದಯೋತ್ಸವದಲ್ಲಿ ಹೇಗೆ ಭಾಗ ವಹಿಸಬೇಕು? ಮಿಕ್ಕವರೆಲ್ಲರೂ ಸುಖದಿಂದ ಕುಣಿಯುತ್ತಿರುವಾಗ, ಕಾಸರಗೋಡಿನವರು ದುಃಖದಿಂದ ಬಿದ್ದುಕೊಳ್ಳಬಹುದಲ್ಲವೆ? ಇಂತಹ ದುಃಖಿತರಿಗೆ ಜಯಂತಿ ಯಾವ ಸಮಾಧಾನದ ಮಾತುಗಳನ್ನು ಹೇಳಿ ಸಂತಯಿಸಬೇಕು?

ಇಂತಹ ಜನರಿಗೆಲ್ಲ ಜಯಂತಿ ಹೇಳುವುದು ಒಂದು ಮಾತು:

" ಬಂಧುಗಳೆ, ಸೋದರಿಯರೆ, ನೀವು ಎಲ್ಲಿಯೇ ಇರಿ, ಹೇಗೇ ಇರಿ; ತಾನೆಲ್ಲ ಕನ್ನಡ ತಾಯ ಮಕ್ಕಳೆಂಬುದನ್ನು ಮರೆಯಬೇಡಿ!"

ಪೂರ್ಣಾಹುತಿ

'ಆನಂದಕಂದ'

ಪಾತ್ರ ಪರಿಚಯ

ರತ್ನಾಂಬಿಕೆ (ವಿಜಯನಗರದ ದಳಪತಿಯ ಮಗಳು)
ರಾಜಶೇಖರ (ವಿಜಯನಗರದ ರಾಜಪುತ್ರ)
ಪೆದ್ದಣ್ಣ (ರಾಜಶೇಖರನ ತಮ್ಮ)
ನರಸಿಂಹನಾಯಕ (ಪದಚ್ಯುತ ದಂಡನಾಯಕ)
ಈಶ್ವರನಾಯಕ (ಮಹತ್ತ್ವಾಕಾಂಕ್ಷಿಯಾದ ಸೇನಾಪತಿ)
ನಾರಾಯಣಪಂಡಿತ (ರಾಜಶೇಖರನ ಸಹಕಾರಿಮಿತ್ರ)
ಮುರಗಪ್ಪ (ಒಬ್ಬ ದಳವಾಯಿ)
ನಿರೂಪಕ (ನಾಟಕದ ಸಂದರ್ಭಸೂಚಕ)

ಅಲ್ಲದೆ ಸ್ತುತಿಪಾಠಕರು, ಬೇರೆ ಬೇರೆ ಸೇವಕರು

೧ನೆಯ ಸನ್ನಿವೇ

ನಿರೂಪಕ:—

ಶಾಲಿವಾಹನಶಕದ ೧೫೯೯ನೆಯ ವರ್ಷದ ಪೌಷ್ಯಮಾಸ. ಕರ್ನಾಟಕ ಸಾಮ್ರಾಜ್ಯದ ರಾಜಧಾನಿಯಾದ ವಿಜಯನಗರದಲ್ಲಿ, ಮೊದಲಿನ ದೊರೆಯಾದ ಇಮ್ಮಡಿ ವಿರೂಪಾಕ್ಷರಾಯನು, ತನ್ನ ಅಣ್ಣನ ಮಗನಾದ ರಾಜಶೇಖರನಿಂದ ಕೊಲೆಗೊಂಡು ತೀರಿಹೋಗಿದ್ದಾನೆ. ವೈರಾಗ್ಯಶಾಲಿಯಾದ ರಾಜಶೇಖರನು, ಸಾಮ್ರಾಜ್ಯದ ಅಧಿಪತ್ಯವನ್ನು ತಾನು ವಹಿಸಲು ಸಮ್ಮತಿಸದೆ, ತಮ್ಮನಾದ ಪೆದ್ದರಾಯನಿಗೆ ಬಿಟ್ಟು ಕೊಟ್ಟಿದ್ದಾನೆ. ಹೊಸ ದೊರೆಯ ಪಟ್ಟಾಭಿಷೇಕದ ಸಿದ್ಧತೆಗಳು ರಾಜಧಾನಿಯಲ್ಲಿ ರಭಸದಿಂದ ನಡೆದಿವೆ.

ಇಂದು ಕೃಷ್ಣಪಕ್ಷದ ದಶಮಿಯ ರಾತ್ರಿ. ಸಮಯ ಒಂದುವರೆ ಪ್ರಹರಗಳನ್ನು ಮಿಕ್ಕಿದೆ. ಶಾಂತಿಕುಟೀರದ ಸುತ್ತಣ ಪ್ರದೇಶ. ಎಲ್ಲೆಲ್ಲ ಕಗ್ಗತ್ತಲು ಮುಸುಕಿಕೊಂಡಿದೆ. ಅಕ್ಕಪಕ್ಕದ ತೋಟಗಳಲ್ಲಿ ಒಕ್ಕಲುಮಕ್ಕಳು ಕಾವಲು ಮಾತುತ್ತ ಮನಸ್ಸಿಗೆ ಬಂದ ಉಲ್ಲಾಸ ಗೀತಗಳನ್ನು ಹಾಡುತ್ತ ಕುಳಿತುಕೊಂಡಿದ್ದಾರೆ:

" ಬಾನಿನ ತಾರಕ್ಕಿ ಬಳಗವ ನಡುವಿದ್ದು
ಜೇನಿನ ಸವಿನಕಗಿ ನಗುವಾತ—
ಜೇನಿನ ಸವಿನಗಿ ನಗುವ ತಿಂಗಳಂತಾಯಾ
ಬಾನಿಗೆ ಬಾರೈಯಾ ತೊಳಗುವತ ! "

ಹುಚ್ಚುಪಚ್ಚಾಗಿ ಹಾತಿ ಕೆಲೆಯುವ ಒಕ್ಕಲುಮಕ್ಕಳನ್ನು ಸಿಟ್ಟಿನಿಂದ ಬೈದು ಸುಮ್ಮಗಿರಲು ಹೇಳುವ ಹಿರಿಯರಂತೆ, ತೋಟದ ನಾಯಿಗಳು ಜೋರಿನಿಂದ ಬೊಗಳುತ್ತಲಿವೆ ನೋಡಿರಿ.

(ನಾಯಿಗಳ ಬೊಗಳಿಕೆ)

ಶಾಂತಿಕುಟೀರದ ಪಕ್ಕದ ಹೆಮ್ಮರದ ಮೇಲೆ ಕುಳಿತು ಆಗಾಗ ಕೂಗುತ್ತಿರುವ ಗೂಗೆಗಳ ಘೂತ್ಕಾರ, ಕತ್ತಲೆಯ ಭೀಕರತೆಯನ್ನು ಹೆಚ್ಚಿಸುತ್ತಿದೆ.

[ಗೂಗೆಗಳ ಕೂಗಿನ ಶಬ್ದ]

ಅದೋ, ದೂರದ ಕಬ್ಬಿನ ತೋಟಗಳಲ್ಲಿ ನರಿಗಳು ಹೇಗೆ ಊಳಿಡುತ್ತಿವೆ ನೋಡಿರಿ.

[ನರಿಗಳ 'ಹುಕ್ ಹುಯ್—ಹುಳ್ ಹುಯ್', ಎಂಬ ಕೂಗು.]

ಅಬ್ಬಾ, ಭೀಕರವಾದ ರಾತ್ರಿ; ಆದರೂ ಶಾಂತಿಕುಟೀರದಲ್ಲಿ ರಾಜಶೇಖರನು, ತನ್ನ ನಿತ್ಯದ ಆಸನದ ಮೇಲೆ ಕುಳಿತಿರುವನು. ಭಕ್ತಿಪರವಶನಾಗಿ ರಾಗಾಲಾಪನೆಯೊಂದಿಗೆ ವಚನಗಳನ್ನು ಹಾಡುತ್ತಿರುವನು:

ರಾಜಶೇಖರ :—

ವಿಷಯವೆಂಬ ಹಳುರನೆನ್ನಮುಂದೆ ತಂದು ಪಸರಿಸದಿರಯ್ಯಾ !
ಪಶುವೇನ ಬಲ್ಲುದು ಹಸುರೆಂದಳಿಯುವುದಲ್ಲದೆ;
ವಿಷಯರಹಿತನನಾಡಿ, ಭಕ್ತಿರಸವನೆ ದಣಿಯೆ ಮೇಯಿಸಿ,
ಸುಬುದ್ಧಿಯೆಂಬ ಉದಕವನೆರೆದು ನೋಡಿ ಸಲಹೈಯಾ
ಕೂಡಲಸಂಗಮದೇವಾ !

ಅಹಹ ! ಭಕ್ತಿರಸವೆಂಬುದು ಭೂಲೋಕದ ಅಮೃತ ! ಇದರ ಸವಿಯನ್ನರಿಯದೆ ಲೌಕಿಕದ ಜನರು ವಿಷಯಸುಖವ ಮಧುರ. ವಿಷವನ್ನು ಸವಿಯಲು ಬಾಯಿ ಬಾಯಿ ಬಿಡುತ್ತಿದ್ದಾರಲ್ಲ ! ಕರ್ನಾಟಕ ಸಾಮ್ರಾಜ್ಯದ ವೈಭವವನ್ನು ನಾನು ಅನುಭವಿಸಬೇಕೆಂದು ಹಲವರ ಹೆಂಬಲ ! ಇದಕ್ಕೆ ನಾನು ಕಿವಿಗೊಡಬೇಕೆ ?

ಬೆಳೆಯದ ಭೂಮಿಯೊಂದು ಪ್ರಳಯದ ಕಳೆಸುಟ್ಟು
ತಿಳಿಯಲೀಯದು—ಎಚ್ಚರಲೀಯದು—
ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ ಲಿಂಗತಂದೆ!
ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ!

(ಯಾರೋ ನಡೆದು ಬರುವ ಆಡಿಗಳ ಸಪ್ಪಳ. ವಚನಗಾನವನ್ನು ನಿಲ್ಲಿಸಿ ಆಶ್ಚರ್ಯದಿಂದ)

ಇದೇನಿದು! ಕರಿಯತೆರೆಯಲ್ಲಿ ಮರೆಗೊಂಡು ಬರುವ ವ್ಯಕ್ತಿ ಇದಾವುದು? ಮಧ್ಯರಾತ್ರಿಯೀಗ....ಭೂತ-ಪಿಶಾಚಿಗಳ ಸಂಚಾರದ ಸಮಯ! ನಾನು ಕೊಲೆಮಾಡಿದ ಇಮ್ಮಡಿ ವಿರೂಪಾಕ್ಷರಾಯನ ಭೂತವಿರಬಹುದೇನಿದು!....ಸರಿ ಸರಿ! ಭೂತನಾಥನಾದ ಪಂಪಾಪತಿಯ ಕೃಪೆ, ನನ್ನನ್ನು ಭೂತದ ಕೈಗೆ ಒಪ್ಪಿಸುವುದೆ?

(ಕಾಲೊಳಗಿನ ನೂಪುರಗಳ ಮೆಲುರವ ಕೇಳುವುದು.)

ರಾ. ಶೇ:— ಯಾರು ನೀವು?

(ಹೆಣ್ಣಿನ ಧ್ವನಿಯಲ್ಲಿ ಉತ್ಸಾಹದ ನಗೆಯೊಂದು ಕೇಳುವುದು.)

ಯಾರು ನೀವು; ಈಗ ರಾತ್ರಿಯಲ್ಲಿ ನಿಮಗೆ ಇಲ್ಲಿ ಏನು ಕೆಲಸ?

(ಹೆಣ್ಣಿನ ಕಂಠದಲ್ಲಿ ಮಾತು ಕೇಳಿಸುವುದು.)

"ಕೆಲಸವಿಲ್ಲದವರು ಇಲ್ಲಿಗೆ ಯಾರು ಏತಕ್ಕೆ ಬಂದಾರು?"

ರಾ. ಶೇ:— (ತನ್ನಲ್ಲಿ) ಓ! ಇದಾರ ಧ್ವನಿ? ಎಲ್ಲಿಯೋ ಕೇಳಿದ ಪರಿಚಯದ ಧ್ವನಿಯಂತಿದೆ. (ಬಂದ ವ್ಯಕ್ತಿಯನ್ನು ಉದ್ದೇಶಿಸಿ) ಕೆಲಸವಿದ್ದವರಿಗೆ ಈ ಮರೆಯ ಶೋಷವೇಕೆ ಬೇಕು?

(ಕಲಕಿಲನೆ ನಗುತ್ತ ಹೆಣ್ಣಿನ ಕಂಠದ ಮಾತು ಕೇಳುವುದು.)

"ಅದಕ್ಕಾಗಿಯೇ ಈಗ ಮರೆಯನ್ನು ಕಳಚಿಬಿಡುತ್ತೇನೆ. ನೋಡಿರಿ! ನಾನು ಯಾರೆಂಬುದು ಗೊತ್ತಾಯಿತಲ್ಲವೆ?"

ರಾ. ಶೇ:—(ಆಶ್ಚರ್ಯಪಟ್ಟು) ಯಾರು? ನೀವು....ನೀವು....ಅದಳವಾಯಿ ದೇವಣ್ಣನಾಯಕರ ಮಗಳು ರತ್ನಾಂಬಿಕೆಯಲ್ಲವೇ ನೀವು?

ರತ್ನಾ:— (ಗಡುಸಾಗಿ) ಅಹುದು, ನಾನೇ ದೇವಣ್ಣನಾಯಕರ ಮಗಳು—ರತ್ನಾಂಬಿಕೆ!

ರಾ. ಶೇ:— ಏನು ತಾಯಿಾ! ಇಂತಹ ವೇಳೆಯಲ್ಲಿ ಬರುವುದೇ ನೀವು?

ರತ್ನಾ:— ನನ್ನ ಕಾರ್ಯಕ್ಕೆ ಇದೇ ತಕ್ಕ ವೇಳೆ!

ರಾ. ಶೇ:— ಅದೇನು ಅಮ್ಮಾಜಿ ನಿಮ್ಮ ಕಾರ್ಯ?

(ರತ್ನಾಂಬಿಕೆ ಮಾತನಾಡದೆ ನಿಲ್ಲುವಳು.)

ಹೇಳಿರಿ ತಾಯಿಾ! ಕಾರ್ಯಕ್ಕಾಗಿ ಬಂದವರು ಜಾಯಿತೆರೆಯದಿದ್ದರೆ ಹೇಗೆ?

ರತ್ನಾ:— ನನಗೆ ವಿಜಯನಗರದ ಸಮ್ರಾಜ್ಞಿಯಾಗುವುದು ಬೇಕಾಗಿದೆ!

ರಾ. ಶೇ:— ಅದಕ್ಕೇನು? ಅದೃಷ್ಟವಿದ್ದರೆ ಆಗಬಹುದಲ್ಲ!

ರತ್ನಾ:— ನನ್ನ ಅದೃಷ್ಟದಲ್ಲಿ ಅದು ಇದ್ದೇ ಇದೆ. ಅದು ನನಗೆ ಗೊತ್ತು!

ರಾ. ಶೇ:— ಸಂತೋಷ! ಆದರೆ ಇದರಲ್ಲಿ ನಾನು ಮಾಡ ಬೇಕಾದುದೇನು? ನಿಮ್ಮ ವಿಷಯದಲ್ಲಿ ಪೆದ್ದರಾಯನಿಗೆ ನಾನು ಏನಾದರೂ ಹೇಳಬೇಕೆನ್ನುತ್ತೀರೇನು;

ರತ್ನಾ:— ಅದೊಂದೂ ಬೇಕಿಲ್ಲ. ಪೆದ್ದರಾಯರಿಂದ ನನಗೇನೂ ಆಗಬೇಕಾಗಿಲ್ಲ!

ರಾ. ಶೇ:— ಇದೇನು ನಿಮ್ಮ ಮಾತು? ವಿಜಯನಗರಕ್ಕೆ ಸಮ್ರಾಟನಾಗುವವನು ಪೆದ್ದರಾಯ; ಸಮ್ರಾಜ್ಞಿಯಾಗಬೇಕೆನ್ನುವವರಿಗೆ, ಸಮ್ರಾಟರಿಂದ ಏನೂ ಆಗಬೇಕಿಲ್ಲವೆಂದರೆ.....ಇದರ ಅರ್ಥವೇನು?

(ಅರೆನಿಮಿಷ ತಡೆದು ನಿದಾನವಾಗಿ)

ರತ್ನಾ:— ಹೌ! ನನ್ನದೊಂದು ಪ್ರತಿಜ್ಞೆ ಪೂರ್ಣವಾಗಬೇಕಾಗಿದೆ

ರಾ. ಶೇ:— ಮತ್ತಾವುದು ನಿಮ್ಮ ಪ್ರತಿಜ್ಞೆ? ವಿರೂಪಾಕ್ಷರಾಯನ ಕೊಲೆಯಿಂದ ತಮ್ಮ ಪ್ರತಿಜ್ಞೆ ಪೂರ್ಣವಾದಂತಾಯಿತೆಂದು, ಆ ದಿನ ನನ್ನೆದುರು ಹೇಳಿದ್ದಿರಲ್ಲವೆ?

ರತ್ನಾ:— (ಬಿಸಿಯುಸಿರು ಬಿಟ್ಟು) ಹುಂ, ಅಹುದು, ಹೇಳಿದ್ದೆ!...ಆದರೆ...ಆ ಕೊಲೆಯಿಂದ ನನ್ನ ಪ್ರತಿಜ್ಞೆಯ ಅರ್ಧ ಭಾಗವು ಮಾತ್ರ ಪೂರ್ಣವಾದಂತಾಗಿದೆ.

ರಾ. ಶೇ:— ಇನ್ನರ್ಧಭಾಗವು ಪೂರ್ಣವಾಗಲಿಕ್ಕೆ ಏನಾಗಬೇಕಾಗಿದೆ?

ರತ್ನಾ:— ಏನಾಗಬೇಕಾಗಿದೆಯೆ?..... ... ಈ ಮೊದಲೇ ಹೇಳಿದೆನಲ್ಲ....ನಾನು ಸಮ್ರಾಜ್ಞಿಯಾಗಬೇಕಾಗಿದೆ.

ರಾ. ಶೇ:— ಅದೂ ಸಾಧ್ಯವಾದೀತು. ಪೆದ್ದರಾಯನೊಡನೆ ಮೊದಲಿನಿಂದಲೂ ನಿಮ್ಮ ಸ್ನೇಹ ಸಲುಗೆ ಸಾಕಷ್ಟಿವೆಯೆಂದು ಕೇಳಿ ಅರಿತಿದ್ದೇನೆ. ಉಳಿದ ಅರ್ಧ ಪ್ರತಿಜ್ಞೆಯನ್ನೂ ಪೂರ್ಣಗೊಳಿಸಿಕೊಳ್ಳಲಿಕ್ಕೆ ಆಗಬಹುದು!

ರತ್ನಾ:— ಆದರೆ.....!

ರಾ. ಶೇ:— ಆದರೆ....ಎಂಬುದಕ್ಕೆ ಮಾತು ತಡೆಯಿತೇಕೋ ಕ್ಷಿಳಿಯಲಿಲ್ಲ.

ರತ್ನಾ:— ಎಂದರೆ....ಪೆದ್ದರಾಯನಿಂದ ನನ್ನ ಪ್ರತಿಜ್ಞೆಯ ಪೂರ್ವಾರ್ಧವು ಪೂರ್ಣವಾಗಲಿಲ್ಲ!

ರಾ. ಶೇ:— ಸರಿ! ಮುಂದೇನು?

ರತ್ನಾ:— ನನ್ನದೊಂದು ಸಂಕಲ್ಪವಿದೆ. ವಿರೂಪಾಕ್ಷರಾಯನ ಕೊಲೆಯನ್ನು ಯಾರು ಮಾಡಿರುವರೋ, ಅವರ ಕೈಯನ್ನೇ ಹಿಡಿಯಬೇಕೆಂಬುದು ನನ್ನ ಪ್ರತಿಜ್ಞೆಯ ಉತ್ತರಾರ್ಧ!

(ತೀವ್ರತಾಪ ಸ್ವರಗಳ ಮಿಡಿತ—ಪಿಟಿಲಿನಲ್ಲಿ)

ರಾ. ಶೇ:— ನನ್ನ ಸಂಕಲ್ಪದಿಂದ ನಾನೆಂದೂ ಚ್ಯುತನಾಗಲಾರೆ! ನಿಮ್ಮ ಈ ಪ್ರತಿಜ್ಞೆಯ ಉತ್ತರಾರ್ಧವು ಪೂರ್ಣವಾಗುವುದು ಅಸಾಧ್ಯಕೋಟಿಯೊಳಗಿನ ಮಾತು!

ರತ್ನಾ :— ನೀವು ಮನಸ್ಸುಮಾಡಿದರೆ ಯಾವ ಮಾತೂ ಅಸಾಧ್ಯವೆನಿಸದು. ದಯೆಯಿಟ್ಟು ನೀನೇ ಸಿಂಹಾಸನಾಧಿಕಾರಿಗಳಾಗಬೇಕು. ನನ್ನ ಬಯಕೆಯನ್ನೂ ಪ್ರತಿಜ್ಞೆಯನ್ನೂ ಪೂರ್ತಿಗೊಳಿಸಬೇಕು !

ರಾ. ಶೇ :— ತಾಯಿಾ ! ಇವೆರಡೂ ಅಸಂಭವನೀಯವಾದ ಸಂಗತಿಗಳು ! ನಾನು ಸಿಂಹಾಸನವನ್ನೂ ಏರಲಾರೆ ... ಸುಸಾರಿಗನೂ ಆಗಲಾರೆ !

ರತ್ನಾ :— (ಬಿರುದನಿಯಲ್ಲಿ) ಹೀಗೆ ನುಡಿಯುವುದೆಂದರೆ, ಇದೊಂದು ಬಗೆಯ ಹೇಡಿತನ !

ರಾ. ಶೇ:— ಆದರಿಂದ ನಿನಗೆ ಸಮಾಧಾನವೆನಿಸುತ್ತಿದ್ದರೆ ಹಾಗೂ ಎಂದುಕೊಳ್ಳಬಹುದು; ತಮ್ಮ ಈ ಮಾತಿನಿಂದ ನನಗೇನೂ ಅಸಮಾಧಾನವೆನಿಸುವುದಿಲ್ಲ !

ರತ್ನಾ :— (ನಿರುಪಾಯಭಾವನೆಯಿಂದ) ರಾಜಶೇಖರ, ಹೆಣ್ಣಿನ ಸಹವಾಸದ ಅನುಭವವು ನಿಮಗೆ ಇಲ್ಲವೇ ಇಲ್ಲವೇನೋ ! ಅದ್ದರಿಂದಲೇ ಹೀಗೆ ನುಡಿಯುತ್ತಿದ್ದಿರಿ ! ಬಾಯಬಿಟ್ಟು ಕೇಳುತ್ತೇನೆ; ನಿರಾಶೆಗೊಳಿಸದೆ ನನ್ನನ್ನು ನಿಮ್ಮ ವಳನ್ನಾಗಿ ಮಾಡಿಕೊಂಡು ನೋಡಿರಿ ! ಇದೇ ವಿಜಯನಗರವನ್ನೇ—ನೀವು ಅಪೇಕ್ಷಿಸುತ್ತಿರುವ ದೇವಲೋಕವನ್ನಾಗಿ ಮಾಡಿ ತೋರಿಸಬಲ್ಲೆ !

ರಾ. ಶೇ:— (ರತ್ನಾಂಬಿಕೆಯ ಕಡೆಗೆ ಸ್ಥಿರದೃಷ್ಟಿಯಿಂದ ನೋಡಿ) ಅಮ್ಮಾಜಿ, ಸಮ್ರಾಜ್ಞಿಯಾಗಲಿಕ್ಕೆ ಬೇಕಾಗುವ ರೂಪ–ಗುಣಗಳು ನಿಮ್ಮಲ್ಲಿ ಸಾಕಷ್ಟಿವೆ. ನಿಮ್ಮ ಬಯಕೆ ಸಿದ್ಧಿಸಲಿಕ್ಕೆ ಅಡ್ಡಿಯಾವುದೂ ಬರಲಾರದೆಂದು ನನ್ನ ನಂಬುಗೆ !

ರತ್ನಾ:— (ಆಶಾಭಾವದಿಂದ) ಹಾಗಾದರೆ.... ...ಸಾಮ್ರಾಜ್ಯ ಸಿಂಹಾಸನವನ್ನು ಏರುವುದಕ್ಕೆ ನಿಮ್ಮದು ಸಮ್ಮತಿಯೆ ?

ರಾ. ಶೇ:— ಛೇ ! ಅದೆಂದಿಗೂ ಆಗದ ಮಾತು !

ರತ್ನಾ:— ಹಾಗಿದ್ದರೆ, ಸಮ್ರಾಜ್ಞಿಯಾಗಲು ಯೋಗ್ಯವಾದ ನನ್ನ ಗುಣ–ರೂಪಗಳ ಪ್ರಯೋಜನವು ಏನಾದಂತಾಯಿತು !

(ಗೂಗೆಗಳ ಘೂತ್ಕಾರ, ನರಿಗಳ ಹೂಸೂಕಾರ ಕೇಳಿಸುವುವು)

ರಾ. ಶೇ:— ರತ್ನಮ್ಮಾಜಿ, ದಯೆಯಿಟ್ಟು ಇಲ್ಲಿಂದ ಕೂಡಲೆ ಹೊರಟು ಬಿಡಿರಿ. ಒಂದು ಕ್ಷಣವೂ ನಿಲ್ಲಬೇಡಿರಿ ! ನಿಮ್ಮ ಪ್ರತಿಜ್ಞಾಪೂರ್ತಿಗೆ ನನ್ನಿಂದ ಯಾವ ನೆರವೂ ದೊರೆಯಲಾರದು ! ಈಗಲೇ ಹೊರಟುಬಿಡಿರಿ ನೀವು !

ರತ್ನಾ :— (ಕರುಣಾಕಂಪಿತಸ್ವರದಲ್ಲಿ) ರಾಜಶೇಖರ ! ನಿಮಗೆ ಅರಿಯದ ಸಂಗತಿಯೇನೂ ಇಲ್ಲ ! ಹೆಣ್ಣಿನ ಹೃದಯ ಹೂವಿನಂತಹದು ! ಅದನ್ನು ಕುರುಡರಂತೆ ತುಳಿದು ಬಿಡುವುದು ನಿಮ್ಮಂತಹರಿಗೆ ಯುಕ್ತವಾದುದಲ್ಲ !

ರಾ. ಶೇ:— (ನಿಶ್ಚಯಧ್ವನಿಯಲ್ಲಿ) ಇನ್ನು ನಾನು ಸ್ವಲ್ಪ ನಿಷ್ಠುರಿಯಾಗಿಯೆ ಹೇಳಬೇಕಾಗುವುದು. ದಯೆಯಿಟ್ಟು ನನ್ನನ್ನು ಕ್ಷಮಿಸಬೇಕು ! ನನಗೆ ನಿಮ್ಮ ಈ ಉಪದೇಶದ ಅವಶ್ಯಕತೆ ಇಲ್ಲವೆಂದು ಎನಿಸುತ್ತಿದೆ. ನಾಡಿರುವ ಸಂಕಲ್ಪವನ್ನು ಮುರಿಯಲಾರೆನೆಂದು ನಿಮಗೆ ಮತ್ತೆ ಮತ್ತೆ ಹೇಳಲಾರೆ ! ಇನ್ನು ಹೆಚ್ಚುಕಾಲ ಇಲ್ಲಿ ನಿಂತಿರಬೇಡಿರಿ, ನನ್ನಿಂದ ನೀವು ಯಾವ ಪ್ರಯೋಜನವನ್ನೂ ಪಡೆಯಲಾರಿರಿ !

ರತ್ನಾ:— (ಉಪದೇಶದ ಧನಿಯಲ್ಲಿ) ರಾಜಶೇಖರ ! ಹೂವನ್ನು ಎತ್ತಿ ಮುತ್ತಿಟ್ಟರೆ, ಅದು ತನ್ನ ಸೌಂದರ್ಯ–ಕೋಮಲತೆಗಳಿಂದ ಮಾನವನ ಮನಸ್ಸನ್ನು ತಣಿಸಿಬಿಡಬಹುದು; ಅದನ್ನೇ ತಿರಸ್ಕರಿಸಿ ತುಳಿದು ಬಿಟ್ಟರೆ, ನೊಂದು ತನ್ನಲ್ಲಿರುವ ಕಹಿರಸವನ್ನು ಹೊರಕ್ಕೆ ಹಾಕಬಹುದು !

ರಾ. ಶೇ: — (ಬೇಸರದ ಧ್ವನಿಯಲ್ಲಿ) ಅಮ್ಮಾ, ಇನ್ನು ಮೇಲೆ ನಾನು ನಿಮ್ಮ ಮಾತುಗಳನ್ನು ಕೇಳಲಾರೆ; ನಿಮ್ಮ ಮುಖದತ್ತಲೂ ನೋಡಲಾರೆ ! ಕಿವಿಗಳಲ್ಲಿ ಬೆರಳುಗಳನ್ನು ಇರಿಸಿಕೊಳ್ಳುತ್ತೇನೆ. ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಳ್ಳುತ್ತೇನೆ !

(ರಭಸದ ವಾದ್ಯಧ್ವನಿಯೊಂದಿಗೆ)

ರತ್ನಾ:— (ಕೆಂಪಾದಸ್ವರದಲ್ಲಿ) ರಾಜಶೇಖರ ! ಬರೀ ಕಣ್ಣು–ಕಿವಿಗಳನ್ನು ಮುಚ್ಚಿಕುಳಿತರೆ ಏನಾದಂತಾಯಿತು ! ಈ ರತ್ನಾಂಬಿಕೆಯ ಮುಖವನ್ನು ನೋಡದೆ ಇರಬೇಕಾದರೆ,..... ...ಆಕೆಯ ಮಾತುಗಳನ್ನು ಕೇಳದೆ ಇರಬೇಕಾದರೆ.....ನಿಮ್ಮ ದೇಹವೆಲ್ಲವನ್ನೂ ಮುಚ್ಚಿಕೊಳ್ಳಬೇಕಾಗುವುದು ! ನನ್ನ ಹೆಸರೇನು ಗೊತ್ತೋ— ರತ್ನಾಂಬಿಕೆ ! ರತ್ನ ಒಲಿದರೆ ಅಲಂಕಾರವಾಗಬಹುದು; ಮುನಿದರೆ ಕಾಲಕೂಟವಾಗಬಹುದು ! ಇರಲಿ ! ನಾನೀಗ ಹೊರಡುತ್ತೇನೆ ! ನನ್ನ ಪ್ರತಿಜ್ಞೆಯನ್ನು ನಿಮ್ಮಿಂದಲೆ ಪೂರ್ತಿ ಮಾಡಿಕೊಳ್ಳದಿದ್ದರೆ,—ನಾನು ದೇವಣ್ಣನಾಯಕರ ಮಗಳೇ ಅಲ್ಲ !

(ಧಡಧಡನೆ ಅಡಿಗಳನ್ನಪ್ಪಳಿಸುತ್ತ ರತ್ನಾಂಬಿಕೆ ಹೊರಟು ಹೋಗುವಳು.)

ರಾ. ಶೇ:— (ಕಣ್ಣು ತೆರೆದು ನಿಟ್ಟುಸಿರಿಕ್ಕಿ) ಶಾಂತಂ ಪಾಪಂ, ಶಾಂತಂ ಪಾಪಂ ! ಪಂಪಾವಿರೂಪಾಕ್ಷಾ ! ಎಂತಹ ರೌದ್ರತೆಯ ದರ್ಶನ ! ಯಾವ ನಿನ್ನ ಸಂಕಲ್ಪಸಿದ್ಧಿಯ ಪೂರ್ವಸೂಚನೆ ! ಓ, ಹೋದಳು ಆ ತಾಯಿ ! ಕಗ್ಗತ್ತಲಲ್ಲಿ ಮರೆಯಾದಳು !

ತೊಳಗುತಿರುವ ತಾರೆಗಳೇ ಬಗೆಯ ಬೆಳಗಬನ್ನಿ !
ಹೊಳೆವುದೇಕೆ ದೂರದೊಳೇ ಇಳೆಗೆ ಇಳಿದು ಬನ್ನಿ !
ನಿಮ್ಮ ನೊಗದೊಳಿರುವ ನಗೆಯ
ಸೊಮ್ಮ ಜಗಕೆ ತನ್ನಿ !
ಬನ್ನಿ ಶುಭದ ತಾರೆಗಳೇ ಬೆಳಕಿನೊಡನೆ ಬನ್ನಿ !

೨ನೆಯ ಸನ್ನಿವೇಶ

ನಿರೂಪಕ

ಮರುದಿನದ ಹಗಲು ಹತ್ತುಗಳಿಗೆ ಕಳೆದಿರಬಹುದು. ಸಾಳುವ ನರಸಿಂಹನಾಯಕ, ತನ್ನ ವಿಶ್ರಾಂತಿಭವನದಲ್ಲಿ ಕುಳಿತಿದ್ದಾನೆ. ಚಿಂತೆಯು ಮುಖವನ್ನೇ ಕಂಡರಿಯದ ನಾಯಕನ ಮನಸ್ಸಿನ ಮೇಲೆ, ಇಂದು ಅನೇಕ ಬಗೆಯ ಚಿಂತೆಗಳು ಮುತ್ತಿಗೆ ಹಾಕಿರುವವು. ಕಂದಿ-ಹೋದ ಕಣ್ಣುಗಳನ್ನು ನೋಡಿದರೆ, ರಾತ್ರಿಯೆಲ್ಲ ಚಿತ ನಿದ್ದೆ ಮಾಡಿಲ್ಲ-ವೆಂಬುದು ಯಾರಿಗೂ ಗೊತ್ತಾಗುವುದು. ಇದ್ದುದಿದ್ದ ಹಾಗೆಯೇ, ಅನಾಥನಿಲಯದ ಅಧಿಕಾರಿ ನಾರಾಯಣ ಪಂಡಿತರು, ವಿಶ್ರಾಂತಿ. ಭವನದೊಳಗೆ ಬಂದರು.

ನರಸಿಂಹನಾಯಕ:— (ಮೆಲುದನಿಯಲ್ಲಿ) ಓ! ಬನ್ನಿ ಪಂಡಿತರೇ! ನಿಮ್ಮ ದಾರಿಯನ್ನೇ ಕಾಯುತ್ತಲಿದ್ದೆ. ಬನ್ನಿ, ಕುಳಿತುಕೊಳ್ಳಿ!

ನಾರಾಯಣ ಪಂಡಿತ:— (ಕುಳಿತುಕೊಳ್ಳುತ್ತಲೇ ನಿರಾಶಾ-ಸೂಚಕವಾದ ನಿಟ್ಟುಸಿರು ಬಿಡುವರು).

ನ. ನಾ:— ಅಣ್ಣಾಜಿಯವರು ಪೆದ್ದರಾಯನನ್ನು ಕರೆಯಿಸಿ-ಕೊಂಡಿದ್ದರಲ್ಲವೇ ಪಂಡಿತರೇ!

ನಾ. ಪಂ:— ಹುಂ.....ಕರೆಯಿಸಿಕೊಂಡಿದ್ದರು.

ನ. ನಾ:— ಏಕೆ? ಅದೇಕೆ ನಿರಾಶೆಯ ಧ್ವನಿ? ಏನೇನಾಯಿತು?

ನಾ. ಪಂ:— ಆಗುವುದೇನು? ಪೆದ್ದರಾಯನ ಮನಸ್ಥಿತಿಯು ವಿಚಿತ್ರವಾಗಿದೆಯಂತೆ! ಅಣ್ಣಾಜಿಯವರಿಗೆ ಕೂಡ ಹುಚ್ಚುಪಚ್ಚಾಗಿ ಮಾತನಾಡಿಬಿಟ್ಟನಂತೆ. ಅದೊಂದು ಬಿರುಗಾಳಿ! ಪೆದ್ದರಾಯನ ಛಲವಾದಿತನ ನಿಮಗೆ ಅರಿಯದುದೇ ನಾಯಕರೇ?

ನ. ನಾ:— ಅಣ್ಣಾಜಿಯವರು ಹೇಳಿದರೂ ಆತ ಕೇಳಲಿಲ್ಲವೆ?

ನಾ. ಪಂ:— ನಾಯಕರೇ, ಸಾಕ್ಷಾತ್ ಪಂಪಾಪತಿಯು ಪ್ರತ್ಯಕ್ಷವಾಗಿ ಬಂದು ಹೇಳಿದರೂ ಕೇಳುವಂತಹ ಮನಃಸ್ಥಿತಿಯಲ್ಲಿ ಇಲ್ಲ ಆತ!

ನ. ನಾ:— (ನಿಟ್ಟುಸಿರಿಟ್ಟು) ಇನ್ನು ವಿಜಯನಗರದ ಸಾಮ್ರಾಜ್ಯವನ್ನು ಪಂಪಾಪತಿಯೇ ಕಾಪಾಡಬೇಕು! ಪಂಡಿತರೆ, ರಾಜಶೇಖರನೇ ಪಟ್ಟವೇರಲಿಕ್ಕೆ ಸಮ್ಮತಿಸಿದ್ದರೆ, ಎಷ್ಟು ಒಳ್ಳೆಯ-ದಾಗುತ್ತಿತ್ತು..... ಅಲ್ಲವೆ?

ನಾ. ಪಂ:— (ರೋಷ-ಕಳವಳಗಳು ಬೆರೆತ ಧ್ವನಿಯಲ್ಲಿ) ಪೆದ್ದರಾಯ ಒಂದು ಬಗೆಯ ಹಟವಾದಿಯಾದರೆ, ಅಣ್ಣಾಜಿಯವರು ಇನ್ನೊಂದು ಬಗೆಯ ಹಟವಾದಿಗಳು! ಸುಳ್ಳಲ್ಲ ನಾಯಕರೆ, ಅಣ್ಣಾಜಿ-ಯವರೂ ಹಟವಾದಿಗಳೇ ಎಂದು ನನ್ನವರಂತೂ ಭಾವನೆಯಾಗಿ ಬಿಟ್ಟಿದೆ. ನೋಡಿರಿ! ದೇಶಕ್ಕೆ ದೇಶವೇ ಅವರ ಆಡಳಿತವನ್ನು ಅಪೇಕ್ಷಿಸುತ್ತಿ-ರುವಾಗ, ಸಲ್ಲದ ವಿಕ್ಷಿಪ್ತ ವಿಚಾರಗಳನ್ನು ಮುಂದೆ ಒಡ್ಡಿ, ಸಿಂಹಾಸ-ನಾಧಿಕಾರ ಬಿಡುವುದೆಂದರೆ..... ಇದಕ್ಕಿಂತ ಹೆಚ್ಚಿನ ಹಟವಾದಿತನ ಇನ್ನೇನಿರಬೇಕು? ಅವರ ಅಸಮ್ಮತಿಯ ನಿರ್ಣಯವನ್ನು ಕೇಳಿದಾಗಲೇ ನಾನು ಎಂದುಕೊಂಡೆ: 'ವಿಜಯನಗರದ ಪುನರಭ್ಯುದಯಕಾಲ ಇನ್ನೂ ದೂರದಲ್ಲಿದೆ'.....ಎಂದು!

ನ. ನಾ :— (ನಿರುಪಾಯಧ್ವನಿಯಲ್ಲಿ) ಅದೆಲ್ಲ ಸರಿ ಪಂಡಿತರೇ! ಈಗ ನಾನು ಏನು ಮಾಡಬೇಕೆನ್ನುತ್ತೀರಿ?

ನ. ನಾ:— ಅದೇನು ನಿಮ್ಮ ವಿಚಾರ?

ನಾ. ಪಂ:— ಎಂದರೆ ... . ಹೀಗೆ; ಸದ್ಯ ನೀವು ಕಮಲಾಂಬಿಕೆಯನ್ನು ಪೆದ್ದರಾಯನಿಗೆ ಕೊಡುವುದಿಲ್ಲವೆಂದೂ ಹೇಳ-ಬೇಡಿರಿ; ಕೊಡುತ್ತೇನೆಂದೂ ಹೇಳಬೇಡಿರಿ! ಹೇಗೂ ನಿಮಗೀಗ ಚಂದ್ರಗಿರಿಯಿಂದ-ಅಲ್ಲಿಯ ಅಶಾಂತ ಪರಿಸ್ಥಿತಿಯ ಬಗ್ಗೆ ಓಲೆ ಬಂದಿದೆ; ಬೇಗನೆ ನಿಮಗೆ ಚಂದ್ರಗಿರಿಗೆ ಹೋಗಿಬರಬೇಕಾದೀತು!

ನ. ನಾ:— ಹೋಗಲೇ ಬೇಕಲ್ಲವೇ ಪಂಡಿತರೆ!

ನಾ. ಪಂ:— ಅದಕ್ಕೇ ನಾನೀಗ ಹೇಳುವುದೆಂದರೆ, ನೀವು ಆ ಓಲೆಯ ನೆಪಮಾಡಿಕೊಂಡು ಚಂದ್ರಗಿರಿಗೆ ಹೊರಟುಬಿಡಿರಿ! ಸಿಂಹಾಸನಾರೋಹಣದ ದಾರಿಯನ್ನು ನೀವೇನೂ ಕಾಯಬೇಡಿರಿ.

ನ. ನಾ:— ಪೆದ್ದರಾಯನಿಗೆ ತಪ್ಪು ಕಲ್ಪನೆಯಾಗಲಿಕ್ಕಿಲ್ಲವೆ ಪಂಡಿತರೆ?

ನಾ. ಪಂ:— ಹಾಗೆ ಆಗದಂತೆಯೂ ಮಾಡಬಹುದು; ನೀವೀಗ ಪೆದ್ದರಾಯನಿಗೆ ಒಂದು ಓಲೆ ಬರೆದು ಕಳಿಸಿರಿ! ಅದರಲ್ಲಿ ನೀವು ಇಷ್ಟೇ ಮಾತುಗಳನ್ನು ಬರೆಯಬೇಕು.

"ಚಂದ್ರಗಿರಿಯ ಪಾಳೆಯದಲ್ಲಿ ಬಂಡಾಯಗಳು ಎದ್ದಬಗೆಗೆ ಅವಸರದ ಓಲೆ ಬಂದಿದೆ; ಆದುದರಿಂದ ಕೂಡಲೆ ನಾನು ಅಲ್ಲಿಗೆ ಹೋಗಬೇಕಾಗಿದೆ. ಇಂದಿನ ಅಸಮಾಧಾನ ಮನಃಸ್ಥಿತಿಯಲ್ಲಿ ಕಮಲಾಂಬಿಕೆಯ ಬೇಡಿಕೆಗಾಗಿ ಬರೆದ ಕಾಗದಕ್ಕೆ ನಾನು ಯಾವ ಉತ್ತರವನ್ನೂ ಕೊಡಲಾರೆ! ಅಲ್ಲಿ ಶಾಂತತೆಯನ್ನು ಪ್ರಸ್ಥಾಪಿಸಿ ಮರಳಿ ಬಂದಮೇಲೆ, ಈ ವಿಷಯ ಕುರಿತು ಮಾತನಾಡೋಣವಂತೆ!"

ಇಷ್ಟುಮಾತು ಸಾಕು! ಇನ್ನು ಸಿಂಹಾಸನಾರೋಹಣದ ವಿಷಯ; ಅದಕ್ಕಾಗಿ ನೀವು ಇಲ್ಲಿ ಇದ್ದೇತೀರಬೇಕೆಂಬ ನಿಯಮವೇನೂ ಇಲ್ಲ!

ನ. ನಾ:— (ಸ್ವಲ್ಪಕಾಲ ಯೋಚಿಸಿ) ನಿಮ್ಮ ವಿಚಾರ ಜೆನ್ನಾಗಿದೆ ಪಂಡಿತರೆ! ಎದುರಿಸಿದ ಅನಿಷ್ಟ ಸಂದರ್ಭಗಳಿಗೆ ಒಮ್ಮೆಲೆ ಎದೆಯೊಡ್ಡಿ ನಿಲ್ಲಬೇಕೆ, ಬದಿಗೆ ಸರಿದು ಕಾಲವನ್ನು ಹೋಗಲುಡಿಸುವುದ-ರಿಂದಲೂ ಎಷ್ಟೋ ಸಲ ಪ್ರಯೋಜನವಾಗಬಹುದು! ಆದರೆ ಮರಳಿ ಬಂದಮೇಲಾದರೂ ಪೆದ್ದರಾಯನಿಗೆ ಸಮಾಧಾನ ವಾಗುವಂತೆ ನಡೆದು-ಕೊಳ್ಳಬೇಕಲ್ಲವೇ ನಾನು?

ನಾ. ಪಂ:— ಅದರ ನಿರ್ಣಯಕ್ಕಾಗಿಯೇ ಅಲ್ಲವೇ ನಾವೀಗ ಅವಕಾಶವನ್ನು ಅಪೇಕ್ಷಿಸುತ್ತಿರುವುದು? ಮುಂದಿನ ಮಾತಿಗಾಗಿ ಇಂದೆಯೆ ನಾವೇಕೆ ತೊಡಕಾಗಬೇಕು? ಅದುವರೆಗೆ– ಪೆದ್ದರಾಯನ ಚಿತ್ತವೂ ಎಲ್ಲೆಲ್ಲಿ ಹರಿದಾಡಿ, ಯಾವ ಯಾವ ಮೆಟ್ಟಿನಲ್ಲಿ ನಿಲ್ಲುವನೋ ಎಂಬುದನ್ನೂ ನೋಡಲಿಕ್ಕೆ ಆಗುವುದು!

ನ. ನಾ:— ಆಯಿತು, ಹಾಗಾದರೆ ನಾನು, ನಾಳೆಯ ಬೆಳಗಿನಲ್ಲಿಯೆ ಪಯಣ ಬೆಳಸುವ ಸಿದ್ಧತೆಗೆ ಹತ್ತಿಕೊಳ್ಳಲೆ?

ನಾ. ಪಂ:— ಯಾವ ಯೋಚನೆಯೂ ಇಲ್ಲದೆ ಹೊರಟುಕೊಳ್ಳಿರಿ!

ಈಶ್ವರ:— ('ನಾಯಕರೇ' ಎನ್ನುತ್ತ ಈಶ್ವರನಾಯಕನ ಪ್ರವೇಶ)

ನಾ. ಪಂ:— (ತನ್ನಲ್ಲಿ) ಇಂತಹ ವೇಳೆಯಲ್ಲಿ ಈ ವಂಚಕನ ಬರವೇಕೆ?

ನ. ನಾ:— ಬನ್ನಿ ಈಶ್ವರನಾಯಕರೇ! ಬನ್ನಿ, ಇಲ್ಲಿ ಕುಳಿತುಕೊಳ್ಳಿ! ಇನ್ನೇನಾದರೂ ವಿಶೇಷ ವರ್ತಮಾನವೇ?

ಈಶ್ವರ:— ವಿಶೇಷವೇನೂ ಇಲ್ಲ, ಪೆದ್ದರಾಯರೆದುರು ತಮ್ಮ ಅರಿಕೆಯನ್ನು ವಿಶದಪಡಿಸಿ ಹೇಳಿದೆ. ನಾನೂ ಬಗೆಬಗೆಯಾಗಿ ಬಿನ್ನವಿಸಿಕೊಂಡೆ, ಅವರೇನೋ ತಮ್ಮ ಉಡದ ಹಿಡಿತ ಬಿಡಲೊಲ್ಲರು! ಮಹಾ ಹಟವಾದಿಗಳು ನಾಯಕರೇ ಅವರು!

ನ. ನಾ:— ಮಾಡುವುದೇನು ಈಶ್ವರನಾಯಕರೆ! ನಾನು ಹೇಳಿದ ಕಾರ್ಯವನ್ನು ನೀವೇನೋ ಮಾಡಿದ್ದೀರಿ. ಆದಕ್ಕಾಗಿ ನಾನು ಉಪಕೃತನು ನಿಮಗೆ.....ಸರಿ! ಮುಂದೆ ಏನು ಆಗುವುದೋ ನೋಡೋಣ; ಸದ್ಯಕ್ಕಂತೂ ನಾನು ಚಂದ್ರಗಿರಿಗೆ ಹೊರಟು ನಿಂತಿದ್ದೇನೆ

ಈಶ್ವರ:— (ಆಶ್ಚರ್ಯದಿಂದ) ಚಂದ್ರಗಿರಿಗೆ? ಈಗ ಚಂದ್ರಗಿರಿಗೆ ಹೊರಡುವಿರಾ!

ನ. ನಾ:— ಅಹುದು, ಮೊನ್ನೆಯ ದಿನವೇ ನಿಮಗೆ—ಅಲ್ಲಿಂದ ಓಲೆ ಬಂದ ಸುದ್ದಿಯನ್ನು ಹೇಳಿದ್ದೇನಲ್ಲವೆ? ಈಗ ವೇಳೆಗಳೆದು ಉಪಯೋಗವಿಲ್ಲ, ಪರಿಸ್ಥಿತಿ ಹೆಚ್ಚು ಹದಗೆಟ್ಟು, ನಮ್ಮ ಕೈಮೀರುವ ಮೊದಲೇ ಅಲ್ಲಿ ಉಪಾಯ ಮಾಡಬೇಕಾಗಿದೆ. ನಾಳೆ ನಾನು ಹೊರಡಲೇಬೇಕು!

ಈಶ್ವರ:— ಅಯ್ಯೋ, ಎಂಥ ದುರ್ಯೋಗ ನೋಡಿ. ಸಿಂಹಾಸನಾರೋಹಣದ ಕಾಲದಲ್ಲಿ ನೀವು ಇರುವುದಿಲ್ಲವೆಂದರೆ ಎಂಥ ಮಾತು ನಾಯಕರೇ!

ನಾ. ಪಂ:— ಅನಿವಾರ್ಯ ಪ್ರಸಂಗವೆ ಬಂದಿದೆಯೆಂದಮೇಲೆ, ಅವರ ಕರ್ತವ್ಯವನ್ನು ಅವರು ಮಾಡಲೇಬೇಕು! ನರಸಿಂಹನಾಯಕರೇ, ನಾನಿನ್ನು ಹೊರಡುತ್ತೇನೆ. ದೇವಣ್ಣನಾಯಕರ ಕಣ್ಣುಗಳ ಚಿಕಿತ್ಸೆಗೆ ಹೋಗಬೇಕಾಗಿದೆ.

ನ. ನಾ:— ನಮಸ್ಕಾರ. ಹೋಗಿಬನ್ನಿ! ನಾನು ಮರಳಿ ಬರುವವರೆಗೆ ವಿಜಯನಗರದ ಆಗುಹೋಗುಗಳ ಹೊಣೆಯೆಲ್ಲ ನಿಮ್ಮ ಮತ್ತು ಅಣ್ಣಾಜಿಯವರ ತಲೆಯಮೇಲೆ!

ನಾ. ಪಂ:— ಅದರ ಚಿಂತೆಯನ್ನೇ ನೀವು ಮಾಡಬೇಡಿ (ಪಂಡಿತರು ಹೋಗುವರು).

ನ. ನಾ:— ಈಶ್ವರನಾಯಕರೇ, ನೀವು ಪೆದ್ದರಾಯರ ಹತ್ತಿರದ ಮಿತ್ರರು. ಅವರಿನ್ನು ದೊರೆಗಳಾಗುವವರು! ಅವರ ಕಲ್ಯಾಣಚಿಂತನೆ ನಿಮ್ಮ ಕರ್ತವ್ಯವೇ ಆಗಿದೆ.

ಈಶ್ವರ:— ಇದನ್ನು ತಾವು ಹೇಳಬೇಕೇ ನಾಯಕರೆ! ಆದರೆ ತಾವಿಲ್ಲದೆ ಸಿಂಹಾಸನಾರೋಹಣ ಮಹೋತ್ಸವ ನಡೆಯುವುದಲ್ಲಾ—ಎಂದು ನನಗೆ ವಿಷಾದವೆನಿಸುತ್ತದೆ. ಅನಿವಾರ್ಯ ಪ್ರಸಂಗವೇ ಬಂದ ಮೇಲೆ ಮಾಡುವಿರೇನು? ಪೆದ್ದರಾಯನ ಮನಃಸ್ಥಿತಿಯನ್ನು ತಮಗೆ ತಿಳುಹಲಿಕ್ಕೆಂದು ಬಂದಿದ್ದೆ. ನಾನಿನ್ನು ಹೊರಡಲೆ?

ನ. ನಾ:— ಆಗಲಿ, ಹೊರಡಬಹುದು, ನಮಸ್ಕಾರ!

(ಈಶ್ವರನಾಯಕ ಹೋಗುವನು.)

೩ನೆಯ ಸನ್ನಿವೇಶ

ನಿರೂಪಕ

ಮರುದಿನ ಬೆಳಗಿನ ಸಮಯ, ಪರ್ಯಂಕದ ಮೇಲೆ ಬಿದ್ದುಕೊಂಡಿದ್ದ ಪೆದ್ದರಾಯ ಇನ್ನೂ ಎದ್ದೇ ಇಲ್ಲ. ಮುಖವು ಬಾಡಿ ಬತ್ತಿಹೋಗಿದೆ. ಒಂದೆ ಸವನೆ ತಲೆಯಲ್ಲಿ, ಒಂದರ, ಹಿಂದೊಂದು ಯೋಚನೆಗಳು ತಾಂಡವವಾಡುತ್ತಲಿವೆ. ಭಾವನಾವಶನಾದ ಪೆದ್ದರಾಯ, ತನ್ನಲ್ಲಿ ತಾನೇ ಮಾತನಾಡಿಕೊಳ್ಳುತ್ತಿದ್ದಾನೆ:

ಪೆ. ರಾ:— ನರಸಿಂಹನಾಯಕರ ಅಭಾವದಿಂದ, ತುಂಬಿದ ರಾಜಧಾನಿ ನನಗೆ ಬರಿದು ಬರಿದು ಎನಿಸತೊಡಗಿದೆ. ನನಗೀಗ ಏಳಬೇಕೆಂಬ ಉತ್ಸಾಹವೂ ಇಲ್ಲವಂತಾಗಿದೆ .....ನರಸಿಂಹ ನಾಯಕರು ಇಲ್ಲದೆ ಸಿಂಹಾಸನಾರೋಹಣ ಮಾಡಬೇಕೇ ನಾನು?.... ...ಹೀಗೆಂದೂ ಆಗಲಾರದು....ಅವರು ಮರಳಿ ಬರುವವರೆಗೂ ಈ ಸಮಾರಂಭನನ್ನ ಮುಂದೆ ಹಾಕಬೇಕು..... .....ಬಂಡುಗಾರರನ್ನು ಹಣಿಯುವುದಕ್ಕೆ ನರಸಿಂಹ ನಾಯಕರಿಗೆ ಸಹಕಾರಿಯಾಗಿ, ನಾನೂ ಚಂದ್ರಗಿರಿಗೆ ಹೊರಟುಬಿಡಲೇ?.... .....

ಅಬ್ಬಾ! ನರಸಿಂಹ ನಾಯಕರ ಸಾಮ್ರಾಜ್ಯ ನಿಷ್ಠೆಯೆಂತಹದು.....; ಕಮಲಾಂಬಿಕೆಗಾಗಿ ನಾನು ಅಂತಹ ಸತ್ವಶಾಲಿಯ ಮನಸ್ಸನ್ನು ನೋಯಿಸುತ್ತಿದ್ದೇನಲ್ಲವೆ? ....ಅವರು ಮರಳಿ ಬರಲಿ! ಕಮಲಾಂಬಿಕೆಗಾಗಿ ನಾನು ಹಟ ಹಿಡಿಯುವುದಿಲ್ಲವೆಂದು, ಅವರಿಗೆ ಹೇಳಿಬಿಡುತ್ತೇನೆ. ವಿಜಯನಗರದ ಸಾಮ್ರಾಜ್ಯಕ್ಕಾಗಿ ಅವರು ಮಾಡಿರುವಷ್ಟು ತ್ಯಾಗ—ಸಾಹಸಗಳನ್ನು, ಸಮ್ರಾಟರೆನಿಸಿಕೊಂಡು ವಂದಿ-ಮಾಗಧರಿಂದ ಹೊಗಳಿ ಹಾಡಿಸಿಕೊಳ್ಳುತ್ತಿದ್ದವರಾದರೂ ಮಾಡಿದ್ದಾರೆಯೆ? ಬೇಡ, ನಾನು ಅಂತಹ ನಿಷ್ಠುರ ಮನಸ್ಸನ್ನು ಮೆಟ್ಟಿ ತುಳಿಯುವುದು ಬೇಡ.....

(ಒಮ್ಮೆಲೆ ಈಶ್ವರನಾಯಕನು ಒಳಗೆ ಪ್ರವೇಶಿಸುತ್ತ)

ಈಶ್ವರ:— ಏನು? ವಿಜಯನಗರದ ದೊರೆಗಳು ಏಳುವವರೆಗೂ ಸೂರ್ಯೋದಯವು ಆಗುವುದಿಲ್ಲವೆಂದು ಭಾವಿಸಿದ್ದೀರೇನು ಪೆದ್ದಣ್ಣಾ? (ಹಾಸ್ಯಸ್ವರವನ್ನು ಗಾಬರಿಗೆ ತಿರುಗಿಸಿ) ಇದೇನು ಪೆದ್ದಣ್ಣಾ? ಹೀಗೆಯೇಕೆ ನಿಮ್ಮ ಮುಖ? ಕಂದಿ ಕುಂದಿ ಹೋಗಿದೆಯಲ್ಲ?

ಪೆ. ರಾ:— (ಹಾಸಿಗೆಯಲ್ಲಿಯೆ ಎದ್ದುಕುಳಿತು) ಬಾ, ಕುಳಿತುಕೋ ಈಶ್ವರಾ! ಅದೇಕೋ ನೋಡು, ನರಸಿಂಹ ನಾಯಕರು

ಹೊರಟುಹೋದುದನ್ನು ಕೇಳಿದಾಗಿನಿಂದ, ಮನಸ್ಸಿನ ಉತ್ಸಾಹವೇ ಹೊರಟುಹೋದಂತಾಗಿದೆ.

(ಈಶ್ವರನಾಯಕನು ಕೂತನಾಡದೆ ಇರುವುದನ್ನು ಕಂಡು, ನಿಶ್ಚಯಸ್ವರದಲ್ಲಿ)

ನಾಯಕರು ಮರಳಿ ಬರುವವರೆಗೆ, ಸಮಾರಂಭದ ದಿನವನ್ನು ಮುಂದೆ ನೂಕಬೇಕೆಂದು ನಾನು ನಿರ್ಣಯಿಸಿದ್ದೇನೆ.

ಈ. ನಾ:— ಆದಕ್ಕಾಗಿಯೆ ನಿಮಗೆ ಆಗಾಗ ನಾನು ಹೇಳುತ್ತಿರುವೆನು:—ಪೆದ್ದಣ್ಣಾ, ನೀವು ತೀರ ಭಾವನಾಪ್ರಧಾನ ವ್ಯಕ್ತಿಗಳು!

ಪೆ. ರಾ:— ಈಗೇನಾಯಿತು? ನನ್ನ ಭಾವನಾಪ್ರಧಾನ ಸ್ವಭಾವವು ಈಗ ಯಾವ ತಪ್ಪು ಮಾಡಿತು?

ಈ. ನಾ:— ಇನ್ನೂ ಏನು ಮಾಡಬೇಕೆನ್ನುತ್ತೀರಿ! ನರಸಿಂಹ ನಾಯಕರು ಈಗ, ಈ ಸಾಮ್ರಾಜ್ಯ ಸಮಾರಂಭವನ್ನು ಕೂಡ ಬಿಟ್ಟು ಏತಕ್ಕಾಗಿ ಹೋಗಿದ್ದಾರೆ—ಗೊತ್ತಿದೆಯೇ ನಿಮಗೆ?

ಪೆ. ರಾ:— ಗೊತ್ತಿರದೆ ಏನು? ಪತ್ರವನ್ನೇ ಕಳುಹಿದ್ದಾರಲ್ಲಾ! ಬಂಡುಗಾರರನ್ನು ಅಡಗಿಸಲಿಕ್ಕೆ ಹೋಗಿದ್ದಾರೆ.

ಈ. :— ನಿಮಗೊಂದು ಹುಚ್ಚು ಪೆದ್ದಣ್ಣಾ!

ಪೆ. ರಾ:— ಮತ್ತೇನು ಹಾಗಾದರೆ?

ಈ. :— ಬಂಡುಗಾರರನ್ನು ಅಡಗಿಸಲಿಕ್ಕೆ ಹೊರಟವನು, ಮದುವೆಗಾದ ಮಗಳನ್ನು ಏಕೆ—ಜೊತೆಗೆ ಕರೆದುಕೊಂಡು ಹೋಗುವನು?

ಪೆ. ರಾ:— ಯಾಕೆ ಕರೆದುಕೊಂಡು ಹೋಗಬಾರದು? ಚಂದ್ರಗಿರಿಯಲ್ಲಿಯೆ ಆಕೆ ಹುಟ್ಟಿ ಬೆಳೆದವಳು! ಜೊತೆಗೆ ಹೋಗಿರಬಹುದು!

ಈ. :— (ಹಾ ಹಾ ಹಾ ಎಂದು ಗಟ್ಟಿಯಾಗಿ ಅಣಕದ ನಗೆ ನಗುವನು)

ಪೆ. ರಾ:— ನಗುತ್ತೀಯೇಕೆ ಈಶ್ವರಾ? ಆದುದಾದರೂ ಏನು ಹೇಳಬಾರದೆ?

ಈ. : ಇನ್ನು ನಾನು ಏನು ಹೇಳಬೇಕು ನಿಮಗೆ? ನರಸಿಂಹ ನಾಯಕರು ಬಂಡುಗಾರರನ್ನು ಅಡಗಿಸಲಿಕ್ಕೆಂದೇ ಹೋಗಿರುವರೆಂದು ನಿಮ್ಮ ಭಾವನೆಯೇನು!

ಪೆ. ರಾ:— (ಆತುರಸ್ವರದಲ್ಲಿ) ಹಾಗಾದರೆ?—ಏತಕ್ಕೆ ಹೋಗಿರುವರು?

ಈ. :— ಏತಕ್ಕೆಂದರೆ ನಿಮ್ಮ ಮನದ ಮೇಲೆ ಮಂಕುಬೂದಿಯನ್ನು ಎರಚಲಿಕ್ಕೆ!

ಪೆ. ರಾ:— ಇದೇನಯ್ಯಾ ನಿನ್ನ ಮಾತು?

ಈ. :— ನೋಡಿ ದೊರೆಗಳೆ! ನಿನ್ನೆಯ ಹಗಲಲ್ಲಿಯೆ ಅವರು ಹೊರಡುವುದರ ನಿರ್ಣಯ ಮಾಡಿದರು. ಆದಕ್ಕೆ ಮೊದಲು, ಸಮಾರಂಭ ತೀರಿಸಿಕೊಂಡೇ ಹೋಗಬೇಕೆಂದು ನರಸಿಂಹನಾಯಕರ ಯೋಚನೆಯಿತ್ತು.

ಪೆ. ರಾ:— ಹೀಗೆ ಒಮ್ಮಿದೊಮ್ಮೆ ಯೋಚನೆಯು ಬದಲಾಗುವುದಕ್ಕೆ ಕಾರಣವೇನು?

ಈ. :— ಕಾರಣವೇನೆಂದು ಕೇಳುವಿರಾ! ಅದನ್ನೇ ಹೇಳುತ್ತೇನೆ ಕೇಳಿರಿ. ನಿನ್ನೆ ನಾನು ನರಸಿಂಹ ನಾಯಕರ ಮನೆಗೆ ಹೋಗಿದ್ದೆ. ಆಗ ಅನಾಥನಿಲಯದ ನಾರಾಯಣ ಪಂಡಿತರು ಅಲ್ಲಿ ಬಂದು ಕುಳಿತಿದ್ದರು. ಅವರಿಬ್ಬರಲ್ಲಿಯೂ ಮಾತು-ಕತೆ ನಡೆದಿದ್ದಿತು. ನಾನು ನರಸಿಂಹ ನಾಯಕರಿಗೆ ತೀರ ನಂಬಿಗೆಯವನಂತೆ ನಟಿಸುತ್ತಿರುವುದರಿಂದ, ನನ್ನ ಎದುರಿನಲ್ಲಿಯೆ ಅವರ ವಿಚಾರ-ಚರ್ಚೆಗಳು ನಡೆದುವು. ಪಂಡಿತರು ತಮ್ಮ ಅಣ್ಣಾಜಿಯವರಿಂದ ಸಂದೇಶ ತೆಗೆದುಕೊಂಡು ಬಂದಿದ್ದರು. ಆ ಸಂದೇಶದಂತೆಯೆ ನಾಯಕರು ಚಂದ್ರಗಿರಿಗೆ ಹೊರಡುವುದನ್ನು ನಿರ್ಣಯಿಸಿದರು.

(ಸೇವಕನೊಬ್ಬನು ಬಂದು ಹೋಗುವನು)

ಸೇವಕ:— ನಾಗಜ್ಜಿ ತಮ್ಮ ದಾರೀಕಾಯುತ್ತಾಲಿದ್ದಾಳೆ ಬುದ್ಧಿ ಬೆಳಗಿನ ಕಾರ್ಯದ ಸಿದ್ಧತೆ ಮಾಡಿಟ್ಟು ತುಂಬ ಹೊತ್ತಾಯಿತು ಅಂತ ಹೊತ್ತಾಯಿತು.

ಪೆ. ರಾ:— (ಆವೇಶದ ಧ್ವನಿಯಲ್ಲಿ) ಇರಲಿ, ನೀನೀಗ ಹೊರಟು ಹೋಗು. ಇನ್ನೊಂದು ಗಳಿಗೆ ತಡೆದು ಬರುತ್ತೇನೆ (ಸೇವಕನು ಹೋಗುವನು) ಸರಿ, ಈಶ್ವರಾ! ನಾಯಕರಿಗೆ ಅಣ್ಣಾಜಿಯವರ ಸಂದೇಶ ಏನೆಂದು ಬಂದಿತ್ತು?

ಈ. :— (ಕೊಂಕುತನದಿಂದ) ರಾಜರ್ಷಿಗಳಲ್ಲವೇ ನಿಮ್ಮ ಅಣ್ಣಾಜಿ! ಆ ಮಹಾತ್ಮ ಕಳುಹಿದ ಸಂದೇಶವನ್ನು ತೆರೆದ ಕಿವಿಗಳಿಂದ ಕೇಳಿರಿ ಪೆದ್ದಣ್ಣಾ! 'ನಾನು ನಿನ್ನೆಯ ಸಾಯಂಕಾಲ ಪೆದ್ದರಾಯನನ್ನು ಕರೆಸಿ, ಪರಿಪರಿಯಾಗಿ ಹೇಳಿದೆ. ಅವನೇನೂ ಕೇಳುವಂತೆ ತೋರುವುದಿಲ್ಲ. ಈಗ ಒಮ್ಮೆಲೆ ನಾವು ವಿರೋಧಿಗಳಾಗಿ ನಿಂತರೆ ಕಾರ್ಯ ಕೆಟ್ಟುಹೋದೀತು. ಆದಕ್ಕಾಗಿ ಕೆಲವು ದಿನಗಳು ಕಳೆಯಲಿ! ನೀವು ಈಗ ಬೇರೆ ಏನನ್ನೂ ಮಾಡದೆ, ಬಂಡುಗಾರರ ನೆಪ ಮಾಡಿಕೊಂಡು, ಕಮಲಾಂಬಿಕೆಯೊಂದಿಗೆ ಚಂದ್ರಗಿರಿಗೆ ಹೊರಟು ಬಿಡಿರಿ. ಆಲ್ಲಿದ್ದು ಎಲ್ಲ ಬಗೆಯ ಬಲವನ್ನೂ ಹೆಚ್ಚಿಸಿಕೊಳ್ಳಿರಿ. ಕೆಲವು ದಿನಗಳಲ್ಲಿಯೆ ನಾನು ಕೂಡ ಅತ್ತಕಡೆಗೇ ಹೊರಟುಬರುತ್ತೇನೆ. ಮುಂದಿನ ವಿಚಾರವನ್ನು ಆಮೇಲೆಯೆ ಮಾಡೋಣ!'—ಪೆದ್ದಣ್ಣಾ, ಇವು ನಿಮ್ಮ ರಾಜರ್ಷಿ ಕಳುಹಿದ ಸಂದೇಶದ ಮಾತಿನ ಮುತ್ತುಗಳು!

ಪೆ. ರಾ:— (ಭಾವಾವಿಷ್ಟನಾಗಿ) ಮುಂದಿನ ವಿಚಾರವನ್ನೇನು ಮಾಡುವರಂತೆ ಅವರು?

ಈ:— ಅದನ್ನು ಬೇರೆಯಾಗಿ ಹೇಳಬೇಕೇನು? ಕಮಲಾಂಬಿಕೆಯ ಮದುವೆಯ ವಿಚಾರ! ವಿಜಯನಗರದ ಸಿಂಹಾಸನದ ವಿಚಾರ! ಬೇರೆ ಇನ್ನೇನಿದೆ!

ಪೆ. ರಾ:— (ವಿಚಾರಮೂಢನಾಗಿ) ಕಮಲಾಂಬಿಕೆಯ ಮದುವೆ? ಯಾರೊಡನೆ?

ಈ:— ಯಾರೊಡನೆ—ಎಂದರೆ ನಿಮ್ಮ ಅಣ್ಣಾಜಿಯೊಡನೆ! ಗೊತ್ತಿದ್ದೂ ಮತ್ತೆ ಮತ್ತೆ ಕೇಳುವಿರಲ್ಲಾ ಪೆದ್ದಣ್ಣಾ!

ಪೆ. ರಾ:— (ರೋಷದಿಂದ ಆಸನವನ್ನು ಬಿಟ್ಟು) ರಾಜ್ಯಕ್ಕೆ ತನಗೆ ಬೇಡವೆಂದು ವೈರಾಗ್ಯದ ಮಾತುಗಳ ಮಳೆಯನ್ನೇ ಸುರಿಸಿದ ಅಣ್ಣಾಜಿಗೆ, ಮತ್ತೆ ಸಿಂಹಾಸನದ ಲೋಭ ಉಂಟಾಯಿತೆ?

ಈ :— ಸಂಗಾತ್ ಸಂಜಾಯತೇ ಕಾಮಃ! ಹೆಣ್ಣಿನ ಬೆನ್ನನ್ನು ಹತ್ತಿದವನು, ಹೊನ್ನು-ಮಣ್ಣುಗಳಿಗೂ ಆಶೆಪಟ್ಟಾರೆ, ಅದರಲ್ಲಿ ಆಶ್ಚರ್ಯವೇನು ?

(ಪೆದ್ದರಾಯನು ಕ್ರೋಧದ ಶ್ವಾಸೋಚ್ಛ್ವಾಸವನ್ನು ಬಿಡುತ್ತ ತುಸು ಹೊತ್ತು ಕುಳಿತು)

ಪೆ. ರಾ :— ನಾನು ಹೆಮ್ಮೆಪಟ್ಟುಕೊಳ್ಳುತ್ತಿದ್ದೆ....ಎಷ್ಟೊಂದು ಒಳ್ಳೆಯ ಅಣ್ಣನನ್ನು ಪಡೆದಿದ್ದೇನೆ–ಎಂದು ಹೆಮ್ಮೆಯಿಂದ ಹಿಗ್ಗುತ್ತಿದ್ದೆ!

ಈ :— ಇನ್ನು ಮೇಲಾದರೂ ಕಣ್ಣು ತೆರೆದು ನಡೆದುಕೊಂಡರೆ ಒಳ್ಳೆಯದು !

ಪೆ. ರಾ :— (ಸಿಡಿನುಡಿಯಲ್ಲಿ) ಈಶ್ವರಾ! ನೋಡೋಣ ! ಈ ಪೆದ್ದರಾಯನ ಕೈಯ ನಿಡುಗತ್ತಿಯನ್ನು ವಿರೋಧಿಸಿ, ಯಾರು ಯಾರು ಹೇಗೆ ಬದುಕಿಕೊಂಡಿರುತ್ತಾರೊ ಒಮ್ಮೆ ನೋಡಿಬಿಡೋಣ ! ಪಟ್ಟಾಭಿಷೇಕದ ಗೊಂದಲ ಒಂದು ಸಲ ಮುಗಿದುಹೋಗಲಿ ! ಆಮೇಲೆ ನನ್ನ ಈ ಕೈಗಳ ಗುಣವನ್ನು ಒಬ್ಬೊಬ್ಬರಿಗೇ ತೋರಿಸುತ್ತೇನೆ! ರಾಜರ್ಷಿ.....ಸಾಧು.....ವೈರಾಗ್ಯ—ಎಲ್ಲವೂ ಬೂಟಾಟಿಕೆ !.... ಎಲ್ಲವೂ ಕಪಟಕ್ರೀಡೆ !

ಈ :— ಕುಟಿಲರಾಜಕಾರಣ ನಿಮಗೆ ಗೊತ್ತಿಲ್ಲ ಪೆದ್ದಣ್ಣಾ !

ಪೆ. ರಾ.— (ಹಟದ ಧ್ವನಿಯಲ್ಲಿ) ಈಶ್ವರಾ, ಇಂದಿನಿಂದ ಸಮಾರಂಭದ ವ್ಯವಸ್ಥೆಯ ಹೊಣೆಯೆಲ್ಲ ನಿನ್ನ ತಲೆಯ ಮೇಲೆ! ಎಲ್ಲವನ್ನೂ ನೀನೆ ನಿಂತು ಮಾಡಿಸಬೇಕು !

ಈಶ್ವರ :— ಪೆದ್ದಣ್ಣಾ, ನಿಮಗಾಗಿ ಎಂತಹ ಕಠಿಣ ಕಾರ್ಯದ ಹೊಣೆಯನ್ನೂ ಹೊರಲು ಸಿದ್ಧನಿರುವೆನು.

ಪೆ. ರಾ :— ವಂಚಕರು.....ಕಪಟಿಗಳು.....ಸಾಮ್ರಾಜ್ಯ ಘಾತಕರು ! ನೀಚರು !

ನಾಲ್ಕನೆಯ ಸನ್ನಿವೇಶ

ಇಂದು ಪೆದ್ದರಾಯನ ಪಟ್ಟಾಭಿಷೇಕದ ದಿನ. ಸಾಮ್ರಾಜ್ಯ ವೈಭವಸೂಚಕವಾದ ಆನೆ, ಕುದುರೆ, ಸೇನೆ, ಸೇನಾಪತಿಗಳು ಅರಮನೆಯ ಮುಂದಣ ಬಯಲಲ್ಲಿ. ರಾಜಾಧಿರಾಜರು, ಮಾಂಡಲಿಕ ಮನ್ನೆಯರು, ಪರಿವಾರದವರು ಇವರಿಂದ ಓಲಗ ತುಂಬಿತುಳುಕುತ್ತ-ಲಿದೆ. ಪಟ್ಟಾಭಿಷೇಕದ ಪೂರ್ವವಿಧಿಗಳೆಲ್ಲ ಮುಗಿದುಬಿಟ್ಟಿವೆ. ಈಗ ಸಾಮ್ರಾಜ್ಯಮುಕುಟದ ಸಮರ್ಪಣವಾಗಬೇಕು. ರಾಜಶೇಖರನು ಸಿಂಹಾಸನದ ಬಳಿ ಬಂದ. ಅತಿಶಯವಾದ ಭಕ್ತಿಯಿಂದ ಮುಕುಟ-ವನ್ನೆತ್ತಿ ಹಣಿಗೆ ಹಚ್ಚಿಕೊಂಡ. ಸಭೆಯಲ್ಲಿ ಕೂಗು—" ಜಯಭುವ-ನೇಶ್ವರ! ಜಯಪಂಪಾವಿರೂಪಾಕ್ಷ! ಜಯಕರ್ನಾಟಕ ರಾಜ್ಯಲಕ್ಷ್ಮಿ " ಕೂಗು ನಿಂತಮೇಲೆ.)

ರಾ. ಶೇ:— ನನ್ನ ಕನ್ನಡನಾಡಿನ ಪ್ರಜಾಪ್ರಮುಖರೆ, ಮಾಂಡ-ಲಿಕ--ಸಾಮಂತ–ಮನ್ನೆಯರೆ, ವಿಜಯನಗರದ ಸುವರ್ಣ ಸಿಂಹಾಸನ-ವನ್ನು ಏರಿ ಕುಳಿತವನು, ಬರೀ ಒಬ್ಬ ಸಮ್ರಾಟನು ಮಾತ್ರವಲ್ಲ. ದೇವಾಧಿದೇವನಾದ ಶ್ರೀಪಂಪಾಪತಿಯ ಪ್ರತಿನಿಧಿಯವನು. ನಮ್ಮ ಸಾಮ್ರಾಜ್ಯ ಶ್ರೀಪಂಪಾಪತಿಯ ಸೊತ್ತು; ಸಮ್ರಾಟನು ಆ ದೇವ. ನಿಂದ ನಿಯಮಿತನಾದ ಆಡಳಿತಗಾರ! ವಿಜಯನಗರದ ಸಮ್ರಾಟನ ಕರ್ತವ್ಯವೆಂದರೆ ದುಷ್ಟದಂಡನೆ—ಶಿಷ್ಟಪಾಲನೆಗಳು. ಇವು ದೇವ-ದೇವನಿಗೆ ಮೆಚ್ಚಿಗೆಯೆನಿಸುವ ಕಾರ್ಯಗಳು.

ಇನ್ನೊಂದು ವಿಷಾದದ ಸಂಗತಿಯೆಂದರೆ, ಇಂದಿನ ಈ ಓಲಗದಲ್ಲಿ ನರಸಿಂಹ ನಾಯಕರಂತಹ ಸಾಮ್ರಾಜ್ಯನಿಷ್ಠರು ಇಲ್ಲದಿರುವುದು! ಇಂದಿನ ಸಮಾರಂಭದಲ್ಲಿ ಅವರ ಅಭಾವವು ಒಂದು ದೊಡ್ಡ ಕೊರತೆಯಾಗಿದೆ. ಶ್ರೀವಿರೂಪಾಕ್ಷನು, ಬೇಗನೆ ಅವರನ್ನು ಕ್ಷೇಮದಿಂದ ಕರೆಯಿಸಿಕೊಳ್ಳಲಿ

(ಓಲಗದಲ್ಲಿ ಏಸುಮಾತುಗಳ ಧ್ವನಿಯೆದ್ದು ಶಾಂತವಾದ ಮೇಲೆ)

ಈಗ ಈ ಸಾಮ್ರಾಜ್ಯ ಮುಕುಟವನ್ನು ಶಿರದಲ್ಲಿ ಧರಿಸಬೇಕಾಗಿ-ರುವವರು, ಸತ್ಕೀರ್ತಿಶಾಲಿಗಳಾದ ಮಲ್ಲಿಕಾರ್ಜುನ ಮಹಾರಾಜರ ಸಚ್ಛಿಷ್ಯಾತ್ ಪುತ್ರರು ! ಮಲ್ಲಿಕಾರ್ಜುನ ಪ್ರಭುಗಳ ತಲೆಯ ಮೇಲಿದ್ದ ಈ ರಾಜಮುಕುಟಕ್ಕೆ ಅವರ ಸದ್ಗುಣಗಳ ಪರಿಚಯವು ಸಾಕಷ್ಟು ಇದೆ. ಅಂದಿನ ಆ ಮುಕುಟವೇ ಈಗ ಈ ಮುಮ್ಮಡಿ ವಿರೂಪಾಕ್ಷ ಪ್ರಭುಗಳ ಶಿರದ ಮೇಲೆ ಅಲಂಕಾರವಾಗಿ ಕುಳಿತು, ಮಲ್ಲಿಕಾರ್ಜುನ ಪ್ರಭುಗಳ ಸದ್ಗುಣಗಳನ್ನು ಈ ಹೊಸ ಪ್ರಭುಗಳ ಹೃದಯದಲ್ಲಿ ಯಾವಾಗಲೂ ಮೂಡಿಸುತ್ತಿರಲಿ. (ಕಿರೀಟವನ್ನು ತಲೆಯ ಮೇಲೆ ಇಟ್ಟು) ಜಯಕರ್ನಾಟಕ ರಾಜ್ಯಲಕ್ಷ್ಮಿ! ಜಯ ಭುವನೇಶ್ವರಿ ! ಜಯ ಪಂಪಾಪತೇ ! (ಸಭೆಗೆ ಸಭೆಯೇ ಜಯಘೋಷ ಮಾಡುವುದು. ವಾದ್ಯಗಳು ಮೊಳಗುವುವು.)

(ವೈದಿಕರ ಮಂತ್ರಘೋಷಣೆ; ಸುಮಂಗಲೆಯರ ಮಂಗಲಾರತಿಗಳು ಆಗುವುವು.)

ಶ್ರೀಮದ್ ರಾಜಾಧಿರಾಜ ರಾಜಪರಮೇಶ್ವರಾ,
ಕರ್ನಾಟ ರಾಜ್ಯರಮಾ ಕರಕಮಲಧರಾ !
ವಿಜಯನಗರ ವೈಭವ ವಧೂಮನೋಹರಾ,
ಯವನ ಸುರತ್ರಾಣವಿದಾರಾ !
ನಿಜಭುಜದಂಡ ಶಕ್ತಿಪ್ರಚಂಡಾ,
ಮೂರುರಾಯರನಾಳ್ವಗಂಡಾ,
ಹಿಂದೂರಾಯ ಸುರತ್ರಾಣಾ,
ದೇವದ್ವಿಜಸೇವಾಧುರೀಣಾ !

ಶ್ರೀಮುಮ್ಮಡಿ ವಿರೂಪಾಕ್ಷಪ್ರಭೋ, ಭೋ ಪರಾಕು !

(ಪರಾಕುಗಳು ನಿಂತಮೇಲೆ, ಪೆದ್ದರಾಯನು ಗಂಭೀರವಾಗಿ ಮಾತನಾಡುವನು)

ಪೆ. ರಾ:— ಸಾಮ್ರಾಜ್ಯದ ಪ್ರೇಮಿಗಳಾದ ನನ್ನ ನಾಡಿನ ವೀರಬಂಧುಗಳೆ! ಸಿಂಹಾಸನವನ್ನು ಏರಿ ಕುಳಿತವನು ಅನುಸರಿಸ-ಬೇಕಾದ ಕರ್ತವ್ಯಗಳ ಕಲ್ಪನೆಯು ನನಗೂ ಇದೆಯೆಂದು ನಾನು ಭಾವಿಸಿ ಇದ್ದೇನೆ. ಕನ್ನಡ ಪ್ರಜೆಗಳೆಲ್ಲರೂ ಸೌಖ್ಯವಾಗಿ ಇರಬೇಕೆಂದು

ನನ್ನ ಮನಃಪೂರ್ವಕವಾದ ಆಶೆಯಿದೆ. ಎಲ್ಲೆಲ್ಲಿಯೂ ನಮ್ಮ ಸನಾತನ ಧರ್ಮವು ತಲೆಯೆತ್ತಿ ನಿಲ್ಲಬೇಕೆಂದು ನನ್ನ ಅಂತರಾತ್ಮದ ಅಪೇಕ್ಷೆಯಿದೆ. ತಮ್ಮೆಲ್ಲರ ತೋಳ ನೆಂವು ನನಗೆ ಇನ್ನು ಬಾದೆ, ಅಂತಹ ಕಾಲವು ನಮ್ಮನ್ನು ಬೇಗನೆ ಸಮೀಪಿಸುವಂತೆ ಮಾಡಬೇಕೆಂಬ ಆತುರ, ನನ್ನ ನರ-ನರಗಳನ್ನೂ ಕುಣಿಸುತ್ತಲಿದೆ.

ಇನ್ನೊಂದು ಮಹತ್ತ್ವದ ವಿಷಯವೆಂದರೆ, ದಂಡನಾಯಕರ ಆಸನವು ಈಗ ಬರಿಯುದಾಗಿ ಕುಳಿತಿದೆ ಸಮ್ರಾಟನು ತನಗೆ ಬೇಕಾದ ದಂಡನಾಯಕರನ್ನು, ತಾನೇ ಆಯ್ದು ನಿಯಮಿಸಿಕೊಳ್ಳುವುದು ರಾಜನೀತಿಯ ಪರಂಪರೆಯಾಗಿದೆ. ಆದುದರಿಂದ ಹೊಸತಾಗಿ ದೊರೆಯಾದ ನಾನು, ನನಗೆ ತಕ್ಕವನಾದ ಹೊಸ ದಂಡನಾಯಕನನ್ನು, ಇಂದೆಯೇ — ಇದೇ ಸಭೆಯಲ್ಲಿಯೆ — ನಿಯಮಿಸಿಕೊಳ್ಳಬೇಕೆಂದು ಸಂಕಲ್ಪಿಸಿದ್ದೇನೆ.

(ಸಭೆಯಲ್ಲಿ ಪಿಸುಮಾತು, ಗುಣುಗುಣಾಟ ಕೇಳುವುದು)

ಈಶ್ವರ ನಾಯಕರೇ ಏಳಿರಿ! ಎದ್ದು ಬಂದು, ಬರಿಯುದಾಗಿ ಕುಳಿತಿರುವ ಈ ದಂಡನಾಯಕರ ಆಸನವನ್ನು ತಂಬಿದುದನ್ನಾಗಿ ಮಾಡಿರಿ!

ಈ :— ಮಹಾ ಪ್ರಭುಗಳ ಆಜ್ಞೆ (ಎದ್ದು ಆಸನದ ಕಡೆಗೆ ಹೋಗುತ್ತಿರುವಾಗ)

ರಾ. ಶೇ:— ಹುಂ! ಅಲ್ಲಿಯೇ ನಿಲ್ಲಿರಿ ನಾಯಕರೆ! ನರಸಿಂಹ ನಾಯಕರು ಬರುವವರೆಗೆ ಈ ಆಸನವು ಬರಿಯದಾಗಿರುವುದೇ ಕಲ್ಯಾಣಕಾರಿಯೆನಿಸೀತು! ದೊರೆಗಳೇ, ಸೂರ್ಯನ ಸ್ಥಳವನ್ನು ನಾನು ತುಂಬಿ ತೋರಿಸುವೆನೆಂದು, ಯಾವ ಗ್ರಹವು ಮುಂದುವರಿದು ಬಂದರೂ, ಇರುಳನ್ನು ಹಗಲನ್ನಾಗಿಸಲಾರವು! ಹಾಗೆಯೆ, ಸಾಳುವ ನರಸಿಂಹ ನಾಯಕರ ಹೊರತು ಇನ್ನಾರಲ್ಲಿಯೂ ಈ ಆಸನವನ್ನು ಅಲಂಕರಿಸುವ ಸಾಮರ್ಥ್ಯವಿರಲಾರದು!

(ಸಭೆಯಲ್ಲಿ ಗುಣುಗುಣಾಟ ಎದ್ದು ಅಡಗುತ್ತಿರುವಾಗಲೇ)

ಪೆ. ರಾ:— ಬನ್ನಿ ಈಶ್ವರ ನಾಯಕರೇ! ತಡೆದದ್ದೇನಿಂತಿರೇಕೆ? ಸಮ್ರಾಟನು ನಾನು! ದಂಡನಾಯಕನನ್ನು ನಿಯಮಿಸಿಕೊಳ್ಳುವ ಅಧಿಕಾರ ನನ್ನದು! ಇನ್ನಾರ ಮಾತುಗಳಿಗೂ ಇಲ್ಲಿ ಬೆಲೆ ದೊರೆಯಲಾರದು!

ರಾ. ಶೇ:— (ಆವೇಶಗೊಂಡವನಾಗಿ) ಪೆದ್ದರಾಯಾ, ಈಗ ಗಳಿಗೆಯ ಹಿಂದೆ ನೀನು ಸಮ್ರಾಟನಾಗಿ ಇರಲಿಲ್ಲ; ಬರಿ ಪೆದ್ದರಾಯನಾಗಿಯೇ ಇದ್ದೆ. ಸಾಮ್ರಾಜ್ಯದ ಪ್ರಜೆಗಳೆಲ್ಲರೂ ಒಪ್ಪಿ, ಸಮ್ರಾಟನನ್ನಾಗಿ ಮಾಡಿದ್ದಾರೆ. ಅವರೆಲ್ಲರ ಅಭಿಪ್ರಾಯವನ್ನು ಕೇಳದೆ ದಂಡನಾಯಕರ ಆಯ್ಕೆಯು ಆಗಲೇಕೂಡದು!

ಪೆ. ರಾ:— (ಬಿಂಕ-ಕಿನಿಸು—ತಿರಸ್ಕಾರಗಳಿಂದ ಕೂಡಿ) ದೊರೆಯೆಂದು ಒಪ್ಪಿದವರು, ದೊರೆಯ ಮಾತ್ಸರ್ಯವನ್ನು ಒಪ್ಪಿಯೇ ಒಪ್ಪುವರು, ನಡುವೆ ನಿರರ್ಥಕವಾದ ಮಾತುಗಳನ್ನು ಯಾರೂ ಆಡಕೂಡದು. ಬನ್ನಿ ಈಶ್ವರ ನಾಯಕರೆ! ನಿಮ್ಮ ಆಸನದಲ್ಲಿ ಕುಳಿತುಕೊಳ್ಳಿರಿ!

(ಸಭೆಯಲ್ಲಿ ಎಡಬಿಡದೆ ಗುಣುಗುಣಾಟವೇಳುವುದು)

ರಾ. ಶೇ:— ನಾನು ಓಲಗದಲ್ಲಿ ಇದ್ದುಕೊಂಡು, ಈ ಅಧರ್ಮದ ದೃಶ್ಯವನ್ನು ನೋಡಲಾರೆ!

ಪೆ. ರಾ:— (ರೊಚ್ಚಿನಿಂದ) ನೋಡಲಾರದವರು ಸುಮ್ಮನೆ ಎದ್ದು ಹೊರಗೆ ಹೋದರೆ ಒಳ್ಳೆಯದು!

ರಾ. ಶೇ:— ಸರಿ! ನಾನೀಗ ಹೊರಟು ಹೋಗುತ್ತೇನೆ. ಹೋಗುವ ಮೊದಲು ಇನ್ನೊಂದು ಸಲ ಎಚ್ಚರ ಕೊಡುತ್ತೇನೆ : ಒಬ್ಬ ಕುರುಡ ಇನ್ನೊಬ್ಬ ಕುರುಡನಿಗೆ ದಾರಿಯನ್ನೆಂದೂ ತೋರಿಸಲಾರ, ಇಬ್ಬರೂ ಸೇರಿ, ದಾರಿತಪ್ಪಿ ಹಳ್ಳದಲ್ಲಿಯೋ ಕೊಳ್ಳದಲ್ಲಿಯೋ ಬೀಳಬಹುದು! ಜಾಗ್ರತೆ, ಪೆದ್ದಣ್ಣಾ ಜಾಗ್ರತೆ! ಇದೋ ನಾನೀಗ ಹೊರಟೆ. (ಬಿರುಸಾಗಿ ಹೆಜ್ಜೆಯಿಕ್ಕುತ್ತ ಹೊರಡುವನು. ಸಭೆಯಲ್ಲೆಲ್ಲ ಗದ್ದಲವೇಳುವುದು.)

(ಮುಂದುವರಿಯುವುದು)

ಶಾಂತಿಸೇವಾಸದನದ ಹೊಸ ಪ್ರಕಟಣೆಗಳು

ಜೈನಧರ್ಮ ಶ್ರೀ. ಮಿರ್ಜಿ ಅಣ್ಣಾರಾಯರು	೧೫–೦–೦
ಹಾಲು–ಹಣ್ಣು (ಕವನ ಸಂಗ್ರಹ) ಶ್ರೀ. ಭುಜೇಂಪ್ರ ಮಹಿಷವಾಡಿ	೧–೮–೦
ಮೂಲಶಿಕ್ಷಣದ ಮೌಲ್ಯಮಾಪಣ ಶ್ರೀ. ಮಿರ್ಜಿ ಅಣ್ಣಾರಾಯರು	೦–೧೨–೦
ಬಾಳ–ಬಂಡಿ (ಕವನ ಸಂಗ್ರಹ) ಶ್ರೀ. ಬಾಳು ಬಿ. ಉಪಾಧ್ಯೆ	೦–೮–೦
ಭರತೇಶನ ನಾಲ್ಕು ಚಿತ್ರಗಳು ಶ್ರೀ. ಮಿರ್ಜಿ ಅಣ್ಣಾರಾಯರು	೧–೪–೦

ಅಚ್ಚಿನಲ್ಲಿ :

ಸಂಸ್ಕೃತಿಯ ಹೃದಯ

ಭಾರತದ ಬೆಳಕು

ಪ್ರತಿಗಳಿಗಾಗಿ ಬರೆಯಿರಿ :

ಶಾಂತಿ ಸೇವಾಸದನ, ಸೇಡಬಾಳ

ಪೋ. ಸೇಡಬಾಳ (ಜಿಲ್ಲಾ ಬೆಳಗಾವಿ)

ಅತೀಂದ್ರಿಯಗೋಚರತೆ ಹಾಗೂ ಸ್ವಪ್ನಗಳು

(ಮನೋವೈಜ್ಞಾನಿಕ ಭಾಷಣ)

ಪ್ರೊ. ಎಸ್. ಕೆ. ರಾಮಚಂದ್ರರಾವ್, ಧಾರವಾಡ

ಸ್ವಪ್ನವಿಜ್ಞಾನದ ವಿಚಾರ ಇನ್ನೂ ಸ್ವಪ್ನಪ್ರಾಯವೇ ಆಗಿದೆ. ಮನೋವಿಜ್ಞಾನಿಗಳು ಸ್ವಪ್ನತತ್ತ್ವವನ್ನು ತಿಳಿದುಕೊಳ್ಳಬೇಕೆಂದು ಎಷ್ಟೆಷ್ಟೋ ಸಂಶೋಧನೆಗಳನ್ನು ನಡೆಸಿದ್ದಾರೆ; ನಡೆಸುತ್ತಿದ್ದಾರೆ. ಆದರೆ ಅವರು ಹೇಳುವ ಸಿದ್ಧಾಂತವಚನಗಳಲ್ಲಿ ಏಕವಾಕ್ಯತೆಯಿಲ್ಲ. ಈ ವಿಷಯದ ಸಂಶೋಧನೆ ಇನ್ನೂ ನಡೆಯಲೇ ಬೇಕಾಗಿದೆ.

ವಿಜ್ಞಾನ ಇಡಿ ವಿಶ್ವವನ್ನು ನೈಜ—ಎಂದರೆ ಪಂಚೇಂದ್ರಿಯಗೋಚರವಾದ ವಸ್ತುಗಳು, ಸಂಭವಗಳು ಮತ್ತು ಪಂಚೇಂದ್ರಿಯಗಳ ವ್ಯಾಪ್ತಿಗೆ ಮೀರಿದ ಸಂಭವಗಳು–ಎಂದರೆ ಭೂತಚೇಷ್ಟೆ ಯೋಗಶಕ್ತಿ, ಮರಣಾನಂತರದ ಪ್ರೇತಜೀವನ ಮುಂತಾದ ಅತೀಂದ್ರಿಯವಾದ—ಎಂದು ವಿಭಾಗಮಾಡಿದೆ. ಸಾಮಾನ್ಯವಾಗಿ ವ್ಯವಹಾರಗಳೆಲ್ಲ ಮೊದಲ ಬಗೆಯವೇ. ಒಬ್ಬ ಮಾತನಾಡಿದುದನ್ನು ಕೇಳಿ ಅಥವಾ ಅಂಗಚೇಷ್ಟೆ ಮುಖವಿಕಾರಗಳನ್ನು ನೋಡಿ, ಅವನ ಮನಸ್ಸಿನಲ್ಲಿ ಏನಿದೆ ಎಂದು ಇನ್ನೊಬ್ಬ ಗ್ರಹಿಸುತ್ತಾನೆ. ದೂರದಿಂದ ಏನೋ ಆತಂಕ ಬರುತ್ತಿರುವುದನ್ನು ನೋಡಿದರೆ, ಅದರಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತೇವೆ, ಸಾಧ್ಯವಾಗದಿದ್ದರೆ 'ಅವಾಯ ತಪ್ಪಿದ್ದಲ್ಲ' ಎಂದು ನಿರ್ಧಾರ ಮಾಡಿಕೊಳ್ಳುತ್ತೇವೆ. ಇವೆಲ್ಲ ಇಂದ್ರಿಯಬದ್ಧವಾದ ವ್ಯಾಪಾರಗಳು. ನಮ್ಮ ಹೊರಗಡೆಯ ಭೌತವಾದ ಸ್ಥೂಲವಾದ ಘಟನೆಗಳಿಂದ ಇಂದ್ರಿಯ ಪ್ರಚೋದಿತವಾಗಿ ಮನಸ್ಸು ಆರಿಯುತ್ತದೆ.

ಕೆಲವು ವೇಳೆ, ಹೊರಗಡೆಯ ಘಟನೆ ಇಲ್ಲದೆಯೇ ಇಂದ್ರಿಯವ್ಯಾಪಾರ ಇಲ್ಲದೆಯೇ ಮನಸ್ಸು ಆರಿಯುತ್ತದೆ. ಒಂದು ಮನಸ್ಸು ಇನ್ನೊಂದು ಮನಸ್ಸಿನ ವ್ಯಾಪಾರವನ್ನು ಮಾತು ಅಥವಾ ಕ್ರಿಯೆ ಮುಂತಾದ ಭೌತಿಕಸಾಧನೆ ಇಲ್ಲದೆ ಹಾಗೆಯೇ ಅರಿತರೆ, ಎಂದರೆ ಎರಡು ಮನಸ್ಸುಗಳಿಗೆ ಸಂಯೋಗ ಉಂಟಾದರೆ, ಅದಕ್ಕೆ ಇಂಗ್ಲೀಷಿನಲ್ಲಿ Telepathy ಎನ್ನುತ್ತಾರೆ. ಇದು ಅತೀಂದ್ರಿಯಗೋಚರ. ಇಂಥದನ್ನು ವಿಜ್ಞಾನಿಗಳು ಬಹುತೇಕ ಸುಳ್ಳೆಂದರೂ, ಇದರ ಅನ್ವೇಷಣೆಗಾಗಿ ವಿಚಾರವಿನಿಮಯಕ್ಕಾಗಿ Society for Psychical Research ಮುಂತಾದ ಸಂಸ್ಥೆಗಳು ಪ್ರಯುಕ್ತವಾಗಿವೆ.

ಪ್ರಪಂಚದ ಎಲ್ಲ ವ್ಯವಹಾರಗಳಲ್ಲೂ ಈ ಎರಡು ರೂಪಗಳನ್ನು ಕಾಣಬಹುದು: ಸಾಮಾನ್ಯ ಅಥವಾ ಸ್ವಾಭಾವಿಕ, ಮತ್ತು ಅತಿರೇಕ ಅಥವಾ ಅತೀಂದ್ರಿಯ. ಸ್ವಪ್ನಪ್ರಪಂಚದಲ್ಲೂ ಹಾಗೆಯೆ. ಸ್ವಪ್ನವೆಂದರೆ ನಮ್ಮಲ್ಲಿ ಭ್ರಾಂತಿ ಎಂಬುದಕ್ಕೆ ಪರ್ಯಾಯಪದ. ಜಾಗ್ರತಾವಸ್ಥೆಯಲ್ಲಿ ಪಂಚೇಂದ್ರಿಯಗಳ ವ್ಯಾಪಾರ ಇದ್ದಾಗ ನಮಗೆ ಆಗುವ ಪ್ರಪಂಚದ ಅನುಭವ ಯಥಾರ್ಥವಾದದ್ದು. ನಿದ್ರೆಯಲ್ಲಿ ಪಂಚೇಂದ್ರಿಯಗಳು ವಿಕಲವಾಗಿದ್ದಾಗ ಆಗುವ ಅನುಭವ ಕಾಲ್ಪನಿಕ—ಎಂದು ನಮ್ಮ ಎಣಿಕೆ. ಶರೀರದಲ್ಲಿ ಸ್ವಾಸ್ಥ್ಯ ತಪ್ಪಿದಾಗ, ಆಯಾಸ ಅಥವಾ ಉದ್ವೇಗ ಆಗಿದ್ದಾಗ, ನಿದ್ರೆಯಲ್ಲಿ ಮನಸ್ಸು ವಿಚಿತ್ರವಾಗಿ ರೂಪಕಲ್ಪನೆ ಮಾಡುತ್ತದೆ; ಅಥವಾ ನಡೆದ ಸಂಗತಿಯನ್ನೇ ಬಣ್ಣ ಬಣ್ಣವಾಗಿ ಚಿತ್ರಿಸಿಕೊಳ್ಳುತ್ತದೆ. ಆದರೆ ಸ್ವಪ್ನಕ್ಕೆ ನಿಜವಾದ ಅರ್ಥವಿಲ್ಲವೆಂದು ಸಾಮಾನ್ಯವಾಗಿ ಪ್ರತೀತಿ. ಫ್ರಾಯ್ಡ್ ಮುಂತಾದ ಮನೋವಿಶ್ಲೇಷಣಕಾರರು—ಸ್ವಪ್ನಕ್ಕೆ ಸಾಂಕೇತಿಕ ಅರ್ಥವಿದೆ; ನಿದ್ರೆಯಲ್ಲಿ ಇಂದ್ರಿಯ ವಿರತಿಯಾಗಿ ಬಾಹ್ಯ ಪ್ರಪಂಚದೊಂದಿಗೆ ಸಂಬಂಧ ತಪ್ಪಿದಾಗ, ಸುಪ್ತಚೇತನದ ಕಾಮನೆಗಳೆಲ್ಲ ಎದ್ದು ನಾಟಕವಾಡುತ್ತವೆ—ಎಂದು ಹೇಳುತ್ತಾರೆ.

ಸ್ವಪ್ನಕ್ಕೆ ಮತ್ತೊಂದು ವಿಚಿತ್ರವಾದ ಅರ್ಥವಿದೆಯೆಂದು ಈಚೀಚೆಗೆ ತಿಳಿದುಬರುತ್ತಿದೆ. ಉದಾಹರಣೆಗೆಂದು ಈ ಸ್ವಪ್ನದ ವಿವರ ಕೇಳಿ : ಒಬ್ಬಾಕೆ ಚಿಕ್ಕಂದಿನಲ್ಲೇ ತಂದೆತಾಯಿ ತೀರಿಕೊಂಡುದರಿಂದ, ತನ್ನ ಸೋದರಮಾವನ ಬಳಿಯೇ ಬೆಳೆಯುತ್ತಿದ್ದಳು. ಇಬ್ಬರೂ ಹುಂಬ ಅನ್ಯೋನ್ಯವಾಗಿದ್ದರು. ಒಂದು ರಾತ್ರಿ-ಆಕೆಗೆ ಈ ರೀತಿ ಸ್ವಪ್ನವಾಯಿತು: ತನ್ನ ಸೋದರಮಾವನ ಮನೆಯ ಪರಾಂಡದಲ್ಲಿ ಕುಳಿತಿದ್ದಾಳೆ; ಹೊರಗೆ ಜೆನ್ನಾಗಿ ಬೆಳಕಿದೆ; ಗಿಡಗಳಲ್ಲಿ ಹೂ ಹಣ್ಣು ಸೊಂಪಾಗಿ ಬಿಟ್ಟಿವೆ; ಹೊರಗಡೆ ನೆಲದ ಮೇಲೆ ಮಂಜುಬಿದ್ದಿದೆ; ಅದರ ಮೇಲೆ ಮನೆಯಿಂದ ಸುಮಾರು ಒಂದು ಫರ್ಲಾಂಗು ದೂರದಲ್ಲಿ, ತನ್ನ ಸೋದರ ಮಾವನ ಮೃತದೇಹ ಕಾಲುದಾರಿಯೊಂದರ ಪಕ್ಕದಲ್ಲಿ ಬಿದ್ದಿದೆ. ಅವನು ಕರಿಯಬಣ್ಣದ ಕೈಮಗ್ಗದ ಉಲ್ಲನ್ ಸೂಟ್ ಹಾಕಿಕೊಂಡಿದ್ದಾನೆ; ಪಕ್ಕದಲ್ಲಿ ಅವನ ಕುದುರೆ ನಿಂತಿದೆ. ತುಸು ಹೊತ್ತಿನಲ್ಲಿ ಒಬ್ಬ ತೋಟಿ ಇನ್ನೊಬ್ಬ ಪರಿಚಾರಕ ಇಬ್ಬರೂ ಬಂದು, ಅವನ ದೇಹವನ್ನೆತ್ತಿ ಸಣ್ಣ ಹುಲ್ಲುಗಾಡಿಯೊಂದರ ಮೇಲೆ ಹಾಕಿಕೊಂಡು, ಕಷ್ಟದಿಂದ ಮನೆಯ ಮೆಟ್ಟಲುಪತ್ತಿಸಿ ಒಳಗೊಯ್ಯುತ್ತಾರೆ. ಇದಿಷ್ಟು ಆಕೆ ಸ್ವಪ್ನದಲ್ಲಿ ನೋಡಿದ್ದು—ಎರಡು ವರುಷಗಳ ಬಳಿಕ ಆಕೆಗೆ ಮತ್ತೆ ಅದೇ ಸ್ವಪ್ನ

ಆಯಿತು. ಅವೇ ವಿವರಗಳು. ಮತ್ತೆ ನಾಲ್ಕು ವರ್ಷಗಳ ತರುವಾಯ ಆಕೆ ಬೇರೊಂದು ಊರಿನಲ್ಲಿದ್ದಾಗ, ಅದೇ ವಿವರದ ಅದೇ ಸ್ವಪ್ನ ಆಯಿತು. ಇದಾದ ಕೆಲವು ದಿನಗಳಲ್ಲೇ ಆಕೆಯ ಸೋದರಮಾವ ಸತ್ತ ಸುದ್ದಿ ಬಂತು. ವಿಚಾರಿಸಿದ್ದರಲ್ಲಿ—ಆಕೆ ಸ್ವಪ್ನದಲ್ಲಿ ಕಂಡ ವಿವರಗಳೆಲ್ಲಾ ಚಾಚೂ ತಪ್ಪದೆ ಅವನ ಮರಣ ಸಂಭವಿಸಿದ್ದು ತಿಳಿಯಿತು.

ಇಂಥ ಭವಿಷ್ಯಸೂಚಕವಾದ ಅನೇಕ ಸ್ವಪ್ನಗಳು ನಿಖರವಾಗಿ ವರದಿಯಾಗಿವೆ. ಇವುಗಳಲ್ಲಿ ಸಂಭವಿಸಲಿರುವ ಸಂಗತಿಗಳ ಪೂರ್ವ-ಜ್ಞಾನ (Fore-knowledge)ವನ್ನು ನಮ್ಮ ಜಾಗೃತ ಜೀವನ ಎಂದರೆ consciousness ಗೆ ಒದಗಿಸುವುದು ಕಂಡುಬರುತ್ತದೆ. ಈಗ ಹೇಳಿದ ಸ್ವಪ್ನದಲ್ಲಿ ಮುಂದೆ ಆಗುವ ಪ್ರಸಂಗ ತದ್ವತ್ ಆಗಿ ನಿರೂಪಿತವಾಗಿದೆ. ಆದರೆ ಎಲ್ಲ ಸ್ವಪ್ನಗಳಲ್ಲೂ ಹೀಗೆಯೇ ಆಗುವುದಿಲ್ಲ. ಕಲೆಗಾರನ ಸೃಷ್ಟಿಯಂತೆ ಸ್ವಪ್ನದ ವಿವರಗಳು ತುಂಬ ನಾಟಕೀಯವಾಗಿದ್ದು, ಭವಿಷ್ಯತ್ತಿನ ಜ್ಞಾನದ ಸಾಂಕೇತಿಕವಾದ ಅರ್ಥ (symbolic import)ವನ್ನು ಮಾತ್ರ ಹೇಳಬಹುದು. ಸ್ವಪ್ನದ ವಸ್ತುವಿಗೆ ಮನಸ್ಸಿನ ಸಾಮಗ್ರಿಗಳನ್ನು ಜೋಡಿಸುವಾಗ ಭವಿಷ್ಯತ್ತಿನ ನಿರೂಪಣೆ ವಿಕಾರ ಹೊಂದಬಹುದು.

ಈ ಸ್ವಪ್ನ ಅದಕ್ಕೆ ಉದಾಹರಣೆ :— ಒಬ್ಬಾಕೆ ಒಂದು ರಾತ್ರಿ ಹೀಗೆ ಸ್ವಪ್ನ ಕಂಡಳು. ಯಾವುದೋ ರೈಲ್ವೇಯಲ್ಲಿ ಈಕೆ ಕೆಲವು ಸ್ನೇಹಿತರೊಂದಿಗೆ ಮಾತನಾಡುತ್ತ ನಿಂತಿದ್ದಾಳೆ; ಆಗ ಇದ್ದಕ್ಕಿದ್ದಂತೆ ಆಕೆಯ ಪರಿಚಯದ ಒಬ್ಬಾತ (ರಾಮಯ್ಯ ಎನ್ನೋಣ) ನುರಿದು ಬಿದ್ದ ಮನೆಯೊಂದರ ನೆಲ ಮಾಳಿಗೆಯಲ್ಲಿ ಕೂತಂತೆ ಕಂಡಿತು. ಆಕೆ ಅವನನ್ನು ನೋಡಿ—'ಈ ಮನೆಯನ್ನು ನೋಡಿದರೆ ಜೈಲಿನ ನೆನಪಾಗುತ್ತದೆ—' ಎನ್ನುತ್ತಾಳೆ. ಆಗ ಯಾರೋ ಮೇ ಹತ್ತನೆಯ ತಾರೀಖಿನ ವಿಚಾರ ಮಾತನಾಡುತ್ತಾರೆ. ಇದು ಸ್ವಪ್ನ; ಆದರೆ ಸ್ವಪ್ನವಾದ ನಾಲ್ಕುವರ್ಷಗಳಿಗೆ ಮೇ ಹತ್ತನೆಯ ತಾರೀಖು ಸರಿಯಾಗಿ, ಆ ರಾಮಯ್ಯನ ಮನೆ ಆಕಸ್ಮಿಕ ಅನಾಹುತಕ್ಕೆ ಸಿಕ್ಕಿ ಮುರಿದು ಬೀಳುತ್ತದೆ; ರಾಮಯ್ಯನೇನೋ ಆಗ ಮನೆಯ ಒಳಗಿರಲಿಲ್ಲ.

ಇಂಥ ಸ್ವಪ್ನಗಳಲ್ಲಿ ವಿವರದ ವಿಕಾರ ಇದೆ, ಆದರೆ ಸಾಂಕೇತಿಕ ಅರ್ಥ ನಿರ್ದಿಷ್ಟವಾಗಿದೆ. ಹೀಗೆ ಮುಂದೆ ಎಂದೋ ಬರುವ ಪ್ರಸಂಗಗಳ ಜ್ಞಾನ ಈಗಲೇ ಬರುವುದು ಹೇಗೆ? ಈ ಪ್ರಶ್ನೆಗೆ ಸಮಂಜಸವಾದ ಉತ್ತರ ಇನ್ನೂ ಸಿಕ್ಕಿಲ್ಲ. ನಮ್ಮ ಮನಸ್ಸೇ ಭವಿಷ್ಯತ್ಕಾಲದಲ್ಲಿ ಪ್ರಯಾಣ ಮಾಡುತ್ತದೆ—ಎನ್ನುವ ಹಾಗಿಲ್ಲ; ಅಥವಾ ಈಗಿನ ಪ್ರಸಂಗಗಳ ಆಧಾರದ ಮೇಲೆ ಭವಿಷ್ಯತ್ತನ್ನು ಊಹಿಸುತ್ತೇವೆ—ಎನ್ನುವಹಾಗಿಲ್ಲ; ಅಥವಾ ಮನಸ್ಸಿನ ಉದ್ವೇಗದಿಂದ ಹೀಗೆ ಸ್ವಪ್ನ ಆಗಿ ಕಾರಕಶಾಳೀಯ ನ್ಯಾಯದಿಂದ ಅದು ಫಲವಾಗುತ್ತದೆ ಎನ್ನುವಹಾಗಿಲ್ಲ. F. W. H. Myers ಎಂಬಾತ ಹೀಗೆ ಹೇಳುತ್ತಾನೆ: ಮನುಷ್ಯನ ವ್ಯಕ್ತಿತ್ವ ಎಂದರೆ Personalityಯಲ್ಲಿ ಜಾಗೃತ ಜೀವನ ಎಂದರೆ Consciousness ಬಹು ಸ್ವಲ್ಪ ಭಾಗ; ಅದು ಮೇಲೆ ಕಾಣಿಸಿಕೊಳ್ಳುವ ಭಾಗ; ಆದರೆ ಅದರ ಕೆಳಗೆ, ಅಥವಾ ಅದರ ಮೇರೆಯ ಆಚೆ ವ್ಯಕ್ತಿತ್ವದ ಬಹುಭಾಗ ಅಡಗಿದೆ; ಇದನ್ನು Subliminal self ಎನ್ನುತ್ತಾರೆ. ಇದು ಕಾಲಾತೀತವಾದದ್ದು; ಅಥವಾ ಇದಕ್ಕೆ ನಮ್ಮ ಸಾಮಾನ್ಯವಾದ ಭೂತ-ಭವಿಷ್ಯದ್ವರ್ತಮಾನದ ಕಾಲಗಣನೆ ಇಲ್ಲ. ಹಿಂದೆ—ಈಗ—ಮುಂದೆ ಇವೆಲ್ಲ ನಾವು ನಮ್ಮ ಅನುಕೂಲಕ್ಕೆ ಮಾಡಿಕೊಂಡ ಸಂಪ್ರದಾಯ. ವಸ್ತುತಃ ಕಾಲ ಎನ್ನುವುದು ಪ್ರಸಂಗಗಳ ಅವಿರತ ಸಂತತಿ— Continued succession of events. ನಾವು ಎಚ್ಚರವಾಗಿದ್ದಾಗ ನಮಗೆ ಪ್ರಸಂಗಗಳ ಅರಿವಾಗುವುದಿಲ್ಲ. ಪ್ರಸಂಗಗಳ ಅನುಭವದ ಅರಿವಾಗುತ್ತದೆ. ಇದು ಜಾಗೃತ ಜೀವನ (Consciousness)ದ ಸಮಾಚಾರ. Subliminal selfನಲ್ಲಿ ಕೆಲವರಿಗೆ ಮುಂದೆ ಬರುವ ಪ್ರಸಂಗಗಳ ಅನುಭವದ ಅರಿವು ಸ್ವಪ್ನದಲ್ಲಿ ಈಗಲೇ ಆಗಬಹುದು; ಅದರಲ್ಲಿ ಅಸಂಬದ್ಧವಾದದ್ದು ಏನಿಲ್ಲ. ಏಕೆಂದರೆ ಜಾಗೃತ ಜೀವನಕ್ಕಿಂತ ಸುಪ್ತಜೀವನದ ದೃಷ್ಟಿಯ ವ್ಯಾಪ್ತಿ ಹೆಚ್ಚು. ನಮ್ಮಲ್ಲಿ ಕೆಲವರ ದೃಷ್ಟಿ ಪಾಟವ ಚೆನ್ನಾಗಿದ್ದು, ಅವರು ದೂರದಲ್ಲಿರುವ ವಸ್ತುಗಳನ್ನು ಸ್ಪುಟವಾಗಿ ನೋಡುವುದಿಲ್ಲವೆ? ನಾವು ಹತ್ತಿರ ಹೋದರೆ ಮಾತ್ರ ಕಾಣುವ ವಸ್ತುಗಳು ಅವರಿಗೆ ದೂರದಲ್ಲಿಯೇ ಕಾಣುತ್ತವೆ. ಹಾಗೆಯೇ ಸುಪ್ತಜೀವನದಲ್ಲಿ ಕೂಡ ಕೆಲವರಿಗೆ ದೂರದೃಷ್ಟಿ ಇರುತ್ತದೆ. ಈ ದೃಷ್ಟಿ ಕೆಲಸಮಾತಲು ಅವಶಕಾಶ ಯಾವಾಗ? ಜಾಗೃತ ಜೀವನ ಕೆಲಸ ಮಾಡದಿದ್ದಾಗ—ಎಂದರೆ ಸ್ವಪ್ನದಲ್ಲಿ. ಇಷ್ಟು ಭವಿಷ್ಯಸೂಚಕ ಸ್ವಪ್ನಗಳ ಮಾತಾಯಿತು. ಇನ್ನು ಕೆಲವು ಸ್ವಪ್ನಗಳು ದೂರದಲ್ಲಿ ಎಲ್ಲೋ ನಡೆಯುತ್ತಿರುವ ಪ್ರಸಂಗಗಳನ್ನು ಚಿತ್ರಿಸುತ್ತವೆ. ಕಳೆದ ಮಹಾಯುದ್ಧದಲ್ಲಿ ಫಿಲಡೆಲ್ಫಿಯಾದ

ಬಡತನದ ಬಾಳು

(ಕಥಾಸಂಕಲನ)

ಬರೆದವರು : 'ಆನಂದಕಂದ'

ಇದರಲ್ಲಿಯ ಒಂದೊಂದು ಕಥೆಯೂ ನಮ್ಮ ಜನಜೀವನದ ವಾಸ್ತವಚಿತ್ರ. ವಾಸ್ತವದಲ್ಲಿಯೆ ಸಾಹಿತ್ಯಕಸೌಂದರ್ಯವನ್ನು ಸಹಜವಾಗಿ ಹೇಗೆ ತುಂಬಬಹುದೆಂಬುದಕ್ಕೆ ಇದರಲ್ಲಿಯ ಕಥೆಗಳು ಒಳ್ಳೆಯ ಮಾದರಿಗಳಾಗಿವೆ.

ಕ್ರೌ. ಆ. ೧೨೦ ಪುಟಗಳು. ಬೆಲೆ ೧-೪-೦

'ಜಯಂತಿ' ಕಾರ್ಯಾಲಯ, ಧಾರವಾಡ

ಹೆಂಗಸೊಬ್ಬಳಿಗೆ ಹೀಗೆ ಸ್ವಪ್ನ ಆಯಿತು:—(ಅವಳ ಮಗ ನೌಕಾಪಡೆಯಲ್ಲಿದ್ದ)— ಸ್ವಪ್ನದಲ್ಲಿ ಎಸ್. ಎಸ್. ಓರಿಗಾನ್ ಎಂಬ ಹಡಗು ನಂಟುಕಟ್ ಎಂಬಲ್ಲಿ ಬಿರುಗಾಳಿಗೆ ಸಿಕ್ಕಿ ಮುಳುಗಿದಂತೆ, ಅವಳ ಮಗ ಮತ್ತೆ ಕೆಲವು ಸಂಗಾತಿಗಳೊಂದಿಗೆ ಒಂದು ಮರದ ದಿಮ್ಮಿಯನ್ನು ಹಿಡಿದು, ತುಂಬಾ ಪ್ರಯಾಸದಿಂದ ದಡ ಮುಟ್ಟಿದಂತೆ ಸ್ವಪ್ನವಾಯಿತು. ಮರುದಿನ ನೇಪರುಗಳಲ್ಲಿ, ಅದೇ ಹಡಗು ಬಿರುಗಾಳಿಗೆ ಸಿಕ್ಕಿ ಅದೇ ಜಾಗದಲ್ಲಿ ಮುಳುಗಿತೆಂದೂ ಆಕೆಯ ಮಗ ಮತ್ತೆ ಕೆಲವರೊಂದಿಗೆ ಬದುಕಿ ಬಂದನೆಂದೂ ವರದಿಯಾಗಿತ್ತು. ಹೀಗೆ ಅತೀಂದ್ರಿಯವಾಗಿ ಸುಪ್ತ ಚೇತನಕ್ಕೆ ವರ್ತಮಾನ ಕಾಲದಲ್ಲೇ — ಎಲ್ಲೋ ಆಗುತ್ತಿರುವ — ಸಂಗತಿಯ ಸ್ಪಷ್ಟಚಿತ್ರಣ ಸಾಧ್ಯವಾಗುತ್ತದೆ. ಆದರೆ ಎಚ್ಚರವಾಗಿದ್ದಾಗ ಜಾಗೃತ ಚೇತನಕ್ಕೆ ಇದು ಅಸಾಧ್ಯ.

ಇನ್ನು ಕೆಲವು ವೇಳೆ ಪರಸ್ಪರ ಪೂರಕ ಸ್ವಪ್ನಗಳು (reciprocal dreams) ಬೀಳುತ್ತಿರುವಂತೆ ವರದಿಯಾಗಿವೆ. ರಾಮ ಭೀಮ ಇಬ್ಬರೂ ಪರಸ್ಪರ ಅಪರಿಚಿತರು; ಇಬ್ಬರಿಗೂ ಒಂದೇ ವೇಳೆಯಲ್ಲಿ ಒಂದೇ ವಸ್ತುವಿನ ಸ್ವಪ್ನ ಬೀಳುತ್ತದೆ. ರಾಮನ ಸ್ವಪ್ನ ಎಲ್ಲೋ ಕಾಡಿನಲ್ಲಿ ಹೋಗುತ್ತಿದ್ದಹಾಗೆ, ಏನೋ ಶಬ್ದ ಕೇಳಿ ಹೆದರಿದಹಾಗೆ, ದೂರದಿಂದ ಯಾರೋ ಬಂದು ಹತ್ತಿರದ ಮರವನ್ನು ಅಲ್ಲಾಡಿಸಿದಂತೆ, ಅದರಿಂದ ಎಲೆಗಳು ಬಿದ್ದಹಾಗೆ. ಇತ್ತ ಭೀಮನಿಗೆ—ಯಾರೋ ಒಬ್ಬಾತ ಬಂದು ಕಾಡಿನಲ್ಲಿ ಹೋಗುತ್ತಿದ್ದ ಹಾಗೆ, ತಾನು ಹೋಗಿ ಹತ್ತಿರದ ಮರವನ್ನು ಅಲ್ಲಾಡಿಸಿದ ಹಾಗೆ, ಅದರಿಂದ ಎಲೆಗಳು ಬಿದ್ದ ಹಾಗೆ ಸ್ವಪ್ನವಾಗುತ್ತದೆ. ಇಂಥ ಸ್ವಪ್ನಕ್ಕೆ ಪರಸ್ಪರಪೂರಕಸ್ವಪ್ನ ಎಂದು ಹೆಸರು. ಈ ಸ್ವಪ್ನದಲ್ಲಿ ಕಂಡಂತೆ ಪ್ರಸಂಗಗಳು ನಿಜವಾಗಿ ನಡೆಯಬೇಕೆಂಬ ನಿಯಮ ಏನಿಲ್ಲ; ಆದರೆ ಈ ಇಬ್ಬರು ವ್ಯಕ್ತಿಗಳೂ Subliminal self ನಲ್ಲಿ ಪರಸ್ಪರವಾಗಿ ಭೇಟಿಯಾಗಬೇಕಾಗುವುದು. ಇಂತಹ ಸ್ವಪ್ನಗಳು ತುಂಬ ಅಪರೂಪ.

ಇನ್ನೂ ಒಂದು ಜಾತಿಯ ಸ್ವಪ್ನ: ಬ್ರೈಟನ್ ಎಂಬಾತ ಒಬ್ಬ ತನ್ನ ದೋಣಿಯನ್ನು ಬಂದರಿಗೆ ಕಟ್ಟಿ ದೋಣಿಯಲ್ಲೇ ನಿದ್ರೆಮಾಡುತ್ತಿದ್ದ. ಅವನಿಗೆ ಒಂದು ಸ್ವಪ್ನವಾಯಿತು—ಹಡಗೊಂದು ಬಂದು ದಢಾರೆಂದು ತನ್ನ ದೋಣಿಗೆ ಢಿಕ್ಕಿ ಹೊಡೆದಂತೆ. ಬ್ರೈಟನ್ ಎದ್ದು ನೋಡಿದ, ನಿಶ್ಶಬ್ದವಾಗಿತ್ತು. ಆದರೆ ಮಂಜು ದಟ್ಟವಾಗಿ ಕವಿದಿತ್ತು. ಆತ ಮತ್ತೆ ಮಲಗಿ ನಿದ್ದೆಹೋದ. ತುಸು ಹೊತ್ತಿನಲ್ಲಿ ಮತ್ತೆ ಅದೇ ಸ್ವಪ್ನವಾಯಿತು. ಎಚ್ಚೆತ್ತ ಬ್ರೈಟನ್, ಗಾಬರಿಯಿಂದ ದೋಣಿಯ ಅಂಚಿಗೆ ಹೋಗಿ ಕಣ್ಣನ್ನು ಹಿಗ್ಗಿಸಿ ನೋಡಿದ:—ದೂರದಲ್ಲಿ ದೊಡ್ಡ ಹಡಗೊಂದು ರಭಸದಿಂದ ತನ್ನ ದೋಣಿಯ ದಿಕ್ಕಿನಲ್ಲೇ ನುಗ್ಗಿ ಬರುತ್ತಿರುವುದು ಕಾಣಿಸಿತು. ಬ್ರೈಟನ್ ಆಗ ಹಡಗಿನ ಕ್ಯಾಪ್ಟನ್‌ನನ್ನು ಕೂಗಿ, ಅನಾಹುತದಿಂದ ತಪ್ಪಿಸಿಕೊಂಡ. ಇಂಥ ಸ್ವಪ್ನಗಳು ಅನೇಕಾನೇಕ. ಇಂಥ ಸ್ವಪ್ನಗಳಿಗೆ ಸಮಂಜಸವಾದ ಅರ್ಥ ಹೇಳುವುದೂ ಕಷ್ಟವಿಲ್ಲ. ಹೊರಗಿನ ಪ್ರಸಂಗಗಳು ನಡೆಯುತ್ತಿದ್ದಾಗ ಅವುಗಳ ವೇದನೆ (ಎಂದರೆ Sensations) ಸುಪ್ತಚೇತನವನ್ನು ಮುಟ್ಟಿ ಅದರಿಂದ ಸ್ವಪ್ನನಾಟಕ ನಡೆಯಬಹುದು. ಜಾಗೃತಚೇತನಕ್ಕೆ ಆವಶ್ಯವಾದ ವಿಚಾರಗಳನ್ನು, ಸುಪ್ತಚೇತನ ತನಗೆ ಅರಿವಾದೊಡನೆ ಒದಗಿಸುತ್ತದೆ.



ಈ ಎಲ್ಲ ಜಾತಿಯ ಸ್ವಪ್ನಗಳೂ ಅತೀರೇಕದ ಸ್ವಪ್ನಗಳು—ಅತೀಂದ್ರಿಯ ಗೋಚರತೆಯ ಗುಂಪಿಗೆ ಸೇರಿದುವು. ಇವುಗಳಿಗೆ ಸಾಮಾನ್ಯವಾದ ಸ್ವಪ್ನವಿಶ್ಲೇಷಣಾಸೂತ್ರ ಸರಿಹೋಗುವುದಿಲ್ಲ. ಈ ಸ್ವಪ್ನಗಳಿಗೆ ಕಾರಣ ಹೇಳುವುದು ಕಷ್ಟ; ಈ ವಿಚಾರದಲ್ಲಿ ಅಗಾಧವಾದ ಸಂಶೋಧನೆ ನಡೆದಿದೆ—ನಡೆಯುತ್ತಿದೆ. ಸರಿಯಾದ ಸಿದ್ಧಾಂತ ಇನ್ನೂ ಲಬ್ಧವಾಗಿಲ್ಲ.

ಇಂಥ ಸ್ವಪ್ನಗಳು ಎಲ್ಲರಿಗೂ ಬೀಳುವುದಿಲ್ಲ; ಅಥವಾ ಸಾಮಾನ್ಯವಾಗಿ, ಹೆಚ್ಚಾಗಿ ಬೀಳುವುದಿಲ್ಲ ಸ್ವಪ್ನಕಂಡವರು ನಿಜವಾದ ಸ್ವಪ್ನದ ಎಲ್ಲ ವಿವರಗಳನ್ನೂ ಸರಿಯಾಗಿ ಹೇಳುತ್ತಾರೆಯೇ ಎಂಬುದನ್ನು ನಿರ್ಧಾರಮಾಡುವುದು ಕಷ್ಟ. ಎಷ್ಟರಮಟ್ಟಿಗೆ ಇವು ಕಾಕತಾಳೀಯವಾಗಿ ನಿಜವಾಗುತ್ತವೆ—ಎಂದೂ ಹೇಳಲಸಾಧ್ಯ.

ಈ ಎಲ್ಲ ಕಾರಣಗಳಿಂದ ಈ ಅತೀರೇಕಸ್ವಪ್ನಗಳ ವಿಮರ್ಶೆ ಸಮರ್ಪಕವಾಗಿ ನಡೆದಿಲ್ಲ. ಆದರೆ ಇಂತಹ ಸ್ವಪ್ನಗಳು ಅಸಂಭವ ಎಂದು ಹೇಳಲು ಬರುವುದಿಲ್ಲ. ನಾವು ಎಚ್ಚರವಾಗಿದ್ದಾಗಲೇ ಆಲೋಚಿಸಿ ನೋಡಿದರೆ, ಎಷ್ಟೋ ನಂಬಲಸಾಧ್ಯವಾದ ಅದ್ಭುತ ಸಂಗತಿಗಳು ನಡೆಯುತ್ತವೆ. ಇಂದ್ರಿಯಗಳ ಅಂಕುಶ ಇದ್ದಾಗಲೇ ಹೀಗೆ ನಡೆಯುವಾಗ, ಇಂದ್ರಿಯಗಳು ವಿರತವಾಗಿ ಮನಸ್ಸೇ ಪ್ರಧಾನವಾಗಿರುವಾಗ ಹೇಳುವುದೇನು? ಅಂತೂ ಈಚೆಗಿನ ಸಂಶೋಧನೆಗಳಿಂದ ಸ್ವಪ್ನಪ್ರಪಂಚದಲ್ಲಿ 'ಅಘಟಿತ ಘಟನೆಗಳು' ಎನ್ನುವಷ್ಟು ವಿಚಿತ್ರವ್ಯಾಪಾರಗಳು ನಮ್ಮ ದೃಷ್ಟಿಗೆ ಗೋಚರವಾಗುತ್ತವೆ.

ಕೆಳದಿಗೆ ಕರೆ

ಶ್ರೀ. ಮು. ಗು. ಬಿರಾದಾರ ಬಿ. ಎ. (ಆನರ್ಸ್) ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

೧

ನಾನಿಂದು ಹೊರಟಿಹೆನು ಕಾವ್ಯಲೋಕಕೆ ಕೆಳದಿ
ಬರುವೆಯೇ ನೀನೆನ್ನ ಜೊತೆಗೆ ?
ಸೊಬಗನಿತೊ-ಸೊಗವಿನಿತೊ ಏನು ಅರಿಯದಲಿರುವೆ,
ಅರುಹುವೆನು ನಾನಿನ್ನ ಮತಿಗೆ.

೨

ಜೊನ್ನ ಸೋನೆಯು ಧರೆಯ ತಪ್ಪನೇ ತೋಯಿಸಿದೆ
ಪೊನ್ನೀರ ತಳಿ ಹೊಡೆದ ಹಾಗೆ–
ಇರುಳಲಿಯು ನೂರುಗರಿಗಣ್ಣುಗಳ ತೆರೆತೆರೆದು
ಕೇಕೆಯಿಡುತಿವೆ ನವಿಲುಸೋಗೆ !

೩

ಎಲೆವಳ್ಳಿ ತೋಂಟಗಳು, ಬಳಿಯೊಳೇ ಬಾಳೆಬನ,
ಜುಳುಜುಳೆಂದುಲಿಯುತಿಹ ಹೊನಲು–
ತಳಿನೀರ ಕೊಳವಲ್ಲಿ ಅರಸಂಜೆ ಈಜುತಿವೆ,
ಬಳುಕಾಡುತಿವೆ ನಳಿನದರಳು.

೪

ಮೊಲ್ಲೆ ಜಾಜಿಯ ಜೊಂಪು, ಮೃದುಗುಲಾಬಿಯ ಪೆಂಪು
ನಿನ್ನ ಈ ಮುಡಿಸಿರಿಗೆ ನಲ್ಲೆ !
ಸಂಪಗೆಯು ಸೇವಂತಿ ಕಂಪಿಡುವ ಇರುವಂತಿ....
ಝೇಂಕರಿಪ ಅರಡಿಗಳಲ್ಲಿ.

೫

ನೀಲಗಗನಾಂಗಣದಿ ಕುರಿಗಾಹಿ ಚಂದ್ರಮನು
ನಾಗಿಹನು ಸಿಳ್ಳಿಡದೆ ಮುಂದೆ
ಬೆಣ್ಣೆಬಣ್ಣದ ಉಣ್ಣೆಗುರಿವಿಂಡು ನಾಗಿಹವು
ಚುಕ್ಕೆ ಹಿಕ್ಕೆಗಳಿಡುತ ಹಿಂದೆ.

೬

ಪಸಿಯೆ ನವರಸ ನಾರ; ಆಂಜೆದುಪ್ಪುಳ ಹಾಸು
ನಿದ್ರಿಸಲು ನಿಶ್ಚಿಂತೆಯಿಂದ—
ಆಟಕೆಳಗರುಕೆಹೊಲ ಬೇಂಟೆಗಿದೆ ಹೇರಡವಿ
ಮಿಗೆದುಂಬಿ ಮೃಗ-ವಿಹಗದಿಂದ

೭

ಹಜ್ಜೆ-ರತುನದ ನೆಲದಿ ಪೊಂದೇರು ನೆರೆದಂತೆ
ಪೂತಿರುವ ಮಾಮರಗಳಲ್ಲಿ
ಕತ್ತಲೆಯ ತತ್ತಿಗಳ ಜೊಲ್ಲಿಗಳು ಜೋತಂತೆ
ಕಾತಿರುವ ನೇರಳೆಗಳಲ್ಲಿ.

೮

ಕಲ್ಪನೆಯ ಕಡಲೀಸೆ ಭಾವಗಳ ಬೆಳ್ಳಿಗಿರಿ
ಕವಿ ಪ್ರತಿಭೆ ಬೆಳುದಿಂಗಳಲ್ಲಿ !
ಮಧುಹೂವು, ಮಧುರ ಜೇನ್, ವಧುನಿನಗೆ ವರನಾನು,
ಬೆಳ್ನೆನೆಯ ಲತೆ ಹಂದರಲ್ಲಿ !

೯

ಜಗವ ಜಂಜಡವಿಲ್ಲ; ಜವನ ಅಂಜಿಕೆಯಿಲ್ಲ.
ಹರೆ ಬರದ ಹರೆಯೆಮಗೆ ನಿತ್ಯ—
ಚಿರಶಾಂತಿ, ಸುರಸುಖದ ತವರುಮನೆಯೀಲೋಕ
ನಿರ್ಮಿಸಿಹ ಕವಿದೇವ ಸತ್ಯ !

೧೦

ನಾನಿಂದು ಹೊರಟಿಹೆನು ಕಾವ್ಯಲೋಕಕೆ ಕೆಳದಿ
ಅದರ ಸುಖಕಿನ್ನೊಂದು ಸಾಟಿಯಿಲ್ಲ....
ನೀನು ಸಹ ಆ ಲೋಕದಿರವನರಿತರೆ ನಮ್ಮ
ಬಾಳೆಲ್ಲವೂ ಸಿಹಿಯು ಜೋನಿಬೆಲ್ಲ !

ಮಬ್ಬು ಹರಿಯಿತು

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ

ಭಿನ್ನ ಭಿನ್ನ ಪ್ರಕೃತಿಯ ಎರಡು ಜೀವಗಳನ್ನು ಒಂದಾಗಿಸ್ಬುವುದು ದಾಂಪತ್ಯಸ್ರೇನು. ಪ್ರಕೃತಿಭಿನ್ನತೆಯ ಮೂಲಕ ದಾಂಪತ್ಯಜೀವನದಲ್ಲಿ ಜಗಳವೇಳುವುದು ಅಪಸಜವಲ್ಲ; ಆದರೆ ಗಂಡ-ಹೆಂಡಿರ ಜಗಳ ಗಂಧ ತೀಡಿದಂತೆ ಅಗಬೇಕಲ್ಲದೆ, ಬಂಡೆಗಲ್ಲಿರದರ ಕಾದಾಟವಾಗಬಾರದು!

ಬೆಳದಿಂಗಳು ಬೆಳ್ಳಗೆ ಹರಡಿತ್ತು.

ನಾನು ಜಗುಲಿಯ ಮೆಟ್ಟಿಲಿಳಿದು ತೆಂಗಿನ ಮರದ ಬಳಿ ನಿಂತು ಕೂಗಿದೆ: "ಅಕ್ಕಾ, ಬಾಗಿಲು ಹಾಕಿಕೋ, ಎತ್ತು ಎಲ್ಲಿದೆಯೋ ಹುಡುಕಿಕೊಂಡು ಬರ್ತೀನಿ."

ನಾನು ಅಕ್ಕನನ್ನುದ್ದೇಶಿಸಿ ಕೂಗಿದ್ದು ನೆಪಮಾತ್ರಕ್ಕೆ. ಅಕ್ಕ ಇಲ್ಲಿಯವರೆಗೂ ಎಚ್ಚರವಾಗಿಲ್ಲವೆಂದು ನನಗೆ ಗೊತ್ತು—ಹಳ್ಳಿಯಕಡೆ ಉಂಡು ಮಲಗದೆ, ಹತ್ತು-ಹನ್ನೊಂದು ಗಂಟೆಯವರೆಗೆ, ಹಗಲೆಲ್ಲಾ ದುಡಿವ ಅಕ್ಕನಂತಹ ಜೀವಿ, ಎಚ್ಚರವಾಗಿರುವುದುಂಟೇ?

ಲಚ್ಚಿಗೆ ಕೇಳಲೆಂದೇ ನಾನು ಹೇಳಿದ್ದು—ಲಚ್ಚಿಯೊಡನೆ ನೇರವಾಗಿ ಹೇಳುವಂತಿಲ್ಲವಲ್ಲಾ..... ...

ಆದರೂ ಒಮ್ಮೆ ತಿರುಗಿ ನೋಡಿದೆ. ಬಾಗಿಲಲ್ಲಿ ನಿಂತು ನೀರ್ಗಣ್ಣುಗಳಿಂದ ನನ್ನತ್ತಲೇ ನೋಡುತ್ತಿದ್ದಳು—ಲಚ್ಚಿ.

ದುಗುಡ ತುಂಬಿದ ಅವಳ ಮುಖ ಮೌನವಾಗಿ ಹೇಳುವಂತಿತ್ತು: "ಬೇಡ ಬೇಡ. ಈ ದಿನ ಹುಣ್ಣಿಮೆ. ಈಗ ಸರಿರಾತ್ರಿ. ಹೋಗಬೇಡ!"

ಆದರೆ ಅವಳ ಬಾಯಿಂದ ಒಂದೂ ಮಾತೂ ಬರಲಿಲ್ಲ. ತಡೆಬಡೆಯಿಲ್ಲದೆ ಹರಟುತ್ತಿದ್ದ ಅವಳ ಬಾಯಿಗೆ ಈಗ ಬೀಗಮುದ್ರೆ ಬಿದ್ದಿತ್ತು!

ನನಗೆ ಮಾದಕತೃಪ್ತಿಯಾಯಿತು — ಅವಳಿಗೆ ಮತ್ತೂ ನೋವಾಗಲೆಂದು ಮುಖ ಗಂಟಿಕ್ಕಿ, ಸರಸರನೆ ಹೆಜ್ಜೆ ಹಾಕಿದೆ.

ಲಚ್ಚಿ ಬಿಕ್ಕಿದ್ದು ಕೇಳಿಸಿತು. ಆದರೂ ನನಗೆ ಅವಳ ಮೇಲಿನ ಕೋಪ ಹೋಗಲಿಲ್ಲ. ಸಂತಾಪದಿಂದ ಸೆಟೆದುಕೊಂಡೇ ಮುಂದೆ ಹೋದೆ—ತಿರುಗಿನೋಡದೆ.

ನನಗೂ ಲಚ್ಚಿಗೂ ಯಾವುದೋ ಮಾತಿಗೆ ಜಗಳವಾಗಿತ್ತು. ನಾಲ್ಕು ದಿನಗಳಿಂದ ಲಚ್ಚಿಯೊಡನೆ ನಾನು ಮಾತನಾಡಿರಲಿಲ್ಲ. ನಾಲ್ಕು ದಿನ!—ನಾಲ್ಕು ಯುಗಗಳಂತೆ ಕಳೆದಿವೆ. ಅಬ್ಬಾ, ನಾನೆಷ್ಟು ಬವಣೆ ಪಟ್ಟೆದೇನೆ; ಎಷ್ಟು ಅಶಾಂತಿ-ಅಸಮಾಧಾನಗಳಿಂದ ಕುದಿದಿದ್ದೇನೆ!

ಅಶಾಂತಿ-ಅತೃಪ್ತಿಗಳು ಕುದಿಕುದಿದು ಹೆಪ್ಪುಗಟ್ಟಿ ಛಲವಾಗಿದೆ; ದ್ವೇಷವಾಗಿದೆ ನನ್ನೆದೆಯಲ್ಲಿ.

ನಮ್ಮ ನಲ್ಮೆಯ ಸಂಸಾರದಲ್ಲಿ ಇದೇ ನಮ್ಮ ಮೊದಲ ಕಲಹ—ಇಷ್ಟು ಹೆಚ್ಚುಕಾಲ ಮುಂದುವರಿದಿರುವ ಮೊದಲ ಕಲಹ

ಕಂಬಳಿಯನ್ನು ತಲೆತುಂಬಾ ಸುತ್ತಿಕೊಂಡು, ಮುಂದೆ ಮುಂದೆ ನಡೆದೆ. ಲಚ್ಚಿ!

ಥೂ. ಬೇಡವೆಂದು ನೂಕಿದರೂ ಅವಳ ನೆನಪು ಬಿಡದೆ ಕಾಡುವುದಲ್ಲಾ....ಲಚ್ಚಿ—

ಮನೆಯಲ್ಲಿ ತಂದಿದ್ದನ್ನು ತಿಂದು ಬಿದ್ದಿರಬೇಕಾದ ಹೊಗಸು—ಅವಳಿಗೇ ಇಷ್ಟುಹಮ್ಮು, ಇಷ್ಟು ಸೆಡವು ಇರಬೇಕಾದರೆ—ನನಗಿನ್ನೆಷ್ಟು ಇರಬೇಕು?

ಬೆಳಗಿನಿಂದ ಬೈಗಿನವರೆಗೂ ಹೊರಗೆ ದುಡಿದು ಹೆಣ್ಣಾಗುವ ಗಂಡಸು—ತನಗಿನ್ನೆಷ್ಟು ಛಲ ಇರಬೇಕು?

ಶಾಂತಿ, ಸುಖ ಕೊಟ್ಟು ಸ್ವರ್ಗಸಮಾನವಾಗಿದ್ದ ಮನೆ—ಈಗ ನನ್ನ ಪಾಲಿಗೆ ಅಶಾಂತಿಯ ಅಗ್ನಿಕುಂಡವಾಗಿದೆ.

ಯಾರ ಮುಖ ನೋಡಿದರೆ ನನ್ನೆದೆ ನಲಿಯುತ್ತೆತ್ತೋ, ಆಯಾಸವೆಲ್ಲಾ ಪರಿಹಾರವಾಗುತೆತ್ತೋ, ಆ ಲಚ್ಚಿಯ ಮುಖ ನೋಡಿದೊಡನೆ, ಈಗ ನನ್ನೆದೆಯ ಶಾಂತಿ ಕಲಕಿ ಹೋಗುತ್ತಿತ್ತು; ವಿಚಿತ್ರ ವೇದನೆಯಾಗಿ ಶ್ವೇಷೆ ಉಕ್ಕುತ್ತಿತ್ತು.

ಇಲ್ಲದಿದ್ದರೆ ಎತ್ತು ಹುಡುಕಲು ಈ ಸರಿರಾತ್ರಿಯಲ್ಲಿ ಮನೆಬಿಟ್ಟು ಹೊರಡುತ್ತಿದ್ದೆನೆ?

ಇಷ್ಟು ಹೊತ್ತೂ ಕಣ್ಣಿಗೆ ನಿದ್ದೆ ಹತ್ತಲಿಲ್ಲ. ಇನ್ನು ಹತ್ತುವುದೂ ಇಲ್ಲ. ಸುಮ್ಮನೆ ಹಾಸಿಗೆಯಲ್ಲಿ ಹೊರಳಾಡುತ್ತ ಏಕೆ ನರಳಲಿ?

ಬೇಗ ಬೇಗ ನಡೆದೆ. ರಸ್ತೆಯ ಅಕ್ಕ-ಪಕ್ಕದ ಗದ್ದೆ ತೋಟಗಳ ಮೇಲೆ ಕಣ್ಣು ಹಾಯಿಸಿ, ಎತ್ತು ಕಾಣುವುದೇನೋ ಎಂದು ಅರಸುತ್ತ ನಡೆದೆ.

ಇಲ್ಲ. ಇಲ್ಲೆಲ್ಲೂ ಎತ್ತು ಕಾಣದಲ್ಲಾ ! ಅದೇ ರಾಮೇಗೌಡನ ಗದ್ದೆ. ಇನು ಶಿವಯ್ಯನ ತೋಟ.

ಇಲ್ಲ. ನನಗೆ ಹೆದರಿಕೆಯಿಲ್ಲ. ಹುಣ್ಣಿಮೆಯಿನವಾದರೆ ಏಕೆ ಹೆದರಬೇಕು? ಬೆಳದಿಂಗಳಿದೆ. ತಲೆಗಾಯುವ ಭಗವಂತ ಮೇಲಿದ್ದಾನೆ. ಏಕೆ ಹೆದರಬೇಕು? ನಾನು ಬಿರುಬಿರನೆ ನಡೆದೆ.

ಇದೇ ಬೊಮ್ಮಸಂದ್ರದ ತೋಪು. ಮೂರುವ್ಯೆಲಿಯ ಮೇಲೆ ನಡೆದು ಬಂದಿದೇನೆ. ಹಾಗಾದರೆ! ಪ್ಲೇಗ್ ಬಂದಾಗ, ಹಳ್ಳಿಯವರೆಲ್ಲಾ ಈ ತೋಪಿನಲ್ಲೇ ಪೆಡ್ ಹಾಕಿಕೊಳ್ಳುತ್ತಿದ್ದರು. ಅಲ್ಲಿ ದೂರದೆಲ್ಲಿ, ಹಾಲ್ಗಡಲಿನಂತೆ ತೋರುವುದೇ ದೇವೀಕೆರೆ.

ಲಚ್ಕಿ !

ಥೂ, ಮನೆಬಿಟ್ಟು ಬಂದರೂ ನನ್ನ ಮನವನ್ನು ಬಿಡದಲ್ಲಾ ಅವಳ ಉರಿನೆನವು! ಅವಳ ಆ ಕಣ್ಣೋಣ? ನಾನು ಬರುವಾಗಿನ ನೋಟ?

ಪಾಪ? ಎಷ್ಟು ನೊಂದಳೋ.... ನನ್ನೆದೆಯ ಯಾವುದೋ ಮೂಲೆಯಲ್ಲಿ ಮರುಕ ಮಿಡಿಯಿತು. ಪಾಪ, ಆ ಕರುಣೆಗೆ ತಕ್ಕವಳಲ್ಲ ಅವಳು. ಅವಳದೇ ಅಲ್ಲವೇ ಎಲ್ಲ ತಪ್ಪು? ಏಕೆ ಬಾಯ್ಬಿಡಬಾರದಾಗಿತ್ತು? ಏಕೆ ತಾನೇ ಮಾತನಾಡಿಸಬಾರದಾಗಿತ್ತು? ಹೋಗಲಿ, ನನ್ನ ಮಾತಿಗೆ ಗೌರವ ಕೊಟ್ಟಾದರೂ ಏಕೆ ಉತ್ತರ ಕೊಡಬಾರದಾಗಿತ್ತು?

ಆ ದಿನ ನನ್ನ ಕೈಯನ್ನು ಹೇಗೆ ಕಿತ್ತು ದೂಡಿದಳು !

ಅಬ್ಬಾ, ಎಷ್ಟು ಹಮ್ಮು, ಎಷ್ಟು ಸೊಕ್ಕು !

ಆಗಲಿ ಅವಳಿಗೆ ತಕ್ಕ ಪ್ರಾಯಶ್ಚಿತ್ತ ! ನನ್ನೊಡನೆ ಛಲಕ್ಕೆ ನಿಲ್ಲುತ್ತಾಳಾ?

ಸೋತು ಕಾಲಿಗೆ ಬಿದ್ದು ಬೇಡುತ್ತಾನೆ — ಅಂದುಕೊಂಡಿದ್ದಾಳಾ?

ಇರಲಿ, ಇರಲಿ !

ಎಷ್ಟು ಕಾಲ ಛಲ ಸಾಧಿಸುತ್ತಾಳೋ ನೋಡೇ ಬಿಡ್ತೇನೆ !

ಎಷ್ಟೇ ಕಷ್ಟವಾಗಲಿ, ಸಹಿಸಿ ಛಲ ಸಾಧಿಸಿ ಬಿಡ್ತೇನೆ. ಏನಾದರೂ ಮಣಿಯುವುದಿಲ್ಲ.

ಈ ಹೆಣ್ಣಿಗೇ ಇಷ್ಟು ದರ್ಪ ಇರಬೇಕಾದರೆ, ನನಗೆ ಇರಬೇಡವೆ? ಈ ಸವಾಲಿಗೆ ಸರಿಯಾದ ಉತ್ತರ ಕೊಡ್ತೇನೆ! ನನಗೂ ಬರುತ್ತೆ ಕೊಡೋಕೇ.

ಅವಳೂ ಹೀಗೆ ಎಷ್ಟು ಕಾಲ ಇರ್ತಾಳೆ ನೋಡಿಬಿಡ್ತೇನೆ— ವಾರವೋ, ತಿಂಗಳೋ, ವರ್ಷವೋ— ನೋಡೇ ಬಿಡ್ತೆನೆ.

ಅವಳಾಗಿಯೇ ಮಾತನಾಡಿಸಿಕೊಂಡು ಬರುವವರೆಗೂ ನಾನೂ ಮಾತನಾಡಿಸುವುದಿಲ್ಲ.

ಸರಿಯಾಗಿ ಬುದ್ಧಿ ಕಲಿಸಿಬಿಡ್ತೇನೆ ಈ ಸಲ—ಮತ್ತೆಂದೂ ಈ ರೀತಿ ಹಟಮಾಡದಂತೆ.

ಅಬ್ಬಾ, ನಿನ್ನೆ ರಾತ್ರಿಯೆಲ್ಲಾ ಎಷ್ಟು ಯಾತನೆ ಪಟ್ಟೆ ! ಆವಳು ಊರಿನಲ್ಲಿಲ್ಲದಿದ್ದರೆ ಒಂದು ರೀತಿ—ಎದುರಿಗೇ ಇದ್ದಾಳೆ, ಆದರೂ ಸೆಟೆದುಕೊಂಡಿದೆ ಮನಸ್ಸು. ನಮ್ಮಿಬ್ಬರ ಮಧ್ಯೆ ಅಳವಾದ ಕಂದಕ—ದಾಟಲಾರದ ಕಂದಕ—ಇದ್ದಂತಿದೆ. ಇದ್ದೂ ಇಲ್ಲದಂತಾಗಿ ನನ್ನೆದೆಯನ್ನು ಹಿಂಡುತ್ತಿದ್ದಾಳೆ.....

ಉಫ್ ! ಇನ್ನೆಷ್ಟು ದೂರ ನಡೆಯಲಿ? ಕಾಲು ಸೋತಿವೆ.

ಎಲ್ಲಾದರೂ ಕ್ಷಣ ಕೂತು ವಿಶ್ರಮಿಸಿಕೊಂಡರಾದೀತು.....

ಅರರೇ ! ತೋಪಿನ ತುದಿಯಲ್ಲಿ, ದೇವೀಕೆರೆಯ ಬಳಿ ಎತ್ತು ನಿಂತಿದೆಯಲ್ಲಾ.....ಬೆಳ್ಳಗೆ..... ! ಇಲ್ಲಿಗೆ ತಪ್ಪಿಸಿಕೊಂಡು ಬಂದಿದೆಯಲ್ಲಾ..... ನೀರು ಕುಡಿಯಲು ಕೆರೆಯ ಬಳಿಗೆ ಬಂದಿದೆಯೇನೋ .....

ಎತ್ತು ಸಿಕ್ಕಿಬಿಡುವುದೆಂದು ಬೇಗ ಬೇಗ ಹೆಜ್ಜೆ ಹಾಕಿದೆ..... ಸ್ವಲ್ಪ ದೂರ ಹೋಗುವುದರೊಳಗೇ ನನ್ನ ತಪ್ಪು ತಿಳಿಯಿತು—ಅದು ಎತ್ತಲ್ಲ—ಯಾರೋ ಮನುಷ್ಯರು !

ನನಗೆ ಆಶ್ಚರ್ಯವಾಯಿತು—ಇಷ್ಟು ಹೊತ್ತಿನಲ್ಲಿ ಯಾರ ಮನುಷ್ಯ ಬರಬಹುದು ಇಲ್ಲಿಗೆ?—ಎಂದು

ಬಂದಿರಬಹುದು—ನನ್ನಂತೆಯೇ. ಮನೆಯಲ್ಲಿ ಜಗಳಮಾಡಿಕೊಂಡು. ಪಾಪ, ಪಾಪ !

ಇನ್ನೂ ನಾಲ್ಕು ಹೆಜ್ಜೆ ಹೋದೆ. ಗಂಡಸಲ್ಲ—ಹೆಂಗುಸು ಬಿಳಿಸೀರೆಯುಟ್ಟಿದ್ದಾಳೆ....ಬೆಳದಿಂಗಳ ಬೆಳ್ಳಬೆಳಕಲ್ಲಿ ಅವಳ ಬಿಳಿಪು ಬೆಣ್ಣೆಮುದ್ದೆಯಂತೆ ಕಾಣುತ್ತಿದೆ. ತುಂಬಯೌವನದ ಚೆಲುವೆ ಮೋಹಕವಾಗಿದ್ದಾಳೆ.

ಏಕೆ ಬಂದಿರಬಹುದು ಇಲ್ಲಿಗೆ — ಹೀಗೆ—ಏಕಾಂಗಿಯಾಗಿ?

ಗಂಡನ ಕೈಲಿ ಜಗಳವಾಡಿಕೊಂಡು ಬಂದಿರಬಹುದೇ?.....

ಕೆರೆಗೆ ಬಿದ್ದು ಪ್ರಾಣ ತೊರೆಯಲು ಬಂದಿರಬಹುದೇ?

ಛೇ, ಛೇ, ಇಂತಹ ರೂಪಸಿ ಕೆರೆಗೆ ಬಿದ್ದು ಸಾಯುವುದೇ ನಾನು ಈಜುಗಾರ. ಅವಳೇನಾದರೂ ಕೆರೆಗೆ ಹಾರಿದರೆ, ಹಿಂದೆಯೆ ಹಾರಿ ನೇಲೆತ್ತುವುದು ನನ್ನ ಧರ್ಮ....

ನಿಧಾನ.....ನಿಧಾನ. ಏನು ಮಾಡುತ್ತಾಳೆ ನೋಡೋಣ ನೋಡೋಣ !

ನನ್ನ ಕಾಲು ಸೋತಿತ್ತು. ಮುಂದೆ ನಡೆಯಲಾರದೆ ಅಲ್ಲೆ ಬಿದ್ದಿದ್ದ ಮರದ ದಿಮ್ಮಿಯಮೇಲೆ ಕುಳಿತೆ. ಕಣ್ಣು ಮಾತ್ರ ಅವಳ ನೆಟ್ಟಿತ್ತು.

ಆ ರೂಪಸಿ ನನ್ನತ್ತಲೇ ಬರುತಿದಳು ! ನಾನೂ ಬೆಕ್ಕಸ ಬೆರಗಾಗಿ ಅವಳ ರೂಪವನ್ನೇ ದೃಷ್ಟಿಸಿದೆ.

ನನ್ನಿಂದ ಇನ್ನೂ ಹತ್ತು ಮಾರು ದೂರದಲ್ಲಿದ್ದಳೇನೋ—ಸ

ಮರದ ಮರೆಯಿಂದ ಇನ್ನೊಂದು ವ್ಯಕ್ತಿ—ಬಹುಶಃ ಅವಳ ಗಂಡ—ಬಂದ.

ನನ್ನನ್ನು ನೋಡಿದ್ದರೋ ಇಲ್ಲವೋ! ಇಬ್ಬರೂ ಚಕಮಕಿಯಂತೆ ಮಾತನಾಡಿದರು. ಏನು ಮಾತಾಡಿದರೋ ನನಗೆ ಅರ್ಥವಾಗಲಿಲ್ಲ. ಅಂತೂ ಕಲಹ—ಎಂದು ತಿಳಿಯಿತು. ಸಿಟ್ಟಿನಿಂದ ಆ ಹೆಂಗಸಿನ ಮುಖ ಕೆಂಪೇರಿಹೋಗಿತ್ತು. ಆ ಗಂಡನೂ ಸಿಟ್ಟಾಗಿಯೇ ರೇಗುತ್ತಿದ್ದ.

ಸಿಟ್ಟಾದ ಆ ರೂಪಸಿ ಮತ್ತೂ ಮೋಹಕವಾಗಿ ತೋರಿದಳು.

ನನಗೆ ಲಚ್ಮಿಯ ನೆನಪು ಬಂದಿತು.

ಈ ರೀತಿ ಕಲಹಮಾಡಿ ಬವಣೆ ಪಡುವವರು ನಾವಿಬ್ಬರೇ ಅಲ್ಲ—ಲೋಕದಲ್ಲಿ ಬೇಕಾದಷ್ಟು ಮಂದಿಯಿದಾರೆ—ಎಂದು ನೆನೆದು ನನಗೆ ಎಷ್ಟೋ ನೆಮ್ಮದಿಯಾಯಿತು.

ಅವರ ಜಗಳ ನೋಡುತ್ತಾ ಹಾಗೇ ಕುಳಿತೆ. ಕಿಸೆಯಿಂದ ಬೀಡಿಯನ್ನು ತೆಗೆದು ಹೊತ್ತಿಸಿ, ಸೇದಿ ಸೇದಿ ಎಸೆದೆ. ಒಳ್ಳೆಯ ಖುಷಿ ಒದಗಿಸುತ್ತದೆ ಜಗಳ. ಆಡುವರು ಮಾತ್ರ ನಾವಾಗಬಾರದು; ನೋಡುವವರಾಗಬೇಕು—ಆಗ!

ಕಡೆಗೆ ಗಂಡ ಏನೋ ಬಯ್ದು, ಮುಖದುಮ್ಮಿಸಿಕೊಂಡು ಹೊರಟ. ಅವಳು ಅವನ ಸರಟು ಹಿಡಿದು ಏನೋ ಬೇಡಿದಳು. ಅವನು ಸಿಟ್ಟಿನಿಂದಲೇ ಕಾಲಿನಲ್ಲಿ ಅವಳನ್ನು ಒದ್ದು ಮರೆಯಾಗಿ ಹೋದ.

ಅವಳು ಅತ್ತಳು; ಗೋಳಾಡಿದಳು.

ಅವಳ ಗಂಡ ಮಾಡಿದ್ದು ಸರಿ ಎನ್ನಿಸಿತು ನನಗೆ.

ಹೀಗೇ ಆಗಬೇಕು ಇವಳಿಗೆ. ಗಂಡನೊಡನೆ ಸೆಣಸಾಟಕ್ಕೆ ಏಕೆ ಹೋದಳು?

ಲಚ್ಮಿಗೂ ಹೀಗೇ ಆಗಬೇಕು. ಲಚ್ಮಿಯೂ ಹೀಗೇ ಗೋಳಾಡಬೇಕು!

ನನ್ನ ಕಿಸೆಯಲ್ಲಿದ್ದ ಬೀಡಿಗಳು ಒಂದೊಂದಾಗಿ ಬೂದಿಯಾಗುತ್ತಿದ್ದುವು.

ಎಷ್ಟೋ ಹೊತ್ತು ಅತ್ತು, ಆ ಹೆಂಗಸು ತಲೆ ಎತ್ತಿದಳು. ನಾನು ಅವಳ ಕಣ್ಣಿಗೆ ಬಿದ್ದೆ. ಅವಳ ನೋಟ ಸಂಧಿಸಿ ನಾನೂ ನೋಡಿದೆ. ಬಹು ರೂಪಸಿ. ಮರುಕದ ಹೊರತು ಬೇರಾವಭಾವವೂ ನನ್ನೆದೆಯಲ್ಲಿ ಮೊಳೆಯುವಂತಿರಲಿಲ್ಲ. ಆ ಹಾಳು ಲಚ್ಮಿ, ಅವಳ ಛಲ ನನ್ನ ಮನಸ್ಸೆಲ್ಲಾ ತುಂಬಿಬಿಟ್ಟಿತ್ತು.

ಆ ರೂಪಸಿ ಎದ್ದು ನನ್ನತ್ತ ಬಂದಳು—ನನ್ನಲ್ಲಿ ತನ್ನ ದುಃಖ ತೋಡಿಕೊಂಡು, ನನ್ನ ಸಹಾನುಭೂತಿ ಪಡೆಯುವುದಕ್ಕೇನೋ-ಪಾಪ.

ಬೆಳದಿಂಗಳು ಭ್ರಮೆ ಹಿಡಿಸುವಂತಿತ್ತು. ಬೆಳದಿಂಗಳ ಜಡಲಲ್ಲಿ ನಾನು, ಈಕೆ, ಈ ತೋಪು ಎಲ್ಲವೂ ತೇಲುತ್ತಿರುವುದೇನೋ, ಇದೇನು ನಂದನವನವೋ—ಎನ್ನಿಸಿತು ನನಗೆ.

ಆಕೆ ನನಗೆ ಸ್ವಲ್ಪ ಹತ್ತಿರ ಬಂದಳು. ಅವಳ ದುಃಖಪೂರಿತ ಮುಖ ನೋಡಿ ಮರುಕದಿಂದ,

"ಏನಮ್ಮಾ, ತಾಯಿ?" ಎಂದೆ.

ಕಟ್ಟೆಯೊಡೆದ ಕೆರೆಯಂತೆ, ದುಃಖ ಉಕ್ಕಿಬಂತು ಅವಳಿಗೆ. ಎಷ್ಟೋ ಹೊತ್ತು ಅತ್ತಳು. ಅತ್ತು ಶಾಂತಳಾಗಲೆಂದು ನಾನೂ ಸುಮ್ಮನಿದ್ದೆ.

"ಎಲ್ಲಮ್ಮಾ, ತಾಯಿ, ನಿಮ್ಮ ಮನೆ?" ಎಂದೆ, ಮತ್ತೆ.

ಆಕೆ ತೋಪಿನ ತುದಿಯಲ್ಲಿದ್ದ ಜೋಪಡಿಯತ್ತ ಕೈ ತೋರಿದಳು.

"ಓ, ಪಡ' ಹಾಕಿದಾರೆಯೇ? ಊರಲ್ಲಿ ಪ್ಲೇಗೋ?" ನಾನು ಭಯ, ಆಶ್ಚರ್ಯದಿಂದ ಕೇಳಿದೆ. ನಾನು ಈ ಕಡೆ ತಿಂಗಳಿಂದೆ ಬಂದಿರಲಿಲ್ಲ. ಬೇಸಾಯದ ಗಲಾಟೆಯಲ್ಲಿದ್ದೆ.

"ಎಲ್ಲರೂ ಹಾಕಿಲ್ಲ. ನಾವು ಹಾಕಿದ್ದೇವೆ. ಇವರು ಹೀಗೇ ಜಗಳ ಆಡ್ತಾರೆ. ತುಂಬಾ ಹಟ. ನಾನೆಷ್ಟು ಹೇಳಿದರೂ ಕೇಳಿಕೊಂಡರೂ ಹಟ ಬಿಡೋದಿಲ್ಲ. ನನ್ನ ಕೈಲಿ ಸರಿಯಾಗಿ ಮಾತೇ ಆಡೂದಿಲ್ಲ....." ಎಂದು ಬಿಕ್ಕಿದಳು.

ಪಾಪ, ಪಾಪ, ಲಚ್ಮಿಯಂತಲ್ಲ. ಇಷ್ಟು ದೀನಳಾಗಿರುವ ಹೆಣ್ಣನ್ನು ಧಿಕ್ಕರಿಸುವ ಆ ಗಂಡ ಎಂತಹ ಮೂರ್ಖ!

"ಇಲ್ಲಿಗೇಕಮ್ಮಾ ಬಂದೆ. ನಿನ್ನ ಗಂಡ ಮನೆಗೆ ಹೋಗಿರಬಹುದು. ಹೋಗು." ಅಂದೆ.

ಆಕೆ ತಲೆಯಲ್ಲಾಡಿಸಿದಳು.

"ಇಲ್ಲ ಅತ್ತರು ಮನೆಗೆ ಹೋಗೋದಿಲ್ಲ. ನಾನು ಒಳಗೆ ಮಲಗಿದರೆ ಅವರು ಹೊರಗಡೆ ಇರ್ತಾರೆ. ನಾನು ಹೊರಗಡೆ ಮಲಗಿದರೆ, ಅವರು ಒಳಕ್ಕೆ ಹೋಗ್ತಾರೆ." ಎಂದು ನಿಡುಸುಯ್ದಳು.

ಆ ಗಂಡನ ಹಟ ನನ್ನ ಲಚ್ಮಿಯ ಹಟದಂತೆಯೇ ಇರಬೇಕು!

ನಾನು ಸಹಾನುಭೂತಿಯಿಂದ ಆಕೆಯನ್ನೇ ನಿಟ್ಟಿಸಿದೆ. ಎಷ್ಟು ನೊಂದಿದೆಯೋ ಈಕೆಯ ಹೃದಯ, ಪಾಪ!

ಆಕೆಯ ಅಳು ನಿಂತಿತು. ಮುಖ ಬಿಗಿದುಕೊಂಡಿತು. ದ್ವೇಷ, ಛಲ ಕಣ್ಣುಗಳಲ್ಲಿ ಕುಣಿದುವು. ದೃಢವಾಗಿ ಹೇಳಿದಳು—

"ಇಲ್ಲ ಅವರಿಗೆ ಇಷ್ಟು ಬೇಡವಾದ ಮೇಲೆ ನಾನಿರುವುದಿಲ್ಲ. ನಾನು ಈ ನಿಷ್ಠುರಾನ ಸಹಿಸಲಾರೆ. ಈ ಯಾತನೆ ಸಹಿಸಲಾರೆ. ನನ್ನೆಚ್ಚೆ ಹೇಗೆ ಛಿದ್ರಛಿದ್ರವಾಗಿ ಸಿಡಿಯುತ್ತದೆ ಗೊತ್ತಾ? ಇಲ್ಲ, ನಾನು ಬದುಕಿರೋದಿಲ್ಲ.; ಬದುಕಿರೋದಿಲ್ಲ! ಅವರು ಹೊರಗೆ ಮಲಗಿರ್ತಾರೆ. ಒಳಗೆ ಸೀಮೆ ಎಣ್ಣೆ ಇರುತ್ತೆ. ಬಾಯಿಗೆ ಬಟ್ಟೆ ತುರುಕಿಕೊಂಡು ಎದೆಗೆ ಸೀಮೆಎಣ್ಣೆ ಸುರಿದು ಬೆಂಕಿ ಹೊತ್ತಿಸಿಕೊಂಡು ಬಿಡ್ತೇನೆ. ನಿಶ್ಚಯವಾಗಿಯೂ! ಆಮೇಲೆ ಅವರೇ ಇರಲಿ, ಹಾಯಾಗಿ, ಸುಖವಾಗಿ,!" ಎಂದು ಮೇಲೆದ್ದಳು.

ನಾನು ಭಯದಿಂದ ನಡುಗಿದೆ—ಆಕೆ ಹಾಗೆ ಮಾಡುವುದೇ ಸಿದ್ಧ ಎಂದು ನನಗೆ ದೃಢವಾಯಿತು. ಹೆಣ್ಣು ಕೊರೆದುಕೊಂಡರೆ ಅವಳಿಗೆ ಯಾವುದು ಅಸಾಧ್ಯ? ಹೆಣ್ಣು ಕೋಪ ತಾಪ ಮೇರೆ ಮೀರಿದಾಗ ತನ್ನನ್ನೇ ಬಲಿಕೊಟ್ಟುಕೊಳ್ಳುವುದು ಸಾಮಾನ್ಯ!

ಏನಾದರೂ ಮಾಡಿ ಈಕೆಯನ್ನು ತಡೆಯಬೇಕು—ಪಾಪ, ಅನ್ಯಾಯವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ!

"ಬೇಡ ತಾಯಿ, ಶಾಂತಳಾಗು, ಸಮಾಧಾನ ತಂದುಕೋ!" ಎಂದು ಕೂಗಿದೆ. ನನ್ನ ಧ್ವನಿ ಕೀರಲಾಗಿತ್ತು. ಅವಳು ಅದು ಕಿವಿಗೆ ಬೀಳದಂತೆ ತೀವ್ರನೇಗದಲ್ಲಿ ಜೋಪಡಿಯತ್ತ ಹೋದಳು.

ನಾನು ಮುಂದೇನು ಅನಾಹುತವಾಗುವುದೋ ಎಂದು ನಡುಗಿದೆ. ಅವಳ ಹಿಂದೆ ಹೋಗಿ ಅವಳನ್ನು ತಡೆಯಬೇಕೆಂದು ನನ್ನ ಮನಸ್ಸು. ಆದರೆ ಸೋತ ಕಾಲುಗಳು ಕೀಲಿಸಿದಂತೆ ಸ್ಥಿರವಾಗಿ ಬಿಟ್ಟಿದ್ದುವು.

ಮರದ ಮರೆಯಿಂದ ಅವಳ ಗಂಡ ಬಂದು, ಅವಳಿಗಾಗಿ ಅತ್ತಿತ್ತ ಹುಡುಕಿದ. ಅವಳನ್ನು ಕಾಣದೆ ನನ್ನತ್ತ ತಿರುಗಿದ. ನನ್ನ ಕಡೆಗೇ ಬಂದ.

ನೋಡಿದೆ–ಅವನೂ ರೂಪವಂತ. ಅವಳಿಗೆ ಸರಿಯಾದ ಜೋಡಿ.

ನನ್ನೆದುರು ಬಂದು ನಿಂತ. ದುಗುಡದಿಂದ ಸುತ್ತಾಡಿದ.

"ಆಕೇನ ಹುಡುಕುತಿಯೇನಪ್ಪಾ?" ಅಂದೆ, ತಡೆಯಲಾರದೆ.

"ಹೂಂ, ಹೂಂ. ಎಲ್ಲಿ ಅವಳು?"– ಆತುರ–ಕಾತರದಿಂದ ಕೇಳಿದ.

ನಾನು ಜೋಪಡಿಯತ್ತ ಕೈ ತೋರಿಸಿದೆ.

"ಹೋಗಲಿ. ಎಲ್ಲಿಗಾದರೂ ಹಾಳಾಗಿ ಹೋಗಲಿ. ಹೆಂಗಸಿಗೆ ಇಷ್ಟು ಗರ್ವವೇ? ಸರಿಯಾಗಿ ಬುದ್ಧಿ ಕಲಿಸ್ತೀನಿ" ಎಂದು ಹಲ್ಲು ಕಡಿದ.

ಅವನ ತ್ವೇಷ ನನಗರ್ಥವಾಯಿತು. ನನ್ನ ಜಾತಿಯವನೇ ಅಲ್ಲವೇ!

"ಬೇಗ ಜೋಪಡಿಗೆ ಹೋಗಪ್ಪಾ. ಬೆಂಕಿ ಹೊತ್ತಿಸಿಕೊಳ್ತೀನಿ ಅಂದಳು." ಅಂದೆ ಭಯದಿಂದ.

ಅಪಹಾಸ್ಯದಿಂದ ನಕ್ಕ—

"ನಾಯೋ ಎದೆಗಾರಿಕೆ ಇದೆಯೇ ಆ ಹೆಂಗಸಿಗೆ! ಒಡವೆ—ವಸ್ತು ಅಂತ ಆಸೆಯಿಂದ ಹೊಡಕೋತಾಳೆ! ಜಾತ್ರೆಯಿಂದ ಜಾಕೆಟ್ ತರಲಿಲ್ಲಾಂತ ತಾನೇ ನನ್ನ ಕೈಲಿ ಜಗಳ! ತಪ್ಪಾಯ್ತು ಅಂತ ಕಾಲಿಗೆ ಬೀಳುವ ವರೆಗೂ ನಾನೂ ರಾಜಿಯಾಗೋದಿಲ್ಲ."

"ನಿಜವಾಗಿಯೂ ಆಕೆ ಆತ್ಮಹತ್ಯೆ ಮಾಡಿಕೊಂಡರೆ?" ನಾನು ಚಿಂತಿಸುತ್ತಾ ಕೇಳಿದೆ.

ಅವನ ದುಗುಡ ಕೆಚ್ಚಾಯಿತು; ಕೋಪವಾಯಿತು.

"ಮಾಡಿಕೊಳ್ಳುತ್ತಾಳೆಯೇ? ಮಾಡಿಕೊಳ್ಳಲಿ! ಇನ್ನೇನು, ಜನ ನನ್ನ ದೂರುತ್ತಾರೆ. ಪೋಲೀಸಿನವರು ಕರೆದೊಯ್ಯುತ್ತಾರೆ ಜೇಲಿಗೆ. ಅವಳಿಗೆ ಇದೆಲ್ಲ ನೋಡಿ ಸಂತೋಷವೇ? ನನ್ನ ಹೀಗೆ ಗೋಳಾಡಿಸಿ ಸಂತೋಷ ಪಡುತ್ತಾಳೆಯೇ?" ಎಂದು ಹಲ್ಲು ಹಲ್ಲು ಕಡಿದ.

ಕೋಪದ ಹಿಂದೆ ದುಃಖ, ಅಶಾಂತಿಯಿದ್ದಿತು – ಅವನಿಗೂ.

ಮರುಕ್ಷಣ ದೀನನಾಗಿ,

"ಅವಳು ಹೋದ ಮೇಲೆ ನಾನು ಜೀವ ಇಟ್ಟುಕೊಳ್ಳುತ್ತೇನೆಯೇ? ಅವಳನ್ನು ಎಷ್ಟು ಪ್ರೀತಿಸಿದೇನೆ–ಅವಳು ಹೋದಮೇಲೆ, ನಾನೇ ಹೀಗೆ ಮಾಡಿದ್ದು—ಎಂದು ಸುಳ್ಳಾದರೂ ಒಪ್ಪಿಕೊಂಡು ಸಂತೋಷದಿಂದ ಗಲ್ಲಿಗೇರುತ್ತೇನೆ..... ನಿನ್ನೆ ನೀರು ಸೇದುತ್ತಿದ್ದ ರಂಗೀನ ಬೇಕೆಂದೇ ಮಾತನಾಡಿಸಿ ನಕ್ಕೆ—ಇವಳಿಗೆ ಸಂಶಯ ಹುಟ್ಟಿ ನೋವಾಗಲೀ ಅಂತ. ಅದನ್ನೇ ದೊಡ್ಡದು ಮಾಡಿಕೊಂಡು ಹೀಗಾಡ್ತಾ ಇದಾಳೆ." ಎಂದು ಸುಯ್ದ.

ನನ್ನೆದುರು ಹಾಗೇ ಯೋಚಿಸುತ್ತ ಕುಳಿತ. ನಾನು ಬೀಡಿ ಸೇದುತ್ತಾ ಹಾಗೇ ಯೋಚಿಸುತ್ತಿದ್ದೆ. ಅವನೆದೆಯ ತಳಮಳ ನನಗೂ ಅರ್ಥವಾಯಿತು. ಅವನು ರಂಗಿಯನ್ನು ಮಾತನಾಡಿಸಿದ ಸೇಡೂ ನನಗೆ ತಿಳಿಯಿತು. ಅವನು ನನ್ನನ್ನೇ ನಿಟ್ಟಿಸಿ ನೋಡಿದ, ಏನಾದರೂ ಹೇಳಲಿ – ಎಂದು.

ನಾನೇನು ಹೇಳಲಿ–ನನ್ನ ಅವಸ್ಥೆಯೂ ಅದೇ ಆಗಿರುವಾಗ?

ಆಗ .. .. ? ಆಗ,

ಇದ್ದಕ್ಕಿದ್ದಂತೆಯೇ ಜೋಪಡಿಯ ಮೇಲೆ ಮೊಳ ಎತ್ತರ ಉರಿ ಕಂಡಿತು.

ಹೋ! ಅನಾಹುತ! ಆಕೆ ನುಡಿದಂತೆ ನಡೆದಿದಾಳೆ.

ನನ್ನೆದೆ ದಿಗ್ಗೆಂದಿತು. "ಅಯ್ಯೋ, ಭಗವಂತಾ!" ಎಂದು ಕಣ್ಮುಚ್ಚಿ ನಮ್ಮ ಕುಲದೇವರು ಮುತ್ತಪ್ಪನನ್ನು ನೆನೆದೆ.

ಯಾರೋ ಕಿಲಕ್ಕನೆ ನಕ್ಕಂತಾಯಿತು–ಒಂದು ಗಂಡುಧ್ವನಿ. ಒಂದು ಹೆಣ್ಣುಧ್ವನಿ–

ನನ್ನ ಬೆನ್ನಮೇಲೆ ಬಲವಾಗಿ ಗುದ್ದು ಬಿತ್ತು!

"ಈ ದಿನಕ್ಕೆ ಉಳಿದುಕೊಂಡೆ; ನಿನ್ನ ಅದೃಷ್ಟ ಗಟ್ಟಿಯಾಗಿತ್ತು" ಎಂದಂತಾಯಿತು. ಬೆಚ್ಚಿ, ಕಣ್ಬೆಟ್ಟಿ ಆ ಊರಿ, ಆ ಗಂಡು, ಆ ಹೆಣ್ಣು, ಎಲ್ಲಾ ಮಾಯವಾಗಿವೆ!

ನನ್ನ ಮೈ ತುಂಬಾ ಚಳಿಗುಳ್ಳೆಗಳೆದ್ದಿವೆ. ಕಾಲು ಗಡಗಡ ನಡುಗುತ್ತಿವೆ.

ತಣ್ಣನೆಯ ಬೆವರು. ಚಳಿಜ್ವರ ಬಂದುಬಿಟ್ಟಾಗ ಆಗುವಂತೆ ಸೈಯಲ್ಲಿ ಕಿಕ್ಕುಕೊಂಡಿದೆ.

ಹಿಂತಿರುಗಿ ನೋಡಿದೆ— ಮೂಡಲಲ್ಲಿ 'ಬೆಳ್ಳಿ' ಮೂಡಿದ್ದ.

ಎದ್ದು, ಮೆಲ್ಲನೆ ಮನೆಯತ್ತ ಹೆಜ್ಜೆ ಹಾಕಿದೆ—ಭಾರವಾದ ಹೃದಯ ಹೊತ್ತು.

ಈಗ ನನಗೆ ಎಲ್ಲ ನೆನಪಾಯಿತು. ಎಲ್ಲ ಅರ್ಥವಾಯಿತು.

ಈ ತೋಪಿನಲ್ಲಿ ಏಳೆಂಟು ವರ್ಷದ ಕೆಳಗೆ ಪೆಡ್ ಹಾಕಿದ್ದರು. ಆಗ ಸಿದ್ದಪ್ಪ—ಪದುಮಿ–ಮದುವೆಯಾಗಿ ವರ್ಷವಾಗಿತ್ತು–ಅವರೂ ಪೆಡ್ ಹಾಕಿದ್ದರು. ಸಿದ್ದಪ್ಪ ಪದುಮಿ ಜಗಳವಾಡಿದ್ದರು. ಒಂದು ದಿನ, ಪದುಮಿ ರಾತ್ರಿ ಬೆಂಕಿ ತಗುಲಿ ಸತ್ತುಹೋದಳು. ದೊಡ್ಡ ಗುಲ್ಲು ಆಗ. ಎಲ್ಲರೂ ಸಿದ್ದಪ್ಪನೇ ಬಾಯಿಗೆ ಬಟ್ಟೆ ತುರುಕಿ ಬೆಂಕಿ ಹಾಕಿದ್ದಾನೆ—ಅಂದರು. ಗಂಡ-ಹೆಂಡಿರಲ್ಲಿ ವೈಮನಸ್ಸು ಇತ್ತು. ಸಿದ್ದಪ್ಪ ರಂಗೀನ ಪುಸಲಾಯಿಸುತ್ತಾ ಇದ್ದ—ಅಂತ ಜನ ಅಂದರು. ವಿಚಾರಣೆ ಆಯ್ತು. ಪೋಲೀಸರು ಹೊಡೆದು ಬಡಿದು ಮಾಡಿದರಂತೆ

ನಿಜ ಹೇಳ್ತೀನೆ ಎಂದು ಸಿದ್ದಪ್ಪ, ತಾನೇ ಹೆಂಡತೀನ ಕೊಂದೆ—ಎಂದು ಒಪ್ಪಿಕೊಂಡ. 'ವಿಚಾರಣೆ ಮುಗಿಸಿ ಆದಷ್ಟು ಬೇಗ ನನ್ನ ಗಲ್ಲಿಗೆ ಹಾಕ್ಬೇಡಿ. ಸತ್ತ ಮೇಲಾದರೂ ಅವಳ ಕ್ಷಮೆ ಕೇಳ್ತೀನಿ' ಎಂದು ಜನ ಗೊಳಾಡೋದನ್ನ ನೋಡಿ, ಇವನಿಗೆಲ್ಲಿ ವಿಚಾರಣೆ ಮುಗಿಯುವುದರೊಳಗೆ ಬದ್ಧಿಭ್ರಮಣೆಯಾಗುತ್ತೋ—ಎಂದು ಪೋಲೀಸರು ಭಯಪಟ್ಟರಂತೆ ಸಿದ್ದಪ್ಪನಿಗೆ ಗಲ್ಲಾಯಿತು.

ಲಚ್ಮಿ ಕಕ್ಕ ಮಾಡಿದ್ದುದು ನನ್ನ ಕಿವಿಗೆ ಬಿದ್ದಿತ್ತು:—"ಬೊಮ್ಮಸಂದ್ರದವರು ರಾತ್ರಿಹೊತ್ತು ತೋಪಿನ ಕಡೆ ಸುಳಿಯೋದಿಲ್ಲವಂತೆ. ಸಿದ್ದಪ್ಪ—ಪದುವಿ ಪಿಶಾಚಿಗಳಾಗಿ ಆಲೆದಾಡ್ತಾ, ಇದಾ ಅಂತೆ ಅಲ್ಲೇ, ಪೆಡ್‌ನಲ್ಲಲ್ಲವೇ ಪದುವಿ ಸತ್ತಿದ್ದು?"

ನನ್ನ ಮನಸ್ಸು ಲಚ್ಮಿಯ ಮೇಲಿನ ಛಲದಲ್ಲಿ ಮುಳುಗಿರದಿದ್ದರೆ, ಖಂಡಿತ ಇದೆಲ್ಲಾ ಮೊದಲೇ ನನಗೆ ನೆನಪಾಗುತ್ತಿತ್ತು—ನಾನು ತೋಪಿಗೆ ಕಾಲಿಡುತ್ತಿರಲಿಲ್ಲ.

ಸಿದ್ದಪ್ಪನ ಪ್ರೇಮ, ಅವನ ತ್ಯಾಗ, ಅವನ ಬಲಿದಾನ—ಎಲ್ಲಾ ನನಗೆ ಈಗ ತಿಳಿಯಿತು.

ಅಬ್ಬಬ್ಬಾ.....ಅತೃಪ್ತಿ ಬಯಕೆ, ವಾಸನೆಗಳಿಂದ ಎಷ್ಟು ಯಾತನೆ ಪಡುತ್ತಿವೆಯೋ ಆ ಎರಡು ಜೀವಿಗಳು. ಪದುವಿ ದುಡುಕಿ, ತಮ್ಮಿಬ್ಬರ ಸುಖಕ್ಕೂ ಬೆಂಕಿ ಹಾಕಿಕೊಂಡಿದ್ದಳು—ಬರಿಯ ತನ್ನ ದೇಹಕ್ಕಲ್ಲ. ಸೇಡಿಗಾಗಿ ರಂಗೀನ ಮಾತಾಡಿಸಿ ಸಿದ್ದಪ್ಪ ಪೆಚ್ಚು ಕೆಲಸ ಮಾಡಿದ್ದ. ಕಡೆಗಣಿಸಿದರೆ ಕೆಡಿ ಮನೆ ಸುಡುತ್ತದೆ, ಅಲ್ಲವೇ? ಅವರಿಬ್ಬರ ಕತೆಯನ್ನ ನೆನೆದಂತೆ, ನನ್ನ ಸಂಸಾರದ ಚಿತ್ರವೂ ಮುಂದಾಯಿತು.....

ಲಚ್ಮಿ,—ಸನ್ನ ಲಚ್ಮಿ,—

ಅವಳ ಬಗ್ಗೆ ನನ್ನ ಈ ನಿಷ್ಠೂರ ಸರಿಯೇ?

ಪದುವಿಯಂತೆ ಲಚ್ಮಿಯೂ ನೊಂದಿದ್ದಾಳೆ. ಅವಳಂತೆಯೇ ಏನಾದರೂ ಅನಾಹುತ ಮಾಡಿಕೊಂಡರೆ?

ನನ್ನೆದೆ ಒಂದೇ ಸವನೇ ಹೊಡೆದುಕೊಂಡಿತು. ತುಂಬಾ ಭೀತನಾದೆ. ಬೇಗ ಬೇಗ ಹೆಜ್ಜೆ ಹಾಕಿದೆ.

ಏನು ಗತಿ? ಲಚ್ಮಿ ಅನಾಹುತ ಮಾಡಿಕೊಂಡರೆ? ಲಚ್ಮಿ ಇಲ್ಲದೆ ನಾನು ಬಾಳುವುದು ಯೋಚಿಸುವುದಕ್ಕೇ ಭಯಂಕರ! ಸಿದ್ದಪ್ಪನಂತೆ ನಾನೂ ಏನಾದರೂ ಮಾಡಿಕೊಳ್ಳಬೇಕಾಗುವುದೇನೋ!

ಲಚ್ಮಿ, ಲಚ್ಮಿಯ ನಡತೆ ಈಗ ನನಗೆ ಹೊಸಬೆಳಕಿನಲ್ಲಿ ಕಂಡುವು.

ಲಚ್ಮಿಗೂ ನನಗೂ ಮನಸ್ತಾಪ ಬರಲು ಕಾರಣವೇನು? ಬೇಲೂರ ಜಾತ್ರೆಯಲ್ಲಿ ಸುರಗಿ ಹೂವು ತರಲಿಲ್ಲಾ ಅಂತ ಅಲ್ಲವೇ?

ಸುರಗಿ ಹೂವು—! ಸುರಗಿಯ ಹೂವನ್ನು ಮುಡಿಯಬೇಕು ಅಂತ ಎರಡು ವರ್ಷಗಳಿಂದಲೂ ಬಯಸಿದ್ದಳು ಲಚ್ಮಿ.

ಜಾತ್ರೆಗೆ ಹೋಗಲು ನನಗೆ ಕೈಲಿ ಕಾಸಿರಲಿಲ್ಲ. ನನ್ನ ಜೊತೆಗಾರರಾದ ಶಿವಣ್ಣ ರಾಮೇಗೌಡ ಹೊರಟು ನಿಂತಿದ್ದರು.

ನಾನು ಲಚ್ಮಿಯೆದುರು ಗೋಳಾಡಿದೆ.

ಲಚ್ಮಿ, ನನಗೆ ತಿಳಿಯದಂತೆ ಕುರಿ ಸಾಕಲು ಬಿಟ್ಟು ಗಳಿಸಿದ್ದ ಇಪ್ಪತ್ತು ರೂಪಾಯಿ ತುದು ನಗುತ್ತಾ ಕೈಲಿಟ್ಟಳು.

"ಹೋಗಿ ಬನ್ನಿ, ಸುರಗಿ ಹೂವನ್ನು ಮಾತ್ರ ಮರೆಯದೆ ತನ್ನಿ" ಎಂದು ಒತ್ತಿ ಹೇಳಿದಳು. "ತರದೇ ಉಟೀನೆ?" ಎಂದು ಹರ್ಷದಿಂದ ನೋಟುಗಳನ್ನು ಕಿಸೆಗೆ ಸೇರಿಸಿದ್ದೆ.

ಜಾತ್ರೆಲಿ ಬೇಕಾದಂತೆ ಸುರಗಿ ಹೂವು ಬಂದಿತ್ತು.

ಎರಡಾಣೆಯ ಹೂವು ಕೊಂಡಿದ್ದರೆ ಬೇಕಾದಷ್ಟಾಗುತಿತ್ತು.

ಹೋಗುವಾಗ ಕೊಳ್ಳೋಣ ಎಂದು ಸುಮ್ಮನಾದೆ.

ಆ ರಾಮೇಗೌಡನ ಜೊತೆ ನಾನು ಸೇರಬಾರದಾಗಿತ್ತು—'ಸೀಸೆ' ಕುಡಿಯಲು ಎಳೆದೊಯ್ದ—ಕದ್ದು ಕುಡಿಯುವಾಗ ಸಿಕ್ಕಿಬಿದ್ದು, ಇದ್ದ ಕೈಲಿದ್ದದ್ದನ್ನೆಲ್ಲಾ ಪೋಲೀಸನಪಜಿಗೆ ತೆತ್ತೆ. ಶಿವಣ್ಣನ ದಯದಿಂದ ಬಸ್ಸು ಹತ್ತಿ ಮನೆ ಸೇರಿದ್ದಾಯಿತು.

ಇನ್ನೆಲ್ಲಿಂದ ತರಲಿ ಸುರುಗಿ ಹೂವನ್ನ?

ಮನೆಗೆ ಬಂದೊಡನೆ ಲಚ್ಮಿ ನಗ್ತಾನಗ್ತಾ ಬಂದು,

"ಸುರಗಿ ಹೂವು ತಂದಿರಾ?" ಅಂದಳು.

ಏನು ಹೇಳಲಿ ಉತ್ತರಾನ?

ಸತ್ಯ ಹೇಳಿದ್ರೆ ಬಯ್ತಾಳೆ. ಸುಳ್ಳು ಹೇಳಿದರೂ ಬಯ್ತಾಳೆ. ಸತ್ಯ ಹೇಳಿದರೆ ಮತ್ತಾ ಅವಮಾನ. ಮತ್ತೂ ಬಯ್ಗಳು.

"ಮರೆತು ಹ್ಹೋಯ್ತು" ಎಂದೆ.

ಸರಿ ಕಲಹ ಆಯ್ತು.

ನನಗಾದ ಅವಮಾನ, ಹಣ ಕಳೆದುಕೊಂಡು ಪಟ್ಟ ಬವಣೆ, ಅವಳಿಗೆ ಹೇಗೆ ತಿಳಿಯಬೇಕು?

ತನ್ನ ದುಡ್ಡು ಕೊಟ್ಟು ಕಳುಹಿಸಿದರೂ ಎರಡಾಣೆ ಹೂವು ತರಲಿಲ್ಲ—ಎಂದು ದೂರುವುದು ಮಾತ್ರ ಅವಳಿಗೆ ಗೊತ್ತು.

ಎಲ್ಲಾ ಹೆಂಗಸರೂ ಹಾಗೇನೋ ಏನೋ! ಗಂಡಸರನ್ನು ಅರ್ಥ ಮಾಡಿಕೊಳ್ಳೋದಿಲ್ಲ! ಸುಮ್ಮನೆ ಜಾಯಿಗೆ ಬಂದಂತೆ ಆಡಿಬಿಡ್ತಾರೆ.

ನಾನೂ ಸಿಟ್ಟಾಗಿ ಅವಳ ಬಾಯಿ ಮುಚ್ಚಿಸಲು ನಾಲ್ಕು ಮಾತಾಡಿದೆ. ಜೋರಾಗಿಯೇ ಆ ದಿನದಿಂದಲೇ ಒಬ್ಬರ ಮುಖ ಇತ್ತ, ಒಬ್ಬರ ಮುಖ ಇತ್ತ ಆಗಿದೆ. ಅದೇ ಕಲಹಕ್ಕೆ ಕಾರಣ.

ನಾನು ನಮ್ಮೂರಿನ ಹತ್ತಿರ ಹತ್ತಿರ ಬಂದೆ.

ಪಾಪ, ಸುಳ್ಳು ಹೇಳಬಾರದು. ಲಚ್ಮಿ ಎಂದೂ ಹಟಮಾಡಿದವಳಲ್ಲ. ಬಹಳ ಸಭ್ಯ ಗುಣದವಳು. ಶಾಂತಮೂರ್ತಿ, ಅಲ್ಪ ಸ್ವಲ್ಪ ಕಲಹ ಬಂದರೂ ತಾನೇ ಸೋತು ಬಿಡುತ್ತಿದ್ದಳು.

ಈ ಸಲ? ಈ ಸಲ ಮಾತ್ರ ನೆಟ್ಟಿದುಕೊಂಡಿದಾಳೆ.

ನನ್ನದೂ ತಪ್ಪಲ್ಲವೇ? ಎರಡಾಣೆಯ ಸುರಗಿ ಹೂವು ತರದ ಮೇಲೆ?

ಪಾಪ, ಹೆಂಡತಿ ತನ್ನ ಆಸೇನ ಗಂಡನ ಕೈಲಲ್ಲದೇ ಬೇರಾರೊಡನೆ ಹೇಳಿಕೊಳ್ಳಬೇಕು? ಲಚ್ಮಿಯದು ತಪ್ಪೇ?

ನಾನಲ್ಲವೇ ಮೂರ್ಖ? ಮುಟ್ಟಾಳ? ಅವಳು ಕೊಟ್ಟ ಹಣಾನ ಅಪನ್ಯಯ ಮಾಡಿ, ತಪ್ಪು ಮರೆಸಿಕೊಳ್ಳಲು ಅವಳನ್ನೇಲೆ ರೇಗಿದೆನಲ್ಲಾ.....

ನನಗೆ ತುಂಬಾ ಪಶ್ಚಾತ್ತಾಪನಾಯಿತು.

ಲಚ್ಚಿಯ ಆ ನೋವಿನ ನೋಟ ನೆನೆದು ನನ್ನೆದೆ ಕರಗಿ ಹೋಯಿತು.

ಸರಿರಾತ್ರಿ ಹೊರಟಾಗ, ಲಚ್ಚಿ ಏನೆಂದುಕೊಂಡಿರಬಹುದು? ಎತ್ತು ಹುಡುಕಲು ಹೋದನೆಂದು ನಂಬಿದ್ದಾಳೆಯೇ? ಅಥವಾ ಬೇರೆ ಏನಾದರೂ ಸಂಶಯಪಟ್ಟಳೋ?

ಭಗವಂತಾ—ಸಂಶಯಪಟ್ಟು ಪದುಮಿಯಂತೆ ಅನಾಹುತ ಮಾಡಿಕೊಂಡಿದ್ದರೆ!

ನನಗೆ ತುಂಬಾ ಭಯವಾಯಿತು. ಬಿಸಿಯುಸಿರು ಬಿಡುತ್ತಾ ಓಡುತ್ತಾ ಬಂದೆ.

ಕಿಟಕಿಯಿಂದ ಬಗ್ಗಿ ನೋಡಿದೆ. ಲಚ್ಚಿಯ ಹಾಸಿಗೆ ಬರಿಯದಾಗಿತ್ತು!

ನಾನು ನಡುಗಿದೆ ರುದ್ರದುರಂತವಾಗಿರಬಹುದೆಂದು ನೆನೆದು ಕಣ್ಣಲ್ಲಿ ನೀರು ತುಂಬಿತು.

"ಅಕ್ಕಾ, ಅಕ್ಕಾ!" ಎಂದು ಕದ ತಟ್ಟಿದೆ.

ಅಕ್ಕ ಬಾಗಿಲು ತೆರೆದಳು.

"ಏನೋ ತಮ್ಮಾ. ಬುದ್ಧಿ ಎತ್ತಿಟ್ಟಿದ್ದಿಯಾ? ಸರಿರಾತ್ರಿಲೇ ಎತ್ತು ಹುಡುಕೋದು? ಎಲ್ಲೆಲ್ಲಿ ಅಲೆದು ಬಂದೆ? ಲಚ್ಚಿ, ಪಾಪ, ಕಣ್ಣೇವೆ ಮುಚ್ಚಲಿಲ್ಲ ಮೂರು ಗಂಟೇಲಿ ಏನೋ ಸದ್ದಾಯಿತು ಅಂತ ಹೊರಗೆ ಹೋದಳಂತೆ ಎತ್ತು ಎಲ್ಲೆಲ್ಲಿ ಅಲೆದು ಬಂದಿತ್ತೋ, ಕೊಟ್ಟಿಗೆ ಬಳ ನಿಂತಿತ್ತಂತೆ. ಕಟ್ಟಿ ಬಾದಳು. ಹೆಣ್ಣು ಹೆಂಗಸನ್ನ ಹಾಗೆ ಬಿಟ್ಟು ಹೋಗಿದೀಯಲ್ಲಾ—ಹುಣ್ಣಿಮೆ, ಎಲ್ಲಿ ಹೋದರೋ—ಅಂತ ದೇವರಿಗೆ ಕೈ ಮುಗೀತಾ ಇದ್ದಳು ನಿನ್ನ ಕಾಪಾಡ್ಲಿ ಅಂತ."

ನನ್ನ ಅಲ್ಪತೆ ಹೊಳೆದು, ಲಚ್ಚಿಯ ಬಗ್ಗೆ ಅಭಿಮಾನವುಂಟಾಯಿತು ಹೆಮ್ಮೆಯಾಯಿತು. ಆದರೆ ಎಲ್ಲಿ ಲಚ್ಚಿ?

"ಎಲ್ಲಕ್ಕಾ ಅವಳು?" ನಾನು ಗಾಬರಿಯಿಂದಲೇ ಕೇಳಿದೆ

"ಬಚ್ಚಲು ಮನೆಗೆ ಒಲೆ ಹೊತ್ತಿಸಲು ಹೋಗಿದಾಳೆ"

ಒಲೆ ಹೊತ್ತಿಸಲು? ಬುಡ್ಡಿ ತೆಗೆದುಕೊಂಡು ಹೋಗಿದ್ದಾಳೆ ಲಚ್ಚಿ ಏನಾದರೂ ಅನಾಹುತ ಮಾಡಿಕೊಂಡಿದ್ದರೆ?

ನನಗೆ ಸಂಶಯನೇ ಉಳಿಯಲಿಲ್ಲ. ಲಚ್ಚಿ ನೊಂದು ಏನಾದರೂ ಮಾಡಿಕೊಂಡಿರುವುದೇ ನಿಜ. ಅಷ್ಟು ವೇದನೇನ ಅವಳ ಮೃದು ಹೃದಯ ಸಹಿಸಬಲ್ಲದೇ? ಭಗವಂತಾ—ನೀನೇ ಕಾಪಾಡಬೇಕು!

ನಾನು ಧಡಧಡನೆ ಬಚ್ಚಲು ಮನೆಗೆ ಓಡಿದೆ—ಅಕ್ಕನಿಗೆ ಆಶ್ಚರಿಯಾಗಿರಬೇಕು. ಹೊಗೆ, ಹೆಂಚಿನ ಮೇಲೆ ಹಾಯುತ್ತಿತ್ತು.

ನನ್ನೆದೆ ಹೇಗೆ ಬಡಿದುಕೊಂಡಿತೊ—ಯಾವ ರುದ್ರ ದೃಶ್ಯ ಒಳಗೆ ಕಾದಿದೆಯೋ ಎಂದು ನಡುಗಿಬಿಟ್ಟೆ. ನನ್ನೆದೆ ವೇಗವಾಗಿ ಹೊಡೆದುಕೊಂಡಿತು.

ಹಾಗೆಯೇ ಬಚ್ಚಲುಮನೆಯ ಬಾಗಿಲ ಕಿಂಡಿಯಲ್ಲಿ ಇಣಿಕಿ ನೋಡಿದೆ.

ನೋಡಿ ಬೆದರಿದೆ. ನಿಡುಸುಯ್ದೆ.

"....."

ಸದ್ಯ! ಲಚ್ಚಿ ಅನಾಹುತ ಮಾಡಿಕೊಂಡಿಲ್ಲ!

ಆದರೆ ಅವಳ ಆ ನೋಟ! ಕಣ್ಮುಚ್ಚಿ ಕೂತಿದ್ದಾಳೆ. ಎರಡೂ ಕಣ್ಣಿಂದಲೂ ದಳದಳ ನೀರಿಳಿಯುತ್ತಿದೆ:

ಓ, ಎಷ್ಟು ವೇದನೆ, ಎಷ್ಟು ಸಂಕಟವಿದ್ದೀತೋ ಅವಳಿಗೆ!

ಬಾಗಿಲು ಬಡಿದೆ.

ಬೇಗ ಕಣ್ಣೊರಸಿಕೊಂಡು ಶಾಂತಳಾಗಲು ಯತ್ನಿಸಿದಳು. ಕಷ್ಟದಿಂದ ಧ್ವನೀನ ಹತೋಟಿಗೆ ತಂದುಕೊಂಡು,

"ಅತ್ತಿಗೆ....?" ಎಂದಳು.

ನಾನು ಬಾಗಿಲು ನೂಕಿಕೊಂಡು ಬಂದೆ. ಅವಳು ಬೆಚ್ಚಿನಿಂತಳು.

"ಲಚ್ಚೀ....." ಅಂದೆ—ತುಂಬಿಬಂದ ಮರುಕದಿಂದ.

ಮುಂದಿನ ಕ್ಷಣ ಏನಾಯಿತೋ, ನನಗೆ ನೆನಪಿಲ್ಲ.

ನನಗಿತ್ತಣ ಸರಿವೆ ಬಂದಾಗ, ನನ್ನೆದೆಯ ಮೇಲೆ ಲಚ್ಚಿ ಮುಖವಿಟ್ಟು ಬಿಕ್ಕಿಬಿಕ್ಕಿ ಅಳುತ್ತಿದ್ದಳು.

ಅವಳ ಧ್ವನಿ ನನ್ನ ಕಿವಿಯಲ್ಲಿ ಗುಂಯ್‌ಗುಟ್ಟಿತು—

"ನನ್ನ ಮೇಲಿನ ಸಿಟ್ಟಿಗೆ ನಡುರಾತ್ರಿ ಮನೆಬಿಟ್ಟು ಹೋಗ್ತೀರಾ? ನಿಮಗೆ ಅಷ್ಟು ಬೇಡವಾದರೆ ಕೇಳಿ..... ಖಂಡಿತ ಹೇಳಿ—ತಿನ್ನಲಾಪ ಸೇರಿಕೊಂಡು ಬಿಡ್ತೇನೆ....."

ನನ್ನ ಕಣ್ಣೀರು ಜಗುಳಿ ಅವಳ ತಲೆಯ ಮೇಲೆ ಬಿದ್ದಿತು.

ಅವಳ ಮುಡಿನೇವರಿಸಿ,

"ಈಗಲೇ ಆತುರಬೇಡ ಲಚ್ಚಿ! ಇಬ್ಬರೂ ಒಟ್ಟಿಗೆ ಹೋಗೋಣಂತೆ ತಿನ ಪಾದಕ್ಕೆ—ಈ ಭವದ ಕೆಲಸ ಮುಗಿನ ಮೇಲೆ" ಎಂದೆ ಉಕ್ಕಿಬಂದ ಸ್ನೇಹದಿಂದ.

ನನ್ನ ಮಬ್ಬು ಹರಿದಿತ್ತು.

ಅವಳ ಕಣ್ಣಿನ ಪವಿತ್ರ ಗಂಗೆ ನನ್ನೆದೆಯೊಳಿನ ಮಾಲಿನ್ಯ ವನ್ನೆಲ್ಲಾ ತೊಳೆದುಬಿಟ್ಟಿತ್ತು.

ಗುಂಡೂಮಾಮಾನ ಯಾತ್ರೆ

(೩ನೆಯ ಸಂದರ್ಶನ)

ಶ್ರೀ. ಪಿ. ವ್ಹಿ. ಗುಡಿ, ಹೊಸದಿಲ್ಲಿ

卐

ಇದೊಂದು ಪ್ರವಾಸಪ್ರಬಂಧದ ಹೊಸರೀತಿ. ಪ್ರದೇಶಪರಿಚಯದೊಂದಿಗೆ ಗುಂಡೂಮಾನಾನ ಸ್ವಭಾವಪರಿಚಯವೂ ಆಗುವುದು. ಜಬಲ್‌ಪುರದ ಬಳಿಯ ನೈಸರ್ಗಿಕ ಸೌಂದರ್ಯ, ಪ್ರಾಚೀನೇತಿಹಾಸ ಇವುಗಳನ್ನು ಈ ಬರೆಹದಲ್ಲಿ ಪರಿಚಯಮಾಡಿಕೊಡಲಾಗಿದೆ.

卐

ಜಬಲ್‌ಪುರದಲ್ಲಿ

ಈಗೆರಡು ದಿವಸಗಳಿಂದ ಒಂದೇಸನನೆ ಮಳೆಹತ್ತಿದ್ದರಿಂದ, ಗುಂಡೂಮಾಮಾನ ಮನೆಗೆ ಹೋಗಿರಲಿಲ್ಲ ಸಂಜೆಯ ಮುಂದೆ ಸ್ವಲ್ಪ ಮಳೆ ನಿಂತದ್ದನ್ನು ನೋಡಿದ ಕೂಡಲೆ ಅತ್ತಕಡೆಗೆ ಹೊರಟೆ. ಆದರೆ ನನಗಿಂತಲೂ ಮೊದಲೆ, ಉಳಿದವರು ಕೂಡ ಅಲ್ಲಿಗೆ ಬಂದದ್ದನ್ನು ನೋಡಿ ಆಶ್ಚರ್ಯವಾಯಿತು. ನನ್ನಂತೆಯೇ—ಮಳೆ ನಿಂತದ್ದನ್ನು ನೋಡಿದೊಡನೆ—ಅವರು ಸಹ ಅಲ್ಲಿಗೆ ಬಂದಿದ್ದರು. ನಾನು ಅಲ್ಲಿ ತಲುಪಿದಾಗ, ರಂಗಣ್ಣ ಹೇಳುತ್ತಿದ್ದರು: 'ಸಮಿತಿಯ ಸದಸ್ಯರಲ್ಲಿಯೇ ಈ ರೀತಿ ಭಿನ್ನಾಭಿಪ್ರಾಯ ಹುಟ್ಟಿದ್ದು ಆಶ್ಚರ್ಯ!' ಸುಭಾಷಚಂದ್ರ ಬೋಸರವರ ಸಂಬಂಧವಾಗಿ ಸತ್ಯಸ-ಗಳಿಗಳನ್ನು ಕಂಡುಕೊಳ್ಳಲಿಕ್ಕೆ ಜವಹರವಾಜಖಾನರ ನೇತೃತ್ವದಲ್ಲಿ ನಿಯಮಿಸ್ಪಟ್ಟ ಸಮಿತಿಯೊಂದು ಜಪಾನಕ್ಕೆ ಹೋಗಿರಲಿಲ್ಲವೆ? ಅದರ ಸಂಬಂಧವಾಗಿ ಈಗ ಮಾತು ನಡೆದಿತ್ತು.

'ಅಹುದು, ಭಿನ್ನಾಭಿಪ್ರಾಯ ಹುಟ್ಟಿ ಆ ಸದಸ್ಯರಲ್ಲೊಬ್ಬರಾದ ಸುರೇಶಚಂದ್ರ ಬೋಸರವರು, ತಮ್ಮ ವರದಿಯನ್ನು ತಾವು ಬೇರೆಯಾಗಿಯೇ ಒಪ್ಪಿಸುತ್ತೇನೆಂದು ಸರಕಾರಕ್ಕೆ ಹೇಳಿದ್ದಾರೆ.' ಎಂದು ಗುಂಡೂಮಾಮಾ ಹೇಳಿದರು. 'ವಿಮಾನದ ಅಪಘಾತದಲ್ಲಿ ಸುಭಾಷರು ಸತ್ತಿಲ್ಲವೆಂದೂ, ರಷ್ಯಾ-ನೆಯ ಇಸ್ವಿಯಲ್ಲಿಯೆ ಅವರು ಜಪಾನ್–ಜರ್ಮನಿಗಳಿಗೊದಗಬಹುದಾದ ಸೋಲನ್ನು ಮೊಗ್ಗಲೇ ಕಂಡು, ರಸಿಯಾಕ್ಕೆ ಹೋಗುವುದನ್ನು ನಿಶ್ಚಯಿಸಿದ್ದರೆಂದೂ, ಆದೇ ತಪ್ಪು ಯೋಜನೆಯ ಪ್ರಕಾರ ಅವರು ಮಂಚೂರಿಯಾಕ್ಕೆ ಹೋದರೆಂದೂ, ಸುರೇಶಚಂದ್ರ ಬೋಸರು ಅಭಿಪ್ರಾಯಪಡುತ್ತಾರೆ. ಸುರೇಶ ಚುದ್ರರು ಸುಭಾಷರ ಅಣ್ಣಂದಿರು'

'ಸುಭಾಷರು ಇನ್ನೂ ಜೀವಿಸಿರುತ್ತಾರೆಂತಲೇ ನನ್ನ ಅಭಿಪ್ರಾಯ! ಮೊನ್ನೆ ಮೊನ್ನೆ ಮದ್ರಾಸಿನ ಮಹನೀಯರೊಬ್ಬರು ಹೇಳಿದ್ದನ್ನು ನೀವು ಪೇಪರಿನಲ್ಲಿ ಓದಿರಬಹುದು:— ಅವರೊಂದಿಗೆ ಸುಭಾಷರ ಪತ್ರವ್ಯವಹಾರವಿದೆಯಂತೆ. ಹೋದ ವರ್ಷ ಅವರು ಸುಭಾಷರನ್ನು ಭೇಟ್ಟಿಯಾಗಿದ್ದರಂತೆ; ಇನ್ನೂ ಯೋಗ್ಯ ಕಾಲ ಬಂದಿಲ್ಲವಾದ್ದರಿಂದ, ಅವರಿದ್ದ ಸ್ಥಳವನ್ನು ಯಾರಿಗೂ ಹೇಳಬಾರದೆಂದು ಸುಭಾಷರೇ ಅವರಿಗೆ ಹೇಳಿದ್ದಾರಂತೆ; ಯೋಗ್ಯಕಾಲ ಬಂದೊಡನೆ ಅವರು ಭಾರತಕ್ಕೆ ಮರಳಿ ಬರುತ್ತಾರಂತೆ!' ಎಂದು ನಾನು ಹೇಳಿದೆ.

'ಇದರಲ್ಲಿ ಮಾತ್ರ ನನ್ನ ನಂಬಿಕೆ ಇಲ್ಲ' ಎಂದು ಗುಂಡೂಮಾಮಾ ನುಡಿದರು. 'ಸುಭಾಷರು ಇವರಿಗೆ ಭೆಟ್ಟಿಯಾಗಿ ಹೀಗೆ ಹೇಳಿದ್ದೇ ನಿಜವಾದರೆ, ಈ ರೀತಿಯಾಗಿ ಎಲ್ಲರಿದುರಿಗೆ ಹೇಳುತ್ತ ಹೋಗುವುದು ಸುಭಾಷರ ಇಚ್ಛೆಗೆ ವಿರೋಧವಾಗುವುದಿಲ್ಲವೇ? ಏನಾದರೊಂದು ಇಂತಹ ವಿಷಯಗಳಿಗೆ ಬಣ್ಣ ಕೊಟ್ಟು ಜನರಲ್ಲಿ ಹೇಳುತ್ತ ಹೋಗುವುದೆಂದರೆ, ತಮ್ಮ ಹೆಸರನ್ನು ಪ್ರಸಿದ್ಧಿಗೊಳಿಸಿಕೊಳ್ಳುವುದಕ್ಕಾಗಿಯೇ ಹೊರತು ಅಮತ್ತೊಂದಿಲ್ಲ. 'ಯೇನಕೇನ ಪ್ರಕಾಶರೇಣ ಪ್ರಸಿದ್ಧ ಪುರುಷೋಭವ' ಎಂಬ ಎಂಬ ತತ್ತ್ವದವರಿವರು'

'ಈಗ ಅವರು ಜೀವಿಸಿರಲಿ, ಇಲ್ಲದಿರಲಿ, ಸುಭಾಷರಂತಹ ದೇಶಭಕ್ತರು ಮತ್ತೊಬ್ಬರಾಗಲಿಲ್ಲ, ಆಗಲಿಕ್ಕಿಲ್ಲವೆಂದು ಹೇಳಬಹುದು. ಆದರೆ ರಷ್ಯಾನೆಯ ಇಸ್ವಿಯಲ್ಲಾದ ತ್ರಿಪುರಿ ಕಾಂಗ್ರೆಸಿನ ಅಧಿವೇಶನದ ನಂತರ, ಗಾಂಧೀಜಿಯವರು ಅವರ ಸಂಗಡ ಬಹಳೇ ಕಟುವಾಗಿ ನಡೆದುಕೊಂಡರು. ಆದರೂ ಸುಭಾಷರಿಗೆ ಗಾಂಧೀಜಿಯವರ ಮಲುವಾಗಿ ಇದ್ದ ಭಕ್ತಿ ಅವರ ಮಾತ್ರ ಕಡಿಮೆಯಾಗಲಿಲ್ಲ. ಇದೇ ಅವರ ದೊಡ್ಡ ಮನಸ್ಸನ್ನು ತೋರಿಸುತ್ತದೆ.' ಎಂದು ರಂಗಣ್ಣನವರು ನುಡಿದರು.

ಮುಂದೆ ಸ್ವಲ್ಪ ಹೊತ್ತು ಯಾರೂ ಮಾತಾಡಲಿಲ್ಲ. ಗುಂಡೂಮಾಮಾ ಏನೋ ಯೋಚಿಸುತ್ತಿದ್ದಂತೆ ತೋರಿತು. ಆಮೇಲೆ ಹೇಳತೊಡಗಿದರು: 'ತ್ರಿಪುರೀ ಕಾಂಗ್ರೆಸ್ ಎಂದ ಕೂಡಲೆ ನನಗೆ,

೪-೫ ಪರ್ವತಗಳ ಮೊದಲು ನಾನು ಅಲ್ಲಿಗೆ ಹೋದಾಗಿನ ಸಂಗತಿ ನೆನಪಾಯಿತು. ಆ ಸ್ಥಳ ನರ್ಮದೆಯ ತೀರದಲ್ಲಿ, ಜಬಲ್‌ಪುರದಿಂದ ೫-೬ ಮೈಲುಗಳ ಅಂತರದ ಮೇಲೆ. ಎಲವಾರಿ ಘಾಟಿನ ಬಳಿಯಲ್ಲಿ ಅದೆ ಸೃಷ್ಟಿಯ ಸೊಬಗನ್ನು ನೋಡಬೇಕು ನರ್ಮದೆಯ ತೀರದಲ್ಲಿಯೇ! ನರ್ಮದೆಯು ಹರಿದದ್ದು ಗುಡ್ಡಗಳ ನಡುನೆಯೇ; ಆದುದರಿಂದ ನೀರು ಕೆಳಗಿನ ನೆಲ ಕಾಣುವಂತೆ ಸ್ವಚ್ಛವಾಗಿರುತ್ತದೆ. ಆದರೆ ಎಳವು ಹೆಬ್ಬಂಡೆಯ ಮೇಲೆಲ್ಲ ದಟ್ಟವಾಗಿ ಬೆಳೆದ ನಾನಾ ತೆರದ ಗಿಡ-ಮರಗಳು.

ಎಲವಾರಿ ಘಾಟಿನ ಮೇಲೆ ಚಿಕ್ಕ ದೊಡ್ಡ ಎಷ್ಟೋ ಗುಡಿಗಳವೆ. ನಾನು ಅಲ್ಲಿಗೆ ಹೋದದ್ದು ಆದಿತ್ಯವಾರ; ಕೆಲವು ಜನರು ಪಿಕ್ ನಿಕ್-ಗೆಂದು ಅಲ್ಲಿಗೆ ಬಂದಿದ್ದರು. ನನ್ನ ಹತ್ತಿರದಿಂದಲೇ ಹೋಗುತ್ತಿದ್ದ ೩-೪ ಹುಡುಗರು, ಅಲ್ಲಿಯ ಒಂದೆರಡು ಸಣ್ಣ ಗುಡಿಗಳನ್ನು ನೋಡುತ್ತಿದ್ದರು. ಒಬ್ಬನು ಒಂದು ಗುಡಿಯನ್ನು ತೋರಿಸುತ್ತ ಹೇಳುತ್ತಿದ್ದ:— "ಇದೇ ನೋಡು ನಾನು ಹೇಳುತ್ತಿದ್ದ **ಹುಚ್ಚನ ಗುಡಿ**" ಎಂದು. ನನಗೆ ಅದರ ಅರ್ಥವಾಗಲಿಲ್ಲ. ಅನಂತರ ಗೊತ್ತಾಯಿತು:—ಅಲ್ಲಿಯೇ ನದಿಯ ದಂಡೆಗೆ ಒಂದು ದೊಡ್ಡ ಗುಡಿಯಲ್ಲಿ, ಒಬ್ಬ ಹೆಸರಾದ ವೈದ್ಯರಿದ್ದರು. ಕೆಲವು ದಿವಸಗಳ ಮೊದಲು ಒಬ್ಬ ದೊಡ್ಡ ಅಧಿಕಾರಿಸ್ಥರಿಗೆ ಹುಚ್ಚು ಹಿಡಿದು, ತಮ್ಮ ನೌಕರಿಯನ್ನು ಬಿಟ್ಟು ಮನೆಯಲ್ಲಿ ಕುಳಿತುಕೊಳ್ಳುವಂತಾಗಿತ್ತು. ಈ ವೈದ್ಯರು ಅವರನ್ನು ತಮ್ಮ ಬಳಿಯಲ್ಲಿ ಎಂದರೆ ಆ ಚಿಕ್ಕಗುಡಿಯಲ್ಲಿ ಇಟ್ಟುಕೊಂಡು ಗುಣಪಡಿಸಿದರಂತೆ. ಅಂದಿನಿಂದ ಆ ಗುಡಿಯನ್ನು 'ಹುಚ್ಚನಗುಡಿ' ಎಂದೇ ಕರೆಯುತ್ತಾರೆ. ಅಲ್ಲಿಯ ವೈದ್ಯರು ಆಯುರ್ವೇದದಲ್ಲಿ ಒಳ್ಳೇ ನಿಷ್ಣಾತರೆಂದು ತೋರಿತು. ಅವರು ಹೇಳಿದರು: 'ಆಯುರ್ವೇದದಲ್ಲಿ ಉಪಯೋಗಿಸುವ ಗಿಡ ಮೂಲಿಕೆಗಳೆಲ್ಲ ಸಿಗುವ ಸ್ಥಳವೆಂದರೆ—ಮೊದಲನೆಯದು ಹಿಮಾಲಯ; ಎರಡನೆಯದೆಂದರೆ ನರ್ಮದೆಯ ತೀರ! ಸಂಜೀವಿನಿಯನ್ನೊಂದು ಬಿಟ್ಟು ಉಳಿದ ಎಲ್ಲ ವನಸ್ಪತಿಗಳೂ ಇಲ್ಲಿ ಸಿಗುತ್ತವೆ' ಎಂದು.

'ಸಂಗಮರವರಿ ಶಿಲೆಗಳು (Marble Rocks) ಅಲ್ಲಿಯೇ ಅಲ್ಲವೇ ಇರುವುದು?' ಎಂದು ರಂಗಣ್ಣ ಕೇಳಿದ.

'ಅಹುದು' ಜಬಲ್‌ಪುರದಿಂದ ೮-೯ ಮೈಲುಗಳ ಮೇಲೆ, **ಬೇಡಾಘಾಟ** ಎಂಬಲ್ಲಿ ಇವೆ. ನಾನು ೪-೫ ಜನ ಮಿತ್ರರೊಂದಿಗೆ ಅಲ್ಲಿಗೂ ಹೋಗಿದ್ದೆ. ನಮ್ಮ ಸಾಮಾನುಗಳನ್ನು ನದಿಯ ದಂಡೆಯಲ್ಲೇ ಇದ್ದ ಧರ್ಮಶಾಲೆಯಲ್ಲಿ ಇಟ್ಟು, ಸಂಗಮರವರಿ ಶಿಲೆಗಳನ್ನು ನೋಡುವ ಉತ್ಸುಕತೆಯಿಂದ ಅಲ್ಲಿಗೆ ಹೋದೆವು. ಶುಭ್ರವಾದ ಬೆಳುದಿಂಗಳಲ್ಲಿ, ನರ್ಮದೆಯ ಸ್ವಚ್ಛವಾದ ನೀರಿನಿಂದ ತಲೆಯೆತ್ತಿಕೊಂಡು ನಿಂತ ಆ ಬಿಳಿಯ ಸಂಗಮರವರಿಯು ಕಲ್ಲುಬಂಡೆಗಳು; ಅವುಗಳ ಹಿಂದೆ ನದಿಯ ಆಚೆಯ ತೀರದಲ್ಲಿಯ ದಟ್ಟವಾದ ಅರಣ್ಯ—ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿದ್ದುವು. ದೂರದಿಂದ ಕೇಳಬರುತ್ತಿದ್ದ 'ಧುವಾ-ಧಾರ'ದ ನೀರಿನ ಸಪ್ಪಳು ಪ್ರಶಾಂತ ವಾತಾವರಣವನ್ನು ಭೇದಿಸಿಕೊಂಡು ಬರುತ್ತಿದ್ದು ಕರ್ಣಮಧುರವಾಗಿತ್ತು. ಒಂದು ಚಿಕ್ಕ ನೌಕೆಯಲ್ಲಿ ಕುಳಿತು ಆ ಬಂಡೆಗಳವರೆಗೂ ಹೋದೆವು. ಆ ಬೆಳುದಿಂಗಳಿನ ರಾತ್ರಿ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಕೊನೆಯವರೆಗೆ ಮರೆಯಲಾಗದ ಅದೊಂದು ನೆನಹು. ನೀರಿನ ಸೆಳವಿನಿಂದ ಆ ಬಂಡೆಗಳು ಕೊರೆದಂತಾಗಿ ಅವುಗಳ ಮೇಲೆ ನಾನಾತರಹದ ಆಕೃತಿಗಳು ಕಂಡುಬರುತ್ತವೆ ಒಂದೆಡೆಯಲ್ಲಿ ಆನೆಯ ಆಕಾರವಾದದ್ದು ದೂರದಿಂದಲೆ ಕಾಣಿಸುತ್ತದೆ.

ಮರುದಿವಸ ಮುಂಜಾನೆ 'ಧುವಾಧಾರ'ದ ಕಡೆಗೆ ಹೋದೆವು. ಸಾಧಾರಣ ೩೦ ಫೂಟು ಎತ್ತರದಿಂದ ನೀರು ಬೀಳುತ್ತದೆ ಕಲ್ಲು ಬಂಡೆಗಳ ನಡುನೆ, ೪೦-೫೦ ಫೂಟಿನ ಕೆಳಗೆ ಆ ಪ್ರವಾಹವನ್ನು ನೋಡಿದರೆ ತಲೆ ತಿರುಗಿದಂತಾಗುತ್ತದೆ ನದಿಯಲ್ಲಿ ಶಂಗಮರವರಿ ಕಲ್ಲಿನ ಬಂಡೆಗಳಿವೆ. ದಂಡೆಯ ಮೇಲೆಲ್ಲ ಕಾಣುವ ಬಂಡೆಗಲ್ಲುಗಳು ಸಂಗಜೀರಿಗೆಯವು. ಅವನ್ನು Soft stone ಎಂದು ಕರೆಯುತ್ತಾರೆ ಅಲ್ಲಿ ಆ ಕಲ್ಲಿನಿಂದ ನಾನಾತರದ ಅಂದ-ಚೆಂದವಾದ ಹಸ್ತಕೌಶಲದ ಸಣ್ಣ ಪುಟ್ಟ ಸಾಮಾನುಗಳನ್ನೂ, ನಾನಾತರದ ವಿಗ್ರಹಗಳನ್ನೂ ಮಾಡುತ್ತಾರೆ. ಅಲ್ಲಿಯೇ ಎತ್ತರದ ಮೇಲೆ ಒಂದು ಪುರಾತನದ ದೇವಾಲಯವಿದೆ! 'ಚೌಳ ಯೋಗಿನಿಯರ ಗುಡಿ' ಎಂದು ಕರೆಯುತ್ತಾರೆ ಅದನ್ನು. ಅಲ್ಲಿ ಚೌಳ ಯೋಗಿನಿಯರ ಮೂರ್ತಿಗಳಿವೆ. ನಮ್ಮಲ್ಲಿಯ ಗುಡಿಗಳಲ್ಲಿ ಕಂಡುಬರುವ ಶಿಲ್ಪಕಲೆ ಅಲ್ಲಿಯೂ ಕಂಡುಬರುತ್ತದೆ ಆದರೆ ಮುಸಲ್ಮಾನರ ಧರ್ಮಾಂಧತೆಯು ಅಲ್ಲಿ ಸಹ ಒಂದೂ ಮೂರ್ತಿಯನ್ನು ಇದ್ದಂತೆ ಉಳಿಯುಗೊಟ್ಟಿಲ್ಲ.'

ಬೇಡಾಘಾಟಿನ ಈ ವರ್ಣನೆ ಕೇಳಿ ಕಿಟ್ಟುವು ನಗುತ್ತ 'ನೀನೇ ಇಷ್ಟು ಹೇಳುವುದನ್ನು ನೋಡಿದರೆ, ಅಲ್ಲಿ ಹೋದವರೆಲ್ಲ ಕವಿಗಳೇ ಆಗುವುದರಲ್ಲಿ ಸಂದೇಹವಿಲ್ಲವೆಂದು ಹೇಳಬೇಕು.' ಎಂದು ನುಡಿದ.

ಗುಂಡುನೂಮೂ ನಗುತ್ತ ಹೇಳಿದನು: 'ಕವಿಯೆಂದು ಕರೆಯಿಸಿಕೊಳ್ಳಲಿಕ್ಕೆ ನಾನಿದನ್ನು ಹೇಳಲಿಲ್ಲ. ಆದರೆ ನನ್ನ ಅಭಿಪ್ರಾಯವೆಂದರೆ—ಇಂತಹ ಸೌಂದರ್ಯದ ನಿಧಿಯನ್ನು ಸೃಷ್ಟಿಯು ನಮಗೆ ದಯಪಾಲಿಸಿರಲು ಅದರ ಉಪಯೋಗವನ್ನು ತೆಗೆದುಕೊಳ್ಳಲು ನಾವು ಏನೂ ಪ್ರಯತ್ನಿಸಿಲ್ಲ. ಸಾಕಷ್ಟು ಪ್ರಚಾರಗೊಳಿಸಿದರೆ ಪರದೇಶದಿಂದ ಮತ್ತು ಪರಪ್ರಾಂತ್ಯಗಳಿಂದ ಬರುವ ಪ್ರವಾಸಿಕರಿಗೆ (tourists) ಇದೂ ಒಂದು ಉತ್ತಮ ಆಕರ್ಷಕ ಸ್ಥಳವಾಗುತ್ತದೆಂಬಲ್ಲಿ ಸಂದೇಹವಿಲ್ಲ. ಅದಕ್ಕೆ ತಕ್ಕಂತೆ ಇಲ್ಲಿ ಪ್ರವಾಸಿಕರಿಗೆ ಇಳಿದುಕೊಳ್ಳಲಿಕ್ಕೆ ಮತ್ತು ಊಟ ಮುಂತಾದುವುಗಳಿಗೆ ಯೋಗ್ಯವ್ಯವಸ್ಥೆ ಮಾತ್ರ ಮಾಡಬೇಕು. ಈಗಿದ್ದ ಧರ್ಮಶಾಲೆಯನ್ನು ನೋಡಿದರೆ, ಯಾರೂ ಆಧುನಿಕ ಸಮೀಪಕ್ಕೆ ಸಹ ಬರುವಂತಿಲ್ಲ. ನಾವು ಮರುದಿವಸ ಮಧ್ಯಾಹ್ನ ಊಟ ತೀರಿಸಿಕೊಂಡು, ವಿಶ್ರಾಂತಿಗೆಂದು ನಮ್ಮ ಹಾಸಿಗೆ ಇಟ್ಟುಕೊಂಡು (ಧರ್ಮಶಾಲೆಯಲ್ಲಿ) ಹೋದರೆ, ಹಾಸಿಗೆಯ ತುಂಬ ತಗಣಿಗಳು ಕಂಡುಬಂದುವು ಹಾಸಿಗೆಗಳನ್ನು ಬಿಸಿಲಿಗೆ ಒಗೆದು ಮತ್ತೆ ನಾವು ನದಿಯ ತೀರಕ್ಕೆ ಹೋದೆವು. ಪರದೇಶದ ಮತ್ತು ಪರಪ್ರಾಂತದ ಪ್ರವಾಸಿಕರು ಇಲ್ಲಿಗೆ ಬರುವಂತಾದರೆ, ಇಲ್ಲಿಯ ಅನೇಕ ಬಡಜನರು ಹೊಟ್ಟೆ ತುಂಬಿಕೊಳ್ಳಲಿಕ್ಕೆ ಮಾರ್ಗವಾದಂತಾಗುತ್ತದೆಯಲ್ಲದೆ ಪ್ರಾಂತದ ಸರಕಾರಕ್ಕೂ ಒಳ್ಳೆಯ ಆದಾಯವಾಗುತ್ತದೆ.

ರಂಗಣ್ಣನಿಗೆ ಇದೆಲ್ಲದರ ಕಡೆಗೆ ಮನಸ್ಸಿದ್ದಂತೆ ತೋರಲಿಲ್ಲ. ಏನೋ ಯೋಚಿಸುತ್ತಿದ್ದವನಂತೆ ತಲೆ ತುರಿಸಿಕೊಳ್ಳುತ್ತ ಕುಳಿತಿದ್ದ.

'ಏನು ರಂಗಣ್ಣ? ಇತಿಹಾಸದಲ್ಲಿಯ ಯಾವ ವಿಷಯ ನಿನ್ನ ತಲೆ ತಿನ್ನುತ್ತಲಿದೆ?' ಎಂದು ಗುಂಡೂಮಾಮಾ ಕೇಳಿದರು.

'ನೀವು ಜಬಲ್‌ಪುರದ ವಿಷಯ ಹೇಳಿದಾಗಿನಿಂದಲೂ ಅಕಬರನ ಕಾಲದ ಯಾವುದೋ ಕಾಳೆಗದ ನೆನಪಾದಂತೆ ಎನಿಸುತ್ತಿದೆ. ಆದರೆ ಪೂರ್ಣ ಜ್ಞಾಪಕಕ್ಕೆ ಬರಲೊಲ್ಲದು!' ಎಂದು ರಂಗಣ್ಣ ಹೇಳಿದ.

'ರಾಣೀ ದುರ್ಗಾವತಿಯದೇ?' ಎಂದರು ಗುಂಡೂಮಾಮಾ ನಗುತ್ತ.

'ಅಹುದಹುದು' ಎಂದು ರಂಗಣ್ಣ ನುಡಿದ — ಈಗ ಪೂರ್ಣ ನೆನಪಾದವರಂತೆ. 'ರಾಣೀ ದುರ್ಗಾವತಿಯು ನಮ್ಮ ಕಿತ್ತೂರ ಚೆನ್ನಮ್ಮ — ಬೆಳವಡಿ ಮಲ್ಲಮ್ಮರಂತೆ ಶೂರಳು, ಧೀರಳು, ರಾಜಕಾರಣ ಕುಶಲಳು. ಲಗ್ನವಾಗಿ ನಾಲ್ಕೇ ವರ್ಷಗಳಲ್ಲಿ ವೈಧವ್ಯಪ್ರಾಪ್ತವಾದರೂ ಧೈರ್ಯಗೆಡದೆ, ೧೩ ವರ್ಷಗಳವರೆಗೆ ರಾಜ್ಯಭಾರಮಾಡಿದಳು. ಇವಳ ರಾಜ್ಯವು ಬೆಳೆಯುತ್ತ, ಸರ್ವವಿಧದಲ್ಲಿಯೂ ಹೆಸರಾಗುತ್ತ ಹೋಗುವುದು, ಆಗಿನ ಕಾಲದ ಮೊಗಲ ಬಾದಶಹನಾದ ಅಕಬರನಿಗೆ ಸಹನವಾಗಲಿಲ್ಲ. ಅವನ ಅನುಯಾಯಿಗಳಲ್ಲೊಬ್ಬನಾದ ಅಸಫ್‌ಖಾನನೆಂಬವನು ಅವಳಮೇಲೆ ದಂಡೆತ್ತಿ ಬಂದನು. ಜಬಲ್‌ಪುರದ ಹತ್ತಿರದಲ್ಲಿರುವ ಮದನಮಹಲಿನ ಬಳಿಯಲ್ಲಿ ಯುದ್ಧನಡೆದು, ಅಸಫ್‌ಖಾನನು ಎರಡುಸಲ ಸೋತುಹೋಗಬೇಕಾಯಿತು. ಆದರೆ ಅವನು ಅಷ್ಟಕ್ಕೆ ಬಿಡಲಿಲ್ಲ. ಮೂರನೆಯ ಸಲ ಮತ್ತೆ ದೊಡ್ಡ ಸೈನ್ಯ ಕೂಡಿಸಿಕೊಂಡು ಯುದ್ಧಕ್ಕೆ ಅಣಿಯಾದನು. ಈ ಸಲ ಮಾತ್ರ ಅಂತಹ ದೊಡ್ಡ ಸೈನ್ಯದೊಂದಿಗೆ ತನ್ನ ಕೆಲವೇ ಸೈನಿಕರೊಂದಿಗೆ ಹೋರಾಡುವುದು ದುರ್ಗಾವತಿಗೆ ದುಸ್ತರವಾಯಿತು. ಆದರೂ ಎದೆಗುಂದಲಿಲ್ಲ. ಕಾಳೆಗದಲ್ಲಿ ಬಾಣ ನೆಟ್ಟು ಒಂದು ಕಣ್ಣು ಹೋದರೂ, ರಣದಿಂದ ಹಿಂದೆಗೆಯದಿಲ್ಲ. ಇದೇ ಸಮಯಕ್ಕೆ ಒಬ್ಬನೇ ಮಗನಾದ ವೀರನಾರಾಯಣನಿಗೂ ಗಾಯವಾಗಿ, ಆತ ಕೆಳಗೆ ಬೀಳುವುದನ್ನು ನೋಡಿದಳು. ಮತ್ತೊಂದು ಬಾಣ ಅವಳ ಕೆನ್ನೆಗೆ ತಾಗಿ, ಬಹಳ ರಕ್ತಸ್ರಾವವಾಗಿ ಅನೆಯಿಂದ ಕೆಳಗೆ ಬಿದ್ದಳು. ಮೊಗಲರ ಸೈನ್ಯ ಹೆಚ್ಚಾಗುತ್ತಲೇ ಇತ್ತು. ತನಗೆ ಸೋಲು ನಿಶ್ಚಿತವೆಂಬುದು ಗೊತ್ತಾದರೂ ಜೀವ ಉಳಿಸಿಕೊಳ್ಳಲಿಕ್ಕೆ ಓಡಿಹೋಗದೆ, ಅಂತಹ ಸ್ಥಿತಿಯಲ್ಲಿಯೂ ವೈರಿಗಳೊಡನೆ ಹೋರಾಡುತ್ತ, ವೀರಸ್ವರ್ಗವನ್ನು ಪಡೆದ ವೀರರಮಣಿಯವಳು.'

'ಭಾರತದ ಪುಣ್ಯಭೂಮಿಯಲ್ಲಿ ಅಮರರಾಗಿ ಮೆರೆವ ಸ್ತ್ರೀರತ್ನಗಳಲ್ಲಿ ಕಿತ್ತೂರ ಚೆನ್ನಮ್ಮ — ಬೆಳವಡಿ ಮಲ್ಲಮ್ಮರಂತೆ ರಾಣೀ ದುರ್ಗಾವತಿಯೂ ಒಬ್ಬಳು' ಎಂದು ಗುಂಡೂಮಾಮಾ ನುಡಿದರು. 'ಅವರೆ ಚೆನ್ನಮ್ಮ ಮಲ್ಲಮ್ಮರ ದುರ್ದೈವವೋ; ಅವರ ಹೆಸರನ್ನು ಉಚ್ಚರಿಸುವ ಯೋಗ್ಯತೆಯೇ ನಮ್ಮಲ್ಲಿಲ್ಲವೋ!! ಇಷ್ಟು ಮಾತ್ರ ನಿಜ....' ಗುಂಡೂಮಾಮಾನ ಧ್ವನಿಯು ಗಳಗಳಿಯಿಂದ ತುಂಬಿತ್ತು. 'ಚೆನ್ನಮ್ಮ-ಮಲ್ಲಮ್ಮರ ಕರ್ನಾಟಕಕ್ಕೂ, ದುರ್ಗಾವತಿಯ ಮಧ್ಯಪ್ರದೇಶಕ್ಕೂ ಅದೆಷ್ಟು ಅಂತರ!! ಮಧ್ಯಪ್ರದೇಶದ ಜನರು, ರಾಣೀ ದುರ್ಗಾವತಿಯ ಸಲುವಾಗಿ ಬಹಳೇ ಗೌರವ ತೋರುತ್ತಾರೆ. ಪ್ರತಿಯೊಬ್ಬರೂ ಅವಳ ಕತೆಯನ್ನು ಹೆಮ್ಮೆಯಿಂದ ಹೇಳುತ್ತಾರೆ. ಜಬಲ್‌ಪುರದಲ್ಲಿಯ ದನಕಾಯುವ ಹುಡುಗರನ್ನು ಮೊದಲು ಮಾಡಿಕೊಂಡು ಎಲ್ಲರಿಗೂ ಆ ರಾಣಿಯ ವಿಷಯ ಗೊತ್ತಿದೆ. ಪ್ರಾಥಮಿಕ, ಮಾಧ್ಯಮಿಕ ಶಾಲೆಯ ಎಲ್ಲ ಪಠ್ಯಪುಸ್ತಕಗಳಲ್ಲಿಯೂ ಅವಳ ಜೀವನದ ಸಂಬಂಧವಾಗಿ ಒಂದೆರಡು ಪಾಠಗಳಿದ್ದೇ ಇರುತ್ತವೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಮೊದಲನೆಯ ವರ್ಗದಿಂದ ಪ್ರಾರಂಭಿಸಿ ಪ್ರತಿವರ್ಷ ಅವಳ ವಿಷಯವಾಗಿ ಹೆಚ್ಚೆಚ್ಚು ಕಲಿಯುತ್ತ ಹೋಗುತ್ತಾನೆ. ಈ ರೀತಿಯಾಗಿ ನಮ್ಮಲ್ಲಿಯ ಎಷ್ಟು ವಿದ್ಯಾರ್ಥಿಗಳಿಗೆ ಕಿತ್ತೂರ ಚೆನ್ನಮ್ಮ, ಬೆಳವಡಿ ಮಲ್ಲಮ್ಮರ ವಿಷಯ ಗೊತ್ತಿದೆ? ಜಬಲ್‌ಪುರದಲ್ಲಿದ್ದುಂತೂ ದುರ್ಗಾವತಿಯ ವಿಷಯವೆಂದರೆ ಎಲ್ಲರ ಮನೆ ಮಾತಾಗಿದೆ. 'ಇಲ್ಲಿ ನೋಡತಕ್ಕಂತಹದೇನಿದೆ?' ಎಂದು ಯಾರನ್ನು ಕೇಳಿದರೂ ಮೊದಲನೆಯದೆಂದರೆ 'ದುರ್ಗಾವತಿಯ ಕೋಟೆ' ಎಂದು ಹೇಳುತ್ತಾರೆ. ಅದು ಮದನಮಹಲಿನ ಗುಡ್ಡಗಳ ನೆಲೆ ಕಲ್ಲಿನಿಂದ ಕಟ್ಟಲ್ಪಟ್ಟಿದೆ. (ದೊಡ್ಡ ಕಲ್ಲು ಬಂಡೆಗಳಿಂದ ಜೋಡಿಸಲ್ಪಟ್ಟಿದೆ ಎಂದರೆ ಹೆಚ್ಚು ಯೋಗ್ಯವೆನಿಸುವುದು.) ಅಲ್ಲಿ ಅವಳು ಆಗಾಗ ಹೋಗಿ ಇರುತ್ತಿದ್ದಳೆಂದು ಹೇಳುತ್ತಾರೆ. ಅವಳು ಶೂರಳೂ, ರಾಜಕಾರಣ ಕುಶಲಳೂ ಇದ್ದಂತೆ, ಈಶ್ವರಭಕ್ತಳೂ ಆಗಿದ್ದಳಂತೆ. ಪ್ರತಿದಿನ ಮುಂಜಾನೆ, ೩-೪ ಮೈಲು ದೂರದಲ್ಲಿರುವ 'ಸಂಗ್ರಾಮಸಾಗರ' ಎಂಬ ಸುಂದರವಾದ ಕೆರೆಯಲ್ಲಿ ಮಿಂದು ಗುಪ್ತೇಶ್ವರದಲ್ಲಿಯ (ಮದನಮಹಲಿನಿಂದ ೨-೩ ಮೈಲು) ಈಶ್ವರನ ದರ್ಶನ ಮಾಡಿಕೊಂಡು ಬರುವ ಪರಿಪಾಠವನ್ನಿಟ್ಟುಕೊಂಡಿದ್ದಳಂತೆ.

ಆದರೆ ರಂಗಣ್ಣಾ, ಚೆನ್ನಮ್ಮ-ಮಲ್ಲಮ್ಮರ ವಿಷಯವಾಗಿ ಇಂತಹ ಯಾವ ವಿಷಯ ಗೊತ್ತಿದೆ ನನಗೆ? ನಮ್ಮ ಕನ್ನಡನಾಡಿನ ಇತಿಹಾಸ ಉಜ್ವಲವಾಗಿದೆ, ಸ್ಫೂರ್ತಿದಾಯಕವಾಗಿದೆ; ಆದರಿಂದ ಸ್ಫೂರ್ತಿ ಪಡೆಯಬೇಕಾದರೆ, ಅದರ ಪರಿಚಯ ಸಾಕಷ್ಟು ಬೇಕು. ಚಿಕ್ಕ ಮಕ್ಕಳಿದ್ದಾಗಿನಿಂದಲೇ ಅದರ ಭಾವ ಹುಟ್ಟುವಂತೆ ಆ ವಿಷಯಗಳನ್ನು ಅವರಿಗೆ ಕಲಿಸಬೇಕು. ನಮ್ಮ ದೇಶ ಸ್ವತಂತ್ರವಾಗಿ ೯ ವರ್ಷಗಳಾದರೂ ಶಿಕ್ಷಣಕ್ರಮ ಮಾತ್ರ ಹಾಗೇ ಉಳಿದಿದೆ.'

ಗುಂಡೂಮಾಮಾನ ಮುಖ ವಿಷಾದಪೂರ್ಣವಾಗಿತ್ತು. ಸ್ವಲ್ಪ ಹೊತ್ತು ಹಾಗೆಯೇ ಸುಮ್ಮನೆ ಕುಳಿತಿದ್ದು ಮತ್ತೆ ಹೇಳತೊಡಗಿದರು. 'ಏನೋ ಹೇಳಹೊರಟು ಮತ್ತೇನೋ ಹೇಳತೊಡಗಿದೆ; ಕ್ಷಮಿಸಿ. ಜಬಲ್‌ಪುರದ ಸುತ್ತಲಿನ ಸೃಷ್ಟಿಸೌಂದರ್ಯದ ವಿಷಯ ಹೇಳುತ್ತಿದ್ದೆನಲ್ಲವೇ? ಕರಿಯ ಕಲ್ಲಿನ ದೊಡ್ಡ ದೊಡ್ಡ ಬಂಡೆಗಳಿಂದಲೂ, ನಾನಾತರದ ವೃಕ್ಷಗಳಿಂದಲೂ ತುಂಬಿದ ಮದನಮಹಲಿಗಿಂತ ನನ್ನ ಮನಸ್ಸನ್ನಾಕರ್ಷಿಸಿದ ಸ್ಥಳವೆಂದರೆ — 'ಪೈವತಾಲ!' ಅದರ ಹೆಸರು 'ದೇವತಾಲಾಬ್' ಎಂದು ಇದ್ದಿರಬಹುದೆಂದು ಎನಿಸುತ್ತದೆ. ಗುಡ್ಡಗಳ ಮಧ್ಯದಲ್ಲಿ, ನಾನಾವೃಕ್ಷಗಳಿಂದ ಸುತ್ತುವರೆಯಲ್ಪಟ್ಟ ಸ್ವಚ್ಛನೀರಿನ

ಸುಂದರವಾದ ಕೆರೆ—ಒಂದುಕಡೆಗೆ ೩-೪ ಗುಡಿಗಳನ್ನು ಅಲ್ಲಿಂದ ಕೆರೆಯೊಳಗೆ ಇಳಿಯಲಿಕ್ಕೆ ಪಾವಟಿಗೆಗಳಿವೆ. ಎಂತಹ ಬೇಸಗೆಯ ಬಿಸಿಲಲ್ಲಿಯೂ ಇಲ್ಲಿ ತುಂಬ ತಂಪಾಗಿರುತ್ತದೆ. ಇವನ್ನು ನೋಡಿದೊಡನೆ ನನಗೆ ಬಾಣಕವಿಯು ನರ್ಣಿಸಿದ ಅಚ್ಛೋದಸರೋವರದ ವರ್ಣನೆಯೇ ನೆನಪಾಯಿತು. 'ಕಾದಂಬರಿ'ಯಲ್ಲಿ ಅದನ್ನು ನಾನು ಓದಿದಾಗ, ಇದೊಂದು 'ಬಾಣನ ಕನಸು' ಎಂದು ನಕ್ಕುಬಿಟ್ಟಿದ್ದೆ. ಆದರೆ ದೈವತಾಲವನ್ನು ನೋಡಿದಾಗ, ಅದು ನಿಜವಿದ್ದರೂ ಇರಬಹುದೆಂದುಕೊಂಡೆ. ಆಗಿನಿಂದಲೂ, ಮನಸ್ಸಿಗೆ ಬೇಜಾರಾದಾಗ ಎನ್ನಿಸುತ್ತದೆ—'ಇಷ್ಟೆಲ್ಲ ತೊಂದರೆ ಏಕೆ! ದೈವತಾಲಕ್ಕೆ ಹೋಗಿ ಸ್ವಲ್ಪ ವಾಗಿ ಇದ್ದು ಬಿಡಬೇಕು'—ಎಂದು. 'ದೈವತಾಲ'ವನ್ನು ನೆನೆಸಿಕೊಂಡಾಗೊಮ್ಮೆ ನನ್ನ ಮಹಾಭಾರತ-ರಾಮಾಯಣಕಾಲದ ಋಷಿಗಳ ಆಶ್ರಮದ ನೆನಪಾಗುತ್ತದೆ. ಇಷ್ಟು ಸುಂದರವಾದ ಪ್ರಶಾಂತ ಸ್ಥಳ. ನೊದಲು ಯಾವುದಾದರೊಂದು ಋಷಿಯ ಆಶ್ರಮವಾಗಿದ್ದಿರಲೇ ಬೇಕೆಂದು ಎನಿಸುತ್ತದೆ.'

ಇಷ್ಟು ಹೇಳುತ್ತಿರುವಾಗಲೇ ಹಿಂದಿನಿಂದ ಶೀನಪ್ಪನ ಧ್ವನಿ ಯಾಯಿತು: 'ಆಗಲೇ ನೀವೆಲ್ಲ ಇಲ್ಲಿ ಬಂದು ಬಿಟ್ಟಿರುವಿರಾ? ಯಾವ ಋಷಿಯ ಆಶ್ರಮವದು?'

'ಇವರೆಲ್ಲ ಬಂದು ಈಗ ೨-೩ ಗಂಟೆಗಳಾದುವು. ನೀನು ಇಂದು ಬರಲಿಕ್ಕಿಲ್ಲವೆಂದೇ ನಾವು ತಿಳಿದಿದ್ದೆವು. ಮತ್ತು, ಈ ವಿಷಯ ನಿನಗೆ ರುಚಿಸುವುದೇನೂ ಇಲ್ಲ. ಅದು ಯಾವ ಋಷಿಯ ಆಶ್ರಮವೂ ಇಲ್ಲ; ಆಶ್ರಮಕ್ಕೆ ಯೋಗ್ಯವಾದ ಸ್ಥಳವೆಂದು ಮಾತ್ರ ಹೇಳುತ್ತಿದ್ದೆ!' ಎಂದು ಗುಂಡೂಮಾವನೂ ನಗುತ್ತ ನುಡಿದರು.

'ನಿನ್ನೆ ಯಾಜ್ಞವಲ್ಕ್ಯ—ಗಾರ್ಗಿಯರ ಸಂಬಂಧವಾಗಿ ಹೇಳು. ತ್ತೇನೆಂದು ಎಂದಿದ್ದಿರಿ. ಅದನ್ನೇ ಹೇಳುತ್ತಿದ್ದಿರೇನೋ ಎಂದು ತಿಳಿದಿದ್ದೆ' ಎಂದ ಶೀನಪ್ಪ.

'ನೀನು ಇರದ ಹೊರತು ಅಂತಹ ವಿಷಯ ಬರುವುದೇ ಇಲ್ಲ. ಈ ಹೊತ್ತು ಇವರೆಲ್ಲ ಬಂದು ಆಗಲೇ ೨-೩ ಗಂಟೆಯಾಯಿತು. ನಾಳೆಯ ದಿವಸ ಸಂಜೆ ಆ ವಿಷಯ ನೋಡೋಣ' ಎಂದು ಗುಂಡೂಮಾವನೂ ಹೇಳಿದ ನಂತರ, ನಮನೆಯ ಕಡೆಗೆ ಹೊರಟೆವು.

ಮಡದಿಯ ಪತ್ರ

"ಶಿವ ಶ್ರೀ"

ನೀವಲ್ಲಿ ನಗರದಲಿ ನಾನಿಲ್ಲಿ ತವರಿನಲಿ
ನಮ್ಮಿಬ್ಬರೆಡೆಗಳಲಿ ವಿರಹದಾಳ,
ಏನೊಂದು ತಿಳಿಯದಿದೆ ನಿಮ್ಮ ಮನದಾಟವದು
ಏಕೆ ಮುನಿಸಾಂಳಿಹಿರಿ ಬಹಳ ಬಹಳ?

ಬೈಗೈತಂದು ಬಹುದಿವಸವಾಯ್ತೆಂದು
ಚಿಂತಿಸುತಲಿರುವಿ ಹೇಳಿ, ನಿಜ;
ಬಳಿಯಲಿರುತಿರುವಾಗ ಪ್ರೀತಿ ತೋರಿದ ನೀವು
ಇಂದೀಗ ದೂರುವುದು ನಿಮಗೆ ಸಲ್ಲ!

ನೂರು ತಿಂಗಳ ಕಂದ ತೊಟ್ಟಿಲಲಿ ನಗುತಿಹುದು
ಮನೆ ಎಲ್ಲ ತುಂಬಿಹುದು ಅದರ ಬೆಳಕು!
ಒಲೆಯೊಂದಾದರೂ ಬರಿಯದಾದಿರಿ ನೀವು
ಎಲ್ಲೆಲ್ಲಿ ಬೆಳಗಿಹುದೊ ನಿಮ್ಮ ಥಳುಕು?

ನನ್ನ ತವರವರೆಲ್ಲ ನಿಮಗಾಗಿ ಹಂಬಲಿಸಿ
ನಿತ್ಯ ಕೇಳುವರೆನ್ನ ಚುಚ್ಚಿ ನುಡಿದು,
ಯಾವ ಬೆಡಗಿಯ ಬಲೆಯ ಜಾಲದಲಿ ಸಿಲುಕಿಹಿರೊ?
ಬಾಳುವುದು ಸಾಕಾಯ್ತು ಜೀವ ಹಿಡಿದು.

ಒಮ್ಮೆಯಾದರು ನೀವು ಬಂದು ಮಗುವನು ನೋಡಿ
ಮನಕೆ ಮುದವನು ನೀಡಿ, ನನ್ನ ನಲ್ಲ!
ಮತ್ತೇನ ಬೇಡುವೆನು, ನೀವಿಲ್ಲದಿರುತಿರಲು
ತವರಿನಲಿ ಎನಗಿನ್ನು ಸುಖವೆ ಇಲ್ಲ!

ದೀಪೋತ್ಸವಗೀತ

(ನವ್ಯಕವನ)

ಶ್ರೀ. ಅರವಿಂದ ನಾಡಕರ್ಣಿ, ಬಿ. ಎಸ್ಸಿ. ಎಲ್ ಎಲ್. ಬಿ. ಮುಂಬೈ

ದೀಪ ದೀಪ ದೀಪ ದೀಪ ದೀಪ !
ಅಹಾ ದೀಪ,
ಅದೋ ದೀಪ,
ಇಗೋ ದೀಪ,
ದೀಪವೇ ದೀಪ !
ಹೊಡೆ ಫಟಾಕಿ, ಸರಸರ ತಿರುಗಿಸು ಸುದರ್ಶನ ;
ಮುಗಿಲಿಗೆ ಪುಟಿಸು ಹೂಮಳೆ ಸಪ್ತರಂಗಗಳಲಿ !

ಹ್ಹ ಹ್ಹ ಹ್ಹಾ.....
ಹ್ಹ ಹ್ಹ ಹ್ಹ ಹ್ಹಾ.....!
ಯಾರದು ಹಲ್‌ಕಿಸಿದು ಅಣಕಿಸುವವರು ?
ಯಾರದು ಮಿಂಚಿನೆವೆಗಳ ತೆರೆದು
ಕೋಟಿ ಕಣ್ಗಳ ನೆಟ್ಟದಿಟ್ಟಿಯಲಿ ನೋಡುವವರು ?
ಯಾರದು ಕಣ್ ಹೊಡೆದು ಕರೆಯುವವರು ?
ಓ.....?
" ಓಂ, ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ...."
ಪರಮಾಣುಶಸ್ತ್ರದಿಂದ ಇಡಿ ನಗರವನ್ನೇ
ಭೂಖಂಡವನ್ನೇ ಭಸ್ಮಮಾಡಬಲ್ಲ ವಿಜ್ಞಾನಿವೀರ ನಾನು.
ವಿದ್ಯಾಪೀಠಪದವಿಗಳ ಮಾಲೆ ಧರಿಸಿ
ಸೇಫ್ ಡಿಪೋಸಿಟ್ ವಾಲ್ಟುಗಳ ಹೇರಬಲ್ಲ ಬುದ್ಧಿವಂತನು ನಾನು.
ಮೈಕ್ರೋಸ್ಕೋಪಿನೊಳಗಿಂದ ಅಣುಲೋಕ ಹೊಕ್ಕು
ವಿಮಾನಾರೂಢನಾಗಿ ಖಗೋಲ ಏಹರಿಸಿ
ನೌಕಾವಿಹಾರದಲಿ ಪೃಥ್ವೀಗೋಲ ಸುತ್ತಿ
ಶಿಲೆ ಕಬ್ಬಿಣ ಉಗೆ ವಿದ್ಯುತ್ತುಗಳ ಹಾಯ್ದು
ಅಣುನಿಲ್ದಾಣಕೆ ಬಂದ ವಿದ್ಯಾವಂತನು ನಾನು !
ಹಾಗೇ ಮುಂದುವರಿಯುವುದು ನಮ್ಮ ಪಥ—
ಎಡಬಲಕೆ ದೀಪ-ದೀಪಗಳ ಮೈಲುಗಲ್ಲು !

ಆಹಾ ದೀಪ ಓಹೋ ದೀಪ,
ದೀವ ದೀಪ ದೀಪವೇ !
ಮುಂದಿದೆ ಮಹಾದೀಪ,
ಮಹಾ ನಂದಾದೀಪ;
ಹೊಡೆ ಫಟಾಕಿ, ಸರ ಸರ ತಿರುಗಿಸು ಸುದರ್ಶನ ;
ಹಾರಿಸು ಹೂಮಳೆ ಸಪ್ತರಂಗಗಳಲಿ !

" ಎಲ್ಲಿಹೆಯೋ ಮೋಹನಾ ಮನದನ್ನ,
ಎಲ್ಲಿಹೆಯೋ ರಾಜಾ ಕಣ್ ತೆಜಾ,
ಅರಸಿ ಸೋತಿಹೆವೋ ಬಡಜೀವಿಗಳು ನಾವು.
ಕೊಡೋ ಕೈ ಥಕಥೈ ಕುಣೀ ಕುಣೀ ಬಾ !"
" ಅಗೋ ಸಖಿ ದೂರದಲಿ ಕೇಳಿ ಬರುತಿದೆ ಮೋಹನಮುರಲಿ !"
" ಓಡಿ ಸಖಿಯರೆ ಓಡಿ, ಸಖಿಯರೆ ಓಡಿ....."
ಇಗೋ ಫಿಂತಾನೆ ಆ ಅಶ್ವತ್ಥದ ಹಿಂದೆ ಅಡಗಿ.
ಊರ್ಧ್ವಮೂಲದ ಅಧಃಶಾಖದ ಅಶ್ವತ್ಥದ ಹಿಂದೆ
ಅಶ್ವತ್ಥಿವನ್ನೇ ಕಡಿಯುವುದೇ ?
ಶಸ್ತ್ರವೆಲ್ಲಿ ? ಶತ್ರುವೆಲ್ಲಿ ?
ಅಯ್ಯೋ ನಾವು ಅಬಲೆಯರು !

' ಇಗೋ ಬನ್ನಿರಿ ನಿಂತಾನೆ ಮೇಘಶ್ಯಾಮ '
' ಅವನ ಕೇಶ ಕಪ್ಪು '
" ಅವನ ಮೈಗೆ ಮೇಘವರ್ಣ. "
' ಅವನ ಕಣ್ಣಿಗೆ ಅಂಜನ '
' ತಾರಾ ಖಚಿತ ಕಿರೀಟ ನೋಡು '
' ಅವನು ನಕ್ಕರೆ ಚಂದ್ರಿಕೆ,
ಅತ್ತರೆ ನಕ್ಷತ್ರಪಾತ !
' ಏನು ಗಂಭೀರ ಏನು ಶಾಂತ ?'
ಎಲ್ಲೋ ಕೂಗುವನು ಗುಮ್ಮ
ಅತ್ತಿತ್ತ ಹಾರಾಡುತಿವೆ ಕಣ್ಣು ಕಪ್ಪಡಿ,
ಜಗವೆಲ್ಲಾ ಶಾಗಿದು ಹೋಗಿದೆ ಇದ್ದಲಿ ರಾತ್ರಿಯಡಿ.

ಗಿರಣಿ ಕಾರಿದ ಕಬ್ಬೊಗೆಯಡಿ.
ಅಹಾ ದೀಪ ಓಹೋ ದೀಪ,
ದೀಪ ದೀಪ ದೀಪವೇ..... !
ಅಗೋ ನಗುತಿದೆ ದೀಪ,
ಅಗೋ ಕರೆಯುತಿದೆ ದೀಪ ಕಣ್ಸನ್ನೆ ಮಾಡಿ !

ಹೊಡೆ ಫಟಾಕಿ ಆಟಂಬಾಂಬು
ಪುಟಿಸು ಮುಗಿಲುದ್ದ ಹೂಮಳೆ
ದೀಪ ದೀಪ ದೀಪ ದೀಪ
ದೀಪವೇ ದೀಪ !

ಶಿವಪಾರ್ವತಿ

(ಚಿಕ್ಕ ಕತೆ)

ಶ್ರೀ. ಗೋವಿಂದಮೂರ್ತಿ ದೇಸಾಯಿ, ಧಾರವಾಡ

卐

'ರಾಜಾ ಕಾಲಸ್ಯ ಕಾರಣಂ!' ಎಂಬುದು ಭಾರತೀಯ ಪರಂಪರೆಯ ತಿಳಿವಳಿಕೆ. ಈ ತಿಳಿವಳಿಕೆಗೆ ಪ್ರಮಾಣವೆನಿಸುವಂತೆ, ಅನೇಕ ಜಾನಪದಕಥೆಗಳು ಹುಟ್ಟಿನಿಂತಿವೆ. ಕುಮಾರರಾಜ, ಸಂಜೀವಿನಿಗೆ ಮಾಡಿದ ಅನ್ಯಾಯಕ್ಕಾಗಿ, ಅವನ ರಾಜ್ಯದಲ್ಲಿ ಎಂತಹ ಪ್ರಲಯ ತಲೆದೋರಿತು!

卐

ನೇತ್ರಾವತಿಯು ನೃತ್ಯವಾಡುತ್ತ ಗೆಲವಿನ ಮುಖದಲ್ಲಿ, ಶಿವಪಾರ್ವತಿ ಬೆಟ್ಟವನ್ನು ಸುತ್ತುವರಿದು, ಬೆಟ್ಟದಿಂದ ಮುಂದಕ್ಕೆ ಬಹು ಮಂದವಾಗಿ ಹರಿಯುತ್ತಾಳೆ. ನಯನಮನೋಹರವಾದ ನಿಸರ್ಗಮಯ ತೊಟ್ಟಿಲಿನಲ್ಲಿ, ನೇತ್ರಾವತೀನದಿಯ ಜೋಗುಳದ ಉಲುಹನ್ನು ಕೇಳುತ್ತ, ಶಿವಪಾರ್ವತಿ-ಬೆಟ್ಟವು ಶಾಂತವಾಗಿ ನಿದ್ರಿಸುತ್ತಿದೆ. ಬೆಟ್ಟದ ತುದಿಯಲ್ಲಿ ಬಯಲಿನೊಳಗೆ ಶಿವನ ಸುಂದರವಾದ ಕಪ್ಪುಶಿಲೆಯ ವಿಗ್ರಹವೊಂದು ನಿಂತಿದೆ. ಅದರ ಸುತ್ತಲೂ ಕಟ್ಟಡಗಳು ನಿರ್ಮಿತವಾಗಿ ಭಗ್ನವಾದ ಕುರುಹುಗಳಿವೆ ಆ ಮೂರ್ತಿಗೆ ಅಮೂಲ್ಯವಾದ ಆಭರಣಗಳು, ಅಪಾರ ಸಂಪತ್ತು ಹಾಗು ಭೂಮಿ ಇವೆಲ್ಲ ಇದ್ದರೂ, ದೇವರು ಮಾತ್ರ ದೇವಾಲಯವಿಲ್ಲದೆ ಹಾಗೆಯೇ ನಿಂತಿದ್ದಾನೆ. ದೇಗುಲವನ್ನು ನಿರ್ಮಿಸಬಾರದೆಂದು ಶಾಪವಿದೆಯಂತೆ. ಬೆಟ್ಟದ ಕೆಳಕ್ಕೆ ನೇತ್ರಾವತಿಯ ಪಾತ್ರದ ತೀರ ಸಮೀಪಕ್ಕೆ ಪಾರ್ವತಿಯ ದೇಗುಲವಿದೆ. ಪಾರ್ವತಿಯ ದೇಗುಲವು ನೋಡಲು ತುಂಬಾ ಸುಂದರವಿದೆ. ಕಲ್ಲಿನಲ್ಲಿ ಕಲಾಕೌಶಲ್ಯವು ಸೂರೆಗೊಂಡಿದೆ. ಸಮಗ್ರ-ರಾಮಾಯಣದ ಚಿತ್ರಗಳನ್ನೇ ಪ್ರಾಕಾರದ ಗೋಡೆಗಳಲ್ಲಿ ಕೊಡಿದ್ದಾರೆ. ಶಿವನಿಗೂ ಪಾರ್ವ-ಗೂ ಒಂದು ಕೂಗಳತೆಯ ಅಂತರವಿದ್ದೆ ಪಾರ್ವತಿಯು ದೇವಾಲಯದಲ್ಲಿ ನಿಂತು ನಗಾರಿಯನ್ನು ಬಾರಿಸಿದರೂ ಶಿವನ ಬಳಿಯಿದ್ದವರಿಗೆ ಕೇಳುವುದಿಲ್ಲ; ಆದರೆ ಪ್ರಶಾಂತ ವಾತಾವರಣದಲ್ಲಿ, ಶಿವನ ವಿಗ್ರಹದ ಬಳಿ ಕುಳಿತು ವೀಣೆಯ ತಂತಿಯನು ಮೀಟಿದರೆ ಸಾಕು; ಸುಸ್ಪಷ್ಟವಾಗಿ ಪಾರ್ವತಿಯು ದೇಗುಲದಲ್ಲಿ ಕೇಳಿ ಬರುತ್ತದೆ. ಈ ವೈಚಿತ್ರ್ಯವನ್ನು ನೋಡಿ ಅನೇಕರು ಆಶ್ಚರ್ಯ-ಪಟ್ಟಿದ್ದಾರೆ ವರ್ಷಾಋತುವಿನಲ್ಲಿ ನೇತ್ರಾವತಿಗೆ ಮಹಾಪೂರ ಬಂದು ಬೆಟ್ಟವನ್ನೇರಿ ಶಿವನ ಪಾದಗಳನ್ನು ತೊಳೆದು ಅವಳು ಕೆಳಕ್ಕೆಹೋಗುತ್ತಾಳೆ. ಆದರೆ ಬೆಟ್ಟದ ಕೆಳಕ್ಕೆ ಇದ್ದ ಪಾರ್ವತಿಯ ದೇವಾಲಯಕ್ಕಾಗಲಿ ಅಥವಾ ದೇವಾಲಯದ ಸಮೀಪಕ್ಕಿರುವ ಶಿವಪಾರ್ವತೀ ಗ್ರಾಮಕ್ಕಾಗಲಿ ಅವಳು ಯಾವ ರೀತಿಯು ತೊಂದರೆಯನ್ನೂ ಕೊಡುವುದಿಲ್ಲ. ಬೆಟ್ಟದಿಂದ ನೇತ್ರಾವತಿಯು ಕಡಿದುಕೊಂಡು ಪಾರ್ವತಿಯ ದೇವಾಲಯದ ಮೇಲೆ ಬೀಳುವಳೇನೋ ಎಂದು ಎನಿಸಿದರೂ, ಅವಳು ದೇವಾಲಯಕ್ಕಾಗಲಿ, ಗ್ರಾಮಕ್ಕಾಗಲಿ ಬಾರದೆ. ತನ್ನ ಬಟ್ಟೆಯನ್ನು, ಹಿಡಿದು ಹೋಗುತ್ತಾಳೆ. ಈ ನಿಸರ್ಗದ ಆಟವನ್ನು ನೋಡಲಿಕ್ಕೆ ಮಹಾಪೂರ ಬಂದ ಕಾಲದಲ್ಲಿ ದೇವಾಲಯದಲ್ಲಿ ಸಹಸ್ರಾರು ಜನರು ನಿಂತಿರುತ್ತಾರೆ. ನೇತ್ರಾವತಿಯು ಶಿವನ ಪಾದವನ್ನು ತೊಳೆಯುವುದನ್ನು ನೋಡಿ ಜನರು ಆನಂದಪಡುತ್ತಾರೆ. ಈ ವಿಚಿತ್ರ ಮೂರ್ತಿಗಳ ಜಾತ್ರೆ ಪ್ರತಿವರುಷವೂ ನೆರೆಯುತ್ತದೆ. ಅಂದು ನೇತ್ರಾವತೀ ನದಿಯ ದಡದಲ್ಲಿ ವಾಸಿಸುವ ಮೀನುಗಾರರಿಗೆ ಹೆಚ್ಚಿನ ಪ್ರಾಶಸ್ತ್ಯ. ಜಾತ್ರೆಯ ದಿನದಂದು ಮೀನಗಾರರ ಹೆಣ್ಣುಮಕ್ಕಳು, ಶಿವನ ಮೂರ್ತಿಯ ಎದುರು ನೃತ್ಯ ಮಾಡುತ್ತಾರೆ. ಆ ರೀತಿ ನೃತ್ಯಮಾಡುವುದು ದೇವರ ಸೇವೆಯೆಂದು ಇವರ ಭಾವನೆ. ಆ ರೀತಿ ನೃತ್ಯ ಮಾಡಿದರೆ ಅವರು ಬಯಸಿದ ಫಲಗಳನ್ನು ದೇವರು ಕೊಡುವೆನೆಂಬ ಕಲ್ಪನೆ ಆ ಜನರಲ್ಲಿದೆ. ಆ ಜಾತ್ರೆಯ ಕಾಲಕ್ಕೆ ಪಾರ್ವತಿಗೆ ಒಂದು ವಜ್ರದ ಉಂಗುರವನ್ನು ಹಾಕುತ್ತಾರೆ. ಆದರೆ ಬೆಲೆಕಟ್ಟುವುದೇ ಅಸಾಧ್ಯವಂತೆ. ಆ ಉಂಗುರವನ್ನು ಮುಟ್ಟಿ ನಮಸ್ಕರಿಸಿದರೆ, ಮದುವೆಯಾಗದಿದ್ದ ಹೆಣ್ಣುಮಕ್ಕಳಿಗೆ ಬಯಸಿದ ಪುರುಷನೊಡನೆ ಮದುವೆಯಾಗುವುದೆಂಬ ನಂಬಿಕೆ ಆ ಮೀನುಗಾರರಲ್ಲಿದೆ ಈ ಸಂಪ್ರದಾಯಗಳು ನೋಡಲಿಕ್ಕೆ ವಿಚಿತ್ರವಾಗಿ ಕಂಡರೂ, ಒಂದೊಂದು ಸಂಪ್ರದಾಯಗಳ ಹಿಂದೆ ಒಂದೊಂದು ಕಥೆಯೇ ಅಡಗಿದೆ. ಅವರ ಸಂಪ್ರದಾಯಗಳಿಗೆ ತುಂಬಾ ಅರ್ಥವಿದೆ ಎಂಬುದನ್ನು ಆ ಶಿವಪಾರ್ವತೀ ಗ್ರಾಮದವರು ಹೇಳುವ ಕಥೆಯನ್ನು ಕೇಳಿದರೆ ತಿಳಿಯುತ್ತದೆ.

ಸುಮಾರು ಹತ್ತೊಂಬತ್ತುಶತಕಗಳ ಹಿಂದಿನ ಘಟನೆಯಿದ್ದಿರಬೇಕು ಅಂದು ಆ ಶಿವಪಾರ್ವತಿ ಬೆಟ್ಟ, ಗ್ರಾಮ ಹಾಗು ನದಿಯು ವಿಜಯದೇವನ ರಾಜ್ಯದಲ್ಲಿದ್ದುವು. ವಿಜಯದೇವನ ರಾಜಧಾನಿಗೂ ಈ ಶಿವಪಾರ್ವತಿ ಬೆಟ್ಟಕ್ಕೂ ಅರ್ಧರಾತ್ರಿಗೂ ಕಡಿನೆಯು ಪಾದಿ. ವಿಜಯದೇವರಾಜನು ತುಂಬಾ ಧರ್ಮಿಷ್ಠ! ವಿಜಯದೇವನಿಗೆ ಸಿಂಹಾಸನವನ್ನೇರಲು ಅನುರೂಪವಾದ ಕುಮಾರರಾಜನೆಂಬ ರಾಜ-

ಕುಮಾರನಿದ್ದನು. ತನ್ನಂತೆ ಯುವರಾಜನು ಧರ್ಮದಿಂದ ರಾಜ್ಯವಾಳಬೇಕೆಂದು ವಿಜಯದೇವನು ಮಗನಿಗೆ ಒಳ್ಳೇ ರಾಜಗುರುವಿನಿಂದ ಶಿಕ್ಷಣವನ್ನು ಕೊಡಿಸಿದನು. ವಿಜಯದೇವನು ನ್ಯಾಯದಿಂದ ರಾಜ್ಯವಾಳಿ, ರಾಜ್ಯದ ಪ್ರಜೆಗಳನ್ನು ಸಂತುಷ್ಟಪಡಿಸಿ, ಭಾಂಡಾರದ ತುಂಬಾ ಅಪಾರ ಸಂಪತ್ತನ್ನು ಸಂಗ್ರಹಿಸಿದ್ದನು. ಅನೇಕ ತಲೆಮಾರುಗಳಿಂದಲೂ ಈ ವಂಶದ ರಾಜ್ಯವು ಸುಖ-ಸಮಾಧಾನಗಳ ಶಿವದುಮನೆಯಾಗಿತ್ತು. ಪಿತನ ಮನಸ್ಸನ್ನು ಅರಿತು ಪುತ್ರನು ಕೂಡ ಯೋಗ್ಯವಾಗಿಯೇ, ದಿನದಿನಕ್ಕೂ ಬೆಳೆದು, ರಾಜ್ಯಸೂತ್ರಗಳ ಅರಿವನ್ನು ಮಾಡಿಕೊಂಡನು. ಕುಮಾರರಾಜನು ಇಪ್ಪತ್ತೊಂದರ ಹೊಸ್ತಿಲಲ್ಲಿ ಕಾಲಿಕ್ಕಿದಾಗ, ತಂದೆ ನೆರೆಯ ರಾಜ್ಯದ ರಾಜಕುಮಾರಿಯಸ್ನು ತಂದು ಮದುವೆ ಮಾಡಿದನು. ನೇತ್ರಾವತೀ ಯುವರಾಜ್ಞಿಯು, ಯುವರಾಜನಿಗೆ ತಕ್ಕ ಪತ್ನಿಯೆಂಬುದನ್ನು ನೋಡಿದವರೆಲ್ಲರೂ ಹೇಳುವಷ್ಟು ಅನುರೂಪಳಿದ್ದಳು. ವಿಜಯದೇವನ ವಂಶದಂತೆ ಬಹು ಬಲಿಷ್ಠ ಮತ್ತು ಧರ್ಮಿಷ್ಠ ರಾಜವಂಶದ ರಾಜಕುಮಾರಿಯಿದ್ದಳು. ತನ್ನ ರಾಜ್ಯದ ಪರಂಪರೆಯನ್ನು ತನ್ನ ಸೊಸೆಯು ಮುಂದಕ್ಕೆ ನಡೆಯಿಸಿಕೊಂಡು ಹೋಗುವ ಲಕ್ಷಣಗಳಿವೆ—ಎಂಬುದನ್ನು, ಬಂದ ಕೆಲವೇ ದಿವಸಗಳಲ್ಲಿ ವಿಜಯದೇವನು ಕಂಡುಕೊಂಡು ಸಂತೋಷಪಟ್ಟನು. ಮದುವೆಯಾದ ಮೇಲೆ ಮಗ ಮತ್ತು ಸೊಸೆ ಇಬ್ಬರನ್ನೂ ಕುಳ್ಳಿರಿಸಿಕೊಂಡು, ರಾಜ್ಯದ ಒಂದೊಂದೇ ಸೂಕ್ಷ್ಮ ಕಾರ್ಯಕಲಾಪಗಳ ಪರಿಚಯ ಮಾಡಿಕೊಡಲು ವಿಜಯದೇವನು ಪ್ರಾರಂಭಿಸಿದನ್ನು ಮದುವೆಯಾದ ಮೇಲೆ, ಕುಮಾರರಾಜನು ಹೆಚ್ಚು ಸಮಯವನು ನೇತ್ರಾವತಿಯ ಬಳಿಯಲ್ಲಿಯೇ ಕಳೆಯುವುದು ವಿಜಯದೇವನ ಮನಸ್ಸಿಗೆ ಇಷ್ಟು ಹಿಡಿಸಲಿಲ್ಲ. ಹೊಸದಾಗಿ ಮದುವೆಯಾದುದರಿಂದ, ಸ್ವಾಭಾವಿಕವಾಗಿ ಆ ರೀತಿ ಹೆಂಡತಿಯಲ್ಲಿ ಅನುರಕ್ತನಾಗುವುದು ಸಹಜವೆಂದು ಭಾವಿಸಿದನು. ಮಗನ ಮದುವೆಯಾಗಿ ಎರಡು ಮೂರು ವರ್ಷಗಳಲ್ಲಿಯೇ ವಿಜಯದೇವನು ಇಹಲೋಕಯಾತ್ರೆಯನ್ನು ಪೂರಯಿಸಿದನು. ರಾಜ್ಯದ ಪೂರ್ಣ ಭಾರವೆಲ್ಲವೂ ಕುಮಾರರಾಜನ ಮೇಲೆ ಬಿದ್ದಿತು. ಯೋಗ್ಯ ರೀತಿಯಿಂದ ರಾಜ್ಯವಾಳಬೇಕೆಂಬುದೇ ವಿಜಯದೇವನು ಅವಸಾನ ಕಾಲದಲ್ಲಿ ಹೇಳಿದ ಮಾತು. ತಂದೆಯಿರುವಾಗಲೇ ತಂದೆಯ ಗುಣಗಳನ್ನು ನೋಡಿ, ತಿಳಿದುಕೊಂಡು, ತನ್ನಲ್ಲಿ ಅಳವಡಿಸಿಕೊಂಡು ಸಿದ್ಧನಾಗಿದ್ದ. ಕುಮಾರರಾಜನಿಗೆ ರಾಜ್ಯವನ್ನು ನಡೆಯಿಸುವುದು ಇಷ್ಟು ಕಠಿಣವೆನಿಸಲಿಲ್ಲ. ನೇತ್ರಾವತಿಗೆ ತಕ್ಕುದಾದ ಶಿಕ್ಷಣವನ್ನು ಅವಳ ತಂದೆ ಕೊಡಿಸಿದ್ದರಿಂದ, ಅವಳು ಮಂತ್ರಿಯ ಅರ್ಧಕಾರ್ಯವನ್ನು ನಾಡುತ್ತಿದ್ದಳು. ನೇತ್ರಾವತಿಗೆ ದೇವರ ಮೇಲೆ ತುಂಬಾ ಶ್ರದ್ಧೆ ! ದಿವಸದ ಬಹುಭಾಗವನ್ನು ದೇವರ ಸಾನ್ನಿಧ್ಯದಲ್ಲಿ ಕಳೆಯುತ್ತಿದ್ದಳು. ಯಾರಿಗೂ ಅನ್ಯಾಯವಾಗದಂತೆ ರಾಜ್ಯವನ್ನು ಆಳಬೇಕೆಂದು ಕುಮಾರರಾಜನಿಗೆ ಮೇಲಿಂದ ಮೇಲೆ ಹೇಳುತ್ತಿದ್ದಳು.

ಶಿವಪಾರ್ವತಿ ಬೆಟ್ಟದ ಮೇಲಿನ ಶಿವನು ಕುಮಾರರಾಜನ ಕುಲದೇವರು. ಪ್ರತಿವರುಷವೂ ಅಲ್ಲಿ ಜಾತ್ರೆ ನೆರೆಯುತ್ತಿತ್ತು. ವಿಜಯದೇವನು ತೀರಿದ ಮೇಲೆ ಎರಡು ಮೂರು ವರುಷ ಜಾತ್ರೆಯನ್ನೇ ಮಾಡಿರಲಿಲ್ಲ. ಆ ಶಿವನ ಜಾತ್ರೆಗೆ ರಾಜ್ಯದ ದೊರೆಯು ಹೋಗಿ, ಅಂದು ಶಿವನನ್ನು ಅಭಿಷೇಕ ಮಾಡುವುದು ಸಂಪ್ರದಾಯ. ಶಿವನೆದುರು, ಆ ಬೆಟ್ಟದ ಕೆಳಕ್ಕೆ ಇರುವ ಮೀನಗಾರರು ನೃತ್ಯ ಮಾಡುತ್ತಾರೆ. ನೃತ್ಯ, ಗ್ರಾಮ್ಯಗೀತ, ಕತೆ ಹೇಳುವುದು ಮೊದಲಾದ ಜಾನಪದ ಕಲೆಗಳ ಪ್ರದರ್ಶನವು ಅಲ್ಲಿ ನಡೆಯುತ್ತಿತ್ತು. ಜಾನಪದ ಕಲೆಗಳನ್ನು ಪ್ರದರ್ಶಿಸಿದವರನ್ನು ದೊರೆಯು ಸನ್ಮಾನಿಸುವುದು ವಾಡಿಕೆ. ಅವರವರ ಪ್ರದರ್ಶನಕ್ಕೆ ಉಚಿತವಾದ ರೀತಿಯಲ್ಲಿ ಪಾರಿತೋಷಕವನ್ನು ಕೊಡುತ್ತಿದ್ದರು. ದೇವರ ಸೇವೆಯೆಂದು ಬೆಸ್ತರ ಹೆಣ್ಣುಮಕ್ಕಳು, ಶಿವನ ಮೂರ್ತಿಯೆದುರು ಜಾತ್ರೆಯ ಕಾಲಕ್ಕೆ ದೊರೆಗಳ ಸಮ್ಮುಖದಲ್ಲಿ ನೃತ್ಯಮಾಡುತ್ತಿದ್ದರು. ಮೂರು ನಾಲ್ಕು ವರುಷಗಳಿಂದಲೂ ನಿಂತು ಹೋಗಿದ್ದ ಜಾತ್ರೆಯು ಈ ವರುಷ ನಡೆಯಲಿರುವುದನ್ನು ಕೇಳಿ, ಕುಮಾರರಾಜನ ರಾಜ್ಯದ ಪ್ರಜೆಗಳಿಗೆ ಸಂತೋಷವೆನಿಸಿತು. ದೊರೆಗಳು ಮಹಾರಾಣೀಸಮೇತ—ಜಾತ್ರೆಗೆ ದರ್ಶನವನ್ನೀಯುವರೆಂದೆ ಜಾತ್ರೆಯ ಸಿದ್ಧತೆಗಳು ಭರದಿಂದ ಸಾಗಿದ್ದುವು. ಬೆಟ್ಟದ ಕೆಳಗಿನ ಗ್ರಾಮದ ಬೆಸ್ತರು ತಮ್ಮ ಕಲಾಪ್ರದರ್ಶನಕ್ಕೆ ತಕ್ಕುದಾದ ಸಿದ್ಧತೆಗಳನ್ನು ಮಾಡಿದರು. ಈ ಸಲದ ಜಾತ್ರೆಯ ವೈಶಿಷ್ಟ್ಯವೆಂದರೆ, ಮೀನುಗಾರ ಸಂಜಿಯ ಮನಯನ ಮನೋಹರ ನೃತ್ಯ ! ಸಂಜಿಯ ಹೆಸರು ಸಂಜೀವಿನಿ. ತಂದೆಯನ್ನು ಕಳೆದುಕೊಂಡು ಆಜ್ಜನ ಪೋಷಣೆಯಲ್ಲಿಯೇ ಬೆಳೆದು ಬಂದ ಸಂಜೀವಿನಿಗೆ, ಪ್ರೀತಿಗೆಂದು ಅವರಜ್ಜನು ಸಂಜಿಯೆಂದು ಕರೆಯುತ್ತಿದ್ದನು. ಸಂಜಿಯು ನಿಜಕ್ಕೂ ರಾಜಕುಮಾರಿಯಾಗಿ ಹುಟ್ಟಬೇಕಿತ್ತೆಂದು ಅವಳಜ್ಜನು ಅವಳ ಸೌಂದರ್ಯವನ್ನು ಕುರಿತು ಪ್ರಶಂಸನೆಯ ಮಾತುಗಳನ್ನಾಡುತ್ತಿದ್ದನು. ಅಮೃತಶಿಲಾವಿಗ್ರಹದಂತೆ ಕೆತ್ತಿದ ದೇಹರಚನೆ, ನಸುಗೆಂಪಿನಿಂದ ಮಿಶ್ರಿತವಾದ ಗೌರವರ್ಣದ ದೇಹ, ಸಂಪಿಗೆಯ ಪ್ರತಿರೂಪವೆನಿಸುವ ನಾಸಿಕ, ಕಪ್ಪುವರ್ಣದ ವಿಶಾಲ ಕೇಶರಾಶಿ! ಒಮ್ಮೆ ನೋಡಿದರೆ ತೃಪ್ತಿಯೆನಿಸದಷ್ಟು ಸುಂದರಳಿದ್ದಳು ಸಂಜಿ ! ಅವಳ ನಾಸಿಕದಲ್ಲಿ ಒಂದು ಮೋಹಕತೆಯಿತ್ತು. ಅವಳ ನಾಸಿಕವು ಆಕರ್ಷಣೀಯಲೋಹಚುಂಬಕದಂತಿತ್ತು. ಇಪ್ಪತ್ತರ ತಾರುಣ್ಯದಲ್ಲಿದ್ದ ಸಂಜಿಯು ಸೌಂದರ್ಯಕ್ಕೆ ಮಾರುಹೋಗಿ ಬೆರಳನ್ನು ಸುಟ್ಟುಕೊಂಡು ಜೀವನವನ್ನೇ ಹಾಳುಮಾಡಿಕೊಂಡ ತರುಣ ಮೀನಗಾರರು ಅನೇಕರು! ಸುರಸುಂದರಿ ಸಂಜಿಯ ನೃತ್ಯವು ಈ ಸಲ ಶಿವನೆದುರು ಜಾತ್ರೆಯ ಕಾಲದಲ್ಲಿ ಆಗುವುದೆಂದು ಕೇಳಿ ಜಾತ್ರೆಗೆ ಹೆಚ್ಚಿನ ಜನರು ಬರತೊಡಗಿದರು.

ಬೆಟ್ಟವೆಲ್ಲವೂ ಹಸುರು ಚಿಗುರಿನಿಂದ ನಗುತ್ತಿತ್ತು. ಬೆಟ್ಟದ ಬದಿಯ ನದಿ ನಿಧಾನವಾಗಿ ಹರಿಯುತ್ತಿತ್ತು. ಜಾತ್ರೆಯ ದಿನದಂದು ಪೂರ್ವ ದಿಗಂತದಲ್ಲಿ ರವಿಯು ಉದಯಿಸಿದಾಗ, ಬೆಟ್ಟಕ್ಕೆ ಕಣ್ಣು ಬಂದಿತು. ಅಂದು ಮಹಾಸಾಗರವೇ ಕೆಳಗಿನಿಂದ, ಮೇಲಕ್ಕೆ ಏರಿ ಬರುವಂತೆ ಕಾಣುತ್ತಿತ್ತು. ಯಥಾರೀತಿ ಶಿವನಿಗೆ ಪೂಜೆ, ಅಭಿಷೇಕ, ನೈವೇದ್ಯಗಳಾದುವು. ಕುಮಾರರಾಜರು ಸ್ವಹಸ್ತಗಳಿಂದ ಶಿವನಿಗೆ

ಸುವರ್ಣಸಂಧಿ! ಸಚಿತ್ರಗ್ರಂಥ!! ಸುಂದರ ಮುದ್ರಣ!!!

ಶಿಕ್ಷಣ - ಶಿಕ್ಷಕದರ್ಶನ

ಶಿಕ್ಷಕರಿಗೂ ಶಿಕ್ಷಕವಿದ್ಯಾರ್ಥಿಗಳಿಗೂ ಉಪಯುಕ್ತ, ವಾಗುವಂತಹ, ಶಿಕ್ಷಣತಜ್ಞರಿಂದ ಪರಿಶೀಲಿಸಲ್ಪಟ್ಟಂತಹ. ಅನೇಕ ವಿದ್ವನ್ಮಣಿಗಳ ಸದಭಿಪ್ರಾಯವನ್ನು ಪಡೆದಂತಹ ಶೈಕ್ಷಣಿಕ ಉದ್ಗ್ರಂಥ.

ಕರ್ನಾಟಕ ವಿ. ವಿ. ನಿಲಯದ ಕುಲಪತಿಗಳಾದ ರ್ಯಾಂಗ್ಲರ್ ಪಾವಟೆಯವರು ಮುನ್ನುಡಿಯನ್ನು ಬರೆದಿದ್ದಾರೆ.

೪೧ ಚಿತ್ರಪಡಿಯಚ್ಚುಗಳಿವೆ! ೪೭೫ ಪುಟಗಳು.

ಸಾದಾಪ್ರತಿಗೆ ೩-೦-೦. ಸುಂದರ ಪ್ರತಿಗೆ ೪-೦-೦.
ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ ದೊರೆಯುವುದು.

ವಿವರಗಳಿಗಾಗಿ ಬರೆಯಿರಿ:

೧ ನಿಂಬಾಳ ಕಲ್ಯಾಣಪ್ಪ, ಪೋ. ತಿಕೋಟ, ಜಿ. ವಿಜಾಪುರ
೨. ಅಕಾ ಸಾಹಿತ್ಯಮಂದಿರ, ವಿಜಾಪುರ

ಕನಕಾಭಿಷೇಕವನ್ನು ಮಾಡಿದರು. ನೇತ್ರಾವತೀಮಹಾರಾಜ್ಞಿಯವರು ನೆರೆದಿದ್ದ ಸುಮಂಗಲೆಯರಿಗೆಲ್ಲ ತೆಂಗಿನಕಾಯಿಯ ಬಾಗಿನವನ್ನೂ ಹಾಗು ಸುವರ್ಣದ ನಾಣ್ಯಗಳನ್ನೂ ದಕ್ಷಿಣೆಯನ್ನೂ ಕೊಡಿಸಿದರು. ಈ ಸಲದ ಜಾತ್ರೆಗೆ ಬಂದ ಆಗಂತುಕರೆಲ್ಲರಿಗೂ ಸಂತೋಷವಾಗಿತ್ತು. ದೊರೆಗಳು ದಾನದ ತಮ್ಮ ಕೈಯನ್ನು ತೆರೆದೇ ಇಟ್ಟಿದ್ದರು. ಅಂದು ಸಂಜೆ, ಶಿವನ ದೇವಾಲಯದ ಪ್ರಾಂಗಣದಲ್ಲಿ ಸಂಜಿಯ ನೃತ್ಯವಿತ್ತು. ಸಂಜಿಯ ನೃತ್ಯದ ಮೊದಲು ಅನೇಕರು ಜಾನಪದಗೀತಗಳನ್ನು ಹಾಡಿ, ಬಂದವರನ್ನು ತಣಿಸಿದರು. ವಿಜಯದೇವನ ಕಾಲದಲ್ಲಿ ನೃತ್ಯಮಾಡಿ, ಮೆಚ್ಚುಗೆಯೆಂದು ಪಡೆದ ಅಮೂಲ್ಯವಾದ ಪೀತಾಂಬರವನ್ನು ಸಂಜಿಯ ತಾಯಿಯು ದೊರೆಕೆಸಿದ್ದಳು. ಅದೇ ಪೀತಾಂಬರವನ್ನು ಉಟ್ಟು ಸಂಜಿಯು ಇಂದು ನೃತ್ಯಕ್ಕೆ ಬಂದಿದ್ದಳು. ಸಂಜಿಯು ಮಿಂಚಿನ ವೇಗದಿಂದ ಬಂದು ಶಿವನಿಗೂ ಅನಂತರ ಕುಮಾರರಾಜ-ನೇತ್ರಾವತಿಯರಿಗೂ ನಮಸ್ಕಾರಮಾಡಿ ನೃತ್ಯವನ್ನು ಪ್ರಾರಂಭಿಸಿದಳು. ಗ್ರಾಮ್ಯಗತಿಯು ತಾಳ ಮದ್ದಳೆಗಳ ಹಿಮ್ಮೇಳದಲ್ಲಿ, ಜಾನಪದ ಸುಮಧುರ ಸಂಗೀತದ ಆಲಾಪನೆಯಲ್ಲಿ, ಸಂಜಿಯು ತನ್ನ ಕುಣಿತವನ್ನು ಪ್ರಾರಂಭಿಸಿದಳು. ನಿಸರ್ಗದತ್ತ ಸೌಂದರ್ಯಕ್ಕೆ ಅವಳ ಇಂದಿನ ವೇಷ-ಭೂಷಣಗಳು ಒಳ್ಳೇ ಶೋಭೆಯನ್ನು ತಂದಿದ್ದುವು. ಸಂಜಿಯ ಮುಖಲಕ್ಷಣವನ್ನು ನೋಡಿ ಕುಮಾರರಾಜರಿಗೆ ಅಚ್ಚರಿಯೆನಿಸಿತು. ಬೆಸ್ತರ ಜಾತಿಯಲ್ಲಿ ಅಷ್ಟು ಸುಂದರವಾದ ಹೆಣ್ಣು ಜನ್ಮವೆತ್ತುವುದೆಂಬುದನ್ನು ಅವರು ಕೇಳಿರಲಿಲ್ಲ ಕೂಡ. ದೊರೆಗಳು ತಮ್ಮ ಪಕ್ಕದಲ್ಲಿ ಕುಳಿತಿದ್ದ ನೇತ್ರಾವತಿಯ ಸೌಂದರ್ಯವನ್ನೂ ಹಾಗು ಎದುರು ನರ್ತಿಸುತ್ತಿದ್ದ ಸಂಜಿಯ ಸೌಂದರ್ಯವನ್ನೂ, ತಮ್ಮ ರಸಿಕತೆಯ ಪರಡೆಯಲ್ಲಿ ತೂಗಿ, ಸಂಜಿಯು ತಮ್ಮ ಧರ್ಮಪತ್ನಿಗಿಂತ ಸಹಸ್ರಾರುಪಟ್ಟು ರೂಪವತಿಯೆಂಬುದನ್ನು ನಿರ್ಧರಿಸಿದರು. ಸಂಜಿಯ ಸೌಂದರ್ಯದಿಂದ ನೇತ್ರಾವತಿಗೆ ಕಣ್ಣು ಕುಕ್ಕಿದಂತಾಯಿತು. ತಾನು ಕಲಿತ ನೃತ್ಯಗಳನ್ನು ಒಂದರ ಮೇಲೊಂದು ಮಾಡಿ ಸಂಜಿ, ಶಿವಾಲಯದಲ್ಲಿ ನೆರೆದಿದ್ದ ಜನರನ್ನೆಲ್ಲಾ ಮುಗ್ಧರನ್ನಾಗಿ ಮಾಡಿದಳು. ಕುಮಾರರಾಜರಿಗೆ ಬಹು ಸಂತೋಷವಾಯಿತು. ನೃತ್ಯವು ನಡೆದಿದ್ದಾಗ ದೊರೆಗಳ ಕಣ್ಣುಗಳು ಸಂಜಿಯ ಮೇಲೆ ನೆಟ್ಟಿದ್ದನ್ನು ಶೂಕ್ಷ್ಮವಾಗಿ ನೇತ್ರಾವತಿಯು ನೋಡಿದಳು. ಅವಳಿಗೇಕೋ ದೊರೆಯು ದೃಷ್ಟಿಯಲ್ಲಿ ದೋಷವಿದೆಯೆಂದು ಭಾಸವಾಯಿತು. ನೃತ್ಯವನ್ನು ಮೆಚ್ಚಿ ದೊರೆಗಳು ತಾವೇ ಎದ್ದು, ಸಂಜಿಯ ಕೈಗೆ ತಮ್ಮ ಬೆರಳಿನಲ್ಲಿದ್ದ ಅಮೂಲ್ಯವಾದ ವಜ್ರದುಂಗುರವನ್ನು ಇರಿಸಿ ಬಂದರು. ದೊರೆಗಳ ಅನಂದೋತ್ಸಾಹಗಳು ನೆರೆದವರನ್ನು ಪುಲಕಿತಗೊಳಿಸಿದುವು. ಸಂಜಿಯ ಕೈಯನ್ನು ಮುಟ್ಟಿ ಬೆರಳಿಗೆ ವಜ್ರದುಂಗುರವನ್ನು ಹಾಕಿದುದು ನೇತ್ರಾವತಿಯ ಮನಸ್ಸಿಗೇಕೋ ಅಷ್ಟು ಹಿಡಿಸಲಿಲ್ಲ. ಜಾತ್ರೆ ಮುಗಿದ ಮೇಲೆ, ವಿಶ್ರಾಂತಿಗೆಂದು ಒಂದೆರಡು ದಿವಸಗಳವರೆಗೆ ದೊರೆಗಳು ನಿಂತರು. ಬೆಟ್ಟದ ಮೇಲೆ ಶಿವನೊಬ್ಬನೇ ಇರುವುದರಿಂದ, ಅವನ ಆರಯಿಕೆ ಮಾಡಲು ನಾವೇಕೆ. ಒಂದು ಪಾರ್ವತಿಯ ದೇವಾಲಯವನ್ನು ನಿರ್ಮಿಸಬಾರದೆಂದು ನೇತ್ರಾವತಿ ಪತಿಯನ್ನು ಕೇಳಿದಳು. ಅಲ್ಲದೆ ಮಕ್ಕಳಿಲ್ಲದ್ದಕ್ಕೆ, ಒಂದು ಪಾರ್ವತಿಯ ದೇವಾಲಯವನ್ನು ಕಟ್ಟಿಸಿದರೆ ತನಗೆ ಮಕ್ಕಳಾಗುವುದು ಖಂಡಿತವೆಂದು ಹೇಳಿದಳು. ಕುಮಾರರಾಜನಿಗೂ ಹೆಂಡತಿಯ ಮಾತು ಸರಿಯೆನಿಸಿತು. ಬೆಟ್ಟದ ಕೆಳಗೆ ನದಿಯ ಪಾತ್ರದ ಸಮೀಪದಲ್ಲಿ, ಒಂದು ಸುಂದರವಾದ ಪಾರ್ವತಿಯ ದೇವಾಲಯವನ್ನು ಕಟ್ಟಿಸಲು ದೊರೆಯು ಆಜ್ಞೆ ಮಾಡಿದನು. ಶಿವನ ದೇವಾಲಯದಿಂದ ಕೂಗಳತೆಯೊಂದರಲ್ಲಿ, ಶಿವನಿಗೆ ಇದಿರಾಗಿ ಒಂದು ಪಾರ್ವತಿಯ ದೇವಾಲಯವು ಸಿದ್ಧವಾಗುವ ರೂಪರೇಷೆಗಳು ನಿರ್ಮಿತವಾದುವು. ದೊರೆಗಳು ರಾಜಧಾನಿಗೆ ಹೊರಟು ನಿಂತಾಗ, ಶಿವಗಂಗೆಯ ಗ್ರಾಮವೇ ಅವರನ್ನು ಬೀಳ್ಕೊಡಲು ನೆರೆದಿತ್ತು. ದೊರೆಗಳು ಸಂಜಿಯ ಅಜ್ಜನನ್ನು ಕರೆಯಿಸಿ, ಸಂಜಿಗೆ ಬೆಲೆಯುಳ್ಳ ವಸ್ತ್ರಾಭರಣಗಳನ್ನು ಪಾರಿತೋಷಕವೆಂದು ಕೊಟ್ಟರು. ದೊರೆಗಳ ರಥವು ಸಿದ್ಧವಾಯಿತು. ರಥಿಕನು ಅಶ್ವಗಳನ್ನು ಮುಂದಕ್ಕೆ ತೆರಳಲು ಸಂಜ್ಞೆ ಮಾಡಿದಕೂಡಲೆ, ಎಲ್ಲರೂ ದೊರೆಗಳಿಗೂ ರಾಣಿ ನೇತ್ರಾವತಿಗೂ ನಮಸ್ಕಾರ ಮಾಡಿದರು. ದೊರೆಗಳ ಕಣ್ಣುಗಳು ಗುಂಪಿನಲ್ಲಿದ್ದ ಸಂಜಿಯ ಮೇಲೆ ನೆಟ್ಟುಹೋಗಿರುವುವೆಂಬುದನ್ನು ಬದಿಯಲ್ಲಿದ್ದ ನೇತ್ರಾವತಿ ನೋಡಿದಳು. ಅದೇಕೋ ಅವಳ ಬಲಗಣ್ಣು ಹಾರಿತು. ರಥವು ಮುಂದಕ್ಕೆ ಚಲಿಸಿತು. ಶಿವಗಂಗಾ ಗ್ರಾಮದವರು ಮರಳಿ ತಮ್ಮ ಗುಡಿಸಿಲುಗಳಿಗೆ ಹೋದರು. ಪ್ರಾಂಜಲ ಮನಸ್ಸಿನ ಸಂಜಿಗೆ ಇದಾವುದರ ಕಲ್ಪನೆಯೇ ಇದ್ದಿರಲಿಲ್ಲ!

ಜಾತ್ರೆಯಾಗಿ ಒಂದು ವರುಷ ಕಳೆಯಿತು. ಅಷ್ಟರಲ್ಲಿ ಬಹು

ಸುಂದರವಾದ ಪಾರ್ವತಿಯ ದೇವಾಲಯವು ಸಿದ್ಧವಾಗಿತ್ತು. ವಿಾನಗಾರರೆಲ್ಲರೂ ಈ ದೇವಾಲಯಕ್ಕೆ ಹೆಚ್ಚು ಬರುತ್ತಿದ್ದರು. ಭಕ್ತರ ಗುಂಪಿನಲ್ಲಿ ಸಂಜಿಯೂ ಒಬ್ಬಳಾಗಿದ್ದಳು. ರಾಣೀನೇತ್ರಾವತಿಯವರು ಪಾರ್ವತಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಯಥೇಚ್ಛವಾಗಿ ದಾನ ಮಾಡಿದರು. ದೊರೆಗಳು ಪತ್ನಿಯ ಯಾವ ಮಾತನ್ನೂ ಅಲ್ಲಗಳೆಯಲಿಲ್ಲ ಪಾರ್ವತಿಯ ದೇವಾಲಯದ ಭವ್ಯತೆಗೆ ತಕ್ಕಂತೆ ನೇತ್ರಾವತಿ ರಾಣಿಯವರ ಮನಸ್ಸು ವಿಶಾಲವಿದ್ದುದರಿಂದ, ಒಳ್ಳೇ ವಿಜೃಂಭಣೆಯಿಂದ ಉತ್ಸವವು ಕೊನೆಗೊಂಡಿತು. ಜಾತ್ರೆಯ ಕಾಲಕ್ಕೆ ಈ ಸಲ ಕುಮಾರರಾಜ ದೊರೆಗಳೊಬ್ಬರೇ ಬಂದರು. ಯಾವುದೋ ಕಾರಣದಿಂದ ನೇತ್ರಾವತಿಯನಂಗೆ ಬರಲಾಗಲಿಲ್ಲ. ಈ ಸಲವೂ ಸಂಜಿಯ ನೃತ್ಯವಿತ್ತು. ಅದಾಗಲೇ ಇಪ್ಪತ್ತರ ಹೊಸ್ತಿಲಲ್ಲಿ ಕಾಲಿಕ್ಕಿದ ಸಂಜಿಯು, ದೊರೆಗಳ ಕಣ್ಣಿಗೆ ಬಹು ಸುಂದರಿಯಾಗಿ ಕಂಡಳು. ಅದೇಕೋ ಅವರ ಮನಸ್ಸು ಅವಳನ್ನು ಬಯಸಿತು. ನೃತ್ಯವು ಕೊನೆಗೊಂಡ ಮೇಲೆ ದೊರೆಗಳು ಸಂಜಿಗೆ ತಮ್ಮ ಬೀಡಾರಕ್ಕೆ ಬರಲು ತಿಳಿಸಿದರು. ಸಂಜಿಯು ಅಜ್ಜನು, ದೊರೆಗಳು ಉಡುಗೊರೆ ಮತ್ತು ವಸ್ತ್ರಗಳನ್ನು ಕೊಡಬಹುದೆಂದು ಭಾವಿಸಿ, ಅಂದು ರಾತ್ರಿ ಅವಳೊಬ್ಬಳನ್ನೇ ಕಳುಹಿದನು. ಸಂಜಿಯು ಅಂಜುತ್ತುಂಜುತ್ತ ಒಳಗೆ ತೆರಳಿದಳು. ದೊರೆಗಳ ಬಳಿ ಮಾತನಾಡಲು ಅವಳಿಗೆ ಅತಿ ಸಂಕೋಚವೆನಿಸಿತು. ಕುಮಾರರಾಜರು ಮುಗುಳುನಗೆ ನಗುತ್ತ ಅವಳಿಗೆ ಆಸನದ ಮೇಲೆ ಕೂಡಲು ವಿನ್ನವಿಸಿದರು. ಅವಳ ನೃತ್ಯವನ್ನು ತುಂಬ ಹೊಗಳಿದರು. ಹೊಗಳಿ ಅವಳ ಮನೆತನದ ಕೆಲ ವಿಷಯಗಳನ್ನು ಕೇಳಿ, ಸೂಕ್ಷ್ಮವಾಗಿ ತಮ್ಮ ಮನೋಗತವನ್ನು ತಿಳಿಸಿದರು. ಸಂಜಿಗೆ ದೊರೆಗಳ ಮಾತನ್ನು ಕೇಳಿ ಕ್ಷಣಕಾಲ ಆಶ್ಚರ್ಯವೆನಿಸಿತು. ದೊರೆಯಂಥ ಮಹಾನುಭಾವರು ತನ್ನನ್ನು ಬಯಸುವುದು ಅವಳಿಗೆ ಸೋಜಿಗವೆನಿಸಿತು. ಆದರೆ ಧರ್ಮದ ಕಟ್ಟಿಗೆ ಬಿದ್ದ ಅವಳ ಮನಸ್ಸು ಅದಕ್ಕೆ ಒಪ್ಪಲಿಲ್ಲ. ದೊರೆಗಳನ್ನು ಧಿಕ್ಕರಿಸಿ ಅಲ್ಲಿಂದ ತೆರಳಿದರೆ ಅವರ ಆವಕೃಪೆಗೆ ಪಾತ್ರಳಾಗುವುದು ಖಂಡಿತವೆನಿಸಿತು. ಅವಳಿಗೂ ತಾರುಣ್ಯ! ಎದುರು ಸುಂದರನಾದ ಐಶ್ವರ್ಯಪೂರ್ಣನಾದ ರಾಜನು ಬಯಸಿ ಬೇಡಿಕೊಳ್ಳುತ್ತಿರುವಾಗ, ಯಾವ ಹೆಣ್ಣು ಅದನ್ನು ಧಿಕ್ಕರಿಸೀತು! ಆದರೆ ಆ ರೀತಿ ಅನ್ಯಾಯ ಮತ್ತು ಅಧರ್ಮದ ರೀತಿಯಲ್ಲಿ ನಡೆದುಕೊಳ್ಳಲು ಸಂಜಿಗೆ ಮನಸ್ಸಾಗಲಿಲ್ಲ. ಕೆಳಕ್ಕೆ ಮುಖನೂಡಿ ಉತ್ತರಕೊಡದೆ ಮೌನಿಯಾದಳು.

ಆ ಮೌನವೇ ಅವಳ ಒಪ್ಪಿಗೆಯೆಂದು ಭಾವಿಸಿ ದೊರೆಗಳು, ಸಂಜಿಯ ಕೈ ಹಿಡಿದೆಳೆದು, ತಮ್ಮ ಮನದ ಹಸಿವನ್ನು ಹಿಂಗಿಸಿಕೊಂಡರು. ಸಂಜಿಗೆ ಮಾತನಾಡಲು ಅವಕಾಶವೇ ಇದ್ದಿರಲಿಲ್ಲ. ದೊರೆಗಳಿಗೆ ತುಂಬಾ ಅಂಜಿದ್ದಳು. ಸಂಜಿಯನ್ನು ಕಳಿಸುವಾಗ ಕುಮಾರರಾಜರು ವಸ್ತ್ರ, ಭೂಷಣ ಹಾಗು ಕನಕದ ಪಾತ್ರೆಗಳನ್ನು ಕೊಟ್ಟಿದ್ದರು. ಸಂಜಿಯು ಒಬ್ಬ ಸೇವಕನ ಹಿಂದೆ ಆ ಒಡವೆ-ವಸ್ತ್ರಗಳೊಂದಿಗೆ ಬಂದುದನ್ನು ನೋಡಿ ಸಂಜಿಯ ಅಜ್ಜನಿಗೆ ತುಂಬ ಸಂತೋಷವೆನಿಸಿತು. ಆ ಎಲ್ಲ ಪದಾರ್ಥಗಳನ್ನು ನೋಡಿದ ಮೇಲಂತೂ ಅವನಿಗೆ ಬಹು ಆನಂದವಾಯಿತು; ಆದರೆ ಸಂಜಿಯ ಮುಖದ ಮೇಲೆ ಅದೇಕೋ ಅಷ್ಟು ಗೆಲವು ಕಾಣಲಿಲ್ಲ. ದಣಿದಿರಬಹುದೆಂದು ಭಾವಿಸಿ ಅವಳಜ್ಜನು ಅವಳ ಬೆನ್ನಮೇಲೆ ಮೆತ್ತಗೆ ಕೈಯಾಡಿಸಿ, ಅವಳಿಗೆ ವಿಶ್ರಮಿಸಲು ತಿಳಿಸಿದನು. ಅವನಿಗೆ ಸಂಜಿಯು ತಂದ ಅಪಾರ ಸಂಪತ್ತಿನಿಂದ ಅಮಿತವಾದ ಆನಂದವಾಗಿತ್ತು. ರಾತ್ರಿಯಲ್ಲಿ ಮಲಗಿ ಮುಂಜಾನೆ ಎದ್ದಾಗ, ಸಂಜಿಯ ತಲೆದಿಂಬೆಲ್ಲಾ ತೊಯ್ದು ಹೋಗಿತ್ತು. ಅವಳ ಮುಖದಲ್ಲಿ ನಿಸ್ತೇಜವಿತ್ತು. ಸಂಜಿಯು ನಿತ್ಯದಂತೆ ಚಟುವಟಿಕೆಗಳನ್ನು ಮಾಡದಾಗಲು, ಅವಳಜ್ಜನಿಗೆ ಅದೇಕೋ ಸಂಜಿಯು ಒಂದು ರೀತಿಯಾಗಿದ್ದಾಳೆಂದು ಎನಿಸಿತು. ಅವನಿಗೆ ಸಂಜಿಯ ಮನಸ್ಸಿನಲ್ಲಿ ನಡೆದ ಹೋರಾಟದ ಅರಿವೇ ಇದ್ದಿರಲಿಲ್ಲ. ತಾನು ಕಾಲುಜಾರಿದೆನೆಂದು ಸಂಜಿಗೆ ಅತಿ ಕೆಡುಕೆನಿಸಿತು. ಮರಳಿ ಹೋಗುವ ಮುನ್ನ ದೊರೆಗಳು ಸಂಜಿಯನ್ನು ಮತ್ತೊಮ್ಮೆ ಏಕಾಂತದಲ್ಲಿ ಕಂಡರು.

ಕುಮಾರರಾಜರು ಜಾತ್ರೆಮುಗಿಸಿ ರಾಜಧಾನಿಗೆ ಹೋದರು. ಈ ಸಲ ಅವರು ನೇತ್ರಾವತಿಗೆ ಸಂಜಿಯ ಮಾತನ್ನೇ ಹೇಳಹತ್ತಿದರು. ತಮ್ಮ ರಾಜಧಾನಿಗೆ ಅವಳನ್ನೊಮ್ಮೆ ಕರೆಯಿಸಿ ನೃತ್ಯ ಮಾಡಿಸಬೇಕೆಂದು ಸೂಚಿಸಿದರು. ಆದರೆ ನೇತ್ರಾವತಿಯ ಮನಸ್ಸಿಗೆ ಅದು ಒಪ್ಪಿಗೆಯಾಗಲಿಲ್ಲ. ಅವಳಿಗೆ ಅದೇಕೋ, ದೊರೆಗಳು ಅವಳ ಮೇಲೆ ಅಷ್ಟು ಪ್ರೀತಿಯನ್ನು ತೋರಿಸುವುದು ಸರಿ ಎನಿಸಲಿಲ್ಲ. ತಾವು ಅಷ್ಟು ಸಂಜಿಯನ್ನು ಕರೆಯಿಸಲು ಒತ್ತಾಯ ಮಾಡಿದರೆ ನೇತ್ರಾವತಿಗೆ ಸಂಶಯವು ಎಲ್ಲಿ ಬರುವುದೋ ಎಂದು, ಅವರು ಸುಮ್ಮನಾಗಿ ಬಿಟ್ಟರು. ನಿತ್ಯದ ಕಾರ್ಯದಲ್ಲಿ ಸಿಲುಕಿದ ಮೇಲೆ ಸಂಜಿಯು ಮರೆತೇಹೋದಳು.

ಆ ವರುಷದ ವರ್ಷಋತು ಕೊನೆಗೊಳ್ಳುತ್ತ ಬಂದಿದ್ದರೂ ಕುಮಾರರಾಜರ ರಾಜ್ಯದಲ್ಲಿ ಮಳೆ ಒಂದು ಹನಿ ಬಿದ್ದಿರಲಿಲ್ಲ. ಮೇಘರಾಜನ ಅವಕೃಪೆಗಾಗಿ ರಾಜ್ಯದ ತುಂಬಾ ವಿವಂಚನೆಯುಂಟಾಯಿತು. ಆ ವಂಶದ ಇತಿಹಾಸದಲ್ಲಿಯೇ, ಬರಗಾಲದ ಲಕ್ಷಣಗಳು ಕಾಣಹತ್ತಿದ್ದು ಇದು ಪ್ರಪ್ರಥಮ ಸಲವಾಗಿತ್ತು. ವರುಣದೇವನ ಮತ್ತು ಮೇಘರಾಜನ ಕೃಪೆಗೆ ಅಲ್ಲಲ್ಲಿ ಅಭಿಷೇಕ, ನೈವೇದ್ಯ ಹಾಗು ಉಪಾಸನೆಗಳು ನಡೆದುವು. ಕುಮಾರರಾಜನಿಗೂ ತುಂಬಾ ಅಂಜಿಕೆಯೆನಿಸಿತು. ಭಾವಿಕಳಾದ ನೇತ್ರಾವತೀರಾಜ್ಞಿಗೆ ತಮ್ಮ ರಾಜ್ಯದಲ್ಲಿ ಅನ್ಯಾಯ ಹಾಗು ಅಧರ್ಮಗಳು ತಲೆಯೆತ್ತಹತ್ತಿವೆಯೆಂದು ಎನಿಸಿತು. ತನ್ನ ಪತಿಯೇ ಅದೆಲ್ಲಿ ಕಾಲುಜಾರಿಬಿದ್ದರೋ—ಎಂದು ನೇತ್ರಾವತಿಗೆ ಚಿಂತೆಯಂಟಾಯಿತು. ಶಿವಪಾರ್ವತೀ ಗ್ರಾಮದಲ್ಲಿ, ಮೊದಲೇ ಮಳೆಯಿಲ್ಲದ್ದಕ್ಕೆ ಹಾಹಾಕಾರವೆದ್ದಿತ್ತು. ಅಂದು ಬಂದು ಮಲಗಿದ ಸಂಜಿಯ ಮುಖಲಕ್ಷಣಗಳು ಪ್ರತಿದಿನಕ್ಕೂ ಬದಲಾಗಹತ್ತಿದ್ದುವು. ಆಕಳು ಇಂದು ತುಂಬಿದ ಗರ್ಭಿಣಿ. ಗ್ರಾಮದಲ್ಲಿ ಈ ವಾರ್ತೆ ಕಾಳ್ಗಿಚ್ಚಿನಂತೆ ಹಬ್ಬಿತು. ಅವಳಜ್ಜನು ತನ್ನ ಮೊಮ್ಮಗಳ ಕತೆಯನ್ನು ಕೇಳಿ ಅದಕ್ಕೇನೂ ಮಾಡಲಾದನು. ತಮ್ಮನ್ನು ಆಳಿ ನ್ಯಾಯವನ್ನು ನಯೆಸಾಲಿಸುವ ವ್ಯಕ್ತಿಯೇ ಈ ರೀತಿ ಅನ್ಯಾಯವನ್ನು ಮಾಡಿರುವಾಗ, ಯಾರಲ್ಲಿ ಅವನು ದೂರಿಕೊಳ್ಳಬೇಕು! ಸಂಜಿಯ ಅಜ್ಜನು ಈ

ಸುದ್ದಿಯನ್ನು ಬೇರೆಯವರಲ್ಲಿ ಹೇಳಿದನೆ ಯಾದು ನಂಬಿಯಾರು? ದೊರೆಯು ತಲೆಯ ಮೇಲೆ ಸಂಜಯು ಬಹುದಿನ ಮೋಹವನ್ನು ಇರಿಸಲು ಪ್ರಯತ್ನಿಸಿದರೆ, ಜನಕ್ಕೆ ನಂಬಿಕೆ ಹೇಗಾಗಬೇಕು? ಒಂದು ಸುಂದರವಾದ ಗಂಡುಮಗುವಿಗೆ ಸಂಜಯು ಜನ್ಮನಿತ್ತಳು. ಸಂಜಯ ಗುಡಿಸಿಲು ಆವರ ಸಮಾಜದಿಂದ ಹೊರಗುಳಿಯಬೇಕಾಯಿತು. ಅವರೆಲ್ಲರೂ ಬಹಿಷ್ಕೃತರಾದರು. ಸಂಜಯು ಪಾರ್ವತಿಯಲ್ಲಿ ಅರಿಕೆ ಮಾಡಿಕೊಂಡಳು. ನಿತ್ಯವೂ ಅಳುತ್ತಲೇ ಇರುತ್ತಿದ್ದಳು. ಮಗನನ್ನು ತಾನಿರುವುದಾಗಿ ಧೈರ್ಯಕೊಟ್ಟನು. ಆದರೆ ತನ್ನ ಪಾಪದ ಹೊರೆ ತನ್ನನ್ನು ಬಹುದಿವಸ ಬದುಕಿರಲಾರದೆಂದು ಅವಳಿಗೆ ಎನಿಸಿತು. ಅಷ್ಟರಲ್ಲಿ ರಾಜ್ಯದಲ್ಲಿಯ ಮೇಳೆರಾಜನ ಜನಕ್ಕೆಯೆಗೆ ಒಂದು ನರಬಲಿಯು ಬೇಕೆಂಬ ವಾರ್ತೆ ಹರಡಿತು. ಕುಲದೇವತೆ ಪಾರ್ವತಿ ಕೋಸಗೊಂಡಿದ್ದಾಳೆಂದೂ, ಅವಳಿಗೆ ನರಬಲಿ ಕೊಟ್ಟರೆ ಮಳೆಬರುವುದು ಖಂಡಿತವೆಂದೂ ಜ್ಯೋತಿಷಿಗಳು ಹೇಳಿದರು. ಆದರೆ ನರಬಲಿಗೆ ಸಿದ್ಧರಾಗುವವರಾರು? ಸಂಜಯ ಶಿವಿಗೆ ಈ ವಾರ್ತೆ ಕಿವಿ ಮೇಗೋ ಬಿದ್ದಿತು. ತಾನೇಕೆ ತನ್ನ ದೇಹವನ್ನು ಅರ್ಪಿಸಿ ಲೋಕಕ್ಕೆ ಉಪಕಾರವನ್ನು ಮಾಡಬಾರದೆಂದು ಆಕೆ ಭಾವಿಸಿದಳು. ಹದಿನೆಂಟು ಇಪ್ಪತ್ತು ದಿವಸಗಳಾದ ಮೇಲೆ ಒಂದು ದಿನದ ಪರಿರಾತ್ರಿಯಲ್ಲಿ, ಮಲಗಿದ ರಾಜಪಿಂಡದ ಮಗುವನ್ನು ಅಗಲಲಾರದೆ ಅಗಲಿ, ಪಾರ್ವತಿಯ ದೇವಾಲಯಕ್ಕೆ ಬಂದಳು. ತಾನು ತಪ್ಪನ್ನೆಸಗಿದ್ದಕ್ಕೆ ಪಶ್ಚಾತ್ತಾಪಗೊಂಡವಳಾಗಿ ಪಾರ್ವತಿಯನ್ನು ಪ್ರಾರ್ಥಿಸಿದಳು. ತನ್ನ ಮುಂದಿನ ಜನ್ಮದಲ್ಲಾದರೂ ಕುಮಾರರಾಜನೇ ಪತಿಯಾಗಿ ದೊರೆಯುವಂತೆ ಕೇಳಿಕೊಂಡು ಪಾರ್ವತಿಯ ಪಾದಗಳಿಗೆ ತನ್ನ ತಲೆಯನ್ನು ಜಜ್ಜಿಕೊಂಡು ಪ್ರಾಣತೆತ್ತಳು. ದೊರೆಯು ತನಗಿತ್ತ ಪವ್ರದುಂಗುರವನ್ನು ಪ್ರಾಣಕೊಡುವುದಕ್ಕಿಂತ ಮೊದಲು ಪಾರ್ವತಿಯ ಉಡಿಯಲ್ಲಿ ಹಾಕಿದ್ದಳು. ಪಾರ್ವತಿಯ ಪಾದಗಳು ರಕ್ತದ ಮಡುವಿನಲ್ಲಿ ನಿಂತಿದ್ದವು. ಮಿಂಚಿನ ವೇಗದಲ್ಲಿ ಮುಂಜಾನೆ ಈ ವಾರ್ತೆಯು ಗ್ರಾಮದಲ್ಲಿಯೂ ಹಾಗೂ ರಾಜಧಾನಿಯುಪಲೆಗೂ ಹೋಯಿತು. ನರಬಲಿಗೆ ಆಹುತಿಯಾದವಳು ಸಂಜಯೆಂಬುವನ್ನು ದೊರೆಗೆ ಕೇಳಿ ಅತಿ ವಿಷಾದವೆನಿಸಿತು. ಅವಳ ಸಾವಿನ ಕಥೆ ಜಾಗು ಕಾಲ ಹಿಂದಿನ ಚಿತ್ರವನ್ನು ಆದಾರೋ ದೊರೆಗಳಿಗೆ ಹೇಳಿದಾಗ, ಅವರಿಗೆ ತಮ್ಮದೇ ಅನ್ಯಾಯವೆಂದು ಎನಿಸಿತು. ಪ್ರಾಣಬಲಿಯಾದ ಮೂರೇ ದಿವಸಗಳಲ್ಲಿ ವರ್ಷಾಋತುವು ಪ್ರಾರಂಭವಾಯಿತು ಸಮಗ್ರ ಒಂದು ಪರುಷದ ಮಳೆ ಒಂದೇ ದಿವಸದಲ್ಲಿ ಬರುವಷ್ಟು ಜೋರಿನಿಂದ ಮಳೆ ಬೀಳಲು ಪ್ರಾರಂಭವಾಯಿತು. ಮುಗಿಲು ಅಡಿಲ್ಲಿ ಹರಿದಿದೆಯೋ ಎಂದು ಜನಕ್ಕೆ ತೋರಿತು. ಕುಮಾರರಾಜನ ರಾಜ್ಯವೆಲ್ಲ ಜಲಾವೃತವಾಯಿತು ನೇತ್ರಾವತಿ ರಾಜ್ಞಿಯವರಿಗೆ ಸಂಜೆಯ ಕಥೆ ತಿಳಿಯಿತು. ತನ್ನ ಪತಿಯ ಅನ್ಯಾಯಕ್ಕೆ ಒಂದು ಬಡಜೀವಿಯು ಬಲಿಯಾಯ್ತು. ಛೇದು ಕೇಳಿ ಆಕೆ ವ್ಯಥೆಪಟ್ಟಳು. ಇನ್ನು ತನ್ನ ರಾಜ್ಯದ ಪುಣ್ಯವೆ ತೀರಿತೆಂದು ಭಾವಿಸಿದಳು. ಮೇಳೆರಾಜನ ಅಭಿಪ್ರಾಯದಿಂದ ಜಡೆಜಡೆಯಾಗಿ ಮಳೆ ಸುರಿಯಹತ್ತಿತು. ಶಿವಗಂಗೆ ಗ್ರಾಮದ ನದಿ ಪರಿಹತ್ತಿತು. ಆ ನದಿಯು ಅಷ್ಟು ಏರಿದ್ದನ್ನು ಯಾರೂ ಕಂಡಿರಲಿಲ್ಲ. ಅದರಿಂದ ಆ ನದಿಯ ಪಾತ್ರವೇ ಬದಲಿಸುವಷ್ಟು ಹೆದರಿಕೆ ಜನಕ್ಕಾಯಿತು. ನದಿಯು ಬೆಟ್ಟವನೆ ಏರಿತು. ಬೆಟ್ಟದಿಂದ ಕೆಳಕ್ಕೆ ಬಂದು ಪಾರ್ವತಿಯ ದೇವಾಲಯ ನುತ್ತು ಗ್ರಾಮವನ್ನು ಕೊಚ್ಚಿಕೊಂಡು ಹೋಗುವ ಆಂಜಿಕೆ ತೋರಿತು. ಶಿವನ ದೇವಾಲಯವನ್ನೇ ಕೊಚ್ಚಿಕೊಂಡುಹೋಯಿತು. ಶಿವನೊಬ್ಬನೇ ಬಯಲಿನಲ್ಲಿ ನಿಂತನು. ಆ ಗ್ರಾಮದುದವರು ನದಿಯಿಂದ ತನ್ನ್ಮ ಸಂರಕ್ಷಣೆ ಮಾಡಲು ದೊರೆಗೆ ಕೇಳಿಕೊಂಡರು. ಕುಲದೇವರ ದೇವಾಲಯವು ನದಿಗೆ ತುತ್ತಾದುದರಿಂದ ದೊರೆಗಳಿಗೆ ಮತ್ತು ನೇತ್ರಾವತಿದೇವಿಯವರಿಗೆ ಬಹು ವಿಷಾದವೆನಿಸಿತು. ಅಂದು ರಾತ್ರಿ ನೇತ್ರಾವತಿಯ ಶಯನಗೃಹಕ್ಕೇ ಕುಮಾರರಾಜರು ಬಂದರು. ನೇತ್ರಾವತಿದೇವಿ ದೊರೆಗಳು ತಮ್ಮ ದೇಹವನ್ನು ಮುಟ್ಟಕೂಡದೆಂದು ನಿರಾಕರಿಸಿದರು. ವ್ಯರ್ಥವಾಗಿ ಒಂದು ಹೆಣ್ಣುಜೀವನದ ಭವಿಷ್ಯವನ್ನೇ ಹಾಳುಗೆಡವಿದ್ದಕ್ಕೆ ದೊರೆಗಳನ್ನು ರಾಣಿಯರು ದೂಷಿಸಿದರು. ಮರುದಿವಸ ಮಹಾರಾಣಿ ನೇತ್ರಾವತಿಯರು ತಮ್ಮ ಕುಲದೇವರ ಬೆಟ್ಟದವರೆಗೂ ಹೋಗಿ ಅಲ್ಲಿಯ ಪ್ರಜೆಗಳ ಪರಿಸ್ಥಿತಿ ನೋಡಿ ಬರುವ ಮನೋಗತವನ್ನು ವ್ಯಕ್ತಪಡಿಸಿ, ಅಲ್ಲಿಗೆ ಹೋದರು. ನದಿಯು ಇನ್ನೂ ಏರುತ್ತಲೇ ಇತ್ತು. ಅದು ಕಡಿದುಕೊಂಡು, ಕೆಳಕ್ಕೆ ಬರುವ ಪರಿಭವವಿತ್ತು. ಶಿವಾಲಯವಂತೂ ನೆಲಸಮವಾಗಿತ್ತು. ಇನ್ನು ಪಾರ್ವತಿಯ ದೇವಾಲಯವೂ ಹೋಗುವ ಭೀತಿಯಿತ್ತು. ಗ್ರಾಮಕ್ಕೆ ಬಂದು ಮೊದಲು ಸಂಜಿಯ ಗುಡಿಸಲಿಗೆ ಹೋಗಿ ಆ ಮಗುವನ್ನು ನೋಡಿದರು ಮಗು ತನ್ನ ಪತಿಯನ್ನೇ ಹೋಲುತ್ತಿತ್ತು. ತನಗೆ ಆ ಮಗು ಬೇಕೆಂದು ರಾಣಿ ಕೇಳಿದಳು. ಸಂಜಿಯ ಅಜ್ಜನು ಯಾವ ಮಾತನ್ನೂ ಆಡದೇ ಕೊಟ್ಟನು. ಅದರ ಪಾಲನಪೋಷಣೆಗೆ ದಾಸಿಯೊಬ್ಬಳನ್ನು ನಿಯಮಿಸಿದಳು. ಏರಿ ಬಂದ ನದಿಯು ಇಳಿಯಲು, ರಾಣಿಯು ಪಾರ್ವತಿಯನ್ನು ಪ್ರಾರ್ಥಿಸಿದಳು. ಅಂದು ರಾತ್ರಿ ಅವಳಿಗೊಂದು ಕನಸು ಬಿತ್ತು. "ದೊರೆಯ ಅನ್ಯಾಯದಿಂದ ಸಂಜಿ ಹಡೆದು ತೀರಿದಳು? ಸಂಜಿಯ ಸಮಾಗಮವನ್ನು ಅನುಭೋಗಿಸಿ ಹೋದ ದೊರೆಗಳಿಗೆ ಪುನಃ ಸಂಜಿಯ ನೆನಪೆ ಬಾರದ್ದು ಅತಿ ವಿಷಾದ. ಅವಳ ಕೂಗು ಅವನಿಗೆ ಕೇಳದಾಯಿತು. ಒಂದು ಬಲಿಯನ್ನು ಕೊಡಲು ಕಾರಣನಾದ ದೊರೆಯು ಬೇರೊಂದು ಬಲಿಯನ್ನು ಕೊಟ್ಟರೆ ತಾನು ಶಾಂತಳಾಗುವೆನು" ಎಂದು ನದಿಯು ಕನಸಿನಲ್ಲಿ ಬಂದು ತಿಳಿಸಿದಳಂತೆ. ಕನಸು ಬಿದ್ದ ಮರುದಿವಸ ನದಿಯು ಹೆಚ್ಚು ಏರಹತ್ತಿತ್ತು. ಅಂದು ರಾತ್ರಿಯೇ ತಾವು ನದಿಗೆ ತಮ್ಮ ದೇಹವನ್ನು ಅರ್ಪಿಸುವುದಾದ ರಾಣಿಯವರು ಮನದಲ್ಲಿ ಸರಕಲ್ಪಿಸಿದರು. ಅಂದು ಬೆಳಗಿನಲ್ಲಿ ನೇತ್ರಾವತಿ ರಾಣಿಯರು ಪಾರ್ವತಿಯ ಎದುರಿನಲ್ಲಿ ಕುಳಿತು ತಮ್ಮ ವಿಶೇಷ ಅಭಿನೃದ್ಧಿಗಾಗಿ ಪಾರ್ವತಿಯು ಕರುಣೆ ಮಾಡಲೆಂದು ಬೇಡಿಕೊಂಡರು. ಅಂದು ರಾತ್ರಿ ನೇತ್ರಾವತಿ ರಾಣಿಯರು ರಾತ್ರಿಯಲ್ಲಿ ತಮ್ಮ ಸರಿವಾರವು ನಿದ್ರಿಸುತ್ತಿದ್ದಾಗ ಎದ್ದುಹೋಗಿ ಬೆಟ್ಟವನ್ನೇರಿ ನದಿಯಲ್ಲಿ ಹಾರಿ ತಮ್ಮ ಪ್ರಾಣವನ್ನು ಬಿಟ್ಟರು. ಮುಂಜಾನೆ ರಾಜ್ಞಿಯ ಬೇಡಾರದ ತುಂಬಾ ಕೋಲಾಹಲ. ರಾಣಿಯು ನದಿಯಲ್ಲಿ ಹಾರಿಯೇ ಪ್ರಾಣಬಿಟ್ಟರುವಳೆಂದು ತರ್ಕಿಸಿದರು. ಏಕೆಂದರೆ ನದಿಯು ಆಗಲೇ ಇಳಿಯಹತ್ತಿತ್ತು. ಬೆಟ್ಟವನ್ನೇರಿದ್ದ ನದಿಯು ಸಾವಕಾಶ.

ವಾಗಿ ಇಳೆದು ಶಿವಪಾರ್ವತೀ ಗ್ರಾಮಕ್ಕೆ ಬಾರದೆ ಬೇರೊಂದು ಹಾದಿಯನ್ನು ಹಿಡಿದು ಸರಿಯಿತು. ಈ ದುರಂತದ ವಾರ್ತೆ ಕೇಳಿ ದೊರೆಗಳು ಅಲ್ಲಿಗೆ ಬಂದರು. ಆದರೆ ಅಲ್ಲೇನಿದೆ? ರಾಣಿಯ ದೇಹವನ್ನು ಹೊತ್ತುಕೊಂಡು ನದಿಯು ಸಾಗಹತ್ತಿತ್ತು. ದೊರೆಗಳಿಗೆ ಅತಿ ದುಃಖವೆನಿಸಿತು. ತಮ್ಮ ಅನ್ಯಾಯವೇ ಅದಕ್ಕೆ ಹೊಣೆಯೆಂದು ಭಾವಿಸಿದರು. ಆಗ ರಾಣಿ ದೊರೆಗಳ ಕನಸಿನಲ್ಲಿ ಬಂದು "ಸಂಜಿಯನ್ನು ಅನ್ಯಾಯದಿಂದ ನೀವು ಕೆಡಿಸಿದಿರಿ. ಆ ಕಣ್ಣುಗರುಳಿನ ಕೂಗು ನಿಮಗೆ ಹಿಂದುಗಡೆ ಕೇಳಬರಲಿಲ್ಲ ಆದಕ್ಕೇ ನನ್ನ ತೆಚ್ಚಿನ ಪಾರ್ವತಿಯ ಕೂಗು, ನಿಮ್ಮ ಕುಲದೇವರಾದ ಶಿವನಿಗೆ ಕೇಳುವುದೇ ಬೇಡ! ಸಂಜಿಗೆ ಮಾಡಿದ ಅನ್ಯಾಯಕ್ಕೆ ಅವಳ ಮಗುವನ್ನು ಬೆಳೆಯಿಸಿ ಅವನಿಗೆ ನಿಮ್ಮ ಸಿಂಹಾಸನವು ದೊರೆಯುವಂತೆ ಮಾಡಿರಿ." ಎಂದು ಹೇಳಿದಳಂತೆ. ದೊರೆಗಳಿಗೆ ತಮ್ಮ ತಪ್ಪಿಗಾಗಿ ಅದಾಗಲೇ ಪೂರ್ಣ ಪಶ್ಚಾತ್ತಾಪವೆನಿಸಿತ್ತು. ಆ ಸಂಜಿಯ ಮಗುವನ್ನು ತಂದು ತಮ್ಮಲ್ಲಿ ಇಟ್ಟುಕೊಂಡರು. ನೇತ್ರಾವತಿಯು ಹಾರಿ ಪ್ರಾಣ ಬಿಟ್ಟದ್ದಕ್ಕೆ ಆ ನದಿಗೆ ನೇತ್ರಾವತೀ ನದಿಯೆಂದು ಕರೆಯುತ್ತಿದ್ದರು. ಆಗ ಮಹಾಪೂರ ಬಂದುಹೋದ ಮೇಲೆ, ಅವಳ ಪಾತ್ರವೇ ಬರಲಾಯಿತಂತೆ. ಮುಂದವಾಗಿ ಹರಿಯುತ್ತಿದ್ದ ನೇತ್ರಾವತಿ ಬೆಟ್ಟದವರೆಗೂ ಕುಣಿಯುತ್ತ ಬರಹತ್ತಿದಳಂತೆ. ಕುಮಾರರಾಜನ ಅನ್ಯಾಯಕ್ಕೆ ಶಿವನು, ದೇವಾಲಯವಿಲ್ಲದೆ ಬಯಲಿನಲ್ಲಿ ನಿಲ್ಲಲು ನಿಶ್ಚಯಿಸಿದನಂತೆ. ಅದಕ್ಕೆ ಆ ಮೂರ್ತಿಗೆ ದೇವಾಲಯವನ್ನು ಕಟ್ಟಿದರೆ, ಅದು ನೇತ್ರಾವತೀ ನದಿಯಿಂದ ನಾಶವಾಗಿ ಹೋಗುತ್ತದೆ. ಆಂದಿನಿಂದ ಪಾರ್ವತಿಯ ದೇವಾಲಯದ ಕೂಗು ಶಿವನಿಗೆ ಕೇಳುವುದಿಲ್ಲ. ಕಾರಣ ಸಂಜಿಯ ಮತ್ತು ನೇತ್ರಾವತಿಯ ಮಾತುಗಳನ್ನು ಕುಮಾರರಾಜನು ಕೇಳಿದ್ದು, ಅದಕ್ಕೆ ಶಿವನಿಗೆ ತಾನೂ ಏನೂ ಕೇಳುವುದು ಬೇಡವೆನಿಸಿತಂತೆ. ಕುಮಾರರಾಜನು ಸಾಯುವತನಕ ದೇವರನ್ನು ಭಜಿಸಿ ತ್ರಿಕಾಲದಲ್ಲೂ ತನಗೆ ನೇತ್ರಾವತಿ ಹಾಗು ಸಂಜಿಯರೇ ಹೆಂಡಂದಿರಾಗಿ ಸಿಗಲೆಂದು ಬೇಡಿಕೊಂಡನಂತೆ. ಅವರು ಮುಂದಿನ ಜನ್ಮದಲ್ಲಿ ಗಂಡ-ಹೆಂಡಿರಾಗಿ ಹುಟ್ಟಿರಬೇಕು. ಆದಕ್ಕೆ ಆ ಜಾತ್ರೆಯ ಕಾಲದಲ್ಲಿ ನರ್ತಿಸಿ ಸೇವೆ ಮಾಡಿದಾಗಲೆ ಪಾರ್ವತಿಯು, ಬಯಸಿದ ಫಲ ಸಿಗುವಂತೆ ವರವನ್ನಿತ್ತಳಂತೆ. ಅಂದಿನಿಂದ ಪ್ರತಿವರುಷವೂ ನೇತ್ರಾವತಿ ನದಿಯು ಮಹಾಪೂರದಿಂದ ಬೆಟ್ಟದ ಮೇಲೆ ಏರಿಹೋಗಿ, ಶಿವನ ಪಾದಗಳನ್ನು ತೊಳೆದು ಶಿವನಿಗೆ ತನ್ನ ಭಕ್ತಿಯನ್ನು ಆರ್ಪಿಸುತ್ತಾಳೆ. ಸಂಜಿಯು ಬಹು ಭಕ್ತಿಯಿಂದ ತನಗೆ ರಾಜನಿತ್ತ ವಜ್ರದುಂಗುರವನ್ನು ಪಾರ್ವತಿಯ ಉಡಿಯಲ್ಲಿ ಹಾಕಿ ಬಲಿಗೆ ಆಹುತಿಯಾದಳು. ಅವಳಿಗೆ ಮುಂದಿನ ಜನ್ಮದಲ್ಲಿ ಕುಮಾರರಾಜರೇ ಪತಿಯಾಗಿ ದೊರೆಯುವರೆಂಬ ವರವನ್ನು ಪಾರ್ವತಿ ಕೊಟ್ಟಳಂತೆ. ಅಂತೇ ಜಾತ್ರೆಯ ಕಾಲದಲ್ಲಿ ಆ ಉಂಗುರವನ್ನು ಪಾರ್ವತಿಗೆ ಇಡುತ್ತಾರೆ. ಅಂದು ಉಂಗುರವನ್ನು ಮುಟ್ಟಿದರೆ, ಸಂಜಿಯ ಬಯಕೆಯ ಪ್ರತೀಕವೆಂದು, ಎಲ್ಲರ ಬಯಕೆಗಳೂ ಈಡೇರುವುವಂತೆ. ಈ ಕತೆಯನ್ನು ಕೇಳಿದಾಗ, ಮೇಲಿನ ಎಲ್ಲ ಸಂಗತಿಗಳು ಅರ್ಥಪೂರ್ಣವಾಗಿವೆಯೆನ್ನಿಸುವುದು!

ಶ್ಯಾಮವಸನಾ

ಶ್ರೀ. ಗೋವರ್ಧನಾಚಾರ್ಯ ಗಲಗಲಿ ಎಂ.ಎ.,ಬಿ.ಟಿ. ಧಾರವಾಡ

ಮೋಡ ಸುಳಿಯದ ಚುಕ್ಕೆವಿಂಡೊಡ-
ಗೊಂಡ ಶಾರದ ಯಾಮಿನೀ
ನಡೆದಿರುವಳದೊ ಬಿಡಗಿನಲಿ ಆ
ಶ್ಯಾಮವಸನಾಚ್ಛಾದಿನೀ ೧

ಬೆಳಕು ಕತ್ತಲ ತಿರುಳು ಅವಳಾ
ಮುದ್ದುಮೊಗದಲಿ ಬೆರೆತಿವೆ,
ಥಳ ಥಳಿಪ ಕಂಗಳಲಿ ಅದು ಕಾ-
ರಂಜಿಯಂದದಿ ತುಳುಕಿದೆ. ೨

ಚಂಡಕಿರಣನು ಹಗಲಿಗಿತ್ತಿಹ
ಕಣ್ಣ ಕೊರೆಯುವ ದೀಪ್ತಿಯ
ತೊರೆದು ಶೋಭಿಸಳಾಂತು ರಜನಿಯ
ಸೌಮ್ಯಶೀತಲ ಕಾಂತಿಯ. ೩

ಒಂದೆ ಕಿರಣವು ಅಧಿಕವಾಗಿರೆ—
ನಸುವೆ ಮಸಗಿತಿ ಛಾಯೆಯು—
ಅರ್ಧವಡಗುತಲಿತ್ತು ಮುಗುದೆಯ
ಮಾತ್ರು ವಿಾರಿದ ಮಾಯೆಯು! ೪

ಬೆಲುವ ಕಬರೀಭಾರದಲ್ಲದು
ಗೆಲುವ ಮೆಲುನಗು ಮೊಗದದಲಿ
ಸುಳಿವ ಗಾಳಿಯ ತೆರದಲಿಳಿವುದು
ಬಳಕುವೆಳೆಯೆಲೆ ಬಳಿಯಲಿ ೫

ಶುದ್ಧ ಬಗೆಯಾ ಮೊಗದಿ ಮೂಡಿವೆ
ಮುಗ್ಧಭಾವಗಳುಸಿರಿವೆ:
'ಏನು ಸುಂದರ ಎಂಥ ಬಂಧುರ
ನಾವು ನೆಲಸಿಹ ಮಂದಿರ!' ೬

ಸುಷಮ-ಶಾಂತಭ್ರೂವಿತಾನದಿ
ಕುಸುಮ-ಕಾಂತ ಕಪೋಲದಿ
ಮಿಸುಪ ಹಾಸವು, ಎಸೆವ ರಾಗವು
ಸಾರುತಿಹವೀಯಂದದಿ: ೭

'ಸಾಧುತನದಲಿ ಕಾಲ ಕಳೆದಿಹ-
ಳೆಲ್ಲರೊಂದಿಗೆ ಶಾಂತಿಯಂ
ತಾಳಿ ಬಾಳಿಹಳಿವಳ ಮನದನ್ನ-
ರಾಗವತಿ ನಿಸ್ಸೃಹಂ' ೮

[Byron ಕವಿಯ 'She walks in beauty' ಎಂಬ ಕವನದ ಭಾವಾನುವಾದ]

ತಾಯಿ

(ಲಲಿತಪ್ರಬಂಧ)

ಶ್ರೀ. ಏನ್. ಎಸ್. ಗವಗಕರ, ಬಿ. ಎ. ಧಾರವಾಡ.

卐

ಶ್ರೀ ಶಂಕರ ಭಗವತ್ಪಾದರು ತಮ್ಮ ಗೌರೀಸ್ತುತಿಯಲ್ಲಿ 'ಕುಪುತ್ರೋ ಜಾಯೇತ ಕ್ವಚನಪಿ ಕುಮಾತಾ ನಭವತಿ' ಎಂದು ಹೇಳಿದ್ದನ್ನು ಸುಡಿಯೊಂದನ್ನು ಜ್ಞಾಪಿಸಿಕೊಂಡಾಗ, ತಾಯಿಯ ಮಮತೆಯ ಕಲ್ಪನೆ ಮಿಂಚಿಮೇ ಕಾಡುವುದುಂಟು. ನಿವೇದಿತಾಳಂಥ ವಿದೇಶಿಗನಿಗೆ ಈ ಶಬ್ದದ ಅಂತರಂಗದಲ್ಲಿ ಜಗತ್ತೇ ಹುದುಗಿರುವುದೆಂಬ ವಿಚಾರ ತಲೆದೋರುವುದು. ಅಣ್ಣ-ತಂಗಿಯರ ಪ್ರೀತಿ, ಅಕ್ಕ-ತಂಗಿಯರ ಪ್ರೀತಿ, ಸಹೋದರರ ಪ್ರೀತಿ, ದಾಂಪತ್ಯಪ್ರಣಯ, ಸುಹೃಜ್ಜನರ ಆತ್ಮಾರ್ಪಣೆಯ ವಾತ್ಸಲ್ಯ—ಈ ಎಲ್ಲವುಗಳನ್ನೂ ವಿಶಾಲವೂ ಉತ್ಕಟವೂ ದಿವ್ಯವೂ-ಆತ್ಮೀಯತೆ ತಾಯಿಯ ಹೃದಯದಲ್ಲಿ ಸಹಜವಾಗಿ ಜಾಗೃತವಿರುವುದು. ಮಗನು ಎಂತಹ ಹೀನದೆಸೆಗಿಳಿದರೂ ತಾಯಿಯು ಕ್ಷಮಿಸುವಳು; ನೈಜ ಅನುರಾಗ ವ್ಯಕ್ತಗೊಳಿಸುವಳು. ರೂಪ-ವಿರೂಪ, ಗುಣ-ಅವಗುಣಗಳ ಪ್ರಶ್ನೆ ಅಲ್ಲಿಲ್ಲ ಎಂದೂ ಖಚಿತವಾಗಿದೆ. 'ತಾಯಿಗಿಂತ ಬಂಧುವಿಲ್ಲ; ಉಸಿರಿಗಿಂತ ರುಚಿ ಇಲ್ಲ' ಎಂಬ ಕೇವಲ ಸಾಮಾನ್ಯ ಲೋಕೋಕ್ತಿ ಸಹ, ತಾಯಿಯು ಪ್ರೇಮದ ಜಗಾಧತೆಯನ್ನು ಸಾರಿ ಸಾರಿ ಹೇಳುವುದು. ತನ್ನ ಧಾಮ, ತನ್ನ ನಾಮ ಎಂಬ ವಿಚಾರಗಳೂ ಮಾತೃಹೃದಯದ ಪಾವಿತ್ರ್ಯವನ್ನು ನೇರವಾಗಿ ಬಿಂಬಿಸುವಾಗ ಆ ಪ್ರೀತಿಯ ವಿಸ್ತಾರವನ್ನು ಬಣ್ಣಿಸುವುದು ಸಾಹಸದ ಮಾತೇ! ಹೇಗೆನಿಸಿದರೂ ಜನಸಾಮಾನ್ಯರು ತಮ್ಮ ವಿಚಾರಲಹರಿಯನ್ನು ಯಾತರ ಬಗೆಗೂ ಹರಿಸಲು ಹಿಂದು ಮುಂದು ನೋಡರು. ವಿಕೃತ ಬುದ್ಧಿಯೇ ಮಾನವತೆಯ ಕಾರುಹಲ್ಲವೆ?

ಸರಿ, ಗುರುವಿಗಿಂತಲೂ ತಾಯ್ತನದ ಹೊಣೆಯೇ ಹೆಚ್ಚಿನದೆಂದು ಮೊಟ್ಟ ಮೊದಲು ಗ್ರಹಿಸುವುದವಶ್ಯ. ಆಕೆ ಮಗುವಿನ ಸ್ವಭಾವವನ್ನು ಮೇಣದಂತೆ ಬದಲಿಸಬಲ್ಲಳು—ಅಷ್ಟು ಸಂಸ್ಕಾರಗಳಿದ್ದುದಾದರೆ! ಚಿಕ್ಕತನದಲ್ಲಿಯೇ ಆಕೆಯ ಕಾರ್ಯರಂಗ ಬಹುಮುಖವಿರುವುದು. ಮಗುವನ್ನು ನಿಸ್ಸುರಿತೀತಿಯಿಂದ ಮೊದಲೇ ತಿದ್ದದಿದ್ದರೆ, ಮುಂದೆ ಎಂತಹ ಅಳಸಲಾಗದ ಅನಾಹುತವಾಗುವುದೆಂಬುದಕ್ಕೆ ಜಾಗತಿಕ ಇತಿಹಾಸದಲ್ಲಿ ಲಕ್ಷೋಪಲಕ್ಷ ಕತೆಗಳಿರುವುವು. ತೀರ ಸಾಮಾನ್ಯ ಕತೆಯನ್ನು ಜಾನಪದ ಜೀವನದಿಂದಾಯ್ದು ಹೇಳುವುದುಂಟು: ಒಬ್ಬ ಬಾಗವಾನರಾಕೆ, ತನ್ನ ಮಗು ಒಂದು ಹಣ್ಣು ಕದ್ದು ತಂದಾಗ ಊಹಾಪೋಹ ಮಾಡಲಿಲ್ಲವಂತೆ. ತಂದದ್ದರಲ್ಲಿ ಅರ್ಧ ಇಸಿದುಕೊಂಡು ತಿಳಿಯದೇ ಪ್ರೋತ್ಸಾಹಿಸಿಬಿಟ್ಟಳು. ಕ್ರಮೇಣ ಇದೇ ಚಟ ಬೆಳೆಯುತ್ತ ಹೋಗಿ, ದೊಡ್ಡ ದೊಡ್ಡ ಕಳವುಗಳಲ್ಲಿ ಭಾಗವಹಿಸಿ ತಾಯಿಯನ್ನು ಸಂತೈಸಿದನು. ಕೊನೆಗೊಮ್ಮೆ ಅತಿದೊಡ್ಡ ಅಪರಾಧದಲ್ಲಿ ಅವನು ಸಿಕ್ಕಿಬಿದ್ದು ಮರಣಾಂತಿಕ ಶಿಕ್ಷೆಗೊಳಗಾದಾಗ, ತಾಯಿಯ ಭೆಟ್ಟಿಯನ್ನು —ಅಂತಿಮ— ಮಾಡಿಸಿದರು. 'ನಾಲ್ಕು ಮಾತುಗಳಿಪ್ರೀತಿಯವೆಂದು ನೋಡಿ ತೃಪ್ತಿಹೊಂದು' ಎಂದು ಅಧಿಕಾರಿಗಳೆಂದಾಗ, ಆ ಸಮಯವನ್ನೇ ಉಪಯೋಗಿಸಿ ಆ ತರುಣನು—ಈಗ ತರುಣನಾಗಿದ್ದ—ಆಕೆಗೆ ಸಮಾಧಾನ ಸ್ಫೀತಿ ತೋರುವ ಬದಲು, ಆಕೆಯ ಕಿವಿ ಕಚ್ಚಿಬಿಟ್ಟನಂತೆ! 'ಎಷ್ಟು ಕ್ರೂರ, ನಿಷ್ಕರುಣಿ ಇವ; ತಾಯಿಯನ್ನೇ ಕೊನೆಗೆ ಹಿಂಸಿಸಿದನಲ್ಲ!' ಎಂದು ಕೂಡಿದ ಜನರು ಆಶ್ಚರ್ಯ ತೋರ್ಪಡಿಸಿದಾಗ, ಅವನು ನುಡಿದುದಿಂತು:— 'ನೋಡಿರಿ, ಈ ನನ್ನ ತಾಯಿಯೇ ನಾನು ಚಿಕ್ಕವನಿದ್ದಾಗ ಕಳವು ಮಾಡಿದಾಗ ದಂಡಿಸಿ ಸನ್ಮಾರ್ಗಕ್ಕೆ ಹಚ್ಚಿದ್ದರೆ, ನನಗೆಲ್ಲಿ ಈ ಘೋರ ವಿಪತ್ತು ಬರುತ್ತಿತ್ತು? ಈಗ ಈಕೆಗೆ ಅಸಹನೀಯ ನೋವು ಅನುಭವಿಸುವ ಭಾಗ ಏಕೆ ಬೀಳುತ್ತಿತ್ತು?'

ವೇದಕಾಲದಲ್ಲಿ ಆಚಾರ್ಯರು ಶಿಷ್ಯನನ್ನು ಅಧ್ಯಯನಾನಂತರ ನುನೆಗೆ ಕಳಿಸುವಾಗ 'ಸತ್ಯಂ ವದ, ಧರ್ಮಂ ಚರ; ಯಾನಿ ಅನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ, ನೋ ಇತರಾಣಿ; ಶ್ರದ್ಧಯಾ ದೇಯಂ ಅಶ್ರದ್ಧಯಾ ಅದೇಯಂ; ಯೇ ಕೇ ಚ ಅಸ್ಮತ್ ಶ್ರೇಯಾಂಸೋ ಬ್ರಾಹ್ಮಣಾಃ ತೇಷಾಂ ತ್ವಯಾಸನೇನ ಪ್ರಶ್ವಸಿತವ್ಯಂ' ಎಂದು ಹೇಳುವ ಸಂಪ್ರದಾಯವಿದ್ದಿರಲಿಲ್ಲವೆ? ತಾಯಿಯಾದರೂ ಇದೇ ಬಗೆಯಾಗಿ ಮಗುವಿನ ಸ್ವಭಾವವನ್ನು, ಚಿಕ್ಕಂದಿನಿಂದಲೂ ಗುರುವಿನೋಪಾದಿಯಲ್ಲಿ ತಿದ್ದಬಲ್ಲವಳೆಂಬುದಕ್ಕೆ ಮಹಾಭಾರತದ ಅಭಿಮನ್ಯುವಿನ ತಾಯಿಯ ದೃಷ್ಟಾಂತ ಹೇಳಬಹುದು. ಆಕೆಯ ಸ್ಫೂರ್ತಿಯ, ಬುದ್ಧಿಮತ್ತೆಯ ಮೂಲಕ ಅಭಿಮನ್ಯು ವೀರಾಗ್ರೇಸರನಾಗಿ ವೀರಮರಣವನ್ನೈದಿದ. ಹಿಂದಿನ ಯುಗ ಬಿಟ್ಟು ಐತಿಹಾಸಿಕ ರಂಗಕ್ಕೆ ಕಾಲಿಟ್ಟು ಸೂಕ್ಷ್ಮವಾಗಿ ನಿರುಕಿಸಿದರೆ, ಶಿವಾಜಿಯ ತಾಯಿಯಾದ ಜೀಜಾಬಾಯಿಯ ಕತೆ ನೆನಪಾಗುವುದು. ಆಕೆ ಕಲಿಸಿದ ಸದ್ಗುಣಗಳ ಫಲವಾಗಿ, ಅವನು ಗೋಬ್ರಾಹ್ಮಣ ಪ್ರತಿಪಾಲಕನಾಗಿ ಭಾರತದಾದ್ಯಂತ ಹಿಂದೂಧರ್ಮ ಸಂರಕ್ಷಿಸಿದ.

ತಾಯಿಯೆಂದರೆ ನಾಡು-ನುಡಿಯ ಪ್ರತೀಕವೆಂದಿಟ್ಟುಕೊಂಡಾಗ ಇದಕ್ಕಾಗಿ ಜೀವವನ್ನೇ ಮುಡಿಪಿರಿಸಿದ ಮಹನೀಯರ ಕತೆಗಳು ಇತಿಹಾಸದ ಪುಟಪುಟಗಳಲ್ಲಿ ನೋಡಲು ಸಿಕ್ಕುವವು. ಕೌರವ-ಪಾಂಡವರ ಮಹಾಕಾವ್ಯದ ಯುದ್ಧವಂತೂ ಜಗದ್ವಿಖ್ಯಾತವಾದುದು. ಅದು ನಾಡಿಗಾಗಿಯೇ ನಡೆದುದು. ತಾಯಿಯ ಉದ್ಧಾರವೇ ಅವರ ಉದ್ದೇಶ. ರಾಜಪೂತರು ಹಳದಿ ಬಟ್ಟೆಧರಿಸಿ ಹೆಂಡಿರು-ಮಕ್ಕಳನ್ನು ಕೊಂದು ಕತ್ತಿಯನ್ನು ಹಿಡಿದು ವೀರಾವೇಶದಿಂದ ಯುದ್ಧರಂಗಕ್ಕಿಳಿದುದು ತಾಯ ವಿಮೋಚನೆಗಾಗಿಯೇ ಅಲ್ಲವೆ? ಝಾಂಸಿ ಲಕ್ಷ್ಮೀಬಾಯಿ, ಕೆಳದಿಯ ರಾಣಿ, ಕಿತ್ತೂರ ಚನ್ನಮ್ಮ ರಂತಹ ಸ್ತ್ರೀಯರು ಸಹ ನಾಡಿಗಾಗಿ ಟೊಂಕಕಟ್ಟಿ ಹೋರಾಡಿ ಮಡಿದುದನ್ನು ನೆನೆದರೆ ತಾಯ್ತನ ಪಾವಿತ್ರ್ಯದ ಕಲ್ಪನೆ ಇನ್ನೂ ಸ್ಪುಟವೆನಿಸೀತು!

ಮಾತೃತ್ವದ ಮರ್ಯಾದೆ ಎಷ್ಟೊಂದು ಪಾವಿತ್ರ್ಯದಿಂದೊಡ. ಗೂಡಿದುದೆಂಬುದಕ್ಕೆ ಮಹಾರಾಷ್ಟ್ರ ಇತಿಹಾಸದಲ್ಲಿಯ ಕತೆ ಹೇಳುವು. ದುಂಟು: ಶಿವಾಜಿಯು ನಂಬುಗೆಯ ಸರದಾರನಾದ ಆಬಾಜಿ ಸೋನ ದೇವ ಎಂಬವನು, ಕಲ್ಯಾಣ ಸ್ವಾಂತವನ್ನು ನುಗ್ಗಿ ಆಕ್ರಮಿಸಿದನಂತೆ. ಅಲ್ಲಿಯ ಸುಭೇದಾರ ಮೌಲಾನಾ ಅಹಮ್ಮದ್ ಎಂಬವನು. ಹೆಂಡತಿ, ರೂಪವತಿಯಾದ ಸೊಸೆ ಸಹಿತ ಆವನನ್ನು ಸೆರೆಹಿಡಿದು ತನ್ನ ಒಡೆಯನಂದ ಶಿವಾಜಿಯೆಡೆಗೆ ಆ ಸುಂದರ ಸೊಸೆಯನ್ನು ಕಾಣಿಕೆಯಾಗಿ ಉಬ್ಬಿನಿಂದ ಒಪ್ಪಿಸಿ ಹೊಗಳಿಕೆ ಕೊಂದಲು ಹೋದಾಗ ಅವನು ನುಡಿದುದಿಷ್ಟೆ:—'ಸೋನದೇವ, ಆಕಯನ್ನು ಓಲಗಕ್ಕೇ ಕರೆದು ಕೊಂಡು ಬಾ' ಓಲಗಕ್ಕೆ ಆಕೆ ಬಂದಾಗ ಅರಸು ಆಕೆಯನ್ನುದ್ದೇಶಿಸಿ ನುಡಿದ:—'ಈ ಅಕ್ಕನು ರೂಪವತಿಯಾಗಿರುವಂತೆ ನನ್ನ ತಾಯಿಯೂ ಆಗಿದ್ದರೆ, ನಾನಿನ್ನೂ ಎಷ್ಟು ರೂಪವಂತನಾಗಿ ಹುಟ್ಟುತ್ತಿದ್ದೆನಲ್ಲ!' ಕೂಡಿದ ಸಭೆ ಆಶ್ಚರ್ಯಚಕಿತವಾದಾಗ, ಅರಸನು ಆಕೆಗೆ ಉಡುಗೊರೆ ಕೊಟ್ಟು ಗೌರವಿಸಿ ಪತಿಯೆಡೆಗೆ ಕಳುಹಿದ. ಇಂತಹ ಅಲೌಕಿಕ ಗುಣಗಳೇ ಮಹಾತ್ಮರ ಕೀರ್ತಿಯನ್ನು ದೇದೀಪ್ಯಮಾನವಾಗಿಸಿದುದರಲ್ಲಿ ಸಂದೇಹವಿಲ್ಲ!

ತಾಯಿಯ ವಾತ್ಸಲ್ಯದ ಆಳ ಹಾಗೂ ನೈಜತೆ ಅರಿಯಲು ನಾಪ್ರ ರವೀಂದ್ರರ 'ಕ್ಷುತ ಪಾಷಾಣ' ಎಂಬ ಕಥಾಸಂಕಲನಕ್ಕೆ ಮೊರೆ ಹೋಗಬೇಕು. ಅಲ್ಲಿಯ 'ಮಾಸ್ಟರ್ ಮಾಶಯ್' ಎಂಬ ಕಥೆಯ ಪ್ರಮುಖ ಪಾತ್ರ ಹರಲಾಲ. ಅವನ ತಾಯಿ ಅವನನ್ನು ಬಾಳ ವಾತ್ಸಲ್ಯದಿಂದ ತನ್ನ ಹೊಟ್ಟೆ ಕಟ್ಟಿ ತಲಿಸಿ ಕೆಲಸಕ್ಕೆ ಹಚ್ಚಿದಳು. ಆದರೆ ಅವನು ಮನೆಯಲ್ಲಿ ತಂದಿಟ್ಟ ಕಂಪನಿಯ ಹಣ ಹಿಂದಿನ ದಿವಸ ವೇಣು ಗೋಪಾಲ ಹೇಳದೆ ಕೇಳದೆ ಒಯ್ದಾಗ, ಎಂತಹ ಅಪತ್ತು! ಅಪವಾದಕ್ಕಾಗಿ ಪೋಲಿಸರು ಶೋಧ ನಡೆಸಿದಾಗ ತನ್ನ ಹೃದಯವನ್ನೇ ತೆರೆದು ತೋರಿಸಿ, ಅವನ ಪ್ರಾಮಾಣಿಕತೆಯ ಅರಿವು ಮಾಡಿಕೊಡಲು ಯತ್ನಿಸಿದಳು. ವಿಫಲವಾಯಿತು! ಹಾಗೇ 'ಮರಳಿ ಮನೆಗೆ' ಎಂಬಲ್ಲಿ, ಕಥಾನಾಯಕ ಫಟೇಕನು ಉಡಾಳ. ತಾಯಿ ಅವನ ಉಪಟಳಕ್ಕಾಗಿ ಬೇಸತ್ತು ಹೋಗಿರುವಳು. ಒಮ್ಮೆ ಅವನ ಕಕ್ಕೆಯು ಬಂದಾಗ, ಹಳ್ಳಿಯಿಂದ ಕಲಕತ್ತೆಗೆ ಕಳಿಸಿಬಿಡುವಳು. ದಿನಗಳೆದಂತೆ ಬಾಲಕನಿಗೆ—ಈಗ ಹದಿನಾಲ್ಕು ವರುಷದವ—ಬೇಜಾರು ತಲೆದೋರಿತು. ಶಾಲೆಯಲ್ಲಿ ಹಿಂದು ಬಿದ್ದ. ಹಳ್ಳಿಯಲ್ಲಿಯಂತೆ ಪಟ್ಟಾರಿಸಿ ಮೋಜುಮಾಡುವಂತಿಲ್ಲ; ಜೀವದ ಗೆಳೆಯರ ಕೊರತೆ. ಮೇಲಿಕಕ್ಕೆಯ ಅಸಹನೀಯತೆ. ಹೀಗಾಗಿ ಫಟೇಕನು ನಿರಾಶೆ ಹೊಂದಿದನೆ? ಧೋಧೋ ಎಂದು ಸುರಿಯುವ ಮಳೆಯಲ್ಲಿ ತನ್ನ ಹಳ್ಳಿಯ ದಿಕ್ಕಿನಲ್ಲಿ ಓಡಿದ. ಪೋಲಿಸರು ಅವನನ್ನು ಹಿಡಿದು ತಂದರು. ಅಂದೇ ಅವನಿಗೆ ಜ್ವರದಿಂದ ಎಚ್ಚರ ತಪ್ಪಿತು. 'ಹಬ್ಬದ ದಿನ ಬಂದುವೆ? ಈ ಊರಿಗೆ ಹೊರಡುವುದೆ?' ಎಂದು ಬಡಬಡಿಸಹತ್ತಿದ. ಗಾಬರಿಯ್ದಾದ ಕಕ್ಕ ಫಟೇಕನ ತಾಯಿಯನ್ನು ಕರೆಸಿದ. ಹಿಂದಿನ ಅಲಕ್ಷ್ಯಭಾವ ಅಕೆಗೆ ಈಗೆಲ್ಲಿ? 'ಫಟೇಕ, ನನ್ನ ಮುದ್ದುಮಗು, ಮಗು' ಎಂದು ಹಲುಬುತ್ತ ಆಕೆ ಬಿರುಗಾಳಿಯಂತೆ ಫಟೇಕನು ಮಲಗಿದ ಕೊಠಡಿಗೆ ಧಾವಿಸಿದಳು. ತಾಯಿಯ ಸ್ನೇಹಹೃದಯಕ್ಕೆ ಇದೊಂದು ಒಳ್ಳೇ ನಿದರ್ಶನ ನೆನ್ನಲು ಸಾಕು.

ತಾಯಿಯ ಪ್ರೀತಿಗೂ ತಂದೆಯ ಪ್ರೀತಿಗೂ ಅಜಗಜಾಂತರ ಉಂಟೆನ್ನಲು ನಾವು ಪೌರಾಣಿಕ ಕತೆಗಳನ್ನು ನೆನಪಿಗೆ ತಂದುಕೊಳ್ಳಬೇಕು. ಮಾದರಿಗೆಂದು ಜಮದಗ್ನಿ ಋಷಿಗಳ ಕತೆ ನೋಡಿದರೆ ಅವರು ಮಹಾ ಸಿಟ್ಟಿನವರು. ಹೆಂಡತಿ ರೇಣುಕಾ ತಪ್ಪಿತಸ್ಥಳೆಂದು ಅವರಿಗೆ ಸಂಶಯವು ದೃಢವಾದಾಗ, ಅವರ ಕಣ್ಣೆನಿಂದ ಪ್ರತ್ಯಕ್ಷ ಕಿಡಿಗಳೇ ಹೊರಹೊಮ್ಮಿದುವಂತೆ! ಹೆಂಡತಿಯನ್ನು ಕಡಿದು ಬಿಡಿರೆಂದು ಮಕ್ಕಳಿಗೆ ಆಜ್ಞಾಪಿಸಿದರು! ಪ್ರತಿಯೊಬ್ಬರು ಈ ಪಾತಕಕ್ಕೆ ಹೇಸಿಗೊಳ್ಳಲು ಪರಶುರಾಮನೊಬ್ಬನೇ ತಂದೆಯ ಮಾತನ್ನು ಮನ್ನಿಸಿದ. ಪಾಪಬಂದರೂ ಹೊಣೆ ತಂದೆಯದೆಂದು ನಂಬಿ ಕೊಂದ. ಜಮದಗ್ನಿ ಋಷಿಗಳು ಮಗನ ಆಜ್ಞಾಧಾರಕತ್ವಕ್ಕೆ ತಲೆದೂಗಿ 'ಒಂದು ವರ ಬೇಡಿಕೊ ಮಗು!' ಎನ್ನಲು, ಆ ಚಾಣಾಕ್ಷ ಪರಶುರಾಮನು ತಾಯಿಯನ್ನೇ ಬದುಕಿಸೆಂದು ಬೇಡಿಕೊಂಡನಂತೆ! ತಂದೆಗಾದರೂ ತನ್ನ ಕೋಪಕ್ಕಾಗಿ ಪಶ್ಚಾತ್ತಾಪವೆನಿಸಿದ್ದೀತು! ತಾಯಿ ಬದುಕಿದಳು!

ಇಂತು ತಾಯ್ತನದ ರೂಪಗಳು ಅಸಂಖ್ಯಾತ ಹಾಗೂ ಮೋಹಕವಿರುವಾಗ, ಅವನ್ನು ತೃಪ್ತಿಕರವಾಗಿ ರೂಹಿಸುವುದು ಅಸಾಧ್ಯಕೋಟಿಯ ಸಂಗತಿಯೆ! ಚಿತ್ರಗುಪ್ತರೇ ಆಕೆಯ ಗುಣಗಳ ಲೆಕ್ಕವಿಟ್ಟು ಸೋತಾಗ ಸಾಮಾನ್ಯರ ಗತಿ ಏನು? ಅಂತೇ ಇಷ್ಟಕ್ಕೆ ವಿರಾಮವೆನ್ನದೆ ವಿಧಿ ಇಲ್ಲವಷ್ಟೆ!

ಹಳ್ಳಿ–ಪಟ್ಟಣಗಳಲ್ಲಿ, ಬೀದಿ–ಬೀದಿಗಳಲ್ಲಿ

● ಧ್ವನಿವಾಹಕ ಯಂತ್ರದ ಮೂಲಕ

● ಉತ್ತಮ ಚಿತ್ರಗಳ ಮೂಲಕ

● ಮ್ಯಾಜಿಕ್ ಲ್ಯಾಂಟರ್ನ್–ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್

ಗಾಂಧಿಚೌಕ, ಧಾರವಾಡ

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ಬಂತು ಶ್ರಾವಣ' ಎಂಬ ಗೀತರೂಪಕವನ್ನು ವಿಮರ್ಶಿಸಿ ೩ ಜನರಿಂದಲೂ 'ಪರಿತ್ಯಕ್ತ ರಾಣಿ' ಐತಿಹಾಸಿಕ ರೂಪಕವನ್ನು ವಿಮರ್ಶಿಸಿ ೩ ಜನರಿಂದಲೂ ಲೇಖನಗಳು ಬಂದಿವೆ. ಈ ತಿಂಗಳ ಸ್ಪರ್ಧೆಯಲ್ಲಿ ಹೆಚ್ಚು ಜನರು ಭಾಗವಹಿಸದಿರುವುದು ಆಶ್ಚರ್ಯ-ವಿಷಾದಗಳ ಸಂಗತಿಯಾಗಿದೆ.

'ಬಂತು ಶ್ರಾವಣ'ದ ವಿಮರ್ಶಕರು :

೧. ಗೋಪಾಲಕೃಷ್ಣ ಹೆಗಡೆ, ಶಿರ್ಸಿ. ೨ ಶ್ರೀ. ಬಿ. ರಾಮಚಂದ್ರರಾವ್, ಕೋಲಾರ. ೩ ಶ್ರೀ. ಕೆ. ಎಸ್. ಶರ್ಮಾ, ವಾಣೀಮಂದಿರ, ಕಾಸರಗೋಡು.

'ಪರಿತ್ಯಕ್ತರಾಣಿ'ಯ ವಿಮರ್ಶಕರು :

೧ ಸೌ. ಉಮಾದೇವಿ ರಾಮರಾವ್ ಶೇಡಬಾಳಕರ, ಮುಂಬಯಿ. ೨ ಶ್ರೀ. ಕೆ. ಎಸ್. ಶರ್ಮಾ, 'ವಾಣೀಮಂದಿರಂ' ಕಾಸರಗೋಡು, ೩ ಶ್ರೀ. ಎಚ್. ಸೀತಾರಾಮರಾವ್, ಹೊಸಬಾಳೆ—ಸೊರಬ.

ಪ್ರತಿಸಲದಂತೆ ಸಂಪಾದಕ ಮಂಡಲಿಯವರೇ ವಿಮರ್ಶೆಗಳನ್ನು ನೋಡಿದರು. ಎರಡೂ ವಿಭಾಗದ ವಿಮರ್ಶೆಗಳಲ್ಲಿ ಶ್ರೀ ಕೆ. ಎಸ್. ಶರ್ಮಾ ಅವರ ವಿಮರ್ಶೆಗಳೇ ಅತ್ಯುತ್ತಮವಾಗಿವೆ. ಶ್ರೀ. ಗೋಪಾಲಕೃಷ್ಣ ಹೆಗಡೆ (ಬಂತು ಶ್ರಾವಣ)-ಯವರ ಮತ್ತು ಶ್ರೀ. ಎಚ್. ಸೀತಾರಾಮರಾವ್ (ಪರಿತ್ಯಕ್ತ ರಾಣಿ) ಅವರ ವಿಮರ್ಶೆಗಳು ಚೆನ್ನಾಗಿವೆ.

ವಿಮರ್ಶಕಬುದ್ಧಿ ಬೆಳೆಯದವರಿಗೆ ಬರೀ ಓದಿನಿಂದ ಇಷ್ಟ ಪ್ರಯೋಜನ ದೊರೆಯಲಾರದು. ಅದರಂತೆಯೇ ಲೇಖಕರಾಗಬೇಕೆಂದು ಆಶೆಯಿಟ್ಟುಕೊಂಡವರು ಯೋಗ್ಯರೀತಿಯಿಂದ ಗುರಿಯನ್ನು ಮುಟ್ಟಲಾರರು. 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಎಂದು ರಾಜಕವಿ ತೃಸಕುಂಗನಿಂದ ಆತನ ಕಾಲದ ಕನ್ನಡಿಗರೆಲ್ಲ ಹೊಗಳಿಸಿಕೊಂಡಿದ್ದಾರೆ. ಅವರ ಸಂತಾನಕ್ಕೆ ಸೇರಿದವರೇ ಆದ ಇಂದಿನ ಕನ್ನಡಿಗರಲ್ಲಿ ಅಂತಹ 'ಕಾವ್ಯಪ್ರಯೋಗ ಪರಿಣತಮತಿ' ಅರಳದಿರಲಾರದೆಂದು ನಮ್ಮ ಭರವಸೆ. ಆದರೆ ಆಶ್ರದ್ಧೆಯಿಂದಲೋ ಭೀತಿಯಿಂದಲೋ ನಮ್ಮ ತರುಣರು ಹಿಂಪರಿದು ಕುಳಿತುಕೊಂಡರೆ, ಅವರಲ್ಲಿಯ ವಿಮರ್ಶಕಬುದ್ಧಿ ಮಲಗಿ ನಿದ್ದೆವಾಡುವುದು.

ಶ್ರೀ. ಕೆ. ಎಸ್. ಶರ್ಮಾ ಅವರು ಪ್ರತಿಸಲವೂ ತಪ್ಪದೆ ವಿಮರ್ಶೆಬರೆದು ಕಳುಹುತ್ತಿರುವುದು ಅಭಿನಂದನೀಯ ಸಂಗತಿ. ಅವರ ಪ್ರಬುದ್ಧ ಲೇಖನಗಳನ್ನು ನೋಡಿದವರಿಗೆ ಅವರು ಹೆಚ್ಚು ವಯಸ್ಸಾದವರಿರಬಹುದೆಂದು ಎನಿಸುವಂತಿದೆ. ಆದರೆ ವಸ್ತುಸ್ಥಿತಿಯು ಹಾಗೆ ಇಲ್ಲ. ಶ್ರೀ. ಕೆ. ಎಸ್. ಶರ್ಮಾ ಇವರು ಇನ್ನೂ ನವತರುಣರಾಗಿದ್ದಾರೆ. ಅಭ್ಯಾಸದಿಂದ ತಮ್ಮ ವಿಮರ್ಶಕ ಬುದ್ಧಿಯನ್ನು ಬೆಳೆಸಿಕೊಂಡಿದ್ದಾರೆ. ಈ ಮಾತನ್ನು ನಮ್ಮ ತರುಣ ವಿಮರ್ಶಕರು ಗಮನಿಸಬೇಕಾಗಿ ನಮ್ಮ ಅಪೇಕ್ಷೆ.

ಮುಂದಿನ ಸಂಚಿಕೆಯ ನೋಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ 'ಮಬ್ಬು ಹರಿಯಿತು' ಎಂಬ ಕಥೆಯನ್ನಾಗಲಿ 'ಶಿವ ಪಾರ್ವತಿ' ಎಂಬ ಕಥೆಯನ್ನಾಗಲಿ ವಿಮರ್ಶಿಸಿ ಬರಹಗಳನ್ನು ಕಳುಹಬೇಕು.

—ಸಂಪಾದಕ

'ಬಂತು ಶ್ರಾವಣ'

(ಗೀತರೂಪಕ)

ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು

ಪ್ರಕೃತಿಯ ಭಾಗ್ಯವೃಂದಾವನವನ್ನು ಬೆಳಗಿಸಿ, ಸಮಸ್ತ ಪ್ರಾಣಿಜಾತದ ಹೃದಯಾನಂದದೊಡನೆ ಜೀವಿತಸುಖವನ್ನು ತುಂಬೆದೆಯಿಂದ ನೀಡಿ, ಆಷಾಢನ ಅಳಿಕೆಯು ಕೊನೆಗೊಂಡ ಅದೊಂದು ಶುಭ್ರವಾದ ಉಷಸ್ಸಿನಲ್ಲಿ ಶ್ರಾವಣರಾಜ ಕಾಲಿರಿಸಿದ್ದಾನೆ. ಎತ್ತೆತ್ತಲೂ ನೂತನವಾದೊಂದು ಲಾವಣ್ಯವನ್ನೂ ಚಿತ-ಪ್ರಶಾಂತ ಪರಿಸ್ಥಿತಿಯನ್ನೂ ಒಡಮೂಡಿಸಿದ್ದಾನೆ. ಜನಜೀವನದ ಪಾವಿತ್ರ್ಯಕ್ಕಾಗಿ ಜೀವನವನ್ನು ನೀಡಿ ನಿಂತಿದ್ದಾನೆ. ಬಾಳಿನಲ್ಲಿ ಸಮರಸದ ಸಮಜೀವನದ ಒಲುಮೆಯನ್ನು ಧಾರೆಯೆರೆಯಲು ನಿಂತಿದ್ದಾನೆ.

× × × ×

ಇದೊಂದು ಗೀತರೂಪಕ. ಆಷಾಢಮಾಸ ಪುರುಳಿನಿಂತ ಕೊನೆಯ ರಾತ್ರಿಯ, ಕೊನೆಯಯಾಮದ ಅರ್ಧಭಾಗವೂ ಮಾಯವಾಗಲು, ಪ್ರಕೃತಿಯು ಶ್ರಾವಣರಾಜನ ಬರವಿಗಾಗಿ ಮೈಗೂಡಿ, ಒಲವೇರಿ ಸ್ವಾಗತಿಸುವ—ಹಾಗೂ—ಶ್ರಾವಣರಾಜನ ಆಗಮನದ ಬಳಿಕಿನ ಪ್ರಕೃತಿವಿಲಾಸವನ್ನೂ, ತದಾಯತ್ತ ಜನಜೀವನದ ವಿವಿಧ ಜೀವನೋತ್ಸವಗಳನ್ನೂ ಬಿಂಬಿಸುವ—ಮಧುರ ಕಾವ್ಯಧಾರೆಯೆ ಪ್ರಸ್ತುತ ರೂಪಕದ ಜೀವಿತವು. ರೂಪಕವಿದರಲ್ಲಿ ನಾಟಕಕಾರರು ಶೈಲಿಯ ವಾತಾವರಣವನ್ನೆತ್ತಿಕೊಂಡು, ತದಾಯತ್ತ ಜನಜೀವನದ ಜೀವಿತೋಲ್ಲಾಸವನ್ನರಳಿಸಿ—ತದಂತರ್ಗತ ಮಧುರ ಸೌರಭವನ್ನು ವಿಶಾಲವಾದ ಪ್ರಕೃತಿಯ ಮಡಿಲಲ್ಲಿ ಸೊಗಯಿಸುವ ನದಿಗಳ ಮಂಜುಲ ನಿನಾದದಿಂದಲೂ, ಕುಸುಮಗಳ ಮಾನಸೋಲ್ಲಾಸದಿಂದಲೂ ಹರಡಿಸಿದ್ದಾರೆಂದರೆ—ಇದೊಂದು ರಮಣೀಯ ಸನ್ನಿವೇಶ ವಿಧಾನ. ಜಾತುರ್ಯವೆನ್ನದಿರಲು ಸಾಧ್ಯವಿಲ್ಲ!

'ಕಲ್ಪನೆ' ಯೆಂಬುದು ಸಾಹಿತ್ಯಕಾರನಲ್ಲಿ ನೆಲಸಿರಬೇಕಾದ ನಿಶಿಷ್ಟವಾದೊಂದು ಸಂಪತ್ತು. ಕಲ್ಪನಾಬಲವಿಲ್ಲದಿದ್ದರೆ ಕೃತಿಕಾರನ, ಕಲಾವಿದನ ಉದ್ದೇಶವು ಸಾಫಲ್ಯನನ್ನೈದಲಾರದು. ಕೃತಿಕಾರನು ತಾನೆತ್ತಿಕೊಂಡ ವಸ್ತುವಿನಲ್ಲಿ ಜೀವಿತವನ್ನು ತುಂಬಬೇಕಾದರೆ, ಕಡಿದೊಯ್ದಿರುವ ಆಕರ್ಷಣೆಯನ್ನು, ಸೌಂದರ್ಯವನ್ನು ಅಲೆಯಲೆಯಾಗಿ ಮೃದುಮಧುರವಾಗಿ ತುಂಬಬೇಕಾದರೆ—ಅವನಲ್ಲಿ ಉದ್ಬುದ್ಧಭಾವ ಸಂಪತ್ತಿನೊಪಸೆ, ರಸಾನರ್ಜಕ ಭಾಷಾಸಂಪತ್ತಿಯೊಡನೆ ತುಂಬಿನಿಂತ ಕಲ್ಪನಾಶಕ್ತಿಯು ಬೇಕಾಗುವದು. ಕಲ್ಪನೆಯ ವಿಲಾಸಕ್ಕೆ, ಕವಿಹೃದಯಾನುಭಾವಪೂರ್ಣವಾದ ಮಧುರಭಾವಗತಿಗೆ ಜೀವಿತದ ಯಾಥಾರ್ಥ್ಯವನ್ನು ತೋರುವ, ಶಾಂತಿಯು ನೆಲೆಗಿಲ್ಲಲ್ಲಿ ಮುದ್ದಾಗಿ ನೆಲೆನಿಂತ ಪ್ರಕೃತಿಯೇ ಜೆಲುವಿನ ನಿಲುವೆನ್ನಬೇಕಾಗಿದೆ. ಈ ನಿಲುವಿನ ಪರಮಾವಧಿಯ ಸೌಂದರ್ಯವನ್ನು ಪ್ರಸ್ತುತರೂಪಕದಲ್ಲಿ ಕಾಣಬಹುದಾಗಿದೆ.

ಇನ್ನೊಂದು ಮಾತು: ಕವಿಕಲ್ಪನಾಮೂಲವಾಗಿ ಹರಿದುಬಂದ ರಮಣೀಯ ವರ್ಣನೆಯಲ್ಲಿ ಕವಿಯು ಇಲ್ಲವೆ ನಾಟಕಕಾರನು, ಬಾಹ್ಯ ಸೌಂದರ್ಯದ ನಿಲುವಿನಲ್ಲಿ ಆಂತಸ್ಸೌಂದರ್ಯದ ಮಾರ್ಮಿಕಗತಿಯನ್ನೂ—ಜೀವಿತ ಸಂದೇಶವನ್ನೂ ನೀಡುವುದಿದು ಮರೆಯಲಾಗದ ಮಾತು. ಈ ದೃಷ್ಟಿಯಿಂದಲೂ 'ಬಂತು-ಶ್ರಾವಣ' ಬೆಳಕನ್ನು ತೋರಿದೆ; ಪ್ರಕೃತಿಯ ಭಾವಪೂರ್ಣ ಮಧುರಮಣಿಮಂಜೀರಧ್ವನಿಯಲ್ಲಿ ಹೃದಯವನ್ನು ಲಾಲಿಯಿಂದ ತೂಗಿ ತೋರಿದೆಯೆಂದೆನ್ನಲು ಅಸಂದವಿದೆ!

× × × ×

ಬಾನುಲಿಯಲ್ಲಿ ಬಿತ್ತರಗೊಂಡ, ಶ್ರವ್ಯಮಾರ್ಗದಲ್ಲಿ ಜನರೆದೆಯಲ್ಲಿ ಕಳೆಯೇರಿನಿಂತ 'ಬಂತು ಶ್ರಾವಣ'—ಅವಶ್ಯ ಸಂದರ್ಭದಲ್ಲಿ ತಲೆದೋರಿನಿಂತ ನಿರೂಪಕನಿಂದ ಬೆಳಗಿದೆಯೆನ್ನಬೇಕು. ಅವಶ್ಯವಿಲ್ಲಿದೆ, ಇಲ್ಲವೆ ನಾಟಕದ ಪೂರ್ಣತೆಯ ನಿಲುವಿಗೆ ಅರ್ಥವಾಗುವಂತೆ ಅಲ್ಲಲ್ಲಿ, ಅನೇಕತ್ರ ನಿರೂಪಕನಿಂದಲೇ ಕಾರ್ಯಸಾಧನೆ ಮಾಡುವುದದು ರುಚಿರವಲ್ಲ. ಈ ಮರ್ಮವನ್ನು ಪೂರ್ಣವಾಗಿ ಮನಗಂಡ ಪ್ರಸಿದ್ಧನಾಟಕಕಾರರಾದ ಶ್ರೀ. ಬೆಟಗೇರಿಯವರು, ಕೇವಲ ನಾಲ್ಕೇ ಸಂದರ್ಭದಲ್ಲಿ ಸೂಕ್ಷ್ಮವಾಗಿ, ಅರ್ಥಪೂರ್ಣವಾಗಿ ನಿರೂಪಕನನ್ನು ಬೆಳಕುಕಾಣಿಸಿದುದು ತುಂಬೆದೆಯ ಸ್ವಾಗತಕ್ಕೆ ಪಾತ್ರವಾಗಿದೆಯೆನ್ನಬೇಕಾಗಿದೆ. ಬಾನುಲಿಯ ಬಿತ್ತರದಲ್ಲಿ 'ಬಂತು ಶ್ರಾವಣ'ವು ಬಹು ಸಮರ್ಪಕಗತಿಯಲ್ಲಿ ರೂಪುದೋರಿರಬೇಕೆಂಬುದನ್ನು ಎಂತಹವನೂ ಈ ರೂಪಕದ ಹಿನ್ನೆಲೆಯ ಅಚ್ಚುಕಟ್ಟನ್ನು—ಸಂವಿಧಾನ ಕೌಶಲವನ್ನರಿತರೆ ನುಡಿಯದಿರಲಾರನು. ಅಷ್ಟೊಂದು ಮಾರ್ಮಿಕತೆಯಿದೆ ದೃಶ್ಯಯೋಜನೆಗೆ. ಅಷ್ಟೊಂದು ಮಾಧುರ್ಯವಿದೆ ತಲೆಗಾಣಿಸಿದ ಪಾತ್ರಯೋಜನೆಗೆ; ಅಷ್ಟೊಂದು ಜೆಲುವಿದೆ ಕಲ್ಪನೆಯ ಮಧುರವೃತ್ತಿಗೆ!

ರೂಪಕದ ಪ್ರಥಮಾವತರಣ: — ಆಷಾಢಮಾಸದ ಕೊನೆಯನ್ನು ನಿರೂಪಕನು ಸಾರಿ ಸಾಗುತ್ತಲೇ, ಉಷಃಕಾಲದಲ್ಲಿ ಎಚ್ಚೆತ್ತ ಹಕ್ಕಿಗಳ ಮಂಜುಲ ಹೃದಯನಾದವು ಪುಟಿದೇಳುತ್ತಿದೆ. ಇದು ಶ್ರಾವಣರಾಜನನ್ನು ಸಂಭ್ರಮದಿಂದ ಸ್ವಾಗತಿಸುವ ಪ್ರಕೃತಿಯ ಹೃದಯಾನಂದ! ಇದಾವ ಬಳಿಕ ಉದಯ ಕಾಲೋಚಿತರಾಗದಲ್ಲಿ—"ಏಳು ಶ್ರಾವಣರಾಜ.....ಏಳು ಜೀವನ ತೇಜ.....ಪಡುಗಡಲು ನಿನಗೆಂದೆ ಪಡೆದಿಹುದು ಜಡಿಮೋಡ.....ಪೊಡವಿತಾಯಿಯು ನೋಡುತಿಹಳು ನಿನ್ನೆಚ್ಚರವ...." ಎಂಬ ವೃಂದಗೀತವು ನೊರೆದು ನಿಂತು, ಅತುಲರಾಗಸಂಪನ್ನ—ಮೃದುಭಾವಸಂಪನ್ನ - ಸ್ವಾಗತವನ್ನೆಚ್ಚರಿಸುತ್ತದೆ. ಪ್ರಕೃತಿಯು ಕಳೆಯೇರಬಹುದಾದ ಒಂದು ವಿಶಿಷ್ಟ ಪರಿಸ್ಥಿತಿಯ ಸಮಾಲೋಚನೆಯಲ್ಲಿ, ಕವಿಗಳು ನವನವೋನ್ಮೇಷ ಜೀವನ ನಿರ್ಮಾಣವನ್ನು ಬಯಸಿದ್ದಾರೆ; ಕತ್ತಲೆಯಿಂದ ಸರಿದು ನಿಂತು ಬೆಳಕಿಗಾಗಿ ಹಾರೈಸಿನಿಂತ ಜನತೆಯ ಹೃದಯಾಕೂತಿಯನ್ನು

ಬಿಂಬಿಸಿದ್ದಾರೆ. ಈ ತೆರನ ಕರೆಯಮುಂಪೆ, ಅವತರಣಕ್ಕೆ ಪೂರ್ಣ ಅವಕಾಶವನ್ನು ಸಾಧಿಸಿದ ಗಳಿಗೆಯು ಮುಂಪೆ, ಶ್ರಾವಣರಾಜನು—.... "ಇಂದಿನುದಯ ರವಿಯು ನನ್ನ ಒಲವಿಗೆ ಕರೆದು ತಂದ....ಇಂದಿನಿಂದ ನನ್ನಾಳಿಕೆ — ತಂದಿಹೆನಾನಂದ" ಎಂದೆಂದು ಬಯಸುತ್ತಿರುವಾಗಲೇ, ಹಳ್ಳಿಯ ವಿವಿಧೆಡೆಗಳಿಂದ ಮಂಗಲಸೂಚಕ ವಾದ್ಯಧ್ವನಿಯೂ, ಜನತೆಯ ಸಂಭ್ರಮದುಲಿಯೂ ಕೇಳಿಸುತ್ತವೆ. ಮತ್ತೊಮ್ಮೆ ನೈಸರ್ಗಿಕತೆಯು ಮೊರೆದು ಮೌನದಲ್ಲಿ ಸೆರೆಯಾಗುತ್ತವೆ. ಇಲ್ಲಿಗೆ ಪ್ರಥಮಾವತರಣವು ಕೊನೆಗಂಡಿತೆಂದಾದರೆ— ಈ ಪ್ರಥಮಾವತರಣವನ್ನು ಪ್ರಕೃತಿಯ ಜೀವಿತಧಾರೆಯು ಮಧುರವಾಗಿ ಹರಿದುನಿಂತ ಗತಿಯನ್ನು ಓದುಗನೂ ಅನಂದದಿಂದ ಸ್ವಾಗತಿಪರಲಾರನು.

ಮುಂಪೆ "ಕೃಷಿಕರ ಗುಂಪು"—! ಶ್ರಾವಣರಾಜನು ಆಗಮಿಸಿದ್ದಾನೆ ಪ್ರಕೃತಿಯು ವಿಲಾಸದಿಂದ ಮೈಯಲಳಿಸಿ ನಿಂತಿದೆ. ತನ್ನ ಸೋಗಿಲನ್ನು ತುಂಬುವ, ಸೋಗಿಲಯೋಗಿಗಳ ಜೈವಯಾನಂತವನ್ನು ಭೂದೇವಿಕಾಣುತ್ತಾಳೆ ಕೃಷಿಕರೆಲ್ಲರೂ ಸೇರಿ "..ನಲಿಯುತಕವೆ ಬನಾ, ಹಿಗ್ಗಿನಲಿ ಜನಾ ಕುಣಿಯುತಕವೆ!" ಎಂದೆಂದು ತನಿಮಳೆಯ ಇಳೆಯುವಿಕೆಯನ್ನೆತ್ತಿ ಅನಂದಿಸುವರು. ತವರ ಮುಂದೆಯೆ 'ಒಬ್ಬ'— ಭೂಮಿತಾಯಿಯ ಉಡಿ ತುಂಬಿಸುವ ಏಕೈಕಾಸೆಯನ್ನೆತ್ತಿ ಬಸವಣ್ಣ ಹೊನ್ನಹೊಲ ಹೂಳುವ ಉಬ್ಬರವನ್ನು ಹೇಳಿದರೆ, 'ಇನ್ನೊಬ್ಬ'— ಇಂದಿನ ಬೀಜ ನಾಳಿನ ಕೂಳಾಗಿ ಜನಜೀವವಪಹಸಿವನ್ನು ಇಂಗಿಸುವ ಭಾವಿಯೋಸಗೆಯನ್ನು ಕೊಂಡಾಡಿದರೆ, 'ಮತ್ತೊಬ್ಬ'—ನಾಡನ್ನೆ ಸಂತಸದ ಜಾಲದಲ್ಲಿ ಸೆರೆವಿಡಿದ ಹಬ್ಬಗಳ ಸೊಗಸನ್ನು—ಬಳಗಮೊಲವನ್ನು ಕೊಂಡಾಡಿದರೆ— 'ಮಗುದೊಬ್ಬ' ಮನೆಮನೆಯಲ್ಲೂ ನೆಲೆನಿಂತ ಭಕ್ತಿಪೂರ್ಣ ಹೃದಯಗೀತೆಯ ಅನುಭವವನ್ನು ದನಿಯೇರಿಸಿದರೆ—ಕೊನೆಯಲ್ಲಿ ಎಲ್ಲರೂ ಕೂಡಿ, ಶ್ರಾವಣನ "ಜೀವನ"ವನ್ನು ಮನತುಂಬಿ ಹಾಡುವರು; ಎದೆಯೇರಿ ಕೊಂಡಾಡುವರು.— ಇಲ್ಲಿಗೆ ದ್ವಿತೀಯಾವತರಣಪೂರ್ಣತೆಯನ್ನು ಸಾಧಿಸಿದರೆ, ಪ್ರಕೃತಿಯ ರತ್ನಮಾಲೆಗಳಾದ ನದೀದೇವಿಯರು ದೇವೇಂದ್ರಸ್ತುತಿಯನ್ನೆತ್ತಿ— ನವಜಲ ಪೂರ್ಣೆಯರಾಗಿ ಒಡಿದರೆ—ಮುಂದೆ ಒಕ್ಕೊಬ್ಬರಾಗಿಯೆ ಶ್ರಾವಣನನ್ನು ಕೊಂಡಾಡಿ "ನೊರೆಯ ನಗೆಗಳಿಂದ—ಹೊನಲ ಹಾಡುಗಳಿಂದ" ಕುಣಿಯುತ್ತ ಅನಂದದಿಂದ ವಿರಮಿಸಿದರೆ—ಮುಂದಿನ ಅವತರಣದಲ್ಲಿ 'ಶ್ರಾವಣ' ನೇ ಮುಂದೆ ಬಂದು ಬನಬನದಲ್ಲಿ ನಗುತ್ತಿರುವ ಅರಳಜಾಲವನ್ನು, ಮಾನವಕೋಟಿಗೆ ಕರ್ತವ್ಯದ ನೆಲೆಯನ್ನು—ಜೀವಿತ ಸೌಂದರ್ಯವನ್ನು ತಾಣಿಸುವ ನಗುವೊಗದ ಕುಸುಮಗಳನ್ನು ಸ್ವಾಗತಿಸಿ— " ಬಾಳಸಾರ್ಥಕತೆಗೆ ಬಂದ ಶುಭಕಾಲವನ್ನು ಸೂಚಿಸುತ್ತಾನೆ. ಸುರಲೋಕದ ಸುಮದ ಸೊಬಗನ್ನು ಮೆರೆವ ಕುಸುಮಗಳನ್ನು—ತದಾಯತ್ತ ಸುರಭಿಯನ್ನು ಹರಡಲು ಕೇಳುತ್ತಾನೆ. ಈ ಕೇಳಿಕೆಯ ನಂತರವೇ—ಮೆಲುನಗೆಯ ದನಿಯು ಸುಳಿದಾಗ ಬರುವವಳಾರದು? ಅವಳೇ ಮಲ್ಲಿಗೆ! ಆಕೆ ತನ್ನ ಪರಿಚಯವನ್ನಿತ್ತು "ಹಸುರು ಪತ್ತಲವ ಹಾಸಿ ಹೂವುಗಳ ಮೊಸರನು ಚೆಲ್ಲಿಹೆನೋ!" ಎಂದಾಡಿ ಮುದ್ದಿನಿಂದ ಸಾಗಿದರೆ,—ಹಸುಳೆಯ ನುತ್ತಿಟ್ಟ ಉಲುಹಿನೊಂದಿಗೆ "ಗುಲಾಬಿ" ಬಂದು, ಮೊದಲನುಡಿಯಲ್ಲಿ "ಮುಳ್ಳುಗಳಿಲ್ಲವ ಮರೆಗೊಳಿಸಿಹೆ—ಹಸುರೆಲೆಗಳ ಮುಸುಕಿಸುತ" ಎಂದಾಡಿ, ಜೀವನದ ಒಳಗಣ್ಣು ಸಾರಿ—ತನ್ನ ಹೂಗಳ ವೈಧುರ್ಯವನ್ನು ಬಿಂಬಿಸಿ, ರಮಣನ ಕಣ್-ಮನ ಸೆಳೆಸಳು ದಿಟ್ಟದಿಟ್ಟ ನನ್ನ ಮುಡಿವ ತರುಣಿ,' ಎಂದೆಂದು ತನ್ನ ಸೌಂದರ್ಯಕ್ಕೆ—ಮಾರ್ದವಕ್ಕೆ ಒಪ್ಪುವ ನುಡಿಗಳನ್ನರಳಿಸಿ ಚಿಂಗುಲಾಬಿ ರಾಣಿಯಾಗಿ ಮೆರೆದರೆ—ಒಡನೆ " ಸಂಸಗೆಯು " ತಳರ ಬಾನೊಳು ತಾರೆಗಳ ತೊಳಗಿಸಿ—ಪನಿಮಳಿವ ದೆಸೆದೆಸೆಗಳಲ್ಲಿ ಹಸರಿಸಿ" ಭಾವುಕಸಂಪನ್ನಳಾಗಿ— ಕವಿಹೃದಯಮಾರ್ದವ— ರಸ ನಿರ್ಭರಗತಿಯಲ್ಲಿ ಅರಳಿನಿಲ್ಲುವಳು. ಆಗಲೆ 'ಕೇತಕಿ' ಯು ಬಂದು—ತಾನು ಶ್ರಾವಣನ ಕನ್ಯೆಯೆಂದಾಡಿ "ಕಂಟಕಿನಿಯಾದರೂ ಸುರಭಿಸಂಪನ್ನೆ" ಯೆಂದು ನುಡಿಯೆತ್ತಿ—ಕಾಠಿಣ್ಯದಲ್ಲೂ ಒಸರಿನಿಲ್ಲಬೇಕಾದ ಹೃದಯ ಸಾಮಾಜಸ್ಯವನ್ನು, ಅನುಕೂಲ ಪರಿಸ್ಥಿತಿಯನ್ನು ಸಾರುತ್ತಾಳೆ. ಇವುಗಳ ಈ ಬಗೆಯ ಪರಿಚಯದ ಕೊನೆಯಲ್ಲೆ ಮತ್ತೊಮ್ಮೆ ಶ್ರಾವಣನು ತಲೆಗಾಣಿಸಿ ವಿಶ್ವಸಂದೇಶವನ್ನು ಮೊರೆಯುತ್ತಾನೆ..... "ಪುಣ್ಯಕಾರ್ಯಕೆ ನಿಮ್ಮ ಬಾಳನು ನೀಡಿ ನಾಕವ ಸೇರಿರಿ! ನೀಡಿ ನಾಕವ ಸೇರಿರಿ. ಭೂಜನಕೆ ಬಾಳ್‌ಗುರಿ ತೋರಿರಿ!" ಎಂದಾಡಿ ತನ್ನ ಹಿರಿಮೆಯನ್ನು ತೋರುತ್ತಾನೆ. ಇಲ್ಲಿಯೆ ದೃಶ್ಯ ಬದಲಾವಣೆಯ ವಾಸ್ಯವಾದನವು ತಲೆದೋರಿದರೆ—ಅರ್ಥಾತ್ ಪ್ರಕೃತಿಯ ಮಧುರ ಜೀವನಪ್ರವಾಹವು ಅಲೆಯಲೆಗಾಗಿ ತಲೆಗಾಣಿಸಿ ಒಂದೆಡೆ ಮರೆಯಾದರೆ—ಮುಂದೆ ಪ್ರಕೃತಿಯ ಅರಾಧಕರಾದ—ಶ್ರಾವಣನ ಬರವಿನಿಂದ ವಿವಿಧ ಜೀವನಸಂಧಿಯಲ್ಲಿ ಅಶಾತುರರಾದ ಒಕ್ಕಲಿಗರ ಹೃದಯವನ್ನು ನಾಟಕಕಾರರು ತೋರಿಸುತ್ತಾರೆ.—

ಹಳ್ಳಿಯ ಜೀವನ: ಒಕ್ಕಲಿಗನ ಮನೆಯು ಮುಂಗಟ್ಟಿ. ಆ ಮನೆಯ ಸೊಸೆ—ಆ ಮುಂಗಟ್ಟಿಯಲ್ಲಿ ಕುಳಿತು ತನ್ನ ಗೆಳತಿಯೊಂದಿಗೆ ತನ್ನ ಅತುರ-ಕಾತರಗಳನ್ನು ತೋಡಿಕೊಳ್ಳುತ್ತಿದ್ದಾಳೆ.

ತವರಿನ ಯೋಚನೆಯಲ್ಲಿದ್ದಾಳೆ ಆಕೆ. ಶ್ರಾವಣಮಾಸದಲ್ಲಿ ಮುಂದ 'ಪಂಚಮಿ ಹಬ್ಬ' ದ ನೆನೆಕೆ ಒಂದೆಡೆ; ತವರಿನಿಂದ ಅದೇ ಅಣ್ಣ ಬರಲಿಲ್ಲ ಎಂಬ ಆತುರ ಇನ್ನೊಂದೆಡೆ. ಆಕೆ ತನ್ನ ತವರಿನ ವೈಭವವನ್ನು ಕೊಂಡಾಡಿ—ತನ್ನಣ್ಣ ತನ್ನನ್ನು ಮರೆಯಲಾರ ನೆಂದಾಡಿ—ಮುತ್ತಿನಂಥ ತನ್ನ ಅತ್ತಿಗೆಯನ್ನು ಕೊಂಡಾಡಿ ಉತ್ಸವದ ವಿವಿಧಸಂಭ್ರಮಗಳನ್ನೂ— ತಿಂಡಿ ತಿನಸುಗಳನ್ನೂ— ತೆನರಿನಲ್ಲಿ ಒಣಿಒಣಿಯಲ್ಲಿ ಕಾಣಿಸುವ ತೊಲಿಯಯ್ಯಾಲಿಯನ್ನೂ ತೊಟ್ಟಿಲಜೀಕವನ್ನು ಓರಣವಾಗಿ ರೂಪಿಸುವಾಗ—ವಾಚಕನು ಆಕೆ ಮನೆಯಲ್ಲಿ ನೆಲೆನಿಂತು—ತವರಿಗಾಗಿ ಹಂಬಲಿಸುವ ಹೆಣ್ಣೊಡೆಯ ಅತುರ-ಕಾತರಗಳನ್ನು ಪೂರ್ಣವಾಗಿ ಕಾಣಬಹುದು. ಅಲ್ಲೂ ಉತ್ಸವ ಕಾಲದಲ್ಲಿ ಹೆಣ್ಣಿಂದೆಯು ಯಾವ ಯಾವ ವಿಚಾರಗಳನ್ನೆತ್ತಿ ಆತುರವಾಗಬಹುದೆಂಬುದನ್ನು ನಾಟಕಕಾರರು ಹಳ್ಳಿಯ ನುಡಿಗಳಲ್ಲಿ ಮಧುರವಾಗಿ ರೂಪಿಸಿದ್ದಾರೆ. ಆತುರ-ಕಾತರಗಳಿಗೆಗಾಗಿ ನಿ

ಮಾತುಗಳೇ ಇಲ್ಲಿ ನೆಲೆನಿಂತಿಪ್ಪರಿ—ಅವಕ್ಕೆಲ್ಲ ಜೀವ ತುಂಬಲು "ಅಣ್ಣ ಬರಲಿಲ್ಲ ಯಾಕೋ ಕರೀಲಾಕ" ಎಂಬ ಮಾತು ಆಗಾಗ ಧ್ವನಿಯೇಳಿಸುತ್ತದೆ.

ಆಗಲೇ ಅಣ್ಣನ ಬರುವಿಕೆಯಾಗುವುದು. ಅಣ್ಣನು ತಂಗಿಯನ್ನು ಕರೆದೊಯ್ಯಲು ಆತುರದಿಂದ ಬರುತ್ತ—ಮೂಕಪ್ರಾಣಿಯಾದ ಎತ್ತುಗಳಲ್ಲೂ ಹೃದಯದ ಧ್ವನಿಯನ್ನು ತುಂಬುತ್ತಾನೆ. ತುಂಬದೇನು ಮಾಡುವನು ? ಆದುದರಿಂದಲೆ " ಬ್ಯಾಗನೆ ನಡೆಯೋ....ಬಸವದೊರೆ ತಂಗೆಮ್ಮ.....ನೋಡುತ್ತಿದ್ದಾಳೋ ನಮ್ಮ ದಾರಿ. " ಎಂದಂದು ಮುಂಬರಿವ ಎತ್ತುಗಳ ಓಟವನ್ನು ಕಂಡು "..... ಮುತ್ತೈದಿ ತಂಗೀನಕ....ತವರಿಗೆ ಕರೆದೊಯ್ದು.... ಹುತ್ತಪ್ಪಗ್ಹಾಲ ಎರಿಸೋಣ !" ಎಂದೆನ್ನುವಾಗ ತಂಗಿಯ ಮೇಲೆ ಅಣ್ಣನಿಗಿದ್ದ ಪ್ರೀತಿಯನ್ನೂ—ಕರೆದೊಯ್ಯುವ ಆತುರವನ್ನೂ ಮುತ್ತೈದೆ ತಂಗಿಯ ಬಾಳಿನ ಹಿತದ ಭಾವವನ್ನೂ—ಚೆನ್ನಾಗಿ ಕಾಣಬಹುದು. ಅಷ್ಟೊಂದು ಎರಕದಲ್ಲಿ ಈ ಸನ್ನಿವೇಶವು ರಚಿತವಾಗಿದೆ. ಈ ರಚನೆಯ ಮುಂದೆ ಅಣ್ಣನಿಗೆ ತಂಗಿ ಮಾಡಬೇಕಾದ ಸ್ವಾಗತವೂ ಓರಣವಾಗಿ ರೂಪಿಸಲ್ಪಟ್ಟಿದೆ. ದೃಶ್ಯವಿಲ್ಲಿ ಕೊನೆಗೊಂಡರೆ—ಮುಂದೆ ನಿರೂಪಕನು ಸಾಗಿಬಂದು,—ನಾಗಚತುರ್ಥಿಯ ದಿನ—ಸುಮಂಗಲೆಯರು ನಾಗಪೂಜೆಗೆ ಹೊರಟ ಸಂಭ್ರಮವನ್ನು ನಿರೂಪಿಸುವನು. ಸುಮಂಗಲೆಯರೆಲ್ಲ ಸೇರಿ—" ಊರ ದೇವಿಯ ಗುಡಿಗೆ ಹೋಗುವ ಕರ್ತವ್ಯವನ್ನು—ಅಲ್ಲೇ ನೆಲೆನಿಂತ ನಾಗಪ್ಪನ ಪೂಜೆಯ ವಿಚಾರವನ್ನು, ಸಾರುವರು; ತಂಬಿಟ್ಟಿನ ಆರತಿಯ ಬೆಳಕನ್ನು ಕಾಣಿಸುವರು. ' ತಂಬಿಟ್ಟು ' ಮುದ್ದಾದ ಹೆಸರು. ಪ್ರೀತಿಯ ತಿಂಡಿ ! —ಸುಮಂಗಲೆಯರು ಸಾಗುವ ದಾರಿಯಲ್ಲಿ —" ಒಬ್ಬಳು "—" ಚಂದಕ್ಕನಾ ಸೀರೀ ಚೆಂದವ ನೋಡಿರಿ, ಮಂದಿಯ ಕಣ್ಣೆಲ್ಲ ಅವಳತ್ತ....ಸುಂದರಾ, ಬಡಿವಾರ ನಿಂದೆಷ್ಟಕ ? ಕೊರಳಾಗ ಧರಿಸಿದಿಯಂತೇನು ಸರ ಮುತ್ತಕ....ಗೆಳತಿ ನಿನ್ನಕ ಸೋಭಾವಕನನಗ ಗೊತ್ತ !..... " ಎಂದಾಡುವುದೂ— ' ಇನ್ನೊಬ್ಬಳು ' " ಇಲ್ಲೀ ನೋಡೇ ಶಾಂತಾ, ಮಲ್ಲಮ್ಮನ ಕುಬಸಾ—ಮಲ್ಲಿಗೀ ಮಗ್ಗಿಕ ಮೈ ಪೂರಾ ಅಂಚಿನ.....ಎಲ್ಲಿಂದ ತರಿಸಿದಿ ಹೊಸತಕರಾ " ಎಂದಾಡುವುದೂ—ಹಳ್ಳಿಯ ಜೀವನದಲ್ಲಿ ನೆಲೆನಿಂತ, ಆಲ್ಲೂ ವಿಶೇಷ ದಿನಗಳೆಲ್ಲಿ ಹೆಂಗಳೆಯರು ತೊಟ್ಟುಡುಗೆಯ ವೈಭವವನ್ನು ಹಳ್ಳಿಯ ಜೀವನಕ್ಕನುಸಾರವಾಗಿಯೆ ತೋರಿಸಿ ನಿಂತ ಮಧುರಗತಿಯಲ್ಲವೇ ? ಇಷ್ಟು ಮಾತ್ರವಲ್ಲ; ಇಲ್ಲಿ ನಾಟಕಕಾರರು ಹೆಂಗಳೆಯರ ಚಿತ್ತಚಾಪಲ್ಯವನ್ನು ಸ್ವಭಾವಿಕತೆಯ ತಳಹದಿಯಲ್ಲೇ ನೆಲೆನಿಲ್ಲಿಸಿ ತೋರಿದುದು ರಮಣೀಯವಾಗಿದೆ. ಮುಂದೆ ಅವರೆಲ್ಲರೂ ಗುಡಿಯ ಬಳಿಗೆ ಸಾಗುವರು. ದೃಶ್ಯವಿಲ್ಲಿ ಮುಗಿದರೆ ಕೊನೆಯ ಆ " ಉಪಸಂಹಾರ " ದೃಶ್ಯವು ತೊಗುಮಂಚದ ಮೇಲೆ ಕುಳಿತ ಸುಮಂಗಲೆಯರ ಭವ್ಯಭಾವಿಯನ್ನು ಕಾಣಿಸುವ—ಭವ್ಯಕಾಂಕ್ಷೆಯನ್ನು ನೆಲೆಗಾಣಿಸುವುದು. ಸುಮಂಗಲೆಯರೆಲ್ಲರು " ಒಲವಿನ ಬೀಗದ ತೆಗೆಯುವ ಕಬ್ಬ " ವಾದ ನಾಗರಪಂಚಮಿಯ ಹಬ್ಬವನ್ನು ಕೊಂಡಾಡಿದರಿ—ಗೆಳತಿಯೊಬ್ಬಳು—ಒಬ್ಬಳೆ ತೆಗೆದ ಬೈತಲೆಯ ಸೊಗಸನ್ನು ರೂಪಿಸಿ " ನನ ಗೆಳತೀ ಸೊಗಸಿಗೆ ಸರಿದೇವಿ ಒಲಿದಾಳ " ಎನ್ನುವಾಗ, ನಮ್ಮ ಮನವೇಕೋ ಆ ಹಳ್ಳಿಯ ಸಹಜ ಲಾವಣ್ಯಕ್ಕಾಗಿ ಪುಳಕಿತವಾಗುವುದು. ಆ ವಿಶಾಲವಾದ ಪ್ರಕೃತಿಯ ಮುಂದೆ ನೆಲೆನಿಂತ ಆ ಸುಮಂಗಲೆಯರು, ಒಕ್ಕಲಿಗಿತ್ತಿಯರು,—ಸೌಂದರ್ಯವನ್ನು ನಿರೂಪಿಸಿ—ಆನಂದವನ್ನು ಹೊಂದುವ ಬಗೆಯದು ಮಧುರವಾಗಿದೆ. ಆದುದರಿಂದಲೆ ಅವರು ತಮ್ಮ ಜೀವಿತಕ್ಕೊಪ್ಪುವ " ಹಸುಗೂಸು ಹುಟ್ಟಲಿ—ಹೊಸ ಪ್ಯಾಟೆ ಕಟ್ಟಲಿ—ಬಿಜಬಾಳಿಕಬ್ಬು ಬೆಳೆಯಲಿ.....ಬಸವಣ್ಣನ ತೇರು ಎಳೆಯಲಿ " ಎಂಬ ಮಾತುಗಳನ್ನಾಡಿ — ನಾಗರಪಂಚಮಿಯನ್ನು ಕೊಂಡಾಡಿ—ಅದನ್ನು ತಂದಿತ್ತ ಶ್ರಾವಣರಾಜನನ್ನು ಆನಂದನಿರ್ಭರ ಹೃದಯದಿಂದಾಲಿಂಗಿಸಿ ಸಂಪದದ ಶುಕ್ರವಾರವನ್ನಿತ್ತ ಸೌಭಾಗ್ಯದ ಕಾರಣವಾದ ಆ ಕಾಲವನ್ನು ಕೊಂಡಾಡಿ—ಮಂಗಲಾರತಿಯನ್ನು ಬೆಳಗುವರು. ಆಗಲೇ ನಾಗಸ್ವರದ ಮಂಗಲಗೀತಿಯೂ ಸಾಗುವುದು. ರೂಪಕವೂ ತನ್ನ ಮಧುರೇತಿವೃತ್ತಕ್ಕೆ ಕೊನೆಗಾಣಿಸುವುದು.

ಕವಿಪ್ರತಿಭಾಯತ್ತವಾದ ಮಧುರರಸಧಾರೆಯಲ್ಲಿ ಇಳಿದು ಬಂದ ರೂಪಕವಿದು—ಮೊದಲ ಭಾಗದಲ್ಲಿ ಪ್ರಕೃತಿಯ ದಿವ್ಯಸ್ವರೂಪವನ್ನು ಕಾಣಿಸಿ—ಬಳಿಕ ಜನಜೀವನದ ಹೃದಯಂಗಮ ಸನ್ನಿವೇಶವನ್ನು ದೇಶ-ಕಾಲೋಚಿತವಾದ ಗತಿಯಲ್ಲುರಳಿಸಿ ತೋರಿಸಿದೆ. ಭಾವುಕ ಹೃದಯ ಸಂಪನ್ನವಾದ, ರಸಸಂನಿವಿಷ್ಟ, ಮಧುರಭಾಷಾಗತಿಯಲ್ಲಿ ಸಾಗಿನಿಂತ ರೂಪಕವಿದು ಅಜೇತನ ಪದಾರ್ಥಗಳಲ್ಲೂ ಚೇತನತ್ವವನ್ನೊಡಮೂಡಿಸಿ, ಪ್ರಾಕೃತಿಕ ವಿಲಾಸವನ್ನು ಸ್ಫುಟವಾಗಿ ತೋರಿದೆ.—

ಉಚಿತಪಾತ್ರಸವಾವೇಶ, ವಸ್ತುನಿಯತ ಸಂನಿವೇಶರಚನೆ, ಜೀವಿತಾನುಗುಣ ವಿಚಾರದಾನ, ಇವುಗಳಿಂದೊಪ್ಪುಗೊಂಡೀ ರೂಪಕವಿದು—ಕೇವಲ ಗೀತರೂಪಕವಲ್ಲ; ಹೃದಯಗೀತರೂಪಕ. ಆದರದ ಸ್ವಾಗತವೀ ರೂಪಕಕ್ಕೆ !

———

' ಪರಿತ್ಯಕ್ತ ರಾಣಿ '

(ಐತಿಹಾಸಿಕ ರೂಪಕದ ವಿಮರ್ಶೆ)

ಶ್ರೀ ಕೆ. ಎಸ್. ಶರ್ಮಾ (ವಾಣೀಮಂದಿರಂ ಕಾಸರಗೋಡು)

ಕರ್ನಾಟಕದ ಅರಸೊತ್ತಿಗೆಯಲ್ಲಿ ನೆಗಳ್ತೆವಡೆದ ಒಂದು ಅರಸುಮನೆತನವೆಂದರೆ ಅದು ವಿದ್ಯಾನಗರ. ಚಕ್ರವರ್ತಿಗಳ ಆಳಿಕೆಯ ಹಿರಿತನದ ಕಾಲ. ಅಂದಿನ ವೈಭವ, ಜೀವನನಿಷ್ಠೆ, ಧಾರ್ಮಿಕಮನೋಭಾವನೆ, ಜನತಾಕಲ್ಯಾಣ ಕರ್ಮಧ್ಯೇಯ, ಅತ್ಯುಚ್ಚವಾದ ನೈತಿಕ ಜೀವನಶುದ್ಧಿ,—ಇವನ್ನು ಈದಂತತಯಾ ನಿರೂಪಿಸಲಸಾಧ್ಯ. ಅರ್ಥಾತ್ ಅದೊಂದು ಸ್ತುತಿಯ ಮುಂದೆ ಅತಿಶಯಖಚನಕ್ಕೆಕವಾಗದ ಪ್ರಭಾವಯುತ ಸಾಮ್ರಾಜ್ಯಸಂಧಿಯೆನ್ನಬೇಕು. ಅಂತಹ ಉಜ್ವಲವಾದ ಅರಸೊತ್ತಿಗೆಯಲ್ಲಿ ಕರ್ನಾಟಕರನಾರಮಣನೆನಿಸಿದ

ಕೃಷ್ಣದೇವರಾಯನನ್ನು ಯಾವ ಕೆಚ್ಚೆದೆಯ ಕನ್ನಡಿಗನೂ ಮರೆಯು-ವಂತಿಲ್ಲ; ಅಂತೆಯೆ ಆ ರಾಜಜೀವನಕ್ಕೆ ಕಳೆಯೇರಿಸಿದ, ಮಂತ್ರಿನೈಪುಣ್ಯದಲ್ಲಿ ಖ್ಯಾತಿಯನ್ನು ಹೊಂದಿದ ಅಮಾತ್ಯ ತಿಮ್ಮರಸನನ್ನು ಯಾರೂ ಮರೆಯುವಂತಿಲ್ಲ! ಆ ಎರಡು ಜೀವನದ ಮಧ್ಯದಲ್ಲಿ ನಡೆದೂ ನಡೆಯದಂತಾದ ಒಂದು ಜೀವನದುರಂತನೇ, ಇಲ್ಲವೆ ಒಂದು ಸ್ತ್ರೀ-ಜೀವನದ ಅಂತರ್ನಿಗೂಢ ಪ್ರತೀಕಾರ ವಿಚ್ಛೇದವೇ ಈ ರೂಪಕದಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಒಟ್ಟು ಇದೊಂದು ನೀತಿಕಾಸಿ ರೂಪಕ!

ದೃಶ್ಯಯೋಜನೆ; – ಒಂದನೆಯ ದೃಶ್ಯದಲ್ಲಿ—ಪ್ರತಾಪರುದ್ರನ ರಾಜಸಿಂಹ ಬಂದ ಪತ್ರವನ್ನು ಮಂತ್ರಿ ತಿಮ್ಮರಸು ಕೃಷ್ಣದೇವರಾಯನಿಗೆ ಓದಿಹೇಳಿದನೆ—ತೆನ್ನಿಮಿತ್ತವಾಗಿ ಉದಿಸಿದ್ದ ರಾಜ-ಪುಟ್ಟನೂರಿನಲ್ಲಿ ತನ್ನ ದಂಡನ್ನು ನಾಗಿಸಿ-ಪ್ರತಾಪರುದ್ರನ ಕೊಬ್ಬಿಳಿಸಲು ಸಿದ್ಧನಾಗುವನು. ಈ ದೃಶ್ಯದಲ್ಲಿ ತಿಮ್ಮರಸು ಪ್ರಯೋಜಿಸಿದ್ದ ಸಂಧಾನದ ಅವಶ್ಯಕತೆ ಬಾಗೂ—ಪ್ರತಾಪರುದ್ರನ ಪಾತ್ರಗತ ದೂಷ್ಯಪ್ರವರ್ತನೆ ವ್ಯಕ್ತವಾಗಿ ಮೂಡಿಬಂದಿದೆ ಮಾತ್ರ! ಲೇಖಕರಿಲ್ಲಿ ಕೃಷ್ಣದೇವರಾಯನ ಕೆಚ್ಚೆದೆಯ ವಿಸಿರಕ್ತದ ಕುಡಿಯು ಗೌರವವನ್ನು ಚೆಲುವಾಗಿ ಮೂಡಿಸಿದ್ದಾರೆ. ಅದಕ್ಕೆಂದೇ ರೂಪಕಕಾರರು ಸತ್ರವಾಜನಪ್ರಸಂಗವನ್ನು ಇಲ್ಲಿ ಜೋಡಿಸಿದ್ದಾರೆ. ವಾಚನ-! ಮಧ್ಯದಲ್ಲಿ ಬರುತ್ತಿರುವ ರಾಜನ ಮಾತುಗಳು ಅರ್ಥವತ್ತಾಗಿವೆ ಯೋಗ್ಯವಿವೆ!

ಎರಡನೆಯ ದೃಶ್ಯವು ಕೀರ ಚಿಕ್ಕದು: ಅಪಕ್ಕೊಂದು ವೈಶಿಷ್ಟ್ಯವೂ ಇಲ್ಲ! ಯುದ್ಧದ ಹಿನ್ನೆಲೆಯಲ್ಲಿರುವ ಕದನ ಕೋಲಾಹಲದ ವ್ಯಕ್ತಿಯೊಡನೆ-ತಿಮ್ಮರಸನ ಮಾತೊಂದು ಮಾತ್ರ ಇಲ್ಲಿ ನಿಂತಿದೆ. ಅಲ್ಲೂ ಆತನು "ಗೋವಿಂದರಾಜ" ಎಂದೆಂದು ಕೋಪಕನನ್ನು ದನಿಗೂಡುವುದು ಅಸ್ವಾಭಾವಿಕ. ನಾಟಕ ಮುಂದಿದು ಒಪ್ಪಲಾರದು! — ಮೂರನೆಯ ದೃಶ್ಯದಲ್ಲಿ ನಾವೀನ್ಯವಿದೆ. ಜಗನ್ಮೋಹಿನಿಯ ಸನ್ನಿಧಿಗೆ ನರಹರಿಪಾತ್ರನ ಪ್ರೇತಾತ್ಮವು ಬಳಿ ಸಾರುವುದು. ಇಲ್ಲಿ ಜಗನ್ಮೋಹಿನಿಯು ಪ್ರೇತಾತ್ಮವನ್ನು ಕಂಡು ಬೆರಗಾಗುವುದು—ಪ್ರೇತಾತ್ಮವು ತನ್ನ ಇತಿವೃತ್ತವನ್ನು ಸಾರುವುದು ಬಹು ಸುಂದರವಿದೆ. ಪ್ರೇತವು ತನ್ನ ಮರಣದ ವೃತ್ತವನ್ನು ಮುಂದೊಡ್ಡಿ—ಆಕೆಯನ್ನು ಕೃಷ್ಣದೇವರಾಯನ ಮರಣಕ್ಕಾಗಿ ಪ್ರೇರೇಪಿಸುವುದೂ, ಆ ಪ್ರೇರೇಪಣೆಯಲ್ಲೂ ಜೀವಸ್ಮರಣದ ಗತಿಯನ್ನೂ—ದಾಂಪತ್ಯದ ಹಿನ್ನೆಲೆಯಲ್ಲಿ ನೆಲೆನಿಂತ ಕರ್ತವ್ಯದ ಘೋರಣೆಯನ್ನೂ ರಕ್ತದಾಹದ ಲಾಲಸೆಯನ್ನೂ ತೋರುವುದು ಬಹು ಮಾರ್ಮಿಕವಿದೆ. ರಾಜಪುತ್ರಿಯ ಹೃದಯದ ಕಳವಳ – ಮೃತನ ಹೃದಯದಲ್ಲರಳಿ ನಿಂತ ತಾಂದವ ಇವು ರೂಪಿತವಾದ ಬಗೆಯು ಬಹು ಸುಂದರವಿದೆ. ಆದರೆ ಇಂತಹ ಯೋಜನೆಯ ಸಮರ್ಪಕತೆಯಲ್ಲಿ ಮಾತ್ರ ಭಿನ್ನಾಭಿಪ್ರಾಯವು ತಲೆದೋರಬಹುದು. ನಾಲ್ಕನೆಯ ದೃಶ್ಯದಲ್ಲಿ ಜಗನ್ಮೋಹಿನಿಯು ಕಂದೆಯನ್ನು ಸಂಧಾನಕ್ಕೊಡಂಬಡಿಸವುದು ತಲೆಗಾಣಿಸಿದರೆ ಐದನೆಯ ದೃಶ್ಯದಲ್ಲಿ ಅಮಾತ್ಯ—ತಿಮ್ಮರಸನ ಪ್ರೇರಣೆಯಂತೆ ಕೃಷ್ಣದೇವರಾಯ ಪ್ರತಾಪರುದ್ರನಿಂದ ಬಂದ ಸಂಧಾನವನ್ನು ಪುರಸ್ಕರಿಸಿ ಮೋಹಿನಿಯನ್ನು ವರಿಸುವ ನಿರ್ಣಯಪ್ರಸಂಗವು ತಲೆಗಾಣಿಸುವುದು. ಈ ದೃಶ್ಯದಲ್ಲಿ—ಪ್ರತಾಪರುದ್ರನಿಂದ ಬಂದ ಕಾಗದದ ಮಾತುಗಳೂ, ಕೃಷ್ಣದೇವರಾಯನ ಮುಂದೆ ಅಮಾತ್ಯನೆತ್ತುವ ಮಾನಸಿಕಾಂದೋಲನದ ತುಮುಲ ಧರ್ಮಸಂಕಟದ ನಿವೃತ್ತಿ ಮಾರ್ಗೋಪದೇಶವೂ ಶುಶ್ಲಾಘ್ಯವಿವೆ! ಆರನೆಯ ದೃಶ್ಯದಲ್ಲಿ—ಕೃಷ್ಣದೇವರಾಯನು ಅಮಾತ್ಯ ತಿಮ್ಮರಸನ ಬುದ್ಧಿವಂತಿಕೆಯಿಂದ ಪ್ರಥಮ ಸಮಾಗಮ ರಾತ್ರಿಯ ದುರಂತದಿಂದ ಪಾರಾಗುವುದೂ, ತಿಮ್ಮರಸನ ಯೋಜನೆಯಂತೆ, ಕುಂಭಂ ಗ್ರಾಮದ ರಾಜಭವನದಲ್ಲಿ ಮೋಹಿನಿಯನ್ನು ಇರಿಸುವಂತಾಗಿಸಿದುದೂ ರೂಪಿತವಾದರೆ, ಏಳನೆಯ ದೃಶ್ಯದಲ್ಲಿ—ಜಗನ್ಮೋಹಿನಿಯ ಬಳಿಯಲ್ಲಿ ಕೃಷ್ಣದೇವರಾಯನು ತಾನೆಸಗಿದ ಯುದ್ಧದ ವಿಚಾರವನ್ನೆತ್ತುವುದೂ—ಜಗನ್ಮೋಹಿನಿಯ ಪಶ್ಚಾತ್ತಾಪಾನುವಿಷ್ಟ ಹೃದಯವನ್ನಾಶಿಸುವುದೂ ರೂಪಿತವಾಗಿದೆ. ಈ ದೃಶ್ಯವು ಸುಂದರವಾಗಿಲ್ಲ. ವಸ್ತುವಿನ ಬೆಳಿವಣಿಗೆಗೆ ಇದು ತೊಡಕಾಗಿದೆ ಕೃಷ್ಣದೇವರಾಯನೀ ದೃಶ್ಯದಲ್ಲಾಡುವ ಮಾತುಗಳು ಅಷ್ಟೊಂದು ಸುಂದರವಲ್ಲ. ಅದೂ ಕುಹಕಿ ಜಗನ್ಮೋಹಿನಿಯ ಸನ್ನಿಧಿಯಲ್ಲಿ!- ಎಂಟು-ಒಂಬತ್ತನೆಯ ದೃಶ್ಯಗಳು ಏಕಸೂತ್ರಾನುಗತವಿದ್ದು — ತೋರಿಕೆಗೆ ಜಗನ್ಮೋಹಿನಿಯ ಪಶ್ಚಾತ್ತಾಪ ಹೊಂದಿದ ಹೃದಯವನ್ನು ತೋರಿ, ಅಂತರ್ನಿಗೂಢ ಹಾಲಾಹಲದ ಒಳಗನ್ನು ತೋರುತ್ತಿದೆ. ಅದಕ್ಕೆರವಾಗಿ—ಮಧ್ಯದಲ್ಲೊಮ್ಮೆ ಪ್ರೇತಾತ್ಮನ ಹುಚ್ಚುನಗು ಕೇಳಿಸುತ್ತದೆ. ಆದರೆ ಅವನು "ಹಾಲಿನಲ್ಲಿ ಜೇನಿಕ ಹಾಲಾಹಲ" ವನ್ನು ಮೊವಲೇ ಸಾರಿ, ಕಥೆಯ ಜೀವವನ್ನು ತೆಗೆದು ಬಿಡುತ್ತಾನೆ. ಇದಾತನ ಹುಚ್ಚುನಗೆಯ-ಹುಚ್ಚಾವೇಶವೆನ್ನಬಹುದಾದರೂ— ಕುತೂಹಲವನ್ನು ಸೆರೆಗೊಳ್ಳಬೇಕಾದ ಘಟ್ಟಿಯ ಮುಂದಿದು ಸಮರ್ಪಕವೆನಿಸಲಾರದು. ಇರಲಿ! ಒಂಬತ್ತನೆಯ ದೃಶ್ಯದಲ್ಲಿ ಭರದಿಂದ ಸಾಗುವ ಸಂಭಾಷಣೆಗಳೂ, ಜಗನ್ಮೋಹಿನಿಯಿತ್ತ ಹಾಲನ್ನು ಕುಡಿಯಬೇಕೆಂದು ರಾಜನು ನೆನೆದಾಗ ಕೂಪಲೇ ತಿಮ್ಮರಸು ಕಾಲಿರಿಸಿ ಆ ಹಾಲನ್ನು ಬೆಕ್ಕಿಗೆ ಕುಡಿಸಿ ಕಾಣಿಸುವ ದುರಂತವೂ "ಪರಿತ್ಯಕ್ತರಾಣಿ" ಯ ಮುಂದೆ ಭೀಕರವಾಗಿ ನೆಲೆನಿಂತ ದುರ್ಧರ ಪ್ರಸಂಗಗಳು! ಅಸಹ್ಯವೇದನಾಯತ್ತ ದುಷ್ಪವೇತ್ಯಗಳನ್ನ ಪಥವೆನ್ನಬೇಕು! ಮಂತ್ರಿಯ ಸಲಹೆಯಂತೆ ರಾಜನು ರಾಣಿಯನ್ನು ಕೊಲ್ಲದುಳಿಸಿ-ಪರಿತ್ಯಜಿಸುವುದೂ ಸುಯೋಗ್ಯವಿದೆ! ಸುಂದರವಿದೆ! ಘನತೆಗೆ ಸಾಕ್ಷಿಯಾಗಿದೆ!

ಇದೊಂದು ವಿಶಿಷ್ಟರಾಜಪರಂಪರೆಯನ್ನೆತ್ತಿ ಹಿಡಿದ ರೂಪಕ ರೂಪಕದ ಸಂಭಾಷಣೆಗಳು—ತದ್ಗತ ಭಾಷಾಭಾವವು ಸುಂದರವಾಗಿದ್ದರೂ ಕೆಲವಡೆ ಅದು ವಿಚಾರ ಮಾಧುರ್ಯದಿಂದ ಕುಸಿದಿದೆಯೆನ್ನಬೇಕಾಗಿದೆ. ತಲೆಗಾಣಿಸಿದ ದೃಶ್ಯಗಳೆಲ್ಲವಕ್ಕೂ ಆಪಾತತಃ ಬಾಂಧವ್ಯವಿದ್ದರೂ-ನಾಟಕೀಯತೆಯ ಮುಂದೆ-ರಚನಾ ತಂತ್ರದ ಮುಂದೆ ವಿಶೇಷ ಆಕರ್ಷಣೆಗೆ ಶಕ್ತಿಯಿಲ್ಲವೆನ್ನಬೇಕು. ಆದರೂ ರೂಪಕಕಾರರ ನಿರೂಪಣೆಗಾಗಿ ಶ್ಲಾಘಿಸಿ ಸ್ವಾಗತಿಸುವ!

ಸಾದರ ಸ್ವೀಕಾರ

೫೭ **ಮಲ್ಲಿಕಾರ್ಜುನ ಮತ್ತು ವಿರೂಪಾಕ್ಷ** (ಸಂಶೋಧನಾ-ಲೇಖನಗಳು) ಲೇಖಕರು ಶ್ರೀ. ಬಿ. ವಿ. ಶ್ರೀನಿವಾಸರಾವ್ ಎಂ. ಎ. ಇತಿಹಾಸದ ಪ್ರಧ್ಯಾಪಕರು, ಲಕ್ಷ್ಮೀವೆಂಕಟೇಶ ದೇಸಾಯಿ ಕಾಲೇಜ್, ರಾಯಚೂರು. ಪ್ರಕಾಶಕರು : ಡಾ. ಎಂ. ಎಸ್. ಹುಣಶ್ಯಾಳ ಎಂ. ಎ., ಪಿಎಚ್. ಡಿ. ಮುಖ್ಯಾಧ್ಯಾಪಕರು ಹಮ್ಮದರ್ಜಾ ಹೈಸ್ಕೂಲ್, ರಾಯಚೂರು. ಡೆ. ಅ. ೧೨ + ೮ + ೨೦ ಪುಟಗಳು. ಬೆಲೆ ೦-೮-೦.

೫೮ **ಪುರದ ಶ್ರೀ ಸೋಮೇಶ್ವರ** (ಸ್ಥಳ ಚರಿತ್ರೆ) ಲೇಖಕರು 'ಸೀಮಾವಾ' ಲಿಂಗಸಗೂರು, ಪ್ರಕಾಶಕರು : ಶ್ರೀ. ಸಂಗನಬಸಯ್ಯ ಸ್ವಾಮಿ ಪತ್ರೀವತ, ಧ್ಯಕ್ಷ ಜನತಾಸೇವಾಸಂಘ, ತಾವರಗೇರಿ (ರಾಯಚೂರು). ಕ್ರೌ. ಅ. ೬೦ ಪುಟಗಳು ಬೆಲೆ ೦-೮-೦.

೫೯ **ನಮ್ಮ ಹಳ್ಳಿಗಳು** (ಪರಿಚಯಾತ್ಮಕ ಕಿರುಹೊತ್ತಗೆ) ಡೆ. ಅ. ೧೨ ಪುಟಗಳು.

೬೦ **ಹೈದರಾಬಾದಿನಲ್ಲಿ ಪ್ರಥಮ ಪಂಚವಾರ್ಷಿಕ ಯೋಜನೆಯ ಸಿದ್ಧಿಗಳು**(ಪರಿಚಯಾತ್ಮಕ) ಡೆ. ಅ. ೩೪ ಪುಟಗಳು.

೬೧ **ಹೈದರಾಬಾದಿನ ದ್ವಿತೀಯ ಯೋಜನೆ** (ಪರಿಚ. ಯಾತ್ಮಕ) ಡೆ. ಅ. ೩೮ ಪುಟಗಳು.

೬೨ **ಯೋಜನೆಯ ಉದ್ದೇಶಗಳು** (ಪರಿಚಯಾತ್ಮಕ) ಡೆ. ಅ. ೧೦ ಪುಟಗಳು.

ಮೇಲಿನ ೫೯ರಿಂದ ೬೨ರ ವರೆಗಿನ ಪುಸ್ತಕಗಳು ಹೈದರಾಬಾದಿನ ಸುದ್ದಿ ಮತ್ತು ಸಾರ್ವಜನಿಕ ಸಂಬಂಧಗಳ ಖಾತೆಯ ಮುಖ್ಯಾಧಿಕಾರಿಗಳಿಂದ ಪ್ರಕಾಶಗೊಂಡಿವೆ.

೬೩ **ಮಣಿಮುಕುರ** (ಸಂಸ್ಕೃತ ಸಿದ್ಧಾಂತ ಶಿಖಾಮಣಿಯ ಕನ್ನಡ ಪದ್ಯಾನುವಾದ). ಲೇಖಕರು ಸೂರ್ಯ ಸಿಂಹಾಸನಾಧೀಶ್ವರ 'ಜ. ಚ' ಗೂಳೂರು. ಪ್ರಕಾಶಕರು: ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕಭಂಡಾರ, ೪೯ ಹೆ. ಬ. ಸಮಾಜ ರಸ್ತೆ, ಬೆಂಗಳೂರು-೪. ಕ್ರೌ. ಅ. ೮೦ + ೨೭೮ ಪುಟಗಳು. ಬೆಲೆ ೩-೦-೦.

೬೪ **ರನ್ನಚುಕ್ಕಿ** (ಕವನ ಸಂಕಲನ). ಲೇಖಕರು: ಸೂರ್ಯ ಸಿಂಹಾಸನಾಧೀಶ್ವರ 'ಜ. ಚ.' ಗೂಳೂರು. ಪ್ರಕಾಶಕರು ಮೇಲೆ ಹೇಳಿದ ನಿಡುಮಾಮಿಡಿ ಪುಸ್ತಕ-ಭಂಡಾರದವರೆ. ಕ್ರೌ. ಅ. ೬೬ ಪುಟಗಳು. ಬೆಲೆ ೦-೮-೦.

೬೫ **ಬಾಳಬೆಳಕು** (ವಾರ್ಷಿಕ ಸಂಪುಟ) ಬಾಗಲಕೋಟೆಯ ಬಸವೇಶ್ವರ ಟ್ರೇನಿಂಗ್ ಕಾಲೇಜಿನ ಶಿಕ್ಷಕ ವಿದ್ಯಾರ್ಥಿಗಳ ವಿವಿಧ ಚಟುವಟಿಕೆಗಳ ವರದಿಗಳನ್ನೂ ಬೇರೆ ಬೇರೆ ಲೇಖನಗಳನ್ನೂ ಒಳಗೊಂಡ ಸಚಿತ್ರಸಂಪುಟವಿದು. ಸಂಪಾದಕ ಮಂಡಲಿಯಲ್ಲಿ ಪ್ರಿನ್ಸಿಪಾಲರಾದ ಶ್ರೀ. ಎಸ್. ವಿ. ಕೆಣಗಿಯವರೂ, ಶಿಕ್ಷಕರಾಗಿ ಇರುವ ಶ್ರೀ. ಎಸ್. ವಿ. ಹಂಜಿಯವರೂ ಇರುವರು. ಕ್ರೌ. ಧಿದ ೧೦೬ + ೧೬ ಪುಟಗಳಿರುವವು. ಕೊನೆಯ ಹದಿನಾರು ಪುಟಗಳು ಹಿಂದೀ ಲೇಖನಗಳಿಗೆ ಮೀಸಲಾಗಿರುವುವು. ಪ್ರತಿಯೊಬ್ಬ ಪ್ರಾಥಮಿಕ ಶಿಕ್ಷಕನೂ ಓದಬೇಕಾದ ಸಂಪುಟವಿದು.

೬೬ **ಮಾತೃವಾಣಿ** (ಕವನ ಸಂಕಲನ) ಲೇಖಕರು ಶ್ರೀ. ಸಿಂಪಿ ಲಿಂಗಣ್ಣ. ಚಡಚಣ. ಪ್ರಕಾಶಕರು ಶ್ರೀ. ಎಸ್. ವೀರೇಂದ್ರ, ಶ್ರೀ ಅರವಿಂದ ಗ್ರಂಥಾಲಯ, ಚಡಚಣ (ವಿಜಾಪುರ ಜಿಲ್ಲಾ). ಕ್ರೌ. ಅ. ೬೪ ಪುಟಗಳು. ಬೆಲೆ ೧-೦-೦.

೬೭ **ಕನ್ನಡತಾಯಿ** (ಲೇಖನ ಸಂಕಲನ) ಲೇಖಿಕೆಯರು ಸೌ. ಶಾಂತಾದೇವಿ ಮಾಳವಾಡ ಅವರು. ಧಾರವಾಡದಲ್ಲಿ ಹೊಸತಾಗಿ ಪ್ರಾರಂಭವಾದ ಜಯಪ್ರಕಾಶನದ ೧ನೆಯ ಗ್ರಂಥವಿದು. ಕ್ರೌ. ಅ. ೧೨ + ೮೦ ಪುಟಗಳು. ಬೆಲೆ ೧-೪-೦.

೬೮ **ನನ್ನ ಮನೆಗೆ ನೀ ಚಂದ** (ಕಥಾಸಂಕಲನ) ಲೆಖಕರು 'ಶ್ರೀಪಂಚ' ಅವರು. ಪ್ರಕಾಶಕರು ದೇವಿರಾಮಂದಿರ, ಚನ್ನಗಿರಿ. ಚನ್ನಗಿರಿ. ಕ್ರೌ. ಅ. ೧೬ + ೬೨ ಪುಟಗಳು. ಬೆಲೆ ಸಾದಾ ಪ್ರತಿಗೆ ೧-೦-೦, ಉತ್ತಮ ಪ್ರತಿಗೆ ೧-೪-೦.

೬೯ **ಸಂಗಮ** (ಕಥಾಸಂಕಲನ) ಲೇಖಿಕೆಯರು ಶ್ರೀಮತಿ ರಾಜಲಕ್ಷ್ಮಿ ಎನ್. ರಾವ್. ಪ್ರಕಾಶಕರು : ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು. ಕ್ರೌ. ಅ. ೧೩೮ ಪುಟಗಳು. ಬೆಲೆ ೧-೧೨-೦.

೭೦ **ದೀಪಧಾರಿ** (ಕವನಸಂಕಲನ) ಲೇಖಕರು ಶ್ರೀ. ಚೆನ್ನವೀರ ಕಣವಿಯವರು. ಪ್ರಕಾಶಕರು: ಸುರುಚಿ ಪ್ರಕಾಶನ, ಸರಸ್ವತಿಪುರಂ, ಮೈಸೂರು. ಕ್ರೌ. ಅ. ೪೮ ಪುಟಗಳು. ಬೆಲೆ ಸಾದಾ ಪ್ರತಿಗೆ ೧-೦-೦, ಸುಂದರ ಪ್ರತಿಗೆ ೨-೦-೦.

ಬೆಟ್ಟ ಹತ್ತಲು ಬೇಕಾದ

ಎಂಜಿನ್-ಶಕ್ತಿಯನ್ನು



ಮೊಬಿಲ್‌ಗ್ಯಾಸ್

ಕೊಡುತ್ತದೆ

ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸ್ ಉಪಯೋಗಿಸಿ ಸುಲಲಿತವಾಗಿ ಮೇಲೆ ಮೇಲೆ ರಭಸದಿಂದ ಏರಿ! ಮೋಬಿಲ್‌ಗ್ಯಾಸ್‌ನಲ್ಲಿ ನಿಮ್ಮ ಎಂಜಿನ್ನಿಗೆ ಬೇಕಾದ ಎಲ್ಲಾ ಆಕ್ಟಿವ್‌ಗಳೂ ಇರುವುದರಿಂದ ಅದರ ಸಹಾಯದಿಂದ ಬೆಟ್ಟವನ್ನು ಹತ್ತುವುದು ಮತ್ತು ಇತರ ವಾಹನಗಳನ್ನು ಹಿಂದೆ ಹಾಕುವುದು ಬಹಳ ಸುಲಭ!

Mobilgas

ಈಗಾಗಲೆ ಇರುವಲ್ಲೆಲ್ಲಾ ಒಬ್ಬ ಸ್ನೇಹನು ಸ್ವಾನ್ ಸ್ಯಾಕ್ ವ್ಯಾಪಾರವು ಇರುತ್ತಾನೆ

ಸ್ವಾನ್‌ಚಡ್ರ್-ವ್ಯಾಕ್ಯೂಮ್ ಆಯಿಲ್ ಕಂಪೆನಿ

(ಭಾರತ ಗವರ್ನ್‌ಮೆಂಟ್ ಸಂಸ್ಥಾಪಿಸಿರುವಾದುದು. ಮುಂಬರುಗಳ ಹೊಸಗಾರಿಕೆಯು ಮಿತಿಯಿದೆ)

Printed by N. A. Hoskeri at the Vijaya press, Dharwar and published for the proprietors Jayanti publications, by K. S. Hotgeri at the Jayanti office, Dharwar

ಹೊಸಯುಗ!

೧

ಹಳೆಯ ಯುಗವು ಅಳಿದು ಹೋಯ್ತು,
ಹೊಸಯುಗವದು ಇಳಿದು ಬಂತು!
ಹಗೆಗಳೇನು ಹೊಸತು ಹಳತು?
ಹಳೆಯ ಯುಗವೆ ಹೆತ್ತ ಹಸುಳೆ
ಈ ಹೊಸಯುಗವು—
ಹಡೆದ ಹಿರಿಯನ್ನೊಲವಿನೊಳೇ
ಬಾಳುವ ಮಗುವು!

೨

ಆವ ಯುಗವೆ ಆದರೇನು?
ಜೀವಕುಲದ ನಾಟ್ಯರಂಗ;
ಜೀವಕೋಟಿ-ಕೋಟಿಯಲ್ಲಿ
ಮಾನವನೇ ತುಂಗಶೃಂಗ!
ಅವನ ಕೃತಿಯೆ ಯುಗದ ಹೆಸರ
ಬೆಳಗಬಲ್ಲದು—
ಅವನ ಕೃತಿಯೆ ಮುಖಕೆ ಕೆಸರ
ಬಳಿಯಬಲ್ಲದು!

—ಆನಂದಕಂದ

ಈ ಸಂಚಿಕೆಯಲ್ಲಿ:

ಪಾಕಿಸ್ತಾನದ ಭಾರತದ್ವೇಷ (ಸಂಪಾದಕೀಯ)
ಸಂಪಾದಕರು ೨೪೧

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೨೪೩

ಕಾಲಲ್ಲಿಯ ಮುಳ್ಳು (ಸಣ್ಣಕಥೆ)
ಶ್ರೀ. ಕುಲಕರ್ಣಿ ಶಂಕರರಾಯರು, ಅಕ್ಕಿರೆಕೊಟಿ ೨೪೫

ಜಾನಪದ ಗೀತಗಳು (ಗರತಿಯ ಹಾಡು)
ವಿದ್ವಾನ್ ಡಿ. ಮಹಾಲಿಂಗಭಟ್ಟರು, ಎಡನಾಡು (ದ. ಕ.) ೨೫೧

ವೃಂದಾವನ (ಕವನ)
ಶ್ರೀ. ಎಚ್. ಜೆ. ಉಪಾಧ್ಯಾಯ, ಎಂ. ಎ. ಹೈದರಾಬಾದ್ ೨೫೨

ಅಪಾರಕರುಣಿ (ಕವನ)
ಸೌ. ಪಾರ್ವತೀದೇವಿ ಹೆಗ್ಡಡೆ, ಧಾರವಾಡ ೨೫೨

ಹಿಂದೂಸಂಸ್ಕೃತಿ....ಆಚಾರಗಳು (ಲೇಖಾಂಕ ೧)
ಶ್ರೀ. ಲಕ್ಷ್ಮಣ ಜೋಶಿ, ಬಿ. ಎ., ಬಿ. ಟಿ ಕೂಡ್ಲಿಗಿ ೨೫೩

ಅಂತರ ವಿಶ್ವವಿದ್ಯಾಲಯ ಯುವಜನ ಮಹೋತ್ಸವ (ಪರಿಚಯ)
ಶ್ರೀ. ಜಿ ವಿ. ಕುಲಕರ್ಣಿ ಬಿ. ಎ. (ಆನರ್ಸ್) ಧಾರವಾಡ ೨೫೬

ಪೂರ್ಣಾಹುತಿ (ಐತಿಹಾಸಿಕ ತರಂಗರೂಪಕ)
'ಆನಂದಕಂದ' ೨೫೭

ಹಾವು ಮತ್ತು ಮುಂಗುಸಿ (ಕವನ)
ಶ್ರೀ. ಎಸ್. ವಿ. ಗಳಗಲಿ, ಧಾರವಾಡ ೨೬೩

ಎರಡು ಭಾವರೂಪಕಗಳು (ಕಿರುಗತೆಗಳು)
ಶ್ರೀ. ಹಾ. ವೆಂ. ನಾಗೇಶ ಗುಲ್‌ಬುರ್ಗಾ ೨೬೪

ಪಾಣಿನಿಯ ಕಾಲದ ಭಾರತ (ಇತಿಹಾಸಿಕ ಪರಿಚಯ)
ಪ್ರೊ. ಜಿ. ಎಸ್. ದೀಕ್ಷಿತ ಎಂ. ಎ. ಕರ್ನಾಟಕ ವಿ. ವಿ. ಧಾರವಾಡ ೨೬೭

ಸಾಹಿತ್ಯವನವಿಹಾರ
ಶ್ರೀ. ನಾ. ಭಿ. ಕಲಮದಾನಿ ಮತ್ತು ಜೆಟಗೇರಿ ಕೃಷ್ಣಶರ್ಮ ೨೭೧

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಶ್ರೀ. ಎಚ್. ಆರ್. ಶಾಸ್ತ್ರಿ ಮತ್ತು ಶ್ರೀಮತಿ 'ಕಲಾ' ಬೆಂಗಳೂರು ೨೭೫

ಸಾದರಸ್ವೀಕಾರ ಹೊದಿಕೆಯ ಒಳಪುಟದಲ್ಲಿ

ಜಯಂತಿ

ಸಂಪುಟ ೧೯ ಸಂಚಿಕೆ ೬

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೬ ಆಣೆ.

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಪಾಕಿಸ್ತಾನದ ಭಾರತದ್ವೇಷ

ಪಾಕಿಸ್ತಾನ-ಇಂದುಸ್ತಾನಗಳ ಸಂಬಂಧದ ವಿಷಮಮನಸ್ಕತೆಯನ್ನು ಕುರಿತು ಎಷ್ಟು ಸಲ ಬರೆದರೂ ಸಾಲದಂತಾಗಿದೆ. ಪಾಕಿಸ್ತಾನದಲ್ಲಿ ಯಾವ ಪಕ್ಷದವರ ಸರಕಾರವು ಆಧಿಪತ್ಯ ವಹಿಸಿದರೂ, ಅದು ಕಾಲೂರಿ ನಿಲ್ಲುವುದಕ್ಕಾಗಿ ಮಾಡಬೇಕಾದ ಮುಖ್ಯಪ್ರಚಾರಕಾರ್ಯವೆಂದರೆ, ಅಲ್ಲಿಯ ಜನತೆಯಲ್ಲಿ ಭಾರತದ ಬಗೆಗೆ ದ್ವೇಷ-ಮತ್ಸರಗಳನ್ನು ಹರಡುವುದು. ಮುಸ್ಲಿಂ ಲೀಗಿನ ಸರಕಾರವಂತೂ ರಾಷ್ಟ್ರದಲ್ಲಿಯ ಸುಖ-ಸಮಾಧಾನಗಳಿಗಿಂತ, ಭಾರತದ ವಿಷಯದಲ್ಲಿ ಹಗೆಯು ಹೆಚ್ಚುವಂತಹ ಕಾರ್ಯದ ಕಡೆಗೇ ವಿಶೇಷಲಕ್ಷ್ಯ ಕೊಡುವುದು ತನ್ನ ಕರ್ತವ್ಯವೆಂದು ಭಾವಿಸಿತ್ತು. ಅಧಿಕಾರಚ್ಯುತವಾಗುವ ವರೆಗೂ ಆ ಕಾರ್ಯವನ್ನು ಅವಿಚ್ಛಿನ್ನವಾಗಿ ಸಾಗಿಸಿತು. ಈಗ ಬೇರೆಯ ಪಕ್ಷದ ಸರಕಾರವು ತಲೆಯೆತ್ತಿದೆ. ಮಂತ್ರಿವರ್ಗದಲ್ಲಿಯೂ ಹೊಣೆಗಾರಿಕೆಯ ಅಧಿಕಾರಸ್ಥಾನದಲ್ಲಿಯೂ ಹೊಸ ಹೊಸ ಮುಖಗಳು ಕಾಣುತ್ತಲಿವೆ. ಆದರೂ ಭಾರತದ ದ್ವೇಷಪ್ರಚಾರದ ವಿಚಾರದಲ್ಲಿ ಮುಸ್ಲಿಂಲೀಗ್ ಸರಕಾರದ ಅಡಿಯಲ್ಲಿ ಅಡಿಯಿಟ್ಟೇ ಈ ಹೊಸಬರ ರಾಜಕಾರ್ಯವೂ ನಡೆದಿದೆ.

ಏಕೆ ನಡೆಯಬಾರದು? ಪಾಕಿಸ್ತಾನದಲ್ಲಿಯ ಇಂದಿನ ಯಾವ ಪಕ್ಷದ ಧುರೀಣರೂ ಭಾರತೀಯದ್ವೇಷವ ತಥಾರಿಗಳಾಗಿದ್ದ ಕಾಯದೆ ಆಜಂ ಜಿನ್ನಾ ಸಾಹೇಬರ ಅನುಯಾಯಿಗಳು. ಅಲ್ಲಿ ಒಳ ಆಡಳಿತದ ಅಧಿಕಾರಲಾಲಸೆಗಾಗಿ ಪಕ್ಷ-ಪಕ್ಷಗಳು ತಲೆದೋರಿನಬಹುದು; ಆದರೆ ಭಾರತದ ದ್ವೇಷ ಎಲ್ಲರಲ್ಲಿಯೂ ಸಾಮಾನ್ಯವಿಷಯವಾಗಿರುವುದು. ಆದುದರಿಂದಲೇ ಅಲ್ಲಿ ಭಾರತದದ್ವೇಷಪ್ರಚಾರದ ಬಗೆಗೆ ಪಕ್ಷ-ಪಕ್ಷಗಳವರಲ್ಲಿಯೂ ಒಂದು ಬಗೆಯ ಮೇಲಾಟ ನಡೆದಿದೆ. ಆದುದರಿಂದಲೇ ಪಾಕಿಸ್ತಾನ್ ಮುಸ್ಲಿಂಲೀಗಿನ ಇಂದಿನ ಅಧ್ಯಕ್ಷರಾದ ಜನಾಬ್ ಅಬ್ದುಲ್‌ರಾಬ್ ನಿಸ್ತಾರ್ ಅವರು 'ಪಾಕಿಸ್ತಾನದ ಏಕಮೇವಾದ್ವಿತೀಯ ಶತ್ರುವೆಂದರೆ ಭಾರತ' ಎಂದು ಜನತೆಯೆದುರು ಸಾರುತ್ತ ಹೊರಟಿದ್ದಾರೆ. ಅದರಂತೆಯೆ ಇಂದಿನ ಹೊಸ ಸರಕಾರದಲ್ಲಿ ವಿದೇಶಮಂತ್ರಿಗಳಾಗಿ ಇರುವ ಫೆರೋಜ್‌ಖಾನ್‌ನೂನ್ ಅವರು, ಅನಿಮಿತ್ತವಾಗಿಯೆ ಭಾರತವನ್ನು ನಖಶಿಖಾಂತನಾಗಿ ದ್ವೇಷಿಸುವವರಾಗಿರುವರು.

ಇನ್ನು ಭಾರತದಲ್ಲಿದ್ದಾಗ ಕಾಂಗ್ರೆಸಿನ ಅನುಯಾಯಿಗಳಾಗಿದ್ದ ಮುಸಲ್ಮಾನ್ ಧುರೀಣರು ಕೆಲವರೂ ಪಾಕಿಸ್ತಾನ್ ರಾಜಕಾರ್ಯದಲ್ಲಿ ಕಾಣುತ್ತಿರುವರು. ಅವರಾದರೂ ಸಮಂಜಸ ಬುದ್ಧಿಯಿಂದ ಭಾರತವನ್ನು ನೋಡಬಹುದಾಗಿತ್ತು; ಪಾಕಿಸ್ತಾನದ ಜನತೆಯ ಮನವನ್ನು ತಿದ್ದುವ ಕಾರ್ಯವನ್ನು ಮಾಡಬಹುದಾಗಿತ್ತು; ಆದರೆ ಸ್ವಾತಂತ್ರ್ಯೋತ್ತರದ ಅಧಿಕಾರ ಮೋಹದ ಭೂತ ಅವರಿಗೂ ಅಂಟಿಕೊಂಡಿದೆ. ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುವುದಕ್ಕಾಗಿ ಅವರಿಂದೂ ಒಂದು ಸಂಘಟನೆ ಬೇಕಾಗಿನೆ, ಅಂತಹ ಸಂಘಟನೆಯ ಪ್ರಚಾರಕ್ಕೆ ಭಾರತದ ದ್ವೇಷಪ್ರಚಾರದ ಕೆಲಸವೇ ಸುಲಭಸಾಧನವೆಂದು ಮನವರಿಕೆಯಾಗಿ, ಅವರೂ ಅನಿವಾರ್ಯ-ವೆಂದು ಆದರ ಬೆನ್ನನ್ನೆ ಹತ್ತಿದ್ದಾರೆ.

ಭಾರತ-ಪಾಕಿಸ್ತಾನಗಳೆರಡೂ ಒಂದೆ ದಿನ ಸ್ವಾತಂತ್ರ್ಯವನ್ನು ಪಡೆದು ನಿಂತ ರಾಷ್ಟ್ರಗಳು. ಪರಾಕ್ರಮಣವನ್ನು ಕನಸಿನಲ್ಲಿಯೂ ನೆನೆಯದ ಭಾರತದ ಧುರೀಣರು, ಆಂತರಿಕ ಅಭ್ಯು-ದಯದ ಕಡೆಗೇ ಕಣ್ಣಿಟ್ಟು ತಮ್ಮ ಆಡಳಿತವನ್ನು ಮುಂದುವರಿಸಿದ್ದಾರೆ. ದಿನದಿನಕ್ಕೂ ಅಭ್ಯುದಯದ ಆದರ್ಶವನ್ನು ಸಮೀಪಿಸುತ್ತಲಿದ್ದಾರೆ. ಅದರ ಈ ರಾಜಕಾರ್ಯ ಸದ್ಯತಿ ಜಗತ್ತಿನ ಎಲ್ಲ ರಾಷ್ಟ್ರಗಳ ದೃಷ್ಟಿಯನ್ನೂ ತನ್ನ ಕಡೆಗೆ ಸೆಳೆದುಕೊಂಡಿದೆ. ಆದುದರಿಂದಲೇ

ಅಂತರರಾಷ್ಟ್ರೀಯ ರಾಜಕಾರ್ಯದಲ್ಲಿ ಭಾರತಕ್ಕೆಯಿಂದು ಗಣ್ಯವಾದ ಸ್ಥಾನ ದೊರೆತುಬಿಟ್ಟಿದೆ. ಜಗತ್ತಿನ ಎಲ್ಲ ರಾಷ್ಟ್ರಗಳ ಪ್ರಮುಖರೂ ಭಾರತಕ್ಕೆ ಬಂದು ಸ್ನೇಹಾತಿಥ್ಯವನ್ನು ಸ್ವೀಕರಿಸುತ್ತಿದ್ದಾರೆ; ಅವರಂತೆ ಭಾರತದ ಪ್ರಮುಖರನ್ನು ತಮ್ಮಲ್ಲಿಗೆ ಬರಮಾಡಿಕೊಂಡು ತಮ್ಮ ಪ್ರೀತಿ-ವಿಶ್ವಾಸಗಳನ್ನು ಸಲ್ಲಿಸುತ್ತಲಿದ್ದಾರೆ. ಅಂತರರಾಷ್ಟ್ರೀಯ ವೈಪರೀತ್ಯವೆನಿಸುವ ಎಂತೆಂತಹ ಸಮಸ್ಯೆಗಳಲ್ಲಿಯೂ ಭಾರತದ ಮಾತುಗಳಿಗೆ ಬೆಲೆ ದೊರೆಯುತ್ತಲಿವೆ. ಇದೊಂದು ಪಾಕಿಸ್ತಾನಿಗಳಿಗೆ ಜೀರ್ಣಿಸಲಸಾಧ್ಯವಾದ ಅಪಥ್ಯದ ವಿಷಯವಾಗಿ ಕುಳಿತಿದೆ.

ಆಕ್ರಮಣಬುದ್ಧಿಯಿಂದಲೇ ಭಾರತದ ಹುಟ್ಟಿನಮನ್ನು ಹೊಸದು ಪಾಕಿಸ್ತಾನವು, ಹುಟ್ಟಿನಂದಿನಿಂದಲೂ ಅದೇ ಬುದ್ಧಿಯನ್ನು ಸಂರಕ್ಷಿಸಿ ಬಲಿಸುತ್ತಲಿದೆ. ಪಶ್ಚಿಮವು ನುಷಾರಾಷ್ಟ್ರಗಳ ಪರಸ್ಪರ ಸಂದೇಹ-ದ್ವೇಷವೃತ್ತಿಗಳನ್ನು ಉಪಯೋಗಮಾಡಿಕೊಂಡು, ತನ್ನ ಮಹಾಸ್ವಾರ್ಥ ಸಾಧಿಸಿಕೊಳ್ಳಬೇಕೆಂದು, ಅಮೇರಿಕೆಯಿಂದ ಅಮೆರಿಕನ ಶಸ್ತ್ರಾಸ್ತ್ರಸಹಾಯವನ್ನು ದೊರೆಕಿಸಿಕೊಂಡಿತು. ಭಾರತದ ಸ್ನೇಹ-ಸಂಬಂಧವನ್ನು ಕಳೆದುಕೊಳ್ಳಬಾರದೆಂಬ ದೂರದೃಷ್ಟಿಯಿಂದಲೇ ಅಮೆರಿಕೆ ಇರಿಸಿಕೊಂಡಿರದೆ ಹೋಗಿದ್ದರೆ, ಅಮೇರಿಕೆಯಿಂದ ಪಾಕಿಸ್ತಾನಕ್ಕೆ ಬಂದಿರುವ ಶಸ್ತ್ರಾಸ್ತ್ರಗಳ ಪ್ರಯೋಗ ಭಾರತೀಯರ ಮೇಲೆ ಎಂದೋ ನಡೆದು ಬಹುದಾಗಿತ್ತು. ಧರ್ಮದ ಅಫೀಮಿನೇಶವನ್ನುಮುಮೊಡ್ಡಿ ಮುಸ್ಲಿಂ ರಾಷ್ಟ್ರಗಳನ್ನು ಸಂಘಟಿಸಿ ಭಾರತದ ಮೇಲೆ ಕೈಮಾತಿಸೇಕೆಂಬ ನಿಷ್ಫಲಪ್ರಯತ್ನವನ್ನೂ ಪಾಕಿಸ್ತಾನ ಮಾತಿಗೆ ಇರಿಸಿಲ್ಲ. ಆದರೆ ಭಾರತದ ಪ್ರಭಾವಶಾಲಿಯಾದ ವಿದೇಶರಾಜಕಾರ್ಯದ ಫೋರಣ ಪಾಕಿಸ್ತಾನವೊಂದನ್ನುಳಿದು ಮಿಕ್ಕೆಲ್ಲ ಮುಸ್ಲಿಂ ರಾಷ್ಟ್ರಗಳ ಕ್ಷೇಮವನ್ನು ತನ್ನ ಕಡೆಗೆ ಸೆಳೆದುಕೊಂಡುಬಿಟ್ಟಿದೆ. ಇದ್ದಿಯೂ ಪಾಕಿಸ್ತಾನಿಗಳಿಗೆ ಅಸಹ್ಯವಾದ ನಿರಾಶೆ.

ಇಂದು ಅಂತರರಾಷ್ಟ್ರೀಯ ರಾಜಕಾರಣವ್ಯವಸಂಗಗಳಲ್ಲಿ ಭಾರತದ ಪ್ರತಿನಿಧಿಗಳಿಗೆ ಸಿಕ್ಕುತ್ತಲಿರುವ ಮಾನ-ಸನ್ಮಾನಗಳ ವ್ಯಾಪಾರಳು ಪಾಕಿಸ್ತಾನದ ಫೂರೀಣಾಗೆ ಕಣ್ಣುಕೆಸರಾಗಿಬಿಟ್ಟಿದೆ. ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿಯೂ, ಭಾರತದ ಪ್ರತಿನಿಧಿಗೆ ಸಿಕ್ಕುವ ಸ್ನೇಹ-ಸ್ವಾಗತಗಳ ಸಂಕಂಭವೇ ಅದೊಂದು ವಿಧ: ಪಾಕಿಸ್ತಾನದ ಪ್ರತಿನಿಧಿಗೆ ದೊರೆಯುವ ಸಾಂಪ್ರದಾಯಿಕ ಉಪಚಾರಗಳೇ ಒಂದು ವಿಧ! ಭಾರತ ತನಗೆ ಮನ್ನಣೆಸಲ್ಲಬೇಕೆಂದು ಎಂದೂ ಬಯಸುತ್ತಿಲ್ಲ; ಅದಕ್ಕಾಗಿ ಪ್ರಚಾರಮಾಡುತ್ತಿಲ್ಲ. ಪಾಕಿಸ್ತಾನಕ್ಕೆ ತನಗೇ ಮಣಿಮನ್ನಣೆ ಸಲ್ಲಬೇಕೆಂದು ಬಯಸುತ್ತಿದೆ: ಅದಕ್ಕಾಗಿ ವಿದೇಶರಾಜಕಾರಣಗಳಿಗೆ ತನ್ನ ಪ್ರಚಾರಕರನ್ನು ಕಳುಹುತ್ತಲಿದೆ. ಆದರೆ ಎಲ್ಲ ಕಡೆಯಲ್ಲಿಯೂ ಭಾರತಕ್ಕೇ ಮೊದಲು ತರಗತಿಯ ಮನ್ನಣೆ; ಪಾಕಿಸ್ತಾನಕ್ಕೆ ದ್ವಿತೀಯಸ್ಥಾನದ ಉಪೇಕ್ಷೆಗಳು! ಈ ಪರಿಸ್ಥಿತಿಯೂ ಪಾಕಿಸ್ತಾನದ ಫೂರೀಣರ ಮನಸ್ಸನ್ನು ಕೆಣಕಿ ಕೆರಳಿಸುತ್ತಲಿದೆ. ಇದರ ಫಲವೆಂದರೆ ಪೂರ್ಣ ಗಾರಿಕೆಯನ್ನರಿಯದೆ ಅವರು ಭಾರತವನ್ನು ಬೈಯುಬೈದು ತಮ್ಮ ರೊಚ್ಚನ್ನು ತಣಿಸಿಕೊಳ್ಳುವುದು!

ಪಾಕಿಸ್ತಾನಿಗಳಲ್ಲಿ ವಿವೇಕ ಎಂದು ತಲೆದೋರುವುದೋ ತಿಳಿಯದಾಗಿದೆ. ಇಜಿಪ್ತ್ ಅಭಿಯೋಗದ ವಿಷಯದಲ್ಲಿ ಸಂಯುಕ್ತರಾಷ್ಟ್ರಸಭೆಯು ಪುರಸ್ಕರಿಸಿದ ಧೋರಣವನ್ನು ನೋಡಿದರೆ, ಜಗತ್ತಿನ ಜನರಿಗೆಲ್ಲ ಬೇಕಾದುದು ಶಾಂತಿಯೆಂಬುದೇ ಸಿದ್ಧವಾಗುವುದು. ಅಮೇರಿಕೆಯಂತಹ ಅಮೇರಿಕೆಯು ಕೂಡ, ಈ ವಿವೇಕದ ಬೆಲೆಯನ್ನು ಅರಿತುಕೊಂಡು, ತನ್ನ ಬಹುಕಾಲದ ಮಿತ್ರರಾಷ್ಟ್ರಗಳಿಗೆ ವಿರೋಧಿಯಾಗಿ ನಿಲ್ಲುವ ಪ್ರಸಂಗವನ್ನು ತಂದುಕೊಂಡಿದೆ. ಇದೇ ವಿವೇಕವೇ ಕೊನೆಯ ಪಕ್ಷ ಉಳಿದರೆ, ಬೇಗನೆ ಅಮೇರಿಕಾ—ಚೀನ, ಅಮೇರಿಕಾ—ರಷಿಯಾ ಇವುಗಳಲ್ಲಿ ಸ್ನೇಹಭಾವವೂ ಬೆಳೆಯಬಹುದಾಗಿದೆ. ಸರಾಕ್ರಮಣವೃತ್ತಿಗೆ ಎಂತಹ ಬೆಲೆಯಿದೆಯೆಂಬುದನ್ನು ಇಂದಿನ ಇಂಗ್ಲೆಂಡ್-ಫ್ರಾನ್ಸ್ ಮಹಾರಾಷ್ಟ್ರಗಳು ತಮ್ಮ ನೈತಿಕ ಅಧಃಪತನದಿಂದ ಜಗತ್ತಿಗೇ ಕೂಗಿ ಕೂಗಿ ಹೇಳುತ್ತಲಿವೆ.

ಪಾಕಿಸ್ತಾನವು ಇದನ್ನೆಲ್ಲ ಮನದೆಮುರು ತಂದು, ವಿವೇಕಿಯಾಗಿ ನೋಡಬೇಕು. ಜಗತ್ತಿನ ಜನತೆಯೆಲ್ಲವೂ ಬಯಸುತ್ತಿರುವ ಮಾನವಹಿತದ ಆದರ್ಶವನ್ನು ಮನವರಿಕೆ ಮಾಡಿಕೊಳ್ಳಬೇಕು. ಸುಪ್ರಸಿದ್ಧ ತತ್ತ್ವಜ್ಞಾನಿ ರಸ್ಸಿನ್ ಒಂದು ಮಾತನ್ನು ಹೇಳಿದ್ದಾನೆ: "ನಿನ್ನ ಕಡುವೈರಿಯನ್ನ ಕುರಿತು ಮಾತನಾಡುವಾಗಲೂ ನೀನು ಕೆಟ್ಟ ಮಾತುಗಳನ್ನ ಬಳಸಬೇಡ! ಏಕೆಂದರೆ ಅವನು ಒಂದಿಲ್ಲೊಂದು ದಿನ ನಿನ್ನ ಮಿತ್ರನಾಗಬಹುದು!"

ಭಾರತಪಿತಾಮಹ ಮಹಾತ್ಮಾ ಗಾಂಧಿಯವರು ರಸ್ಸಿನ್ನನ ನೀತಿಯನ್ನು ತುಂಬ ಮೆಚ್ಚಿದವರು. ಅವರ ಗರುಡಿಯಲ್ಲಿ ಸಾಧನೆಮಾಡಿದ ನಮ್ಮ ಇಂದಿನ ರಾಜಕಾರಣಧುರೀಣರು, ಎಂದೂ ಯಾರಿಗೂ ಕೀಳುಮಟ್ಟಿಕೆಬ್ಬುವ ಮಾತುಗಳನ್ನು ಬಳಸಲಾರರು. ಇಷ್ಟೇ ಅಲ್ಲ: ಪಾಕಿಸ್ತಾನಿಗಳು ತಮ್ಮನ್ನು ಇಷ್ಟೊಂದು ದ್ವೇಷಿಸಿ ಬೈಯುತ್ತಿದ್ದರೂ ನಮ್ಮ ಮುಖ್ಯಪ್ರಧಾನರು, ಚೀನದ ಮುಖ್ಯಮಂತ್ರಿ ಚೌ-ಎನ್-ಲಾಯ ರೊಂದಿಗೆ ಸೌಹಾರ್ದದ ಸಂದೇಶವನ್ನು ಕಳುಹುವ ಮಾತುಗಳನ್ನು ಮೊನ್ನೆಮೊನ್ನೆಯೆ ಆಡಿದ್ದಾರೆ. ಆದರೆ ದ್ವೇಷದಿಂದ ಅಂಧರಾಗಿ ಬಬ್ಬರಿಯುವ ಪಾಕಿಸ್ತಾನಿಗಳಿಗೆ, ಈ ಸೌಹಾರ್ದಸಂದೇಶದ ಅರ್ಥವಾದೀತೆ? ಶತ್ರುಗಳಾರೆಂಬುದನ್ನು ಚೆನ್ನಾಗಿ ಅರಿತವರಾದುದರಿಂದಲೇ, ಮಾನ್ಯ ಚೌ-ಎನ್-ಲಾಯ ಅವರು ಮುಗುಳುನಗೆಯನ್ನು ನಕ್ಕಿರಬೇಕು. ಪಾಕಿಸ್ತಾನಿಗಳ ಈ ಹುಂಬ ರಾಜಕಾರ್ಯ, ಜಗತ್ತಿನ ರಾಜಕಾರಣಿಗಳ ಅನುಭವಕ್ಕೆ ಬಾರದೆ ಹೋಗಿದೆಯೆ? ಆದರೂ ಈ ನಾಯಿಯನ್ನು ಬೊಗಳಿಸಿ, ಭೀತಿಹುಟ್ಟಿಸಿ, ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳಬೇಕೆನ್ನುವ ಕುಟಿಲ ರಾಜಕಾರಣಿಗಳೂ ಇಲ್ಲದಿಲ್ಲ. ಅವರು ಒಳಸಂಚಿನಲ್ಲೇ ಇದನ್ನು ಭಾರತದ ಮೇಲೆ ಛೂ ಬಿಡಲು ತೊಡಗಿದ್ದಾರೆ. ಭಾರತದ ಪೆಟ್ಟುಬಿದ್ದರೆ ಬೊಗಳುವ ನಾಯಿಗೆ ಬಿದ್ದೀತೇ ಪೆಟ್ಟು, ತಾವು ಹಿಂದೆಯೆ ಉಳಿಯುವೆವೆಂದು ಅವರು ತಿಳಿದುಕೊಂಡಿದ್ದಾರೆ ಇದರ ತಿಳಿವಳಿಕೆ ಪಾಕಿಸ್ತಾನಕ್ಕೆ ಬೇಗನೆ ಮೂಡಿದಷ್ಟು ಭಾರತ-ಪಾಕಿಸ್ತಾನಗಳೆರಡಕ್ಕೂ ಕ್ಷೇಮ.

—ಸಂಪಾದಕರು

ನಾಡನಡೆ

ಹೊಸರಾಜ್ಯದ ಹೊಸ ಹೊಸ ಬದಲಾವಣೆ

'ಮೈಸೂರು ರಾಜ್ಯ' ಎಂಬ ಹೆಸರಿನಿಂದ ಕನ್ನಡರಾಜ್ಯ ಪ್ರಸ್ಥಾಪಿತವಾಯಿತು. ರಾಜ್ಯವನ್ನು ಆಳುವುದಕ್ಕೆ—ತಾತ್ಕಾಲಿಕವಾದರೂ—ಹೊಸದೊಂದು ಸರಕಾರ ತಲೆಯೆತ್ತಿ ನಿಂತಿತು. ಇದರ ಪರಿಣಾಮವು ಏಕ್ಯಗೊಳಿದ ಕನ್ನಡನಾಡಿನ ಮೇಲೆ ಯಾವ ಬಗೆಯಿಂದಾದರೂ ಆಗಿದೆಯೊ, ಇಲ್ಲವೊ; ಉತ್ತರಕರ್ನಾಟಕದ ಮೇಲೆ ಮಾತ್ರ ಸಾಕಷ್ಟು ಆಗಿದೆಯೆಂದು ಹೇಳಬಹುದು. ನಾಲ್ಕೂ ಜಿಲ್ಲೆಯ ಮುಖ್ಯಾಧಿಕಾರಿಗಳೂ ಪ್ರಾಂತ್ಯಾಧಿಕಾರಿಗಳೂ ಮೈಸೂರು ಕರ್ನಾಟಕದವರು ಬಂದಿದ್ದಾರೆ. ಮೈಸೂರುಕರ್ನಾಟಕದವರೇ ಆದ ಬೇರೆ ಬೇರೆ ಮಂತ್ರಿಗಳು ಬಂದು ಬಂದು ಅಲ್ಲಲ್ಲಿ ತಿರುಗಾಡಿ ಹೋಗುತ್ತಲಿದ್ದಾರೆ. ಸರಕಾರೀ ಕಾರ್ಯಾಲಯಗಳ ಕೆಲಸದ ಶೈಲಿಯಲ್ಲಿಯೂ ಬದಲಾವಣೆಯಾಯಿತು. ಇದರೊಂದಿಗೆ, ಉತ್ತರಕರ್ನಾಟಕದಲ್ಲಿ ಎಂದೆ ಒಂದಾಗಿದ್ದು ತನ್ನ ಉಚ್ಚಮಟ್ಟದ ಜ್ಞಾನದಾನದಿಂದ ಸಾಕಷ್ಟು ಜನಪ್ರೀತಿಯನ್ನು ಸಂಪಾದಿಸಿರುವ ಕರ್ನಾಟಕ ಕಾಲೇಜಿನ ಪಂಚಾಲಕತ್ವದ ಕೈಬದಲಿನ ಮಾತು-ಕತೆಗಳೂ ನಡೆಯುತ್ತಲಿವೆ. ಧಾರ್ನಾಟಕಕಾಲೇಜಿನಂತೆಯೇ ಧಾರವಾಡದ ಒಕ್ಕಲುತನದ ಕಾಲೇಜಿನ ಪರಿಸ್ಥಿತಿಯೂ ಇರಬಹುದು.

ಇದೆಲ್ಲವನ್ನೂ ನೋಡಿದ ಜನ ಬೆದರಿ, ಭವಿಷ್ಯವನ್ನು ಸಂದೇಹಾತರಭಾವಗಳಿಂದ ಕೂಡಿಬುದಾಗಿದೆ. ಎಂತಹ ಸ್ವಾತಂತ್ರ್ಯ ಜೀವನದಲ್ಲಿಯೂ ಒಂದು ತಂತ್ರಕ್ಕೆ ಒಳಗಾಗಿ ನಡೆಯುವುದು ಅನಿವಾರ್ಯವೇ ಸರಿ! ಮೈಸೂರು ರಾಜ್ಯದ ಘಟನಾತಂತ್ರ ಒಂದು ವಿಶಿಷ್ಟ ನಿಯಮಗಳಿಂದ ಕೂಡಿದುದಾಗಿರಬಹುದು. ಈಗ ಆ ಘಟನಾತಂತ್ರಕ್ಕೇ ಹೊಸ ಪ್ರತೀಕವು ಒಳಗೊಳ್ಳುವಂತೆ ಮಾಡಬೇಕೆಂದರೆ, ಈ ಭಾಗದಲ್ಲಿರುವ ಅನೇಕ ಸುವ್ಯವಸ್ಥೆಗಳನ್ನು ಮುರಿದು ಹಾಕಿ, ಬೇರೆಯ ವ್ಯವಸ್ಥೆಯನ್ನು ನಿರ್ಮಿಸಬೇಕಾಗುವುದು ಇದಕ್ಕಾಗಿ ಕಾಲ ಶಕ್ತಿ ಧನಗಳ ವ್ಯರ್ಥವ್ಯಯವಾಗದಿರುವುದಲ್ಲದೆ, ಜನರಲ್ಲಿ ಒಂದು ಬಗೆಯ ಅತೃಪ್ತಿ-ಅಸಂತುಷ್ಟಿಗಳು ತಲೆದೋರುವಂತಾಗುವುದು.

ಇಂತಹ ಸಂದರ್ಭದಲ್ಲಿ ಇದ್ದ ಸುವ್ಯವಸ್ಥೆಗಳನ್ನು ಕೆಡಿಸಿ ಹೊಸದನ್ನು ಹೂಡುವುದಕ್ಕಿಂತ, ಪರಿಸ್ಥಿತಿಗೆ ಅನುಗುಣವೆನಿಸುವಂತೆ, ಘಟನಾತಂತ್ರದ ನಿಯಮಗಳಲ್ಲಿಯೆ ಬದಲಾವಣೆಗಳನ್ನು ಮಾಡುವುದು ಹೆಚ್ಚು ಯೋಗ್ಯವಾದುದು. ಉತ್ತರಕರ್ನಾಟಕದ ವಿಶಾಲ ಪ್ರದೇಶದಲ್ಲಿ, ಈಗಾಗಲೇ, ಶಿಕ್ಷಣಪ್ರಚಾರದ ಬಗೆಗೆ ಒಂದು ಸುವ್ಯವಸ್ಥೆ ಇದೆ. ಈಗಿರುವ ವ್ಯವಸ್ಥೆಯನ್ನು ಹೊಸ ರಾಜ್ಯದ ಆಡಳಿತವು ಸಧ್ಯದ ಮಟ್ಟಿಗಾದರೂ ಒಪ್ಪಿಕೊಂಡು ಬಿಡಬೇಕು. ಇಳಿಯ ಮೈಸೂರು ರಾಜ್ಯದಲ್ಲಿ ಮದ್ಯಪಾನ ನಿರ್ಬಂಧಕ ಶಾಸನವಿರಲಿಲ್ಲ. ಮುಂಬಯಿ, ಮದ್ರಾಸು ಕನ್ನಡ ಪ್ರದೇಶಗಳಲ್ಲಿ ಈ ಶಾಸನವು ಪ್ರಚಾರದಲ್ಲಿದೆ. ಹೊಸರಾಜ್ಯತಂತ್ರವೆಂದು ಈ ಪ್ರದೇಶಗಳಲ್ಲಿರುವ ಮದ್ಯಪಾನ-ನಿರ್ಬಂಧಕ ಶಾಸನವನ್ನು ತೆಗೆದು ಹಾಕುವರೆ? ಆ ವ್ಯವಸ್ಥೆಯನ್ನು ಕಾಯಲಾಗುವುದೆಂದಮೇಲೆ, ಶಿಕ್ಷಣವ್ಯವಸ್ಥೆಯಲ್ಲಿ ಏಕೆ ಬದಲಾವಣೆ ಮಾಡಬೇಕು?

ನಿಜವಾದ ತಪ್ಪುಗಾರರು ಯಾರು?

ಭಾರತದ ಸ್ವಾತಂತ್ರ್ಯ, ಕನ್ನಡ ನಾಡಿನ ಏಕೀಕರಣ ಇವೆಲ್ಲ ಭಾವನಾಮಾತ್ರ ಸಮಾಧಾನದ ಸಂಗತಿಗಳಾಗಿದ್ದರೂ, ನಾಡಿಗರ ನಿತ್ಯಜೀವನ ಅಸಮಾಧಾನ—ಅತೃಪ್ತಿಗಳಿಂದ ತುಂಬಿಹೋಗಿದೆ. ಇದಕ್ಕೆ ಮುಖ್ಯವಾದ ಕಾರಣವೆಂದರೆ, ಇಂದಿನ ಪೇಟೆಯ ದರಗಳು. ಕೇವಲ ಆಹಾರ ಪದಾರ್ಥಗಳನ್ನು ಒದಗಿಸಿಕೊಳ್ಳಲಿಕ್ಕೂ ಈಗಿರುವ ಜನರ ಆದಾಯ ಸಾಲದಾಗಿದೆ. ಆಹಾರಕ್ಕೇ ಅಭಾವ ಬಂದಿರುವಾಗ, ಸ್ವಾತಂತ್ರ್ಯ—ಸ್ವಾಧಿಪತ್ಯಗಳಿಗೆ ಯಾವ ಬೆಲೆ? ಸ್ವರಾಜ್ಯ-ಸ್ವಾತಂತ್ರ್ಯಗಳ ಮುಖ್ಯಲಕ್ಷಣವೆಂದರೆ ಜನರೆಲ್ಲರ ಕ್ಷೇಮಜೀವನ; ಅದರಿ ಅದಕ್ಕೆಂದು ಎಡೆಯಿಟ್ಟಿಯೆ?

ಕೇಂದ್ರಸರಕಾರವೂ ರಾಜ್ಯಸರಕಾರಗಳೂ ಆಹಾರ ವ್ಯವಸ್ಥೆಯ ಒಣವಾಗ್ದಾನಗಳನ್ನು ಬೇಕಾದಷ್ಟು ಆಡುತ್ತಲಿವೆ. ಅವರು ಆಡಿದ ಮಾತುಗಳನ್ನು ಕೇಳಿದಾಗ, ನಾಳೆಯ ದಿನವೇ ಪೇಟೆಯಲ್ಲಿಯ ಏರಿದ ದರಗಳು ಇಳಿಯಬಹುದೆಂದು ಆಶೆ ತಲೆದೋರುವುದು. ಆದರೆ ಪ್ರತ್ಯಕ್ಷ ಜೀವನದಲ್ಲಿ ನಿರಾಶೆಯ ಸಂದರ್ಭವನ್ನೇ ನಿತ್ಯ ನಿತ್ಯ ಎದುರಿಸಬೇಕಾಗುತ್ತಲಿದೆ. ಇದಕ್ಕೆ ಯಾರು ಹೊಣೆಗಾರರು?

ಸರಕಾರದ ಆಹಾರನಿರ್ವಹಣೆಯ ಅಂಕಿ-ಸಂಖ್ಯೆಗಳನ್ನು ನೋಡಿದರೆ, ಸಾಕಷ್ಟು ಆಹಾರಧಾನ್ಯದ ಸಂಗ್ರಹ ದೇಶದಲ್ಲಿದೆಯೆಂದು ಗೊತ್ತಾಗುವುದು. ಹಾಗಾದರೆ 'ಡವಗೀಬರ' ಎಂಬ ಬರದ ದರಗಳನ್ನೂ ಮೀರಿಸುವ ಇಂದಿನ ಈ ಉಗ್ರದರಗಳಿಗೆ ಯಾರು ಹೊಣೆಗಾರರು? ಸರಕಾರದವರು ವ್ಯಾಪಾರಸ್ಥರ ಮೇಲೆ ಆರೋಪ ಹೊರಿಸುತ್ತಾರೆ, ವ್ಯಾಪಾರಿಗಳು ಸರಕಾರದ ಮೇಲೆ ಆರೋಪ ಹೊರಿಸುತ್ತಾರೆ. ನಿಜವಾದ ತಪ್ಪುಗಾರರು ಯಾರು?

ಮಂತ್ರಿಗಳ ದಿಗ್ವಿಜಯ ಯಾತ್ರೆಗಳು

ಹೊಸ ಕನ್ನಡ ರಾಜ್ಯದ ಮಂತ್ರಿಗಳು ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ದಿಗ್ವಿಜಯ ನಡೆಯಿಸಿದ್ದಾರೆ. ಹೊಸ ಹೊಸ ಪ್ರದೇಶಗಳು ರಾಜ್ಯಕ್ಕೆ ಸೇರಿದುದರಿಂದ, ಅಲ್ಲಲ್ಲಿಯ ವಿಶಿಷ್ಟ ಪರಿಸ್ಥಿತಿಗಳನ್ನು ಪ್ರತ್ಯಕ್ಷವಾಗಿ ಕಂಡು ಅಭ್ಯಾಸಮಾಡಬೇಕಾದುದು ಅಗತ್ಯವೇ ಆಗಿದೆ. ನಿಜವಾಗಿಯೂ ಈ ಉದ್ದೇಶ ಸಾಧನೆಗಾಗಿಯೆ ಮಂತ್ರಿಗಳು ದಿಗ್ವಿಜಯ ಹೊರಡಿಸಿದ್ದರೆ ಅದು ಒಳ್ಳೆಯದೇ ಆಗಿದೆ ಆದರೆ ವಸ್ತುಸ್ಥಿತಿಯನ್ನು ನೋಡಿದರೆ, ಮಂತ್ರಿಗಳೆನಿಸಿಕೊಳ್ಳುವವರೆಲ್ಲ ಜನತೆಯ ಮಾನ |

ಸನ್ಮಾನದ ಆಶಯದಿಂದಲೇ ಸ್ವಾಗತಕ್ಕೆಕೊಳ್ಳುತ್ತಾರೆಂಬುದು ಬಹುಜನರ ಅನುಭವವಾಗಿದೆ. ಮಂತ್ರಿಗಳು ಬರುವರು; ಸಾರ್ವಜನಿಕವಾಗಿ ಯಾರು-ಯಾರನ್ನೋ ಕಾಣುವರು ಕೆಲವೊಂದು ಸಂಸ್ಥೆಗಳನ್ನು ಕಂಡು ಆದರ-ಸತ್ಕಾರಗಳನ್ನು ಪಡೆಯುವರು. ಮಾತನಾಡಲಿಕ್ಕೆ ಬರಲಿ-ಬರದೇ ಇರಲಿ-ಸಾರ್ವಜನಿಕ ಉಪನ್ಯಾಸಗಳೆಂದು ಏನೇನೋ ಮಾತನಾಡುವರು. ಕೇವಲ ಅವರ ಸ್ಥಾನಗೌರವವನ್ನರಿತೇ ಜನರು ಸುಮ್ಮಗಿದ್ದು ಅವರ ಮಾತುಗಳನ್ನು ಕೇಳುವರು. ಈ ಬಗೆಯ ಪ್ರವಾಸಗಳಿಂದ ಪರಿಸ್ಥಿತಿಯನ್ನು ಅರಿತುಕೊಳ್ಳುವ ಉದ್ದೇಶ ಹೇಗೆ ಸಾಧಿಸಬೇಕು?

ಈಗ ನಮ್ಮ ಹೊಸರಾಜ್ಯದಲ್ಲಿರುವ ಮಂತ್ರಿಗಳಿಗೊಂದು ನಮ್ಮ ಕಿವಿಮಾತೆಂದರೆ: ಪರಿಸ್ಥಿತಿಯ ಮೂಲಕ, ಹಿಂದಿನ ಮೈಸೂರು ರಾಜ್ಯದ ಅಧಿಕಾರಿಗಳು ಸನ್ಮಾನಮುಗ್ಧರಾಗಿಯೆ ವರ್ತಿಸುತ್ತಿದ್ದರು. ಈಗ ರಾಜ್ಯ ವಿಶಾಲವಾದುದರಿಂದ, ವಿವಿಧಮನೋವೃತ್ತಿಯ ಜನರ ಸಂಬಂಧ ಈ ರಾಜ್ಯಕ್ಕೆ ಬಂದಿದೆ. ಹೊರಗಿನಿಂದ ಬಂದು ಸೇರಿದ ಜನತೆಗೆ ಅಧಿಕಾರಿಗಳಿಗೆ ಮಾನ-ಸನ್ಮಾನಗಳನ್ನು ಅರ್ಪಿಸುವ ನಾಜೂಕು-ನಯ ಗೊತ್ತಿಲ್ಲ. ಕರ್ತವ್ಯದಕ್ಷರಾದ ಅಧಿಕಾರಿಗಳಿದ್ದರೆ ಅವರಿಂದ ಮಾನ-ಸನ್ಮಾನಗಳು ದೊರಿತಾವೇ ಹೊರತು, ಕೇವಲ ಸ್ಥಾನಮಹಾತ್ಮೆಗೆ ದೊರೆಯಲಾರವು. ಇದು ಮೈಸೂರೇತರ ಜನರ ಒರಟುತನವೆಂದವರು ಭಾವಿಸಬಾರದು; ಪ್ರಾಮಾಣಿಕತನವೆಂದು ಭಾವಿಸಬೇಕು.

ಕನ್ನಡ ಸಾಹಿತ್ಯಸಮ್ಮೇಳನ

ಈ ಸಲದ ಸಾಹಿತ್ಯಸಮ್ಮೇಳನ ಅದೇಕೋ ಉಯ್ಯಾಲೆ ಆಡುವುದರಲ್ಲಿದೆ, ಕಳೆದ ವರ್ಷ ರಾಯಚೂರಿನಲ್ಲಿ ಸಮ್ಮೇಳನ ಸೇರಿದ ಕಾಲದಲ್ಲಿ, ಧಾರವಾಡದ ವಿದ್ಯಾವರ್ಧಕ ಸಂಘವು ಮುಂದಿನ ಸಮ್ಮೇಳನವನ್ನು ಧಾರವಾಡದಲ್ಲಿ ಸೇರಿಸುವುದಾಗಿ ಆಮಂತ್ರಣವಿತ್ತಿದ್ದಿತು. ಆದರೆ ಅದೇಕೋ—ಪರಿಪತ್ತಿನ ಅಧಿಕಾರಿಗಳು ಕರ್ನಾಟಕ ವಿದ್ಯಾವರ್ಧಕ ಸಂಘದ ಬೇಡಿಕೆಯನ್ನು ಗಣನೆಗೆ ತಂದುಕೊಳ್ಳದೆ, ಧಾರವಾಡದಲ್ಲಿ ಸಮ್ಮೇಳನ ಸೇರಿಸುವ ಬಗೆಗೆ ಕರ್ನಾಟಕ ವಿಶ್ವವಿದ್ಯಾಲಯದೊಂದಿಗೆ ಪತ್ರವ್ಯವಹಾರವನ್ನು ನಡೆಸಿದರು. ವಿಶ್ವವಿದ್ಯಾಲಯವೂ ಅವರ ಸೂಚನೆಯನ್ನು ಒಪ್ಪಿಕೊಂಡು, ಸಮ್ಮೇಳನದ ಏರ್ಪಾಟಿನ ಬಗೆಗೆ ಉಪಸಮಿತಿಯೊಂದನ್ನು ನಿಯಮಿಸಿತು. ಧಾರವಾಡದಲ್ಲಿಯೆ ಸಮ್ಮೇಳನ ಸೇರುವುದೆಂಬ ನಿರೀಕ್ಷೆಯಲ್ಲಿಯೆ ಜನರು ಇರುವಾಗ, 'ಧಾರವಾಡದಲ್ಲಲ್ಲ; ಉಡುಪಿಯಲ್ಲಿ ಈ ಸಲದ ಸಾಹಿತ್ಯಸಮ್ಮೇಳನ' ಎಂಬ ವರ್ತಮಾನ, ಕ. ಸಾ ಪರಿಷತ್ತಿನ ಅಧಿಕೃತ ವರ್ತಮಾನವಾಗಿಯೇ ಪ್ರಕಟವಾಯಿತು.

ಈಗ ನೋಡಿದರೆ, ಈ ಸಲದ ಸಾಹಿತ್ಯಸಮ್ಮೇಳನ ಧಾರವಾಡದಲ್ಲಿಯೂ ಇಲ್ಲ; ಉಡುಪಿಯಲ್ಲಿಯೂ ಇಲ್ಲ! ಹಾಗಾದರೆ ಬೇರೆ ಕಡೆಯಲ್ಲಿ? ಡಿಸಂಬರಿನಲ್ಲಿಯೆ ಸಾಹಿತ್ಯಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲಿಕ್ಕೆ ಕರ್ನಾಟಕವಿಶ್ವವಿದ್ಯಾನಿಲಯಕ್ಕೆ ಅವಶ್ಯಕ ಅನುಕೂಲತೆಗಳು ಇರಲಿಕ್ಕಿಲ್ಲ. ಉಡುಪಿಯವರಿಗೆ ಸಾಕಷ್ಟು ಸಮಯ ಕೂಡ ಇಲ್ಲ. ಶ್ರೀಮದಧಮಾರು ಮಠದ ಸ್ವಾಮಿಗಳು, ಮುಂದಿನ ವರ್ಷದ ಸಮ್ಮೇಳನ ನಡೆಸಲು ಒಪ್ಪಿಗೆ ಕೊಟ್ಟಿರುವರಂತೆ. ಹೀಗಿರುವಾಗ ಈ ಸಲದ ಸಾಹಿತ್ಯಸಮ್ಮೇಳನಕ್ಕೆ ಶೂನ್ಯವೇ ಗತಿಯೇನು?

ಕನ್ನಡಸಾಹಿತ್ಯಪರಿಷತ್ತು ಈ ಸಲದ ಸಮ್ಮೇಳನದ ಏರ್ಪಾಡಿನ ಬಗೆಗೆ ಕರ್ತವ್ಯನ್ನರಿತು ಸಕಾಲದಲ್ಲಿ ಕಾರ್ಯ ಮಾಡಲಿಲ್ಲವೆಂದು ಅಡಿಕೊಳ್ಳುವ ಮಾತಿನಲ್ಲಿ ಅರ್ಥವಿದೆಯೆಂದು ಹೇಳಬಹುದು!

ಕನ್ನಡ ಜ್ಞಾನವೃದ್ಧರಿಬ್ಬರಿಗೆ ವಿ. ವಿ. ನಿಲಯದ ಸನ್ಮಾನ

ಕರ್ನಾಟಕ ವಿಶ್ವವಿದ್ಯಾನಿಲಯವು ಈ ಸಲ ಕನ್ನಡಕ್ಕಾಗಿ ದುಡಿದ ಇಬ್ಬರು ಹಿರಿಯರಿಗೆ ಡಿ.ಲಿಟ್ ಗೌರವ ಪದವಿಯನ್ನು ಕೊಟ್ಟು ಸನ್ಮಾನ ಮಾಡಿದುದು ಸಂತೋಷದ ಸಂಗತಿಯಾಗಿದೆ.

ಕನ್ನಡ ಸಾಹಿತ್ಯಪ್ರಪಂಚದಲ್ಲಿಯ ಒಂದು ಅತ್ಯಂತ ಮಹತ್ವದ ಭಾಗವಾದ ವಚನಸಾಹಿತ್ಯ, ಬೆಳಕುಕಾಣದೆ ಕತ್ತಲೆಮನೆಯಲ್ಲಿ ಬಿದ್ದುಕೊಂಡಿತ್ತು. ಅದನ್ನು ಬೆಳಕಿಗೆ ತರಲು ಸಂಪೂರ್ಣ ತ್ಯಾಗಬುದ್ಧಿಯಿಂದ ದುಡಿದವರು ಶ್ರೀಮಾನ್ ಪಿ. ಜಿ ಹಳಕಟ್ಟಿಯವರು. ಇವರು ಬೇರೆ ಸಾಮಾಜಿಕ-ರಾಜಕೀಯ ಕ್ಷೇತ್ರದಲ್ಲಿಯೂ ದುಡಿದಿರಬಹುದು; ಆದರೆ ವಚನಸಾಹಿತ್ಯ ಪ್ರಕಾಶನದ ಬಗೆಗೆ ಮಾಡಿರುವ ಇವರ ಕಾರ್ಯವು ಅತ್ಯಮೂಲ್ಯವಾದುದು. ಇದನ್ನು ಕನ್ನಡನಾಡು ಗೌರವಿಸಲೇಬೇಕಾಗಿತ್ತು. ಈಗ ಕನ್ನಡಿಗರ ಪ್ರತಿನಿಧಿಕ ಸಾಂಸ್ಕೃತಿಕ ಸಂಸ್ಥೆಯಾದ ಕರ್ನಾಟಕವಿಶ್ವವಿದ್ಯಾನಿಲಯ ಅಂತಹ ಗೌರವ ಸಲ್ಲಿಸುವ ಕಾರ್ಯ ಮಾಡಿದುದು ಅದರ ಕರ್ತವ್ಯದೃಷ್ಟಿಗೆ ಸಾಕ್ಷಿಯಾಗಿದೆ.

ಕನ್ನಡನಾಡು ನುಡಿಗಳಾಗಿ ಜೀವನವನ್ನೇ ಮುಡಿಪಿಟ್ಟಂತೆ ಮಾಡಿರುವ ಶ್ರೀಮಾನ್ ಮಾಸ್ತಿ ವೆಂಕಟೇಶ ಐಯಂಗಾರ್ ಅವರಿಗೂ ಕ. ವಿ. ವಿ. ನಿಲಯ ಡಿ. ಲಿಟ್. ಗೌರವಪ್ರಶಸ್ತಿಯನ್ನಿತ್ತಿತು. ಹೊಸಗನ್ನಡ ಸಾಹಿತ್ಯದಲ್ಲಿ ಶ್ರೀ. ಮಾಸ್ತಿಯವರ ನಿರ್ಮಿತಿ ವಿವಿಧ ಮುಖವಾದುದು. ಅಲ್ಲದೆ ಕರ್ನಾಟಕದ ಏಕೀಕರಣಕ್ಕಾಗಿ ತಮ್ಮ ಸೌಮ್ಯ ಸ್ವಭಾವವನ್ನೂ ಮೀರಿ, ಉಗ್ರವಾಗಿ ಚಳವಳಿ ಮಾಡಿದ ಬಂಟರಿವರು. ಕರ್ನಾಟಕ ವಿಶ್ವವಿದ್ಯಾನಿಲಯವು ಅವರ ಕಾರ್ಯಕ್ಕೆ ತಕ್ಕ ಗೌರವ ಸಲ್ಲಿಸಿದುದು ಸಂತೋಷದ ವಿಷಯ.

ಇಬ್ಬರು ಹಿರಿಯರಿಗೂ ನಮ್ಮ ಅಭಿನಂದನೆಗಳು; ಅಭಿವಂದನೆಗಳು!

'ಜಯಂತಿ'ಗೆ ಧನಸಹಾಯ

ರಾಯಚೂರಲ್ಲಿ ತಹಸಿಲ್‌ದಾರರಾಗಿ ಇರುವ ಶ್ರೀಮಾನ್ ಎನ್. ಎನ್. ಕಶಾವಿ ಬಿ. ಎ. ಅವರು ನಾಲ್ಕುವರ್ಷದ ಚಂದಾಹಣ ೨೦ ರೂ. ಗಳನ್ನು ಮುಂಗಡವಾಗಿಯೆ ಕೊಟ್ಟಿದ್ದಾರೆ.

ಅಕ್ಕಲಕೋಟೆಯಲ್ಲದ್ದು ಕನ್ನಡಕ್ಕಾಗಿ ದುಡಿಯುತ್ತಿರುವ ಶ್ರೀಮಾನ್ ಶಂಕರರಾವ್ ಕುಲಕರ್ಣಿಯವರು ಸಹಾಯಧನವೆಂದು ಜಯಂತಿಗೆ ೫ ರೂ. ಗಳನ್ನು ಕಳುಹಿದ್ದಾರೆ.

ಇಬ್ಬರಿಗೂ ಜಯಂತಿಯ ಅಭಿನಂದನೆಗಳು.

ಕಾಲಲ್ಲಿಯುಮುಳ್ಳು

(ಸಣ್ಣಕತೆ)

ಶ್ರೀ. ಕುಲಕರ್ಣಿ ಶಂಕರರಾಯ, ಅಕ್ಕುರಿಕೊಟ್ಟಿ

ಯಾವುದೇ ಒಂದು ಆದಳಿತದಲ್ಲಾಗಲಿ, ಸಂಸ್ಥೆಯಲ್ಲಾಗಲಿ ಅಧಿಕಾರಸ್ಥಾನದಲ್ಲಿ ಇರುವನನು, ಅಧಿಕಾರದ ಹೊಣೆಯನ್ನು ಮರೆತು ಸ್ವಾರ್ಥಿಯಾಗಿ ವರ್ತಿಸಿದರೆ, ಜನತೆಯಲ್ಲಿ ಪ್ರಕ್ಷೋಭವು ಎದ್ದುನಿಲ್ಲುವುದು ಸ್ವಾಭಾವಿಕವಾದ ಸಂಗತಿ! ಮ್ಯಾನೇಜರ್ ಜೀವಣ್ಣ, ಮಾಲಕ ನಂಜಯ್ಯ ಇವರ ಸ್ವಭಾವದಲ್ಲಿ ಎಷ್ಟೊಂದು ಅಂತರ!

ಗಿರಣಿಯ ವಿಶಾಲ ಅವರಣವೆಲ್ಲ ಒಂದೇಸವನೆ ಭಣಗುಡುತ್ತಿತ್ತು--ಸಂತಾನಸಂಪದವಿಲ್ಲದೆ ಸಕಲೈಶ್ವರ್ಯದಿಂದ ಮೆರೆಯುವ ಶ್ರೀಮಂತಸೌಧದಂತೆ; ಅರ್ಥವಿಲ್ಲದ ಶಬ್ದದಂತೆ. ಎತ್ತರವಾದೊಂಯ ಚಿಮಣಿ ಒಣ ಹೊಗೆಯುಗುಳುತ್ತ ನಿಂತಿತ್ತು—ಪರಾಜಿತನು ಉದಾಸೀನಭಾವದ ನಿಟ್ಟುಸಿರುಬಿಡುವ ಹಾಗೆ. ನೂರಾರು ಆರಳೆಗಾಡಿಗಳು ಸಾಲಾಗಿ ಬಿಡಲ್ಪಟ್ಟವೆ—ಬಹುದಿನದ ಪರಿಶ್ರಮದ ನಂತರ ದೊರೆತ ವಿಶ್ರಾಂತಿಸುಖ ಭೋಗಿಸಲೆಂದೇನೊ! ಇದರ ಹೊರತಾಗಿ ಬಲ್ಲಿಯ ಪರಿಸ್ಥಿತಿಯಲ್ಲಿ ಯಾವ ಪರಿವರ್ತನೆಯಾಗಲಿ, ಸಜೀವ ಕಳಿಯಾಗಲಿ ಒಡನಾಡಿ ಬಂದೀತೆಂಬ ಸಂಭವವಿರಲಿಲ್ಲ.

ಏನೆಂತಹ ಬದಲಾವಣೆ ಎರಡೇ ಎರಡು ದಿನಗಳಲ್ಲಿ! ಯಂತ್ರದ ಗಗನಭೇದ್ಯ 'ಫಡ್-ಫಡಕ್-ಫಡ್-ಫಡಕ್-' ಎಂಬ ಸಪ್ಪಳ ಬೆಳಿಗಿನ ಆರುಗಂಟೆಗೆ ಆರಂಭವಾದರೆ, ಸಂಜೆಯ ಐದುಗಂಟೆಯ ಸರಿಗೆ! ನಿರ್ದಿಷ್ಟ ಅವಧಿಗಳಿಗೊಮ್ಮೆ 'ಕೊಂಯ್' ಎಂದು ಚೀರಿ ಸಾವಿರಾರು ಕೂಲಿಗಳಿಗೆ ಕಾರ್ಯಾರಂಭದ ಎಚ್ಚರಿಕೆಯಾಯಿವ ಚಿಮಣಿಯ ಕೂಗು!! 'ಗುಳಕ್-ಗುಳಕ್' ಎಂಬ ಕೊರಳ ಕಿಂಕಿಣಿಯ ನಾದವನ್ನು ವಿಸ್ತರಿಸುತ್ತ ಅಗಳೆ ತುಂಬಿದ ಬಂಡಿಯೆಳೆಯುವ ಭರದಲ್ಲಿ ಮಗ್ನವಾದ ಆ ಮೂಕ ಬಸವಣ್ಣಗಳ ಬಿಡುವಿಲ್ಲದ ಸಾಲಿಗೆ!!! ಹೊಲಸಾದ, ಹರಕಾದ, ಬಟ್ಟೆತೊಟ್ಟು ದುಃಖವೆಷ್ಟಿದ್ದರೂ ಮತ್ತೆ ನಗುತ್ತ ಕೆಲೆಯುತ್ತ ತಮಗಾಗಿ ಮಿಸಲಾಗಿದ್ದ ಕೆಲಸ ಪೂರಯಿಸಲೆಂದೋ, ಪೂರ್ಸಿಸಿಯೋ ಹೋಗಿಬರುವ ಕೂಲಿಗಳ ತಂಡ!!! ಅಬ್ಬಾ! ಗದ್ದಲವೋ ಗದ್ದಲ!! ಅಂತೂ ಇವೆಲ್ಲ ನಿರಂತರವ್ಯವಹಾರಗಳಿಗೆ ಈಗ ಒಂಬತ್ತು ದಿನಗಳಿಂದ ಸೊನ್ನೆ ಬಿದ್ದಿದೆ. ಊರ ಹೊರಗಡೆ ಬಂದು ನೋಡಿದರೆ ನಿಷ್ಪ್ರಭ ಮೌನವೊಂದು ಮಹಾಪ್ರಶ್ನೆ ಹಾಕುವಂತಿದೆ.

ಆದರೆ—? ಇಂತಹ ಮಹಾಪ್ರಶ್ನೆಗೂ ಕೂಡ ಉತ್ತರಿಸುವ ಸ್ವಸಾಮರ್ಥ್ಯವುಳ್ಳವನಂತೆ ಜೀವಣ್ಣ, ಆತ್ತಿತ್ತ ಅಲೆದಾಡಿ ಗಿರಣಿಯ ವಾತಾವರಣವನ ನಿರೀಕ್ಷಣೆ ಮಾಡಿ ಬರುತ್ತಿದ್ದ. ಒಮ್ಮೆ ಆಫೀಸುರೂಮು, ಇನ್ನೊಮ್ಮೆ ಆರಳೆಗಂಟಿನ ವಖಾರು, ಮತ್ತೊಮ್ಮೆ ಯಂತ್ರದ ಮನೆ—ಹೀಗೆ ಆತನ ಸುತ್ತಾಟ ನಡೆದೇ ಇತ್ತು. ಹಾಗೆಲ್ಲ ಸುತ್ತಾಡಿ ಸಾಧಿಸಬಹುದಾಗಿದ್ದ ಜೀವಣ್ಣನ ಪಾಲಿನ ಕರ್ತವ್ಯವಾದರೂ ಏನಿತ್ತೋ ಅವನಿಗೇ ಗೊತ್ತು. ಕೊನೆಗೂ ತನ್ನ ಸುತ್ತಾಟದ ನಿರರ್ಥಕತೆಗೆ ಶರಣುಹೋದ ಜೀವಣ್ಣ, ಆಫೀಸುರೂಮಿನ ವಿರಾಮಾಸನದಲ್ಲೊಮ್ಮೆ 'ಉಶ್' ಎಂದು ನಿಟ್ಟುಸಿರೆಳೆದು ಬಿದ್ದುಕೊಂಡ. ಎದುರುಗೋಡೆಯ ಮೇಲೆ ಮಾಲಕ ನಂಜಯ್ಯನವರ ಭವ್ಯ ಭಾವಚಿತ್ರವೊಂದು. ಎಡಕ್ಕೂ, ಬಲಕ್ಕೂ ಇಬ್ಬರು ಮೇನೇಜರುಗಳ ಫೋಟೋಗಳು—ನಂಜಯ್ಯನವರ ಅತಿ ಮೆಚ್ಚುಗೆಯ ಮೇನೇಜರ್ ಶ್ರೀಕಂಠನ್ಯನದೊಂದು; ಜೀವಣ್ಣನದೊಂದು ಸದ್ಯ ಅವರಲ್ಲಿ ಬದುಕಿರುವವನೆಂದರೆ ಜೀವಣ್ಣನೊಬ್ಬ. ಹತ್ತಾರು ವರ್ಷಗಳ ಸೇವೆ ಸಲ್ಲಿಸಿ ಮಾಲಕರಿಂದ 'ಭಲಾ' ಎನ್ನಿಸಿಕೊಂಡು, ಎರಡು ತಿಂಗಳ ಹಿಂದೆಯೆ ಶ್ರೀಕಂಠಪ್ಪ ಕೊನೆಯಸಿರು ಹಾಕಿದ್ದ. ಗಿರಣಿಯಲ್ಲಿ ತಯಾರಾಗುತ್ತಿರುವ ಮಾಲಿನಲ್ಲಿ ಹೆಚ್ಚಳ ಉತ್ಪನ್ನದಲ್ಲಿಯ ವಿಸ್ತರಣೆ ಇವುಗಳಿಗಾಗಿ ಅತ ವ್ಯಯಮಾಡಿದ ಶ್ರದ್ಧೆ-ಬುದ್ಧಿ-ದೇಹಗಳ ಶ್ರಮ ಹಾಗೂ ಪ್ರಾಮಾಣಿಕತೆಗಳು ಸಣ್ಣ ಪ್ರಮಾಣದುವುಗಳಲ್ಲ. ಎರಡೇ ಎರಡು ವರ್ಷಗಳಲ್ಲಿ ಹಾಕಿದ ಯಂತ್ರದ ಸಂಖ್ಯೆ, ಹತ್ತಾರು ವಖಾರು ಹಿಡಿಯುವಷ್ಟು ಹೆಚ್ಚಿದ್ದುವು. ತಿಂಗಳು-ತಿಂಗಳಿಗೂ ಸಾವಿರ, ಹತ್ತುಸಾವಿರದ ಪ್ರಮಾಣವಂತೆ ಆದಾಯ ಮಿಕ್ಕುತ್ತಿತ್ತು. ಇದಲ್ಲದೆ ದಿನವಿಡೀ ಶ್ರಮಿಸುವ ಕೂಲಿಗಳ ಸಂಬಳದಲ್ಲೂ 'ಬಢತಿ' ದೊರೆಕಿಸಿಕೊಟ್ಟಿದ್ದ. ಅತನ ಆಳಿಕೆಯ ಕಾಲವೆಂದರೆ ಕೂಲಿಗಳ ಪಾಲಿನ ರಾಮರಾಜ್ಯ. ದರ್ಪಾತೀತ ಸ್ವಭಾವದ ಸಜ್ಜನಿಕೆಯಿಂ. ಕೂಲಿಗಣದಲ್ಲಿಯ ಯಾವನೂ, ಮಾಲಕರ ಹತ್ತಿರ ತೋರಿಸಲಾರದಷ್ಟು ಭಯ-ಭಕ್ತಿಗಳ ಪ್ರದರ್ಶನ ಮಾಡುತ್ತಿದ್ದ. ಇದನ್ನು ಒಮ್ಮೊಮ್ಮೆ ಕಂಡ ನಂಜಯ್ಯನವರಿಗೆ

ಮುತ್ತರವಿಲ್ಲ : "ಏನೋ, ನಮ್ಮ ಶ್ರೀಕಂಠಪ್ಪನ್ನ ಕಂಡರೆ ಕೂಲಿಗಳು ಬಿದ್ದು ಸಾಯ್ತಾರೆ! ಎಂಥ ಪ್ರೇಮ, ನಿಶ್ವಾಸಗಳಿಸಿಕೊಂಡಿದ್ದಾನೆ! ಅತನ ಪುಣ್ಯದಿಂದಲೇ ನಮ್ಮ ಗಿರಣೀಲಿ ಪ್ರಾಮಾಣಿಕತೆಗೂ ಕರ್ತವ್ಯ-ನಿಷ್ಠೆಗೂ ಸ್ಥಳ ಉಳಿದಿರೋದು! ಇಲ್ಲಾದ್ದರೆ ದಿವಾಳಿ ಕಟ್ಟುಬಹುದಿತ್ತು!"—ಎಂದು ಆನಂದವೂ ಅಭಿಮಾನವೂ ಎದೆಯುಬ್ಬಿ ಬಂದಾಗ ನುಡಿದು, ಬಾಯಿತುಂಬಾ ನಕ್ಕುಬಿಡುತ್ತಿದ್ದರು. ನಂಜಯ್ಯ ಎಂದೂ ನಿಷ್ಕಾರಣ ಪ್ರಬಂಧ ಹಾಕುತ್ತಿರಲಿಲ್ಲ. ಶ್ರೀಕಂಠಪ್ಪನ ಮೇಜನೆಗೆ; ಆದರೆ ಸಾವು ಮಾತ್ರ ಅತನ ಆಯುಷ್ಯವಾಹಕ್ಕೇನೇ ತಡೆಯಾಕಿ ನುಂಗಿಬಿಟ್ಟಿತು—ಅಕಸ್ಮಿಕವಾಗಿ. ಆ ರಾತ್ರಿ ಗಿರಣಿಯ ಆವರಣ ಮೂಕಶೋಕಕ್ಕೀಡಾಗಿ ತೊಳಲಾಡಿತು. ಮಾಲಕರ ಕಣ್ಣು ಕೆಂಪಾಗಿದ್ದುವು ಅತ್ತು ಅತ್ತು. ಕೂಲಿಗಳ ಕಂಠ ಮಳಿಗಾಲದ ನಗಾರೆಯಾಗಿದ್ದುವು ಜೋರಿ ಜೋರಿ. ಅಂತಹ ಹೃದಯವಿದಾರಕ ವಿಷಾದ ನಿಮಿಷದಲ್ಲೂ ಜೀವಣ್ಣ ಮಾತ್ರ ಕಠೋರನಂತೆ ಕುಳಿತು ಸಾಂತ್ವನ ಹೇಳುತ್ತಿದ್ದ. ತನ್ನ ಪ್ರತಿಷ್ಠೆಯ ನೆವ್ತೆತ್ರೆ ಇನ್ನು ಸಹಜವಾಗಿಯೇ ಏರುವುದೆಂಬ ಸೊಗಸಿನ ಭವಿಷ್ಯತ್ತನ್ನು ಚಿತ್ರಿಸಿಕೊಂಡು ಒಳಗೊಳಗೆ ನೆಮ್ಮದಿಪಡುತ್ತಿದ್ದ. ಆ ನಿರೀಕ್ಷೆ ಭಾವನೆಯಾಗಿಯೇ ಉಳಿಯದೆ ಪ್ರತ್ಯಕ್ಷ ಸ್ವರೂಪಕ್ಕೆ ಇಳಿದೇ ಬಿಟ್ಟಿತು. ನಂಜಯ್ಯ ಹೆತಾಶರಾಗಿ 'ನೋಡು ಜೀವಣ್ಣ, ನಮ್ಮ ಗಿರಣಿಯ ಜುಣ ತೀರಿಹ್ವೋಗಿ ಶ್ರೀಕಂಠಪ್ಪ ಅಗಲಿಹೋಗಿಬಿಟ್ಟ. ಇನ್ನು ಕೂಲಿಗಳನ್ನು ಸಂಭಾಳಿಸೋ ಹೊಣೆ, ಇತರ ಎಲ್ಲಾ ವ್ಯವಸ್ಥೆ ಮಾಡೋ ಭಾರ ನಿನ್ನ ಮೇಲೆ! ತಿಂಗಳಿಗೊಮ್ಮೆ, ಎರಡು ತಿಂಗಳಿಗೊ ಇತ್ತ ಬರೋದಕ್ಕೂ ನನಗೆ ಕವಕಾಶವಿಲ್ಲ. ಮುಖ್ಯ ಶ್ರೀಕಂಠಪ್ಪ ಹೇಳುತ್ತಿದ್ದಂತೆ, ಕೂಲಿಗಳೆಂದರೆ ಮನುಷ್ಯರು; ಅವರ ಕೂಡ ಮನುಷ್ಯರಂತೆ ನಡೆದುಕೊಂಡರೆ ಯಾವ ಅಭ್ಯಂತರಾನೂ ಇಲ್ಲ! ನಿನ್ನನ್ನೇ ಮುಖ್ಯ ಮೇನೇಜರು ಅಂತ ನಿಯಮಿಸಿದ್ದೇನೆ. ತಿಳೀತೇ?"—ಎಂದು ಜೀವಣ್ಣನೆಮರು ನುಡಿಮುತ್ತು ಕಣ್ಣಂಚಿನಲ್ಲಿ ಮೂಡಿದ್ದ ಅಶ್ರುಬಿಂದುಗಳನ್ನು ಒರೆಸಿಕೊಂಡರು. ಜೀವಣ್ಣನ ಜೀವದಲ್ಲಿ ಈಗ ಹೊಸ ಶಕ್ತಿ—ಅದರೊಂದಿಗೆ ಅಧಿಕಾರಪ್ರಾಪ್ತಿಯ ಸಹಜ ಹೆಮ್ಮೆ ಒಡಮೂಡಿಕೊಂಡಿತ್ತು. ಬಿಗುವಾನದಿಂದ "ಬಿಡಿರಿ ಕಾಳಜೀ ನಂಜಯ್ಯನೋರೇ! ನನಗೆ ಯಾವ್ದು ಹೊಸದಾ ಅಂತ ಹೇಳ್ತೀರಿ? ಶ್ರೀಕಂಠಪ್ಪನೊಂದಿಗೆ ಕೆಲಸಮಾಡಿ ಜೇಕಾದಷ್ಟು ಅನುಭವಾ ಹೊಂದೀನಿ. ಏನಾದರೂ ಸುಧಾರಣೆ ಮಾಡಬೇಕಿದ್ದರೆ 'ಜೀವಣ್ಣಾ' ಅಂತ ಹೆಸರೆತ್ತ ಬೇಡಿರಿ!" ಎಂದು ಸ್ವಭಾವಸಹಜವಾದ ಆತ್ಮಾಭಿಮಾನದಿಂದ ಉಸಿರೆತ್ತಿದಾಗ, ಮಾಲಕರ ವಿಕಲಿತ ಹೃದಯದಲ್ಲೂ ಹರ್ಷದ ಉಬ್ಬರ ಬಂದು, ಕಣ್ಣಲ್ಲಿ ಭರವಸೆಯ ಬೆಂಬಲ ಹರಿದಾಡಿತು. ಮುಂದೆ ಎಂಟೇ ಎಂಟು ದಿನಗಳಲ್ಲಿ ಜೀವಣ್ಣನ ಚಿಕ್ಕ ಮಾಲಕರ ಭಾವಚಿತ್ರದ ಬದಿಗೆ ಒಳ್ಳೇ ಆಡಂಬರದಿಂದ ಹೆರೆಯಿಲಾರಂಭಿಸಿತು. ಅದೇ ಆ ತನ್ನ ಚಿತ್ರವನ್ನು ಕಟಕ್ಕನೆ ಜೀವಣ್ಣ ನೋಡಿದ. ಅಪ್ರಯತ್ನವಾದ ಮುಗುಳ್ನಗೆಗೆ ಅತನ ಮುಖಮಂಡಲದ ಮೇಲೆ ತೇಲಾಡಿತು.

ಜೀವಣ್ಣನ ಜೀವನದಲ್ಲಿ ಇಮ್ಮನಸಿಗೆ ಸಾಧಿಸಬಹುದಾಗಿದ್ದ ಬಯಕೆಗಳಲ್ಲಿ ಮೇನೇಜರು ಪದ ಅತ್ಯುಚ್ಚಶಿಖರ. ಅದಕ್ಕಾಗಿ ಈ ಮೊದಲು ಹಂಬಲಿಸಿಯೂ ಇದ್ದ; ಹರೋತ್ಸವಾಗಿ ಯತ್ನಿಸಿಯೂ ಇದ್ದ. ಮೇಲೆ ಶ್ರೀಕಂಠಪ್ಪನ ಕುರಿತು ತೋರಿಕೆಯ ಸಹಾನುಭೂತಿಯಿವ್ವರಿ, ಅಂತರಂಗದಲ್ಲಿ ಪೂರ್ಣವಾಗಿ ವಿಷಭಾವ ಪರಿಪಾಕವಾಗಿತ್ತು. ಸಮಯ ಬಂದಾಗ ಕೂಲಿಗಳ ಪಕ್ಷಹಿಡಿದು, ಮಾಲಕರ 'ವತಿ' ಸೇರಿ, ಎಷ್ಟೋ ಸಲ ಹಣದ ಅಂಕಿ-ಸಂಖ್ಯೆಗಳ ನೆರೆ ಸಂಗ್ರಹಿಸಿ ವಾದಮಾಡಿದ್ದೂ ಆಗಿತ್ತು. ಆದರೆ ವಿಶಾಲಹೃದಯಿಯಾದ ಶ್ರೀಕಂಠಪ್ಪನ ಪದ್ಮಜ್ಞಾನ-ವಾರಪೂರ್ಣವರ್ತನೆಯ ಕಾರಣದಿಂದ, ಜೀವಣ್ಣ ಕಟ್ಟಿದ ಯಾವ ಆಶಾಗೋಪುರಗಳೂ ಗಾಳಿಗೋಪುರಗಳಾಗಿ ಹೋಗದಿರಲಿಲ್ಲ. ಸದ್ಯ ಮಾತ್ರ ಪ್ರಸಂಗವೊದಗಿಸಿ ಕೊಡದ್ದನ್ನು ದೈವವೊದಗಿಸಿಕೊಟ್ಟಿತ್ತು. ಅನಿರೀಕ್ಷಿತವಾಗಿ. ಕಾಲಲ್ಲಿ ಅಡ್ಡಬಿದ್ದ ಮುಳ್ಳೊಂದು ಸರಿದು, ನಡೆಯ-ಬೇಕಿರುವ ದಾರಿ ನಿಷ್ಕಂಟಕವೆನಿಸಿತ್ತು.

ವಿರಾಮಾಸನದಲ್ಲಿ ಬಿದ್ದುಕೊಂಡ ಜೀವಣ್ಣನ ವಿಚಾರ ಹೀಗೆ ಭೂತಲೋಕವಲ್ಲೊಮ್ಮೆ ವಿಹರಿಸಿ ಬಂತು. ಎತ್ತಿದ ಮಣ್ಣು ಇದ್ದು-ದಿದ್ದಂತೆ ಚಿನ್ನವಾದರೆ, ತಾನೊಬ್ಬ ಅಸಾಧಾರಣ, ಅದ್ಭುತ ಮಾಂತ್ರಿಕ ನೆಂದು ಭಾವಿಸದಿರುತ್ತಾನೆಯೆ ಜೀವಿ? ಅಂತಾಗಿತ್ತು ಜೀವಣ್ಣನಲ್ಲಿಯ ಸ್ವಾತ್ಯಂತರ. 'ಸಾವಿರ ಕೂಲಿಗಳ ಜೀವನನಿರ್ವಹಣೆಗಾಗಿ ಪರಿಹಾರ ತೋರಿದ ತನ್ನ ಶಕ್ತಿಯೇನಾದರೂ ಸಣ್ಣದೆ? ಲಕ್ಷಗಟ್ಟಲೆ ರೂಪಾಯಿ ಎಣಿಸಿ ವ್ಯವಹರಿಸುವ ತನ್ನ ವ್ಯಕ್ತಿಮತ್ತೆಯೇನಾದರೂ ಕಿರಿಯದೆ? ಮನಸ್ಸುಮಾಡಿದರೆ ಮಾಲಕರಂತೆ ಕಲ್ಲುಮಣ್ಣಿನ ಮಸಡಿಯೇಕೆ? ಸುವರ್ಣ ಸೌಧವನ್ನಾದರೂ ನಿರ್ಮಿಸಬಹುದು'—ಇಂಥ ಸದೋಷ ಕಲ್ಪನೆವಿಕಲ್ಪನೆಗಳು ಅವನಪ್ಪಣೆಯಿಲ್ಲದೆಯೆ ತಲೆಯಲ್ಲಿ ಸೇರಿ, ಮಿಷ್ಯಾಮನೆಗಳ ಜಾತ್ರೆ ನಡೆಯಿಸುತ್ತಿದ್ದುವು. ಅದಕ್ಕೆಂದೇ ಕೂಲಿ-ಯವರ ಕುರಿತಾಗಿದ್ದ ಸಹಕಾರ, ಸಮತೆ, ಸಹಾನುಭೂತಿಗಳು ದಿನ-ಕ್ರಮಕ್ಕೂ ತಾವಾಗಿಯೇ ಕರಗಿದ್ದುವು ಜೀವಣ್ಣನ ಹೃದಯದಲ್ಲಿ. ಬೆಳಗಿನ ಐರುಗಂಟೆಗೆ ಚಿಮಣಿ ಹಾಕುವ ಸಿಳ್ಳಿನ ಅವಧಿಯೊಳಗಾಗಿ, ಎಲ್ಲ ಕೂಲಿಗಳೂ ತಮ್ಮ ತಮ್ಮ ಕೆಲಸದ ಮೇಲೆ ಉಪಸ್ಥಿತರಿರಬೇಕು. ಒಂದೇ ಒಂದು ನಿಮಿಷ ವಿಲಂಬವಾದರೆ, ಅಂದಿನ ಕೂಲಿಯು ನೇತನದಲ್ಲಿ ಕಡಿತ. ಇಪ್ಪತ್ತು ಅಲ್ಲದೆ, ಕೊಡತಕ್ಕ ನೇತನವಾದರೂ ಮಾಸಾಂತ್ಯಕ್ಕೆ ಸರಿಯಾಗಿ ಕೂಲಿಗಳ ಕೈ ಸೇರಬೇಡವೆ? ಯಾವುದೋ ನೆಪ ಮುಂದೆ ಮಾಡಿ, ಹಕ್ಕಾರು ದಿನ ವ್ಯರ್ಥ ಜಾಗ್ರಾಡುತ್ತಿದ್ದ. ಹೀಗಾಗಿ ಎಷ್ಟೋ ಜನ ಎರಡೆರಡು ದಿನ ನಿರುಪಾಯ ನಿರಶನವ್ರತ ಕೈಕೊಳ್ಳಬೇಕಾಗು-ತ್ತಿತ್ತು. ಸ್ವತಃಸಿದ್ಧ ಜೀವಣ್ಣನ ಅಧಿಕಾರಯುಕ್ತ ಮಾರ್ಗದರ್ಶ-ನ್ಯಾಯಿಸ್ಟೆ, ಬಡಪಾಯಿ ಕೂಲಿಗಳ ದುಡಿತಕ್ಕೂ ತೀವ್ರವಾದ ಮಹದಂತರ ರೂಢಿಸವಾಗಲು ಅವಕಾಶ ಬೇಕಿರಲಿಲ್ಲ. ಅಂತಹದೊಂದು ಮಹ-ದಂತರದ ಪರಿಣಾಮವೇ ಈಗಿರಡು ದಿನಗಳ ಸಂಪಿಗೆ ಮೂಲ ಕಾರಣ. ಗಿರಣಿಯ ಇತಿಹಾಸದಲ್ಲೇ ಅತಿ ದುರ್ಧರಪ್ರಕರಣದ ಪ್ರಸಂಗವಿದು.

ಇನ್ನೊಂದು ಉಸಿರುಹಾಕಿದ ಜೀವಣ್ಣ. ಅತನ ಕಟ್ಟು ಹೃದಯ ಎಷ್ಟೇ ದೃಢಧೈರ್ಯದ ಆಶ್ರಯವಾಗಿದ್ದರೂ, ಅಲ್ಲೊಂದು

ವಿಚಾರಸನುಸ್ಯೆಯ ಭೂತಚೇಷ್ಟೆ ನಡೆದೇ ಇತ್ತು. ಮೇಜಿನಮೇಲೆ ಕೈಯಾಡಿಸುತ್ತಿದ್ದಂತೆ ಎಂದೇ ಕೈಸೇರಿದ ನಂಜಯ್ಯನವರ ಪತ್ರ ದೊರೆಕಿತು ಓದಾಟದ ಅವಸರದಲ್ಲಿ, ವಿಚಾರದ ಗದ್ದಲದಲ್ಲಿ ಅದನ್ನು ಓದಿಂಲೇ ಇಲ್ಲ. ಏನಾದರೂ ಕುಶಲವಾರ್ತೆ ಗೀಚಿಕೊಂಡಿರಬಹುದೆಂಬ ನಂಬುಗೆಯಿಂದ ಬಿಟ್ಟುಬಿಟ್ಟಿದ್ದ. ಆದರೆ ಸದ್ಯ ಮೈತುಂಬಾ ಕಣ್ಣಾಗಿಸಿ ಓದತೊಡಗಿದ್ದ :

"ಜೀವಣ್ಣಾ, ನನಗೆ ಮೈತುಂಬ ಕೆಲಸವಿದ್ದುದರಿಂದ, ಈಗೆ. ರಡು ತಿಂಗಳವಧಿಯಲ್ಲಿ,' ಬೇಕಾದಷ್ಟು ನೀರೀಕ್ಷಿಸಿ ಅವಕಾಶ ಸಾಧಿಸಿ ಕೊಂಡರೂ ಬರುವುದಶಕ್ಯವಾಯಿತು. ಕೆಲವು ದಿನಗಳ ಹಿಂದೆ ಅಶನುತಾಬಾದಿಗೆ ಹೋಗಿದ್ದಾಗ ಒಂದು ಸಂಗತಿ ಘಟ್ಟಿಸಿತು: ಮಿಲ್ಲಿನ ಮಾಲಕರೊಬ್ಬರು ತಮ್ಮೊಂದಿಗೆ ಸಹಭಾಗಿಗಳಾಗಿ ಮಿಲ್ಲೊಂದನ್ನು ನಡೆಯಿಸಿದರೆ ಹಿತವಾದೀತೆಂದು ಬಯಸಿದರು. ನನಗೆ 'ಹೂ' ಎನ್ನದೆ ಗತಿಯಿರಲಿಲ್ಲ. ಇನ್ನೊಂದು ತಿಂಗಳು ಕಳೆಯುವುದರೊಳಗಾಗಿ ಆ ಮಿಲ್ಲು ಆರಂಭವಾಗಬಹುದು. ಇರಲಿ, ನಮ್ಮ ಗಿರಣಿಯ ಎಲ್ಲ ಕೆಲಸಗಳೂ ವ್ಯವಸ್ಥಿತವಾಗಿ ಸಾಗಿವೆಯಷ್ಟೆ? ಬಹಳ ದಿನಗಳಿಂದ ಮನಸ್ಸು ನನ್ನ ಕೂಲಿಗಳ ಭೆಟ್ಟಿಗಾಗಿ ಹಾತೊರೆಯುತ್ತಿದೆ. ಇನ್ನೆರಡು ದಿನಗಳಲ್ಲಿ ಹೊರಬರುವೆ''—ಪತ್ರ ಓದುತ್ತಿದ್ದಂತೆ ಜೀವಣ್ಣನ ಎದೆಯಲ್ಲಿ 'ಧಡಕ್' ಎಂದಂತಾಯಿತು—ವೇಗವಾಗಿ ಓಡುವ ರೈಲು ಒಮ್ಮಿಂದೊಮ್ಮೆ ನಿಂತಂತೆ. ಕೂಲಿಗಳ ಬಗೆಗಿದ್ದ ಮಾಲಕರ ಮನುಷೆ. ಯನ್ನೋದ್ದುತ್ತ ತೀವ್ರ ತಿರಸ್ಕಾರ ಮೂಡಿತು ಮನಸ್ಸಿನಲ್ಲಿ. ಅದ' ರೊಂದಿಗೆ ಬರೆಯನ್ನು ಎಳೆದಂತಾಯ್ತು 'ಇನ್ನೆರಡು ದಿನಗಳಲ್ಲಿ ಬರುವೆ' ಎಂದು ನಂಜಯ್ಯ ಬರೆದದ್ದು. ಅವನ ಕಣ್ಣೆದುರಿ ಎಸ್ಟೋ ಹೊತ್ತು ಮಂಜುಮಂಜಾಗಿ ತೋರಿದಂತಾಯಿತು. ಸದ್ಯ ತಾನು ಮಾಡಬೇಕಾದುದೇನು? ಮಾಡಬೇಕಾದುದೇನು? ಎರಡು ದಿನಗಳಿಂದ ಆರಂಭವಾದ ಸಂಪಿನ ಸುದ್ದಿಯನ್ನು ಇನ್ನೂ ನೆರೆಗೆ ನಂಜಯ್ಯನವರಿಗೆ ಒಂದು ಪತ್ರ ಬರೆದು ತಿಳಿಸಲಿಲ್ಲ. ನಾಳೆ ಬಂದವರು ಈ ರುದ್ರ ವಾತಾವರಣ ನೋಡಿ ಏನೆಂದುಕೊಂಡಾರು? ಹೇಗಾದರೂ ನೂಡಿ ಕೂಲಿಗಳಿಗೆ ಸಮಾಧಾನ ಹೇಳಿ ಇಂದು ಕೆಲಸಕ್ಕೆ ಬರುವಂತೆ ಮಾಡದಿದ್ದರೆ ಗತಿ ನೆಟ್ಟಗಾಗದು. ಮಾಲಕರು ಬರುವುದರೊಳಗಾಗಿ ಪುನಶ್ಚ ಪೂರ್ವವ್ಯವಸ್ಥೆಮಾಡಿ ಅವರ ಮನಸ್ಸನ್ನು ಸಮಾಧಾನ. ಗೊಳಿಸಬೇಕು. ಇಲ್ಲದಿದ್ದರೆ.... '—ಹೀಗೊಂದು ವಿವೇಕವಿಚಾರ ಜೀವಣ್ಣನ ತಲೆಯ ಬಾಗಿಲವರೆಗೂ ಬಂದು ಎಚ್ಚರಿಕೆ ಕೊಟ್ಟಾಗ, ವಿರಾಮಾಸನ ಬಿಟ್ಟು ಹೊರಬಂದು ಮೆಲ್ಲಗೆ ಅವರಣದ ಹೊರಗಡೆ ಕಾಲುಹಾಕತೊಡಗಿದ. ಒಮ್ಮೆ ದುರಭಿಮಾನವೂ, ಅಧಿಕಾರಮದವೂ ಅವನ ಮನಸ್ಸಿನಲ್ಲಿ ವಿಪರೀತ ಪರಿವರ್ತನೆ ಸಾಧಿಸಲು ಹೆಣಗದಿರಲಿಲ್ಲ. ಆದರೆ ಆ ತೀರದಲ್ಲಿ ಭವಿಷ್ಯ ದುರಂತವಾಗಿತ್ತು ಜೀವಣ್ಣನ ಆಲೋ. ಚನೆಯ ಮೇರೆಗೆ. ಅವಕ್ಕೆಂದೇ ಸರಳ ಹೃದಯಿಯಂತೆ ಪ್ರಭಾವಿಸಿ ಮುಂತೆ ಕೂಲಿಗಳ ಛತ್ರದಪತ್ರ ಸಾಗಿದ್ದ.

ಜೀವಣ್ಣನ ಭಾವನೆಯು ಬಾನು ತರ್ಕಕಲುಷಿತವಾಗಿತ್ತು. ಅಂತಹ ಕಲುಷಿತ ಅವಸ್ಥೆಯಲ್ಲೂ ವ್ಯಕ್ತಿಯೊಬ್ಬನ ನೆನಪು ಫಳಾರನೆ ಮಿಂಚಿನಂತೆ ಮೂಡಿಬಂದಿತು. ದೊರೆಸ್ವಾಮಿಯೇ ಆ ವ್ಯಕ್ತಿ. ಆತನ ನೆನಪು ಬಂದಾಗ, ಜೀವಣ್ಣನ ದೇಹದ ಭಾರ ಅರ್ಧ ಇಳಿದಂತಾ ಯಿತು.

ದೊರೆಸ್ವಾಮಿ ಎಲ್ಲ ಕೂಲಿಗಳಲ್ಲೂ, ಸ್ವಲ್ಪ ಮೇಲುವರ್ಗದ ವ್ಯಕ್ತಿತ್ವ ಹಾಗೂ ಪದವಿ ಪಡೆದ ಮನುಷ್ಯ. ಶಿಕ್ಷಣದ ರುಚಿಯುಂಡು ಪರಿಸ್ಥಿತಿಯು ಅನನುಕೂಲತೆಗೆ ಶರಣಾಗತಿಯೊಪ್ಪಿ, ಗಿರಣಿಯ ದುಡಿ ಮೆಗೆ ಬಂದು ನಿಂತವ. ಇನ್ನಿತರ ಅಜ್ಞಾನಿ ಕೂಲಿಗಳೊಡನೆ ಸಹ. ಕರಿಸಿ ಅವರಿಲ್ಲರ ಪ್ರೀತಿ.ವಿಶ್ವಾಸಕ್ಕೆ ಪಾತ್ರನಾದ ಜೀವಿ. ಒಬ್ಬ ದೇಶಸುಧಾರಕನ, ಸಮಾಜಸೇವಕನ ಉದಾತ್ತ ಶಕ್ತಿ ಪಡೆದಿತ್ತು. ಪ್ರತಿನ ವಾಣಿ. ಒಮ್ಮೊಮ್ಮೆ ಸಾವಿರ ಕಂಠಗಳ ಪಕ್ಷವಾಗಿ ತಾನೊಬ್ಬನೇ ಕಂಠಬಿಚ್ಚಿ ನುಡಿಯುವಷ್ಟು ಅವಿರೋಧ ಪ್ರಾತಿನಿಧ್ಯ ವಹಿಸುತ್ತಿದ್ದ. ಕಾರಣ ಮಾಲಕರಿಗಾಗಲಿ, ಮೇನೇಜರರಿಗಾಗಲಿ, ದೊರೆಸ್ವಾಮಿ ಇಲ್ಲದೆ ಕೂಲಿಗಳ ಹಿತಚಿಂತನೆಯನ್ನು ಎಂದೂ ಮಾಡಲಾಗುತ್ತಿರಲಿಲ್ಲ. ಅವನನ್ನು ಕಟ್ಟಿಕೊಂಡೇ ಶ್ರೀಕಂಠಪ್ಪ ತನ್ನ ಪಾಲಿನ ಹೊಣೆಯ ಬೇಳೆ ಬೇಯಿಸಿಕೊಳ್ಳುತ್ತಿದ್ದ. ಆಷ್ಟೇಕೆ, ಪ್ರತಿ ತಿಂಗಳಿನ ಕೂಲಿಗಳ 'ಸಂಬಳ' ಹೆಂಚುವ ಅಧಿಕಾರದ ವರೆಗೂ ಏರಿಸಿ, ನಂಜಯ್ಯನವರ ನಂಬಿಗೆಯ ಮಟ್ಟಿಗೂ ಆತನ ಯೋಗ್ಯತೆಯ ಬೆಳಕನ್ನು ತೋರಿಸಿಕೊಟ್ಟಿದ್ದ. ಆದರೆ ಜೀವಣ್ಣ ಮಾತ್ರ ತನ್ನ ಅಹಂಭಾವವೃತ್ತಿಯಿಂದ, ಸ್ವಾರ್ಥ. ಲಾಲಸಾತಂತ್ರದಿಂದ ದೊರೆಸ್ವಾಮಿಗೆ ಕೊಡಬೇಕಿರುವ ಮಹತ್ವವ ನನ್ನಾಗಲಿ, ಮಾನ ಸನ್ಮಾನವನ್ನಾಗಲಿ ಕೊಡುತ್ತಿರಲಿಲ್ಲ. ಒಮ್ಮೆ ಯಾವುದೋ ಪ್ರಸಂಗ; ಇಬ್ಬರಿಗೂ ಬಾಯಿ-ಬಾಯಿ ಹತ್ತಿ, ಪರಸ್ಪರರ ಹೃದಯದಲ್ಲಿ ದ್ವೇಷದ ಬೀಜ ಬಿದ್ದುಹೋಯ್ತು. ಜೀವಣ್ಣನನ್ನು ಕಂಡರೆ ದೊರೆಸ್ವಾಮಿಗೆ ಆಗುತ್ತಿರಲಿಲ್ಲವಾದರೂ, ಮನಸ್ಸಿನ ವಿವೇಕ ವನ್ನು ಕಳೆದುಕೊಂಡು ಹೀನನಂತೆ ವರ್ತಿಸುವಷ್ಟು ದುರ್ಬಲನಾಗಿರ ಲಿಲ್ಲ. ಸ್ವಾಮಿನಿಷ್ಠೆ ಸ್ವಭಾವಿಯಾದ ಆತ, ಇಲ್ಲಿಯವರೆಗೆ ಸಹನೆಯ ಆಹಿಗುಳಿಗೆ ನುಂಗಿ ಸುಮ್ಮನಿದ್ದ. ಆದರೆ ಸಹನೆಗೂ ಸೀಮೆಯಿಲ್ಲವೆ? ಕೂಲಿಗಳಗಾಗುತ್ತಿದ್ದ ಅನ್ಯಾಯ ಪರಾಕಾಷ್ಠೆಗೇರಿದಾಗ, ಜೀವಣ್ಣ ನನ್ನು ಚಕ್ರಕ್ಕೆ ಸಿಕ್ಕಿಸಬೇಕೆಂದು, ಕೂಲಿಗಳಿಗೆಲ್ಲಾ ಸಂಪಿನ ಸೂಚನೆ ಯಿತ್ತಿದ್ದ ದೊರೆಸ್ವಾಮಿಯ ಅತ್ಯ ಸಾಮರ್ಥ್ಯದ ಅನುಭವ ಜೀವಣ್ಣ ನಿಗೆ ಹಿಂಮುಗಡೆ ಬಂದಿತು. ಆ ಸಾಮರ್ಥ್ಯದ ಮುಂದೆ ತಲೆಬಾಗಿಸದೆ ಗತಿಯಿಲ್ಲವೆಂದೇ ಅತನ ಬಳಿಗೆ ಹೋಗಲು ಸದ್ಯ ವಿಚಾರಮಾಡಿದ್ದ.

ಅವರಣದಿಂದ ಕೇವಲ ಫರ್ಲಾಂಗಿನಷ್ಟು ಅಂತರದಲ್ಲೇ ಕೂಲಿಗಳ ಛತ್ರ. ಅದನ್ನು ಬಿಟ್ಟು ಇನ್ನೂ ಸ್ವಲ್ಪ ದೂರದಲ್ಲಿ ದೊರೆಸ್ವಾಮಿಯ ಮನೆ. ಜೀವಣ್ಣ ಛತ್ರವನ್ನು ಸಮೀಪಿಸಿದಾಗ, ಅಲ್ಲೊಂದು ಎಂತ ಹದೋ ಗದ್ದಲ ಮನೆಮಾಡತೊಡಗಿತ್ತು. ಆಂಜನೇಯನ ಗುಡಿಯ ವಿಸ್ತರಣದಲ್ಲಿ ಒಬ್ಬೊಬ್ಬರೇ ಕೂಲಿಗಳು ಸೇರತೊಡಗಿದ್ದರು. ಏನೋ ಮಹತ್ವದ ಘಟನೆ ಜರುಗಲಿದೆಯೆಂದು ಜೀವಣ್ಣ ಒಮ್ಮೆ ನಿಂತು ಯೋಚಿಸಿದ. "ಬಹುಶಃ ಸಂಪಿನ ಮುಕ್ತಾಯ ಮಾಡಿ ಕೆಲಸಕ್ಕೆ

ಹೋಗಬೇಕಾಗಿ ಕೂಲಿಗಳೆಲ್ಲಾ ನಿರ್ಧರಿಸಲೇಬೇ ಇಲ್ಲಿ ಸಂದಣಿಸುತ್ತಿರಬಹುದು" ಆದರೆ ಅತನ ನಿರೀಕ್ಷೆ ಭಾವಿಸಿದಷ್ಟು ಸತ್ಯವಾಗಿರಲಿಲ್ಲ. ಕೆಲನೇಳೆಯಲ್ಲೇ ದೊರೆಸ್ವಾಮಿ ಕಟ್ಟೆಯ ಮೇಲೆ ನಿಂತು ಆವೇಶದಿಂದ ಹೇಳತೊಡಗಿದ ಪ್ರಚಾರಕನಂತೆ:—"ಬಂಧುಗಳೇ, ನಮಗೆ-ನಿಮಗೆಲ್ಲಾ ಎಂಥ ಸಂಕಟ ಸಂಭವಿಸಿದೆಯೆಂಬುದನ್ನು ಎರಡು ದಿನಗಳಿಂದ ಅನುಭೋಗಿಸುತ್ತಿದ್ದೇನೆ. ಇಂದು ಜಗತ್ತಿನಲ್ಲಿ. ವ್ಯಾಪಾರಿ ಕತೆಗೂ, ಶುದ್ಧ ಪರಿಶ್ರಮಕ್ಕೂ ಬೆಲೆ ಇಲ್ಲವಾಗಿದೆ. ಹಲವಾರು ಸ್ವಾರ್ಥಸಾಧಕರು ಮೂಕ ಬಸವಣ್ಣಗಳಂತಿದ್ದ ಅಜ್ಞಾನಿ ಕೂಲಿಗಳ ಮೇಲೆ ದರ್ಪದ ಅಧಿಕಾರ ನಡೆಯಿಸುತ್ತಿರುವುದೇ ನಾವೆಲ್ಲಾ ಇಂದು ದುಃಖದ ನುಡಿಲಲ್ಲಿ ಬೀಳಬೇಕಾಗಿದೆ. ನೀವೆಲ್ಲ ಎರಡು ದಿನಗಳಿಂದ ನನ್ನ ಮಾತಿನಂತೆ ಹೊಟ್ಟೆಯ ಪರಿವೆಯನ್ನೂ ತೊರೆದು ನಿಂತಿದ್ದೀರಿ. ಹಾಗೆ ನಿಮ್ಮನ್ನೆಲ್ಲ ವ್ಯರ್ಥ ದುಃಖಕ್ಕೀಡುಮಾಡಿದ ತಪ್ಪಿಗಾಗಿ ನಿಮ್ಮಲ್ಲಿ ಆದೇವನಲ್ಲಿ ಕ್ಷಮೆ ಬೇಡುವೆ. ಅದರೂ ಆದೇ ದೇವನಲ್ಲಿ ಪ್ರಾರ್ಥಿಸುವುದೇನೆಂದರೆ:—ನಮ್ಮೆಲ್ಲರ ಅಂತರಾತ್ಮದಲ್ಲಿ ಇನ್ನೂ ಹೆಚ್ಚಿನ ನಿರ್ಧಾರದ ಬಲ ಕೊಡಲಿ; ಲೋಕದ ಕೂಲಿಗಳೆಲ್ಲಾ ಸುಖ ಶಾಂತಿ ದೊರಕಲಿ. ನಮಗಿಂದು ಶ್ರೀಕಂಠಪ್ಪನಂತಹ ನೇತಾರರುಗಳ ಆವಶ್ಯಕತೆಯಿದೆ. ಮಾಲಕರ ಕಣ್ಣೆನಲ್ಲೂ ಮೋಸದ ಮಣ್ಣೆಂಬಾಕೆ ಸ್ವಂತದ ಹಿತವನ್ನೇ ಸಾಧಿಸಿಕೊಳ್ಳುವ ಜೀವಣ್ಣನಂತಹವರಲ್ಲ. ಏನಿನ್ನಿದ್ದರೂ ಸತ್ಯಕ್ಕೆ ಗೆಲುವಿದೆ. ಇದನ್ನೆಲ್ಲರೂ ನಂಬಿ ಮುಂದಿನ ಕಾರ್ಯಕ್ಕೆ ಸಿದ್ಧರಾಗಬೇಕಲ್ಲದೆ ಹೇಡಿಯಂತೆ ಹಿಂಜರಿಯಬಾರದು. ಮಾಲಕರೆದುರು ನಿಜಸ್ಥಿತಿಯ ಅರಿವು ಮಾಡಿಕೊಟ್ಟು, ನಮಗೊದಗಿದ ಸಂಕಟದ ನಿವಾರಣೆಯನ್ನು ನಾವೇ ಮಾಡಿಕೊಳ್ಳಬೇಕಾಗಿದೆ. ಇನ್ನೆರಡು ದಿನಗಳವರೆಗೆ ಯಾರೂ ಅನಪೇಕ್ಷರಾಗಿ ಎತ್ತಿ ನಿಶ್ಚಯವನ್ನು ಸಡಿಲಿಸಬಾರದಾಗಿ ವಿನಂತಿಸುವೆ. ಉಪ್ಪರಲ್ಲೇ ನಾವುನಂಬಿದ ಸತ್ಯವು ಸ್ವಯಂಪ್ರಕಾಶವು ಬೆಳಗುತ್ತದೆ. ಅನ್ಯಾಯಕ್ಕೆ ಧಿಕ್ಕಾರವಿರಲಿ!"

"ಬೋಲೋ ಮಹಾತ್ಮಾಗಾಂಧೀ ಕೇ ಜಯ್"

ಮುಗಿಲು ಪ್ರತಿಧ್ವನಿಸುವ ಜಯಜಯಕಾರದೊಂದಿಗೆ ಸಭೆಯ ಮುಕ್ತಾಯವಾಯಿತು. ದೊರೆಸ್ವಾಮಿಯು ದಿವ್ಯ ಶಕ್ತಿಯನ್ನೂ, ತನಗೊದಗಲಿದ್ದ ಸುಖವನ್ನೂ ಕಾರಿತು ಮಾತನಾಡುತ್ತಿ ಕೂಲಿಗಳು ಭಕ್ತಿದತ್ತ ಸಾಗಿದರು. ಅವರನ್ನು ಬಹಳ ಹೊತ್ತು ನೋಡುತ್ತಿದ್ದಂತೆ ಜೀವಣ್ಣನ ದೇಹ ತತ್ತರಿಸಿ ಬೀಳುವಷ್ಟು ನಿಶ್ಶಕ್ತವಾಗತೊಡಗಿತು. ದೊರೆಸ್ವಾಮಿಯು ಒಂದೊಂದು ಮಾತೂ ಅತನ ಅಂತರಂಗವನ್ನು ಹಿಂಗಿ ಹಿಂಡಿ, ಸತ್ವಪರೀಕ್ಷೆ ನಡೆಯಿಸಿದಂತಾಗಿ, ಅಸಹನೀಯ ರೋಷ, ಆಪಪಾನತೀರಿಸಿಕೊಳ್ಳುವ ಈರ್ಷ್ಯೆ ಈರ್ಷೆ, ಎಬೆಜೂರಿಯಲ್ಲಿ ಹೊತ್ತಿ ಹೊತ್ತಿ ಹೊಗೆಯುಗುಳತೊಡಗಿದವು. ಇನ್ನೊಮ್ಮೆ ದೊರೆಸ್ವಾಮಿಯು ಮುಖನೋಡುವಷ್ಟು ತಾಳ್ಮೆಯುಳಿಯಲಿಲ್ಲ ಮನಸ್ಸಿಗೆ. ಸರಕ್ಕನೆತಿರುಗಿ ನೇಗವಾಗಿ ನಡೆದು ಬಂದವನು ಅವರಣ ಸೇರಿಕೊಂಡ. "ಈ ಮಕ್ಕಳಿಗೆ ಸೊಕ್ಕು ಬಂದಿದೆ. ಹೇಗೂ ಕೆಂಗಳ ಕೊನೆಗೆ ಕೈತುಂಬಾ ಸಂಬಳ! ಹೊಟ್ಟೆ ತುಂಬಾ ಅನ್ನ!! ಇಷ್ಟೆಂದು ಅರಿವು ಸಿಕ್ಕಿದೆಯೆಂದೇ ಹೀಗೆಲ್ಲ—ಮಾಲಕರ ಮೇಲೂ, ಮೇನೇಜರ ಕುಣಿದಾಡಿಕೊಳ್ಳುತ್ತಾರೆ. ಸಾಯಲಿ! ತಾವು ಮಾಡಿದ್ದರ ಫಲ ಉಂಡುಕೊಳ್ಳಲಿ. ಇದಕ್ಕೆಲ್ಲ ಕಾರಣ ದೊರೆಸ್ವಾಮಿ. ಅತನಿಗೇ ಒಂದು ಕೈತೋರಿಸಬೇಕು ಮೊದಲು!! ಕ್ಷುಲ್ಲಕ ಜಂತು!!!"—ಹೀಗೆ ಒಳಗೊಳಗೇ ನೆಮ್ಮದಿಯಿಲ್ಲದ ಮನಸ್ಸು ತನ್ನ ತಾನೇ ಉರಿದುಕೊಂಡು ಬೂದಿಯಾಗುತ್ತಿತ್ತು. ನಂಜಯ್ಯ ಎಷ್ಟು ಬೇಗ ಬಂದಾರೋ ಅಷ್ಟು ಸುಖವೆನಿಸತೊಡಗಿತು ಜೀವಣ್ಣನಿಗೆ. ಎರಡು ದಿನಗಳೆಂದರೆ ಎರಡು ಗಳಿಗೆಯಂತೆ ಉರುಳಿಹೋದುವು ವೇಗವಾಗಿ.

× × × ×

ನಂಜಯ್ಯನವರ ಕಾರು ಗಿರಣಿಯ ಹೆಬ್ಬಾಗಿಲಿಗೆ ಬಂದಾಗ ಜೆನ್ನಾಗಿಯೇ ಮಬ್ಬು ಕವಿಯತೊಡಗಿತ್ತು. ಮುಂಜಾನೆಯಿಂದ ಅವರಿಗಾಗಿ ಕಾಯ್ದು ನಿಂತ ಜೀವಣ್ಣನಿಗೆ, ಅನಂದದೊಂದಿಗೆ ಒಂದು ರೀ ಯ ಚಿಂತೆಯೂ ಎನ್ನಿಸದಿರಲಿಲ್ಲ. ಅವನ ಮುಖದ ಮೇಲೆ ಎಂದಿನಂತಿರುವ ಉಲ್ಲಾಸಲಕ್ಷಣಗಳಿರದೆ, ಅನಿವಾರ್ಯ ಸಂತೋಷದ ಚಿಹ್ನೆಗಳಿದ್ದುವು ಮಾತ್ರ. ಹೊರಗಿನ ಕತ್ತಲೆಗಿಂತಲೂ ಗಾಢವಾದ ಕತ್ತಲೆಯೊಂದು ಅತನ ಅಂತರಂಗದ ಮನೆಯಲ್ಲಿ ಪರಿಪರಿಯಾಗಿ ವಿಸ್ತರಿಸಿಕೊಂಡಿತ್ತು. ಆದರೆ ಅದನ್ನು ಪ್ರದರ್ಶಿಸಿ ಮಾಲಕರ ಸಂತೋಷವನ್ನು ಹೆಚ್ಚಿಸುವಂತಹ ಸಮಯವಲ್ಲ ಅದು. ತೋರಿಕೆಯ ನಗು-ನಮಸ್ಕಾರಗಳೊಂದಿಗೆ ನಂಜಯ್ಯನವರನ್ನು ಸ್ವಾಗತಿಸಿ ಆಫೀಸು ರೂಮಿನತ್ತ ಕರೆದೊಯ್ದ. ಗಂಟೆಯೊಳಗಾಗಿ ಊಟ-ಉಪಚಾರ ಮುಗಿಸಿ ಇಬ್ಬರೂ ಮಾತು-ಕತೆಗೆ ಕುಳಿತುಕೊಂಡರು. ಮೊದ-ಮೊದಲು ವೈಯಕ್ತಿಕ ಸಂಸಾರಸಂಬಂಧಗಳ ವಿಷಯವಾಗಿ ನಡೆದ ಮಾತುಗಳು ಮೆಲ್ಲಗೆ ಗಿರಣಿಯ ವಿಷಯದತ್ತ ಹೊರಳಿದುವು. ನಂಜಯ್ಯ ಆರಂಭಕ್ಕೆ ಈ ಎರಡು ತಿಂಗಳಲ್ಲಿ ತಾವು ಮಾಡಿದ ಕಾರ್ಯ, ಸಂಚಾರಚರಿತ್ರೆ, ವಿಶೇಷಪ್ರಸಂಗಗಳ ಬಗ್ಗೆ ಹೇಳಿ, ಇನ್ನು ಮುಂದಿನ ಉದ್ದೇಶ-ವಿಚಾರಗಳ ಸವಿಸ್ತರ ವಿವರವನ್ನೂ ಇತ್ತರು. ಆದರೆ ಜೀವಣ್ಣ ಮಾತ್ರ ಮೂಕಪ್ರತಿಮೆಯಂತೆ ಕುಳಿತು ಕೇಳಿಕೊಳ್ಳುತ್ತಿದ್ದನೇ ಹೊರತು, ಸುಟ್ಟುಂದು ಒಂದು ಮಾತನ್ನೂ ಆಡಲು ಪ್ರಯತ್ನಿಸಿರಲಿಲ್ಲ. ನಂಜಯ್ಯ ಗಂಭೀರವಾಗಿ ಕೇಳಿದರು: "ಯಾಕೆ ಜೀವಣ್ಣ, ಪ್ರಕೃತಿಯಲ್ಲಿ ನೆಮ್ಮದಿಯಿಲ್ಲವೇನು?" ದೇಶಾವರಿ ನಗೆ ಬೀರುತ್ತ ಜೀವಣ್ಣ ಬಿಕ್ಕರಿಸಿದ. "ಹ! ಹ!! ಹ!!! ಅದೇನಿಲ್ಲ ಅದೇನಿಲ್ಲ!...."

"ಇಲ್ಲ ಮಹಾರಾಯಾ! ಗಂಟೆಯಾಯ್ತು ನಾನೇ ಒದರಿಕೊಳ್ತೀನೆ; ಹಾಗೆಯೇ ಕುಳಿತುಬಿಟ್ಟಿದ್ದೀಯಲ್ಲ. ಏನಾದರೂ ವಿಶೇಷ ನಡೆಯಿತೇನು ಮುಕ್ಕೆ?" ಈ ಮಾತಿನಿಂದ ಜೀವಣ್ಣ ಉಭಯ ಸಂಕಟ ರಾಹುಗ್ರಸ್ತನಾಗಿ ವಿಲವಿಲ ಒದ್ದಾಡಿದ. ಮನಸ್ಸಿನಲ್ಲಿ ದೊರೆಸ್ವಾಮಿ ಹಾಗು ಕೂಲಿಗಳ ಬಗೆಗಿದ್ದ ಕಿಚ್ಚು ಭುಗಿಭುಗಿಲೆಂದು ಒಂದೇ ಉಸಿರಿನಲ್ಲಿ ಉತ್ತರಿಸಿಬಿಟ್ಟ: "ಈಗಲೀಗ ಕೂಲಿಗಳು ತುಂಬ ಸೊಕ್ಕಿಹೋಗಿದ್ದಾರೆ. ಮಾಲಕ-ಮೇನೇಜರುಗಳ ಬೆಲೆಯೇ ಇಲ್ಲವಂತೆ 'ಅವರನ್ನವರಿಳಿಸಬೇಕು, ಇವರನ್ನಿಳಿಸಬೇಕು' ಅಂತ ಯಾರ ಅಂಜಿಕೆಯೂ ಇಲ್ಲದೆ ಸಭೆ ಸೇರಿಸುತ್ತಾರೆ. ಗೊತ್ತುವಳಿ ಪಾಸುಮಾಡುತ್ತಾರೆ. ಈಗೆರಡು ದಿನಗಳಿಂದ....."

ಮಧ್ಯದಲ್ಲಿಯೇ ಮಾತು ನಿಲ್ಲಿಸಿದ್ದನ್ನು ಕಂಡು ನಂಜಯ್ಯ ಇನ್ನಷ್ಟು ಬಾಯಿತೆರೆದು ಕೇಳಿದರು: "ಏನಾಗಿ ಹೋಯ್ತು ಜೀವಣ್ಣ?"

"ಆಗೋದೇನು! ಗಿರಣಿಯ ಕೆಲಸ ನಿಲ್ಲಿಸಿ ಸಂಪು ಹೂಡಿದ್ದಾರೆ. ನನ್ನ ಆಳಿಕೆಯ ಕಾಲದಲ್ಲೇ ಈ ಮೂರ್ಖರು ಹೀಗೆ ಮಾಡುತ್ತಾರೆಂದು ನನಗೆ ಕಲ್ಪನೆಯಿರಲಿಲ್ಲ. ನೋಡಿ, ಇವರಿಗೊಳ್ಳೇ ಬುದ್ಧಿ ಕಲಿಸಬೇಕು"— ಏರಿದ ಕೋಪವನ್ನು ಘನೀಕರಿಸಿ ನುಡಿದಿದ್ದ ಜೀವಣ್ಣ. ನಂಜಯ್ಯ ಎಷ್ಟೋ ಹೊತ್ತು ಅವನ ಮುಖವನ್ನೇ ನಿರೀಕ್ಷಿಸಿ ನುಡಿದರು: "ಅವರಿಗೇನು ಬುದ್ಧೀ ಹೇಳುತ್ತೀ ಜೀವಣ್ಣ? ಒಬ್ಬರೋ ಇಬ್ಬರೋ ತಪ್ಪುಗಾರರಾಗಿದ್ದರೆ ಬೇರೆ ಅಭಿಪ್ರಾಯದಂತೆಲ್ಲ ನಡೆಯಬಹುದು. ಸಾವಿರಾರು ಕೂಲಿಗಳನ್ನೆಲ್ಲಾ ದಂಡಿಸಬಹುದಾದರೆ ನಮಗೆ ಗಿರಣಿಯ ಬಾಗಿಲು ಮುಚ್ಚಬೇಕಾಗಿದೆಯೆ? ಇದರ ಹಿನ್ನೆಲೆಯನ್ನಾದರೂ ಕಂಡು ಹಿಡಿದಿದ್ದೀಯಾ?"

"ಹಿನ್ನೆಲೆಯೇನು ಹಾಳಾಯ್ತು! ಒಬ್ಬನೇ ಒಬ್ಬ ವ್ಯಕ್ತಿ ಮಾಡಿದ ಸಂಚಿನ ಫಲವೇ ಈ ಸಂಪು! ಏನೂ ತಿಳಿಯದ ಕೂಲಿಗಳಿಗೆ ಹೀಗೆ ಒಮ್ಮಿಂದೊಮ್ಮೆ ಸಂಪು ಹೂಡುವ ಬಲವಾವರೂ ಹೇಗೆ ಬಂದೀತು ಹೇಳಿ!"

"ಯಾರು ಆ ವ್ಯಕ್ತಿ? ತಿಳಿಸಿದರೆ ಇನ್ನೂ ಒಳ್ಳೆಯದಲ್ಲವೆ?"

"ಕೂಲಿಗಳಲ್ಲೆಲ್ಲಾ ಸ್ವಲ್ಪ ಜಾಣನ ಮರಿಯಾಗಿಲ್ಲವೆ ನಿಮ್ಮ ಪ್ರೀತಿಯ ವ್ಯಕ್ತಿ ದೊರೆಸ್ವಾಮಿ? ಅತನದೇ ಈ ಕಾರಸ್ಥಾನ!"

"ಆಂ— ಅಂಥ ಸಂಭಾವಿತ ಮನುಷ್ಯ, ಇಂಥ ಹಗರಣಕ್ಕೆ ಬಿದ್ದುಕೊಂಡದ್ದು ನನಗೆ ತುಂಬಾ ಕುತೂಹಲ ಹುಟ್ಟಿಸಿದೆ. ಮತ್ತೆ ಯಾರಿಂದಲಾದರೂ ಇದಕ್ಕೆ ಪುರಲೆ ಬಿದ್ದಿದೆಯೆ?"

"ಸಾವಿರ ಕೂಲಿಗಳದೆಲ್ಲಾ ಪುರಲೆ ಇದಕ್ಕೆ. ಕಿಡಿ ಮಾತ್ರ ದೊರೆಸ್ವಾಮಿ ಹುದು! ನಂಜಯ್ಯನೋರೆ, ಈ ಬಳುಕುತ್ತಿರುವ ಮುಳ್ಳಿನ ಕುರಿತು ನನಗೆ ಮೊದಲಿನಿಂದಲೂ ಈ ಬಗೆಯ ನಿರೀಕ್ಷೆ ಇದ್ದೇ ಇತ್ತು. ಸದ್ಯ ಆದು ಪ್ರತ್ಯಕ್ಷ ನಮ್ಮ ನಿಮ್ಮ ಕಾಲನ್ನೇ ಚುಚ್ಚಿದೆ. ಅಂಥ ಮುಳ್ಳೊಂದನ್ನು ತೆಗೆದುಬಿಟ್ಟರೆ ಪಾತ್ರ ಎಲ್ಲ ರೀತಿಯಿಂದಲೂ ಸಪೂಧಾನ. ಸಂಪು-ಗಿಂಪುಗಳ ಗೊಂದಲವೇ ಏಳಲಾರವು!"

ನಂಜಯ್ಯನವರ ದೃಷ್ಟಿ ಸಟಾರನೆ ಈ ಮಾತಿನಿಂದ ಜೀವಣ್ಣನ ಮುಖದ ಮೇಲೆ ಹರಿದಾಡಿ 'ನೀನು ಆತ್ಮಪರೀಕ್ಷೆ ಮಾಡಿಕೊಂಡಿದ್ದೀಯಾ? ನಿನ್ನಿಂದ ಏನಾದರೂ ತಪ್ಪು ಸಂಭವಿಸಿಲ್ಲವಷ್ಟೆ?' ಎನ್ನುವ ಪ್ರಶ್ನೆ ಕೇಳಿದಂತಾಯಿತು. ತಮ್ಮ ಪ್ರೀತಿಯ ಆದರಲ್ಲೂ ವಿಶ್ವಾಸಪಾತ್ರನಾದ ದೊರೆಸ್ವಾಮಿ ಹೀಗೆಲ್ಲ ವಿಷವ್ಯೂಹ ರಚಿಸಿರಬಹುದೆಂದು ಅವರು ಭಾವಿಸಲೂ ಅಸಮರ್ಥರಾದಂತೆ ತೋರುತ್ತಿದ್ದಿತು.

"ಏನಿದ್ದರೂ ಜೀವಣ್ಣಾ, ಪರಿಸ್ಥಿತಿಯ ಅಭ್ಯಾಸವಿಲ್ಲದೆ ಯಾರನ್ನೇ ತಪ್ಪುಗಾರನೆಂದು ಗ್ರಹಿಸಲಾದೀತೆ? ನನ್ನಿಂದ ಮಾತ್ರ ಹಾಗೆ ಸಾಧ್ಯವಿಲ್ಲ"— ಉದಾಸೀನತೆಯೊಂದಿಗೆ ಸಂಕೋಚವೂ ಬೆರೆತಾಗ ನಂಜಯ್ಯ ನುಡಿದರು—ಫಟೀರನೆ ಜೀವಣ್ಣನ ಕೆನ್ನೆಯ ಮೇಲೆ ಪೆಟ್ಟಿಕ್ಕಿದಂತೆ.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ

● ಧ್ವನಿವಾಹಕ ಯಂತ್ರದ ಮೂಲಕ

● ಉತ್ತಮ ಚಿತ್ರಗಳ ಮೂಲಕ

● ಮ್ಯಾಜಿಕ್ ಲ್ಯಾಂಟರ್ನ್-ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಅಂಡ್ ಸೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

● "ನನ್ನ ಹೇಳಿಕೆಯಲ್ಲಿ ನಮಗೆ ವಿಶ್ವಾಸವಿಡುವಷ್ಟು ಸತ್ಯತೆಯಿದೆ. ನೋಡಿ, ಸದ್ಯ ನಾಲ್ಕು ದಿನಗಳಂತೂ ಕಳೆದಿವೆ. ಇನ್ನು ಪುಗಾರನ ಶೋಧಕ್ಕೆಂದರೆ ಹೆಚ್ಚಿನ ದಿನ ಬೇಕು. ವ್ಯರ್ಥ ಆದಾಯವಲ್ಲಿ ಹಾನಿ ತಪ್ಪಿಸಿಕೊಳ್ಳಬಹುದೆಲ್ಲ"— ಜೀವಣ್ಣ ಹುಸಿನಗೆ ಬೀರುತ್ತ, ಉತ್ತರಿಸಿದ.

'ಹಾಗೆಂತಾದೀತು, ಗಿರಣಿಯ ಚರಿತ್ರೆಯಲ್ಲಿ ಆದಾಯ-ಹೆಚ್ಚಿನ ಲಾಭಗಳಿಗಷ್ಟೇ ಮಹತ್ವವೆಂದು ನಾನೆಂದೂ ಎಣಿಸಿಲ್ಲ. ಮುಖ್ಯ ಮಾಲಕ ಮೇನೇಜರುಗಳಿಗೆ ಕಲಂಕ ಹಚ್ಚುವಂತಹ ಸಂಪು. ಹರತಾಳಗಳೆನ್ನುವ ವಿರೋಧಪ್ರಸಂಗಗಳು ಘಟಿಸಬಾರದೆಂದು ನನ್ನ ಮತ. ಉತ್ಪನ್ನ, ಲಾಭ ಇವು ಕೂಲಿಗಳ ಪ್ರಾಮಾಣಿಕ ದುಡಿಮೆಗೆ ಅಂಟಿಕೊಂಡಿವೆ. ಅವರಿಂದ ಒಮ್ಮೆ ತಪ್ಪು ಸಂಭವಿಸಲೂ ಬಹುದು; ಆದರೆ ಆ ತಪ್ಪಿನ ಎಳೆಯನ್ನೇ ಯಮಪಾಶವನ್ನಾಗಿ ರೂಪಿಸಿ ಕೂಲಿಗಳ ಕುತ್ತಿಗೆ ಹಿಸುಕುವುದು ನನ್ನ ನಿನ್ನ ಧರ್ಮವಲ್ಲ. ಮಾಲಕ-ಮೇನೇಜರರಿಂದಲೇ ಆಗಲಿ ತಪ್ಪು ಸಂಭವಿಸಬಾರದೆಂದು ಯಾರು ಹೇಳುತ್ತಾರೆ? ಜೀವಣ್ಣಾ, ನಿನ್ನನ್ನೂ ಅವಿಶ್ವಾಸಿಯೆಂದು ನಾನು ತಿಳಿಯಲಾರೆ. ನಾಳೆ ಬೆಳಗು ದೊರೆಸ್ವಾಮಿಯನ್ನು ಕರೆದು ಇದನ್ನೇ ವಿಚಾರಿಸುವೆ'— ಎಂದು ನಂಜಯ್ಯ ವಿಚಾರದ ನಿರ್ಧಾರ-ಪಕ್ಷಕ್ಕೇನೇ ಅಂಟಿಕೊಂಡು ಎದ್ದುಬಿಟ್ಟರು. ಸಿಡಿಲು ತಾಗಿದ ಮರದಂತಾಯಿತು ಜೀವಣ್ಣನ ಮುಖ. ಇನ್ನೂ ದೊರೆಸ್ವಾಮಿಯ ಪ್ರತಿಯಾಗಿ ಆತ ಹೇಬಯಸುತ್ತಿದ್ದ. ತಾನೇ ಮಾಡಿದ ಒಂದು ಮಹಾಪರಾಧನ ಸೇಡನ್ನು ಆತನ ಮೇಲೆ ಹೇರಿ ಮಾಲಕರ ಮನಸ್ಸನ್ನು ಸಮೂಲ ಕೆಡಿಸಬೇಕೆಂದಿದ್ದ; ಆದರೆ ಮಾಲಕರೇ ಆಡಿದ ಮಾತು, ಜೀವಣ್ಣನ ದೇಹಶಕ್ತಿಯನ್ನೇ ಗರುಡನಾಲಿಗೆ ಹಚ್ಚಿ ಶೋಷಿಸಿದಂತಾಗಿ, ಆತ ಝುರ್ರನೇ ಇಳಿದು ಬಿಟ್ಟ. ತಾನಿನ್ನು ಬದುಕಿ ನಾಳೆ ದೊರೆಸ್ವಾಮಿಯೆದುರು, ನಂಜಯ್ಯನವರೆದುರು ಉತ್ತರಿಸುವುದೆಂದರೆ ತನ್ನ ಜೀವಮಾನದ ವೈಫಲ್ಯವೂ, ಅಗೌರವವೂ ಕೂಡಿಬಂದಂತೆಯೇ ಸರಿ. ಎಂಥ ಘೋರ ದುರಂತವದು!!

ತಟಕ್ಕನೆ ಎದ್ದುನಿಂತು "ಮಗ್ಗಲು ಕೋಣೆಯಲ್ಲಿ ಮಲಗಿಕೊಳ್ತೀನೆ. ಕೊಂಚ ಲೆಕ್ಕವನ್ನು ಮಾಡಬೇಕಾಗಿದೆ" ಎಂದು ಹೇಳಿ ಹೊರಟಂದ ಜೀವಣ್ಣ. ಅಫೀಸುರೂಮಿನ ಕಾಟಿನಮೇಲೆ ಇದ್ದುಬಿದ್ದ ವ್ಯವಸ್ಥೆ ಮಾಡಿಕೊಂಡು ನಂಜಯ್ಯ ಕೂಡ, ದಣಿವ ದೇಹ ಹಾಗೂ ಕಣ್ಣುಗಳಿಗೆ ವಿಶ್ರಾಂತಿ ದೊರಕಿಸಲು ಉರುಳಿಕೊಂಡರು ರಾತ್ರಿ ಹತ್ತುಗಂಟೆಯ ಮೇಲಾಗಿತ್ತು.

× × × ●×

"ಬೋಲೋ ಮಹಾತ್ಮಾಗಾಂಧೀಕೆ" "ಜಯ್"

"ಜೀವಣ್ಣನ ಅನ್ಯಾಯಕ್ಕೆ—ಧಿಕ್ಕಾರವಿರಲಿ"

ಬೆಳಗಿನ ಪ್ರಶಾಂತ ವಾತಾವರಣವೆಲ್ಲಿ ಈ ಎರಡು ಉದ್ಘೋಷಗಳು ಪುನಃ ಪುನಃ ಅನುರಣಿಸಿ, ಗಗನದೊತೆನೆ ಗಂಭೀರ ಮಾತುಕತೆ ನಡೆಯಿಸಿದಂತಿತ್ತು. ಇನ್ನೂ ಕೆಲ ವೇಳೆ ವಿರಾಮವಾಗಿ ಒರಗ ಬೇಕೆಂದಿದ್ದ ನಂಜಯ್ಯ, ಸಕ್ಕನೆ ಕಣ್ಣೆರೆದು ಹೊರಗೋಡಿ ಬಂದರು. ಉದ್ಘೋಷ ಕೇಳುತ್ತ. ಗಿರಣಿಯ ಅವರಣವ ಜೊರಗಣೆಂದ ಸಮೀಪ—ಅತಿಸಮೀಪವಾಗುತ್ತ ಆ ಧ್ವನಿ, ಅದನ್ನು ಉದ್ಘರಿಸುವ ಕೂಲಿಗಳ ತಂಡ ಬರುತ್ತಿದ್ದುದು ಅವರ ದೃಷ್ಟಿಗೆ ಬಿದ್ದಿತು. ಮುಂದುಗಡೆ ದಂಡನಾಯಕ ದೊರೆಸ್ವಾಮಿ, ಕೈಯಲ್ಲಿ ಕೆಂಪು ಬಾವುಟ ಹಿಡಿದು ಸಾಗಿದ್ದ. ಅತನ ನಡಿಗೆಯ ನಿಯಮಕ್ಕೆ ಭಂಗ ತಾರದಂ ತೆಬೆಂಬತ್ತಿದ ಕೂಲಿಗಳು ಹಿಂದುಗಡೆ. ನಾಲ್ವತ್ತಿರವರ ಅಸಹಕಾರ ಚಳವಳಿಯ ಚಿತ್ರ ನಂಜಯ್ಯನವರ ಕಣ್ಣಿದುರು ಮಿಂಚಿ ಮೂಡದಿರಲಿಲ್ಲ. ಬ್ರಿಟಿಷರ ಅನ್ಯಾಯಪೂರ್ಣ ದುರಾಡಳಿತವನ್ನು ಕೊನೆಗೊಳಿಸಿ ಸ್ವಾತಂತ್ರ್ಯ ಪ್ರಾಪ್ತಿಗಾಗಿ ಸತ್ಯಾಗ್ರಹ ಹೂಡಿದ ಭಾರತೀಯ ವೀರಪ್ರಜೆಗಳ ಒಂದು ದೃಶ್ಯ ಇಂದು ನೆನಪಾಯಿತವರಿಗೆ. ನಂಜಯ್ಯ ನಿಂತಲ್ಲಿಯೇ ಧೀರ-ಗಂಭೀರರಾಗಿ ಅಚಲರಾದರು.

ಅದೇ ಉದ್ಘೋಷ! ಅದೇ ಆವೇಗ!! ಕೂಲಿಗಳ ತಂಡ ಹೆಬ್ಬಾಗಿಲಿನಿಂದೀಚೆ ನುಗ್ಗಿ ಬಂದಿತು ದೂರದಿಂದಲೇ ನಂಜಯ್ಯನವರ ಪರಿಚಯ ಪಡೆದುಕೊಂಡ ದೊರೆಸ್ವಾಮಿ. ಎಷ್ಟೆಂದರೂ ಏಳೆಂಟು ವರ್ಷ ಹೊಟ್ಟೆ-ಬಟ್ಟೆಗಳ ಪರಿಹಾರ ತೋರಿ, ತಂದೆಯಂತೆ ಪ್ರೀತಿಯಿಂದ ವರ್ತಿಸಿದ ಅವರೆದುರು ತನ್ನ ಬಲವನ್ನೂ, ಫಲವನ್ನೂ ವ್ಯಕ್ತಗೊಳಿಸುವಷ್ಟು ಗುಂಭಕ್ಕೆ ಇಳಿಯದೆ, ಮಗುವಿನಂತೆ ಓಡಿಬಂದು ತಲೆಬಾಗಿಸಿ ಮುಂದೆ ನಿಂತ ಕೂಲಿಗಳಿಂ, ತುಳಿದ ಹೆಜ್ಜೆಯಲ್ಲಿಬೀ ಹೆಜ್ಜೆಯಿಟ್ಟು ನಿಂತುಕೊಂಡರು. ಅನಪೇಕ್ಷಿತವಾದ ನಗು ನಂಜಯ್ಯನವರ ಮುಖದ ಮೇಲೆ ತುಳುಕಾಡಿತು ದೊರೆಸ್ವಾಮಿಯನ್ನೂ ಕೂಲಿಗಳನ್ನೂ ಕಾಣುತ್ತ. ಜೀವಣ್ಣನಂತೆ ಶಿಕ್ಷಕೋಷದ ಜೇಡ-ಜಾಲಕ್ಕೆ ತೊಡಗಿ ಅವಿವೇಕದ ಉದ್ಗಾರ ತೆಗೆಯಲು ಅವರ ಮನಸ್ಸು ಒಪ್ಪಲಿಲ್ಲ.

"ದೊರೆಸ್ವಾಮಿ, ನಿನ್ನ ಹತ್ತಿರ ಸ್ವಲ್ಪ ಮಾತಾಡಬೇಕಾಗಿದೆ"—ಎಂದು ಸಾವಧಾನವಾಗಿ ನಂಜಯ್ಯ ನುಡಿದರು. "ಅದಕ್ಕೇನಂತೆ ಮಾಲಕರೇ, ನನಗೂ ಬೇಕಿದ್ದ ವಿಷಯ!" ದೊರೆಸ್ವಾಮಿ ನುಡಿಯುತ್ತ ನಂಜಯ್ಯನವರ ಬೆಂಬತ್ತಿ ಹೋದ.

"ಇಂಥ ವಿಪರೀತ ಪ್ರಸಂಗ ಹೇಗೆ ನಡೆಯಿತೆಂದು ನಾನು ತಿಳಿಯಬೇಕಾಗಿದೆ"—ನಂಜಯ್ಯ ಕೇಳಿದರು.

"ಕ್ಷಮಿಸಿ, ಹೀಗೆ ನಡೆಯಲು ನಾನೇ ಕಾರಣನಾಗಿದ್ದೇನೆ; ಮತ್ತಾರೂ ಇಲ್ಲ"—ದೊರೆಸ್ವಾಮಿ ವಿನಯವಾಗಿ ಯಾದರೂ ದಿಟ್ಟ ತನದಿಂದ ಉತ್ತರಿಸಿದ.

"ಹೀಗೆ? ಇದಕ್ಕೆ ಹಿನ್ನೆಲೆಯಾಗಲಿ, ಉದ್ದೇಶವಾಗಲಿ ಇಲ್ಲ. ಏನ್ನಬೇಕೆ?"

"ಏಕಿಲ್ಲ ಮಾಲಕರೆ, ತುಂಬಾ ಇದೆ. ಜೀವಣ್ಣ ಮೇನೇಜರನಾದ ಮೇಲೆ ಮನುಷ್ಯನಾಗಿ ಉಳಿಯಲಿಲ್ಲ. ಶ್ರೀಕಂಠಪ್ಪನ ಇತಿಹಾಸಕ್ಕೂ, ನಿಮ್ಮ ಚರಿತ್ರೆಗೂ ಮಸಿ ಬಳಿದುಬಿಟ್ಟ."

"ನನಗೆ ಇನ್ನೂ ಸ್ಪಷ್ಟವಾದ ವಿವರ ಬೇಕಾಗಿದೆ ದೊರೆಸ್ವಾಮಿ!"

"ನೋಡಿ, ಎರಡು ತಿಂಗಳವರೆಗೆ ಪಕಾಲೀ ರಾಜ್ಯ ನಡೆಯಿಸಿ ತೀರಿದ ಜೀವಣ್ಣ. ತಾನೇ ಮಾಲಕನೆನ್ನುವಂತೆ ದರ್ಪದ ಅಧಿಕಾರ ಪ್ರಯೋಗಿಸಿ, ಕೂಲಿಗಳನ್ನು ಕುರಿಗಳೆಂದು ಭಾವಿಸಿ ಶಿಕ್ಷಿಸಿದ; ದಂಡಿಸಿದ. ಕೆಲವು ಕೂಲಿಗಳಂತೂ ತಿಂಗಳಿಡೀ ದುಡಿದು, ಕೊನೆಗೂ ಸಂಬಳ ಸಿಗದೆ ಮರುಗಿದ್ದುಂಟು ಇದೋ ಪ್ರತ್ಯಕ್ಷಪ್ರಮಾಣ! ಕಳೆದ ತಿಂಗಳು ಪ್ರತಿಯೊಬ್ಬನಿಂದಲೂ ಐದುರೂಪಾಯಿ ಜಗ್ಗಿಜಗ್ಗಿಕೊಂಡು 'ಮಾಲಕರ ಸೂಚನೆಯ ಮೇರೆಗೆ ಸಂಬಳದಲ್ಲಿ ಕಡಿತ' ಎಂದು ಹೇಳಿ ಐದುಸಾವಿರ ರೂಪಾಯಿ ಎತ್ತಿಹಾಕಿದ ಪ್ರಕರಣ! ಇದು ನಿಜವೆ?"—ದೊರೆಸ್ವಾಮಿಯ ವಾಣಿ ಆವೇಶಪೂರ್ಣವಾಗಿತ್ತು. ನಂಜಯ್ಯ ಸೂರ್ಯವಾನದಷ್ಟು ಕಣ್ಣರಳಿಸಿ ಲೆಕ್ಕನೋಡಿ 'ಆ!' ಎಂದರಷ್ಟೇ. "ಐದುಸಾವಿರ ರೂಪಾಯಿ!! ಅದೂ ಮಾಲಕರ ಅಪ್ಪಣೆಯಂತೆ!!!"—ಕಣ್ಣಿನಲ್ಲಿ ಕೋಪ ಭುಗಿ-ಭುಗಿಲೆಂದಿತು. ಜೀವಣ್ಣನ ನೀಚಕೃತ್ಯದ ಪ್ರತ್ಯಕ್ಷ ಪಾಠವನ್ನವರು ನಿರೀಕ್ಷಿಸುತ್ತಿದ್ದುದು ಇಂದೇ—ಇದೇ. 'ರಾತ್ರಿಯು ತಮ್ಮ ಬಗ್ಗೆ, ತಮ್ಮ ಗಿರಣಿಯ ಬಗ್ಗೆ ಎಷ್ಟೊಂದು ಆತ್ಮೀಯನಂತೆ ಡಂಭಕೊಚ್ಚಿದನಲ್ಲ. ವಂಚಕ!!' ಎಂದು ನಂಜಯ್ಯ ಕೆಂಡವಾಗಿ ರೇಗಿಕೊಂಡರು. ಕುಳಿತ ಆಸನಬಿಟ್ಟು ಮಗ್ಗುಲಕೋಣೆಗೆ ಬಂದರು. ಬಾಗಿಲು ಮುಚ್ಚಿಕೊಂಡಿತ್ತು.

'ಜೀವಣ್ಣಾ'—ತಮ್ಮ ಶಕ್ತಿಯಿದ್ದಷ್ಟೂ ಕೂಗಿ ನಂಜಯ್ಯ ಬಾಗಿಲು ಒತ್ತಿದಾಗ, ಅದು ಕಿರಕ್ಕನೆ ತೆರೆದುಕೊಂಡಿತು. ಅಲ್ಲಿ ಇದ್ದುದೇನು? ಹತ್ತಾರು ವರ್ಷದ ಲೆಕ್ಕದ ವಹಿ! ಅವುಗಳನ್ನು ಹೊತ್ತುಕೊಂಡಿದ್ದ ಕಪಾಟುಗಳು!! ಜೀವಣ್ಣ ಅಲ್ಲಿರಲಿಲ್ಲ. ಅವರ ದೃಷ್ಟಿ ಅವನ್ನನ್ನೇ ಹುಡುಕುತ್ತಿತ್ತು. ಆದರೆ ದೊರೆತದ್ದು ಒಂದು ಕಾಗದ ಮಾತ್ರ:

"ಅಂಜಯ್ಯನವರಿಗೆ, ಕ್ಷಮಿಸಿ! ನಿಮ್ಮ ಮನಸ್ಸು ನನ್ನನ್ನು ವಂಚಕನೆಂದರೆ ನನಗದು ಯೋಗ್ಯವಾಗಿದೆ. ದೊರೆಸ್ವಾಮಿ ಪ್ರಾಮಾಣಿಕ. ಸ್ವಾಮಿನಿಷ್ಠ. ಕೂಲಿಗಳಿಗೆಲ್ಲಾ ಅಹಿತವಾಗಬಾರದೆಂದು ಆತನ ಇಚ್ಛೆ. ಆದರೆ ನನ್ನ ಸ್ವಾರ್ಥ ಸ್ವಭಾವಕ್ಕದು ಸರಿಬೀಳಲಿಲ್ಲ. ಅದಕ್ಕೆಂದೇ ಮನಬಂದಂತೆ ವರ್ತಿಸಿದೆ. ದೊರೆಸ್ವಾಮಿ ನನ್ನ ವಿಷಯವಾಗಿ

ಏನು ಹೇಳುತ್ತಿದ್ದರೂ ಅದೆಲ್ಲ ಸರಿ. ಆತ ಶ್ರೀಕಂಠಪ್ಪನ ಯೋಗ್ಯತೆಗೆ ಸರಿ ಹೋಗುವ ಮನುಷ್ಯ. ನಿನ್ನೆ ರಾತ್ರಿಯೆಲ್ಲ ನನ್ನ ನಾನೇ ಪರೀಕ್ಷಿಸಿಕೊಂಡಾಗ ಇಂಥದೊಂದು ಸತ್ಯ ನನಗೆ ಹೊಳೆದದ್ದು. ನಾನು ಬೆಳಗಿನ ವರೆಗೂ ನಿಂತುಕೊಂಡು, ಒದಗಲಿರುವ ಅವಮಾನಕಾರಕ ಪ್ರಸಂಗಕ್ಕೆರವಾಗುವುದಿಂದರೆ ಆತ್ಮಹತ್ಯೆಗಿಂತಲೂ ಕಡೆಯದೆಂದು ಬಗೆದು ಈ ಸೂತ್ರವನ್ನವಲಂಬಿಸಿರುವೆ ನಿನ್ನ —ಜೀವಣ್ಣ."

ಇಂತಿರುವ ಕಾಗದದ ವಿವರ ಓದುತ್ತಿದ್ದಂತೆ ನಂಜಯ್ಯ ಯಾವುದೋ ಸ್ವಪ್ನಲೋಕವಲ್ಲಿ ವಿಹರಿಸುತ್ತಿರುವ ಹಾಗೆ ಆತ್ಮತ್ಯ ನೋಟ ಹೊರಿಸಿದರು. ಎಲ್ಲಿಲ್ಲೂ ಜೀವಣ್ಣನ ವಿಚಿತ್ರ ಮುಖಭಂಗಿಯ ಚಿತ್ರ ಆ ನೋಟದೆದುರು ತೇಲಿಕೊಂಡಿತು. ಹಿಂದೆ ಹೊರಳಿದಾಗ ಸೊರೆಸ್ವಾಮಿ ನಿಂತುಕೊಂಡಿದ್ದ. ಅವನನ್ನು ನೋಡುತ್ತ "ನೋಡಿ. ದೆಯಾ, ದೊರಿಸ್ವಾಮಿ, ಲೋಕದ ರೀತಿ? ವಂಚಕರಾಗಲಿ, ಸ್ವಾರ್ಥಿಗಳಾಗಲಿ ನೊದನೊದಲು ತಮ್ಮ ಹೊರತಾಗಿ ಉಳಿದೆಲ್ಲವನ್ನೂ ಕ್ಷುಲ್ಲಕ ಎಂದು ಭಾವಿಸುತ್ತಾರೆ. ತಮ್ಮ ಸ್ವತಂತ್ರಕ್ಕೆ ಅಡ್ಡ ಬಂದವರಿಗೆ ಕಾಲಲ್ಲಿಯೂ ಮುಳ್ಳೆಂದು ಕಿತ್ತೆಸೆಯಲು ಯತ್ನಿಸುತ್ತಾರೆ. ಆದರೆ ತಮ್ಮದೇ ನೋಸ ಹೊರಬಿದ್ದಾಗ ಪಶ್ಚಾತ್ತಾಪಪಟ್ಟು ಸಭ್ಯರಾಗಿ ಬಯಸುತ್ತಾರೆ. ಜಗತ್ತಿನ ಹಿತಸಾಧನೆಯ ಮಾರ್ಗದಲ್ಲಿ ಅವರೇ ನಿಜವಾದ ಮುಳ್ಳುಗಳಿದ್ದಂತೆ. ಜೀವಣ್ಣ ಈ ವರ್ಗಕ್ಕೆ ಸೇರಿದವನೆಂದು ಇಂದಿನ ವರೆಗೂ ನನಗೆನಿಸಿರಲಿಲ್ಲ!" ಎಂದು ನುಡಿದರು.

ದೊರೆಸ್ವಾಮಿ ಸರ್ವವನ್ನೂ ಅನುಭವಿಸಿದವನಂತೆ ನಂಜಯ್ಯನವರ ಮುಖವನ್ನೇ ನೋಡಿದ.

ಜಾನಪದ ಗೀತಗಳು

"ಹೆಣ್ಣು ಪರರೊಡವೆ!"

ಸಂಗ್ರಾಹಕರು:— ಶ್ರೀ. ಡಿ. ಮಹಾಲಿಂಗಭಟ್ಟ, ವಿದ್ವಾನ್ ಎಡನಾಡು, ಕಾಸರಗೋಡು.

ಹೆಣ್ಣು ಹುಟ್ಟಬೇಕೆಂದು ಅಣ್ಣ ಚಿಂತಿಸಬೇಡ;
ಹೆಣ್ಣೆಂಬ ಪರರ ಒಡವೆಯ — ಕೊಟ್ಟರೆ
ಹೋಗಲಕ್ಕು ನಮಗೆ ಬರಲಕ್ಕು! ೧

ಸುಗ್ಗಿ ಕೈ ಕೊಯ್ಯಲಿ, ಸುರಗಿ ಹೂವಾಗಲಿ,
ರಸದಾಳಿ ಕಬ್ಬು ಕಡಿಯಲಿ, — ಅಣ್ಣನೇ
ಅಂದಿಂಗಾಂ ಬಪ್ಪೆ ತವರಿಂಗೆ! ೨

ಅತ್ತಿಗೆ ತಾಯಲ್ಲ, ಹಿತ್ತಾಳೆ ಚಿನ್ನಲ್ಲ.
ನುಕ್ಕಿ ಬಂದಣುಕು ಮರವಲ್ಲ — ಹೆಣ್ಣು ಮಕ್ಕೆಗೆ,
ಹುಟ್ಟಿದ ಮನೆಯು ಸ್ಥಿರವಲ್ಲ! ೩

ಹೆಣ್ಣು ಹೆತ್ತಬ್ಬೆಗೆ ಒಮ್ಮೆಯೂ ಸುಖವಿಲ್ಲೆ,
ಅಣ್ಣನವನಳಸಿ ಬಳಕಳುಗಿ, — ಬಪ್ಪಾಗ
ಕಣ್ಣಾ ನೀರೆದ್ದು ಕಡಲಾದೊ! ೪

ಬೇನೆ ತಾಳಿದಳಲ್ಲ, ಮದ್ದು ಕುಡಿದವಳಲ್ಲ,
ಬೆಸನೀರು ಮಿಂದವಳಲ್ಲ; — ಅದರೂ
ಮಗಳೆಂದು ಧಾರೆ ಎರೆವಳು! ೫

ಅಳಿಯ ಬಂದಾ ಮನೆ ಅರಸು ಬಂದಂತಿಕ್ಕು
ಅರಸಿನದ 'ಬೇಲಿ ಸಮೆದಿಕ್ಕು!' — ಅಣ್ಣನೇ!
ಅರಸಲ್ಲ ನಮ್ಮ ಅಳಿಯಂದ್ರು! ೬

ಆಷಾಢಮಾಸದಲಿ ಕೂಸಿಂಗೆ ಚಂದ್ರಾಷ್ಟ,
ಬೇಸಗೆ ಬರಲಿ ಕಳುಸುವೊ, — ಅಳಿಯನೇ!
ಮಾತಾಡಿ ಹೋಗೊ ಮನೆಗೀಗ! ೭

ಉದ್ದ ಸಂಪಗೆ ಮೊಗ್ಗು, ಗುಡ್ಡು ಮಲ್ಲಿಗೆ ಹೂಗು,
ಬದ್ದಿವಂತನಣ್ಣ ಕೈತಕ್ಕು, — ಆ ಹೂಗು
ಮುದ್ದು ತಂಗ್ಯಂದ್ರ ತುರುಬಿಂಗೆ! ೮

ಬಂಗಾರು ತಾಮುದ್ದು, ಬೆಳ್ಳಿ ತಾವರೆ ಮುದ್ದು
ಹಣ್ಣುಳ್ಳ ಮರಕೆ ಗಿಳಿ ಮುದ್ದು, — ತಾನಾದರೆ,
ತಾ ಮುದ್ದು ತನ್ನ ತವರಿಂಗೆ. ೯

ವೃಂದಾವನ

ಶ್ರೀ. ಎಚ್. ಜೆ. ಉಪಾಧ್ಯಾಯ ಎಂ. ಎ. ಹೈದರಾಬಾದ್

೧

ವೃಂದಾವನ ಚೈತ್ರದ ಬನ, ಮೈಮನಕಿದು ಸಂಜೀವನ,
ಉಪವನಶ್ರೀ ಶೋಭಾಘನ ಕಂಡಿತು ಮನ, ಉಂಡಿತು ಘನ
ಸೌಂದರ್ಯದ ಸವಿಶೇಷ, ಆನಂದದಿ ಪರಿಪೂರ್ಣ
ಪಂಚೇಂದ್ರಿಯಗಣ.

೨

ವೃಂದಾವನ ಚೆಲುವಿನ ಬನ, ಬಹು ಬಣ್ಣದ ಅಲರಿನ ಬನ
ಮನಮೋಹಿಪ ಗಿಳಿಹಸುರಿನ ಎಳಹುಲ್ಲಿನ ಸೊಬಗಿನ ವನ,
ಬಲು ಬೆಡಗಿನ ಶಾಲೀಬನ, ನೋಡಿತು ಮನ ನಲಿದಿತು ಮನ
ಸೌಂದರ್ಯದ ಶ್ರೀಸದನ

೩

ವೃಂದಾವನ ತಪ್ಪಿನ ಬನ, ಕಾವೇರಿಯ ತುಂಗಸ್ತನ-
ದಿಂದೊಗೆದಿಹ ಬುಗ್ಗೆಯ ಬನ, ಸುರಿಯುತಲಿದೆ ಮಧುರಸ್ವನ
ಇಳಿದಿದೆ ಗಂಧರ್ವಗಾನ, ಆನಂದದ ಸ್ಥಾಮತಾನ,
ಕರ್ಣೋತ್ಸವ ಪರಿಪೂರ್ಣ!

೪

ವೃಂದಾವನ ಹಿಗ್ಗಿನ ಬನ, ಪುಟಿದಾಡುವ ಬುಗ್ಗೆಯ ಬನ,
ಇದೊ ಕುಂಕುಮ, ಅದೊ ಅರಿಸಿಣ, ಇದೊ ಮುಗಿಲಿನ,
ಅದೊ ಹಸುರಿನ,
ಇದೊ ಶ್ವೇತಲ, ಅದೊ ನೀರಲ, ಬಣ್ಣದ ಬುಗ್ಗೆಗಳಾಹ್ವಾನ,
ನಯನೋತ್ಸವ ಪರಿಪೂರ್ಣ.

೫

ಥಳಥಳಿಸುವ ತುಂತುರು ಮಳೆ, ಬಹು ಬಣ್ಣದ ಬೆಳಕಿನ ಹೊಳೆ,
ಬೆಳಕಾಯಿತು ನೀರ್ಕರಗುತಲೆ, ಮಿಂಚಾಯಿತು ತೆರೆಮಿರುಗುತಲೆ,
ಇದೊ ಝುಗರ್ಝುಗಿಸುವ ಬುಗ್ಗೆ ಮಾಲೆ ಇಳೆಯೊಳು ಮಳೆ-
ಬಿಲ್ಲ ಲೀಲೆ, ಹೊಸಕಾಲದ ಕಲಾಶಾಲೆ!

೬

ಕಾವೇರಿಯ ನಿರ್ಮಲ ಜಲ, ವರ್ಣಾರ್ಣವ ನವಸೋಜ್ವಲ,
ಸಿರಿಸೊಬಗಿನ ವರಪಲ್ಲವ, ಬಹುರಾಜಿತ ವೀಚಿವಿಪುಲ,
ಅರಳಿತು ಸೌಂದರ್ಯಕಮಲ, ಹೊಸ-ಹೊಗರನುಟ್ಟು ಪ್ರತಿದಲ,
ಸೂಸಿರೂಪ ಪರಿಮಳ.

೭

ಇದು ರಸಿಕರ ಲೀಲಾಂಗಣ, ಕವಿ ಪ್ರತಿಭೆಯ ಕ್ರೀಡಾಂಗಣ,
ಕರುನಾಡಿನ ವರಮಂಡನ, ಸೌಂದರ್ಯದ ನವನಂದನ,
ಇದು ಶಾಂತಿಗೆ ಇದು ಕಾಂತಿಗೆ ನೆಲಸಲು ತಾಣ,
ಮಂಗಲಮಯ ಮಾಧುರ್ಯದಿ ಪರಿಪೂರ್ಣ,
ಇಲ್ಲಿಹ ಅಣುರೇಣುವು ತೃಣಕಾಷ್ಠವು ಸೌಂದರ್ಯದಿ ಲೀನ
ಮುಕ್ತಾನಂದಸಮಾಧಿಯೊಳಾಸೀನ!

ಅಪಾರ ಕರುಣೆ

ಸೌ. ಪಾರ್ವತೀದೇವಿ ಹೆಗಡೆ, ಧಾರವಾಡ

ಹುಳುತಿಂದ ಎಲೆಯಂತೆ
ಬಾಳ್ ಬಣ್ಣಗೆಟ್ಟಿರಲು,
ಹಸಿರಿಟ್ಟು ಹೊಳೆಯಿಸುವ ಕರುಣೆಯಿಂದ—
ಬಾಯಾರಿ ಬಗೆ ಸುಟ್ಟಿ,
ಸಾಯುತಿರೆ ಇಳೆಯೆಲ್ಲ
ನೆಲದೆಡೆಗೆ ನೀರಿರಿವ ಲೀಲೆಯಿಂದ.
ಪರದೇಶಿಯಾಗಿ ಘನ-
ತಮದ ಬಸಿರಿನಲಿರಲು,
ಭಯಹರಿದು ಬೆಳಕನ್ನು ಈವ ಮಹಿಮೆಗೆ.
ಚಳಿಯಲ್ಲಿ ಮರಗೆಟ್ಟು,
ಮುದುರಿರಲು ನೋವಿನಲಿ,
ಹೂ ಕಾಯ ತೊಡಿಸುವನು ಜೀವಲತೆಗೆ.
ಬೇಸತ್ತು ದಗೆದಿರಲು
ಕುಣಿಯುವನು ಹಾಡುತ್ತ
ತೂಸಾಟ ಅಡಿಸುವ ಮೋಡಿಮಾಡಿ;
ಒಂದೆರಡೆ ಅವನಾಟ
ಕೋಟಿ ನಾಲಗೆಗಳಲಿ
ತೆಗೆಯುವುದು ಅದರಂದ, ವಿಶ್ವಹಾಡಿ.

ಹಿಂದೂ ಸಂಸ್ಕೃತಿ ಮತ್ತು ಸಮಾಜದ ಆಚಾರಗಳು

ಲೇಖಾಂಕ ೧*

ಅನುವಾದಕ: ಡಿ. ಲಕ್ಷ್ಮಣ ಜೋಷಿ, ಕೂಡ್ಲಿಗಿ

卐

ಹಿಂದುಗಳ ಸಂಸ್ಕೃತಿಯೆಂಬುದು ಜಗತ್ತಿನ ಸಂಸ್ಕೃತಿಗಳಲ್ಲೆಲ್ಲ ಪುರಾತನವಾದುದು, ಪೂರ್ಣತ್ವದಿಂದ ಕೂಡಿರುವುದು. ಹಿಂದುಗಳೆಂಬವರು ಯಾರು? 'ಹಿಂದು' ಎಂಬ ಹೆಸರಿನ ಹಿಂದೆ ಇರುವ ಐತಿಹಾಸಿಕ ಸತ್ಯವೇನು? ಆ ಹೆಸರಿನಲ್ಲಿ ನಿಂದಾತ್ಮಕವಾದ ಅರ್ಥ ಹುದುಗಿದೆಯೆ?

卐

ಅನಾದಿಯಾದ ಪರಂಪರೆಯುಳ್ಳ ಒಂದು ಸಂಸ್ಕೃತಿಗೆ, ಸದಾ ಒಂದೇ ವಿಧವಾದ ಆಹಾರ-ವಿಹಾರ, ವ್ಯವಹಾರವನ್ನು ನಡೆಸಿಕೊಂಡು ಬರುವುದರ ಸಂಭವವಾಗುವುದು. ಈಗಿನ್ನೂ ವಿಗತಶತಾಬ್ದಗಳಲ್ಲಿ ಮುಸಲ್ಮಾನ್ ತಥಾ ಆಂಗ್ಲರ ಶಾಸನಕಾಲದಲ್ಲಿ ನಮ್ಮ ಆಚಾರಗಳ ಮೇಲೆ ಪರ್ಯಾಪ್ತಪ್ರಭಾವವು ಬಿದ್ದಿದೆ. ಪಾಶ್ಚಾತ್ಯ ಶಿಕ್ಷಾವಿಧಾನದ ಪ್ರಭಾವದಿಂದ ನಮ್ಮಲ್ಲಿಯ ವೇಷಭೂಷಣ, ಭೋಜನ, ಗೃಹನಿರ್ಮಾಣ, ವಸ್ತ್ರಾಭರಣವಿಧಾನಗಳಲ್ಲಿ, ರೀತಿ ರಿವಾಜುಗಳಲ್ಲಿಯೂ ಆಮೂಲಾಗ್ರ ಪರಿವರ್ತನೆಗಳಾಗಿವೆ. ಮೊದಲು ಈ ರೀತಿಯ ಪ್ರಭಾವವು ಆಗಿರಲಿಕ್ಕಿಲ್ಲ. ಆದರೂ ಒಂದು ವಿಧವಾಗಿ ಪರಿಣಾಮವಾಗಿಯೇ ಇರಬೇಕು. ಇಷ್ಟಾದರೂ ಪ್ರತಿಯೊಂದು ಸಂಸ್ಕೃತಿಯು ಆಚಾರಗಳ ತೋಲನೆಗೆ ತನ್ನದೇ ಆದ ವಿಶಿಷ್ಟ ಮಾನದಂಡವನ್ನು ನಿರ್ಮಿಸಿಕೊಂಡಿರುತ್ತದೆ. ಹೇಗೆ ಹೇಗೆ ಕಾಲಕ್ರಮೇಣ ತನ್ನ ನಷ್ಟವಾದ ಶಕ್ತಿಯು ಮರಳಿ ಬರುತ್ತದೆಯೋ, ಹಾಗೆಹಾಗೆಯೇ ಆ ಸಂಸ್ಕೃತಿ ತನ್ನ ಆದರ್ಶದೆಡೆಗೆ ನಡೆಯಲು ಯತ್ನಿಸುತ್ತದೆ. ಈ ಸ್ಥಿತಿಯಲ್ಲಿ ಬಾಹ್ಯಭಾವಗಳು ನಿರಸ್ತವಾಗುತ್ತವೆ ಅವಶ್ಯವಾಗಿ ಈ ಮಾತು ವಿಶಿಷ್ಟತೆಯಾದ ಪರಾವಲಂಬಿಯಾದ ಸಂಸ್ಕೃತಿಗಳಿಗೆ ಅನ್ವಯಿಸುವುದಿಲ್ಲ.

"ಹಿಂದೂಸಂಸ್ಕೃತಿ" ಯೊಂದು ಪೂರ್ಣಸಂಸ್ಕೃತಿಯು. ಶ್ರುತಿಯೊಂದು ಸಮಯ, ಸ್ಥಿತಿ, ವ್ಯಕ್ತಿಯೂ ಸಮಾಜಕ್ಕಾಗಿ ಮಾಡಬೇಕಾದ ಕರ್ತವ್ಯವನ್ನು ಶಾಸ್ತ್ರಗಳು ನಿರ್ಧರಿಸಿಬಿಟ್ಟಿವೆ. "ಆಚಾರಃ ಪ್ರಥಮೋ ಧರ್ಮಃ". ಆಚಾರಗಳ ರಕ್ಷಣೆಯು ಪ್ರಥಮಧರ್ಮವೆಂದು ಪ್ರತಿಪಾದಿತವಾಗಿದೆ. ಸಮಾಜವು ದುರ್ಬಲವಾಗಿರುವನಕ—ತನ್ನ ವಿಚಾರಗಳೊಡನೆ ಏಕಾಂತವಾಗಿ ಅಥವಾ ವಿವಶವಾಗಿರುವನಕ—ಬಾಹ್ಯಪ್ರಭಾವಗಳನ್ನು ಮತ್ತು ಆಚಾರಗಳನ್ನು ಗ್ರಹಿಸಲಿ, ಯಾರ ಆಕ್ಷೇಪಣೆಯೂ ಇರುವುದಿಲ್ಲ; ಆದರೆ ಎಂದು ಸಮಾಜವು ಬೌದ್ಧಿಕ, ಮಾನಸಿಕ ಮತ್ತು ಹೃದಯದೃಷ್ಟಿಯಿಂದ ಸ್ವತಂತ್ರವಾಗಿದೆ ಎಂದು ವಿಶದವಾಗುವುದೋ—ಸಮರ್ಥವಾಗಿದೆಯೆಂದು ತಿಳಿಯುವುದೋ, ಅಂದೇ ಸಮಾಜದ ಲೌಕಿಕ ಮತ್ತು ಪಾರಲೌಕಿಕ ಉನ್ನತಿಯು ಶಾಸ್ತ್ರಾಚಾರಗಳ ಪಾಲನೆಯಿಂದಲೇ ಆಗುವುದೆಂದು ಸ್ಪಷ್ಟವಾಗಿರುವುದು. ಶಾಸ್ತ್ರೀಯ ಆದೇಶಗಳು ಜೀವನದ ಪ್ರತಿಯೊಂದು ಸ್ಥಿತಿ ಮತ್ತು ದೆಶೆಯನ್ನು ನಿಯಂತ್ರಿಸುತ್ತವೆ. ಶಾಸ್ತ್ರಾಚಾರಗಳಿಂದಲ್ಲದ ಪ್ರಭಾವವು ಸ್ಥಿರವಾಗಿರಬಲ್ಲ ಸನ್ನಿವೇಶವು ಜೀವನದಲ್ಲೆಲ್ಲಿಯೂ ಕಾಣಸಿಗದು. ಹಿಂದೂ ಸಮಾಜವೇ ಅಲ್ಲ, ಸಂಪೂರ್ಣ ಮಾನವ-ಸಮಾಜವು—ವಿಶ್ವವೆಲ್ಲ ತನ್ನ ವಿಕೃತನುನೋವೃತ್ತಿಯಿಂದ ಬಿಡುಗಡೆ ಹೊಂದಿ ನೋಡಿರಿ. ವಿವೇಚಿಸಿರಿ ಮನುಷ್ಯನ ಕಲ್ಯಾಣವು ಹಿಂದೂಸಮಾಜದ ಆಚಾರಗಳ ಪಾಲನೆಯಿಂದಲೇ ಆಗಬಲ್ಲುದೆಂದು ಅನುಭವಕ್ಕೆ ಬರುತ್ತದೆ. ಆದಿಕಾಲದಲ್ಲಿ ಸಂಪೂರ್ಣ ಮಾನವಜಾತಿ ಹಿಂದುವೇ ಆಗಿದ್ದಿತು. ಈ ಕಾರಣದಿಂದ ಈ ಮಾತು ಸತ್ಯವಿದೆ. ಆದಿ ಸಂಸ್ಕೃತಿಯೇ ಪೂರ್ಣ ಮತ್ತು ನಿರ್ದೋಷವಾಗಿದ್ದಿತೆಂಬುದೀಗ ಸಿದ್ಧವಾಗಿಬಿಟ್ಟಿದೆ

ಹಿಂದೂ?

ಇಲ್ಲಿಯೇ "ಹಿಂದೂ" ಎಂಬ ಶಬ್ದದ ವಿಚಾರ ಮಾಡಬೇಕಾಗಿದೆ. ಹಿಂದುಗಳಿಗೆ— ಅವರ ಸಮಾಜದಲ್ಲಿ ರಾಷ್ಟ್ರೀಯ ಮತ್ತು ಜಾತೀಯ ಭಾವನೆ ಇದ್ದಿಲ್ಲವೆಂದು ಹೇಳಲಾಗುತ್ತಿದೆ. ಅವರು ಸಂಪೂರ್ಣ

* ಡಾ. ಸುದರ್ಶನಸಿಂಹ ಅವರ ಮೂಲ ಹಿಂದೀ ಲೇಖನದ ಅನುವಾದವಿದ್ದು. – ಸಂ.

ರಾಷ್ಟ್ರಕ್ಕಾಗಲಿ, ಜಾತಿಗಾಗಲಿ ಹೆಸರಿಟ್ಟುಕೊಳ್ಳಲಿಲ್ಲ. "ಹಿಂದೂ" ಶಬ್ದ ನೋಡಿದರೆ ಅರ್ವಾಚೀನವಾಗಿದೆ— ಎನ್ನುವರು.

ಒಂದು ನೀತಿಯಿಂದ ನೋಲಿನ ಮಾತುಗಳು ನಿಜವಾಗಿವೆ. ಯಾವುದರದೆ ಆಗಲಿ ನಾಮಕರಣವಾಗಬೇಕಾದರೆ, ಇತರರ ಅಪೇಕ್ಷೆಯಿಂದಲಾಗುತ್ತದೆ. ಅನೇಕ ಪಶುಗಳ ಗುಂಪಿನಲ್ಲಿ ಆಕಳು, ನೋಕೆ, ಕುದುರೆ ಎಂಬೀ ಭೇದಗಳನ್ನು ಮಾಡಲಾಗುವುದು. ಅನೇಕ ಬಣ್ಣಗಳ ಹಸುಗಳಲ್ಲಿ ವರ್ಣವಿಶೇಷವನ್ನು ಹೇಳಬೇಕಾಗುವುದು. ಮತ್ತು ಒಂದೇ ಬಣ್ಣದ ಅನೇಕ ಗೋವುಗಳಿದ್ದರೆ, ಅವುಗಳ ನಾಮಕರಣ ಮಾಡಬೇಕಾಗುವುದು. ಕೇವಲ ಹಸುಗಳೇ ಇರುವಲ್ಲಿ "ಹಸು" ಎಂಬ ಹೆಸರನ್ನಿಡುವುದು ವ್ಯರ್ಥವಾಗುತ್ತದೆ. ಆದಿಸಂಸ್ಕೃತಿ ನೈದಿಕಸಂಸ್ಕೃತಿಯಾಗಿದೆ. ಮತ್ತುಳಿದ ಸಮಸ್ತಧರ್ಮಗಳು ಒಟ್ಟಾರೆ ಮೂರುಸಾವಿರ ವರುಷಗಳೊಳಗೇನೆ ಹುಟ್ಟಿಕೊಂಡಿವೆ ಎಂಬುದು ನಿರ್ವಿವಾದ ಸಿದ್ಧಾಂತವಿದೆ. ವಿಶ್ವದಲ್ಲಿ ಏಕಮಾತ್ರ ಧರ್ಮವಿದ್ದಾಗ, ಧರ್ಮದ ದೃಷ್ಟಿಯಿಂದ, ಅದರ ನಾಮಕರಣದ ಆವಶ್ಯಕತೆ ಎಲ್ಲೊದಗುತ್ತದೆ? ಆ ಸಮಯದಲ್ಲಿ ನಾಮಕರಣ ಮಾಡಿದ ಶಾಸ್ತ್ರಗಳು ಸಂಪೂರ್ಣ ಸಮಾಜವನ್ನು 'ಮಾನವ' ಎಂದು ಕರೆಯುತಿಲ್ಲವೆ? ಈಸಾಯೀ ಮತ್ತು ಮುಸಲ್ಮಾನ್ ಎಂಬ ಶಬ್ದಗಳು ಯಾವ ಬಗೆಯಲ್ಲಿ ಸೂಚಿಸುತ್ತಿವೆಯೋ ಅದೇ ರೀತಿಯಲ್ಲಿ "ಮನುಷ್ಯ" ಎಂಬ ಹೆಸರು ಮನುವಿನ ಕುಂತತಿಯನ್ನು, ಅನುಯಾಯಿಯನ್ನು ಸೂಚಿಸುವುದಿಲ್ಲವೆ? ಆ ಸಮಯದಲ್ಲಿ ವಿಶ್ವದಲ್ಲಿಯ ಉಳಿದ ಪ್ರಾಣಿಗಳಿಂದ ಪ್ರತ್ಯೇಕವಾದ ಹೆಸರನ್ನು ಮನುಷ್ಯನಿಗೆ ಕೊಡಬೇಕಾಗಿದ್ದಿತು. ಮನುಷ್ಯಸಮಾಜದಲ್ಲಿ ಧರ್ಮಗತ ಭೇದವಿರಲಿಲ್ಲ. ಆಚಾರಗತ ಭೇದದಿಂದಾಗಿ ಆರ್ಯ, ದಸ್ಯು, ಮ್ಲೇಚ್ಛ, ಯವನ, ಇತ್ಯಾದಿ ನಾಮಗಳು ಬಂದಿವೆ. ಜಾತಿಗತ ಮತ್ತು ವ್ಯವಸಾಯಗತ ಭೇದಗಳಿಂದಲೂ ಈ ಹೆಸರುಗಳು ಬಂದಿವೆ.

ವಿದೇಶೀಯರು ಯಾವ ರೀತಿಯಲ್ಲಿ "ಹಿಂದೂ" ಎಂಬೀ ಹೆಸರನ್ನು ನಮ್ಮ ಜಾತಿಗೆ ಕೊಟ್ಟಿರುವರೆಂದು ಹೇಳಲಾಗುತ್ತದೆಯೊ ಅದು ಸರಿಯಾಗಿಲ್ಲದಿದ್ದರೂ, ಅದನ್ನು ಸ್ವೀಕರಿಸುವುದರಲ್ಲೇನು ಹಾನಿಯಿದೆ? 'ಈ ಹೆಸರು ನಮ್ಮ ಜಾತಿಗೆ ಮುಸಲ್ಮಾನರಿಂದ ಕೊಡಲ್ಪಟ್ಟಿತು' ಹೀಗೆಂದು ಭ್ರಮೆ ಇರುವವರು, ಪಾರಸೀಯ ಧರ್ಮಗ್ರಂಥಗಳನ್ನು ಓದಿ ನೋಡಲಿ. ಅವುಗಳಲ್ಲಿ "ಪೂರ್ವಹಿಂದುಗಳು" ಮತ್ತು "ಪಶ್ಚಿಮಹಿಂದುಗಳು" ಎಂಬ ಶಬ್ದಗಳು ಸ್ಪಷ್ಟವಾಗಿ ಬಂದಿವೆ. ಇದರಿಂದಾಗಿ ಇನ್ನೊಂದು ಮಾತು: "ಹಿಂದೂ" ಶಬ್ದಕ್ಕೆ ಯಾವುದಾದರೂ ನಿಂದಿತ ಅರ್ಥವಿರುತ್ತಿದ್ದರೆ ಪಾರಸೀಯ ಧರ್ಮಗ್ರಂಥಗಳು ತಮ್ಮ ಅನುಯಾಯಿಗಳನ್ನು ಪಶ್ಚಿಮ ಹಿಂದುಗಳೆಂದು ಕರೆಯುತ್ತಿರಲಿಲ್ಲ. ಹಿಂದಿನ ಇರಾನಿನ ಕೋಶಕಾರರು "ಹಿಂದೂ" ಶಬ್ದಕ್ಕೆ ದರೋಡೆಕೋರ, ದಾಸ, ಸೇವಕ, ಪಹರೇದಾರ ಎಂಬರ್ಥವನ್ನು ಕೊಟ್ಟಿದ್ದಾರೆ; ಮತ್ತೆ ಇದೇ ಕಾರಣದಿಂದಲೇ ನಮ್ಮವರು ಮೆಟ್ಟಿಬೀಳುತ್ತಾರೆ. ಆದರೆ ಶಬ್ದುತ್ಪತ್ತಿಯ ಕಾರಣದಿಂದ ಒಂದು ಜಾತಿಯಲ್ಲಿ ಇನ್ನೊಂದು ಜಾತಿಯ ಹೆಸರು ಘೃಣಾಸೂಚಕವಾಗುತ್ತದೆ. ಇದನ್ನು 'ದೇವ' ಮತ್ತು 'ಅಸುರ' ಶಬ್ದಗಳು ತಿಳಿಸುತ್ತವೆ. ಸಂಸ್ಕೃತದಲ್ಲಿ "ದೇವ" ಶಬ್ದವು ಸೂಚಿಸುವ ಸಾತ್ವಿಕತೆ, ತೇಜಸ್ಸುಗಳನ್ನು ಪಾರಸೀ ಗ್ರಂಥಗಳಲ್ಲಿ "ಅಸುರ" ಶಬ್ದವು ಸೂಚಿಸುತ್ತದೆ. ನಮ್ಮಲ್ಲಿ "ಅಸುರ" ಶಬ್ದವು ಯಾವ ಅರ್ಥದಲ್ಲಿದೆಯೋ ಅದೇ ಅರ್ಥದಲ್ಲಿ ಪಾರಸೀ ಆಂಗ್ಲೇಯ ಭಾಷೆಗಳಲ್ಲಿ "ದೇವ" ಶಬ್ದವು ಪ್ರಯೋಗಿತವಾಗಿದೆ.

ಪಾರಸೀಕ ಧರ್ಮಗ್ರಂಥಗಳಲ್ಲಿಯೂ ಇರಾನಿನ ಪ್ರಾಚೀನ ಸಾಹಿತ್ಯದಲ್ಲಿಯೂ ಭಾರತೀಯ ಮತ್ತು ಪಾರಸೀಕರಿರ್ವರ ಜಾತಿಗಳಿಗೆ "ಹಿಂದು" ಎಂದು ಕರೆಯಲ್ಪಟ್ಟಿವೆ. ವಿದೇಶೀಯರಿಂದಾದ ನಾಮಕರಣವು ಹಾಗಿರಲಿ! ಅವರು ಯಾವಾಗಲೂ ಬೇರೆ ಹೆಸರಿನಿಂದಲೇ ಕರೆಯುವರು. ಇಂದು ಅಮೇರಿಕಾದಲ್ಲಿ ಭಾರತದಿಂದ ಹೋದವನು ಹಿಂದುವೇ ಆಗಲಿ, ಈಸಾಯಿಯೇ ಆಗಿರಲಿ "ಹಿಂದೂ" ಎಂದೇ ಕರೆಯಲ್ಪಡುತ್ತಾನೆ. ಇಡೀ ಜಗತ್ತೇ ಯಾವ ದೇಶವನ್ನು ಜರ್ಮನಿಯೆಂದೂ ಮತ್ತಾದೇಶದ ಜನರನ್ನು ಜರ್ಮನರೆಂದೂ ಕರೆಯುತ್ತದೆಯೋ ಆ ದೇಶದ ಕುರಿತು ಅಲ್ಲಿಯ ಜನರು ಸ್ವತಃ ತಮ್ಮನ್ನು "ಡೊಯಿಟ್ಸ್" ಎಂದೂ ತಮ್ಮ ನಾಡನ್ನು 'ಡೋಯಿಟ್ಸ್‌ಲ್ಯಾಂಡ್' ಎಂದೂ ಕರೆದುಕೊಳ್ಳುತ್ತಾರೆ. ಆಂಗ್ಲೇಯರನ್ನು ಫಿರಂಗಿಗಳೆಂದು ಕರೆಯುತ್ತೇವೆ. ಪ್ರತಿಯೊಂದು ವಿದೇಶೀಯ ಜಾತಿಯೂ ಮತ್ತೊಂದಕ್ಕೆ ಸ್ವೇಚ್ಛಾನುಸಾರ ಹೆಸರಿಡುತ್ತದೆ; ಮತ್ತದಕ್ಕೆ ಆ ಅಧಿಕಾರವಿದೆ.

ಸುವರ್ಣಸಂಧಿ! ಸಚಿತ್ರಗ್ರಂಥ!! ಸುಂದರ ಮುನ್ನ !!

ಶಿಕ್ಷಣ - ಶಿಕ್ಷಕ ದರ್ಶನ

ಶಿಕ್ಷಕರಿಗೂ ಶಿಕ್ಷಕವಿದ್ಯಾರ್ಥಿಗಳಿಗೂ ಉಪಯುಕ್ತವಾಗುವಂತಹ, ಶಿಕ್ಷಣತಜ್ಞರಿಂದ ಪರಿಶೀಲಿಸಲ್ಪಟ್ಟಂತಹ. ಅನೇಕ ವಿನ್ಯಾಸಗಳ ಸದಭಿಪ್ರಾಯವನ್ನು ಪಡೆದಂತಹ ಶೈಕ್ಷಣಿಕ ಉದ್ಗ್ರಂಥ.

ಕರ್ನಾಟಕ ವಿ. ವಿ. ನಿಲಯದ ಕುಲಪತಿಗಳಾದ ರ್ಯಾಂಗ್ಲರ್ ಶಾವಟೆಯವರು ಮುನ್ನುಡಿಯನ್ನು ಬರೆದಿದ್ದಾರೆ.

೪೧ ಚಿತ್ರಪಡಿಯಚ್ಚುಗಳಿವೆ! ೪೭೫ ಪುಟಗಳು.

ಸಾದಾಪ್ರತಿಗೆ ೩-೦-೦. ಸುಂದರ ಪ್ರತಿಗೆ ೪-೦-೦.
ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ ದೊರೆಯುವುದು.

ವಿವರಗಳಿಗಾಗಿ ಬರೆಯಿರಿ:

ನಿಂಬಾಳಿ ಕಲ್ಯಾಣಪ್ಪ, ಪೋ. ತಿಕೋಟಿ, ಜಿ. ವಿಜಾಪುರ
ಅಥವಾ ಆಶಾ ಸಾಹಿತ್ಯಮಂದಿರ, ವಿಜಾಪುರ

ಇನ್ನಾದರೂ "ಹಿಂದೂ" ಎಂಬ ಹೆಸರನ್ನು ನಮ್ಮ ಜಾತಿಗೆ ನಾವು ಸ್ವತಃ ಕೊಟ್ಟುಕೊಂಡಿದ್ದೇವೆ. ಇದು ಇತರರಿಂದ ದತ್ತವಾದ ನಾಮಧೇಯವಲ್ಲವೆ.

ವೇದಗಳಲ್ಲಿಯ "ನೇಶಾ ಸಿಂಧೂನಾಂ" ಮತ್ತು "ಪತಿಃ ಸಿಂಧೂನಾಂ" ಎಂಬ ಮಂತ್ರಗಳು, ನಮ್ಮ ನಾಡಿನ ನಾಮವು "ಸಿಂಧು" ಎಂದೂ, ಇದೇ ನಮ್ಮ ಜಾತಿಯ ಹೆಸರಿಂದೂ ಸ್ಪಷ್ಟವಾಗಿ ತಿಳಿಸೇಳುತ್ತವೆ. ಸಿಂಧುನದಿಯ ಉತ್ತರಭಾಗದಲ್ಲಿ, ಸಿಂಧು-ಸರಸ್ವತಿಗಳ ನಡುವೆ ಇರುವ "ಬ್ರಹ್ಮಾವರ್ತ"ವೇ ಮಾನವಜಾತಿಯ ಪ್ರಾರಂಭಿಕ ನಿವಾಸಭೂಮಿಯಾಗಿದೆ. ಅದೇ "ಸಿಂಧು" ವಿನ ಕಾರಣದಿಂದ ದೇಶಕ್ಕೆ ಸಿಂಧುವೆಂಬ ಹೆಸರಾಯಿತು. ವೇದಗಳಲ್ಲಿಯೂ "ಸ" ದ ಪರಿವರ್ತನೆಯು "ಹ" ಎಂದಾಗಿದೆ. ಶ್ರುತಿಗಳಲ್ಲಿ "ಶಿರಾ" ಮತ್ತು "ಹಿರಾ" ಈ ಎರಡು ಹೆಸರುಗಳೂ ನಾಡಿಗಳಿಗೆ ಬಂದಿವೆ. ಆದುದರಿಂದ "ಸಿಂಧು" ಎಂಬುದು "ಹಿಂಧು" ಎಂದು ಆದಿಕಾಲದಲ್ಲಿಯೇ ಆಗಿದೆ. ಫಾರಸಿ ಧರ್ಮವು ವೈದಿಕಪದ್ಧತಿಯ ಒಂದಂಶವನ್ನು ತೆಗೆದುಕೊಂಡಿದೆ. ಏಕೆಂದರೆ ಈ ಧರ್ಮವು ವೈದಿಕಧರ್ಮದಿಂದಲೇ ಬೇರ್ಪಟ್ಟಿದೆ. ವೇದಗಳಲ್ಲಿ "ಸ" ವು "ಹ" ರೂಪದಲ್ಲಿ ಪ್ರಯೋಗಿತವಾಗಿದೆ. ಈ ಪದ್ಧತಿಯು ತಿರುವು ಮುರುವಾಯಿತು ಮತ್ತೆ ಫಾರಸಿ ಭಾಷೆಯಲ್ಲಿ. "ಸಪ್ತಾಹ್" ವು "ಹಪ್ತಾಹ್" ವೇನೋ ಆಯಿತು; ಆದರೆ "ಸಿಂದು" ವನ್ನು "ಹಿಂದು" ಎಂದು ಅವರು ಮಾರ್ಪಡಿಸಿರುವರೆಂದೊಪ್ಪಿಕೊಳ್ಳುವುದು ಉಚಿತವಲ್ಲ; ಸರಿಯೂ ಇಲ್ಲ. ಈ ಪರಿವರ್ತನೆಯು ಸ್ವಯಂಸಂಸ್ಕೃತದ ನಿಯಮಗಳಿಗೆ ಅನುಸಾರವಾಗಿ ಆಗಿದೆ ಇಂದು ಹಿಂದಿಯಲ್ಲಿ "ಗ್ಯಾರಹ್", "ಬಾರಹ್", "ತೇರಹ್" ಆದಿಗಳು ಕ್ರಮವಾಗಿ "ಏಕಾದಶ", "ದ್ವಾದಶ", "ತ್ರಯೋದಶ"ಗಳ ರೂಪಗಳಾಗಿವೆ; ಮತ್ತು ಎಲ್ಲವುಗಳಲ್ಲಿ "ಸ"ದ ರೂಪವು "ಹ" ಆಗಿಹೋಯಿತು. ಪ್ರಾಕೃತಭಾಷೆಯಲ್ಲಿಯೂ "ಸ" ದ ಉಚ್ಚಾರಣೆ "ಹ" ಎಂಬುವಾಗಿ ಬಹಳ ಸ್ಥಳಗಳಲ್ಲಿ ಆಗುತ್ತದೆ.

ಯಾವ ರೀತಿಯಲ್ಲಿ "ಹಿಂದೂ" ಎಂಬ ಹೆಸರನ್ನು ನಮ್ಮ ಜಾತಿಗೆ ನಾವೇ ಇಟ್ಟುಕೊಂಡೆವೋ; ಮತ್ತು ಆಚಾರದಿಂದ ಚ್ಯುತವಾದ ಜಾತಿಗಳಿಂದ ಮೂಲ ಜಾತಿಯ ಪಾರ್ಥಕ್ಯ ಮಾಡಲಾಗುವುದಕ್ಕೆಂದು ಈ ಹೆಸರು ಇಡಲ್ಪಟ್ಟಿತೋ, ಹಾಗೆಯೇ, ಯದ್ಯಪಿ ಸಂಪೂರ್ಣ ವಿಶ್ವದಲ್ಲಿ ಭಾರತದಿಂದ ಹೊರಟ ಕ್ಷತ್ರಿಯರೇ ಹೋಗಿ ನೆಲಸಿದ್ದರೂ ಸನುಯದಲ್ಲಿ ಇಡೀ ಪೃಥ್ವಿಯೇ ಒಂದು ರಾಷ್ಟ್ರವಾಗಿದ್ದರೂ

ಶಾಂತಿಸೇವಾಸದನದ ಇಸ ಪ್ರಕಟಣೆಗಳು

ಜೈನಧರ್ಮ	೧೫-೦-೦
ಶ್ರೀ. ಮಿರ್ಜಿ ಅಣ್ಣಾರಾಯರು	
ಹಾಲು-ಹಣ್ಣು (ಕವನ ಸಂಗ್ರಹ)	೧-೮-೦
ಶ್ರೀ. ಭುದೇಂದ್ರ ಮಹಿಷವಾಡಿ	
ಮೂಲಶಿಕ್ಷಣದ ಮೌಲ್ಯಮಾಪಣ	೦-೧೨-೦
ಶ್ರೀ. ಮಿರ್ಜಿ ಅಣ್ಣಾರಾಯರು	
ಬಾಳ-ಬಂಡಿ (ಕವನ ಸಂಗ್ರಹ)	೦-೮-೦
ಶ್ರೀ. ಬಾಳು ಬಿ. ಉಪಾಧ್ಯೆ	
ಭರತೇಶನ ನಾಲ್ಕು ಚಿತ್ರಗಳು	೧-೪-೦
ಶ್ರೀ. ಮಿರ್ಜಿ ಅಣ್ಣಾರಾಯರು	

ಅಚ್ಚಿನಲ್ಲಿ:

ಸಂಸ್ಕೃತಿಯ ಹೃದಯ

ಭಾರತದ ಬೆಳಕು

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿ ಸೇವಾಸದನ, ಸೇಡಬಾಳ

ಪೊ. ಸೇಡಬಾಳ (ಜಿಲ್ಲಾ ಬೆಳಗಾಂವಿ)

ಸಮಸ್ತ ದೇಶಗಳ ಜನರು ತಮ್ಮ ಆಚಾರಗಳ ಆದರ್ಶವನ್ನು ಇಲ್ಲಿಂದಲೆ ಸ್ವೀಕರಿಸುತ್ತಿದ್ದರೂ, ವಿಶ್ವದಲ್ಲಿ ಒಂದೇ ಸಂಸ್ಕೃತಿಯಿದ್ದಿತು; ಮತ್ತು ಭಾರತೀಯ ಸಮ್ರಾಟರೇ ವಿಶ್ವವಿಜಯೀ ಚಕ್ರವರ್ತಿಯಾಗಿರುತ್ತಿದ್ದರು, ಈಗಿನ ರೀತಿಯ ಜಾತಿಧರ್ಮ-ಆಚಾರಗಳ ತಥಾ ಶಾಸನದ ದೃಷ್ಟಿಯಿಂದ ರಾಷ್ಟ್ರಭೇದದ ಕಲ್ಪನೆಯು ಸಾಧ್ಯವಿರಲಿಲ್ಲ. ಆದರೂ ಭಾರತವು ಪುಣ್ಯಭೂಮಿಯೆಂಬ ಭಾವನೆಯು ಅನಾದಿಕಾಲದಿಂದಲೂ ಶಾಸ್ತ್ರಗಳಲ್ಲಿ ಪ್ರತಿಪಾದಿತವಾಗಿದೆ. ಈ ಪುಣ್ಯಭೂಮಿಯ ಏಕತೆ, ಸ್ವರೂಪ ಮೊದಲಾದುವುಗಳ ಸಂಬಂಧದಲ್ಲಿ ತಿಲಮಾತ್ರವೂ ಸಂಶಯಕ್ಕೆ ಅವಕಾಶವಿಲ್ಲ.

ಆಂತರವಿಶ್ವವಿದ್ಯಾಲಯ ಯುವಜನ ಮಹೋತ್ಸವ

ಎ. ಜಿ. ಪಟ್ಟಣ ಕುಲಕರ್ಣಿ, ಬಿ. ಎ. (ಆನರ್ಸ್), ಧಾರವಾಡ

ವಿಶ್ವವಿದ್ಯಾಲಯದ ಯುವಜನೋತ್ಸವಕ್ಕಾಗಿ ಭಾರತಸರಕಾರವು ಮಾಡುವ ವೆಚ್ಚವು ರಾಷ್ಟ್ರದ ನ್ಯರ್ಥ ವ್ಯಯ— ಎಂದು ಬೀಳುಗಳೆಯುವ ಮಹನೀಯರು ನಮ್ಮಲ್ಲಿ ಸಾಕಷ್ಟು ಜನರು. ಅವರು ವ್ಯಾವಹಾರಿಕ ಬೆಲೆಯನ್ನು ಮಾತ್ರ ಅರಿತವರು; ಸಂಸ್ಕೃತಿಯ ಮಹತ್ತ್ವವನ್ನವರು ಅರಿಯರು.

"A fuller development of the youth is possible only when they are provided with opportunities for Self-expression in an atmosphere of freedom, under proper guidance."

ಇಂದು ಭಾರತವರ್ಷದ ಯುವಜನರ ಆತ್ಮವಿಕಾಸವಾಗಬೇಕಾಗಿದೆ. ಅವರಲ್ಲಿದ್ದ ವೈವಿಧ್ಯದ ಕಲ್ಪನೆಯೊಡನೆ ಏಕ್ಯದ ದಾರಿಯು— ಸತ್ಯದ ಗುರಿಯು— ತಿಳಿಯಬೇಕಾಗಿದೆ. ಸ್ವಯಂಸ್ಫೂರ್ತಿಯಿಂದ ಸಾಧಿಸುವಂತಹ ಒಂದು ಸಾಂಸ್ಕೃತಿಕ ಚಟುವಟಿಕೆಯಿಂದ ಪ್ರೇಮ ವಿಶ್ವಬಾಂಧವ್ಯ ಇವು–ಮುಂದೆ ಮರವಾಗಲು– ಮೊಳೆಯಬೇಕಾಗಿದೆ. ಇದಕ್ಕಾಗಿ ಭಾರತದ ಮೂಲೆ-ಮೂಲೆಯಿಂದಲೂ ತರುಣರು— ತಮ್ಮ ಭಾಗದ ಸಂಸ್ಕೃತಿಯನ್ನು ಒರೆಗೆ ಹಚ್ಚಲು–ಒಂದೆಡೆ ಬಂದು ಸೇರಬೇಕು. ಈ ಭಾಗ್ಯ ವಿಶ್ವವಿದ್ಯಾಲಯಗಳಲ್ಲಿ ಅಭ್ಯಾಸಮಾಡುತ್ತಿರುವ ತರುಣ-ವಿದ್ಯಾರ್ಥಿಗಳಿಗೆ ದೊರೆತದ್ದು ಒಂದು ಅಪೂರ್ವ ಸಂಗತಿ.

ಮೂವತ್ತೊಂದು ವಿಶ್ವವಿದ್ಯಾಲಯಗಳಿಂದ ಹದಿನಾರುನೂರು ವಿದ್ಯಾರ್ಥಿಗಳು ಯುವಜನ ಮಹೋತ್ಸವದಲ್ಲಿ ಭಾಗವಹಿಸಲು ಹೊಸದಿಲ್ಲಿಗೆ ಬಂದಿದ್ದಾರೆ. ಈ ಸಾಂಸ್ಕೃತಿಕ ಶಿಬಿರ ಭವ್ಯವಾದ 'ತಾಲಕಟೋರಾ ಗಾರ್ಡನ್ಸ್" ನ ಒಂದು ಭಾಗದಲ್ಲಿ, ತಿಂಗಳೆಯ ಅಕ್ಟೋಬರ್ ೧೫ರಂದು ಪ್ರಾರಂಭವಾಯಿತು. ಪಂಡಿತ ಜವಾಹರಲಾಲ ನೆಹರೂರವರು ಉದ್ಘಾಟನಾಭಾಷಣದಲ್ಲಿ, ವಿದ್ಯಾರ್ಥಿಗಳು ರಾಜಕಾರಣದಲ್ಲಿ ಭಾಗವಹಿಸಬಾರದೆಂದು ಹೇಳಿದರು. ಇದೇ ನೆಹರೂ ಅವರು, ವಿದ್ಯಾರ್ಥಿಗಳಿಗೆ ರಾಜಕಾರಣದಲ್ಲಿ ಭಾಗವಹಿಸಲು ಹೇಳುತ್ತಿದ್ದ ದಿನಗಳೂ ಇದ್ದುವು. ಆದರೆ ಇಂದು ಆ ದಿನಗಳ ಮರುಕಳಿಸುವ ಸ್ಥಿತಿ ನಮಗಿಲ್ಲ. ನಮ್ಮ ಪೂರ್ವಜರ ಪುಣ್ಯದಿಂದ, ಅವರ ಕಷ್ಟದ ಫಲವಾಗಿ, ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ಆದರೆ ಈಗ ನಮ್ಮ ಹೊಣೆಗಾರಿಕೆ ಕಡಿಮೆಯಾಗಿಲ್ಲ, ಹೆಚ್ಚಾಗಿದೆ. ಒಬ್ಬ ಶಾಂತಿದೂತನನ್ನು ಪಡೆದ ಭಾರತೀಯರೆಲ್ಲರೂ ಇಂದು ವಿಶ್ವದ ಶಾಂತಿದೂತರಾಗಬೇಕಾಗಿದೆ; ಆದರ್ಶ ನಾಗರಿಕರಾಗಬೇಕಾಗಿದೆ. ಮೌಲಾನಾ ಅಬುಲ್ ಕಲಮ್ ಅಝಾದರು ಮೂರನೆಯ ಯುವಜನ ಮಹೋತ್ಸವದ ಬಗ್ಗೆ ಹೇಳುತ್ತ:— ಇ ಏಳು ದಿವಸಗಳಲ್ಲಿ ದೊರೆಯುವ ಶಿಕ್ಷಣ ಯಾವ ಕಾಲೇಜಿನಲ್ಲಿಯ ಯಾವ ವಿಶ್ವವಿದ್ಯಾಲಯದಲ್ಲಿಯೂ ಸಿಗಲಾರದೆಂದರು. 'Festiva ಈ ಶಬ್ದಕ್ಕೆ 'ಉತ್ಸವ, ಹಬ್ಬ' ಎನ್ನುವುದಕ್ಕಿಂತ 'ಜಾತ್ರೆ' ಎನ್ನುವುದು ಹೆಚ್ಚು ಸರಿಯಾದೀತೆಂದರು. ನಿಜವಾಗಿಯೂ ಈ ಉತ್ಸವದ ಭಾಗವಹಿಸಿದ ಜನರ ಸಮೂಹವನ್ನು ಕಂಡಾಗ, ಅದನ್ನೊಂದು 'ಜಾತ್ರೆ' ಯೆಂದೇ ಕರೆಯಬೇಕೆನಿಸುತ್ತದೆ. ಆದರೆ ಜಾತ್ರೆಗೂ ಇದಕ್ಕೂ ಒಂದು ಭೇದವಿದೆ:—ಜಾತ್ರೆಯಲ್ಲಿರುವ ಅವ್ಯವಸ್ಥೆ ಇಲ್ಲಿ ಕಂಡುಬರುತ್ತಿರಲಿ

ಸ್ಪರ್ಧೆಗಾಗಿದ್ದ ವಿವಿಧವಿಷಯಗಳೆಂದರೆ ರಂಗನಾಟ ರೇಡಿಯೊ ನಾಟಕ, ವೃಂದನೃತ್ಯ, ವೃಂದಗೀತ, ಶಾಸ್ತ್ರೀಯ ಸಂಗೀ ಕಲೆ, ಹಿಂದೀ ವಾಕ್‌ಸ್ಪರ್ಧೆ ಮುಂತಾದುವುಗಳು. ಬಯಲು-ನಾಟ್ಯಗೃಹದಲ್ಲಿ ಈ ಎಲ್ಲ ಸ್ಪರ್ಧೆಗಳು ನಡೆಯುತ್ತಲಿದ್ದುವು. ಎಷ್ಟು ಸಾವಿರಕ್ಕೆ ಮೇಲ್ಪಟ್ಟು ಪ್ರೇಕ್ಷಕವೃಂದ! ರಾತ್ರಿಯಲ್ಲಿ ಅನೇಕ ವಿದ್ಯುದ್ದೀಪಗಳ ವಿವಿಧರಂಗದ ಕಿರಣಗಳು ನಾಟ್ಯಮಂದಿರವನ್ನು ಶೋಭಿಸುತ್ತಿದ್ದುವು. ಕಾರ್ಯಕ್ರಮ ನಡೆದ ವೇಳೆಯಲ್ಲಿ—'ಅಬ್ಬಾ ಭಾರತದಲ್ಲಿ ಇಷ್ಟು ವೈವಿಧ್ಯವಿದೆಯೇ!' ಎಂದುಕೊಂಡೆವು. ಉಡುಪೇ –ನೀತಿ, ಹಾವ-ಭಾವ, ನೃತ್ಯ, ಗೀತ, ಭಾಷೆ ಎಲ್ಲವೂ ಬೇರೆ ಆದರೂ ಎಲ್ಲರನ್ನೂ ಕೂಡಿಸುವ ಒಂದೇ ಸೂತ್ರ 'ಭಾರತೀಯತೆ' ಕ್ಷಣಕ್ಷಣಕ್ಕೂ ವೈವಿಧ್ಯದಲ್ಲಿ ಏಕತ್ವ, ಏಕತ್ವದಲ್ಲಿ ವೈವಿಧ್ಯ'-ಕಂಡುಬರುತ್ತಿತ್ತು. ಗೌಹಾತಿ ವಿಶ್ವವಿದ್ಯಾಲಯದ ವೃಂದನೃತ್ಯ 'ನಾಗಾನೃತ್ಯ' ವನ್ನು ನೋಡಿದಾಗ, ನಾವು ನಿಜವಾಗಿಯೂ ನಲ್ಲಿರುವೆನೆಂಬ ಭಾವನೆಯಾಗುತ್ತಿತ್ತು. ಅವರ ಉಡುಪು,

(ಎಡಬದಿಯ ಪುಟ ನೋಡಿರಿ)

ಪೂರ್ಣಾಹುತಿ

(ಐತಿಹಾಸಿಕ ತರಂಗರೂಪಕ)*

卐

'ಆನಂದಳಿಂದ'

卐

[ಹಿಂದಿನ ಸಂಚಿಕೆಯಿಂದ ಮುಂದುವರಿದುದು.]

ಜನೆಯ ಸನ್ನಿವೇಶ

ನಿರೂಪಕ:

ಸಿಂಹಾಸನಾರೋಹಣದ ಮಹಾಸಭೆಯಿಂದ ಮರಳಿ ಶಾಂತಿಕುಟೀರಕ್ಕೆ ಬಂದ ರಾಜಶೇಖರನಿಗೆ, ಮನಃಸಮಾಧಾನವೇ ಇಲ್ಲದಂತಾಗಿದೆ. ವಿಜಯನಗರಸಾಮ್ರಾಜ್ಯದ ಕಲ್ಯಾಣದ ಕಡೆಗೇ ದೃಷ್ಟಿಯಿರುವ ರಾಜಶೇಖರ, ಅದರ ಭವಿಷ್ಯವನ್ನು ಕುರಿತು, ಬಗೆಬಗೆಯಾಗಿ ಆಲೋಚಿಸುತ್ತಿದ್ದಾನೆ. ಅನಾಥನಿಲಯದ ನಾರಾಯಣ ಪಂಡಿತರು ರಾಜಶೇಖರನ ಬಳಿ ಬಂದುಹೋದರು. ಅವರೊಂದಿಗೆ ಅಂದಿನ ಸಭೆಯಲ್ಲಿಯ ಅವಿವೇಕದ ಘಟನೆಗಳನ್ನೇ ಕುರಿತು ಚರ್ಚಿಸಿದ. ಪೆದ್ದರಾಯನೆ ವಿಷಯದಲ್ಲಿ ಸಾಮ್ರಾಜ್ಯದ ಪ್ರಜೆಗಳಲ್ಲಿ ಅತೃಪ್ತಿಯುಂಟಾಗದಂತೆ ತಾನೇನು ಮಾಡಬೇಕೆಂಬುದನ್ನು ನಿರ್ಣಯಿಸಿ, ನಾರಾಯಣಪಂಡಿತರೆದುರು ವಿಸ್ತರಿಸಿದ. ಪಂಡಿತರು ಹೊರಟು ಹೋದ ನೇಲೆಯೂ ರಾಜಶೇಖರ, ಕುಳಿತ ಆಸನದಲ್ಲಿಯೇ ಧ್ಯಾನಮಗ್ನನಾಗಿ ಕುಳಿತುಕೊಂಡಿದ್ದಾನೆ. ರಾತ್ರಿಯ ಹತ್ತುಗಳಿಗೆ ಕ್ರಮಿಸಿದುದರ ಪರವೆ ಆತನಿಗೆ ಇದ್ದಂತೆಯೆ ಇಲ್ಲ. ಇದೀಗ ಅವನ ಕಿವಿಗೆ ಧ್ವನಿಯೊಡೆಯತೊಡಗಿದೆ.

ರಾಜ :— (ಕೆಳದನಿಯಲ್ಲಿ)

ಹುಂ. ಹುಂ ಹುಂ ಹುಂ ಹುಂ—ಹುಂ ಹುಂ ಹೂಂ ಹುಂ ।
ಹುಂ ಹುಂ ಹುಂ ಹೂಂ—ಹುಂ ಹುಂ ಹೂಂ ಹುಂ ।
ಹುಂ ಹುಂ ಹೂಂ ಹುಂ ಹೂಂ ॥
ಮನದೊಳಿಂದಿನ ಭಯಣದೆಣೆಯರಿತು ದೀವಟಿಗ
ಅನುಗೊಳಿಸು ಚಿನ್ನಾಗಿ ಮಿನುಗುವೊಲು ದೀವಿಗೆಯ ॥ ಪ ॥
ಇರುಳು ಮೊದಲೇ ಅಮಾಸೆಯದು, ಕರಿಗತ್ತಲೆಯು
ಹರಡಿ ಹತ್ತೂ ದೆಸೆಗಳನ್ನು ಮರೆಮಾಡಿಹುದು ।
ಕಿರುಬೆಳಕನಾದರೂ ಕೊಡುವುನೆನೆ ತಾರೆಗಳು
ಕರಿಯ ಮೋಡವು ಮುಚ್ಚಿಹುದು ತನ್ನ ಮುಖುಕಿನೊಳು....
ಮನದೊಳಿಂದಿನ ಭಯಣ ॥ ೧ ॥

[ರತ್ನಾಂಬಿಕೆಯು ಅಲ್ಲಿಗೆ ಬರುವಳು]

ರತ್ನಾ:— (ಏಸುಧ್ವನಿಯಲ್ಲಿ) ಹುಂಬ ತಲ್ಲೀನಭಾವದಲ್ಲಿ ಕುಳಿತಿದ್ದಾರೆ. ..... ನಾನು ಬಂದು ನಿಂತುದರ ಅರಿವೇ ಇವರಿಗಿಲ್ಲ! (ಮೆಲ್ಲಗೆ ಕೆಮ್ಮುವಳು.)

ರಾಜ:— ಯಾರವರು ?

ರತ್ನಾ:— ಈಗ ಗೊತ್ತಾಗಿರಬಹುದು....ನಾನು ಯಾರೆಂಬುದು.

ರಾಜ:— (ತನಗೆ ತಾನೆ) ರತ್ನಾಂಬಿಕೆ! ಏನು ತಾಯಿ, ಮತ್ತೆ ಏಕೆ ಬಂದಿರಿ ?

ರತ್ನಾ:— ಇಂದಿನ ಓಲಗದಲ್ಲಿಯ ತಮ್ಮ ನಡೆವಳಿಕೆ, ನನ್ನನ್ನು ಇಲ್ಲಿಗೆ ಎಳೆದು ತಂದಿತು, ಅದಕ್ಕಾಗಿಯೇ ಬಂದಿದ್ದೇನೆ.

ರಾಜ:— (ನಿಟ್ಟುಸಿರ ಬಿಟ್ಟು) ಸರಿ!

ರತ್ನಾ:— ವಿಜಯನಗರದ ಸಿಂಹಾಸನದ ಅದೃಷ್ಟವೇ ಹೀಗಿದೆಯೇನೋ! ನಿಮ್ಮಂತಹರ ಸಹವಾಸಸೌಖ್ಯವನ್ನು ಅದು ಕಳೆದುಕೊಂಡಿದೆ.

ರಾಜ:— ವಿಜಯನಗರವನ್ನು ಬಿಟ್ಟು ನಾನೆಲ್ಲಿ ಹೋಗುತ್ತೇನೆ ಅಮ್ಮಾಜಿ? ಆ ಪವಿತ್ರಸಿಂಹಾಸನಕ್ಕೆ ನನ್ನಿಂದ ಸಾಧ್ಯವಿರುವ ಸೇವೆಯನ್ನು ಸಲ್ಲಿಸಿಯೆ ಸಲ್ಲಿಸುತ್ತೇನೆ.

ರತ್ನಾ:— (ಭಕ್ತಿಭಾವದಿಂದ) ಸಹವಾಸಕ್ಕೂ ಸೇವೆಗೂ ಅಂತರವಿದೆಯಲ್ಲವೆ? ನಿಮ್ಮ ಜೊತೆಯಿಂದ, ಕನ್ನಡ ಸಾಮ್ರಾಜ್ಯದ ಆ ಸಿಂಹಾಸನದ ಬೆಲೆಯೂ ಹೆಚ್ಚುತ್ತಿದ್ದಿತು.

ರಾಜ:— ಅದನ್ನೇನೂ ನಾನು ಕಾಣೆ. ಕನ್ನಡ ರಾಜ್ಯಲಕ್ಷ್ಮಿಯ ನಿರಪೇಕ್ಷಸೇವಕನಾಗಿ ಇರಬೇಕೆಂಬ ಒಂದೆ ಒಂದು ಆಶೆಯನ್ನು ನಾನು ಇರಿಸಿಕೊಂಡಿದ್ದೇನೆ.

ರತ್ನಾ: – (ವಿಷಾದದ ನಗೆಯ ತುಣುಕಿನೊಂದಿಗೆ ನಿಟ್ಟುಸಿರಿಡುವಳು)

ರಾಜ:— ಹಿಂದೆಯೇ ನಾನು ನಿಮಗೆ ಖಂಡಿತವಾಗಿ ಹೇಳಿದ್ದೇನೆ. ನನ್ನ ಕಡೆಗೆ ಬರುತ್ತಿರಬೇಡಿರೆಂದು! ಮಹಾರಾಣಿಯಾಗಬೇಕೆಂಬ ನಿಮ್ಮ ಮಹತ್ವಾಕಾಂಕ್ಷೆಗೆ, ನನ್ನಿಂದ ಏನಾದರೂ ನೆರವನ್ನು ಹಾರೈಸಿ ಬಂದಿದ್ದೀರಾ?

* ಧಾರವಾಡದ ಆಕಾಶವಾಣಿಯು ಕೇಂದ್ರದಿಂದ ಚಿತ್ರರೂಪಕವಾಗಿ ಪ್ರಸಾರಗೊಂಡ ರೂಪಕವಿದು. —ಸಂ.

ರತ್ನಾ:— ಇಲ್ಲ ಇಲ್ಲ! ನಾನು ಆ ಆಶೆ-ಆಕಾಂಕ್ಷೆಗಳಿಗೆಲ್ಲ ನೀರು ಎರೆದೇ ಬಂದಿದ್ದೇನೆ.

ರಾಜ:— ಎಂದರೇನು?

ರ:— ನನಗೆ ಮಹಾರಾಣಿಯಾಗುವುದು ಬೇಡವಾಗಿದೆ. ನಿಮ್ಮ ಜೊತೆಯಲ್ಲಿ ನಾನೂ ಸೇವಕಿಯಾಗಿರಬೇಕೆಂದು ಅಪೇಕ್ಷಿಸುತ್ತಿದ್ದೇನೆ.

ರಾಜ:— ಸಾಮ್ರಾಜ್ಯವ ಸೇವೆ, ಕನ್ನಡ ನಾಡಿನ ಎಲ್ಲ ಸ್ತ್ರೀ-ಪುರುಷರಿಗೂ ಕರ್ತವ್ಯವಾಗಿದೆ. ಅದನ್ನು ಮಾಡುವುದಕ್ಕೆ ಎಲ್ಲರಿಗೂ ಸ್ವಾತಂತ್ರ್ಯವಿದೆ. ನನ್ನ ಜೊತೆಯೇಕೆ ಬೇಕು ಅದಕ್ಕೆ?

ರತ್ನಾ:— ಸಾಮ್ರಾಜ್ಯದ ಸೇವೆ....ಹುಂ; ಅದು ನನಗೆ ಇಷ್ಟವಾದುದಾಗಿದ್ದರೂ, ಅದೊಂದರಿಂದಲೇ ನನಗೆ ತೃಪ್ತಿಯಿಲ್ಲ.

ರಾ:— ಮತ್ತೇನು ಬೇಕು ನಿಮಗೆ?

ರ:— (ತಗ್ಗಿದ ಕಂಠದಲ್ಲಿ ಮೆಲ್ಲಗೆ) ಸಾಮ್ರಾಜ್ಯಸೇವೆಯೊಡನೆಯೆ ನಿಮ್ಮ ಸೇವೆ-ಸಾಹಚರ್ಯಗಳೂ ಸಿಗಬೇಕೆಂದು ನನ್ನ ಅಂತರಂಗದ ಆಶೆಯಾಗಿದೆ.

ರಾ:— ಅಮ್ಮಾ, ನಿಮಗೆ ನಾನು ಮೊದಲೇ ಹೇಳಿದ್ದೇನೆ. ಮತ್ತೆ ಮತ್ತೆ ಅದನ್ನೇ ಕೇಳಿ, ನಿಮ್ಮ ನಿರಾಶೆಯನ್ನು ಹೆಚ್ಚಿಸುವಂತಹ ಉತ್ತರವನ್ನು ನನ್ನಿಂದ ಏತಕ್ಕಾಗಿ ಅಪೇಕ್ಷಿಸುತ್ತೀರಿ.

ರ:— (ಕರುಣೆಯ ಭರದಲ್ಲಿ) ರಾಜಶೇಖರಾ!

ರಾ:— ಏನು ತಾಯಿಾ?

ರ:— (ಕಂಪಿತ ಕಂಠದಿಂದ) ನಿನ್ನ ಹೃದಯಕ್ಕೆ ಕಣ್ಣುಗಳಿಲ್ಲವೇ ರಾಜಶೇಖರಾ?

ರಾ:— ಅಮ್ಮಾ, ಕಣ್ಣುಗಳೇನೋ ಇವೆ; ಆದರೆ ಬೇಡವಾದುದನ್ನು ನೋಡಬೇಕೆಂಬ ಆಶೆ ಅವುಗಳಿಗೆ ಇಲ್ಲವಾಗಿದೆ.

ರ:— (ಗದ್ಗದ ದನಿಯಲ್ಲಿ) ಅಂತಹ ಆಶೆಯನ್ನು ಹೆಚ್ಚುವ ಶಕ್ತಿ ನನ್ನಲ್ಲಿದೆಯಲ್ಲವೆ?

ರಾ:— (ಸಹಜ ಧ್ವನಿಯಲ್ಲಿಯೆ) ಇರಬಹುದು ನಿಮ್ಮಲ್ಲಿ ಆ ಶಕ್ತಿ! ನನಗೆ ಆ ಶಕ್ತಿಯನ್ನು ಪರೀಕ್ಷಿಸಬೇಕೆಂಬ ಕುತೂಹಲವಿಲ್ಲ. ನಾನು ನನ್ನ ಆ ಒಳನೋಟಗಳನ್ನು, ಯಾವುದೇ ಒಂದು ದೂರದ ಆದರ್ಶದಲ್ಲಿ ಯಾವಾಗಲೂ ತೊಡಗಿಸಿಬಿಟ್ಟಿರುತ್ತೇನೆ. ಅವುಗಳನ್ನು ಅಲ್ಲಿಂದ ಕಿತ್ತುಬಾರದವನಾಗಿದ್ದೇನೆ.

ರ:— ಆದರ್ಶಜೀವನ ನಿಮಗೆ ಮಾತ್ರಬೇಕು; ನನಗೆ ಬೇಡವೇ ದೊರೆ?

ರಾ:— ತಾಯಿಾ, ನಾನು ಕಂಡ ಮಾತನ್ನು ಕಂಡಂತೆ ಹೇಳುವೆನು; ನೀವು ವಿಪರೀತವೇನೂ ಭಾವಿಸಬೇಡಿರಿ! ಆದರ್ಶಜೀವನವನ್ನು ಬಯಸುವವರು, ಮಾಂಸದ ಸೊವಡಿಗೆ ಓಡಿಓಡಿ ಬರುವ ನಾಯಿಯಂತೆ ಎಂದೂ ವರ್ತಿಸಲಾರರು. ಮನದ ಸಂಯಮವೇ ಆದರ್ಶಜೀವನದ ಮುಖ್ಯ ಲಕ್ಷಣವೆನಿಸುವುದು. 'ಮಹಾರಾಣಿಯಾಗಬೇಕು!' 'ಮನಸ್ಸು ಒಪ್ಪಿದ ಗಂಡನಿಗೆ ಹೆಂಡತಿಯಾಗಬೇಕು!' ಇವೆಲ್ಲ ಆಕಾಂಕ್ಷೆಗಳು ಸ್ವಾರ್ಥಮೂಲವಾದುವುಗಳು! ಆದರ್ಶವಾದಿಗಳನ್ನು ಇಂತಹ ಕ್ಷುದ್ರ ಸ್ವಾರ್ಥಗಳು ಆಕರ್ಷಿಸಬಾರದು, ಅವುಗಳ ಆಕರ್ಷಣೆಗೆ ಒಳಗಾಗುವುದು ನಿಸರ್ಗಸ್ವಭಾವವಾದರೂ,....ಅಂತಹ ಜನರು ಅವುಗಳ ಬೆನ್ನುಹತ್ತಿ ಬಾಯಿ ಬಾಯಿ ಬಿಡಬಾರದು!

ರ:— (ನಿಟ್ಟುಸಿರಿನಿಂದ) ರಾಜಶೇಖರಾ, ನಿನ್ನ ಹೃದಯದಲ್ಲಿ ಇಂತಹ ಕಠೋರತೆ ನೆಲಸಿದೆಯೆಂದು ನಾನೆಂದೂ ಭಾವಿಸಿರಲಿಲ್ಲ!

ರಾ:— ಬೇಡವಾದ ಸತ್ಯವು ಕಠೋರ....ನಿಷ್ಠುರ! ಇಂದ್ರನ ವಜ್ರಕ್ಕಿಂತಲೂ ಅದು ಕಠಿಣವಾಗಿರುವುದು;

ರ:— ಬೀದಿಯ ಬಸವಿಯೊಬ್ಬಳಿಗೆ ಅನ್ವಯಿಸುವಂತಹ ಮಾತುಗಳನ್ನು ನನ್ನ ವಿಷಯದಲ್ಲಿ ಆಡಿದೆ ನೀನು!

ರಾ:— ಹಾಗೇನೂ ಇಲ್ಲವಲ್ಲ! ಸ್ವಾರ್ಥವೆಂಬುದು ಎಲ್ಲ ಕಡೆಯಲ್ಲಿಯೂ ಒಂದೆ ಬಗೆಯಾಗಿರುವುದು. ಬೀದಿಯ ಬಸವಿಯನ್ನು ಬೀದಿಯ ಬಸವಿಯರೆಂದು ತಿರಸ್ಕಾರದಿಂದ ನೋಡುವಿರೇಕೆ ನೀವು?

ರ:— (ರೊಚ್ಚಿನಿಂದ) ಎಚ್ಚರಿಕೆ! ರಾಜಶೇಖರಾ, ಎಚ್ಚರಿಕೆ, ನೀನು ಕ್ಷತ್ರಿಯ ಕುಮಾರಿಯೊಬ್ಬಳ ಹೃದಯವನ್ನು ಕೆರಳಿಸುತ್ತಿದ್ದೀಯೆ; ತಿಳಿಯುತೀನು;

ರಾ:— ಯಾರ ಹೃದಯವನ್ನೂ ಕೆರಳಿಸಬೇಕೆಂಬ ದುರಿಚ್ಛೆ ನನಗಿಲ್ಲ. ಆದುದರಿಂದಲೆ ನನ್ನ ಮಟ್ಟಿಗೆ ನಾನು ಏಕಾಕಿಯಾಗಿಯೇ ಇದ್ದು ಬಿಡಬೇಕೆಂದು ನಿರ್ಣಯಿಸಿದ್ದೇನೆ. ಅಮ್ಮಾಜಿ, ನನ್ನಿಂದ ನಿಮ್ಮ ಆಶೆ ಈಡೇರುವಂತಿಲ್ಲ. ದಯೆಯಿಟ್ಟು ಇಲ್ಲಿಂದ ಹೊರಟುಬಿಡಿರಿ.

ರ:— (ನಿರಾಶೆ-ಕ್ರೋಧಗಳೊಡನೆ) ರಾಜಶೇಖರಾ, ನೀನು ನನ್ನ ಬದುಕಿನ ಗುರಿಯ ಕನ್ನಡಿಯನ್ನು ಒಡೆದು ಹಾಳುಮಾಡಿದೆ, ಇನ್ನು....ನಿನ್ನ ಗುರಿಯ ಕನ್ನಡಿಯನ್ನು ನೀನು ಕಾಪಾಡಿಕೊಳ್ಳುವೆಯಂತೆ!..... ಚೆನ್ನಾಗಿ ಕಾಪಾಡಿಕೊಳ್ಳುವೆಯಂತೆ!

ರಾ:— (ಔದಾಸೀನ್ಯದ ಮೆಲುನಗೆ ನಕ್ಕು) ಅಮ್ಮಾ! ನಾನೇನೂ ವಿಶ್ವಾಮಿತ್ರನಂತಹ ಮಹಾತಪಸ್ವಿಯಲ್ಲ; ನೀವು ಮೇನಕೆಯಾಗಿ ಬಂದು ನನ್ನ ತಪಸ್ಸನ್ನು ಕೆಡಿಸಬೇಕಾಗಿಲ್ಲ!

ರ:— (ಅನೇಶದ ಹುಚ್ಚುನಗೆ ನಕ್ಕು) ಹಾಗಾದರೆ ನಾನಿನ್ನು ಮಹಾರಾಣಿಯಾಗಿಯೇ ಬಿಡುತ್ತೇನೆ.

ರಾ:— ಅದು ನಿಮ್ಮ ಇಷ್ಟ! ಆದರೆ ಒಂದು ಮಾತು: ನೀವು ಮಹಾರಾಣಿಯಾಗುವುದು ಖಂಡಿತವೇ ಇದ್ದರೆ, ಇಷ್ಟೊಂದು ಕಾರ್ಯವೈಫಲ್ಯವನ್ನು ನೋಡಬೇಕು. ಅದೇನೆಂದರೆ: ಪೆದ್ದರಾಯನಿಗೆ ಸೂಕ್ತವಾದ ಸಲಹೆಗಳನ್ನು ಕೊಟ್ಟು, ಸಾಮ್ರಾಜ್ಯಕ್ಕೆ ಹಿತವಾಗುವಂತೆ ಆಡಳಿತ ಕ್ರಮವನ್ನು ಇರಿಸಬೇಕು.

ರ:— ಅದನ್ನು ನೀನೇತಕ್ಕೆ ಹೇಳಬೇಕು?

ರಾ:— ಸಾಮ್ರಾಜ್ಯದ ಪ್ರೀತಿ-ಅಭಿಮಾನಿಗಳು ನನ್ನನ್ನೆ ಹೇಳಿಸುತ್ತಿವೆ ತಾಯಿಾ! ಪೆದ್ದರಾಯನ ಸ್ವಭಾವ ಸ್ವಲ್ಪವಾದರೂ ಬಲ್ಲೆನಾದ್ದರಿಂದ ಅದನ್ನು ಬಿಗಿಹಿಡಿಯುವುದಕ್ಕೆ ಒಬ್ಬರು ಬೇಕು. ಆ ಕಾರ್ಯವನ್ನು

ನೀವು ಮಾಡಿದರೆ, ಸಾಮ್ರಾಜ್ಯದ ಒಂದು ಮಹತ್ತ್ವದ ಸೇವೆಯನ್ನು ಮಾಡಿದಂತೆ ಆಗುವುದು.

ರ:— (ರೋಷದಿಂದ) ರಾಜಶೇಖರಾ! ನನ್ನ ಪ್ರೀತಿ-ಅಭಿಮಾನಗಳನ್ನು ನೀನು ತುಳಿದಿದ್ದೀಯೆ? ನಿನ್ನ ಪ್ರೀತಿ-ಅಭಿಮಾನಗಳನ್ನು ನಾನು ತುಳಿದು ಮೆಟ್ಟುತ್ತೇನೆ! ಇಂದಿನಿಂದ ನಾನೂ ನನ್ನ ಹೃದಯದ ಕಣ್ಣಗಳನ್ನು ಕುರುಡುಗೊಳಿಸಿಬಿಡುತ್ತೇನೆ. ನಿನ್ನ ಮನಸ್ಸಿಗೆ ಒಪ್ಪಿಗೆಯಾಗದಂತೆ, ಸಾಮ್ರಾಜ್ಯದ ವ್ಯವಸ್ಥೆಯನ್ನು ಇರಿಸುವುದಕ್ಕೆ ಹಚ್ಚುತ್ತೇನೆ. ಇದಕ್ಕಾಗಿಯೇ ನಾನು ಮಹಾರಾಣಿಯಾಗುವವಳು! ರಾಜಶೇಖರಾ, ನಾನು ಮಹಾರಾಣಿಯಾಗುವವಳು! ತಿಳಿಯಿತೇನು? ಹಿಂದಿನ ವಿರೂಪಾಕ್ಷರಾಯ ಒಂದು ಬಗೆಯಿಂದ ನನ್ನ ಅಕ್ಕನ ಸ್ವತ ಕೆಡಿಸಿದೆ; ಇಂದು ನೀನು ಇನ್ನೊಂದು ಬಗೆಯಿಂದ ನನ್ನ ವ್ರತವನ್ನು ಹಾಳುಮಾಡಿದ್ದೀಯೆ! ಇದೋ, ನಾನೀಗ ಹೊರಟೆ. ಹೊರಟೆ....ಹೊರಟೇ.... ಬಿಟ್ಟೆ!

(ಧಡಧಡನೆ ಹೆಜ್ಜೆಯಿರಿಸಿ ಹೋಗುವಳು.)

(ನಾಯಿಗಳ ಬೊಗಳಿಕೆ.....ನರಿಗಳ ಕಿರಿಚಾಟ)

ರಾ:— (ಉಸಿರ್ಗರೆದು) ಶಾಂತಿಃ ಶಾಂತಿಃ ಶಾಂತಿಃ! ಸರ್ವಾರಿಷ್ಟಶಾಂತಿರಸ್ತು!

(ಕರುಣಾಳಾಪದಲ್ಲಿ ತಂಬುರಾದ್ಯದ ಮಿಡಿತ)

ಒನೆಯ ಸನ್ನಿವೇಶ

ನಿರೂಪಣೆ:

ಪೆದ್ದರಾಯನು ದೊರೆಯಾಗಿ ಏಳೆಂಟು ದಿನಗಳು ಕಳೆದಿವೆ. ಇಷ್ಟರಲ್ಲಿಯೆ ಆ ದುಡುಕುದೊರೆ, ರಾಜ್ಯದ ಆಡಳಿತದಲ್ಲಿ ಅನೇಕ ಮಾರ್ಪಾಡುಗಳನ್ನು ಮಾಡಿದ್ದಾನೆ. ಇದರಿಂದ ಪ್ರಜೆಗಳಲ್ಲಿ ಹಲವು ರೀತಿಯ ಅಸಂತುಷ್ಟಿ-ಅತೃಪ್ತಿಗಳು ಹಬ್ಬುತ್ತಲಿವೆ. ಪೆದ್ದರಾಯನು ಹೊರಡಿಸಿದ ಕಟ್ಟುಪ್ಪಣೆಗಳಲ್ಲಿ ಎಲ್ಲಕ್ಕಿಂತ ಹೆಚ್ಚಿನದೆಂದರೆ, ವಿಧರ್ಮೀಯರೆಲ್ಲರೂ ರಾಜಧಾನಿಯನ್ನು ಬಿಟ್ಟು, ಹೊರಟುಹೋಗಬೇಕೆಂಬುದು. ಇದರಿಂದ ವಿಜಯನಗರದಲ್ಲಿ ವಾಸಮಾಡಿಕೊಂಡಿರುವ ಮುಸಲ್ಮಾನರೆಲ್ಲರೂ ದೊಡ್ಡ ತೊಂದರೆಯಲ್ಲಿ ಸಿಕ್ಕಿಕೊಂಡು ಕಳವಳಿಸತೊಡಗಿದರು. ಅವರ ಧುರೀಣರು ರಾಜಶೇಖರನ ಬಳಿಗೆ ಹೋಗಿ, ತಮ್ಮ ಕಷ್ಟ-ನಷ್ಟಗಳನ್ನು ತೋಡಿಕೊಂಡರು. ಈ ಅವಿವೇಕದ ಕಟ್ಟುಪ್ಪಣೆಯು ರಾಜಶೇಖರನನ್ನು ಕುಂಬ ನೋಯಿಸಿತು. ಅವನು ಮುಸಲ್ಮಾನರಿಗೆಲ್ಲ ಅಭಯವನ್ನು ಕೊಟ್ಟು, ತಮ್ಮನಿಗೆ ವಿವೇಕವನ್ನು ಹೇಳಬೇಕೆಂದು, ಪೆದ್ದರಾಯನನ್ನು ಶಾಂತಿಕುಟೀರಕ್ಕೆ ಬರಬೇಕೆಂದು ಹೇಳಿಕಳುಹಿಸಿದ. ಅಂದೆಯೇ ಸಂಜೆಯ ಕೊನೆಯ ಪ್ರಹರದ ಸಮಯ. ಅರಮನೆಯ ಮಂತ್ರಾಗಾರದಲ್ಲಿ ದೊರೆ ಪೆದ್ದರಾಯ, ದಂಡನಾಯಕ ಈಶ್ವರ ಮಾತನಾಡುತ್ತ ಕುಳಿತಿದ್ದಾರೆ.

ಈಶ್ವರ:— ಅಣ್ಣಾಜಿಯ ಕರೆಸಿಕೆಗೆ ಏನೆಂದು ಉತ್ತರ ಕಳುಹಿಸಿದ್ದಾಯಿತು?

ಪೆದ್ದ:— ಈಗ ಬರುವುದಕ್ಕೆ ನನಗೆ ಅವಕಾಶವಿಲ್ಲವೆಂದು ಹೇಳಿಕಳುಹಿಸಿದೆ.

ಈ:— ಒಳ್ಳೆಯದಾಯಿತು..... ಇನ್ನು ಮೇಲೆ ಅವರನ್ನು ನಂಬಿ ನಡೆಯುವಂತಿಲ್ಲ. ಯಾವ ವೇಳೆಯಲ್ಲಿ ಏನು ಮಾಡಬಹುದೆಂಬುದರ ನಿಯಮವಿಲ್ಲ. ಹಗಲಿರುಳೂ ಜಾಗರೂಕರಾಗಿ ಇರಬೇಕು. ಪ್ರತಿದಿನವೂ ಇಲ್ಲಿಂದ ಚಂದ್ರಗಿರಿಗೆ ಗುಪ್ತಸತ್ರಗಳು ಹೋಗುವುವೆಂದು ಸುದ್ದಿಯಿದೆ. ನರಸಿಂಹನಾಯಕನೂ ಇಲ್ಲಿಗೆ ಬರಬಹುದಾಗಿದೆ. ಆತ ಬಂದರೆ ಸುಮ್ಮಗೆ ಕುಳಿತುಕೊಳ್ಳುವವನೇನೂ ಅಲ್ಲ!

ಪೆದ್ದ:— ಇದು ನೋಡಿ, ನರಸಿಂಹನಾಯಕ ಇಲ್ಲಿಗೆ ಬಾರದಂತೆ ಮಾಡಿಬಿಟ್ಟರೆ ಒಳ್ಳೆಯದಲ್ಲವೆ?

ಈ:— ಹಾಗೆ ಮಾಡಿದರೇನೋ ಒಳ್ಳೆಯದೇ ಆದೀತು; ಆದ್ದರಿ ಅವನಿಲ್ಲದಿದ್ದರೂ ಅವನ ಪಕ್ಷವೊಂದು ರಾಜಧಾನಿಯಲ್ಲಿಯೇ ಬೆಳೆಯುತ್ತಿದೆಯಲ್ಲ! ಅಣ್ಣಾಜಿ, ನಾರಾಯಣಪಂಡಿತ ಇವರು ಜೀವಿಸಿರುವವರೆಗೂ, ಆ ಪಕ್ಷ ಪೂರ್ಣವಾಗಿ ನಷ್ಟವಾಗುವಂತಿಲ್ಲ.

ಪೆದ್ದ:— (ಸ್ವಲ್ಪ ಯೋಚಿಸಿ ರೊಚ್ಚಿನಿಂದ) ಅಹುದು, ಈಶ್ವರನಾಯಕರೆ! ಅದರ ವಿಚಾರವನ್ನು ನಾವು ನೊದಲು ಮಾಡಬೇಕಾಗಿದೆ.

ಈ:— ಮಿಕ್ಕವರದೇನೂ ಲಕ್ಷ್ಯವಿಲ್ಲ ನನಗೆ ದೊರೆಗಳೆ! ಓ, ಅಣ್ಣಾಜಿ.....

(ಈಶ್ವರನ ಮಾತು ನಡೆದಾಗಲೇ ಅಲ್ಲಿಗೆ ರಾಜಶೇಖರ ಬರುವನು.)

ರಾ:— ಪೆದ್ದಣ್ಣಾ, ಮಹತ್ತ್ವದ ರಾಜಕಾರ್ಯವೊಂದನ್ನು ಕುರಿತು ನಿನ್ನೊಡನೆ ಮಾತನಾಡಬೇಕಿತ್ತು. ನಿನಗೆ ಅವಕಾಶವಿಲ್ಲವೆಂದು ತಿಳಿದು ನಾನೇ ಬಂದೆ. ಒಳ್ಳದೆ, ಈಗ ನಾನು ಬಂದ ಕಾಲವೂ ಒಳ್ಳೆಯದೇ ಆಗಿದೆ. ಏಕೆಂದರೆ, ದೊರೆ ದಂಡನಾಯಕ ಇಲ್ಲಿಯೆ ಜೊತೆಗೂಡಿ ಇರುವಿರಿ. ಎಲ್ಲ ವಿಷಯವನ್ನೂ ಮಾತನಾಡಿ, ಆಲೋಚನೆ ಮಾಡಲು ಅನುಕೂಲವಾಯಿತು.

ಪೆದ್ದ:— (ಉಪೇಕ್ಷಾಭಾವದಿಂದ) ಈಗ ಮಾತನಾಡಿ ಆಲೋಚಿಸಬೇಕಾದ ಸಂಗತಿಯಾದರೂ ಏಂತಹದಾವುದು?

ರಾ:— ನೋಡು, ನಿನ್ನೆಯ ಸಾಯಂಕಾಲ ರಾಜಧಾನಿಯ ಹಲವು ಜನ ಮುಸಲ್ಮಾನರು ನನ್ನ ಕಡೆಗೆ ಬಂದಿದ್ದರು.

ಪೆದ್ದ:— ಸರಿ, ಬಂದಿದ್ದರು! ಆಮೇಲೆ?

ರಾ:— ಪೆದ್ದಣ್ಣಾ, ನೀನು ಹೊರಡಿಸಿದ ರಾಜಾಜ್ಞೆಯ ವಿಷಯವನ್ನು ನನ್ನಲ್ಲಿ ಬಿನ್ನವಿಸಿಕೊಂಡರು. ನೋಡು.....

ಪೆದ್ದ:— ನೀವು ಏನು ಹೇಳುತ್ತಿದ್ದೀರಿ—ಎಂಬುದು ಗೊತ್ತಾದಂತಾಯಿತು. ಅಣ್ಣಾಜಿ, ಇನ್ನುಮೇಲೆ ನಿಮ್ಮ ಸೋಗಿನ ಸರಳತನದ ಮಾತುಗಳಿಗೆ, ನಾನೆಂದೂ ಮಂಕುಬೀಳಲಾರೆ! ಯಾರು ಏನೇ ಹೇಳಿದರೂ, ಆ ರಾಜಾಜ್ಞೆಯನ್ನು ಹಿಂದಕ್ಕೆ ತೆಗೆದುಕೊಳ್ಳುವಂತಿಲ್ಲ!

ರಾ:— ಚೆನ್ನಾಗಿ ತಿಳಿದು ನೋಡು ಪೆದ್ದಣ್ಣಾ! ಅವರನ್ನೆಲ್ಲ ಹೊರಗೆ ಹಾಕುವುದರಿಂದ, ವ್ಯರ್ಥವಾಗಿ ಅವರನ್ನು ರೇಗಿಸಿದಂತಾಗುವುದು. ಕಾರಣವೇನೂ ಇಲ್ಲದೆ, ಅಲ್ಲದೆ, ಅಷ್ಟು ಜನರ ಸಹಕಾರ-ಸಹಾನುಭೂತಿಗಳನ್ನು ಕಳೆದುಕೊಂಡಂತಾಗುವುದು. ಸಾಮ್ರಾಜ್ಯದ ನೆಮ್ಮದಿಗೆ ಇದು ಪಥ್ಯಕರವಾಗದು!

ಪೆದ್ದ:— ಆ ಜನರ ಸಹಕಾರ-ಸಹಾನುಭೂತಿಗಳ ಅಪೇಕ್ಷೆ, ನಿನುಗೆ ಮಾತ್ರ ಇರಬಹುದು! ವಿಧರ್ಮೀಯರು ಈ ನಗರದಲ್ಲಿ ವಾಸಿಸುವುದೆಂದರೆಯೇ ಸಾಮ್ರಾಜ್ಯದ ನೆಮ್ಮದಿಗೆ ಅಪಥ್ಯವೆಂದು ನಾನು ತಿಳಿದಿದ್ದೇನೆ.

ರಾ:— ತಮ್ಮಾಜ್ಞ, ಮಾನವತೆಯ ವಿವೇಕದೃಷ್ಟಿಯಿಂದಲೂ ನಾವು ವಿಚಾರವಾಡಬೇಕಾಗಿಲ್ಲವೆ? ಎಷ್ಟೋ ದಿನಗಳಿಂದ ರಾಜಧಾನಿಯಲ್ಲಿಯೆ ಒಕ್ಕಲಾಗಿದ್ದು, ಮಿಕ್ಕ ಜನರಂತೆಯೆ ವಿಜಯನಗರವನ್ನೇ ತಮ್ಮ ಹುಟ್ಟುದೂರನ್ನಾಗಿ ಮಾಡಿಕೊಂಡಿದ್ದಾರೆ. ಅವರೀಗ ಒಂದು ವಾರದೊಳಗಾಗಿಯೆ ಹೊರಟುಹೋಗಬೇಕೆಂದರೆ, ಅವರೆಲ್ಲ ಎಲ್ಲಿಗೆಂದು ತೊಗಬೇಕು? ಹೋಗುವುದಾದರೂ ಹೇಗೆ? ಎಷ್ಟು ಜನರ ಸಂಸಾರದಲ್ಲಿ ಬಸಿರಿ—ಬಾಣಂತಿಯರೊ! ಇನ್ನೆಷ್ಟು ಜನರ ಮನೆಗಳಲ್ಲಿ ಕೂಸು-ಕುನ್ನಿಗಳೋ! ಮತ್ತೆ ಎಷ್ಟು ಸಂಸಾರದಲ್ಲಿ ಬೇನೆ ಬೇಸರಿಕೆಗಳೋ! ಅನೇಕ ಅಡಚಣಿಗಳಿರಬಹುದು. ಅವರಿಗೆ!

ಪೆದ್ದ:— ಅದನ್ನೆಲ್ಲ ಚಿಂತೆಮಾಡಿ ನಾವು ಏಕೆ ಸೊರಗಬೇಕು? ಉತ್ತರಭಾರತದಲ್ಲಿ ಬಡಬಗ್ಗರ ತಲೆಯ ಮೇಲೂ ಹೇರಿದ ಜಿಝಿಯಾ ತಂದಾಯವನ್ನು, ಯಾವ ದಯೆ-ದಾಕ್ಷಿಣ್ಯಗಳೂ ಇಲ್ಲದೆ ಕಿತ್ತುಕೊಳ್ಳುವುದಿಲ್ಲವೇ ಅಲ್ಲಿಯ ಬಾದಶಹರು?

ರಾ:— ಅಲ್ಲಿ ಅವರು ಹಾಗೆ ಮಾಡುವರೆಂದು ಇಲ್ಲಿಯ ಈ ನಿರಪರಾಧಿ ಜನರನ್ನು ಸೀಡಿಸಬೇಕೇ ನಾವು? ವಿವೇಕಿಗಳಾರೂ ಒಪ್ಪದ ಮಾತಿದು!

ಪೆದ್ದ:— ಅಣ್ಣಾಜಿ, ಇದುವರೆಗೆ ಸುಮ್ಮನೆ ಇದ್ದು ನಿನ್ನ ಮಾತುಗಳನ್ನು ಕೇಳಿದೆ. ಇನ್ನು ಮಾತ್ರ ಸಹಿಸಿಕೊಳ್ಳಲಾರೆ! ಈ ವಿಷಯದಲ್ಲಿ ನೀವು ನನಗೆ ಏನನ್ನೂ ಹೇಳಬೇಡಿರಿ! ನಾನು ಕೇಳುವುದಿಲ್ಲ!

ರಾ:— ಕರ್ನಾಟಕರಾಜ್ಯದ ಸಮ್ರಾಟರಿಂದ ಅನ್ಯಾಯ ನಡೆಯಲಾಗದು ಪೆದ್ದಣ್ಣಾ!

ಪೆದ್ದ:— ನ್ಯಾಯಾನ್ಯಾಯ ವಿಚಾರವನ್ನು ನಿಮ್ಮ ಕಡೆಯಿಂದಲೇ ನಾನು ತಿಳಿದುಕೊಳ್ಳಬೇಕಾಗಿಲ್ಲ! ಯಾರು ಯಾರಲ್ಲಿ ಎಷ್ಟೆಷ್ಟು ನ್ಯಾಯಬುದ್ಧಿ ಇದೆಯೆಂಬುದು ನನಗೂ ಗೊತ್ತಿದೆ. ಸ್ವಾರ್ಥಕ್ಕೆ ಪರೋಪಕಾರದ ಮುಸುಕನ್ನು ಹಾಕುವ ಮಹಾತ್ಮರು ಲೋಕದಲ್ಲಿ ಬಹಳ ಜನರು! ನೀವಿನ್ನು ಒಂದು ಮಾತನ್ನು ಆಡಕೂಡದು. ಇಲ್ಲಿಂದ ಹೊರಟುಹೋಗಿರಿ!

ರಾ:— (ಕೆಚ್ಚಿನ ನುಡಿಯಲ್ಲಿ) ಪೆದ್ದಾ, ಅದೇಕೋ ನಿನ್ನ ಬುದ್ಧಿ ಕೆಡುತ್ತ ನಡೆದಿದೆ. ನಿನಗೆ ಕಾಲವು ಒಳ್ಳೆಯದಿರುವಂತೆ ಕಾಣುವುದಿಲ್ಲ!

ಪೆದ್ದ:— ಅದೇನೋ ಸರಿಯಾದದ್ದೆ! ಒಳ್ಳೆಯ ಕಾಲವನ್ನು ನಾನೇ ತಂದುಕೊಳ್ಳಬೇಕಾಗಿದೆ. ಅದಕ್ಕಾಗಿಯೇ ಇವೆಲ್ಲ ಯತ್ನ ಪ್ರಯತ್ನಗಳನ್ನು ನಡೆಸಿದ್ದೇನೆ.

ರಾ:— ಈ ಬಗೆಯ ಯತ್ನ-ಪ್ರಯತ್ನಗಳು ಒಳ್ಳೆಯ ಕಾಲವನ್ನು ಎಂದೂ ತರಲಾರವು.

ಪೆದ್ದ:— ನಿಮ್ಮ ಕಾಲಜ್ಞಾನದ ರಗಳೆ ಕೇಳುವುದಕ್ಕೆ ನನಗೆ ನನಗೆ ಮನಸ್ಸಿಲ್ಲ!

ರಾ:— ಹಾಗಿದ್ದರೆ....ಇದೋ, ಪ್ರತಿಜ್ಞೆಮಾಡಿ ಹೇಳುತ್ತೇನೆ ಕೇಳು! ನಾನು ಆ ದೀನರಾದ ಮುಸಲ್ಮಾನರ ಪಕ್ಷಕ್ಕೆ ಸೇರಿಕೊಳ್ಳುತ್ತೇನೆ. ನಿನ್ನ ರಾಜಾಜ್ಞೆ ಹೇಗೆ ಅವರನ್ನು ಹೊರಗೆ ಹಾಕುವ ತ್ತದೆಯೋ ನೋಡಿಬಿಡುತ್ತೆನೆ

ಪೆದ್ದ:— ನಿಮ್ಮ ಈ ಬೆದರಿಕೆಗೆ ಸೊಪ್ಪುಹಾಕಲಿಕ್ಕೆ ನಾನೇನೂ ಆ ಕುರುಡ ಇಮ್ಮಡಿ ವಿರೂಪಾಕ್ಷನಲ್ಲ – ಗೊತ್ತಾಯಿತೆ?

ರಾ:— ಇಮ್ಮಡಿ ವಿರೂಪಾಕ್ಷ ನೀನೇತಕ್ಕಾದೀಯೆ! ಮುಮ್ಮಡಿ ವಿರೂಪಾಕ್ಷನಲ್ಲವೇ ನೀನು? ಕೊನೆಯ ಮಾತನ್ನು ಹೇಳುತ್ತೇನೆ ಕೇಳು, ಪೆದ್ದರಾಯಾ! ನಮ್ಮ ನರಸ್ಥಿಯೇ ಮಳೆನವುಟ್ಟಾಗಿ ಸಾಮ್ರಾಜ್ಯಕ್ಕೆ ಅಳಿಗಾಲವನ್ನು ತಂದಿಟ್ಟಿಯೆ! ಅನಿವೇಕಕ್ಕೆ ಕಹಿ ಪರಿಣಾಮ ಕಟ್ಟಿಟ್ಟದ್ದೆ. ಎಂಬುದನ್ನು ಮರೆಯಬೇಡ! ಈಶ್ವರನಾಯಕರೇ, ನೀವೀ ದಂಡನಾಯಕರು; ನೀವಾದರೂ ಸ್ವಲ್ಪ ಸರಿಯಾದ ವಿಚಾರ-ಸಲಹೆಗಳನ್ನು ಕೊಡುತ್ತಿರಿ! 'ಮರುಳು ದೊರೆಗೆ ಕುರುಡ ಮಂತ್ರಿ' ಎಂಬ ಗಾದೆಯನ್ನು ನೆನೆದುಕೊಳ್ಳಿರಿ! ಇದೋ ನಾನೀಗ ಹೊರಟೆ, ನನ್ನ ಕರ್ತವ್ಯ ನನಗೆ!

(ರಾಜಕೇಸರನು ಮಿಂಚಿನ ವೇಗದಲ್ಲಿ ಹೊಂಟು ಹೋಗುವನು ವೀಣೆಯ ಅತಿಗಳ ರಭಸದ ಮಿಡಿತ)

ಈ:— ಪ್ರಭುಗಳೆ, ಅಣ್ಣಾಜಿಯ ದರ್ಪೋಕ್ತಿಗಳನ್ನು ಕೇಳಿದಿರಾ?

ಪೆದ್ದ:— ಇಂತಹ ಪೊಳ್ಳು ಬೆದರಿಕೆಗಳಿಗೆಲ್ಲ ಬೆದರಿ ನಿಲ್ಲುವನೆ ನಾನು?

ಈ: — ಅತನು.... ಮುಸಲ್ಮಾನರ ಪಕ್ಷವಹಿಸುತ್ತೇನೆ ಎಂದು ಹೇಳಿಯಿಟ್ಟು ಹೋಗಿಹೋದನು ದೊರೆಗಳೆ,

ಪೆದ್ದ:— ವಹಿಸಿದರೆ ತನ್ನ ಕರ್ಮದ ಪಿಂಡವನ್ನು ತಾನೆ ತಿನ್ನುತ್ತಾನೆ! ರಾಜಕಾರ್ಯದಲ್ಲಿ ಅಡಿಗಡಿಗೆ ಹೀಗೆ ಮುಳ್ಳು ಒತ್ತುತ್ತ ಕುಳಿತರೆ ಕೇಳಬೇಕು ಯಾರು? ಮುರಿದು ಚೆಲ್ಲುವುದೆ ಮುಳ್ಳಿಗೆ ತಕ್ಕ ಶಿಕ್ಷೆ.

ಈ:— ತಮ್ಮ ಮಾತು ಸಾವಿರದಲ್ಲಿಯ ಒಂದು ಸತ್ಯ ಪ್ರಭುಗಳೆ

[ಇಬ್ಬರೂ ಏಳುಸುತ್ತಿಗೆಗಳಲ್ಲಿ ಏನೇನೋ ತಿವಿಸಾಕನಾಡಿದ ಮೇಲೆ]

ಪೆದ್ದ:— ಈಶ್ವರನಾಯಕರೆ, ಇಲ್ಲಿಯ ಕೆಲಸವನ್ನೆಲ್ಲ ಮೊದಲು ಬಗೆಹರಿಸಿರಿ, ಆ ಮೇಲೆ ಚಂದ್ರಗಿರಿಗೆ ಜನರನ್ನು ಕಳುಹೋಣವಂತೆ! ಕಮಲಾಂಬಿಕೆಯನ್ನು ನನಗೆ ಕೊಡಬಾರದೆನ್ನುವ ಆ ಅಹಂಕಾರಿಯ ಹಟವಾದರೂ ಎಂತಹದಿದೆಯೆಂಬುದನ್ನು ಒಮ್ಮೆ ನೋಡಿಬಿಡೋಣ! ಈ ಪೆದ್ದರಾಯನ ರೊಚ್ಚಿನ ಕೆಚ್ಚು ಎಂತಹದಿದೆಯೆಂಬುದನ್ನು ಒಮ್ಮೆ ಲೋಕಕ್ಕೆ ತೋರಿಸಿ ಕೊಡಲೇಬೇಕು! ನ್ಯಾಯ, ಅನ್ಯಾಯ! ವಿವೇಕ, ಅವಿವೇಕ!! ಕಲಿಸಲಿಕ್ಕೆ ಬಂದಿದ್ದಾನೆ ನನಗೆ ಒಳಗಳ್ಳ!

[ತಂಬುವಾದ್ಯದ ರಭಸದಂಥ ಮಿಡಿತದೊಂದಿಗೆ ಸನ್ನಿವೇಶದ ತೊಡಕು.]

ಒನೆಯ ಸನ್ನಿವೇಶ

ನಿರೂಪಕಳು:

ವಿಜಯನಗರದ ಬಳಿಯ ವಾಲ್ಯವಂತ ಪರ್ವತದ ಉತ್ತರಕ್ಕಿರುವ ಭೀಕರವಾದ ಕೊಳ್ಳವು. 'ಭೂತಗಳ ಕೊಳ್ಳ' ಎಂಬ ಹೆಸರಿನಿಂದ ಇದು ಪ್ರಸಿದ್ಧವಾಗಿದೆ. ಹಗಲಿನಲ್ಲಿ ಕೂಡ ಜನರು ಇಲ್ಲಿಗೆ ಬರಲು ಹೆದರುವರು. ತಾಳೆ-ಈಚಲಗಳ ಮರಗಳು ಕೊಳ್ಳದ ಇಬ್ಬದಿಗಳಲ್ಲಿಯೂ ಬೆಳೆದು ಬನವಾಗಿ ನಿಂತಿವೆ. ಸೂರ್ಯಕಿರಣಗಳಿಗೆ ಕೊಳ್ಳದೊಳಗೆ ಇಳಿಯಲು ಅವಕಾಶವನ್ನೇ ಇಲ್ಲ. ಮಧ್ಯರಾತ್ರಿಯ ಸಮಯ. ಕೊಳ್ಳದ ಮಧ್ಯದಲ್ಲಿ ಭವ್ಯವಾಗಿ ಬೆಳೆದು ನಿಂತಿರುವ ಆಲದ ಮರದ ಅಡಿಯಲ್ಲಿ, ಮಂದಗಿನ ಪ್ರಕಾಶದ ಒಂದೆರಡು ಸಣ್ಣ ದೀವಟಿಗೆಗಳು ಉರಿಯುತ್ತಲಿವೆ. ಕೊಳ್ಳದ ಹೊರಗಿನವರಿಗೆ ಅವುಗಳ ಬೆಳಕು ಕೂಡ ಕಾಣುವಂತಿಲ್ಲ.

ಆಲದ ಮರದ ಬುಡದ ಬೆಳಕಿನಲ್ಲಿ, ಹತ್ತು ಹನ್ನೆರಡು ಜನರ ಮುಖಗಳು, ಮಸುಕು-ಮಸುಕಾಗಿ ಕಾಣುತ್ತಲಿವೆ. ಅವರಲ್ಲಿ ಇಬ್ಬರು ಮಾತ್ರ ಒಂದು ದೀವಟಿಗೆಯ ಬಳಿಯಲ್ಲಿಯೇ ಕುಳಿತು, ಮೆಲ್ಲಗೆ ಮಾತನಾಡುತ್ತಿದ್ದಾರೆ.

ಒಬ್ಬ:— ನೋಡಿ, ಮೊದಲಿನ ದೊರೆಗಳ ಕೊಲೆಯಾದಾಗಿನಿಂದಲೂ, ಅಣ್ಣಾಜಿಯೆಂದರೆ ಜಕ್ಕಣ್ಣನ ಮೈ-ಮನಸ್ಸು ಉರಿದೇಳ್ತುವುವು. ತನ್ನ ಯಜಮಾನನ ಕೊಲೆ ಮಾಡಿದವನನ್ನು ಕೊಂದೇ ತೀರಬೇಕೆಂಬುದು ಅವನ ಪ್ರತಿಜ್ಞೆ. ತಮ್ಮ ಅಪೇಕ್ಷೆಯನ್ನು ಅತನಿಗೆ ಹೇಳಿದೆ; ಕೂತಲೇ ಒಪ್ಪಿಕೊಂಡ ಇಷ್ಟೇ ಅಲ್ಲ, ಹಿಗ್ಗಿ ಕುಣಿದಾಡಿದ.

ಇನ್ನೊಬ್ಬ:— ಮತ್ತೆ.....ದುರಗಪ್ಪಾ! ಜಕ್ಕಣ್ಣನಾಯಕ ಎಷ್ಟು ಚೆನ್ನಾಗಿ ವೇಷ ಮಾರ್ಪಡಿಸುತ್ತಾನಪ್ಪಾ! ಈ ದಿನ ಆತ..... ಮುಸಲ್ಮಾನನ ವೇಷ ಹಾಕಿದಾಗ, ನನಗೆ ಅವನ ಗುರುತೇ ಸಿಗಲಿಲ್ಲ.

ಒಬ್ಬ:— ಅಹುದು ಬುದ್ಧಿ! ವೇಷ ಹಾಕುವುದರಲ್ಲಿ ಅವನು ಮಹಾ ಚತುರ! ಒಂದುಸಲ ಮಲೆಯಾಳುಸೀಮೆಯ ಹೆಣ್ಣಿನಂತೆ ವೇಷ ಹಾಕಿ, ವಿರೂಪಾಕ್ಷ ಮಹಾರಾಜರನ್ನೇ ಮಂಕುಗೊಳಿಸಿಬಿಟ್ಟನಂತೆ. ಅದಾಯಿತಲ್ಲ! ಅವನ ಜೊತೆಗೆ ಹೋಗಿರುವ ಆ ನಾಲ್ಕು ಜನ ಮುಸಲ್ಮಾನರಿದ್ದಾರೆ ನೋಡಿ; ಅವರನ್ನು ಏನು ಮಾಡಬೇಕು? ಮೊದಲು ಅವರು ನಮ್ಮ ಸೈನ್ಯದಲ್ಲಿಯೇ ಕುದುರೆಯಾಳುಗಳಾಗಿ ಇದ್ದವರು. ಯಿಕ್ಕವರನ್ನು ಹೊರಗೆ ಹಾಕಿದರೂ, ನಿಮ್ಮನ್ನು ಹಾಕುವುದಿಲ್ಲವೆಂದು ಹೇಳಿ, ಮನವೊಲಿಸಿ, ಅವರನ್ನು ಈ ಕೆಲಸಕ್ಕೆ ಕರೆದುಕೊಂಡು ಬಂದಿದ್ದೇನೆ.

ಇನ್ನೊಬ್ಬ:— ಓ! ಅವರದೇನು ಬಿಡು! ನೋಡೋಣವಂತೆ ಮುಂದೆ! ಇಂದಿನ ಕೆಲಸವಂತೂ ಕೊನೆಗೊಳ್ಳಲಿ! ಆಮೇಲೆ ಅವರಿಗೆ 'ನೀವೂ ರಾಜಧಾನಿಯಿಂದ ಹೊರಡಲೇಬೇಕು' ಎಂದು ಹೇಳಿದರಾಯಿತು! ಅವರೇನು ಮಾಡಬಲ್ಲರು ನಮಗೆ?

ಒಬ್ಬ:— ಅವರಲ್ಲಿಯ ಒಬ್ಬನಂತೂ, ನಾನು ಬಹಳ ಆಶೆಯ ಮಾತುಗಳನ್ನು ಹೇಳಿದಾಗಲೇ ಬರಲಿಕ್ಕೆ ಸಿದ್ಧನಾದ. ನಿನ್ನೆ ನಗರದ ಮಸೀದಿಯ ಬಳಿ, ಮುಸಲ್ಮಾನರ ಸಭೆ ಕೂಡಿರಲಿಲ್ಲವೆ? ಅದರ ಪರಿಣಾಮವಾಗಿ, ಅವನಲ್ಲಿ ರಾಜಶೇಖರನ ವಿಷಯದಲ್ಲಿ ತುಂಬ ವಿಶ್ವಾಸ ನೆಲಸಿದ್ದಿತು. (ನಕ್ಕು) ಆದರೆ ಸ್ವಾರ್ಥದ ಮುಂದೆ ಎಲ್ಲಿಯ ವಿಶ್ವಾಸ..... ಎಲ್ಲಿಯ ಪ್ರೀತಿ?

ಇನ್ನೊಬ್ಬ:— (ರೊಚ್ಚುತುಂಬಿದ ನೆಲುದನಿಯಲ್ಲಿ) ಆಯಿತು, ಇಂದು ರಾಜಶೇಖರನನ್ನು ಕೊನೆಗಾಣಿಸಿವೆವೆಂದರೆ, ಒಂದು ದೊಡ್ಡ ಟೀಡೆ ಕಳೆದಂತಾಗುವುದು. ಪ್ರತಿಯೊಂದು ಮಾತಿನಲ್ಲಿಯೂ ಆತನ ಆಕ್ಷೇಪ! ದಂಡನಾಯಕನಾಗಲಿಕ್ಕೆ ನಾನು ಅಯೋಗ್ಯನಂತೆ! ತೋರಿಸಿ ಬಿಡುತ್ತೇನೆ ಆ ಸಂನ್ಯಾಸಿಗೆ—ನನ್ನ ಯೋಗ್ಯತೆ ಅಯೋಗ್ಯತೆಗಳನ್ನ!

ಒಬ್ಬ:— ಅದು ಹೋಗಲಿ ಬುದ್ಧಿ! ತಾನು ಕನ್ನಡಿಗ..... ವಿಜಯನಗರದ ರಾಯರ ಕುಲದಲ್ಲಿ ಹುಟ್ಟಿದವ! ಇಂಥವನು ಮುಸಲ್ಮಾನರ ಪಕ್ಷ ವಹಿಸುವುದೆಂದರೆ ಯಾರಿಗೆ ಸಹನೆಯಾದೀತು? ಕೊಡಲಿಯ ಕಾವಿನಂತೆ ಆತ, ಕುಲಕ್ಕೇ ಮೃತ್ಯುವಾಗಿ ನಿಂತಿದ್ದಾನೆ!

ಇನ್ನೊಬ್ಬ:— (ಸಂದೇಹದ ಸ್ವರದಲ್ಲಿ). ಇಷ್ಟರಲ್ಲಿಯೆ ಬರಬೇಕಾಗಿತ್ತಲ್ಲವೇ ಆ ಜನರು?

ಒಬ್ಬ:— ಅದು ಹೇಗೆ ಒಡೆಯಾ! ಅಲ್ಲಿಂದ ಹೊರಟವರು ಇಲ್ಲಿಗೆ ಬರಲಿಕ್ಕೆ ನಾಲ್ಕು ಗಳಿಗೆಗಳಾದರೂ ಬೇಡವೇನು?

(ದೂರದಲ್ಲಿ ಗುಣು ಗುಣು ಮಾತಿನ ಸದ್ದು ಸ್ಪಷ್ಟವಾಗಿ ಕೇಳುವುದು. ನಾಲ್ಕೈದು ಜನರ ಹೆಜ್ಜೆಗಳ ಸದ್ದು ದೂರದಿಂದ ಕೇಳಿಸುತ್ತ ಸಮೀಪಕ್ಕೆ ಬರುವುದು.)

ಇನ್ನೊಬ್ಬ:— (ಸಂಭ್ರಮಭಾವದಿಂದ) ಆಯಿತು! ಕೆಲಸವನ್ನು ಮಾಡಿಕೊಂಡೇ ಬಂದಿದ್ದಾರೆ, ಭಲೆ, ಭಾವು!

[ಬಂದವರು ಹೆಗಲ ಮೇಲೆ ಹೊತ್ತು ತಂದ ಭಾರವನ್ನು ಕೆಳಗೆ ಇಳುಹುವ ಸದ್ದು]

'ಅಯ್ಯೋ, ಎಂತಹ ಮೋಸ! ತಾಯಿ ಭುವನೇಶ್ವರೀ! ನಿನ್ನ ಸಂಕಲ್ಪವೇನು?'

(ಈ ಮಾತುಗಳು ಕರುಣಾರ್ದ್ರಧ್ವನಿಯಲ್ಲಿ ಕೇಳಿಸುವುವು.)

ಇನ್ನೊಬ್ಬ:— ಛಲೆ! ಕೈಕೊಂಡ ಕಾರ್ಯವನ್ನು ಚೆನ್ನಾಗಿ— ಚೆನ್ನಾಗಿ ಮಾಡಿದ್ದೀರಿ. ಇದಕ್ಕೆ ಯೋಗ್ಯ ಪ್ರತಿಫಲವು ನಿಮಗೆ ದೊರೆಯದೆ ಹೋಗದು.

ಏನು ರಾಜಶೇಖರರಾಯರೆ! ಅಣ್ಣಾಜಿಯವರೇ! ಎಲ್ಲ ಸೌಖ್ಯವೇ? ಈಗ ಏನು ಹೇಳುತ್ತೀರಿ ನೀವು? ಈ ಈಶ್ವರನಾಯಕನು ದಂಡನಾಯಕನಾಗುವುದು ಬೇಡವಾಗಿದ್ದಿತಲ್ಲವೇ ನಿಮಗೆ?

ರಾಜ:— (ಬಿದ್ದಲ್ಲಿಯೆ) ದುಷ್ಟಾ.....ನಂಬಿಕಾ..... ಮೋಸ.....ಮೋಸ!

ಈ:— ಎಲೋ, ಈ ಅಲದ ಮರದ ಬೊಡ್ಡೆಗೆ ಇವನನ್ನು ನಿಲ್ಲಿಸಿ, ಬಿಗಿಯಾಗಿ—ಬಿಗಿಯಾಗಿ—ಕಟ್ಟಿಬಿಡಿರಿ!

ಸೇವಕ:— ಒಡೆಯರ ಅಪ್ಪಣೆ! (ಕಟ್ಟುವನು)

ಈ:— ಇಲ್ಲಿ ನೋಡು, ರಾಜಶೇಖರ, ನಿನ್ನನ್ನು ತೀರಿಸಿಬಿಡ. ಬೇಕೆಂದು ದೊರೆಗಳ ಆಜ್ಞೆಯಾಗಿದೆ!

ರಾಜ:— (ತಿರಸ್ಕಾರದಿಂದ) ದೊರೆಗಳ ಆಜ್ಞೆ! ದೊ..ರೆ....ಗ....ಳ....ಆ....ಜ್ಞೆ!

ಈಶ್ವರ:— ನೀನು ಇನ್ನು ಮೇಲೆ ನನ್ನ ಮಾತಿನಂತೆ ನಡೆದು. ಕೊಳ್ಳುವೆಯಾದರೆ, ನಿನಗೆ ನಾನೇ ಜೀವದಾನ ಕೊಡುತ್ತೇನೆ! ನೋಡು, ಏನೆನ್ನುತ್ತೀಯೆ?

ರಾಜ:— ಈಶ್ವರಾ, ನಿನಗೆ ಬೇಕಿದ್ದರೆ..... .....ನೂರು ಸಲ ನನ್ನನ್ನು ಕೊಲ್ಲು! ಹುಚ್ಚುನಾಯಿ! ನಿನ್ನೊಡನೆ ಮಾತನಾಡಲಿಕ್ಕೂ ನನಗೆ ಹೇಸಿಕೆ!

ಈಶ್ವರ:— ರಾಜಾ, ಅಹುದು, ನೀನೊಬ್ಬ ದೊಡ್ಡ ಮನುಷ್ಯ! ನಿನ್ನ ಆ ನರಸಿಂಹನಾಯಕ—ಅವನೊಬ್ಬ ದೊಡ್ಡ ಮನುಷ್ಯ! ಮಿಕ್ಕವರೆಲ್ಲರೂ ಹುಚ್ಚು ನಾಯಿಗಳು! ರಾಜಶೇಖರಾ, ಈಗ ನೋಡು ನಿನ್ನ ಸಾಮರ್ಥ್ಯವನ್ನೆಂತೂ ನಿಲ್ಲಿಸಿಬಿಟ್ಟಿದ್ದೇನೆ. ಇನ್ನು.....—ನಿನ್ನ ಆ ನರಸಿಂಹನಾಯಕನ ಪಾಮರತ್ವನೇ! ಅವನ ಮಗಳನ್ನು ಎಳೆದು ತಂದು, ದೊರೆಗಳ ಬಂಗಾರದವಳನ್ನಾಗಿ ಮಾಡಿದ್ದೀರಿ, ನಾನು ಈಶ್ವರನಾಯಕನೇ ಅಲ್ಲ, ತಿಳಿಯಿತೇನು?

ರಾಜ:— ಅಕ್ಕಟಾ! ಕನ್ನಡ ರಾಜ್ಯಲಕ್ಷ್ಮಿ! ಎಂತೆಂತಹ ದುರುಳರ ಕೈಗೆ ಸಿಕ್ಕಿ ನೀನು ವಿಡಂಬನೆಗೊಳ್ಳುತ್ತಿರುವೆಯಲ್ಲ!

ಈಶ್ವರ:— ಅಳು! ರಾಜಶೇಖರಾ, ಮುಖಕ್ಕೆ ಸೆರಗು ಹಾಕಿ. ಕೊಂಡು ಅಳು! ಹೇಡಿ! ಆವಿನ ಓಲಗದಲ್ಲಿಯು ನಿನ್ನ ಕಜ್ಜೆಪೆ ಎಲ್ಲಿ ಹೋಗಿದೆ ಈಗ?

ರಾಜ:— ದುಷ್ಟಾ! ಈಶ್ವರಾ! ನಿನ್ನ ಮೋಸಕ್ಕೆ ಸಿಕ್ಕಬಿದ್ದು ನಾನೀಗ ಅಸಹಾಯನಾಗಿ ನಿಂತುಕೊಂಡಿದ್ದೇನೆ; ಎಂತಲೇ ನೀನಿಷ್ಟು ವೀರನಾಗಿ ಮಾತನಾಡುತ್ತಿರುವಿ. ಈಗ ನನ್ನನ್ನು ಬಿಟ್ಟು ನೋಡು! ನಿನ್ನ ಮತ್ತು ನಿನ್ನವರೆಲ್ಲರ ಪ್ರಾಣಗಳನ್ನು, ಒಂದೇ ಒಂದು ಕ್ಷಣದಲ್ಲಿ— ವಿಜಯನಗರವನ್ನು ಕಾಡುತ್ತಿರುವ —ದುರ್ವಿಧಿಗೆ ಆಹುತಿಯನ್ನಾಗಿ ಅರ್ಪಿಸುತ್ತೇನೆ!

ಈಶ್ವರ:— ಎಲೋ! ನೀನಿನ್ನು ಒಂದೇ ಕ್ಷಣದ ಆಯುಷ್ಯ. ದವನು. ಇನ್ನೇತಕ್ಕೆ ನಿನಗೆ ವಿಜಯನಗರದ ಹಂಬಲು!

ರಾಜ:— (ವಿಷಾದದ ನಗೆಯೊಂದಿಗೆ) ವಿಜಯನಗರದ ಹಂಬಲು ಇನ್ನೇತಕ್ಕೆ—ಎಂದು ಕೇಳುತ್ತೀಯಾ? ಈಗ ನಿನ್ನಿಂದ ನಾನು ಪತ್ತೆ ಹೋದರೆ, ನನ್ನ ವಿಜಯನಗರದ ಹಂಬಲು ಒಂದಕ್ಕೆ ನೂರಾಗಿ ಹೆಚ್ಚುವುದು! ಈ ಅಶಾತಿಯಜ್ಞಕ್ಕೆ ಪೂರ್ಣಾಹುತಿಯಾಗಿ, ನನ್ನ ದೇಹದಿಂದ ಹೊರಹೊಮ್ಮುವ ಜೀವವು ಅನಂತಮುಖವಾಗಿ ಸಾಗಿ, ಕನ್ನಡನಾಡಿನ ಪ್ರತಿಯೊಂದು ಪ್ರಾಣಿಯು ಪ್ರಾಣದಲ್ಲೂ ಸಾಮ್ರಾಜ್ಯ. ಪ್ರೀತಿಯು ಗಾಳಿಯನ್ನು ಹುಂಬುವುದು. ನಿನ್ನಂತಹ.....ಮತ್ತು ನಿನ್ನ ಮಾತನ್ನು ಕೇಳಿ ನಡೆಯುತ್ತಿರುವ ಪೆದ್ದನಂತಹ ಅಯೋಗ್ಯ. ರನ್ನು ರಸಾತಳಕ್ಕೆ ಉರುಳಿಸಿ, ಸಾಮ್ರಾಜ್ಯಲಕ್ಷ್ಮಿಯನ್ನು ನುಂಗಿ ನೀರು ಕುಡಿಯಲು ನಿಂತಿರುವ ರಾಹುವನ್ನು ಅದು ಮಣ್ಣುಗೂಡಿಸಿ ಬಿಡುವುದು!

ಈಶ್ವರ — (ಹಾ ಹಾ ಹಾ ಹಾ ಎಂದು ಗಟ್ಟಿಯಾಗಿ ನಕ್ಕು) ನಾನು ಎಂದಿನಿಂದಲೂ ಬಲ್ಲೆ! ರಾಜಶೇಖರಾ, ನಿನ್ನ ಬಾಯಿ. ಬಡಾಯಿ ಬಹಳ!

ರಾಜ:— (ಕೆರಳಿದ ಸಿಂಹದಂತಾಗಿ) ಎಲೋ, ನನ್ನನ್ನೀಗ ಬಿಚ್ಚಿಸಿಬಿಡು! ಬಾಯಬಡಾಯಿ ಯಾರದೆಂಬುದನ್ನು ತೋರಿಸಿ ಕೊಡುತ್ತೇನೆ ಮೋಸಗಾರನಾದ ಹೇಡಿ ನೀನು! ಕನ್ನಡ ಕ್ಷತ್ರಿಯ ವಂಶದಲ್ಲಿ ನೀನು ಹುಟ್ಟಬಾರದಾಗಿತ್ತು. ವೈಮರೆತು ಕುಳಿತಿದ್ದವ. ನನ್ನು ಮೋಸದಿಂದ ಹೊತ್ತುತಂದು, ಪಶುವಿನಂತೆ ಮರಕ್ಕೆ ಕಟ್ಟಿಹಾಕಿ, ಕೊಲ್ಲಲಿಕ್ಕೆ ನಿಂತಿದ್ದ ನೀನು ಗಂಡುಸೇ? ಕ್ಷತ್ರಿಯನೇ? ಕನ್ನಡಿಗನೆ? ಚಾಂಡಾಲರಲ್ಲಿಯು ಚಾಂಡಾಲ! ನಿನ್ನಲ್ಲಿ ಮಾನವತ್ವವೆಂಬುದು ಏನಾದರೂ ಇದ್ದರೆ, ಈಗ ನೀನೊಂದು ಕತ್ತಿಯನ್ನು ತೆಗೆದುಕೊ; ನ್ನಾನೊಂದನ್ನು ತೆಗೆದುಕೊಳ್ಳುತ್ತೇನೆ. ದ್ವಂದ್ವಯುದ್ಧಕ್ಕೆ ನಿಲ್ಲು.... ಎಂಡರೆ ಎನ್ನುತ್ತೇನೆ.....ಬೇಕಾದರೆ ಕನ್ನಡ ಕುಲದ ತೇಜದಿಂದ ಹುಟ್ಟಿದವನೆಂದು!

ಈಶ್ವರ:— (ಪತ್ತ್ವಹೀನವಾದ ಆವೇಶದಲ್ಲಿ) ನೋಡು, ರಾಜಶೇಖರಾ, ಕಾರಣವಿಲ್ಲದೆ ಹರಟೆ ಬಾಗಾರದಂತಹ ಬದುಕನ್ನು ವ್ಯರ್ಥಗೊಳಿಸಿಕೊಳ್ಳಬೇಡ! ನಾನು ಹೇಳಿದಂತೆ ಕೇಳಲಿಕ್ಕೆ ಒಪ್ಪಿ ಈ ನಿನ್ನ ಪ್ರಾಣವನ್ನು ಉಳಿಸಿಕೊಳ್ಳು!

ರಾಜ:— ಇದೊಂದು ಬದುಕು ಹೀಗೆಯೇ ಹೋಗಬೇಕಾಗಿದ್ದರೆ ಹೋಗಲಿ! ನನ್ನ ವಿಜಯನಗರಕ್ಕಾಗಿ, ಇನ್ನೂ ನೂರು ನೂರು ಸಲ. ಕನ್ನಡಿಗನಾಗಿ ಇಲ್ಲಿಯೇ ಹುಟ್ಟಿ ಬರುತ್ತೇನೆ. ನಿನ್ನಂತಹ ಮನೆಯ ಕಳ್ಳರ ಪುಲಿಗೆಯಿಂದ ಕರ್ನಾಟಕ ರಾಜ್ಯಲಕ್ಷ್ಮಿಯನ್ನು ಮುಕ್ತಳನ್ನಾಗಿ ಮಾಡುತ್ತೇನೆ!

ಅಲ್ಲಾ ಅಲ್ಲಾ ಎಂಬ ಉದ್ಗಾರದೊಂದಿಗೆ ಒಂದು ಏಟನ್ನು ಏರಿಸಿರುವುದು.)

ಈಶ್ವರ:— ಈಗ ಬಿಚ್ಚಿಬಿಟ್ಟರಿ ನೀನು ಏನು ಮಾಡುವಂತಿದ್ದೀಯೆ?

ರಾಜ: ಎಲ್ಲಕ್ಕೂ ಮೊದಲು ನಿನ್ನ ಕುತಿಗೆಯನ್ನು ಹಿಸುಕಿ, ನಿನ್ನ ಪ್ರಾಣವನ್ನು ತೆಗೆದು ಬಿಡುತ್ತೇನೆ. ಆಮೇಲೆ ನಾನು ನಿಶ್ಚಿಂತ! ನಿನ್ನವರೆಲ್ಲರೂ ಸೇರಿ, ಆಮೇಲೆ ನನ್ನನ್ನು ಬಡಿದು ಜೂರು ಜೂರು ಮಾಡಿ ಕೊಂದರೂ ಸರಿಯೆ!

ಈಶ್ವರ — (ಹೇಡಿಯ ರೊಚ್ಚಿನಿಂದ) ನೀನು ನನ್ನ ಪಾಲಿನ ಯಮನಿ! ಹೀಗೆಯೆ ಬದುಕಗೊಡುತ್ತೇನೆಯೇ ನಿನ್ನನ್ನು? ಹುಂ, ಜಕ್ಕಣ್ಣಾ, ದುರಗಪ್ಪನಾಯಕಾ! ಇನ್ನು ವಿಲಂಬ ಬೇಡ! ಈ ಹೇಡಿವಾದಿಯ ಹೃದಯದಲ್ಲಿ ನಿಮ್ಮ ಸುರಗಿಗಳು ಒಮ್ಮೆಲೇ ಪ್ರವೇಶಿಸಲಿ!

ಜಕ್ಕಣ್ಣ:— ಬುದ್ದಿಯವರ ಆಜ್ಞೆಯನ್ನೇ ಕಾಯುತ್ತಿದ್ದೇನೆ. ಬಾ, ದುರಗಣ್ಣಾ! ಮುಂದೆ ಬಾ! ಎಲೋ, ರಾಜಶೇಖರಾ! ಇಂದು ನನ್ನ ಪ್ರತಿಜ್ಞೆಯನ್ನು ಪೂರ್ಣಮಾಡಿಕೊಳ್ಳುವ ಅವಕಾಶ ಒದಗಿದೆ. ನಿನ್ನ ದೊರೆಗಳನ್ನು ನೀನು ಹೀಗೆಯೆ ಸುರಗಿಯಿಂದ ಇರಿದಿದ್ದೆಯಲ್ಲವೆ?

[ಸುರಗಿಯನ್ನು ಎದೆಯಲ್ಲಿ ಹುಚ್ಚಿದ ಶಬ್ದ ಕೇಳಬೇಕು.]

ರಾಜ:— (ನಿಶ್ಚಲಭಾವದಲ್ಲಿಯೆ) ಜಯ ಕರ್ನಾಟಕ ರಾಜ್ಯಲಕ್ಷ್ಮೀ! ಜಯ.....ಹಂಪಾ....ವಿರೂಪಾ.... (ಧ್ವನಿಯು ತಗ್ಗುತ್ತ ಹೋಗಿ ನಿಲ್ಲುವುದು)

[ಶರಣಾಸ್ತ್ರಗಳ ಮಿಡಿತದೊಂದಿಗೆ ರೂಪಕದ ತೆರೆ]

ಹಾವು ಮತ್ತು ಮುಂಗುಲಿ

(ಒಂದು ರೂಪಕಕಥನ)

ಶ್ರೀ. ಶ್ರೀನಿವಾಸ ವಂ. ಗಲಗಲಿ, ಧಾರವಾಡ

ಏರಿ ಮನೋರಥ, ಗಾಳಿಯ ಹೂಡಿ,
ವೇಗದಿ ಸಾಗಿಹರಾರದೊ, ನೋಡಿ!
ಹಿಡಿದುದೆ ಹಾದಿಯು; ತಡೆವವರಿಲ್ಲ!
ತಡೆದವರೊಬ್ಬರು ಬದುಕಿಹುದಿಲ್ಲ! ೧

ವಿಜಯೋನ್ಮಾದದಖರ್ವಗರ್ವದಲಿ,
ಸರ್ವೋರ್ವೀಪತಿಯಾಗುವ ನೆವದಲಿ,
ಚತುರಂಗದ ಜತೆ ಹೊರಟಿಹ ನೃಪನೊಲು,
ಸಾಗಿದೆ ರಿಪುಕುಲ ಕಾಲನೆ ಎಂಬೊಲು. ೨

ಹೂಬಿಸಿಲಿನ ಹೊಸಬಳ್ಳಿಯ ಕುಡಿಯೊ!
ಚಳಮಳ ಹೊಳೆಯುವ ಮಿಂಚಿನ ಮಿಡಿಯೊ!
ಹಸುರಲಿ ಮಿರುಗುವ ಬಿಸಿಲಿನ ಮಿಂಚೊ!
ಪ್ರಮದೆಯು ಚಿಮ್ಮುವ ನಿರಿಜರದಂಚೊ! ೩

ಎನೆಮ್ಮೆ ಮೆರುಗನು ಜೊತೆಯಲಿ ಹಬ್ಬಿಸಿ
ಮೈಗಂಪನು ಹೆಡೆ ಹೆಮ್ಮೆಯೊಳುಬ್ಬಿಸಿ
ಸಳಸಳ! ಸಳಸಳ! ಹರಿದೋಡುತಿದೆ;
ನಾಗರ ಹಾವದು ಕಣ್ಣಾಕಿವಿ ತೆರೆದಿದೆ. ೪

ಹಾವೋ ಹೆಮ್ಮೆಯ ಹೆಡೆಯನ್ನೆತ್ತಿ,
ಕುಕ್ಕಲು ಹೊರಟಿದೆ ನಿರ್ಬಲನೆತ್ತಿ.
ಕೆಂಬಣ್ಣದ ಸೀಳ್ನಾಲಿಗೆ ಚಾಚಿ,
ನಡೆದಿದೆ ನಾಗರ ಅನ್ನಕೆ ದೋಚಿ. ೫

ಏನನು ಕಂಡಿಹೊ ಯಾವಗೆ ಗೊತ್ತು?
ಚರುಪದಿ ಹಿಗ್ಗಿತು ಕಾಣುವ ತುತ್ತು
ಬಾಯಲಿ ಬೀಳಲು ಬೇಕೆಂದೆಣಿಸಿತು;
ಧಾವಿಸಿ ಸೀಮೆಯ ಬೇಲಿಯು ಸೇರಿತು. ೬

ನಿಮಿಷಾರ್ಧದಲದೊ, ಬೇಲಿಯ ಮುಂದೆ,
ಬಯಲಲಿ ಕಾದುವ ಹುಮ್ಮಸದಿಂದೆ,
ಗರಿಮೈ-ಗರಿಬಾಲಗಳನು ಉಬ್ಬಿಸಿ
ಮುಂಗುಲಿ ಬಂತದೊ, ಹಾವನು ರೇಗಿಸಿ. ೭

ಹಾವಿನ ಹೆಡೆಯಲಿ ದೃಷ್ಟಿಯು ನಿಟ್ಟು,
ಹೆಡೆಹೊಡೆತಗಳನು ತಪ್ಪಿಸಿಬಿಟ್ಟು,
ಸರಸರ ಸರಿಯುತಲಿದೆ ಮುಂಗುಲಿಯು!
ಹೆಡೆಹುಡಿಗಾತಿಸಿ ಬಿಡುವಾ ಕಲಿಯು. ೮

ಮುಂಗುಲಿಗೆಂದೇ ಹೊಡೆದಿದು ಹೊಡೆತಾ
ಪ್ರತಿಸಲ ತನಗೇ ಹೊಡೆದಿತು ನೆಲ ತಾ.
ಬೊಡೆದೂ ಹೊಡೆದೂ ಹೀಗೆಯೆ ನಾಗರ,
ತಾನೇ ಬಿದ್ದಿತು ಸಾವಿಗೆ ಸಾಗರ! ೯

ಇದನೇ ಕಾಯ್ದಿಹ ಮುಂಗುಲಿ ಹಿಗ್ಗಿ,
ಕಡಿದಿಬ್ಬಾಗಿಸಿ, ಹಾವಿಗೆ ನುಗ್ಗಿ,
ಮನೆಗೋ ಮಾರಿಗೊ ತೆರಳಿತು ಮತ್ತೆ,
ಹೆಮ್ಮೆಯ ಹೆಡೆ ಹುಡಿಗೂಡುವುದೆನುತೆ. ೧೦

ಎರಡು ಭಾವರೂಪಕಗಳು

ಶ್ರೀ. ಹಾ. ವೆಂ. ನಾಗೇಶ, ಕಲಬುರ್ಗಿ

卐

೧

ಕಮಲಳು ಬಹಳೇ ನಳ್ಳಾಗ

ದಿನಕರನೇ ತನ್ನ ಪ್ರೇಮಿಯೆಂದು ಎಣಿಸಿಕೊಂಡಾಗ ಕಮಲಳ ಗರ್ವಕ್ಕೆ ಮೇರೆ ಇದ್ದಿಲ್ಲ. ಜಗತ್ತನ್ನು ಬೆಳಗಿಸುವವನೇ ತನ್ನವನೆಂಬ ಅರಿವಿನಿಂದ ಅವಳು ಉಬ್ಬಿಹೋದಳು. ತರಂಗ-ತರಂಗವಾಗಿ ಏರಿಳಿಯುವ ನೀರು ಕಮಲಳನ್ನು ಕಿಲಕಿಲನೆ ನಗಿಸಿತು. ಸರೋವರವೆಲ್ಲ ಕಮಲಳ ಕಿಲಕಿಲಗಾನದಿಂದ ತುಂಬಿಹೋಯಿತು....

ಕಮಲಮಿತ್ರನು ಬಾನಲ್ಲಿ ಏರುತ್ತ ಬಂದನು. ತನ್ನ ಸನಿಹಕ್ಕೆ ಅತ ಬರುತ್ತಿರುವುದನ್ನು ಕಂಡಂತೆ ಕಮಲಳು ನಿಮಿಷ-ನಿಮಿಷಕ್ಕೆ ಹೆಚ್ಚು ಹೆಚ್ಚು ಮದೋನ್ಮತ್ತಳಾಗುತ್ತ ನಡೆದಳು. ಜೀವನದ ಸಂಗಾತಿಯಾದ ನೀರನ್ನೂ ಕಡೆಗಣಿಸಹತ್ತಿದಳು. ಗಳಿಗೆ-ಗಳಿಗೆಗೊಮ್ಮೆ ನೀರಿನಿಂದ ಮೇಲಕ್ಕೆದ್ದು ತನ್ನ ವೈಭವವನ್ನು ಪ್ರಿಯಕರನೆದುರು ಪ್ರದರ್ಶಿಸುವ ಇಚ್ಛೆಯಾಯಿತು ಅವಳಿಗೆ. ಹಳಿಗೆಯೊಂದು ಸಂದಿತು; ಸೂರ್ಯ ನಡುಬಾನಿನಲ್ಲಿ ಏರಿ ಬಂದ.

ಕಮಲಳಿಗೆ ತನ್ನ ಮೈಮೇಲಿನ ಅರಿವೇ ಉಳಿಯದಂತಿದ್ದಿಲ್ಲಿ. ಅವಳು ಬೇರೆಲ್ಲವನ್ನೂ ಮರೆತಳು. ತಾನಿನ್ನು ಈ ನೀರಿನಲ್ಲಿ ಹಿಂದಿನಂತೆ ಅಧೋಮುಖಿಯಾಗಿ ಉಳಿಯಲಾರೆನೆಂದುಕೊಂಡಳು ಆದೀಗ ಸೂರ್ಯ ಅಪೂರ್ವವಾಗಿ ನಗುತ್ತಿದ್ದ. ಶುಭ್ರವಾದ ಅತನ ಸ್ನೇಹಪಾಶ ಹಬ್ಬಿತ್ತು. ಕಮಲ ತಾನೂ ನಳ್ಳಳು. ಕೊನೆಗೂ ನೀರಿನಿಂದ ಹೊರಗೆ ನೆಗೆದು ಬಂದಳು....

ಅರ್ಧಗಳಿಗೆಯೂ ಆಗಿರಲಿಲ್ಲ. ಸೂರ್ಯ ಇನ್ನೂ ನಗುತ್ತಿದ್ದಾನೆ. ಆದರೆ ಏನೋ ಒಂದು ವೇದನೆಗೆ ಮೊದಲಿಟ್ಟಿತ್ತು. ಕಮಲಳು ತನ್ನಿನಿಯನಿಗೆ ಕೊಂಚ ತಡೆಯೆನ್ನಬೇಕೆಂದಿದ್ದಳು. ಆದರೆ ಸೂರ್ಯ ಮತ್ತೂ ಪ್ರಖರವಾಗಿ ನಳ್ಳ. ಆ ಪ್ರಖರತೆ ಅಸಹನೀಯವಾಗಿತ್ತು. ಕಮಲಿನಿ ನರಳಿದಳು. ಕ್ಷಣವೆರಡು ಕ್ಷಣಗಳಲ್ಲಿ ಕಮಲಿನಿ ಬಾಡಿದಳು; ಬಸವಳಿದಳು.

೨

ಎರಡು ದೀಪಗಳು

ಬೀಸಿವ ಬಿರುಗಾಳಿಯಿಂದ ಹಣತಿಗಳೆಲ್ಲ ಅರಿಹೋದುವು....

ಅನಂತ ಕಾಳಿಮೆ ವಿರಾಜಮಾನವಾಗಿತ್ತು. ತುದಿ-ಮೊದಲಿಲ್ಲದ ಕತ್ತಲಿನಲ್ಲಿ ಎರಡು ಚಿಕ್ಕ ಹಣತಿಗಳಾದರೂ ಮಿಣುಕು ಮಿಣುಕು ಉರಿಯುತ್ತಿದ್ದುದರಿಂದ, ಆ ಕತ್ತಲೆ ಅಷ್ಟೇನೂ ಅಸಹನೀಯವೆನಿಸುತ್ತಿರಲಿಲ್ಲ.

ಆ ಎರಡು ಹಣತಿಗಳು ತಮ್ಮ ಬೆಳಕಿನಾಗಿ ಬಹಳೇ ಗರ್ವದಿಂದಿದ್ದುವು. ಬೇರೆ ಯಾರೂ ಅಲ್ಲಿ ಬೆಳಗಿಸಲೂ ಇರಲಿಲ್ಲ. ತಾವೇ ಆ ಅನಂತ ಕಾಳಿಮೆಯೆದುರು ಹೋರಾಡುವ ಅಪ್ರತಿಮರೂ ಅದ್ವೀತೀಯರೂ ಆದ ಅಧಿಪತಿಗಳೆಂಬ ಅರಿವು ಅವುಗಳಿಗೆ ಸಹಜವಾಗಿತ್ತು.

ಎಲ್ಲೋ ಕತ್ತಲಿನಲ್ಲಿ ಹುದುಗಿಕೊಂಡಿದ್ದ ಮೂರನೆಯ ಹಣತಿ ಒಂದನೆಯ ಹಣತಿಗೆ ಬಂದು ಕೇಳಿತು: "ಅಣ್ಣಾ, ನನ್ನನ್ನೂ ತುಸು ಬೆಳಗಿಸು. ನಾವೆಲ್ಲ ಕೂಡಿಕೊಂಡು ಬೆಳಗುವ. ಕತ್ತಲಿನೊಡನೆ ಹೋರಾಡುವ; ಗೆಲ್ಲುವ. ಆಗದೆ?"

ಆ ಹಣತಿ ಸರ್ವಥಾ ಒಪ್ಪಲಿಲ್ಲ. ತನ್ನೊಡನೆ ವಿಜಯದಲ್ಲಿ ಹೆರವರೂ ಭಾಗಿಗಳಾಗುವುದು ಅದಕ್ಕೆ ಬೇಕಿದ್ದಿಲ್ಲ. ಎಲ್ಲರೂ ಬೆಳಗಹತ್ತಿದರೆ ತನ್ನ ದಾನವ ಮಹತ್ತ್ವಕೆಯೆಂದು ಅದು ಅಂದುಕೊಂಡಿತು. ಕತ್ತಲಿನಿಂದ ಬಂದ ಆ ಮೂರನೆಯ ಹಣತಿ ಒಂದೇಸವನೆ ಮೊದಲನೆಯ ಹಣತಿಗೆಗೆ ದುಂಬಾಲು ಬಿದ್ದಿತು. ಆದರೆ ಮೊದಲ ಹಣತಿ ಒಂದಿಷ್ಟೂ ಜಗ್ಗಲಿಲ್ಲ. ಛೀ! ಈ ಗೋಳು ಕೇಳುವುದು ಬೇಡ. ಈ ಅಸಹ್ಯವಾದ ಅನುನಯ-ವಿನಯ, ಬೇಡುವಿಕೆ-ಕಾಡುವಿಕೆಗಳಿಂದ ಪಾರಾಗುವೆ – ಎಂದು ಆ ಹಣತಿ ಮುಂದೇನಾದೀತೆಂದೂ ಯೋಚಿಸದೆ, ತಾನೇ ಕುಗ್ಗಿ ನಂದಿಹೋಯಿತು. ಹೇಗಾದರೂ ಸದ್ಯದ ಈ ಸಂಕಟದಿಂದ ತಾನು ತಪ್ಪಿದೆನೆಂದು ಅದು ಇದ್ದುದರಲ್ಲೇ ನೆಮ್ಮದಿಯನ್ನು ಕಂಡುಕೊಂಡಿತು.

ಕತ್ತಲಿನಿಂದ ಬಂದ ಆ ಮೂರನೆಯ ಹಣತಿ ಈ ತಡನೆ, ಬೆಳಗುವ ಎರಡನೆಯ ಹಣತಿಯ ಕಡೆಗೆ ಸಾಗಿ ಹಿಂದಿನಂತೆಯೇ ಪ್ರಾರ್ಥಿಸಿಕೊಂಡಿತು. ಆ ಎರಡನೆಯ ಹಣತಿ ಸ್ವಸಂತೋಷದಿಂದ ಕತ್ತಲಿನಿಂದ ಬಂದ ಹಣತಿಯನ್ನು ಬೆಳಗಿತು. ಕಣ್ಣೆವೆ ತೆರೆಯುವುದರೊಳಗಾಗಿ ಆ ಎರಡು ಹಣತಿಗಳು ಕತ್ತಲಿನಲ್ಲಿ ಹುದುಗಿಕೊಂಡಿದ್ದ ಉಳಿದೆಲ್ಲ ಹಣತಿಗಳನ್ನು ಹೊತ್ತಿಸಿದುವು. ಬೆಳ್ಳಂಬೆಳಕು ತಿರುಗಿ ವಿರಾಜಮಾನವಾಯಿತು....

ಹೆರವರನ್ನು ಬೆಳಗಿಸಲಾರೆನೆಂದು ತಾನೇ ಅರಿಸಿಕೊಂಡ ಹಣತಿ ಮಾತ್ರ ಇನ್ನೂ ಕತ್ತಲಿನಲ್ಲಿ ಗೋಳಾಡಿಕೊಳ್ಳುತ್ತಿತ್ತು. ಯಾರೂ ಅದರ ಸಾಂತ್ವನಕ್ಕೆ ಧಾವಿಸಲಿಲ್ಲ. ಅದು ತನ್ನ ಪಾಡಿಗಾಗಿ ಗೋಗರೆಯುತ್ತಲೇ ಇತ್ತು!

(೨೫೬ನೆಯ ಪುಟದಿಂದ ಬಂದುದು)

ಸಂಗೀತ ಇದನ್ನೇ ಸ್ಪಷ್ಟವಾಗಿ ಸಾರುತ್ತಿದ್ದುವು. ಲಖನೌ ವಿಶ್ವವಿದ್ಯಾಲಯದ ರಘುನಾಥನ್ ಸಾದ ಸೇಠಿಯವರ ಕೊಳಲುವಾದನವನ್ನು ಕೇಳಿದಾಗ, ಮಂತ್ರಮುಗ್ಧವಾದ ಹಾವಿನಂತೆ ಕುಳಿತಿದ್ದರು ಪ್ರೇಕ್ಷಕರು. 'ಇದನ್ನು ಕಲಿಕುವಾಡರೂ ಹೇಗೆ?' ಎಂದು ಪ್ರಶ್ನಿಸಲು 'ಆ-ಗಿಂ ವರುಷಗಳ ಅವ್ಯಾಹತ ಪರಿಶ್ರಮ' ಎಂಬ ಉತ್ತರವನ್ನು ಪಡೆದೆವು. ನಾಗಪುರ ವಿತ್ವವಿದ್ಯಾಲಯದ ಕುಮಾರಿ ಕಮಲ ವ್ಹಿ. ಪಟವರ್ಧನ ಅವರ ಶಾಸ್ತ್ರೀಯಸಂಗೀತವು ನಿಜವಾಗಿಯೂ ಉಚ್ಚಮಟ್ಟದ್ದಾಗಿತ್ತು. ಶಾಸ್ತ್ರೀಯನೃತ್ಯದಲ್ಲಿ 'ಕಥಕ' ವನ್ನೇ ಬಹಳವಾಗಿ ಕಾಣುತ್ತಿದ್ದರೂ, ಭರತನಾಟ್ಯ ಹಾಗೂ ಮಣಿಪುರೀ ನೃತ್ಯಗಳೂ ಯಶಸ್ವಿಯಾಗಿ ಪ್ರದರ್ಶಿತವಾದುವು. ಭರತನಾಟ್ಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಶ್ರೀ. ಈಶ್ವರ ಮಳಗಿಯವರು ಎರಡನೆಯ ಸ್ಥಾನವನ್ನು ಹಾಗೂ ಮಿಸ್ ಗಿರಿಜಾ ಮಳಯೆ ಇವರು ಮೂರನೆಯ ಸ್ಥಾನವನ್ನು ಪಡೆದದ್ದು ತುಂಬ ಶ್ಲಾಘನೀಯವಾದುದು. ಮಿಸ್ ವ್ಹಿ. ಲಕ್ಷ್ಮಿಯವರು ಕರ್ನಾಟಕ ಸಂಗೀತದಲ್ಲಿ ದ್ವಿತೀಯ ಸ್ಥಾನವನ್ನು ಪಡೆದು, ಶ್ರೀ ಎಮ್. ಎಸ್. ವಾಳಿಯು ಹಿಂದೀ ವಾಕ್ಚಾತುರ್ಯದಲ್ಲಿ ಇಡೀ ಭಾರತದಲ್ಲಿ ವ್ಯಥಮ ಬಹುಮಾನ ಪಡೆದು, ಕರ್ನಾಟಕ ವಿಶ್ವವಿದ್ಯಾಲಯದ ಮರ್ಯಾದೆಯನ್ನು ಹೆಚ್ಚಿಸಿದರು.

ಮುಂಜಾವಿನಿಂದ ರಾತ್ರಿಯ ಹನ್ನೆರಡರ ವರೆಗೆ ಕಾರ್ಯಕ್ರಮ ಇರುತ್ತಿದ್ದುವು. ಈ ಸಮಯದಲ್ಲಿ ನಾವು ಬೇರೆ ಬೇರೆ ಭಾಗದಿಂದ ಬಂದ ನಮ್ಮ ಬಂಧುಗಳನ್ನು ಭೆಟ್ಟಿಯಾಗುವುದು ತುಂಬ ಕಷ್ಟವಾಗಿತ್ತು. ಊಟದ ಸಮಯದಲ್ಲಿ ಹತ್ತಿರಿಂದು ತಾಸು ಮಾತ್ರ ಹೀಗೆ ಏರ್ಪಡಿಸಲು ಸಾಧ್ಯವಾಗುತ್ತಿತ್ತು. ೫-೬ ನೂರು ಜನರು ಒಮ್ಮೆಲೇ ಕೂಡುವ ವ್ಯವಸ್ಥೆ ಊಟದ ಮನೆಯಲ್ಲಿದ್ದಿತು. ಅಲ್ಲಿಯ ಊಟವು ನಮಗೆ ರುಚಿಸದಿದ್ದರೂ, ಅಲ್ಲಿ ನಮ್ಮ ಜೊತೆಯಲ್ಲಿರುವ ವಿಭಿನ್ನ ಪ್ರದೇಶಗಳ ವಿದ್ಯಾರ್ಥಿಗಳೊಡನೆ ಮಾತನಾಡುವುದು ರುಚಿಸುತ್ತಿತ್ತು. ನಮ್ಮವ್ಹೇ ಆತುರರಾಗಿದ್ದ ಬೇರೆ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ನಮ್ಮಿಂದ ಅನೇಕ ವಿಷಯಗಳನ್ನು ಅರಿತುಕೊಂಡರು. ನಾವು ಕನ್ನಡಿಗರೆಲ್ಲ ಕೂಡಿ 'ಕ್ಯಾಂಪ್ ಫಾಯರ್' ಮಾಡಿದ್ದೆವು. ಆಗ ಬನಾರಸು ವಿಶ್ವವಿದ್ಯಾಲಯದ ಮಿಸ್ ವಿಮಲ್ ಮುಂತಾದವರು ಹಾಡಿದ ಕೆಲವು ಜಾನಪದಗೀತಗಳು—ಕೋಲಾಟದ ಪದಗಳು ವಿಶೇಷವಾಗಿದ್ದುವು. ನಮ್ಮ ವಿಶ್ವವಿದ್ಯಾಲಯದ ಮಿಸ್ ಗಂಗೊಳ್ಳಿಯವರು ಹಾಡಿದ 'ಪಕ್ಷಿ ಮಾಧವನೇತಕೆ ಬಾರ' ಎಂಬ ಹಾಡು, ಶ್ರೀ ಪುಂಚಾಕ್ಷರಿಯವರು ಮಾಡಿದ ರಸಭರಿತ ಕೀರ್ತನೆ, ಶ್ಯಾಮ್ ಭಾಸ್ಕರಪುರದ ಕೊಳಲು, ರಸಿಕರ ಮನವನ್ನು ಸೂರೆಗೊಂಡುವು. ಎಲ್ಲಕ್ಕಿಂತ ಹೆಚ್ಚಾಗಿ ನಾವೆಲ್ಲರೂ ಕೂಡಿ ಹಾಡಿದ ಹಾಡು—ನೆಲ್ಲರಿಗೂ ಮೆಚ್ಚಿ ಮೈಮರೆತ ಹಾಡು—'ಪಂಚಮಿ ಹಬ್ಬಾ'!

"ಪಂಚಮಿ ಹಬ್ಬಾ ಉಳಿತವ್ವಾ ದಿನಾ ನಾಕ
ಅಣ್ಣಾ ಬರಲಿಲ್ಲ ಯಾಕೋ ಕರಿಲಾಕ! ॥ಪ॥

ನಮ್ಮ ತವರೂರು ಗೋಕುಲ ನಗರಾ।
ಮನಿಯೆಂಥಾದs ರಾಜಮಂದಿರಾ।
ನಮ್ಮ ಅಣ್ಣಯ್ಯ ದೊಡ್ಡ ಸಾವಕಾರಾ।
ಹ್ಯಾಂಗಾದೀತ ತಂಗಿನ್ನ ಮರಿಯಾಕ—
ಅಣ್ಣಾ ಬರಲಿಲ್ಲ ಯಾಕೋ ಕರಿಲಾಕ..... ॥೧॥

ನಮ್ಮ ತವರೀಲಿ ಪಂಚಮಿ ಭಾರಿ
ಮುಂದs ತೂಕಾ ಬಟ್ಟಲ ಕೊಬ್ಬರೀ
ಅಳ್ಳು ಅವಲಕ್ಕಿ ತಂಬಿಟ್ಟು ಸೂರಿ
ನಾನೂ ತಿನುವಾಕಿ ಬಂದಾಂಗ ಮನಕ—
ಅಣ್ಣಾ ಬರಲಿಲ್ಲ ಯಾಕೋ ಕರಿಲಾಕ.....॥೨॥

ಮುಂತಾಗಿದೆ ಆ ಹಾಡು.

'Once more' ಎಂಬ ಕೂಗಿನೊಡನೆಯೇ ಮತ್ತೆ ಹಾಡಿಯಾಯಿತು. ನನ್ನ ಜೊತೆಗೊಬ್ಬ ಹುರುಪಿನಿಂದ ತಾಳವಿಕ್ಕುತ್ತಿದ್ದ. ಪಲ್ಲವಿಯನ್ನು ಸಾಮಾನ್ಯ ಗಟ್ಟಿಯಾಗಿ ನಮ್ಮ ಜೊತೆಗೆ ಹೇಳುತ್ತಿದ್ದ. ಆದರೆ ಅವನ ಮುಖಚರ್ಯೆ, ವೇಷ ಕನ್ನಡಿಗನಂತಿರಲಿಲ್ಲ. ಹಾಡು ಮುಗಿದ ಮೇಲೆ 'What is this language?' (ಯಾವ ಭಾಷೆಯಿದು?) ಎಂದ.

'Kannada' (ಕನ್ನಡ) ಎಂದೆ ನಾನು.

"To 'which' versity do you belong?" (ಯಾವ ವಿಶ್ವವಿದ್ಯಾಲಯದವರು?) ಎಂದು ಕೇಳಿದೆ.

'Calcutta' (ಕಲಕತ್ತೆ) ಎಂದ. ಮುಂದುವರಿದು:

'I want to take this song in Bengali' (ಬಂಗಾಲಿ ಭಾಷೆಯಲ್ಲಿ ಈ ಹಾಡನ್ನು ಬರೆದುಕೊಳ್ಳಲಿಚ್ಛಿಸುವೆ) ಎಂದನು.

'Did you like it?' (ತಮಗೆ ಸೇರಿತೋ?) ಎಂದು ಕೇಳಿದೆ. 'I dont understand this language yet the tune is wonderful' (ಈ ಭಾಷೆ ನನಗೆ ತಿಳಿಯುವುದಿಲ್ಲ; ಆದರೂ ಇದರ ಧಾಟಿಯು ಇಂಪು ಅದ್ಭುತವಾಗಿದೆ.) ಎಂದು ಉತ್ತರಿಸಿದ. ನಮ್ಮ ಟೆಂಟುಗಳ ನಂಬರು ಕೇಳಿ—ನಾಳೆ ಅದನ್ನು ಬರೆದುಕೊಳ್ಳಲು ಬರುವೆನೆಂದ. ನಮ್ಮ ವಿಶ್ವವಿದ್ಯಾಲಯದ ನಾಟಕ ಏದ್ದ ದಿನ ರೆಕಾರ್ಡಿನ ವ್ಯವಸ್ಥೆ ನಡೆದಾಗ, ಇದೇ ಹಾಡನ್ನು ಹಾಡಿದೆವು—ಆಗ ಟೇಪ್‌ರೆಕಾರ್ಡ್ ಕೂಡ ಮಾಡಿಕೊಂಡರು. ಇಷ್ಟೆಲ್ಲ ಆದರೂ ಈ ಕವಿತೆ ಬರೆದವರು ಧಾರವಾಡದ ಶ್ರೇಷ್ಠ ಕವಿಗಳಲ್ಲೊಬ್ಬರಾದ ಶ್ರೀ ಆನಂದಕಂದರೆಂಬುದು ನಮ್ಮಲ್ಲಿಯೇ ಬಹಳ ಜನರಿಗೆ ಗೊತ್ತಿರಲಿಲ್ಲ!

೨೬ನೆಯ ದಿನಾಂಕ ದಿಲ್ಲಿಯ ಕರ್ನಾಟಕ ಸಂಘದವರು ಮೈಸೂರು—ಕರ್ನಾಟಕ ವಿಶ್ವವಿದ್ಯಾಲಯಗಳ ಕನ್ನಡ ವಿದ್ಯಾರ್ಥಿಗಳನ್ನು ಆಮಂತ್ರಿಸಿ ಸತ್ಕರಿಸಿದರು. ಕಾನ್‌ಸ್ಟಿಟ್ಯೂಶನ್ ಕ್ಲಬ್ಬಿನಲ್ಲಿ ಮನೋರಂಜನೆಯ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ಅಂದು

ಮಾನ್ಯಮಂತ್ರಿ ದಾತಾರರು ಮುಖ್ಯ ಅತಿಥಿಗಳಾಗಿದ್ದರು. ಶ್ರೀ. ಕರಮರಕರರು ಹಾಗೂ ಅನೇಕ ಕನ್ನಡ ಪ್ರತಿನಿಧಿ ಜನರು ಉಪಸ್ಥಿತರಿದ್ದರು. ನಮ್ಮ ವಿಶ್ವವಿದ್ಯಾಲಯದವರ ಅನೇಕ ಕಾರ್ಯಕ್ರಮಗಳು ಜನರ ಮೆಚ್ಚುಗೆಯನ್ನು ಪಡೆದುವು. ಅವುಗಳಲ್ಲಿಯೂ ಎರಡೂ ಶಾಸ್ತ್ರೀಯ ನೃತ್ಯಗಳು, ಶ್ರೀ ಭಾಗವತರು ಭಾಗವಹಿಸಿದ 'ಸ್ವಯಂವರ' ಎಂಬ ಗೀತರೂಪಕ, 'ಇದೊ ಬಂದೆವು ಬಿಡುಗಡೆಗಾಗಿ' ಎಂಬ ವ್ಯಂಗಗೀತ, ಶ್ರೀ ಉಮೇಶ ಹೆರಂಜಾಳರು ಮಾಡಿದ ಉತ್ತರಹಿಂದುಸ್ತಾನೀ ಗವಾಯಿಯ ಘಾರ್ಸು ಇವು ವಿಶೇಷ ಮೆಚ್ಚುಗೆಯನ್ನು ಪಡೆದುವು.

ಅನೆಯ ತಾರೀಖಿನಂದು ರಾಷ್ಟ್ರಪತಿ ಭವನದಲ್ಲಿ ಹದಿನಾರು ನೂರು ವಿದ್ಯಾರ್ಥಿಗಳಿಗೂ 'At home' ಇದ್ದಿತು. ಅಲ್ಲಿದ್ದ ವಸ್ತು ಸಂಗ್ರಹಾಲಯವನ್ನು ನೋಡುವ ಆಕರ್ಷಣೆಯೂ ಅಂದು ಈಡೇರಿತು. ಅನೇಕ ತರದ ಶಿಲ್ಪವಿಗ್ರಹಗಳು—ಭಾಷೆಗಳ ಬೆಳೆವಣಿಗೆಗಳ ಬಗೆಗಿ ಇದ್ದ ಪಟ್ಟಿಗಳು ಅಪೂರ್ವವಾಗಿದ್ದುವು. ರಾಷ್ಟ್ರಪತಿ ಭವನದ ಹಿಂದೆ ಇದ್ದ 'ಮೊಗಲ್ ಗಾರ್ಡನ್ಸ್'ನಲ್ಲಿ ಪಾರ್ಟಿಯ ವ್ಯವಸ್ಥೆಯಾಗಿದ್ದಿತು. ಉದ್ಯಾನದ ವಿಸ್ತೀರ್ಣ ಪ್ರದೇಶವನ್ನು ನೆನೆದರೆ, ನಾವೆಲ್ಲರೂ ಅಲ್ಪಜೀವಿಗಳೇ ಜನ! ಅಲ್ಲಿ ಪುಟಿಯುತ್ತಿರುವ ಕಾರಂಜಿ ನಮ್ಮಲ್ಲಿ ಆನಂದದ ಬುಗ್ಗೆಯನ್ನು ಚಿಮ್ಮಿತು. ಆಹ್ಲಾದಕರವಾದ ಹುಲ್ಲಿನ ಹಾಸಿಗೆಯ—ಮೇಲೆಯೇ ಬಹಳ ಕಾಲ ಕಳೆದೆವು. ಅಲ್ಲಿಂದಮುಂದೆಯಾವ ಗಿಡಗಳ ಸಾಲುಗಳು ಒಂದು ಹೂವ ಸೌಂದರ್ಯವನ್ನು ತೋರುತ್ತಿದ್ದುವು. ಅಲ್ಲಿದ್ದ ತಿಂಡಿ-ತಿನಿಸುಗಳನ್ನು ಎರಡು ಸಲ ತಿರುಗಿ ಕೊಂಡವರು ನ್ಯೂನ್ಯ ತಿರುಗಿ ಬಂದಮೇಲೆ ಊಟಮಾಡಲಿಲ್ಲ! ಸುಶ್ರಾವ್ಯವಾದ ಬ್ಯಾಂಡಿನ ಸಂಗೀತ ಕೊನೆಯವರೆಗಿತ್ತು.

ಪುರಾತನ ಕಾಲದಿಂದಲೂ ರಾಜಧಾನಿಯಾಗುತ್ತ ಬಂದ ದಿಲ್ಲಿ ಪಟ್ಟಣದಲ್ಲಿ, ನೋಡತಕ್ಕಂತಹ ಐತಿಹಾಸಿಕ ಸ್ಥಳಗಳಿಗೆ ಕೊರತೆಯಿಲ್ಲ. ನಮ್ಮ ವಿಶ್ವವಿದ್ಯಾಲಯದವರೆಲ್ಲ ಒಟ್ಟುಗೂಡಿ ಅನೇಕ ಸ್ಥಳಗಳನ್ನು ನೋಡಿದೆವು. 'ಹುಮಾಯೂನಕಾ ಕಬರ್'ನಲ್ಲಿ ಮೊಗಲರ ಹಳೆಯ ವಾಸ್ತುಶಿಲ್ಪದ ರೀತಿಯನ್ನು ಕಾಣುತ್ತೇವೆ. ಗಗನಚುಂಬಿತ ಕುತುಬ್ ಮಿನಾರಿನ ಕಲ್ಪನೆ ಬರುವುದು. ಚಿತ್ರಗಳಲ್ಲಿ ನೋಡಿದಾಗ ಸಾಧ್ಯವಿಲ್ಲವೆಂಬುದನ್ನು ಮನಗಂಡೆವು. ಕೆಂಪು ಕಲ್ಲುಗಳಿಂದ ಇದು ನಿರ್ಮಿತವಾಗಿದೆ—ಇದರ ಎತ್ತರ ೨೩೮ ಅಡಿ ಇದ್ದು, ೬೭೧ ಮೆಟ್ಟಿಲು. ಗಳಿವೆ. ಮೇಲೆ ಹತ್ತಿದಂತೆ ೫ ಸ್ಥಳಗಳಲ್ಲಿ ಸುತ್ತಲೂ ಗ್ಯಾಲರಿಯು. ತಿದ್ದು, ಅಲ್ಲಿಂದ ದಿಲ್ಲಿ ಪಟ್ಟಣವನ್ನು ನೋಡಬಹುದು. ಇದು ರಚಿತವಾಗಿ ಈಗ ೭೫೭ ವರುಷಗಳಾಗಿದ್ದರೂ, ನಾವು ಇದರ ಮೇಲ್ಭಾಗದವರೆಗೂ ಹೋಗಿ ನೋಡಬಹುದಾಗಿದೆ.

ರಾಜಘಾಟಲ್ಲಿರುವ ಮಹಾತ್ಮಾಗಾಂಧೀಜಿಯವರ ಸಮಾಧಿಗೆ ಹೋಗಿದ್ದೆವು. ಅಲ್ಲಿ ರಾಷ್ಟ್ರಪಿತನ ಸಮಾಧಿಯಮೇಲೆ ಶ್ರದ್ಧೆಯ ಪುಷ್ಪಗುಚ್ಛವನ್ನು ಏರಿಸಿದೆವು. 'ವೈಷ್ಣವಜನತೋ ತೇನೇ ಕಹೀಯೇ' ಜೇ ಪೀಡ ಪರಾಯಾ ಜಾಣೇರೇ' ಎಂಬ ಹಾಡನ್ನು ಅಲ್ಲಿ ಹಾಡಿದೆವು. ಎಲ್ಲರೂ ಮಹಾತ್ಮರ ಜೀವನವನ್ನು ನೆನೆದೆವು—ಕಳವಳವು ಉಂಟಾಯಿತು.

ಕೆಂಪುಕೋಟೆಯನ್ನು ನೋಡಿದಾಗ ಮೊಗಲರ ಐಶ್ವರ್ಯದ ಕಲ್ಪನೆ ಬರುವಂತಿದೆ. ಅಲ್ಲಿಯ ಸ್ನಾನಗೃಹಗಳು, ರಾಜೇಶ್ವರ ಮಂದಿರಗಳು, ಔರಂಗಜೇಬನು ಕಟ್ಟಿಸಿದ ಮುತ್ತಿನ ಮಸೀದಿ ಇವೆ ಅದರ ಪ್ರತೀಕಗಳಾಗಿರುವುವು. ಈ ಕೋಟೆಗೆ ೯ ಕೋಟಿ ರೂಪಾಯಿ ಗಳು ಖರ್ಚಾದುವಂತೆ. ಅಲ್ಲಿಯ ಸ್ನಾನಗೃಹದ ಬಗ್ಗೆ ಒಂದು ಚಿತ್ರ ಕಥೆಯನ್ನೇ ಕೇಳಿದೆವು: ಅಲ್ಲಿ ಒಂದು ನೀರಿನ 'ಹೌದು' ಇದೆ ಒಬ್ಬ ಮುಸ್ಲಿಮ್ ಫಕೀರನ ಆಶೀರ್ವಾದದಿಂದ, ಮೊಗಲ' ಸಲ್ತನತ ಇರುವವರೆಗೆ ಆ ನೀರು ಬಿಸಿಯಾಗಿರುತ್ತಿದ್ದಿತಂತೆ. ಅಲ್ಲಿಂದ ಸ್ನಾ ಮಾಡುವ ಸ್ಥಳಕ್ಕೆ ನೀರು ಹರಿಯುವ ವ್ಯವಸ್ಥೆಯೂ ಇದ್ದಿತು. ಬ್ರಿಟಿಶರು ಬಂದ ಮೇಲೆ, ಈ ಹೌದಿನ ತಳದಲ್ಲಿ ಏನಿದೆಯೆಂಬುವನ್ನು ನೋಡಲು ಅದನ್ನು ಒಡೆದರು. ಬಳಿಕ ಅವರು ಯಾವ ಪ್ರಯ ಮಾಡಿದರೂ ನೀರು ಬಿಸಿಯಾಗಲಿಲ್ಲವಂತೆ. ಬ್ರಿಟಿಶರು ಈ ಕೋಟೆಯ ಒಳಭಾಗದಲ್ಲೆಲ್ಲ ಅಡುಗೆ ಮಾಡುವ ವ್ಯವಸ್ಥೆ ಮಾಡಿದ್ದರಿಂದ, ಕೆಲವು ಭಾಗದ ಸೌಂದರ್ಯವೆಲ್ಲ ಹಾಳಾಗಿದೆಯೆಂದು ಅಲ್ಲಿಯ ಜನರು

(೭೭ನೆಯ ಪುಟ ನೋಡಿರಿ)

ಬಹುಮಾನಿತರು

(ಕಳೆದ ತಿಂಗಳು ದಿಲ್ಲಿಯಲ್ಲಿ ಜರುಗಿದ ಅಂತರ್ ವಿಶ್ವವಿದ್ಯಾಲಯ ಯುವಜನ ಮಹೋತ್ಸವದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪರವಾಗಿ ಭಾಗವಹಿಸಿ ಬಹುಮಾನ ಪಡೆದಿರುವರು.)

ಕು. ವಿ. ಲಕ್ಷ್ಮೀ (ಸಂಗೀತ) | ಶ್ರೀ. ಮಾರುತಿ ವಾಳ್ಕೆ (ಹಿಂದಿ ಭಾಷಣ) | ಶ್ರೀ. ಈಶ್ವರಿ ಮಳಗಿ (ನೃತ್ಯ) | ಕು. ಗಿರಿಜಾ ಮಳಿಯೆ (ನೃತ್ಯ)

ಪಾಣಿನಿಯ ಕಾಲದ ಭಾರತ

ಪ್ರೊ. ಜಿ. ಎಸ್. ದೀಕ್ಷಿತ ಎಂ. ಎ. ಧಾರವಾಡ

卐

ಪಾಣಿನಿಯು ಕೇವಲ ವ್ಯಾಕರಣಕರ್ತನೆಂಬುದನ್ನು ಬಹುಜನರು ಅರಿತಿದ್ದಾರೆ. ಆದರೆ ಅವನು ವ್ಯಾಕರಣಶಾಸ್ತ್ರದೊಂದಿಗೆ ತನ್ನ ಕಾಲದ ಪ್ರಾದೇಶಿಕ-ಸಾಮಾಜಿಕ ಚರಿತ್ರೆಯನ್ನೂ ಪರಿಚಯ ಮಾಡಿಕೊಟ್ಟಿದ್ದಾನೆ.

卐

ನಾನೀಗ ತೆಗೆದುಕೊಂಡಿರುವ ವಿಷಯ ಪಾಣಿನಿಯ ಕಾಲದ ಭಾರತ. ಆ ಭಾರತದ ಪ್ರತಿನಿಧಿಕ ಲೇಖಕರಲ್ಲಿ ಪಾಣಿನಿಯು ಒಬ್ಬನಾದ್ದರಿಂದ, ಅವನ ವಿಷಯವನ್ನು ನಾವು ತಿಳಿದುಕೊಳ್ಳುವುದು ಆವಶ್ಯಕತ್ಯ. ಇವನ ಕಾಲ ಕ್ರಿ. ಪೂ. ೪ ನೆಯ ಶತಮಾನ. ಮೌರ್ಯರ ಹಿಂದೆ ಆಳಿದ ನಂದರ ಕಾಲದಲ್ಲಿ ಪಾಣಿನಿಯು ಆಗಿ ಹೋದನೆಂದು ವಿದ್ವಾಂಸರ ಮತ. ಅವನ ಊರು ಶಲಾತುರ, ಈಗಿನ ಪಾಕಿಸ್ತಾನದ ನಾಯವ್ಯ ಸರಹದ್ದುಪ್ರಾಂತ್ಯದಲ್ಲಿ. ಅಟಕ್ ಮತ್ತು ತಕ್ಷಶಿಲೆಗಳ ಹತ್ತಿರ ಇದೆ. ಈಗ ಆ ಊರಿನ ಹೆಸರು 'ಲಹುರ್' ಎಂದಿದೆ. ಕ್ರಿ.ಶ ಒನೆಯ ಶತಮಾನದಲ್ಲಿ ಎಂದರೆ ಪಾಣಿನಿಯು ಆಗಿ ಹೋಗಿ ೧೧೦೦ ವರ್ಷಗಳಾದ ಮೇಲೆ, ಹ್ಯೂಯನ್‌ತ್ಸಾಂಗನು ಅವನ ಜನ್ಮಸ್ಥಳವನ್ನು ನೋಡಲು ಹೋಗಿದ್ದನು; ಆಗ ಅಲ್ಲಿ ಅವನ ಪ್ರತಿಮೆಯೊಂದನ್ನು ನೋಡಿದನು. ಆ ಊರಿನ ವಿದ್ಯಾರ್ಥಿಗಳು ಪಾಣಿನಿಯ ಪುಸ್ತಕಗಳನ್ನು ಭಕ್ತಿಯಿಂದ ಅಭ್ಯಸ ಮಾಡುತ್ತಿದ್ದುದನ್ನೂ ನೋಡಿದನು. ತಕ್ಷಶಿಲೆಯ ವಿಶ್ವವಿದ್ಯಾಲಯವು ಪಾಣಿನಿಯ ಊರಿನ ಹತ್ತಿರ ಇದ್ದುದರಿಂದ, ಅಲ್ಲಿಯ ವಿದ್ಯಾಭ್ಯಾಸದ ಪದ್ಧತಿಯು ಇವನ ಮೇಲೆ ಒಳ್ಳೆಯ ಪರಿಣಾಮ ಮಾಡಿದ ಹಾಗೆ ಕಾಣುತ್ತದೆ. ವ್ಯವಹಾರ ದೃಷ್ಟಿಯಿಂದ ವಿದ್ಯಾಭ್ಯಾಸ ಮಾಡುವುದು ಈ ಪದ್ಧತಿಯ ವೈಶಿಷ್ಟ್ಯ. ಈ ಪದ್ಧತಿಯ ಪ್ರಕಾರ ಜನರು ಮಾತನಾಡುವ ಭಾಷೆಯನ್ನು ಅಭ್ಯಾಸ ಮಾಡಲು ಪಾಣಿನಿಯು ದೇಶ-ದೇಶಗಳಲ್ಲಿ ಸಂಚರಿಸಿದನು. ಅಲ್ಲಿಯ ಜನರ ಜತೆಗೆ ಚರ್ಚೆಮಾಡಿದನು. ಭಾಷೆಯು ಅಭ್ಯಾಸಕ್ಕೆ ಬೇಕಾಗುವ ಎಲ್ಲಾ ಸಾಮಗ್ರಿಗಳನ್ನೂ ಎಂದರೆ ಪ್ರಾಂತಿಕ ಭಾಷೆ, (dialects) ಜನಪದ ಸಾಹಿತ್ಯ, ಪ್ರಾದೇಶಿಕ ನಡಾವಳಿ ಇವೆಲ್ಲವನ್ನೂ ಅಭ್ಯಸಿಸಿದನು. ಈ ಅಭ್ಯಾಸದ ಪರಿಣಾಮವಾಗಿ 'ಅಷ್ಟಾಧ್ಯಾಯಿ' ಮತ್ತು 'ಗಣಪಾಠ' ಎನ್ನುವ ಎರಡು ಪುಸ್ತಕಗಳನ್ನು ಬರೆದನು. ಇವೆರಡರಲ್ಲಿ ಅತ್ತಿತ್ತ ಮತ್ತು ಆ ಶಬ್ದಗಳ ಬಗ್ಗೆ ಇದುವರೆಗೂ ಗೊತ್ತಿದ್ದ ಎಲ್ಲಾ ಮಾಹಿತಿಯನ್ನೂ ಸಂಗ್ರಹಿಸಿರುವನು. ಪ್ರತಿಯೊಂದು ಸೂತ್ರವನ್ನು ಬರೆಯಬೇಕಾದರೂ ಅತ್ಯಂತ ಪರಿಶ್ರಮದಿಂದ ಪಾಣಿನಿಯು ಬರೆದನೆಂದು ಪತಂಜಲಿಯು ಹೇಳುತ್ತಾನೆ. ಈ ಕಾರಣದಿಂದ ಪಾಣಿನಿಯು ಬರೆದುದರಲ್ಲಿ ಒಂದು ಸೂತ್ರವಿರಲಿ—ಒಂದು ಶಬ್ದವನ್ನು ಕೂಡ ತೆಗೆದು ಹಾಕುವ ಹಾಗೆ ಇಲ್ಲ. ಪಾಣಿನಿಯನಂತರ ಬಂದ ವ್ಯಾಕರಣಿಗಳು, ಸೂತ್ರರೂಪದಲ್ಲಿ ಎಂದರೆ ಅದಷ್ಟು ಕಡಿಮೆ ಶಬ್ದಗಳಲ್ಲಿ ಬರೆಯಲು ಆರಂಭಿಸಿದರು. ಪಾಣಿನಿಯ ಸೂತ್ರಶೈಲಿಯು ಸಂಗ್ರಹವಾಗಿದ್ದರೂ ಸ್ಪಷ್ಟವಾಗಿದೆ.

ಪಾಣಿನಿಯು ವ್ಯಾಕರಣವನ್ನು ಬರೆದ ರೀತಿಯನ್ನು ನೋಡಿದ ಮೇಲೆ, ವೈಯಾಕರಣಿಗಳಲ್ಲಿ ಇರುವ ಅವನ ಸ್ಥಾನವನ್ನು ನೋಡೋಣ. ಪ್ರಾಚೀನ ಭಾರತೀಯರು ವ್ಯಾಕರಣವನ್ನು ಶಾಸ್ತ್ರಗಳಲ್ಲಿ ಅತಿ ಮುಖ್ಯವಾದದ್ದೆಂದು ಎಣಿಸಿದ್ದರು. ಅವರ ವ್ಯಾಕರಣ-ಪದ್ಧತಿಯಲ್ಲಿ ತಪ್ಪೇ ಇಲ್ಲವೆಂದೂ, ಅದಕ್ಕೆ ಸರಿಸಮಾನವಾದ ವ್ಯಾಕರಣಪದ್ಧತಿಯು ಇನ್ನಾವುದು ಇಲ್ಲವೆಂದೂ ಮೈತ್ರೂನೆಲ್ ಎನ್ನುವ ವಿದ್ವಾಂಸನು ತನ್ನ ಗ್ರಂಥದಲ್ಲಿ ಹೇಳುತ್ತಾನೆ. ನಮ್ಮ ವೈಯಾಕರಣಿಗಳಲ್ಲಿ ಪಾಣಿನಿಯು ಎಲ್ಲಾ ಅರ್ಥದಲ್ಲಿಯೂ ಮೊದಲನೆಯವನು. ಇವನ ಅಷ್ಟಾಧ್ಯಾಯಿಯು ಪ್ರಪಂಚದ ಅನೇಕ ವಿದ್ವಾಂಸರ ಮೆಚ್ಚಿಗೆಗೆ ಪಾತ್ರವಾಗಿದೆ. ಭಾಷೆಯ ಮೂಲವನ್ನು ಶೋಧಿಸುವುದರಲ್ಲಿ ಪಾಣಿನಿಯ ವ್ಯಾಕರಣವು ಪಡೆದ ಯಶಸ್ಸನ್ನು ಇನ್ನಾವ ದೇಶದ ವೈಯಾಕರಣಿಗಳೂ ಪಡೆದಿಲ್ಲವೆಂದು ವೆಬರ್ ಎನ್ನುವ ವಿದ್ವಾಂಸನು ಹೇಳುತ್ತಾನೆ. ನಮ್ಮ ದೇಶದ ವಿದ್ವಾಂಸರೂ ಪಾಣಿನಿಯ ಕೆಲಸವನ್ನು ಹೊಗಳಿದ್ದಾರೆ. ಇಂಥವರಲ್ಲಿ ಪತಂಜಲಿಯ ಶ್ಲಾಘನೆಯನ್ನು ನಾವು ನೋಡಬಹುದು. ಒಂದು ಕಡೆಗೆ ಅವನು: 'ಪಾಣಿನೀಯಂ ಮಹತ್ ಸುವಿಹಿತಂ' ಎಂದರೆ 'ಪಾಣಿನಿಯ ಮಹತ್ಕಾರ್ಯವು ಸೊಗಸಾಗಿ ಆಗಿದೆ' ಎನ್ನುತ್ತಾನೆ. ಇನ್ನೊಂದು ಕಡೆ ಪಾಣಿನಿಯನ್ನು 'ಪ್ರಮಾಣಭೂತ ಆಚಾರ್ಯ' ಎಂದರೆ ಅಧಿಕಾರಯುತವಾಗಿ ಮಾತನಾಡಬಲ್ಲ ಪಂಡಿತನೆಂದು ಕರೆದಿದ್ದಾನೆ.

ಪಾಣಿನಿಯ ಪುಸ್ತಕಗಳಿಂದ, ಆಗ ಭಾರತವು ಕ್ರೀಗಿತ್ತೆನ್ನುವುದನ್ನು ಈಗ ನೋಡೋಣ: ಪಾಣಿನಿಯ ಭೌಗೋಲಿಕಜ್ಞಾನ ವಿಸ್ತಾರವಾಗಿತ್ತು. ಉತ್ತರದಲ್ಲಿ ಮಧ್ಯಏಷಿಯಾದಿಂದ ದಕ್ಷಿಣದಲ್ಲಿ ಈಗಿನ ಹೈದರಾಬಾದಿನ ವರೆಗೂ, ಮತ್ತು ಪಶ್ಚಿಮದಲ್ಲಿ ಸಿಂಧೂದಿಂದ ಪೂರ್ವದಲ್ಲಿ ಆಸಾಮದ ವರೆಗೂ ಇದ್ದ ಪ್ರಾಂತಗಳು ಅವನ ಪುಸ್ತಕಗಳಲ್ಲಿ ಬೇರೆ ಬೇರೆ ಕಡೆ ಬರುತ್ತವೆ. ಪಾಣಿನಿಗೆ ಅತಿ ದಕ್ಷಿಣಭಾರತದ

ಪರಿಚಯವಿದ್ದಿಲ್ಲವೆಂದು ತಾನುತ್ತದೆ. ಇದಕ್ಕೆ ಬದಲಾಗಿ ಭಾರತದ ಹೊರಗಿದ್ದ ಅಫ್ಘಾನಿಸ್ತಾನ್ ಮತ್ತು ಮಧ್ಯಏಷ್ಯಾದ ಕೆಲವು ಭಾಗಗಳು ಭಾರತದ ಭಾಗಗಳಷ್ಟೇ ಪಾಣಿನಿಗೆ ಪರಿಚಿತವಾಗಿದ್ದುವು. ಎಂದು ವೇಳೆ ಆಗಿನ ಕಾಲದಲ್ಲಿ ಅವು ಭಾರತದ ಭಾಗಗಳಾಗಿದ್ದರೂ ಇದ್ದಿರಬಹುದು. ಪಾಣಿನಿಯ ಪುಸ್ತಕಗಳಲ್ಲಿ ಬರುವ ದೇಶಗಳನ್ನು ಮಧ್ಯಏಷಿಯಾದಿಂದ ಮೊದಲುಮಾಡಿ ಈ ರೀತಿಯಾಗಿ ನಮೂದಿಸಬಹುದು: ಕಾಂಭೋಜದೇಶ ಪಾಮಿರ್ ಬೆಟ್ಟದ ಪ್ರದೇಶದಲ್ಲಿಯೂ ಆಕ್ಸಸ್ ನದಿಯ ತೀರದ ಮೇಲೂ ಇತ್ತು. ಇದರ ದಕ್ಷಿಣಕ್ಕೆ ಗಾಂಧಾರ ದೇಶವು (ಈಗಿನ ಅಫ್ಘಾನಿಸ್ತಾನ್ ಮತ್ತು ವಾಯವ್ಯ ಸರಹದ್ದಿನ ಪ್ರಾಂತ್ಯ) ಕಾಬೂಲ್ ನದಿಯುಂದ ತಕ್ಷಶಿಲೆಯವರೆಗೂ ಹಬ್ಬಿತ್ತು. ಪಂಜಾಬಿನಲ್ಲಿ ವಾಹಿಕ, ಮದ್ರ, ಉಶೀನಗರ ಮತ್ತು ಕುರುದೇಶಅಥವಾ ಜನಪದಗಳಿದ್ದುವು ಸಿಂಧೂದೇಶವೆ ಆಗಿನ ಹೆಸರು ಸೌವೀರ. ಅದರ ಪೂರ್ವಕ್ಕೆ ಕಚ್ಚದೇಶವಿತ್ತು ಇವು ಭಾರತದ ಪಶ್ಚಿಮ ಮತ್ತು ವಾಯವ್ಯ ಸರಹದ್ದಿನ ಭಾಗಗಳು. ಪೂರ್ವಸಿಕ್ಕಿನ ಜನಪದಗಳಲ್ಲಿ ಕೋಸಲ, ಕಾಶೀ, ಮಗಧ ಮತ್ತು ಕಳಿಂಗಗಳಿದ್ದುವು. ಇವುಗಳಲ್ಲಿ ಮಗಧಕ್ಕೆ ಪ್ರಾಶಸ್ತ್ಯ ಹೆಚ್ಚಾಗಿತ್ತು. ಮಧ್ಯಭಾಗದಲ್ಲಿ ಮತ್ತು ದಕ್ಷಿಣಭಾಗದಲ್ಲಿ ಕ್ರಮವಾಗಿ, ಅವಂತೀ ಮತ್ತು ಅಶ್ಮಕಗಳಿದ್ದುವು. ಅಶ್ಮಕಕ್ಕೆ 'ಪ್ರತಿಷ್ಠಾನ' ರಾಜಧಾನಿಯಾಗಿತ್ತು. ಈ ಊರಿಗೆ ಈಗಿದ್ದ ಹೆಸರು ಪೈಠಣ.

ಇದುವರೆಗೂ ಹೇಳಿದ ದೇಶ ಅಥವಾ ಜನಪದಗಳಲ್ಲಿ ರಾಜಕೀಯ ಮತ್ತು ಸಾಂಸ್ಕೃತಿಕ ಪರಿಸ್ಥಿತಿ ಹೇಗಿತ್ತೆನ್ನುವುದನ್ನು ಈಗ ನೋಡೋಣ. ಆಗ ಭಾರತದಲ್ಲಿ ಒಂದು ರಾಜ್ಯವಿರಲಿಲ್ಲ. ಅನೇಕ ರಾಜ್ಯಗಳಿದ್ದುವು. ಅವುಗಳಿಗೆ ಆಗಿನ ಹೆಸರು ಜನಪದ. ಪಾಣಿನಿಯು ವರ್ಣಿಸಿರುವ ಜನಪದ ರಾಜ್ಯಗಳಿಗೂ ಪುರಾತನ ಗ್ರೀಸಿನಲ್ಲಿದ್ದ City-States ಅಥವಾ ನಗರರಾಜ್ಯಗಳಿಗೂ ತುಂಬಾ ಹೋಲಿಕೆ ಇದೆ. ಸಾಧಾರಣವಾಗಿ ಎರಡೂ ಒಂದೇ ಕಾಲಘಟ್ಟದಲ್ಲಿ ಪ್ರಾಬಲ್ಯಕ್ಕೆ ಬಂದುವು. ಇವುಗಳಲ್ಲಿರುವ ವ್ಯತ್ಯಾಸವೇನೆಂದರೆ ಜನಪದ ರಾಜ್ಯಗಳು ಗ್ರೀಸಿನ ನಗರರಾಜ್ಯಗಳಿಗಿಂತ ದೊಡ್ಡುವಿದ್ದುವು. ಮತ್ತು ಬಹಳ ಕಾಲ ಬದುಕಿದ್ದುವು. ಇವೆರಡೂ ವ್ಯತ್ಯಾಸಗಳನ್ನು ಬಿಟ್ಟರೆ, ಈ ಎರಡೂ ಸಂಸ್ಥೆಗಳಲ್ಲಿ ಸಾಮ್ಯ ಬಹಳವಿತ್ತು.

ವೇದಗಳ ಕಾಲದಲ್ಲಿ ಜನಪದ ಸಂಸ್ಥೆ ಇರಲಿಲ್ಲ. ಶ್ರುಯು, ಭರತ, ಕುರು, ಮುಂತಾದ 'ಜನ'ರಿದ್ದರು. ಈ ಜನರು ಯಾವುದೇ ಒಂದು ವಿಶಿಷ್ಟವಾದ ಸ್ಥಳಗಳಲ್ಲಿ ನೆಲಸಿರಲಿಲ್ಲ. ಕ್ರಮೇಣ ಒಂದೊಂದು ಜನಾಂಗದವರು ಒಂದೊಂದು ದೇಶದಲ್ಲಿ ನೆಲಸಿದ್ದರು. ಹಾಗೆ ನೆಲಸಿದ ಕೂಡಲೆ ಆ ಪ್ರದೇಶಕ್ಕೆ ಜನಪದವೆಂದು ಹೆಸರು ಬಂತು. ಪ್ರತಿಯೊಂದು ಜನಪದವೂ ಸ್ವತಂತ್ರವಾಗಿತ್ತು. ತನಗೆ ಬೇಕಾದ ಆಡಳಿತವಿಧಾನವನ್ನು ಆರಿಸಬಹುದಾಗಿತ್ತು. ಕೆಲವು ಜನಪದಗಳಲ್ಲಿ ರಾಜರಿದ್ದರು; ಇನ್ನು ಕೆಲವು ಜನಪದಗಳಲ್ಲಿ ರಾಜರು ಇರಲಿಲ್ಲ. ಇವಕ್ಕೆ 'ಗಣರಾಜ್ಯ' ಅಥವಾ 'ಸಂಘರಾಜ್ಯ' ಎನ್ನುತ್ತಿದ್ದರು. ಪ್ರತಿಯೊಂದು ಜನಪದವೂ ತನಗೆ ಅನುಗುಣವಾದ ಬೌದ್ಧಿಕ ಮತ್ತು ಸಾಂಸ್ಕೃತಿಕ ಜೀವನವನ್ನು ಅನುಸರಿಸಬಹುದಾಗಿತ್ತು. ಒಂದೊಂದು ಜನಪದದಲ್ಲಿ ಒಂದೊಂದು ಭಾಷೆಯಿತ್ತು. ಮತಾಚರಣೆಯಲ್ಲಿಯೂ ವೈವಿಧ್ಯತೆಗಳಿದ್ದುವು. ಇದೇ ಕಾರಣದಿಂದಲೇ ಬುದ್ಧನು ತನ್ನ ತತ್ತ್ವಗಳನ್ನು ದೇಶಭಾಷೆಗಳಲ್ಲಿ ಪ್ರಚಾರಮಾಡಲು ಅನುಮತಿಯಿತ್ತನು. ಮತ್ತು ಜನಪದಗಳು ತಮ್ಮ ದೇವಸ್ಥಾನಗಳನ್ನೂ ದೇವರನ್ನೂ ಬಿಡಬಾರದೆಂದು ಉಪದೇಶಿಸಿದನು.

ಗ್ರೀಸಿನ ನಗರರಾಜ್ಯಗಳು ಅಲ್ಲಿಯ ಜನರವಿಕಾಸಕ್ಕೆ ಅದಷ್ಟು ಸ್ವಾತಂತ್ರ್ಯವನ್ನು ಕೊಟ್ಟು, ಪ್ರಪಂಚದಲ್ಲಿ ಅದುವರೆಗೂ ಆಗದಂತಹ ಬೌದ್ಧಿಕ ಪ್ರಗತಿಯನ್ನು ಸಾಧಿಸಿದುವು. ಸಾಹಿತ್ಯ, ಶಾಸ್ತ್ರ, ಕಲೆ, ರಾಜಕೀಯ ಆಡಳಿತ—ಈ ವಿವಿಧವಾದ ಕ್ಷೇತ್ರಗಳಲ್ಲಿ ಗ್ರೀಕರು ತಮ್ಮ ನಗರರಾಜ್ಯಗಳಲ್ಲಿ ಅಗಾಧವಾದಂತಹ ಪ್ರಗತಿಯನ್ನು ಪಡೆದರು. ಇದೇ ರೀತಿಯಾದ ಬೆಳೆವಣಿಗೆ ಭಾರತದ ಜನಪದಗಳಲ್ಲಿಯೂ ಆಯಿತು. ಕೆಲವು ಕ್ಷೇತ್ರಗಳಲ್ಲಿ ಭಾರತೀಯರು ಮುಂದೆ ಹೋಗಿರಬಹುದು; ಇನ್ನು ಕೆಲವು ಕ್ಷೇತ್ರಗಳಲ್ಲಿ ಗ್ರೀಕರು ಮುಂದೆ ಹೋಗಿರಬಹುದು. ಒಟ್ಟನಲ್ಲಿ ನೋಡಿದರೆ, ಪ್ರಪಂಚದಲ್ಲಿ ಕ್ರಿ. ಪೂ. ೫ ಮತ್ತು ೪ನೆಯ ಶತಮಾನಗಳಲ್ಲಿ ಬೌದ್ಧಿಕಪ್ರಗತಿಯಲ್ಲಿ ಮುಂದಿದ್ದ ರಾಷ್ಟ್ರಗಳು ಗ್ರೀಸ್ ಮತ್ತು ಭಾರತ ಆಗಿದ್ದುವು. ಜನಪದಗಳಲ್ಲಿಯ ಧಾರ್ಮಿಕ ಮತ್ತು ತಾತ್ತ್ವಿಕ ವಿವೇಚನೆಗಳು ಭಾರತೀಯ ತತ್ತ್ವಜ್ಞಾನದ ಇತಿಹಾಸದಲ್ಲಿ ಮೇಲ್ತರಗತಿಯವು ಆಗಿವೆ. ಪಾಲಿ ಮತ್ತು ಅರ್ಧಮಾಗಧಿ ಸಾಹಿತ್ಯದಲ್ಲಿ, ಮತ್ತು ಶಾಂತಿಪರ್ವದ ಕೆಲವು ಉಚ್ಚತರಗತಿಯ ಸಂವಾದಗಳಲ್ಲಿ ಇಂತಹ ವಿವೇಚನೆಗಳನ್ನು ನಾವು ನೋಡಬಹುದು. ಶಿಕ್ಷಣಕ್ಷೇತ್ರದಲ್ಲಿ ಈ ಕಾಲದಲ್ಲಿ ಒಂದು ಅವಶ್ಯಕವಾದ ಮಾರ್ಪಾಡು ಆರಂಭವಾಯಿತು ಇದುವರೆಗೂ ವೇದಗಳ ವಿದ್ಯಾಭ್ಯಾಸವನ್ನು ಬಿಟ್ಟು ಬೇರೆ ವಿದ್ಯಾಭ್ಯಾಸವಿರಲಿಲ್ಲ. ಈಗ ಎಲ್ಲಾ ಕ್ಷೇತ್ರಗಳಲ್ಲಿಯೂ ಜ್ಞಾನವು ಬೆಳೆಯಿತು.



ಎಲ್ಲಾ ತತ್ತ್ವಜ್ಞಾನಗಳ ಮತ್ತು ಶಾಸ್ತ್ರಗಳ ತಳಹದಿ ಈ ಕಾಲದಲ್ಲಿ ಹಾಕಲ್ಪಟ್ಟಿತು. ವೇದಕ್ಕೆ ಸಂಬಂಧವಿಲ್ಲದ ಜ್ಞಾನ ವಿಸ್ತಾರವಾಗಿ ಬೆಳೆದಿದ್ದಕ್ಕೆ ಒಂದು ಉದಾಹರಣೆಯೆಂದರೆ ವ್ಯಾಕರಣ. ಪಾಣಿನಿ ಹೇಗೆ ವ್ಯಾಕರಣವನ್ನು ಒಂದು ಶಾಸ್ತ್ರವನ್ನಾಗಿ ಮಾಡಿದನೊ, ಹಾಗೆಯೆ ಇತರ ಶಾಸ್ತ್ರಗಳನ್ನು ಇತರ ಪ್ರಭೃತಿಗಳು ಬೆಳೆಸಿದರು

ಜನಪದದ ಪ್ರಜೆಗಳು ಎಲ್ಲಾ ರೀತಿಯಿಂದಲೂ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಮಾಡುತ್ತಿದ್ದರು. ಎಂದರೆ ಪ್ರಾಜ್ಞನಾಗುವುದು ಪ್ರಜೆಯ ಧ್ಯೇಯವಾಗಿತ್ತು. 'ಪ್ರಾಜ್ಞ' ಶಬ್ದದ ಅರ್ಥವನ್ನು, ಇದೇ ಕಾಲದಲ್ಲಿ ಬರೆದ ಮಹಾಭಾರತವು ಅನೇಕ ಕಡೆಗಳಲ್ಲಿ ವಿವರಿಸಿದೆ ವಿದುರನೀತಿಯಲ್ಲಿ ಈ ಚರ್ಚೆಯು ಎಂದರೆ ಜನರು ಹೇಗೆ ತಿಳಿನಳಿಕೆಯುಳ್ಳವರಾಗಬೇಕು ಮತ್ತು ನೀತಿವಂತರಾಗಬೇಕೆನ್ನುವುದನ್ನು, ಸ್ವಲ್ಪವರಲ್ಲಿಯೇ ಸ್ವಾರಸ್ಯವಾಗಿ ವರ್ಣಿಸಿದೆ.

ಜನಪದಗಳಲ್ಲಿಯ ಸಾಂಸ್ಕೃತಿಕ ಬೆಳೆವಣಿಗೆಯನ್ನು ತಿಳಿದುಕೊಂಡನಂತರ, ಅಲ್ಲಿಯ ಆಡಳಿತದ ಪದ್ಧತಿಯನ್ನು ನೋಡೋಣ: ರಾಜರು ಎಲ್ಲರೂ ಕ್ಷತ್ರಿಯರು. ರಾಜರಿಗೂ ಮತ್ತು ಕ್ಷತ್ರಿಯರಿಗೂ ಒಂದೇ ಶಬ್ದವು ಅನ್ವಯಿಸುತ್ತಿತ್ತು. ಉದಾಹರಣೆಗಾಗಿ, 'ಪಾಂಚಾಲ' ಎನ್ನುವುದು ಪಾಂಚಾಲಕುಲದ ಕ್ಷತ್ರಿಯರಿಗೂ ಮತ್ತು ಪಾಂಚಾಲದ ರಾಜನಿಗೂ ಅನ್ವಯಿಸುತ್ತಿತ್ತು. ಅದೇ ರೀತಿಯಾಗಿ ಪಾಂಚಾಲಾಃ ಎನ್ನುವ ಬಹುವಚನಕ್ಕೆ ಎರಡು ಅರ್ಥ. ಒಂದು ಆ ಜನಪದದ ಹೆಸರು; ಇನ್ನೊಂದು ಆ ಕ್ಷತ್ರಿಯಕುಲದ ಹೆಸರು. ಒಂದು ಜನಪದದಲ್ಲಿ ಕ್ಷತ್ರಿಯರಲ್ಲದೆ ಬೇರೆ ಜಾತಿಯ ಜನರಿದ್ದರೂ, ಅದರ ಆಡಳಿತವು ಆ ರಾಜ್ಯವನ್ನು ಸ್ಥಾಪಿಸಿದ ಕ್ಷತ್ರಿಯರ ವಂಶಜರಲ್ಲಿಯೇ ಇರುತ್ತಿತ್ತು.

ಇದೇ ರೀತಿಯಾಗಿ ಗಣರಾಜ್ಯಗಳಲ್ಲಿಯು ಕೂಡ, ಆಡಳಿತವು ಆ ರಾಜ್ಯವನ್ನು ಸ್ಥಾಪಿಸಿದ ಕ್ಷತ್ರಿಯವಂಶಜರಲ್ಲಿ ಇರುತ್ತಿತ್ತು. ಆ ಗಣರಾಜ್ಯದ ಜನಸಂಖ್ಯೆ ಬೆಳೆದರೂ ಆಡಳಿತವು ಕ್ಷತ್ರಿಯರ ಕೈಬಿಡುತ್ತಿದ್ದಿಲ್ಲ.

ಈ ಸಂಘಗಳಲ್ಲಿ ರಾಜಕೀಯ ಪಕ್ಷಗಳಿದ್ದವೆಂದು ಪಾಣಿನಿಯ ಹೇಳುತ್ತಾನೆ ವಿರೋಧಿಸುವ ೨ ಪಕ್ಷಗಳನ್ನು ಪಾಣಿನಿಯು 'ದ್ವಂದ್ವ' ಎಂದು ಕರೆದಿದ್ದಾನೆ. ಅಧಿಕಾರಸಂಪಾದನೆಗೆ ಹೊಡೆದಾಡುವುದೇ ಈ ಪಕ್ಷಗಳ ಮುಖ್ಯ ಕರ್ತವ್ಯವಾಗಿತ್ತು. ಪಕ್ಷದ ಸದಸ್ಯನಿಗೆ ಸಖ್ಯ, ವರ್ಗ್ಯ ಅಥವಾ ಗೃಹ್ಯವೆಂದು ಹೆಸರಿತ್ತು. ಸಭೆಯಲ್ಲಿ ಪಕ್ಷದವರು ಬೇರೆ ಬೇರೆ ಸ್ಥಳದಲ್ಲಿ ಕೂಡುತ್ತಿದ್ದರು. ಪಕ್ಷದ ಹೆಸರು ಅದರ ಮುಖಂಡನ ಹೆಸರಿನಿಂದ ಬರುತ್ತಿತ್ತು.

ಇಂತಹ ರಾಜಕೀಯ ಮತ್ತು ಸಾಂಸ್ಕೃತಿಕ ಜೀವನಕ್ಕೆ ಅವಕಾಶವಾಡಿಕೊಟ್ಟ ಜನಪದಗಳಿಗೆ, ಅದರ ಪ್ರಜೆಗಳು ಅತ್ಯಂತ ವಿಧೇಯರಾಗಿದ್ದರೆ ಆಶ್ಚರ್ಯವೇನೂ ಇಲ್ಲ. ಈ ವಿಧೇಯತೆಗೆ 'ಭಕ್ತಿ' ಎನ್ನುತ್ತಾನೆ. ಈ ಭಕ್ತಿಯ ಅನಿವಾರ್ಯತೆಯನ್ನು ಸಾಕ್ರೇಟೀಸನು ಹೀಗೆ ಹೇಳುತ್ತಾನೆ: 'ದೇಶವು ತಾಯಿಗಿಂತ ಶ್ರೇಷ್ಠವಾದದ್ದು. ಅವಳಿಗೋಸ್ಕರ ಎಲ್ಲವನ್ನೂ ಸಹಿಸಬೇಕು!' ಪಾಣಿನಿಯು ಇದೇ ಭಾಷೆಯನ್ನು ಉಪಯೋಗಿಸುತ್ತಾನೆ: 'ಮಾತಾ ಭೂಮಿಃ ಪುತ್ರ ಅಹಂ ಪೃಥಿವ್ಯಾಃ'! ಗ್ರೀಸಿನ ನಗರರಾಜ್ಯಗಳಲ್ಲಿಯೂ ಭಾರತದ ಜನಪದಗಳಲ್ಲಿಯೂ ದೇಶಸಂರಕ್ಷಣೆ ಪ್ರಜೆಗಳ ಮುಖ್ಯ ಕರ್ತವ್ಯವಾಗಿತ್ತು.

"The people ought to fight for the laws as well as the walls of its city" ಎಂದು ಗ್ರೀಕ್ ಹೀರಾಕ್ಲಿಟಸನು ಹೇಳುತ್ತಾನೆ. ಇದೇ ಧ್ಯೇಯವೇ ಜನಪದದ ಪ್ರಜೆಗಳದಾಗಿತ್ತೆನ್ನುವುದು ಈ ಸಣ್ಣಪುಟ್ಟ ಜನಪದಗಳು ಅಲೆಗ್ಸಾಂಡರನನ್ನು ಎದುರಿಸಿದ ರೀತಿಯೇ ತೋರಿಸುತ್ತದೆ.

ರಾಜಕೀಯ ಪರಿಸ್ಥಿತಿಯ ನಂತರ ಆಗಿನ ಸಾಮಾಜಿಕ ಪರಿಸ್ಥಿತಿಯ ಕಡೆಗೆ ತಿರುಗೋಣ. ಪಾಣಿನಿಯ ಪುಸ್ತಕದಲ್ಲಿ ಸ್ತ್ರೀಜೀವನದ ವಿವಿಧಮುಖಗಳನ್ನು ನಾವು ನೋಡಬಹುದು. ಮೊದಲನೆಯ ಅವಸ್ಥೆಯಲ್ಲಿ ರಂಗುಸರ ಹೆಸರು ಕುಮಾರಿ, ಕಿಶೋರಿ ಅಥವಾ ಕನ್ಯಾ ಎಂದಿತ್ತು. ಮದುವೆಗೆ ತಕ್ಕ ವಯಸ್ಸಿನ ಹುಡುಗಿಯರನ್ನು 'ವರ್ಯಾ' ಎಂದರೆ ವರಿಸಲು ಅಥವಾ ಪ್ರೀತಿಸಲು ಯೋಗ್ಯವಾದುದೆಂದು ಕರೆಯುತ್ತಿದ್ದರು. ತಿಳಿವಳಿಕೆಯ ವಯಸ್ಸು ಆದ ಹುಡುಗಿಯರು ತಮ್ಮ ಗಂಡಂದಿರನ್ನು ತಾವೇ ಆರಿಸುತ್ತಿದ್ದರು. ಅಂಥವರಿಗೆ 'ಪತಿಂವರಾ' ಎನ್ನುತ್ತಿದ್ದರು.

ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಸ್ತ್ರೀಯರಿಗಿದ್ದ ಸ್ಥಾನವನ್ನು ಮುಂದೆ ನೋಡುವಾ; ಈಗ ಆಗಿನ ಅನ್ನ-ಪಾನಗಳ ಪರಿಚಯ ಮಾಡಿಕೊಳ್ಳೋಣ. ಅಡಿಗೆಗೆ ಕೃತಾನ್ನವೆನ್ನುತ್ತಿದ್ದರು. ಓದನವೆಂದರೆ ಬರಿಯ ನೀರಿನಲ್ಲಿ ಬೇಯಿಸಿದ ಅನ್ನ. ಮಾಂಸದ ಜತೆಗೆ ಬೇಯಿಸಿದ ಅನ್ನದ ಹೆಸರು 'ಮಾಂಸೋದನ'! ಬಾರ್ಲಿಯ ಗಂಜಿಯು ಹೆಸರುಯವಾಗೂ. ಇದು ಅತ್ಯಂತ ಲೋಕಪ್ರಿಯವಾಗಿತ್ತು. ಅಪೂಪಾ ಅಥವಾ ಹೋಳಿಗೆ ಈಗಿನಷ್ಟೇ ಆಗ ಜನರಿಗೆ ಇಷ್ಟವಾಗಿತ್ತು. ಗೋದಿಯ ಹಿಟ್ಟಿನ್ನು ಹುರಿದು ಬಿದಕ್ಕೆ ಸಕ್ಕರೆ-ತುಪ್ಪವನ್ನು ಸೇರಿಸುತ್ತಿದ್ದರು. ಇದರ ಆಗಿನ ಹೆಸರು ಚೂರ್ಣ (ಈಗಿನ ಹೆಸರೆ ಗುಳಪಾಪಡಿ)!

ಪಾನುದೇಶೇ ಎನ್ನುವ ಸೂತ್ರದಲ್ಲಿ ಪಾಣಿನಿಯು, ದೇಶಗಳ ಹೆಸರು ಅಲ್ಲಿಯ ಪಾನಗಳಿಂದ ಬರುತ್ತವೆಂದು ಹೇಳುತ್ತಾನೆ. ಉಶೀನವಾದೇಶದವರು (ಈಗಿನ ಪಂಜಾಬಿಗಳು) ಹಾಲುಬಳ್ಳಿ ಕುಡಿಯುತ್ತಿದ್ದರು. ಆದ್ದರಿಂದ 'ಕ್ಷೀರಪಾನಾ ಉಶಿನರಾಃ' ಎನ್ನುವ ಸೂತ್ರವಾಯಿತು. ಪೂರ್ವದೇಶದವರು ಸುರಾಪಾನ ಮಾಡುತ್ತಿದ್ದರು. 'ಸುರಾಪಾನಾಃ ವ್ರಾಚ್ಯಾಃ' ಎನ್ನುವುದು ಇನ್ನೊಂದು ಸೂತ್ರವಾಯಿತು.

ಊಟಕ್ಕೆ ಕರೆಯುವುದರಲ್ಲಿ ಎರಡು ತರ: ನಿಮಂತ್ರಣ ಮತ್ತು ಆಮಂತ್ರಣ. ಶ್ರಾದ್ಧ ಮತ್ತು ಯಜ್ಞದ ವೇಳೆಯಲ್ಲಿ ನಿಮಂತ್ರಣ ಕೊಡುತ್ತಿದ್ದರು. ನಿಮಂತ್ರಿಸಿದವರು ಊಟಕ್ಕೆ ಬರಲೇಬೇಕು.

ಇತರ ವೇಳೆಯಲ್ಲಿ ಕರೆದಾಗ ಆಮಂತ್ರಿಸಿದವರು ಬರಬಹುದು. ಅಥವಾ ಬಿಡಬಹುದು. ಇನ್ನು ಆಗಿನ ಆಟಗಳ ಪರಿಚಯಮಾಡಿಕೊಳ್ಳೋಣ. ಹೊರಗಡೆ ಆಡತಕ್ಕಂಥ ಆಟಗಳು ಕುಸ್ತಿ ಅಥವಾ ಮಲ್ಲಯುದ್ಧ, ಪ್ರಹರಣಾಕ್ರೀಡಾ ಮತ್ತು ಷಿಕಾರಿ. ಕುಸ್ತಿ ಮತ್ತು

ಷಿಕಾರಿ ಎಲ್ಲರಿಗೂ ಗೊತ್ತಿವೆ. ಪ್ರಹರಣಕ್ರೀಡೆಯಲ್ಲಿ ಎರಡುತರ: ಮುಷ್ಟಿಯುದ್ಧ ಅಥವಾ Boxing ಒಂದು ವಿಧ; ಲಾಠಿ, ಕತ್ತಿ ಇಂತಹ ಆಯುಧಗಳಿಂದ ಆಡುವುದು ಇನ್ನೊಂದು ವಿಧ. ಒಗಗಡೆ ಆಡುವ ಆಟಗಳಲ್ಲಿ ಪಗಡಿ ಪ್ರಸಿದ್ಧವಷಡೆದಿತ್ತು. ಇದರ ಹೆಸರು ಅಕ್ಷದ್ಯೂತ. ದಾಳದ ಹೆಸರು ಅಕ್ಷ ಅಥವಾ ಅಕ್ಷರಾಜ. ಈಗ ಎರಡು ದಾಳದಿಂದ ಆಡುತ್ತಾರೆ; ಆಗ ೫ ದಾಳಗಳಿದ್ದುವು. ಇನ್ನೊಂದು ಆಟಕ್ಕೆ 'ಪಂಚಿಕೆ' ಎಂದು ಹೆಸರಿತ್ತು. ಈಗಿನ ಕವಡೆ ಆಟವಿದ್ದ ಹಾಗೆ ಇತ್ತು. ಆದರಲ್ಲಿ ೫ ಅಕ್ಷರಗಳಿರುತ್ತಿದ್ದುವು. ಗೆಲ್ಲಬೇಕಾದರೆ ೫ ಅಕ್ಷರಗಳನ್ನು ಮುಗುಚಿ ಬೀಳಿಸಬೇಕು. ಅಥವಾ ಒಂದು ಮುಗುಚದ ಹಾಗೆ ಹಾಕಬೇಕು.

ಕೊನೆಯದಾಗಿ ಆಗಿನ ಶಿಕ್ಷಣಪದ್ಧತಿಯು ಹೇಗಿತ್ತೆಂಬುದನ್ನು ನೋಡೋಣ. ಈ ಪದ್ಧತಿಯಲ್ಲಿ 'ಚರ್ಯೆ' ಅಥವಾ ನಡತೆಗೆ ಎಷ್ಟೆಗಿಂತ ಹೆಚ್ಚಿಗೆ ಮಹತ್ತ್ವಕೊಡಲಾಗುತ್ತಿತ್ತು. ವಿದ್ಯಾರ್ಥಿಗೆ ಬ್ರಹ್ಮಚಾರಿ ಅಥವಾ ಛಾತ್ರ ಎನ್ನುತ್ತಿದ್ದರು. ಛಾತ್ರ ಎಂದರೆ ಆ ಆಚಾರ್ಯ. ರನ್ನು ಛತ್ರಿಯಂತೆ ರಕ್ಷಿಸುವವನು—ಎಂದರ್ಥ. ವಿದ್ಯಾರ್ಥಿಯನ್ನು ಆಚಾರ್ಯರು ಒಂದೇ ಮನೆಯಲ್ಲಿಡುತ್ತಿದ್ದರು. ಅವನು ಯಾವಾಗಲೂ ಆಚಾರ್ಯರ ಸೇವೆಯಲ್ಲಿ ನಿರತನಾಗಿರಬೇಕು. ಸ್ತ್ರೀಯರು ವೇದ. ಮಾಮಾಂಸೆಗಳನ್ನು ಕಲಿಯಬಹುದಾಗಿತ್ತು. ವಿದ್ಯಾರ್ಥಿನಿಯರ ಹೆಸರು 'ಛಾತ್ರಿ' ಎಂದು. ಅವರ ವಸತಿಗೃಹದ ಹೆಸರು 'ಛಾತ್ರೀ. ವಾಲಾ' ಎಂದಿತ್ತು. ಸ್ತ್ರೀಯರೂ ಆಚಾರ್ಯರಾಗಬಹುದಾಗಿತ್ತು. ವಿದ್ಯಾಭ್ಯಾಸ ಎಷ್ಟು ಕಷ್ಟವಾಗಿತ್ತೆನ್ನುವುದಕ್ಕೆ ಆಗಿನ ಒಂದು ಹೇಳಿಕೆಯೊಂದಿಗೆ ನನ್ನ ಮಾತನ್ನು ಮುಗಿಸುತ್ತೇನೆ: 'ಕಷ್ಟೋಗ್ನಿಃ ಕಷ್ಟಂ ಶ್ಯಾಕರಣಾ ತಥೋಚಿಕಷ್ಟವರಾಣಿ ಸಾಮಾನಿ' ಎಂದರೆ ವೇದದ ಒಂದು ಭಾಗವಾದ 'ಅಗ್ನಿಯ ಅಭ್ಯಾಸ ಕಷ್ಟ. ಇದೆಲ್ಲಕ್ಕಿಂತ ಕಷ್ಟ. ವಾದುದು ಸಾಮವೇದದ ಅಭ್ಯಾಸ.

(ಧಾರವಾಡ ಆಕಾಶವಾಣಿಕೇಂದ್ರದ ಕೃಪೆಯಿಂದ)

(೨೬ನೆಯ ಪುಟದಿಂದ ಬಂದುದು)

ಹೇಳುತ್ತಾರೆ. ಕೋಟೆಯ ಒಳಭಾಗದಲ್ಲಿ ಯಮುನಾನದಿಯ ನೀರನ್ನು ಕಾಲುವೆಯಿಂದ ತೆಗೆದುಕೊಳ್ಳಲು ಬರುತ್ತಿತ್ತೆಂತೆ; ಹಾಗೂ ರಾಜ ಮನೆತನದವರು ಒಳಗೇ ವಿಹಾರಾರ್ಥವಾಗಿ ಅಲ್ಲಿ ಚಿಕ್ಕ ನಾವೆಗಳನ್ನು ನಡೆಸುತ್ತಿದ್ದರಂತೆ ವಿವಿಧ ನಕ್ಷತ್ರಗಳನ್ನು ನೋಡಲು ರಚಿಸಿದ 'ಜಂತರ್ ಮಂತರ್' ಕುತೂಹಲಕಾರಿಯಾಗಿದೆ.

ಹೊಸ ಕಟ್ಟಡಗಳೆಂದರೆ—ಒಂದು ಮೈಲು ಸುತ್ತಳತೆಯುಳ್ಳ ಪಾರ್ಲಿಮೆಂಟ್‌ಭವನ. ಏತಿಯಾದಲ್ಲಿಯೇ ದೊಡ್ಡ ರೇಡಿಯೋ ಸ್ಟೇಶನ್‌ಗಳಲ್ಲಿ ಒಂದಾದ ದಿಲ್ಲಿಯ ಆಕಾಶವಾಣಿಕೇಂದ್ರ, ಸಚಿವಾಲಯ, ಮಂತ್ರಾಲಯ ಇಂಡಿಯಾಗೇಟ್ ಮುಂತಾದುವುಗಳು; ಘನಶ್ಯಾಮದಾಸ ಬಿರ್ಲಾ ಅವರು ಕಟ್ಟಿಸಿದ ಸಂಗಮವರಿ ಕಲ್ಲಿನ ಬಿರ್ಲಾ ಮಂದಿರ. ಅಲ್ಲಿ ಕೃಷ್ಣನ ಅತಿ ಸುಂದರವಾದ ವಿಗ್ರಹವಿದ್ದು, ಪ್ರಾತಃಕಾಲ ಅಲ್ಲಿ ಭಜನೆ-ಕೀರ್ತನೆಗಳು ನಡೆಯುತ್ತಿರುತ್ತವೆ. ಭಗವದ್ಗೀತೆಯ ಮಹತ್ತ್ವದ ಶ್ಲೋಕಗಳನ್ನು ಗೋಡೆಗಳ ಮೇಲೆ ಬರೆದಿದ್ದಾರೆ. ಅಲ್ಲದೆ ಚಿತ್ರಗಳನ್ನೂ ತೆಗೆದಿದ್ದಾರೆ. ಕಬೀರ್, ತುಳಸೀದಾಸ, ವಿವಾ ಮುಂತಾದವರ ಹಿಂದೀ ಭಕ್ತಿಗೀತೆಗಳೂ ಗೋಡೆಗಳ ಮೇಲೆ ಕಂತು ಬರುತ್ತವೆ. ಬಿರ್ಲಾ ಭವನದ ಹತ್ತಿರವೇ ಗಾಂಧೀಜಿಯವರನ್ನು ಗುಂಡಿಕ್ಕಿದ ಸ್ಥಳವಿದೆ. ಮೊದಲು ಆ ಸ್ಥಳ ರಸ್ತೆಯಾಗಿದ್ದರೂ, ಈಗ ತೋಟವಾಗಿದೆ. ಅವರು ಗಾಯಗೊಂಡ ಸ್ಥಳದಲ್ಲಿಯೇ ಒಂದು ತುಳಸಿಯ ವೃಂದಾವನವಿದೆ (ಕಲ್ಲಿನದು). ಅದರ ಮೇಲೆ 'ಹೇ ರಾಮ' ಎಂದು ಕೆತ್ತಿದೆ.

ಆಗ್ರಾ ಪಟ್ಟಣವನ್ನು ನೋಡಲು ಹೊರಟಾಗ 'ತಾಜಮಹಲು' ಹೊಸತಾಗಿ ಕಟ್ಟಿಸಿದ ಕಟ್ಟಡದಂತೆ ನವೀನವಾಗಿ ಸುಂದರವಾಗಿ ತೋರುತ್ತಿದ್ದಿತು. ಇದಕ್ಕೆ ೫೦ ಲಕ್ಷ ರೂಂಡು ವೆಚ್ಚವಾಗಿರಬಹುದೆಂದು ಅಂದಾಜು ಮಾಡಿದ್ದಾರೆ. ಇದನ್ನು ನೋಡಿದಾಗ ಗೋಳಗುಮ್ಮಟದ ಭವ್ಯತೆಯ ಅರಿವಾಗದಿರದು. ಅದರೆ ಇಲ್ಲಿ ಕಾಂತಿಯುಕ್ತವಾದ ಕುಸುರಿನ ಕೆಲಸವಿದೆ. ದೇಶವಿದೇಶಗಳ ಹೂಗಳನ್ನು ಒಳಗೆಲ್ಲಾ ಕೆತ್ತಿದ್ದಾರೆ. ಮುಂದಿರುವ ಹೊಂಡದಲ್ಲಿ ಅದರ ಪ್ರತಿಚ್ಛಾಯೆ ಸುಂದರವಾಗಿ ಕಾಣುಬರುತ್ತಿದೆ. ಆಗ್ರಾಕೋಟೆಯ ಮೇಲಿರುವ ಚಿಕ್ಕ ಕಾಜಣ ಚೂರಿನ ಮೇಲೆ ಕೂಡ ಸ್ಪಷ್ಟವಾಗಿ 'ತಾಜ್' ಕಾಣುತ್ತದೆ ಅಕಬರ ಬಾದಶಹನು ಕಟ್ಟಿಸಿದ 'ಫತ್ತೇಪುರ ಸಿಕ್ರಿ' ಪಟ್ಟಣಕ್ಕೆ ಹೋದರೆ, ಅಲ್ಲಿ 'ಬುಲಂದ್ ದರವಾಜಾ' ಎಂಬುದೊಂದು—ಭಾರತದಲ್ಲಿಯೇ ಅತ್ಯಂತ ಎತ್ತರವಾದ—ರಾಜದ್ವಾರವು ಕಂಡುಬರುತ್ತದೆ ಅದರ ಒಳಭಾಗದಲ್ಲಿ ಸಲೀಮ್ ಚಿಸ್ತಿ ಎಂಬವನ ಗೋರಿ ಇದೆ. ಇವನ ಕೃಪೆಯಿಂದಲೇ ಅಕಬರನಿಗೆ ಸಲೀಮನು ಹುಟ್ಟಿದನಂತೆ. 'ದಿವಾನ್-ಇ-ಖಾಸ್' ಎಂಬುದು ಬಹಳ ಸುಂದರವಾದ ಕಟ್ಟಡ. ಇದರ ಮೇಲ್ಛಾವಣಿಯ ಮೇಲೆಯೇ ಅಕಬರನು ಅನೇಕ ಧರ್ಮದ ಧುರೀಣರೊಂದಿಗೆ ಮಾತನಾಡುತ್ತಿದ್ದನಂತೆ. ಐದಂತಸ್ತಿನ ಪಂಚಮಹಲಿನ ಮೇಲೆ ನಿಂತರೆ, ಸುತ್ತಲಿನ ದೃಶ್ಯ ಕಾಣುವಂತಿದೆ. ಅಕಬರನ ಹೆಂಡತಿ ಆದರ ಮೇಲಿಂದ ಮುಂಜಾನೆ ಸೂರ್ಯದರ್ಶನ ಪಡೆಯುತ್ತಿದ್ದಳಂತೆ; ಹಾಗೂ ಅರ್ಘ್ಯ ಕೊಡುತ್ತಿದ್ದಳಂತೆ.

ಹೊರಡುವಾಗ ನಮ್ಮ ಕಲ್ಪನೆಗೂ ನಿಲುಕಿರದಂತಹ ಬಹು ವಿಧದ ಸಂಸ್ಕೃತಿಯನ್ನು ಹೃದಯದಲ್ಲಿ ತುಂಬಿಕೊಂಡು ಮರಳಿದೆವು. ನಾವು ಹೋದುದು ಬರೀ ಹಬ್ಬದ ಉತ್ಸಾಹಕ್ಕಲ್ಲ; ನಿಜವಾದ ರಾಷ್ಟ್ರೀಯ ಸಂಸ್ಕೃತಿಯ ಸಂಪಾದನೆಗೆ ಎಂಬುದು, ನಮ್ಮೆಲ್ಲರ ಅನುಭವಕ್ಕೂ ಬಂದುಹೋಯಿತು.

ಸಾಹಿತ್ಯವನವಿಹಾರ

ಆಶ್ವಾಸನವಿತ್ತಂತೆ ಶ್ರೀಮಾನ್ ಕಲಮುದಾನಿ ನಾರಾಯಣರಾಯರು 'ಐಹೊಳೆ ವೆಂಕಟೇಶ' ಕವಿಯ ಪರಿಚಯವನ್ನು ಸಂಕ್ಷೇಪವಾಗಿ ಬರೆದು ಕಳುಹಿಸಿದ್ದಾರೆ. ಇವರು ಕವಿಯ ಸೋದರ ಅಳಿಯಂದಿರು. ಕವಿಯನ್ನು ಪ್ರತ್ಯಕ್ಷವಾಗಿ ಕಂಡವರು, ಅವರ ಸಾನ್ನಿಧ್ಯವನ್ನು ಸಾಕಷ್ಟು ಅನುಭವಿಸಿದವರು. ಆದುದರಿಂದಲೇ ಇವರ ಒಂದೊಂದು ಮಾತಿಗೂ ಐತಿಹಾಸಿಕ ಸತ್ಯದ ಬೆಲೆಯಿದೆಯೆಂದು ಒಪ್ಪಿಕೊಳ್ಳಬೇಕು.

ಸಾಹಿತ್ಯೇತಿಹಾಸ ದೃಷ್ಟಿಯಿಂದ ಕ್ರಿ. ಶ. ೧೯ನೆಯ ಶತಕವು ಇನ್ನೂ ಅಜ್ಞಾತವಾಗಿಯೆ ಉಳಿದಿದೆ. ಆದರೆ ಈ ಅವಧಿಯಲ್ಲಿಯೂ ಕನ್ನ ಸಾಹಿತ್ಯದ ಕೃಷಿಯು ನಡೆಯುದೆ ಇಲ್ಲ. ಶೈವ-ವೈಷ್ಣವ ಭಕ್ತಕವಿಗಳೂ ಜಾನಪದ ಕವಿಗಳೂ ಸಾಹಿತ್ಯನಿರ್ಮಿತಿಯ ಕಾರ್ಯವನ್ನು—ನಿರಪೇಕ್ಷ ಬುದ್ಧಿಯಿಂದ—ಮಾಡಿಯೆ ಮಾಡಿದ್ದಾರೆ. ಐಹೊಳೆ ವೆಂಕಟೇಶಾಂಕಿತ ಕವಿಯಂತೆಯೆ ಇವರ ಕೃತಿಗಳೂ ಎಲ್ಲೆಲ್ಲಿಯೋ ಹುದುಗಿಕೊಂಡು ಕುಳಿತಿವೆ. ಈ ಬಗೆಯ ಅಜ್ಞಾತಕವಿಗಳ ಬಗೆಗೆ ಯಾರಾದರೂ ಪರಿಚಯಾತ್ಮಕ ಲೇಖನಗಳನ್ನು ಕಳುಹಿಸಿದರೆ, ಜಯಂತಿಯಲ್ಲಿ ಅವಶ್ಯವಾಗಿ ಎಡೆಕೊಡಲಾಗುವುದು.

—ಸಂಪಾದಕರು

ಗಸೆಯ ವಿಹಾರ

'ಐಹೊಳೆ ವೆಂಕಟೇಶ' ಕವಿಯ ಪರಿಚಯ

ಈ ಅಂಕಿತದಿಂದ ದೊರೆಯುವ ಹಲವಾರು ಹಾಡು, ಕೀರ್ತನೆ, ಪ್ರಬಂಧಗಳನ್ನು ರಚಿಸಿದ ಕವಿಯ ಹೆಸರು ಗುಮಾಸ್ತೇ ಭೀಮರಾಯರು—ಎಂದು. ಐತಿಹಾಸಿಕವಾದದಲ್ಲಿ ಪ್ರಸಿದ್ಧ ವಿದ್ಯಾಕೇಂದ್ರವೆನಿಸಿದ—ಈಗ ಚಿಕ್ಕ ಹಳ್ಳಿಯಾಗಿ ಬಾಳಿರುವ—'ಐಹೊಳೆ' ಎಂಬ ಗ್ರಾಮವು ಈ ಕವಿಯ ಜನ್ಮಸ್ಥಳ. ಈ ಗ್ರಾಮ ವಿಜಾಪುರ ಜಿಲ್ಲೆಗೆ ಸೇರಿದುದಾಗಿದೆ. ಕವಿಯು ಜನ್ಮಿಸಿದುದು ಕ್ರಿ. ಶ. ೧೮೩೫ ರಲ್ಲಿ; ದಿವಂತ ಗತವಾದುದು ೧೯೧೫ರಲ್ಲಿ.

ಕವಿಯ ಮನೆತನ ಐಹೊಳೆ ಗ್ರಾಮದಲ್ಲಿಯೆ ವಂಶಪರಂಪರೆಯಿಂದ ಬದುಕಿ ಬಾಳಿದುದು. ಐಹೊಳೆ ಒಂದು ದೇಸಗತಿಯ ಗ್ರಾಮ. ಕವಿಯ ತಾತ-ಮುತ್ತಾತಂದಿರು ಈ ದೇಸಗತಿಯಲ್ಲಿ ಮುಖ್ಯ ಗುಮಾಸ್ತ ರಾಗಿ ಕೆಲಸ ಮಾಡುತ್ತ ಬಂದವರು. ಕವಿಯ ತಂದೆಯ ಹೆಸರು ರಾಘಪ್ಪ ಅಥವಾ ರಾಘವೇಂದ್ರರಾಯ ಎಂದು. ಇವರು ಭಾರದ್ವಾಜ ಗೋತ್ರದ ಮಾಧ್ವಬ್ರಾಹ್ಮಣರು.

ಕವಿಯ ಚಿಕ್ಕತನದ ವಿದ್ಯಾಭ್ಯಾಸವು ಅಂದಿನ ಪರಿಸ್ಥಿತಿಗೆ ಅನುಗುಣವಾಗಿ, ಆ ಹಳ್ಳಿಯಲ್ಲಿಯ ಖಾಸಗೀ ಶಾಲೆಯಲ್ಲಿ ಆಯ್ತು. ಆ ವಿದ್ಯಾಭ್ಯಾಸವೆಂದರೆ, ಕನ್ನಡ ಭಾಷೆಯಲ್ಲಿ ಓದುವುದು-ಬರೆಯುವುದು; ವ್ಯವಹಾರದ ಮಟ್ಟಿಗೆ ಗಣಿತ—ಇಷ್ಟೆ! ಆದರೆ ಇವರು ಹುಟ್ಟಾ ಬುಹಾಮೇಧಾವಿಗಳಾದುದರಿಂದ, ಸ್ವತಃ ಪರಿಶ್ರಮವಹಿಸಿ, ಹಳಗನ್ನಡ-ಸಂಸ್ಕೃತಭಾಷೆಗಳಲ್ಲಿ ಪ್ರಾವೀಣ್ಯವನ್ನು ಸಂಪಾದಿಸಿ, ಆ ಭಾಷೆಯ ಸಾಹಿತ್ಯಗ್ರಂಥಗಳನ್ನು ಓದಿಕೊಂಡರು. ಇವರು ಸ್ವಭಾವತಃ ಕಾವ್ಯಪ್ರಿಯರಾದುದರಿಂದ, ಚಿಕ್ಕವಯಸ್ಸಿನಿಂದಲೂ ಪದ್ಯಗದ್ಯಗಳನ್ನು ರಚಿಸಲು ಪ್ರಯತ್ನಿಸುತ್ತಿದ್ದರು. ಸ್ವಲ್ಪ ಕಾಲದಲ್ಲಿಯೆ ಇವರ ಪ್ರಯತ್ನ ಫಲಿಸಿತು. ತಮ್ಮ ಮನೆಯ ದೈವತವಾದ ವೆಂಕಟೇಶನ ಅಂಕಿತವನ್ನಿರಿಸಿ, ಹಲವಾರು ಹಾಡು-ಕೀರ್ತನೆಗಳನ್ನು ರಚಿಸಿದರು. ಇವರ ಕಾವ್ಯರಚನಾಶಕ್ತಿಯನ್ನು ಕಂಡು ಅನೇಕ ಜನ್ಯ ಹಿರಿಯ ವಿದ್ಯಾವಂತರೂ ಅಚ್ಚರಿ-ಮೆಚ್ಚಿಕೆಗಳನ್ನು ಪ್ರಕಟಿಸುತ್ತಿದ್ದರು.

ಒಂದು ಸಲ, ಶ್ರೀಜಗನ್ನಾಥರ ಶಿಷ್ಯಪರಂಪರೆಗೆ ಸೇರಿದ ಶ್ರೀಶಪ್ರಾಣೇಶ ವಿಟ್ಠಲದಾಸರು, ಐಹೊಳೆ ಗ್ರಾಮಕ್ಕೆ ಬಂದು, ಕವಿಯ ಮನೆಯಲ್ಲಿಯೆ ಅತಿಥಿಗಳಾಗಿದ್ದರು. ಆಗ ಅವರು ಈ ಕವಿಯು ರಚಿಸಿದ ಕವನ-ಪದ್ಯಗಳನ್ನು ಕೇಳಿ ಸಂತೋಷಪಟ್ಟು ಹೀಗೆ ಹೇಳಿದರಂತೆ:

"ಅಪ್ಪಾ, ದೇವರು ನಿನಗೆ ಒಳ್ಳೆಯ ಶಕ್ತಿ ದಯೆಪಾಲಿಸಿದ್ದಾನೆ. ಅದರ ಸದುಪಯೋಗವಾಗಲಿ! ಶೃಂಗಾರಪದ, ಜಾನಪದ ಮೊದಲಾದ ಲೌಕಿಕ ವಿಷಯದ ಕವನಗಳನ್ನು ರಚಿಸುವುದನ್ನು ಬಿಟ್ಟು, ಪರಮಾತ್ಮನ ಮಹಾತ್ಮ್ಯ-ಲೀಲಾ ವಿನೋದಗಳನ್ನು ಬಣ್ಣಿಸಿ ಕವನ-ಕೀರ್ತನೆಗಳನ್ನು ರಚಿಸು! ಈಗ ನೀನು ಬಳಸಿರುವ ಅಂಕಿತವನ್ನೇ ನಿನ್ನ ಮುಂದಿನ ಕೃತಿಗಳಿಗೂ ಬಳಸು! ಧನ್ಯನಾಗು!"

ಈ ಮಾತನ್ನು ಗುರ್ವಾಜ್ಞೆಯೆಂದು ಭಾವಿಸಿ, ಕವಿ ಭೀಮರಾಯರು ಅಂದಿನಿಂದಲೂ 'ಐಹೊಳೆ ವೆಂಕಟೇಶ' ಎಂಬ ಕೊನೆಯ ಮುದ್ರಿಕೆಯಿಂದ ದೇವರ ನಾಮಗಳನ್ನು ರಚಿಸತೊಡಗಿದರು. ಇವರ

ಕವನ ರಚನಾಶಕ್ತಿಯು ಅಗಾಧವಾಗಿತ್ತು. ಆಪೇಕ್ಷಿಸುವುದೊಂದೇ ತಡ; ದೊಡ್ಡ ದೊಡ್ಡ ಪದ-ಪದ್ಯಗಳನ್ನು ಕುಳಿತಲ್ಲಿಯೆ ರಚಿಸಿ ಹಾಡಿ ತೋರಿಸುತ್ತಿದ್ದರು. ಇವರ ಕನ್ನಡ-ಸಂಸ್ಕೃತ ಶಬ್ದಜ್ಞಾನವನ್ನು ನೋಡಿದರೆ, ಆ ಭಾಷೆಯ ಕೋಶಗಳು ಇವರ ಹೃದಯದಲ್ಲಿ ಹುದುಗಿ ಕುಳಿತಿವೆಯೆನ್ನಿಸುತ್ತಿತ್ತು. ಇವರ ಕಾವ್ಯಗಳ ಅಭ್ಯಾಸವೂ ಅಸಾಮಾನ್ಯವಾದುದಾಗಿತ್ತು. ಅನೇಕ ಸಲ ಸಾಹಿತ್ಯಪ್ರಿಯ ಜನಸಮೂಹದೆದುರು ಕುಳಿತು, ಕನ್ನಡ ಜೈಮಿನಿಭಾರತ, ಕುಮಾರವ್ಯಾಸನ ಭಾರತ, ಪಂಪ-ರನ್ನರ ಕೃತಿಗಳು ಇವುಗಳನ್ನು ಓದಿ, ಅರ್ಥಾನುವಾದ ಮಾಡಿ, ರಸಿಕರನ್ನೆಲ್ಲ ಮುಗ್ಧಗೊಳಿಸುತ್ತಿದ್ದರು.

ಕವಿ ಭೀಮರಾಯರು ಪ್ರಾಸಾದಿಕ ಕವಿಗಳು. ಇವರ ಕಾವ್ಯ-ಕವನಗಳನ್ನು ನೋಡಿದವರೆಲ್ಲ ಈ ಮಾತನ್ನು ಒಪ್ಪಲೇಬೇಕು ಇವರು ಹುಟ್ಟಿದ ಊರೋ ತೀರ ಹಳ್ಳಿ! ಬೆಳೆದುದು ಹಳ್ಳಿಯ ಅಶಿಕ್ಷಿತ ಜನರ ಮಧ್ಯದಲ್ಲಿ. ಅಕ್ಕರಿಗರ ಮನೆತನವೆಂದರೆ ಆ ಹಳ್ಳಿಯಲ್ಲಿ ಇವರೊಂದೇ ಒಂದು. ಇವರ ಸಹಜವಾದ ಸಾಹಿತ್ಯಸ್ಫೂರ್ತಿಯನ್ನು ಪೋಷಿಸುವಂತಹ ಸಾಧನಗಳು ಅಲ್ಲಿ ಒಂದೂ ಇರಲಿಲ್ಲ. ಆದರೂ ತಮ್ಮ ಉತ್ಕಟ ಸಾಹಿತ್ಯಾಭಿಲಾಷೆ, ಬುದ್ಧಿಬಲ, ಸಾಹಸ ಇವುಗಳಿಂದ ಸುಪ್ರಸಿದ್ಧಿಯನ್ನು ಗಳಿಸಿ, ಅಂದಿನ ಸರಕಾರದ ವಿದ್ಯಾಖಾತೆಯವರ ಮನಸ್ಸನ್ನೂ ಆಕರ್ಷಿಸಿದರು. ಅದರ ಫಲವಾಗಿ ಬೆಳಗಾಂವಿಯ ಸರದಾರ್ ಹೈಸ್ಕೂಲಿನಲ್ಲಿ ಕನ್ನಡ ಅಧ್ಯಾಪಕರ ಅಧಿಕಾರ ಇವರಿಗೆ ದೊರೆಯಿತು. ಆದರೆ ಇವರ ಸ್ವಾತಂತ್ರ್ಯಪ್ರೀತಿ, ಸರಕಾರೀ ನೌಕರಿಯಲ್ಲಿ ಬಹಳಕಾಲ ಇವರನ್ನು ಉಳಿಯಗೊಡಲಿಲ್ಲ. ಬೇಗನೆ ಅದಕ್ಕೆ ರಾಜೀನಾಮೆಯನ್ನಿತ್ತು, ಸ್ವಂತದ ಹಳ್ಳಿಗೆ ಮರಳಿ ಬಂದು, ಅಲ್ಲಿ ತಾವೇ ರಚಿಸಿದ 'ಶ್ರೀಕೃಷ್ಣಪಾರಿಜಾತ' ಎಂಬ ಪೌರಾಣಿಕ ದೃಶ್ಯರೂಪಕವನ್ನು, ಅಟ್ಟಕಟ್ಟಿ ನಟಿಸಲು ಪ್ರಾರಂಭಿಸಿದರು. ಇವರ ಈ ನಾಟಕ ನಟನೆ ಇವರಿಗೆ ತುಂಬ ಪ್ರಸಿದ್ಧಿಯನ್ನು ದೊರೆಕಿಸಿ ಕೊಟ್ಟಿತು. ಇವರು ಉತ್ತಮ ಕವಿಗಳಿದ್ದಂತೆ, ಉತ್ತಮ ಗಾಯಕರೂ, ಸಂಗೀತಶಾಸ್ತ್ರ ನಿಪುಣರೂ ಆಗಿದ್ದರು. ತಮ್ಮ ನಾಟಕಗಳಲ್ಲಿ—ಆಗಿನ ಪದ್ಧತಿಯಂತೆ ತಾವೇ ಸೂತ್ರಧಾರನಾಗಿ ನಿಂತು, ತಮ್ಮ ಮಧುರಸಂಗೀತದಿಂದ ಪ್ರೇಕ್ಷಕರನ್ನು ಮುಗ್ಧರನ್ನಾಗಿಸಿ ಬಿಡುತ್ತಿದ್ದರು.

ಇವರು ಜೀವಿಸಿದ್ದುದು ೮೦ ವರ್ಷಗಳ ಅವಧಿ. ಅನೇಕ ದೇವರನಾಮ, ಪದ, ಸುಳಾದಿ, ಉಗಾಭೋಗ, ಸುವ್ವಾಲೆಗಳನ್ನೂ, ಪುರಾಣಪುರುಷಶ್ರೇಷ್ಠರಾದ ರುಕ್ಮಾಂಗದ, ಅಂಬರೀಷ, ನಳರಾಜ ಮೊದಲಾದವರ ಕಥೆಗಳನ್ನೊಳಗೊಂಡ ನಾಟಕಗಳನ್ನೂ, 'ಶ್ರೀರಾಮ ಪಾರಿಜಾತ' ಶ್ರೀಕೃಷ್ಣ ಪಾರಿಜಾತ, ಎಂಬ ಕವನ ಪ್ರಬಂಧಗಳನ್ನೂ ಅನೇಕ ಕಥಾಕೀರ್ತನೆಗಳನ್ನೂ ರಚಿಸಿದ್ದಾರೆ. ಅಲ್ಲದೆ 'ಏಕಾದಶೀ ಮಾಹಾತ್ಮ್ಯ' ಎಂಬ ಕಾವ್ಯವನ್ನೂ ಸುಭದ್ರಾ-ರುಕ್ಮಿಣಿ-ಸತ್ಯಭಾಮೆಯರ ಮುಯ್ಯದ ಹಾಡುಗಳನ್ನೂ ತುಂಬ ಮನೋಹರವಾದ ಶೈಲಿಯಲ್ಲಿ ಬರೆದಿದ್ದಾರೆ. 'ಸುಭದ್ರಾ ಪರಿಣಯ' ಎಂಬ ಗ್ರಂಥವು ತನ್ನ ರಾಗ-ರಸಗುಣಗಳಿಂದ ಎಂಥವರ ಹೃದಯವನ್ನೂ ಆಕರ್ಷಿಸುವಂತಿದೆ.

ಕನ್ನಡ-ಸಂಸ್ಕೃತ ಭಾಷೆಯಲ್ಲಿ ಕವಿಗೆ ಎಂತಹ ನೈಪುಣ್ಯ ವಿದ್ದಿತೆಂಬುದಕ್ಕೆ ಉದಾಹರಣೆಯಾಗಿ, ಅವರು ರಚಿಸಿದ ವಿಘ್ನೇಶ್ವರ ಸ್ತುತಿ ಮತ್ತು ಶಿವಸ್ತುತಿಯ ಕೀರ್ತನೆಗಳೆರಡನ್ನೂ ಇಲ್ಲಿ ಕೊಡಲಾಗಿದೆ:

ವಿಘ್ನೇಶ್ವರ ಸ್ತುತಿ

ರಾಗ ನಾಂಟ, ತಾಳ ಝಂಪೆ.

ವೃದ್ಧವನೆ ನಿನ್ನ ಪದ ಪೊರ್ದಿ ವಂದಿಸುವೆ ।
ಸದ್ಬುದ್ಧಿಯನು ನೀಡು ಷಣ್ಮುಖಾನುಜನೇ! ॥ ಪಲ್ಲ
ಏಕದಂತನೆ ಮನದ ಶೋಕ ಪರಿಹರಿಸೆನ್ನ ।
ಕಾಕುಮತಿ ಬಿಡಿಸು ಭೂತಾಳಿವಂದ್ಯ ॥
ಲೋಕಪೂಜಿತನೆ ಶ್ರೀ-ಮಾಕಳತ್ರನ ಪದದಿ
ಏಕಧ್ಯಾನವನೀಯೊ, ಆಖುವಾಹನನೇ! ॥ ೧ ॥
ಬಾದರಾಯಣರಚಿತ ಸಾಧುಸದ್ಗ್ರಂಥಗಳ ।
ಮೋದದಿಂ ಬರೆದು ಬಹು ಭಕುತಿಯಿಂದ ॥
ಮೇದಿನಿಯ ಸುಜನರ-ಸಾಧನಕೆ ಒಲಿದಿತ್ತೆ ।
ವೇದ ವಿಶ್ವಂಭರನ ಪಾದಾಬ್ಜಮಧುವ ॥ ೨ ॥
ಯಕ್ಷಪತಿಸಖುತನಯ ನಕ್ಷತ್ರಪತಿ ಪಗೆಯು ।
ಇಕ್ಷಿಸೈ ಕರುಣಾಕಟಾಕ್ಷದಿಂದ ॥
ಪಕ್ಷಿವಾಹನ ಐಯಹೊಳೆಯ ವೆಂಕಟನೊಲುಮೆ
ಅಕ್ಷಯದಿ ಪಡಕೊಂಡ ಅಂಬರಾಧೀಶ! ॥ ೩ ॥

೧ ಕುಬೇರ. ೨ ಚಂದ್ರ.

ಶ್ರೀಶಿವಸ್ತವನ

ರಾಗ ರೇಗುಪ್ತಿ, ತಾಳ ಬಿಲಂದಿ

ಶಂಭೋ ಪಾಲಿಸು ಗಂಗಾಧರನೇ—ನಿನ್ನ
ನಂಬಿರುವೆನು ಅಂಬಾವರನೇ . ॥ ಪಲ್ಲ ॥
ಹಂಬಲಿಸುವೆ ವಿಶ್ವಂಭರನಲ್ಲಿ ಮನವಿತ್ತು
ಇಂಬಾಗಿ ಕಾಯೋ ಗಜಾಂಬರ ಶೋಭಿತ! ॥
ಅಂಬಕತ್ರಯ ಅಜತನಯ ಗತಿ
ಯೆಂಬೆನೈ ಹೇರಂಬಜನಕ ॥ ಅನುಪಲ್ಲ ॥
ಗಂದರ್ಗಿನಿ ಚಂದ್ರಮೌಳಿ-ವರ-ಗೊಂದಿವರೂಢ ತ್ರಿಶೂ
ಕಂದುಗೊರಳ ಸುಕಪಾಲಿ-ನಿಜ-ಕಂದರಧೃತ ರುಂಡಮಾ
ಕಂದರ್ಪಹರ ಸಂಕ್ರಂದನನುತವಾದ
ನಂದಿವಾಹನ ನಾಗಭೂಷಣಾದ ಭವ ॥
ಅಂದು ಅನಿಲನ ಹೊಂದಿ ಅಗಮ-
ದಂದವನು ಮುದದಿಂದ ತಿಳಿಯುತ

ಜಿಂದದಲಿ ಮಹಿಪೊತ್ತವನ ಪದ
ಕುಂದದೈದಿದ ಕುಜನ ದ್ವೇಷಿ ॥ ೧ ॥
ಚಳವೆಟ್ಟಿನಳಿಯ ಕೆಂಜೆಡೆಯ—ಭೂತ—ಗಳ ಬಳಗಕೆ
ನೀನು ಹಿರಿಯ ।
ಪ್ರಳಯ ಮೂರುತಿ ಗಿರಿನಿಲಯ–ಮುಖ–ಪ್ರೊಳಲುರಿಕನೆ
ಮುನಿಗೇಯ ॥
ಸಲೆ ಭಾಗವತವನ್ನು ಒಲಿದವನೀಶಗೆ
ಸುಲಭದಿ ಪೇಳಿದ–ನಿಲ–ಸೋಮ–ರವಿ ನೇತ್ರ
ಕಲಿತ ಪಂಚಾನನ ಕಲೇವರ
ಲಲಿತ ಡಮರುಗಧರ ದಯಾಕರ
ಇಳೆಯೊಳಗೆ ಜೀವಿಯೆನಿಸಿದೆ
ಜಿಲುವ ಹಂದ್ರಿತಿಯಾಂಗಲಿಂಗ! ॥ ೨ ॥
ಸ್ಫಟಿಕಾಭ ಶಿವ ತವಮಹಿಮ–ಯಮ–ಭಟರಿಂಗೆ ಭಯ
ಭವ್ಯನೀಮ ೪ ।
ನಿಟಿಲಲೋಚನ ನಿತ್ಯನೇಮ–ದಿಂದ–ಪಠಿಸುವಿ ಶ್ರೀರಾಮ
ನಾಮ ! ॥
ದಿಟ ನೀನೇ ಗುರು ಎಂದು ಘಟ್ಟಿಸಿ ನಾ ನುತಿಸುವೆ
ಕುಟಿಲರಹಿತ ಭೂರ್ಜಟಿಯೆ ಕೈಪಿಡಿದೆನ್ನ ॥
ಘಟ್ಟಿಸಿ ಘೋರಿಸುತಿಪ್ಪ ಭವ ಸಂ–
ಕಟ ನಿವಾರಿಸಿ ನೀಲಲೋಹಿತ
ತೃಟಿಯು ಬಿಡದಲೆ ಕಾಯೊ ಐಹೊಳೆ–
ಶತಮಥನ ವೆಂಕಟನ ಪ್ರಿಯ ॥ ೩ ॥

೧ ಶಿವ, ೨ ವೃಷಭವಾಹ, ೩ ಶೇಷದೇವ, ೪ ಹಿಮಾಲಯ, ೫ ಪುರಸಂಹಾರಿ, ೬ ಶುಕಾಚಾರ್ಯರು, ೭ ಅಶ್ವತ್ಥಾಮ, ಮಂಗಲ, ೯ ಭಯಂಕರ.

ಶಿಸಿಯ ವಿಹಾರ

ಪಿಎಚ್. ಡಿ. ಪ್ರಬಂಧದಲ್ಲಿ ಒಂದು ಪ್ರಮಾದ

ಶ್ರೀ. ಬೆಟಗೇರಿ ಕೃಷ್ಣಶರ್ಮಾ, ಧಾರವಾಡ

ನನ್ನ ಮಿತ್ರರಾದ ಡಾ. ಕಮಲಾಪುರ ಕಾಂತರಾಯರಲ್ಲಿಗೆ ಒಂದು ದಿನ ನಾನು ಹೋದಾಗ, ಅವರು ವಿನೋದದ ಧ್ವನಿಯಲ್ಲಿ ಸ್ವಾಗತಿಸುತ್ತ ನನಗೆಂದರು:

"ಏನ್ರೀ, ನಿಮ್ಮ ಕವಿತಾದ ಸ್ಥಾನ ಪಾತಾಳ ಏರಿ ಬಿಟ್ಟದಲ್ಲ?"

ನಾನು ಸಹಜಸ್ವರದಲ್ಲಿ ಹೇಳಿದೆ:

"ಹೊಸತಾಗಿ ಏರಬೇಕಾದದ್ದೇನದ? ಅದಕ್ಕ ಇರುವ ಸ್ಥಾನ ಯಾವಾಗಲೂ ಅದನ್ನs ಅದ!"

ಡಾಕ್ಟರರು ಮತ್ತೆ ಹೇಳಿದರು:

"ಹಾಂಗಲ್ಲರೀ! ನಿಮ್ಮಹೊಂದು ಕವಿತಾ, ದಾಸಕವಿಶ್ರೇಷ್ಠ ಶ್ರೀವ್ಯಾಸರಾಯರದು—ಅಂತ ಪ್ರಕಟವಾಗೇದ!"

ಕುತೂಹಲದಿಂದ ನಾನು ಕೇಳಿದೆ:

"ಅಂ? ಅಂದರ ಏನು? ಎಲ್ಲಿ ಪ್ರಕಟ ಆಗೇದ?"

ಡಾಕ್ಟರರು ವ್ಯಂಗ್ಯ ಧ್ವನಿಯಲ್ಲಿ ಹೇಳಿದರು:

"ಅಂಥಾ ಇಂಥಾ ಕಡೆ ಪ್ರಕಟವಾಗಿಲ್ಲರೀ! ಒಬ್ಬ ಪಿಎಚ್. ಡಿ ಪದವೀ ಪಡೆದುಕೊಂಡವರ ಮಹಾಗ್ರಂಥದೊಳಗ ಪ್ರಕಟ ಆಗೇದ; ಇಲ್ಲಿ ನೋಡಿರಿ--ಇಲ್ಲಿ!"

ಮುಂದಿನ ಟೇಬಲ್ಲಿನ ಮೇಲೆಯೇ ಇದ್ದ ಒಂದು ಪುಸ್ತಕವನ್ನು ತೆರೆದು ನನ್ನೆದುರು ಹಿಡಿಗರು. ಆ ಪುಸ್ತಕವ ೧೧ನೆಯ ಪುಟದಲ್ಲಿ ಬಂದಿದ್ದ ವಿಷಯವನ್ನು ಓದಿನೋಡಿದಾಗ, ನನಗೆ ತುಂಬ ಆಶ್ಚರ್ಯವಾಯಿತು.

'ಶ್ರೀಜಗನ್ನಾಥದಾಸರು' ಎಂದು ಆ ಪುಸ್ತಕದ ಹೆಸರು. ಡಾ. ಕೆ. ಎಸ್ ಕೃಷ್ಣರಾವ ಎಂ. ಎ., ಪಿಎಚ್. ಡಿ. ಮೈಸೂರು ವಿಶ್ವವಿದ್ಯಾನಿಲಯ—ಎಂಬವರು ಅದರ ಲೇಖಕರು. ೧೧ನೆಯ ಇಸ್ವಿಯಲ್ಲಿ ಪ್ರಕಟವಾಗಿದೆ. ಶ್ರೀಮಾನ್ ದಿವಾಕರ ರಂಗರಾಯರ ಮುನ್ನುಡಿಯಿದೆ. ಮದತ್ತಿನವರಾದ ಶ್ರೀ. ಆರ್. ನಾಗರಾಜಶರ್ಮಾ ಎಂಬ ವಿದ್ವಾಂಸರು, ಇಂಗ್ಲಿಷಿನಲ್ಲಿ ಏಳೆಂಟು ಪುಟಗಳಷ್ಟು 'ಇಂಟ್ರೋಡಕ್ಷನ್' ಬರೆದಿದ್ದಾರೆ. 'ಲೇಖಕರ ಮುನ್ನುಡಿಯನ್ನು ನೋಡಿದರೆ, ಇದನ್ನು ಕನ್ನಡನಾಡಿನ ಸುಪ್ರಸಿದ್ಧ ಸಾಹಿತ್ಯ ಸಂಶೋಧಕರೇಕರು ಓದಿ ಮೆಚ್ಚಿದ್ದಾರೆ— ಎಂಬ ಮಾತು ಗೊತ್ತಾಗುವುದು.

ಲೇಖಕರು ತಮ್ಮ ಗ್ರಂಥದ ಪೀಠಿಕಾಭಾಗದಲ್ಲಿ ಬೇರೆ ಬೇರೆ ಸಂಗತಿಗಳನ್ನು ನಿವರಿಸುತ್ತ, ನಮ್ಮ ನಾಡಿನ ಪ್ರಮುಖ ಹರಿದಾಸರನ್ನು ಒಬ್ಬೊಬ್ಬರನ್ನಾಗಿ ಪರಿಚಯ ಮಾಡಿಕೊಟ್ಟಿರುವರು. ಶ್ರೀವ್ಯಾಸರಾಜರ ವಿಷಯವನ್ನು ಹೇಳುತ್ತ, ಅವರ ಭಕ್ತಿಸಾಹಿತ್ಯದ ಸೊಗಸನ್ನು ನಿರೂಪಿಸುತ್ತ ೧೧ನೆಯ ಪುಟದಲ್ಲಿ:

"ಶ್ರೀಕೃಷ್ಣನ ಕೊಳಲಿನ ಮೇಲೆ ಅವರು ರಚಿಸಿರುವ ಭಾವಗೀತ ಎಷ್ಟು ಕಾವ್ಯಮಯವಾಗಿದೆ!

ರಾಗ: ಕೇದಾರಗೌಳ ತಾಳ: ಆಟ

ಕೊಳಲ ನುಡಿಸು ಕವಿಯೊಳಗೆ ಜಿಲುವ ಮೋಹನಾ ॥ ಪ ॥
ಕೊಳಲ ನುಡಿಸಿ ಪ್ರೇಮಸುಧೆಯ
ಮಳೆಯ ಸುರಿಸಿ ಭವದ ತಾಪ
ಕಳೆದು ತಿಳಿವನೆಳೆಬಳ್ಳಿಯ
ಬೆಳೆಯಿಸಿ ಬೆಳಗೆನ್ನ ಮನದೊಳು ॥ ಅ ॥

* * * *

ಕಂಟಮುಖದ ಸಖಿಯರ ಮನ
ಮಂಥುಳವಹ ರಾಗದಿಂದ
ರಂಜಿಸುತಾಮರರ ಹೃದಯ–
ಪಂಜರಶುಕನಾಗಿ ನೀನು ॥ ೧ ॥

ಭಂಜಿಸಿ ಭವಭಯ ಮಾಯದ
ಮಂಜನೆಲ್ಲ ಮರೆಮಾಡಲು
ಸಂಜೆಯ ಸವಿಸಮಯದಲ್ಲಿ
ಕುಂಜವನದಿ ಕುಳಿತೊವಿದ ॥ ೩ ॥

ಭಿನ್ನ ವಿಷಯಕೆಳಸದಂತೆ
ಚೆನ್ನ ನಿನ್ನ ಧ್ಯಾನಕಲಿಸಿ
ನನ್ನ ಮನದ ಮೃಗವ ಕಣಿಸಿ
ನಿನ್ನೊಳದರ ನೋಟ ನಿಲಿಸಿ ॥ ೪ ॥

ತನ್ಮಯವನ್ನಾಗಿ ಮಾಡಿ
ನಿನ್ನ ನೆನೆಯಲಿರಿಸಿಕೊಳ್ಳೊ
ಚಿನ್ನಹವೆನ್ನದು ಮನ್ನಿಸಿ
ಚಿನ್ಮಯ ಶ್ರೀಕೃಷ್ಣಮೂರ್ತಿ ॥ ೫ ॥"

ಎಂದು ಅಚ್ಚಾದುದನ್ನು ನೋಡಿ ತುಂಬ ಆಶ್ಚರ್ಯಪಟ್ಟೆ. ಡಾಕ್ಟರರಿಗೆ ಹೇಳಿದೆ:—

"ಇದೊಂದು ವಿಚಿತ್ರಸಂಗತಿಯೆ! ಇದನ್ನು ನೋಡಿ ನಾನೇನು ಸಂತೋಷ ಪಡಬೇಕೋ ವ್ಯಸನ ಪಡಬೇಕೋ ತಿಳಿಯದಾಗಿದೆ. ಇದನ್ನು ರಚಿಸಿದ ನಾನು ಬದುಕಿ ಇರುವಾಗಲೇ ಯಾರೋ ಮಹಾಶಯರು, ಇದರಲ್ಲಿ ತಮ್ಮ ಮನಸ್ಸಿಗೆ ಬಂದಂತೆ ತಿದ್ದುವ ಉಪಕಾರವನ್ನು ಮಾಡಿದ್ದಾರೆ. 'ಬಗೆಯುತಾಪ' ಏಂದಿದ್ದುದನ್ನು 'ಭವದ ತಾಪ' ವನ್ನಾಗಿಸಿದ್ದಾರೆ. 'ಮನದಿ' ಎಂದು ಇದ್ದುದನ್ನು 'ಮನದೊಳು' ಎಂದು ಮಾಡಿದ್ದಾರೆ. 'ರಂಜಿಸುತಾಕೆಯರ' ಎಂದು ಇದ್ದುದನ್ನು 'ರಂಜಿಸುತಾಮರರ' ಎಂದಾಗಿಸಿದ್ದಾರೆ. 'ಚೆನ್ನ ನಿನ್ನ ಕೊಳಲ ನುಡಿಸಿ' ಎಂದಿದ್ದುದನ್ನು 'ಚೆನ್ನ ನಿನ್ನ ಧ್ಯಾನಕಲಿಸಿ' ಎಂದು ತಿದ್ದಿ, ಅಲ್ಲಿನ್ದ ಅಲಂಕಾರ-ಕವಿಸಮಯದ ಸೊಗಸನ್ನೇ ಕೆಡಿಸಿಬಿಟ್ಟಿದ್ದಾರೆ. ಅಲ್ಲದೆ ಇದಕ್ಕೆ ಮೂರು ನುಡಿಗಳಿವೆ. ಮೊದಲನೆಯ ನುಡಿಯನ್ನು ಪೂರ್ತಿಯಾಗಿ ಬಿಟ್ಟು, ಎರನೆಯ ಒನೆಯ ನುಡಿಗಳ ಅರ್ಧಾರ್ಧ ನುಡಿಗಳನ್ನೇ— ಅರ್ಥದ ಕಡೆಗೆ ಲಕ್ಷ್ಯಕೊಡದೆ—ಪೂರ್ಣ ನುಡಿಗಳೆಂದು ಭಾವಿಸಿ ನುಡಿಯ ಅಂಕಿಗಳನ್ನು ಹಾಕಿದ್ದಾರೆ. ನನ್ನದೊಂದು ಹಾಡೇ ಇಷ್ಟೊಂದು ವಿಕೃತಿಯನ್ನು ಪಡೆದಿದೆಯೆಂದ ಮೇಲೆ, ಪಾಪ, ನಮ್ಮ ಪ್ರಾಚೀನ ಹರಿದಾಸರ ಕೃತಿಗಳು ಇಂತಹರ ಕೈಯಲ್ಲಿ ಸಿಕ್ಕು ಎಂತೆಂತಹ ವಿಕಾರ ಪಡೆದಿವೆಯೋ ಯಾರಿಗೆ ಗೊತ್ತು?"

ಡಾಕ್ಟರರು ನಸುನೇಳೆ ತುಮ್ಮಿಗಿದ್ದು ಆ ಮೇಲೆ ನನ್ನನ್ನು ಕೇಳಿದರು:

"ನೀವು ಈ ಕವಿತೆಯನ್ನು ಬರೆದು ಎಷ್ಟು ದಿನಗಳಾದುವು?"

"೧೯೨೮ನೆಯ ಇಸ್ವಿಯಲ್ಲಿ ನಾನು ಬೆಳಗಾಂವಿಯಲ್ಲಿದ್ದಾಗ, ಇದನ್ನು ರಚಿಸಿ, ಆಗ ನಾನು ಸಂಪಾದಕನಾಗಿ ಇದ್ದ 'ಮಾತೃಭೂಮಿ' ಎಂಬ ಮಾಸಪತ್ರಿಕೆಯಲ್ಲಿ ಪ್ರಕಟಿಸಿದ್ದೆ. ಮುಂದೆ ೧೯೩೬ನೆಯ ಇಸ್ವಿಯಲ್ಲಿ ಧಾರವಾಡದ ರಾ. ಶಿಕ್ಷಣಸಮಿತಿಯಿಂದ ಪ್ರಕಟವಾಗುತ್ತಿದ್ದ 'ಸ್ವಧರ್ಮ' ಮಾಸಪತ್ರಿಕೆಯಲ್ಲಿ ಮತ್ತೊಮ್ಮೆ ಅಚ್ಚಾಯಿತು. ಆಗಲೇ ನಾನು 'ಭಾವಗೀತ' ಹೆಸರಿನಿಂದ, ಒಂದು ಭಕ್ತಿಗೀತ-ಕೀರ್ತನೆಗಳನ್ನು ಸಂಕಲಿಸಿ ಪುಸ್ತಕ ಪ್ರಕಟಿಸಿದ್ದೆನು. ಅದರಲ್ಲಿಯೂ ಈ ಕವಿತೆಯನ್ನು ಸೇರಿಸಲಾಗಿತ್ತು. ತರುವಾಯ ನೊನ್ನೆ ನೊನೆ ಪ್ರಕಟವಾದ 'ಕಾರಹುಣ್ಣಿವೆ' ಎಂಬ ನನ್ನ ಸ್ವಂತದ ಕವನಸಂಗ್ರಹದಲ್ಲಿಯೂ ಇದನ್ನು ತೆಗೆದುಕೊಂಡಿದ್ದೇನೆ. ಇನೂ ಒಂದು ಸಂಗತಿ: ನಾನು ಈ ಕವಿತೆಯನ್ನು ಬರೆದುದು ಆರು ಮಾತ್ರೆಯ ಗಣಗಳಲ್ಲಿ. ಆರುಮಾತ್ರೆಯ ಗಣಗಳಿಂದ ರಚಿತವಾದ ಗೀತ ರೂಪಕತಾಳದ ಗತಿಯಲ್ಲಿ ನಡೆಯುವುದೇ ಹೊರತು, ಏಳು ಮಾತ್ರೆಯ ಆಟತಾಳದಲ್ಲಿ ಅಲ್ಲ. ಇಲ್ಲಿ 'ತಾಳ: ಆಟ' ಎಂದು ಹಾಕಿದಾದೂ ಒಂದು ವಿಲಕ್ಷಣ ಸಂಗತಿಯೇ!"

ನನ್ನ ಮಾತನ್ನು ಕೇಳಿ ಡಾಕ್ಟರರು ನುಡಿದರು:

"ಆಶ್ಚರ್ಯಕರವಾದ ಪ್ರಮಾದವಿದು. ಈ ಪುಸ್ತಕವೆಂದರೆ ವಿಶ್ವವಿದ್ಯಾಲಯದ ಒಂದು ಉಚ್ಚಪದವಿಗಾಗಿ ಬರೆದ ಪ್ರಬಂಧ. ಬಹುಶ್ರುತರಾದ ವಿದ್ವಾಂಸರ ದಿಗ್ದರ್ಶನವನ್ನಿದು ಪಡೆದಿದೆ. ಅಲ್ಲದೆ ವಿಶ್ವವಿದ್ಯಾನಿಲಯದವರು ನಿಯಮಿಸಿದ ಪಂಡಿತರಿಂದ ಇದು ಪರೀಕ್ಷೆಗೊಳ್ಪಟ್ಟಿದೆ. ಎಲ್ಲರ ಕಣ್ಣುಗಳನ್ನೂ ತಪ್ಪಿಸಿ ಈ ಪ್ರಮಾದವು ಉಳಿದಿರುವುದೆಂದರೆ, ಇದೊಂದು ಅಚ್ಚರಿಯ ಸಂಗತಿಯೇ ಅಲ್ಲವೆ? ನಾನು ಲೇಖಕರಿಗೆ ಪತ್ರ ಬರೆದು ಈ ವಿಷಯ ತಿಳುಹುತ್ತೇನೆ!"

"ಸರಿ! ಹಾಗೇ ಮಾಡಿರಿ! ಸಂಶೋಧಕ ಪ್ರಬಂಧಗಳ ಸ್ಥಾನವನ್ನು ಹಿಡಿದು ನಿಲ್ಲಬಹುದಾದ ಗ್ರಂಥಗಳಲ್ಲಿ, ಈ ಬಗೆಯ ಅಭಾಸಗಳಿರುವುದು ಒಳ್ಳೆಯದಲ್ಲ!" ಎಂದು ಹೇಳಿ, ಆ ಪುಸ್ತಕವನ್ನು ಪೂರ್ಣವಾಗಿ ಓದಬೇಕೆಂಬ ಕುತೂಹಲದಿಂದ, ಡಾಕ್ಟರರನ್ನು ಕೇಳಿ ಪುಸ್ತಕವನ್ನು ಮನೆಗೆ ತೆಗೆದುಕೊಂಡು ಬಂದಿದ್ದೇನೆ. ನಾನೂ ಒಬ್ಬ ದಾಸಸಾಹಿತ್ಯದ ನಮ್ಮ ಅಭ್ಯಾಸಿ ಅವಶ್ಯಕವೆನಿಸಿದರೆ ಈ ಪುಸ್ತಕದ ಪೂರ್ಣ ವಿಮರ್ಶೆಯನ್ನೂ ಮಾಡಬೇಕೆಂದು ಅಪೇಕ್ಷೆಯಿದೆ. ಏಕೆಂದರೆ 'ಪಿಎಚ್. ಡಿ.' ಪದವಿ ಪಡೆದವರು ಬರೆದ ಗ್ರಂಥವಾದರೇನಾಯಿತು? ಅಂತಹವರಲ್ಲಿಯೂ ಎಂತೆಂತಹ ಅಭಾಸಗಳಿರುವುವೆಂಬುದು, ನನ್ನ ಜನರಿಗೆ ಅವಶ್ಯವಾಗಿ ಮನವರಿಕೆಯಾಗಬೇಕಾಗಿದೆ.



ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಬಿನ್ನವಿಸಿಕೊಂಡಂತೆ ' ಮಬ್ಬು ಹರಿಯಿತು ' ಕಥೆಯನ್ನು ವಿಮರ್ಶಿಸಿ ೧೦ ಜನರಿಂದಲೂ, ' ಶಿವ-ಪಾರ್ವತಿ ಕಥೆಯನ್ನು ವಿಮರ್ಶಿಸಿ ೬ ಜನರಿಂದಲೂ ಬರಿಹಗಳು ಬಂದಿವೆ ಈ ಸಲ ಹೆಚ್ಚು ಜನರು ಬರೆಯಲು ಮನಸ್ಸು ಮಾಡಿರುವುದು ಸಂತೋಷದ ಸಂಗತಿಯಾಗಿದೆ.

' ಮಬ್ಬು-ಹರಿಯಿತು ' ವಿಮರ್ಶಕರು :

೧ ' K ' ಹೈದರಾಬಾದ್, ೨ ಶ್ರೀ. ಎಚ್. ಆರ್. ಶಾಸ್ತ್ರಿ ಸೀನಿಯರ್ ಬಿ. ಎ., ನೈಝಾಮ್ ಕಾಲೇಜ, ಹೈದರಾಬಾದ್. ೩ ಶ್ರೀ. ಈಶ್ವರ ಕಾಸಸೆ, ಲೋಣಿ, ೪ ಶ್ರೀ. ಪಂ. ಜೆ. ಮಲ್ಲಾರಿಭಟ್ಟ, ಹೊಸಪೇಟೆ, ೫ ಶ್ರೀ. ಎಂ. ವಿ. ಮುಜುಮದಾರ, ರಾಷ್ಟ್ರಭಾಷಾರತ್ನ, ಧಾರವಾಡ, ೬ ಶ್ರೀ. ಜಿ. ಎಸ್. ಮಠಕರ ಎಂ. ಎ., ಬಿ. ಟಿ., ನಾಸಿಕ, ೭. ಶ್ರೀ. ಕೆ. ಎಸ್. ಶರ್ಮಾ, ' ವಾಣೀಮಂದಿರಂ ' ಕಾಸರಗೋಡು, ೮ ಶ್ರೀ. ಎಚ್. ಸೀತಾರಾಮರಾವ್, ಹೊಸಬಾಳೆ, ೯ ಶ್ರೀ. ವಾಸುದೇವ ರಾಣೆ, ಕೆನರಾ ಕಾಲೇಜು, ಕುಮಟಾ, ೧೦ ಶ್ರೀ. ಯು. ರಘೋನಾಥರಾವ್, ಮಂಗಳೂರು.

' ಶಿವ-ಪಾರ್ವತಿ ' ವಿಮರ್ಶಕರು:

೧ ಶ್ರೀಮತಿ ' ಕಲಾ ' ಮಲ್ಲೇಶ್ವರಂ, ಬೆಂಗಳೂರು, ೨ ಶ್ರೀ. ವಿ. ಜೆ. ಮಲ್ಲಾರಿಭಟ್ಟ, ಹೊಸಪೇಟೆ ೩ ಶ್ರೀ. ಈಶ್ವರ ಕಾಸಸೇ, ಲೋಣಿ, ೪ ಶ್ರೀ. ಬಿ. ಅಪ್ರಮೇಯ, ಕೋಟಾರ, ೫ ಶ್ರೀ. ಕೆ. ಎಸ್. ಶರ್ಮಾ, ' ವಾಣೀ-ಮಂದಿರಂ ' ಕಾಸರಗೋಡು. ೬ ಶ್ರೀ. ಎಂ. ಸುಬ್ಬರಾಯನ್, ಕ್ಯಾನರಾ ಹೈಸ್ಕೂಲ್, ಮಂಗಳೂರು.

ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಮಂಡಲಿಯವರೇ ಓದಿ ನಿರ್ಣಯ ಕೊಟ್ಟಿದ್ದಾರೆ. ' ಮಬ್ಬುಹರಿಯಿತು ' ಕಥೆಯ ವಿಮರ್ಶೆಗಳಲ್ಲಿ ಶ್ರೀ. ಎಚ್. ಆರ್. ಶಾಸ್ತ್ರಿ ಮತ್ತು ಶ್ರೀ. ಕೆ. ಎಸ್. ಶರ್ಮಾ ಅವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ. ಜಿ. ಎಸ್. ಮಠಕರ, ಶ್ರೀ. ಎಚ್. ಸೀತಾರಾಮರಾವ್ ಮತ್ತು ' K ' ಹೈದರಾಬಾದ್ ಅವರ ವಿಮರ್ಶೆಗಳು ಉತ್ತಮವಾಗಿವೆ. ಶ್ರೀ. ವಾಸುದೇವ ರಾಣೆ, ಶ್ರೀ. ಎಂ. ವಿ. ಮುಜುಮದಾರರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕುವೆಲ್ಲ ತೀರ ಸಾಮಾನ್ಯವಾಗಿವೆ.

' ಶಿವ-ಪಾರ್ವತಿ ' ಕಥೆಯ ವಿಮರ್ಶೆಗಳಲ್ಲಿ ಶ್ರೀಮತಿ ' ಕಲಾ ' ಮತ್ತು ಶ್ರೀ. ಕೆ. ಎಸ್. ಶರ್ಮಾ ಅವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ. ಎಂ. ಸುಬ್ರಾಯನ್ ಅವರದೂ ಒಳ್ಳೆಯ ವಿಮರ್ಶೆ. ಮಿಕ್ಕುವು ತೀರ ಸಾಮಾನ್ಯ.

ಮುಂದಿನ ಸಂಚಿಕೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ ' ಕಾಲಲ್ಲಿಯ ಮುಳ್ಳು ' ಎಂಬ ಸಣ್ಣ ಕತೆಯನ್ನಾಗಲಿ, ' ಪೂರ್ಣಾಹುತಿ ' ಎಂಬ ಐತಿಹಾಸಿಕ ರೂಪಕವನ್ನಾಗಲಿ ವಿಮರ್ಶಿಸಿ ಕಳುಹಬೇಕು. ಈ ವಿಭಾಗವನ್ನು ಮೆಚ್ಚಿ ಬೇರೆ ಬೇರೆ ಮಹಾಶಯ-ಮಹಿಳೆಯರಿಂದ ಪತ್ರಗಳು ಬಂದುದು, ನಮ್ಮಲ್ಲಿ ಹೊಸ ಹುರುಪನ್ನು ನೀಡಿದೆ. ಅವರಿಗೆಲ್ಲ ನಮ್ಮ ಆದರದ ವಂದನೆಗಳು.

—ಸಂಪಾದಕರು

ಮಬ್ಬು ಹರಿಯಿತು

(ಚಿಕ್ಕಕತೆಯ ವಿಮರ್ಶೆ)

ಶ್ರೀ. ಹೆಚ್. ಆರ್. ಶಾಸ್ತ್ರೀ, ಸುರಪುರ

●

ವ್ಯಕ್ತಿಜೀವನದಲ್ಲಿ ವಿವಾಹಿತ ಜೀವನವೊಂದು ಅತಿ ಮುಖ್ಯನಾದ ಹಂತ; ಅಲ್ಲಿ ಮನವು ಮನವನ್ನೊಲಿಯುತ್ತದೆ. ಒಳಗು ಒಳಗನ್ನರಳುತ್ತದೆ. ಅಲ್ಲಿ 'ಎರಡು' ಒಂದಾಗುತ್ತವೆ. ಅದೊಂದು ವಿಧದ ಅದ್ವೈತ ಯೋಗ. ಅದು ಕರಿ-ಬಿಳಿಗಳ ಕೂಟವೂ ಹೌದು. ಆದರೆ ಎರಡರ ಸಂಯೋಗದಿಂದ ಸುಮನೋಹರವಾದ ಸೂತ್ನ ಸುಜಾತ ವರ್ಣವಿಧಾನ. ಇದೆಷ್ಟರಮಟ್ಟಿಗೆ ನಿಜ? ಇವಕ್ಕೆ ಹೊರತಿಲ್ಲವೇ ಎಂದರೆ ಇದೆಯೆಂತಲೂ, ಹೇಳಬೇಕು. ಅನೇಕಸಲ ಕರಿದು ಕರಿದಾಗಿಯೇ, ಬಿಳಿದು ಬಿಳಿದಾಗಿಯೇ ಉಳಿಯುವುದಿಲ್ಲವೇ? ಆಗೇನು? ವಿಪರೀತ, ಅಸಹನೀಯ, ಅವೈಶ್ಯ ದೃಶ್ಯ! ತಿಳಿಗೂಟ ಕಲಕಿದಂತಾಗುತ್ತದೆ. ಇದರ ಪರಿಣಾಮ! ಬಾಳೇ ಎರವಾಗುತ್ತದೆ. ಇಲ್ಲಿದೆ ವ್ಯಕ್ತಿಯ ಹಿರಿಮೆ. ಅಂತಹ ಕೌಶಲ್ಯ ಪ್ರಕಾಶನಕ್ಕೆ ಅವಕಾಶವೀಗ ದೊರಕುತ್ತದೆ. ಅತ ಸಹೃದಯನಾಗಬೇಕು. ಸಂಕುಚಿತತೆಯನ್ನು ತೊರೆದ ಕಲಾವಿದನಂತಾಗಬೇಕು. ವಿಶಾಲವಾದ, ಸೂಕ್ಷ್ಮ ವಿವೇಚನಾಶಕ್ತಿಯಿಂದ ದರಿಗೆ ಜಾರದ ಶೈ ಹೆಜ್ಜೆಯಿಡಬೇಕು. ವೈವಿಧ್ಯದಲ್ಲಿಯೆ ಏಕತೆಯನ್ನರಸಬೇಕು. ಆಗ ಜೀವಿತವದು ಸೌಂದರ್ಯಮಯವಾಗುತ್ತದೆ; ರಸ ಹೊಮ್ಮುತ್ತದೆ ಹಾಗಾಗದಿದ್ದರೆ ಅಸೌಂದರ್ಯದ ಬಾಳು ರೌದ್ರದುರಂತವಾದೀತು; ವಿರಸ, ಮ ರಣಗಳಿಗೆಡೆಮಾಡೀತು.

ಪ್ರಸ್ತುತ ಕಥೆಯನ್ನು ಈ ಹಿನ್ನೆಲೆಯಲ್ಲಿ ತೂಗಿ ನೋಡಬೇಕಾಗಿದೆ. ಅದಕ್ಕಾಗಿ ನಮ್ಮ ಕಥಾನಾಯಕನನ್ನು ಪೂರ್ವೋಕ್ತ ಕುಶಲಜೀವನ ವಿಧಾನಕ್ಕೆ ಒರೆ ಹಚ್ಚಬೇಕು. ಅತನ ಬಾಳೆಂತಹುದು? ಅತನ ಯೋಗ್ಯತೆಯೆಷ್ಟು? ಹೃದಯವೆಂತಹುದು?..... ...

ಹೊರಟಿದ್ದಾನೆ ಹುಣ್ಣಿಮೆಯ ನಡುರಾತ್ರಿಯಲ್ಲಿ ಮನೆಬಿಟ್ಟು. ಎಷ್ಟು ಹುಡುಕುವುದೊಂದು ನೆವವಾಗಿದೆ; ನೆವಮಾತ್ರ. ಹೃದಯದಲ್ಲಿ ತುಮುಲ ನಡೆದಿದೆ. ಕಾರಣ? ಹೆಂಡತಿಯೊಡನೆ ಕಲಹ. ನಾಲ್ಕು ದಿವಸಗಳಿಂದ ಇಬ್ಬರಿಗೂ ಮಾತಿಲ್ಲವಂತೆ. ಅವಳೂ ಮಾತನಾಡಿಸಿಲ್ಲ; ಇವನೂ ಮಾತನಾಡಿಲ್ಲ. ಹೇಗೆ ಆಡಬೇಕು ಪಾಪ! ಹೆಂಗುಸಾದ ಅವಳಿಗೆ ಇಷ್ಟು ಸಿಟ್ಟು? ಇಷ್ಟು ಸೆಡವೆ? ಅದಕ್ಕೆ ಕಾರಣವಾದರೂ ಏನು? ಜಾತ್ರೆಗೆ ಹೋಗಲು ಗಂಡ ಹಣವಿಲ್ಲದೆ ಕೊರಗಿದಾಗ, ಹೆಂಡತಿ ಕಾದಿಟ್ಟಿದ್ದ ದುಡ್ಡನ್ನು ತಂದುಕೊಟ್ಟಳು. ಪ್ರತಿಫಲವಾಗಿ ಪ್ರೀತಿಯಿಂದ ಎರಡಾಣೆಯ ಸುರಗಿಯ ಹೂವನ್ನು ಕೇಳಿದಳು. ಗಂಡ ತರಲಿಲ್ಲ. ವಿರಸವಾಯಿತು. ತಪ್ಪಾರದು? ಕಳ್ಳತನದಿಂದ ಕಳ್ಳು ಕುಡಿಯಲು ಯತ್ನಿಸಿ ಪೋಲೀಸಿನವರಿಗೆ ಇದ್ದ ಹಣವನ್ನೆಲ್ಲ ತೆತ್ತು 'ನುರೆತೇ ಹೋಯಿತು' ಎಂದು ಮುಗ್ಧ ಪತ್ನಿಯೆದುರು ಸುಳ್ಳಾಡಿದ ಗಂಡನ ತಪ್ಪೊ? ದುಡ್ಡಿಗೆ ದುಡ್ಡು ಕೂಡಿಟ್ಟು, ಗಂಡ ದುಡ್ಡಿಲ್ಲದೆ ಅಸಹಾಯ. ನಾದಾಗ ಎಲ್ಲವನ್ನೂ ಅತನಿಗೆ ನಿರ್ವಂಚನೆಯಿಂದ, ತುಂಬಿದೆದೆಯಿಂದ, ನಗುನಗುತ್ತ ತಂದುಕೊಟ್ಟು, ಎರಡಾಣೆಯ ಹೂವನ್ನು ಬಯಸಿ, ಬಯಕೆ ಈಡೇರಿಸುವ ಪ್ರೇಮದ ಗಂಡನಿಗಾಗಿ ಕಾತರಳಾಗಿದ್ದಾಗ, ಅತ ಅವಳಿಗೆ ಮೋಸ ಮಾಡಿದರೆ, ಅದಕ್ಕೆ ಅವಳು ಸಿಟ್ಟಾದರೆ ಅದು ಅವಳ ತಪ್ಪೊ? ತಪ್ಪಿಸ್ಥ ತಾನೆಂಬುದರ ಅರಿವಾಗಲೊಲ್ಲದು ಗಂಡನಿಗೆ. ತಿದ್ದಿಕೊಳ್ಳಬೇಕಾದವನು ತಾನೆಂಬುದನ್ನೊಪ್ಪುತ್ತಿಲ್ಲ ಮನಸ್ಸು. ಏಕೆ? ತಾನು ಗಂಡುಸಲ್ಲವೆ? ಬೆಳಗಿನಿಂದ ಬೈಗಿನವರೆಗೂ ದುಡಿಯುವವ. ನಲ್ಲವೆ? ಹಮ್ಮು-ಬಿಮ್ಮುಗಳು ತನಗಿರಬೇಕು. ಸಿಟ್ಟಾಗುವ ಛಲ ಹೆಣ್ಣಾದ ಅವಳಿಗೇಕೆ?

"ಅವಳದೇ ಎಲ್ಲ ತಪ್ಪು!"

"ಆಬ್ಬಾ, ಎಷ್ಟು ಹಮ್ಮು, ಎಷ್ಟು ಸೊಕ್ಕು?"

"ನನ್ನೊಡನೆ ಛಲಕ್ಕೆ ನಿಲ್ಲುತ್ತಾಳಾ?"

"ಸೋತು ಕಾಲಿಗೆ ಬಿದ್ದು ಬೇಡುತ್ತಾನೆ ಎಂದುಕೊಂಡಿದ್ದಾಳಾ?"

"ಎಷ್ಟು ಕಾಲ ಹೀಗೆ ಛಲ ಸಾಧಿಸುತ್ತಾಳೋ ನೋಡೇ ಬಿಡ್ತೀನೆ—ವಾರವೊ? ತಿಂಗಳೋ? ವರ್ಷವೊ?"

"ಅವಳಾಗಿಯೇ ಮಾತನಾಡಿಸಿಕೊಂಡು ಬರುವವರೆಗೂ ನಾನಾಗಿ ಮಾತನಾಡಿಸುವುದಿಲ್ಲ."

"ಸರಿಯಾಗಿ ಬುದ್ಧಿ ಕಲಿಸಿಬಿಡುತ್ತೀನಿ ಈ ಸಲ—ಮತ್ತೆಂದೂ ಈ ರೀತಿ ಹಟಮಾಡದಂತೆ".....

ಇದು ಅತನ ವಾದಪರಂಪರೆ ಹೋಗಲಿ. ಅತನ ಮೊಂಡು ತನವನ್ನೆ ಸಮರ್ಥಿಸಿದರೆ, ಹೆಂಡತಿ ತಿದ್ದಿಕೊಂಡಾಗಲೂ ತಾನೇಕೆ ಹಟವನ್ನು ಬಿಡಬಾರದು?

"ಬಾಗಿಲಲ್ಲೆ ನಿಂತು ನೀರ್ಗಣ್ಣುಗಳಿಂದ ನನ್ನತ್ತಲೇ ನೋಡುತ್ತಿದ್ದಳು" ಲಚ್ಚಿ.

"ದುಗುಡ ತುಂಬಿದ ಅವಳ ಮುಖ ಮೌನವಾಗಿ ಹೇಳುವಂತಿತ್ತು: ಬೇಡ ಬೇಡ. ಈ ದಿನ ಹುಣ್ಣಿಮೆ. ಈಗ ಸರಿರಾತ್ರಿ. ಹೋಗಬೇಡಿ!" ಎಂದರೆ ಏನದರರ್ಥ? ತಪ್ಪು ತನ್ನದಲ್ಲದಿದ್ದರೂ ಪಶ್ಚಾತ್ತಾಪದ ಒಪ್ಪಲ್ಲನೇ ಇದು? ಇದೊಂದರ ವಿವೇಚನೆಯೂ ಗಂಡನಿಗಿಲ್ಲ. ಅತನಿಗೊಂದೇ ಹಟ—ಅವಳೇ ಬಂದು ಕೈಕಾಲು ಬೀಳುವವರೆಗೂ ಸರಿಯಬಾರದೆನ್ನುವ ಮೊಂಡು. ಇದೇ ಹಟದ ಸಾಧನೆಯಲ್ಲಿ, ಇದೇ ತಾಪಕೂಪದಲ್ಲಾತ ಕೊನೆಯವರೆಗೂ ಜಿದ್ದಿದ್ದರೆ ಜೀವನಸಮ್ಯ ಮಾತ್ರವೆ ನಿತ್ಯಮೂಟವಾಗುತ್ತಿತ್ತು. ಆದರೆ ಮುಂದೆ ಅತನ ಕಣ್ಣೆರೆಯಿಸುವ ಘಟನೆಯೊಂದು ನಡೆಯುತ್ತದೆ ಕಲೆಯ ಕೆಲಸ ಯಲ್ಲಿ. ಅವಿದ್ಧಜೀವಿತವೊಂದರ ಪುನರಾವೃತ್ತಿಯಿದು. ದುರಂತಜೀವನಕ್ಕೆ ಬಲಿಯಾದ ವಾಸನಾಮಯ ಪಿಶಾಚಿಗಳೆರಡರ ಕಲಹವಮಯ ನಾಟಕ.

ಹೊಸದಾಗಿ ಮದುವೆಯಾದ ಸಿದ್ದಪ್ಪ-ಪದುಮಿಯರ ಪರಸ್ಪರ ವೈಮನಸ್ಯ; ಪರಿಸ್ಥಿತಿ ವಿಕೋಪಕ್ಕೆ ಹೋಗಿ ಪದುಮಿ ಆತ್ಮಹತ್ಯೆಯನ್ನು

ಮಾಡಿಕೊಂಡದ್ದು; ಕೊನೆಗೆ ಸಿದ್ದಪ್ಪನೂ ಮೃತನಾದದ್ದು—ಇಷ್ಟು ಅವರ ವಾಸ್ತವಿಕ ಜೀವನೇತಿಹಾಸವಾದರೆ, ಅದನ್ನೇ ಸಿದ್ದಪ್ಪ–ಪದುಮಿಯರ ಪೈಶಾಚ್ಯಜೀವನದಲ್ಲಿ ಮತ್ತೆ ಕಂಡು ಎಚ್ಚರ ಹೊಂದುತ್ತಾನೆ ಈ ಕಥಾನಾಯಕ. ಅವರ ಕಲಹ ತಮ್ಮ ಕಲಹಕ್ಕೆ ಕನ್ನಡಿಯಾಗಿದೆ. ಅಲ್ಲೂ ಗಂಡಿನ ಬಿಂಕ, ಹಟ; ಇಲ್ಲೂ ಅದೇ. ಅದೂ ಸಹಜ ದಾಂಪತ್ಯವಿರಸ; ತಮ್ಮದೂ ಅದೇ. ಅಲ್ಲ ವಿರಸಮರಣದಲ್ಲಿ ದುರಂತವಾದರೆ ಇಲ್ಲಿ? ತನ್ನ ಛಲವೂ, ಸೆಡವೂ ಜೀವನ ದುರಂತಕ್ಕೆ ಕೆಡೆದೊಯ್ದರೆ? ಮೈ ಬೆವರಿಡುತ್ತದೆ. ಎದೆ ಡವ ಡವ ಹೊಡೆದುಕೊಳ್ಳುತ್ತದೆ. 'ಮಬ್ಬು ಹರಿಯುತ್ತದೆ.' ವಿನೇಕ ವಿರಸದ ನಿಜವಾದ ಕಾರಣವನ್ನು ಹುಡುಕಿದರೆ ಉತ್ತರ ಬರುತ್ತದೆ: ತಪ್ಪು ತನ್ನದೆಂದು; ಲಚ್ಚಿ ನಿರಪರಾಧಿಯೆಂದು.

"ಪಾಪ! ಸುಳ್ಳು ಹೇಳಬಾರದು. ಲಚ್ಚಿ ಎಂದೂ ಹಟಮಾಡಿದವಳಲ್ಲ. ಬಹಳ ಸಭ್ಯ ಗುಣದವಳು. ಶಾಂತಮೂರ್ತಿ....." ಅದರೀಗ ನಾಲ್ಕು ದಿವಸಗಳಿಂದ ಲಚ್ಚಿಯೊಡನೆ ಮಾತಿಲ್ಲ. ನೊಂದ ಅವಳೂ ಪದುಮಿಯಂತೆ ಆತ್ಮಹತ್ಯೆ ಮಾಡಿಕೊಂಡರೆ?

"ನನ್ನದೂ ತಪ್ಪಲ್ಲವೆ? ಎರಡಾಣೆಯ ಸುರಗಿಯ ಹೂವು ತಾರದ ಮೇಲೆ"

"ಪಾಪ ಹೆಂಡತಿ ತನ್ನ ಆಶೆಯನ್ನು ಗಂಡನ ಕೈಲಲ್ಲದೆ ಬೇರಾರೊಡನೆ ಹೇಳಿಕೊಳ್ಳಬೇಕು? ಲಚ್ಚಿಯದು ತಪ್ಪೆ? "ನಾನಲ್ಲವೆ ಮೂರ್ಖ! ಮುಟ್ಠಾಳ!! ಅವಳು ಕೊಟ್ಟ ಹಣಾನ ಅಪವ್ಯಯ ಮಾಡಿ ತಪ್ಪು ಮರೆಸಿಕೊಳ್ಳಲು ಅವಳ ಮೇಲೆ ರೇಗಿದೆನಲ್ಲ!"

ಈಗಲೀಗಿದು ಪಶ್ಚಾತ್ತಾಪ; ವಿನೇಕ, ವಿಚಾರಶೀಲತೆ. ವಿರಸದಲ್ಲಿ ರಸ ಬೆರಸುವ ಕೌಶಲ್ಯ. ಅಸೌಂದರ್ಯವನ್ನು ಸೌಂದರ್ಯಮಯವನ್ನಾಗಿ ಮಾಡುವ ಹಿರಿಮೆ.

ಲಚ್ಚಿ ಬದುಕಿದ್ದರೆ ಸಾಕೆಂದು ಜೀವ ಮನೆಗೋಡುತ್ತದೆ. ಆತನಿಗೆ ಗೊತ್ತು, ಅವಳ ವಿನಾ ತನಗೆ ಜೀವನವಿಲ್ಲೆಂದು. ಲಚ್ಚಿ ಬಚ್ಚಲುಮನೆಯಲ್ಲಿ ಒಲೆ ಹೊತ್ತಿಸಲು ಹೋಗಿ ಕಣ್ಮುಚ್ಚಿ ಕುಳಿತಿದ್ದಾಳೆ. ಹೃದಯ ಕರಗುತ್ತದೆ. "ಪಾಪ, ಎಷ್ಟು ವೇದನೆಯೋ ಅವಳಿಗೆ!" ಒಳಗೆ ಹೋಗುತ್ತಾನೆ. ಲಚ್ಚಿ ಗಂಡನ ಎದೆಯ ಮೇಲೊರಗಿ ಕಣ್ಣೀರ ಕೋಡಿ ಹರಿಸುತ್ತಾಳೆ. ನಾಲ್ಕು ದಿವಸಗಳಿಂದ ದೂರವಾದ ಹೃದಯಗಳೆರಡು ಒಂದಾಗುತ್ತವೆ.

× × ×

ಇಂತಿದು ಕಥಾವಸ್ತುವಾದರೆ ಅದನ್ನು ವಿಧಾನಿಸಿದ ರೀತಿ? ನಾಯಕನ ಸ್ವಭಾವಕ್ಕೆ ಎರಡು ಮುಖಗಳಿವೆ. ಮನೆಯನ್ನು ಬಿಟ್ಟು ಹೊರಬಾಗಿನಿಂದ ಕೆರೆಯ ಬಳಿ ನಡೆಯುವ ಘಟನೆಯ ಉತ್ಪತ್ತಿಯ ವರೆಗೆ ಅತನ ಮನಸ್ಸಿನಲ್ಲಿ ನಡೆಯುವ ಸ್ವಸಮರ್ಥನೆ, ಗಂಡಿನ ಹಮ್ಮು ಬಿಮ್ಮುಗಳ ಊರ್ಧ್ವ ಸ್ಥಿತಿಯೊಂದು; ಆ ಮೇಲೆ ಇದು ಅಧೋಮುಖವಾಗಿ ಹಟವನ್ನು ಬಿಟ್ಟುಕೊಟ್ಟ ಯಥಾಸ್ಥಿತಿಯೊಂದು. ಪೊದೆಯಿನ ಈ ಛಲದ ಸ್ವಸಮರ್ಥನೆ, ಆ ಮೇಲಿನ ಕ್ರಮವಾದ ತಿಳಿವಿನ ಚಿತ್ರ ಸ್ವಾಗತಾರ್ಹವಾಗಿವೆ. ಮೊದಮೊದಲು ಪದುಮಿ-ಸಿದ್ದಪ್ಪರ ಕಲಹವನ್ನು ನೋಡಿ "ಹೀಗೇ ಆಗಬೇಕು ಇವಳಿಗೆ, ಗಂಡನೊಡನೆ ಏಕೆ ಸೆಣಸಾಟಕ್ಕೆ ಹೋದಳು?" ಎಂದು ಆಕೆಯನ್ನು ಲಚ್ಚಿಯಂತೆ ಕಂಡರೂ, ಕೊನೆಗೆ ಅವಳ ಮುಖದಿಂದಲೇ ಅವಳ ಕಥೆಯನ್ನು ಕೇಳಿ "ಆ ಗಂಡನ ಹಟ ನನ್ನ ಲಚ್ಚಿಯ ಹಟದಂತೆಯೇ ಇರಬೇಕು!" ಎಂದು ಗಂಡಿನಲ್ಲಿ ದೋಷವನ್ನು ಕಂಡಾಗ, ಅವನಿಗರಿವಾಗದಂತೆ ಅವನ ಸ್ವಭಾವದಲ್ಲಿ ಪರಿವರ್ತನೆಯಾಗಿದೆ. ಪದುಮಿ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದಾಗ 'ಹೆಣ್ಣು ತೊರೆದುಕೊಂಡರೆ ಅವಳಿಗೆ ಯಾವುದು ಅಸಾಧ್ಯ? ಹೆಣ್ಣು ಕೋಪ ತಾಪ ಮೀರಿದಾಗ ತನ್ನನ್ನೇ ಬಲಿ ಕೊಟ್ಟುಕೊಳ್ಳುವುದು ಸಾಮಾನ್ಯ' ಎಂದು ಸ್ತ್ರೀಯ ಜೀವಿತವನ್ನರ್ಥ ಮಾಡಿಕೊಳ್ಳುತ್ತಾನೆ. ಆತನ ಈ ಸ್ವಭಾವಚಿತ್ರ ಕ್ರಮೇಣವಾಗಿ, ಎಚ್ಚರಿಕೆಯಿಂದ—ಹೆಜ್ಜೆಯೂದ ಮೇಲೆ—ಇಟ್ಟ ಹೆಜ್ಜೆಯಾಗಿದೆ. ಅದನ್ನು ನಾವು ಮತ್ತೆ, ಮತ್ತೆ ಹೊಗಳದಿರಿವು.

ಲಚ್ಚಿಯ ಚಿತ್ರವೂ ಇದೇ ಎಚ್ಚರಿಕೆಯಿಂದ ಮಾಡಿದ ಕಾರ್ಯವಾಗಿದೆ ಪ್ರಾರಂಭದಲ್ಲಿ ಅವಳು ಮೌನವಾಗಿ ನೀರ್ಗಣ್ಣುಗಳಿಂದ ಗಂಡನನ್ನು ನೋಡಿ, ಹುಣ್ಣಿಮೆಯ ರಾತ್ರಿ ಹೊರಗೆ ಹೋಗಬೇಡಿ—ಹಿಂದೆ ಹೇಳುವಂತೆನ್ನುವುದು ಯೋಗ್ಯವಾಗಿದೆ. ಹಾಗೇ ಕೊನೆಯಲ್ಲೂ ಆಕೆಯ ಪಾತ್ರ ಸಮಂಜಸವಾಗಿದೆ. ಅವಳು ಸಹನೆಯ ಮೂರ್ತಿ. ಸ್ತ್ರೀಸಹಜವಾದ ಸಿಟ್ಟು, ಅಭಿಮಾನಗಳಿದ್ದರೂ, ಅವಳೇ ಕೊನೆಗೆ ಸ್ತ್ರೀಸಹಜವಾದ ತಾಳ್ಮೆಯಿಂದ ಗೆದ್ದವಳು. ನಮ್ಮ ಸಹಾನುಭೂತಿಯ ಬಹುಪಾಲು ಅವಳಿಗೇ ಮೀಸಲು.

ಇಷ್ಟಾದರೂ ಹಿಂದೆರಡು ವಿಷಯಗಳಲ್ಲಿ ಕಥೆ ನಮ್ಮ ಸೂಕ್ಷ್ಮ ದೃಷ್ಟಿಗೆ ಸಿಕ್ಕದೆ ಇಲ್ಲ. ಅದೆಂದರೆ ಹಿನ್ನೆಲೆಯನ್ನು ಹೇಳುವ ವಿಧಾನದಲ್ಲಿ ಅಷ್ಟು ಸಮಂಜಸತೆಯಿಲ್ಲದಿದ್ದುದು. 'ಬೆಳದಿಂಗಳು ಬೆಳ್ಳಗೆ ಹರಡಿತ್ತು. ಅಳ್ಳಾ! ಬಾಗಿಲು ಹಾಕಿಕೋ, ಎತ್ತು ಎಲ್ಲಿದೆಯೋ ಹುಡುಕಿಕೊಂಡು ಬರುತ್ತೇನೆ.' ಎನ್ನುವ ಪ್ರಾರಂಭ ಶಿಥಿಲವಾಗಿ ಕಾಣುತ್ತದೆ ಸಮಸ್ತುವಿಗೆ ತಕ್ಕಂತೆ ಉಪಕ್ರಮವಿಲ್ಲ. ತಕ್ಕಷ್ಟು ಪುಷ್ಟಿ ಅಡಕ್ಕೆ ದೊರೆತಿಲ್ಲವೆನ್ನಬೇಕು. ಕಥೆಯಲ್ಲಿ ಪ್ರಾರಂಭ,–ಅಂತ್ಯಗಳಿಗೆ ಅತಿ ಮುಖ್ಯವಾದ ಸ್ಥಾನವಿದೆ. ಇಡಿಯ ಕಥೆಯ ಭಾವದ ತೂಕಕ್ಕೆ ಅವು ಸಂದೂಗಬೇಕು. ಅವರ ಆಳ ಈ ಅದ್ಯಂತ್ಯವಾಕ್ಯಗಳ ಅಂತರ್ಯದಲ್ಲಿ ಮಿಡಿಯುತ್ತಿರಬೇಕು. ಅದೀಗ ಸಮತೋಲದ ಒಂದು ರಹಸ್ಯ. ನಾವೆನ್ನುವುದರ ಅರ್ಥವಿಷ್ಟು: ಮುಖ್ಯವಾದೆಡೆಗಳಲ್ಲಿ, ವಾಕ್ಯರಚನೆ, ಸನ್ನಿವೇಶ ಚಿತ್ರಣ ವ್ಯರ್ಥವಾಗಿರದೆ ಪ್ರಸಂಗೋಚಿತವಾಗಿ, ಅರ್ಥಪೂರ್ಣವಾಗಿ, ಭಾವ ತುಂಬಿಕೊಂಡಿರಬೇಕು. ಆಗ ಕಥೆಯದು ಹೃದ್ಯವಾಗುತ್ತದೆ.

ಪ್ರಸ್ತುತದಲ್ಲಿ ಪ್ರಾರಂಭವನ್ನು ಬಿಟ್ಟರೆ ಮುಂದಿನ ಚಿತ್ರ ನೈಜವಾಗಿದೆ. ಆಮೇಲಿನ ಕೆರೆಯ ಬಳಿಯ ಘಟನೆಯಲ್ಲಿ ಒಂದು ಸಮಂಜಸತೆಯಿದೆ. ಅದೆಂದರೆ ಪದುಮಿ, ಸಿದ್ದಪ್ಪರ ವಾಸನಾಮಯ ಅಶಾಮಯ ಪಿಶಾಚಜೀವನ. ಬಾಳ ನೆಲ್ಲಿನ ತಾಪ ಅವರನ್ನು ಪಿಶಾಚಿತಿಗಳನ್ನಾಗಿ ಮಾಡಿ ಕಾಡುತ್ತದೆ. ಇದು ಜೀವನವುರಂತತೆಯು ಕೊನೆಯಿಲ್ಲದ ರೌದ್ರ ಪರಿಣಾಮ. ಇವೇ ನಮ್ಮ ಕಥಾನಾಯಕನ ಮನಸ್ಸಿನ ಬದಲಾವಣೆಗೆ ಕಾರಣವಾದುದು. ಆದರೆ ಸ್ವಲ್ಪ ಒಳಹೊಕ್ಕರೆ,

ಈ ಚಿತ್ರದಲ್ಲೂ ಏನೋ ಒಂದು ಕುಂದಿರುವುದು ಗೋಚರವಾಗದಿರದು. ನೋಡುವ ಕಣ್ಣಿದು ವಿಜ್ಞಾನಿಯದೆಂದರ್ಥವಲ್ಲ. ಮುಕ್ತಕಲ್ಪನೆಯ ಸಾಹಿತಿಯ ಕಣ್ಣಿಗೇ ಅದು ಹಾಗಾಗದಿರದು. ಇಷ್ಟಲ್ಲದೆ ನಮ್ಮ ವಾದ ಅದರ ಸತ್ಯಾಸತ್ಯತೆಯಲ್ಲ; ಅದರಲ್ಲಿ ಎಷ್ಟು 'ಶಕ್ತಿ' ಇದೆ. ಎಂಬುದು. ಅದರ 'ಭಾರ' ಎಷ್ಟೆಂಬುದು. (ಈ ಎರಡೂ ಪದಗಳ ಪೂರ್ಣಾರ್ಥದ ಪೂರ್ಣಪ್ರಯೋಜನವನ್ನು ಪಡೆದರೆ ಮಾತ್ರ ನಾವೆನ್ನುವುದರ ಅರ್ಥವಾದೀತು.) ಈ ದೃಷ್ಟಿಯಿಂದ ಅದಷ್ಟು ಯಶಸ್ವಿಯಾಗಿಲ್ಲ. ಅಲ್ಲದೆ ಆ ಇಡಿಯ ಚಿತ್ರವೇ ನಮಗೊಪ್ಪಿಗೆಯಾಗುತ್ತಿಲ್ಲ. ಬುದ್ಧಿಯ ಹಿಡಿತಕ್ಕೆ ಸಿಕ್ಕದಿದ್ದರೂ ಹೃದಯಕ್ಕದು ಸಮಂಜಸವಾದ ಉತ್ತರವನ್ನು ಕೊಡುತ್ತಿಲ್ಲ. ಇಲ್ಲೇನೋ ಒಂದು ಕೃತಕತೆಯಿದ್ದಂತೆ ಕಾಣುತ್ತದೆ.

ಮುಂದಿನ ಭಾಗ ಮಾತ್ರ ಸೊಗಸಾಗಿದೆ. ಇಲ್ಲಿ ಲಚ್ಚಿಯೊಡನೆ ವಿರಸಕ್ಕೆ ಕಾರಣವನ್ನು ಹೇಳಿದ್ದು ಎಚ್ಚರಿಕೆಯಿಂದ ಇಟ್ಟ ಹೆಜ್ಜೆಯಾಗಿದೆ. ಹಾಗೆ ಮಾಡದೇ, ಕೇವಲ ಮನಃಪರಿವರ್ತನೆಯನ್ನು ಹೇಳಿ ಇಬ್ಬರೂ ಕೂಡುವಂತೆ ಮಾಡಿದ್ದರೆ, ದೋಷ ಎನ್ನುಕಾಣಿತ್ತಿತ್ತೆಂದು ಬೇರೆ ಹೇಳಬೇಕಿಲ್ಲ. ಇಲ್ಲಿ ಆಕನಿಗೂ ನವುಗೂ ಉತ್ಕಂಠತೆಯುಂಟಾಗುವಂತೆ ಬರೆಹವಿದೆ. ಅಕ್ಕನನ್ನು ಕೇಳಿದಾಗ, ಲಚ್ಚಿ ಬಚ್ಚಲುಮನೆಗೆ ಒಲೆ ಹೊತ್ತಿಸಲು ಹೋಗಿದ್ದಾಳೆನ್ನುವುದು ಎಲ್ಲರ ಕುತೂಹಲವನ್ನೂ ಕೆರಳಿಸುತ್ತದೆ. ಇಬ್ಬರ ಮಿಲನವಾದಮೇಲೆ ಲಚ್ಚಿಯ ಹಿತನಿತವಾದ ಒಂದೇ ಒಂದಾದ "ನನ್ನ ಮೇಲಿನ ಸಿಟ್ಟಿನಿಂದ ಫಡುರಾತ್ರಿ ಮನೆ ಬಿಟ್ಟು ಹೋದಿರಾ? ನಿಮಗೆ ಅಷ್ಟು ಬೇಡವಾದರೆ ಹೇಳಿ.....ಖಂಡಿತಾ ಹೇಳಿ; ಶಿವನ ಪಾದ ಸೇರಿಕೊಳ್ಳುತ್ತೇನೆ" ಎನ್ನುವ ಮಾತು ತುಂಬ ಸಮಂಜಸವಾಗಿದೆ. ಅದೊಂದೇ ಸಾಕು ಅವಳ ಇಡಿಯ ವ್ಯಕ್ತಿತ್ವವನ್ನರ್ಥಮಾಡಿಕೊಳ್ಳುವುದಕ್ಕೆ. ಅದಕ್ಕೆ ಗಂಡನ ಮಾತೂ, "ಅವಳ ಕಣ್ಣಿನ ಪವಿತ್ರಗಂಗೆ ನನ್ನನ್ನೆ ಯೊಲವಿನ ಮಾಲಿನ್ಯವನ್ನೆಲ್ಲ ತೊಳೆದಿತ್ತು" ಎನ್ನುವ ಅಂಕ್ಯವಾಕ್ಯವೂ ಹೃದ್ಯವಾಗಿವೆ. ಇವುಗಳಲ್ಲಿ ಇಡಿಯ ಕಥೆಯ ಅಂತರ್ಗತ ಮಿಡಿಯುತ್ತಿದೆ. ಪ್ರಾರಂಭದ ದೋಷ ಇಲ್ಲಿ ಉತ್ತಮಗುಣವಾಗಿದೆ ಅಂತೂ ಕಥೆಯಿದು ಎಡವಿ ಮತ್ತೆ ಎದ್ದುನಿಲ್ಲುತ್ತದೆ.

ಒಟ್ಟಾಗಿ ಹೇಳಬೇಕಾದರೆ; ಜೀವನಸತ್ಯವಾದ ದುರಂತಸಮಸ್ಯೆಯೊಂದನ್ನು ಚಿತ್ರಿಸಿ ಅಷ್ಟಕ್ಕೆ ಬಿಡದೆ, ಅದಕ್ಕೆ ಉತ್ತರವನ್ನೂ ಕೊಟ್ಟು ಅದನ್ನು ಸುಖಾಂತವಾಗಿ ಮಾಡುವ ಜೀವಸರಹಸ್ಯವನ್ನು ಹೇಳಿದ ಕಥೆಯಿದಾಗಿದೆ. ಸಮಸ್ಯೆ ಹೊಸತಲ್ಲವಾದರೂ ಹೇಳುವ ವಿಧಾನ ಹೊಸತಾಗಿದೆ. ಆದರೆ ಈ ಹೊಸತೇ ನಮಗಷ್ಟು ಒಪ್ಪಿಗೆಯಾಗಲಿಲ್ಲ ಎನ್ನುತ್ತೇವೆ. ಅದರ ಅಂತರ್ಯದಲ್ಲಿ ಒಂದು ಕೃತಕತೆಯಿದ್ದು ಅದು ನಮ್ಮ ಕಣ್ಣನ್ನು ತಪ್ಪಿಸಿಕೊಳ್ಳಲಾರದಂತಿದೆ. ಆದ್ದರಿಂದ ಕಥೆಯಿದು ಪರಿಣಾಮಕಾರಿಯಾಗಿಲ್ಲವೆಂದಾದಬೇಕು. ಕೊನೆಯದಾಗಿ ಇಷ್ಟಕ್ಕೆ ಬುದ್ಧಿ,–ಹೃದಯಗಳೆರಡರ ಮೇಲೂ ಮುದ್ರೆಯೊತ್ತುವ ಶಕ್ತಿಯಿಲ್ಲವೆಂದು ಹೇಳಿ ಮುಗಿಸುತ್ತೇವೆ.

'ಶಿವ–ಪಾರ್ವತಿ'

(ಕಥೆಯ ವಿಮರ್ಶೆ)

ಶ್ರೀಮತಿ "ಕಲಾ" ಬೆಂಗಳೂರು

"ಶಿವ–ಪಾರ್ವತಿ"....! ಕಥೆ ಪುರಾಣಕ್ಕೆ ಸಂಬಂಧಿಸಿದ್ದೋ, ಸಾಮಾಜಿಕವೆ, ಐತಿಹಾಸಿಕವೇ? ಶೀರ್ಷಿಕೆಯನ್ನು ಓದಿದೊಡನೆಯೇ ನಿರ್ಧರಿಸುವುದು ಕಷ್ಟ. ಆದರೆ ಕಥೆಯನ್ನು ಓದಲು ಶುರುಮಾಡಿದ ಮೂರೇ ಕ್ಷಣದಲ್ಲಿ, ಅದರಲ್ಲೇ ಲೀನರಾಗುತ್ತೇವೆ. ಈ ತರದ, ಎಂದರೆ–ಜಾನಪದ ಕಥೆಗಳನ್ನು ಬರೆಯುವಾಗ, ನಮಗೆ ಮುಖ್ಯವಾಗಿ ಬೇಕಾದ್ದು ಅದನ್ನು ಹೇಳುವ ರೀತಿ. ನೀರಸವಾಗಿ, ಯಾವಾಗಲೋ, ಯಾವುದೋ ವಿಷಯವನ್ನು ಎಲ್ಲೋ ಪ್ರಸ್ತಾಪಿಸಿ, ಮತ್ತಾವಾಗಲೋ ಕಾರಣವನ್ನು ಶೋಧಿಸಿದರೆ, ಕಥೆ ಕೇಳುವವರಿಗಾಗಲಿ, ಓದುವವರಿಗಾಗಲಿ "ನಿಲ್ಲಿಸಿ, ದಮ್ಮಯ್ಯ!" ಎನ್ನುವಂತಾಗುತ್ತದೆ. ಆದರೆ ಶ್ರೀ. ದೇಸಾಯಿಯವರ ವಿಷಯದಲ್ಲಿ ಈ ಮಾತು ಹೇಳುವ ಹಾಗಿಲ್ಲ. ಕಥೆಯನ್ನು ಯಾರಾದರೂ ಎದುರಿಗೆ ಕೂತು, ಸರಸವಾಗಿ, ಸುಂದರವಾಗಿ ಹೇಳಿದರೆ ಎಷ್ಟು ಚೆಂದವಾಗಿರುತ್ತದೋ, ಓದಿದರೂ ಅಷ್ಟು ಸೊಗಸಾಗಿದೆ ಈ "ಶಿವ–ಪಾರ್ವತಿ" ಕಥೆಯನ್ನು ಓದುತ್ತಾ ಹೋದ ಹಾಗೆಲ್ಲಾ ಕುತೂಹಲ ಇಮ್ಮಡಿಸುತ್ತದೆ. ನಿಸರ್ಗದ ರಮ್ಯರೂಪಣೆ, ಕಥೆಯನ್ನು ಸುಲಭವಾಗಿ ಕೊಂಡೊಯ್ಯುವ ಸುಲಲಿತ ಶೈಲಿ, ಕಥೆಯಲ್ಲಿ ಕಡೆಯವರೆಗೂ ಅನುರಂಜನೆ ಕಡಮೆಯಾಗದಂತೆ ನಿರೂಪಿಸಿರುವ ರೀತಿ ಬಹು ಸುಂದರವಾಗಿದೆ.

ಕಥೆಯ ಮುಖ್ಯಾಂಶವಿಷ್ಟು:— ಶಿವಗಂಗೆ ಗ್ರಾಮದ ಹತ್ತಿರ ಇರುವ ಬೆಟ್ಟದ ಮೇಲೆ, ಮಹೇಶ್ವರನ ದೇವಾಲಯವಿದೆ. ಬೆಟ್ಟದ ಕಾಲುಬುಡದಲ್ಲಿ ನೇತ್ರಾವತಿ ಹರಿಯುತ್ತಾಳೆ ಆ ಮಹೇಶನ ಮುಂದೆ ವರ್ಷಾಋತುವಿನಲ್ಲಿ ಜಾತ್ರೆ ನಡೆಯುತ್ತೆ. ಅಲ್ಲಿರುವ ಬೆಸ್ತರ ಕುಲಕ್ಕೆ ಇದು ದೊಡ್ಡ ಹಬ್ಬ. ಮಾನ್ಯಗಾರರ ಹೆಣ್ಣುಮಕ್ಕಳು ಬಂದು ಆ ಶಿವನ ಎದುರಿಗೆ ನೃತ್ಯದ ಸೇವೆ ಅರ್ಪಿಸುವ ವಾಡಿಕೆ. ಅಲ್ಲಿಯ ರಾಜ, ಅಲ್ಲಿಗೆ ಹೋಗಿ ಉತ್ಸವದಲ್ಲಿ ಭಾಗಿಯಾಗಿ, ಬಹುಮಾನ ಹೊಂಚಿ ಬರುವ ರೂಢಿ. ಹಿಂದೆ, ಅರಸುಮನೆತನದ ಪಾರಂಪರ್ಯದಲ್ಲಿ ವಿಜಯದೇವನ ಆಳ್ವಿಕೆಯೂ ಒಂದು. ವಿಜಯದೇವ ಪೂಪಭೀರು, ಧರ್ಮಿಷ್ಠ. ಅವನ ಮಗ ಕುಮಾರರಾಜ. ತಂದೆ ಮಗನಿಗೆ ಉತ್ತಮೋತ್ತಮ ಶಿಕ್ಷಣ ಕೊಡಿಸಿದ. ತನ್ನ ವಂಶದ ಘನತೆಗೆ ತಕ್ಕಂತೆ ಮಲ್ಲಕ್ಕೊಂದು ರಾಜ್ಯದ ಅರಸುಕುವರಿಯನ್ನು ತಂದು ವಿವಾಹ ಮಾಡಿಸಿದ. ಕೆಲಕಾಲದನಂತರ ಮರಣ ಹೊಂದಿದ. ಕುಮಾರರಾಜ ವಿದ್ಯಾವಂತ, ಬುದ್ಧಿವಂತ. ಅವನ ಹೆಂಡತಿ ನೇತ್ರಾವತಿ ರಾಜ್ಯದ ಸೂಕ್ಷ್ಮ ಕಾರ್ಯಕಲಾಪಗಳ ಬಗ್ಗೆ ಸಾಕಷ್ಟು ತಿಳಿದವಳು. ಇಬ್ಬರೂ ನೇತೃತ್ವದಲ್ಲಿ ರಾಜ್ಯಭಾರ ಯಥಾಪ್ರಕಾರವಾಗಿ ಮುಂದುವರೆಯಿತು. ತಂದೆಯ ಮರಣದ ಸಲುವಾಗಿ, ಕುಮಾರರಾಜನ ಕುಲದೇವರಾದ ಶಿವನ ದೇವಾಲಯದಲ್ಲಿ ವಾರ್ಷಿಕ ಜಾತ್ರೆ–ಉತ್ಸವ ನಿಂತುಹೋಗಿತ್ತು.

ಬಡತನದ ಬಾಳು

(ಕಥಾಸಂಕಲನ)

ಬರೆದವರು : 'ಆನಂದಕಂದ'

ಇದರಲ್ಲಿಯ ಒಂದೊಂದು ಕಥೆಯೂ ನಮ್ಮ ಜನಜೀವನದ ವಾಸ್ತವಚಿತ್ರ. ವಾಸ್ತವದಲ್ಲಿಯೆ ಸಾಹಿತ್ಯಿಕಸೌಂದರ್ಯವನ್ನು ಸಹಜವಾಗಿ ಹೇಗೆ ತುಂಬಬಹುದೆಂಬುದಕ್ಕೆ ಇದರಲ್ಲಿಯ ಕಥೆಗಳು ಒಳ್ಳೆಯ ಮಾದರಿಗಳಾಗಿವೆ.

ಕ್ರಾ. ಅ. ೧೫೦ ಪುಟಗಳು. ಬೆಲೆ ೧-೪-೦

'ಜಯಂತಿ' ಕಾರ್ಯಾಲಯ, ಧಾರವಾಡ

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಜಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯು ನಮಾಲು! ಪ್ರಾಮಾಣಿಕ ವ್ಯವಹಾರ
ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜಿ. ಮುತ್ತಗಿ

ಮೂರು ವರ್ಷಗಳ ತರುವಾಯ ರಾಜ ಮತ್ತು ರಾಣಿ ಮತ್ತೆ ಮುಂದುವರಿಸುವೆವೆಂದಾಗ, ಜನರ ಉತ್ಸಾಹ ಹೇಳತೀರದು. ಆ ಸಾರಿ ಈಶ್ವರನ ಮುಂದೆ ಸಂಜಿಯ ನೃತ್ಯದ ಏರ್ಪಾಡಾಗಿತ್ತು. ಸಂಜೀವಿನಿ ಪೆಸ್ತರ ಹೆಣ್ಣು. ಚೆಲುವೆ. ಅಜ್ಜನ ಪೋಷಣೆಯಲ್ಲೇ ಬೆಳೆದ ಬಾಲೆ. ಸಂಜಿಯ ನೃತ್ಯವೆಂದರೆ ಎಲ್ಲರೂ ಬಾಯಿಬಿಡುವಂತಹ ರಮ್ಯಕುಣಿತ. ಕುಮಾರರಾಜ ಅವಳನ್ನು ಅವಳ ನೃತ್ಯವನ್ನು ಕಂಡು ಮರುಳಾದ. ತನ್ನ ಸಜ್ರದುಂಗುರವನ್ನು ಬಹುಮಾನವಾಗಿ ಕೊಟ್ಟ. ಸೇತ್ರಾವತಿಗೆ ಇದು ಸಮಂಜಸವೆನಿಸಲಿಲ್ಲ. ಜಾತ್ರೆಯ ಬಳಿಕ, ತನಗೆ ಮಕ್ಕಳಿಲ್ಲದ ಕಾರಣ, ಶಿವನ ದೇವಾಲಯಕ್ಕೆ ಹತ್ತಿರ ಪಾರ್ವತಿಯ ದೇವಾಲಯವನ್ನು ಕಟ್ಟಿಸಬೇಕೆಂದಳು. ದೊರೆಯ ಆಪ್ಪಣೆಯಂತೆ ನದಿಯ ತಟದಲ್ಲಿ ಸುಂದರವಾದ ದೇವಾಲಯವನ್ನು ನಿರ್ಮಿಸಲಾಯಿತು. ಸುಮುಹೂರ್ತ ದೇವಸ್ಥಾನದಲ್ಲಿ ಮಹಾರಾಣಿ ಪಾರ್ವತಿಯ ಪ್ರತಿಮೆಯನ್ನು ಪ್ರತಿಷ್ಠಿಸಿ ಯಥೇಚ್ಛವಾಗಿ ದಾನ ಮಾಡಿದಳು. ಇದರ ಮುಂದಿನ ವರ್ಷ ರಾಣಿಗೆ ಅದಾವ ಕಾರಣದಿಂದಲೋ ಅಲ್ಲಿಗೆ ತೆರಳಲಾಗಲಿಲ್ಲ. ಆ ಬಾರಿಯೂ ಸಂಜಿಯ ನೃತ್ಯದ ಏರ್ಪಾಡಿತ್ತು. ರಾಜನೊಬ್ಬನೇ ತೆರಳಿದ. ಸಂಜಿ ಈ ಮೊದಲೇ ರಾಜನ ಮನಸ್ಸನ್ನು ಕೆಡಹಿಸಿದ್ದಳು ನೃತ್ಯವನ್ನು ಅವಲೋಕಿಸಿದ ಅನಂತರ, ಬಯಸಿದ. ತನ್ನ ಬಯಕೆಯನ್ನು ಪೂರಯಿಸಿಕೊಂಡ ಫಲವಾಗಿ ಸಂಜಿ ಗರ್ಭವತಿಯಾದಳು. ಅನಳೂ ಅವಳ ಅಜ್ಜನೂ ಸಮಾಜದಿಂದ ಬಹಿಷ್ಕೃತರಾದರು. ರಾಜನ ಅನ್ಯಾಯವನ್ನು ಕಂಡು ಕೋಪಗೊಂಡ ಮೇಘರಾಜನು, ಮಳೆಗರೆಯದೆ ಊರಿನಲ್ಲಿ ಕ್ಷಾಮ ತಲೆದೋರುವಂತೆ ಮಾಡಿದ. ಊರಿನ ಜ್ಯೋತಿಷ್ಯರು " ಕುಲದೇವತೆಯ ಕೋಪದಿಂದ ಈ ಅನರ್ಥವಾಗಿದೆ. ನರಬಲಿ ಇತ್ತರೆ ಮಳೆಯಾಗುವುದು " ಎಂದರು. ಸಂಜಿ ತನ್ನ ಪಾಪದ ಹೊರೆಯನ್ನು ತಾಳಲಾರದೆ, ಪಾರ್ವತೀ ದೇವಾಲಯದಲ್ಲಿ, ರಾಜ ತನಗಿತ್ತ ಉಂಗುರವನ್ನು ದೇವಿಯ ಮಡಿಲಿಲ್ಲಿ ಹಾಕಿ, ತನ್ನ ಪ್ರಾಣವನ್ನು ಅರ್ಪಿಸಿದಳು. ಈ ಕಥೆ ರಾಜನ ಕಿವಿಯ ವರೆಗೂ ಹೋಯಿತು. ಸಂಜಿಯ ಮರಣದನಂತರ ಮಳೆ ಪ್ರಾಪ್ತವಾಯಿತು. ಶಿವಗಂಗೆ ಗ್ರಾಮದ ನದಿ ಏರತೊಡಗಿತು. ಬೆಟ್ಟದ ಮೇಲಕ್ಕೂ ಏರಿ ಶಿವನ ದೇಗುಲವನ್ನು ಕೊಚ್ಚಿಕೊಂಡು ಹೋಯಿತು. ಶಿವನೊಬ್ಬನೇ ಬಯಲಿನಲ್ಲಿ ನಿಂತ. ಸೇತ್ರಾವತಿ ರಾಜನ ಅನ್ಯಾಯದ ಕಥೆ ಕೇಳಿ ಮನನೊಂದಿದ್ದಳು. ಯಾರ ತಪ್ಪಿಗೆ ಯಾರೋ ಹೊಣೆಯಲ್ಲಾ ಎಂದು ದುಃಖಿಸಿದಳು. ಸಂಜಿಯ ಮಗುವನ್ನು ತಂದು ಪೋಷಿಸಿದಳು. ಆದರೂ ನೆರೆ ಏರುತ್ತಲೇ ಇತ್ತು. ಆಗ ಕನಸಿನಲ್ಲಿ ರಾಣಿಗೆ " ಒಂದು ಬಲಿಗೆ ಕಾರಣನಾದ ರಾಜ; ಮತ್ತೊಂದು ಬಲಿ ಇತ್ತರೆ ಶಾಂತವಾಗುವೆ, " ಎಂದು ಕುಲದೇವರು ಹೇಳಿದಂತಾಯಿತು. ಮಹಾರಾಜ್ಞಿ ತನ್ನ ನಾಡಿನ ಕ್ಷೇಮಕ್ಕಾಗಿ ನದಿಯಲ್ಲಿ ಬಿದ್ದು ಪ್ರಾಣವನ್ನು ಬಿಟ್ಟಳು. ನದಿಯ ಉಗ್ರರೂಪ ಇಳಿದು ಶಾಂತವಾಗಿ ಹರಿಯತೊಡಗಿತು. ಕುಮಾರ ರಾಜ ತನ್ನ ಹೇಯಕೃತ್ಯಕ್ಕಾಗಿ ತುಂಬಾ ಪಶ್ಚಾತ್ತಾಪ ಪಟ್ಟ. ರಾಣಿ, ರಾಜನ ಕನಸಿನಲ್ಲಿ ಬಂದು " ನನ್ನ ಮತ್ತು ಸಂಜಿಯ ನೊರೆ ನಿಮಗೆ ಕೇಳಲಿಲ್ಲ. ಹಾಗಾಗಿ ನನ್ನ ನಚ್ಚಿನ ಪಾರ್ವತಿಯ ಕೂಗು ಶಿವನಿಗೆ ಕೇಳದಿರಲಿ! ಸಂಜಿಯ ಮಗನಿಗೆ ರಾಜ್ಯ ಕೊಡಿ" ಎಂದು ಹೇಳಿದಳಂತೆ. ಶಿವ ರಾಜನ ಅನ್ಯಾಯಕ್ಕಾಗಿ ಬಯಲಿನಲ್ಲೇ ನಿಲ್ಲುವೆನೆಂದು ತೀರ್ಮಾನಿಸಿದನಂತೆ. ಈಗಲೂ ಶಿವನ ದೇವಾಲಯವನ್ನು ನಿರ್ಮಿಸಿದರೆ ಸಾಕು; ನೆರೆ ಬಂದು ಕೊಚ್ಚಿಬರುವುದಂತೆ. ಮಹೇಶ್ವರನ ಮುಂದೆ ಕುಳಿತು ವೀಣೆ ಮಿಡಿದರೂ ಪಾರ್ವತಿಯ ದೇವಸ್ಥಾನಕ್ಕೆ ಕೇಳುವುದಂತೆ, ಆದರೆ ಪಾರ್ವತಿಯ ದೇವಸ್ಥಾನವಲ್ಲಿ ನಗಾರಿ ಬಡಿದರೂ ಶಿವನ ಬಳಿ ಕೇಳಿಸುವುದಿಲ್ಲವಂತೆ, ಜಾತ್ರೆಯಲ್ಲಿ ನೃತ್ಯ ಸೇವೆ ಏರ್ಪಿಸಿದವರಿಗೆ ಬಯಸಿದ ಫಲ ದೊರೆಯುವುದೆಂದು ಪಾರ್ವತಿ ವರವಿತ್ತಳಂತೆ. ಜಾತ್ರೆಯಲ್ಲಿ ಸಂಜಿಯ ಉಂಗುರವನ್ನು ದೇವಿಗೆ ಇಟ್ಟು ಅಲಂಕರಿಸಿದಾಗ ಉಂಗುರ.

ನ್ನು ಮುಟ್ಟಿ ನಮಸ್ಕರಿಸಿದರೆ ಬಯಕೆಗಳು ಈಡೇರುವುವು ಎಂಬ ನಂಬಿಕೆಯಂತೆ. ಕಥೆ ಇಷ್ಟು.

ಮಾನ್ಯಶ್ರೀಮಾನ್ ವಿ. ಕೃ. ಗೋಕಾಕರು ಒಂದು ಬಾರಿ ಹೇಳಿದಂತೆ, " ಹಳ್ಳಿಗಳಲ್ಲಿಯ ಜನ ಸಜ್ಜನರೆಂದು ಹೇಳುತ್ತಾರಲ್ಲಾ? ಆ ಮಾತು ಎಷ್ಟರ ಮಟ್ಟಿಗೆ ನಿಜ? ಮುಖ್ಯತಃ ಹಳ್ಳಿಗರ ಬಳ್ಳಿ ಆಗಿರುವ ಹಿಂದುಸ್ತಾನದಲ್ಲಿ ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡು ಹಿಡಿಯುವುದೆಂದರೆ, ರಾಜಕಾರಣದ ನೊದಲನೆಯ ಪಾಠವನ್ನು ಕಲಿತಂತೆ " ಎಂಬುದು ಸತ್ಯ.

ಸಂಜಿ ಹಳ್ಳಿಯ ಹೆಣ್ಣು. ಸಂಸ್ಕೃತಿ ಇಲ್ಲದ ಹುಡುಗಿ. ಆದರೆ ಅವಳ ನಡೆ, ಉದಾರ ಹೃದಯ ಎಂತಹ ಸುಸಂಸ್ಕೃತರನ್ನೂ ನಾಚಿಸುವಂತಹದು. ನೇತ್ರಾವತೀ ಮಹಾರಾಣಿ ಸಕಲ ಪ್ರಾಬಲ್ಯವನ್ನೂ ಹೊಂದಿದವಳು; ಆದರೆ ಧರ್ಮ, ನೀತಿ, ಸತ್ಯಕ್ಕೆ ಹೆದರಿರುವ ನಾರಿ. ತನ್ನ ಗಂಡನ ಪ್ರಾಣಕ್ಕಾಗಿ ಬಲಿಯಾದ ಪತಿವ್ರತೆ. ಹಳ್ಳಿಯ ಜೀವನದಲ್ಲಿ ನ್ಯಾಯ, ಅನ್ಯಾಯಗಳಿಗೆ ಎಂತಹ ಸ್ಥಾನವಿದೆ ಎಂಬುದು ಅರಿವಾಗುತ್ತದೆ. ' ದೇವರನ್ನು ನಂಬಿದರೆ ಸದ್ಗತಿ ' ಎಂದು, ತುನಸಾರೆ ನಂಬಿರುವ ಉತ್ತಮರು ಈ ಹಳ್ಳಿಗರು. ಹಳ್ಳಿಯ ಜನರ ಒಗ್ಗಟ್ಟು, ಸಹೃದಯತೆ ನಗರದ ಜನರಿಗೆ ಬರುವುದು ಸ್ವಲ್ಪ ಪ್ರಯಾಸವೇ. " ಪರರ ಮನೆಯ ಗೊಡವೆ ನಮಗೇತಕ್ಕೆ? " ಎಂಬ ಮನೋಭಾವದ ಸೋಗನ್ನು ಪಾಕಿಕೊಂಡು, ಇನ್ನೊಬ್ಬರ ಕಷ್ಟದಲ್ಲಿ ಭಾಗಿಯಾಗದಿರುವ ಪಟ್ಟಣಿಗರ ಮನೋಭಾವಕ್ಕೂ, ಹಳ್ಳಿಗರ ದಯಾಪೂರಿತ ದೃಷ್ಟಿ ಸ್ಪೇಪಕ್ಕೂ ಇರುವ ತಾರತಮ್ಯ ಬಹಳ. ನಮ್ಮ ದೇಶ ಹಳ್ಳಿಗಳ ಬಳ್ಳಿಯಾಗಿರುವ ಭಾರತ. ನಮ್ಮ ಜನರಿಗೆ ಹಿಂದಿನ ಕಾಲದ, ಪೌರಾಣಿಕ, ಐತಿಹಾಸಿಕ ಕಥೆಗಳೆಂದರೆ ಇರುವ ಮೋಹ ಕಡಮೆಯಾಗಿಲ್ಲ. ಅದರಲ್ಲೂ ಜಾನಪದ ಕಥೆ, ದಂತಕಥೆಗಳೆಂದರೆ ಸ್ವಲ್ಪ ಅನುರಂಜನೆ ಹೆಚ್ಚು. ಯಾವುದಾದರೂ ಒಂದು ಹಳೆಯ ಮಂಟಪವನ್ನು ತೋರಿಸಿ " ಇಲ್ಲಿ ಹಿಂದೆ ಒಬ್ಬ ಸಂನ್ಯಾಸಿ " ಅಂತ ಶುರು ಮಾಡಿದರೆ ಸಾಕು; " ಮುಂದೇನು " ಎಂದು ತುಂಬು ಉತ್ಸುಕತೆಯಿಂದ ಪ್ರಶ್ನಿಸುತ್ತಾರೆ. ಅಂತಹುದರಲ್ಲಿ, ಸುಂದರವಾಗಿ ತಪುಣೀಯವಾಗಿ, ನಯನಮನೋಹರವಾದ ವರ್ಣನೆಗಳೊಡನೆ, ಮನಸ್ಸಿನೆ ಕಣ್ಣೆನೆದುರು ಸಕಲ ಚಿತ್ರವೂ ಮೂಡುವಂತೆ ವಿವರಿಸುವ " ಶಿವ. ಕಾರ್ವಾಲೆ " ಯಂತಹ ಕಥೆಗಳಿಗೆ ಆದರದ ಸ್ವಾಗತವೆಂದು ಬೇರೆ ಹೇಳಬೇಕೆ?

ಕಥೆಯ ಕೊನೆಗೆ ಒಂದು ಸಂಶಯ ತಲೆದೋರುತ್ತದೆ. " ನೇತ್ರಾವತಿ ಆ ನದಿಯಲ್ಲಿ ಬಿದ್ದುದಕ್ಕೆ ಆ ನದಿಗೆ ನೇತ್ರಾವತಿ ಎಂದು ಹೆಸರಾಯಿತು." ಎಂಬುದು. Lewis Rice ಮಹಾಶಯ ತಮ್ಮ Gazetteer ನಲ್ಲಿ " The Netravathi, a stream which flows from west through South Canara is supposed to rise at Gangamula, and to have sprung from the drops which fell from the eyes (Netra) of the Boar, (Vishnu incarnate) when he raised up the earth from the waters of the Ocean into which aaitya named Hiranyaksha had carried off and plunged into." ಎಂಬ ದಂತಕಥೆಯನ್ನು ಹೇಳಿದ್ದಾರೆ. ಅದೂ ಅಲ್ಲದೆ ಆ ಕಥೆ ಬ್ರಹ್ಮಾಂಡ ಪುರಾಣದಲ್ಲಿದೆ, ಎಂಬುದನ್ನೂ ಹೇಳಿದ್ದಾರೆ. ಆದ್ದರಿಂದ ನದಿಯ ಹಸರಿನ ವಿಷಯದಲ್ಲಿ ಸಂಶಯ ಬರುತ್ತದೆ. ಅದೂ ಅಲ್ಲದೆ ' ನೇತ್ರಾವತಿ ' ಎಂಬ ಹೆಸರು ಬೀಳುವ ಮುನ್ನ ನದಿಗೆ ಇದ್ದ ಹೆಸರೇನು—ಎಂಬ ಅನುಮಾನ ಬರುತ್ತದೆ. ಈ ಅಂಶವನ್ನು ಬಿಟ್ಟಿದ್ದರೆ ಚೆನ್ನಾಗಿತ್ತು.

ಎರಡನೇಯದಾಗಿ ರಾಣಿ ಕುಮಾರರಾಜನು ಮಾಡಿದ ಅನ್ಯಾಯಕ್ಕಾಗಿ ಮನನೊಂದು ಸಂಜಿಯ ಮಗುವನ್ನು ತಂದಿಟ್ಟುಕೊಂಡಳೆಂದು ಸಂಜಿಯ ಬಲಿಯಾದ ಒಡನೆ ಹೇಳಿದ್ದಾರೆ. ತಿರುಗಿ ನೇತ್ರಾವತಿ ನದಿಗೆ ಬಿದ್ದ ಮೇಲೆ, ಕುಮಾರರಾಜ ಮಗುವನ್ನು ತಂದಿರಿಸಿಕೊಂಡು ಪೋಷಿಸಲಾರಂಭಿಸಿದ ಎಂಬುದು. ರಾಣಿಯ ಅಂತಃಪುರದಿಂದ ತಂದರೆ, ಇಲ್ಲಿ ಅಜ್ಜನಿಂದ ತಂದರೆ?—ಎಂಬ ಸಂಶಯ ಬರುತ್ತದೆ. ಅಜ್ಜನಿಂದ ತಂದುದೇ ಆಗಿದ್ದರೆ, ರಾಣಿಯ ಸಾವಿಗೆ ಅವಕಾಶವಿಲ್ಲದಾಗಿತ್ತಿತ್ತು. ಏಕೆಂದರೆ ಸಂಜಿಗೆ ರಾಜನಿಂದ ಜನಿಸಿದ ಮಗುವೊಂದಿದೆ ಎಂಬ ಆರೋಪ ಬಂದಿದ್ದರೆ, ಪ್ರತಿಭಾವಂತಳಾದ, ಪತಿವ್ರತೆಯಾದ ನೇತ್ರಾವತಿ ಅಲ್ಲಿಗೆ ಹೋಗಿ ನೋಡದೆಯೇ, ಸಮರ್ಥನೆ ಮಾಡದೆಯೇ, ನದಿಗೆ ಹೋಗಿ ಪ್ರಾಣ ಬಿಡುತ್ತಿದ್ದಳೇ?—ಎಂಬ ಅನುಮಾನ ಬರುತ್ತದೆ. ಆದ್ದರಿಂದ ರಾಜ, ರಾಣಿ ತಂದ ಮಗುವನ್ನು ಪ್ರೀತಿಯಿಂದ ಸಲಹಲಾರಂಭಿಸಿದ—ಎಂದಿದ್ದರೆ ಚೆನ್ನಾಗಿತ್ತು.

ಈ ಎರಡು ಅಂಶಗಳನ್ನು ಬಿಟ್ಟರೆ, ಕಥೆ ಸೊಗಸಾಗಿದೆ. ಜಾನಪದ ಕಥೆಗಳನ್ನು, ಸಾಮಾಜಿಕ ಕಥೆಗಳನ್ನು ಬರೆಯುವುದು ಸುಲಭವಾಗಿ ಬರೆಯಲಾಗುವುದಿಲ್ಲ. ಓದುವಾಗ ಹಾಗೆ ಕಂಡರೂ ಅದಕ್ಕೆ ತಕ್ಕಷ್ಟು ವಿಚಾರ ಅರಿತಿರಲೇ ಬೇಕಾಗಿರುತ್ತದೆ. ಭೂಗೋಳ ಇತಿಹಾಸದ ಪರಿಚಯ ಸಾಕಷ್ಟು ಇರಲೇ ಬೇಕಾಗುತ್ತದೆ. ಶ್ರೀಮಾನ್ ಗೋವಿಂದರಾವ್ ದೇಸಾಯರಿಂದ ಇಂತಹ ಕಥೆಗಳು ಮತ್ತಷ್ಟು ಬರಲಿ! ನಮ್ಮ ನಾಡಿನ ಹಿರಿಮೆಯನ್ನು ತೋರಲಿ!

ಸಾದರ ಸ್ವೀಕಾರ

೭೧ **ಸಾಹಿತ್ಯಸಮಾಲೋಚನೆ** (ಲೇಖನಸಂಕಲನ) ಲೇ. ಪ್ರೊ. ಸ. ಸ. ಮಾಳವಾಡ. ಎಂ. ಎ. ಧಾರವಾಡ. ಪ್ರಕಾಶಕರು ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು. ಕ್ರೌ. ಅ. ೫೪ ಪುಟಗಳು. ಬೆಲೆ ಉತ್ತಮ ಪ್ರತಿಗೆ ೩-೪-೦; ಸಾಮಾನ್ಯಪ್ರತಿಗೆ ೨-೦-೦.

೭೨ **ಶಾಗದಾಲಹರಿ** (ಚಿಕ್ಕ ಕಾವ್ಯ) ಬರೆದವರು ಶ್ರೀಮಾನ್ ಗಿರಡ್ಡಿ ಗೋವಿಂದರಾಜ, ಅಬ್ಬಿಗೇರಿ. ಪ್ರಕಾಶಕರು ಅನ್ನದಾನ ಪ್ರಕಾಶನ, ಅಬ್ಬಿಗೇರಿ. ಫೂ. ಕ್ರಾ. ಅ. ೨೦ ಪುಟಗಳು. ಬೆಲೆ ೦-೨-೦.

೭೩ **ಧಾರವಾಡ ಜಿಲ್ಲಾ ಸರ್ವೋದಯ ಯೋಜನೆ**, ಅರವಟಿಗಿ (೭ನೆಯ ವರ್ಷದ ವರದಿ). ಸಂಚಾಲಕರು ಶ್ರೀಮಾನ್ ನರಸಿಂಹ ದಾಬಡೆ, ಅರವಟಿಗಿ. ಡೆ. ಅ. ೨೪ ಪುಟ.

೭೪ **ಶಿಕ್ಷಣ-ಶಿಕ್ಷಕ ದರ್ಶನ** (ಸಚಿತ್ರ ಲೇಖನಸಂಕಲನ) ಸಂಗ್ರಾಹಕರು ಶ್ರೀ. ನಿಂಬಾಳ ಕಲ್ಯಾಣಪ್ಪನವರು ಮತ್ತು ಶ್ರೀಮತಿ ನಿಂಬಾಳ ನೀಲಾಂಬಿಕೆ—ಶಿಕ್ಷಕದಂಪತಿಗಳು, ತಾಂಬೆ ವಿಜಾಪುರ ಜಿಲ್ಲಾ. ಕ್ರೌ. ಅ. ೨೬ + ೩೨೬ ಪುಟಗಳು. ಬೆಲೆ ೩-೦-೦.

೭೫ **ಭೂದಾನ** (ಸಾಮಾಜಿಕ ನಾಟಕ). ಬರೆದವರು ಶ್ರೀಮಾನ್ ರಾಜಪ್ಪ ಹೇರೂರ, ಜಯ ವಿದ್ಯಾಲಯ ಹೈಸ್ಕೂಲ್, ತಾಂಡೂರು. ಕ್ರೌ. ಅ. ೧೦೦ ಪುಟಗಳು; ಬೆಲೆ ೧-೦-೦.

೭೬ **ಭೆಯಸಿತಾಚಿ** (ಚಿಕ್ಕ ಪತ್ತೇದಾರಿ ಕಾದಂಬರಿ) ಬರೆದವರು 'ಮಧುಕರ,' 'ಪ್ರಕಾಶಕರು ಚಾತಕ ಪ್ರಕಾಶನ' ಜನ್ಯಾಲಿಪ್ಪ ಕಾಲನಿ, ಬೆಂಗಳೂರು—೨. ಚಿಕ್ಕ ಪುಟಗಳು ೧೧೨. ಬೆಲೆ ೦-೬-೦.

೭೭ **ಸ್ನೇಹಸೌರಭ** (ಕವನ ಸಂಕಲನ) ಬರೆದವರು ಶ್ರೀಮಾನ್ ಎಸ್ ಡಿ ಇಂಚಲ, ಮನೆ ನಂ. ೪೬೬೪, ಜಾಲಗಾರ ಗಲ್ಲಿ ಬೆಳಗಾಂವಿ. ಕ್ರೌ. ಅ. ೯೦ ಪುಟಗಳು. ಬೆಲೆ ೧-೦-೦.

೭೮ **ಯುಗಪುರುಷ** (ಮಾಸಪತ್ರಿಕೆಯ ದೀಪಾವಳಿ ಸಂಚಿಕೆ) ಸಂಪಾದಕರು ಶ್ರೀಮಾನ್ ಕೊಡತ್ತೂರು ಅನಂತಪದ್ಮನಾಭ ಉಪಾಧ್ಯಾಯ. ಯುಗಪುರುಷ ಕಾರ್ಯಾಲಯ, ಕಿನ್ನಿಗೋಳಿ (ದ. ಕ.). ಕ್ರೌ. ೧೨೮ ಪುಟಗಳು.

ವಿಶೇಷ ಸಂಚಿಕೆಗೆ ಲೇಖನ ಬರೆಯುವ ಅನೇಕ ಸುಪ್ರಸಿದ್ಧ—ಸುಪರಿಚಿತ—ಲೇಖಕರ ಲೇಖನಗಳಿವೆ.

ಕ್ರೀಡಾಂಗಣ

(ಕವನ ಸಂಕಲನ)

ಬರೆಹಗಾರರು :

ಎಸ್. ಎಸ್. ಗದಗಕರ

ಇದರಲ್ಲಿ ವಿವಿಧವಿಷಯಗಳನ್ನು ವಸ್ತುವನ್ನಾಗಿ ಇರಿಸಿಕೊಂಡು ಬರೆದ ೨೬ ಕವನಗಳಿರುವವು. ಶ್ರೀ. ಆನಂದಕಂದರ ಮುನ್ನುಡಿಯನ್ನೊಳಗೊಂಡಿದೆ.

ಕ್ರೌ. ಅ. ೬೦ ಪುಟ

ಬೆಲೆ ೧ ರೂಪಾಯಿ

ಮುಖ್ಯ ಮಾರಾಟಗಾರರು :—

ಮನೋಹರ ಗ್ರಂಥಭಾಂಡಾರ, ಧಾರವಾಡ

೭೯ **ಯಕ್ಷಗಾನ** (ದ್ವೈಮಾಸಪತ್ರಿಕೆ) ಶಿರಸಿಯಿಂದ ಹೊಸತಾಗಿ ಹೊರಡುತ್ತಲಿದೆ. ಸಂಪಾದಕರು ಶ್ರೀಮಾನ್ ಮಂಜುನಾಥ ಭಾಗವತ ಕಡತೋಕಾ, c/o ಕಡತೋಕಾ ವಖಾರಿ, ಯಕ್ಷಗಾನವೊಂದು ಕರ್ನಾಟಕದ ಜಾನಪದ ಕಲೆ. ಈ ಕಲೆಯ ವಿಷಯವನ್ನು ಎಲ್ಲರಿಗೂ ಪರಿಚಯ ಮಾಡಿಕೊಡಲು ಮುಂದೆ ಬಂದ ಈ ಪತ್ರಿಕೆಗೆ ಸಂತೋಷದ ಸ್ವಾಗತ.

೮೦ **ಹೊಲ ಸಾಗುವಳಿಕಾಯ್ದೆಯ ಸುಲಭಪುಸ್ತಕ** (ಕಾಯಿದೆ ಪರಿಚಯ). ಬರೆದವರು ಶ್ರೀಮಾನ್ ಕೆ. ಎಸ್. ಗದಗಕರ್ ಬಿ ಎ. (ಆನರ್ಸ್), ಎಲ್ ಎಲ್. ಬಿ. ವಕೀಲರು, ಶುಕ್ರವಾರಪೇಟೆ, ಧಾರವಾಡ. ಕ್ರೌ. ಅ. ೪೪ ಪುಟಗಳು. ಬೆಲೆ ೦-೧೪-೦.

ಪದ್ಯ ನಮ್ಮ ನಾಡಿನಲ್ಲಿ ಅನೇಕರು ಈ ಕಾಯಿದೆಯನ್ನು ಅವಗತ ಮಾಡಿಕೊಳ್ಳಬೇಕಾಗಿದೆ. ಎಲ್ಲರಿಗೂ ಸುಲಭಗ್ರಾಹ್ಯವಾಗುವಂತೆ ಶ್ರೀಮಾನ್ ಗದಗಕರರು ಇದನ್ನು ಬರೆದು ಓದಗಿಸಿದುದು ಪ್ರಶಂಸನೀಯ ಸಂಗತಿ

೮೧ **ವಿದ್ಯಾ** (ಸಂಸ್ಕೃತ ಮಾಸಪತ್ರಿಕೆ) ಸಂಪಾದಕರು ಪಂಡಿತ ಶಿರೋಮಣಿ ವರಪೇಡಿ ಪ್ರದ್ಯುಮ್ನಾಚಾರ್ಯರು 'ವೇದಾಂತ ಕೇಸರಿ' ಮತ್ತು ಪಂಡಿತರತ್ನ ಗಲಗಲಿ ರಾಮಾಚಾರ್ಯರು. 'ವಿದ್ಯಾ' ಕಾರ್ಯಾಲಯ, ೧೫೫೫ ದೇಶಪಾಂಡೆಗಲ್ಲಿ, ಬೆಳಗಾಂವಿ. ಡೆ. ಅ. ೪೦ ಪುಟಗಳು. ವಾರ್ಷಿಕ ಚಂದಾ ೩-೦-೦.

Prinied by N. A. Hoskeri at the Vijaya press, Dharwar and published for the proprietors Jayanti publications, by K. S. Betgeri at the Jayanti office, Dharwar

R. No. 4161

ಮೋಬಿಲಾಯಿಲ್
ನಿಮ್ಮ ಎಂಜಿನ್ನನ್ನು ಶುದ್ಧಿಗೊಳಿಸುತ್ತದೆ

ನಿಮ್ಮ ಎಂಜಿನ್ನು ನಡೆಯುತ್ತಿರುವಾಗ ಅದರೊಳಗೆ ಒಂದು ಉರಿಯು ಹೊತ್ತಿ ಕೊಂಡೇ ಇರುತ್ತದೆ. ಇದರಿಂದ ಕೊಳೆ ಮತ್ತು ಮಸಿ ಕಟ್ಟಿಕೊಂಡು ಚಲಿಸುವ ಭಾಗಗಳಿಗೆ ಅಡಚಣೆಯುಂಟಾಗಿ ಎಂಜಿನ್ನಿನ ದಕ್ಷತೆಯು ಕಡಿಮೆಯಾಗುತ್ತದೆ. ಇದನ್ನು ತಪ್ಪಿಸುವ ಮಾರ್ಗವೆಂದರೆ ಮೋಬಿಲಾಯಿಲ್ ಉಪಯೋಗಿಸುವುದು. ಆದುದರಿಂದ ನೀವು ಉಪಯೋಗಿಸುತ್ತಿರುವ ಎಣ್ಣೆಯನ್ನು ಬದಲಾಯಿಸಿ ಮೋಬಿಲಾಯಿಲ್ ಉಪಯೋಗಿಸಲು ಏಕೆ ಪುರುಮಾಡಬಾರದು? ಈ ಸೌಕರ್ಯಕ್ಕಾಗಿ ಹಾರುವ ಕೆಂಪು ಕುದುರೆಯ ಗುರುತಿರುವಲ್ಲಿಗೆ ಬನ್ನಿರಿ.

'ಈ ಗುರುತು ಇರುವಲ್ಲೆಲ್ಲಾ ಒಬ್ಬ ಸ್ನೇಹಮಯ ಸ್ವಾನ್‌ವ್ಯಾಕ್ ವ್ಯಾಪಾರಿಯು ಇರುತ್ತಾನೆ'



ಸ್ಟ್ಯಾಂಡರ್ಡ್-ವ್ಯಾಕ್ಯೂಮ್ ಆಯಿಲ್ ಕಂಪೆನಿ
(ಯು.ಎಸ್.ಎ.ಯಲ್ಲಿ ಸಂಸ್ಥಾಪಿತವಾದುದು.
ಮುಂಬಯಿಗಳ ಹೊಣೆಗಾರಿಕೆಯು ಮಿತವಿದೆ)